ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಆಳ್ವಾರ್ ಶರಣರ ತಿರುಪತಿ ತಿಮ್ಮಪ್ಪ





ಲೇಖಕರು :

ತಿರುನಾರಾಯಣಪುರಂ ಅರ್ಯೆಯರ್

ವಿಶದವಾಕ್ ಪ್ರಕಾಶನ

ನಂ. ೨೮೫, ಉಪ್ಪುನೀರು ಭಾವಿ ಬೀದಿ, ಮೇಲುಕೋಟೆ-೫೭೧ ೪೩೧


03


04


05


06


07


02


10


08


11


01


12 13 14


09


15


16


17

01 ಪೊಯ್ಹೈ ಆಳ್ವಾರ್, 02 ಪೂದತ್ತ್ ಆಳ್ವಾರ್, 03 ಪೇಯ್ ಆಳ್ವಾರ್, 04 ತಿರುಮಳಿಶೈಪ್ಪಿರಾನ್
05 ಪೆರಿಯಾಳ್ವಾರ್, 06 ಆಂಡಾಳ್, 07 ಕುಲಶೇಖರಪ್ಪೆರುಮಾಳ್, 08 ತಿರುಪ್ಪಾಣಾಳ್ವಾರ್, 09 ತಿರುಮಂಗೈ ಆಳ್ವಾರ್,
10 ತಿರುವಡಿಗಳು, 11 ನಮ್ಮಾಳ್ವಾರ್, 12 ಮೇಲ್ಪೈ ಅಹತ್ತ್ ಆಳ್ವಾನ್, 13 ನಾಥಮುನಿ, 14 ಕೀಳ್ಪೈ ಅಹತ್ತ್ ಆಳ್ವಾನ್,
15 ವೇದಾಂತ ದೇಶಿಕರ್, 16 ಎಂಬೆರುಮಾನಾರ್, 17 ಮಣವಾಳ ಮಾಮುನಿ

ಆಳ್ವಾರ್ ಶರಣರ

ತಿರುಪತಿ ತಿಮ್ಮಪ್ಪ

ತಮಿಳ್ ತಿರಳ್

ಮತ್ತು

ಕನ್ನಡ ನೆರಳ್

ತಿರುನಾರಾಯಣಪುರಂ ಅರೈಯರ್

೨೦೦೫

ಪ್ರಕಾಶಕರು

ವಿಶದ ವಾಕ್ ಪ್ರಕಾಶನ

ಮೇಲುಕೋಟೆ ೫೭೧ ೪೩೧

VISHADAVAK PRAKASHANA - 32
ALWAR SHARANARA THIRUPATI TIMMAPPA – Kannada

Pages : xvi + 264 = 280

Author :
THIRUNARAYANAPURAM AREYAR SWAMY

Copies : 1000
Nammalwar Jayanti - 5007

Date : 22-05-2005

Price : **365/-**

Printed at :
Navabharath Press
'Vishnu Chittam'
No. 10, Sirur Park 'B' Street
Sheshadripuram, Bangalore - 20
Phone : 2336 4142, 2336 4682
E-mail : navbarat@blr.vsnl.net.in

Publisher :
S.N. SIMHA
Vishadavak Prakashana
285, Uppuneeru Bhavi Beedi,
Melkote - 571 431
Mandya District, KARNATAKA
Phone : 08236-298837

ಆಳ್ವಾರ್ ಶರಣರ ತಿರುಪತಿ ತಿಮ್ಮಪ್ಪ

ವಿಷಯ ಸೂಚಿ

	ವಿಷಯ		ಪುಟ
1.	ಸಂಪಾದಕರ ನುಡಿ	ಅರೆಯರ್ ಶ್ರೀರಾಮ ಶರ್ಮಾ.	v
2.	ಪ್ರಾಸ್ತಾವಿಕ	ದಿ. ವಿಜ್ಞಾನಿ ಎಂ.ವಿ. ಶ್ರೀನಿವಾಸನ್, ನಾಗಪುರ.	viii
3.	ನೆರಳ್‌ಕಾರನ ಬಿನ್ನಪ	ಅರೈಯರ್.	xii
4.	ಮಂಗಳಾಶಾಸನ	ತಿರುಪ್ಪಲ್ಲಾಣ್ಡು	1
5.	ಪೊಯ್‌ಹೈಯಾಳ್ವಾರ್	೧ ತಿರುವನ್ಪಾದಿ	4
6.	ಪೂದತ್ತಾಳ್ವಾರ್	೨ ತಿರುವನ್ಪಾದಿ	17
7.	ಪೇಯಾಳ್ವಾರ್	೩ ತಿರುವನ್ಪಾದಿ	30
8.	ತಿರುಮಳಿಶೈಯಾಳ್ವಾರ್	ತಿರುಚ್ಚಂದವಿರುತ್ತಂ	47
9.	ತಿರುಮಳಿಶೈಯಾಳ್ವಾರ್	ನಾನ್ಮುಹನ್ ತಿರುವನ್ಪಾದಿ	53
10.	ನಮ್ಮಾಳ್ವಾರ್	ತಿರುವಿರುತ್ತಂ	56
11.	ನಮ್ಮಾಳ್ವಾರ್	ಪೆರಿಯತಿರುವನ್ಪಾದಿ	74
12.	ನಮ್ಮಾಳ್ವಾರ್	ತಿರುವಾಯ್ ಮೊಳಿ	77
13.	ಕುಲಶೇಖರಾಳ್ವಾರ್	ಪೆರುಮಾಳ್ ತಿರುಮೊಳಿ	128
14.	ಪೆರಿಯಾಳ್ವಾರ್	ತಿರುಮೊಳಿ	136
15.	ಅಂಡಾಳ್ ಗೋದಾದೇವಿ	ನಾಚ್ಚಿಯಾರ್ ತಿರುಮೊಳಿ	143
16.	ತಿರುಪ್ಪಾಣಾಳ್ವಾರ್	ಅಮಲನಾದಿಪಿರಾನ್	157
17.	ತಿರುಮಂಗೈ ಆಳ್ವಾರ್	ಪೆರಿಯತಿರುಮೊಳಿ	160
18.	ತಿರುಮಂಗೈ ಆಳ್ವಾರ್	ತಿರುಕ್ಕುರುನ್ತಾಣ್ಡಹಂ	235
19.	ತಿರುಮಂಗೈ ಆಳ್ವಾರ್	ತಿರುನೆಡುನ್ತಾಣ್ಡಹಂ	236
20.	ತಿರುಮಂಗೈ ಆಳ್ವಾರ್	ಶಿರಿಯ ತಿರುಮಡಲ್	247
21.	ತಿರುಮಂಗೈ ಆಳ್ವಾರ್	ಪೆರಿಯ ತಿರುಮಡಲ್	249
22.	ತಿರುವರಂಗತ್ತ್ ಅಮುದನಾರ್	ರಾಮಾನುಜನೂತ್ತನ್ತಾದಿ	253
23.	ವೇದಾಂತ ದೇಶಿಕರು	ಅಧಿಕಾರ ಸಂಗ್ರಹ	258
24.	ಆಚಾರ್ಯ ಮಣವಾಳ ಮಾಮುನಿ	ತಿರುವಾಯ್‌ಮೊಳಿನೂತ್ತನ್ತಾದಿ	261
25.	ಆಚಾರ್ಯ ಮಣವಾಳ ಮಾಮುನಿ	ದಿವ್ಯದರ್ಶನ ಪಾಶುರ	262
26.	ಆಚಾರ್ಯ ಮಣವಾಳ ಮಾಮುನಿ	ದಿವ್ಯದರ್ಶನ ಗದ್ಯ	263
27.	ಆಚಾರ್ಯ ಮಣವಾಳ ಮಾಮುನಿ	ಮಂಗಳಾಶಾಸನ	264

ವಿಶದ ವಾಕ್ ಪ್ರಕಾಶನ

ಮೇಲುಕೋಟೆ ೫೭೧ ೪೩೧

೧	ತಿರುಪ್ಪಾವೈ ಮೂಲ ಕನ್ನಡ ಪದ್ಯಾನುವಾದ
೨	ತಿರುಪ್ಪಾವೈ ಮೂಲ ಸಂಸ್ಕೃತ ಪದ್ಯಾನವಾದ
೩	ನರಸಿಂಹ ಸಹಸ್ರನಾಮ ಸ್ತೋತ್ರಂ
೪	ವರವರಮುನಿ ಸ್ತೋತ್ರಾಣಿ
೫	ವಿರವರಮುನಿ ದಿನಚರ್ಯಾ
೬	ವೇದಾಂತದೇಶಿಕ ಸ್ತೋತ್ರಾಣಿ
೭	ಶ್ರೀವೈಷ್ಣವ ಸಿದ್ಧಾಂತ ಸಂಗ್ರಹಃ
೮	ಮಣವಾಳಮಾಮುನಿ ಸನ್ನಿಧಿ ಶಾತ್ತುಮುರೈ
೯	ನಾಚ್ಚಿಯರ್ ತಿರುಮೊಳಿ ಕನ್ನಡ ಪದ್ಯಾನುವಾದ
೧೦	ಲಘುನಿತ್ಯಾನುಸಂಧಾನ ಕನ್ನಡ ಪದ್ಯಾನುವಾದ
೧೧	ಕೋಯಿಲ್ ತಿರುವಾಯ್‌ಮೊಳಿ ಕನ್ನಡ ಪದ್ಯಾನುವಾದ
೧೨	ಸರ್ವೋದಯತ್ರಿವೇಣೀ (ಸಂಸ್ಕೃತ ಸಾಮಾಜಿಕ ಕಾವ್ಯಪ್ರಬಂಧ)
೧೩	ಪಿಳ್ಳೈಲೋಕಾಚಾರ್ಯ (ಜೀವನ ಕೃತಿ ಪರಿಚಯ)
೧೪	ಅಳಹಿಯ ಮಣವಾಳನಾಯನಾರ್ (ಜೀವನ ಕೃತಿ ಪರಿಚಯ)
೧೫	ನರಸಿಂಹ ಸುಪ್ರಭಾತಾದಿ ಸ್ತೋತ್ರಾಣಿ
೧೬	ವರವರಮುನಿ ೧೦೮ ನಾಮಾವಳಿಃ
೧೭	ನನ್ನದೇ ತಪ್ಪು (ವೈಚಾರಿಕ ಪ್ರಬಂಧ)
೧೮	ತಿರುವಾಯ್‌ಮೊಳಿ ಶತಕಾರ್ಥ
೧೯	ಹಿಂದೂಧರ್ಮ
೨೦	ಧಾಟೀಪಂಚಕಾದಿಸ್ತೋತ್ರಾಣಿ
೨೧	ತೊಂಡನೂರು ಕ್ಷೇತ್ರ ಪರಿಚಯ
೨೨	ಅಮಲನಾದಿಪಿರಾನ್
೨೩	ಮಧುರಕವಿ ಮಾಧುರ್ಯ (ಕಣ್ಣಿನುಣ್ ಶಿರುತ್ತಾಂಬು ವ್ಯಾಖ್ಯಾನ)
೨೪	ಕಾವ್ಯಕಲ್ಲೋಲಿನೀ (ಕಾವ್ಯ ಸಂಚಯಃ)
೨೫	ಹಂಸ ಪ್ರತಿಸಂದೇಶಃ ಕಾವ್ಯಂ
೨೬	ಚಿನ್ನಲಿಪಿ ಕೋಶಃ
೨೭	ಆಚಾರ್ಯರ ಉಪದೇಶಗಳು
೨೮	ಬ್ರಹ್ಮವಿದ್ಯಾಚಾರ್ಯ ಕುಟ್ಟಿ
೨೯	ಬುದ್ಧನ ನಗು
೩೦	ಶ್ರೀವಚನಭೂಷಣ ಭೂಮಿಕೆ
೩೧	ಯತಿವರ ಚತುಸ್ಸಪ್ತತಿಃ (ರಾಮಾನುಜರ ಬಿರುದಾವಳಿ)
೩೨	ಆಳ್ವಾರ್ ಶರಣರ ತಿರುಪತಿ ತಿಮ್ಮಪ್ಪ

ಸಂಪಾದಕರ ನುಡಿ

"ಕಲೌ ವೇಙ್ಕಟನಾಯಕಃ" ಎಂಬಂತೆ, **"ಕಲಿಯುಗ ದೇವರು"** ನಮ್ಮ ತಿರುಪತಿ ತಿಮ್ಮಪ್ಪ. **"ತಿರುಮಲೈ ಅಪ್ಪನ್"** ಎಂಬುದರ ಜಾನಪದ ಕನ್ನಡ ರೂಪಾನ್ತರವೇ ತಿಮ್ಮಪ್ಪ. ಇವನನ್ನು ನೆನೆಯದವರಿಲ್ಲ, ಹಾಡದವರಿಲ್ಲ, ಕೇಳದವರಿಲ್ಲ, ಅರಿಯದವರಿಲ್ಲ. ವಿಶ್ವದಲ್ಲಿ ಇಂದು ಸುಪ್ರಭಾತ ಸ್ತೋತ್ರದ ಮೂಲಕ ಪ್ರಚಾರದಲ್ಲಿರುವ ದೇವದೇವನೇ ಈ ಶ್ರೀನಿವಾಸ.

ದಿವ್ಯಪ್ರಬಂಧಗಳನ್ನು ಸಾಕ್ಷಾತ್ಕರಿಸಿದ ತಮಿಳುವೇದಋಷಿಗಳು ಹನ್ನೆರಡು ಮಂದಿ. ಇವರಲ್ಲಿ ಆಂಡಾಳ್ ಒಬ್ಬಳನ್ನು ಬಿಟ್ಟರೆ ಉಳಿದವರು ಗಂಡಸರು. ಇವರಲ್ಲಿ ಮಧುರಕವಿ ಆಳ್ವಾರ್ ತಮ್ಮ ಆಚಾರ್ಯರಾದ ನಮ್ಮಾಳ್ವಾರ ಬಗ್ಗೆ ಮಾತ್ರ ಪ್ರಬಂಧೀಕರಿಸಿ ಹಾಡಿರುವರು. ತೊಂಡರಡಿಪ್ಪೊಡಿ ಆಳ್ವಾರ್ ಒಬ್ಬರು ಶ್ರೀರಙ್ಗನಾಥನನ್ನು ಬಿಟ್ಟು, ಬೇರೆ ಯಾವ ಅರ್ಚಾಮೂರ್ತಿಯನ್ನೂ ಕುರಿತು ಹಾಡಲಿಲ್ಲ. ತಿರುಪ್ಪಾಣಾಳ್ವಾರ್ ಶ್ರೀರಂಗದಲ್ಲಿ ಪವಡಿಸಿದವನೇ ವೇಂಕಟಾಚಲದಲ್ಲಿ ಬಂದು ನಿಂತಿದ್ದಾನೆ ಎಂದುಬಿಟ್ಟರು. ದಿವ್ಯಪ್ರಬಂಧ ಋಷಿಗಳಾದ ಹನ್ನೆರಡು ಮಂದಿಯಲ್ಲಿ ಆಂಡಾಳ್ ಮಧುರಕವಿ ಎಂಬ ಇಬ್ಬರನ್ನು ಬಿಟ್ಟು ಉಳಿದವರನ್ನು **'ಪದಿನ್ಮರ್'**, "ಹತ್ತೂ ಜನ" ಎಂದು ಹೇಳುವ ಸಂಪ್ರದಾಯವಿದೆ. **"ಪದಿನ್ಮರ್ ಪಾಡುಂ ಪೆರುಮಾಳ್"** ಎಂಬ ಕೀರ್ತಿ ಶ್ರೀರಙ್ಗನಾಥನಿಗೆ ಮಾತ್ರ. ತೊಂಡರಡಿಪ್ಪೊಡಿ ಒಬ್ಬರು ತನ್ನನ್ನು ಹಾಡಲಿಲ್ಲ ಎಂಬ ಕೊರತೆಯನ್ನು ನಿವಾರಿಸಿಕೊಳ್ಳಲು ನಮ್ಮ ತಿರುಪತಿ ಶ್ರೀನಿವಾಸನು ಧನುರ್ಮಾಸಪೂರ್ತಾ ಸಂಸ್ಕೃತ ಸುಪ್ರಭಾತಕ್ಕೆ ಬದಲಾಗಿ ತೊಂಡರಡಿಪ್ಪೊಡಿ ಆಳ್ವಾರರ **"ತಿರುಪ್ಪಳ್ಳಿ ಎಟ್ಚಿ"** ಪ್ರಬಂಧವನ್ನೇ ಉಷಃಕಾಲದಲ್ಲಿ ಹಾಡಿಸಿ ಅಲಿಸುತ್ತಾನೆ. ಹೀಗೆ ತಿಮ್ಮಪ್ಪನೇ ಈ ಆಳ್ವಾರರ ಹಿರಿಮೆಯನ್ನೂ ತಮಿಳು ಸುಪ್ರಭಾತದ ಸೊಬಗನ್ನೂ ಎತ್ತಿ ಹಿಡಿಸಿದ್ದಾನೆ.

ದಿವ್ಯ ಪ್ರಬಂಧಗಳು ಗಾಯತ್ರಿಯ ಅಕ್ಷರಸಂಖ್ಯೆಯನ್ನೂ ಅಕ್ಷರಾರ್ಥವನ್ನೂ ಅನುಸರಿಸಿ ಇಪ್ಪತ್ತನಾಲ್ಕು ಮಾತ್ರ. ಅನಂತರ ರಾಮಾನುಜರ ಕಾಲದಲ್ಲಿ ಶ್ರೀರಙ್ಗನಾಥನ ಅನುಮತಿಯಂತೆ ನಾಲ್ಕುಸಾವಿರ ದಿವ್ಯಪ್ರಬಂಧಹಾಡುಗಳಿಗೆ ತಿರುವರಂಗತ್ತಮುದನಾರ್ ಅವರು ರಾಮಾನುಶನೂತ್ತಂದಾದಿ ಪ್ರಬಂಧ ನೂರೆಂಟು ಹಾಡುಗಳನ್ನು ಸೇರಿಸಿ ವ್ಯವಸ್ಥೆ ಮಾಡಿದರು. ಹೀಗೆ ಇಪ್ಪತ್ತೈದು ಪ್ರಬಂಧಗಳಲ್ಲಿ ತಿರುಪ್ಪಲ್ಲಾಣ್ಡು, ತಿರುಮಾಲೈ, ತಿರುಪ್ಪಳ್ಳಿ ಎಟ್ಚಿ, ಕಣ್ಣಿನುಣ್ ಶಿರುತ್ತಾಮ್ಬು, ತಿರುವಾಶಿರಿಯಂ, ತಿರುವೆಟ್ಟುಕೂತ್ತಿರುಕ್ಕ್ಯು ಎಂಬ ಆರು ಪ್ರಬಂಧಗಳಲ್ಲಿ ಮಾತ್ರ ತಿರುಪತಿ ತಿಮ್ಮಪ್ಪನ ಉಲ್ಲೇಖವಿಲ್ಲ. ಉಳಿದ ಹತ್ತೊಂಭತ್ತು ಪ್ರಬಂಧಗಳಲ್ಲಿ ಇರುವ ಹಾಡುಗಳು ಒಟ್ಟು ತಿಮ್ಮಪ್ಪನ ಬಗ್ಗೆ ಸುಮಾರು ನಾಲ್ಕನೆಯ ಒಂದು ಭಾಗದಷ್ಟು ಇವೆ ಎನ್ನಬಹುದು. ಹೀಗೆ ದಿವ್ಯಪ್ರಬಂಧಗಳಲ್ಲಿ ಹೆಚ್ಚು ಭಾಗ ತಿಮ್ಮಪ್ಪನಿಗೆ ಮೀಸಲಾಗಿದೆ.

ಮೇಲ್‌ನಾಡು ಎನಿಸಿದ ಕನ್ನಡನಾಡಿನ ಪ್ರಾಚೀನ ಆಚಾರ್ಯರಲ್ಲಿ ಒಬ್ಬರಾದ ಕಿರಂಗೂರಿನ ಅನಂದಾಳ್ವಾನ್ ತಿರುಪತಿಗೆ ಹೋಗಿ ಅಲ್ಲಿ ತಿಮ್ಮಪ್ಪನ ಪುಷ್ಪಸೇವೆಯಲ್ಲಿ ನಿರತರಾಗಿ ತಿರುವೇಙ್ಗಡದ ಪ್ರಾಚೀನ ಸಂಪ್ರದಾಯಗಳನ್ನೂ, ರಾಮಾನುಜರು ಸ್ಥಾಪಿಸಿದ ಪೆರಿಯ ಜೀಯರ್ ಮಠವನ್ನೂ, ದೇವಸ್ಥಾನದ ದಿವ್ಯಪ್ರಬಂಧ ಸಂಪ್ರದಾಯವನ್ನೂ, ಸಂರಕ್ಷಿಸಿದರು. ಇವರು 'ಪಾಶುರ'ವೊಂದರಲ್ಲಿ ತಿರುವಾಯ್‌ಮೊಳಿ ಪೂರ್ತಾ ತಿರುಪ್ಪತಿ ತಿಮ್ಮಪ್ಪನಿಗೇ ಸಲ್ಲುವುದೆಂದು ನಿಷ್ಕರ್ಷಿಸಿದ್ದಾರೆ.

> **ತಿಲದಂ ಉಲಹುಕ್ಕಾಗ ತಿರುವೇಙ್ಗಡತ್ತಾನೈ ಉಲಹಿಲ್‌ಪುಹಟ್ ಅನ್ರಾದಿ ಆಯಿರಮುಂ,**
> **ಉಲಹಿಲುರೈತ್ತಾನ್ ಶಡಹೋಪನ್, ಉತ್ತಮರ್‌ಹಳ್‌ನೆಞ್ಜಿಲ್ ವಿರಿತ್ತಾನ್ ಪೆರುಮ್ಪೊದೂರ್‌ವೇನ್ದ್ರ.**

ಶಿವಭಕ್ತರಾದ **'ನಾಯನ್ಮಾರ್'**ಗಳೂ ಕೂಡ ತಿರುಪತಿಯಲ್ಲಿರುವ ತಿಮ್ಮಪ್ಪನನ್ನು **"ತಿರು-ಮಾಲ್"** = ಶ್ರೀಮುಗ್ಧ-ಲಕ್ಷ್ಮೀದೇವಿಯ ಪ್ರಿಯಪತಿ ಎಂದೇ ಸ್ತುತಿಸಿದ್ದಾರೆ.

ತಿರುವಾಯ್‌ಮೊಳಿಯಲ್ಲಿ ಹತ್ತು ಶತಕಗಳಿವೆ. ಇದನ್ನು ಹತ್ತು ಅವತಾರಗಳಿಗೆ ಕ್ರಮವಾಗಿ ಆಚಾರ್ಯರು ಹೋಲಿಸುತ್ತಾರೆ : ಇದರಂತೆ ಆರನೆಯ ಶತಕದಲ್ಲಿ ದೀರ್ಘಶರಣಾಗತಿಯ ಪ್ರಧಾನಭಾಗವಾದ **"ಉಲಹಮುಣ್ಡ ಪೆರುವಾಯಾ!"** ಎಂಬ ದಶಕವು ಪೂರ್ಣವಾಗಿ ತಿಮ್ಮಪ್ಪನ ಹಾಡಾಗಿದೆ. ಆರನೆಯ ಅವತಾರ ಪರಶುರಾಮಾವತಾರ. ಆದುದರಿಂದಲೇ ಮುದಲಾಳ್ವಾರ್‌ಗಳು ಈ ನಮ್ಮ ವೆಂಕಟರಮಣನನ್ನು ವರ್ಣಿಸುವಾಗ **"ಒಣ್‌ಮೞುವುಂ ಶಕ್ಕರಮುಂ"** ಎಂದೇ ನಿರೂಪಿಸಿದ್ದಾರೆ. ವಿಶ್ವದ ಕ್ಷಾತ್ರ ದುಷ್ಟಶಕ್ತಿಗಳನ್ನು ಅಡಗಿಸಿ, ಭೂಮಿಯನ್ನು

'ಬ್ರಹ್ಮಸಾತ್' ಆಗಿಸಿ, ಭೂಮಿಗೆ `ಕಾಶ್ಯಪೀ' ಎಂಬ ಹೆಸರು ಬರುವಂತೆ ಮಾಡಿದ ಮಹಾಮಹಿಮೆ ಪರಶುರಾಮಾವತಾರದ್ದು. ಅಂತೆಯೇ ನಮ್ಮ ಶ್ರೀನಿವಾಸಸ್ವಾಮಿಯೂ ಭಕ್ತರಿಗಾಗಿ ತನ್ನನ್ನೇ ಉದಾರವಾಗಿ ತೋರಿಕೊಳ್ಳುತ್ತಾ ಭಕ್ತರ ಸಕಲ ಪಾಪಗಳನ್ನೂ ಸ್ವೀಕರಿಸಿ ಎಲ್ಲರಿಗೂ ಅನುಗ್ರಹಿಸುತ್ತ ಇರುವುದು ಅವನ ಪರಾತ್ಪರ ಪರಬ್ರಹ್ಮಶಕ್ತಿಯ ಫಲ. ಈ **ವೇಂಕಟಪರಬ್ರಹ್ಮವು** ಶ್ರೀದೇವಿಗೆ ತನ್ನ ವಕ್ಷಸ್ಸ್ಥಲದಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟ ಪುರುಷೋತ್ತಮ. ಪುರುಷೋತ್ತಮನೇ ಶ್ರೀ-ನಿವಾಸ. ಭಗವದ್ ರಾಮಾನುಜರು ಶ್ರೀಭಾಷ್ಯದಲ್ಲಿ ನೇರವಾಗಿ ತಿರುಪತಿ ತಿಮ್ಮಪ್ಪನನ್ನು ಸ್ತೋತ್ರ ಮಾಡದಿದ್ದರೂ "ಶ್ರೀ-ನಿವಾಸೇ ಬ್ರಹ್ಮಣಿ" ಎಂಬ ಮಾತಿನಿಂದ **"ಅಲರ್‌ಮೇಲ್ ಮಂಗೈ ಉರೈಮಾರ್ಪನ್"** - ಶ್ರಿಯಃಪತಿಯೇ ಪರಬ್ರಹ್ಮ, ಪರಬ್ರಹ್ಮದ ಗುರುತು ಶ್ರೀದೇವಿ ಎಂದು ನಿಶ್ಚಯಿಸಿ, ಪರಬ್ರಹ್ಮವು ಶ್ರಿಯಃಪತಿಯೇ ಹೊರತು; ಸ್ವಾಹಾಪತಿ ಶಚೀಪತಿ, ಗೌರೀಪತಿ, ವಾಣೀಪತಿಗಳಲ್ಲ; ಎಂದು ನಿರೂಪಿಸಿದ್ದಾರೆ. **"ಅಜ್ಞಾನಿ ಅನ್ಯಾಃ ದೇವತಾಃ" "ಅಗ್ನಿಃ ಅವಮೋ ದೇವತಾನಾಂ, ಸಂಯಾತಾನಾಂ ಉತ್ತಮೋ ವಿಷ್ಣುರಾಸೀತ್"** ಎಂಬ ವೇದವಚನಗಳ ಆಧಾರದಿಂದ, ನಮ್ಮ ತಿರುಪತಿ ತಿಮ್ಮಪ್ಪನಲ್ಲಿ ಸಕಲ ದೇವತಾಂತರಗಳೂ ಅಜ್ಞಗಳಾಗಿ ಕೂಡಿವೆ ಎಂದೂ, ಶ್ರಿಯಃಪತಿಯಾದ ಇವನೇ ಪರತತ್ತ್ವ ಎಂದೂ, ನಿಶ್ಚಯವಾಗುತ್ತದೆ. ಪರಬ್ರಹ್ಮವೂ ಒಂದು ಸರ್ವಲಕ್ಷಣ ಸಂಪನ್ನವಾದ **'ವಿಶ್ವರೂಪ'**ದ ಅರ್ಚಾಮೂರ್ತಿಯೇ ತಿರುಪತಿ ತಿಮ್ಮಪ್ಪ. ಶ್ರಿಯಃಪತಿಯೊಬ್ಬನಿಗೇ ಈ ರೀತಿಯ ಸ್ವಭಾವ-ಸಾಮರ್ಥ್ಯಗಳುಂಟು. ಇದನ್ನು ಮನಗಂಡೇ ಆಳ್ವಾರ್‌ಗಳೂ ನಾಯನ್ಮಾರ್‌ಗಳೂ ಇವನನ್ನು **"ತಿರುಮಾಲ್"** = ಶ್ರೀ-ನಿವಾಸ ಎಂದು ನಿಶ್ಚಯಿಸಿ ಅನುಭವಿಸಿದರು.

ಇಂತಹ ತಿಮ್ಮಪ್ಪನ ಹಾಡುಗಳಿಗೆ **"ದ್ರವಿಡ ವ್ಯಾಖ್ಯಾನ ಚಕ್ರವರ್ತಿ"** ಎನಿಸಿದ ಪೆರಿಯವಾಚ್ಚಾನ್ ಪಿಳ್ಳೈ ಎಂಬ ಆಚಾರ್ಯರು ಇಂದಿಗೆ ೮೦೦ ವರ್ಷಗಳ ಹಿಂದೆಯೇ ಅದ್ಭುತವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಆ ವ್ಯಾಖ್ಯಾನದ ಸ್ವಾರಸ್ಯಗಳನ್ನೂ ತಿಳಿಸುತ್ತಾ, ದಿವ್ಯ ಸುಂದರ ಪ್ರಬಂಧಗಳಿಂದ ನಮ್ಮ ಪ್ರಜಾಪ್ರಭುತ್ವವಿರುವ ಭಾರತದ ಜನತೆಗೆ ಏನೇನು ಮಾರ್ಗದರ್ಶನವಾಗುತ್ತದೆ ಎಂಬುದನ್ನೂ, ನ್ಯಾಯ-ವೇದಾಂತ-ಸಾಂಖ್ಯಯೋಗ-ದಿವ್ಯಪ್ರಬಂಧ-ಸರ್ವೋದಯ ವಿದ್ವಾಂಸರಾದ ಶ್ರೀ।। ಉ।। ವೇ।। ತಿರುನಾರಾಯಣಪುರಂ ಅರೈಯರ್ ಸ್ವಾಮಿಯವರು ಕನ್ನಡದಲ್ಲಿ ವಿಸ್ತಾರವಾಗಿ ಬರೆದು ಅನುಗ್ರಹಿಸಿದ್ದಾರೆ. ಇವರು ನಾಥಮುನಿಯಂತೆ ಶತಕೋಪಯೋಗದಲ್ಲಿ "ಕಣ್ಣಿನುಣ್ ಶಿರುತ್ತಾಮ್ಬು" ಪ್ರಬಂಧವನ್ನು ನಿರಂತರವಾಗಿ ವರ್ಷಗಟ್ಟಲೆ ಹನ್ನೆರಡು ಸಾವಿರಕ್ಕಿಂತ ಹೆಚ್ಚುಬಾರಿ ಅನುಸಂಧಾನ ಮಾಡುತ್ತಿದ್ದರು. 1958ನೇ ಇಸವಿಯಿಂದೀಚೆಗೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಅಮೃತೂರಿನಲ್ಲಿ ಪಾದಯಾತ್ರೆಯಾಗಿ ನಡೆದುಬಂದು ಶ್ರೀ।। ಉ।। ವೇ।। ವಂಗಿಪುರಂ ನರಸಿಂಹಾಚಾರ್ಯರ ಮನೆಯಲ್ಲಿ ದಿವ್ಯಪ್ರಬಂಧೋಪದೇಶ ಮಾಡುತ್ತಾ ವಾಸವಾಗಿದ್ದಾಗ ಅವರ ಮನೆಯಲ್ಲಿ ನಮ್ಮಾಳ್ವಾರವರ ಸಾಕ್ಷಾತ್ಕಾರವಾಗಿ, ಅವರ ಅಜ್ಞೆಯಂತೆ ನಾಲ್ಕುಸಾವಿರ ದಿವ್ಯಪ್ರಬಂಧ ಹಾಡುಗಳನ್ನೂ ಕನ್ನಡ ಪದ್ಯಗಳನ್ನಾಗಿ ಭಾಷಾಂತರಿಸಿದ್ದಾರೆ.

ಇಂತಹ ಅಪೂರ್ವವಾದ ಗ್ರಂಥ ಇದು. ಇದು ಮುದ್ರಣವಾಗುತ್ತಿರುವುದು ಒಂದು ಸಂತೋಷದ ಸಂಗತಿ. ಅರೆಯರ್ ಸ್ವಾಮಿಯವರು ಕೆಲವು ದಿವ್ಯ ಪ್ರಬಂಧಗಳನ್ನೂ ಆರಣ್ಯಕ-ಕಾತಕ-ಉಪನಿಷದ್ ಭಾಗಗಳನ್ನೂ ಹಿಂದಿ ಮತ್ತು ಕನ್ನಡಗಳಿಗೆ ಅನುವಾದಿಸಿ ವ್ಯಾಖ್ಯಾನಿಸಿದ್ದಾರೆ. ಅನೇಕ ತಮಿಳು, ಮರಾಠಿ ಪ್ರಬಂಧಗಳನ್ನು ಸಂಸ್ಕೃತಕ್ಕೂ ಅನುವಾದಿಸಿದ್ದಾರೆ. ಕೆಲವು ಪ್ರಕಾಶಿತವಾಗಿವೆ. ೧೯೫೦ನೇ ಇಸವಿಯಿಂದಲೇ ಒಂದು ರೀತಿ 'ವಿಶಿಷ್ಟಾದ್ವೈತಸಾರ', 'ಗೀತಸಪ್ತಾಹ', 'ರಾಮಾಯಣನವಾಹ' ಮುಂತಾದ ಕನ್ನಡದ ಉಪನ್ಯಾಸ ಪ್ರಬಂಧಗಳಿಂದ ಆರಂಭವಾದ "ವಿಶದವಾಕ್ ಪ್ರಕಾಶನ"ವು ೧೯೭೦ರಲ್ಲಿ ಸ್ಪಷ್ಟರೂಪವನ್ನು ತಳೆಯಿತು. ಇದರಡಿಯಲ್ಲೇ ಅರೈಯರವರ ಕೃತಿಗಳು ಇಂದಿನವರೆಗೆ ಪ್ರಕಾಶಿತವಾಗಿವೆ. ಇದೀಗ ಸಣ್ಣಪುಟ್ಟ ಗ್ರಂಥಗಳನ್ನು ಹೊರತುಪಡಿಸಿ ಈ **'ತಿರುಪತಿ ತಿಮ್ಮಪ್ಪ'** ಇಪ್ಪತ್ತೆಂಟನೆಯ ಪ್ರಕಾಶನವಾಗಿ ಬಂದಿದೆ.

ಆಳ್ವಾರ್ ದಿವ್ಯಪ್ರಬಂಧಗಳಿಗೆ ಅನುಬಂಧವಾಗಿ ಬರುವ ವೇದಾಂತದೇಶಿಕರ ಮತ್ತು ಮಣವಾಳಮಾಮುನಿಯವರ ಪ್ರಬಂಧಗಳೂ ಅಲ್ಲಲ್ಲಿ ತಿರುಪತಿ ತಿಮ್ಮಪ್ಪನ ಬಗ್ಗೆ ತಿಳಿಸುತ್ತವೆ. ಈ ಉಭಯಾಚಾರ್ಯರ ಕೃತಿಗಳನ್ನೂ ಇದರಲ್ಲಿ ಬಳಸಿಕೊಂಡು, ಕನ್ನಡ ಭಾಷಾಂತರ ವ್ಯಾಖ್ಯಾನಗಳನ್ನು ಒದಗಿಸಲಾಗಿದೆ.

ಇದರ ಮುದ್ರಣಕ್ಕಾಗಿ ಅರೆಯರ್ ಅವರ ಸೋದರಮಾವನ ಪತ್ನಿಯಾದ ಶ್ರೀ ನಲ್ಲಾನ್ ಚಕ್ರವರ್ತಿ ಅಲಮೇಲು ಆಚಾರ್ಯ ಎಂಬ ಮಹಿಳಾಮಣಿಯು ತನ್ನ ತೊಂಭತ್ತನೇ ವರ್ಷವರ್ಧಂತಿಯ ನೆನಪಿಗಾಗಿ ತಮ್ಮ ಕುಲದೈವವಾದ ತಿರುಪತಿ ತಿಮ್ಮಪ್ಪನ ಸೇವಾರೂಪವಾಗಿ, ತಮ್ಮ ಮಕ್ಕಳು ಮೊಮ್ಮಕ್ಕಳಿಗೂ ಪ್ರೇರಿಸಿ, ನಲವತ್ತು ಸಾವಿರ ರೂಪಾಯಿಗಳನ್ನು ಉದಾರವಾಗಿ ಕೊಡುಗೆ ಮಾಡಿದ್ದಾರೆ. ಇವರಿಗೂ ಇವರ ಕುಟುಂಬದವರಾದ ಇವರ ಸುಪುತ್ರ ಎನ್.ಸಿ. ನರಸಿಂಘಂ, ನಿವೃತ್ತ ರೈಲ್ವೆ ಹೈ ಆಫೀಸರ್, ಮುಂಬಯಿ; ಸುಪುತ್ರಿಯರಾದ ಶ್ರೀಮತಿ ವಿಜಯಾ ವರದರಾಜನ್, ಜರ್ಮನ್ ಭಾಷಾ ತಜ್ಞೆ, ಶಿಶು ಸಂರಕ್ಷಣ ಶಿಕ್ಷಣ ವಿಜ್ಞಾನವತಿ, ಬೆಂಗಳೂರು; ಶ್ರೀಮತಿ ಉಷಾ (U.S.A.), ಶ್ರೀಮತಿ ಡಾಕ್ಟರ್ ಎನ್.ವಿ. ವೈಜಯಂತಿ ಶ್ರೀಧರ್, ಬೆಂಗಳೂರು; ಉಷಾವಿನ ಮಕ್ಕಳು ಸೌ।। ರೂಪಾ ಮತ್ತು ಮೀರಾ (U.S.A.) ಅವರುಗಳಿಗೂ, ತಿರುಮಲೆ ನಲ್ಲಾನ್ ಚಕ್ರವರ್ತಿ ವಂಶದ ಮೂಲ ಪುರುಷರಿಂದ ಸಂರಕ್ಷಿತನಾದ ಈ ತಿರುಪತಿ ತಿಮ್ಮಪ್ಪನು ಮಂಗಳಗಳನ್ನು

ಉಂಟುಮಾಡಲಿ ಎಂದು, ಅವನಲ್ಲೂ ಆಳ್ವಾರ್‌ಗಳಲ್ಲೂ, ರಾಮಾನುಜರಲ್ಲೂ, ವೇದಾಂತ ದೇಶಿಕ - ಮಣವಾಳ ಮಾಮುನಿಯವರಲ್ಲೂ ಸಮಸ್ತ ಭಗವದ್ ಭಕ್ತರಲ್ಲೂ ಪ್ರಾರ್ಥಿಸುತ್ತೇವೆ.

ಬಾಲ್ಯದಿಂದ ಅನುಸರಿಸಿದ್ದ ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಂಗ್ರೆಸ್ ಅನ್ನು ಗಾಂಧೀಜಿಯವರ ಘೋಷಣೆಯಂತೆ ತ್ಯಜಿಸಿದರೂ, ಸರ್ವೋದಯ ಮಾರ್ಗದಲ್ಲಿ ವಿನೋಬಾಜೀಯವರನ್ನು ಅನುಸರಿಸಿ ಪರಿಪೂರ್ಣ ಆರ್ಥಿಕ-ಸಾಂಸ್ಕೃತಿಕ ಭಾರತ ಸ್ವಾತಂತ್ರ್ಯಕ್ಕಾಗಿ ಇಂದಿಗೂ ತಮ್ಮ ಜೀವನವನ್ನು ಮುಡಿಪಾಗಿ ಇಟ್ಟಿರುವ ಎಂಭತ್ತೊಂಭತ್ತು ವಯಸ್ಸಿನ ಅರೆಯರ್ ಬಹುಭಾಷಾ ಬಹುಶಾಸ್ತ್ರ ವೇದ ವಿದ್ವಾಂಸರು. ಬೈಬಲ್-ಕುರಾನ್-ಗ್ರಂಥಸಾಹಿಬ್-ಅವೆಸ್ತಾ-ಜೈನ-ಬೌದ್ಧ ದರ್ಶನಗಳನ್ನೂ ಅಧ್ಯಯನ ಮಾಡಿರುವ ಇವರಂತೆಯೇ ಇವರಿಗಿಂತ ಹಿರಿಯರಾಗಿದ್ದ ಶ್ರೀ ಗೊರೂರು ಕುಟ್ಯಯ್ಯಂಗಾರ್ಯರ ಸುಪುತ್ರ ದಿವಂಗತ ಪಂಡಿತ ನರಸಿಂಹಾಚಾರ್ಯರು ತಾವೂ ಸರ್ವೋದಯ ನಿಷ್ಠರಾಗಿದ್ದು, ಕಾಂಚನಮುಕ್ತ, ವಾಹನಮುಕ್ತ ವ್ರತನಿಷ್ಠರಾದ ಅರೆಯರ್ ಅವರಿಗೆ ಐದು ಸಾವಿರ ರೂಗಳನ್ನು ಈ ಮುದ್ರಣಕ್ಕಾಗಿ ಅನುಗ್ರಹಿಸಿದ್ದರು. ಅವರ ಪುತ್ರ ಪುತ್ರಿಯರೆಲ್ಲರಿಗೂ ಶ್ರೀನಿವಾಸನು ಅನುಗ್ರಹಿಸಲಿ. ಹೀಗೆ ಅನೇಕ ಮಹನೀಯರು ಆರ್ಥಿಕ ಸಹಾಯ ಮಾಡಿರುವುದುಂಟು. ಅವರೆಲ್ಲರಿಗೂ ಶ್ರೀನಿವಾಸನ ಅನುಗ್ರಹ ಉಂಟಾಗಲಿ.

ತಿರುಪತಿ ತಿಮ್ಮಪ್ಪನ ಸಂರಕ್ಷಣೆಗಾಗಿ ರಾಮಾನುಜರು ಏರ್ಪಡಿಸಿದ "ಪಂಚಮಂಡಿಯಂ" ಗ್ರಾಮಗಳಲ್ಲಿ ಹೋಗಿ ನೆಲೆಸಿದ ತಿರುಮಲೈ ನಲ್ಲಾನ್ ಚಕ್ರವರ್ತಿಯವರ ವಂಶದವರಾದ ತಿರುನಾರಾಯಣಪುರಂ ತೊಂಡನೂರ್ ಐಯ್ಯಾಶಾಮಿ (ಐಶಾಮಿ) ನರಸಿಂಹ ಅಯ್ಯಂಗಾರ್ಯರು ಅರೆಯರ್ ಅವರ ಬಾಲ್ಯಸ್ನೇಹಿತರಾಗಿ ಭಗವದ್‌ವಿಷಯ ಸಹಾಧ್ಯಾಯಿಯಾಗಿ ಇದ್ದರು. ಇವರ ನೆನಪಿಗಾಗಿ ಅವರ ಪುತ್ರವರ್ಗದವರೂ ಅವರಲ್ಲಿ ಮುಖ್ಯವಾಗಿ ಶ್ರೀ ತಿರು ಎಂದು ಪ್ರಸಿದ್ಧರಾದ ತಿರುನಾರಾಯಣ ಐಯ್ಯಂಗಾರ್ ಅವರು ತಮ್ಮ ಅಗಾಧ ಕಾರ್ಯನಿರ್ವಹಣೆಯ ಜೊತೆಗೆ ಈ ಮುದ್ರಣ ಕಾರ್ಯದಲ್ಲೂ ಸಹಾಯ ಮಾಡಿ ವೇಂಕಟೇಶ್ವರಸ್ವಾಮಿ ಮತ್ತು ಅಲಮೇಲುಮಂಗೈತ್ತಾಯಾರವರ ವರ್ಣಚಿತ್ರಗಳನ್ನು ಮುದ್ರಿಸಿ ಒದಗಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ತಿರುಪತಿ ತಿಮ್ಮಪ್ಪನ ಅನುಗ್ರಹವು ಇತೋಪ್ಯತಿಶಯವಾಗಿ ಏರ್ಪಟ್ಟು ಮಂಗಳವಾಗಲೆಂದು ಆಶಿಸುತ್ತೇವೆ.

ಬೆಂಗಳೂರಿನ ನವಭಾರತ ಪ್ರೆಸ್‌ನ ಸುದರ್ಶನಂ ಅವರು ಕೀರ್ತಿಕಾಯರಾಗಿ ಇಂದೂ ನಮ್ಮ ನೆನಪಿನಲ್ಲಿ ಉಳಿದಿದ್ದಾರೆ. ಉದಾರಿಯೂ, ಒಳ್ಳೆಯ ಸಲಹಾಗಾರರಾಗಿಯೂ, ಮುದ್ರಣ-ಪ್ರಕಾಶನ ಕಾರ್ಯಗಳನ್ನು-ಎಲ್ಲರಿಗೂ ಪ್ರೀತಿಯಿಂದ ನಡೆಸಿಕೊಡುತ್ತಿದ್ದ ಅವರೇ ಅರೆಯರ್ ಅವರ ಹಲವಾರು ಸಣ್ಣ ಪುಸ್ತಿಕೆಗಳನ್ನು ಮುದ್ರಿಸಿ ಉಪಕರಿಸಿದ್ದರು. ಈಗ ಅವರ ಸುಪುತ್ರರಾದ ಎಸ್. ಶ್ರೀಧರ್ ಅವರು ಪರಿಸರ ವೃಕ್ಷ, ಸಸ್ಯ, ಕ್ರಿಮಿ, ಕೀಟ, ಪತಂಗ, ಪಕ್ಷಿ ಪ್ರಾಣಿ ಸಂಕುಲದ ಸಂರಕ್ಷಣೆಗೆ ಕಟಿಬದ್ಧರಾಗಿ ಅಪಾರ ಕಾರ್ಯವೆಸಗುತ್ತಿದ್ದರೂ, ಪ್ರಾಣಿಗಳಲ್ಲದ ಪುಸ್ತಕ ವಿಷಯದಲ್ಲೂ ಅತ್ಯಾದರದಿಂದ ನಿಷ್ಠರಾಗಿ ಕಾರ್ಯ ಮಾಡುತ್ತಿದ್ದಾರೆ. ಇವರು ಒಳ್ಳೆಯ ಫೋಟೋಗ್ರಾಫರ್ ಸಹಾ. ಇವರೂ ತಂದೆಯಂತೆಯೇ ವಿಚಕ್ಷಣತೆಯಿಂದ ಈ ಗ್ರಂಥವನ್ನು ಮುದ್ರಿಸಿ ಕೊಡುತ್ತಿದ್ದಾರೆ. ಇವರ ಕಾರ್ಯಕರ್ತೆಯರಾದ ಶ್ರೀಮತಿ ಕಲಾವತಿ ಅರಸ್ ಮುಂತಾದ ಎಲ್ಲರಿಗೂ ಶ್ರೀನಿವಾಸನ ಅನುಗ್ರಹ ಮಂಗಳಾಶಾಸನಗಳು ನೆರವೇರಲಿ. ಅವನ ಅನುಗ್ರಹದಿಂದ ಈ ಕಾರ್ಯದಲ್ಲಿ ಸಹಕರಿಸಿರುವ ಎಲ್ಲರಿಗೂ ಒಳ್ಳೆಯದಾಗಲೆಂದು ಆಶಿಸುತ್ತೇವೆ.

ಅರೆಯರ್ ಅವರ ಸುಪುತ್ರ ದಿವಂಗತ ತಿರುಮಲೆ ಶ್ರೀನಾಥ್ ಅವರು ಐದು ವರ್ಷಗಳ ಹಿಂದೆಯೇ ಇದರ ಮುದ್ರಣಕ್ಕೆ ಪ್ರಯತ್ನಪಟ್ಟಿದ್ದು, ಅದು ಈಗ ಕಾರ್ಯರೂಪಕ್ಕೆ ಬಂದಿರುವುದರಿಂದ, ಅವರ ಆತ್ಮಕ್ಕೂ ಶ್ರೀನಿವಾಸನು ದಿವ್ಯಾನುಭವವನ್ನು ಕೊಟ್ಟು ಸಂತೈಸಲೆಂದು ಆ ತಿರುಮಲೆ ದೇವರನ್ನೇ ಪ್ರಾರ್ಥಿಸುತ್ತೇನೆ.

ಕೃತಿ ರಚನೆ ಇಂದಿಗೆ ಮೂವತ್ತು ವರ್ಷಗಳ ಹಿಂದೆಯೇ ಆಗಿದ್ದರೂ ಮುದ್ರಣ ಪ್ರಕಾಶನಗಳ ಅವಕಾಶವನ್ನು ತಿಮ್ಮಪ್ಪ ಈಗ ಒದಗಿಸಿದ್ದಾನೆ. ಐದು ವರ್ಷಗಳಿಂದ ಇದರ ಡಿ.ಟಿ.ಪಿ.ಯನ್ನು ರಕ್ಷಿಸಿಕೊಟ್ಟು ಈಗ ಉಪಕರಿಸಿದ ನವಭಾರತ ಪ್ರೆಸ್‌ನ ಆಡಳಿತ ವರ್ಗಕ್ಕೂ ಎಲ್ಲ ಕಾರ್ಯಕರ್ತರಿಗೂ ನಮ್ಮ ವಂದನೆಗಳು.

ಇಂತು ಸಂಪಾದಕ

ದಿನಾಂಕ : ೨೭-೪-೨೦೦೫

'ಬ್ರಹ್ಮಸಾತ್' ಆಗಿಸಿ, ಭೂಮಿಗೆ `ಕಾಶ್ಯಪೀ' ಎಂಬ ಹೆಸರು ಬರುವಂತೆ ಮಾಡಿದ ಮಹಾಮಹಿಮೆ ಪರಶುರಾಮಾವತಾರದ್ದು. ಅಂತೆಯೇ ನಮ್ಮ ಶ್ರೀನಿವಾಸಸ್ವಾಮಿಯೂ ಭಕ್ತರಿಗಾಗಿ ತನ್ನನ್ನೇ ಉದಾರವಾಗಿ ತೋರಿಕೊಳ್ಳುತ್ತಾ ಭಕ್ತರ ಸಕಲ ಪಾಪಗಳನ್ನೂ ಸ್ವೀಕರಿಸಿ ಎಲ್ಲರಿಗೂ ಅನುಗ್ರಹಿಸುತ್ತ ಇರುವುದು ಅವನ ಪರಾತ್ಪರ ಪರಬ್ರಹ್ಮಶಕ್ತಿಯ ಫಲ. ಈ **ವೇಂಕಟಪರಬ್ರಹ್ಮವು** ಶ್ರೀದೇವಿಗೆ ತನ್ನ ವಕ್ಷಸ್ಸ್ಥಲದಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟ ಪುರುಷೋತ್ತಮ. ಪುರುಷೋತ್ತಮನೇ ಶ್ರೀ-ನಿವಾಸ. ಭಗವದ್ ರಾಮಾನುಜರು ಶ್ರೀಭಾಷ್ಯದಲ್ಲಿ ನೇರವಾಗಿ ತಿರುಪತಿ ತಿಮ್ಮಪ್ಪನನ್ನು ಸ್ತೋತ್ರ ಮಾಡದಿದ್ದರೂ "ಶ್ರೀ-ನಿವಾಸೇ ಬ್ರಹ್ಮಣಿ" ಎಂಬ ಮಾತಿನಿಂದ **"ಅಲರ್‌ಮೇಲ್ ಮಂಗೈ ಉರೈಮಾರ್ಪನ್"** - ಶ್ರಿಯಃಪತಿಯೇ ಪರಬ್ರಹ್ಮ, ಪರಬ್ರಹ್ಮದ ಗುರುತು ಶ್ರೀದೇವಿ ಎಂದು ನಿಶ್ಚಯಿಸಿ, ಪರಬ್ರಹ್ಮವು ಶ್ರಿಯಃಪತಿಯೇ ಹೊರತು; ಸ್ವಾಹಾಪತಿ ಶಚೀಪತಿ, ಗೌರೀಪತಿ, ವಾಣೀಪತಿಗಳಲ್ಲ; ಎಂದು ನಿರೂಪಿಸಿದ್ದಾರೆ. **"ಅಜ್ಞಾನಿ ಅನ್ಯಾಃ ದೇವತಾಃ" "ಅಗ್ನಿಃ ಅವಮೋ ದೇವತಾನಾಂ, ಸಂಯಾತಾನಾಂ ಉತ್ತಮೋ ವಿಷ್ಣುರಾಸೀತ್"** ಎಂಬ ವೇದವಚನಗಳ ಆಧಾರದಿಂದ, ನಮ್ಮ ತಿರುಪತಿ ತಿಮ್ಮಪ್ಪನಲ್ಲಿ ಸಕಲ ದೇವತಾಂತರಗಳೂ ಅಙ್ಗಗಳಾಗಿ ಕೂಡಿವೆ ಎಂದೂ, ಶ್ರಿಯಃಪತಿಯಾದ ಇವನೇ ಪರತತ್ತ್ವ ಎಂದೂ, ನಿಶ್ಚಯವಾಗುತ್ತದೆ. ಪರಬ್ರಹ್ಮದ ಒಂದು ಸರ್ವಲಕ್ಷಣ ಸಂಪನ್ನವಾದ **'ವಿಶ್ವರೂಪ'**ದ ಅರ್ಚಾಮೂರ್ತಿಯೇ ತಿರುಪತಿ ತಿಮ್ಮಪ್ಪ. ಶ್ರಿಯಃಪತಿಯೊಬ್ಬನಿಗೇ ಈ ರೀತಿಯ ಸ್ವಭಾವ-ಸಾಮರ್ಥ್ಯಗಳುಂಟು. ಇದನ್ನು ಮನಗಂಡೇ ಆಳ್ವಾರ್‌ಗಳೂ ನಾಯನ್ಮಾರ್‌ಗಳೂ ಇವನನ್ನು **"ತಿರುಮಾಲ್"** = ಶ್ರೀ-ನಿವಾಸ ಎಂದು ನಿಶ್ಚಯಿಸಿ ಅನುಭವಿಸಿದರು.

ಇಂತಹ ತಿಮ್ಮಪ್ಪನ ಹಾಡುಗಳಿಗೆ **"ದ್ರವಿಡ ವ್ಯಾಖ್ಯಾನ ಚಕ್ರವರ್ತಿ"** ಎನಿಸಿದ ಪೆರಿಯವಾಚ್ಚಾನ್ ಪಿಳ್ಳೈ ಎಂಬ ಆಚಾರ್ಯರು ಇಂದಿಗೆ ೮೦೦ ವರ್ಷಗಳ ಹಿಂದೆಯೇ ಅದ್ಭುತವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಆ ವ್ಯಾಖ್ಯಾನದ ಸ್ವಾರಸ್ಯಗಳನ್ನೂ ತಿಳಿಸುತ್ತಾ, ದಿವ್ಯ ಸುಂದರ ಪ್ರಬಂಧಗಳಿಂದ ನಮ್ಮ ಪ್ರಜಾಪ್ರಭುತ್ವವಿರುವ ಭಾರತದ ಜನತೆಗೆ ಏನೇನು ಮಾರ್ಗದರ್ಶನವಾಗುತ್ತದೆ ಎಂಬುದನ್ನೂ, ನ್ಯಾಯ-ವೇದಾಂತ-ಸಾಂಖ್ಯಯೋಗ-ದಿವ್ಯಪ್ರಬಂಧ-ಸರ್ವೋದಯ ವಿದ್ವಾಂಸರಾದ ಶ್ರೀ।। ಉ।। ವೇ।। ತಿರುನಾರಾಯಣಪುರಂ ಅರೈಯರ್ ಸ್ವಾಮಿಯವರು ಕನ್ನಡದಲ್ಲಿ ವಿಸ್ತಾರವಾಗಿ ಬರೆದು ಅನುಗ್ರಹಿಸಿದ್ದಾರೆ. ಇವರು ನಾಥಮುನಿಯಂತೆ ಶತಕೋಪಯೋಗದಲ್ಲಿ "ಕಣ್ಣಿನುಣ್ ಶಿರುತ್ತಾಮ್ಬು" ಪ್ರಬಂಧವನ್ನು ನಿರಂತರವಾಗಿ ವರ್ಷಗಟ್ಟಲೆ ಹನ್ನೆರಡು ಸಾವಿರಕ್ಕಿಂತ ಹೆಚ್ಚುಬಾರಿ ಅನುಸಂಧಾನ ಮಾಡುತ್ತಿದ್ದರು. 1958ನೇ ಇಸವಿಯಿಂದೀಚೆಗೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಅಮೃತೂರಿನಲ್ಲಿ ಪಾದಯಾತ್ರೆಯಾಗಿ ನಡೆದುಬಂದು ಶ್ರೀ।। ಉ।। ವೇ।। ವಂಗಿಪುರಂ ನರಸಿಂಹಾಚಾರ್ಯರ ಮನೆಯಲ್ಲಿ ದಿವ್ಯಪ್ರಬಂಧೋಪದೇಶ ಮಾಡುತ್ತಾ ವಾಸವಾಗಿದ್ದಾಗ ಅವರ ಮನೆಯಲ್ಲಿ ನಮ್ಮಾಳ್ವಾರವರ ಸಾಕ್ಷಾತ್ಕಾರವಾಗಿ, ಅವರ ಆಜ್ಞೆಯಂತೆ ನಾಲ್ಕುಸಾವಿರ ದಿವ್ಯಪ್ರಬಂಧ ಹಾಡುಗಳನ್ನೂ ಕನ್ನಡ ಪದ್ಯಗಳನ್ನಾಗಿ ಭಾಷಾಂತರಿಸಿದ್ದಾರೆ.

ಇಂತಹ ಅಪೂರ್ವವಾದ ಗ್ರಂಥ ಇದು. ಇದು ಮುದ್ರಣವಾಗುತ್ತಿರುವುದು ಒಂದು ಸಂತೋಷದ ಸಂಗತಿ. ಅರೆಯರ್ ಸ್ವಾಮಿಯವರು ಕೆಲವು ದಿವ್ಯ ಪ್ರಬಂಧಗಳನ್ನೂ ಆರಣ್ಯಕ-ಕಾಠಕ-ಉಪನಿಷದ್ ಭಾಗಗಳನ್ನೂ ಹಿಂದಿ ಮತ್ತು ಕನ್ನಡಗಳಿಗೆ ಅನುವಾದಿಸಿ ವ್ಯಾಖ್ಯಾನಿಸಿದ್ದಾರೆ. ಅನೇಕ ತಮಿಳು, ಮರಾಠಿ ಪ್ರಬಂಧಗಳನ್ನು ಸಂಸ್ಕೃತಕ್ಕೂ ಅನುವಾದಿಸಿದ್ದಾರೆ. ಕೆಲವು ಪ್ರಕಾಶಿತವಾಗಿವೆ. ೧೯೫೦ನೇ ಇಸವಿಯಿಂದಲೇ ಒಂದು ರೀತಿ 'ವಿಶಿಷ್ಟಾದ್ವೈತಸಾರ', 'ಗೀತಸಪ್ತಾಹ', 'ರಾಮಾಯಣನವಾಹ' ಮುಂತಾದ ಕನ್ನಡದ ಉಪನ್ಯಾಸ ಪ್ರಬಂಧಗಳಿಂದ ಆರಂಭವಾದ "ವಿಶದವಾಕ್ ಪ್ರಕಾಶನ"ವು ೧೯೭೦ರಲ್ಲಿ ಸ್ಪಷ್ಟರೂಪವನ್ನು ತಳೆಯಿತು. ಇದರಡಿಯಲ್ಲೇ ಅರೈಯರವರ ಕೃತಿಗಳು ಇಂದಿನವರೆಗೆ ಪ್ರಕಾಶಿತವಾಗಿವೆ. ಇದೀಗ ಸಣ್ಣಪುಟ್ಟ ಗ್ರಂಥಗಳನ್ನು ಹೊರತುಪಡಿಸಿ ಈ **'ತಿರುಪತಿ ತಿಮ್ಮಪ್ಪ'** ಇಪ್ಪತ್ತೈದನೆಯ ಪ್ರಕಾಶನವಾಗಿ ಬಂದಿದೆ.

ಆಳ್ವಾರ್ ದಿವ್ಯಪ್ರಬಂಧಗಳಿಗೆ ಅನುಬಂಧವಾಗಿ ಬರುವ ವೇದಾಂತದೇಶಿಕರ ಮತ್ತು ಮಣವಾಳಮಾಮುನಿಯವರ ಪ್ರಬಂಧಗಳೂ ಅಲ್ಲಲ್ಲಿ ತಿರುಪತಿ ತಿಮ್ಮಪ್ಪನ ಬಗ್ಗೆ ತಿಳಿಸುತ್ತವೆ. ಈ ಉಭಯಾಚಾರ್ಯರ ಕೃತಿಗಳನ್ನೂ ಇದರಲ್ಲಿ ಬಳಸಿಕೊಂಡು, ಕನ್ನಡ ಭಾಷಾಂತರ ವ್ಯಾಖ್ಯಾನಗಳನ್ನು ಒದಗಿಸಲಾಗಿದೆ.

ಇದರ ಮುದ್ರಣಕ್ಕಾಗಿ ಅರೆಯರ್ ಅವರ ಸೋದರಮಾವನ ಪತ್ನಿಯಾದ ಶ್ರೀ ನಲ್ಲಾನ್ ಚಕ್ರವರ್ತಿ ಅಲಮೇಲು ಆಚಾರ್ಯ ಎಂಬ ಮಹಿಳಾಮಣಿಯು ತನ್ನ ತೊಂಭತ್ತನೇ ವರ್ಷವರ್ಧಂತಿಯ ನೆನಪಿಗಾಗಿ ತಮ್ಮ ಕುಲದೈವವಾದ ತಿರುಪತಿ ತಿಮ್ಮಪ್ಪನ ಸೇವಾರೂಪವಾಗಿ, ತಮ್ಮ ಮಕ್ಕಳು ಮೊಮ್ಮಕ್ಕಳಿಗೂ ಪ್ರೇರಿಸಿ, ನಲವತ್ತು ಸಾವಿರ ರೂಪಾಯಿಗಳನ್ನು ಉದಾರವಾಗಿ ಕೊಡುಗೆ ಮಾಡಿದ್ದಾರೆ. ಇವರಿಗೂ ಇವರ ಕುಟುಂಬದವರಾದ ಇವರ ಸುಪುತ್ರ ಎನ್.ಸಿ. ನರಸಿಂಘಂ, ನಿವೃತ್ತ ರೈಲ್ವೆ ಹೈ ಆಫೀಸರ್, ಮುಂಬಯಿ; ಸುಪುತ್ರಿಯರಾದ ಶ್ರೀಮತಿ ವಿಜಯಾ ವರದರಾಜನ್, ಜರ್ಮನ್ ಭಾಷಾ ತಜ್ಞೆ, ಶಿಶು ಸಂರಕ್ಷಣ ಶಿಕ್ಷಣ ವಿಜ್ಞಾನವತಿ, ಬೆಂಗಳೂರು; ಶ್ರೀಮತಿ ಉಷಾ (U.S.A.), ಶ್ರೀಮತಿ ಡಾಕ್ಟರ್ ಎನ್.ವಿ. ವೈಜಯಂತಿ ಶ್ರೀಧರ್, ಬೆಂಗಳೂರು; ಉಷಾವಿನ ಮಕ್ಕಳು ಸೌ।। ರೂಪಾ ಮತ್ತು ಮೀರಾ (U.S.A.) ಅವರುಗಳಿಗೂ, ತಿರುಮಲೆ ನಲ್ಲಾನ್ ಚಕ್ರವರ್ತಿ ವಂಶದ ಮೂಲ ಪುರುಷರಿಂದ ಸಂರಕ್ಷಿತನಾದ ಈ ತಿರುಪತಿ ತಿಮ್ಮಪ್ಪನು ಮಂಗಳಗಳನ್ನು

ಉಂಟುಮಾಡಲಿ ಎಂದು, ಅವನಲ್ಲೂ ಆಳ್ವಾರ್‌ಗಳಲ್ಲೂ, ರಾಮಾನುಜರಲ್ಲೂ, ವೇದಾಂತ ದೇಶಿಕ - ಮಣವಾಳ ಮಾಮುನಿಯವರಲ್ಲೂ ಸಮಸ್ತ ಭಗವದ್ ಭಕ್ತರಲ್ಲೂ ಪ್ರಾರ್ಥಿಸುತ್ತೇವೆ.

ಬಾಲ್ಯದಿಂದ ಅನುಸರಿಸಿದ್ದ ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಂಗ್ರೆಸ್ ಅನ್ನು ಗಾಂಧೀಜಿಯವರ ಘೋಷಣೆಯಂತೆ ತ್ಯಜಿಸಿದರೂ, ಸರ್ವೋದಯ ಮಾರ್ಗದಲ್ಲಿ ವಿನೋಬಾಜೀಯವರನ್ನು ಅನುಸರಿಸಿ ಪರಿಪೂರ್ಣ ಆರ್ಥಿಕ-ಸಾಂಸ್ಕೃತಿಕ ಭಾರತ ಸ್ವಾತಂತ್ರ್ಯಕ್ಕಾಗಿ ಇಂದಿಗೂ ತಮ್ಮ ಜೀವನವನ್ನು ಮುಡಿಪಾಗಿ ಇಟ್ಟಿರುವ ಎಂಭತ್ತೊಂಭತ್ತು ವಯಸ್ಸಿನ ಅರೆಯರ್ ಬಹುಭಾಷಾ ಬಹುಶಾಸ್ತ್ರ ವೇದ ವಿದ್ವಾಂಸರು. ಬೈಬಲ್-ಕುರಾನ್-ಗ್ರಂಥಸಾಹಿಬ್-ಅವೆಸ್ತಾ-ಜೈನ-ಬೌದ್ಧ ದರ್ಶನಗಳನ್ನೂ ಅಧ್ಯಯನ ಮಾಡಿರುವ ಇವರಂತೆಯೇ ಇವರಿಗಿಂತ ಹಿರಿಯರಾಗಿದ್ದ ಶ್ರೀ ಗೊರೂರು ಕುಟ್ಯಯ್ಯಂಗಾರ್ಯರ ಸುಪುತ್ರ ದಿವಂಗತ ಪಂಡಿತ ನರಸಿಂಹಾಚಾರ್ಯರು ತಾವೂ ಸರ್ವೋದಯ ನಿಷ್ಠರಾಗಿದ್ದು, ಕಾಂಚನಮುಕ್ತಿ, ವಾಹನಮುಕ್ತಿ ವ್ರತನಿಷ್ಠರಾದ ಅರೆಯರ್ ಅವರಿಗೆ ಐದು ಸಾವಿರ ರೂಗಳನ್ನು ಈ ಮುದ್ರಣಕ್ಕಾಗಿ ಅನುಗ್ರಹಿಸಿದ್ದರು. ಅವರ ಪುತ್ರ ಪುತ್ರಿಯರೆಲ್ಲರಿಗೂ ಶ್ರೀನಿವಾಸನು ಅನುಗ್ರಹಿಸಲಿ. ಹೀಗೆ ಅನೇಕ ಮಹನೀಯರು ಆರ್ಥಿಕ ಸಹಾಯ ಮಾಡಿರುವುದುಂಟು. ಅವರೆಲ್ಲರಿಗೂ ಶ್ರೀನಿವಾಸನ ಅನುಗ್ರಹ ಉಂಟಾಗಲಿ.

ತಿರುಪತಿ ತಿಮ್ಮಪ್ಪನ ಸಂರಕ್ಷಣೆಗಾಗಿ ರಾಮಾನುಜರು ಏರ್ಪಡಿಸಿದ "ಪಂಚಮಂಡಿಯಂ" ಗ್ರಾಮಗಳಲ್ಲಿ ಹೋಗಿ ನೆಲೆಸಿದ ತಿರುಮಲೈ ನಲ್ಲಾನ್ ಚಕ್ರವರ್ತಿಯವರ ವಂಶದವರಾದ ತಿರುನಾರಾಯಣಪುರಂ ತೊಂಡನೂರ್ ಐಯ್ಯಾಶಾಮಿ (ಐಶಾಮಿ) ನರಸಿಂಹ ಅಯ್ಯಂಗಾರ್ಯರು ಅರೆಯರ್ ಅವರ ಬಾಲ್ಯಸ್ನೇಹಿತರಾಗಿ ಭಗವದ್‌ವಿಷಯ ಸಹಾಧ್ಯಾಯಿಯಾಗಿ ಇದ್ದರು. ಇವರ ನೆನಪಿಗಾಗಿ ಅವರ ಪುತ್ರವರ್ಗದವರೂ ಅವರಲ್ಲಿ ಮುಖ್ಯವಾಗಿ ಶ್ರೀ ತಿರು ಎಂದು ಪ್ರಸಿದ್ಧರಾದ ತಿರುನಾರಾಯಣ ಐಯ್ಯಂಗಾರ್ ಅವರು ತಮ್ಮ ಅಗಾಧ ಕಾರ್ಯನಿರ್ವಹಣೆಯ ಜೊತೆಗೆ ಈ ಮುದ್ರಣ ಕಾರ್ಯದಲ್ಲೂ ಸಹಾಯ ಮಾಡಿ ವೇಂಕಟೇಶ್ವರಸ್ವಾಮಿ ಮತ್ತು ಅಲಮೇಲುಮಂಗೈತ್ತಾಯಾರವರ ವರ್ಣಚಿತ್ರಗಳನ್ನು ಮುದ್ರಿಸಿ ಒದಗಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ತಿರುಪತಿ ತಿಮ್ಮಪ್ಪನ ಅನುಗ್ರಹವು ಇತೋಪ್ಯತಿಶಯವಾಗಿ ಏರ್ಪಟ್ಟು ಮಂಗಳವಾಗಲೆಂದು ಆಶಿಸುತ್ತೇವೆ.

ಬೆಂಗಳೂರಿನ ನವಭಾರತ ಪ್ರೆಸ್‌ನ ಸುದರ್ಶನಂ ಅವರು ಕೀರ್ತಿಕಾಯರಾಗಿ ಇಂದೂ ನಮ್ಮ ನೆನಪಿನಲ್ಲಿ ಉಳಿದಿದ್ದಾರೆ. ಉದಾರಿಯೂ, ಒಳ್ಳೆಯ ಸಲಹಾಗಾರರಾಗಿಯೂ, ಮುದ್ರಣ-ಪ್ರಕಾಶನ ಕಾರ್ಯಗಳನ್ನು-ಎಲ್ಲರಿಗೂ ಪ್ರೀತಿಯಿಂದ ನಡೆಸಿಕೊಡುತ್ತಿದ್ದ ಅವರೇ ಅರೆಯರ್ ಅವರ ಹಲವಾರು ಸಣ್ಣ ಪುಸ್ತಿಕೆಗಳನ್ನು ಮುದ್ರಿಸಿ ಉಪಕರಿಸಿದ್ದರು. ಈಗ ಅವರ ಸುಪುತ್ರರಾದ ಎಸ್. ಶ್ರೀಧರ್ ಅವರು ಪರಿಸರ ವೃಕ್ಷ, ಸಸ್ಯ, ಕ್ರಿಮಿ, ಕೀಟ, ಪತಂಗ, ಪಕ್ಷಿ ಪ್ರಾಣಿ ಸಂಕುಲದ ಸಂರಕ್ಷಣೆಗೆ ಕಟಿಬದ್ಧರಾಗಿ ಅಪಾರ ಕಾರ್ಯವೆಸಗುತ್ತಿದ್ದರೂ, ಪ್ರಾಣಿಗಳಲ್ಲದ ಪುಸ್ತಕ ವಿಷಯದಲ್ಲೂ ಅತ್ಯಾದರದಿಂದ ನಿಷ್ಠರಾಗಿ ಕಾರ್ಯ ಮಾಡುತ್ತಿದ್ದಾರೆ. ಇವರು ಒಳ್ಳೆಯ ಫೋಟೋಗ್ರಾಫರ್ ಸಹಾ. ಇವರೂ ತಂದೆಯಂತೆಯೇ ವಿಚಕ್ಷಣತೆಯಿಂದ ಈ ಗ್ರಂಥವನ್ನು ಮುದ್ರಿಸಿ ಕೊಡುತ್ತಿದ್ದಾರೆ. ಇವರ ಕಾರ್ಯಕರ್ತೆಯರಾದ ಶ್ರೀಮತಿ ಕಲಾವತಿ ಅರಸ್ ಮುಂತಾದ ಎಲ್ಲರಿಗೂ ಶ್ರೀನಿವಾಸನ ಅನುಗ್ರಹ ಮಂಗಳಾಶಾಸನಗಳು ನೆರವೇರಲಿ. ಅವನ ಅನುಗ್ರಹದಿಂದ ಈ ಕಾರ್ಯದಲ್ಲಿ ಸಹಕರಿಸಿರುವ ಎಲ್ಲರಿಗೂ ಒಳ್ಳೆಯದಾಗಲೆಂದು ಆಶಿಸುತ್ತೇವೆ.

ಅರೆಯರ್ ಅವರ ಸುಪುತ್ರ ದಿವಂಗತ ತಿರುಮಲೆ ಶ್ರೀನಾಥ್ ಅವರು ಐದು ವರ್ಷಗಳ ಹಿಂದೆಯೇ ಇದರ ಮುದ್ರಣಕ್ಕೆ ಪ್ರಯತ್ನಪಟ್ಟಿದ್ದು, ಅದು ಈಗ ಕಾರ್ಯರೂಪಕ್ಕೆ ಬಂದಿರುವುದರಿಂದ, ಅವರ ಆತ್ಮಕ್ಕೂ ಶ್ರೀನಿವಾಸನು ದಿವ್ಯಾನುಭವವನ್ನು ಕೊಟ್ಟು ಸಂತೈಸಲೆಂದು ಆ ತಿರುಮಲೆ ದೇವರನ್ನೇ ಪ್ರಾರ್ಥಿಸುತ್ತೇನೆ.

ಕೃತಿ ರಚನೆ ಇಂದಿಗೆ ಮೂವತ್ತು ವರ್ಷಗಳ ಹಿಂದೆಯೇ ಆಗಿದ್ದರೂ ಮುದ್ರಣ ಪ್ರಕಾಶನಗಳ ಅವಕಾಶವನ್ನು ತಿಮ್ಮಪ್ಪ ಈಗ ಒದಗಿಸಿದ್ದಾನೆ. ಐದು ವರ್ಷಗಳಿಂದ ಇದರ ಡಿ.ಟಿ.ಪಿ.ಯನ್ನು ರಕ್ಷಿಸಿಕೊಟ್ಟು ಈಗ ಉಪಕರಿಸಿದ ನವಭಾರತ ಪ್ರೆಸ್‌ನ ಆಡಳಿತ ವರ್ಗಕ್ಕೂ ಎಲ್ಲ ಕಾರ್ಯಕರ್ತರಿಗೂ ನಮ್ಮ ವಂದನೆಗಳು.

ಇಂತು ಸಂಪಾದಕ

ದಿನಾಂಕ : ೨೭-೪-೨೦೦೫

ಅರೆಯರ್ ಮುಂತಾಗಿ *ಸಂಪಾದಿತ ಕೃತಿಗಳು*

ಇತರ ಪ್ರಕಾಶನಗಳು

೧ ಗೀತಾ ಸಪ್ತಾಹ

೨ ವಿಶಿಷ್ಟಾದ್ವೈತ ಸಾರ
(ಚಿಕ್ಕದೇವರಾಜ ಬಿನ್ನಪದ ಉಪನ್ಯಾಸಗಳು)

೩ ಗ್ರಾಮದಾನ ಹಾಡುಗಳು

೪ ಏಹಿ ಏಹಿ ಭಾರತ!

೫ ಹಿತಾಶನಂ ಮಿತಾಶನಂ

೬ ರಾಮಾನುಜರ ನೂರಂತ್ಯಾದಿ

೭ ವಾರಣಮಾಯಿರಂ

೮ ಕೃಷ್ಣಲೀಲಾರಹಸ್ಯ

೯ ಗೀತಾಪ್ರವಚನ ಹಾಡುಗಳು

೧೦ ಅಕ್ಷರ ರಾಮಾಯಣ (ಸಂಸ್ಕೃತ)

೧೧ ಅಕ್ಷರ ರಾಮಾಯಣ (ಕನ್ನಡ)

೧೨ ಶಿಕ್ಷಣ ಕಲ್ಪವಲ್ಲೀ (ನೀತಿವಾಕ್ಯ ಸಂಗ್ರಹ)

೧೩ ಶ್ರೀವಿಜಯಧ್ವನಿಃ (ಅಲಂಕಾರಶಾಸ್ತ್ರ)

೧೪ ದಂಪತೀ ದೈವತಂ ನಃ (ವೈಚಾರಿಕ ಪ್ರಬಂಧ)

೧೫ ಅಷ್ಟಶ್ಲೋಕೀ ಕನ್ನಡ ವ್ಯಾಖ್ಯಾನ

೧೬ ನವರತ್ನಮಾಲೈ ಕನ್ನಡ ವ್ಯಾಖ್ಯಾನ

೧೭ ಭಕ್ತಿತ್ರಯಂ (ತಮಿಳ್-ಕನ್ನಡ)

೧೮ ಜನನ್ಯಾಚಾರ್ಯ (ತಮಿಳ್-ಕನ್ನಡ)

೧೯ ರಾಮಾನುಜ ರಹಸ್ಯತ್ರಯ ಸೂತ್ರ
(ತಮಿಳ್-ಕನ್ನಡ)

೨೦ ರಾಮಾನುಜ ರಹಸ್ಯತ್ರಯ ವ್ಯಾಖ್ಯಾನ
(ತಮಿಳ್-ಕನ್ನಡ)

೨೧ ವಕುಳ ಭೂಷಣ (ಸೋವನೀರ್)

೨೨ ಯದುಗಿರೀಶ ಸುಪ್ರಭಾತಾದಿ ಸ್ತೋತ್ರಾಣಿ

೨೩ ದೇವಸ್ಥಾನಗಳ ಪುನರ್ ವ್ಯವಸ್ಥೆ

೨೪ ಜ್ಞಾನದೇವ ಚಿಂತನಿಕಾ (ಹಿಂದೀ ಸಂಸ್ಕೃತ)

೨೫ ತಿರುಪ್ಪಾವೈ (ಹಿಂದೀ ಸಂಸ್ಕೃತ)

೨೬ ನಮ್ಮಾಳ್ವಾರ ನಲವತ್ತು

೨೭ ತಿರುಪ್ಪಾವೈ ಉಸಿರು

೨೮ ತಿರುಪ್ಪಾವೈ ವಾನುಲಿ ಉಪನ್ಯಾಸಂಗಳ್ (ತಮಿಳು)

೨೯ ತಿರುಪ್ಪಾವೈ ಕಿರುನೋಟ

೩೦ ಆಚಾರ್ಯ ಹೃದಯ ಭೂಮಿಕೆ

೩೧ ತಿರುಮಾಲೈ ಕನ್ನಡ ಪದ್ಯಾನುವಾದ

೩೨ ಸಾಹಿತ್ಯಮಾತೃಕಾ

೩೩ ಯಜ್ಞೇಶ ವಂಶಾವಳಿ

೩೪ ಈಶಾವಾಸ್ಯ ಕನ್ನಡ ಪದ್ಯಾನುವಾದ

೩೫ ಈಶಾವಾಸ್ಯೋಪನಿಷದ್ ಭಾಷ್ಯಗಳು
ಕನ್ನಡಾನುವಾದ

೩೬ ಈಶಾವಾಸ್ಯ ಉಪೋದ್ಘಾತ

೩೭ ಸ್ತೋತ್ರ ರತ್ನವ್ಯಾಖ್ಯಾನ - ಬೆನ್ನುಡಿ

೩೮ ಕೋದೈಶೊನ್ನಶೊಲ್ ಉಪೋದ್ಘಾತ

೩೯ ಬಾಲಧನ್ವಿ ವೇಂಕಟಾರ್ಯದಿನಚರ್ಯಾ

೪೦ ರಾಮಾಯಣನವಾಹ

ಪ್ರಾಸ್ತಾವಿಕ

ತಮಿಳುನಾಡಿನ ಆಳ್ವಾರ್‌ಗಳ ವಿಷಯ ಬಲು ಆಳ! ಅಂತೆಯೇ ಆ ಹೆಸರು. ಅವರ ಅನುಭವ ಗಾಢ, ಪ್ರಗಾಢ. ಆದರೆ ನಿಗೂಢವಲ್ಲ. ಎಂತಹವರೂ ಸದ್‌ವೃದ್ಧರ ಚಿರೋಪಾಸನೆಯಿಂದ ಅಷ್ಟಷ್ಟು ಅನುಭವ ಪಡೆದುಕೊಳ್ಳಬಹುದು. ಏಕೆಂದರೆ ಅವರ ಆ ದಿವ್ಯಸ್ಫೂರ್ತಿಯ ಮೂಲ ಜನರೇಟರೇ ಅತ್ಯದ್‌ಭುತವಾಗಿ ಗೋಚರವಾದಂತಾದರೂ ಅಗೋಚರವಾಗುವ ಪರಮಾತ್ಮ. ವೈಜ್ಞಾನಿಕರಾದ ನಾವು ಬಿಡಿಬಿಡಿಯಾಗಿ, ಅತ್ಯಂತದ್ವೈತದಿಂದಲೇ ತೊಡಗಿ ಕೊನೆಗೂ ಒಟ್ಟಿಸುವುದನ್ನು ಇಂತಹ ಸಂತರಿಂದಲೇ ಕಲಿಯಬೇಕಿದೆ. ಉದ್ದ ಅಗಲ ಘನ ಮೂರನ್ನೂ ಮೀರಿದ ಫೋರ್ತ್ ಡೈಮಿನ್‌ಷನ್. ಐನ್‌ಸ್ಟೀನ್‌ನೂ There are more unknowns than knowns ಎಂದಿದ್ದಾನೆ. ನಾನು ಹಿರಿಯರಿಂದ ಕೇಳಿರುವಂತೆ, ಕ್ರಿ.ಶ. ೧೨ನೆಯ ಶತಮಾನದ ಪರಾಶರಭಟ್ಟರು ಬಹಳ ಮೇಧಾವಿಗಳಾಗಿದ್ದವರೇ. ಅಂತಹವರೇ ಹೇಳುತ್ತಿದ್ದ ಒಂದು ಮಾತು ನಮಗೆಲ್ಲರಿಗೂ ವಿನಯವನ್ನು ಕಲಿಸುತ್ತದೆ. ಅದೇನೆಂದರೆ ಆಳ್ವಾರ್‌ಗಳ "ದಿವ್ಯಪ್ರಬಂಧ"ಕ್ಕೆ ವ್ಯಾಖ್ಯಾನ ಮಾಡುವ ಕಾಲಕ್ಕೆ ಒಮ್ಮೊಮ್ಮೆ ತಲೆಯ ಮೇಲೆ ಕೈಯಿಟ್ಟುಕೊಂಡು "ಅಯ್ಯೋ! ನಾವೇನು ಈ ಅಗಾಧ ಗಂಭೀರ ಹೃದಯವಂತರ ಒಳಭಾವವನ್ನು 'ಬೌದ್ಧಿಕವಾಗಿ' ಹೇಳಿಯೇವು" ಬುದ್ಧಿಯ ಚಿಲುಮೆ ಮೆದಳು. ಸಂತರ ಅನುಭಾವಗಳ ಅನುಕರಣೆ ಪ್ರೇಮಳ ತರಂಗಗಳು ಹೃದಯಾಂತರತಮದಿಂದ ಉತ್‌ಸ್ಫೂರ್ತಗಳಾಗುತ್ತವೆ. ಅದು ದಿವ್ಯದ ಅನುರಾಗಾತಿಶಯದಿಂದ, ಪ್ರಾತಿಭದರ್ಶನ ರೂಪು ತಾಳುತ್ತವೆ. ಅದರ ಪರಿಚಯ ಅವರ ಅಹೇತುಕೀ ಕೃಪೆಯಿಂದ, ಅವರ ಅದೇ ದಿವ್ಯ ವಾಙ್ಮಯಗಳಿಂದ, ದೀರ್ಘಕಾಲ, ಸತ್ಕಾರ, ಆದರ ಪೂರ್ವಕ ಅನುಭಾವದ ತುಣುಕುಗಳನ್ನು ಅತುಕೊಳ್ಳುವವರ ಜೀವನದ ಸಿದ್ಧತೆ, ತಡೆಯಲಾರದ ಭಗವದ್‌ಭಾಗವತ ವಿಷಯದ ಹಸಿವು, ತೃಷೆ, ಯಥಾರ್ಥವಾಗಹತ್ತಿದರೇನೇ ಝಲಕ್-ಝಲಕ್ ಆಗಿ ನೋಡಬಹುದಷ್ಟೆ. ಅಂತೆಯೇ "ಆಳ್ವಾರ್ ತಿರುವಡಿಗಳೇ ಶರಣು" ಎಂದು ಒರಲುತ್ತಿರೋಣ.

ಯಾವ ವೇದಗಳು ಸರ್ವರಿಗೂ ಅಗೋಚರನಾದ ಪರಬ್ರಹ್ಮದ ಬಗೆಗೆ ಆಡುವಷ್ಟು ಆಡಿ ಕೊನೆಗೆ ಮೌನದಿಂದ ಹಿಂದಿರುಗಿದವೋ ಅಂತಹ ಪರಾತ್‌ಪರ ವಸ್ತು ಎಲ್ಲಕ್ಕೂ ಮೊದಲಿಂದಲೇ ಇದ್ದುದು. ಅದೇ "ಆತ್ಮಾರಾಮ; ಲೋಕಾತೀತ ಲೋಕಾಽಭಿರಾಮ". ಲೋಕರಕ್ಷಣೆಗಾಗಿ ಈ ಲೋಕಕ್ಕೇ ಬರಲು ಸರಿಯಾದ ತಾಯಿತಂದೆಯನ್ನು ಹುಡುಕುತ್ತಾ ದಶರಥನನ್ನೂ ಕೌಸಲ್ಯೆಯನ್ನೂ ಬಲುವಾಗಿ ತಾಯಿತಂದೆಯರನ್ನಾಗಿ ಮೆಚ್ಚಿ ವರಿಸಿದ! "ಪಿತರಂ ರೋಚಯಾಮಾಸ" ಅವನು ಎಲ್ಲರಿಗೂ ತಂದೆಯಾಗಿದ್ದೂ ಸ್ವೇಚ್ಛೆಯಿಂದ "ಅಪ್‌ಷನಲ್" ಆಗಿ ಮಗನಂತೆ ಕಾಣಿಸಿಕೊಂಡ! ದಾಶರಥಿರಾಮನಾದ, ಕೌಸಲ್ಯಾರಾಮನಾದ!

ಹೀಗೆ ನಮ್ಮ ಮಧ್ಯೆ ಆ ಅಚಿಂತ್ಯ ಅವ್ಯಕ್ತ ಮಹಾವಿಭೂತಿಯಿಂದ ಈ ಲೀಲಾವಿಭೂತಿಗೆ ಇಳಿದು ಬಂದ. ಬೇಸಿಗೆಯಿಂದ ಬೆಂದ ನೆಲಕ್ಕೆ ತಂಪು ಮಳೆ ಬೀಳುವಂತೆ, ಆಳ್ವಾರ್ ಅಂತಹ ಶರಣರ್ಷಿಗಳಿಗೆ ಅರಣ್ಯದ ಮಂಗಳಾSSಶಾಸನಪರರಾದ ಮಹರ್ಷಿಗಳಿಗೆ ತನ್ನ ಸೀತೆಯ ಹಾಗೂ ಲಕ್ಷ್ಮಣನ ಸತ್ಯ, ಪ್ರೇಮ, ಸೇವೆಗಳ ಪರಿಚಯ ಮಾಡಿಸಲು ಬಂದ! ಇಂಥ ಶ್ರೀರಾಮನು ಅವತರಿಸಿದಾಗ, ವಾಲ್ಮೀಕಿಗೆ ಸರಳ ಸಂಸ್ಕೃತ ಆದಿಕಾವ್ಯ ನಿರ್ಮಾಣಕ್ಕೆ ಕೈಹಾಕುವ ಧೈರ್ಯ ಬಂದುದೂ ಆ ಪ್ರಭುವಿನ ಕಾರುಣ್ಯವೆಂದೇ ತಿಳಿಯಬೇಕು. ಜತೆಗೆ ಚತುರ್‌ಮುಖ ಬ್ರಹ್ಮನಿಂದ ವರಪ್ರಸಾದ ಪಡೆದ ಭಗವದ್ ವಾಲ್ಮೀಕಿಯ ರಾಮನಾಮದ ಅಜ್ಞಾತಜಪವೂ ಅನುಷಂಗಿಕವಾಗಿ ಸೇರಿಕೊಳ್ಳಬಹುದಷ್ಟೇ. ಸರ್ವಾತೀತ, ಇಲ್ಲಿನ ಆಕಾರದಂತಿಲ್ಲದ ನಿರಾಕಾರದಿವ್ಯಾಕಾರ ಇಲ್ಲಿನ ಗುಣಗಳಂತಲ್ಲದ ನಿರ್ಗುಣ, ಇಲ್ಲಿನ ಯಾವೊಂದು ಗುಣದೋಷಗಳೂ ತಟ್ಟದ; ಅವನ ಸ್ವರೂಪದಲ್ಲೇ ಸೂಕ್ಷ್ಮದಲ್ಲಿ ಅಡಗಿದ್ದುದೇ ಸಗುಣಸಾಕಾರವಾಗಿ ಬಂತು. ಅವನ ಬಗ್ಗೆ ಶ್ರೀಮದ್ ರಾಮಾಯಣ ಕೋಕಿಲ ಕಂಠದಿಂದ ಹಾಡಹೊರಟಿತು. ಉಪಾಸಕರ ಇಚ್ಛೆಗೆ ಯಾರೂ ಕೊನೆಗೆ ದೇವರೇ ಆಗಲಿ ತಡೆಯೊಡ್ಡಲಾಗದು. 'ಭಕ್ತಾನಾಂ ತ್ವಂ ಪ್ರಕಾಶಸೇ' ಅವನೇ ವೈಖರೀವಾಕ್ ಪ್ರೇರಕ!

ಮಾನವನ ಹವ್ಯಾಸಗಳು ಅಪೂರ್ಣ ಅಪಕ್ವವಾದರೂ ಅತ ಅದನ್ನು ಬಿಟ್ಟುಕೊಡ. ದೇವರು 'ಶಬ್ದಾSತಿಗ'ನಾದರೂ ಶಬ್ದಸಹ! ರೂಪಾತೀತನಾದರೂ ರೂಪಸಹ. ನಾಮಾSತೀತನಾದರೂ ನಾಮಸಹ! ಅಸಾಧ್ಯವನ್ನು ಸಾಧ್ಯಮಾಡಿಕೊಳ್ಳುವ ಹಂಬಲವೇ ಮಾನವ

ಜನ್ಮದ ರಹಸ್ಯ. 'ಅಂತಹ ಬ್ರಹ್ಮಾವಲೋಕಧಿಷಣೆ'ಯನ್ನು, ದೇವರೇ ಕೊಟ್ಟಕೊನೆಯ ಸೃಷ್ಟಿ ಮಾಡಿದಾಗ ಈ ಮಾನವನಿಗೆ ದೇಣಿಗೆಯಾಗಿತ್ತಿದ್ದಾನೆ. ಜಿಜ್ಞಾಸೆಗೆ ಮೊದಲೂ, ಕೊನೆಗೂ ನಾವಲ್ಲ, ಅವನೇ ಸಂಪೂರ್ಣಹೊಣೆ. ಇದೇ ಈ ಆಳ್ವಾರರ ಅಂತರಂಗ ಸಾರ ಸರ್ವಸ್ವ. ಈ ನಿಟ್ಟಿನಲ್ಲೇ ಸಕಲ ದೈವೀ ಅಧ್ಯಾತ್ಮ ಸಾಹಿತ್ಯಗಳನ್ನೂ ಅನುಕಂಪ, ನಮ್ರ ಹಾಗೂ ಸಾಹಸದೃಷ್ಟಿಗಳಿಂದಲೇ ನಾವು ನೋಡಬೇಕಾಗುವುದು.

ಅರೆಯರ್ ಅವರು ಪೂಜ್ಯರೂ, ಲೋಕಾನುಭವಶಾಲಿಗಳೂ, ಆಚಾರ್ಯೋಪಾಸಕರೂ ಆದ ತಪಸ್ವಿ ಪಾದಚಾರಿಗಳು, ನಿಷ್ಕಾಂಚನರು. ಇಂತಹವರು ನಾಗಪುರದ ನಮಗೆ ಸತ್ಸಂಗ ನೀಡಿ, ತಿರುಪತಿ ತಿಮ್ಮಪ್ಪನ ಮೇಲೆ ಮಧುರಕವಿ ಮತ್ತು ತೊಂಡರಡಿಪ್ಪೊಡಿ ಬಿಟ್ಟು ೧೧ ಆಳ್ವಾರ್‌ಗಳು ಮಂಗಳಾಶಾಸನ ಮಾಡಿರುವ ಭಾಗಗಳನ್ನಷ್ಟೇ ಆಯ್ದು ಮನಮುಟ್ಟುವಂತೆ ತಿಳಿಸಿ, ಒಂದು ಕರಡು ಪ್ರತಿಯ ಟಿಪ್ಪಣಿಗಳನ್ನೂ ಗುರುತು ಹಾಕಿದ್ದಾರೆ. ಇದೂ ಒಂದು ಪೂರ್ಣ ರೂಪಕ್ಕೆ ಬಂದು, ಸಾವಿರಾರು ಜನಗಳ ಕೈ ಸೇರಲು ಪುಸ್ತಕ ರೂಪವಾಗಿ ಬರಲೆಂಬುದೇ ನಮ್ಮೆಲ್ಲರ ಆಸೆ. ಇವರ ಆಶೋತ್ತರ ಬಲು ಅದಮ್ಯ. ಯಾವೊಂದು ಕೃತಿಯೂ ಪರಿಪೂರ್ಣವಲ್ಲ. ಆದರೂ ಈ ಮಾನವ ಪಥಿಕ ಶುಭ ಅಂತರಂಗದಿಂದ ನಗುತ್ತಾ ನಗಿಸುತ್ತಾ ಭಕ್ತಿಪ್ರಪತ್ತಿಯ ಪಾಥೇಯ ಕಟ್ಟಿಕೊಂಡು ಪಯಣಿಸುತ್ತಲೇ ಇರುವ. **"ತಿರುನಾರಾಯಣಪುರಂ ಅರೈಯರ್"** ಪ್ರವಚನ ಮಾಡಿದ ಹಲವಾರು ಅಂಶಗಳನ್ನು ನಾನು ಮೆಲಕು ಹಾಕುತ್ತಿದ್ದೇನೆ. ಶುಕಬ್ರಹ್ಮರು ಪರಮಾತ್ಮನ 'ಪರತ್ವ'ದ ಬಗೆಗೇ ಹೆಚ್ಚು ವಾಲುತ್ತಿದ್ದರೆಂದು ಕಾಣುತ್ತದೆ. ಆದರೂ ವಿಭವದಲೀಲಾವತಾರಿ ಕೃಷ್ಣ ಅವರ ಮುಂದೆ ಕುಣಿಯುತ್ತಿದ್ದ! ಪರಮ ಪಕ್ವಮಧುರವಾದ "ಗಿಣಿಕಚ್ಚಿದ ಭಾಗವತದ ಹಣ್ಣನ್ನು ಅತ ಫಲದಾನವಾಗಿ ನೀಡಿದ! ಆಳ್ವಾರ್‌ಗಳಲ್ಲಿ "ಪೊಯ್‌ಹೈ" "ಪೂದಂ" "ಪೇಯ್" ಇವರೂ ಪರತ್ವಾನುಭಾವಿಗಳು. ತಿರುಪತಿ ತಿಮ್ಮಪ್ಪನ ಬಗೆಗೂ ಬಾಯಾಡಿದ್ದಾರೆ. ಮೂವರೂ ಕ್ರಮವಾಗಿ ೧೦, ೧೧, ೧೯ ಹಾಡು ಅಥವಾ ಪಾಶುರಗಾಥೆಗಳಿಂದ ವೆಂಕಟೇಶನನ್ನು ಹಾಡಿದ್ದಾರೆ. ಚತುರ್‌ಮುಖನ ಮಾನಸಪುತ್ರರಾದ ಶ್ರೀಸನಕಾದಿಗಳು ದೇವರ ಅಂತರಾತ್ಮತೆಯ ಬಗೆಗೆ ಬಲು ಮಾರುಹೋದವರು. ನಾಲ್ಕನೆಯ ಆಳ್ವಾರ್ 'ತಿರುಮಳಿಶೈ' ಭಕ್ತಿಸಾರ. ಅವರ ಈ ಅಂತರ್‌ದರ್ಶನದ ಶಕ್ತಿ ಬಲು ಅದ್ಭುತ! ಅವರೂ ೧೬ ಪದ್ಯಗಳಿಂದ ಹಿಂದಿನ ಮೂವರಂತೆಯೇ ತಮಿಳಿನಲ್ಲೇ, ಕೊಂಚ ದಾರ್ಶನಿಕತೆಯ ಪ್ರತಿಭೆಯನ್ನು ಸೇರಿಸಿ, ದೊಡ್ಡದಾವುದು? ಎಂಬ ಬಗ್ಗೆ ವಿಶ್ಲೇಷಿಸಿದ್ದಾರೆ.

ಭಗವಾನ್ ವಾಲ್ಮೀಕಿಯಂತೆಯೇ, ವಿಭವಾವತಾರಗಳಲ್ಲೆಲ್ಲಾ ಶರಣಾಗತವತ್ಸಲನಾದ ಶ್ರೀರಾಮನ ಬಗೆಗೇ ಆದರ, 'ಕುಲಶೇಖರ ಆಳ್ವಾರಲ್ಲೂ' ಕಂಡುಬರುತ್ತದೆ. ೧೧ ಹಾಡುಗಳಿಂದ ಒತ್ತಟ್ಟಿಗೆ ಒಂದು ಪೂರ್ಣದಶಕವೇ ವೆಂಕಟೇಶನ ಅನುಭವಕ್ಕೆ ಮೀಸಲು. ತಮ್ಮ "ಇನ್‌ತಮಿಳ್" - ಇನಿದಾದ ; "ಇಶೈತ್ತಮಿಳ್" ಸಂಗೀತಕ್ಕೆ ಸರಿಹೊಂದುವ, "ನೂಲ್‌ತಮಿಳ್" ಶಾಸ್ತ್ರೀಯತೆಯನ್ನೂ ಬಿಡದ, ಎಲ್ಲಕ್ಕೂ ಮುಖ್ಯವಾಗಿ "ನಡೈವಿಳಙ್ಗು ತಮಿಳ್" ಬಳಕೆಯಲ್ಲಿರುವ ದ್ರಾವಿಡ ತಮಿಳ್ ಸಾಹಿತ್ಯ ರತ್ನಗಳಲ್ಲಿ ೧೧ ಹಾಡುಗಳನ್ನು ಶ್ರೀನಿವಾಸನ ಅನುಭವಕ್ಕೇ ಇಟ್ಟು ತಮ್ಮ ಕಲಾತ್ಮಕ ಮನೋಧಾರೆ ಹರಿಸಿದ್ದಾರೆ. ಪರಾಶರರಂತೆ ಅವರ ಪುತ್ರ ವ್ಯಾಸರೂ ಸಹ ಆಶ್ರಿತ ಪಕ್ಷಪಾತಿಯಾದ ಶ್ರೀಕೃಷ್ಣನ ಕಥಾ ಸೌಂದರ್ಯದಲ್ಲಿ ಹೊಂದಿಕೆಯಾಗಿ ಮುಳುಗಿದವರು. "ನಮ್ಮಾಳ್ವಾರ್ ಪೆರಿಯಾಳ್ವಾರ್ ಮತ್ತು ಗೋದಾದೇವಿ" ಶ್ರೀಕೃಷ್ಣನಲ್ಲಿ ವ್ಯಾಮುಗ್ಧರು. ಈ ಮೂವರೂ ಕ್ರಮವಾಗಿ ೪೮, ೭ ಮತ್ತು ೧೬ ಪಾಶುರಗಳಿಂದ ತಿರುಮಲೆ ಪದ್ಮಾವತಿ ಲಕ್ಷ್ಮೀ ಸಮೇತ ಶ್ರೀನಿವಾಸದೇವರನ್ನು ಕುರಿತು ತಮ್ಮ ಹಾರ್ದಾನುಭವವನ್ನು ತೋಡಿಕೊಂಡಿದ್ದಾರೆ.

ನಮ್ಮಾಳ್ವಾರರ ಅದ್ಭುತ ಅನ್ಯಾದೃಶ ಧ್ವನಿ ಸಾಹಿತ್ಯವಂತೂ ಕಡಿಮೆ ಶಬ್ದಗಳಿಂದ, ಹೆಚ್ಚು ಭಾವಗಳನ್ನು ಹೊಮ್ಮಿಸಿ ಕೃತಾರ್ಥವಾಗಿದೆ. ತಿರುಪತಿ ತಿಮ್ಮಪ್ಪನ ಅಂತರಂಗವನ್ನು ಕದಡಿ ಭಕ್ತವರ್ಗಕ್ಕೆ ಅವರ ಒಂದು ಇಣುಕು ನೋಟವನ್ನು ಕೊಡುವುದರಲ್ಲಿ, ಶ್ರೀ ವೆಂಕಟೇಶ ಮಹಾಮಂಡಲೋಪಾಸಕರೋ! ಎನ್ನುವಂತೆ ಶಠಕೋಪರದು ಎತ್ತಿದ ಕೈ. ತಂದೆ ಮತ್ತು ಮಗಳು 'ವಿಷ್ಣುಚಿತ್ತ - ಆಂಡಾಳ್' ಉಭಯರೂ ಸಪ್ತ ತಥಾಷೋಡಶ ತಮಿಳ್ ಗಾಥೆಗಳಿಂದ ಕಲಿಯುಗ ದೈವ ತಿಮ್ಮಪ್ಪನನ್ನು ಪರಿಚಯ ಮಾಡಿಕೊಂಡಿದ್ದಾರೆ. 'ಶ್ರೀರಂಗನಾಥೈಕ ಪತಿವ್ರತೆ'ಯೆನಿಸಿದ 'ತೊಂಡರಡಿಪ್ಪೊಡಿಯಾಳ್ವಾರ್' ಇವರೂ, ಶ್ರೀರಂಗನಾಥನನ್ನು ಕಂಡ ಕಣ್ಣು "ಮತ್ತು ಒನ್ನಿನ್ನೈ ಕಾಣಾವೇ" ಎಂದರು. ಮತ್ತೊಂದನ್ನು ಕಾಣಲೇ ಇಲ್ಲದಂತೆಯೇ "ತಿರುಪ್ಪಾಣಿ"ಯಾಳ್ವಾರ್ ಮಹಿಮೆಗೆ ಸಮೀಪವಾಗುತ್ತಾರೆ. ತಿರುಪ್ಪಾಣಿ, ಪೊಳಿಲ್ ವೇಗಡವನ್ "ವಡವೇಂಗಡಮಾಮಲೈ" ಎಂದು ಒಂದೆಡೆಯಷ್ಟೆ ಹಾಡಿದ್ದಾರೆ. ಇನ್ನು ತಿರುನಹರಿಯ ತಮ್ಮ ಕುರುಹೂರ್ ಪೂರ್ಣರಾದ ಶಠಕೋಪರನ್ನು ಬಿಟ್ಟು, ದೇವರನ್ನೂ ದೇವತಾಂತರದಂತೆ, ಕಂಡ ಮಧುರ ಕವಿಗಳ ಆದರ್ಶ ಆಚಾರ್ಯ ನಿಷ್ಠೆಯಲ್ಲಿ ತಿರುಪತಿ ತಿಮ್ಮಪ್ಪ ಸೊನ್ನೆಯಾಗಿ ಅಡಗಿ ಮರೆಯಾಗಿಯೇ ಬಿಟ್ಟನೋ ಏನೋ! 'ಆಚಾರ್ಯಾದಿಹ ದೇವತಾಂ ಸಮಧಿಕಾಂ ಅನ್ಯಾಂ ನ ಮನ್ಯಾಮಹೇ!' 'ಗುರುರೇವ ಪರಂಬ್ರಹ್ಮ'!

ಹಾಡಿ ಆಡಿದವರೂ, ಹಾಡದೆ ಆಡಿದವರೂ ಆದ ಇಷ್ಟು ೧೧ ಆಳ್ವಾರರುಗಳೂ ಒಂದು ತೂಕವಾದರೆ, ಆಳ್ವಾರ್‌ಗಳಲ್ಲೆಲ್ಲಾ "ಕಡೆಕುಟ್ಟಿ" ಎನಿಸಿದ ತಿರುಮಂಗೈಯಾಳ್ವಾರ್ - ಬೇಡರ ನೀಲಪ್ಪ - ಬೇಡರೇ ಭೂಯಿಷ್ಠವಾಗಿರುವ ತಿರುಪತಿಯನ್ನೂ ತಿಮ್ಮಪ್ಪನನ್ನೂ

ತಮ್ಮ ಚೊಚ್ಚಲ ಕೃಪಾಕೃತಿಯಾದ "ಪೆರಿಯ ತಿರುಮೊಳಿ"ಯಲ್ಲಿ ಅದ್ಭೂರಿಯಾದ ಶಬ್ದಸಂಪತ್ತಿನಿಂದ, ಅಖಂಡ ೪ ದಶಕಗಳಲ್ಲಿ ಭಾವ ಪೂರ್ಣವಾಗಿ, ಪುಂಖಾನುಪುಂಖವಾಗಿ ವರ್ಣಿಸಿದ್ದಾರೆ. ಹಾಗೂ ಅವರದೇ ಆದ ಮತ್ತೆ ೫ ದಿವ್ಯ ಪ್ರಬನ್ಧಗಳಲ್ಲಿಯೂ, ನವೋನವ ಶೈಲಿಯಲ್ಲಿ ಶಬ್ದ ವಿನ್ಯಾಸದ, ಆಶು, ಮಧುರ, ಬಿತ್ತರ, ಚಿತ್ರ ಈ ೪ ಬಗೆಗಳ ಕಾವ್ಯ ಸೌಂದರ್ಯದ ಮೀಮಾಂಸಾಕಾರರಿಗೆ ಸಲ್ಲಕ್ಷ್ಯಗಳಾಗುವಂತೆ ಗುಂಭಿಸಿದ್ದಾರೆ! ಶೌನಕ ಮಹರ್ಷಿಗಳಂತೆ, ಈ 'ಕಲಿಯರ್' ಇವರಿಗೆ ಪಾವನ ಮಂದಿರಗಳಲ್ಲಿನ ಚಿದಾಽಽನಂದ ಮೂರ್ತಿಗಳಲ್ಲಿಯೂ ಗದ್ದೆ, ಹೊಲ ತೋಟ ತುಡಿಕೆಗಳ ಬಗೆಗೂ ಆಯಾಯಾ ದಿವ್ಯಪರಂಧಾಮಗಳ ವಿವಿಧ ಸಮಾಜ ಭಾಗವತರ ವ್ಯಕ್ತಿತ್ವ ಕುರಿತೂ, ನಳ್ಳಿ, ದುಂಬಿ, ಹಳ್ಳಿ, ಡಿಲ್ಲಿ, ಬಯಲು - ಕಾಡು, ಹೊಳೆ ಹೀಗೆ ಪ್ರಕೃತಿಯ ಸರ್ವಸ್ವವನ್ನೂ ತಮ್ಮ "ಆರಣ್ಯಕೋಪನಿಷತ್ತೆಂಬ ಕೀರ್ತಿಪೆತ್ತ" ವಾಙ್ಮಯಗಳಲ್ಲಿ ಕಿಕ್ಕಿರಿಯುವಂತೆ ತುಂಬಿದ್ದಾರೆ! ಇವರು ಚೆಪ್ಪರಿಸಿ ಸವಿದಿರುವಷ್ಟು ಉಳಿದ ಯಾವ ತಮಿಳ್ ಸಂತರೂ, ಒಳ ಅನುಭವ ಅವರುಗಳಲ್ಲಿ ಯದ್ಯಪಿ ಪರಿಪೂರ್ಣವಾಗಿದ್ದರೂ, ಅವನ್ನು ಹೊರಗೆಡವಿ ಶಬ್ದದ ಸೆರೆಯಲ್ಲಿ ಹಿಡಿದಿರುವ ವೈಖರಿಯಲ್ಲಿ ಇವರಿಗೆ ಸರಿಸಾಟಿಯಲ್ಲ, ಎಂದು ಸಕಲ ತಮಿಳರೂ ತಮ್ಮ ಸಾಹಿತ್ಯ ಸಮೀಕ್ಷೆಯಲ್ಲಿ ಒಪ್ಪಿದ್ದಾರೆ.

ಆಳ್ವಾರ್ ದ್ರಾವಿಡ ವೇದಗಳಿಗೆ, ಷಡಂಗಕಾರರಾದ ಈ ಕಲಿಯನ್ ದಿವ್ಯಕವಿಗಳು ಪೂರ್ವಾಶ್ರಮದಲ್ಲಿ, ಸರ್ವಾಧಿಕಾರಿ ಪಾಳಯಗಾರರಾಗಿದ್ದು, ಸ್ತ್ರೀಯರ ಅಂದ ಚೆಂದ ಬೆಡಗು ಬಿನ್ನಾಣಗಳ ವ್ಯಾಮೋಹ ಕೂಪದಲ್ಲಿ ಬಿದ್ದಿದ್ದವರೇ! ಆ ಹಳೆಯ ಚೆಲುವಿನ ಆಭಾಸ ಸಂಸ್ಕಾರಗಳನ್ನೇ ಪರಮ ಕಾರುಣಿಕನಾದ ಸರ್ವೇಶ್ವರನು ಗುರುತಿಸಿ "ಇವರನ್ನು ಪರಿವರ್ತಿಸಲು ಕೇವಲ ತತ್ತ್ವೋಪದೇಶಾದಿಗಳಷ್ಟೇ ಸಾಲವು. ಇವರು ಪ್ರಾಕೃತ ಸೌಂದರ್ಯಕ್ಕೇ ಮನಸೋತ ರಸಿಕಾಽಗ್ರಣಿಗಳು. ಆದರೆ ಆ ಅಂದಚೆಂದ ಎನ್ನುವುದೆಲ್ಲಾ ಕ್ಷುದ್ರ ಅಷ್ಟೇ. ಆ ಸೌಂದರ್ಯದ ಚಾಪಲ್ಯವನ್ನೇ ಪವಿತ್ರಾಣಾಂಪವಿತ್ರನಾದ ನನ್ನಲ್ಲಿ, ಮನ್ಮಥ ಮನ್ಮಥನಾದ ನನ್ನಲ್ಲೇ ಇವರು ಕಂಡು ತೀರಿಸಿಕೊಳ್ಳುವಂತೆ ಮಾಡೋಣ. ಸೌಂದರ್ಯ ಗ್ರಾಹಿಯಾದ ಇವರ ಮನಸ್ಸು ಆಗ ಮಂಗಳಾನಾಂ ಮಂಗಳನಾದ ನನ್ನನ್ನೇ ಬಿಡದೆ ಭದ್ರವಾಗಿ ಹಿಡಿದೀತು!" ಎಂದು ದಯೆ ತೋರಿದ. ಅಂತೆಯೇ, ತಮಿಳ್ ನಾಡಷ್ಟೇ ಅಲ್ಲದೆ ವಿಶಾಲ ಭರತಖಂಡದ ಪೂರ್ವ ಉತ್ತರ ಪಶ್ಚಿಮ ದಿಕ್ಕುಗಳಲ್ಲಿರುವ ನಾನಾದಿವ್ಯ ದೇಶ ಯಾತ್ರಾಸ್ಥಳಗಳ ಪರಿಚಯ ಮಾಡಿಕೊಳ್ಳುವಂತೆ, ಇವರಿಗೆ ವ್ಯಾಪಕ 'ತಿರುಮಂತ್ರ'ವನ್ನು ಉಪದೇಶಿಸಿದ. ನಾರ + ಅಯನ = ನಾರಾಯಣ ಎಂಬ ಆ ನಾಲ್ಕಕ್ಷರಗಳಲ್ಲಿ, ಜಡ, ಚೇತನ, ಈಶ್ವರ ಎಲ್ಲದರ ಸಮಾವೇಶವಾಗಿಬಿಡುತ್ತದೆ. ವಿಶ್ವದ ಸಕಲ ಭೌಗೋಳಿಕ ಪ್ರದೇಶಗಳೂ, ಅಷ್ಟಾಕ್ಷರಿ ಮಂತ್ರದಲ್ಲಿ ಅಡಗಿವೆ. ಅದಕ್ಕೂ ಅತ್ತಣ ದಾಟಿಯೂ ಇವೆ.

ಇಂತು ಅರ್ಚಾವತಾರವೆಂಬ 'ಪ್ರತಿಮೆ' ಬರೀ ಮ್ಯೂಜಿಯಂ ಬೊಂಬೆಗಳಲ್ಲ. ಪ್ರವಾಸಿಗರ ಹೊರಮೋಜಿನ ತೀಟೆ ತೀರಲಿಕ್ಕೆ ಮಾತ್ರವಲ್ಲ. ಆ ಮೂಲಕ ಸರ್ವವಿಧ ಚೇತನರನ್ನೂ ಮೆಟ್ಟಿಲು ಮೆಟ್ಟಿಲಾಗಿ ಸೋಪಾನಾರೋಹಣನ್ಯಾಯದಂತೆ - ಇಂದಲ್ಲ ನಾಳೆ ಎಲ್ಲರೂ, ತಮ್ಮ ಜೀವನವನ್ನು ಅಧ್ಯಾತ್ಮದ, ನಿರಪಾಯ ಮಹಾಶಕ್ತಿ - spirit ಕಡೆಗೇ ವಾಲಿಸಿಕೊಳ್ಳುವರೆಂಬ ಮಹಾವಿಶ್ವಾಸದಿಂದ ಸರ್ವಾಧಿಕಾರಿಯಾಗಿದ್ದೂ, ಪ್ರಜೆಗಳ ಮೌಲಿಕ ಸದ್ ಭಾವನೆಯಲ್ಲಿ ನಿಷ್ಕಾಮನಾದ ಲೋಕನಾಥನದೇ, ನಿಜವಾದ ಲೋಕನೀತಿ, ಪ್ರಜಾಪ್ರಾಜ್ಯ ಜಗತ್ತಿನ ಎಲ್ಲಾ ಪವಿತ್ರ ಸ್ಥಾನಗಳೆಂಬ ದಿವ್ಯದೇಶಗಳು ಅಲ್ಲಿನ ಮಂದಿರ, ಮಸೀದಿ, ಚರ್ಚ್, ಸ್ತೂಪ, ನಾಮಘರ್, ಗುರುದ್ವಾರ ಏನೇ ಹೆಸರಿರಲಿ ಬಿಡಲಿ! ದೃಶ್ಯ ಪ್ರಿಯನಾದ ಈ ನರಮನುಷ್ಯನಿಗೆ, ನಿಜವಾದ ಪ್ರಗತಿ, ಅಭಿವೃದ್ಧಿ ಬಯಸುವವನಿಗೆ, ನಾರಾಯಣ, ಆಲ್‌ಮೈಟಿ ಅಲ್ಲಾಹ್, ಬುದ್ಧ, ಅಸ್ಸಾಮ್ ಸಂತರು, ಪಂಜಾಬ್ ಸಿಕ್ಖರು, ನಾನಾಧರ್ಮಿಗಳು, ಕೊನೆಗೆ ಸದ್‌ವಿಜ್ಞಾನಿಗಳೂ ಸೇರಿ ಎಲ್ಲರಿಗೂ ಓರ್ವನೇ ಆದ, ವಿಶ್ವರೂಪಿ ಕರುಣಿಸಿರುವ, ತತ್ವದರ್ಶನದ, ಅದರ ಗುರಿಮುಟ್ಟುವ, ಸಾಧನೆ ಸಂಪತ್ತುಗಳಲ್ಲಿ, ಪ್ರಾಯೋಗಿಕ ಕಾರ್ಯಾಗಾರದಂತೆ Workshop of Spirit ಈ ದಿವ್ಯಮೂರ್ತಿ ಸ್ಥಾನಗಳು ಇವೆ. ಮೂರ್ತಿಗಳು ಬೇರೆ ಬೇರೆ ಆಕಾರಗಳಲ್ಲಿರುವುವಷ್ಟೆ. ಆದುದರಿಂದಲೇ ಎಲ್ಲ ಶರಣಸಂತರೂ ಈ ಸಾಕಾರ ಸಗುಣ ಮೂರ್ತಿಗಳೆಂಬ ಮಹಾಣುವಿನಲ್ಲೇ Atom ವಿಶ್ವ ಸರ್ವಸ್ವವನ್ನೂ ಕಾಣುವ ಕಲೆ ಕಲಿಸಿದ್ದಾರೆ. ಆ ಮೂರ್ತಿಗಳಲ್ಲೇ ಸಂಪೂರ್ಣ ಶರಣಾಗತಿಯ ಪ್ರಾಯೋಗಿಕ ಪಾಠ ಕಲಿಸಿದ್ದಾರೆ. ಇದಕ್ಕೆ ಪರ್ಯಾಯವಾಗಿ ಇನ್ನು ಯಾವ ವ್ಯವಸ್ಥೆ ಇಷ್ಟೊಂದು ಪರಿಣಾಮಕಾರಿಯಾಗಿ ಹೊಮ್ಮಿದೆ? ಮಹಾಮಹಾ ಪ್ರಯತ್ನ ನಡೆಯುವಂತೆ ಕಂಡರೂ ಜಗತ್ತಿನ ಶಾಂತಿ ನೆಮ್ಮದಿ ಏಕೆ ಮೃಗಜಲವಾಗುತ್ತಿದೆ? ಸ್ವರಕ್ಷಣೆಯ ಹೆಸರಿನಲ್ಲಿ ಪರಭಕ್ಷಣೆಯ ಹಿಂಸೆ ಪ್ರತಿ ಹಿಂಸೆಯೇ ಮುಂದುವರಿದರೆ, ಲಾಭಖೋರಿ ತಂತ್ರಜ್ಞಾನ, ವಾಣಿಜ್ಯವೇ ಜಗದ್‌ವ್ಯಾಪಿಯಾದರೆ, ಬಂತೇನು ಲಾಭ! ಒಡೆದೊಡೆದೇ ನಿರ್ವಹಿಸುವ ಶಕ್ತ್ಯಾಽಽಭಾಸಗಳಿಂದಲೇ ಜಗತ್ತು ದೀರ್ಘಕಾಲದ ತಣ್ಣನ ಮಹಾಯುದ್ಧಗಳ ಕಡೆಗೇ ವಾಲುವಂತಾಗಿದೆ. (Cold War)

ಆಳ್ವಾರುಗಳ ಭಾಗಕ್ಕೆ ಈ ದೇವಮೂರ್ತಿಗಳು, ಒಂದೊಂದು ಶಾಂತಿಯ ಬಾಂಬುಗಳು! ಸಣ್ಣ ಸಣ್ಣ Unit ಗಳಿಂದಲೇ, ಪವಿತ್ರಮನಃ ಶಾಂತಿಯ ಪ್ರಾಪ್ತಿ ಶಿಕ್ಷಣವೇ ಯಾತ್ರಾಸ್ಥಳಗಳ ಇಂಗಿತ. ಸರ್ವೋಪನಿಷತ್ತುಗಳ 'ಪೂರ್ಣಮೇವ ಅವಶಿಷ್ಯತೇ' ಎಂಬಂತೆ, ಯಾವೊಂದೂ ಕ್ಷುದ್ರವಲ್ಲ, ಅಶಕ್ತವಲ್ಲ. ಈ ನಿಟ್ಟಿನಲ್ಲಿ ಈ ಮೂರ್ತಿಪೂಜೆ ಎನ್ನುವುದನ್ನು ಶೀಘ್ರವಾಗಿ ಅರಿಯೋಣ ನಾವು. "ಆಲಸ್ಯಾದಮೃತಂವಿಷಂ" ಆಗಲು ಬಿಡಬಾರದು. ಆಳ್ವಾರರ ಈ ಮಾಧ್ಯಮ ಮಾನವ ವಿಕಾಸದ ಒಂದು ಮಜಲು. ಅದರಲ್ಲಿ ಕಳೆಗಳು ಸೇರಿಕೊಂಡಿರುವುದು

ಅವುಗಳ ಮೌಲಿಕ ದೋಷವಲ್ಲ. ರಾಜಕೀಯ, ಪಕ್ಷನೀತಿ ಸಾಮಾಜಿಕ, ಆರ್ಥಿಕ ಮೌಲ್ಯಇವುಗಳ ಅನಿವಾರ್ಯ ಸಂಸರ್ಗದಿಂದ ಆಗಂತುಕವಾಗಿ ಹುಟ್ಟಿಕೊಂಡವುವಷ್ಟೆ. ಅಹಿಂಸೆ, ಪ್ರೀತಿ, ಕರುಣೆ, ವಿಶ್ವಾಸಗಳಲ್ಲಿನ ದೃಢ ಛಲಶಕ್ತಿಯೇ, ಸರ್ವಕ್ಷೇತ್ರಗಳನ್ನೂ ಶುಚಿಗೊಳಿಸಿ ಗ್ರಾಮ ಪರಿವಾರದಿಂದ, ವಿಶ್ವಪರಿವಾರದವರೆಗೆ ನೆಮ್ಮದಿ ತರಬಲ್ಲದು. ವೈಜ್ಞಾನಿಕ ಹೊಸ ಹೊಸ ಮುನ್ನಡೆಗಳಂತೆ ಮಾನವನ ಮನಸ್ಸೂ ಹೊಸದಾಗಬೇಕು. ಕಾಲವೇನೋ ವೈಜ್ಞಾನಿಕ ಆದರೆ ಮಾನವ ಮನ ಅವೈಜ್ಞಾನಿಕ. ಅದಕ್ಕೆ ಹಾಸಿಗೆ ಹಾಸಿಕೊಡುವುದೇ ಶಿಕ್ಷಣ, ಸಭ್ಯತೆ ಎಂಬ ಅಜ್ಞಾತ ಮಾಯಾಜಾಲಗಳನ್ನು, ಹೊಸ ಹೊಸ ಹೆಸರು, ವೇಷಗಳಿಂದ ಹರಡುವುದು ತಪ್ಪಬೇಕಾದರೆ, ಸರಕಾರ, ಸಂಸ್ಥೆಗಳು, ಬಂಡವಾಳ, ಜಡ್ಡೈಕ ಕೇಂದ್ರಿತ ಸೂಕ್ಷ್ಮಬುದ್ಧಿವಂತಿಕೆ ಇತ್ಯಾದಿ, ಜನಜನರನ್ನು ಒಡೆಯುವ ಸಂಪ್ರದಾಯಗಳೂ ಸೇರಿ ಎಲ್ಲವೂ out of date!

ಎಲ್ಲ ಪವಿತ್ರಸ್ಥಾನಗಳೂ ವಿಶ್ವಮಂದಿರಗಳೇ. ವರ್ಣ, ಜಾತಿ, ಕೋಮುಗಳ ಸದ್ಧರ್ಮಾಂಶಗಳನ್ನು ಬಿಡದೆ, ವಿವೇಕದಿಂದ ಆಳ್ವಾರ್ ಸಂತರ ಯೋಜನೆಗಳನ್ನು ಸಮಾಜದ ಶಿಕ್ಷಿತ ಸಜ್ಜನರೇ ಕೈಗೆತ್ತಿಕೊಳ್ಳಬೇಕಾದ ತುರ್ತುಪರಿಸ್ಥಿತಿ ಇಂದು ಇಡೀ ಜಗತ್ತಿಗೇ ಒದಗಿದೆ. ರಾಷ್ಟ್ರ ರಾಷ್ಟ್ರಗಳ ಪ್ರಜೆಗಳ ಮುಖಾಮುಖಿ ಸಾತ್ವಿಕ ಭೇಟಿಗಳೇ ಇಂದು ಬೇಕಿರುವುದು. ಪರಂಪರೆಯ ತಾಯ್‌ಬೇರನ್ನು ಕೀಳದೆ, ಆಯಾಯ ನಾಡಿನ ನಾಡಿ ನೋಡುವವರಾಗಬೇಕು. ಈಗಿನ ದೇವಾಲಯ ಮುಂತಾದವುಗಳಲ್ಲಿ ಮೂಲತಃ ಸಹಜತೆಯಿದೆ. ಕಠೋರ ಪ್ರಕೃತಿಯ ಮೇಲಿನ ಆಕ್ರಮಣವಿಲ್ಲ. ಜಾಣ್ಮೆಯಿಂದ ಅವನ್ನೆಲ್ಲಾ ಯೋಗ ವಿಘ್ನಗಳನ್ನಾಗಿ ಭಾವಿಸದೆ, ಯೋಗೇಶ್ವರ ಮೂರ್ತಿಗಳಾಗಿ ಯೋಗಾನುಕೂಲಗಳನ್ನಾಗಿಸಿಕೊಳ್ಳುವ ಮಹಾದಕ್ಷತೆ, ಈ ಅರ್ಚಾವತಾರದ ಮುಖ್ಯ ಸೊಗಸು. ಉದ್ಘಟತನ ನೀಗಿ, ಅಂಶಿಕ ಮಾತ್ರ ತೃಪ್ತರಾಗದೆ ನಮ್ರ ಸಮಗ್ರ ಭಕ್ತರಾಗಿ ಸಮಾಜಕ್ಕೆ ಸಶಕ್ತ ಹಾಗೂ ವ್ಯಾವಹಾರಿಕವಾಗಿಯೇ ಕೈ ಮರವಾಗಿರುವವರು ಈ ಆಳ್ವಾರರು. ಅಂತೆಯೇ ವಿಶ್ವದ ನಾನಾ ಭಾಗಗಳಲ್ಲೂ ಇಂಥವರದೇ ಎಲ್ಲರ ಹೃದಯದ ಮೇಲೆ ಆಳ್ವಿಕೆ ನಡೆಯುತ್ತಿದೆ. ಇಂದಿಗೂ ನಾಳೆಗೂ ಅಭೇದ್ಯ ಇದು.

ಸಂತರ, ಆಳ್ವಾರ್‌ಗಳ ಭಜನ, ಕೀರ್ತನೆಗಳಿಂದ, ಅರ್ಚಾಮೂರ್ತಿಗಳು, ವಿಶಿಷ್ಟ ಸಾನ್ನಿಧ್ಯ ಬಲದಿಂದ ಕಳೆಯೇರುತ್ತವೆ. ಉಪಾಸನಾಪರರೂ ವೇದ ಉಪನಿಷತ್, ಮಂತ್ರ ದ್ರಷ್ಟಾರರೂ ಲೋಕ ಕರುಣಾಳುಗಳೂ ಆದ ಋಷಿ ಮುನಿಗಳು, ಆಗಮಾದಿಶಾಸ್ತ್ರಗಳನ್ನೂ, ಸ್ಥಳಪುರಾಣಗಳನ್ನೂ ಸುಪ್ರಭಾತಾದಿ ಸಾಹಿತ್ಯಗಳನ್ನೂ ವಿಶ್ವಭಾಷೆಯಾದ ಇಂದಿನ ಬಳಕೆಯ ಸಂಸ್ಕೃತಕ್ಕೂ ಮೂಲವಾದ, ವಿಶ್ವಮಾನುಷ ಸಂಗ್ರಾಹಕವಾದ ಮೂಲವೇದಗಳನ್ನೂ ದೈವಕೃಪೆಯಿಂದಲೇ ಪಡೆದವರು. ಈಗಿನ ಸರ್ವಭಾಷಾ ವೇದಗಳೆಲ್ಲಾ ಅಸಮಗ್ರ, ಅಸಂಪೂರ್ಣ. ಆಳ್ವಾರ್‌ಸಂತ ಶರಣರೇ ಸರ್ವವೇದ, ಸರ್ವಶಾಖಾ, ಸರ್ವವೇದಾನ್ತ ಪ್ರತ್ಯಯರು! ಅದರಲ್ಲೂ ಮಹಾರಾಷ್ಟ್ರ, ಗುಜರಾತ್, ಕರ್ನಾಟಕ, ಆಂಧ್ರಗಳಿಗಿಂತ ಹೆಚ್ಚಾಗಿ "ದ್ರಾವಿಡೇಷುಚ ಭೂರಿಶಃ" ಎಂಬ ಶುಕವಾಣಿಯಂತೆ, ಹೆಚ್ಚು ವೈಭವದಿಂದ ತಮಿಳುನಾಡಿನಲ್ಲೇ, ಹೆಚ್ಚು ಅಚ್ಚುಗಟ್ಟಿನ, ಎತ್ತರದ ಗೋಪುರ, ವಿಸ್ತಾರವಾದ ವಿನ್ಯಾಸ, ಅರ್ಚಾಸೌಂದರ್ಯ, ಸಾರ್ವಜನಿಕ ಆತ್ಮರಂಜನೆ, ಗ್ರಾಮಜೀವನದ ಐಕಮತ್ಯ, ಉತ್ಸವ, ನಾನಾ ಕಲಾಪ್ರದರ್ಶನ, ರುಚಿ ರುಚಿಯಾದ ಪ್ರಸಾದ, ನರ್ತನ, ವಾದ್ಯ, ಸಂಗೀತ, ನ್ಯಾಯ ತೀರ್ಮಾನ, ಸರಕಾರಗಳಿಗೂ ದಿಗ್‌ದರ್ಶನ, ಹಸ್ತೋದ್ಯೋಗ, ಗ್ರಾಮೋದ್ಯೋಗ, ಭೂಮಿಯ ಮೇಲಿನ ಒಡೆತನ ಇಡೀ ಗ್ರಾಮೇಶ್ವರನದೇ ಇತ್ಯಾದಿ ಇತ್ಯಾದಿ, ಸಮಸ್ತ ಶಿಕ್ಷಣವೂ ದಿವ್ಯದೇಶಗಳ ನೆಲೆಗಟ್ಟಾಗಿದೆ. ಸಾಂಸಾರಿಕ, ಆಧ್ಯಾತ್ಮಗಳಿಗೆ ಅಡ್ಡಗೋಡೆಗಳಿಲ್ಲ ಇಲ್ಲಿ. ಎಲ್ಲದರಲ್ಲೂ ಎಲ್ಲವೂ ಅಡಗಿರುವ ಸಂವೇದನೆ, ತದನುಕೂಲ ಕೈಂಕರ್ಯಗಳೇ ಅಖಂಡ ರಾಷ್ಟ್ರ ರಕ್ಷಣಾ ಮಾಧ್ಯಮ, ಅಷ್ಟೇ ಅಲ್ಲ ವಿಶ್ವರಕ್ಷಣಾ ಮಾಧ್ಯಮವೂ ಹೌದು.

ಇಂತಹ ಒಂದು ಅಪೂರ್ವ ಅನುಭಾವಿಕ, ಕ್ರಿಯಾತ್ಮಕ, ಸಾಮೂಹಿಕ ಯೋಜನಾ ಪರಿಚಯವು ಅರೈಯರ್ ರವರ ಈ ತಿಮ್ಮಪ್ಪನ ಮೇಲಿನ ಈ ಕೃತಿ ಭಕ್ತಿ, ಶಕ್ತಿಗಳಿಂದ ಕೂಡಿದ ನವಮಾನವ ನಿರ್ಮಾಣದಲ್ಲಿ ಸಾಗಲು ತಕ್ಕಷ್ಟು ಸಾಮಾಗ್ರಿಯನ್ನು ಒದಗಿಸುವುದೆಂಬ ಭರವಸೆ ನಮ್ಮದಾಗಿದೆ. ನಾಗಪುರವಾಸಿಗಳಾದ ಪ್ರೊಫೆಸರು, ಪಂಡಿತರು, ಮಹಿಳೆಯರು, ಡಾಕ್ಟರು, ವಕೀಲರು, ಸಾಹಿತಿಗಳು ನಮ್ಮ ಸಂಸ್ಥೆಯ ಅನೇಕ ಸದಸ್ಯರು ಹೀಗೆ ಸರ್ವರಿಗೂ ತಮ್ಮ ಅಂತಃಪ್ರವಾಹವನ್ನೆಲ್ಲಾ ಹರಿಸಿ, ೨ ವರ್ಷ ಸತ್‌ಸಂಗ ನೀಡಿದ ಅರೈಯರಿಗೆ, ನಮ್ಮೆಲ್ಲರ ನಮೋನಮಃ.

೨೩.೭.೧೯೭೭
ಆಷಾಢಶುಕ್ಲ ಏಕಾದಶಿ

ಶ್ರೀಮತಿ ಶ್ರೀ ಪದ್ಮಾ
ಎಂ. ವಿ ಶ್ರೀನಿವಾಸನ್
ನಾಗಪುರ
(ನೀರಿ ಸಂಸ್ಥೆಯ ವಿಜ್ಞಾನಿ)

ನೆರಳ್‌ಕಾರನ ಬಿನ್ನಪ

ಎಲ್ಲಾ ಭಾಷೆಗಳ ಸತ್‌ಸಾಹಿತ್ಯಲೋಕಕ್ಕೇ ತಿಲಕಪ್ರಾಯರೆಂದರೆ ಜಗತ್ತಿನ ಸರ್ವ ಸಂತರು, ಹಾಗೂ ಶರಣೆಯರು. ದೇವರ ಕೇವಲ ಅಹೇತುಕೀ ಪರಾಕೃಪೆಯ ಪ್ರಪ್ರಥಮ ರಶ್ಮಿಪಾತದಿಂದ ಈ ಒಡಲಿನಲ್ಲೇ ಸರ್ವಥಾ ಪುನೀತರಾದವರಿವರು. ತಮ್ಮದೆಂದುಕೊಳ್ಳುವ ವಿದ್ಯೆ, ಕುಲ, ಸಾಧನ, ತಪಸ್ಸು ಇತ್ಯಾದಿ ಯಾವೊಂದು ಬಂಡವಾಳವೂ ಇಲ್ಲದ, ಶೂನ್ಯ ಸಂಪಾದನೆಯವರಿವರು. ಹೃದಯಾಂತರಾಳದಿಂದಲೇ ಉಕ್ಕಿಬಂದ, ಪ್ರಾತಿಭ ಸ್ಫೂರ್ತ ಸಾಕ್ಷಾತ್ಕಾರಗಳನ್ನೇ ಅವರವರ ಆಡು ಮಾತುಗಳಿಂದಲೇ ಸಂಗೀತವಾಗಿಸಿ, ವಚನರೂಪವಾಗಿಸಿ ಎಂತಹ ಮುಗ್ಧ ವಿದಗ್ಧರಿಗೂ ನಿಸ್ಸಂದೇಹವಾಗಿ ಸರಿದಾರಿ ತೋರುವ ಉಜ್ವಲ ಹಾಗೂ ತಂಪೆರೆಯುವ ಅಖಂಡ ಮಂಗಳ ದೀಪದಂತೆ ಆರ್ದ್ರಜ್ವಲನರು! ಸಾಮಾಜಿಕ ವೈಜ್ಞಾನಿಕ ಅಧ್ಯಾತ್ಮ ಮತ್ತು ಆಧ್ಯಾತ್ಮಿಕ ವಿಜ್ಞಾನಗಳ ಸರಿಸಮ ಸಂಪನ್ನರಿವರು. ದಿವ್ಯ ಪ್ರೇಷಿತರು. ವಿಶ್ವಾಭಿಮುಖಿಗಳು. ಗ್ರಾಮಾಭಿಮುಖಿಗಳು. ಇವರ ಕ್ಷೇತ್ರ ನಿರ್ಜನಾರಣ್ಯಗಳಲ್ಲ, ಗುಹೆಗಳಲ್ಲ. ಸರ್ವಸಮಾಜದ ನಡುವೆ ಬೆರೆತೇ ಎಲ್ಲರ ಚಿತ್ತ ರಂಜಕರು! ಇಡೀ ಮಾನವ ಸಮಾಜದ ಸರ್ವತೋಭದ್ರವಾದ ಶಾಶ್ವತ ಅಡಿಗಲ್ಲಿನಂತೆ ಮೂಲಾಧಾರಭೂತರು. ಇವರ ಹಾರ್ದವನ್ನೇ ಅನುಸರಿಸಿ, ಸಕಲ ದೇಶ, ಭಾಷಾ ವೇದ ವಿಧಿಶಾಸ್ತ್ರಗಳೂ ಮಧುರತಮವಾಗಿವೆ.

ಇಂತಹ ದಿವ್ಯಕಟಾಕ್ಷ ಪಾತ್ರರಾದವರನ್ನು ತಮಿಳ್‌ನುಡಿಯಲ್ಲಿ "ಆಟ್ವಾವಾರ್" ಎಂದು ಕರೆಯುತ್ತಾರೆ. ಸತ್ಯಪ್ರೇಮ ಕರುಣೆಗಳ ಅಮೃತ ಸಾಗರಾನ್ತರ್ ನಿಮಗ್ನರಿವರು. ಮತ್ತೆ ಅಲ್ಲಿಂದ ಮೇಲೆದ್ದು ಮಾನವ ಜಾತಿಯನ್ನೇ ಎಂದೆಂದಿಗೂ ಸೌಮ್ಯ ರೀತಿಯಲ್ಲಿ ಆಳುವವರೂ ಇವರೇ! ಎಷ್ಟೋ ರಾಜಾಧಿರಾಜರು, ಒಳ್ಳೊಳ್ಳೆಯ ಸಾರ್ವಭೌಮರು ಜನರ ಚಿತ್ತಪಟಲದಿಂದ ಮಾಸೇ ಹೋದರೂ, ಸಂತರನ್ನೂ ಅವರ ನಿರ್ಮಾಪಕನಾದ ಜಗನ್ನಿಯಾಮಕನನ್ನೂ ಜನರು ಮರೆಯರು. ಆಚಾರ್ಯ ವಿನೋಬಾ ಅವರು, ದೆಹಲಿಗೆ ೧೦ ಮೈಲಿಯಷ್ಟೇ ದೂರದ, ೫೦೦ ಜನಸಂಖ್ಯೆ ಇರುವ ಒಂದು ಹಳ್ಳಿಗೆ ಪಾದಯಾತ್ರೆಯಲ್ಲೇ ಹೋದರು. ಪ್ರಾಯಃ ಅಲ್ಲಿನ ನಿವಾಸಿಗಳೆಲ್ಲಾ ಇಸ್ಲಾಂ ಶಾಂತಿಧರ್ಮದವರೇ. ವಿನೋಬಾ, "ನಿಮಗೆ ಅಕ್ಬರ್ ಗೊತ್ತೇ?" ಎಂದಾಗ ಏಕಕಂಠದಿಂದ ಅವರೆಲ್ಲರೂ ಅವನಾರೋ ನಮಗೇನೂ ಗೊತ್ತಿಲ್ಲ. "ಅಲ್ಲಾಹ್ ಅಕ್ಬರ್ ಖುದಾ ಹಾಗೂ ಪೈಗಂಬರ್" ಮಾತ್ರ ಗೊತ್ತು ಎಂದರು!

"ಭಾರತವರ್ಷ"ವೆಂಬ ಇಡೀ ಇಂದಿನ ಭೂಗೋಳದ (ಗ್ಲೋಬ್) ಒಂದು ಚೂರಾದ ಈ ಭರತಖಂಡದ ತೆಂಕಣದಿಸೆಯಲ್ಲಿ ೫೧೦೧ ವರ್ಷಗಳಿಗೆ ಅಂದಿನ ದ್ವಾಪರಯುಗದ ಕೊನೆಯ ಭಾಗದಲ್ಲಿ ಐವರೂ, ಕಲಿಯುಗದ ಆದಿಭಾಗದಲ್ಲಿ, ಸುಮಾರು ೫೦೦ ಸಂವತ್ಸರಗಳ ಅಂತರದಲ್ಲಿ, ಕೃಷ್ಣಾವತಾರಕ್ಕೆ ಹಿಂದೆ ಮುಂದೆ ಒಬ್ಬ ಹೆಣ್ಣುಮಗಳೂ ಸೇರಿ ೭ ಜನ ಆಳ್ವಾರರನ್ನು, ಪರಂಪರಾಪ್ರಾಪ್ತವಾದ ಸತ್ ಸಂಪ್ರದಾಯ ಚರಿತ್ರೆಗಳು, ಯಥಾರ್ಥ ಪ್ರಾಮಾಣ್ಯ ಹಾಗೂ ಭಾವುಕತೆಯಿಂದ ತಿಳಿಸುತ್ತವೆ. ಆಧುನಿಕ ಹಲವಾರು ವಿಮರ್ಶಕರು ಕ್ರಿ.ಶ. ಅನೆಯ ಶತಮಾನಕ್ಕೆ ಹಿಂದು ಮುಂದಿನವರೆಂದು ಗೈದಿರುವ ಪರಿಶೋಧನೆಗಳಿವೆ. ಆಳ್ವಾರ್‌ಗಳ ಶಕೆಯಾದ ಮೇಲೆ, ಅವರ ದಿವ್ಯಪ್ರಬಂಧಗಳು ತತ್‌ಕ್ಷಣವೇ ಮೋಕ್ಷ ತರುವ ಶಕ್ತಿವಿಶೇಷದಿಂದ "ಕೊಲ್ಲುಂಪಾಟ್ಟು" ಎಂಬ ಲೌಕಿಕ ಅಪಪ್ರಥೆಗೆ ಗುರಿಯಾಗಿ, ೧೨ ಆಳ್ವಾರ್‌ಗಳ ೪೦೦೦ ದಿವ್ಯ ಪ್ರಬಂಧದ ಶ್ರೀಕೋಶಗಳು ಸುಡಲ್ಪಟ್ಟು, ಅದರ ಹಾಡುಗಾರಿಕೆಯ ಪಾರಾಯಣವೂ ಖಿಲವಾದವು. ಅವುಗಳೇ ಆಳ್ವಾರ್ ಶರಣರ ಪರಮಕರುಣಾಪ್ರೇರಿತ ಶ್ರೀ ಸೂಕ್ತಿಗಳು. ಅವನ್ನೆಲ್ಲಾ ತಮಿಳಿನಲ್ಲಿ ಆಳ್ವಾರ್ "ಅರುಳಿಚ್ಚೆಯಲ್ ಹಳ್" ಎನ್ನುತ್ತಾರೆ. ಅವನ್ನೆಲ್ಲಾ ಯಾರು ಯಾವಾಗ ಮತ್ತೆ ಜನಜನಿತರಾಗಿಸಿದರೋ ಆಕಾಲ ಇದು ಎಂದರೆ ಸಮನ್ವಯ ಸಿಕ್ಕೀತು. **"ಅವುಗಳ ನಡುವೆ ಕೇವಲ ಆರಾವಮುದೇ ಎಂಬ ೧೧ ಪಾಶುರ (ಪದ್ಯ) ಗಳನ್ನು ಮಾತ್ರ, ಕರ್ನಾಟಕದ ಮಂಡ್ಯಜಿಲ್ಲೆಯ ಕೆರೆತೊಣ್ಣೂರು (ತೊಂಡನೂರು) ಗ್ರಾಮ ನಿವಾಸಿಗಳಾಗಿದ್ದವರು ಮಾತ್ರ "ನಂಬಿನಾರಾಯಣ"ರ ಸನ್ನಿಧಿಯಲ್ಲಿ ಪ್ರತಿನಿತ್ಯ ಪಾರಾಯಣ ಮಾಡುತ್ತಿದ್ದರು".** ೧೧ನೆಯ ಹಾಡಿನಲ್ಲಿ ಬರುವ

"ಕುರುಹೂರ್ ಶಡಹೋಪನ್ ಕುಳಲಿನ್ ಮಲಿಯಚ್ಚೊನ್ನ ಓರ್ ಆಯಿರತ್ತುಳ್ ಇಪ್ಪತ್ತು"

'ಕುರುಹೂರ್ ಶಠಕೋಪನು ಕೊಳಲಿಗೂ ಮೀರ್ ಇನಿಮೆಯಿಂ ಪೇಳಿದ ನಿರುಪಮ ಸಾಹಸ್ರಿಯೊಳ್ ಈ ದಶಕವ'

ಎಂಬ ಭಾಗದ ಜಿಜ್ಞಾಸೆಯ ಪೂರ್ತಿಗಾಗಿ ವಂಗಿಪುರತ್ತ್ ನಂಬಿ ಇಯಲ್‌ಪಿಳ್ಳೈ ಕಣ್ಣನಂಬಿ ಮುಂತಾದ ನಾಲ್ಕಾರು ಭಾಗವತೋತ್ತಮರು "ಕುರುಹೂರ್" ತಮಿಳ್‌ನಾಡಿನಲ್ಲಿರುವುದರಿಂದ ಆ ಕಾಲಕ್ಕೆ, ಅಲ್ಲಿನ ಕಾಟ್ಟುಮನ್ನಾರ್ ಕೋಯಿಲಿನ ನಾಥಮುನಿ ಅಥವಾ ನಾದಮುನಿಗಳೆಂಬ ದಿವ್ಯಗಾನ ಕುಶಲರೂ, ಯೋಗಿಗಳೂ ಗೃಹಸ್ಥರೂ ಆಗಿದ್ದ ಮಹಾತ್ಮರನ್ನು ಸಂಧಿಸಿ ಕೇಳಲಾಗಿ "ನೀವೇ ಧನ್ಯರು! ನಾನು ಈ ವಿಚಾರವನ್ನು ತಿಳಿದೇ ಇರಲಿಲ್ಲ," ಎಂದು ಸಂಕೋಚದಿಂದಲೇ ವಿನೀತರಾಗಿ ಅವರು ಹೇಳಿದರು. ತೊಂಡನೂರಿನವರಿಂದ ಇಷ್ಟು ಸಮಾಚಾರ ಪಡೆದು, ಅವರನ್ನೂ ಜತೆಗೇ ಕರೆದುಕೊಂಡು ನಾಥಮುನಿಗಳು, "ಆಳ್ವಾರ್ ತಿರುನಗರಿ" ಸೇರಿದರು. ಮಧ್ಯೆ ಕುಂಭಕೋಣದ ಆರಾವಮುದ್ದ ದೇವರನ್ನೂ ದರ್ಶಿಸಿದರು. ಆ ನಾಡಿನ ಸ್ವಾಮಿಗಳು "ನಾವು ಹಿರಿಯರಿಂದ ಕೇಳಿರುವ ಒಂದು ಮಾತುಂಟು". "ಕಲಿಯುಗದ ಆದಿಯಲ್ಲಿ ಪ್ರಪನ್ನಜನಕೂಟಸ್ಥರಾದ 'ಶಠಕೋಪ' ಎಂಬ ದಿವ್ಯಕುಮಾರನೋರ್ವನು ತಿರುನಗರಿಯಲ್ಲಿ ಅಜ್ಞಾತನಂತೆ ಬಿದ್ದುಕೊಂಡೇ ಇದ್ದವನು ೧೬ ವರ್ಷಗಳಾದ ಮೇಲೆ ಮಧುರಕವಿಗಳಿಗೆ ತನ್ನ ಸಿರಿಬಾಯ್‌ಬಿಟ್ಟು ಅಡಿದ ಶ್ರೀ ಸೂಕ್ತಿ ೧೧೦೨ ಹಾಡುಗಳೇ ಆ ಕೃತಿ. ಆಳ್ವಾರ್ ಹೇಳಹೇಳುತ್ತಾ ಬರೆದುಕೊಂಡು, ಸಂತಸದಿಂದ ೮ ದಿಕ್ಕಿಗೂ ಹರಡಿದ ಮಹಾಭಾಗ್ಯ ಶಿಷ್ಯ ಮಧುರಕವಿಗಳಿಗೆ ಏರ್ಪಟ್ಟಿತು. ಅವರು, ತಮ್ಮ ಪೂರ್ಣ ಗುರುವಿನ ಬಗೆಗೆ ಮಧುರತಮವಾಗಿ ರಚಿಸಿದ "ಕಣ್ಣಿನುಣ್ ಶಿರುತ್ತಾಮ್ಬು" ಎಂದೇ ಆರಂಭವಾಗುವ ಏಕಾದಶಪಾಶುರಗಳನ್ನು ಆಳ್ವಾರ್ ತಿರುನಗರಿಯ ಓರ್ವ ಭಕ್ತರು ಇಂದಿಗೂ ಜಪಿಸಿತ್ತಿರುವರು ಎಂದರು. ಅಲ್ಲಿ "ಪರಾಂಕುಶದಾಸರ್" ಎಂಬ ಭಾಗವತೋತ್ತಮರೇ ಆ ನಮ್ಮಾಳ್ವಾರ್ ವಿಷಯಕವಾದ,

೧೧ ಹಾಡುಗಳನ್ನು ಏಕಾಂತದಲ್ಲೇ ಹಾಡಿಕೊಳ್ಳುತ್ತಿದ್ದವರು. ಅವರನ್ನು ಸಂಧಿಸಿ, ಅವರಿಂದ ಗುರುನಿಷ್ಠಾಪ್ರಕಾಶಕವಾದ ಆ ತಮಿಳ್ ಸ್ತೋತ್ರವನ್ನು ಪಡೆದು ೧೨೦೦೦ ಬಾರಿ ಏಕಾSSಸನದಲ್ಲಿ ಏಕಾಗ್ರತೆಯಿಂದ ಜಪ ಮಾಡಲಾಗಿ, ಅದೇ ಶಠಕೋಪರು ಪ್ರಸನ್ನರಾಗಿ, ಅವರ ಸಕಲವಾಙ್ಮಯಗಳ ಜತೆಗೆ ಉಳಿದ ೧೧ ಆಳ್ವಾರ್‌ಗಳ ದಿವ್ಯ ಪ್ರಬಂಧಗಳನ್ನೂ ಉಪದೇಶಿಸಿದರು. ಅದೂ ಯೋಗಬಲದಿಂದ.

"ನಾದನುಕ್ಕು ನಾಲಾಯಿರಂ ಉರೈತ್ತಾನ್" ಹೀಗೆ, ೮, ೯, ೧೦ನೆಯ ಶತಮಾನಗಳಲ್ಲಿ ದೀರ್ಘಜೀವಿಗಳಾಗಿದ್ದ, ಆ ಯೋಗಿ ವರೇಣ್ಯರೇ **"ನಾಥೋಪಜ್ಞೋಪಬೃಂಹಿತಂ"** ಎಂಬಂತೆ, ಸಂಸ್ಕೃತ ವೇದ, ಉಪನಿಷದಾದಿಗಳ ಸರ್ವರಹಸ್ಯಗಳನ್ನೂ ಈ ತಮಿಳು ವೇದದಿಂದಲೂ, ಸರಹಸ್ಯವಾಗಿ ಅರಿತು ಯೋಗೋಪದಿಷ್ಟವಾದ ಈ ಉಭಯ ವೇದಾನ್ತ ಮಾರ್ಗವನ್ನು ಕಂಡುಕೊಂಡು ಸಮಾಜದಲ್ಲಿ ೪೦೦೦ ದಿವ್ಯ ಪ್ರಬಂಧಗಳನ್ನೂ ಮತ್ತೆ ಹರಡಿದರು. ಸಂಸ್ಕೃತ ವೇದ ವೇದಾರ್ಥ ಪಡೆದು ಅವನ್ನೆಲ್ಲಾ ಜನಗಳ ಸೌಕರ್ಯಕ್ಕಾಗಿ, ಶಾಖೆ, ಕಾಂಡಾದಿ ವಿಭಾಗಗಳಲ್ಲಿ ವಿಂಗಡಿಸಿ ಅರಿಸಿಕೊಟ್ಟಿದ್ದರಿಂದ "ಪರಾಶರಪುತ್ರರು ಹೇಗೆ ವೇದವ್ಯಾಸರಾದರೋ, ಹಾಗೆಯೇ ೫೦೦೦ ವರ್ಷಗಳಲ್ಲಿ ಮಧುರಕವಿ ಶಠಾರಿವಾಗ್ ವ್ಯಾಸರಾದಂತೆ, ಮುಂದೆ, ಈ ನಾಥರೂ ಶಠಾರಿವಾಗ್‌ವ್ಯಾಸರೇ ಆದರು".

ಪ್ರಕೃತ ಸದ್ಯಕ್ಕೆ, ಆಂಧ್ರಪ್ರದೇಶದ ದಕ್ಷಿಣದಲ್ಲಿ ತಮಿಳುನಾಡಿಗೆ ಉತ್ತರಾಂಚಲದಲ್ಲಿ, ಚಿತ್ತೂರು ಜಿಲ್ಲೆಗ ಸೇರಿದಂತಿರುವ ಮಹಾ ಪರ್ವತಾSSರಣ್ಯಪ್ರದೇಶವೇ, ತಿರುಪತಿ ಬೆಟ್ಟದ ಶ್ರೇಣಿ ವೇಂಕಟಗಿರಿ, ಶ್ರೀಶೈಲ, ವೃಷಶೈಲ ತಿರುಮಲೈ ಶೇಷಗಿರಿ, ಇನ್ನೂ ಮುಂತಾದ, ಅವರವರ ಅಭಿರುಚಿಗೆ ತಕ್ಕಂತೆ ಕರೆಯಲ್ಪಡುವ, ಪ್ರಸಿದ್ಧವಾದ ಯಾತ್ರಾಸ್ಥಳ. ಜಗತ್ತಿನ ನಾನಾ ಧರ್ಮ್ಯರನು ಯಾಯಿಗಳೂ, ಸರ್ವಸಂಪ್ರದಾಯದವರೂ, ವೈದಿಕ ಪರಮವೈದಿಕರೂ, ಕೇವಲ ಲೌಕಿಕರೆಂದುಕೊಳ್ಳುವ ನಾಸ್ತಿಕರೂ, ಈ ಶ್ರೀಕ್ಷೇತ್ರಕ್ಕೆ ಗುಂಪುಗುಂಪಾಗಿ ಬರುತ್ತಾರೆ. ಇದರ ಶಾಖೋಪಶಾಖೆಗಳೇ ಹಿಂದಿನಿಂದಲೇ ಭರತಖಂಡದಲ್ಲೂ, ಈಗೀಗ ವಿದೇಶಗಳಲ್ಲೂ ಬಾಹುಳ್ಯೇನ ಪ್ರಖ್ಯಾತವಾಗುತ್ತಿವೆ. "ಕಲೌವೇಂಕಟನಾಯಕಃ", ಕಲಿಯುಗ ದೈವಂ, ನಮ್ಮಪ್ಪ ತಿರುಪತಿ ತಿಮ್ಮಪ್ಪ, ಏಡುಕೊಂಡಲವಾಸಾ, ಬಾಲಾಜಿ, ಶ್ರೀನಿವಾಸ, ವೇಂಕಟೇಶ್ವರ ಒಂದೇ ಎರಡೇ ವೈವಿಧ್ಯಪೂರ್ಣರಾದ ಸಾರ್ವಜನಿಕರ ಆದರಕ್ಕೆ ಈ ದಿವ್ಯದೇಶ ಹಿಂದಿನಿಂದಲೇ ಸಕಲರಿಗೂ ಏನೋ ಒಂದು ಅದ್ಭುತವಾದ, ನೆಮ್ಮದಿ ಶಾಂತಿ ತರುವ ಪಾವನ ತೀರ್ಥಧಾಮವೂ ಆಗಿದೆ. ಪೌರಾಣಿಕ ಹಾಗೂ ಜಾನಪದ ನಾಣ್ಣುಡಿಯಂತೆ, ಒರಿಸ್ಸಾ ಪೂರಿಜಗನ್ನಾಥ ಕ್ಷೇತ್ರವನ್ನು "ಪ್ರಸಾದ ಪಾವನ"ವೆಂದೂ ಕರ್ನಾಟಕದ ಮೇಲುಕೋಟೆ ತಿರುನಾರಾಯಣಪುರವನ್ನು "ಪತಿತಪಾವನ"ವೆಂದೂ ಈ ತಿರುಪತಿ ತಿರುಮಲೈಯನ್ನು "ತೀರ್ಥಪಾವನ"ವೆಂದೂ ಕರೆಯಲಾಗುತ್ತಿದೆ.

ಕ್ಷೇತ್ರದ ಬಗೆಗೆ ತನ್ನದೇ ಆದ ವಿಶೇಷ ಆದರಾತಿಶಯದಿಂದ ತಾನೇ ಇಷ್ಟಪಟ್ಟು ನೆಲೆಸಿರುವ ತಾಣಗಳೇ "ಉಹಂದು ಅರುಳಿನ ನಿಲಂಗಳ್" ದಿವ್ಯದೇಶ ಅಥವಾ ಪುಣ್ಯಕ್ಷೇತ್ರಗಳು. ಭರತಖಂಡದಲ್ಲಿ, ಟಿಬೆಟ್ಟಿನಲ್ಲಿ ಪಶ್ಚಿಮ ಪಾಕೀಸ್ಥಾನದಲ್ಲಿ, ಸಿಂಧೂನದಿ ತೀರದಲ್ಲಿ, ಉಳಿದೆಡೆ ನಾನಾಗಿರಿ ಜನರ ಜತೆಯಲ್ಲಿ, ನದಿತೀರಗಳಲ್ಲಿ, ಅರಬ್ ಮಕ್ಕಾದಲ್ಲಿ, ಎತ್ತರದ ಶಿಖರಗಳಲ್ಲಿ ಬೈಲು ಪ್ರದೇಶಗಳಲ್ಲಿ, ೧೦೬ ಇಂತಹ ಸ್ವಯಂವ್ಯಕ್ತ ದಿವ್ಯ ಅರ್ಚಾಮೂರ್ತಿಗಳಿವೆ. ಕ್ಷೀರಸಮುದ್ರ, ವೈಕುಂಠಗಳಿಗೆ ಈ ಮಾನವ ಶರೀರ ಹೋಗಲಾರದು. ಹೀಗೆ ಅಷ್ಟೋತ್ತರ ಶತಸ್ಥಾನಗಳು ಒಂದು ಗಣನೆಗೆ ಬಂದರೂ ಇಷ್ಟೇ ಎಂದು ಹೇಳುವಂತಿಲ್ಲ. ಋಷಿಗಳ ತಪಸ್ಸಿಗೆ ಮೆಚ್ಚಿ ದರ್ಶನಕೊಟ್ಟ "ಆರ್ಷ" ಕ್ಷೇತ್ರ ಮೂರ್ತಿಗಳು, ಸಿದ್ಧರಿಗೆ ಸಾಕ್ಷಾತ್ಕಾರ ನೀಡಿದ "ಸೈದ್ಧ" ಮೂರ್ತಿಗಳು. ಭಕ್ತರು ನಮ್ಮೂರಿಗೊಂದು ಪರಮಸಾತ್ವಿಕ ದಿವ್ಯ ಸಮಾಜ ಮಂದಿರ ಬೇಡವೇ? ಎಂದು ಕಲ್ಪಿಸುವ "ಭಾಕ್ತ" ಮೂರ್ತಿಗಳು. ಅಸಂಖ್ಯಾತವಾಗಿ ಅವರವರ ಇಷ್ಟಕ್ಕೆ ಒಲಿದಂತಹ ಮೂರ್ತಿಗಳು ಎಲ್ಲವೂ ಭಕ್ತ ಪರಾಧೀನನಾದ ಓರ್ವನೇ ಆದ ಪರಮಾತ್ಮನ ವಿವಿಧ ದಿವ್ಯರೂಪಗಳೇ. ದೇವನಿಗೆ, ಶುದ್ಧ ಹೃದಯದಿಂದ ನೆನೆದ ಶ್ರೇಷ್ಠತಮ ವಸ್ತು, ಆದರ್ಶಗಳೆಲ್ಲಾ ದಿವ್ಯಮೂರ್ತಿಗಳೇ. ಯಾವುದಕ್ಕೂ ಅವರವರ ದೃಷ್ಟಿಯಿಂದ ಬೇರೊಬ್ಬರ ಭಾವನೆಗೆ ಅಪಚಾರವೆಸಗಬಾರದು. ಅದು ತಮ್ಮದೇ ಭಾವನಾ ಗಮ್ಯನ ಆತ್ಮಹತ್ಯೆ ಆಗುತ್ತದೆ.

ಈ ಆಳ್ವಾರ್ ಶರಣರ ಭಾಗಕ್ಕೆ ಇಂಥ ಪವಿತ್ರ ಸ್ಥಾನಗಳ ಪ್ರತಿಮೆಗಳು, ಅವು ಯಾವುದೇ ರೂಪದಲ್ಲಿದ್ದರೂ ಆಂತರಿಕವಾಗಿ ಬಹುಮಟ್ಟಿಗೆ ಸಾಂತ್ವನ ನೀಡಿವೆ. ಆಳ್ವಾರ್ ಎಲ್ಲರಿಗೂ "ನಮ್ಮವರೇ" ಎಂಬಂತೆ ಉದಾರರಾಗಿರುವ ವಣ್ ಶಠಕೋಪರು,

"ಕರುವುಡೈ ತ್ತೇವಿಲ್‌ಹಳ್ ಎಲ್ಲಾಮ್ ಕಡಲ್‌ವಣ್ಣನ್ ಕೋಯಿಲೇ" ಎನ್ನುಮ್ (ತಿರುವಾಯ್ಮೊಳಿ)

"ಗರ್ಭಾSSಗಾರದ ವಿನೇ ದೇಗುಲ ಕಡಲ್ ಬಣ್ಣನ ಕೋಯಿಲೇ ಎನ್ನುವಳ್ಳೆ"

"ಸದ್‌ಭಾವನೆಗೆ ಪಾತ್ರವಾದ ಯಾವುದನ್ನೂ "ದೇವರಲ್ಲ" ಎಂದು ಹೇಳದವರೇ ನಮ್ಮಾSSಳ್ವಾರ್!"

ಈ ಶರಣರು ಸರ್ವೇಶ್ವರನ ಪರ, ವ್ಯೂಹ, ವಿಭವ, ಅಂತರ್‌ಯಾಮಿ ರೂಪಗಳಲ್ಲಿ ಹೇಗೋ ಹಾಗೆಯೇ, ಪೂಜಿಸಲ್ಪಡುವ ಸರ್ವ ಅರ್ಚಾಮೂರ್ತಿಗಳಲ್ಲೂ ನಿರಾSSಕಾರವಾದ ಭಗವತ್ ಸ್ವರೂಪವನ್ನೂ ಗರ್ಭೀಕರಿಸಿಕೊಂಡೇ ನೋಡುವ ಸಮಗ್ರ ಭಕ್ತಿ-ಶಕ್ತಿ ಸಂಪನ್ನರು. ನಿರ್ಗುಣನನ್ನು ಒಳಗೊಂಡ ಸಗುಣ ಮೂರ್ತಿಗಳೇ ಇವರ ಅಂತಶ್ಚಕ್ಷುವಿಗೆ ಕಾಣುವುದು. ಸಾಧಾರಣ ನಮ್ಮಂತಹವರಿಗಿಂತ ಸೂಕ್ಷ್ಮತರ ಸೂಕ್ಷ್ಮತಮ ಅನುಭಾವಿಕ ಸಂಪತ್ತಿನ ಒಡೆಯರಿವರು. ಇವರನ್ನೇ "ಧೀರ"ರೆನ್ನುವುದು ವೇದವೂ ಕೂಡ.

ತಿರುಪತಿ ತಿಮ್ಮಪ್ಪ ತನ್ನನ್ನೇ ಇಂತಹವರಿಗೆ ಸರ್ವಸ್ವದಾನ ಮಾಡಿಕೊಂಡಿದ್ದಾನೆ. ಇವರೇ ಗೀತೆಯ "ಜ್ಞಾನೀ" ಎಂಬ ಪೂರ್ಣ ಭಕ್ತರು. ನಿತ್ಯಮುಕ್ತರು. ದಿವ್ಯನಿಗೆ ಅತ್ಯರ್ಥಪ್ರಿಯರು. ಇವರೂ ಆತ ನೀಡುವ ತದೇಕ ಕೈಂಕರ್ಯಪರರು, ಕಿಂಕರರು. ತದೇಕ ಸಾಧನರು. ತದೇಕಪುರುಷಾರ್ಥರು. ತಿರುಮಂತ್ರ ಹಾಗೂ ದ್ವಯಾರ್ಥನಿಷ್ಠರು. ಜೀವಾತ್ಮರ ಶುದ್ಧಸ್ವರೂಪ ಪರಾಸಮಷ್ಟಿಯ ಸೇವೆಯೇ. ಸಣ್ಣ ಪುಟ್ಟ ಊಳಿಗಗಳಂತೆ ಕಾಣುವುವೂ ಶರಣರ ಕೈಂಕರ್ಯದ ಹಿಂದಿರುವ ಅನುಸಂಧಾನ ನಮಗೆ ತಾಗಿದರೆ ಎಲ್ಲವೂ ಭಗವತ್ ಕೈಂಕರ್ಯವೇ ಆಗುವುದು. ಯಾವುದೇ ಅನನ್ಯಭಾವದ ಸೇವೆಗಳ ವರ್ಗೀಕರಣವನ್ನು ಸಹಿಸರು. ರಾಮಾನುಜರು ಈ ಭಾಗವನ್ನು "ಅಶೇಷಶೇಷತೈಕ ರತಿರೂಪ ಕೈಂಕರ್ಯ" ಎಂದು ಸ್ಪಷ್ಟೀಕರಿಸಿದ್ದಾರೆ.

ಜೀವಾತ್ಮರ ಮೌಲಿಕ ಸ್ವರೂಪ ''ಜ್ಞಾನವೇ'' ಎಂದಾಗ ಸೇವಾವಿಮುಖತೆಗೆ ನಾಂದಿಯಾಗುತ್ತದೆ. ಜಗತ್ತಿನ ಅನೇಕ ಶಿಷ್ಟರಾದವರೇ ಸಮಾಜ ಸೇವಾ ವಿಮುಖತೆಯನ್ನೇ ವೇದಾನ್ತಾರ್ಥಕ್ಕೆ ಕುರುಹಾಗಿ ತಿಳಿಯುವುದು ಈ ಜ್ಞಾನಲಕ್ಷಣಕ್ಕೇ ಪ್ರಥಮ ಪ್ರಾಶಸ್ತ್ಯ ಕೊಟ್ಟಿರುವುದರಿಂದಲೇ, ಎಲ್ಲಾ ಬಗೆಯ ಸೇವಾಕಾರ್ಯಗಳನ್ನೂ ಸಮನಾಗಿ ಭಾವಿಸಿ, ಬೆಲೆ ಕಟ್ಟುವುದರಲ್ಲಿ ಏರುಪೇರುಗಳು ಬರಬಾರದು. ಎಲ್ಲರೂ 'ಸೇವೆ'ಯಲ್ಲಿ ತಮ್ಮ ಭಾಗದ ಜವಾಬ್ದಾರಿಯನ್ನು ಹೊರುವಲ್ಲಿ ಸಮಾನರಾಗಿರುವುದಕ್ಕೀಗ ಪ್ರಾಮುಖ್ಯ ನೀಡದೆ, ಹಕ್ಕು ಬಾಧ್ಯತೆಗಳಿಗಾಗಿ ಮಾತ್ರ ಹೋರಾಡುವ ಪ್ರವೃತ್ತಿ ಇಂದಿಗೂ ಶಿಷ್ಟವರ್ಗದಲ್ಲೇ ಬೆಳೆಯುತ್ತಿರುವುದಕ್ಕೆ ಈ ಭಾವನೆಯೇ ಕಾರಣ.

ಸೇವಾ ವಿಜ್ಞಾನದ ರಹಸ್ಯವನ್ನು ತಮ್ಮ ಸ್ವಾನುಭವದಿಂದ ಬಿತ್ತರಿಸುವವರೇ ನಿಜ ಶರಣರು. 'ಕಾಯಕವೇ ಕೈಲಾಸ', 'ಕೈಂಕರ್ಯವೇ ವೈಕುಂಠ'. 'ಬ್ರೆಡ್‌ಲೇಬರ್', ಉತ್ಪಾದಕ ಶರೀರ ಪರಿಶ್ರಮವೇ ದ್ರವ್ಯಯಜ್ಞ, ಅನ್ನಯಜ್ಞ, ಸೂತ್ರಯಜ್ಞ. ಈ ಕರ್ಮಗಳಲ್ಲಿ, ಒಳಗಿನ ಜ್ಞಾನ ಖಂಡಿತ ಇದ್ದೇ ಇರಬೇಕು. ಜ್ಞಾನವಿಹೀನ ಕೇವಲ ಕರ್ಮಮಾರ್ಗವೂ ಅಲ್ಲ. ಕರ್ಮವಿಹೀನ ಕೇವಲ ಜ್ಞಾನಮಾರ್ಗವೂ ಅಲ್ಲ. ಅಂತೆಯೇ ಶರಣ ಆಳ್ವಾರ್, ಆಚಾರ್ಯರು ಈ ಉಭಯವನ್ನು ದೇವಾಲಯಾದಿ ಸರ್ವಸಾಮಾಜಿಕ ವ್ಯವಸ್ಥೆಗಳಲ್ಲೂ ಅಳವಡಿಸಿದ್ದಾರೆ. ಇಲ್ಲೆಲ್ಲಾ ಆಳ್ವಾರ್ ಶರಣರ ಅಂತರಂಗಗಳ ಯೋಜನಾ ಪರಿಜ್ಞಾನವಿದೆ. ಈ ಕೈಂಕರ್ಯಕ್ಕಿಂತಲೂ ಮೇಲಿನ ಮತ್ತೊಂದು ಪರಮ ರಹಸ್ಯವನ್ನು ಆಳ್ವಾರ್ ಆಚಾರ್ಯರು ಸ್ವಾನುಷ್ಠಾನದಿಂದ ತೋರಿದ್ದಾರೆ. ಅದೇ ಮಂಗಳಾಶಾಸನ ಎನ್ನುವುದು. ಈ ಲೀಲಾ ವಿಭೂತಿ, ಆ ನಿತ್ಯವಿಭೂತಿ ಎಂಬ ಉಭಯ ವಿಭೂತಿ ನಾಯಕ ''ಶ್ರೀ-ನಿವಾಸ'' ಚೆನ್ನಾಗಿದ್ದರೆ, ಅವನೊಳಗೆ ಅಡಗಿರುವ ಸಕಲ ಪಡಿಪದಾರ್ಥಗಳೂ ೬೬ ಲಕ್ಷ ಜೀವರಾಶಿಗಳೂ, ಅವುಗಳಲ್ಲೊಂದಾದ ಈ ಮಾನವನೂ ''ಸ್ವಸ್ತಿ'' ಪಡೆಯುತ್ತಾನೆ. ಅನೆಯ ಹೆಜ್ಜೆಯ ಅಳತೆಯಲ್ಲೇ ಉಳಿದ ಎಲ್ಲಾ ಪ್ರಾಣಿಗಳ ಪಾದದ ಅಳತೆಗಳೂ ಅಡಗುವುದಷ್ಟೇ! ನಮ್ಮೀ ಭರತಖಂಡದ ರಾಷ್ಟ್ರಗೀತೆಯೂ ''ಜನಗಣಮನ ಅಧಿನಾಯಕ ಜಯಹೇ'' ಎಂಬ ಈ ನಿಷ್ಠೆ, ಸ್ವಾರ್ಥ, ಪರಾರ್ಥಗಳನ್ನು ಅಲ್ಲಗಳೆಯದೆ ಅಖಿಲಾಂಡಕೋಟಿ ಬ್ರಹ್ಮಾಂಡಗಳ ಕ್ಷೇಮವನ್ನು ಒಳಗೊಂಡು ಚರಿತಾರ್ಥವಾಗುವಂತಹುದೇ. ಅದೇ ''ಸಮಾಜವಾದ, ಜಾತ್ಯತೀತತೆ ಸಮಾನತೆ'' ಮುಂತಾದ ಪರಿಭಾಷೆಗಳೇ ಇಂದು ಜನಜನಿತವಾಗಿವೆ. ಋಷಿಮುನಿಗಳದೂ ''ಜಿತಂತೇ ಪುಂಡರೀಕಾಕ್ಷ!'' ಎಂದೇ ಸರ್ವ ಆಚಾರ್ಯರದೂ ''ವಿಜಯೀಭವ! ವಿಜಯೀಭವ!'' ಎಂದೇ. ''ವೆಂಕಟೇಶ ಭಗವಾನ್ ಕೀ ಜೈ''. ದೇವರನ್ನು ನೋಡುವುದು, ಅನುಭವಿಸುವುದು, ಕೊನೆಗೆ ಕೈಂಕರ್ಯವೂ ಕ್ಷುದ್ರ ಸ್ವಾರ್ಥಗ್ರಸ್ತವಾಗಲೂ ಸಂದು ಕೊಡಬಲ್ಲವು. ''ಸ್ವಾಮೀ! ನೀನು ಚೆನ್ನಾಗಿರಪ್ಪ!'' ಎಂದರೆ, ಶುದ್ಧ ಪರಮಾರ್ಥವಾಗಿಯೇ ದೇವರ ಕಣ್ಣು, ಎದೆ ಅರಳಿಬಿಡುತ್ತದೆ. ದಾಸನ ಈ ಕೃತಿಯ ಆದಿಯಲ್ಲೇ ಈ ಶೋಭನಾಽಽಶಂಸೆಯನ್ನು ಆಳ್ವಾರ್ ಪ್ರಮಾಣಗಳಿಂದಲೇ ನಿರೂಪಿಸಲಾಗಿದೆ.

ಹತ್ತಾರು ವರ್ಷಗಳ ಹಿಂದೆಯೇ, ಬೆಂಗಳೂರು ಮಲ್ಲೇಶ್ವರದ ಗೋಪಾಲ ಕೃಷ್ಣಸ್ವಾಮಿ ದೇವಸ್ಥಾನದ ಪ್ರದಕ್ಷಿಣೆ ಮಾಡುತ್ತಿದ್ದಾಗ ದಿವಂಗತ ಪೂಜ್ಯ ಎಸ್. ಎಸ್. ಶರ್ಮಾ (ಕಂಟ್ರಾಕ್ಟರ್) ಅವರು ನನಗೆ ನಿಯಮನ ಮಾಡದಿದ್ದರೆ, ಈ ''ಆಳ್ವಾರ್ ಶರಣರ ತಿಮ್ಮಪ್ಪ'' ತಿರಳ್-ನೆರಳ್ ಈ ರೂಪದಲ್ಲಿ ಬರುತ್ತಿತ್ತೋ ಇಲ್ಲವೋ? ಅವರ ಆದ್ಯಪ್ರೇರಣೆ ನನ್ನನ್ನು ಈ ಕಾರ್ಯಕ್ಕೆ ಹಚ್ಚಿತು.

ಮೂಲ ತಿರುಮಲೈ ತಿರುಪತಿ ದೇವಸ್ಥಾನದ ವ್ಯವಸ್ಥಾಪಕ ಮಂಡಲಿ ಈ ತೆರದ ಸಂಗ್ರಹ ಗ್ರಂಥವನ್ನು ನಾನಾ ಭಾಷೆಗಳಲ್ಲಿ ಹಿಂದೆಯೇ ಮಾಡಿದೆ. ಚಿತ್ರ, ಅರ್ಥಸಹಿತ ಪ್ರಕಟಿಸಿದೆ. ಕಲ್‌ಬಾಗಿಲ್ ಶ್ರೀವತ್ಸರೂ, ಆಂಗ್ಲಕೃತಿಯೊಂದರ ಆಸರೆ ಪಡೆದು, ಎಲ್ಲಾ ಆಳ್ವಾರರೂ, ತಿಮ್ಮಪ್ಪನ ಬಗ್ಗೆ ಅಂದಿರುವ ತಮಿಳ್ ಗೀತಗಳನ್ನೆಲ್ಲಾ, ಆಯಾಯಾ ಯಾತ್ರಾಸ್ಥಳಗಳಲ್ಲಿ ಸಂಚರಿಸುವ ಯಾತ್ರಿಗಳ ಕನ್ನಡಿಗರ ಬೃಂದಕ್ಕೆ ನೀಡಿ ಉಪಕರಿಸಿದ್ದಾರೆ. ದಿವಂಗತ ಶ್ರೀ ಉ.ವೇ. ಕರ್ಣಾಟಕದ ಉದ್ದಾಮ ಪಂಡಿತರಾದ ಅಜಿ ರಾಮಾನುಜೈಯ್ಯಂಗಾರ್ಯರ ದೌಹಿತ್ರ ಶ್ರೀ ಎಂ.ಆರ್. ನರಸಿಂಹನ್ ''ಆಳ್ವಾರುಗಳ ಕಂಡ ತಿರುವೇಂಗಡಮ್'' ಕೇವಲ ವಚನರೂಪದ ಕನ್ನಡ ಕೃತಿಯೂ, ಪು.ತಿ.ನ. ಅವರು ಮೆಚ್ಚಿದ ಹೃದಯಂಗಮ ಕೃತಿಯಾಗಿದೆ. ಇವರೆಲ್ಲರ, ಹಾಗೂ ಹಳೆಯ ವ್ಯಾಖ್ಯಾತೃಗಳ ಉಪಕಾರವನ್ನು ಈ ನೆರಳ್‌ಕಾರ ಪಡೆದಿದ್ದಾನೆ. ರಾಮಾನುಶಮುನಿ, ಜಗ್ಗು, ಶ್ರೀರಂಗಂ ಸ್ವಾಮಿಗಳ ಶಿಕ್ಷಣವಂತೂ ಮರೆಯಲಾಗದ ಅನುಗ್ರಹಗಳೇ!

ಈ ದಾಸನ ಕೃತಿಯಲ್ಲಿ, ಮೂಲ ತಮಿಳಿನ ಪ್ರತಿಪದದ ಅರ್ಥವನ್ನೂ, ಒಂದು ರೀತಿಯಲ್ಲಿ ಪಾಠಕರಿಗೆ ಭಾರವಾಗದಂತೆ ಹಾಗೂ ಒಂದು ರೀತಿಯಲ್ಲಿ ಭಾವಪೂರ್ಣವಾಗುವಂತೆ, ತಮಿಳ್ ಪದಗಳ ಪರಿಚಯವೂ ಸಿಗುವಂತೆ ಹಾಗೂ ಪ್ರತಿಪಾಶುರ ಅಥವಾ ಪದ್ಯದ ಸಂದರ್ಭಗಳನ್ನು ಪೂರ್ವಜರ ವ್ಯಾಖ್ಯಾನ ಅನುಸರಿಸಿ ಅವತರಣಿಕೆಯ ರೂಪದಲ್ಲಿ ಕೊಡಲಾಗಿದೆ. ಪ್ರಸ್ತುತ ಕಾಲ ದೇಶಗಳಿಗೂ ಈ ಆಳ್ವಾರ್ ಶರಣರ ವಾಙ್ಮಯ, ವೈಜ್ಞಾನಿಕ ಹಾಗೂ ಸಾಮಾಜಿಕವಾಗಿಯೂ ಬಲು ಆಳವಾದ ಪರಿವರ್ತನಾಕಾರಿಯಾದ ''ಅಹಿಂಸಕ ಶಾಂತಿಮಯ ಪ್ರೇಮಳ ಕ್ರಾಂತಿ'' ಮಾಧ್ಯಮ ಎನ್ನುವುದನ್ನು ತೋರಿಸಲು ಪ್ರಯತ್ನ ಪಟ್ಟಿದೆ. ಹೀಗೆ ಹಲವಾರು ಜೀವನಾನುಭವಗಳಿಂದ, ಪಾದಯಾತ್ರೆ, ಕಾಂಚನಮುಕ್ತಿ ಮುಂತಾದ ಹಳೆ ಶರಣರ ಮತ್ತು ಹೊಸ ಶರಣರ ಸಂಪರ್ಕ, ಸಂಯೋಗಗಳಿಂದಲೂ ಇದು ಪುಷ್ಟಿ ಪಡೆದಿದೆ. ಈ ವೈಶಿಷ್ಟ್ಯಗಳನ್ನು ಪಾಠಕರು ಪರಾಂಬರಿಸಿ ತಮ್ಮ ಸಲಹೆಗಳನ್ನಿತ್ತರೆ ತಮ್ಮೆಲ್ಲರ ಸನ್ಮಾರ್ಗದರ್ಶನವೂ ದಾಸನಿಗೆ ಆಗುತ್ತದೆ. ಗುಣಮೌಲ್ಯ ಜಗತ್ತಿನಲ್ಲೇ ಕುಸಿಯುತ್ತಿರುವ ಈ ಸಂದರ್ಭ, ''ಶರಣರ ಸೋಲು'' ಎಂಬ ಮನಃಸ್ಥಿತಿ, ಪರಿಸ್ಥಿತಿ ನಿರ್ಮಾಣವಾಗಿದೆ.

ಒಂದೇ ಹಸ್ತದ ೫ ಬೆರಳುಗಳಂತೆ ಪಂಚದ್ರಾವಿಡ ಭಾಷೆಗಳೇ ಆದ ತಮಿಳು, ಕನ್ನಡ, ತುಳು, ಮಲೆಯಾಳಂ, ತೆಲಗು ಭಾಷೆಗಳಲ್ಲಿನ ಎಲ್ಲಾ ಸಂತರ ಕೃತಿಗಳ ಆದಾನ ಪ್ರದಾನ, ದಕ್ಷಿಣ ಭಾರತದಲ್ಲೇ ಹಬ್ಬಿ, ಉತ್ತರದ ಎಲ್ಲಾ ಸಂತಶಿರೋಮಣಿಗಳ ಸಕ್ರಿಯ ''ಭಕ್ತಿಪರವಶತೆ''ಯ ನೆರಳಲ್ಲಿ, ಸಮಗ್ರ ಭರತಖಂಡ ಶಕ್ತಿ ಸಂಪನ್ನವಾಗಬೇಕಿದೆ. ಅಂತೆಯೇ ವಿಶ್ವದ ಸರ್ವ ದಿವ್ಯ ಪ್ರೇಷಿತ ಮಹಾನುಭಾವರ ಎಲ್ಲಾ ಕೃತಿಗಳನ್ನೂ ಎಲ್ಲಾ ಭಾಷೆಗಳಿಗೂ ತಂದು, ಜಾಗತಿಕ ಮಟ್ಟದಲ್ಲೇ ''ಭಾವೈಕ್ಯ'' ಸಾಧಿಸಿ ತೋರಬೇಕಿದೆ. ಈ ಕೃತಿ ಇವುಗಳ ತುರ್ತು ಅಗತ್ಯಗಳನ್ನು ಪೂರೈಸುವಂತೆ ಹಾಗೂ ಸಾಮಾನ್ಯಧಾಟಿಯಲ್ಲಿ ಮೂಲ ತಮಿಳ್‌ತಿರುಳಿಗೆ ಸರ್ವಥಾ ಸರಿಹೋಗುವ ಸಾಮರ್ಥ್ಯವಿಲ್ಲದಿದ್ದರೂ, ಮೂಲದ ಛಾಯೆಯಲ್ಲಿ ಹಾಡುವಂತೆ

ಅಳವಡಿಸಲಾಗಿದೆ. ತಮಿಳಿನ ಜತೆಜತೆಗೇ ಕನ್ನಡದ ನೆರಳನ್ನೋ, ಅಥವಾ ಕೇವಲ ಕನ್ನಡ ನೆರಳನ್ನೋ ಕನ್ನಡನಾಡಿನ ದೇವಾಲಯಗಳ ಪೂಜೆ ಪುರಸ್ಕಾರಗಳಿಗೂ, ಔಚಿತ್ಯ ಹಾಗೂ ಸಂದರ್ಭ ವಿವೇಕದಿಂದ ಉಪಯೋಗಿಸಿಕೊಳ್ಳಲೂ ಬರುವಂತಿದೆ. ಶ್ರೀ ಸಾಮಾನ್ಯರ ಈ ಸಾತ್ವಿಕಾಽಸೆಯನ್ನು ಈ ಕೃತಿ ಕೊಂಚ ಮಟ್ಟಿಗೆ ಪೂರೈಸಬಲ್ಲದು. ನಿಜವಾದ ಭಾವ ಮನದಟ್ಟಾಗಲು ಅವರವರ ಮಾತೃಭಾಷೆಯೇ ಒಳ್ಳೆಯ ಮಾಧ್ಯಮ. ತಮಿಳ್ ಆಳ್ವಾರ್ ವಾಙ್ಮಯದ ವಿಸ್ತಾರೀಕರಣವೂ ಆಗುವುದರಿಂದ ತಮಿಳಿಗೂ ಶೋಭೆ ಹಾಗೂ ಬಿತ್ತರದ ಪರಿಚಯ ತರುವಂತಹುದೆಂಬುದನ್ನೂ ಹರ್ಷದಿಂದ ತಮಿಳರೂ ಸ್ವಾಗತಿಸುವರೆಂದು ನಂಬಿದ್ದೇನೆ. ಕನ್ನಡ ಸಾಹಿತ್ಯವೂ ಎಲ್ಲಾ ವಿಧವಾದ ವಿಚಾರಗಳಿಂದಲೂ ಪರಿಪ್ರಷ್ಟವೂ, ಪುಷ್ಕಳವೂ ಆಗಬೇಕಲ್ಲವೇ? ರಾಷ್ಟ್ರಲಿಪಿಯಾದ ''ದೇವನಾಗರಿ''ಯಲ್ಲಿ ಮುದ್ರಣವಾದರೆ ಭರತಖಂಡದ ಸಕಲ ರಾಜ್ಯದ ಜಿಜ್ಞಾಸುಗಳಿಗೂ ಉಪಯುಕ್ತವಾಗುತ್ತದೆ. ದೇಶದ ಗುಣಮೌಲ್ಯವೃದ್ಧಿಗೆ, ಅಖಿಲಭಾರತೀಯ, ಸಮನ್ವಯ ಸಹಬಾಳ್ವೆಯ ಸಂಸ್ಕೃತಿಗೆ, ವಿಶ್ವಮಾನವೀಯತೆಯ ಏಕತೆಗೂ ದೀರ್ಘಕಾಲದ ಕಾರ್ಯಯೋಜನೆಗಳಲ್ಲಿ ಇದೂ ಒಂದಾಗಲೇ ಬೇಕಷ್ಟೆ.

ಆಂಗ್ಲರ ೩೦೦ ವರ್ಷಗಳ ಆಡಳಿತ ಕಾಲದಲ್ಲಿ ಹಲವಾರು ಒಳಿತುಗಳೊಂದಿಗೆ, ನಮ್ಮ ಸಮಷ್ಟಿ ಪ್ರಜ್ಞೆಯ ಕೊರತೆ, ಗ್ರಾಮ ಪಾರಿವಾರಿಕ ಜೀವನದ ಉಪೇಕ್ಷೆ ಮುಂತಾದ ಅವಿಚಾರ, ಕು-ವಿಚಾರ, ಅನಾಚಾರಗಳೂ ಸೇರಿ ಕೆಲವು ಕೆಡಕುಗಳೂ ಸಂಭಾವಿತಗಳೇ ಎಂಬಂತೆ ನುಸಿಳಿವೆ. ರಾಜಕೀಯವಾಗೆಂದು ಕರೆದುಕೊಳ್ಳುವ ಆಂಶಿಕ ಸ್ವಾತಂತ್ರ್ಯ ಪಡೆದು ೫೦ ವರ್ಷಗಳಿಗೂ ಮೇಲಾಗಿರುವ ನಮ್ಮೀ ಭರತಖಂಡದಲ್ಲಿ ಭಾಷೆ-ಭಾಷೆಗಳ ಮಧ್ಯೆ ನಂಟು ಆಂಟಿಕೊಳ್ಳಬೇಕಾಗಿದೆ. ಹಿಂದಿನಿಂದಲೇ ಋಷಿಮುನಿಗಳು ಸಾಧು ಸತ್‌ಪುರುಷರು, ಸಾಧ್ವಿಗಳು, ಪರದೇಶದಿಂದ ಬಂದ ಸಹೃದಯರಾದ ಯಾತ್ರಿಕರೂ ಸೇರಿ ಇಂತಹ ಸರ್ವರಿಂದಲೂ ''ಅಖಿಂಡ ಭರತ ಖಂಡ''ವೆನಿಸಿದೆ. ಈ ಭಾಗ್ಯಶಾಲಿ ದೇಶ. ಅನೇಕ ಧರ್ಮ, ಜಾತಿ, ಪಂಥ, ಕೋಮು ಇತ್ಯಾದಿಗಳು ವಿವಿಧವಾಗಿದ್ದರೂ ಎಲ್ಲವನ್ನೂ ಜೋಡಿಸುವ ಒಂದು ಮಹಾ ಕಲೆಯ ತವರು ಭೂಮಿಯಿದಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಒಂದೇ ಧರ್ಮ ಬಹುಳವಾಗಿದ್ದರೂ, ರಾಷ್ಟ್ರ ರಾಷ್ಟ್ರಗಳಾಗಿ ಒಡೆದು ಸಿಡಿದಿವೆ. ಕೇವಲ ವ್ಯಾಪಾರ ವಾಣಿಜ್ಯಗಳಿಗಾಗಿ ಜಗತ್ತು ಒಂದಾಗುವ ಮೊದಲು, ಚಿಕ್ಕ ಚಿಕ್ಕ ಗ್ರಾಮ ಸಮುದಾಯವೆಂಬ ಘಟಕಗಳು ಒಂದು ಸಂಸಾರವಾಗಬೇಕೆಂಬುದು, ವೈಜ್ಞಾನಿಕ ಅನ್ವೇಷಣೆಯೂ ಆಗಿದೆ. ಯಾತ್ರಾಧಾಮಗಳ ವೈಜ್ಞಾನಿಕ ಜೀರ್ಣೋದ್ಧಾರ, ಈ ನಿಟ್ಟಿನಲ್ಲೇ ನಡೆಯಬೇಕಾಗಿದೆ. ಈ ಪುನರ್‌ನಿರ್ಮಾಣ ಯುಗದಲ್ಲಿರುವ ನಾವೆಲ್ಲರೂ, ಮಾನವ-ಮಾನವನನ್ನು ಒಳ ಹೃದಯದಿಂದಲೂ ಜೋಡಿಸುವ 'ಶರಣರ ಸೌಮ್ಯ ಸಮನ್ವಯ' ಕಲೆಗೆ ಅನಿವಾರ್ಯವಾಗಿ ಒತ್ತು ಕೊಡಲೇ ಬೇಕಾಗಿದೆ. ''ನಿನಗಿಂತ, ನಾನೇನು ಕಡಿಮೆಯೇ?'' ಎಂಬ ಶಸ್ತ್ರಾಸ್ತ್ರ ಪೈಪೋಟಿ ಅಣುಬಾಂಬು ಇವೆಲ್ಲಾ, ಆಪದ್ ಧರ್ಮಗಳಷ್ಟೇ ಹೊರತು, ನಿತ್ಯಧರ್ಮಗಳಲ್ಲ. ''ಆ ದಾರಿಯಿಂದ ಸರ್ವನಾಶವೇ'' ಎಂಬ ನಿಚ್ಚಳ ಅರಿವನ್ನೂ ವಿಜ್ಞಾನ ತಂತ್ರಜ್ಞಾನಗಳ ಹೆಚ್ಚಳವೇ ಸೂಚಿಸುತ್ತಿದೆ. ಕೃಷ್ಣ ಭಾರತ ಮಹಾಯುದ್ಧವನ್ನು ''ಇದೇ ಕೊನೆಯ ಮಹಾ ಕಾಳಗ'' ಎಂದು, ಕಲಿಯುಗದ ಪ್ರಜೆಗಳೆಲ್ಲಾ ತಿಳಿಯಲೆಂದೇ, ನಡೆಸಿ, ತೋರಿಸಿಕೊಟ್ಟ ರಹಸ್ಯವನ್ನು ಆಳ್ವಾರ್ ಶರಣರು, ಬಯಲು ಪಡಿಸಿದ್ದಾರೆ. ''ರಣಛೋಡ್‌ಲಾಲ್'' ಕೃಷ್ಣನೇ, ಬಿಲ್ಲು ಬಾಣಗಳನ್ನು ಸಂನ್ಯಸಿಸಿದ ರಾಮನೇ ಇಂದು ಜಗತ್ತಿಗೆ ಬೇಕಾಗಿರುವುದು. ಇವೆಲ್ಲಾ ದಿನೇದಿನೇ ಎಲ್ಲರಿಗೂ ಸ್ಪಷ್ಟವಾಗಿಯೇ ತಿಳಿಯುತ್ತಿದೆ. ಆದರೂ ಪ್ರವಾಹ ಪತಿತರಾಗಿದ್ದೇವೆ. ಈ ಕ್ಲಿಷ್ಟ ವಿಷಮ ಸಂದರ್ಭವೇ ಆಳ್ವಾರ್ ಶರಣರ ಸಾಹಿತ್ಯದ ''ಪ್ರಾಕ್ಟಿಕಲ್ ಸ್ಟಡಿ''ಯಾಗುವ ಶಿಕ್ಷಣಕ್ಕೇ ಪ್ರಾಧಾನ್ಯ ನೀಡುತ್ತದೆ. ಅತ್ಯಾಧುನಿಕ ಭಾರತದ ಆಧ್ಯಾತ್ಮಿಕ ಜೀವಿಗಳು ಸಮಾಜಾSSಭಿಮುಖ್ಯದಿಂದ ಬಲು ತ್ಯಾಗ ಮಾಡಿತೋರಿಸಿದ, ಶಿಕ್ಷಣಪದ್ಧತಿ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೇ, ''ಗ್ರಾಮದಾನ'' ಎಂಬ ಪ್ರಯೋಗದಿಂದ ಸಿದ್ಧವಾಗಿದೆ. ಅದೇ ನಿಜವಾದ ದೇಶರಕ್ಷಣಾ ಮಾಧ್ಯಮ. ಅತ್ತ ಜೈಜಗತ್, ಇತ್ತ ಗ್ರಾಮದಾನ, ಗ್ರಾಮ ಪರಿವಾರ.

ಈ ದೃಷ್ಟಿಯಿಂದಲೂ ಈ ''ನೆರಳ್‌ಕಾರ'' ೪೮ ವರ್ಷಗಳಿಂದಲೂ ಈ ತಮಿಳುನಾಡಿನ ಶರಣ ಆಳ್ವಾರ್‌ಗಳ ಪಾದಶರಣನಾಗಿ ಅವರ ದಯೆಯಲ್ಲೇ ಮುಳುಗಿದವನೇ ಹೊರತು, ಈ ಕೃತಿಯಲ್ಲಿ ದಾಸನ ಕರ್ತೃತ್ವ ಏನೇನೂ ಇಲ್ಲ. ಹಳೆಗಾಲದ ಸದ್‌ವೃದ್ಧರಲ್ಲೂ, ಆಧುನಿಕ ಸರ್ವವಿಧ ಸಜ್ಜನರಲ್ಲೂ, ಯಥೋಚಿತ ಸ್ವಧರ್ಮದ ಅಂಚಿನಲ್ಲೇ ಸೇವೆಗೈದು ಅವರ ಪರಮಪಾವನ ಪ್ರಸಾದವನ್ನೇ ಅವರೆಲ್ಲರ ದಾಸಾನುದಾಸನಂತೆ, ತಮ್ಮೆಲ್ಲರಲ್ಲೂ ಹಂಚುವ ಒಂದೇ ಆಸೆಯಿಂದ ಈ ಕೃತಿಯನ್ನು ಅರ್ಪಿಸುತ್ತಿದ್ದೇನೆ. ಈ ಸುವರ್ಣ ಸಂದರ್ಭ ಭಾರತದ ವಾಸ್ತವಿಕ ಮುನ್ನಡೆಗೆ ಉಪಯುಕ್ತವಾದರೆ ನಾನು ಧನ್ಯ.

ನಾಗಪುರದ ಯಾರ ಮನೆಯಲ್ಲಿ ಸತ್ಸಂಗದ ಆ ಕಾಲಕ್ಕೇ ಇಲ್ಲಿನ ವಿಚಾರಾಂಕುರ ಮೊಳೆತಿತ್ತೋ ಆ ಪ್ರಾಸ್ತಾವಿಕಕಾರರಾದ, ಪದ್ಮಾ ಶ್ರೀನಿವಾಸನ್ ಇವರಿಗೂ ಗ್ರಂಥಪ್ರಕಾಶನಕ್ಕೆ ಆರ್ಥಿಕ ನೆರವು ನೀಡಿದ, ಅನೇಕ ಮಹನೀಯರಿಗೂ, ಮುದ್ರಣಕಾರರಾದ ನವಭಾರತ ಪ್ರೆಸ್ ಮಾಲೀಕರಾದ ಶ್ರೀ ಎಸ್. ಶ್ರೀಧರ್ ಮತ್ತು ಅವರ ಸಹಾಯಕ ಬಳಗಕ್ಕೂ, ಇನ್ನೂ ಬಗೆಬಗೆಯಾಗಿ ಸಲಹೆ ಸಹಾಯ ನೀಡಿರುವ ಎಲ್ಲ ಗೆಳೆಯರಿಗೂ, ಗೌರವ ಸಂಪಾದಕರಾಗಿರುವ ನನ್ನ ಹಿರಿಯಮಗ ಚಿರಂಜೀವಿ ಅರೆಯರ್ ಶ್ರೀರಾಮ ಶರ್ಮಾ ಅವರಿಗೂ, ಪ್ರಕಾಶನ ಆರಂಭಿಸಿದ್ದ ದಿವಂಗತ ಅರೆಯರ್ ತಿರುಮಲೈ ಶ್ರೀನಾಥ ಶರ್ಮಾ ಅವರಿಗೂ, ಕೃತಜ್ಞನಾಗಿದ್ದು ಈ ಬಿನ್ನಪವನ್ನು ಮುಗಿಸಿಕೊಳ್ಳುತ್ತೇನೆ.

ಮೊಮ್ಮಕ್ಕಳಾದ ಚಿರಂಜೀವಿ ಎಸ್.ಎನ್. ಸಿಂಹ, ಎ.ಎಸ್. ಪಾರ್ಥಸಾರಥಿ, ಚಿ|| ಸೌ|| ಎ.ಎಸ್. ರಾಧಿಕಾ, ಚಿರಂಜೀವಿ ಎ.ಎಸ್. ನಾರಾಯಣ್ ಮತ್ತು ಈ ಕಾರ್ಯಮಾಡುವಲ್ಲಿ ನನ್ನ ಯೋಗಕ್ಷೇಮ ನೋಡಿಕೊಂಡಿರುವ ನನ್ನ ಹಿರಿಯಸೊಸೆ ಚಿ|| ಸೌ|| ಕಸ್ತೂರಿ ಅವರಿಗೂ ಆಶೀರ್ವಾದಗಳು.

ವೆಂಕಟೇಶ ಜಯನ್ತೀ ಮತ್ತು ನಮ್ಮಾಳ್ವಾರ್ ಜಯಂತಿ
ಕ್ರಿ.ಶ. ೨೦೦೧ ಕ್ರಿ.ಶ. ೨೦೦೫

ತಿರುನಾರಾಯಣಪುರಂ ಅರೈಯರ್

ಆಳ್ವಾರ್ ಶರಣರ ತಿರುಪತಿ ತಿಮ್ಮಪ್ಪ

ಮಂಗಳಾಶಾಸನ

ದಾಸ್ಯ ಭಕ್ತಿಮಾರ್ಗದಲ್ಲಿ ಸೇವಕನಾದ ಈ ಜೀವಾತ್ಮನು ಸರ್ವ ಪ್ರಕಾರದಿಂದಲೂ ತನ್ನ ಸ್ವಾಮಿಯಾದವನಿಗೇ, ಹೆಚ್ಚಳ ಬರುವಂತೆ ವರ್ತಿಸಬೇಕಷ್ಟೆ. ತನ್ನ ಸುಖಸ್ವಾರ್ಥವನ್ನೇ ಲಕ್ಷ್ಯವಾಗಿಟ್ಟುಕೊಂಡು ಸೇವೆ ಮಾಡುವವನು ಉತ್ತಮ ಸೇವಕನಲ್ಲ.

"ಪರಗತ ಅತಿಶಯ + ಆಧಾನೇಚ್ಛಯಾ ಉಪಾದೇಯತ್ವಂ ಏವ ಯಸ್ಯ ಸ್ವರೂಪಂ, ಸಃ "ಶೇಷಃ" ಪರಃ, "ಶೇಷೀ"

"ಶೇಷಃ ಪರಾರ್ಥತ್ವಾತ್" ಎಂಬ ಪೂರ್ವಮೀಮಾಂಸಾಕಾರರಾದ ಮಹರ್ಷಿ ಜೈಮಿನಿಯವರ ಈ ಸೂತ್ರಕ್ಕೆ ರಾಮಾನುಜರು ಮೇಲಿನಂತೆ ಅರ್ಥವನ್ನು ಸ್ಪಷ್ಟವಾಗಿ ವಿಶ್ಲೇಷಿಸಿರುವರು. ಇದೇ "ಪಾರತಂತ್ರ್ಯವೇ" ದಾಸನ ನಿಷ್ಕಷ್ಟ ಸ್ವರೂಪವೆಂಬುದು ಇಲ್ಲಿ ಕೊಟ್ಟಕೊನೆಗೂ 'ಅಂತರಂಗವಾಗಿ ನಿಲ್ಲುವ ಗಟ್ಟಿಯಾದ ಗುಟ್ಟು'. ಮಹಾತ್ಮಾಗಾಂಧಿಯವರೂ "ನನ್ನಂತಹ ನೂರಾರು ಜನ ಕ್ಷಯಿಸಲಿ, ಸತ್ಯಕ್ಕೆ ಜಯವಾಗಲಿ" ಎನ್ನುತ್ತಲೇ ಇದ್ದರು.

ಆಳ್ವಾರ್ ಶರಣರು ೧೨ ಮಂದಿ:-

೧.	'ಪೊಯ್‌ಹೈಆಳ್ವಾರ್'	ಕೊಳದ ಪೊಯ್ಗಣ್ಣ
೨.	'ಪೂದತ್ತಾಳ್ವಾರ್'	ಬಳ್ಳಿಯ ಬೂತಣ್ಣ
೩.	'ಪೇಯಾಳ್ವಾರ್'	ನೈದಿಲ ಪೇಯಣ್ಣ
೪.	'ತಿರುಮಳಿಶೈಯಾಳ್ವಾರ್'	ಮೇದರ ಮಳಿಗಯ್ಯ
೫.	"ಶಠಕೋಪ"ರೆಂಬ "ನಮ್ಮಾಳ್ವಾರ್"	ಒಕ್ಕಲಿಗರ ಮಾರಪ್ಪ
೬.	ಕ್ಷತ್ರಿಯ 'ಕುಲಶೇಖರ ಆಳ್ವಾರ್'	ಅರಸರ ಶೇಖರಯ್ಯ
೭.	ಭಟ್ಟನಾಥ 'ಪೆರಿಯಾಳ್ವಾರ್'	ಹಾರ್ವರ ಪೆರಿಯಯ್ಯ
೮.	ಇವರ ಮಗಳು 'ಗೋದಾದೇವಿ' 'ಆಂಡಾಳ್'	ಗೋದಕ್ಕ ಆಂಡಾಳಕ್ಕ
೯.	ಭಕ್ತಾಂಘ್ರಿರೇಣು 'ತೊಂಡರಡಿಪ್ಪೊಡಿಯಾಳ್ವಾರ್'	ತೊಂಡರ ನಾರಣಯ್ಯ
೧೦.	ತಿರುಕ್ಕುಲದ 'ತಿರುಪ್ಪಾಣಾಳ್ವಾರ್'	ಪೊಲೆಯರ ಪಾಣಪ್ಪ
೧೧.	ನಮ್ಮಾಳ್ವಾರಲ್ಲೇ ಸೇರುವ 'ಮಧುರಕವಿ ಆಳ್ವಾರ್'	ಮದುರಣ್ಣ
೧೨.	'ತಿರುಮಂಗೈಯಾಳ್ವಾರ್'	ಬೇಡರ ನೀಲಪ್ಪ

ಇವರಲ್ಲಿ ಎಲ್ಲಾ ಶರಣರೂ "ದೇವರೇ! ನೀನು ಚೆನ್ನಾಗಿರಪ್ಪಾ" ಎಂಬುದನ್ನೇ ಮನದಲ್ಲಿಟ್ಟು ಮಂಗಳಾssಶಾಸನಪರರೇ ಆದರೂ ಪೆರಿಯಾಳ್ವಾರ್ ಮೊಮ್ಮದಲಿನಿಂದಲೇ ತಮ್ಮ ಸ್ವಾರ್ಥಕ್ಕೇ ದೇವರ ದರ್ಶನವನ್ನಾಗಲಿ ತಮ್ಮ ಆನಂದಕ್ಕಾಗಿ, ಭಗವಂತನ ಅನುಭವವನ್ನಾಗಲಿ, ಕೈಂಕರ್ಯವನ್ನಾಗಲಿ ಬೇರೆಯವರಂತೆ ಬೇಡಿಲ್ಲ. ಆ ಸಂದರ್ಭ ಹೀಗಿದೆ.

ಸರ್ವೇಶ್ವರನು ಈ ಭಟ್ಟನಾಥರ ಮೂಲಕ "ಪರತತ್ತ್ವ" ಯಾವುದೆಂಬುದನ್ನು ನಿರ್ಣಯ ಮಾಡಿಸಿ, ಅವರ ಸನ್ಮಾನ ವೈಭವದ, ಆನೆಯ ಮೇಲಿನ ಮೆರವಣಿಗೆಯನ್ನು ತಾನೂ ಕಣ್ಣಾರ ನೋಡುವ ಕುತೂಹಲದಿಂದ ಶ್ರೀ ಭೂ ದೇವಿಗಳೊಡನೆ

ಗರುಡ ವಾಹನಾssರೂಢನಾಗಿ ನಭೋಮಂಡಲದಲ್ಲಿ ದಯಮಾಡಿಸಿದ್ದಾನೆ! ಅಂತಹ ಪರಮಾತ್ಮನನ್ನು ಸಂದರ್ಶಿಸಿದ ಈ ಭಟ್ಟರಿಗೆ ಪ್ರೀತಿಪ್ರಕರ್ಷ ಉಮ್ಮಳಿಸಿತು. "ಆಹಾ! ಎಂತಹ ಅತ್ತಣದ ದಿವ್ಯ ವಸ್ತು, ಈ ಮರ್ತ್ಯ ಪ್ರಕೃತಿ ಮಂಡಲಕ್ಕೆ ಅದೇ ದಿವ್ಯಮಂಗಳ ವಿಗ್ರಹದೊಂದಿಗೆ ಸಪರಿವಾರವಾಗಿ ಬಂದು ಬಿಟ್ಟಿತಲ್ಲಾ! ಇದಕ್ಕೇನು ಕೇಡೊದಗಿ ಬಿಡುವುದೋ! ಎಂದು ಭಯ ಪಡುತ್ತಾರೆ. ಇಲ್ಲಿಯವರ ಕೆಟ್ಟ ಕಣ್‌ದೃಷ್ಟಿ ಬಿದ್ದು ಯಾವೊಂದು ಅವದ್ಯವೂ ಸ್ವಾಮಿಗೆ ತಟ್ಟದಿರಲೆಂದು ಸರ್ವಸಮರ್ಥನಿಗೇ ಮಂಗಳ ಕೋರುತ್ತಾರೆ. ಇದನ್ನೇ "ಮಂಗಳಾssಶಾಸನ" ಎನ್ನುವುದು. ಆಗಿನ ಸಂದರ್ಭಕ್ಕೆ ಭಟ್ಟನಾಥರ ಬಾಯಿಂದ ಸ್ವಯಂ ಭಗವತ್ ಕೃಪಾssಧೀನವಾಗಿಯೇ ಹೋರಟ "ಜಯಕಾರದ ತಮಿಳು ಹಾಡು" ಹೀಗಿದೆ.

ತಮಿಳ್ ತಿರಳ್

ಪಲ್ಲಾಣ್ಡು ಪಲ್‌ಆಣ್ಡು ಪಲ್ ಆಯಿರತ್ತಾಣ್ಡು ಪಲಕೋಟಿ ನೂರ್ ಆಯಿರಮ್
ಮಲ್ಲಾಣ್ಡ ತಿಣ್ ತೋಳ್ ಮಣಿವಣ್ಣಾ ಉನ್ ಶೇವಡಿ ಶೆವ್ವಿ ತಿರುಕ್ಕಾಪ್ಪ್!

ಕನ್ನಡ ನೆರಳ್

ಪಲವರ್ಷ! ಪಲವರ್ಷ! ಪಲ್ ಸಾಸಿರ ವರ್ಷ ಪಲ್‌ಕೋಟಿ ನೂರ್ ಸಾಸಿರಂ
ಮಲ್ಲಾಣ್ಡ ತಿಣ್‌ತೋಳ ಮಣಿಬಣ್ಣಾ! ನಿನ್ ಬಲ್ಲಾಳ ಕೆಂದಡಿಯ ಕೆಂಪಿಗೇ ಸಿರಿಕಾಪು!

ಪಲ್ ಆಂಡ್ = ಹಲ ವರುಷ. ಪಲ್ಲಾಂಡ್ = ಹಲವಾರ್ ವರುಷ, ಪಲ್ ಆಯಿರತ್ತು. ಆಂಡು = ಪಲಸಾಸಿರ ವರುಷ. (ಅನನ್ತ ಕಾಲ. ಯಾವೊಂದೂ ಅಮಂಗಳವಿಲ್ಲದೆ ಮಂಗಳವೇ ಹೆಚ್ಚುತ್ತಿರುವಂತೆ) ನೀನು ಯಾರಿಗೂ ಎಂತಹ ಸಂದರ್ಭದಲ್ಲೂ ಸೋಲದೆ ಜಯಶಾಲಿಯೇ ಆಗುವಂತೆ. ಪಲಕೋಟಿ ನೂರಾಯಿರಮ್ = ಹಲಕೋಟಿ ಲಕ್ಷವರ್ಷ! ಅನೇಕ ಅಸಂಖ್ಯ ಕೋಟಿ ಕೋಟಿ ಕಾಲವೂ ಅನೇಕ ಕೋಟಿಗಳ ಮುಗಿಯದ ಅನೇಕ ಲಕ್ಷೋಪಲಕ್ಷ ಸಂವತ್ಸರವೂ ಅಂದರೆ ಅನನ್ತ ಕಾಲದವರಿವಿಗೂ. ಮಲ್ = ಚಾಣೂರ ಮುಷ್ಟಿಕ, ತೋಸಲ ಮುಂತಾದ, ದುಷ್ಟ ಕಂಸಪ್ರೇರಿತರಾದ ಜಟ್ಟಿಗಳನ್ನು. ಆಂಡ = ಝೂಡಿಸಿದ. ತಿಣ್‌ತೋಳ್ = ದೃಢವಾದ ಆಜಾನುಬಾಹುವೇ! ಮಣಿವಣ್ಣಾ = ಇಂದ್ರನೀಲ ಮಣಿಗಿಂತಲೂ ಹೆಚ್ಚು ಸುಂದರವಾದ ಶ್ರೀಮೂರ್ತಿಯ ಕಾಂತಿಯಾಂತವನೇ! ಉನ್ = ನಿನ್ನ. ಶೇವ್ ಅಡಿ = ಕೆಂಪಗೆ ಕ್ಷೇಮವಾದ ಅಡಿಗಳ. ಶೆವ್ವಿ = ಚೆಲುವಿನ ಅಬಣ್ಣಕ್ಕೆ. ತಿರುಕ್ಕಾಪ್ಪ = ಇದೋ ಈ ಅತ್ಯಂತ ಪರತಂತ್ರ ದಾಸನ ಶ್ರೀರಕ್ಷೆಯಿರಲಿ!

ಅತ್ತಣ ಶುದ್ಧ ಸತ್ವದ ಪರಮಪದದ ಅಪ್ರಾಕೃತ ದಿವ್ಯ ಮಂಗಳ ವಿಗ್ರಹದೊಂದಿಗೇ ಸರ್ವೇಶ್ವರನನ್ನು ಈ ಮಿಶ್ರ ಪ್ರಾಕೃತ ಲೋಕದಲ್ಲಿ ಸಂದರ್ಶಿಸಿದ ಈ ಆಳ್ವಾರರಿಗೆ ವಿಶಿಷ್ಟ ಅಸಾಧಾರಣವಾದ ಪ್ರೇಮಾತಿಶಯ ಉಕ್ಕಿಬರಲು ಆತನ ಶಕ್ತಿ ಸಾಮರ್ಥ್ಯಾದಿ ಸಕಲ ಪರತ್ವಧರ್ಮಗಳೂ ಮರೆತೇ ಹೋದವು. ಶ್ರೀಮೂರ್ತಿಯ ಸೌಂದರ್ಯ, ಸೌಕುಮಾರ್ಯಾದಿ ರೂಪಗುಣಗಳೇ ಹೆಚ್ಚಾಗಿ ಗೋಚರಿಸೋಣ, ಆಹಾ! ಅವುಗಳೆಲ್ಲಾ ಈ ರಜಸ್ತಮಃ ಪ್ರಚುರವಾದ ಪ್ರಾಕೃತ ಮಂಡಲದಲ್ಲಿ ಏನೊಂದು ಅಪಾಯ ಕಾಣದೆ ಅನವರತ ಮೇಲ್ಮೇಲೆ, ಕುಂದಿ ಬಾಡಿಹೋಗದಂತೆ ವೃದ್ಧಿ ಹೊಂದಲಿ, ಎಂದು ಅಸ್ಥಾನೇ ಸ್ನೇಹಾssತಿರೇಕದಿಂದ "ಪಲ್ಲಾಂಡ್" ಹಲವರುಷ ಸ್ವಾಮಿ ಚೆನ್ನಾಗಿರಬೇಕೆಂದು, ಹಾಡಿದ ಇವರು ಆಳ್ವಾರ್‌ಗಳಲ್ಲೆಲ್ಲಾ "ಪೆರಿಯಾಳ್ವಾರ್" "ಹಿರಿಶರಣರೇ" ಎಂದು ಸಂಭಾವನಾ ಪಾತ್ರರಾದರು.

ಒಟ್ಟಿನಲ್ಲಿ ಈ ಮಂಗಳಾssಶಾಸನದ ಭಾವವೆಂದರೆ, ಚಿಕ್ಕವೊಗುವೊಂದು ಬೆಂಕಿ ಹತ್ತಿರವಿರುವ ಸಂದರ್ಭದಲ್ಲಿ "ಬೆಂಕಿ! ಬೆಂಕಿ!" ಎಂದು ತಾಯಿ ಕರುಳು ಗಾಬರಿ ಪಡುವಂತೆ ಈ ಪ್ರೇಮಳ ಸಂತರು "ಪಲ್ಲಾಂಡ್ ಪಲ್ಲಾಂಡ್" ಎಂದು ಅನೇಕ ಸಲ ಎಡೆಬಿಡದೆ ಅರಚುತ್ತಾರೆ! ಇವರ ಹಾರ್ದ ಶಕ್ತಿಯೇ ಮೇಲ್‌ಮೊಗವಾಗಿ, ಆಗತಾನೇ ಅದೇ ಪಾಂಡ್ಯರಾಜನ ಆಸ್ಥಾನದಲ್ಲಿ "ದೇವರ ಪರಾತ್‌ಪರತ್ವ"ವನ್ನೇ ಎಲ್ಲರೂ ಒಪ್ಪುವಂತೆಸಗಿದ, ಬುದ್ಧಿಶಕ್ತಿಯೆಲ್ಲಾ ಕೆಳಮೊಗವಾಯಿತು! ನೂರ್ ಆಯಿರಂ, ನೂರ್ ಆಯಿರಮುಂ "ಶೆವ್ವಡಿ" ಎಂದೂ ಪಾಠಾನ್ತರಗಳೂ ಇವೆ.

ಉಳಿದ ಆಳ್ವಾರ್ ಶರಣರೂ ಒಟ್ಟು ಸ್ವರೂಪ ಪಾರತಂತ್ರ್ಯದ ತಾತ್ಪರ್ಯದಲ್ಲಿ ನೆಲೆನಿಂತವರಾದುದರಿಂದ, ಇವರನ್ನೇ ಅನುಸರಿಸುವ ಸದಾಚಾರ್ಯರೆಲ್ಲರೂ ಮಂಗಳಾssಶಾಸನವನ್ನೇ ಮೇಲ್‌ಮಟ್ಟದ ಜೀವಾತ್ಮ ಸ್ವರೂಪ ಹಾಗೂ ಪುರುಷಾರ್ಥವನ್ನಾಗಿಯೇ ಭಾವಿಸುವವರೇ. ಅಂತೆಯೇ ದೇವರಿಗೆ "ಮಂಗಳಾssರತಿ" ಎಂದೇ ಸರ್ವತ್ರ ಪ್ರಸಿದ್ಧವಾಗಿದೆ. ಶರಣರದು ಪ್ರತ್ಯೇಕವಾದ ಒಂದು

ಪಂಥ, ಸಂಪ್ರದಾಯ ಎನ್ನುವುದೆಲ್ಲಾ, ಅವರ ಹೃದಯ ವೈಶಾಲ್ಯಕ್ಕೆ ಅಪಚಾರವೆಂದೇ ತಿಳಿಯಬೇಕು. ಯಾವೊಂದು ಹಣೆಪಟ್ಟಿಗೂ ಒಳಗಾಗದ ಪಕ್ಷಾತೀತರಿವರು. ಈ ಒಂದು ಶ್ಲೋಕವೂ ಇಲ್ಲಿ ಮನನೀಯ. ಅದು ಸಂಸ್ಕೃತ ಭಾಷೆಯಲ್ಲಿ ಹೀಗಿದೆ.

ಮಂಗಳಾಶಾಸನ ಪರೈಃ ಮದಾಽಽಚಾರ್ಯ ಪುರೋಗಮೈಃ|
ಸರ್ವೈಶ್ಚಪೂರ್ವೈರಾಚಾರ್ಯೈಃ ಸತ್‌ಕೃತಾಯಾಸ್ತು ಮಙ್ಗಳಮ್||

ಕನ್ನಡ ನೆರಳ್

ಶೋಭನ ಕೋರ್ಪುದೆ ಯಾರಿಗೆ ಮುಖ್ಯವೋ ಅಂತಹ ನಮ್ ಪೂರ್ವಾಚಾರ್ಯರೆ ಮೊದಲಹರು
ಯಾವನಂ ಪ್ರೇಮೋತ್ಕರ್ಷದಿಂ ಸತ್ಕರಿಪರೋ ಅಂತಹ ಚೆಲುವಗೆ ಮಂಗಳಮಸ್ತು!

ಮೇಲೆ ತಿಳಿಸಿರುವ ಮೊದಲ ಹಾಡಿನ ಭಾಗವನ್ನು ಎಲ್ಲಾ ಆಳ್ವಾರ್ ಪಾಶುರಗಳಿಗೂ ಅಂತ್ಯ ಧ್ರುವಾ ಪಲ್ಲವಿಯಂತೆ ಬಳಸಿದರೆ, ಅವರ ಕೋಮಲ ಹೃದಯದ ಸ್ಪರ್ಶ ನಮಗೆಲ್ಲರಿಗೂ ಚೆನ್ನಾಗಿ ಆಗುವುದು. ಯಾವ ಯಾವ ಆಳ್ವಾರ್ ಶರಣ ಸಂತರು, ಯಾವ ಯಾವ ದಿವ್ಯದೇಶಗಳ ಅರ್ಚಾಮೂರ್ತಿಗಳಿಗೆ, ಯಾವಯಾವ ರೀತಿಯಲ್ಲಿ ಮಂಗಳಾಽಽಶಾಸನ ಮಾಡಿದ್ದಾರೆಂಬುದೇ ಮುಂದಿನ ವಿಷಯ. ಶಿಷ್ಟರು, ದೇವರದರ್ಶನ ಮಾಡಿದವರನ್ನು "ದರ್ಶನವಾಯಿತೇ" ಎಂದು ಕೇಳರು. "ಮಂಗಳಾಽಽಶಾಸನವಾಯಿತೇ" ಎಂಬ ವಾಕ್ ಸರಣಿಯವರೇ! ಇದು ಮುಂದೆಲ್ಲಾ ಪಾಠಕರ ಮನಸ್ಸಿನಲ್ಲಿರಲಿ. "ಸೋಬಾನೆ" ಜಾನಪದ ಹಾಡುಗಳೂ ಒಳ್ಳೆಯ ಮಂಗಳಾಶಾಸನಕ್ಕೆ ಅನುರೂಪವಾದವುಗಳೇ. ಈ ಮಂಗಳಾಶಾಸನವು "ಆಟ್ಪಾರ್ ಶರಣರ ತಿರುಪತಿ ತಿಮ್ಮಪ್ಪ" ಗ್ರಂಥದ ಕೊನೆಯಲ್ಲೂ ತಿಮ್ಮಪ್ಪನ ಅವತಾರ ಮಾಸದ ಕನ್ಯಾಶ್ರಾವಣಗಳಲ್ಲಿ ಎಲ್ಲೆಲ್ಲೂ ಭಕ್ತರ ಧರ್ಮಭಿಕ್ಷೆಯ ಜೊತೆ ಕೇಳಿ ಬರುವ **"ಶ್ರೀನಿವಾಸಾಯ ಮಙ್ಗಳಂ"** ಇಂದ ಪೂರ್ಣಗೊಳ್ಳುವುದನ್ನು ಸಹೃದಯರು ಗಮನಿಸಬಹುದು.



ಪೊಯ್‌ಹೈಯಾಳ್ವಾರ್

ಅವತಾರಿಕೆ ಮುದಲ್ ತಿರುವಂದಾದಿ

ಮತ್ತೆ ಮತ್ತೆ ಹುಟ್ಟಿ ಸಾಯುವ ಈ ಸಂಸಾರಿ ಚೇತನರನ್ನು ಪುನರ್‌ಜನ್ಮದ ಕಷ್ಟ ಕೋಟಲೆಗಳು ಬಾರದಂತೆ, ಇಲ್ಲಿಂದ ಮೇಲೆತ್ತಿ ಸಲಹುವ ಸಲುವಾಗಿ, ರಮಾರಮಣ ಸಕಲ ಕಲ್ಯಾಣ ಗುಣನಿಧಿ ಸರ್ವೇಶ್ವರ ವಿನಿರ್ಮಲ ವಿಜ್ಞಾನ ಭೂಷಿತರಾದ ಆ ದಿವ್ಯದ ನಿತ್ಯಸೂರಿಗಳನ್ನು ಆಳ್ವಾರ್‌ಗಳ ರೂಪದಲ್ಲಿ ಅವತಾರ ಮಾಡಿಸಿದ. ಅಂತಹವರಲ್ಲಿ ಮೊಟ್ಟಮೊದಲಿಗರೇ ಮೊದಲಾಳ್ವಾರುಗಳು. ಪೊಯ್‌ಹೈಯಾರ್, ಪೂದತ್ತಾರ್, ಪೇಯಾರ್. ಈ ಮೂವರು ಬೇರೆ ಬೇರೆ ದಿವ್ಯ ದೇಶಗಳಲ್ಲಿ, ಕಾಣಿಸಿಕೊಂಡ ಅಯೋನಿಜರು. ಇವರಿಗೆ ಭಗವಂತನ ಸಕಲರ ಲೇಸನ್ನೇ ಬಯಸುವ ಶುಭ ಗುಣಗಳ ಅನುಭವವೇ ಜೀವನಾಽಽಧಾರ. ಹಾಗೂ ಚೆಪ್ಪರಿಸಲ್ಪಡುವ ಜೀವನ ಭೋಗ್ಯ. ಅಲ್ಪಾಽಽಹಾರವೂ ಇಲ್ಲದೆ ಜೀವಶಕ್ತಿಯಿಂದಲೇ ಮಾನವ ಜೀವಿಸಬಹುದೆಂದು "ಪ್ರಕೃತಿ, ನಿಸರ್ಗ ಜೀವನದ" ಸಂಶೋಧಕ ಡಾ|| ಎಹರೆಟ್ ತನ್ನ ಅನುಭವವನ್ನೇ ಹೇಳಿದ್ದಾನೆ. ಆದುದರಿಂದ "ಇವೆಲ್ಲಾ ಬರೀಪವಾಡ, ಬುಡ ಮೇಲಿಲ್ಲದ್ದು" ಎಂದು ಯಾರೂ, ಅನುಭವದ ಆ ಮಟ್ಟಕ್ಕೆ ಹೋಗದ ಅತಪಸ್ವಿಗಳು ಹೇಳುವುದು ಅಷ್ಟೊಂದು ಶೋಭನವಲ್ಲ. ಪರಮ ತಪಶ್ಶಬ್ದವಾಚ್ಯನಾದ ಪರಮಾತ್ಮನೇ ಇಂತಹ ಪ್ರೇಷಿತರನ್ನು ಕಟಾಕ್ಷಿಸಿರುವಾಗ, ಇಂಥವರನ್ನು ಕೇವಲ ನಮ್ಮ ಯಥಾಸ್ಥಿತ ಭೌತಿಕ ಸೀಮಿತ ಮನಸ್ಸಿನಿಂದಲೇ ಅಳೆಯಲ್ಯಾಗದು. ಶ್ರದ್ಧೆ, ವಿನಯಗಳೇ, "ಪ್ರಗತಿಗೆ ಮುಖ್ಯ ಕುರುಹು! ಅತಿ ಮಾನಸಸ್ಥಿತಿ!" ಒಂದಿರುವುದನ್ನು ಯೋಗಿ ಅರವಿಂದರೂ ಕಂಡೇ ಒಪ್ಪಿದ್ದಾರೆ. ಈ ಶರಣತ್ರಯರೂ ದಿನೇ ದಿನೇ ಪ್ರವರ್ಧಮಾನರಾಗಿ, ದೇವರು ತಾನೇ ಇಚ್ಛಿಸಿ ನಿತ್ಯವಾಸ ಗೈದಿರುವ ಪಾಕ್‌ಸ್ಥಾನಗಳೇ ಅಂದರೆ ಪವಿತ್ರ ಯಾತ್ರಾಧಾಮಗಳೇ. ಅಂಥ ದಿವ್ಯ ದೇಶಗಳನ್ನೆಲ್ಲಾ ಸೇವಿಸುತ್ತಾ ಭೂಮಂಡಲದಲ್ಲೆಲ್ಲಾ ಪಾದ ಬೆಳಸಿ ಗ್ರಾಮೈಕರಾತ್ರರಾಗಿ ಸುತ್ತುತ್ತಲೇ ಇದ್ದವರು. ಶರಣರು ಒಂದೆಡೆಗೆ ಅಂಟಿಕೊಳ್ಳುವವರಲ್ಲ ಜಂಗಮರು.

ಒಮ್ಮೆ ಜಗದೀಶ್ವರ ಇವರನ್ನು ಇನ್ನೂ ವಿಶೇಷವಾಗಿ ಅನುಗ್ರಹಿಸಬೇಕೆಂಬ, ತನ್ನ ಸಂಕಲ್ಪದಿಂದಲೇ ಗಾಢಾಂಧಕಾರ ಬಂಧುರವಾಗುವಂತೆ ಜಡಿಮಳೆ ಹುಯ್ಯಿಸುತ್ತಲೇ ಇದ್ದನು. ಇವರ ಮೇಳನದಿಂದ, ಒಳ್ಳೆ ದಿವ್ಯ ಪ್ರಬಂಧ 'ಆದಿತಮಿಳ್' ಪವಿತ್ರ ಕೃತಿ ಜಗತ್ತಿನ ಉಪಕಾರಕ್ಕಾಗಿ ಆಗಬೇಕೆಂಬುದೇ ಒಡೆಯನ ಇಷ್ಟವಿದ್ದುದು. ಅರ್ಚಾವತಾರದಲ್ಲಿರುವ ತಾನೂ ಅವರ ದರ್ಶನ ಮಾಡುವ ಅತ್ಯರ್ಥಪ್ರೇಮವೂ ಇವರ ಬಗ್ಗೆ ಅತನದಿತ್ತು! ಉತ್ತರ ಆರ್ಕಾಟ್ ಜಿಲ್ಲೆಯ "ತಿರುಕ್ಕೋವಲೂರ್" ಎಂಬ ಊರಿನ ಗೋಪಾಲಕೃಷ್ಣನ ಗುಡಿಯ ಒಂದು ಕಿರಿದಾಣದಲ್ಲಿ ಮೊದಲು ಹೊಕ್ಕವರೇ "ಪೂಯ್‌ಹೈಯಾರ್". ಹಾಗೆಯೇ ಮಲಗಿದರು, ಅವರಿಗಷ್ಟೇ ಸರಿಹೊಂದುವ ಜಾಗವದು. ಎರಡನೆಯವರು ಮಳೆಯ ಹೊಡೆತಕ್ಕೆ ಸಿಕ್ಕಿ, ಏಕಾಂತವಾದ ಅಲ್ಲಿಗೇ ಬಂದು "ಟಕ ಟಕ" ಸದ್ದು ಮಾಡಿದರು "ಪೂದತ್ತಾಳ್ವಾರ್". ಒಳಗಿದ್ದವರು "ಬರ್ರೀ! ಒರ್ವ ಮಲಗುವ ಜಾಗದಲ್ಲಿ ಈರ್ವರು ಕೂರುವಾ!" ಎಂದು ಒಳಕ್ಕೆ ಸ್ವಾಗತಿಸಿ ಕುಶಲ ಪ್ರಶ್ನೆ ಮಾಡುತ್ತಿರುವಾಗಲೇ, ಮೂರನೆಯವರು "ಪೇಯಾಳ್ವಾರ್ ಇದು ಚಿಕ್ಕ ಸ್ಥಳ, ನಾನು ಬೇರೆಡೆ ನೋಡುತ್ತೇನೆ" ಎಂದಾಗ "ಇದೇನಪ್ಪಾ ಹೀಗೆ ಹೇಳುವಿರಿ?" "ಇಬ್ಬರು ಕೂರುವ ಸ್ಥಳದಲ್ಲಿ ಮೂವರೂ ನಿಂತೇ ಕಾಲಕಳೆಯುವ!" ಎಂದು ಅವರನ್ನೂ ಒಳಗೇ ಸೇರಿಸಿಕೊಂಡರು. ಇವರ "ಇರುವುದನ್ನೇ ಹಂಚಿ ಅನುಭವಿಸುವ ಈ ಮಹಾಗುಣ" ಕಂಡು, ಆ ದಿವ್ಯದೇಶದ ಸ್ವಾಮಿ ಆ ದಟ್ಟ ಇರುಳಿನಲ್ಲಿ ನಾಲ್ಕನೆಯವನೂ ನೆರಗಿ ತುರುಕಿಕೊಂಡ! ಆತನೇ ಅಲ್ಲಿನ ತ್ರಿವಿಕ್ರಮ ಮೂರ್ತಿ, ಮೂವರಿಗೂ ಮೊಟ್ಟಮೊದಲಿಗೇ ದರ್ಶನ ನೀಡಲಿಲ್ಲ. ಈ ಮುನಿತ್ರಯರ, ಪರಭಕ್ತಿ, ಪರಜ್ಞಾನ, ಪರಮಭಕ್ತಿಗಳ ಸೊಗಡನ್ನು ತಾನೂ ಅನುಭವಿಸಿ ಜಗತ್ತಿಗೇ ಆ ಅನುಭವದ ಉತ್‌ಪೂರವನ್ನು ನಮಗೆಲ್ಲಾ ಕರುಣಿಸುವಂತೆಸಗಿದ. ದೀಪ ಹಚ್ಚಿನೋಡಲು ಅವರ ಬಳಿ ಏನೂ ಬಾಹ್ಯ ಸರಕರಣೆಗಳಿಲ್ಲದ್ದೇ ಕಾರಣವಾಗಿ ಅದೇ ಒಂದು ಭಾಗ್ಯವಾಯಿತು. ಸಂಭ್ರಮ ಆಶ್ಚರ್ಯ ಸಂತೋಷಗಳಿಂದ ಮೈನವಿರ್ ಆಂತರು.

'ಪೊಯ್‌ಹೈ' ಮುನಿಗಳು ಈ ವಿಶಾಲವಾದ ನೆಲವನ್ನೇ ಹಣತೆಯನ್ನಾಗಿಸಿ, ಕಡಲನೀರನ್ನೇ ತುಪ್ಪವೆಂದು ಭಾವಿಸಿ ಸೂರ್ಯನನ್ನೇ ದೀಪವಾಗಿ ಸ್ವಾಮಿಗೆ ಆರತಿಯ ಮಾನಸಾರಾಧನ ಗೈದರು!, ಎರಡನೆಯ "ಭೂತಮುನಿಗಳು" ಪ್ರೇಮವನ್ನೇ ಹಣತೆಯಾಗಿ ನೆನೆದು, ಅದೇ ಪ್ರೀತಿಯ ಮುನ್ನಡೆಯಾದ ಔತ್ಸುಕ್ಯ - ಉತ್ಸಾಹದ - ಕುತೂಹಲವನ್ನೇ ಆಜ್ಯವನ್ನಾಗಿಸಿ, ಅದಕ್ಕೂ ಮೀರಿದ ಚಿಂತನೆಯೆಂಬ ಬತ್ತಿ ಹಾಕಿ ಜ್ಞಾನ ದೀಪವನ್ನೇ ಹಚ್ಚಿದರು! ಮೂರನೆಯ 'ಪೇಯಾಳ್ವಾರ್' ಹಿಂದಿನ ಈರ್ವರೂ ಹಚ್ಚಿದ, ಲೋಕವಿಲಕ್ಷಣವಾದ ಆ ದೀಪಗಳಿಂದ ಅಜ್ಞಾನವೆಂಬ ಕತ್ತಲು ನಿಶ್ಶೇಷವಾಗಿ ಸವೆಯಲಾಗಿ ಆಗಲೀಗ ಸ್ವಾಮಿಯ ದಿವ್ಯ ಕಲ್ಯಾಣತಮ ರೂಪ ಸೌಂದರ್ಯ, ಲಾವಣ್ಯಾದಿಗಳನ್ನು ಬ್ರಹ್ಮಸ್ವರೂಪದೊಂದಿಗೇ ಪರ ವ್ಯೂಹ ವಿಭವ ಅಂತರ್ಯಾಮಿ ಸ್ಥಿತಿಗಳನ್ನೆಲ್ಲಾ ವಿಶದ, ವಿಶದತರ, ವಿಶದತಮನಾಗಿ, ಸಾಕ್ಷಾತ್ಕರಿಸಿ ಸ್ವಾನುಭವವನ್ನು ಉದ್ಗರಿಸಿದರು. ಮೂವರೂ ಹೀಗೆ ಪ್ರಬುದ್ಧರಾಗಿ ಮೂರು ದಿವ್ಯ ಪ್ರಬಂಧ ಹಾಡಿದರು.

ಅವೆಲ್ಲವೂ ಪಾಶುರದ ಕೊನೆಯಲ್ಲಿ ಬರುವ ಪದ ಪದಾಕ್ಷರಗಳನ್ನೇ ಮುಂದಿನ ಪದ್ಯಗಳ ಆದಿಗೇ ಸರಿವೊಟ್ಟುವಂತೆ, ತಮ್ಮದೇನೇನೂ, ಪ್ರಯತ್ನವಿಲ್ಲದೆಯೇ ಸಹಜವಾಗಿ ಅಳವಟ್ಟಿವೆ! ಈ "ಸಹಜ" ಎಂಬುದೇ ತಮಿಳಿನಲ್ಲಿ "ಇಯಲ್" ಎಂಬುದು. "ಪಾ" ಎಂದರೆ ರಾಗಕ್ಕೆ ಒಳಪಡುವ ಛಂದಸ್ಸು. ಅನ್ತ ಆದಿ = ಅನ್ಾದಿ ಹೀಗಾಗಿ "ಇಯಲ್ ಪಾ ತಿರುವನ್ಾದಿ" ಎಂದೇ ಕರೆಯಲ್ಪಟ್ಟವು. ಇಲ್ಲೆಲ್ಲಾ "ತಿರು" ಎಂಬ ಪದ, ಶ್ರೀದೇವಿಯ ಮಾತೃಶಕ್ತಿಗೂ, ಅಂತಹ ಶ್ರೀದೇವಿಗೂ ಶ್ರೀ ಆಗಿರುವ ಶ್ರಿಯಃ ಪತಿಗೂ ಅನ್ವಯಿಸುವ ಬಲು ಅರ್ಥಪೂರ್ಣವಾದ ಶಬ್ದ. ಯಾತ್ರಾ ಸ್ಥಳಗಳಿಗೂ ಈ "ತಿರು" ಶಬ್ದವನ್ನೇ ಸೇರಿಸಿಯೇ ಹೇಳುವುದು, ಸರ್ವಮಾನವರಿಗೂ "ತಿರು" ಇಲ್ಲದ ಉಲ್ಲೇಖಗಳೇ ಇಲ್ಲ. ಭರತಖಂಡದ ನಾವೆಲ್ಲಾ "ಶ್ರೀಮಾನ್" ಶ್ರೀಮತಿಗಳೇ ತಾನೇ! ಇವೆಲ್ಲದರ ಹಿಂದೆ, ಹಾಗೂ ವಿಶ್ವದ ಸಕಲ ಭಾಷೆಗಳಲ್ಲೂ ಒಂದು ದೊಡ್ಡ ಸಾಂಸ್ಕೃತಿಕ ಸೌಂದರ್ಯ ಘನವಾಗಿದೆ. ಹಜರತ್, ಮಿಸ್ಟರ್ ಇತ್ಯಾದಿಗಳೆಲ್ಲಾ ಇಂಥ "ಪೊಟೆನ್ಸಿ" ಮಹಾಶಕ್ತಿಯನ್ನು ಪಡೆದಿವೆ. ಭಾಷೆಗೂ, ಅಧ್ಯಾತ್ಮಕ್ಕೂ ಬಿಡಿಸಲಾಗದ ನಂಟಿದೆ! ಕೇವಲ ಸಾಮಾಜಿಕ, ಆತ್ಮ ವಿಮುಖ ಲೌಕಿಕ ಉಪಪತ್ತಿಗಳಿಂದಷ್ಟೇ ಜಗತ್ತಿನ ಯಾವೊಂದು ಸಮಸ್ಯೆಯೂ ಬಗೆ ಹರಿಯದು. ವಿಜ್ಞಾನದ ಅಂತರಂಗವೂ ಇದೇ ಆಗಿದೆ.

'ಪೊಯ್‌ಹೈ' ಎಂದರೆ ಪುಷ್ಕರಿಣಿ. ಪ್ರಸಿದ್ಧ ಪುಣ್ಯಕ್ಷೇತ್ರವೆನಿಸಿದ ಕಾಂಚೀಪುರದ "ತಿರುವೆಹ್ಕಾ" ಎಂಬಲ್ಲಿನ ದಿವ್ಯ ಸರಸ್ಸಿನಲ್ಲಿ ಬೆಳೆದ ಒಂದು ಹೊನ್‌ದಾವರೆ ಹೂವಿನಲ್ಲಿ ಈ "ಸರಸ್ಯ" ಮುನಿಗಳ ಅವತಾರ. ೪೭೨೬೦೧ ನೇ ದ್ವಾಪರಾಂತಿಮ ಭಾಗದ ಸಂವತ್ಸರ ಸಿದ್ಧಾರ್ಥಿ ತುಲಾಮಾಸ ಶುಕ್ಲಪಕ್ಷ ಅಷ್ಟಮೀ ತಿಥಿಯಂದು ಮಂಗಳವಾರ ಶ್ರವಣನಕ್ಷತ್ರ ಶ್ರೀ ಪಾಂಚಜನ್ಯ ಶಂಖಾಂಶದಿಂದ ಅಯೋನಿಜರಾಗಿ ಕಾಣಿಸಿಕೊಂಡರು! ಈ 'ಸರೋಯೋಗಿ'ಗಳು ಮೊಮ್ಮೊದಲಿಗೇ ತಮ್ಮ ಸಿರಿಬಾಯಿಂದ ಹಾಡಿದ ದಿವ್ಯಪ್ರಬಂಧ 'ಮೊದಲ ಸಿರಿಯನ್ತ್ಯಾದಿ'ಯಾಯಿತು. ಇಡೀ ಜಗತ್ತಿನಲ್ಲೇ ಅಳವಾಗಿ ಬೇರೂರಿರುವ ಕಷ್ಟಕಾರ್ಪಣ್ಯಗಳನ್ನು ಸಕಾರಣವಾಗಿ ಅರಿತು ಅವನ್ನು ಹೋಗಲಾಡಿಸುವ ಮಹಾಶಕ್ತಿಯಾರಿಗಿದೆಯೋ ಅಂತಹ ಕಾಲಚಕ್ರ ಪ್ರವರ್ತಕನಲ್ಲೇ ಶರಣು ಮಾಡಿ ಮಂಗಳಾsಶಾಸನವೆಸಗಿದರು. ತಮಿಳ್ ಕಾವ್ಯಜ್ಞರ ಆದಿವೃಷಭ "ಕವಿಞರ್ ಪೋರ್‌ಏರು" ಎಂದೇ ರಾಮಾನುಜರ ನಿಕಟತಮ ತಿರುವಡಿಯೇ ಆದ ಮೊದಲಿಯಾಂಡಾನ್, ಇವರನ್ನು ಸ್ತುತಿಸಿದ್ದಾರೆ. ತಿರುಪತಿ ತಿಮ್ಮಪ್ಪನ ಮೇಲೆ ಇವರ ಅನುಭಾವವನ್ನೇ ನಾವೀಗ ಸವಿಯೋಣ.

ಇಯಲ್‌ಪಾ, ತಿರುವನ್ಾದಿ ೧, ಹಾಡು ೨೬

ತಮಿಳ್ ತಿರಳ್

ಎಳುವಾರ್ ವಿಡೈಕೊಳ್ವಾರ್ ಈನ್ ತುಳಾಯಾನೈ ವಳುವಾ ವಹೈ ನಿನೈನ್ದು ವೈಹಲ್ ತೊಳುವಾರ್
ವಿನೈ ಚ್ಚುಡರೈ ನನ್ದುವಿಕ್ಕುಮ್ ವೆಙ್ಗಡಮೇ, ವಾನೋರ್ ಮನಚ್ಚುಡರೈ ತ್ತೂಣ್ಡುಮ್ ಮಲೈ

ಕನ್ನಡ ನೆರಳ್

ಏಳುವರಾ ಬಿಡುಗೊಳ್ಳುವರಾ, ಚೆಂದೊಳಸಿಗನಂ ಮಾಳದ ತೆರ ನೆನೆದೆಂದೆಂದೂ ಬಿಡದೇ ತೊಳಗುವರಾ |
ಹಾಳ್ ಅಘುದುರಿಯಂ ನಂದಿಪ ವೆಂಕಟವೇ ಬಾನವರ್ ಆಳದ ಸೊಡರಂ ಬೆಂಟುವ ಮಲೆಯೈ! ||

ಮನೋವಾಕ್ ಕಾಯಗಳೆಂಬ ತ್ರಿಕರಣಗಳಿಂದಲೂ ಎಡಬಿಡದೆ ಸರ್ವದೇಶ ಸರ್ವಕಾಲ ಸರ್ವಾsವಸ್ಥೋಚಿತವಾದ ಹಾಗೂ ಅಂತಹ ಯಾವುದೇ ಸೇವೆಗಳಲ್ಲಿಯೂ ಏಕಪ್ರಕಾರವಾದ "ರತಿ" ರೂಪಿ ಪ್ರೀತಿ ಪ್ರಧಾನವಾಗಿ ಇರಬೇಕಾದ್ದು. ಸೇವೆಗಳಲ್ಲಿ

ಯಾವೊಂದೂ ವೈಷಮ್ಯದ ತಾರತಮ್ಯ ಭಾವ ಇರಬಾರದು. ಇಂತಹ ಪರಮ ಆದರ್ಶ ಕೈಂಕರ್ಯ "ಈ ಲೋಕದಲ್ಲಿ ಲಭ್ಯವಾಗದಲ್ಲಾ! ಎನ್ನಬೇಡಿ. ಆ ವೈಕುಂಠ ಲೋಕದ ಅನಂತ ಗರುಡ ವಿಷ್ವಕ್ ಸೇನರೇ ಮುಂತಾದ ನಿತ್ಯಸೂರಿಗಳೂ ಸಹ, ಪರಮಕಾರುಣಿಕನಾದ ಸರ್ವೇಶ್ವರನ 'ಸೌಲಭ್ಯ' = ದೇವರ ಸದರವನ್ನು ಅಲ್ಲಿ ಅನುಭವಿಸುವ ಭಾಗ್ಯವಿಲ್ಲದುದಕ್ಕಾಗಿ ಪರಿತಪಿಸಿ, 'ಕಣ್ಣುಪತ್ತುಹೈಕ್ಕು' ಇಲ್ಲಿನ ಮಾಂಸಚಕ್ಷುವಿನಿಂದಲೂ ಕಂಡನುಭವಿಸಬಹುದಾದ, ಪರಮ ಕಾರುಣಿಕನಾದ ಸರ್ವೇಶ್ವರನ 'ಸೌಲಭ್ಯ' ಸದರವನ್ನು ಅಲ್ಲಿ ಅನುಭವಿಸುವ ಭಾಗ್ಯವಿಲ್ಲದುದಕ್ಕಾಗಿ ಪರಿತಪಿಸಿ, ಈ ತಿರುಮಲೆಗೇ ನಿಗೂಢವೇಷದಲ್ಲಿ ಬಂದು ಆ ಗುಣಾನುಭವ ಮಾಡುವರು. ವೈಕುಂಠದಲ್ಲೂ ಸಿಗದ ಈ ಭಾಗ್ಯ ಇಲ್ಲೇ ಸರ್ವವಿಧದ ಆಸೆಯುಳ್ಳವರಿಗೂ, ಅವರವರ ಇಷ್ಟಫಲ ಪಡೆಯಲು ಇರುವ ಅಡೆತಡೆಗಳನ್ನೆಲ್ಲಾ ಹೋಗಲಾಡಿಸುವ ಶಕ್ತಿ" ಈ ಸಿರಿವೆಂಕಟಾಚಲಕ್ಕೇ ಇದೆಯಪ್ಪಾ. ಹೀಗೆ ಅನಿಷ್ಟ ನಿವಾರಣಾಪೂರ್ವಕ ಇಷ್ಟಪ್ರಾಪ್ತಿ ಇಲ್ಲೇ ಸುಲಭ!

ಎಳುವಾರ್ = ಮೇಲ್ಮೇಲೆ ಐಶ್ವರ್ಯಭಾಗ್ಯ ಬಯಸುತ್ತಲೇ, ಸಿಕ್ಕಿದ ಮೇಲೆ ತಿಮ್ಮಪ್ಪನಿಂದ ತಪ್ಪಿಸಿಕೊಂಡು ಎದ್ದೇ ಹೋಗುವ, ಆಶಾಪಾಶಶತಬದ್ಧರಿಗೂ, ವಿಡೈಕೊಳ್ವಾರ್ = ತಮ್ಮ "ಆತ್ಮಾನುಭೂತಿ" ಕೈವಲ್ಯದ ಸ್ವಾರ್ಥ ದಕ್ಕಿದ ಮೇಲೆ, ಮುಂದೆ ಸಾಗದ ಯೋಗಿ ಸಾಧಕರಿಗೂ, ಈ ಐಹಲೌಕಿಕ, ಪಾರಲೌಕಿಕ, ಹಾಗೂ ನಿತ್ಯನಿಜಾನಂದ, ಸ್ವಗತ ಫಲಾರ್ಥಿಗಳಲ್ಲದೆ, ಈನ್‌ತುಳಾಯ್ ಆನೈ = ಸುಂದರ ತುಳಸೀ ಧಾರಿಯನ್ನೇ, ವಳುವಾ ವಹ್ಯೆ = ಎಂದೂ ಬಿಡದಂತಹ ಬಗೆಯನ್ನು, ವೈಹಲ್ = ಯಾವಾಗಲೂ, ನಿತ್ಯಯೋಗವನ್ನೇ ನಿನೈನ್ದು = ಬಯಸಿ, ತೊಳುವಾರ್ = ಆಶ್ರಯಿಸಿ ಭಜಿಸುವ, ಜ್ಞಾನಿನಾಂ ಅಗ್ರೇಸರರಾದ ಭಗವಚ್ಚರಣಾರ್ಥಿಗಳಿಗೂ ಇರುವ, ವಿನೈ = ವಿಘ್ನಗಳೆಂಬ. ಶುಡರೈ = ಸುಡುಬೆಂಕಿಯನ್ನು, ನನ್ದು ವಿಕ್ಕುಮ್ = ಅರಿಸಿ ನಾಶಮಾಡುವ. ವೇಜ್ಗಡಮೇ = ತಿರುಪತಿಗಿರಿಯೇ. ವಾನೋರ್ = ನಿತ್ಯಸೂರಿಗಳ. ಮನಚ್ಚುಡರೈ = ತಮ್ಮ ಮನಸ್ಸಿನಲ್ಲಿದ್ದ, ದಯಾ ಸೌಶೀಲ್ಯ, ವಾತ್ಸಲ್ಯಾದಿಗಳನ್ನು ವೈಕುಂಠದಲ್ಲಿ ಕಾಣಲು ಸಿಗದಿದ್ದ ಕೊರತೆಗಳೆಂಬ ಮಂಕು ಹಿಡಿದಿದ್ದ ದೀಪಗಳನ್ನು. ತೂಣ್ಡುಮ್ = ಬತ್ತಿಯನ್ನು ಬೆಂಟಿ ಕಿಟ್ಟವನ್ನು ತೆಗೆದು ಸರ್ವೇಶ್ವರನ ಸರ್ವಗುಣ ಪ್ರಕಾಶಕವಾದ, ಮಲೈ = ಪ್ರಾಪ್ಯವಾದ ಬೆಟ್ಟ.

ಆ ಪರಮಪದದಲ್ಲಿ ಭಗವಂತನ ಗುಣ ಗಟ್ಟಿಚಿನ್ನದಂತಷ್ಟೆ. ಒಡವೆಯಾಗಿ ಕೈಯ್ಯುಂಗುರವಾಗಿ ಹೀಗೆ ನಾನಾ ಬಗೆಯ ಜನಗಳ ಉಪಯೋಗಕ್ಕೆ ಒದಗುವ ಗುಣಗಣಗಳೆಲ್ಲಾ ಈ ಗಿರಿಯಲ್ಲೇ ಸಾರ್ಥಕ! "ಸದಾ ಪಶ್ಯನ್ತಿ" ಯಾವಾಗಲೂ ನಿರ್ನಿಮೇಷರಾಗಿ ನೋಡುತ್ತಿರುವವರಿಗೆ ಅಲ್ಲಿ ದರ್ಶನ ಸಿದ್ಧಿಸಿಯೇ ಇದೆ. ಸೌಲಭ್ಯವೇನೂ ಬೇಕಾಗಿಲ್ಲ. ಮಂದರಾದ ದಡ್ಡರೇ ಇಲ್ಲದ ಅಲ್ಲಿ "ಮಹತೋಮಂದ್ಯೈಃ ಸಹ ನೀರಂಧ್ರೇಣ ಸಂಶ್ಲೇಷಃ" ದಡ್ಡಜನರ ಜತೆ, ಸಲೀಸಾಗಿ ಬೆರೆತು ಕಲೆಯುವ "ಸೌಶೀಲ್ಯ"ಕ್ಕೂ ಅವಶ್ಯಕತೆ ಇಲ್ಲ. ಏನೊಂದೂ ತಪ್ಪೇ ಸಂಭವಿಸಲ್ಯಾಗದ ಅಲ್ಲಿ "ದೋಷಾದರ್ಶಿತ್ವಂ" "ದೋಷಭೋಗ್ಯತ್ವಂ" "ಅವಿಜ್ಞಾತಾ" ಎಂಬಂತೆ, ತಪ್ಪನ್ನೇ ಕಾಣದ, ಅಥವಾ ಕಂಡರೂ = ಅದನ್ನೇ ಗೋಮಾತೆ ತನ್ನ ಎಳೆಕರುವಿನ ಹೊಲಸನ್ನೆ ನೆಕ್ಕಿ ಸಂತಸಪಡುವಂತೆ, ಶ್ರೀ ವೇಂಕಟೇಶ ಕಣ್ಣುಮುಚ್ಚಿಕೊಂಡೇ! ಮುದಗೊಳ್ಳುವುದೂ ಈ ಸಾರ್ವಜನಿಕವಾದ ಪವಿತ್ರ ತಿರುಮಲೆಯಲ್ಲೇ! ವತ್ಸಂಲಾತಿ ಇತಿ ವತ್ಸಲಾ. ತಸ್ಯಾಃ ಭಾವಃ 'ವಾತ್ಸಲ್ಯಮ್'.

ತಮಿಳ್ ತಿರಳ್ ೧ - ೩೭

ವಹ್ಯೆಯರು ನುಣ್ ಕೇಳ್ವಿವಾಯ್‌ವಾರ್‌ಹಳ್, ನಾಳುಮ್ ಪುಹ್ಯೆವಿಳಕ್ಕುಮ್ ಪೂಮ್ ಪುನಲು ಮೇನ್ದಿ -ತಿಶೈತಿಶೈಯಿಲ್ |
ವೇದಿಯರ್‌ಹಳ್ ಶೆನ್ನಿರೈಞ್ಜುಮ್ ವೇಜ್ಗಡಮೇ ವೆಣ್‌ಶಜ್ಗಂ, ಊದಿಯ ವಾಯ್ ಮಾಲ್ ಉಹನ್ದವೂರ್ ||

ಕನ್ನಡ ನೆರಳ್

ಬಗೆಮೀರ್ ನಿಗೂಢ ಶ್ರೋತೃಗಳ್ ಎಂದೂ ಹೊಗೆಯುಂ ದೀಪಮುಂ ಪೂವುಂ ತೀರ್ಥಮುಮೆತ್ತಿ |
ವೈದಿಕರ್ ಎಲ್ಲೆಡೆಯಿಂದಾಸರಿಸುವ ವೇಂಕಟವೇ, ಬೆಳ್ ಶಂಕೂದಿದ ಬಾಯ್ ಮೋಹನ ಕಾಮಿಪವೂರ್! ||

ಸರ್ವೇಶ್ವರನು, ತನ್ನನ್ನು ಸಕಲ ಮನುಜರೂ ಕಾಣುವಂತೆ ರಾಮಕೃಷ್ಣಾದಿ ರೂಪ ಧರಿಸಿದ್ದಾಗ ನಾವು ಹುಟ್ಟಿರಲಿಲ್ಲವಲ್ಲಾ! ಎಂಬ ದೌರ್ಭಾಗ್ಯ ಚಿಂತೆ ಬಿಡಿ. ಆ ಶ್ರೀ ಕೃಷ್ಣನೇ ಆ ವಿಭವಾವತಾರಗಳಿಗಿಂತಲೂ, ಯಾವ ಕಾಲಕ್ಕೂ ಪರಮ ಸುಲಭನಾಗಿ ಈ ಭೂಲೋಕದಲ್ಲೇ ಹಿಂದಿನ ಪೂರ್ವೀಕರಿಗೂ, ಇಂದಿನ ನಮಗೂ ಮುಂದಿನ ಪೀಳಿಗೆಗಳಿಗೂ ವೈಕುಂಠದ ಆ ಪರತ್ವವನ್ನೂ ಅವತಾರಗಳ ವೈಭವವನ್ನೂ ಬಿಡದೆ ಈ ವೆಂಕಟಾದ್ರಿಯನ್ನೇ ಮನೆ ಮಾಡಿಕೊಂಡಿರುವಾಗ ನಮಗೇನು ಕೊರತೆ?

ವಹ್ಯೆ = ಉಪಾಯಾನ್ತರಗಳನ್ನು, ಅರುಮ್ = ಕತ್ತರಿಸಿ ಬಿಡುವ, ನುಣ್ = ಸೂಕ್ಷ್ಮವಾದ, ಕೇಳ್ವಿ ವಾಯ್‌ವಾರ್‌ಹಳ್ = ಶ್ರವಣ ಸಂಪನ್ನರಾದ, ವೇದಿಯರ್ಹಳ್ = ಪರಮ ವೈದಿಕರು, ಪೂಮ್ ಪುನಲುಮ್ = ಪುಷ್ಪ ಹಾಗೂ ತೀರ್ಥವನ್ನು, ಏನ್ದಿ =

ಸೊಂಟಕ್ಕೆ ಮೇಲೆಯೇ ಎತ್ತಿಹಿಡಿದೇ, ತಿಶೈ ತಿಶೈಯಿಲ್ = ಎಲ್ಲಾ ದಿಕ್ಕುಗಳಿಂದ, ಶೆನ್ನು = ಸಂದು, ಇರೈಞ್ಜುಮ್ = ಆಶ್ರಯಿಸುವ, ವೇಙ್ಗಡಮೇ = ಈ ವೆಂಕಟಾಚಲವೇ, ವೆಣ್ = ಅತಿಧವಳವಾದ, ಶಙ್ಗಮ್ = ಪಾಂಚಜನ್ಯವನ್ನು ಊದಿಯು, ವಾಯ್ = ಸಿರಿಬಾಯುಳ್ಳ, ಮಾಲ್ = ಸ್ವಾಮಿಯಾದ ಶ್ರೀಕೃಷ್ಣ, ಉಹನ್ದ = ಸ್ವಯಂ ಇಷ್ಟಪಟ್ಟೇ, ಸ್ವಯಂವ್ಯಕ್ತನಾದ, ಊರ್ = ಊರಿಯೇ ಕಲ್ಪಾಂತದವರಿಗೂ ನಿತ್ಯವಾಸಗೈಯುವ ದಿವ್ಯದೇಶ. ಆಶ್ರಿತ ಪಕ್ಷಪಾತಿಯಾದ ವಾಸುದೇವ ಈಗಲೂ ಆಸರಿಸುವವರನ್ನು ಕೈ ಬಿಡನು. ದ್ವಾಪರ ಯುಗದ ಕೊನೆಯಲ್ಲಾದ ಆ ಕೃಷ್ಣಾವತಾರ ಅಲ್ಪಕಾಲಿಕ. ೧೨೩ ವರ್ಷಮಾತ್ರ. ತಿಮ್ಮಪ್ಪ, ಸತತಾऽऽವಾಸಿ. "ಈಶಾವಾಸ್ಯಂ ಇದಂ ಸರ್ವಮ್" ಸರ್ವದಾಸರ್ವಧಾಚ! ಈ ಉಪನಿಷನ್ಮನ್ತ್ರದ ಪೂರ್ಣ ಹಾಗೂ ನಿತ್ಯಾರ್ಥ, ಈ ತಿರುಪತಿಯಲ್ಲೇ!

ತಮಿಳ್ ತಿರಳ್ ೧ - ೩೮

ಊರುಮ್ ವರಿಯರವಮ್ ಒನ್‌ಕುರವರ್ ಮಾಲ್‌ಯಾನೈ ಪೇರವೆರಿನ್ದ ಪೆರುಮಣಿಯೈ - ಕಾರುಡೈಯ |
ಮಿನ್ನೆನ್ನು ಪುತ್ತಡೈಯುಮ್ ವೇಙ್ಗಡಮೇ, ಮೇಲಶುರರ್ ಎಮ್ಮೆನ್ನು ಮಾಲ ದಿಡಮ್ ||

ಕನ್ನಡ ನೆರಳ್

ಹರಿದೇ ಬಿಡದೂರಿಹ ವುರಗಗಳ್! ಒಳ್ಳೆಯ ಕೊರವರ್ ಹಿರಿಯಾನೆ, ಸಂಚರಿಸಿರೆ, ಎಸೆದಾ ಹಿರಿಮಣಿಯಂ ಕಾರ್‌ಸೇರ್ |
ಮಿಂಚೆನು ಹುತ್ತದೊಳಡಗುವ ವೇಂಕಟವೇ, ಮೇಲ್‌ಸುರರ್ ಎಮ್‌ದೆನು ಮೋಹಿಪ ವೆಡ್ಡೆಯ್ಯೆ ||

ಆ ವೈಕುಂಠದಲ್ಲಿರುವ ಸರ್ವವೂ ಸರ್ವರೂ ಹೇಗೆ ಮುಕ್ತರಿಗೂ ನಿತ್ಯರಿಗೂ ಉದ್ದೇಶ್ಯವೋ, ಈ ತಿರುಪತಿ ತಿಮ್ಮಪ್ಪ ಮಾತ್ರನಲ್ಲ, ಅಲ್ಲಿನ, ಈ ಕೆಳಗೆ ಹೇಳುವ ಸಮಸ್ತವೂ ನಮ್ಮ ಪಾಲಿಗೆ ಪುರುಷಾರ್ಥ, ಪ್ರಾಪ್ಯಫಲ! ಅವು ಯಾವುವು? ಎಂದರೆ, ಊರುಮ್ = ತಿರುಮಲೆ ಸ್ಥಳವಾಸವೊಂದನ್ನೇ ಮಾಡುತ್ತಿರುವ, ವರಿ = ರೇಖೆಗಳುಳ್ಳ, ಅರವಮ್ = ಉರಗಸರ್ಪಗಳೂ, ತಿಮ್ಮಪ್ಪನ ಶ್ರೀಮೂರ್ತಿಯಲ್ಲಿರುವ ಚೆಲುವಾದ ರೇಖೆಗಳಂತೇ, ಅಲ್ಲಿನ ಹಾವುಗಳ ಅಡಿ ಮೇಲ್‌ಭಾಗದಲ್ಲಿ ಕಾಣುವ ರೇಖೆಗಳೂ ಈ ಪೊಯ್‌ಹೈಯಾಳ್ವಾರರಿಗೆ ಪರಮೋದ್ದೇಶ್ಯ! ಒನ್‌ಕುರವರ್ = ವಂಶಪಾರಂಪರ್ಯವಾಗಿ ತಿರುಮಲೆ ಗಿರಿಪ್ರದೇಶ ಬಿಡದ ಆ ನಲ್ಮೆಯುಳ್ಳ, ಆದಿ ಕಾಲದಿಂದ ಇಂದಿಗೂ ಎಂದೆಂದಿಗೂ ಸ್ಥಾನಿಕರಾಗಿಯೇ ಇರುವ ಒಳ್ಳೆಯ ಕೊರಮರು. ಆದಿವಾಸಿ ಗಿರಿಜನರನ್ನು ಒಕ್ಕಲೆಬ್ಬಿಸುವುದು ಆಳ್ವಾರರಿಗೆ ಸಂಮತವಲ್ಲ. ಮಾಲ್ = ಬೆಟ್ಟದಷ್ಟೇ ಎತ್ತರವೂ ಉದ್ದವೂ ಆಗಿರುವ, ಯಾನೈ = ಬೆಟ್ಟದಾನೆಗಳೂ ಮುಮುಕ್ಷು ಪುರುಷಾರ್ಥ. ಬೆಟ್ಟವಾದರೆ ಅಚಲ, ಈ ಆನೆಗಳೋ, ಪೇರ = ಚಲಿಸುತ್ತಿರುವ ಸನ್ನಿವೇಶದಲ್ಲಿರುವಾಗ, ಎರಿನ್ದ = ಕೊರವರು ಎಸೆದ. ಪೆರು = ಬಲು ಬೆಳೆಬಾಳುವ, ಆದಿವಾಸಿಗಳಿಗವು ಕಲ್ಲುಗಳಂತೆ, ಸಮಲೋಷ್ಟಾಶ್ಮಕಾಂಚನರು! ಏನು ಭಾಗ್ಯಶಾಲಿಗಳೆಂಬ ಭಾವ. ಕಲ್ಲಿಗೂ, ರತ್ನಗಳಿಗೂ ಒಂದೇ ಬೆಲೆ ಕೊಡುವ ಸಹಜ ವೈರಾಗ್ಯ ಸಂಪನ್ನರು. ಅವರೇ ನಮ್ಮ ಭಾಗಕ್ಕೆ ಗುರುಗಳು! ಕಾರ್ = ಅಂತಹ ಘನಗಜಗಳನ್ನು ಮೇಘವೆಂದೂ. ಮಿನ್ ಎನ್ನು = ರತ್ನಮಣಿಗಳನ್ನು ಮಿಂಚೆಂದೂ ಭ್ರಮಿಸಿ! (ಭಯಪಟ್ಟು) ಪುತ್ತು = ಹಿಂದೆ ಹೇಳಿದ ಚೆಲುಗೆರೆಗಳ ಭುಜಂಗಗಳು, ತಮ್ಮ ತಮ್ಮ ತಾಣವಾದ ಹುತ್ತಗಳೊಳಗೆ, ಅಡೈಯುಮ್ = ಮಿಂಚಿದ ಮೇಲೆ ಖಂಡಿತ ಸಿಡಿಲು ಬಡಿಯುವುದೆಂಬ ಭಯದಿಂದ, ಅಡಗಿಕೊಳ್ಳುವ ದೃಶ್ಯವುಳ್ಳ, 'ವೇಙ್ಗಡಮೇ', ಮೇಲ್ = ಸ್ವರ್ಗಕ್ಕೂ ಮೇಲಿರುವ ಆ ನಿರುಪಾಧಿಕ ನಿತ್ಯಧಾಮದಲ್ಲಿನ, ಶುರರ್ = ವೈಕುಂಠ ವಾಸಿಗಳು, ನಮ್ಮೀ ಭೂಲೋಕಕ್ಕಿಂತ ಮೇಲಿರುವ ಇಂದ್ರಲೋಕವಾಸಿಗಳೂ ಆಗಬಹುದು, ಎಮ್ ಎನ್ನು = ಅಹಮಹಮಿಕಯಾ ತಿರುಪತಿ, ನಮ್ಮದು, ನಮ್ಮದು ಎಂದು ಎಲ್ಲರೂ ಆತ್ಮೀಯವಾಗಿ ಅಭಿಮಾನಿಸುವ ಪ್ರದೇಶ. ಇಂತಹ ದಿವ್ಯದೇಶಗಳೆಲ್ಲಾ ವೈಯಕ್ತಿಕ ವ್ಯವಸ್ಥೆಗಿಂತಲೂ ವ್ಯಾಪಕವಾದ ಧರ್ಮದರ್ಶಿ ಸಿದ್ಧಾನ್ತಕ್ಕೆ ಸೇರಿದ್ದೇ ಹೊರತು, ರಾಜ್ಯ, ರಾಷ್ಟ್ರ, ವಿಶ್ವಮಾತ್ರಕ್ಕಲ್ಲ. ದಿವ್ಯನಂತೆಯೇ ದಿವ್ಯದೇಶ. ಯಾತ್ರಾಸ್ಥಳಗಳೂ ರಾಜ್ಯಾತೀತ, ರಾಷ್ಟ್ರಾತೀತ, ಈ ವಿಶ್ವಾऽತೀತವಾಗಿದ್ದೇ ಸ್ಥಳೀಯವೂ ಹೌದು! Act Locally, Think supra, globally!

ಸ್ವತಂತ್ರ ಭಾರತ, ಕೇವಲ ಲೌಕಿಕ ಆರ್ಥಿಕ ದೃಷ್ಟಿ ಮಾತ್ರ ಇಟ್ಟಿರುವವರೆಗೂ ಜನ ಗ್ರಾಮವನ್ನು ಬಿಡುವವರೇ! ಇನ್ನು ದೇಶ ಹೇಗೆ ಗಟ್ಟಿಯಾಗಿದ್ದೀತು? ಗ್ರಾಮತಂತುಗಳಲ್ಲಿ ಲೋಗರ ಅಭಿಮಾನವನ್ನು ನಷ್ಟಗೊಳಿಸಿ, ನಗರಾಽಭಿಮಾನವನ್ನೇ ಅನಿವಾರ್ಯಾಗಿ ಬೆಳೆಸುವ ಪರಿಸ್ಥಿತಿಯಿಂದಲೇ ನಗರಗಳೂ ನರಕವಾಗುತ್ತಿರುವುದು. ಆಳ್ವಾರ್ ನೀಡುವ ಎಚ್ಚರಿಕೆಯಿದು.

ಶ್ರೀ ಕುಲಶೇಖರರೂ ತಮ್ಮ "ಪೆರುಮಾಳ್ ತಿರುಮೊಳಿ"ಯ ನಾಲ್ಕನೇ ದಶಕವಾದ "ಊನೇರು ಶೆಲ್ವತ್ತು" ಎಂಬೀ ಭಾಗದಲ್ಲಿ "ಏದೇನುಂ ಆವೇನೇ?" ಎಂದು ತಿರುವೇಂಗಡದಲ್ಲಿ ಸಕಲವೂ ತಮಗೆ ಉದ್ದೇಶ್ಯವೆಂದೂ, ಕೊನೆಗೆ ತಿಮ್ಮಪ್ಪನೇ ತಾನಾಗಿ ಬಿಡಬೇಕೆಂಬಷ್ಟು ತನ್ಮಯತೆಯನ್ನು ಸೊಗಸಾಗಿ ವರ್ಣಿಸುತ್ತಾರೆ. ನೀರ್ ಕೊಕ್ಕರೆಯಾಗಿ ಮೀನುಗಳಾಗಿ, ಉತ್ಸವ ಮೂರ್ತಿ 'ಮಲೆಯಪ್ಪನ' ಹಿಂದೆ, ಸ್ವಾಮಿ ತಾಂಬೂಲ ಸ್ವೀಕರಿಸಿ ಉಗಿಯುವ ಚಿನ್ನದ ಬಟ್ಟಲನ್ನು ಹಿಡಿಯುವ ಕೈಂಕರ್ಯಪರನಾಗಿ!

ಒಂದು ಸಂಪಿಗೆ ಮರವಾಗಿ, ಹುಲ್ಲು ತೆಂಡೆಯಾಗಿ ಸ್ವರ್ಣೋಜ್ವಲ ಶಿಖಿರವಾಗಿ, ಕಾಡುಹೊಳೆಯಾಗಿ, ಮೂಡಲಪ್ಪನ ಯಾತ್ರಿಗಳ ಹೆದ್ದಾರಿಯಾಗಿ, ಹೊಸಲ ಕಲ್ಲಾಗಿ ಹುಟ್ಟುವ ಭಾಗ್ಯನನಗುಂಟೇ? ''ಪೆರುಮಾಳ್ ತಿರ್ಯಕ್ ಸ್ಥಾವರಜನ್ಮಂಗಳ್ಳೈ ಅಶೈಪ್ಪಟ್ಟಾರ್'' - ಲೋಕಾಚಾರ್ಯರ ಶ್ರೀವಚನ ಭೂಷಣ.

ತಿರುಪತಿಯಲ್ಲಿನ ಅನೆಗಳೂ ಕಲ್ಲುಗಳೂ, ಗುಹದೇವರಂತಹ ಆದಿನಿವಾಸಿಗಳೂ, ಭಗವದ್ಗುಣಾನುಭವವನ್ನು, ಸಂತತಿವಿಚ್ಛೇದವಿಲ್ಲದೆ ಕುಡಿಕುಡಿಯಾಗಿ ಎಸಗುವ ದೈವೀಸಂಪನ್ನರೇ ಆದ ಮಹಿಮೆಯುಳ್ಳವುಗಳೇ. ಆಳ್ವಾರ್‌ಗಳೇನು ಗ್ರಾಮದೇಶಗಳನ್ನು ಮರೆತಿರುವವರೇ?

ತಮಿಳ್ ತಿರಳ್ ೧ - ೩೯

ಇಡನ್ನದು ಪೂಮಿ, ಎಡುತ್ತದು ಕುನ್ನಮ್, ಕಡನ್ದದು ಕಞ್ಞನೈ ಮುನ್ ಅಞ್ಞ ಕಿಡನ್ದದುವುಮ್ |
ನೀರೋದ ಮಾ ಕಡಲೇ ನಿನ್ನದವುಮ್ ವೇಜ್ಗಡಮೇ ಪೇರೋದ ವಣ್ಣರ್ ಪೆರಿದು ||

ಕನ್ನಡ ನೆರಳ್

ಎಡೆದುದು ಭೂಮಿ! ಎತ್ತಿದ್ದದು ಗಿರಿಯೈ! ಕಡೆದುದು ಕಂಸನಂ ಮುನ್ ಅಂಜುವೊಲೇ! - ಕೆಡೆದುದೂ |
ಹಿರಿಪಾಲ್‌ನೀರ್ ಅಲೆ (ಭೋರ್ಗರೆ) ಕಡಲೇ! ನಿಂದುದೂ ವೇಂಕಟವೇ ಹಿರಿನೀರ್ (ತಣ್ಣನ) ಬಣ್ಣರು ಹಿರಿಮುದದಿಂ! ||

ಆಪತ್ ಸಖನಾದ ಭಗವಾನ್ ಪ್ರಳಯಾರ್ಣವದಲ್ಲಿ ಮುಳುಗಿದ್ದು ಪಾಚಿಕಟ್ಟಿಹೋದ ಈ ಭೂಮಿಯನ್ನು ಮೇಲೆತ್ತಿಟ್ಟನಷ್ಟೆ. ದುಷ್ಟರನ್ನು ಸಂಹರಿಸುವುದಕ್ಕಿಂತಲೂ ಶಿಷ್ಟರ ಪರಿಪಾಲನೆಯೇ ಅವತಾರಕ್ಕೆ ಮುಖ್ಯಫಲ. ದೇವರ ದರ್ಶನಾSSಲಾಪಾSSಲಿಂಗನಾದಿಗಳನ್ನು, ನೇರಾ ಮಂಗಳಾSSಶಾಸನವನ್ನು ಅಸೆಪಡುವವರೇ 'ಪರಿತ್ರಾಣಾಯ ಸಾಧೂನಾಂ' ಎಂಬಲ್ಲಿನ ಸಾಧುಗಳು! ಕೇವಲ ದುಷ್ಟರ, ಅಥವಾ ದೌಷ್ಟ್ಯದನಾಶ ಭಗವತ್ ಸಂಕಲ್ಪದಿಂದಲೂ ದೂರದಲ್ಲೇ ಇದ್ದೂ ಆಗಿಬಿಡಬಹುದು. ಆದರೆ ಅತನ ಕಲ್ಯಾಣತಮ ರೂಪ ಗುಣಾದಿಗಳನ್ನು ಈಂಟಿ ಪಾನಮಾಡುವ ಇಂತಹ ಭಕ್ತಿ ಪರವಶರಾದ ಆಳ್ವಾರ್ ಶರಣರಂಥವರ, ಆಸೆಪೂರೈಸಲಿಕ್ಕಾಗಿಯೇ, ಸ್ವಸ್ವರೂಪವನ್ನೂ ಬಿಡದೆ, ಸಗುಣಸಾಕಾರನಾಗಿ ಸಂಪೂರ್ಣ ಸರ್ವಮೌಲ್ಯಗಳನ್ನೂ ಬಿಡದೆಯೇ, ಭಕ್ತವ್ಯಾಮೋಹಿ, ಇಲ್ಲಿಗಿಳಿಯುವುದು. ನಿರಾಕಾರ ದೂರದಲ್ಲೇ ಇದ್ದು ಬಿಡುತ್ತಾನೆ ಎನ್ನುವುದಕ್ಕಿಂತ ಮುಂದುವರಿದು ನಿರ್ಗುಣನೂ ಆಗಿಬಿಡುತ್ತಾನೆ ಸತ್ಯ ಸಂಕಲ್ಪ! ಎನ್ನುವುವೆಲ್ಲಾ ಆಂಶಿಕ ಅಧ್ಯಾತ್ಮ ವಿಚಾರ. ಅವುಗಳನ್ನು ವಿರೋಧಿಸಬೇಕಿಲ್ಲ. ಸಮಗ್ರ ಸಂಪೂರ್ಣ ವಿಚಾರವಾಗದಷ್ಟೆ. ಅವು ಅವರವರ ಉಪಾಸನೆಗಳಾಗಬಹುದು! ಪರ್ಯುಪಾಸನೆಯಾಗಲಾರದು.

ಇಡನ್ನದು = ಅಂಡಭಿತ್ತಿಗೆ ಒಟ್ಟಿಹೋಗಿದ್ದ ಈ ಭೂತಾಯಿಯನ್ನು (ಕೋರೆಯಿಂದ) ಕಿತ್ತುದು, ಎಡುತ್ತದು = ಹಸಿವಿನಿಂದ ಕುಪಿತನಾದ ಇಂದ್ರ ಸುರಿಸಿದ ಭಾರಿ ಕಲ್ಮಳೆ ಗೋ-ಗೋಪ-ಗೋಪಿಯರಿಗೆ ತಾಗದಂತೆ, ತನ್ನ ಕಿರುಬೆರಳಿನಿಂದಲೇ ಉಗುರು ಕೂಡ ಬಾಡದಂತೆ ಏಳುದಿನಗಳೂ ಎತ್ತಿಹಿಡಿದದ್ದು. ಕುನ್ನಂ = ಗೋವರ್ಧನ ಪರ್ವತವೇ. ಕಡನ್ದದು = ಮಂಚದಿಂದ ಕೆಡವಿ, ಅಂಗರಕ್ಷಕರೆಲ್ಲ ಮಿಟಿ ಮಿಟಿ! ನೋಡುತ್ತಿರುವಾಗಲೇ ಗುದ್ದಿ ''ಹಣ್‌ಗಾಯ್ ನೀರ್‌ಗಾಯ್'' ಮಾಡಿದ್ದು. ಅದಕ್ಕೂ ಮೊದಲು, ಅಞ್ಞ = ''ಭಯಾತ್‌ಕಂಸಃ'' ಎಂಬಂತೆ ಇದ್ದ, ಕಞ್ಞನೈ = ತನ್ನ ಸ್ವಂತಮಾವನಾದ ಕಂಸನನ್ನೇ! ನೀರ್ ಓದಮ್ ಮಾ ಕಡಲ್ = ಅಪಾರವಾದ ಹಾಗೂ ಆಳವಾದ ಹಾಲ್ಗಡಲಿನಲ್ಲಿ, ಭೋರ್ಗರೆಯುವ ಅಲೆಗಳ ಹೊಡೆತದಲ್ಲಿ! ಕಿಡನ್ದದು = ಕೆಡೆದು ಯೋಗನಿದ್ರಾಳುವಾಗಿರುವುದು, ಇವೆಲ್ಲಕ್ಕಿಂತಲೂ ಪೆರಿದು = ಹಿರಿನೇಹದಿಂದ ಸ್ಥಿರವಾಗಿಯೇ, ನಿನ್ನದು = ನಿಂತಿರುವ ಠೀವಿಯಲ್ಲೇ ಇರುವುದು, ವೇಜ್ಗಡಮೇ = ಸಂಸಾರಿಗಳ ಶಾರೀರಕ ಪಾಪ, ಪುಣ್ಯ ಪಾಪ ಉಭಯ ರೂಪವಾದ ಪಾಪ ಪರಿಹಾರಮಾಡುವ, ಈ ತಿರುಪತಿಯೇ! 'ಕಟ' ಕಡ ಎಂದರೆ ಸಾಲ, ಋಣ. ಪಾಪದ ಸಾಲ ತೀರಬೇಕಾದರೆ ದುಃಖಾನುಭವ. ಪುಣ್ಯವೂ ಇದಕ್ಕಿಂತ ಮೋಹಕವಾದ ವಿಘ್ನಕಾರಿ. ಮುಮುಕ್ಷುವಾದ ಈ ಮಾನವನಿಗೆ ಇದೇ ಕಟ್ಟ ಕಡೆಯ ಜನ್ಮವಾದ್ದರಿಂದ ಆ ಪರಿಪೂರ್ಣ ಮುಕ್ತಿಗೆ, ಫಲಾSSಸಕ್ತಿಯಿಂದ ಮಾಡುವ ನಾನಾ ಬಗೆಯ ಸತ್‌ಕಾರ್ಯಗಳೂ ಅಡ್ಡಿಪಡಿಸುವುವು. ಅಂಥ ಪುಣ್ಯಕಾರ್ಯಗಳ ಫಲವನ್ನು ಇಲ್ಲಿ, ಹೆಸರುವಾಸಿ, ಧನಲಾಭ, ಇತ್ಯಾದಿಗಳ ರೂಪದಲ್ಲಾಗಲಿ, ಸತ್ತ ಮೇಲೆ ಸ್ವರ್ಗಾದಿಭೋಗದಲ್ಲಾಗಲಿ ತೀರಿಸಲೇಬೇಕಾಗುತ್ತದೆ. ಆದುದರಿಂದ, ಮಾನವ ಒಳ್ಳೆಯ ಕೆಲಸಗಳನ್ನೂ, ಫಲಾಸೆಯನ್ನು ತಾನಾಗಿಯೇ ಬಿಟ್ಟು ಮಾಡಿದಾಗ ಅವೇನೂ, ತೀರಿಸಬೇಕಾದ ಸಾಲಗಳಾಗವು. ''ಭಗವತ್ ಕೈಂಕರ್ಯರೂಪವಾಗಿ ಕೃಷ್ಣಾರ್ಪಣ''ವಾಗುತ್ತವೆ. ತನ್ನಿಂದ ತಾನೇ ಈ ಮಾನವ ತನ್ನ ನಲ್ಮೆಯನ್ನೇ ಸಾಧಿಸಿಕೊಂಡಂತಾಗುತ್ತದೆ. ಐಹಿಕ ಸುಖಗಳೂ, ಆಗ ನಿರ್ಲಿಪ್ತವಾಗಿದ್ದು, ಆ ಪುಣ್ಯದ ದೋಷಾಂಶವನ್ನು ಸೇರಗೊಡುವುದಿಲ್ಲ. ಈ ಯುಕ್ತಿಯ ಜಾಣತನವನ್ನು ನಮ್ಮಾಳ್ವಾರ್ ತಮ್ಮ ತಿರುವಾಯ್‌ಮೊಳಿಯ ೩-೩-೬ ನೇ ಪಾಶುರದಲ್ಲಿ ಹೀಗೆ ಅಪ್ಪಣೆ

ಕೊಡಿಸಿದ್ದಾರೆ. **"ವೇಂ ಕಡಜ್ಗಳ್ ಮೆಯ್ಮೇಲ್ ವಿನೈ ಮುತ್ತವುಮ್ ತಾಜ್ಗಳ್ ತಜ್ಗಳ್ಕು ನಲ್ಲನವೇ ಶೆಯ್ವಾರ್"**. ಯಾವೋರ್ ಆಸೆ ಅಮಿಷಕ್ಕೂ ಇವರು ಬಲಿಯಾಗದೆ ಎಷ್ಟೊಂದು ಪರೋಪಕಾರಿಗಳು! ಎಂದು ಜನಕ್ಕೆ ಸಹಜವಾಗಿಯೇ ಅರಿವಾಗುತ್ತದೆ. ಇಲ್ಲಿನ ಈ ಸರ್ವ ಸಮಾಜದ ಸಂತೋಷವೇ ಮುಕ್ತಿ. ನಾವು ಬಯಸದೆ ಇರುವಾಗಲೇ ಕೀರ್ತಿಲಕ್ಷ್ಮಿ ನಮ್ಮನ್ನೊಲಿಯುವುದು. ಅಲ್ಪವಾದ, ಕ್ಷಣಧ್ವಂಸಿಯಾದ, ಸ್ವರ್ಗಭೋಗಕ್ಕೆ ಕಿಂಚಿತ್ತೂ ಆಸೆ ಪಡುವುದೂ ಆಗ ದೂರ ಉಳಿಯುತ್ತದೆ. ಯಾತ್ರಾ ಸ್ಥಳಗಳಲ್ಲಿನ ಪ್ರಾಮಾಣಿಕ ನಿವಾಸಿಗಳಿಗೆ ಈ ಅನುಭವ, ಕ್ಷೇತ್ರ ಮಹಿಮೆಯಿಂದಲೇ ಒದಗಿಬಿಡುವುದು. ಯಾವ ದೃಷ್ಟಿಯಿಂದಲೂ ತಿರುಪತಿಯಂತಹ ಪರಮಪುಣ್ಯ ಸ್ಥಳಗಳು ಗೌರವಿಸಲ್ಪಡಬೇಕು. ಇಂತಹ ಮಂಗಳಾऽऽಶಾಸನ ಪರರನ್ನೇ ಯಾತ್ರಾಸ್ಥಳ ತಯಾರ್ ಮಾಡಬೇಕು.

ಭೂಮ್ಯುದ್ಧರಣಸೌಂದರ್ಯ 'ಕೋಲವರಾಹ'ನ ಚೆಲುವು, ಜಲ ಪ್ರಳಯ ಕಾಲದಲ್ಲೇ. ತಿರುಪತಿ ಸ್ವಾಮಿ ಪುಷ್ಕರಣೀ ತೀರದಲ್ಲೇ ಇಂದಿಗೂ ಆದಿವರಾಹನ ಮನೋಜ್ಞತೆ, ಎಲ್ಲರ ಅನುಭವಕ್ಕೂ ಸಿಗುವುದು! ಅಪತ್ ಸಖಿತ್ವ, ಗೋವರ್ಧನೋದ್ಧರಣದಲ್ಲೇ. ಕಿಶೋರ ಕೃಷ್ಣನ ಮನಸೆಳೆಯುವ, ರೂಪ, ಔದಾರ್ಯ ಗುಣಶ್ರೀ ಕಂಸಸಂಹಾರ ಕಾಲದಲ್ಲೇ! ಅದಕ್ಕಾಗಿಯೇ, ದೇವಾಲಯದ ಸ್ತಂಭಗಳಲ್ಲಿ ಇವನ್ನೆಲ್ಲಾ, ನಾವೀಗಲೂ ನೋಡಬಹುದು. ಎಲ್ಲರ ಮೊರೆಯನ್ನು ಸಾವಧಾನವಾಗಿ, ಲಕ್ಷ್ಮಿಯೇ ಮಾತನಾಡಿಸಿದರೂ 'ಮೆಳ್ಳತ್ತುಯಿನ್ನ', ಆ ಕಡೆಗೂ ಗಮನ ಹರಿಸದೆ, ನಿಶ್ಯಬ್ದ ವಾತಾವರಣ! ಇಷ್ಟೆಲ್ಲಾ ಅಂದಚೆಂದಗಳನ್ನು ಒಮ್ಮೆಲೇ ಭಾವನಾವಿಶೇಷಭಕ್ತಿಯಿದ್ದವರು ಸವಿಯಬಹುದಾದ ಸರ್ವಸೌಂದರ್ಯ ಸಮಾಹಾರ ಸ್ಥಳ ಈ ತಿರುಪತಿಯೇ!

ತಮಿಳ್ ತಿರಳ್ ೧ - ೪೦

ಪೆರುವಿಲ್ ಪಹಳಿ, ಕ್ಕುರವರ್ ಕ್ಕೈಚ್ಚೆನ್ದೀ ವೆರುವಿ ಪ್ಪುನಮ್ ತುರನ್ದ ವೇಳಮ್ - ಇರುವಿಶುಮ್ಬಿಲ್ |
ಮೀನ್ ವೀಳ, ಕ್ಕಣ್ಣಿಞ್ಞುಮ್ ವೇಜ್ಗಡಮೇ, ಮೇಲಶುರರ್ ಕ್ಕೋನ್ ವೀಳ ಕಣ್ಣುಹನ್ದಾನ್ ಕುನ್ನು ||

ಕನ್ನಡ ನೆರಳ್

ಹಿರಿ ಬಿಲ್ ಬಾಣದ ಕೊರವರ್ ಕೈಗೆಂಪಂಜಿಗೆ ಹೆದರಿ, ಎಡೆತೊರೆದಾನೆಗಳ್ ಹಿರಿಯಾಗಸದೊಳೂ ಆಸರೆ ಸಿಗದೆ |
ತಾರೆಗಳ್ ಬೀಳುವೊಲ್ ಕಂಡಂಜುವ ವೇಂಕಟವೇ, ಪಿನ್ ಅಸುರರ್-ವೀರನ ಬೀಳುಗೆ ಕಂಡುಲ್ಲಸಿಸಿದನ್-ಗಿರಿಯೈ ||

ತಿರುಪತಿ ತಿರುಮಲೆ ಎಂದರೆ ಈ ಮೊಮ್ಮೊದಲ್ ಆಳ್ವಾರಿಗೆ ಅದೆಷ್ಟು ಪ್ರೇಮ! ಪೆರು = 'ಅವಷ್ಟಭ್ಯ ಮಹದ್ ಧನುಃ' ಎಂದು ಶ್ರೀರಾಮ ನಿಂತಂತೆ! ಹಿರಿದಾದ ಆಳೆತ್ತರಕ್ಕೂ ದೊಡ್ಡದಾದ, ವಿಲ್ = ಧನುಸ್ಸನ್ನು, ಕೈಯ್ಯಲ್ಲಿ ಹಿಡಿದು, ಪಹಳಿ = ಬಾಣಧಾರಿಗಳಾದ, ಕುರವರ್ = ಕಾಡುಕೊರವರ, ಕೈಶೆನ್ದೀ = ಕೈಪಂಜುಗಳಿಗೆ, ವೆರುವಿ = ಹೆದರಿ, ಪುನಮ್ = ಜಮೀನುಗಳನ್ನು ಎಂದರೆ ತಮ್ಮ ತಮ್ಮ ಗೃಹಗಳನ್ನು, ತುರನ್ದ = ಸನ್ಯಾಸಿಗಳಂತೆ ತೊರೆದ, ಬಾಳೆ ಕಬ್ಬು ನೆಲ್ಲು ಮುಂತಾದ ಪೈರುಪಚ್ಚೆಗಳನ್ನು ಹಾಳು ಮಾಡುತ್ತಿದ್ದ, ವೇಳಮ್ = ಆನೆಗಳು, ಇರು ವಿಶುಮ್ಬಿಲ್ = ಇರಲು ಅವಕಾಶ ನೀಡುವ ವ್ಯಾಪಕವಾದ ಆಕಾಶದಲ್ಲಿ, ಮೀನ್ = ನಕ್ಷತ್ರಗಳು, ವೀಳ = ಕೆಳಗೆ ಉತ್ಪಾತವಾಗಿ ಬೀಳುವಂತೆ, ಕಂಡು, ಅಞ್ಞುಮ್ = ಬಹಳ ಅಂಜಿಕೆಯಿಂದ ಇರುವ ಆ ಸನ್ನಿವೇಶವುಳ್ಳ, ವೇಜ್ಗಡಮೇ. ಮೇಲ್ = ಪೂರ್ವಕಾಲದಲ್ಲಿ, ಅಶುರರ್ = ಅಸುರಪ್ರಕೃತಿಯುಳ್ಳವರಿಗೆಲ್ಲಾ ಮುಂದಾಳಾದ ಹಿರಣ್ಯಕಶಿಪುವು, ವೀಳ = ಕೆಳಗೆ ಬಿದ್ದು ಸಾಯುವುದನ್ನು ಕಣ್ಣು, ಉಹನ್ದಾನ್ = ಪ್ರಹ್ಲಾದನು ದೃಢವಾಗಿ "ಶ್ರೀಹರಿಯೇ ಎಲ್ಲೆಲ್ಲೂ ಇರುವುದು" ಎಂದಾಡಿದ ಮಾತು ಸುಳ್ಳಾಗಿ ಬಿಡುತ್ತದೆಯೋ ಎಂಬ ವ್ಯಸನವನ್ನು ತಂದೆಯ ಧನದರ್ಪ, ಸರ್ವಾऽಧಿಕಾರಿಷಾಹಿಯನ್ನೂ, ಅವನೇ ಖುದ್ದಾಗಿ ಇಟ್ಟ, ಕಂಬವನ್ನೂ ಏಕಕಾಲದಲ್ಲಿ ಭೇದಿಸಿದ್ದರಿಂದಲೂ, ಸನಕಾದಿಗಳ ಶಾಪಕ್ಕೆ ಹಿಂದಿದ್ದ ದ್ವಾರಪಾಲನ ಕೈಂಕರ್ಯಕ್ಕೆ, ಮತ್ತೆ ಸಾಮೀಪ್ಯವನ್ನು ತಂದಂತಾದುದರಿಂದಲೂ ಸಂತೋಷಿಸಿದ, ಶ್ರೀನೃಸಿಂಹರ, ಕುನ್ನು = ಬೆಟ್ಟ, ಪ್ರಹ್ಲಾದಸ್ಯ ವ್ಯಸನಮಮಿಶಂ, ದೈತ್ಯವರ್ಗಸ್ಯದಂಭಂ ಸ್ತಂಭಂ ವಕ್ಷಃ ಸ್ಥತಮಪಿ ರಿಪೋರ್ ಯೌಗಪದ್ಯೇನ ಭೇತ್ತುನ್ - ಭೋಜರಾಜ

ಅಧ್ಯಾತ್ಮ ವಿಮುಖತೆ ಮಾನವೀಯತೆಯನ್ನೇ ನಾಶಮಾಡಿ ರಾಕ್ಷಸೀ ಪ್ರವೃತ್ತಿಗಳನ್ನೇ ಹೆಚ್ಚಿಸುವುದಾದರೂ ಅದೇನೂ ಸ್ಥಿರವಲ್ಲ! ರಚನಾತ್ಮಕವಾಗಿ ಸತ್ಯ, ಪ್ರೇಮ, ಕರುಣೆ, ವಿಶ್ವಾಸಶಕ್ತಿಯುಳ್ಳ ಸಜ್ಜನಿಕೆಗೇ ಒಳ್ಳೆಯ ಕಾಲ. ೨೦ನೆಯ ಶತಮಾನ ದಾಟಿ ೨೧ನೆಯದರ ಆದಿಭಾಗದಲ್ಲಿ, ಸರ್ವತ್ರ 'ಸತ್' ಒಂದೇ ಇಡೀ ಪಾರ್ವದೈಶಿಕವಾಗಿ ವ್ಯಾಪಿಸುವ ಐತಿಹಾಸಿಕ ವಿಕಾಸ - **"ಸರ್ವೋದಯ ಸರ್ವೋದಯ ಸರ್ವೋದಯವೇ ಯುಗ ಮಂತ್ರಮ್ ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರಂ"** ಆಧ್ಯಾತ್ಮಿಕ ವಿಶ್ವಕವಿ ಕುವೆಂಪು ಇವರ ಮಾತು ಫಲಿಸಿಯೇ ತೀರುತ್ತದೆ. ೧೮, ೧೯, ೨೦ ಮೂರು ಶತಮಾನಗಳದು, ಚಾಣಾಕ್ಷರಾದ ಪರಕೀಯರ ಕೈಗೆ ನಾವೇ ಗುಲಾಮರಾದುದು ಕ್ರಿ.ಶ. ೧೭೫೭. ಸ್ವಾತಂತ್ರ್ಯದ ದಾಹ, ಸೈನ್ಯ ಶಕ್ತಿಯ ಅವ್ಯವಸ್ಥೆ ೧೮೫೭. ೧೯೪೭. ಕೇವಲ

ರಾಜಕೀಯ ಮುಕ್ತಿ. ೧೯೫೭ ಭೂಮಿ, ಸಂಪತ್ತು, ಬುದ್ಧಿಶ್ರಮಗಳ ವ್ಯಕ್ತಿಗತ, ಸಂಸ್ಥಾಗತ, ಸರಕಾರಗಳದ್ದೂ ಸೇರಿ, ಯಾವುದೇ ಬಗೆಯ, ಒಡೆತನದ ಸ್ವಯಂ ವಿಸರ್ಜನಾ ರೂಪವಾದ, 'ಗ್ರಾಮದಾನ'ಕ್ಕೆ ಸರ್ವಸಂಮತಿರೂಪಿ "ಸರ್ವಃ ಶರ್ವಃ ಶಿವಃ ಸ್ಥಾಣುಃ" ಎಂಬ ಅತ್ಯಾಧುನಿಕ ಸೌಮ್ಯಾವತಾರ ಈ ಸೂಚನೆಗಳಿಂದ, ೩೦೦ ವರ್ಷಗಳ ಪರಿವತ್ಸರ ವಾದಮೇಲೆ, ೨೦೫೭ಕ್ಕೆ ಕ್ರಿ.ಶ. ಸರ್ವಸಂಮತ ಗ್ರಾಮ ದಿವ್ಯದೇಶ ಆಳ್ವಾರ್ ಸಂಮತವಾದ ಶಾಶ್ವತ, ಸರ್ವಕಲ್ಯಾಣಕಾರಿ ಸ್ವಯಂ ವ್ಯವಸ್ಥೆಯೇ ಬರುತ್ತದೆ. ದಳ್ಳಾಳಿ ಮಧ್ಯವರ್ತಿ ವ್ಯವಸ್ಥೆಗಳೆಲ್ಲಾ ತಮ್ಮ ಮೌಲ್ಯಗಳನ್ನು ಈಗಾಗಲೇ ಕಳೆದುಕೊಂಡು, ವಿಜ್ಞಾನದ ವೇಗದ ಬಲದಿಂದಲೂ 'ಸರ್ವೋದಯ'ವೇ ಅದೂ, ಪ್ರೇಮ, ಕರುಣಾ ಮೂಲಕವಾದ ಸರ್ವಸಮಾನತೆ, ಅದನ್ನು ವ್ಯವಹಾರದಲ್ಲಿ ತೋರಿಸುವ ಸತ್ ಪ್ರಜೆಗಳದೇ. ಲೋಭಾಸುರ ಸಂಹಾರಪೂರ್ವಕ ದಾನ ದೈವೀ ಸಂಪತ್ತು, ಸಾಧುತ್ವಕ್ಕೆ ರಕ್ಷಣೆ ಇವೆಲ್ಲಾ ಈ ನೃಸಿಂಹಾವತಾರದ ಪ್ರಸಕ್ತಿಯ ಬಲದಿಂದಲೇ ಮುಂದುವರಿಯುವ ಶುಭ ಕಾಲ! ನಮ್ಮೆಲ್ಲರದೂ ಅದರಲ್ಲಿ ಸಹಭಾಗಿತ್ವವೂ ಇದೆ.

ತಮಿಳ್ ತಿರಳ್ ೧ - ೬೮

ಉಣರ್ವಾರಾರ್ ಉನ್ ಪೆರುಮೈ ಊಳಿದೋರ್ ಊಳಿ, ಉಣರ್ವಾರಾರ್ ಉನ್ ಉರುವನ್ದನ್ನೈ ಉಣರ್ವಾರಾರ್ |
ವಿಣ್ಣಹತ್ತಾಯ್ ಮಣ್ಣಹತ್ತಾಯ್ ವೇಜ್ಗಡತ್ತಾಯ್ ನಾಲ್ವೇದ ಪ್ಪಣ್ಣಹತ್ತಾಯ್ ನೀ ಕಿಡನ್ದಪಾಲ್ ||

ಕನ್ನಡ ನೆರಳ್

ಅರಿವವರಾರ್ ನಿನ್ ಹಿರಿಮೆಯುಂ ಕಲ್ಪಕೂ ಕಲ್ಪಕೂ? ಅರಿವವರಾರ್ ನಿನ್ ರೂಹನದಂ? ಅರಿವವರ್ ಯಾರ್ |
ಬಾನ್‌ಮನೆಯಾ ಮಣ್ ಮನೆಯಾ! ವೆಂಕಟವಾಸಾ! ನಾಲ್ ವೇದೋ ದ್ಗಾನದ ಮನೆಯಾ! ನೀ ಕೆಡೆದಿಹ ಪಾಲ್ ಗಡಲಂ? ||

ಹಿಂದಿನ ಅಂದರೆ ಮುದಲ್ ತಿರುವನ್ದಾದಿಯ ಹಾಡು ೬೭ ರಲ್ಲಿ ಜ್ಞಾನಗೋಚರನೆಂದವರು, ಈಗ ಅತನ ಸ್ವರೂಪವನ್ನಾಗಲಿ ದಿವ್ಯಕಲ್ಯಾಣ ಗುಣಗಳನ್ನಾಗಲಿ ರೂಪವನ್ನಾಗಲಿ ಸ್ವಪ್ರಯತ್ನ ಮಾತ್ರ ಸಾಕೆಂಬ ಭಾವನೆಯ ಯಾರು ತಾನೇ ಅರಿಯಲು ಸಾಧ್ಯ? ಅಷ್ಟೇ ಅಲ್ಲ. ಸರ್ವಜ್ಞನಾದವನೂ ತನ್ನನ್ನೂ ಇಷ್ಟೇ ಎಂದು ಅರಿಯಲಾರ. ಏಕೆಂದರೆ ಅವೆಲ್ಲಕ್ಕೂ ಒಂದು ಕೊನೆಯೇ ಇಲ್ಲ. ಅಳತೆಗೆ ಸಿಗವು. ಅನಂತ, ಅಪರಿಚ್ಛಿನ್ನ.

ತಸ್ಯ ಧೀರಾಃ ಪರಿಜಾನನ್ತಿ ಯೋನಿಮ್, ಯಮೇವೈಷ ವೃಣುತೇ ತೇನ ಲಭ್ಯಃ. ತಸ್ಯೈಷ ಆತ್ಮಾ ವಿವೃಣುತೇ ತನೂಂಸ್ವಾಮ್

ಈ ಪುರುಷ ಸೂಕ್ತ ಹಾಗೂ ಉಪನಿಷತ್ ಪ್ರಮಾಣಗಳಂತೆ ನಿರ್ಹೇತುಕ ಅಸಾಧಾರಣ ವಿಶೇಷ ಕೃಪಾಪಾತ್ರರಾದ ನಮ್ಮಾಳ್ವಾರ್, ಸ್ವರೂಪ ರೂಪ ಗುಣ ವಿಭವ ಚೇಷ್ಟಿತಾದಿಗಳನ್ನು, ತಮ್ಮ ತಿರುವಾಯ್ ಮೊಳಿಯ ಮೊದಲೆರಡು ದಶಕಗಳಿಂದ ಕರತಲಾಽಽಮಲಕವಾಗಿ ಕಂಡು ಪರೋಪದೇಶಮಾಡಿಯೂ, ಮೂರನೇ ದಶಕದ ಆರಂಭದಲ್ಲೇ ಭಗವಂತನ ಸೌಲಭ್ಯ ಸೌಶೀಲ್ಯ ಗುಣಗಳನ್ನು ಅನುಭವಿಸಿ ಮೋಹಂಗತರಾದರು. ೬ ತಿಂಗಳಾದ ಮೇಲೆಯೇ ಅವರು ಮತ್ತೆ ತಮ್ಮ ನೆಲೆಗೆ ಬಂದುದು! ಹೀಗೆ ನಮ್ಮಂತಹವರೇ ಆಗಲಿ, ದೇವರೇ ಆಗಲಿ, ಜ್ಞಾನಿ ಪ್ರಪನ್ನ ಜನ ಕೂಟಸ್ಥರೇ ಆಗಲಿ ಅರಿಯಲಾರರಪ್ಪಾ! ನಿನ್ನ ಆ ಪರತ್ವ, ಇಲ್ಲಿನ ಸೌಲಭ್ಯ ಉಭಯವೂ ಸರ್ವಾತೀತವಾದುದು. **"ಪರಮಯೋಗಿನಾಮಪಿ ವಾಙ್ಮನಸಾಗೋಚರಮ್"**

ವಿಣ್ ಅಹತ್ತಾಯ್ = ಓ! ವೈಕುಂಠಾಽಽನಂದನಿಲಯಾ! ಈ ಮಣ್ ಅಹತ್ತಾಯ್ = ಮಣ್‌ಮನೆಯಾ! ಈ ಭೂವೈಕುಂಠಾಽಽನಂದನಿಲಯಾ! ತಿಮ್ಮಪ್ಪನ ವಿಮಾನಕ್ಕೆ "ಆನಂದ ನಿಲಯ" ಎಂಬ ಹೆಸರು ಶಿಷ್ಟಗೋಷ್ಠಿಯೇ ಪ್ರಸಿದ್ಧ. ವೇಜ್ಗಡತ್ತಾಯ್ = ಪಾಪವಿನಾಶಿನೀ ತೀರನಿವಾಸಾ! ಪಣ್ = ಸ್ವರಪ್ರಧಾನವಾದ, ನಾಲ್ ವೇದಂ ಅಹತ್ತಾಯ್ = ಚತುರ್ವೇದಗಳಿಗೂ = ವಾಚ್ಯನಾಗಿ ಸ್ಥಿರವಾಸಿಯಾದವನೇ! ತಿರುಪ್ಪಾವೈ "ಊತ್ತಮುಡೈಯಾಯ್" ದೃಢ ಪ್ರಮಾಣವೇದ್ಯಾ ಎಂಬುದೂ ಈ ಮೊದಲಾಳ್ವಾರ್ ಪ್ರಸಾದವೇ ಆಂಡಾಳಿಗೂ 'ಕುತ್ತು = ವಿಳಕ್ಕು' ೧೯ನೇ ಪಾಶುರದಲ್ಲಿ. ಉನ್ = ನಿನ್ನ. ಪೆರುಮೈ = ವಿಭವ ಐಶ್ವರ್ಯಗಳ ಪರತ್ವವನ್ನಾಗಲಿ, ಸ್ವರೂಪ ರೂಪಗುಣಗಳ ಗರಿಮೆಯನ್ನಾಗಲಿ, ಉಣರ್‌ವಾರ್ ಆರ್ = ಇಷ್ಟೇ ಎಂದು ಯಾರು ತಾನೇ ಅಳೆಯಲ್ಕಾದೀತು? ಊಳಿದೋರು ಊಳಿ = ಚತುರ್ ಮುಖನ ಒಂದೊಂದು ಹಗಲೆಂಬ ಚತುರ್‌ಯುಗಸಹಸ್ರ ಕಲ್ಪ ಕಲ್ಪ ಕಾಲ, ಅದೇ ಅವನ ಅಂತಹ ೧೦೦ ವರ್ಷವೆಂದರೆ ೧೪ ಕೋಟಿ ೬೭ ಸಾವಿರ, ಇಲ್ಲಿನ ನಮ್ಮ ವರ್ಷಕ್ಕೆ ಒಂದು "ಬ್ರಹ್ಮ ಕಲ್ಪ"ವಾಗುವುದು. ಇಂತಹ ಅನೇಕ ಅನಂತಕಾಲ ಎಂಬ ಪಿಂಡಿತಾರ್ಥ "ಈ ಊಳಿದೋರು ಊಳಿ" ಎಂಬ ಆಳ್ವಾರ್‌ಪದಕ್ಕಿದೆ. ಚತುರ್‌ಯುಗ ಸಹಸ್ರಕ್ಕೆ ಬ್ರಹ್ಮನ ಒಂದು ಹಗಲು ಆ ಲೆಕ್ಕದಲ್ಲಿ ೩೬೫ ಹಗಲು ನಮ್ಮ ೧ ವರ್ಷ. ಅಂತಹವು ೧೦೦. ೪೩೨೦೦ x ೩೬೫ x ೧೦೦ = ೧೪೬೭೦೦೦೦೦ ನಮ್ಮ ವರ್ಷದ ಲೆಕ್ಕದಲ್ಲಿ. ಮಾನವ ಅತ್ಯನ್ತ ವಿನಯ ಸಂಪನ್ನನಾಗಲು ಶರಣರು ನಾನಾ

ಬಗೆಯ ಸರಳ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳುತ್ತಾರಷ್ಟೆ! ಇವರ ಶಿಕ್ಷಣ ಪದ್ಧತಿಯಿಂದಲೇ ಮಾನವನ ಉದ್ಧತ ಪ್ರವೃತ್ತಿಯ ಆವೇಗ ಕಡಿಮೆಯಾಗುವುದು. ಸಾಮಾಜಿಕ ತಣ್ಪು ಹರಡುವುದು. ವಿನಯ ಸ್ವಾಭಾವಿಕವಾಗುವುದು. "ವಿನಯಾದ್ ವಿದ್ಯಾ".

ಉನ್ ಉರುವಂತನ್ನೈ = ಸರ್ವೇಶ್ವರನ ವಿಶ್ವರೂಪಗಳನ್ನೆಲ್ಲಾ ಯಾರು ಲೆಕ್ಕ ಹಿಡಿಯಬಲ್ಲರು? ನೀ = ನೀನು, ಕಿಡನ್ದ = ಪವಡಿಸಿರುವ, ಪಾಲ್ = ಕ್ಷೀರಸಾಗರವನ್ನು, ಉಣರ್‌ವಾರಾರ್ = ಯಾರು ಲೆಕ್ಕ ಮಾಡಬಲ್ಲರು? ನಾಲ್‌ವೇದಪ್ಪಣ್ ಅಹತ್ತಾಯ್ ಎಂಬುದಕ್ಕೆ ವೇದ ಸರ್ವಸ್ವಗಳ, ಪ್ರವರ್ತಕನೇ! ಎಂದೂ ಅರ್ಥೈಸಬಹುದು.

ತಮಿಳ್ ತಿರಳ್ ೧ - ೭೬

ವಳಿ ನಿನ್ನು ನಿನ್ನೈ ತ್ತೊಳುವಾರ್ ವಳುವಾ ಮೊಳಿ ನಿನ್ನ ಮೂರ್ತಿಯರೇ ಯಾವರ್ - ಪಳುದೊನ್ನುಮ್ |
ವಾರಾದ ವಣ್ಣಮೇ ವಿಣ್ ಕೊಡುಕ್ಕುಮ್ - ಮಣ್ಣಳನ್ದ ಶೀರಾನ್ ತಿರುವೇಙ್ಗಡಮ್ ||

ಕನ್ನಡ ನೆರಳ್

ಪಥದೊಳು ನಿಂದೇ ನಿನ್ ತೊಳಗುವವರ್, ಅಳುಕಿಲ್ ಶ್ರುತಿಪೇಳ್ ಮೂರ್ತಿಯರೇ ಅಹರ್! ಕೊರೆಯೊಂದೂ |
ಬಾರದ ತೆರವೇ ಬಾನ್ ಈಯ್ವುದು, ಮಣ್ಣಳೆದಾ ಭೂರಿ ಸುಶೀಲನ, ತಿರುವೇಂಕಟವೇ ||

ಸರ್ವೇಶ್ವರನಾದ ನಿನ್ನನ್ನು ತೊಳಗುವುದಿರಲಿ. ನಿನ್ನ ಸಂಬಂಧವುಳ್ಳ ಗಿರಿ ಪ್ರದೇಶವೇ ಸಾಕು! ಸಕಲ ಸೌಭಾಗ್ಯಗಳೂ ಕೈಗೆ ಹತ್ತುವುವು.

ವಳಿ = ಶಾಸ್ತ್ರೀಯ ಕ್ರಮದಲ್ಲಿ. ಅಂದರೆ ಕೈಯ್ಯಣ್ಣೆಯ ತೈಲಧಾರೆಯಂತೆ ಅಖಂಡ ಅವಿಚ್ಛಿನ್ನವಾದ "ನೆನಹು". ಅದೂ ಪ್ರೀತಿ ರೂಪು ತಳೆಯಬೇಕು. ಕಡ್ಡಾಯವೆಂಬ ಭಾವ ಬರಬಾರದು. ಸ್ವಯಂ ಪ್ರಿಯರೂಪವಾಗುವಂತೆ, ಮುಕ್ತ ಮನಸ್ಸು! ದೇವಾಲಯಗಳಲ್ಲಿ ನೋಡಿದ ಆ ಪ್ರಿಯತಮ ಯಾವಾಗಲೂ, ಸಕಲ ವ್ಯವಹಾರಗಳಲ್ಲೂ ಕಾಣುವಂತೆ ಪ್ರತ್ಯಕ್ಷ ಸಮಾನಾಕಾರವಾದುದು. ಅದೇ ಭಕ್ತಿ ಎಂಬುದು,

"ವೇದನಂ ಧ್ಯಾನವಿಶ್ರಾನ್ತಂ! ಧ್ಯಾನಂ ಶ್ರಾಂತಂ ಧ್ರುವಾಸ್ಮೃತೌ।
ಸಾ ಚ ದೃಷ್ಟಿತ್ವಮಭ್ಯೇತಿ, ದೃಷ್ಟಿಃ ಪ್ರೀತಿತ್ವಮೃಚ್ಛತಿ॥"

"ಸ್ನೇಹಪೂರ್ವಮನುಧ್ಯಾನಂ ಭಕ್ತಿರಿತ್ಯಭಿಧೀಯತೇ॥"

ಇಂತಹ ಭಕ್ತಿಮಾರ್ಗದಲ್ಲಿ ಸ್ಥಿರವಾಗಿ ನಿಂತು. ನಿನ್ನೈ = ಓ ತಿಮ್ಮಪ್ಪಾ! ನಿನ್ನನ್ನು ತೊಳುವಾರ್ = ಆಶ್ರಯಿಸುವವರು **"ಭಕ್ತಿಮಪಿ ಪ್ರಯಚ್ಛಮೇ"** ಎಂದು ಯಾಮುನರೂ, **"ಶ್ರೀ-ನಿವಾಸೇ ಪರಸ್ಮಿನ್ ಬ್ರಹ್ಮಣಿ ಮಮ ಶೇಮುಷೀ ಭಕ್ತಿರೂಪಾ ಭವತು"** ಎಂದು ರಾಮಾನುಜರೂ. "ತಿರುವೇಙ್ಗಡಪ್ಪೊರುಪ್ಪ! ನಿನ್ ಕಾದಲ್ಕೈ ಅರುಳ್ ಎನಕ್ಕು" ಎಂದು ತಿರುಮಂಗೈ ಮನ್ನನ್ ಸಹ ತಮ್ಮ ಪೆರಿಯ ತಿರುಮೊಳಿ, (೫- ೫ಳನೇ) ಪದ್ಯದಲ್ಲಿ ಉಲ್ಲೇಖಿಸಿದ್ದಾರೆ. ಆಳ್ವಾರ್ ಶರಣರೆಲ್ಲಾ "ಪೇಶಿತ್ತೇಪೇಶುಂ ಏಕಕಂಠರೇ!" ಸಂತರಲ್ಲಿ ಪರಸ್ಪರ ವಿರುದ್ಧಾಭಿಪ್ರಾಯಗಳೇ ಸುಳಿಯವು. ವಳುವಾ = ನಿತ್ಯವಾದ, ಮೊಳಿ = ಅನಾದಿ ಅಪೌರುಷೇಯವಾದ ವೇದಗಳಲ್ಲಿ. ನಿನ್ನ = ಅವಿಚಾಲ್ಯವಾಗಿ ಪ್ರತಿಪಾದಿಸಿರುವಂತೆ, ಮೂರ್ತಿಯರೇ = ಸ್ವಸ್ವರೂಪ ರೂಪಗುಣಾದ್ಯಾವಿರ್ಭಾವ ಸಂಪನ್ನರಾಗಿ. ಆವರ್ = ಆಗುವರು. ಮಣ್ ಅಳನ್ದ = ಪೂರಾ ಮಣ್ಣನ್ನಳೆದ, ಶೀರಾನ್ = ತ್ರಿವಿಕ್ರಮ ಎಂದರೆ ಮೂರು ಹೆಜ್ಜೆಯ ಹೆಚ್ಚಳದವನ ತಿರುವೇಙ್ಗಡಮೇ = ಈ ಶ್ರೀಮತ್ ಪದವೇ. ಪುಣ್ಯ = ಪಾಪಾಪಹಾರಿ, ವಿಣ್ = ಆ ಪರಮಪದವನ್ನೂ. ಕೊಡುಕ್ಕುಮ್ = ಸೇರಿಸಿಕೊಡುವುದು.

"ಆತ್ಮಾವಾsರೇ ದ್ರಷ್ಟವ್ಯಃ ಶ್ರೋತವ್ಯಃ ಮನ್ತವ್ಯಃ ನಿದಿಧ್ಯಾಸಿತವ್ಯಃ" "ವಿಜ್ಞಾಯ ಪ್ರಜ್ಞಾಂ ಕುರ್ವೀತ" "ಉಪಾಸನಮ್ ಧ್ರುವಾ ಸ್ಮೃತಿ" : "ದರ್ಶನ ಸಮಾನಾಕಾರತಾssಪತ್ತಿಃ" "ಯಮೇವ ಏಷ ವೃಣುತೇ ತೇನ ಲಭ್ಯಃ" "ಪ್ರಿಯತಮ ಏವ ಹಿ ವರಣೇಯೋ ಭವತಿ" "ಸ್ವೇನ ರೂಪೇಣ ಅಭಿನಿಷ್ಪದ್ಯತೇ" "ವಿವೃಣುತೇ ತನೂಂ ಸ್ವಾಮ್" "ತಮ್ಮೈಯೇ ನಾಳುಮ್ ವಣಙ್ಗೆತ್ತೊಳುವಾರ್‌ಕ್ಕು ತಮ್ಮೈಯೇ ಒಕ್ಕಅರುಳ್ ಶೈವರ್" "ತಿರುವೇಙ್ಗಡ ಮಾಮಲೈ ಒನ್ನುಮೇ ತೊಳ. ನಮ್ ವಿನೈ ಓಯುಮೇ" ಇತ್ಯಾದಿ ವೈದಿಕ, ಪರಮ ವೈದಿಕ ಪ್ರಮಾಣಗಳಂತೆ, ಎಂಬುದೇ "ಇಲ್ಲಿನ ವಳಿ ನಿನ್ನು" ಎಂಬುದರ ವಿಸ್ತಾರ. ರಾಮಾನುಜರ ತಮ್ಮ "ಎಂಬಾರ್" ಪ್ರತಿನಿತ್ಯ ಪ್ರಾತರನು ಸಂಧಾನ ಮಾಡುತ್ತಿದ್ದ ಪಾಶುರವಿದು.

ತಮಿಳ್ ತಿರಳ್ ೧ - ೭೭

ವೇಜ್ಗಡಮುಂ ವಿಣ್ ನಹರುಂ ವೆ.ಂ.ಕಾವುಮ್ ಪೂಜ್ಗಿಡಂಗಿನ್ ನೀಳ್ ಕೋವಲ್ ಪೊನ್‌ನಹರುಮ್ - ನಾನ್ಗಿಡತ್ತುಮ್ |
ನಿನ್ನಾನ್ ಇರುನ್ದಾನ್ ಕಿಡನ್ದಾನ್ ನಡನ್ದಾನೇ ಎನ್ನಾಲ್ ಕೆಡು ಮಾಮಿಡರ್ ||

ಕನ್ನಡ ನೆರಳ್

ವೇಂಕಟವೂ, ಬಾನ್ ನಗರವೂ, ವೆ.ಂ.ಕಾವೂ, ಪೂವಾಂತಾಗಳ್ ನೀಳ್ ತಿರುಕ್ಕೋವಲ್ ಹೊನ್ನಗರ ಈ ನಾಲ್ಕೆಡೆಯಲ್ಲೂ |
ನಿಂತೇ ಕುಂತೇ ಕೆಡೆದೇ ನಡೆದಿಹನೇ ಎಂದರೆ ಕೆಡಗುಗೆ ಎಲ್ಲಾಯೆಡರೂ ||

ಸರ್ವೇಶ್ವರನು ತಾನೇ ಇಷ್ಟಪಟ್ಟು ಸಾನ್ನಿಧ್ಯ ಗೈದಿರುವ ದಿವ್ಯ ದೇಶಗಳು ಇರಲಾಗಿ ಈ ಭೂಲೋಕ, ಹುಟ್ಟು ಸಾವಿನ ಸಂಸಾರ ಮಂಡಲ ಹೇಗಾದೀತು? ಸಮ್ ಸರತಿ ಇತಿ ಸಂಸಾರಃ ಎಂದರೆ ಸಮ್ ಒಂದು ಶರೀರವನ್ನು ಈ ಜೀವಾತ್ಮ ತನ್ನ ಪೂರ್ವಾರ್ಜಿತ ಕರ್ಮಗಳಿಂದ ಪಡೆದು ಹೊಕ್ಕಮೇಲೆ, ಅಷ್ಟಕ್ಕೇ ಮುಗಿಯದೆ, ಮೆಲ್ಕೇಲೆ ಇನ್ನೂ ಚೆನ್ನಾಗಿಯೇ, ಅಲ್ಲೂ ಪುಣ್ಯಪಾಪಗಳಿಗೇ ಇಂಬಾಗಿ ಮತ್ತೊಂದು ಹುಟ್ಟು! "ಸರತಿ" ಸರದಿ ಪ್ರಕಾರ ಪುನಃ ಪುನಃ ಸಂಚರಿಸುತ್ತಿರುವುದಕ್ಕೇ "ಸಂಸಾರ" ಎಂಬ ಪದ ಸಂಸ್ಕೃತದಲ್ಲಿ. ಸಂಸಾರ ಎಂದರೆ ಹೆಂಡತಿ ಮಕ್ಕಳು, ವ್ಯವಹಾರ ಎಂಬಷ್ಟೇ ಅರ್ಥವಲ್ಲ. ಜನ್ಮ ಪರಂಪರೆ ಎಂಬ ಭಾವವನ್ನು ನಾವು ಗ್ರಹಿಸಬೇಕು.

ವೇಜ್ಗಡಮುಮ್ = ನಮ್ಮ ಪುಣ್ಯ ಪಾಪವೆರಡನ್ನೂ, ದಗ್ಧ ಮಾಡಿಯೇ ಬಿಡುವ ಈ ತಿರುಮಲೈ ಇರಲಾಗಿ, ವಿಣ್‌ನಹರುಂ = ಆ ಪರಮಪದವೂ, "ವೆ.ಂ.ಕಾ" ವುಮ್ ಕಂಚಿ ಯಥೋಕ್ತಕಾರಿಸನ್ನಿಧಿಯೂ, ಅ.ಂ.ಕಾದ ಏನೇನೂ ಕೊರೆಯಿಲ್ಲದ. ಪೂಮ್ = ಸದಾಕಾಲವೂ ಪುಷ್ಪಿತವಾದ, ಕಿಡಜ್ಗೆನ್ = ನಂದನವನಗಳಿಂದ, ನೀಳ್ = ಸುತ್ತುವರಿದಿರುವ, ಕೋವಲ್ = ತಿರುಕ್ಕೋವಲೂರ್ ಎಂಬ, ಪೊನ್ = ಎಲ್ಲರೂ ಆಸೆ ಪಡುವ ಚಿನ್ನದಂತಹ, ನಹರಂ = ನಗರವೂ "ನಗ" ಬೆಟ್ಟವೇ "ರ" ಯಾವ ಊರಿಗೆ ರಕ್ಷಕವೋ ಅಂತಹ ಪಟ್ಟಣವನ್ನು ನಗರ ಎನ್ನುತ್ತಾರೆ. ನಾನ್ಗು ಇಡತ್ತುಮ್ = ಈ ಚತುರ್ಧಾಮಗಳಲ್ಲಿಯೂ ಕ್ರಮವಾಗಿ ತಿಮ್ಮಪ್ಪನಾಗಿ ನಿಂತಿರುವನು.

ಇರುನ್ದಾನ್ = ಠೀವಿಯಿಂದ ಕುಳಿತಿರುವವನೇ, ಕಿಡನ್ದಾನ್ = ಮಲಗಿರುವವನೇ ನಡೆದಾಡುವವನೇ, ಎನ್ನಾಲ್ = ಎಂದು ನೆನೆದು ಉಚ್ಚರಿಸಿದರೇ ಸಾಕು! ಸ್ಮರಣೆಯಲ್ಲಿಯೂ ವಚನದಲ್ಲಿಯೂ ಆ ವಸ್ತುವಿನೊಂದಿಗೆ ಸೂಕ್ಷ್ಮ ಸಂಬಂಧ ಏರ್ಪಟ್ಟು, ಉಭಯವೂ ವಿದ್ಯುತೀಕರಣವಾಗಿಸಲ್ಪಟ್ಟು, ಸೇರಿ ಬಿಡುತ್ತವೆ! ಇದೇನೂ ಅತಿಶಯೋಕ್ತಿಯಲ್ಲ. ವಿಜ್ಞಾನ ಅಧ್ಯಾತ್ಮದ ಸಹಾಯಕ್ಕೆ ಹಿಂದಿಗಿಂತ ಹೆಚ್ಚಾಗಿ ಇವೊತ್ತು ನಮ್ಮಲ್ಲಿಗೆ ಧಾವಿಸಿದೆ! ಇಡರ್ = ಲೈನ್ ಕ್ಲಿಯರ್ ಆಗಿರುವುದರಿಂದ, ಅಶುಚಿಕಾರಿಗಳಾಗದ ಪುಣ್ಯಪಾಪಗಳು ಯಾತ್ರಾಸ್ಥಳ ಬ್ರಾಹ್ಮ ಅಣುಪುಂಜಗಳಿಂದ ಮೇಲ್‌ಗೈಯ್ಯಾಗಿ, ಬೆಳಕು ಹೇಗೆ, ತನ್ನ ತೇಜಸ್ಸಿನಿಂದ ಕತ್ತಲೆಯನ್ನು ಇಲ್ಲದಂತೆ, ಎಸಗುತ್ತದೆಯೋ ಹಾಗೆ. ಕೆಡುಮ್, ಪ್ರಾಣಿಮಾತ್ರಗಳ ಸಂಸಾರದ ದುಗುಡ ದುಮ್ಮಾನಗಳು ಸ್ವಯಮೇವ ಅದೃಶ್ಯವಾಗುವುವು. ಯಾತ್ರಾ ಸ್ಥಳಗಳಲ್ಲಿ ಬಲು ಕಾಲದಿಂದ, ಸತ್ಪುರುಷರ ಸನ್ಮಹಿಳೆಯರ ಸದ್‌ಭಾವ ತರಂಗಗಳು, ಈ ಇಲ್ಲದ ಅಸತ್ತುಗಳನ್ನು, ನಮಗೆ "ಎಲ್ಲಿದೆ? ಅಯ್ಯಾ! ನೋಡು" ಎಂದು ಪ್ರತ್ಯಕ್ಷೀಕರಿಸಿಯೇ ಬಿಡುವುವು. ಪುಣ್ಯ ಪಾಪ, ಆಯಾರಾಂ! ಗಯಾ ರಾಮ್‌ಗಳಷ್ಟೇ! ಸದ್‌ಭಾವವೇ ಶಾಶ್ವತ!

ದುಃಖ ಕಂಡಂತಾದಾಗ ಜನ "ಅಮ್ಮಾ! ಎಂದರೇ, ಎಷ್ಟೊಂದು ಹಾಯಾಗುವುದು? ಲೋಕಕ್ಕೆಲ್ಲಾ "ತ್ವಮೇವ ಮಾತಾ ಚ" ಎಂಬಂತೆ "ತಾಯ್" ಆಗಿರುವವ, ನಮ್ಮಗಳನ್ನು ಹೆತ್ತು ಸೃಷ್ಟಿಸಿ ಪರಿಪಾಲಿಸದೇ ಇರುತ್ತಾನೆಯೇ? ಅಂಥವನಿಗೂ ಆಸರೆ ನೀಡಿರುವ ಸ್ಥಾನಗಳಿಗೂ ಆ ಮಹಿಮೆ ಇದ್ದೇ ಇದೆ. **"ತಾಯ್ಖು" "ಸನ್ತಾನ ಪಾಲನಯೋಃ"** ಈ ಉಭಯಾರ್ಥವೂ "ತಾಯಿ" ಶಬ್ದಕ್ಕೆ ಉಂಟು. ಶಬ್ದ ಶಕ್ತಿ ಹೀಗೆ ವೈಜ್ಞಾನಿಕವಾಗಿ ಹೆಚ್ಚಿದರೆ ಎಷ್ಟೋ ಪಟ್ಟು ನಾವು ಸ್ವಯಂ ಆನಂದವಾಗಿ, ಅವನ, ದಿವ್ಯ ದೇಶಗಳ ಕಿಂಕರರಾಗಿರಬಹುದು. ದಿವ್ಯದೇಶಗಳ ನಾಮ ಸ್ಮರಣೆ ಮಾಡಿದರೆ ನರನ ಎಡರುತೊಡರುಗಳು ಏಕೆ ತಾನೆ ಹೇಗೆ ತಾನೇ ಹೋಗವು?

ವಿಣ್ಣಹರಂ ಎಂದರೆ ಕಾಂಚೀಪುರದ "ಪರಮೇಶ್ವರ ವಿಣ್ಣಹರಂ" ದಿವ್ಯದೇಶವೂ ಆಗಬಹುದು. ಈ ನಾಲ್ಕು ಭಂಗಿಗಳಲ್ಲಿ ಸ್ವಾಮಿ, "ಸ್ವಯಂ ವ್ಯಕ್ತ, ಆರ್ಷ, ಸೈದ್ಧ, ಭಾಕ್ತ" ಎಂಬ ಈ ನಾಲ್ಕು ಬಗೆಯ ಆಲಯಾಶ್ರಿತ ಗ್ರಾಮಗಳೆಂದೂ ಆಗಬಹುದು. ಈ

ನಿರ್ದಿಷ್ಟ ಸ್ಥಳಗಳ ಸಂಖ್ಯೆ ಎಲ್ಲಾ ಪವಿತ್ರ ಸ್ಥಾನಗಳಿಗೂ, ಉಪಲಕ್ಷಣ ವಿಧಯಾ ಅನ್ವಯಿಸುತ್ತದೆ. ಇಷ್ಟೇ ಎಂಬ ಪರಿಗಣನೆಯ ಆಗ್ರಹ ಬೇಡ.

ತಮಿಳ್ ತಿರಳ್ ೧ - ೮೨

ಪಡೈಯಾರುಮ್ ವಾಳ್ ಕಣ್ಣಾರ್ ಪಾರಶಿನಾಳ್, ಪೈಮ್ಬೂಂ ತೊಡೆಯಲೋಡೇನ್ದಿಯ ತೂಪಮ್ ಇಡೈಯಿಡೈಯಿಲ್ |
ಮೀನ್ ಮಾಯ ಮಶೂಣುಂ ವೇಙ್ಗಡಮೇ, ಮೇಲೊರುನಾಳ್ ಮಾನ್ ಮಾಯ ಎಯ್ದಾನ್ವರೈ ||

ಕನ್ನಡ ನೆರಳ್

ಬಾಳ್‌ಪೋಲ್ ಕಣ್ಣಿಯರ್ ದ್ವಾದಶಿನಾಳ್, ಬಿರಿಪೂ ಮಾಲೆಯೊಡೆತ್ತಿಹ ಧೂಪವು ಎಡೆಯೆಡೆಯೊಳ್ |
ಬಾನ್ ಮಾಸಲು ಗೈ ವೇಂಕಟವೇ ಪಿನ್ ಓರ್‌ನಾಳ್ ಮಾನ್ ಮಾಣುವೊಲ್ ಹೊಡೆದವನ್ ಗಿರಿಯೈ ||

ಪಡೈಅರುಮ್ = ಆಯುಧಗಳಾದ ಈಟಿ, ಕತ್ತಿಗಳಿಗೆ ಸಮಾನವಾದ, ವಾಳ್ = ಹೊಳಪಿನಿಂದ ಥಳಥಳಿಸುವ, ಕಣ್‌ಆರ್ = ಕಣ್ಣುಗಳಿಂದಲೇ ಬಿತ್ತರಗೊಂಡ ಚೆಲುವಿಯರು, ಈಟಿ ಕತ್ತಿಗಳಿಗೆ, ಹರಿತದಲ್ಲಿ ಅತಿಶಯವಿರುವಂತೆ, ತಿಮ್ಮಪ್ಪನಲ್ಲಿ "ಕಾಮೋಷ್ಪಗುಣಃ" ಎಂಬಂತೆ, ಪುರುಷರ ಭಕ್ತಿಯ ಎಂಟು ಪಟ್ಟು ಹೆಂಗಸರಿಗೆ ಇದೆಯೆಂಬ ಭಾವ. ನಲ್‌ಕಾಮ, ಶರಣರ ಭಾಷೆಯಲ್ಲಿ ಭಕ್ತಿಯೇ ಹೊರತು ಲೋಕಾಽಽರೂಢಿಯಂತೆ ಅಪಾರ್ಥಗಳಿಗೆ ಎಡೆಯಿಲ್ಲ. ಸಾಹಿತ್ಯಕಾರರು, ಸಾರಾಸಗಟಿನ ಭೂಮಿಕೆಯಿಂದ ಸ್ತ್ರೀಯರ ವರ್ಣನೆ ಮಾಡಿರುವುದೆಲ್ಲಾ "ಆಳ್ವಾರ್ ಸಾಹಿತ್ಯ"ಗಳಲ್ಲಿ ಉಚ್ಚಕೋಟಿಗೆ ಏರಿ ಸರ್ವವರ್ಣನಾ ವೈಖರಿಗಳೂ, ಪರಮಾತ್ಮನ ಸಂಬಂಧವನ್ನೇ ಪಡೆದು, ಅವುಗಳೂ ಪುನೀತವಾಗುವುವು. ಆದುದರಿಂದಲೇ ಶರಣವಾಙ್ಮಯಗಳನ್ನು "ಪವಿತ್ರ ಸಾಹಿತ್ಯ" ಎನ್ನುವುದು. ಇವುಗಳಿಂದ ಆಗುವ ನಿರಪಾಯ ಸ್ಥಿರ ಪರಿವರ್ತನಾ ಕ್ರಾಂತಿ, ಉಳಿದ ಸಾಹಿತ್ಯ ಸಡಗರಗಳಿಂದಾಗದು. ಮಹಾಕವಿಗಳೂ ಅಂತರಂಗದಲ್ಲಿ ಇದನ್ನು ಗಮನಿಸಿದ್ದಾರೆ. ಇರುವ ಜನರ ಸಾಧಾರಣ ಮಟ್ಟವನ್ನೂ ಮೆಲ್ಲಮೆಲ್ಲನೆ "ಪತಿವ್ರತೆ" ಯಾದವಳು ತನ್ನ ಗಂಡನನ್ನು "ಪತ್ನೀವ್ರತನನ್ನಾಗಿಯೂ" ಕೌಶಲದಿಂದ ಎಸಗುವ "ಕಾನ್ತಾಸಂಮಿತ"ಗಳೇ ಉತ್ತಮ ಸಾಹಿತ್ಯಗಳು. ಸತ್ಯ, ಶುಚಿತ್ವವನ್ನು ಧಿಕ್ಕರಿಸುವ ಕಗ್ಗಂಟುಗಳನ್ನು ಇನ್ನೂ ಹೆಚ್ಚಿಸುವ ಸಾಹಿತ್ಯವನ್ನು, ನಾವೆಲ್ಲರೂ ಬಹಿಷ್ಕರಿಸಲೇಬೇಕು. ಕಥೆ ಕಾದಂಬರಿ, ರೇಡಿಯೋ, ಸಿನಿಮಾ, ಟಿ.ವಿ., ಪತ್ರಿಕೆ, ಕವಿ, ಲೇಖಕರೆಲ್ಲಾ ಈ ಕಡೆ ಇನ್ನೂ ಹೆಚ್ಚು ಗಮನವಿತ್ತರೆ ಜಗತ್ತು ಸತ್ಯ ಪ್ರೇಮ ಕರುಣಾ ಸೇವಾಪರಾಯಣವಾಗುತ್ತದೆ. ಶಿಶುವಿಹಾರ, ಪ್ರಾಥಮಿಕ ಶಿಕ್ಷಣದಲ್ಲಿಯೇ ಈ ಶರಣ ಸೂಕ್ತಿಗಳ ಬಾಯಿಪಾಠ, ತಕ್ಕಷ್ಟು ಕಥಾರೂಪವಾಗಿ ಮಕ್ಕಳಿಗೆ ಭಾರವಾಗದಂತೆ ಸಾಮಾನ್ಯಗಾನ, ಕಡ್ಡಾಯವಾಗಿ ಜಾರಿಗೆ ಬಂದರೆ, ಸರ್ವಧರ್ಮ ಸಮಾನತೆ ಸಮನ್ವಯದ ತಳಪಾಯ, ಜಗತ್ತಿಗೆ ಲಭ್ಯವಾಗುತ್ತದೆ. ಮುಂದೆ ಮುಂದೆ ಅನುಭವ ವಯಸ್ಸು ಹೆಚ್ಚಿದಂತೆ. ಇವುಗಳ, ಉಪಯೋಗ ಎಲ್ಲರ ತಲೆ ಕಾಯುತ್ತದೆ. ಪೋಷಕರು ತಮ್ಮ ತಮ್ಮ ಮನೆಗಳಿಂದಲೇ ಈ ವಿದ್ಯಾದಾನ ಆರಂಭಿಸೋಣ.

ಭಕ್ತಿಭಾಗ್ಯಶಾಲಿನಿಯರಾದ ಸ್ತ್ರೀಯರು ಏಕಾದಶಿ ಉಪವಾಸವಿದ್ದು, ಪಾರಶಿನಾಳ್ = ದ್ವಾದಶಿ ಬೆಳಗಿನಝಾವ ತಿಮ್ಮಪ್ಪನ ದಿವ್ಯರೂಪ ಸಂದರ್ಶಿಸಲು ಅವರ ಕಣ್ಣು ಸಾರ್ಥಕವಾಗುವುವು. ಅವರ ದೇವನ ದರ್ಶನ ಸಡಗರಕ್ಕೆ, ಸೀತೆಯ ಉದಾಹರಣೆಯೊಂದು ಇಲ್ಲಿಗೆ ಹೊಂದಿಬರುತ್ತದೆ. ಅಯೋಧ್ಯೆಯಲ್ಲಿ, ದಶರಥ, ಸರ್ವಪ್ರಜೆಗಳ ಸಂಮತಿ ಪಡೆದೇ ಪಟ್ಟಾಭಿಷೇಕಕ್ಕೆ ಸಿದ್ಧತೆ ನಡೆಸಿದ. ನಾಳೆ ಮಂಗಳಕಾರ್ಯ ಎನ್ನುವಾಗ, ದಂಪತಿಗಳು ಉಪವಾಸವಿರಬೇಕೆಂಬುದು. ಶಾಸ್ತ್ರಕಾರರ ವೈಜ್ಞಾನಿಕ ಹಾಗೂ ಸ್ವಾಸ್ಥ್ಯ ದೃಷ್ಟಿ. ಅಯೋಧ್ಯಾ ನಗರದ ನಾರಾಯಣ ಸ್ವಾಮಿಯ ದರ್ಶನ ಕಾಲದಲ್ಲಿ **"ಸಹಪತ್ನ್ಯಾ ವಿಶಾಲಾಕ್ಷ್ಯಾ! ನಾರಾಯಣ ಮುಪಾಗಮತ್"** ಎಂದು ವಾಲ್ಮೀಕಿಯು ವರ್ಣಿಸಿದ ಅವಳ ಲೋಚನ ವಿಸ್ತಾರವನ್ನೇ, ವೈಶಾಲ್ಯವನ್ನೇ ಇಲ್ಲಿ ಸರೋಮುನಿಗಳು, "ಕಣ್ ಆರ್" ಎಂದಿರುವುದು. ಎಲ್ಲಾ ಸೀತೆಯ ಬೇರೆ ಇಂದ್ರಿಯಗಳಿಗಿಂತಲೂ, ರಾಮಪ್ರಿಯನ ದರ್ಶನದಿಂದ ಅವಳ ಕಣ್ಣುಗಳೇ ಹೆಚ್ಚು ಬಿತ್ತರಗೊಂಡಿವೆ. ಬಟ್ಟಿಲು ಗಣ್ಣಿನಿಂದ ಎವೆಯಿಕ್ಕದೆ, ಸರ್ವೇಂದ್ರಿಯಗಳ ಶಕ್ತಿಗಳನ್ನೂ ನಯನಯುಗ್ಮದಲ್ಲೇ ಕೇಂದ್ರೀಕರಿಸಿದ್ದಾಳೆ ಸೀತಾ! ಅಂಥ ಭಕ್ತಿಪತಿವ್ರತಾಶಿರೋಮಣಿಗಳು, ಪೈಮ್ = ತಾವೇ ಕೈಯಿಂದ ದಂಡೆಯಾಗಿ ಕಟ್ಟಿರುವ (ಕೊಂಡುಕೊಂಡ ಮಾಲೆಗಳಲ್ಲ) ತಾವೇ ಗಿಡಬೆಳಸಿ ಹೂತಹೂಗಳ ಸರ! ತೊಡೆಯಲೋಡು = ಪುಷ್ಪಮಾಲೆಗಳೊಂದಿಗೆ. ಏನ್ದಿಯ ಈಗಿನಂತೆ ಕೈ ಬುಟ್ಟಿ, ಕೈಬ್ಯಾಗುಗಳಿಂದಲ್ಲದೆ, ತಟ್ಟೆಗಳಲ್ಲೆ ಸೊಂಟಕ್ಕೆ ಮೆಲೆತ್ತಿದ ತಮ್ಮ ಹಸ್ತಗಳಿಂದಲೇ ತಂದಿದ್ದಾರೆ. ಕಾಡು ಜಾಲಿಯ ಅಗರು, ತೂಪಂ = ಸುವಾಸನೆಯಾದ ದ್ರವ್ಯಗಳ ಹೊಗೆಯಿಂದ, ಮಾಶು ಊಣಮ್ = ಕಾಣದಂತೆ ಮಾಸಲುಗೊಳಿಸುವ, ಯಾವುದನ್ನು? ಇಡೈ ಇಡೈಯಿಲ್ = ಮಧ್ಯೇ ಮಧ್ಯೇ, ಮೀನ್ = ಆಕಾಶವನ್ನೂ, ಮಾಯ = ಕಾಣಿಸದಂತೆ. ಅಂತಹ ವೇಙ್ಗಡಮೇ, ಮೇಲ್ ಹಿಂದಿನ ತ್ರೇತಾಯುಗದಲ್ಲಿ, ಒರುನಾಳ್ ಪಂಚವಟಿಯಲ್ಲಿ ಅರಣ್ಯವಾಸದಲ್ಲಿದ್ದಾಗ, ಮಾನ್ = ಜಾನಕಿ ಆಸೆಪಟ್ಟ, ಮಾಯಾಮೃಗವು,

ಮಾಯ = ಸಾಯುವಂತೆ ಬಾಣವನ್ನು, ಎಯ್‌ದಾನ್ = ಪ್ರಯೋಗಿಸಿದವನ, ವರ್ಯೆ = ಗಿರಿಯಿದು. ದಾಶರಥಿ ಶ್ರೀರಾಮ ಕಲಿಯುಗದಲ್ಲೂ ತಿರುಮಲ್ಯೆ ತಿರುಪತಿಯಲ್ಲಿ ಈಗಲೂ ಆರಾಧ್ಯನಾಗಿಯೇ ಇದ್ದಾನಷ್ಟೆ.

ಜಿಂಕೆಯಲ್ಲಿ ಚಪಲಚಿತ್ತೆಯಾದರೂ, ಓರ್ವ ತನ್ನ ಪ್ರೇಯಸಿ ಹೆಂಗಸಿಗಾಗಿ ಕೆಲಸಮಾಡಿಕೊಡಲು ಹೊರ ಹೊರಟವನ ಸಾನ್ನಿಧ್ಯ ತಿರುಪತಿಯಲ್ಲಿರಲಾಗಿ ಸ್ತ್ರೀಯರೆಲ್ಲರೂ ತಿಮ್ಮಪ್ಪನ ಬಗೆಗೆ ವಿಶೇಷವಾದ ಮಹಾವಿಶ್ವಾಸದಿಂದ ಸುಲಭವಾಗಿ ಆಶ್ರಯಿಸಬಹುದು. ತಿಮ್ಮಪ್ಪ ಸರ್ವ ಸಮಾಶ್ರಯಣೀಯನೂ ಹೌದು. ಹೂವಿನ ವಾಸನೆ, ಧೂಪದ ಪರಿಮಳಿತ ಧೂಮ ನಭೋವ್ಯಾಪಿ! ಪುಷ್ಪಮಂಟಪ ತಾನೇ ಅದು! ಏಕಾದಶಿಯಂದು ತೀರ್ಥಗಳಲ್ಲಿ ಮಿಂದು ಬರುವಾಗ, ಅಲ್ಲೆಲ್ಲಾ 'ಶಿನ್ದುಪೂಮಹಿಳುಮ್' ಎಂಬಂತೆ, ಪುಷ್ಪಾಪಚಯಮಾಡಿ ಕಟ್ಟಿದ್ದಾರೆ.!

ತಮಿಳ್ ತಿರಳ್ ೧ - ೯೯

ಉಳನ್ ಕಣ್ಡಾಯ್ ನಲ್‌ನೆಞ್ಜೇ ಉತ್ತಮನ್ ಎನ್ಬುಂ ಉಳನ್ ಕಣ್ಡಾಯ್, ಉಳ್ಳುವಾರ್ ಉಳತ್ತುಳ್ ಕಣ್ಡಾಯ್ |
ವೆಳ್ಳತ್ತಿನುಳ್ಳಾನುಮ್ ವೇಙ್ಗಡತ್ತು ಮೇಯಾನುಮ್ ಉಳ್ಳತ್ತಿನುಳ್ಳಾನೆನ್ನೋರ್ ||

ಕನ್ನಡ ನೆರಳ್

ಇಹನ್ ಕಂಡ್ಯಾ ನಲ್ ಚಿತ್ತಾ! ಉತ್ತಮನೆಂದೂ ಇಹನ್ ಕಂಡ್ಯಾ! ಚಿಂತಿಪರೊಳಗಿಹನ್ ಕಂಡ್ಯಾ! |
ಸಿರಿಹೊನಲಿಹನೂ ವೇಂಕಟನಿಂತಿಹನೂ ಒಳಗಿಹನೆಂದರಿಯೋ! ||

ನಮಗಿಂತ ಎಷ್ಟೇ ದೊಡ್ಡವರಾದವರ ಮನಸ್ಸಿನಲ್ಲೂ, ತಾವೇ ಒಡೆಯರೆಂಬ ಭಾವನೆ ಬಂದು ಬಿಡುತ್ತದೆ. ಅಂತೆಯೇ ಈ ಪೊಯ್‌ಹೈ ಆಳ್ವಾರ್ ಶರಣರಿಗೆ ಬಲು ಭಯ ಏರಿ ಬಿಟ್ಟಿದೆ! ಈ ಪೈತ್ಯದಿಂದ ತಾವಾಗಿಯೇ ನೇಣುಹಾಕಿಕೊಂಡರೂ ಹಗ್ಗಕತ್ತರಿಸಿ ಥಟ್ಟನೆ ರಕ್ಷಿಸುವವ ಒಳಗೇ ಇದ್ದಾನೆ. ಅಂತಹ ಸರ್ವಾಂತರ್ಯಾಮಿಯೇ **'ನಮ್ಮೆಲ್ಲರ ಪ್ರಭು'**.

ಉಳನ್ ಕಣ್ಡಾಯ್ = ಇತರರ ಬಗ್ಗೆ ನೀನು ಕಾಳಜಿಬಿಡು, ಅವರಿವರಿಗೆ ಹೆದರಿ ನೀನೇನೂ ನಿನ್ನ ಅನ್ತರ್‌ಯಾಮಿಯನ್ನು ಒಪ್ಪಬೇಡ! ನೀನು ನಿನ್ನ ಮನದಿಂದಲೇ ಅರಿತು ನಡೆ. ನಿನಗೇ ನೀನು ಸ್ವಯಂಭೀತನಾಗಿ "ಒಳಗಿದ್ದಾನೆ" ಎಂಬುದನ್ನರಿ, ನಲ್‌ನೆಞ್ಜೇ = ದೇವರು ನಮ್ಮ ಭಾಗಕ್ಕೆ ಇದ್ದೇ ಇದ್ದಾನೆಂಬ ಆತ್ಮ ವಿಶ್ವಾಸಿಯಾಗಿರಬೇಕಾದ ಓ ನನ್ನ ಮನವೇ!, ಉತ್ತಮನ್ = ಪುರುಷೋತ್ತಮನೋರ್ವನೇ, ಉತ್, ಉತ್‌ತರ, ಉತ್‌ತಮ, ಶ್ರಿಯಃ ಪತಿ. ಉತ್‌ಪುರುಷ = ಸಾಮಾನ್ಯ ಮಾನವರಂತಲ್ಲದೆ ಮೋಕ್ಷವನ್ನು ಬಯಸುವ ಉನ್ನತಮಟ್ಟದ ವ್ಯಕ್ತಿ. ಉತ್ತರಪುರುಷ ಮೇಲೇರಿ ವೈಕುಂಠದಲ್ಲಿರುವ ಮುಕ್ತ ವ್ಯಕ್ತಿ ಮತ್ತು ಅಲ್ಲೇ ಇರುವ ನಿತ್ಯಸೂರಿ ವ್ಯಕ್ತಿಗಳು. ಸ್ತ್ರೀಯರ ಆತ್ಮಕ್ಕೂ "ಪುರುಷ" ಎಂದೇ ಸರಿಯಾದ ಹೆಸರು. ಆಧ್ಯಾತ್ಮದಲ್ಲಿ ದೇವರನ್ನು ಬಿಟ್ಟು ನಾವೆಲ್ಲ ಜೀವ ಸರಿಸಮಾನರೇ. ಬ್ರಹ್ಮಚರ್ಯೆಗೆ ಟೊಂಕಕಟ್ಟಿ ಮಹಿಳೆಯರು ಹೊರಬರಬೇಕು. "ಸ್ತ್ರಿಯಃ ಸಾಧುಃ" ವ್ಯಾಸವಾಕ್ಯ. ಸಾಧುತ್ವದಲ್ಲಿ ಗಂಡಸರಿಗಿಂತ ಹೆಚ್ಚಿನ ಸ್ಥಾನ ಸ್ತ್ರೀಗೇ!

ಕೇವಲ ಏಕಾಂಗಿ ಸಾಮಾಜಿಕ ದೃಷ್ಟಿಯಿಂದ ನಡೆಸುವ ಸ್ತ್ರೀ ಸಮಾನತೆಯ ಹೋರಾಟ, ಎಂದಿಗೂ ಬಗೆ ಹರಿಯದು. ಕರುಣಾಮಯಿಗಳ ಕೈಗಳಿಗೆ ಬಂದೂಕು, ಬಾಂಬು, ಬೀಡಿ, ಸಿಗರೇಟ್, ಮದ್ಯದ ಸೀಸೆಗಳು ಬರಬಾರದಷ್ಟೆ! ಆತ್ಮಭೂಮಿಕೆಯ ಕಡೆಗೇ ಹೆಚ್ಚು ವಾಲುವ ಶಿಕ್ಷಣದ ಕೊರತೆಯೇ, ಈಗಿನ ಮುಗಿಯದ, ಇನ್ನೂ ಹೆಚ್ಚೆಚ್ಚೇ ಆಗುವ ಹಗರಣಗಳಿಗೆಲ್ಲಾ ಕಾರಣ. ಶಾಂತಿಸೇವಕಿಯರಾಗಿ, ಶಾಂತಿಸೇನಾನಿಗಳಾಗುವ, ಅಹಿಂಸಕಪರಾಽಽಕ್ರಮ, ಮಹಿಳೆಯರಿಂದಲೇ ಯಶಸ್ಸು ಕಾಣಬೇಕಾಗಿದೆ. ರಾಗದ್ವೇಷವಿಲ್ಲದ "ಪ್ರೀತಿಗೆ" ಹೃದಯದ ಕರುಳಿಗೆ ಹೆಂಗಸರೇ ಅಗ್ರಗಾಮಿನಿಗಳು. **"ಆಧ್ಯಾತ್ಮಿಕ ಕರ್ತವ್ಯ ಕೈಂಕರ್ಯದ ಕಾಯಕದಿಂದಲೇ ನಿಜವಾದ ಮಾನವೀಯ ಹಕ್ಕು ಬಾಧ್ಯತೆ ತಾನೇ ತಾನಾಗಿ ಪುಟಿದು ಬರುವುದು"**. ಇದೇ "ಉತ್ತಮನ್" ಎಂಬುದರ ಪ್ರಾಯೋಗಿಕ **"ಭಾವ ವಿಸ್ತಾರ"**.

ಇನ್ನು, ಆಂತಹ ಉತ್ತಮನೇ, ಎನ್ನುಮ್ = ಎಲ್ಲೋ ಒಂದು ಸಮಯಕ್ಕೆ ಮಾತ್ರವಲ್ಲ, ಎಲ್ಲಾ ಸಂದರ್ಭಗಳಿಗೂ ಒದಗುವವ. ಉಳನ್ ಕಣ್ಡಾಯ್ = ಓ ಮನಸ್ಸೇ ನಿನಗೇ ಗೊತ್ತಾಗುವುದು, ನಾನೇನೂ ನಿನಗೆ ಉಪದೇಶ ಮಾಡಬೇಕಿಲ್ಲಾ! ಹಾಗೆ ನೋಡಿದರೆ ನಾವೂ ನನಗಾಗಿ ಒದಗಿ ಬರುವವರೇ ಅಲ್ಲ. ನಮ್ಮೆಲ್ಲರಿಗಾಗಿ ಆತನೇ ನಮ್ಮೆಲ್ಲರ ನೆಂಟ. ಓಚಿತ್ತಾ! ನೀನೇ ನನಗೀಗ ಉಪದೇಶಿಸಬಹುದು. ಒಳ್ಳೆಯವರೋ ಕೆಟ್ಟವರೋ ಆ ಪತ್ತೇದಾರಿ ವೃತ್ತಿ ಬೇಡ. "ನಾನು" ಇಲ್ಲದಿಲ್ಲವಲ್ಲ. ಆ ಆಸರೆಯಿಂದ ದೇವರೂ ಇದ್ದಾನೆಂಬುದೇ ಸಿದ್ಧಿಸುತ್ತದೆ. ಆತನಿಲ್ಲವೆಂದರೆ "ನೀನೂ" ಇಲ್ಲ.

ಉತ್ತಮೋತ್ತಮ ಶುಭಾಕಾಂಕ್ಷೆಯೇ ಮಾನವ ಚೇತನನಲ್ಲಿರುವುದು. ಅಶುಭಗಳಂತೆ ಕಾಣುವುವೆಲ್ಲಾ, ಜಡ ಪ್ರಕೃತಿಯ ಕೈವಾಡವಷ್ಟೆ. ಜಡವಸ್ತುಗಳ ಮಾಯಾ ಬಜಾರುಗಳನ್ನು "ಚೇತನ"ನೆಂಬ ಜ್ಞಾನವಸ್ತು, ಜ್ಞಾನಕ್ಕೆ ಆಧಾರವೂ ಆದ ವಸ್ತು, ಜ್ಞಾನವನ್ನು ಪ್ರಸರಿಸುತ್ತಲೇ ಇರುವ ವಸ್ತು, ಬೇರೆಯವರ ಜ್ಞಾನಧಾರೆಗಳನ್ನು ಮನಸ್ಸಿನ ಮೂಲಕ ಗ್ರಹಿಸುವ ವಸ್ತುವೇ "ಆತ್ಮ" ಪ್ರಜೆ Self Soul. ಪ್ರಕೃತಿಯ ಅಟ್ಟಹಾಸವನ್ನು 'ಸೋಲ್' ಖಂಡಿತ ಸೋಲಿಸಬಹುದು. ಅಚೇತನದ ಮೇಲೆ, ಚೇತನನ ಪ್ರಭುತ್ವವೇ ಜ್ಞಾನ-ವಿಜ್ಞಾನ. ಪ್ರಜಾಪ್ರಭುತ್ವದ ಮೂಲ ಸಿದ್ಧಾಂತವೇ ಈ ಎಲ್ಲ ಆತ್ಮಗತ ಶುಭಾಽಽಕಾಂಕ್ಷೆ. ವಯಸ್ಕರೂ ಯೋಗ್ಯರೂ ಆದ ಎಲ್ಲರಿಗೂ "ಮತದಾನದ ಹಕ್ಕು" ಈ ಅಧ್ಯಾತ್ಮಕ್ಕೆ ಸಂದ ವಿಜಯ! ಆಳ್ವಾರ್ ಶರಣರೂ ಇದೇ ಮಾತಾಡುತ್ತಿರುವುದು. ಹೃದಯಸ್ಥನಾದ ಆತ್ಮಕ್ಕೆ ಅತ್ಯಂತ ಹತ್ತಿರವಾದುದೇ "ಜಡ"ವಾದರೂ "ಚಿತ್ತ"ವೆಂಬುದೇ. ಯಾವೊಂದು ಆತ್ಮ ಪ್ರಭೆಯೂ ಈ ಚಿತ್ತ ವಸ್ತುವಿನ ಮೂಲಕ ಆ ಒಂದೇ ಕಾಲುವೆಯಲ್ಲೀ ಹರಿಯುವಂಥದು. ಮನಸ್ಸು-ಮನ ಎಂಬ ಹೆಸರುಗಳೂ ಈ ಚಿತ್ತಕ್ಕಿದೆ. **'ಮನ ಜ್ಞಾನೇ ಮನು ಅವಬೋಧನೇ'** ಜ್ಞಾನಧಾರೆಯ ರವಾನೆ ಹಾಗೂ ಸ್ವೀಕಾರಕ್ಕೆ ಮಾಧ್ಯಮವಾಗಿ ಈ "ಮನ" ಇರುವುದು. ಅವು ಚೇತನಾತ್ಮನಿಗೆ ಅಭಿಮುಖವಾಗಿ ಅಡ್ಡಿ ಆತಂಕವೊಡ್ಡದಿದ್ದರೆ, ಆತ್ಮ ಗೆದ್ದಂತೆ. ಮನಸ್ಸಿನ ಸಮ್ಮತಿ ದೊರಕದಿದ್ದಾಗ ಸಮಸ್ಯೆಗಳೆಲ್ಲಾ ಜಟಿಲವಾಗಿ ಬಿಡುವುವು. ಮನಸ್ಸಿನ ಸಂಮತಿಯೇ "ಮಾನವೀಯತೆ". ಈಗ ಇದೇ ವಿಚಾರವನ್ನು, ಆಳ್ವಾರ್ ವಿವರಿಸುತ್ತಿರುವುದು. "ಉಳ್ಳುವಾರ್ ಉಳ್ಳತ್ತುಳನ್ ಕಂಡಾಯ್" = ಮಾನಸಾ! ಉಳ್ಳುವಾರ್ = ನಿನ್ನ ಹೊಡೆತಕ್ಕೆ ಸಿಕ್ಕದೆ "ಉತ್ತಮ" ಇದೋ "ಆಂತರ್ಯ"ದಲ್ಲಿದ್ದಾನೆ ಎಂಬುದನ್ನು ನೀನು ಒಪ್ಪಿಬಿಟ್ಟರೆ ಸಾಕು. ಅಂತಹವರ, ಒಳಗೆ, ಆತ್ಮನಾದ ತನಗೂ, ಆತ್ಮನಾದ ಓರ್ವಪರಮಾತ್ಮನಿದ್ದಾನೆಂಬ ಅರಿವಾಗಿ ಬಿಡುವುದು. ಓ ಚಿತ್ತಾ! ನಿನ್ನ ಸಂಮತಿಯಿಲ್ಲದಿದ್ದರೆ, ಪರಮ ಆತ್ಮ ಕಾಣಿಸಿಕೊಳ್ಳನಷ್ಟೆ!

ಓ ಚೇತನರಿಗೆಲ್ಲ ಸನ್ನಿಹಿತ ತಮವಾದ, ಮನವೇ! ನಾನಾ ರಾಗದ್ವೇಷಾದಿಗಳಿಂದ ಮುಕ್ತವಾದ ಮನವೇ! ಅಂತಹ ಮನವುಳ್ಳ ಮಾನವ ಚೇತನವೇ! ನಿಮ್ಮ ಮನಸ್ಸಿನಲ್ಲಿರುವವನೇ. ವೆಳ್ಳತ್ತಿನ್ = ಕ್ಷೀರಾಬ್ಧಿಯಲ್ಲಿಯೂ ಪವಡಿಸಿದ್ದಾನೆ. ವೇಙ್ಗಡತ್ತು = ತಿರುಪತಿಯಲ್ಲಿಯೂ, ಮೇಯಾನುಮ್ = ನಿತ್ಯವಾಸ ಮಾಡುತ್ತಿದ್ದಾನೆ. ಅಂತಹ ಓರ್ವನೇ ಆದ ನಾನಾ ದೇಹಸ್ಥ, ನಾನಾ ರೂಪಧಾರಿ, ನಾನಾ ಬಗೆಯ ಚೇತನರ ರಕ್ಷಣೆಯ ಸಲುವಾಗಿ ನಿನ್ನ ಮನದೊಳಗೂ ಇದ್ದಾನೆ. ಆ **"ಅಂತರತಮ ಉತ್ತಮ"**. ಶರೀರದ ಅಂತಃ ಪ್ರದೇಶದ ಹೃದಯದ ಒಂದು ಸ್ಥೂಲಭಾಗದಲ್ಲಿರುವ ಮನಸ್ಸು, "ಅಂತಃ ಕರಣ" - ದೇಹಾಂತರ್ಗತ ಜಡ. ಅದಕ್ಕಿಂತಲೂ "ಅಂತರತರ" ಜೀವಾತ್ಮಗಳು. ಅವುಗಳಿಗೂ "ಅಂತರತಮ" ಎಂಬುವವನೇ "ಉತ್ತಮನ್" ಎಂಬುದಕ್ಕೆ ಸರಿಯಾದ "ಅನ್ವರ್ಥ"ವಾದಂತಾಯಿತು. ಉಳ್ಳತ್ತಿನ್ ಉಳ್ಳಾನ್ = ನಮ್ಮೆಲ್ಲರ ಹೃದಯ ಗುಹಾಂತರದಲ್ಲಿ ಕೊಟ್ಟಕೊನೆಯ ಸೂಕ್ಷ್ಮ ಸ್ಥಾನದಲ್ಲಿ ದಹರಾಽಽಕಾಶದಲ್ಲಿದ್ದಾನೆ. ಅಂತರ್ಯಾಮಿಯ ಉಪಾಸಕರಿಗೆ ಇದೇ ದೇವಸ್ಥಾನ. ನಮ್ಮಂತಹವರಿಗೆ, ಈ ದೇವಾಲಯ ಅಲ್ಲಿನ ಮೂರ್ತಿಗಳೇ ಉಪಾಸ್ಯಸ್ಥಾನ. ಏನೂ ಪರಸ್ಪರ ವಿರೋಧವಿಲ್ಲ! ನಾವು ಮಲಗುವ ಮುನ್ನ **"ಕ್ಷೀರಸಾಗರ ತರಂಗಶೀಕರಾಽಽಸಾರತಾರಕಿತ ಚಾರುಮೂರ್ತಿಯ ಧ್ಯಾನ"**. ನಿಂತು ನಡೆಯುವಾಗ, ತಿಮ್ಮಪ್ಪನ ಮೂಲಮೂರ್ತಿ. ಉತ್ಸವ ಮೂರ್ತಿಗಳು **"ನಮ್ಮ ಮನಸ್ಸಿಗೆ ಧಾರಣಾಸ್ಥಾನ"!**

ದೇವರೇ ಇಲ್ಲವೆಂಬ, ತಮ್ಮನ್ನು ನಾಸ್ತಿಕರೆಂದುಕೊಳ್ಳುವವರಾಗಲಿ, ಮೂರ್ತಿ ಕೇವಲ ನಿರ್ಜೀವ ಬಿಂಬ, ಪ್ರತೀಕ ಮಾತ್ರ ಎನ್ನುವ ಕೆಲ ವೈದಿಕರಾಗಲಿ, ಈರ್ವರೂ ಒಪ್ಪುವಂತೆ 'ಪೊಯ್ಹೈಯಾಳ್ವಾರ್' ಇಲ್ಲಿ ಮೂರ್ತಿಪೂಜೆಯ ಆಳ ಮತ್ತು ಅಗಲವನ್ನು ವಿಶದ ಪಡಿಸಿದ್ದಾರೆ. ಈ ಆಳ ಅಗಲದ ಸಮತೂಕದ ಉಭಯ ಸಮನ್ವಯ ಜ್ಞಾನವಿಲ್ಲದೆ ಆಚರಿಸುವ ಮೂರ್ತಿಪೂಜೆ, ಶರಣರಿಗೂ ಸಂಮತವಲ್ಲ. ಮೂರ್ತಿ ಪೂಜೆ ಶಾಸ್ತ್ರಗಳ ಮಟ್ಟದಲ್ಲಿ ಕಡ್ಡಾಯದ ಅನಿವಾರ್ಯವೂ ಅಲ್ಲ. ಹಲವರು ಮೂರ್ತಿಪೂಜೆಯ ಆಡಂಬರಗಳನ್ನು ಹಳಿಯುತ್ತಾರೆಯೇ ಹೊರತು, ಪರಮಾತ್ಮನು ಎಂತಹ ಮೂಢ ಅಜ್ಞಾನಿಗಳಿಗೂ ಒಲಿಯುವನೆಂಬ, ಸೌಲಭ್ಯ, ಸೌಶೀಲ್ಯಾದಿಗಳಿಗೆ ಒತ್ತು ಕೊಡದೆ, ಆತನ ಕೇವಲ ಅತ್ತಣ ಪರತ್ವ, ನಿರ್ಗುಣತ್ವ, ನಿರಾಕಾರತ್ವಗಳಿಗೇ, ತಮ್ಮ ಅಭಿರುಚಿ ತೋರುತ್ತಾರೆ. **"ಸರ್ವಾಽವಿರೋಧಿಯೇ ದೇವರು"**. ಒಂದು ಒಳ್ಳೆಯ ಮನೆತನದಲ್ಲಿ "ಸರ್ವಸಂಮತಿ" ಅಥವಾ ಯಾರೊಬ್ಬರ "ಅವಿರೋಧ" ಕೊನೆಯ ಪಕ್ಷ ಇದ್ದರೇನೇ ಆ ಮನೆಯಲ್ಲಿ ಹೇಗೆ ಸುಖಸಂತೋಷವಿರುವುದೋ, ಅದನ್ನೇ ಇಡೀ ಗ್ರಾಮಪರಿವಾರಕ್ಕೆ ಏರಿಸುವುದರಲ್ಲಿ, ತಮಿಳುನಾಡಿನ "ಆಳ್ವಾರ್"ಗಳ ಸಾಹಸ - ದೈವಾಽಽಯತ್ತ - ಬಲು ಮೆಚ್ಚಬೇಕಾದುದೇ Village Unit ಯೋಜನೆ ಸಾರ್ಥಕ.

ಈ ಭಗವತ್ ಕೃಪಾಪಾತ್ರರಾದ ಸಂತರು ಹೊಂದಿರುವ 'ಪಚನಶಕ್ತಿ'ಯನ್ನು ನಾವೂ ಪಡೆದುಕೊಳ್ಳಲು ಪ್ರಯತ್ನಿಸೋಣ. ವಾದ ವಿವಾದಗಳೆಲ್ಲಾ ಈ ಮನ ಮನದ ತಿಕ್ಕಾಟ, ಸಂಘರ್ಷ, ಕೊನೆಗೆ ಯುದ್ಧಗಳೆಲ್ಲಾ ನಿಷ್ಕ್ರಿಯಗಳಾಗಿ ಬಿಡುವುವು. ಆತ್ಮ ಆತ್ಮಗಳಿಗಾಗಲಿ, ಆತ್ಮ ಪರಮಾತ್ಮನಿಗಾಗಲೀ ಎಂದೆಂದೂ ಕಲಹವಿಲ್ಲ. ಏಕೆಂದರೆ, ಅವೇ ನಿಜವಾದ ಜಾತ್ಯತೀತಗಳು! ಯಾವೊಂದು

ಪಕ್ಷ-ವಿಪಕ್ಷನೀತಿ, ರಾಜನೀತಿ, ಆಳುವ ಸರಕಾರ, ವಿರೋಧಿಪಕ್ಷ, ಸಂಘಸಂಸ್ಥೆ, ಬಹುಮತ-ಅಲ್ಪಮತ ಇತ್ಯಾದಿ ಇತ್ಯಾದಿಗಳ ಸೀಗೆಮೆಳೆಯ ಮುಳ್ಳಿಗೆ ಸಿಕ್ಕಿಕೊಳ್ಳುವುವಲ್ಲ. ಈಗಿನ ಎಲ್ಲ ಕ್ಷೇತ್ರಗಳೂ ಮೂಲತಃ ಒಳ್ಳೆಯ ಉದ್ದೇಶ್ಯವುಳ್ಳವೇ ಆದರೂ ಹಾದಿ ತಪ್ಪಿ "ಪಥಃ ಸ್ಖಲಿತಗಳಾಗಿವೆ"ಯಷ್ಟೆ. ಸುಪಥದ ಹಳಿಗೆ ಎಲ್ಲವೂ ಬರಬೇಕಾದ ಸಂದರ್ಭ ಈಗ, ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಯಾರೂ ಯಾರನ್ನೂ ನಿಂದಿಸಬಾರದು. ಈ **"ಅನಿಂದಾವ್ರತ ಈಗಂತೂ ಅತ್ಯಗತ್ಯ".** ವ್ಯಕ್ತಿ ವ್ಯಕ್ತಿಯ, **"ಗ್ರಾಮ ಗ್ರಾಮಗಳ ಧಾರಣಾ ಸ್ವಯಂ ಶಕ್ತಿಯೇ ಮಾನವೀಯ ಸಂಪತ್ತೆಂಬ ಪ್ರಮೇಯವನ್ನು ಜಗತ್ತಿನ ಮುಂದಿಟ್ಟಿರುವ ನೋಬಲ್ ಬಹುಮಾನಿತ ಶ್ರೀ ಅಮರ್ತ್ಯಸೇನರು - ಆಳ್ವಾರ್‌ಗಳಿಗೆ ಬಲು ಪ್ರೀತಿ ಪಾತ್ರರು! ಇಸಂಗಳು ತೊಲಗಬೇಕಷ್ಟೆ!"** ಒಳ್ಳೆಯವುಗಳ - ಅಸ್ಮಿತೆಯೂ ಮಹಾಪಾಯಕಾರಿ. ನನ್ನದೊಂದೇ ಸತ್ಯ, ನಿಮ್ಮದೆಲ್ಲಾ ಅಸತ್ಯ ಎಂಬ ಅತಿಯಾದ ಆಗ್ರಹಕ್ಕೆ "ಅಸ್ಮಿತಾ" ಎಂದು ಹೆಸರು.

ಪೂದತ್ತಾಳ್ವಾರ್

ಅವತಾರಿಕೆ ಇರಣ್ಡಾಂ ತಿರುವನ್ದಾದಿ

ಇವರು ತಮಿಳುನಾಡಿನ "ತೊಂಡಮಂಡಲ"ದ ಮಹಾಬಲಿಪುರವೆಂಬ "ತಿರುಕ್ಕಡಲ್ ಮಲ್ಲೈ" ದಿವ್ಯದೇಶದ ಒಂದು "ನೀಲೋತ್ಪಲ" ಪುಷ್ಪದಿಂದ ಆವಿರ್ಭವಿಸಿದವರು. ದ್ವಾಪರಯುಗ ೪೬೨೯೦೧೯ನೇ ವರ್ಷ, ಸಿದ್ಧಾರ್ಥಿ ಸಂವತ್ಸರದ ತುಲಾಮಾಸ ಧನಿಷ್ಠಾ ನಕ್ಷತ್ರದಲ್ಲಿ ದೇವರ **"ಕೌಮೋದಕೀ"** ಗದಾಂಶದಿಂದ ಈ ಲೋಕಕ್ಕೆ ಕಳುಹಿಸಲ್ಪಟ್ಟ ಆಳ್ವಾರ್ ಶರಣರು. ಎರಡನೆಯ "ಸಿರಿಯನ್ತಾದಿ"ಯನ್ನು ಅನುಗ್ರಹಿಸಿದರು.

ಇದಕ್ಕೂ ಮೊಟ್ಟಮೊದಲ "ಸಿರಿಯನ್ತಾದಿ"ಯಲ್ಲಿ ಅಯೋನಿಜರಾದ "ಕಾಸಾರ ಮುನಿಗಳು". ದೇವರು ಈ ಲೀಲಾ ಮತ್ತು ಆ ನಿತ್ಯ ಉಭಯ ವಿಭೂತಿಗಳಿಗೂ ನಾಥನೆಂಬುದನ್ನು ಅಂತಹ ನಾರಾಯಣನೇ, ಎಲ್ಲರ ಎಲ್ಲ ಸೇವೆಗಳಿಗೂ ಅರ್ಹನಾದ "ಶೇಷಿ" ಅಥವಾ "ಆಳರಸ" ಎಂಬುದನ್ನೂ ನಿರ್ಣಯಿಸಿದರು. ಈಗ ಈ "ಭೂತಮುನಿಗಳು" ಹಿಂದಿನವರು ಕಂಡು ಆಡಿದ ಆ ಎರಡು "ನಾಥತ್ವ ಸೇವ್ಯತ್ವ"ಗಳೆಂಬ ಭಗವದ್ಕೈಶ್ವರ್ಯಗಳನ್ನು ತಮ್ಮ ಪ್ರೇಮಭಕ್ತಿಯ ಹೆಚ್ಚಳದಿಂದ, ಅನುಸಂಧಾನಗೈದು ಭಕ್ತಿಗೇ ಪರವಶರಾಗಿಬಿಟ್ಟಿದ್ದಾರೆ!

ಪೊಯ್‌ಹೈಯಾರರಿಗೂ ಭಕ್ತಿಯಿಲ್ಲದಿಲ್ಲ. ಈ ಮನನ ಶೀಲನಾದ ಮಾನವನಿಗೆ "ಅರಿವು" ಇದ್ದುದೆ ಪ್ರಕಾಶಿಸಿದ ಮೇಲೆ ಅದು ಭಕ್ತಿಯರೂಪ ತಾಳುವುದು ಸಹಜ. ಜ್ಞಾನ ಮೊದಲ ಅವಸ್ಥೆ. ಅದೇ ಜ್ಞಾನ ಇನ್ನೂ ಹಣ್ಣಾಗಿ ಎರಡನೆಯ ದೆಶೆಯಲ್ಲಿ ಪ್ರೀತಿ-ಸ್ನೇಹ- ಅನುರಾಗ-ಭಕ್ತಿ, ಎನಿಸಿಕೊಳ್ಳುತ್ತದೆ. ಪೊಯ್‌ಹೈಆಳ್ವಾರರು ದೈವದತ್ತವಾದ "ಜ್ಞಾನ"ದ ಮೂಲಕ ಉಭಯ ವಿಭೂತಿಯನ್ನೂ ಭಕ್ತಿಯೆಂಬ ಜ್ಞಾನ ವಿಶೇಷಕ್ಕೆ ವಿಷಯವಾಗಿಸಿದ್ದಾರೆ. ಜ್ಞಾನದ ಬಾಗಿಲಿನಿಂದ ತನ್ನ ಸ್ವರೂಪ ರೂಪ ಗುಣ ವಿಭೂತಿಗಳಲ್ಲಿ ಇವರಿಗೆ ದೇವರು ಸ್ನೇಹ ಬೆಳಸಿದ್ದ. ಜ್ಞಾನ-ಅರಿವು ಎಂಬುದು ಭಕ್ತಿಗೆ ಮೊದಲುಂಟಾಗುವ ಕಾರಣಾವಸ್ಥೆ. ಭಕ್ತಿ, ಜ್ಞಾನದ ಕಾರ್ಯಾವಸ್ಥೆ. ಹೀಗೆ ಜ್ಞಾನ, ಭಕ್ತಿ ಉಭಯವೂ, ಒಂದೇ ವಸ್ತುವಿನ ಎರಡು ಮುಖಿಗಳಷ್ಟೆ. ಜ್ಞಾನದಲ್ಲಿ ಭಕ್ತಿ, ಭಕ್ತಿಯಲ್ಲಿ ಜ್ಞಾನ ಅಡಗಿದೆ. ಈ ಅವಿರೋಧಿ ಸೂಕ್ಷ್ಮಾಂಶವನ್ನು ಭಗವದ್ಗೀತೆ;

"ಕರ್ಮಣಿ ಅಕರ್ಮಯಃ ಪಶ್ಯೇತ್ ಅಕರ್ಮಣಿ ಚ ಕರ್ಮ ಯಃ ಸ ಬುದ್ಧಿಮಾನ್ ಮನುಷ್ಯೇಷು"

ಎಂದಿದೆ. ಯಾವೊಂದೂ, ಯಾವೊಂದನ್ನು ಅತ್ಯಂತಿಕವಾಗಿ ಬಿಟ್ಟಿರಲಾರದು. ಎಲ್ಲವೂ ಅಪೃಥಕ್ ಸಿದ್ಧ. ಪೃಥಕ್ "ಇದು ಬೇರೆ ಅದು ಬೇರೆ" ಎಂಬ ಕೆಲದಾರ್ಶನಿಕಾರರು ಹೇಳುವಂತೆ "ಅನ್ಯೋನ್ಯಾಭಾವ" ಎಂಬುದಿಲ್ಲ. ಅನ್ಯೋನ್ಯ ಪರಸ್ಪರ ಎಲ್ಲವೂ ಎಲ್ಲಕ್ಕೂ ಅನುಕೂಲವಾಗಿಯೇ ಹೊಂದಿಕೊಂಡಿವೆ. ತತ್ವಜ್ಞಾನ, ಸಾಧನ, ಫಲವೆಂಬ ಈ ತತ್ವ, ಹಿತ, ಪುರುಷಾರ್ಥಗಳಲ್ಲಿ ಒಂದು "ಅನುಸ್ಯೂತತೆ" ಇದೆ. ಅದೇ **"ಸಾವಿತ್ರೀ"**. ವಸ್ತು ಸ್ವರೂಪ ವಿಶ್ಲೇಷಣೆಗಾಗಿ ಮಾತ್ರ, ಸ್ವರೂಪ ಭೇದ ಇರಬಹುದಾದರೂ, ಆ ಬಗ್ಗೆ ಜ್ಞಾನ ಎಂಬ ಸಿದ್ಧಿಯಾಗಲೀ ಮಾತೆಂಬುದಾಗಲಿ, ಅವುಗಳ ಇರುವಿಕೆಯಾಗಲಿ, ಇಲ್ಲ. ತತ್ವ ಎಂದರೆ ವಸ್ತು. ವಸ್ತುನಿಷ್ಠವಾಗಿ "ವಿಶಿಷ್ಟಗಳೇ" ಸಾಧನೆ, ಫಲಗಳೂ ವಿಶಿಷ್ಟಗಳೇ. ಯಾವುವೂ "ವಿಶ್ಲಿಷ್ಟ"ವಲ್ಲ.

ಪ್ರಕೃತ ಈ ಇಬ್ಬರು ಆಳ್ವಾರಗಳೂ ಪರಸ್ಪರ ಅನ್ಯೋನ್ಯ ಸಹೃದಯರಾದ ಭಾವಜ್ಞರಾದುದರಿಂದ. ಪೊಯ್‌ಹೈಯಾರದು ಜ್ಞಾನಾವಸ್ಥೆಯೆಂದೂ, "ಪೂದತ್ತಾರ್" ಅವರದು "ಪ್ರೇಮಾವಸ್ಥೆ"ಯೆಂದೂ ಗೃಹೀತ. ವ್ಯಾಕರಣ ಶಾಸ್ತ್ರದ, ಒಂದೇ ಶಬ್ದ ಸಾಧುತ್ವವೆಂಬ ವಿಚಾರ ಪಾಣಿನಿ, ಕಾತ್ಯಾಯನ, ಪತಂಜಲಿಗಳಲ್ಲಿ ಅಭಿವ್ಯಕ್ತವಾದಂತೆ ಪೇಯಾಳ್ವಾರರೂ ಸೇರಿ, ಪರಭಕ್ತಿ, ಪರಜ್ಞಾನ, ಪರಮ ಭಕ್ತಿಗಳಲ್ಲಿ "ಮುನಿತ್ರಯರೇ"! ನಮಗೆಲ್ಲಾ ಉತ್ತಾರಕರು.

ಇಯಲ್‌ಪಾ, ತಿರುವನ್ಬಾದಿ ೨, ಹಾಡು ೨೫

ತಮಿಳ್ ತಿರಳ್

ಶೆನ್ನದಿಲಜ್ಗೈಮೇಲ್ ಶೆವ್ವೇತನ್ ಶೀತ್ತತ್ತಾಲ್ ಕೊನ್ನದಿರಾವಣನೈ ಕ್ಕೂರುಜ್ಞಾಲ್ - ನಿನ್ನದುವುಮ್|
ವೇಯೋಜ್ಞು ತಣ್ ಶಾರಲ್ ವೇಜ್ಞಡಮೇ ವಿಣ್ಣವರ್‌ತಮ್ ವಾಯೋಜ್ಞು ತೊಲ್ ಪುಹಳಾನ್ ವನ್ನು||

ಕನ್ನಡ ನೆರಳ್

ಸಂದುದು ಲಂಕೆಯ ಮೇಲ್ ನೇರಾ, ತನ್ ಮುನಿಸಿಂ! ಕೊಂದುದು ರಾವಣನಂ! ಪೇಳಲ್‌ಬೇಕೆನೆ - ನಿಂದುದೂ |
'ವೇಯ್' ಎನು ಬಿದಿರ್‌ನೀಳ್, ತಣ್ ಪೊನಲ್ ವೇಂಕಟವೇ ಬಾನವರ್ ಬಾಯ್ ಏರಿಸಿ ತಗುಪೊಗಳ್ ಸದ್‌ಗುಣನ್ ಬಂದು ||

ಜಗತ್ತುಗಳ ಉತ್ಪತ್ತಿ ಮಾತ್ರಕ್ಕೇ ಸರ್ವೇಶ್ವರ, ಕಾರಣನೆಂದಲ್ಲ. ಉತ್‌ಪನ್ನವಾದವುಗಳೆಲ್ಲದರ ಎಲ್ಲ ವಿಧವಾದ ಏಡೆತಡೆಗಳನ್ನೂ ಹೋಗಲಾಡಿಸುವವನೂ ಅವನೇ. ಈ ಪ್ರತಿಬಂಧಕನಾಶವೆಂಬುದು ಆತನ ಸತ್ಯ ಸಂಕಲ್ಪದಿಂದಲೇ ಆಗಬಹುದಿದ್ದರೂ ಈ ಲೀಲಾ ವಿಭೂತಿಯ ಸರ್ವಪ್ರಾಣಿಗಳ ಜತೆಗೆ ಒಡನಾಡಿಯಾಗುವ ಪ್ರೇಮದಶೆಯೂ ಅವನಿಗಿದೆ. ಈ ಅಂಶ ಆತನು ಅಗೋಚರವಾದ ಮೇಲೆ ಎಲ್ಲಿಂದಲೋ ಇಲ್ಲಿಗೇ ಇಳಿಯುವ "ಅವತಾರ"ಗಳಿಂದಲೇ ನಮ್ಮಂತಹವರು ಕಾಣಬೇಕಾದ್ದು. ಆದರೆ ಅಂತಹ ಅವತಾರಗಳಿಗೆ ಕಾಲ ಕಾಯ ಬೇಕಾಗುತ್ತದೆ. ಆ ನಿರೀಕ್ಷೆ ಪ್ರತೀಕ್ಷೆ ಅರ್ಚಾವತಾರಿಗಿಲ್ಲ. ಈಗೀಗ ತಿರುಪತಿ ವ್ಯವಸ್ಥೆ ಮೌಲಿಕ ಸೌಲಭ್ಯವನ್ನು ಕಳೆದುಕೊಂಡು **"ಕಾಂಚನಂ ಕಾರ್ಯಸಿದ್ಧಿಃ"** ಎಂಬಂತೆ ಹಣವಂತರಿಗೆ ವಿಶೇಷವಾದ ಸೌಲಭ್ಯ, ಬಂಡವಾಳ ಷಾಹಿ, ಧನವಾದದ ಅನುಕರಣೆ ಆಗಿದೆ. ಸಾಮಾನ್ಯರಿಗೆ ಧರ್ಮದರ್ಶನವೇನೋ ಉಂಟು. ಅಂತೂ ಮತ್ಸ್ಯ ಕೂರ್ಮ ವರಾಹ ನಾರಸಿಂಹ, ಪರಶುರಾಮ, ದಾಶರಥಿರಾಮ, ಬಲರಾಮ, ಕೃಷ್ಣಾವತಾರಗಳಂತೆ, ಒಂದೊಂದು ಕಾಲಕ್ಕೇ ಸೀಮಿತವಲ್ಲ. "ಪೆರುಕ್ಕಾರು ಪೋಲೇ ವಿಭವಜ್ಞಳ್" ಮಳೆ ಬಂದಾಗ ಮಾತ್ರ ಕೆಲವು ತೊರೆಗಳು ಭೋರ್ಗರೆದು ಹರಿಯುತ್ತವೆ. ಪ್ರವಾಹ ಇಳಿದ ಮೇಲೆ, ಬರೀ ಮರಳೇ, ಯಾತ್ರಾಸ್ಥಳಗಳ ದಿವ್ಯಮಂಗಳ ವಿಗ್ರಹಗಳಾದರೆ "ಪಿನ್ನಾನಾರ್ ವಣಙ್ಗುಮ್ ಶೋಧಿ" ಎಂಬ ತಿರುಮಂಗೈಯಾಳ್ವಾರರ ಕರುಣಾಸೂಕ್ತಿಯಂತೆ, 'ಅರುಳಿಚ್ಚೆಯಲಿ'ನಂತೆ, ಹಿಂದಿನವರೂ, ಇಂದಿನವರೂ, ಮುಂದಿನವರೂ, ಬೇಕಾದಾಗ ದರ್ಶನ ಪಡೆಯಬಹುದಾದ ಪರಂಜ್ಯೋತಿರ್ ಗರ್ಭಗಳು.

ವಿಣ್ಣವರ್‌ದಮ್ = ಅತ್ತಣ ಪರಮಾಕಾಶವಾಸಿಗಳ, ವಾಯ್ = ಸಿರಿಬಾಯಿಗಳಿಂದ, ಓಜ್ಞು = ಘೋಷಿಸಲ್ಪಡುವ, ತೊಲ್ = ಕಾಲಾsತೀತವಾದ, ಪುಹಳಾನ್ = ವಸ್ತುನಿಷ್ಠ ಹೊಗಳಿಕೆಯಾದ, ಕಲ್ಯಾಣಗುಣಗಳ ಸಂಕೀರ್ತನಕ್ಕೆ ತಕ್ಕವನಾದವನೇ, ಆ ಪರಮಾಂತರಿಕ್ಷದಿಂದ, ವನ್ದು = ಮೇಲಿಂದ ಕೆಳಗಿಳಿದು. ಶೆವ್ವೇ = ನೇರವಾಗಿ, ಅಂದರೆ ಸಂಕಲ್ಪದಿಂದಲ್ಲದೆ, ೧೪ ವರ್ಷ ವನವಾಸಿಯಾಗಿ ಕಾಯದಂಡಿಸಿ ಕಾಲಿನಿಂದಲೇ ನಡೆದು, ಇಂತಹ ಋಜು ಮಾರ್ಗದಿಂದಲೇ, ಹುಲಿಯಿರುವ ಅದರ ಗುತ್ತಿಗೇ ನಿರ್ಭಯವಾಗಿ, ಶೆನ್ನದು ಇಲಜ್ಗೈಮೇಲ್ = ಲಂಕೆಯನ್ನು ತಾನೇ ಮೇಲ್ ಹಾಯ್ದು ಸಂದದು. ತನ್ ಶೀತ್ತತ್ತಾಲ್ = ಇತರ ವಿಲಕ್ಷಣವಾದ ಕೋಪದಿಂದಲೇ! ಇಲ್ಲಿನ ಸ್ವಾರಸ್ಯವೆಂದರೆ, ಬಿಲ್ಲು ಬಾಣಗಳು ಕೇವಲ ಅಲಂಕಾರಕ್ಕಾಗಿದ್ದವೋ ಎಂಬಂತೆ! ಹಾಗಾದರೆ, ರಾವಣ ಸಂಹಾರ ಮಾಡಿದ್ದು ಯಾವುದರಿಂದ? ಕೋಪ ಮುಂತಾದವುಕ್ಕೆಲ್ಲಾ ಸ್ವಾಮಿಯಾದ ತಾನೇ ಈಗ, ಕೋಪಕ್ಕೇ ವಶನಾಗಿ ಬಿಟ್ಟಂತೆ! "ಕ್ರೋಧಮಾಹಾರಯಶ್ ಪ್ರಭುಃ" ವಾಲ್ಮೀಕಿಯ ಅನ್ತರಂಗವನ್ನೂ ಪೂದತ್ತಾಳ್ವಾರ್ ಇಲ್ಲಿ ಮರೆಯಲಿಲ್ಲ!

ಕೊನ್ನದು ಇರಾವಣನೈ = ಲೋಕಕಂಟಕನಾಗಿದ್ದ ರಾವಣನನ್ನು ಕೊಂದುದು, ನಿನ್ನದುವುಮ್ = ಆ ರಾಮಾವತಾರದ ೧೧ ಸಾವಿರ ವರ್ಷಗಳಾದ ಮೇಲೆ, ಶ್ರೀರಾಮ ಸ್ವಸ್ಥಾನಕ್ಕೆ ತೆರಳಿದ ಮೇಲೆ ಯಾರೂ ನೋಡುವಂತಾಗಲಿಲ್ಲ, ಕೂರುಮ್ ಕಾಲ್ = ನಿಜ ಹೇಳಬೇಕೆಂದರೆ, ನಿನ್ನದುವುಮ್ ಸ್ಥಾಯಿಯಾಗಿ ನಿಂತಿರುವುದದೆಂಬುದೂ, ವೇಯ್ ಓಜ್ಞು = ಬಿದಿರ್ ಮಳೆಗಳು ಎತ್ತರವಾಗಿ ಬೆಳೆದಿರುವ, ಹಾಗೂ ತಣ್‌ಶಾರಲ್ = ಶೀತಳವಾದ ಝರಿಗಳೊಡನೆ ಕೂಡಿದ, ವೇಜ್ಞಡಮೇ = ಇದೋ ಈ ತಿರುಪತಿಯೇ! ಆ ರಾಮ ಬೆಂಬೆಂಕಿಯಂತೆಯೋ! ಎಂಬಂತಾದರೆ **"ತಿಮ್ಮಪ್ಪನಿಗೆ ತಣ್‌ದಾಣ ಈ ತಿರುಮಲೆಯೇ"**! ಆ ಶ್ರೀರಾಮನೇ ತಿಮ್ಮಪ್ಪನಾಗಿ ಈಗಲೂ ಮುಂದೆಯೂ, ನಮ್ಮೆಲ್ಲರ ನಾನಾ ವಿಚಾರ ಗೊಂದಲಗಳೇ ತುಂಬಿರುವ, ಬಗೆ ಬಗೆಯ ಅಸಂಖ್ಯಾತ ತಲೆಗಳ ತಲೆಹರಟೆಗಳನ್ನೆಲ್ಲಾ, ಲೋಕ ಕಂಟಕತೆಯ ದುರ್‌ಬುದ್ಧಿಗಳ ರಾವಣರನ್ನೆಲ್ಲಾ ಕೋಪವಿಲ್ಲದೆಯೇ ಕಳೆದು, ಸದ್‌ಬುದ್ಧಿಯತ್ತಲೇ ಪ್ರೇರೇಪಿಸುತ್ತಿದ್ದಾನೆ.

ತಮಿಳ್ ತಿರಳ್ ೨ - ೨೮

ಮನತ್ತುಳ್ಳಾನ್ ವೇಙ್ಗಡತ್ತಾನ್ ಮಾಕಡಲಾನ್, ಮತ್ತುಮ್ ನಿನೈಪ್ಪರಿಯ ನೀಳ್ ಅರಙ್ಗತ್ತುಳ್ಳಾನ್ - ಎನೈಪ್ಪಲರುಮ್ |
ತೇವಾದಿದೇವನ್ ಎನಪ್ಪಡುವಾನ್ ಮುನ್ನೊರುನಾಳ್ ಮಾವಾಯ್ ಪಿಳನ್ದ ಮಹನ್||

ಕನ್ನಡ ನೆರಳ್

– ಮನದೊಳಗಿಹನ್ - ವೇಂಕಟ ಗಿರಿವಾಸನ್, – ಮಾಗಡಲ್ ಪವಡಿ, ಮೇಣ್
ನೆನೆಯಲ್ಕ್ಕಾಗದ ನೀಳನ 'ರಂಗ'ದೊಳಿಹನ್ - ಅಖಿಲರಿಂ ಪೂಜ್ಯರಿಂ |
ದೇವಾಧಿದೇವನ್ ಎನು ಸಂನುತನೇ ಪಿನ್ ಓರ್ ನಾಳ್
ಮಾ ವಾಪಿಯ ಬಾಯ್ ಸೀಳಿದ ನಂದರಮಗನೇ –

ನಾವು ಯಾತ್ರಾಸ್ಥಳಗಳನ್ನು ಆದರಿಸಿ ಪ್ರವೇಶಿಸಿದರೆ, 'ಆಹಾ! ಇವರ ಭಕ್ತಿ ನೋಡಿದೆಯಾ? ನಾನೂ ಸ್ವೇಚ್ಛೆಯಿಂದ ಸಂತುಷ್ಟನಾಗಿ ಆದರಿಸಿ ಪ್ರೀತಿಯಿಂದ ನಿತ್ಯವಾಸ ಮಾಡುವ ದಿವ್ಯದೇಶಗಳನ್ನು ಎಷ್ಟೊಂದು ನೇಹದಿಂದ ಇವರು ಸುತ್ತುತ್ತಾರೆ!' ಎಂದು ಆಯಾ ಶ್ರೀಕ್ಷೇತ್ರ ಮೂರ್ತಿಗಳು, ಯಾವ ಆಕಾರದಲ್ಲೇ ಇರಲಿ, ಆಯಾಯಾ ಭಕ್ತರು ಶ್ರದ್ಧೆಯಿಂದ ಭಾವಿಸಿದಂತೆ, ಅವರಿಗೆ ತಕ್ಕವುಗಳಾಗಿ ಅಂತಹವರ ಮನಸ್ಸನ್ನೂ ಬಿಡದೆ, ಮನಸ್ಸಿನ ಮೂಲಕ ಅವರವರ ಪಾವನವಾದ ಹೃದಯಾಂತರಾಳದಲ್ಲಿ ತಂಗಿಯೇ ಬಿಡುತ್ತವೆ. ಅದೂ ಅತ್ಯಾssನಂದದಿಂದ! ನಾವಲ್ಲ ನಮ್ಮ ಚಿತ್ತದಿಂದ ಅಂತರ್ಯಾಮಿಯನ್ನು ಧ್ಯಾನಿಸುವವರು; ಅದು ಸ್ವಗತ ಸ್ವೀಕಾರ. ದೇವರೇ **"ಧ್ಯಾತಾನಾರಾಯಣಃ ಪರಃ"** ಎಂಬಂತೆ, ತಾನೇ ಮುಂದಾಗಿ ಧ್ಯಾನಿಸಿ ನಿತ್ಯವಾಸ ಮಾಡುವುದೇ ಪರಗತ ಸ್ವೀಕಾರ!

ಎನೈ ಪ್ಪಲರುಮ್ = ಪೂಜ್ಯರಾದ ಹಿರಿಯರಿಂದ, ದೇವಾದಿ ದೇವನ್ = ದೇವರ ಬಳಿಯಲ್ಲೇ ಸದಾ ವಾಸಿಸುವ ನಿತ್ಯಸೂರಿಗಳಿಗೂ ಮೇಲಧಿದೈವನಾದವನು 'ಎನಪ್ಪಡುವಾನ್' ಎಂದು ಸ್ತುತಿಸಲ್ಪಡುವ, ಮಾಕಡಲಾನ್ = ಹಿರಿಹಾಲ್ ಗಡಲ್‌ನಲ್ಲಿ ಪವಡಿಸಿರುವ, ಮುನ್ ಒರುನಾಳ್ = ಹಿಂದೊಮ್ಮೆ. ಮಾ = ಕೇಶಿಯೆಂಬ ಅಶ್ವಾಸುರನ. ವಾಯ್ = ಬಾಯನ್ನು, ಪಿಳನ್ದ = ಪಳೆದ, ಮಗನ್ = ಎಳೆವಯಸ್ಸಿನ ಬಾಲನಂದಲಾಲ, ಮತ್ತುಮ್ = ಮತ್ತೆಯೂ, ನಿನೈಪ್ಪು ಅರಿಯ = ನೆನಯಲಸಾಧ್ಯವಾದ, ನೀಳ್ = ವಿಶಾಲವಾದ, ಅರಙ್ಗತ್ತು = ಶ್ರೀರಂಗದಲ್ಲಿ, ಉಳ್ಳಾನ್ = ಆ ಕ್ಷೇತ್ರಾಽಧಿಪತಿಯಾಗಿ ಮಲಗಿರುವವನೇ. ವೇಙ್ಗಡತ್ತಾನ್ = ತಿರುಪತಿಯಲ್ಲಿ ನಿಂತ ತಿಮ್ಮಪ್ಪ! ಮನತ್ತುಳ್ಳಾನ್ = ಹಿಂದಿನ ಎಲ್ಲಾ ತಾಣಗಳನ್ನೂ ಬಿಡದೆಯೇ, ಹಾಗೂ ಸ್ವರೂಪ-ಸ್ವಭಾವಾದಿ ಮಹಿಮೆಗಳಿಂದ ಪರಿಪೂರ್ಣನಾಗಿಯೇ, ಮನತ್ತು ಉಳ್ಳಾನ್ = ಸರ್ವತ್ರ ಇದೂ ನನ್ನ ಮನಸ್ಸಿನಲ್ಲಿಯೇ. ಉಳ್ಳಾನ್ = ಇವೆಲ್ಲವನ್ನು ತನ್ನ ಆಸ್ತಿಗಳೆಂದೇ ಬಗೆದು ನಿರಾಳನಾಗಿ ಇದ್ದೇ ಇದ್ದಾನೆ. ಅವೆಲ್ಲದರಲ್ಲೂ ಇಟ್ಟಿರುವ ಕುತೂಹಲವನ್ನೂ ದೇವಾಧಿದೇವ ಈ ದಾಸನ ಚಿತ್ತಸ್ಥಾನವೊಂದರಲ್ಲೇ ಇಟ್ಟಿದ್ದಾನೆ!

ತಮಿಳ್ ತಿರಳ್ ೨ - ೩೩

ತುಣಿನ್ದದು ಶಿನ್ದೈ ತುಳಾಯಲಙ್ಗಲ್ ಅಙ್ಗಮ್ ಅಣಿನ್ದವನ್ ಪೇರ್ ಉಳ್ಳತ್ತು ಪ್ಪಲ್ ಕಾಲ್ - ಪಣಿನ್ದುವುಮ್|
ವೇಯ್ ಪಿರಙ್ಗುಶಾರಲ್ ವಿರಲ್ ವೇಙ್ಗಡವನೈಯೇ ವಾಯ್ ತಿರಙ್ಗಳ್ ಶೊಲ್ಲುಮ್ ವಹೈ||

ಕನ್ನಡ ನೆರಳ್

ಹಾತೊರೆಯಿತು ಚಿತ್ತಂ ತೊಳಸೀ ಸರಗಳನಂಗಾಂದೊಳ್ ಅಂತಿಹನ್ ಪೆಸರ್ ನೆನೆದೆಂದೂ ಅನವರತಂ ಈ ಡಾಡಿದುದೂ|
ಬಿದಿರೇ ಹೆಚ್ಚಳವಿಹ, ನೀರ್ ರ್ಝರಿವೆಂಕಟದೋಳಿಹನನ್ನೇ ವದನವು ನಾನಾ ತೆರಬಗೆಗಳಿಂ ಪಲುಕುಗೆಯೊಳ್||

ನನ್ನ ಮನೋ ವಾಕ್ ಕಾಯಗಳು ಮೂರೂ ತಿಮ್ಮಪ್ಪನಲ್ಲಿ ಪ್ರವಣವಾದುದು ಮಾತ್ರವಲ್ಲ ಭಗವದ್ ಭಾಗವತರಿಗೆ ವಿರುದ್ಧವಾದ ವಿಷಯಾಂತರಗಳನ್ನೂ ಅವು ಮೂರೂ ತ್ಯಜಿಸಿಯೇ ಬಿಟ್ಟವು. ಶರಣ ಸಂತರ ಕಾಯಕರಣಗಳು ಅಚೇತನಗಳಲ್ಲ, ಅವೂ ಚೈತನ್ಯ ಸಮಾಧಿಯಾಂತವು, ದಾಸಾನುದಾಸನಾದ ಈ ಆತ್ಮನಿಗೆ ಕರ್ತೃತ್ವವೇನೇನೂ ಇಲ್ಲ. ಇವೆಲ್ಲಾ ದೇವರ ವಿಶೇಷ ಮಹಿಮೆ.

ಶಿನ್ದೈ = ನನ್ನೊಳಗಿನ ಅಂತಃಕರಣಚಿತ್ತ, ತುಳಾಯ್ ಅಲಙ್ಗಲ್ = ತೊಳಸೀ ಹಾರವನ್ನು, ಅಙ್ಗಮ್ = ತನ್ನ ಎಲ್ಲಾ ಅಂಗಾಂಗಗಳಲ್ಲೂ, ಅಣಿನ್ದವನ್ = ಅಲಂಕರಿಸಿ ಕೊಂಡಿರುವವನು, ಆಳ್ವಾರ್-ಶರಣರಿಗೆ ತುಳಸಿ ಎಂದರೆ ಅಸಾಧಾರಣವಾದ ವಿಶಿಷ್ಟ ಪ್ರೇಮ. ಎಷ್ಟೇ ಹೂಹಾರ ಬೇರೆ ಬೇರೆ ವಸ್ತ್ರಾಭರಣಾಲಂಕಾರಗಳಿಗಿಂತಲೂ ತೊಳಸಿಮಾಲೆಗೇ ಇವರು ಪ್ರಾಧಾನ್ಯ ನೀಡುತ್ತಾರೆ. ದೇವಾಲಯದ ದಿವ್ಯ ಪ್ರಬಂಧ ಗೋಷ್ಠಿಯವರಿಗೆ ಅದು ವಿಶೇಷವಾದ "ಮಹಾಪ್ರಸಾದಂ"! ಅಂತಹವನ. ಪೇರ್ = ಶ್ರೀನಾಮಗಳನ್ನು, ಉಳ್ಳತ್ತು = "ಅನು"ಸನ್ಧಾನ ಮಾಡುವುದರಲ್ಲೇ ಆಳ್ವಾರ್‌ಗಳಿಗೆಲ್ಲಾ ಯಾವೊಂದೂ ಸ್ವಗತ ಸ್ವತಂತ್ರ ಸಾಧನವಿಲ್ಲದಿರುವುದರಿಂದ, ಸಿದ್ಧಸಾಧನವಾದ ಸಿದ್ಧೇಶ್ವರ ಮೊಟ್ಟಮೊದಲು ನೆನೆದ ಮೇಲೆಯೇ ಅದಕ್ಕೆ ಸುಮಾನಾಗಿ, ಈ ಆತ್ಮ ಚೈತನ್ಯ ಹಾಗೂ ಚೇತನ ಉಭಯನೂ ಆಗಿರುವುದರಿಂದ ಆ ಚೈತನ್ಯ ಜ್ಞಾನಕಾರ್ಯವಾಗಿ, ಬೇರೆಯವರ ದೃಷ್ಟಿಯಲ್ಲಿರುವ "ತಮ್ಮ ಸಾಧನ" ಎಂಬಂತಲ್ಲದೆ. ರಾಗಪ್ರಾಪ್ತವಾಗಿ, ವಿಧಿ ಕಾನೂನುಗಳಿಗೇನೂ ವಶ್ಯರಾಗದೆ ಶರಣ್ಯನ ಸಂತೋಷ - ಮುಖೋಲ್ಲಾಸಕ್ಕಾಗಿಯೇ ಸಹಜವಾಗಿ ಆಗುವುದೇ ಹೊರತು ತಮ್ಮ ಆಚಾರಗಳೆಲ್ಲಾ ತಮ್ಮಿಂದ ನಡೆಯಿತೆಂಬ ಗಣನೆಯೇ ಸುಳಿಯದು. **"ಅನುಸೃತ್ಯ- ಸಂಧಾನಂ - ಅನುಸಂಧಾನಂ" "ಅನು-ಭವ"** ಎಂಬುದು ಹೀಗೆಯೇ. ಎರಡನೆಯ ಪರತಂತ್ರತೆಯಿಂದ, ನಮ್ಮಲ್ಲಿ ಅವುಗಳೆಲ್ಲಾ ಅವವೇ ಸೇರಿಕೊಳ್ಳುತ್ತವೆಯೇ ಹೊರತು, ಸ್ವ ಪ್ರಯತ್ನವೆಂಬ, ಸಾಧನ ಭಾವ ಇಲ್ಲ. "ಅಧಿಕಾರಿ ವಿಶೇಷಣ"ಗಳಷ್ಟೆ! ಉಳ್ಳತ್ತು = ಅನುಸಂಧಾನಗೈಯ್ಯುವುದರಲ್ಲೇ, ತುಣಿನ್ದದು = ತೀರ್ಮಾನಿಸಿ ಹಾತೊರೆಯಿತು! ಅಙ್ಗಮ್ = ದಾಸನ ಈ ಅಂಗಾಂಗ ಹಾಗೂ ಒಡಲೂ, ಪಲ್‌ಕಾಲ್ = ಒಮ್ಮೆಗೈದುದರಿಂದಲೇ ತೃಪ್ತಿ ಪಡದೆ, ಮುದವೇರಿ ಭೋಗ್ಯತಾ ಬುದ್ಧಿಯಿಂದ ಸ್ವಯಂ ಪ್ರಯೋಜನ ರೂಪವಾದ ಸಂತಸದಿಂದ **"ಭೂಯೋ ಭೂಯಃ"** ಎಂಬಂತೆ, ಎಂಬ ಭಾವ. ಪಣಿನ್ದವುಮ್ = ಬಾಗಿ ನಮಿಸಿ. **"ಅತ್ಯನ್ತ ವಿನಯಾಽವನತೋ ಭೂತ್ವಾ"** ಎಂಬಂತೆ ಕೈಂಕರ್ಯದಲ್ಲಿ ಈಜಾಡುತ್ತಿವೆ, ವೇಯ್ = ಬಿದಿರು, ಪಿರಙ್ಗು = ಮೆಳೆಗಳಿಂದ ತುಂಬಿರುವ, ಶಾರಲ್ = ನೀರ್ ಹರವುಗಳುಳ್ಳ, ವಿರಲ್ = ಉನ್ನತವಾದ, ವೇಂಗಡವನ್ಯೈಯೇ = ವೆಂಕಟಾಽಚಲದ ಪತಿಯನ್ನೇ, ವಾಯ್ = ದಾಸನ ಬಾಯಿಯೂ, ತಿರಙ್ಗಳ್ = ಒಡೆಯನ ಸ್ವರೂಪ ಸ್ವಭಾವಗಳನ್ನೇ. ಶೊಲ್ಲುಮ್‌ವಹೈ = ಹೇಳುವ ರೀತಿಯಲ್ಲೇ. ತುಣಿನ್ದದು = ನಾನೇ ಚೇತನನಾಗಿ ಬಿಟ್ಟಿದ್ದೇನೆ. ನಿನ್ನ ಪ್ರಯತ್ನವೇನೂ ಬೇಡ. ಅತ "ಹೃಷೀಕೇಶ"ನಲ್ಲವೋ! ಹೃಷೀಕ ಎಂದರೆ, ಕರ್ಮೇಂದ್ರಿಯವಾದ "ವಾಕ್-ಬಾಯಿ" ಎಂಬ ನಾನೂ ಒಂದು ಉಪಕರಣವಷ್ಟೇ! ಈಶನ ಅಪ್ಪಣೆ ಮೇರೆ ನಾನೇ ಹೇಳಿಬಿಟ್ಟೆ! ವಾಗಿಂದ್ರಿಯ ಕರಣಕ್ಕೇ ಅತುರ!

'ಮಾನಸಿಕ', 'ಕಾಯಕ' ಇವೆರಡೂ ಒಂದು ವೇಳೆ ಅನನ್ಯಗಳಾದರೂ, ಹಾಳು ಬಾಯಿ ಮಾತ್ರ ಮಾನವನನ್ನು ಹೆಚ್ಚಾಗಿಯೇ ಕಾಡಿಸುವಂತಹದು. ಬಾಯ್ ಹತೋಟಿ ಕಷ್ಟ! ಬಡಬಡಿಸಿಯೇ ಬಿಡುತ್ತದೆ. ಏನೇನನ್ನೋ! ಅದರ ಮೇಲೆ, ಅದರ ಪ್ರಭುವಿನ ಆಸರೆಯಲ್ಲಿ. ಬಾಯಿ, ಸ್ವಾಮಿಯ, ಭಾಗವತೋತ್ತಮರ ಸದ್‌ಗುಣಗಳ ಬಗೆಗೇ ಅಷ್ಟೇ ಏಕೆ, ಎಲ್ಲರಲ್ಲೂ, ಸದ್‌ಗುಣವಿರುವಷ್ಟನ್ನೇ ಹೇಳುವ **"ಗುಣೈಕಗ್ರಹಣ ಗುಣೈಕೋಚ್ಚಾರಣೆ"**ಯತ್ತ ಹೆಚ್ಚು ಗಮನ ನೀಡಬೆಕಾದುದೇ ಇಲ್ಲಿನ ಪಾಠ. ಇದೊಂದು 'ಕಲೆ' (Art). ಆಗ ಜೀವನ ಎಷ್ಟೊಂದು ಹಸನಾಗುವುದು! ಎಲ್ಲೆಲ್ಲೂ ನಡೆಯುತ್ತಿರುವ ಸದ್‌ವಿಚಾರಗಳನ್ನೇ ಮಾಧ್ಯಮಗಳು ಬಿತ್ತರಿಸುವ ಯೋಜನೆಯೇ ಸಾಧುವಾದುದು. ದುರ್‌ವಿಚಾರಗಳನ್ನು ನುಂಗಿಕೊಳ್ಳಬೇಕು. ಲೋಕಸಭೆ, ರಾಜ್ಯ ಪರಿಷತ್, ವಿಧಾನಸಭೆಗಳಲ್ಲಿ,ಒಳ್ಳೆಯ ಸಭಾಧ್ಯಕ್ಷರುಗಳಿಂದ ಈ ಕಾರ್ಯ ನಡೆಯುತ್ತಿದೆಯಷ್ಟೆ. ಅದನ್ನೇ ಪತ್ರಿಕೆ, ಮುಂತಾದವುಗಳೂ ಅನುಸರಿಸುವ ಸುಸ್ಥಿತಿ ತರಬೇಕಾದ್ದು ಪ್ರಜಾಧರ್ಮ.

ತಮಿಳ್ ತಿರಳ್ ೨ - ೪೫

ಉಳದೆನ್ನಿರುಮಾವಾರ್ ಉಂಡಿಲ್ಲೈಯೆನ್ನು ತಳರ್‌ದಲ್ ಅದನರುಹುಮ್ ಶಾರಾರ್ - ಅಳವರಿಯವೇದತ್ತಾನ್|
ವೇಂಗಡತ್ತಾನ್ ವಿಣ್ಣೋರ್ ಮುಡಿ ತೋಯುಮ್ ಪಾದತ್ತಾನ್ ಪಾದಂ ಪಯಿನ್ನು||

ಕನ್ನಡ ನೆರಳ್

– ಉಂಟೆನು ಗರ್ವಿಸರ್, ಹಿಂದಿತ್ತೀಗಿಲ್ಲೆಂದು ತಂಟೆಯದಂಟಿಸಿಕೊಳ್ಳರ್ - ಅಳತೆಗೆ ಮೀರ್|
ವೇದಾರ್ಥನ ವೇಂಕಟನ - ಬಾನವರ್ ಮುಡಿತೋಯ್ ಪಾದನ ಪದವಾಸರಿಸಿ || –

ಭಗವದ್ ಭಾಗವತರ ಸೇವೆಗೆ ಒದಗದ ಯಾವುದರಲ್ಲೂ ಲಕ್ಷ್ಯವಿರಬಾರದು. ಸರ್ವೇಶ್ವರನನ್ನು ಎಡಬಿಡದೆ ನಿತ್ಯ ಕೈಂಕರ್ಯವೆಸಗುವವರ ಪಾದಧೂಳಿವೊಂದನ್ನೇ ಬಯಸಿದರೆ ಸಾಕು! ಕೈಂಕರ್ಯವಿರೋಧಿಯಾದ, ಕರ್ಮಾಽಧೀನ ಈ 'ಸೇವೆ' (Service)

ಗಳೆಂಬುದೆಲ್ಲಾ ತಾವಾಗಿಯೇ ತೊಲಗಿಹೋಗುವುವು. ಇತರ ವಿಷಯ ಲಾಭದಿಂದ ಹಿಗ್ಗಾಗಲಿ, ಅಲಾಭದಿಂದ ಕುಗ್ಗಾಗಲಿ ಅಂಥವರಿಗೆ ಬಾರದು. **"ರಚನಾತ್ಮಕ ನಿಸ್ವಾರ್ಥ ಬುದ್ಧಿಯಿಂದ ಮಾಡುವ ಸೇವೆಯಲ್ಲಿ ಕೆಟ್ಟುದರ ಭಯವೇ ಇರದು".**

ಅಳವು = ಇಷ್ಟೇ ಎಂಬ ಅಳತೆಯನ್ನು, ಅರಿಯ = ಮೀರಿರುವ, ವೇದತ್ತಾನ್ = ಸಕಲ ವ್ಯಕ್ತಿ ಓದುವಾರ್ ಒತ್ತೆಲ್ಲಾಂ ಎವ್ವುಲ ಹತ್ತು ಎವ್ವೆವೈಯುಂ, ದೇಶಕಾಲದಲ್ಲಿನ ಸರ್ವವಿಧ ಸದ್‌ವೇದಗಳಿಗೆಲ್ಲಾ ಯಾವೋರ್ವನೇ ಪ್ರತಿಪಾದ್ಯನೋ ಅಂತಹ, ವೇಜ್ಗಡತ್ತಾನ್ = ವೆಂಕಟೇಶನ, ವಿಣ್‌ಓರ್ = ಆ ಮೇಲ್ ವೈಕುಂಠ ಹಾಗೂ ಅದಕ್ಕೆ ಕೀಳ್ ಸ್ವರ್ಗದವರ, ಮುಡಿ = ತಲೆಗಳೆಲ್ಲಾ, ತೋಯುಮ್ = ಮುಟ್ಟುವ, ಪಾದತ್ತಾನ್ = ಪಾದಗಳುಳ್ಳವನ, ಅಂತೆಯೇ ಪರ್ಯಾಯವಾಗಿ ಸ್ವಾಮಿಯ ಸ್ವರ್ಣಪಾದವಿರುವ ಗೋಪುರಾssಕಾರದ 'ಶಠಕೋಪ'ವನ್ನು ನಮ್ಮೆಲ್ಲರ ತಲೆಗೆ ಸರಿಹೊಂದುವ ಹಾಗೆ ಅರ್ಚಕ ಮುಖೇನ ಇಡುವ 'ಪರಗತ' ನಿಷ್ಕಾದ್ಯೋತಕವಾದ ಪಾದಮ್ ಸಿರಿಯಡಿಗಳನ್ನು, ಪಯಿನ್ನು = ತಲೆಬಾಗಿ ಆಶ್ರಯಿಸಿ, ಇದೇ ಪಾಸಿಟಿವ್ ಪ್ರೋಗ್ರಾಮ್. ಅವನೇ ಪಾದವಿಡುವ ಇದರಿಂದ ಆಗುವ, ನೆಗಟಿವ್ ಫಲಿತಾಂಶವೇನು?

ಉಳದು ಎನ್ನು = ನಮಗೆ ಧನಧಾನ್ಯ ಸಕಲ ವಿದ್ಯಾsಧಿಕಾರಾದಿ ಸರ್ವಸಮೃದ್ಧಿಗಳೂ, ನಮ್ಮ ಒಡೆತನದಲ್ಲೇ ಇವೆ ಎಂದು, ಇರುಮಾವಾರ್ = ಗರ್ವಪಡರು. ಇದ್ದರೂ ಅವೆಲ್ಲಾ ಪರಾರ್ಥ ಪರಮಾರ್ಥಕ್ಕಾಗಿಯೇ ಹೊರತು, ಸ್ವಾರ್ಥಕ್ಕಾಗಿ ಅಲ್ಲ. ಮತ್ತೊಂದು ಬಗೆಯ ಜನ, ಉಂಡು = ಹಿಂದೆಲ್ಲಾ ಆ ಅದ್ದೂರಿಗಳನ್ನೆಲ್ಲಾ ಅನುಭವಿಸಿದೆವು. ಅವೆಲ್ಲಾ ಗತವೈಭವ. ಇಲ್ಲೆ ಎನ್ನು = ಈಗಿಲ್ಲವಲ್ಲಾ ಎಂಬ ಭ್ರಷ್ಟೈಶ್ವರ್ಯ ಕಾಮಿಗಳು, ಪಡುವ ದುಗುಡಗಳ, ಅರುಹುಮ್ = ಮಾನಸಿಕ ಸಾಮೀಪ್ಯವನ್ನೂ ಸಹ, ಶಾರಾರ್ = ಸೇರುವಂತೆ ಮಾಡಿಕೊಳ್ಳರು. ಅವೆಲ್ಲಾ ಶನಿಕಾಟ ತೊಲಗಿದ್ದು ಇನ್ನೂ ಒಳ್ಳೆಯದೇ ಆಯಿತು! ಈ ಪರಿವರ್ತಿತ ಸದ್‌ಬುದ್ಧಿ ತಾಗಿಬಿಡುವುದು. ಶಠಾರಿಸ್ಪರ್ಶದಿಂದ. ಇದರ ಅನುಭವಕ್ಕಾಗಿ ಈ ಆಳ್ವಾರ್ ಶರಣರನ್ನು ಎಲ್ಲರೂ ಅರ್ಥಮಾಡಿಕೊಳ್ಳಲೇ ಬೇಕಾಗುತ್ತದೆ. ಬಡವರಾಗಿದ್ದರೂ. ಅಪ್ರಸಿದ್ಧರಾಗಿದ್ದರೂ, ಹಳೆ ಜಾಡಿನ ರೂಢಿಗ್ರಸ್ತ ಜನ ಹಾಸ್ಯ ಮಾಡಿದರೂ ಜಗ್ಗುವುದಿಲ್ಲ. ಹೊಸಜೀವನಮೌಲ್ಯ ಅಂತರಕ್ಕೆ ತಾಗಿಬಿಡುತ್ತದೆ. ಯಾತ್ರಾರ್ಥಿಗಳಿಗೆ ಈ ಪ್ರಾಮಾಣಿಕ ಕಾಳಜಿ ಇರಬೇಕಷ್ಟೆ ಇದನ್ನುಂಟು ಮಾಡುವುದೇ ಶರಣ ಸಾಹಿತ್ಯದ ಶಕ್ತಿ. ಜಾನಪದ ವಾಙ್ಮಯಗಳ ಥಾಕತ್ತು!

ಕೇವಲ ಆರ್ಥಿಕ ಅಭಿವೃದ್ಧಿ, ಸಾಕ್ಷರತೆ ಇತ್ಯಾದಿ ಪ್ರಗತಿಗಳೆಂಬುವುವೆಲ್ಲ, ಮುನ್ನಡೆಯಂತೆ ಕಂಡರೂ, ಒಳ ಸಜ್ಜನಿಕೆಗಳನ್ನು ಉತ್ತೇಜಿಸುವಂತಾದರೆ ತಪ್ಪೇನಿಲ್ಲ. ಆದರೆ ಅವುಗಳಷ್ಟೇ ಮಾನವಾಭಿವೃದ್ಧಿಯ ಕುರುಹುಗಳಲ್ಲ. ಜಗಳವಾಡದೆ ಎಷ್ಟೊಂದು ಶಾಂತಿ. ಎಷ್ಟೊಂದು ನೆಮ್ಮದಿ ಇವುಗಳನ್ನೂ ಅಂಕಿಅಂಶಗಳಿಂದ ತೋಲನ ಮಾಡುವಂತಾಗಬೇಕು. ರೌಡಿಗಳಾಗಿ ಎಷ್ಟು ಹಣವಂತರಾದರೇನು? ಕಲಿತವರಾದರೇನು? ಮಾನವನಿರ್ಮಿತಗಳಾದ, ಮಾನವ ಶಕ್ತಿಗೇ ಅವಕಾಶ ನೀಡದ ಯಂತ್ರಾssತಿರೇಕಗಳಿಂದ, ನಷ್ಟ, ಹೆಚ್ಚೆಂಬುದರ ಅರಿವೇ ಬಾರದಿದ್ದರೆ ಏನುಪಯೋಗ? ಎಲ್ಲ ಮಾನವ ಹಸ್ತಗಳಿಂದ ಕೆಲಸವನ್ನೇ ಕಸಿಯುವುದು, ಆರೋಗ್ಯಕಾರಿಯೇ? ಕಾಯಕವನ್ನು ಲಘೂಕರಿಸುವ ಶಿಕ್ಷಣ, ಸಭ್ಯತೆಯ ಗಣನೆಗೆ ಬರುತ್ತದೆಯೇ? ಕೈಯ್ಯಿಂದಾಗುವ ಕೆಲಸಗಳಿಗೂ ಯಂತ್ರ ಬೇಕೇಬೇಕೆನ್ನುವ ಪ್ರವೃತ್ತಿ ಪ್ರಜಾಮಾರಕವಲ್ಲವೇ? ಪರರ, ನಿಷ್ಕಾಮ ಸೇವೆಯಿಂದಲೇ ಸುಖ, ಹಾಗಿಲ್ಲದಿದ್ದಾಗ ದುಃಖ. ಈ ನಿಜವಾದ ವೈಚಾರಿಕ ಹಾಗೂ ಆಚಾರಿಕ ಬದಲಾವಣೆಯನ್ನು ತರದ ಯಾವೊಂದೂ ಇನ್ನೂ ಹೆಚ್ಚು ಅಪಾಯಕಾರಿಯೇ.

ಅಂತೆಯೇ ಆಳ್ವಾರುಗಳೆಲ್ಲಾ ಭಗವದ್ ಭಾಗವತರ ಸೇವೆಗೆ ವಿಚ್ಛೇದ ಬಂತೆಂದರೆ ಆಕ್ರಂದಿಸುವುದು. **"ಸೇವೆಯ ಅಭಾವದಿಂದ ಉಂಟಾಗುವ ಶೋಕವೇ ಭಕ್ತಿಯ ಒರೆಗಲ್ಲು!"** ಬೇರೆ ಬಗೆ ಲಾಭಾಲಾಭಗಳಿಂದ, ಶೋಕಾಮರ್ಷಗಳು ಬರಬಾರದಂತಹ ಸಮಾಜನಿರ್ಮಾಣವೇ ಆಳ್ವಾರ್‌ಗಳ ಗುರಿ. ಅವರ ಈ ಅಭೀಪ್ಸೆಯನ್ನು ನಾವು ನೆರವೇರಿಸಲು ನಿರಹಂಕೃತವಿನೀತಭಾವದಿಂದಲೇ ದುಡಿಯೋಣ.

ತಮಿಳ್ ತಿರಳ್ ೨ - ೪೬

ಪಯಿನ್ನದರಙ್ಗಮ್ ತಿರುಕ್ಕೋಟ್ಟಿ ಪನ್ನಾಳ್ ಪಯಿನ್ನದುವುಮ್ ವೇಜ್ಗಡಮೇ ಪಲ್‌ನಾಳ್ - ಪಯಿನ್ನ|
ದಣಿ ತಿಹಳುಮ್ ಶೋಲೈ ಯಣಿ ನೀರ್‌ಮಲೈಯೇ ಮಣಿತಿಹಳುಮ್ ವಣ್ ತಡಕ್ಕೈ ಮಾಲ್|

ಕನ್ನಡ ನೆರಳ್

- ಆಸರೆ ರಂಗಂ, 'ತಿರುಕ್ಕೋಟ್ಟಿಯು' ಪಲನಾಳ್ ಆಸರೆಯೂ ವೆಂಕಟವೇ, ಪಲನಾಳ್ ಆಸರೆ |
ಅಣು ಬೆಳಗುವ ಬನ ಚೆನ್ನೀರ್ ಮಣಿಯೇ - ಮಣಿಗೂ ಬೆಳಕನು ನೀಡುವ ಕೊಡುಗೈ ಮೋಹಿಗಿದೋ ||

ತನ್ನ ಪಾದ ಹಿಡಿಯುವಂತೆ ಮಾಡಿ ಸರ್ವಚೇತನರನ್ನೂ ಸ್ವಾಧೀನ ಪಡಿಸಿಕೊಳ್ಳಲೆಂದೇ ವಿಶ್ವದ ನಾನಾ ದಿವ್ಯದೇಶಗಳಲ್ಲಿ, ದೇವರು ಬಗೆ ಬಗೆಯ ರೂಪುಗಳಿಂದ ಅಯಾಯಾ ಪವಿತ್ರ ಮಂದಿರಗಳಲ್ಲಿ ನಿತ್ಯವಾಸಗೈಯ್ಯುವುದು. ಸ್ವಸ್ಥ ಸಾತ್ವಿಕ ಪರಾಕ್ರಮ ಶಾಶ್ವತವಾಗಿ ಸರಿನಿಟ್ಟಿನಲ್ಲಿ ಏರಬೇಕಾದರೆ ಇಂತಹ 'ಘಟಕ'ಗಳು ಅನಿವಾರ್ಯ. ವೇದ ಶಾಸ್ತ್ರಾದಿಗಳಲ್ಲಿನ ಈಶ್ವರ ನಿರೂಪಣ, ಬರೀ ಕಾಗದ ಪತ್ರಗಳ ದಾಖಲೆಗಳಲ್ಲಿರುವಂತೆ. ದೇವಾssಲಯಗಳಿಂದಲೇ ಆರಂಭವಾಗಿರುವ ಊರುಗಳಲ್ಲಿ, ತನ್ನ ಅಸ್ತಿಗಳ ಸ್ವಾನುಭವ, ಸ್ಪಷ್ಟ! ಜೀವಾತ್ಮರು ಈಶ್ವರನ ಸ್ವತ್ತು. ಪ್ರತಿ ಅಚೇತನವೂ ಈಶ್ವರನ ಅಸ್ತಿಯೇ. ಕೇರಳದ ದೇವಾಲಯ ವ್ಯವಸ್ಥೆಯಲ್ಲಿ 'ದೇವಸ್ವಂ' ಎಂಬ ಸ್ಪಷ್ಟವಾದ ಉಲ್ಲೇಖವಿದೆ. [ಸ್ವಾಭಾವಿಕನಾದ] ಒಡೆಯನಿಗೂ - ಅಡಿಗನಿಗೂ ಇರುವ ಸ್ವಸ್ವಾಮಿಭಾವ ಸಂಬಂಧಾನುಭವ ಎಂದಿಗೂ ಉಳಿಯುವಂತೆಯೇ ಯೋಜನಾಕಾರರು ಕಾರ್ಯತತ್ಪರರಾಗಬೇಕಾದುದೇ ಸರಿದಾರಿ.

ಮಣಿ = ಇಂದ್ರನೀಲ ಮಣಿಗಿಂತಲೂ ಹೆಚ್ಚಾಗಿಯೇ ಪ್ರಕಾಶಿಸುವುದು ಸ್ವಾಮಿಯ ಶ್ರೀಮೂರ್ತಿ! ಅಂತಹ ಹೊಳಹುಳ್ಳ, ಚಿನ್ಮೂರ್ತಿ ಆನಂದಮಯ, ಓಂಕಾರ ಪ್ರಣವ ನಿಲಯನು, ವಣ್ ತಡಮ್ ಕೈ = ಉದಾರಿ, ವಿಶಾಲ ಶ್ರೀ ಹಸ್ತಗಳೊಡನೆ **"ಚತುರ್ಣಾಂ ಪುರುಷಾರ್ಥಾನಾಂ ದಾತಾ ದೇವಶ್ಚತುರ್ ಭುಜಃ"** ಎಂಬ, ಮಾಲ್ = ಸರ್ವೇಶ್ವರನು, ಪಯಿನ್ನದು = ಪವಡಿಸಿರುವುದು, ಅರಙ್ಗಮ್ = **"ಕಾವೇರಿ ಅಂತ್ಯರಂಗವೆನಿಸಿದ ಶ್ರೀರಂಗ. ಶ್ರೀರಂಗಪಟ್ಟಣ" ಆದಿರಂಗ!, ಶಿವನಸಮುದ್ರ 'ಮಧ್ಯರಂಗ'**. ಈ ಸಂಜ್ಞೆಗಳು ಗಮನಾರ್ಹ. ಎಲ್ಲವೂ ಕಾವೇರಿನಾಡು! ಅನಾದಿ ನದೀಪರ್ವತಗಳ ಸ್ವಾಭಾವಿಕ ಗಡಿಗಳಿಂದಲೇ ಗಡಿಬಿಡಿ ಕಡಿಮೆಯಾಗುವುವು!, ತಿರುಕ್ಕೋಟ್ಟಿ = ಆ ತಿರುಕ್ಕೋಟ್ಟಿಯೂರಿನಲ್ಲಿ. ಪಲ್ನಾಳ್ = ಅನಾದಿ ಅನನ್ತ ಕಾಲ, ಈ ಬ್ರಹ್ಮ ಕಲ್ಪಾಂತ್ಯದವರೆಗೂ, ಪಯಿನ್ನದವುಮ್ = ಪ್ರೀತಿಯಿಂದ ಕನವರಿಸುತ್ತಾ ತ್ರಿವಿಕ್ರಮ ಮೂರ್ತಿಯಾಗಿರುವುದು. ಪಲ್ನಾಳ್ ಪಯಿನ್ನದುವುಮ್ = ಉಭಯಾನ್ವಯಿ. ವೇಙ್ಗಡಮೇ = ಇಲ್ಲಿನ ಏವಕಾರ 'ಏ' ಎಂಬುದು ಗಮನಾರ್ಹ, 'ಪಲ್ನಾಳ್ ಪಯಿನ್ನದವುಮ್' ಈ ಶಬ್ದ ಮೂರು ಬಾರಿ ಈ ಪಾಶುರದಲ್ಲಿ ಬಂದಿರುವುದು. ದೇವರ ಆದರಾssತಿಶಯವನ್ನು ತಾವೂ ಅದೇ ಸಮಾದರದಿಂದ ಚೆಪ್ಪರಿಸುತ್ತಾ ದಿವ್ಯದೇಶಗಳ ಬಗೆಗೆ ತಮ್ಮ ವಿಶೇಷಾಭಿಮಾನ ತೋರುವುದಕ್ಕಾಗಿ!

ಅಣಿತಿಹಳುಮ್ = ಹೆಚ್ಚು ಶಿಲಾ ತರುಷಂಡಾದಿಗಳಿಂದ ಶೋಭಿಸುವ, ಶೋಲೈ = ಅಂತೆಯೇ ಹೇರಳವಾದ ಹಸಿರು ತೋಪುಗಳಿಂದ, ಅದಕ್ಕೆ ಆಶ್ರಯವಾದ ಗಿರಿಕಾನನಗಳಿಂದ ಶೋಭಾ ಬಾಹುಳ್ಯವುಳ್ಳ. ಸುಂದರತಮವಾದ 'ತಿರುನೀರ್ಮಲೈಯೇ' ಇಲ್ಲೂ 'ಏ' ಬಂದಿದೆ. 'ವಣ್ತಡಂಕೈಮಾಲ್' ಇಲ್ಲೆಲ್ಲಾ ಸ್ವಾಮಿಗೆ ಬಲು ವ್ಯಾಮೋಹ. ಅವನಿಗಾಗಿ ಸಂಸಾರಿಗಳಾದ ನಾವು ಭಕ್ತಿಯಿಂದ ಪಾಡು ಪಡುವುದಕ್ಕಿಂತಲೂ, ದೇವರೇ 'ಅತ್ಯರ್ಥ' ಎಂದರೆ, ವಾಚಾಮಗೋಚರವಾದ, ದೇವರೂ ಬಾಯ್ಬಿಟ್ಟು ಹೇಳಲಸದಳವಾದ ಪ್ರೀತಿಯಿಂದ ಪಾಡು ಪಡುವನು! ಅದಕ್ಕಾಗಿ ಒಂದಲ್ಲ, ನೂರ್ ಎಂಟು ದಿವ್ಯದೇಶಗಳು ಮಾತ್ರವಲ್ಲ ಎಲ್ಲೆಲ್ಲೂ ಅಭಿಮಾನಿಸಿ ವಾಸವಾಗಿದ್ದಾನೆ.

ಈಶಾ ವಾಸ್ಯಮಿದಂ ಸರ್ವಮ್

ಈ ಉಪನಿಷದರ್ಥವನ್ನು, **"ಅಲ್ಲಿ ಮರೆಗೊಂಡಿರುವುದನ್ನು ತಮ್ಮ ಜಾನಪದ ಸಾಹಿತ್ಯದಿಂದ ಸುಲಭವಾಗಿ ನಾಡುನುಡಿಗಳಲ್ಲಿ ಆಡುವುದೇ ಆಳ್ವಾರ್ ಶರಣರ ಒಂದು ವೈಶಿಷ್ಟ್ಯ".**

ತಮಿಳ್ ತಿರಳ್ ೨ - ೪೮

ಉಣರ್ನ್ದಾಯ್ ಮರೈ ನಾನ್ಗುಮ್ ಓದಿನಾಯ್ ನೀದಿ ಮಣನ್ದಾಯ್ ಮಲರ್ ಮಹಳ್ ತೋಳ್ ಮಾಲೇ! |
ಮಣನ್ದಾಯ್ ಪೋಯ್ ವೇಯಿರುಮ್ ಶಾರಲ್ ವಿಯಲಿರು ಞಾಲಮ್ ಶೂಳ್ ಮಾಯಿರುಮ್ ಶೋಲೈ ಮಲೈ ||

ಕನ್ನಡ ನೆರಳ್

ಸ್ಮರಿಸಿದೆ ಶ್ರುತಿನಾಲ್ಕುಂ, ಪೇಳಿದೆ ಸ್ಮೃತಿಗಳನು, ವರಿಸಿದೆ ಪೂಮಗಳ್ತೋಳ್, ಎಲೆಮೋಹೀ! - ಅಪ್ಪಿದೆ ಪೋಗಿ |
ಉದ್ದನ ಬಿದಿರ್ ಮೆಳೆಗಳಿಂ ಹೊಳೆಯುವ ಬಿತ್ತರದಿಳೆ ಸೂಳ್ ಎತ್ತರ ಮಾ ಪೂದೋಟದ ತಿರುಮಲೆಯಂ ||

ಓ ಶ್ರಿಯಃಪತೇ! ಈ ಜಗತ್ತಿನಲ್ಲಿ ಎಲ್ಲರೂ ನಿನ್ನನ್ನು ಸುಲಭವಾದ ಮಾಧ್ಯಮದಿಂದ ಅರಿಯಲೆಂದೇ, ನೀನು ಸೃಷ್ಟಿಸಿದೆ. ಜಡ ಸೃಷ್ಟಿಯೂ ನಿನ್ನ ಆರಾಧನೋಪಕರಣ ದೃಷ್ಟಿಯಿಂದ ಜ್ಞಾನೋಪಯೋಗಿಯೇ. ಜೀವಾತ್ಮ, ದಾಸ್ಯ ಭೂಮಿಕೆಗಿಂತಲೂ ಮೇಲೇರಿ ಅತ್ಯಂತ ಜಡವತ್ ಪರತಂತ್ರನಾದಾಗ ಅಂತಹ ಶೂನ್ಯಾತ್ಮರ ದೇಹ ಇಂದ್ರಿಯಗಳೇ ಹೃಷೀಕೇಶನಿಗೆ 'ದಾಸ'ರಾಗಿ ಬಿಡುವುವು! "ಪಡಿಯಾಯ್ಕ್ಕಿಡನ್ದು, ಉನ್ ಪವಳವಾಯ್ ಕಾಣ್ಬೇನೇ" ತಿರುಪತಿ ಗರ್ಭಗೃಹದ ಹೊಸಲಾಗಿಗಿರಬೇಕೆಂಬ ಕುಲಶೇಖರರ

ಈ ಪ್ರಾರ್ಥನೆಯಲ್ಲಿ ತಮ್ಮ 'ಜಡವತ್ ಪಾರಂತ್ರ್ಯದ' ಉತ್ತಮೋತ್ತಮವಾದ ಮಜಲನ್ನು ತೋರಿದ್ದಾರೆ. ಹಾಗೂ ತಿಮ್ಮಪ್ಪನ, ಹವಳಗಳಿಗೂ ಕಾಂತಿನೀಡುವ, ಪ್ರಜ್ವಲಿಸುವ ತುಟಿಯನ್ನು ಎಂದು ಕಾಣುವೆನೋ ಎಂಬ ಹಂಬಲದಿಂದ, ತಮ್ಮ ಚೈತನ್ಯಕಾರ್ಯವನ್ನು ಸೊಗಸಾಗಿ ತಿಳಿಸಿದ್ದಾರೆ! ಮರೈನಾನ್ಗುಮ್ = ಚತುರ್ವೇದಗಳನ್ನೂ, ನೀಡಿ = ವೇದಾರ್ಥ ನಿಗೂಢ. ಅದನ್ನು ಮಾನವನ ಸದಾಽಽಚಾರ, ಇತಿಹಾಸ, ಬಗೆಬಗೆಯ ಕತೆ ಉಪಕತೆಗಳಿಂದ ಗಂಭೀರ ಹಾಗೂ ರೋಚಕ ಶೈಲಿಯಲ್ಲಿ ಜನಸಾಮಾನ್ಯಕ್ಕೆ ತಿಳಿಸಲೆಂದೇ, ಸ್ಮೃತಿ, ಇತಹಾಸ, ಪುರಾಣಾದಿಗಳನ್ನೂ, ಓದಿನಾಯ್ = ಚತುರ್ಮುಖ, ಹಾಗೂ ಮನ್ವಾದಿಗಳಿಗೆ, ನೀತಿಮಾರ್ಗಗಳನ್ನು ಹೇಳಿ ಕೊಟ್ಟೆ. ಅದೇ ವೇದ ವೇದಾನ್ತ ಸ್ಮೃತೀತಿಹಾಸ ಪುರಾಣಾದಿಗಳಲ್ಲಿ, ನಿನ್ನೊಳಗೇ ಅಡಗಿ ನಿನ್ನಿಂದ ಗಾಢೋಪಗೂಢಳಾಗಿರುವ ಮಹಾಲಕ್ಷ್ಮಿಯನ್ನೂ ಪರಿಚಯಿಸಿದೆ! ಅಂಥವಳು, ಮಲರ್ ಮಹಳ್ = ಪದ್ಮಜೆ. ಹೀಗೆ ಸಾಂಗವೇದ ಪ್ರತಿಪಾದ್ಯಳಾದ ಅವಳನ್ನು, ಸಮುದ್ರ ಮಥನದ ಕೊನೆಯಲ್ಲಿ, ಹೆಣ್ ಅಮೃತಳಾದ, ತೋಳ್ = ನಿನಗೋರ್ವನಿಗೇ ಉಚಿತವಾದ ಬಾಹುಗಳನ್ನು, ಮಣನ್ದಾಯ್ = ಅಪ್ಪಿದೆ. ಪೋಯ್ = ದೇವತೆಗಳಿಗಾಗಿ ಅಮೃತ ಕಡೆಯಲು ಉದ್ದೇಶಿಸಿ ಹೋದವನಿಗೆ. ಮಾಲೇ = ಓ ಶ್ರೀ ವ್ಯಾಮೋಹಿನ್! ವೇಯ್ ಇರುಮ್ = ಕೀಚಕಗಳಿಂದ ಘನವಾದ ಹಾಗೂ, ಶಾರಲ್ = ಮೂವತ್ತಮೂರು ಕೋಟಿ ದಿವ್ಯತೀರ್ಥಗಳಿರುವ. ವಿಯಲ್ = ಅತ್ಯಾಶ್ಚರ್ಯಕರವಾದ, ಇರು = ಸುತ್ತುವುದಕ್ಕೇ ಅಸಾಧ್ಯವಾದ ಮಹಾವಿಸ್ತಾರವುಳ್ಳ, ಮಾ = ಎತ್ತರವಾದ, ಇರುಮ್ = ಉದ್ದಗಲದ, ಶೋಲೈ = ಹೂದೋಟಗಳಿಂದಲೇ ತುಂಬಿರುವ. ಮಲೈ = ವೇಂಕಟಾಚಲವನ್ನು ಸೇರಿ, ಪದ್ಮಾವತಿಯನ್ನು ಆಲಂಗಿಸಿದೆ!

ವೈಕುಂಠವೊಂದರಲ್ಲೇ ನೀನಿದ್ದಿದ್ದರೆ **'ವೇದೈಶ್ಚ ಸರ್ವೈಃ ಅಹಮೇವವೇದ್ಯಃ'** ನಿತ್ಯ ಅಪೌರುಷೇಯ ಅನಾದಿ ಹಾಗೂ ಭ್ರಮ ಪ್ರಮಾದ ವಂಚನೆ ಮುಂತಾದ ಯಾವೊಂದು ದೋಷವೂ ತಟ್ಟದ ಪರಮ ಪ್ರಮಾಣಗಮ್ಯನೆಂದು ಹೇಳಲು ಏನೂ ಅಡ್ಡಿಯಿರಲಿಲ್ಲ. ಅದು ಪರೋಕ್ಷ ಉಪಕಾರ. ಪ್ರತ್ಯಕ್ಷವಾಗಿ, ನಿನ್ನ ಆಶ್ರಿತವ್ಯಾಮೋಹ ನಿನ್ನನ್ನು ಈ ತಿರುಮಲೆಗೇ ಸೇರಿಸಿತು! ಸಂಸಾರಿಗಳ ಬಾಹ್ಯಾನುಭವಕ್ಕಾಗಿಯೂ ನೀನು ಈ ದಿವ್ಯದೇಶವಾಸಿಯಾದೆ! ರೂಢಿಯ ಅರ್ಥದಲ್ಲಿ ದಕ್ಷಿಣದ ಮಧುರೆಯ ಸಮೀಪದಲ್ಲಿರುವ "ತಿರುಮಾಲ್ ಇರುಂಶೋಲೈ" ಎಂದಾಗಬಹುದಾದರೂ. ಇಲ್ಲಿ "ಮಾಲಿರುಂ" ಬದಲಾಗಿ "ಮಾ ಇರುವುಮ್" ಈ ಸೂಕ್ಷ್ಮವನ್ನು ಕಂಡ ಶಿಷ್ಟರು ಯೌಗಿಕಾರ್ಥದಲ್ಲಿ, ಉತ್ತರ ತಿರುಪತಿಗೂ ಅನ್ವಯಿಸಿರುವುದು ಉಪಪನ್ನ. ಈ ಉಭಯಪರ್ವತಗಳೂ ಭೂ ದೇವಿಯ ಉಭಯ ಸ್ತನಗಳೆಂಬ ಪ್ರಸಿದ್ಧಿಯಿರುವುದರಿಂದ, ಒಬ್ಬನೇ 'ಧರ್ಮಿ'ಯಾಗಿರುವ ಶ್ರೀನಿವಾಸನ ಮೂರ್ತಿಗೂ, ಸುಂದರಬಾಹು ಅಳಹರ್‌ಮೂರ್ತಿಗೂ ಉಭಯ ಧಾಮಗಳಲ್ಲೂ ಭೋಗಕ್ಕೇನೂ ಕೊರೆಯಿಲ್ಲ. ಪ್ರದೇಶ ವಿಶೇಷವನ್ನು ಶಾಬ್ದಿಕವಾಗಿ ಉಲ್ಲೇಖಿಸಿದರೂ, ಆಳ್ವಾರ್ ಅನುಭಾವ ವ್ಯಾಪಕವಾದುದು.

ತಮಿಳ್ ನೆರಳ್ ೨ - ೫೩

ನೆರಿಯಾರ್ ಕುಳಲ್ ಕತ್ತೈಮುನ್ ನಿನ್ನು ಪಿನ್ ತಾಳ್‌ನ್ದು ಅರಿಯಾದಿಳಙ್ಕಿರಿ ಯೆನ್ನೆಣ್ಣಿ - ಪಿರಿಯಾದು |
ಪೊಜ್ಗೊಡಿಕ್ಕಳ್ ವೈಹುಮ್ ಪೊರುಪುನಲ್ ಕುನ್ನೆನ್ನುಮ್ ವೇಙ್ಗಡಮೇ ಯಾಮ್ ವಿರುಮ್ಬುಮ್ ವೆರ್‌ಪು ||

ಕನ್ನಡ ನೆರಳ್

ಚಿರಮುನಿ ಮುಡಿಜಡೆ ಮುನ್ ಪಿನ್ ತೊಂಗಿರಲು ಅರಿಯದೆ ಕಿರುಗಿರಿಯೆಂದೆಣ್ಣಿ - ಪಿರಿಯದೆ |
ಪೂಂಕೊಡಿಗಳ್ ಹರಗಿಹ ಅಲೆ ಹೊನಲ್ ಬೆಟ್ಟವೆ ಎಂಬೀ ವೆಂಕಟವನೆ ನಾವ್ ಎಲ್ಲರ ಫಲವೆನು ನೇಹಿಪ ಶೈಲಂ! ||

"ಗಿಡ ಮರ ಬಳ್ಳಿಗಳಿಂದಲೂ, ಪುಣ್ಯ ತೀರ್ಥಗಳಿಂದಲೂ ಎಲ್ಲೆಲ್ಲೂ ತುಂಬಿರುವ ಶ್ರೀವೇಂಕಟಾಚಲವನ್ನೇ ಎಂದೆಂದೂ ನಾವು ಆಸೆ ಪಡುವುದು".

ನೆರಿಯಾರ್ = ಚಿರಕಾಲ ಸ್ಥಿರಸುಖಾಽಽಸನಸ್ಥರಾಗಿ ಪುಷ್ಕಳ ತಪಸ್ಸು ಮಾಡುತ್ತಿರುವವರ, ಕುಳಲ್ ಕತ್ತೈ = ಸ್ನಾನ, ಕೇಶಾಲಂ ಕಾರಗಳಿಲ್ಲದ ಮುಡಿಜಡೆಗಳು, ಮುನ್ ನಿನ್ನು = ಮುಂದುಗಡೆಗೂ, ತಂಗಿ ಪಿನ್ ತಾಳ್‌ನ್ದು = ಹಿಂದಕ್ಕೂ ಉದ್ದನೆ ಹರಗಿರಲು, ಅರಿಯಾದು = ಇವು ದೀರ್ಘ ಕಾಲ ನಿರಂತರವಾದ ತಪಸ್ವಿಗಳ ಮೈ ಎಂದೂ, ಇವು ಅವರ ತಲೆಗೂದಲ ಜಡೆ ಎಂಬುದನ್ನೂ ಅರಿಯದೆ, ಇದೊಂದು, ಇಳಮ್‌ಗಿರಿ = ಸಣ್ಣ ದಿಣ್ಣೆಯೆಂದೇ, ಪಿರಿಯಾದು = ಆ ಚಿಕ್ಕ ಹುತ್ತದಂತೆಯೇ ಇರುವ ಆ ಸ್ಥಳದಲ್ಲಿ, ಪೂಮ್ ಪುನಲ್ = ಅರಳಿರುವ ಲತಾಪುಷ್ಪ ಹಬ್ಬಿರುವುವೆಂಬ ಭ್ರಾಂತಿಯಿಂದ ವನ್ಯ ಮೃಗಗಳು. ಕುಂಭಕ ಪ್ರಾಣಾಽಽಯಾಮದಿಂದ ನಿಷ್ಪ್ರಾಣರಂತೆ ಬಿದ್ದಿರುವವರಿಂದ ಕೂಡಿದ, ವೆರ್‌ಪು = ಗಿರಿಪ್ರದೇಶವಾದ. ವೇಙ್ಗಡಮೇ, ಯಾಮ್ ವಿರುಮ್ಬುಮ್ = ಮುಮುಕ್ಷು ಬುಭುಕ್ಷುಗಳಾದ ನಾವೆಲ್ಲಾ. ಪ್ರಾಪ್ಯ ಸ್ಥಾನವೆಂದೇ ಬಯಸುವಂಥದು! "ದ್ವಯಮನ್ತ್ರಾರ್ಥ"ವನ್ನು ಇಲ್ಲಿ ಪೂದತ್ತಾಳ್ವಾರ್ "ಕ್ಷೇತ್ರ

ಪರ್ಯನ್ತ" ಹಿಗ್ಗಿಸಿದ್ದಾರೆ! 'ಯಾಮ್' ಎಂಬ ಬಹುವಚನದಿಂದ, ಶರಣರು ಒಬ್ಬರೇ ಪ್ರಪತ್ತಿಗೈದರೂ ಫಲಕ್ಕೆ ಎಲ್ಲರನ್ನೂ ಸೇರಿಸಿಕೊಳ್ಳುವ, ಉದಾರವಾದ ಮಹಾಕ್ರಾಂತಿಯೊಂದನ್ನು ತೋರಿದ್ದಾರೆ. ಯದ್ಯಪಿ ಗಾಯತ್ರೀ ಮನ್ತ್ರದಲ್ಲಿ, 'ಧಿಯೋಯೋನಃ'. ನಮ್ಮೆಲ್ಲರ ಬುದ್ಧಿಗಳನ್ನೂ ಮೋಕ್ಷ ಪರ್ಯನ್ತ ಚೆನ್ನಾಗಿ ಹಿಗ್ಗಿಸಪ್ಪಾ ಎಂಬ ಪ್ರಾಪ್ಯಫಲ ಪ್ರಾರ್ಥನೆಯಿದ್ದರೂ 'ಅಡಿಯೇನ್ ಶೆಯ್ಯುಮ್ ವಿಣ್ಣಪ್ಪಮೇ' ಶರಣಾಗತಿಯ ಬಿನ್ನಹದಲ್ಲಿ ಎಲ್ಲರೂ ಸೇರದಿದ್ದರೂ ಅಂತಹ ದೀನ ದಳಿತರಿಗೂ, **"ಪೊಯ್ನಿನ್ನ ಜ್ಞಾನ ಮುಮ್ ಪೊಲ್ಲಾ ಒಳುಕ್ಕುಮ್, ಅಳುಕ್ಕುಡಮ್ಬುಮ್| ಇನ್ನಿನ್ನ ನೀರ್ಮೈ ಇನಿ'ಯಾಮ್' ಉರಾವ್ಮೈ"**, ಮಿಥ್ಯಾ ಶರೀರದಲ್ಲೇ ಆತ್ಮವೆಂಬ ಸ್ಥಿರವಾದ ಅಜ್ಞಾನವಾಗಲಿ, ಶರೀರಾऽಧೀನವಾಗಿ ಬರುವ, ದುರ್‌ವಾಸನೆಯ ಚಟಗಳಾಗಲಿ, ಅದಕ್ಕೂ ಮೂಲವಾದ ದುಷ್ಕರ್ಮಗಳಾಗಲಿ, ಸರಪಳಿಯಂತೆ ಮುಂದರಿಯುವ ದುರಭಿರುಚಿ, ಅದರಿಂದ ಮಗುದೊಂದು ಶಾರೀರಕ ಜನ್ಮವಾಗಲಿ, ಇಂತಿಂತಹ ದುರವಸ್ಥೆಗಳನ್ನು ನಾವಾರೂ ಹೊಂದದಂತೆ, 'ಅವಿದ್ಯಾ, ಕರ್ಮ, ವಾಸನಾ, ರುಚಿ, ಪ್ರಕೃತಿ', ಸಂಬಂಧಗಳ ಪಂಚ ವಿಷಚಕ್ರಕ್ಕೆ ಬದಲಾಗಿ, "ಸದ್ ವಿದ್ಯಾ, ಸತ್‌ಕರ್ಮ. ಸದ್‌ವಾಸನೆ, ಸದಭಿರುಚಿ, ಅಪ್ರಾಕೃತ ದಿವ್ಯದೇಹ" ಎಂದು ಸರ್ವಶರಣರ ಕುಲಕ್ಕೇ ಕೂಟಸ್ಥರಾದ ಕಲಿಯುಗಾದಿಯಲ್ಲಿನ ಒಕ್ಕಲಿಗರ ಮಾರಪ್ಪನ ಮಗ ಶಠಾರಿಗಳೆಂಬುವವರು, ಸಾಧನ ಸ್ವೀಕಾರ ಕಾಲದಲ್ಲಿ ಏಕಾಕಿಯಾಗಿಯೇ ಬೇಡುತ್ತಾರೆ. ಆರ್ಷಮಂತ್ರದಲ್ಲಾದರೆ, 'ಧೀಮಹಿ' ಎಂಬ ಬಹುವಚನ. **'ಎಲ್ಲರೂ ಸೇರಿ ಪ್ರಾರ್ಥಿಸಿದರೀಗ ಎಲ್ಲರಿಗೂ ಫಲ'**. ನೀವು ಬೇಡಲಿಲ್ಲ ನಿಮಗೆ ಆ ಮೋಕ್ಷಫಲವಿಲ್ಲ ಎಂಬ ಕೊರೆ ಬರಬಹುದು. ಅದು ಶರಣರ ಜಾನಪದ ಸಾಹಿತ್ಯದಲ್ಲಿಲ್ಲ. **"ತಾಯಿಗಿಂತಲೂ ಹೆಚ್ಚು ಕರುಣಾಮಯಿಗಳು ಆಳ್ವಾರ್ 'ಅನ್ನೈಯಾಯ್'** ಎಂಬಂತೆ ಯದ್ಯಪಿ **ಋಷಿಗಳು ಕರುಣಾಳುಗಳೇ. ಶರಣರು ಪರಮ ಕರುಣಾಳುಗಳು!"** ಎಂಬ ಭಾವ.

ತಮಿಳ್ ತಿರಳ್ ೨ - ೫೪

ವೆರ್‌ಪ್ಪೆನ್ನಿರುಮ್ ಶೋಲೈ ವೇಙ್ಗಡಮ್ ಎನ್ನಿವ್ವಿರಣ್ಡುಮ್ ನಿರ್‌ಪ್ಪೆನ್ನು ನೀ ಮದಿಕ್ಕುಮ್ ನೀರ್‌ಮೈ ಪೋಲ್ - ನಿರ್‌ಪೆ |
ನ್ನುಳನ್ ಕೋಯಿಲ್ ಉಳ್ಳುಮ್ ವೈತ್ತುಳ್ಳಿನೇನ್, ವೆಳ್ಳ ತ್ತಿಳಜ್ಞೋಯಿಲ್ ಕೈ ವಿಡೇಲ್ ಎನ್ನು ||

ಕನ್ನಡ ನೆರಳ್

ಶೈಲಂ ಮಾಲಿರುಂಶೋಲೈ ವೇಂಕಟವೆಂಬೀ ಎರಡೂ ನಿಲ್‌ದಾಣವೆನೇ ನೀ ಕಾಮಿಪ ನೇಹಂ ಪೋಲ್ - ಠಾವೆನು|
ಒಳದೇಗುಲದೊಳಗಿಟ್ಟರ್ಥಿಪೆನಯ್ಯಾ! - ಹಾಲ್ ತೊರೆ ಸಲು "ಬಾಲಾಲಯ" ಕೈ ಬಿಡಬೇಡಾ! ಎಂದೇ ||

ಎಲ್ಲರೂ ಚೆನ್ನಾಗಿರಬೇಕೆಂಬ ಕಳಕಳಿ ಹಿಂದಿನ ಹಾಡಿನಲ್ಲಾದರೆ ಈ ಪೂದತ್ತಾಳ್ವಾರರ ಪ್ರೇಮ, ಆ ಕ್ಷೀರಸಮುದ್ರವನ್ನೂ ತಮ್ಮಂತೆಯೇ ಸೇರಿಸಿಕೊಂಡಿರಬೇಕೇ ಹೊರತು, ಅದನ್ನು ತೊರೆದೇ ತಮ್ಮೆಡೆಗೆ ಬಾ ಎಂದು ಸ್ವಾಮಿಯನ್ನು ಕರೆಯರು. ಈ ಯಾತ್ರಾ ಸ್ಥಳಗಳಿಗೆ ನೀನು ಪ್ರೇಮಾತಿಶಯದಿಂದ ದಯಮಾಡಿಸಿದರೂ, ಎಲ್ಲ ಅವತಾರಗಳಿಗೂ ಮೂಲಕಂದವಾದ ಹಾಲ್ಗಡಲನ್ನು ಬಿಡಬೇಡ. ಎಲೈ ದೇವಾ! ನಿನಗೇ ಮೀಸಲಾದ ಭೂದೇವಿಯ ತುಂಗಸ್ತನದ್ವಯಗಳಂತಿರುವ **"ತೆಂಕಣ ತಿರುಮಾಲಿರುಂಶೋಲೈ ಮತ್ತು ಬಡಗಲ ತಿರುಪತಿಗಳಲ್ಲಿ"** ನೀನಿಟ್ಟಿರುವ ಅಭಿಮಾನವನ್ನೇ ನನ್ನೀ ಚಿತ್ತದ ಬಗೆಗೂ ತೋರಿ ಈ ಒಳದೇಗುಲದಲ್ಲಿರುವುದು ಸರಿ! ವಿಷ್ಣುಚಿತ್ತರೇನೋ, **ಇಡವಹೈಹಳ್ ಇರುಳ್‌ನ್ದಿಟ್ಟು ಎನ್‌ಪಾಲ್ ಇಡವಹೈ ಕೊಂಡನ್ಯೆಯೇ** ಅನನ್ತ ಗರುಡಾದಿ ನಿತ್ಯಸೂರಿಗಳನ್ನೂ ಬಿಟ್ಟೇ, ಹಾಗೂ **ಪನಿಕ್ಕಡಲಲ್ ಪಳ್ಳಿಹೋಳೈ ಪಳಹವಿಟ್ಟು** ಕ್ಷೀರಾಬ್ಧಿಯನ್ನೂ ಬಿಟ್ಟೇ ತಮ್ಮ ಚಿತ್ತದಲ್ಲೇ ಸಾನಿಧ್ಯಗೈದುದನ್ನು ನಿನಗಾಗಿ ಒಪ್ಪಿದಂತೆ ಕಾಣುತ್ತದೆ. ನಾನು ಹಾಗೆ ಇರಲು ಸಾಧ್ಯವಿಲ್ಲ ಎಂದು ತಮ್ಮ ಅನುಭಾವವನ್ನು ತೋಡಿಕೊಂಡಿದ್ದಾರೆ.

"ಪೂರ್ಣಾತ್ ಪೂರ್ಣಂ ಉದಚ್ಯತೇ"

"ಅಲ್ಲಿ, ಇಲ್ಲಿ ಎಲ್ಲೆಲ್ಲೂ ಪೂರ್ಣನಾಗಿಯೇ ಇರು! ಆಳ್ವಾರ್ ಶರಣರಲ್ಲಿ ಸೂಕ್ಷ್ಮವೈವಿಧ್ಯಗಳಿರಬಹುದೇ ಹೊರತು, ಎಲ್ಲರ ಹೃದಯವೂ ಪರಸಮೃದ್ಧಿಗಾಗಿಯೇ!" ಹೊರತು ವೈರುತ್ವವಿಲ್ಲ.

ಶೋಲೈ = ತಿರುಮಾಲಿರುಂಶೋಲೈ ಎಂಬ ಕಳ್ಳಳಹರ್ ಸನ್ನಿಧಿ. ವೇಙ್ಗಡಮ್, ಎನ್ನು = ಎಂಬುವ, ಇರುಮ್ = ವಿಸ್ತಾರವಾದ, ವೆರ್‌ಪೆನ್ನು = ಪರ್ವತಗಳೆಂಬ, ಇವ್ವಿರಣ್ಡುಮ್ = ನಿನಗಿಷ್ಟವಾದ ಈ ಎರಡೂ ದಿವ್ಯ ಶ್ರೀ ಸ್ಥಾನಗಳನ್ನು, ನಿರ್‌ಪು ಎನ್ನು = ನಿತ್ಯ ನಿಲ್ದಾಣವೆಂದು, ನೀ = ನೀನು, ಮದಿಕ್ಕುಮ್ = ಗೌರವಿಸುವ, ನೀರ್‌ಮೈಪೋಲ್ = ನಿನ್ನ ಸೌಲಭ್ಯ ಸೌಶೀಲ್ಯಾದಿಗುಣಗಳಿಗೆ. ತಕ್ಕಂತೆ, ಉಳ್ಳಮ್ = ನನ್ನ ಚಿತ್ತವನ್ನೂ, ಕೋಯಿಲ್ = ಪ್ರಭು ಮಂದಿರವನ್ನಾಗಿ, ಅದರಲ್ಲೂ,

ನಿರ್‌ಪ್ಪು ಎನ್ನು = ಶಾಶ್ವತ ನಿತ್ಯವಾಸ ಸ್ಥಳವೆಂದು, ದೇವರೇ ಆಳ್ವಾರರ ಎದೆಯಲ್ಲಿ ನಿತ್ಯಸಾನಿಧ್ಯಗೈದಿರುವಂತೆ ಸ್ವಾನುಭವ ಇಲ್ಲಿ ಉಮ್ಮಳಿಸಿದೆ! ಉಳ್ಳಮ್ ವೈತ್ತು = ನಿನ್ನ ಸಿರಿ ಚಿತ್ತವನ್ನು ದಾಸನಲ್ಲೂ ಇಟ್ಟು. ವೆಳ್ಳಮ್ = ಉಕ್ಕಿ ಉಕ್ಕಿ ಹಾಲ್ ಪ್ರವಾಹವೇ ಹರಿಯುವ ಅಲ್ಲೂ, ಸರ್ವಾವತಾರಗಳಿಗೂ ಹಾಲ್ಗಡಲೇ ಮೂಲ. ಅಲ್ಲಿ ಚೇತನರ ರಕ್ಷಣೆಯನ್ನು ಯಾವ ರೀತಿಯಲ್ಲಿ ಮಾಡೋಣ ಈ ಚಿಂತನೆಯೆಂಬ ಯೋಗನಿದ್ರೆಯಲ್ಲಿರುತ್ತೀಯೆ. ಇಲ್ಲೂ ಬಗೆ ಬಗೆಯ ಜನರಿರುವುದರಿಂದ, ಒಂದವತಾರದಲ್ಲಿ ಮಾಡಿದಂತೆಯೇ, ಮತ್ತೊಂದರಲ್ಲೂ ಮಾಡುವವನಲ್ಲ! ನಿತ್ಯ ನವನವೋಪಾಯ. ಆ ಅವಸರದಲ್ಲಿ ಬೇರೆಡೆಗೆ ಭಕ್ತರಿಗಾಗಿ ಓಡಿಬರುವಾಗ, ನೀನಿದ್ದ ಆ "ಬಾಲಾಽsಲಯವನ್ನು" ಕೈ ವೀಡೇಲ್ = ದಯೆಯಿಟ್ಟು ಕೈ ಒದರಿ ಬಂದು ಬಿಡಬೇಡವಪ್ಪಾ!

ಆಗಮಶಾಸ್ತ್ರದಲ್ಲಿ, ದೇವಾಲಯದ ಜೀರ್ಣೋದ್ಧಾರ ಕಾಲದಲ್ಲಿ, ಹಾಗೂ ನವ್ಯಮಂದಿರ ನಿರ್ಮಾಣ ಕಾಲದಲ್ಲಿ. ಪರಮಾತ್ಮನ ಮೂರ್ತಿಯನ್ನು ಕುಂಭದಲ್ಲೂ, ಳಲ ದಿನಗಳಿಗೂ ಮೇಲಾದರೆ, ಚಿತ್ರಪಟದಲ್ಲೂ ಬಿಂಬಗಳಲ್ಲೂ ಆವಾಹನ ಮಾಡಿ, ಜೀರ್ಣೋದ್ಧಾರದ ಕೆಲಸಗಳು ಮುಗಿದು ಸಿದ್ಧವಾಗುವವರಿವಿಗೂ ಸಾನ್ನಿಧ್ಯ ರಕ್ಷಣೆಗಾಗಿ ಮಾಡಬೇಕಾದ ವಿಧಾನಗಳನ್ನು ಹೇಳಿದೆ. ಅದಕ್ಕೆ "ಬಾಲಾಽsಲಯ" ಎಂಬ ಪಾರಿಭಾಷಿಕ ಸಂಜ್ಞೆ. ಅದರ ಬಗ್ಗೆ ಪ್ರಮಾಣ ವಾಕ್ಯಗಳು ಹೀಗಿವೆ.

ತಥಾ ಮನ್ದಿರ ನಿರ್ಮಾಣೇ ತತ್ತದ್ ವಿಘ್ನೋಪಶಾನ್ತಯೇ
ನಿರ್ಮಾಯ 'ಬಾಲಸದನಂ' ತತ್ರ ಮಾಮರ್ಚಯೇತ್ ಸುಧೀಃ||

ಮಹಾಕುಂಭಂ ಸಕರಕಂ ಸೋಪಕುಂಭಾಷ್ಟಕಂ ನ್ಯಸೇತ್
ಮೂಲಮೂರ್ತಿಗತಾಂ ಶಕ್ತಿಂ ಕರಕೇ ಚ ಸುದರ್ಶನಮ್||

ಸಮುದ್ಧೃತ್ಯ ತತಃ ಕುಮ್ಭಾತ್ ನಿಷ್ಕ್ರಾಮೇದ್ ದೇವಮಂದಿರಾತ್
ಮನ್ದಿರಂ ತತ್ ಪರಿಕ್ರಮ್ಯ ಬಾಲಗೇಹಂ ಸಮಾಶ್ರಯೇತ್||

ಪ್ರತಿನಿತ್ಯಾಽsರಾಧನೆಯಲ್ಲೂ ಮನಸ್ಸನ್ನೇ ಬಾಲಾಲಯವನ್ನಾಗಿ ಧ್ಯಾನಿಸಿ, ಧ್ಯಾನನಿಷ್ಪನ್ನವಾದ ಆ ಮೂರ್ತಿಯನ್ನೇ, ಬಿಂಬದಲ್ಲೂ ಸೇರಿಸಿ, ತದನಂತರ ಪೂಜೆ ಆರಂಭಿಸಬೇಕು. ಆಗ ಅರ್ಚಕರ ಮನಸ್ಸೇ ಬಾಲಾಲಯವಾಗುವುದು, ಅತ್ತಣ ಪರತ್ವ ಈ ಬ್ರಹ್ಮಾಂಡದ ಸತ್ಯಲೋಕದ ಒಂದೆಡೆಯಿರುವುದು ಕ್ಷೀರ ಸಮುದ್ರ. ಆ ಪರತ್ವ - ಈ ಅರ್ಚಾಮೂರ್ತಿಗಳ ಮಧ್ಯೇ ಹಾಲ್ಗಡಲಿರುವುದರಿಂದ ಅದರ ಮೂಲಕವೇ, ಎಲ್ಲಾ ಅರ್ಚಾವಿಭವಾವತಾರಗಳೂ ಆಗುವುದರಿಂದ ದುಗ್ಧಾಂಬುಧಿಯೇ 'ಬಾಲಾಽsಲಯ.' ಎಲ್ಲಾ ದಿವ್ಯ ದೇಶಗಳ ಪ್ರತಿಮಾ ಮೂರ್ತಿಗಳ ಅಂತಶ್ಶಕ್ತಿಯೆಲ್ಲಾ ಪರವಾಸುದೇವನ ಪೂರ್ಣಾಭಿಮಾನದೊಂದಿಗೆ ಬ್ರಹ್ಮಲೋಕಕ್ಕೆ ತಲಪಿ ಆ ಚತುರ್ಮುಖನ ಮೂಲಕವೇ ಅಲ್ಲಲ್ಲಿ ಸಾನ್ನಿಧ್ಯ ಕಂಡಿರುವುದನ್ನು ಆಯಾಯಾ ಪುಣ್ಯಕ್ಷೇತ್ರಗಳ "ಪ್ರಾಚೀನ ಸುಪ್ರಭಾತಾದಿ" ಸ್ತೋತ್ರಗಳಲ್ಲೂ, ಆಯಾಯ ಕ್ಷೇತ್ರ ಮಾಹಾತ್ಮ್ಯಗಳಲ್ಲೂ ನಾವು ಕಾಣಬಹುದು. ಇವೆರಡರ ಪರಿಚಯ ದೇವಾಲಯದ ಅಡಳಿತ ವರ್ಗಕ್ಕೂ, ಯಾತ್ರಿಗಳಿಗೂ, ಸ್ಥಳದ ಕೈಂಕರ್ಯಪರರಿಗೂ, ಆಯಾಯಾ ಊರಿನ ಸಮಸ್ತ ಜನರಿಗೂ ಅಗತ್ಯ ಬೇಕೇ ಬೇಕು. ಆಗಲೀಗ ಸಮಗ್ರ ಸಂಪೂರ್ಣ ಪೂಜೆ ಸಾರ್ಥಕವಾಗುವುದು. **"ಸಾಮೂಹಿಕ ಸಹಜ ಜವಾಬ್ದಾರಿಯೇ ದಿವ್ಯದೇಶಗಳ ಅಭಿವೃದ್ಧಿಯ ರಹಸ್ಯ". Participative devotion. ಸಹಭಾಗಿ ಭಕ್ತಿ ಕೇವಲ ಅರ್ಚಕರದು ಮಾತ್ರವಲ್ಲ.**

ಪೂದತ್ತಾಳ್ವಾರರ ಮನಸ್ಸೂ 'ಇಳಚ್ಚೋಯಿಲ್'. ಈ ಅಲೌಕಿಕ ದಿವ್ಯಾನುಭವವನ್ನು ಇಲ್ಲಿ ಅನುಭವಿಸಿದ್ದಾರೆ. ಏಕೆಂದರೆ ಕ್ಷೀರಾರ್ಣವ ಕಲ್ಪಿತವಲ್ಲ. ವೈಕುಂಠಪ್ರಾಪ್ತಿಯವರೆಗೂ ಚಿತ್ತವೂ ನಿತ್ಯ. ಉಪನಿಷದರ್ಥಗಳ ಸಂಪೂರ್ಣ "ಪಚನ ಶಕ್ತಿ" (Dygesting Power) ಆಳ್ವಾರ್-ಸಂತಶರಣರಿಗೆ ಎಷ್ಟೊಂದು ನಿಖರವಾಗಿರುವುದೆಂಬುದನ್ನು ನಾವೂ, ದಾರ್ಶನಿಕ ಪಂಡಿತರೂ ಗಮನಿಸಬೇಕಾದ್ದು. ದಿವ್ಯ ಪ್ರಬಂಧಗಳು ವೇದೋಪನಿಷಚ್ಛಾಸ್ತ್ರ ಪರಿಚಯವಿಲ್ಲದ ಮುಂದಮತಿಗಳಿಗಾಗಿ ಮಾತ್ರವಲ್ಲ. ಶಾಸ್ತ್ರಾಽಭ್ಯಾಸಕ್ಕೇ ಎಷ್ಟೊಂದು ಬುದ್ಧಿ, ಕಾಲಗಳನ್ನು ಕಳೆಯುವವರು ಇತ್ತ ಗಮನ ನೀಡಿದರೆ ಸಮಾಜದ ಹಿಂದುಳಿದ ಮುಂದುವರಿದವರ ಅಂತರ ಕಡಿಮೆಯಾಗಿ ಆಯಾಯಾ ದೇಶಗಳ ನವನಿರ್ಮಾಣಕ್ಕೂ ಒತ್ತಾಸೆಯಾಗುತ್ತದೆ. ಶಿಕ್ಷಿತ-ಅಶಿಕ್ಷಿತರ ನಡುವೆ ಅಂತರ ಕಡಿಮೆಯಾಗುತ್ತಾ ಬರುತ್ತದೆ. ಸಂತಸಾಹಿತ್ಯ ಎಲ್ಲಾ ಸೇವಾಕ್ಷೇತ್ರಗಳ ಎಲ್ಲರಿಗೂ ಅವರವರ ಆಯಾಯಾ ಸೇವೆಗಳಿಗೆ ಅಂತರಿಕವಾದ ಬಲವನ್ನು ನೀಡುತ್ತದೆ. ಬೌದ್ಧಿಕವೊಂದಕ್ಕೇ ಒತ್ತುಕೊಡುವುದೂ, ತಪ್ಪಿ ಜೀವನ ಸಮರಸವಾಗುತ್ತದೆ. ಈ ನೆಲೆಯಿಲ್ಲದ 'ಸಂವಿಧಾನ' ಮತ್ತೆ ಮತ್ತೆ ಅಪಕ್ವಾಧಿಕಾರಿಗಳಿಂದ ತಿದ್ದುಪಡಿ ಹೊಂದುತ್ತಲೇ ಇರುತ್ತವೆ. ಎಲ್ಲ ಕ್ಷೇತ್ರದಲ್ಲೂ, ಸ್ಥಿರ, ಮೌಲ್ಯಗಳು ಕುಸಿದು, ರಾಷ್ಟ್ರ-ವಿಶ್ವ ಮಹಾಪಾಯಗಳನ್ನು ಎದುರಿಸಲೂ ಶಕ್ತಿ ಹೀನವಾಗುತ್ತವೆ! ಸಂತರಿಗೂ ಯಾವೊಂದನ್ನೂ ಬಿಡದ ಎಲ್ಲವೂ

ಆ ಪೂರ್ಣೇಶ್ವರನಂತೆಯೇ ನಿತ್ಯ ಮಂಗಳಗಳೇ! ಸರ್ವತ್ರ, ಸರ್ವದಾ, ಸರ್ವಥಾ, ಸಮದರ್ಶಿಗಳಾದ ಇವರು ಪರಮ ಸಾಮ್ಯ-ಯೋಗಿಗಳು.

ಲೌಕಿಕ ಬಾಲಾಲಯಗಳನ್ನು ಬಿಟ್ಟು, ಜೀರ್ಣೋದ್ಧಾರಕಾರ್ಯಗಳಾದ ಮೇಲೆ ಆಗುವಂತಹ ಭಗವತ್ ಸಾನ್ನಿಧ್ಯ ಅಳ್ವಾರರಿಗೆ ಸಾಲದು. ಹಿಂದಿನವುಗಳಲ್ಲೂ ಪೂರ್ಣ, ತಮ್ಮ ಮನಸ್ಸಿನಲ್ಲೂ ಪೂರ್ಣ, ಕ್ಷೇತ್ರ ಮೂರ್ತಿಗಳಲ್ಲೂ ಪರಿಪೂರ್ಣ **'ತತ್ತ್ವಂ ಅಸಿ' 'ಸರ್ವಂಖಲು ಇದಂ ಬ್ರಹ್ಮ, ಸೋಹಂ"** ಜ್ಞಾನಪ್ರತ್ಯಯ ಮಾತ್ರವಲ್ಲ. ಮುಗ್ಧ ವಿದಗ್ಧ, ಬಾಲ ಯುವ ವೃದ್ಧ ಸ್ತ್ರೀಪುರುಷ, ಗೋವು, ನಾಯಿಗಳಿಗೂ ಒಂದು ಅವರ್ಣನೀಯ ಅಪೂರ್ವ ಆನಂದ ಸಂವೇದನೆ ತ್ರಿಕರಣಗಳಿಗೂ ಇಡೀ ಸಮಾಜಕ್ಕೂ ಅಪ್ಯಾಯನವಾಗುವಂತಹ, ಪರಿಣಾಮಕಾರಿ, ಮಾಧ್ಯಮ! ಯಾತ್ರಾಸ್ಥಳಗಳೂ ಬಾಲಾಲಯವಷ್ಟೇ ಅಲ್ಲ 'ಯತ್ಕಿಂಚಿತ್' ಅನ್ನೂ ಒಳಗೊಂಡೇ ಎಲ್ಲರೆಡೆಗೆ ಬಾ ದೇವಾ! ಈ ಅದ್ಭುತ ದೇವೈಕಕೃಪಾದತ್ತವಾದ ಸಹಜ ಸಾಮ್ಯಯೋಗವನ್ನು ಸಮರಸಗೊಳಿಸಿದ್ದಾರೆ. **"ಇಯಲ್ ಕೈ ಯಾಹ ತಿರುವಾಕ್ಕಾಲೇ ಪೆರುಹಿನ ಪಾಶುರಂಗಳ್"** (ಇಯಲ್-ಪಾ) ಈ ಭಾಗ ಈಗೀಗ ಸ್ವಲ್ಪ ಗೊತ್ತಾಗುತ್ತದೆ. ವೇದಾನ್ತ, ವಿಜ್ಞಾನ, ಆಗಮ, ಯೋಗ, ಸಮಾಜ, ಇವೆಲ್ಲವೂ ಆಳ್ವಾರ್ ಶರಣರಲ್ಲಿ, ಹಾಲಿಗೆ ಸಕ್ಕರೆ ಬೆರೆಸಿರುವುದಕ್ಕಿಂತಲೂ **"ತೇನುಂ ಪಾಲುಂ ಕನ್ನಲುಂ ಅಮುದಮ್". "ಜಗತ್ತಿನ ಮಾಧುರ್ಯಗಳೆಲ್ಲದರ ಒಕ್ಕೂಟವಾಗಿ ಎಲ್ಲಕ್ಕೂ ಹೊಂದಿಕೊಳ್ಳುವ ಪ್ರೇಮಳ ಸ್ವಭಾವ ಶರಣ ಸಾಹಿತ್ಯಗಳಿಂದ ಸಿಗುವ ಅಹೋಭಾಗ್ಯ!"**

ತಮಿಳ್ ತಿರಳ್ ೨ - ೭೦

ತಮರುಳ್ಳಮ್ ತಞ್ಜೈ ತಲೈಯರಙ್ಗಮ್ ತಣ್‌ಕಾಲ್ ತಮರುಳ್ಳುಮ್ ತಣ್‌ಪೊರುಪ್ಪು ವೇಲ್ಮೈ - ತಮರುಳ್ಳುಮ್|
ಮಾ ಮಲ್ಲೈ ಕೋವಲ್ ಮದಿಳ್ ಕುಡನ್ದೈ ಯೆನ್‌ಬರೇ ಏವಲ್ಲ ವೆನ್ದೈ ಕ್ಕಿಡಮ್||

ಕನ್ನಡ ನೆರಳ್

- ಬಕುತರ್ ಮನ, ತಂಜಾಕ್ಷೇತ್ರಂ, ತಲೆ ರಂಗಂ, ತಣ್‌ಕಾಲ್ ಬಕುತರ್ ನೆನೆವಾ ತಣ್‌ಮಲ್ಲೈ ಕ್ಕಡಲ್ ಭಾವುಕರ್ ಭಾವಿಪ |
ಮಾಮಲ್ಲೈ ಕೋವಲ್ ಕೋಟೆಯ ಕುಡನ್ದೈಯು ಎಂಬರ್ - ಸ್ವಾಮಿಗೆ ಸರ್ವರ ಜಯ ಕಿಂಬಾಗುವಗೆಡೆಯು ||

ಭಗವಂತನ ಸದ್‌ಭಾವ ಯಾರಲ್ಲಿ ಏರ್ಪಡುತ್ತದೆಯೋ ಅಂತಹವರಿಗೆಲ್ಲಾ ಆತ ಎಲ್ಲೆಲ್ಲಿ ವಿಶೇಷ ಸಾನ್ನಿಧ್ಯ ಗೈದಿರುವನೋ ಅಲ್ಲಲ್ಲಿ, ತಮರ್ ಉಳ್ಳಮ್ = ಮೊಟ್ಟಮೊದಲಿಗೇ ದೇವರ ಪ್ರೀತಿ ಸ್ಥಾನ, ಸರಳ ಚಿತ್ತರಾದ ಸ್ನಿಗ್ಧರ ಮನೋಮಂದಿರ, ಅವರವರ ಮನಃಸ್ಥಳದಲ್ಲಿರುವವನೇ ಬಾಹ್ಯರೂಪಾಂತು ಕಾಣಿಸಿಕೊಳ್ಳುವವನು **"ಮನವಿದ್ದರೆ ಮಹದೇವ"**.

ಆಮೇಲೆ, ತಞ್ಜೈ = ತಂಜಾವೂರಿನ 'ಮಾಮಣಿಕ್ಕೋಯಿಲ್' ವಣ್ಣಾತ್ತಂಗರೈಯಲ್ಲಿರುದು. ತಲೈ = ಅರ್ಚಾವತಾರ ಧಾಮಗಳಿಗೆಲ್ಲಾ ಶಿರಃ ಪ್ರಾಯವಾದ, ಅರಙ್ಗಮ್ = ತಿರುವರಂಗಮ್. ತಣ್‌ಕಾಲ್ ತಮರ್ ಉಳ್ಳುಮ್ = ಪ್ರೀತಿ ಉಳ್ಳವರು ಭಾವಿಸಬಹುದಾದ, ಭಕ್ತಚಿತ್ತರಂಜಕವಾದ, ತಣ್ = ತಂಪಾದ, ಪೊರುಪ್ಪು = ಶ್ರೀಶೈಲವೆಂಬ ತಿರುಮಲ, ವೇಲ್ಮೈ = ಬ್ರಹ್ಮಾಂಡದ ಕೊನೆಯ ಪ್ರದೇಶಕ್ಕೆ ಬೆಳ್ಳಿಜರಿಯಂಚಿನಂತಿರುವ ಕ್ಷೀರವಾರಿಧಿ! ತಮರ್ ಉಳ್ಳುಮ್ = ಭಾವನಾಬಲವುಳ್ಳ ಯಾರೇ ಆಗಲಿ ಭಾವಿಸುವ, ಮಾಮಲ್ಲೈ = ತಿರುಕ್ಕಡಲ್‌ಮಲ್ಲೈ, ಎಂಬ ಮಹಾಬಲಿ ಪುರ, ಕೋವಲ್ = ತಿರುಕ್ಕೋವಲೂರ್, ಮದಿಳ್ = ಕೋಟೆ ತೊತ್ತಲುಗಳಿರುವ, ಕುಡನ್ದೈ = ಕುಂಭಘೋಣ. ಇವುಗಳೆಲ್ಲಾ, ಏವಲ್ಲ = ಶತ್ರು ಸಂಹಾರದಲ್ಲಿ ಸಮರ್ಥನಾದ, ಎನ್ನೈಕ್ಕು = ನಮ್ಮೆಲ್ಲರ ತಂದೆಗಿಂತಲೂ ಹೆಚ್ಚಾದ ನಿನಗೆ, ಇಡಮ್ = ಇಮವೆಡೆಗಳು ಎಂದು, ಎನ್‌ಬರ್ = ಪರಮ ವೈದಿಕರು, ವೇದದ ಒಳ ತಾತ್ಪರ್ಯದ ಗುಟ್ಟನ್ನು ಸಂವೇದನಾಪೂರ್ವಕ ಅನುಸಂಧಿಸಿ ಹೇಳುವರು! ಅವೈದಿಕ, ವೈದಿಕ, ಪರವೈದಿಕ, ಪರತರ ವೈದಿಕ, ಪರಮವೈದಿಕ. ಇಲ್ಲೆಲ್ಲಾ ವೇದವೆಂದರೆ,

"ಎವ್ವುಲ ಹತ್ತು ಎವ್ವೆವೆಯುಂ ಓದುವಾರ್ ಓತ್ತೆಲ್ಲಾಮ್" - ನಮ್ಮಾಳ್ವಾರ್.

ರಾಷ್ಟ್ರೀಯತೆಯ ಎಲ್ಲೆ ಕಟ್ಟನ್ನೂ ಮೀರಿ, ಯಾವುದೇ ಬಗೆಗಳಲ್ಲಿರಲಿ, **"ಸದ್ ವಿದ್ಯಾ, ಸತ್ಯವಿದ್ಯಾ, ಪಾವನ ಪ್ರೇಮ ವಿದ್ಯಾ, ಕಾಯಕ ಕೈಂಕರ್ಯ ವಿದ್ಯಾ, ಕರುಣಾ ವಿದ್ಯಾ, ನಿಷ್ಕಾಮ ಸೇವಾ ವಿಜ್ಞಾನ ವಿದ್ಯಾ, ಶುಚಿರ್ ಭೂತವಾದ ಸಮಾಜವಿದ್ಯಾ, ಚಿತ್ತಲ ಹರಿಯನ್ನು ನಿರಪಾಯಾನಂದ ಸ್ಥಾನಕ್ಕೇರಿಸುವ ಸಕಲ ಕಲಾ ವಿದ್ಯಾ, ಸ್ವಾಸ್ಥ್ಯವಿದ್ಯಾ, ಸರ್ವರ ಅವಿರೋಧಿಲೇಸಿನ ಚಿಂತನಾ, ವಾಕ್ ಕಾಯಕವಿದ್ಯಾ ಸಮಸ್ತ ಮಂಗಳ ವಿದ್ಯೆಗಳೂ".** 'ವೇದ' ಎಂಬ ವಿಶಾಲವಾದ ಅರ್ಥ. ಅವರವರ ಐಚ್ಛಿಕ ಶುಭ ವಿದ್ಯೆಗಳನ್ನೂ ಒಳಗೊಂಡೇ, ಸಾಮಾನ್ಯಕ್ಕೆ ಕಂಟಕವಿಲ್ಲದ, ವಿಶೇಷ ವಿದ್ಯಾ ಪ್ರೋತ್ಸಾಹಕವಾದ, ಅಖಿಲ, ಅನ್ಯೂನವಾಗಿರುವ,

ವಿಶೇಷ ವಿದ್ಯಾ ಪ್ರೋತ್ಸಾಹಕ ಜೀವನ ವಿದ್ಯೆ. ಇವುಗಳನ್ನು ೫ ವಿಧಗಳಲ್ಲಿ ಮೆಲೆ ತಿಳಿಸಲಾಗಿದೆ. ಅದರಲ್ಲಿ ಪಂಚಮರೇ, ಪರಮವೈದಿಕರು ಎನ್ನುವುದು.

'ಏವಲ್ಲ' ಎಂಬುದರಿಂದ ಮಹಾವೀರನೆಂದೇ. ಸರ್ವ ಪ್ರಸಿದ್ಧನಾದ ಶ್ರೀರಾಮ, ಎಲ್ಲರನ್ನೂ ಸಂತೋಷ ಪಡಿಸುವವನು. ಎಲ್ಲರನ್ನೂ ಎಲ್ಲವನ್ನೂ ಕಂಡು ತಾನೂ ಸಂತೋಷ ಪಡುವವನು, ಎಂಬರ್ಥವನ್ನು ಜಗತ್ತಿನ ಸರ್ವರೂ ಅರಿಯಬೇಕು. **"ರಮಯತಿ ಇತಿರಾಮಃ, ರಮತೇ ಸರ್ವತ್ರ ಇತಿರಾಮಃ"**. ಇದೇ ರೀತಿಯಲ್ಲಿ ಆಲ್‌ಮೈಟಿ = ಸರ್ವಮಂಗಳ. ಅಲ್ಲಾಹ್ = ಸರ್ವಸದ್‌ಗುಣನಿಧಿ, ಅರ್ಹಂತ = ಸರ್ವರ ಪೂಜೆಗೂ ಅರ್ಹನಾದವನು, ಬುದ್ಧ ತಿಳಿಯಾದ ಸ್ವಚ್ಛಬುದ್ಧಿಗೇ ಗೋಚರವಾಗುವವನು. 'ಯಾವುದೇ ಧರ್ಮದ ಯಾವುದೇ ಪವಿತ್ರ ಶಬ್ದರಾಶಿಗಳೆಲ್ಲಾ ವೇದ'ವೆಂಬಂತೆ, ಒಬ್ಬನದೇ ಆದ ಕಲ್ಯಾಣತಮನ, ಅನನ್ಯನಾಮಗಳೂ ಅನನ್ತ ರೂಪುಗಳೂ ಸೇರಿ ಸರ್ವಮಾನ್ಯ. 'ಶಾದುವಾಯ್ ನಿನ್‌ಪುಹಳಿನ್ ತಹ್ಮೆಯಲ್ಲಾಲ್ ಪಿರಿದಿಲ್ಲೈ'.

ಮಾಮಲ್ಲೈ = ಓರ್ವಭಕ್ತನಿಗಾಗಿ ನೆಲದ ಮೇಲೆಯೇ ಮಲಗಿರುವ 'ಭೂಶಯನ' ಸ್ವಾಮಿ ಮಹಾಬಲಿಪುರದ ಅಧಿದೈವ. ತಿರುಮಲೆಯ ತಂಪು ಎಲ್ಲ ಕ್ಷೇತ್ರಗಳಿಗೂ ವಿವಕ್ಷಿತ. ಶರೀರ, ಆತ್ಮ ಸರ್ವೇಶ್ವರ, ಮಹಾಲಕ್ಷ್ಮಿಯೆಂಬ ಪಿರಾಟ್ಟಿ. ನಿತ್ಯಸೂರಿ ಆಳ್ವಾರ್ ಶರಣ, ಆಚಾರ್ಯ, ಜಗತ್ತಿನ ಸರ್ವಭೂತ ಎಲ್ಲಕ್ಕೂ ತಂಪು!

ತಮಿಳ್ ತಿರಳ್ ೨ - ೭೨

ಪೋದರಿನ್ದು ವಾನರಜ್ಗಳ್ ಪೂಮ್ ಶುನೈ ಪುಕ್ಕು, ಆಜ್ಗಲರ್‌ನ್ದ ಪೋದರಿನ್ದು ಕೊಂಡೇತ್ತುಮ್ ಪೋದು - ಉಳ್ಳಮ್ ಪೋದು|
ಮಣಿವೇಜ್ಗಡವನ್ ಮಲರಡಿಕ್ಕೇ ಶೆಲ್ಲ ಅಣಿ ವೇಜ್ಗಡವನ್ ಪೇರ್ ಆಯ್‌ನ್ದು||

ಕನ್ನಡ ನೆರಳ್

ಹೊತ್ತರಿತೇ ಮಂಗಗಳ್ ಹೂದೊಣೆ ಹೊಕ್ಕು, ಅಲ್ಲರಳ್ ಪುಷ್ಪಗಳ್ ಕಿತ್ತೆತ್ತುತ ಸಕಾಲನುತಿಸಿವೆ! ಹೊರಡೆಲೆ - ಮನವೇ! |
ನೀನೂ ಲೋಕಕೆ ಮಣಿಯಂತಿಹ ತಿರುಪತಿ ತಿಮ್ಮನ ಪೂವಡಿಗೇ ಸಲ್ಲುವೊಲ್ ಅಣಿಗೈ, ವೇಂಕಟಪತಿನಾಮವನಾಯ್ದು! ||

ತಿರುಮಲೆಯ ತಿರ್ಯಕ್ ಪ್ರಾಣಿಗಳೂ ತಿರುಮಲೇಶನನ್ನು ಆಶ್ರಯಿಸಿ ಪೂಜಿಸುವ ಆಶ್ಚರ್ಯವನ್ನು ಈ ಪಾಶುರದಿಂದ ವ್ಯಕ್ತಪಡಿಸುತ್ತಾರೆ ಭೂತಮುನಿ! ಕೋತಿಗಳಿಗೂ ಬ್ರಾಹ್ಮಮುಹೂರ್ತ ಅರಿವಾಗುತ್ತದೆಯಲ್ಲಾ! ಪೋದು = ಏಳುವ ಸಾತ್ವಿಕ ಸಮಯವನ್ನು ನರರಲ್ಲೂ ಅನೇಕರು ಅರಿಯದಿರುವಾಗ, ಅರಿತೂ ಸೋಮಾರಿಗಳಾಗಿರುವಾಗ ವಾನರರು ಈ ಕ್ಷೇತ್ರ ಸಂಬಂಧದಿಂದ ಜ್ಞಾನಿಗಳಾಗಿ, ಅದರಂತೆಯೇ ನಡೆಯುತ್ತಿರುವುವಲ್ಲಾ! ಆಯುರ್‌ವೇದದಲ್ಲಿ, ಮಾನವ, ರಾತ್ರಿ ಮೊದಲ ಜಾವ ಸಂಜೆ ೬ರ ಮೇಲೆ ಇರುಳ ೯ರ ಒಳಗೆ ಮಲಗುವುದೂ, ಮಾರನೇ ದಿನ ಸೂರ್ಯೋದಯಕ್ಕೆ ಮೊದಲು ಪಂಚೋಷಃ ಕಾಲದಲ್ಲಾದರೂ ಏಳುವುದಾದರೆ ಆರೋಗ್ಯಕ್ಕೆ ಒಳಿತು ಎಂಬ ವಿಚಾರ ಬಂದಿದೆ. ೫ ವಿಘುಳಿಗೆ ಅಂದರೆ ಬೆಳಗ್ಗೆ ೬ ಕ್ಕೆ ೨ ಗಂಟೆ ಮುಂಚಿತ, ಬೆಳಗಿನ ಝಾವ ಳಕ್ಕೆ ಏಳುವುದೇ ಚೆನ್ನು.

ಇಚ್ಛೆಪಟ್ಟು ಸೋತವರೇ ನಿಜವಾದ ಅರ್ಥದಲ್ಲಿ ಸ್ವತಂತ್ರರಾಗಿ ಗೆಲ್ಲುವರು! 'ಸರ್ವಸ್ಯಜಿತ್ಯೈ' - ವಿಷ್ಣುಸೂಕ್ತ. ಮೊದಲು ತನಗಿಂತ ಬೇರೆಯಾದ ಎಲ್ಲರಿಗೂ ಜಯ ದೊರಕಿಸಿಕೊಟ್ಟು, ತಾನೇ ಸೋತು! ಬಳಿಕ 'ಸರ್ವಂ ಜಯತಿ', 'ಅಮಾನೀ ಮಾನದಃ' 'ಮಾನ್ಯಃ' - (ವಿಷ್ಣು ಸಹಸ್ರನಾಮ). ನಿರಪೇಕ್ಷಗುಣ ಪ್ರದರ್ಶಕ ಶರಣರು ಆಹಾ! ಎಂತಹ ಗುಣಗ್ರಾಹಿಗಳು! ಇತರ ಏರುಪೇರಿಗೆ ನಾವೂ ಅವರಂತೆಯೇ 'ಸಾಪೇಕ್ಷರಾಗ' ಬಾರದು. ಈ ವಿವರಣೆಗೆ ಋಗ್ವೆದವೇ ಮೂಲ 'ಪತನ್ತಿ ವಸ್ಯ ಇಷ್ಟಯೇ' ಹಕ್ಕಿಗಳೂ ತಮ್ಮ ಗೂಡಿಗೇ ಮರಳಿ ಬಂದು ಬಿದ್ದುಕೊಳ್ಳುವೆ! ನೀವೂ ಕತ್ತಲನ್ನೇ ಕಣ್ಣಿನಿಂದ ನೋಡಿದರೆ ಕಣ್ಣೂಗಟ್ಟಿಯಾಗುವುದು. 'ಶೀಘ್ರ ನಿದ್ರಾಳುಗಳಾಗಿ' ಎಂದು ಋಷ್ಯಾssಶ್ರಮಗಳಲ್ಲೂ ಮನೆಮನೆಗಳಲ್ಲೂ ನೀಡುತ್ತಿದ್ದ 'ಸಾತ್ವಿಕ ಎಚ್ಚರಿಕೆ!' Erly to bed. Early to Raise. Makesman Healthy and Welthy.

ಅರಿನ್ದು ವಾನರಜ್ಗಳ್ = ಬಾಲವಿರುವ ನರರೋ! ಎಂದು ಹೇಳಬಹುದಾದ ವಾನರಗಳು! ಎಲ್ಲೋ ಆಂಜನೆಯನಂತಹ ಒಂದು ಕಪಿಯಲ್ಲ. ಇಡೀ ತಿರುಪತಿಯ ಮಂಗಗಳ ಹಿಂಡೇ! ಪೂಮ್ ಶುನೈ = ಅರಳಿರುವ ಹೂಗಳುಳ್ಳ ತೀರ್ಥದ ದೊಣೆಗಳ, ಪುಕ್ಕು = ಒಳಹೊಕ್ಕು, ಅಜ್ಗು = ಅಲ್ಲಿ, ಅಲರ್‌ನ್ದ = ಕಾಯಿ ಮೊಗ್ಗುಗಳನ್ನು ಕೀಳದೆ ಹದವಾದ ದೋರುಮೊಗ್ಗು ಹಾಗೂ ಅಲರಿರುವ, ಪೋದು = ಪುಷ್ಪಗಳನ್ನೇ, ಅರಿನ್ದುಕೊಣ್ದು = ಜಾಣತನದಿಂದ ಆಯ್ದು ಕುಯ್ದು, ಎರಡೂ ಕೈಗಳನ್ನು ಮೇಲೆತ್ತಿಕೊಂಡೇ,

ಅಂದರೆ ನರರಂತೆ ಊರ್ಧ್ವಗಾಮಿಗಳಾಗಿ ನಡೆದೇ, ಏತ್ತುಮ್ = ಅರ್ಚನಾ ನಾಮಾವಳಿಯನ್ನು ಸ್ತುತಿಸುವಂತೆಯೋ ಎಂಬಂತೆ ಸನ್ನಿವೇಶ ಇದೆಯಲ್ಲಾ! ಉಳ್ಳಮ್ = ಓ ಮನಸ್ಸೇ! ನೀನೂ, ಪೋದು = ತಿಮ್ಮಪ್ಪನ ಸನ್ನಿಧಿಗೆ ನಡೆ! ಅಥವಾ, ಮಣಿ = ಲೋಕಾssಭರಣವಾದ. ವೇಙ್ಗಡವನ್ = ತಿರುಪತಿಯ ತಿಮ್ಮಪ್ಪನ, ಪೇರ್ = ನಾಮಗಳಲ್ಲಿ, ಆಯ್ನ್ದು = ನಿನಗಿಷ್ಟವಾದ ಯಾವುದಾದರೊಂದು ನಾಮವನ್ನಾದರೂ ಅರಿಸಿಕೊಂಡು ಹೇಳುತ್ತಾ, ಮಲರ್ ಅಡಿಕ್ಕೇ = ನಮ್ಮ ಹೂವುಗಳಿಗಿಂತ ಇಹಪರ ಉಭಯ ವಿಭೂತಿಯಲ್ಲೂ ಜ್ಞಾನ ವಿಕಾಸಮಾಡುವ, ತಿರು ವೇಂಕಟನ, ಅಡಿಕ್ಕೇ = ಪಾದಗಳಿಗೇ ಅರ್ಪಿಸಿಕೋ! ಮನಸಾರ ಪ್ರಪತ್ತಿಮಾಡು!

ತಮಿಳ್ ತಿರಳ್ ೨ - ೭೫

పెరుహు మదవేళమ్ మాప్పిడిక్కు మున్నిన్ను ఇరుకణ్ ఇళమూజ్గిల్ వాజ్గే - అరుహిరున్ప|
తేన్ కలన్ను నీట్టుమ్ తిరువేఙ్గడమ్ కణ్డీర్ వాన్ కలన్ద వణ్ణన్వరైయ్||

ಕನ್ನಡ ನೆರಳ್

ಏರಿಹ ಮದದಾನೆಯ ಸಲಗ, ತನ್‌ಪೆಣ್ ಆನೆಗೆ ಮುನ್‌ನಿಂತು ಈರ್‌ಗಿಣ್ ಎಳೆಮೆದು ಬಿದಿರ್ ಆರಿಸಿ - ಸನಿಯದಿಹ|
ಜೇನನೂ ಕಲೆಸೀಯುತಲಿಹ ಸಿರಿವೇಂಕಟ ಕಂಡೀರೇ! ಬಾನನು ಹೋಲುವ ಮೇಘಶ್ಯಾಮಳ ಮೂರ್ತಿಯ ಗಿರಿಯ್ಯೆ||

ಎರಡನೇ ತಿರುವಂದಾದಿಯ ೭ಳನೇ ಇಯಲ್‌ಪಾವಿನಲ್ಲಿ 'ಪೆರುಮ್ ತಮಿಳನ್ ನಲ್ಲೇನ್ ಪೆರಿದು' ಸರ್ವಭಾಷಾ ವಿಲಕ್ಷಣಗಳಾದ ಪಂಚದ್ರಾವಿಡ ಭಾಷೆಗಳ, ಪರಿಪೂರ್ಣ ಕಾವ್ಯಲಕ್ಷಣಗಳಿಗೆಲ್ಲಾ ಪೂರ್ಣ ಉದಾಹರಣೆಯಾಗುವಂತಹ ತಮಿಳ್ 'ಪಾ' ಮಾಲೆಯನ್ನು, ತಪಃ ಶಬ್ದ ವಾಚ್ಯನೂ ನಮ್ಮೆಲ್ಲರ ಒಡೆಯನೂ ಆದವನ ಅಹೇತುಕೀ ಕೃಪೆಯಿಂದಲೇ ಹೇಳಿದೆ. ತಮಿಳ್ ಸತ್ ಸಾಹಿತ್ಯದಲ್ಲಿ ಈ ದಾಸನೇ ಹಿರಿಮೆ ಹಾಗೂ ನಲ್ಮೆಯವನು ಎಂದು ಕೊಂಡಿರಲ್ಲಾ! ಎಲ್ಲಿ ಒಂದು ಉತ್ತಮವಾದ ಹಾಡು ಹಾಡಿ ತೋರಿಸಿ? ಇದು ಜನರ ಪ್ರಶ್ನೆ. ಭಾಗವತರ ಸವಾಲನ್ನು ನಮ್ರತೆಯಿಂದ ಸ್ವೀಕರಿಸಿ, ತಿಮ್ಮಪ್ಪನ ಮೇಲೆ, ಸ್ಫೂರ್ತಿಯಿಂದ ಹಾಡಿದ ಹಾಡಿದು. ಈ ೨ನೇ ಸಿರಿಯನ್ಯಾದಿಯ ಮೊದಲಿಗೇ ಅನುಸಂಧಿಸುವ 'ತನಿಯನ್' ಆಳ್ವಾರರ ಬಗೆಗೆ ಸಲ್ಲುವ ಬಿಡಿಪದ್ಯದಲ್ಲೂ **"ನಲ್‌ಪುಹಳ್ ಶೇರ್"** "ನಲ್‌ಪೊಗಳ್ ಸೇರಿಹ ಪೂದತ್ತಾರ್!" ಎಂದೇ 'ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್' ಎಂಬ ಮಹಾತ್ಮರು ಸ್ತುತಿಸಿರುವುದಕ್ಕೆ, ಈ ಪದ್ಯವೇ ಮೂಲಾಧಾರ. ಆಳ್ವಾರ್ -ಶರಣರನ್ನು ಸ್ತುತಿಸುವುದರಲ್ಲಿ, ಅತಿಶಯೋಕ್ತಿಯೇನೂ ಇಲ್ಲ!

ಪೆರುಹುಮದಂ = ಎರಡೂ ಕಪೋಲ ಹಾಗೂ ಜನನೇಂದ್ರಿಯದಿಂದ ಮದಜಲ ಹರಿಯುತ್ತಿರುವ, ವೇಳಮ್ = ಮತ್ತಮಾತಂಗ, ಮಾಪ್ಪಿಡಿಕ್ಕು = ತನ್ನಂತೆಯೇ ದೊಡ್ಡ ಗಜಗಾತ್ರದ ಹೆಣ್ಣಾನೆಯ, ಮುನ್ ನಿನ್ನು = ಮುಂದೆ ನಿಂತು, ಇರುಕಣ್ = ಎರಡೆರಡೇ ಗಿಣ್ಣು ಬರುವಂತೆ, ಇಳಮ್ = ಹದವಾದ ಎಳೆಯ, ಮೂಜ್ಗಿಲ್ = ಬಿದಿರು ಬೊಡ್ಡೆಯ ಗೆಡ್ಡೆಯನ್ನು, ವಾಜ್ಗಿ = ಆರಿಸಿ ತೆಗೆದು, ಅರುಹು = ದೂರ ಹೋಗಬೇಕಾದ ಪ್ರಮೇಯವೇ ಇಲ್ಲದೆ ಹತ್ತಿರದಲ್ಲೇ ಸಿಗುವ, ಜೇನ್ = ಮಧುರವಾದ ಕಾಡು ಜೇನು ತುಪ್ಪವನ್ನು, ಕಲನ್ದು = ಸೇರಿಸಿ, ನೀಟ್ಟುಂ = ಚಾಟೂಕ್ತಿಗಳಿಂದ ನೀಡುತ್ತಲೇ ಇದ್ದರೂ, ಪ್ರಣಯ ಕೋಪದಿಂದ, ಹೆಣ್ಣಾನೆ ತಿನ್ನಲು ಗತ್ತಿನ ಗಿರಾಕಿ ಮಾಡುತ್ತಿರುವ ಸನ್ನಿವೇಶ! ಗಂಡಾನೆ ಸ್ವಾಸ್ಥ್ಯದಿಂದಿದ್ದಾಗ ಕೊಡುವುದಿಲ್ಲ. ಈಗ ಮದವೇರಿರುವ ಮೋಹಾವಸ್ಥೆಯಲ್ಲಿಯೂ ಪ್ರೇಯಸಿಯ ಮೇಲಿನ ಅನುಪಮ ಪ್ರೀತಿ ಇಲ್ಲಿ ವ್ಯಂಜಿತವಾಗುತ್ತದೆ! ಗಂಡ ಮರೆಯಾಗಿ ಬಿಟ್ಟಿದ್ದನೆಂಬ ಮುನಿಸಿರುವುದರಿಂದ ಕ್ಷಮೆ ಕೇಳುವಂತೆ, ತನ್ನ ಪ್ರಿಯೆಯ ಕೋಪ ತಣಿಯಲೆಂಬುದು 'ಮುನ್ ನಿನ್ನು' ಎಂಬ ಪದದಿಂದ ವ್ಯಕ್ತವಾಗುವ ಧ್ವನ್ಯರ್ಥ! ಕೀಚಕದ ಮೆದುವಾದ ಎಳೆಯ ಪಾಲನ್ನೇ ಅರಿಸುವುದಕ್ಕೆ ಬೇಕಾದ ಜಾಣತನವನ್ನು ಮದ್ದಾನೆ ಕಳೆದುಕೊಂಡಿಲ್ಲ! ಒಂದೊಂದು ಪದಗಳಿಗೂ ಎಷ್ಟೆಷ್ಟು ಅರ್ಥ ಭಾವವಿಸ್ತಾರ ಶಕ್ತಿಯಿದೆ!

ಎಲ್ಲ ಉಪಚಾರದ್ರವ್ಯಗಳನ್ನೂ ಅಣಿಅಚ್ಚುಗಟ್ಟಾಗಿ ಸಿದ್ಧಪಡಿಸಿಕೊಳ್ಳುವ ಭಗವತ್-ಭಗವತೀ ಪರಿಚಾರಕರ ಕೈಂಕರ್ಯನಿಷ್ಠೆ "ಮಧುರ ಮಧು"ವಿನಿಂದ ಸೂಚಿತವಾಗುತ್ತದೆ! ಗಂಡು ಮೇಲ್ ಬಿದ್ದು ಎಷ್ಟೆಷ್ಟೋ ಆದರ ತೋರಿದರೂ, ಭಾಮಿನಿ ಅಷ್ಟಷ್ಟು ಅನಾದರವನ್ನು ಮೇಲ್‌ಗಡೆ ತೋರುವುದು. ಒಳಗಡೆ ಇರುವ ಹೆಣ್ಣಿನ ಪ್ರೀತಿಯ ವೈಖರಿಗಳು ಇಲ್ಲೆಲ್ಲಾ ಸೂಕ್ಷ್ಮಾsನುಮೇಯಗಳು. ಸತ್ ಕಾವ್ಯದ ಬ್ರಹ್ಮಾನಂದದ "ಪರನಿರ್‌ವೃತಿ"! ಇಂತಹ ತಿಮಿರೇರಿರುವ ಮದ್ದಾನೆ ಸಲಗ, ಮುನಿಸಿನ ಹೆಣ್ಣಾನೆಯ ಪರಸ್ಪರ ಪ್ರಣಯ ಸಂದರ್ಭ ಇದನ್ನು ಸುಂದರವಾಗಿ ತೋರಿಸುವ ತಿಮ್ಮಪ್ಪನ ಬೆಟ್ಟ **'ವಾನ್ ಕಲನ್ದ ವಣ್ಣನ್'** ಸಾsಪರಾಧರಾದ

ತಮ್ಮಂತಹವರ ಮೇಲೆ, ಕುಪಿತ ನಾಗಿದ್ದರೂ ಅಲರ್‌ಮೇಲ್‌ಮಂಗಾನಾಥನಿಗೆ ವಾತ್ಸಲ್ಯವುಂಟು. 'ಅತ ಕ್ಷಮಿಣಾಂ ವರಃ |' **"ನೀವೂ ಬಂದು ನೋಡಿ ಕ್ಷೇತ್ರದ ಜಂತು ವಿಶೇಷಗಳಿಂದಲೂ ನೀವು ವೇದಾನ್ತಾರ್ಥ, ಅರ್ಚಾವತಾರಿಯು ನಾನಾ ರಹಸ್ಯಗಳನ್ನರಿಯಬಹುದು".**

ಈ ಮತ್ತ ಗಜ ಪ್ರಸಕ್ತಿಯಿಂದ, ಸರ್ವೇಶ್ವರ, ತನ್ನ ಮಹಿಷಿ ಅನಂದಿಸುವಂತೆ ಉಪಚರಿಸುವನು. ಹೆಣ್ಣಾನೆಯ ಇಂಗಿತವಂತೂ ಮದ್ದಾನೆಗೆ ಮದವೇರಿರುವ ದಾರುಣ ಸಮಯದಲ್ಲೂ ಇಷ್ಟೊಂದು ಸೌಮ್ಯವಾಗಿ ನಡೆದುಕೊಳ್ಳಬೇಕಾದರೆ ಶ್ರೀದೇವಿಯ ಒಳಭಾವವನ್ನು, ಚೇತನರು ಮಹಾಪರಾಧಿಗಳಾಗಿರುವಾಗಲೂ, ಕುಪಿತನಾಗಿದ್ದರೂ ಅರಿತುಕೊಂಡು ದೇವಿಯ ಇಂಗಿತಕ್ಕೆ ಪರಾಧೀನನಾಗಿ ವಾತ್ಸಲ್ಯದಿಂದ, ತಪ್ಪುಮಾಡಿದ್ದರೂ ನಮ್ಮನ್ನು ಅವಳ ಸಂತೋಷಕ್ಕಾಗಿ ಮನ್ನಿಸಿಬಿಡುವನು ಎಂಬ ವಿಶೇಷಾರ್ಥ ಇಲ್ಲಿ ಸೂಚಿತವಾಗುತ್ತದೆ. ಅದಿವ್ಯ ದೇಶದ ಪ್ರಾಣಿ ಮಾತ್ರಕ್ಕೆ ಈ ದೊಡ್ಡ ಗುಣ ತಿಮ್ಮಪ್ಪನ ಕಲ್ಯಾಣ ಗುಣಗಣಗಳ ಏಕದೇಶಾಂಶ. ಇವೆರಡನ್ನೂ ಅರಿತು ಮಾನವರಾಗಿ ತಪ್ಪಿತಸ್ತರಾಗುವ ನಾವು, ಶ್ರೀ-ನಿವಾಸನಲ್ಲಿ ಮಹಾ ವಿಶ್ವಾಸವನ್ನು ಹೆಚ್ಚು ಮಾಡಿಕೊಳ್ಳಬೇಕೆಂಬ ಉಪದೇಶದ, ಕಾನ್ತಾ ಕಾವ್ಯ ಸಂಮಿತೆಯೂ ಆದ ಈ ಉತ್ತಮ ತಮಿಳ್ ಪಾಶುರದಿಂದ, ಪುಂಖಾನು ಪುಂಖವಾಗಿ ಅನುರಣಿಸುತ್ತಲೇ ಇರುವ, ರಸಭಾವ ಧ್ವನಿ ಪ್ರಧಾನತೆಯೂ ಈ ಪ್ರೇಮಳರಾದ ಸಂತರಲ್ಲಿ ಎಷ್ಟು ಉನ್ನತ ಮಟ್ಟದ್ದೆಂಬುದು, ನಿಜವಾದ ಸಾಹಿತಿಗಳ ಹೃದಯಾಹ್ಲಾದಕ್ಕೆ "ಸದ್ಯಃ ಪರನಿರ್‌ವೃತಿಗೆ" ಎಷ್ಟೊಂದು ಇಂಬುಗೊಡುತ್ತದೆಯೆಂಬುದೂ ಸಹೃದಯೈಕವೇದ್ಯ!

ಪೇಯಾಳ್ವಾರ್

ಅವತಾರಿಕೆ ಮೂನ್ಱಾಂ ತಿರುವಂದಾದಿ

ಭಗವತ್ ಕಟಾಕ್ಷವಿಶೇಷದಿಂದಲೇ ಅಯೋನಿಜರಾಗಿ ಮೂವರು ತಮಿಳಿನ ಆದಿಕವಿಗಳು. ಇವರಲ್ಲಿ ಭಕ್ತಿಯ ಅತ್ಯಭಿನಿವೇಶಕ್ಕೆ ಹೆಸರಾಂತವರು, ಭಕ್ತಿಯ ''ಹುಚ್ಚೇರಿದ ಹುಚ್ಚಪ್ಪಾಳ್ವಾರ್-ಪೇಯಾಳ್ವಾರ್.'' ದ್ವಾಪರಯುಗದ ಆರ್ಯಭಂಗನೆಯ ವರ್ಷ. ಸಿದ್ಧಾರ್ಥಿ ಸಂವತ್ಸರ ತುಲಾಮಾಸನ ಶುಕ್ಲ ದಶಮೀ ಗುರುವಾರ ಶತಭಿಷಾ ನಕ್ಷತ್ರದಲ್ಲಿ 'ನಂದಕ'ವೆಂಬ ದೇವರ ಖಡ್ಗಾಂಶದಿಂದ ಶೆನ್ನೈ-ಮೈಲಾಪುರದ 'ಮಣಿಕೈರವ' ಎಂಬ ಭಾವಿಯಲ್ಲಿ, ಒಂದು ದಿವ್ಯ ರಕ್ತಸೌಗಂಧಿಕ ಪ್ರಸೂನದಿಂದ ಮೈದೋರಿದವರು. ಮಹಾಯೋಗಿಗಳಾಗಿ, ದೇಹಯಾತ್ರೆಯಲ್ಲಿ ಕೊಂಚವೂ ಗಮನವೀಯದೆ, ಪರಮಕಾರುಣಿಕನಾದ ಶ್ರೀಮನ್ನಾರಾಯಣನೋರ್ವನಲ್ಲೇ ತಮ್ಮ ಪ್ರೇಮಾಭಿನಿವೇಶವನ್ನಿಟ್ಟು ಉನ್ಮತ್ತರಂತೆ ಗ್ರಾಮ್ಯೈಕರಾತ್ರರಾಗಿ ಕಾಲ್ನಡೆಗೆಯಿಂದಲೇ ಸಂಚರಿಸುತ್ತಿದ್ದವರು. ಅಂತೆಯೇ ''ಪೇಯ್ ಆಳ್ವಾರ್'' ಎಂಬ ಹೆಸರೇ ಪ್ರಸಿದ್ಧವಾಗಿಬಿಟ್ಟಿತು! ''ಮಹದಾಹ್ವಯ'' ಎಂಬುದೂ ಇವರಿಗೆ ಸಂಸ್ಕೃತದಲ್ಲಿ ಹೆಸರುಂಟು. **''ದ್ರಾವಿಡ ಹಾಗೂ ಆರ್ಯಭಾಷೆಗಳ ಅನ್ಯೋನ್ಯಸಂಮಿಳನಕ್ಕೆ ಹೆಸರಾಂತ ಈ ಆಳ್ವಾರ್ ಉಭಯ ವೇದಾನ್ತಪ್ರವರ್ತಕರು''.**

ಮೊಟ್ಟಮೊದಲ ಪೊಯ್ ಹೈಯಾಳ್ವಾರ್ ಸರ್ವೇಶ್ವರನೋರ್ವನೇ ಉಭಯ ವಿಭೂತಿಗಳಿಗೂ ಒಡೆಯನೆಂದರು. ಯಾವೊಂದಕ್ಕೂ, ಯಾರೊಬ್ಬರಿಗೂ ಈ ಮಾನವ ಮಾಲೀಕನಲ್ಲ. ಈ ವಾಸ್ತವ ಈ ಕಾಲಕ್ಕಂತೂ ತುರ್ತಾಗಿ ವ್ಯಾವಹಾರಿಕವೂ ಆಗಬೇಕಿದೆ, ಆಗುತ್ತಿದೆ. ಸರಿಯಾದ ಶಾಂತಿಮಯ ಅಹಿಂಸಾತ್ಮಕ ಬದಲಾವಣೆಯೇ ಅಣುಬಾಂಬುಗಳ ಅವಿಷ್ಕಾರವಾದ ಮೇಲಂತೂ ಅನಿವಾರ್ಯ. ಈಗ, ದಂಡಶಕ್ತಿ ಯುದ್ಧಮಾರ್ಗಗಳಿಂದ ''ಸ್ವಾಮಿತ್ವವಿಸರ್ಜನೆ'', ಈ ವೈಜ್ಞಾನಿಕ ಸೂಕ್ಷ್ಮವೇಗದ ಯುಗಕ್ಕೆ ಸರಿಹೊಂದದು, **ಶಾಸನ ಶಕ್ತಿಗಿಂತ ಭಿನ್ನವೂ, ಹಿಂಸಾಶಕ್ತಿಗೆ ವಿರುದ್ಧವೂ ಆದ ಜನರ ಪ್ರೇಮ ಹಾಗೂ ವಿಚಾರಶಕ್ತಿಯಿಂದಲೇ ಜಗತ್ತಿನ ಸಮಸ್ಯಾ ಪರಿಹಾರವಾಗ ಬೇಕಿದೆ.** ಈಯುಗಧರ್ಮದ ಪೂರೈಕೆಗೆ ಇಂತಹ ಸಂತರ ಸಚ್ಛಕ್ತಿಯೇ ಗಾಂಧಿ ವಿನೋಬಾ ಅವರ ನಿಮಿತ್ತದಿಂದ ೧೯ನೆಯ ಶತಮಾನದ ಕೊನೆಯಿಂದಲೇನಡೆಯ ಪತ್ತಿದೆ. ಈ ಶ್ರೇಯಸ್ಸೆಲ್ಲಾ ಸಂತಾಳ್ವಾರರಿಗೇ ಸೇರುವಂಥದು. ಅವರ ಮೂಲಕ, ಯುಗಪುರುಷನ ವಾಣಿಯನ್ನು ಅರ್ಥೈಸುವ, ಗ್ರಾಮದ ಮಟ್ಟದಿಂದಲೇ, ಜಾಗತಿಕ ಪರ್ಯನ್ತ ಪ್ರತಿವ್ಯಕ್ತಿಯ ಸಂಮತಿಯ ಮೂಲಕವೇ ಆಗಬೇಕಾದ ಸರ್ವರಿಂದಲೂ ಸರ್ವರಿಗಾಗಿ, ಸರ್ವಕ್ಷೇತ್ರಗಳಲ್ಲೂ ಆಗಬೇಕಿರುವ ಮಹಾಕ್ರಿಯಾವಂತಿಕೆಗೆ, ವಿಳಂಬ ಮಾಡುತ್ತಿರುವುದರಿಂದಲೇ, ಭಯೋತ್ಪಾದಕತೆ, ಹಗಲುದರೋಡೆ, ಹಿಂಸೆಯ ಅತ್ಯತಿರೇಕದ ನಾನಾ ಬಗೆಯ ಅಟ್ಟಹಾಸ, ಮೋಸ, ವಂಚನೆ, ಅವಿಶ್ವಾಸ, ಶಿಕ್ಷಿತರಲ್ಲೆ ಹೆಚ್ಚಾಗುತ್ತಿದೆ!

ಆಳ್ವಾರ್ ಶರಣರ ಅಧ್ಯಾತ್ಮ ಮಹಾಶಕ್ತಿಯನ್ನು ಜಾತೀಯತೆಯ ಹೆಸರಿನಿಂದ ದೂರತಳ್ಳದೆ, ಮತೋನ್ಮಾದ - ಮತಾಂಧತೆಗಳನ್ನೂ, ಪಕ್ಷೋನ್ಮಾದ-ಪಕ್ಷಾಂಧತೆಗಳನ್ನೂ ತೊರೆದು, ಯಾರಿಗೂ ಇಲ್ಲದ ಸಿಂಹಪಾಲು ಅರ್ಥಿಕವಾಗಿ ತನಗೇ ಸಲ್ಲಬೇಕೆಂಬ ಅತಿಲೋಭ, ಅಧಿಕಾರದ, ವ್ಯಾಪಾರದ, ಸ್ವಾಮಿತ್ವ ''ಮನಾಪಲಿ'' ''ಪೇಟೆಂಟ್'' ''ಬಹುಮತ'' ಅಧ್ಯಾತ್ಮವಿಮುಖ ಶಿಕ್ಷಣ ಕ್ರಮ ಎಲ್ಲದರಲ್ಲೂ ಆಳ್ವಾರ್ ಶರಣರದೇ ಆದ ಗ್ರಾಮ ಕೇಂದ್ರಿತ ಸ್ವಯಂ ಪ್ರೇರಿತ ವ್ಯವಸ್ಥೆಯ ಗೋಪುರಾಕಾರದ, ಜಿಲ್ಲೆ, ರಾಜ್ಯ, ರಾಷ್ಟ್ರ, ವಿಶ್ವವ್ಯವಸ್ಥೆಗಳನ್ನು, ಯಾತ್ರಾಸ್ಥಳಗಳ ಮೌಲಿಕ ಯೋಜನೆಗಳಿಂದ ಅರಿಯಬೇಕು.

ಮೊದಲ ಶರಣರಿಂದ ಸ್ಥಾಪಿಸಲ್ಪಟ್ಟ ವಿಶ್ವದೊಡೆಯನಿಗೆ ''ನಾರಾಯಣ''ನೆಂದು ಹೆಸರಿಸಿ, ಅಖಿಲ ನರಸಮೂಹಗಳನ್ನೂ ಒಳಗೊಳಿಸಿದವರೇ ಎರಡನೆಯ 'ಪೂದತ್ತಾಳ್ವಾರ್'. ಆ ನಾರಾಯಣ ನಾಮಕ್ಕೆ, ಕೆಲವು ತಿದ್ದುಪಡಿತಂದು, ಅತನ ಸರ್ವಪ್ರಭುತ್ವಕ್ಕೆ, ''ದಂಡಶಕ್ತಿಯನ್ನು ಉಪಯೋಗಿಸಕೂಡದು'' ಸೌಶೀಲ್ಯ ಸೌಲಭ್ಯ, ವಾತ್ಸಲ್ಯಗಳನ್ನೇ ಬೆಳಸಿಕೋ! ಅವುಗಳ ಹಿರಿತನವನ್ನೇ ತೋರು, ನಿನ್ನ ಪರತ್ವಾದಿಗಳಿದ್ದರೂ, ಅದನ್ನು ಬಚ್ಚಿಡು. ಈ ಶೈಲಿಯೇ ''ತಿರು'' ಕರುಣಾಮಾತೆ, ಸ್ತ್ರೀಶಕ್ತಿ, ಶ್ರೀ ಶಕ್ತಿ.

ಕೇವಲ ನಾರಾಯಣ ನೋರ್ವನೇ ಪೊಡವಿಗೊಡಯನಲ್ಲ, ಶ್ರೀಮನ್ನಾರಾಯಣ ಎಂದವರೇ ಈ ಮೂರನೆಯ "ಉನ್ಮತ್ತ ಮುನಿ ಈ ಪೇಯಾಳ್ವಾರ್!" ಚಕ್ರಿ, ನಾರಾಯಣ, ಶ್ರೀಮನ್ನಾರಾಯಣ ಈ ಮೂರು ಹಂತಗಳಲ್ಲಿ, **"ಕಲಿಯುಗಕ್ಕೆ ತಕ್ಕ, ಮಾನವ ವಿಕಾಸಕ್ರಮವನ್ನು ಈ ಮುನಿತ್ರಯರೂ ಮಂಡಿಸಿದ್ದಾರೆ".**

"ಇವರ ಮೊದಲ ನೂರು ಹಾಡಿನ ಸಿರಿಯನ್ತ್ಯಾದಿ, ಕಾಲಚಕ್ರಪ್ರವರ್ತಕನೇ, ಧರ್ಮಚಕ್ರಕ್ಕೂ ಪ್ರವರ್ತಕ ಎಂಬುದನ್ನು ತಿಳಿಸುತ್ತದೆ, ೨ನೆಯ ನೂರು ಹಾಡಿನ ಸಿರಿಯನ್ತ್ಯಾದಿ, ಸಕಲ ಜಡ ಚೇತನಾSSಧಾರ, ಸರ್ವಚೇತನಾನ್ತರ್‌ಯಾಮಿಯೇ ಕಾಲಪುರುಷ ಎಂಬುದನ್ನು ಸ್ಪಷ್ಟಪಡಿಸುತ್ತದೆ". "ನಾರಾಯಣ ಮಂತ್ರವೇ ವ್ಯಾಪಕ". ಮೂರನೆಯ ಈ ಸಿರಿಯನ್ತ್ಯಾದಿ "ತಿರುಕ್ಕಣ್ಣೇನ್" ಮೊಟ್ಟಮೊದಲಿಗೇ, ನಾರಾಯಣನ ಒಡೆತನಕ್ಕೆ "ಶ್ರೀಶಕ್ತಿ" ಅತ್ಯಾವಶ್ಯಕ ಎಂಬುದನ್ನು ೧೦೦ ಹಾಡುಗಳಿಂದ ರಮಣೀಯವಾಗಿ ವಿವರಿಸುತ್ತದೆ. **"ಪರಭಕ್ತಿ ಜ್ಞಾನಗರ್ಭ ಮೊದಲನೆಯ ದೆಸೆ, ಪರಜ್ಞಾನ ಭಕ್ತಿಗರ್ಭ ಎರಡನೆಯ ದೆಸೆ, ಮೂರನೆಯ ಮೇಲ್ ಮಟ್ಟದ ಪೂರ್ಣಾವಸ್ಥೆಯೇ ಪರಮಭಕ್ತಿ".** ಈ ಮೂರೂ ಆಧ್ಯಾತ್ಮಿಕ ವಿಕಾಸಗಳು ಮೂವರಲ್ಲಿವೆಯಾದರೂ "ಪ್ರಾಧಾನ್ಯೇನ ವ್ಯಪದೇಶಾಃ ಭವನ್ತಿ" ಎಂಬಂತೆ, ಈ ಮೂವರ ವಿಶ್ಲೇಷಣೆಯಷ್ಟೆ. ಮೂರು ಸಿರಿಯಂತ್ಯಾದಿಗಳ ತಮಿಳ್ ತಿರುಳ್:-

೧-೧ ವೈಯ್ಯಂ ತಹಳಿಯಾ ವಾರ್‌ಕಡಲೇ ನೈಯ್ಯಾಹ; ವೈಯ್ಯ ಕದಿರೋನ್ ವಿಳಕ್ಕಾಹ;
ಶೆಯ್ಯ ಶುಡರಾಳಿಯಾನಡಿಕ್ಕೇ ಶೂಟ್ಟಿನೇನ್ ಶೊಲ್ಮಾಲೈ, ಇಡರಾಳಿ ನೀಂಗುಹವೇ ಎನ್ರ್ವು||

೨-೧ ಅನ್ಬೇ ತಹಳಿಯಾ ಆರ್ವಮೇ ನೈಯಾಹ, ಇನ್ಬುರುಹು ಶಿನ್ನ್ವು ಇಡಿದೆರಿಯ;
ನನ್ಬುರುಹಿ ಞಾನಚ್ಚುಡರ್ ವಿಳಕ್ಕೇತ್ತಿನ್ನೇ ನಾರಣಕ್ಕ್, ಞಾನತ್ತಮಿಟ್ ಪುರಿನ್ದ ನಾನ್||

೩-೧ ತಿರು ಕ್ಕಂಡೇನ್, ಪೊನ್ಮೇನಿ ಕಂಡೇನ್, ತಿಹಟುಮರುಕ್ಕನ್ ಅಣಿ ನಿರಮುಂ ಕಂಡೇನ್,
ಶೆರುಕ್ಕಿಳರುಂ ಪೊನ್ನಾಟಿ ಕಂಡೇನ್, ಪುರಿ ಶಙ್ಗಂಕೈಕ್ಕಣ್ಡೇನ್, ಎನ್ನಾಟಿವಣ್ಣನ್ ಪಾಲಿನ್ರ್ವು||

ಕನ್ನಡ ನೆರಳ್

೧-೧ ಜಗದೀವಿಗೆಯಾಗೆ ಸೂಳ್ ಗಡಲೇ ನೆಯ್ ಆಗೆ ಬೆಂಗದಿರನೆ ಬೆಳಕಾಗೆ ಕೆಂ
ಜೊಡರ್‌ಗಾಲಿಯ ನಡಿಗೇ ಸೂಡಿದೆ ನುಡಿಮಾಲೆಎಡರ್ ಆಳದ ಸುಳಿಗಡಲ್ ನೀಗಲ್ಕೆಂದೇ||

೨-೧ ಪ್ರೇಮವೆ ಹಣತೆಯು ಆಗೆ, ಪ್ರೇಮದ ನೋವೇ ನೆಯ್ ಆಗೆ
ಪ್ರೇಮದ ರಸದಿಂ ಕರಗದೆ ಇಡುತಿರಿಯಾಗೆ - ನಲ್ಲರಿವೆನು ಸೂಲ್ ಉರುಗಿ||
ಪರಜ್ಞಾನ ಮೆನುಜ್ವಲ ಸೊಡರ್ ಹಚ್ಚಿದೆ ನಾರಣರ್ಗೆ
ಪರಜ್ಞಾನದಿಂ ತಮಿಳ್ ಪಾಡುತ ನಾನ್||

೩-೧ ಸಿರಿಯಂ ಕಂಡೇ! ಹೊನ್ನೊಡಲ್ ಕಂಡೇ! ಬೆಳಗುವ| ಬರಿಯರ್ಕನ ತೆರದಂದದ
ನಿಲುವಂ ಕಂಡೇ| - ಹೋರಲ್ ಕೆರಳಿಹ| ಹೊನ್‌ಚಕ್ರವ ಕಂಡೇ! ಮುನಿಸಿನ ಶಂಖಿವ
ನಂಗೈಯ್ಯೊಳು ಕಂಡೇ| ಎನ್ನಯ ಕಡಲ್ ಬಣ್ಣನ ಬಳಿಯಿಂದು ||

ತಿರುವಂದಾದಿ ೩ ಹಾಡು ೧೪

ಮಾಲ್‌ಪಾಲ್ ಮನಂ ಶುಳಿಪ್ಪ ಮಚ್ಚೈಯರ್ ತೋಳ್ ಕೈವಿಟ್ಟು ನೂಲ್ ಪಾಲ್ ಮನಂವೈಕ್ಕ ನೊಯ್ ವಿದಾಮ್ - ನಾಲ್‌ಪಾಲ
ವೇದತ್ತಾನ್ ವೇಙ್ಗಡತ್ತಾನ್ ವಿಣ್ಣೋರ್ ಮುಡಿ ತೋಯುಮ್ ಪಾದತ್ತಾನ್ ಪಾದಂ ಪಯಿನ್ನು (ಪಣಿನ್ದು)

ಕನ್ನಡ ನೆರಳ್

ಮೋಹನನೆಡೆ ಸುಳಿಯೊಳ್ ಮನತೊಡರಲ್, ಪೆಣ್ಗಳತೋಳ್ ಕೈ ಬಿಟ್ಟು ಗ್ರಾಹಕಶಾಸ್ತ್ರದೊಳ್ ಮನವಿಡೆ ಸುಕರಂ - ನಾಲ್‌ಬಗೆ
ವೇದಾರ್ಥನ ವೇಂಕಟವಾಸಿಯ ಬಾನವರ್ ಮುಡಿ ತೋಯ್ - ಪಾದನ ಪದವಾಸರಿಸೆ -
ಹನ್ನೆರಡನೇ ಪಾಶುರದಲ್ಲಿ "ಅರಿವೆನ್ನುಮ್ ತಾಳ್ ಕೊಳುವಿ ಐಮ್ಬುಲನುಮ್ ತಮ್ಮಿಲ್"
ಅರಿವೆನು ಬೀಗವ ಬಿಗಿದು ಪಂಚೇಂದ್ರಿಯಂ ಒಳಗಡಗಿಸಿ ಸರಿಧೃತಿಯೆನು ತಾಳಿಂ ಬಾಗಿಲ ಜಡಿದು, ಸ್ವಾಧ್ಯಾಯವ |
ಚೆಂಗೈಯ್ಯುತಲರಿವವರೇ ಕಾಣುವರ್ ಅನವರತಂ ಹೊಂಗುತಲೋಡುವ ಕಡಲೊಡಲನ ಪಡಿಯಂ ||

ಸರ್ವೇಸಾಮಾನ್ಯರಾದ ಮಾನವರಿಗೆ ಇಂದ್ರಿಯಜಯ ಸುದುರ್ಲಭ, "ಹಾಗಾದರೆ ಕರಣಗಳನ್ನು ತಮ್ಮ ಹತೋಟಿಯಲ್ಲಿರಿಸಿಕೊಳ್ಳಲಾರದ ಅಶಕ್ತಿರಿಗೇನು ಗತಿ?" "ದುರ್ಬಲ್‌ಕೇ ಬಲ್ ಸಂತ್" ನೀವಲ್ಲವೋ! ಅದಕ್ಕೆ ಪೇಯಾಳ್ವಾರರ ಉತ್ತರ

ಈ ೧೪ನೆಯ ಪಾಶುರ. ಸರ್ವಕಾಮನಾತ್ಯಾಗಪೂರ್ವಕ ಆತ್ಮ-ಪರಮಾತ್ಮರ ಸಾಕ್ಷಾತ್ಕಾರದ ಶಾಸ್ತ್ರೀಯ ಕಠಿಣ ಪ್ರಕ್ರಿಯೆಗಿಂತ ಅತ್ಯಂತ ಸುಲಭವಾದ ಉಪಾಯವೆಂದರೆ, ಕೃಷ್ಣ ಹೇಳಿದಂತೆ, **''ಯುಕ್ತ ಆಸೀತ ಮತ್ಪರಃ'' ''ಮಾಲ್‌ಪಾಲ್ ಮನಂಶುಳಿಪ್ಪ''**, ಆಶ್ರಿತ ವ್ಯಾಮೋಹಿಯೂ ಇಂದ್ರಿಯಾಧಿಪತಿಯೂ ಆದ ಹೃಷೀಕೇಶನಲ್ಲಿ - ಮನಸ್ಸು ನುಸುಳಿದರೇ ಸಾಕು. ಮಜ್ಜೈಯರ್ ತೋಳ್ = ಸ್ತ್ರೀಯರ ಬಗೆಗೆ ಸ್ಪೃಹೆ ಹೆಚ್ಚಿಸುವ ಅವರ ತೋಳ್ ತೆಕ್ಕೆಯೇ ಇವನ ಕೈ ಬಿಡುವುವು. ಇಂದ್ರಿಯ ಜಯದ ಬಗೆಗೆ ಸ್ವ ಪ್ರಯತ್ನ ಸಾಲದೆ ಬಂದಾಗ ದೇವರ ಬಗೆಗೇ ವಾಲುವ ಯುಕ್ತಿಯಿಲ್ಲದೆ ನಾವಾಗಲೀ ನಮ್ಮ ಸಾಧನೆಯಾಗಲೀ ಸೂಕ್ಷ್ಮೇಂದ್ರಿಯ ನಿಗ್ರಹಕ್ಕಂತೂ ಸರ್ವಥಾ ಶಕ್ತಿಹೀನ, ಸ್ಥೂಲಜಯವೂ ಬಲುಕಷ್ಟ. ಸಾತ್ವಿಕ ಛಲದ ಧೃತಿಶಕ್ತಿಯಿಲ್ಲದಿದ್ದರೆ ಅಸಾಧ್ಯ. ಉಪವಾಸವಿರಬಹುದಾದರೂ ಹೊರಗಿನಿಂದಷ್ಟೆ. ಒಳಗೆ ಅದೂ ಇದೂ ತಿನ್ನೋಣ, ಎಂಬ ಪಾರಣೆಯ ಚಿಂತೆ ಬಂದೇ ಬಿಡುತ್ತದೆ. ಇದೇ ಶ್ರೀ ಸಾಮಾನ್ಯರರಿಗಿರುವ ತೊಂದರೆ.

ನಮಗಿಂತ, ನಮ್ಮ ಸಾಧನೆಗಿಂತ, ನಮ್ಮಲ್ಲಿ ಭಕ್ತವ್ಯಾಮೋಹಿಯಾದವನೇ ''ಪರಮ ಸಮರ್ಥ, ಅಂತಹವನೇ ನಮ್ಮೆಲ್ಲಕ್ಕೂ ಮೇಲಾದವನು. ನಾವು ಇದೋ ಅವನಿಗೇ ಶರಣು'' ಈ ಭಗವತ್ ಪರತ್ವಜ್ಞಾನ ಸ್ವಚ್ಛವಾಗಿ ಅವನಲ್ಲೇ ನಮ್ಮ ಮನಸ್ಸು ತೊಡಗಿರುವಂತೆ ಮಾಡುವುದು, ಅವನನ್ನು ಮರೆತ ಸಾಧನೆಗಳಿಗಿಂತಲೂ ಶ್ರೇಷ್ಠ. ಆಗ ಆ ಸಮರ್ಥನಿಗೂ ದುರ್ಬಲರಾದ ನಮ್ಮೆಡೆಗೆ ಬರಲು ದಾರಿ ಸುಗಮವಾಗುತ್ತದೆ. ನಾನಿತ್ತ ಅಲ್ಪಶಕ್ತಿಯನ್ನು ಈತ-ಈಕೆ ಬಳಸಿಕೊಂಡು, ಅದು ವಿಫಲವೆಂಬ ಅನುಭವ ಬಂದ ಮೇಲೆ ನನ್ನೆಡೆ ಮುಖಮಾಡಿದ್ದಾರೆ. ಇವರಿಗೆ ನಾನು ಒಡೆಯನಾದುದರಿಂದ, ಇವರ ಇಂದ್ರಿಯಜಯದ ಸುಲಭಸಿದ್ಧಿಗಾಗಿ ನನ್ನದೇ ದಾಯಿತ್ವವಿರುವುದು ಎಂದು ನಮ್ಮೆಲ್ಲರ ಭಾರವನ್ನು ಅತನೇ ವಹಿಸಿಕೊಂಡೇ ಬಿಡುವನು.

ಈ ವ್ಯಾವಹಾರಿಕ ಹಾಗೂ ಪಾರಮಾರ್ಥಿಕ ಗುಟ್ಟು ಈ ಪಾಶುರದ ಒಳ ಅಂತರಂಗ. ದೇವರ ಬಗೆಗೇ ಆಸಕ್ತಿಯನ್ನು ಹೆಚ್ಚು ಬೆಳೆಸಿಕೊಂಡರೆ, ಆ ಗೀಳಿನಿಂದ, ತಮ್ಮದೇ ಎಂಬ ಹಾರಾಟದ ಗರ್ವ ಅಡಗುತ್ತಾ ಬರುತ್ತದೆ. ಇಂದ್ರಿಯ ಜಯಕ್ಕಿರುವ ಪ್ರತಿಬಂಧಕಗಳು, ದೆವರಿಗೆ ಹೆದರಿ, ಅವವೇ ಹಿಂತಿರುಗಿ ಓಡಿಯೇ ಬಿಡುತ್ತವೆ. ಆಗ, ನೂಲ್‌ಪಾಲ್ = ಶಾಸ್ತ್ರಗಳ ಕಡೆಗೆ, ಮನಂ ವೈಕ್ಕ = ಮನವಿಡಲು, ನೊಯ್ವ್ ಇದಾಮ್ = ಅತ್ಯಂತ ಸುಲಭವಾಗುವುದಪ್ಪಾ! **''ಎಂತಹ ಶಾಸ್ತ್ರಕಾರರೂ ಜಾರುವ ಎಡೆಗಳನ್ನು ಗುರುತಿಸಿ, ಪರಮ ಕರುಣೆಯಿಂದ, ಆ ಜಗದ್‌ಗುರುವೂ ಈ ಶರಣರೂ ಮಾನವರಿಗೆ ದಾರಿ ತೋರುತ್ತಿದ್ದಾರೆ!''**

ಯದ್ಯಪಿ ಅತ, ನಾಲ್ ಪಾಲವೇದತ್ತಾನ್ = ಪರೋಕ್ಷ ಶೈಲಿಯ ಚತುರ್ವೇದವೇದ್ಯ. ಆದರೆ ಈ ಹೊರಗಣ್ಣಿಗೂ ಸುಲಭನಾಗುವುದು ಎಲ್ಲಿ? ಇಂದ್ರಿಯ ಜಯ ಇಲ್ಲದವರಿಗಾಗಿ ಕಾಣಿಸಿಕೊಳ್ಳಲೆಂದೇ ಈ ಗಿರಿಗೆ ಬಂದವನು ''ತಿಮ್ಮಪ್ಪ - ವೇಙ್ಕಡತ್ತಾನ್''. ದೃಶ್ಯನೆಂದ ಮೇಲೆ ಈ ಕ್ಷುದ್ರ ಶಬ್ದ ಸ್ಪರ್ಶಾದಿ ವಿಷಯಗಳಂತೆಯೋ ಆತ? ಎನ್ನಬೇಡಿ. **''ವೇಂಕಟೇಶಃ ಕ್ಷುದ್ರಃ ದೃಶ್ಯತ್ವಾತ್'' ''ಯದ್ಯದ್ ದೃಶ್ಯಂ, ವಿಷಯಾನ್ತರಂ ತತ್ ಕ್ಷುದ್ರಂ''**, ಎಂಬ ವ್ಯಾಪ್ತಿ ಜ್ಞಾನವೂ ಇದೆಯಲ್ಲಾ? ಇದು ಶಾಸ್ತ್ರೀಯ ದಾರ್ಶನಿಕರ ಪ್ರಶ್ನೆ. ವಿಣ್ಣೋರ್ ಮುಡಿ ತೋಯುಂ = ಆ ಪರಮಪದದ ನಿತ್ಯರೂ ತಮ್ಮ ತಲೆಮುಟ್ಟಿಸಿ ನಮನಗೈಯ್ಯುವ ಶ್ರೀಪಾದವುಳ್ಳವ ಈತ. **''ಕ್ಷುದ್ರತ್ವರೂಪ ಸಾಧ್ಯಾsಭಾವವತ್ತು ವೇಂಕಟೇಶ ಕರ್ಮಕ ದ್ರಷ್ಟೃತ್ವ ಸತ್ವಾತ್, ನಿತ್ಯಸೂರಿಷು, ವೇಂಕಟೇಶೇ ಕ್ಷುದ್ರತ್ವ ರೂಪಂ ಸಾಧ್ಯಂ ಬಾಧಿತಂಭವತಿ, ಭವದನುಮಾನಂ ಬಾಧೇನ ಬಾಧಿತವ್. ದೃಶ್ಯತ್ವ ಸಾಮಾನ್ಯಂ ಅಸದ್ಧೇತುರೇವಾssಸೀತ್. ಸೌಲಭ್ಯ ಸೌಶೀಲ್ಯಾದಿ ದರ್ಶನಾಕಾಂಕ್ಷಿಭಿಃ ತದ್ಗುಣಾನುಭವಾರ್ಥಮೇವ ಶ್ರೀಗಿರಿಂ ಪ್ರತ್ಯಾssಗಮನಾತ್, ವಾತ್ಸಲ್ಯಾದೀನಾಂ ವೈಕುಂಠೇ ಅಪ್ರಸಕ್ತೇಃ''.** ಮುಗ್ಧವಿದಗ್ಧ ಉಭಯರ ಕುಶಲಕ್ಕಾಗಿ ತಿರುಮಲೆವಾಸ, ''ಪಾದಂ ಪಣಿನ್ದು'', ಎಲೈ ಶ್ರೀ ಸಾಮಾನ್ಯರೇ! ನೀವೂ ಅಂತಹವನ ಚರಣಗಳಲ್ಲಿ ಪ್ರಪತ್ತಿಮಾಡಿ. ಆತ ಇಂದ್ರಿಯ ಲಂಪಟರೇ ಅಲ್ಲದ ಪರಿಶುದ್ಧ ನಿತ್ಯ ಸೂರಿಗಳಿಗೂ ಸ್ಪೃಹಣೀಯ. ಅವನ ನಾಮ ಒರಲುತ್ತಾ ಬನ್ನಿ 'ಪಯಿನ್ನು' ಎಂಬ ಪಾಠಾನ್ತರ, ಮುಂದಿನ ''ಪಣಿನ್ದುಯರ್‌ನ್ದು'' ಎಂಬ ಅನ್ವಾದಿಯ ನಿಯಮಕ್ಕೆ ಭಂಗ ತರುವುದರಿಂದ ಆ ಪಾಠ ಸರಿಯಲ್ಲವೆನಿಸುತ್ತದೆ. ಹೇಗೋ ಮೊದಲೇ ಪೂರ್ಣೇಂದ್ರಿಯ ಜಯವಿಲ್ಲದೇ ಇದ್ದರೂ ಅವನ ಕೃಪಾಫಲವಾಗಿ ಎಲ್ಲಾ ಸರಿಹೋಗುತ್ತದೆ.

ತಮಿಳ್ ತಿರಳ್ ೩ - ೨೬

ಶಿಱಿನ್ದವೆನ್ ಶಿನ್ತ್ತೈಯುಮ್ ಶಙ್ಗಣ್ ಅರವಮ್ ನಿಱೈನ್ದ ನೀರ್ ನೀಳ್ ಕಚ್ಚಿಯುಳ್ಳುಮ್ - ಉಱೈನ್ದುವುಮ್|
ವೇಙ್ಕಡಮುಮ್ ''ವೆ.ಃ.ಕಾ''ವುಮ್ ವೇಳುಕ್ಕೈಪ್ಪಾಡಿಯು ಮೇ - ತಾಙ್ಕಡವಾರ್ ತಣ್ಡಾಯಾರ್||

ಕನ್ನಡ ನೆರಳ್

ಹಿರಿದಯೆಗಿಂಬಹ ಎನ್‌ಚಿತ್ತದೊಳೇ! ಕೆಂಗಣ್ ನಾಗನೊಳೇ! ಸಿರಿ ತುಂಬಿದ ಹಿರಿ ಕಂಚಿಯೊಳೇ ನಿರುತಂ ಇಹುದಾದರೂ|
ವೇಂಕಟಮುಂ ವೆ.ಃ.ಕಾವುಮ್ ವೇಳುಕ್ಕೈ ''ಗೊಲ್ಲರ'' ''ಪಾಡಿ''ಯನೂ - ತಾನ್ ನಿಚ್ಚಳ ಬಿಡನ್ಯೆ, ತಣ್‌ತುಳಸೀ ಭವ್ಯನ್! ||*

---

* ಈ ಕೊನೆಯ ಸಾಲನ್ನು ಮೊದಲನೆಯ ಸಾಲಿನೊಡನೆ ಅನ್ವಯಿಸಿಕೊಳ್ಳಬೇಕೆಂಬ ಭಾವ.

"ಸರ್ವೇಶ್ವರ ಆಸೆಪಟ್ಟು ಎಲ್ಲರಿಗಾಗಿ ಎಲ್ಲೆಲ್ಲಿರುವನು? ಓ ಆಳ್ವಾರ್ ಶರಣರೇ! ನಿಮ್ಮ ಸ್ವಂತ ಅನುಭವ ಹೇಳಿ" ಎನ್ನುವಿರಾ? ಕೇಳಿ; ತಣ್ ತುಳಾಯಾರ್ = ತಂಪಾದ ತುಳಸೀಮಾಲಾಧಾರಿ, ಉರೈನ್ದದುವುಮ್ = ನಿತ್ಯವಾಸ ಗೈಯ್ಯುವುದೂ, ನಿರೈನ್ದ = ನಗರೇಷು ಕಾಂಚೀ ಎಂಬಂತೆ ನಾನಾ ಸಂಪದ್‌ಭರಿತವೂ, ಶೀರ್ = ಹಾಗೂ ಗುಣ ಮೌಲ್ಯವುಳ್ಳ, ನೀಳ್ = ಉದ್ದವಾದ ವೀಧಿಗಳಿಂದಲೂ ವಿಶಾಲವೂ ಆದ, ಕಚ್ಚಿಯುಳ್ಳುಂ = ಕಂಚಿಯಲ್ಲಿರಬಹುದಾದರೂ, ವೇಮ್ ಕಡಮುಂ = ಪುಣ್ಯಪಾಪ ಉಭಯ ಋಣಗಳಿಂದ ಮಾನವನಿಗೆ ಮುಕ್ತಿ ನೀಡುವ ವೇಂಕಟಾದ್ರಿಯಲ್ಲಿರಬಹುದಾದರೂ, ವೆ.ಕಾವುಮ್ = ಯಥೋಕ್ತಕಾರಿ ಸನ್ನಿಧಿಯಲ್ಲಿರಬಹುದಾದರೂ, ವೇಳುಕ್ಕೈ = ಕಂಚಿಯಲ್ಲೇ ಕಾಮಾಸಿಕಾ, ಎಂಬ ಅಳಹಿಯಶಿಂಗರ್ ಸನ್ನಿಧಿಯಲ್ಲಿಯೂ, ಪಾಡಿ = ಆಯ್‌ಪ್ಪಾಡಿ ಗೊಲ್ಲರ ಹಟ್ಟಿ, ನಂದಕೋಕುಲದಲ್ಲಿಯೂ*, ಪಾಡಿಯುಮೇ = ಇಲ್ಲಿನ ಸಮುಚ್ಚಯಾರ್ಥಕೊಡುವ "ಉಮ್" ಮತ್ತು "ಏ" ಇವೆರಡನ್ನೂ ಇಲ್ಲಿ ಗಮನಿಸಿದಾಗ ಯದ್ಯಪಿ ಇಲ್ಲೆಲ್ಲಾ ದೈವ ಸಾನ್ನಿಧ್ಯಕ್ಕೆ ಏನೂ ಕೊರೆಯಿಲ್ಲ, **"ನಿಮ್ಮ ಪ್ರಶ್ನೆಗೆ ಉತ್ತರವಾಗಿ ಎಲ್ಲೆಲ್ಲೂ ಸ್ವಾಮಿ ನಿತ್ಯವಾಸಿಯೇ ಹೌದು".** ಆದರೂ "ಉರೈನ್ದದುವುಮ್" "ತಾಮ್ ಕಡವಾರ್" ವಾಸ ಮತ್ತು ಸ್ವಾಮಿಯ ಹೊಣೆಗಾರಿಕೆ ಇವೆರಡೇ ಅಲ್ಲೆಲ್ಲಾ, ಎಂಬುದು ಸೂಚಿತವಾಗುತ್ತದೆ. ಶಿರನ್ದ = ಎಲ್ಲ ತಾಣಗಳಿಗಿಂತಲೂ ಶ್ಲಾಘ್ಯತಮವಾದ - ಅವನ ವಿಶೇಷ ಅಸಾಧಾರಣನಿರ್ಹೇತುಕ ಕೃಪಾಫಲವಾಗಿ ಪರಿವರ್ತಿತವಾಗಿರುವ, ಎನ್‌ಶಿನ್ವೈಯುಂ = ಅನನ್ಯ ಶರಣನೂ ಅನನ್ಯ ಪುರುಷಾರ್ಥನೂ ಆದವನ ಚಿತ್ತ ಹಾಗೂ, ಶೆಮ್ ಕಣ್ = ಸ್ವಾಮಿಯ ಮಂಗಳಾssಶಾಸಿಯೇ ಆದುದರಿಂದ, ಆದಿಶೇಷನನ್ನು, **"ನಿವಾಸ, ಶಯ್ಯಾssಸನ, ಪಾದುಕಾssಂಶುಕ ಉಪಧಾನ, ವರ್ಷಾತಪವಾರಣ"** ಎಂಬಂತೆ ಸರ್ವವಿಧ ಕೈಂಕರ್ಯಗಳನ್ನೂ ಒಬ್ಬನೇ ಮಾಡುವಂತಹ ಬಲೈಕಧಾಮನಾದ, ಬಲಿಷ್ಠ ವರಿಷ್ಠ ಸೇವಾನಿರತನಾದವನನ್ನು ತಾಮ್ ಕಡವಾರ್ = ತನ್ನ ಪುರುಷಾರ್ಥವೆಂದು, ಎಂದೂ ಆಶ್ರಿತ ಭವ್ಯನಾದವನು ಇವರನ್ನೂ ಅತಿಕ್ರಮಿಸನು ಎಂಬುದು ಒಂದು ಭಾವವಾದರೆ, ಮತ್ತೊಂದು ಸ್ವಾರಸ್ಯಾಂಶವೂ ಇಲ್ಲಿ ಅಡಗಿದೆ. ವಿಶಿಷ್ಟತಮವಾದ ತನ್ನ ಹೆಚ್ಚಿನ ಅಭಿಮಾನವನ್ನು, ಬಲು ತನಗೆ ನೆಚ್ಚಿನ, ದಾಸನ ಮನಸ್ಸು, ಹಾಸಿಗೆಯಾದ ನಾಗಪ್ಪ ಇಬ್ಬರಲ್ಲೇ ಇಟ್ಟಿರುವನು. ಬೇರೆಡೆಗಳಲ್ಲಿನ ಅಭಿಮಾನಕ್ಕಿಂತ, 'ಶಿರನ್ದ' ಎಂಬ ವಿಶೇಷಣ ಪದದಿಂದ, ಈ ಯೋಜನಾರಸವನ್ನೂ ನಾವಿಲ್ಲಿ ಅನುಭವಿಸಬಹುದು. ಹೀಗೆ ಅರ್ಥೈಸಿದರೆ, ಆಳ್ವಾರ್ ಶರಣರ ಮೇಲೆ, ಸರ್ವೇಶ್ವರನ, ವಿಶೇಷವಾದ ಪರಮ ನಿಷ್ಕಾರಣ ಕರುಣೆ ಎದ್ದು ಕಾಣುತ್ತದೆ. ದೇವರ, ರಕ್ಷಣಾಧರ್ಮಕ್ಕೂ ದಯೆಯೇ ಮೂಲ! ನಿತ್ಯವ್ಯಾಪ್ತಿ, ನಿತ್ಯವಾಸ, ಇರಬಹುದು. ಶರಣರ ಮೆದು ನಮ್ರ "ಚಿತ್ತ ಸ್ಥಾನ"ದಲ್ಲೇ ಅಂದರೆ ಶರಣರ ಮನವೇ ಮಂದಿರ. ಮನಸ್ಸಿನಲ್ಲೇ ಇಲ್ಲದಾಗ, ಪರಮಾತ್ಮನ ಸಾನ್ನಿಧ್ಯ ಕೇವಲ, ಊರೂರುಗಳಲ್ಲಿ ಕಾಣುತ್ತದೆಯೇ? ಆಯಾಯ ಕ್ಷೇತ್ರಗಳಲ್ಲಿ ಆಯಾಯ ಶರಣಾಗ್ರಣಿಗಳನ್ನು ನೆನೆದೇ ನಾವು ದೈವಸಾನ್ನಿಧ್ಯವನ್ನು ಕಾಣಬೇಕೆಂಬುದೇ ಇಲ್ಲಿನ ರಹಸ್ಯ.

ತಮಿಳ್ ತಿರಳ್ ೩ - ೩೦

శేర్‌న్ద తిరుమాల్ కడల్ కుడన్ఱై వేఙ్గడమ్ నేర్‌న్ద వెన్ శిన్ఱై నిరై విశుమ్బుమ్ - వాయ్‌న్ద
మరై పాడహమ్ అనన్దన్ వణ్ణాయ్ కణ్ణి ఇరైపాడియాయ వివ్వై||

ಕನ್ನಡ ನೆರಳ್

ಸೇರ್ ಸಿರಿಲೋಲಗೆ ಕಡಲ್, ಕುಡನ್ಱೈ ವೇಂಕಟಮ್ ನೇರ್ ಎನ್ ಮನಂ ಪರಂಧಾಮಂ - ತೇಜದ ಹೊಳಹಿನ|
ವೇದಂ "ಪಾಡಹಂ" ಶೇಷನ್ ಚೆಂದೊಳಸೀ ಮಾಲಾಧಾರಿಗೆ ನಾಥಗೆ ರಾssಜಧಾನಿಗಳ್ ಇವಿವು!||

ಶ್ರೀದೇವಿ ಪಕ್ಕದಲ್ಲೇ ಇರುವುದರಿಂದ ಆಕೆ ದೇವರಲ್ಲಿ ಅನುರಾಗದಿಂದಿರಬಹುದು. ನಮಗೆಲ್ಲಿ ಅತ ಹತ್ತಿರದಲ್ಲಿದ್ದಾನೆ? - ಏಕಿಲ್ಲ! ಕಡಲ್ = ಹಾಲ್‌ಗಡಲೂ, ಕುಡನ್ಱೈ = ತಿರುಕ್ಕುಡನ್ಱೈ ಎಂದು ತಮಿಳಿನಲ್ಲಿ ಪ್ರಸಿದ್ಧವಾದ, "ಕುಂಭಕೋಣ", ವೇಙ್ಗಡಮ್, ನೇರ್‌ನ್ದ ಎನ್ ಶಿನ್ಱೈ = ಕುಟಿಲವಲ್ಲದ ಸರಳವಾದ ಎನ್ ಮನ, ನಿರೈ ವಿಶುಮ್ಬುಮ್ = ಎಲ್ಲಕ್ಕೂ ಮೇಲಾದುದು, ನಿತ್ಯತ್ವ, ಶುದ್ಧಸತ್ವ, ಪರತ್ವಾದಿಗಳಿಂದ ಸಂಪೂರ್ಣವಾಗಿ ಪುಷ್ಕಳವಾದ, ಆ ಪರಮಾಕಾಶವೂ, ವಾಯ್‌ನ್ದ ಮರೈ = ಪರೋಕ್ಷ ಅಲೌಕಿಕವನ್ನೂ ಸಾಕ್ಷಾತ್ಕರಿಸುವ, ನಮಗೂ ಕಾಣುವಂತೆಸಗುವ ನಿಗೂಢ ಪ್ರಮಾಣವಾದ ವೇದವಾಙ್ಮಯಗಳೂ, ಪಾಡಹಮ್ = ತಿರುಪ್ಪಾಡಹಮ್ ದಿವ್ಯದೇಶ, ಅನನ್ದನ್ = ಅನಂತ ಸೇವಾ ನಿರತನಾದ ಆದಿಶೇಷನೆಂಬ, ಇವ್ವೈ = ಇವಿಷ್ಟೂ, ವಣ್ ತುಳಾಯ್ ಕಣ್ಣಿ = ಶೀತಳ ತುಳಸಿ ಮಾಲಾಧಾರಣೆಯಿಂದಲೇ ಪುಂಡರೀಕಾಕ್ಷನಾಗಿರುವ! ತುಳಸಿಯಿಲ್ಲದಿದ್ದರೆ ಎರೆಯನಿಗೆ ಕಿರಿಗಣ್ಣಾಗಿ ಬಿಡುವುದು. "ಸದಾತ್ವಂಕೇಶವ ಪ್ರಿಯೇ". ತಿರುಮಾಲ್ = ರಮಾರಮಣ = ತುಳಸೀಗಂಧವಿಲ್ಲದಿದ್ದರೆ, ರಮಾದೇವಿಯೂ ಈತನಲ್ಲಿ ರಮಿಸಳೋ ಎಂಬಂತೆ! ದಿವ್ಯ ಪತಿಪತ್ನಿಯರಿಗೆ ಸಮ ಸಂತೋಷ ಉಂಟಾಗಬೇಕಿದ್ದರೆ ತುಳಸಿ ಅತ್ಯಗತ್ಯ! ಶೇರ್‌ನ್ದ = ಅಂತಹ ಶ್ರಿಯಃಪತಿಗೆ, ಇರೈಪ್ಪಾಡಿ = ರಾಜಧಾನಿಗಳು ಮೇಲೆ ಉಲ್ಲೇಖಿಸಿದವೆಲ್ಲಾ,

*ಕಣ್ಣನ್‌ಪಾಡಿ ಎಂಬುದೇ "ಕನ್ನಂಬಾಡಿ" ಈಗಿನ ಕೃಷ್ಣರಾಜಸಾಗರ. ಇದೂ ಒಂದು ದಿವ್ಯದೇಶ! ಅಲ್ಲಿನ ಸುಂದರಾಂಗ ಮನಮೋಹನ ಗೋಪಾಲಕೃಷ್ಣಮೂರ್ತಿಯೇ ಇಂದಿಗೂ, ಕೆರೆ ಕೋಣ್ಗೂರಿನಲ್ಲಿರುವುದು.

ಶ್ರೀ ದೇವಿಯಲ್ಲಿ ಎಷ್ಟೊಂದು ಪ್ರೀತಿಯೋ, ಅಷ್ಟೂ ಪ್ರೀತ್ಯಾದರಗಳಿಂದಲೇ ಇಲ್ಲೆಲ್ಲಾ ಸ್ವಾಮಿ ಬಿಜಯಂ ಗೈದಿರಲು ನಿಮ್ಮ ಬಳಿಯೇ ಇದ್ದಂತಾಯಿತಲ್ಲವೇ? ವೇದವೆಂಬುದು ಆಳ್ವಾರ್-ಶರಣ-ಸಂತರಿಗೆ, ಕೇವಲ ಶಬ್ದ ಪ್ರಮಾಣವಷ್ಟೇ ಅಲ್ಲ. ದಿವ್ಯದೇಶಗಳು ಪ್ರತ್ಯಕ್ಷ ಅರ್ಚಾವತಾರ ರೂಪದಲ್ಲಿ, ಅತ್ಯಂತ ಸುಲಭನಾದವನನ್ನು ತೋರಿಸುವಂತೆಯೇ, ಋಗರ್ಚ್ಯನನ್ನು, ಯುಜುರ್‌ಯಾಜ್ಯನನ್ನು ಸಾಮಗೇಯನನ್ನು, ನಿಶ್ಚಲ ಅಥರ್ವೇವೇದ ಪ್ರತಿಪಾದ್ಯನನ್ನು **"ಮಾ ಅಸಿ ವಿಮಾ ಅಸಿ ಪ್ರಮಾ ಅಸಿ ಸಂಮಾ ಅಸಿ,"** ಅಲ್ಲೇನಿಲ್ಲದೆ **"ಪ್ರತಿಮಾ ಅಸಿ"** ಎಂಬ ವೈದಿಕ ಪ್ರಮಾಣದಿಂದಲೇ, ಅದೇ ಶ್ರುತಿಗಳೆಲ್ಲಾ ಈ ಪೇಯ್‌ಆಳ್ವಾರರಿಗೆ ಕಣ್ಣಿಗೆ ಕಟ್ಟುವಂತೆಯೇ "ವಿಚಚಕ್ಷಿರೇ" ಪ್ರತ್ಯಕ್ಷ ವೈಜ್ಞಾನಿಕವಾಗಿಯೇ ಸಂದರ್ಶನ ಮಾಡಿಸುತ್ತಿವೆ. ಮೇಲಿನ ಈಶೋಪನಿಷತ್ತಿನ "ವಿ" ಎಂಬುದರ ಭಾವವಿದೆ. ಬರಿ "ಚಚಕ್ಷಿರೇ" ಅಷ್ಟೇ ಅಲ್ಲ. ಶಬ್ದದಿಂದ ಕಾಣಿಸುವಂತಹ ಮಹರ್ಷಿ ಸದ್ ಗುರುಗಳು! "ನ ತಸ್ಯ ಪ್ರತಿಮಾ ನತಸ್ಯ ಪ್ರತಿಮಾ" ಪ್ರತಿಮಾಽಽರಾಧನೆ ನಿಷಿದ್ಧವೆಂಬಂತೆಯೂ ಸ್ಮೃತಿ ವಚನ ಕಾಣುವಂತಿದೆ, ಮನಸ್ಸಿನಲ್ಲಿ ಆ ಮೂರ್ತಿ ಇಲ್ಲದವರಿಗೆ ವೇದ ಬಲಾತ್ಕರಿಸದು. ಮೂರ್ತಿ ಪೂಜೆ ಎಲ್ಲರಿಗೂ ಅನಿವಾರ್ಯವೆಂಬ ಕಡ್ಡಾಯ ಶಿಕ್ಷಣವಿಲ್ಲ. ನತಸ್ಯ = ಮನಃಪೂರ್ವಕ ಬಗ್ಗಿದವನಿಗೆ ದಿವ್ಯದ ಪೂರ್ಣತೆಗೆ ಪ್ರತಿಮೆ ಇನ್ನೂ ಮೆರಗು ನೀಡುವುದು. ವೇದ ಧರ್ಮ ಒಂದು ಪಾಂಥಿಕ, ಜನರನ್ನು ಬೇರ್ಪಡಿಸುವ "ವ್ಯಾವರ್ತಕ" ಪಕ್ಷ ಸಂಪ್ರದಾಯವಲ್ಲ. "ಶ್ರುತಿ ಸಾಂಗ್ರಹಿಣೀ" ಎಲ್ಲರನ್ನೂ ಸೇರಿಸುವುವಳೇ ವೇದವಿದ್ಯೆ. ಶರಣರ ಮನಸ್ಸಿಗೆ ಮೊದಲು ತಾಗಿಯೇ ಸರ್ವಸಮರ್ಥ ಸೌಲಭ್ಯ ಸೌಶೀಲ್ಯ ವಾತ್ಸಲ್ಯದಿಂದ, ಅಲ್ಲಲ್ಲೇ ಕಾಣಿಸಿಕೊಳ್ಳುವನು ಪರಮಾತ್ಮ.

ತಮಿಳ್ ತಿರಳ್ ೩ - ೩೨

ಪಾರ್‌ಕ್ಕಡಲುಮ್ ವೇಙ್ಗಡಮುಮ್ ಪಾಮ್ಬುಮ್ ಪನಿ ವಿಶುಮ್ಬುಮ್‌ನೂರ್‌ಕ್ಕಡಲುಮ್ ನುಣ್ಣೂಲ ತಾಮರೈಮೇಲ್ - ಪಾಲ್ ಪಟ್ಟಿರುನ್ದಾರ್ ಮನಮುಮಿಡಮಾಹ ಕ್ಕೊಣ್ಡಾನ್ ಕುರುನ್ದೊಶಿತ್ತ ಗೋಪಾಲಹನ್||

ಕನ್ನಡ ನೆರಳ್

ಹಾಲ್ಗಡಲುಂ ವೇಂಕಟಮುಂ ಹಾವುಂ ಶೀತಳಧಾಮಮುಂ ನೂಲ್ಗೊಪ್ಪುವ ಸೂಕ್ಷ್ಮದ ಶಾಸ್ತ್ರಾಽಬ್ಧಿಯುಂ ನುಣ್ ಯೋಗದ ಎದೆತಾವರೆ ಮೇಲ್ - ಪಟ್ಟಾ ಪಿಡಿದವರ್ ಮನಮುಂ ಮನೆಯಾಗಿಸಿ ಕೊಂಡನ್ ಹಿರಳ್ ಹಿಸುಕಿದ ಗೋಪಾಲನ್ ||

ಕುರುನ್ದು = ಸಪ್ತ ಘನವೃಷಭಗಳ ಹಿರಳುಗಳನ್ನೇ, ಒಶಿತ್ತ = ಹಿನುಕಿ ಮುರಿದ, ಗೋಪಾಲಕನ್ = ಸಜಾತೀಯಳಾದ, ಮಿಥಿಲಾ ಗೊಲ್ಲರ ಕುಂಭನೆಂಬುವನ ಕನ್ಯೆ ನೀಳೆಯನ್ನು ಮದುವೆ ಮಾಡಿಕೊಳ್ಳುವ ಸಲುವಾಗಿಯೇ "ನೀಳಾ ಕುಲೇನ ಸದೃಶೀ" ಗೊಲ್ಲರ ಹಟ್ಟಿಗೇ ಸೇರಿಕೊಂಡ! ಕುಂಭ, ಯಶೋದೆಗೆ ತಮ್ಮನೂ ಆಗಬೇಕು. ಋಗ್ವೇದದಲ್ಲಿ "ನೀಳಾಸೂಕ್ತ"ವಿದೆ. ಭಾಮಾ, ರಾಧಾ, ರುಕ್ಮಿಣಿ ಬೇರೆ. ಈ ನೀಳೆಯೇ ಬೇರೆ. ಪರಾಶರ, ಕೂರೇಶ, ಅವರ ಮೇಧಾವಿ ಪುತ್ರ "ಪರಾಶರಭಟ್ಟರ್" ಇವರ ಕೃತಿಗಳಲ್ಲಿ ಹಾಗೂ **"ನೀಳಾ ಪರಿಣಯ"** ಎಂಬ ಭಟ್ಟರ ಸುಂದರ ನಾಟಕದಲ್ಲೂ ಈ ವಿಚಾರ ಸ್ಪಷ್ಟ! ತೆಂಕಣದ ಈ ಆಳ್ವಾರ್-ಶರಣರ ವಿಶೇಷ ಸಾಕ್ಷಾತ್ಕಾರದ ಕೊಡುಗೆಯಿಂದ ಇದು ಬಲು ಚೆನ್ನಾಗಿ "ನಪ್ಪಿನ್ನೈ" "ಪಿನ್ನಾದೇವಿ" ಎಂಬ ತಮಿಳ್ ಹೆಸರಿನಿಂದ ಜನಜನಿತವಾಗಿದೆ. ಕರ್ಣಾಟಕದ ತುಮಕೂರು ಜಿಲ್ಲೆಯ "ಗೊಲ್ಲರಹಳ್ಳಿ"ಯಲ್ಲಿನ ಆ ಭಕ್ತರಿಗೆ "ಕುಲದೇವತೆ" "ಪಿನ್ನಾದೇವಿ"ಯೆಂದೇ! ಗೋಕುಲ ಸೇರಿದ ಕೃಷ್ಣನ ಬಾಲ್ಯದ ಸ್ವಧರ್ಮ ಗೋಪಾಲನೆ! ಅಂತೆಯೇ ಆತ "ಗೋಪಾಲಕ" ಮುಂದೆ ಮಹಾಭಾರತ ಯುದ್ಧಾಽಽರಂಭದಲ್ಲಿ, ಉಪನಿಷತ್ತುಗಳೆಂಬ, ಗೋವುಗಳಿಂದ, ಭಗವದ್ಗೀತೆಯೆಂಬ ಕ್ಷೀರಾಮೃತವನ್ನು ಕರೆದುಕೊಟ್ಟವನೂ ಈ ಗೊಲ್ಲನೇ! "ಗೋ" ಎನ್ನುವುದಕ್ಕೆ ಅನೇಕಾರ್ಥಗಳಲ್ಲಿ, ವೇದೋಪನಿಷದ್ ವಾಙ್ಗಯವೂ ಒಂದು. **"ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲನನ್ದನಃ" "ಪಾರ್ಥೋ ವತ್ಸಃ ಸುಧೀರ್ ಭೋಕ್ತಾ ದುಗ್ಧಂ ಗೀತಾಮೃತಂಮಹತ್"** ವೈಶ್ಯಧರ್ಮ ಬರೀ ವಾಣಿಜ್ಯ ಒಂದೇ ಅಲ್ಲ. "ಕೃಷಿ ಗೋರಕ್ಷವಾಣಿಜ್ಯಂ" ಈ ತ್ರಿವೇಣೀ! ಪಾಲ್ ಕಡಲುಮ್ = ಕ್ಷೀರಾಂಬುಧಿಯನ್ನು, ವೇಙ್ಗಡಮುಮ್ = ವೇಂಕಟಾದ್ರಿಯನ್ನೂ, ಪಾಮ್ಬುಮ್ = ಅನಂತ ನಾಗಪ್ಪನನ್ನು, ಪನಿ = ತಂಪಾದ, ಅಂದರೆ ಈ ಸಂಸಾರದ ತಾಪತಟ್ಟದ, ಅಧ್ಯಾತ್ಮಿಕ ಶಾರೀರಕವಾದ ಜ್ವರಾದಿರೋಗಗಳು, ಆಧಿಭೌತಿಕ = ಭೂತ ಎಂದರೆ, ಹಾವು, ಹುಲಿ, ಆನೆ ಮುಂತಾದ ದುಷ್ಟ ಜಂತುಗಳ ಉಪದ್ರವ, ಸಿಡಿಲು, ಪ್ರವಾಹ, ಚಂಡಮಾರುತಗಳಿಂದಾಗುವ ಅನಾಹುತಗಳು, ಆಧಿದೈವಿಕ = ಗಂಡಕಾಲ ಸಂದು ಆಗುವ ಮರಣ, ನಮ್ಮ ನಿರೀಕ್ಷೇಯಲ್ಲಿಲ್ಲದ ನಾನಾ ದುರಂತಗಳು ಜ್ವಾಲಾಮುಖಿ, ಮುಂತಾದ ಉತ್‌ಪೀಡೆಗಳು, ಇತ್ಯಾದಿ ತಾಪತ್ರಯವೇ ಸುಳಿಯದ, ನಿಸ್ತಾಪ, ನಿತ್ಯಾನಂದದ ಆಹ್ಲಾದ, ದಿವ್ಯವಾದ ತಂಪು ಕಂಪುಗಿಯುವ, ವಿಶುಮ್ಬುಮ್ = ಪರಮಪದ. "ಪನಿ" ನೀಳ್‌ವಿಶುಂಬುಮ್ ಇಡಮಾಹ, ಎಡೆಗಳನ್ನಾಗಿಸಿಕೊಂಡ ಎಂದನ್ವಯಿಸಿಕೊಳ್ಳಬೇಕು. ಇಷ್ಟೇ ಅಲ್ಲದೆ ನೂಲ್ ಕಡಲುಮ್ = ಅಪಾರವಾದ ನಾನಾ ಶಾಸ್ತ್ರಗಳೆಂಬ ಆಳಗಲದ ಮಹಾಸಾಗರವನ್ನೂ, ನುಣ್ ನೂಲ್‌ತಾನುರೈಮೇಲ್ = ಸೂಕ್ಷ್ಮವೂ, ನಾರಾಯಣಾನುವಾಕ, ಹಾಗೂ ನಾನಾ ಉಪನಿಷತ್, ಇತಿಹಾಸ ಪುರಾಣ, ಯೋಗಾದಿ ಶಾಸ್ತ್ರಗಳಲ್ಲಿ ವಿವರಿಸಲ್ಪಡುವ, ಹೃದಯ ಕಮಲ "ದಹ್ರ, ದಹರ" ಹೃದಯ, ವಿಶ್ವಾಽಽಯತನ, ಸರ್ವಪ್ರತಿಷ್ಠಾನ, ಹಾರ್ದಪುರುಷ, ನೀಲಮೇಘ ಒಳಗೊಂಡ, ಮಿಂಚಿನ ಪ್ರಭಾವಳಿ ಸ್ಥ! ಹೃತ್‌ಕಮಲ, ಹೃದಯ ಪುಂಡರೀಕದ ನಟ್ಟನಡುವೆ, ತಮ್ಮ

ಚಿತ್ತವೃತ್ತಿಯನ್ನು ನೆಟ್ಟಿರುವ ಧಾರಣಾಪರರಾದ ಮಹಾಯೋಗಿಗಳ ಸಹಸ್ರಾರದಳದ ತಾವರೆಗಳ ಮೇಲೂ. ಪಾಲ್ = ಆ ಹೃದಯಾಂತರಾಳದಲ್ಲಿ, ಅ ಉಮ್ = ಓಮ್ ಎಂಬುದರ ಪ್ರಕೃತಿಯಾದ, "ಅಕ್ಷರಾಣಾಂ ಅಕಾರೋಽಸ್ಮಿ." "ಅ ಇತಿ ಭಗವತಃ ನಾರಾಯಣಸ್ಯ ಪ್ರಥಮಾऽಭಿಧಾನಮ್" ಪ್ರಣವ ಪ್ರಕೃತ್ಯರ್ಥನನ್ನೇ, ಪಟ್ಟಿರುನ್ದಾರ್ = ಪಟ್ಟಾಹಿಡಿ ದಿಟ್ಟಿರುವವರ, ಮನಮುಮ್ = ಸಚ್ಚಿತ್ತಗಳನ್ನೂ, ಇಡಮಾಹಕ್ಕೊಣ್ಡಾನ್. ಇವಿಷ್ಟನ್ನೂ, ಆ ಗೋಪಾಲಕೃಷ್ಣ ತನ್ನ ದಿವ್ಯಾऽऽಸ್ಥಾನವಾಗಿಸಿಕೊಂಡಿರುವಾಗ, ಇವೆಲ್ಲಾ ಹೀಗೆ, ನಿಜಕ್ಕೂ ನಮ್ಮಂತಹವರಿಗಾಗಿಯೇ ಇರುವಾಗ ಭಗವದ್ ದರ್ಶನಕ್ಕೆ ಏನೇನೂ ಕೊರತೆಯಿಲ್ಲ.

ಯೋಗಿಗಳ ಚಿತ್ತ ರಾಗದ್ವೇಷಾದಿಗಳಿಲ್ಲದೆ ನಿರ್ಮಲವಾಗಿರುವುದರಿಂದ, ಅಂಥ ವೀತರಾಗರಾದ ಪುರುಷರ ಸಿರಿಚಿತ್ತ. "ತಿರುವುಳ್ಳಮ್" ಅನ್ನೇ ದಿವ್ಯ ದೇಶಗಳಲ್ಲಿ ಅನುಭವಿಸುತ್ತೇವಷ್ಟೆ. ಅದಕ್ಕಾಗಿಯೇ ಸರ್ವಮಂದಿರಗಳಲ್ಲೂ ಶರಣಾಗ್ರಣಿಗಳ, ಸದಾಚಾರ್ಯರ ಮೂರ್ತಿಗಳ ಆರಾಧನಾ ಉತ್ಸವಾದಿಗಳೂ ಏರ್ಪಟ್ಟಿರುವುದು. ಅವರ ಶ್ರೀ ಸೂಕ್ತಿಗಳ ವ್ಯಕ್ತಿಗತ ಹಾಗೂ ಸಾಮೂಹಿಕವಾಗಿ ಪಾರಾಯಣ ಅಂತೆಯೇ ಪರಮಾತ್ಮನಿಗೂ ಸಂತಸ ತರುವುದು.

ತಮಿಳ್ ತಿರಳ್ ೩ - ೩೯

ಇರೈಯಾಯ್ ನಿಲನಾಹಿ ಎಣ್ಣಿಶೈಯುಮ್ ತಾನಾಯ್ ಮರೈಯಾಯ್ ಮರೈಪ್ಪೊರುಳಾಯ್ ವಾನಾಯ್ - ಪಿರೈವಾಯ್ನ್ದ|
ವೆಳ್ಳತ್ತರುವಿ ವಿಳಜ್ಗೊಲಿನೀರ್ ವೇಜ್ಗಡತ್ತಾನ್ ಉಳ್ಳತ್ತಿನ್ ಉಳ್ಳೇ ಯುಳನ್

ಕನ್ನಡ ನೆರಳ್

ಎರೆಯನೆ ಆಗಿಳೆಯಾಗಿ ಎಣ್ದೆಸೆಯುಂ ತಾನಾಗಿ ಮರೆಸುವ ಶ್ರುತಿಯಾಗಿ, ಶ್ರುತಿಹುರುಳಾಗಿ, ಬಾನ್ ಆಗಿ|
ಜುಳುಜುಳು ಹರಿ ಝರಿ ಬೆಳಗುವ ಜಲ ವೇಂಕಟಪತಿ ಒಳಗಿಗೂ ಒಳಗೇ ಇಹನ್ನೆ||

ಸರ್ವಕ್ಕೂ ಒಡೆಯನಾಗಿ, "ಯಸ್ಯಾತ್ಮಾ ಶರೀರಂ ಯಸ್ಯಪೃಥಿವೀ ಶರೀರಂ" ಇತ್ಯಾದಿ ಪ್ರಭೂತ ಪ್ರಮಾಣಗಳಿಂದ, ವಿಶ್ವರೂಪಿಯೂ ಸರ್ವಾತ್ಮಕನೂ ಆದವನೇ ನೆಲವೆಂಬ ಭೂತಕ್ಕೂ ತಿರುಳಾದ "ಆತ್ಮ"ನಾದುದರಿಂದ, ತಾನೇ ನೆಲವಾಗಿ ಎಂದೇ ಹೇಳಲ್ ತಕ್ಕವನಾಗಿ ವಿಭೂತಿ ವಿಭೂತಿಪತಿಗಳ "ತಾದಾತ್ಮ್ಯ ಶರೀರಾತ್ಮ ಭಾವದಿಂದಲೂ" ತದ್ದಾಸ್ಯದಿಂದಲೂ, ಭಾವನಾವಿಶೇಷದಿಂದ, ಅಪೃಥಕ್ ಸಂಬಂಧದ ಅರಿವಿನ ಉದ್ರೇಕದಿಂದಲೂ, ಹೇಗೆ ಬೇಕಾದರೂ ಅವಿರೋಧವಾಗಿರುವಂಥದೇ. ಎಣ್ ದಿಶೈಯುಮ್ ತಾನ್ ಆಯ್ = ದಿಶಶ್ಚನಾರಾಯಣಃ, ಮರೈಯಾಯ್ = ವೇದಮೂರ್ತಿಯಾಗಿಯೂ, ವೇದಗಳ ಮುಖ್ಯಾರ್ಥನಾಗಿಯೂ. ತಮಿಳಿನ ಈ "ಆಯ್, ಆಯ್" ಎನ್ನುವುದು, ಉಪನಿಷತ್ತಿನ "ಬಹುಸ್ಯಾಂ ಅಮ್" (ಸ್ಯಾಮ್) ಎಂಬಲ್ಲಿನ, ಯ್, ಆ, ಗಳ ವ್ಯತ್ಯಸ್ತರೂಪ! ಇದೊಂದು ಚಮತ್ಕಾರವನ್ನೂ ನಾವಿಲ್ಲಿ ರಸಾನುಭವದ ವಿನೋದ ದೃಷ್ಟಿಯಿಂದ ಕಣ್ ಹಾಯಿಸಬಹುದು. "ನಾನು ಬಹುವಾಗಲು ಬಯಸುತ್ತೇನೆ" ಎಂದೇ ಸೃಷ್ಟಿಯ ಮೊದಲಲ್ಲಿ ಕರ್ತನ ಸಂಕಲ್ಪ! ವಾನ್ ಆಯ್ = ಬಾನ್ ಆಗಿರುವವನೇ, ಪಿರೈವಾಯ್ನ್ದ = ಚಂದ್ರಮಂಡಲವನ್ನೇ ಮುಟ್ಟುವಷ್ಟು ಉನ್ನತ ಗಿರಿಶಿಖರಗಳಿಂದ, ವೆಳ್ಳತ್ತು ಅರುವಿ = ಪ್ರವಹಿಸುವ ಗಿರಿ ನಿರ್ಝರಗಳ, ಮುತ್ತಿನಂತಿಹ ಪ್ರಕಾಶಾತಿಶಯ ತಿರುಮಲ ತೀರ್ಥಗಳಲ್ಲಿ ಇವೆ ಎಂಬ ಭಾವ. ವೇಜ್ಗಡತ್ತಾನ್ = ತಿಮ್ಮಪ್ಪನೇ, ಗಿರಿಗೂ ಆತ್ಮ ಸ್ಥಾನಿಯನಷ್ಟೇ. ಬೆಟ್ಟವೂ ಆತನ ಮೂರ್ತಿಯೇ! ಜನಗಳ ಹೆಸರೂ ಬೆಟ್ಟ ಗಿರಿ, ತಿರುಪತಿ ಹೀಗೆಂದೇ ಪ್ರಚಲಿತವಷ್ಟೆ. ಎಂತೆಂತಹ ಉತ್ತಮೋತ್ತಮ ಸಾಮಾಜಿಕ ಸಂಸ್ಕಾರ ಯಾತ್ರಾಸ್ಥಳಗಳಿಂದ ದೊರಕುತ್ತಲೇ ಇದೆ. ಇದೇ ನಿಜಕ್ಕೂ ಮಾನವ ಸಂಪನ್ಮೂಲ! ವೆಂಕಟಾದ್ರಿಯ ಎತ್ತರ ಎಷ್ಟೆಂಬುದನ್ನು ಕಾವ್ಯ ಸುಂದರವಾದ ಭಾಷೆಯಿಂದ ಪೇಯಾಳ್ವಾರ್ ಇಲ್ಲಿ ನಿರೂಪಿಸಿದ್ದಾರೆ. ಚಂದ್ರ ಸ್ಪುಷ್ಟ ಪ್ರವಾಹಗಳ ಮೂಲಕ ನನ್ನೆದೆಯೊಳಗೂ! "ಚಂದ್ರಮಾ ಮನಸೋ ಜಾತಃ" ಪ್ರಭುಚಿತ್ತ ಎಷ್ಟು ತಂಪೋ, ಶರಣರ ಚಿತ್ತವೂ ಅಷ್ಟೇಕೆ? ಇನ್ನೂ ಹೆಚ್ಚೆನ್ನಬಹುದು! ಉಳ್ಳತ್ತಿನ್, ಉಳ್ಳೇ = ಅಂತರತಮನಾಗಿ, ಉಳನ್ = ಬಿಡದೆ ನೆಲೆಸಿದ್ದಾನೆ.

ತಮಿಳ್ ತಿರುಳ್ ೩ - ೪೦

ಉಳನ್ ಕಣ್ಡಾಯ್ ನನ್ನೆ ಇಜ್ಜೋ! ಉತ್ತಮನ್ ಎನ್ನುಮ್ ಉಳನ್ ಕಣ್ಡಾಯ್! ಉಳ್ಳುವಾರ್ ಉಳ್ಳತ್ತುಳ್ ಕಣ್ಡಾಯ್|
ವಿಣ್ಣೊಡುಜ್ಗ ಕ್ಕೋಡುಯರುಮ್ ವೀಜ್ಗರುವಿವೇಜ್ಗಡತ್ತ್ ಮಣ್ಣೊಡುಜ್ಗ ತ್ತಾನಳನ್ದ ಮನ್||

ಕನ್ನಡ ನೆರಳ್

ಇಹನ್ ಕಂಡ್ಯಾ ನಲ್ಚಿತ್ತಾ! ಪುರುಷೋತ್ತಮನೆಂದೂ ಇಹನ್ ಕಂಡ್ಯಾ ಚಿಂತಿಪರೊಳಗೊಳಗಿಹನ್ ಕಂಡ್ಯಾ |
ಬಾನ್ ಅಡಗುವೊಲ್ ಶಿಖರೋನ್ನತ ತುಂದೊಣೆ ಗಿರಿಯಪ್ಪನು ಮಣ್ ಅಡಗುವೊಲ್ ತಾನೇ ಅಳೆದರಸನ್ ||

ನಲ್‌ನೆಞ್ಜೇ = ಓ ನನ್ನ ಒಳ್ಳೆಯ ಹೃದಯವೇ! ಏನು ಹೇಳಲಿ, ಉಳನ್ ಕಣ್ಡಾಯ್ = ಅವನು ಎನ್ನೊಳಗೆ ಇಲ್ಲದಿದ್ದಿದ್ದರೆ ನಾನೆಲ್ಲಿ ಇರುತ್ತಿದ್ದೆ? ನನ್ನ ಇರುವಿಕೆಗಾಗಿ ಆ ಉತ್ತಮ ಪುರುಷ ನನ್ನೊಳಗಿರುವುದು. ಕಣ್ಡಾಯ್ = ಸತ್ಯಂ ಸತ್ಯಂ. ತಾತ್ಕಾಲಿಕ ಅನ್ತರ್‌ಯಾಮಿಯಾಗಿ ಮಾತ್ರವಲ್ಲ. ಎನ್ನುಮ್ = ಯಾವಾಗಲೂ, ನಾವು ಮರೆತಾಗಲೂ ಆತ ನಮ್ಮೊಳಗಿದ್ದು ನಮ್ಮನ್ನು ನೆನೆನೆನೆದು ರಕ್ಷಿಸುತ್ತಲೇ ಇರುವನು. ಆಳ್ವಾರ್‌ಗಳಿಗೆ ನಾಸ್ತಿಕರ ಭಯವಿಲ್ಲ. ಅವರನ್ನು ಹಳಿಯುವುದೂ ಇಲ್ಲ. ನಾವು ದೇವರಿಲ್ಲ ಎಂದರೇನಂತೆ? ಪುರುಷೋತ್ತಮ ಖಂಡಿತ ನಮ್ಮನ್ನು ಇಲ್ಲವೆನ್ನದೆ, ನಮ್ಮೊಳಗೆ ಇದ್ದೇ ಇದ್ದಾನೆ! ನಾವೂ ಆತನುಂಟೆಂಬ ಸಂವೇದನೆಯಿಂದ ಇದ್ದರಂತೂ, ಉಳ್ಳುವಾರ್ ಉಳ್ಳತ್ತು = ಅಂತಹವರಲ್ಲೂ ಸಮಭಾವನೆಯಿಂದಲೇ ಇದ್ದಾನೆ. ವಿಣ್ = ಆಕಾಶವನ್ನೆಲ್ಲಾ ಅಡಜ್ಗ = ಅಡಗಿಸಿ ಕೊಂಡಿರುವ, ಕೋಡು = ಶಿಖರಗಳಿಂದ, ಉಯರುಮ್ = ಈ ಸಾವಧಿಕ ಅಂತರಿಕ್ಷವನ್ನೂ ದಾಟಿ ಆ ಪರಮಾಕಾಶಕ್ಕೆ ಏರುತ್ತಲೇ ವ್ಯಾಪಿಸಿರುವ ತಿರುಮಲೆಯಲ್ಲೇ ನಿಂತವ, ವೀಜ್ಗ = ತುಂಬಿ ಹರಿಯುವ, ಅರುವಿ = ತೀರ್ಥರುಧಿರಗಳುಳ್ಳದ್ದು ಈಗಿರಿ. ಇಲ್ಲಿ ನಿಂತೇ ಇರುವವನೇ, ಮಣ್ ಭೂಮಿಗೆಲ್ಲಾ, ಒಡುಜ್ಗ = ಹರಗುವಂತೆ, ಭೂಃ ಪಾದನಾಗಿ ತಾನೇ ಸ್ವಯಂ, ಅಳನ್ದ = ಸರ್ವವ್ಯಾಪಕನಾಗಿ, ಅಳೆದ ಮನ್ = ಎಲ್ಲದರ ನಿಜದೊಡೆಯ| ದಿವ್ಯ ದೇಶಾಧಿಪತಿಯ ಒಡೆತನದಲ್ಲಿ ನಾವೆಲ್ಲಾ, ಕೇವಲ ಧರ್ಮಕರ್ತರಂತಷ್ಟೆ. ಕರ್ತವ್ಯಕ್ಕಾಗಿ ಭೂಪುತ್ರರಾಗಿ ಅವಳ ಸೇವೆ ಮಾಡುವವರು, ಯಾವೊಂದು ಸರಕಾರ ಸಂಸ್ಥೆ ವ್ಯಕ್ತಿಯಾಗಲಿ ಭೂಮಾಲೀಕರಲ್ಲ. ಕ್ರಯ ವಿಕ್ರಯ, ಆಧಾರ, ಭೋಗ್ಯಾದಿಗಳ ವ್ಯವಹಾರವೆಲ್ಲಾ ಬಲಿ ಚಕ್ರವರ್ತಿಯಂತೆ, ಅಂದರೆ ಅಸುರೀಪ್ರಕೃತಿ. ದೈವೀ ಸಂಪನ್ನನಾದ ಇಂದ್ರನಿಗೆ, ವ್ಯವಸ್ಥೆಗಾಗಷ್ಟೆ, ದಾನ ಬೇಡಿಯೇ ದಾನಿಯ ಸ್ವಸಂಮತಿಯಿಂದಲೇ ಕೊಡಿಸಿದ, ಈ ಉತ್ತಮ ಉದಾಹರಣೆ. ೧೯೫೧ರ ಏಪ್ರಿಲ್ ೧೮ರಂದೇ, ಆಂಧ್ರದ "ಭೂದಾನ" ಪ್ರೊಚಂಪಲ್ಲಿಯಿಂದ ಆರಂಭವಾಗಿ, ೧೯೫೭ ನವೆಂಬರ್‌ನಲ್ಲಿ, ಮೈಸೂರು ಯೆಲ್ವಾಲ್ ಗ್ರಾಮದಲ್ಲಿ, ಇಡೀ ಭರತಖಂಡದ, ಕೇಂದ್ರ ಹಾಗೂ ರಾಜ್ಯಗಳ ಹಾಗೂ ಸರ್ವಪಕ್ಷಗಳ ಹಾಗೂ ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆದಿರುವುದು, ಆ ತ್ರಿವಿಕ್ರಮನ ಮತ್ತು ಈ ತಿಮ್ಮಪ್ಪನ ವಿಕ್ರಮವೇ!

ತಮಿಳ್ ತಿರಳ್ ೩ - ೪೫

ಪುರಿನ್ದು ಮದವೇಳಮ್ ಮಾಪ್ಪಿಡಿಯೋಡೂಡಿ ತಿರಿನ್ದು ಶಿನತ್ತಾಲ್ ಪೊರುದು - ವಿರಿನ್ದ ಶೀರ್ |
ವೆಣ್ ಕೋಟ್ಟು ಮುತ್ತುದಿರ್‌ಕ್ಕುಮ್ ವೇಜ್ಗಡಮೇ, ಮೇಲೊರುನಾಳ್ ಮಣ್‌ಕೋಟ್ಟುಕ್ಕೊಣ್ಡಾನ್ - ಮಲೈ |

ಕನ್ನಡ ನೆರಳ್

ಕೂಡಿಯೆ ಮದ್ದಾನೆ, ತನ್‌ಪೆಣ್ಣಾನೆಯೊಡದ ಬಿಟ್ಟು, ಓಡುತ ರೋಷದಿ ಹೋರಾಡಿ - ಬೀಗಿದ ಜಯಸಿರಿ, ತನ್|
ಬಿಳಿ ದಂತಗಳಿಂ ಮುತ್ತುದುರಿಪವೇಂಕಟವೇ, ಪಿನ್ನೋರ್‌ನಾಳ್ ಇಳೆಮಣ್ಣನು ಕೋರೆಯೊಳೆತ್ತಿಟ್ಟವನ್ - ಮಲೆಯೈ||

ಳಳನೆಯ ಹಾಡಿನಲ್ಲಿ ಕೋಟಿ ಸೂರ್ಯ ಪ್ರಕಾಶವುಳ್ಳ ಕಿರೀಟಧಾರಿ ಎಂದಿರಲ್ಲಾ! **"ಪಲಕದಿರ್ ಪಾರಿತ್ತ ಪೈಮ್ಬೊಮುಡಿಯಾನ್"** ಅಷ್ಟೊಂದು ಉಜ್ವಲದರ್ಶನ ಪರಮಪದಸ್ಥರಿಗೇ ಹೊರತು ನಮಗೆಲ್ಲಿ ಬಂತು? ಎನ್ನಬೇಡಿ. ನಮ್ಮಂತಹ ಇಲಿಯೆಲುಬಿನ ಅಶಕ್ತರಿಗೂ ಹೊಂದಿಕೊಂಡೇ, ಅಜಹತ್ ಸ್ವ ಸರ್ವಸ್ವನಾಗಿಯೇ ತಿರುಮಲೆಯಲ್ಲಿ ಸನ್ನಿಹಿತನಾಗಿದ್ದಾನೆ. ಆ ಪರಾತ್‌ಪರ, ಅಲ್ಲಿ ಪರತ್ವ ಮಾತ್ರ. ಇಲ್ಲಿ ಪರತ್ವವನ್ನೂ ಬಿಡದ ಸೌಲಭ್ಯ ಸೌಶೀಲ್ಯ ವಾತ್ಸಲ್ಯ! ಮದಮ್ = ಮದಕಾರುವ, ವೇಳಮ್ = ಸಲಗ, ಮಾ = ಅತ್ಯಂತ ರತಿಪ್ರಿಯವಾದ, ಪಿಡಿಯೋಡು = ಪ್ರೇಯಸಿ ಹೆಣ್ಣಾನೆಯೊಡನೆ ಸೇರಿದ್ದು, ಊಡಿ ಪರಿಯ = ಭಾರ್ಯಾ ಸಂಶ್ಲೇಷವಾದೊಡನೆ ಗಂಡು ವಿಶ್ಲೇಷಿಸಬೇಕಾಗುವುದಷ್ಟೇ. ಮತ್ತಗಜರಾಜನಾದುದರಿಂದ ಕೋಪ ಕೆರಳಿದೆ! ಊಡಿ, ಪುರಿನ್ದು = ಸಂಭೋಗಾ ನಂತರ, ಬಿಡಿಸಿಕೊಂಡು, ಸಿಕ್ಕಾಪಟ್ಟೆ ರಂಪ ಮಾಡುತ್ತಾ ಓಡಾಡಿ! ಸಿಕ್ಕಿದುದನೆಲ್ಲಾ ಸಿಗಿಯುವ ತನ್ನ ಚಟದಿಂದ ಉತ್ತೇಜಿತವಾದ, ಶಿನತ್ತಾಲ್ = ತಿರುಪತಿಯಲ್ಲಿನ ಕನ್ನಡಿಯಂತೆ ಹೊಳೆಯುವ ಬೆಟ್ಟದ ಬಂಡೆಗಳಲ್ಲಿ ಕಾಣುವ ತನ್ನದೇ ರೂಪವನ್ನು, ಪ್ರತಿಬಿಂಬವೆಂದರಿಯದೆ, ಪ್ರತಿಸ್ಪರ್ಧಿ ಮಗುದೊಂದಾನೆಯೆಂದು ಬಗೆದು! ಮದದ ತಿಮಿರಿನಿಂದಲೂ ಹೆಚ್ಚಿದ ಕೋಪೋದ್ರೇಕದಿಂದಲೂ, ಪೊರುದು = ಶಿಲಾಪ್ರತಿಫಲಿತವಾದ ತನ್ನ ಕನ್ನಡಿಯ ರೂಪಿನೊಂದಿಗೇ ಹೋರಾಡಿ, ವಿರಿನ್ದ = ಜಯಗಳಿಸಿದ್ದರಿಂದ ಬಿತ್ತರಗೊಂಡ ಗರ್ವದಿಂದ, ಬಂಡೆಗೇ ಕೋಡುಗಳನ್ನು ತಾಗಿಸಿ ತಾಗಿಸಿ ಸೀಳಿಕೊಳ್ಳುವ ಪರಿಸ್ಥಿತಿ! ಅನೆಕೊಂಬುಗಳ ಒಳಗಿನಿಂದ ಬೆಲೆಬಾಳುವ ಮುತ್ತುಗಳು ಹೊರಕ್ಕೆ ಉದುರುತ್ತಿವೆ! ಅದನ್ನು ಆಳ್ವಾರ್ ವರ್ಣಿಸುತ್ತಿದ್ದಾರೆ!

ವೆಳ್ಳಮ್ = ಅತಿಧಾವಳ್ಯದಿಂದ ಕೂಡಿದ, ಕೋಡು ತನ್ನ ನಾಲ್ಕೂ ದಂತಗಳಿಂದ, (ಉತ್ತಮ ಸಲಗಗಳಿಗೆ ಎರಡೆರಡು ದಂತದ ಕೊಂಬುಗಳು ಒಂದೊಂದು ಪಕ್ಕಕ್ಕೂ ಇರುತ್ತವೆ) ಮುತ್ತು ಉದಿರ್‌ಕ್ಕುಂ = ಮುಕ್ತಾಫಲಗಳನ್ನು ಉದುರಿಸುತ್ತಿರುವಂತಹ ದೃಶ್ಯವುಳ್ಳ, ವೇಜ್ಗಡಮೇ ಮೇಲ್ = ಹಿಂದೆ ಒಂದಾನೊಂದು ಕಾಲದಲ್ಲಿ, ಒರುನಾಳ್ = ವೈಯ್ಯಾಶಿ ತಿಂಗಳ ರೇವತಿ ನಕ್ಷತ್ರ. ಮಣ್ = ರಸಾತಲದಲ್ಲಿ ಹಿರಣ್ಯಾಕ್ಷ ಮುಳುಗಿಸಿ, ಪಾಚಿಕಟ್ಟಿದ್ದ ಭೂ ದೇವಿಯನ್ನು, ಕೋಟ್ಟು = ತನ್ನ ಎರಡೂ ಕೋರೆಗಳಿಂದ, ಕೊಣ್ಡಾನ್ = ಅಪಹರಿಸಿದ್ದ· ಅದೇ ಹಿರಣ್ಯಾಕ್ಷನನ್ನು ಬಲು ಪ್ರಯಾಸದಿಂದ ಕೊಂದು ಮರಳಿ ತನ್ನವಳನ್ನಾಗಿಸಿಕೊಂಡ, ಅದಿವರಾಹನದೇ! ಅದುದರಿಂದಲೇ ತಿರುಮಲೆಯಲ್ಲಿ

ಸ್ವಾಮಿ ಪುಷ್ಕರಣೀ ದಂಡೆಯಲ್ಲೇ ಇರುವ ಆ ಸ್ವಾಮಿಗೇ ಮೊಟ್ಟಮೊದಲಿಗೇ ಆರಾಧನವಾಗಿ ಬಳಿಕ ತಿಮ್ಮಪ್ಪನ ಕೈಂಕರ್ಯ ಕಲಾಪ. ತಿರುನಾರಾಯಣಪುರದಲ್ಲೂ, 'ಹರೇಃ ವರಾಹರೂಪಿಣಃ ಶ್ರಮಾಂಬು ಸಂಭವಮ್'' ಯುದ್ಧದ ಶ್ರಮ ಸಂಜಾತ ಬೆವರಿನ ನೀರೇ ಆಗಿರುವುದು, ಕಲ್ಯಾಣಿ ತೀರ್ಥ. ತಿರುನಾರಾಯಣನಿಗೂ, ಇರಲಿಕ್ಕೆ ಭೂಮಿಯನ್ನು ಒದಗಿಸಿದ ''ಭೂವರಾಹ!'' ಕೋಲವರಾಹಂಮೊನ್ನಾಯ್ ಪರಮಪದಕ್ಕೆ ನಮ್ಮಾಳ್ವಾರ್ ಹೋಗುವುದಕ್ಕೆ ಮುನ್ನಾ ಅಂತಿಮದರ್ಶನವಿತ್ತ ಅತಿಸುಂದರ ಬೃಹದ್‌ವರಾಹ ಮೂರ್ತಿ, **''ವರಾಹನಾಥನ ಕಲ್ಲಳ್ಳಿ''** ಕನ್ನಂಬಾಡಿ - ಕಣ್ಣನ್‌ಪಾಡಿ, ಈಗಿನ ಕೃಷ್ಣರಾಜ ಸಾಗರದ ಉತ್ತರದಲ್ಲಿದೆ!

ತಮಿಳ್ ತಿರಳ್ ೩ - ೫೮

ತೆಳಿನ್ದ ಶಿಲಾತಲತ್ತಿನ್ ಮೇಲ್ ಇರುನ್ದ ಮಂದಿ ಅಳಿನ್ದ ಕಡುವನೈಯೇ ನೋಕ್ಕಿ - ವಿಳಜ್ಗೆಯ|
ವೆಣ್ ಮದಿಯಮ್ ತಾವೆನ್ಬುಮ್ ವೇಜ್ಗಡಮೇ ಮೇಲ್ ಒರುನಾಳ್ ಮಣ್ ಮದಿಯಿಲ್ ಕೊಣ್ಡು ಹನ್ದಾನ್ ವಾಳ್ವು||

ಕನ್ನಡ ನೆರಳ್

ಹೊಳೆ ಶಿಲೆ ತಳ ಮೇಲಿಹ ಪೆಣ್ ಮಂಗಿ ಬಲು ಬೆದೆ ತನ್‌ಗಡವನ ಕಂಡು - ಬೆಳಗುವ, ಕೆಳಗಿಹ |
ಬೆಳ್ಕಂಬೆಳ್ಕನ ಪೆರೆಯಂ ತಾ, ಎನು ವೇಂಕಟವೇ ಹಿಂದೊಂದಿನ ಸುಳ್ಕಂ ಸುಳ್ಗಳ ನೋಡಿಪ ಜಾಣ್ಮೆಯಿಂ ಕೊಂಡುಲ್ಲಸಿ ಬಾಳ್ ದಾಣಂ||

ಈ ಲೀಲಾವಿಭೂತಿಗೆ ಪರಮ ಭೂಷಣ ಈ ತಿರುಪತಿ. ಈ ಬೆಟ್ಟದಲ್ಲಿ ''ತಿರುವೇಜ್ಗಡಮ್ ಉಡೈಯಾನ್ ಅಲರ್‌ಮೇಲ್ ಮಜ್ಗೈ'' ಎಂದು ತಮಿಳಿನಲ್ಲಿ ಕರೆಯಲ್ಪಡುವವನೇ ''ಲಕ್ಷ್ಮೀವೆಂಕಟೇಶ್ವರ ಸ್ವಾಮಿ''. ಇಂತಹ ದಿವ್ಯ ವಿಶ್ವಕುಟುಂಬಿ ದಂಪತಿಗಳಂತೆಯೇ, ಕಪಿ ದಂಪತಿಗಳೂ ಲೀಲಾರಸವನ್ನು ಅನ್ಯೋನ್ಯವಾಗಿ ಅನುಭವಿಸುತ್ತಿವೆ! ಶರಣವಾಜ್ಮಯ, ಮಾನವನನ್ನಷ್ಟೇ ಗುರುತಿಸದು. ಸ್ಫಟಿಕ ಸ್ವಚ್ಛವಾದ ಗಿರಿಶಿಲಾತಲ, ವಾನರ ದಾಂಪತ್ಯ, ಬೆಳ್ಳನ ಚಂದ್ರ, ಭೂಮಿಯನ್ನು ತನ್ನದೇ ಎಂದಿದ್ದ ಬಲಿರಾಯನೊಡನೆ, ಯುದ್ಧದ ಗೋಜಿಗೇ ಹೋಗದೆ, ಆತನ ಔದಾರ್ಯ ಗುಣವನ್ನೇ ಚಾತುರ್ಯದಿಂದ ಬಳಸಿಕೊಂಡ ವಾಮನ, ಎಲ್ಲವನ್ನೂ ಈ ಒಂದು ಪಾಶುರದಲ್ಲಿ ಈ ಹಿರಿಹುಚ್ಚಿನ ಕವಿ **''ಸಹಿತಾನಾಂಭಾವಃ ಸಾಹಿತ್ಯಂ''** ಎಲ್ಲವನ್ನೂ ಕಾವ್ಯವಸ್ತುವಿಗೆ ಸೇರಿಸಿ ಅಳವಡಿಸಿ, ಅಧ್ಯಾತ್ಮದ, ಐಹಿಕ ಹಾಗೂ ಪಾರಮಾರ್ಥಿಕ ಉಭಯ ಮುಖವನ್ನೂ ಸಮತೋಲನದಿಂದ ನಿಜವಾದ ಸಾಹಿತ್ಯ ಹೇಗೆ ಸಮಗ್ರ ಸಂಪೂರ್ಣ, ''ಪ್ರಿಯಂ ಹಿತಂ'' ಮನೋಜ್ಞವಾಗಿರಬೇಕೆಂಬುದನ್ನು ತೋರಿದ್ದಾರೆ.

ತೆಳಿನ್ದ = ತಿಳಿಯಾದ, ನಿರ್ಮಲ ಸ್ಫಟಿಕದಂತಿರುವ, ಶಿಲಾ ತಲತ್ತಿನ್ ಮೇಲ್ = ಸಮತಳವಾದ ಒಂದು ಬಂಡೆಯ ಮೇಲೆ ಹೆಣ್ಣು ಮಂಗಿ ಕುಳಿತಿದೆ. ಗಡವ ಮಂಗನಿಗೆ ಬೆದೆಯೇರಿದೆ! ಮಂದಿ = ಪ್ರೇಯಸಿ ವಾನರಿಯಾದುದು, ತನಗೆ ಪ್ರಿಯವಾದುದನ್ನೂ ಗಂಡ, ಪೂರೈಸಿಕೊಡಬೇಕೆಂಬ ಅಭಿಪ್ರಾಯದಿಂದ, ಕಡುವನೈಯೇನೋಕ್ಕಿ = ಗಡವನನ್ನು ಓರೆನೋಟದಿಂದ, ತನ್ ವಶಕ್ಕೆ ತಂದುಕೊಳ್ಳುತ್ತದೆ. ಬಾಯ್‌ಬಿಟ್ಟು, ವಾನರ ಕಾಮಿನಿ = ಕಾಮುಕನನ್ನು ಕೇಳುತ್ತದೆ. ವಿಳಜ್ಗೆಯ = ನಿಷ್ಕಳಂಕವಾದ, ಕಳಂಕವಿದೆಯಲ್ಲಾ ಎನ್ನಬೇಡ! ಕ್ಷೇತ್ರ ಸಂಬಂಧದಿಂದ, ಚಂದ್ರನೂ ಪರಿಶುದ್ಧನಾಗಿಯೇ ಬಿಟ್ಟಿದ್ದಾನೆ ಅಂತಹ, ವೆಳ್ ಮದಿಯಂ = ಧವಳ ಪೂರ್ಣಚಂದ್ರನನ್ನು, ತಾ = ಓ ಪತಿದೇವಾ! ನೀನಿಳಿದು ತಂದುಕೊಡು! ಎಂಬುದಾಗಿ ಹೇಳುವಂತಹ, ಅಂದರೆ ಚಂದ್ರಮಂಡಲಕ್ಕೂ ಮೇಲಿನ ಕಲ್ಪಾರೆಯಲ್ಲಿ ಕಪಿಜೋಡಿಕುಳಿತಿವೆ! ಎಂಬುದಿಲ್ಲಿ ಧ್ವನಿತ. ತಿಮ್ಮಪ್ಪ ಹೇಗೆ ಸರ್ವೋಚ್ಚತಮನೋ ಹಾಗೆಯೇ ಅವನ ನೆಲೆಯಾದ ಗಿರಿಶಿಖರಗಳೂ ಕೂಡ ಅತ್ಯುನ್ನತ! ಹೀಗೆ, 'ಎತ್ತರ'ವನ್ನೂ ವಾಚ್ಯವಾಗಿ ಹೇಳದೆ ಕಾವ್ಯದ ಜೀವಾಳವಾದ ವ್ಯಂಜನಾವೃತ್ತಿಯಿಂದ ಚಂಚಲೆಯಾದ ಶಾಖಾಮೃಗಿಯೊಂದು ಹೇಳುವ ಚೆಲುವನ್ನೂ ಕ್ಷೇತ್ರ ಸಂಬಂಧದಿಂದಲೇ ಬಂದಿದೆಯೆಂಬುದನ್ನೂ, ತಮಿಳ್ ಆದಿ ಕವಿಗಳಲ್ಲಿ ಮೂರನೆಯವರಾದ, ಮಹಾನ್‌ಕವಿ 'ಪೇಯಾಳ್ವಾರ್' ಕಾವ್ಯಲೋಕಕ್ಕೆ ಉತ್ತಮೋತ್ತಮ, ಉನ್ನತೋನ್ನತಲಕ್ಷ್ಯಗಳನ್ನು ತೋರುತ್ತಾರೆ. **''ಶರಣರು ಕೇವಲ ಶುಷ್ಕ ವೇದಾನ್ತಿಗಳಲ್ಲ. ರಸಜ್ಞರು, ರಸವ್ಯಂಜಕ ರಸಪ್ರಜ್ಞಾವಂತರು!''**

ಇಂತಹ ಸುಂದರ ಮನೋಹಾರಿ ಸನ್ನಿವೇಶಗಳುಳ್ಳ ವೇಜ್ಗಡಮೇ, ಮೇಲ್ ಒರುನಾಳ್ ಮದಿಯಿಲ್ = ಮತಿ, ಮದಿ = ದಾನದ ಯುಕ್ತಿಯಿಂದ, ಕೊಂಡು = ಬಲಿಯಿಂದ ಅದೂ ರಾಣಿಯೂ ಈ ಕುಳ್ಳಮಾಣಿಯ ಅಂದಚೆಂದ, ನವುರಾದ ಭಾಷೆಗೆ ಮನಸೋತು, ತನ್ನ ಗಂಡನಿಗೆ ''ಎಲ್ಲಾದರೂ ಬರಿ ಕೈಯ್ಯಲ್ಲಿ ಕಳಿಸುತ್ತೀರಿ!'' ಎಂದು ಸೂಚಿಸೋಣ, ಅವಳೂ ಒಪ್ಪಿರುವುದರಿಂದ, ಗಂಡ ನೀಡಿದ ಭೂ ದಾನವನ್ನು ಸ್ವೀಕರಿಸಿ, ಉಹನ್ವರ್ಕ್ = ಉಲ್ಲಾಸಗೊಂಡ ಸರ್ವೇಶ್ವರನ ಗಿರಿ, ವೇಂಕಟವೇ ಜನಗಳ ಔದಾರ್ಯಕ್ಕೂ ಇಂಬುಗೊಡುವ ಆ ವಾಮನನಂತೆಯೇ ತಿಮ್ಮಪ್ಪನೂ, ನ್ಯಾಯಾರ್ಜಿತವೋ, ಅನ್ಯಾಯಾರ್ಜಿತವೋ ಉಭಯವನ್ನೂ ಸಮಾನತೆಯಿಂದಲೇ ತನ್ನದಾಗಿ ದಕ್ಕಿಸಿಕೊಳ್ಳಲು ಕಾಣಿಕೆ, ದಾನ, ದರ್ಶನಾದಿಗಳಿಗೆ ರುಸುಂ, ಹೀಗೆ ತೊಂಬೆ ತುಂಬಿಸಿಕೊಂಡು ಜನರನ್ನು ಮೆಲ್ಲಮೆಲ್ಲನೆ ಪರಿವರ್ತಿಸುತ್ತಿದ್ದಾನೆ! ಜಗತ್ತಿನ ಎಲ್ಲಾ ದೇಶಗಳ ಆರ್ಥಿಕ ಪದ್ಧತಿಗಳು ಮಾನವ ಕಲ್ಪಿತ, ಹೆಚ್ಚಿನವು ಲೋಭಾಸುರ ಪ್ರೇರಿತಗಳೇ, ಅದು ಸಮಾಜವಾದಿಯಾಗಲಿ,

ಸಾಮ್ಯವಾದಿಯಾಗಲಿ, ಧನವಾದಿಯೇ ಆಗಲಿ, ಪ್ರಜಾಪ್ರಭುತ್ವದ ಪದ್ಧತಿಯದೇ ಆಗಲಿ, ದಂಡಶಕ್ತಿ, ಯುದ್ಧಶಕ್ತಿಗಳನ್ನೇ ಇಡೀ ಜಗತ್ತು ಅಧಿಕೃತವಾಗಿ ಇನ್ನೂ ನಂಬಿವೆ. ಆ ಕ್ಷೇತ್ರಗಳಲ್ಲಿ, ಮಾನವ ಪರಿವರ್ತನೆಯನ್ನು ಇದೇ ಭೂದಾನ, ಸಂಪತ್ತಿದಾನ, ಶ್ರಮದಾನ, ಬುದ್ಧಿದಾನಗಳಿಂದ ತರುವುದನ್ನೇ ಅಧಿಕೃತಗೊಳಿಸಲು ಮುಂದೆ ಬಂದರೆ ಮಾತ್ರ ತಿರುಪತಿ ಮುಂತಾದ ದೇವಾಲಯಗಳನ್ನು, ವ್ಯಾಪಾರೀಕರಣ! ದುಡ್ಡಿನ ದೇವರು, ಅಲ್ಲೆಲ್ಲಿದ್ದಾನೆ ದೇವರು? ಈ ವಿಚಾರಧಾರೆಗಳೆಲ್ಲಾ ನಿಂತು ಯಾತ್ರಾಸ್ಥಳಗಳು ಅರ್ಥವತ್ತಾಗುವುವು. ಯಾತ್ರಾ ಸ್ಥಳಗಳ ಹೊಲಸುಗಳಿಗೆ, ಯಾತ್ರಾಸ್ಥಳಗಳನ್ನು ತೆಗಳಬಾರದು. ಜಾತೀಯತೆ, ಕೋಮುವಾರು ದ್ವೇಷಗಳು ರಾಜಕೀಯದ, ಮತದಾನ ಪದ್ಧತಿಯ "ಬಹುಸಂಖ್ಯಾಸುರ" ಮುಂತಾದ ದೋಷಗಳಿಂದ ಮತ್ತೆ ಚಿಗುರಿಕೊಂಡವಷ್ಟೆ! ೧೦೦ಕ್ಕೆ ೫೧. ಈ ವಿಷನೀತಿಯನ್ನು ಮೆಲ್ಲಮೆಲ್ಲನೆ, ಸರ್ವಾನುವಿರೋಧ, ಸರ್ವಸಂಮತಿಯತ್ತ ತಿರುಗಿಸುವ ಸಾಹಸ, ಗ್ರಾಮ ಗ್ರಾಮದಿಂದಲೇ ಆರಂಭವಾಗಿ, ಜಾಗತಿಕ ಶಾಶ್ವತ ಶಾಂತಿಮಂಗಳ ತರುವುದೇ ಹೊರತು, ಯಾರೂ ಯಾವುದನ್ನೂ ನಿಂದೆ ಮಾಡದಿರೋಣ. ಅಣುಬಾಂಬ್, ಕ್ಷಿಪಣಿಯ ಈ ಯುಗದಲ್ಲಂತೂ ಈ ಸರ್ವಸಮ್ಮತ ಧರ್ಮವೇ ವ್ಯಾವಹಾರಿಕ.

ತಮಿಳ್ ತಿರಳ್ ೩ - ೬೧

ಪಣ್ಡೆಲ್ಲಾಮ್ ವೇಙ್ಗಡಮ್ ಪಾರ್ಕ್ಕಡಲ್ ವೈಹುನ್ದಮ್ ಕೊಣ್ಡಙ್ಗುರೈ ವಾರ್ಕ್ಕು ಕೋಯಿಲ್ ಪೋಲ್ - ವಣ್ಣು |
ವಳಙ್ಕಿಳರುಮ್ ನೀಳ್ ಶೋಲೈ ವಣ್ ಪೂಙ್ಕುಡಿಹೈ ಇಳಙ್ಕುಮರನ್ ತನ್ ವಿಣ್ಣಹರ್ ||

ಕನ್ನಡ ನೆರಳ್

ಹಿಂದೆಲ್ಲಾ ವೇಂಕಟ ಪಾಲ್‌ಗಡಲ್ ವೈಕುಂಠಂ, ಇವ ಕೊಂಡಲ್ಲಾssವಾಸಿಗೆ ಅರಮನೆ ಪೋಲ್ - ಬಂಡುಗಳ್ |
ಹಿಂಡೇಳುವ ನೀಳ್ ಬನದು ದಾರಿಸುಂದರ ವಿಕಸಿತ "ಕಡಿಹೈ" ಗಂಡೆಳೆಯಗೆ ರುಚಿಪುದು ವಿಣ್‌ನಹರಂ!||

ವೈಕುಂಠವಷ್ಟೇ ಆ ಯುವಾಕುಮಾರನಿಗೆ ರಾಜಧಾನಿಯಲ್ಲ. ಪ್ರಾಚೀನತಮ ಪ್ರಾಚೀನತರ ಪ್ರಾಚೀನದಿವ್ಯದೇಶಗಳೆಲ್ಲವೂ ತಾರತಮ್ಯವಿಲ್ಲದೆ ಒಂದೇ ಬಗೆಯ ಆನಂದ ನೀಡುವುವು. ಜನರ ದೃಷ್ಟಿಯಿಂದ ನೋಡಿದಾಗ ವೈಕುಂಠಕ್ಕಿಂತಲೂ, ಕ್ಷೀರ ಸಮುದ್ರ ಅದಕ್ಕಿಂತಲೂ ತಿರುಪತಿ, ಅದಕ್ಕಿಂತಲೂ ಘಟಿಕಾಚಲ, ಅದಕ್ಕಿಂತಲೂ ತಿರುವಿಣ್ಣಹರ್, ಎಂಬುದೇ ಈ ಪಾಶುರದ ಭಾವ. ಹಳೆಯ ಹಾಗೂ ಹೊಸ ಯಾತ್ರಾಸ್ಥಳಗಳು ಉಭಯವೂ ಭಕ್ತರ ಉಪಯೋಗದಲ್ಲಿ ಶ್ರೇಷ್ಠತಮಗಳೇ. ಎಲ್ಲಾ ದಿವ್ಯ ಸ್ಥಳಗಳಲ್ಲೂ ಪರಮಪದವಾಸಿಗಳಾದ ಅನಂತಗರುಡವಿಷ್ವಕ್‌ಸೇನಾದಿಗಳು ಮುಕ್ತರೂ ವೇಷ ಮರೆಸಿಕೊಂಡು, ತಿರ್ಕಕ್, ಸ್ಥಾವರರಾಗಿ ಇಲ್ಲಿ ನಿತ್ಯವಾಸ ಮಾಡುತ್ತಿರುವುದೇ ಇದಕ್ಕೆ ಸಾಕ್ಷಿ. ಹಳಬರಿಗೂ ಪುಣ್ಯಕ್ಷೇತ್ರಗಳಲ್ಲಿ, ಸ್ವಾಮಿಯ ಹೊಸತನದ ಸಾನ್ನಿಧ್ಯ ಕಾಣುವುದು. ಹೊಸಬರಿಗೂ ಸ್ವಾಮಿಯ ಹಳೆತನದ ಬೇರು ಕಾಣುವುದು.

ಪಣ್ಡೆಲ್ಲಾವಮ್ = ಬಹಳ ಹಿಂದೆಲ್ಲಾ, ವೇಙ್ಗಡವಮ್, ಪಾಲ್ ಕಡಲ್, ವೈಹುನ್ದವಮ್, ಇವು ಮೂರನ್ನೂ, ಕೊಂಡು = ಸ್ವಾರ್ಥಪ್ರೀತಿಯಿಂದಲೇ ಸ್ವಾಮಿ ತನ್ನ ಪುರುಷಾರ್ಥಕ್ಕೆಂದೇ ಸ್ವೀಕರಿಸಿ, ಅಙ್ಗು = ಅಲ್ಲಲ್ಲಿ. ಉರೈವಾರ್ಕ್ಕು = ಸ್ವಯಂ ಉಲ್ಲಾಸದಿಂದ ನಿತ್ಯವಾಸಿಯಾದ ಸರ್ವೇಶ್ವರನಿಗೆ ಮುಂದೆ ಹೇಳುವುವೆಲ್ಲಾ. ಕೋಯಿಲ್ ಪೋಲ್ = ಹಿಂದೆ ಬಣ್ಣಿಸಿದವುಗಳಿಗೆಲ್ಲಾ ಸರಿಸಮಾನವಾದ ಅರಮನೆಗಳೇಸರಿ. ಯಾವುವು? ಎಂದರೆ, ವಳಂ ಕಿಳರುಮ್ = ವೃಕ್ಷಗಳು ಷಂಡಷಂಡಗಳಾಗಿ ಬೆಳೆಯುತ್ತಲೇ ಇರುವಂತಹ, ನೀಳ್ ಶೋಲೈ = ಎತ್ತೆತ್ತರವಾದ, ದಟ್ಟವಾದ ತೋಪುಗಳುಳ್ಳ, ವಣ್ = ಧಾರಾಳವಾಗಿ ಸ್ವಾಮಿಯ ಆರಾಧನಾ, ಧಾರಣಾದಿಗಳಿಗೆ, ಅಂಗಡಿಗಳಿಗೆ ಹೋಗದಂತೆ ತುಳಸೀ - ಹೂಗಳನ್ನು ಉಚಿತವಾಗಿ ಕೊಡುಗೈಗಳಿಂದ ನೀಡುತ್ತಲೇ ಇರುವ, ಪೂಮ್ = ತುಳಸೀ ಹಾಗೂ ನಾನಾ ವಿಧ ಸುಗಂಧ ಶಾಸ್ತ್ರೀಯ ಕುಸುಮಗಳು ಅರಳುತ್ತಲೇ ಇರುವ, ಕಡಿಹೈ = ಶೋಳಂಗಿಪುರಂ, ಇಳಂಕುಮರನ್ ತನ್ = ಯುವರಾಜನಿಗೆ ಪ್ರಧಾನವೇ. ತಮಿಳಿನಲ್ಲಿ, ಈ "ತನ್" ತಾನ್ ಎಂಬ ಶಬ್ದಗಳು, ಅದರ ಜತೆಗಿರುವ ಪದಗಳ ಅರ್ಥಗಳ, ಮುಖ್ಯತೆಯನ್ನು ತಿಳಿಸುವುವು, ರಸಿಕರು ಇದನ್ನು ಗಮನಿಸಬೇಕಾದ್ದು. ಉದಾಹರಣೆ, ದಶರಥ್ಥ ಕುಮರನ್ = ಎನ್ನುವುದಕ್ಕಿಂತ ದಶರದನ್ ತನ್‌ಕುಮರನ್ ದಾಶರಥಿರಾಮನೆಂಬ ಅರ್ಥವಷ್ಟೇ ಅಲ್ಲ. ಎಲ್ಲಾ ತಂದೆಯರಿಗೂ ಮಕ್ಕಳಾಗುತ್ತವೆ. **"ಪಿತರಂ ರೋಚಯಾಮಾಸ"** ೬೦೦೦ ವರ್ಷಗಳಿಂದ, ಎಷ್ಟೋ ಪುತ್ರಕಾಮೇಷ್ಟಿಗಳನ್ನು ಮಾಡಿದ್ದರೂ ಆಗೆಲ್ಲಾ ಮಕ್ಕಳಾಗಲಿಲ್ಲವಲ್ಲಾ! ಈಗೇನು ವಿಶೇಷ? ಬ್ರಹ್ಮೇಂದ್ರಾದಿ ದೇವತೆಗಳು, ಲೋಕವಿದ್ರಾವಣನಾದ ರಾವಣನ ಸಂಹಾರಕ್ಕೆ ಪ್ರಾರ್ಥಿಸಿದಾಗ, ತನಗೆ ಸರಿಯಾದ ತಂದೆಯಾರಾಗಬಹುದೆಂದು, ಯೋಗನಿದ್ರಾಪರವಶವಾಗಿ ಆಂ! ದಶರಥನೇ ಸರಿಯಾದ ಪಿತಾ! ಈ ಭಗವದ್ ರುಚಿ, ದಶರಥ ಚಕ್ರವರ್ತಿಗೇ ತಾನು ಕುಮಾರನಾಗಿ ಜನಿಸಬೇಕೆಂಬುದು, ಆಗ ಕೆರಳಿ ಬಂತು. ಅಂತೆಯೇ ಯಾವ ಯಾವ ಬೇರೆ ಬೇರೆ ಹೆಸರುಗಳಿಂದ ಕರೆದರೂ ಆಗದ ಸಂತಸ "ಚಕ್ರವರ್ತಿ ತಿರುಮಗನ್" ಎಂದರೆ ಆಗುವುದೆಂಬ

ಇಷ್ಟು ರಹಸ್ಯಗಳನ್ನಾದರೂ "ದಶರದನ್ ತನ್‌ಕುಮರನ್" ಎಂಬುದರೊಳಗಿರುವ "ತನ್" ಈ ಒಂದೂವರೆ ವರ್ಣ, ಸ್ಫುರಿಸುವಂತೆ ಮಾಡುವ ಶಬ್ದಶಕ್ತಿಯನ್ನು ಹೊಂದಿದೆ.

ತಮಿಳ್ ತಿರಳ್ ೩ - ೬೨

ವಿಣ್ಣಹರಂ ವೆ.ಃ.ಕಾ ದಿರಿ ತಿರೈನೀರ್ ವೇಜ್ಗಡಮ್ ಮಣ್ಣಹರಂ ಮಾಮಾಡ ವೇಳುಕ್ಕೈ, ಮಣ್ಣಹತ್ತ|
ತೆನ್ ಕುಡನ್ನೈ ತೇನಾರ್ ತಿರುವರಜ್ಗಮ್ ತೆನ್‌ಕೋಟ್ಟಿ ತನ್ ಕುಡಜ್ಜೈ ನೀರ್ ಏತ್ತಾನ್ ತಾಳ್‌ವು||

ಕನ್ನಡ ನೆರಳ್

ವಿಣ್‌ನಗರಂ ವೆ.ಃ.ಕಾ ಬಿರಿ ನೀರಲೆತೀರ್ದ ವೇಂಕಟಂ ಮಣ್‌ನಗರಂ ಮಾಮಹಲ್‌ಗಳ ವೇಳುಕ್ಕೈ - ಇಳೆಗಂದದ|
ತೆ೯ ಕುಡನ್ನೈ ಜೇನೇ ತುಂಬಿಹ ಸಿರಿರಂಗಂ, ತೆನ್‌ಕೋಟ್ಟಿಯೂರ್ ಕಾನ್ ಎಲ್ಲವ ಕೊಡುಗೈಯ್ಯಿಂ, ದಾನದಧಾರೆಯ ಕೊಳ್ ತಾಳ್ಮೆ!||

ಹಿಂದೆ ಹೇಳಿದವಷ್ಟೇ ಯಾತ್ರಾಸ್ಥಳಗಳಲ್ಲ. ವಿಣ್ಣಹರಂ ತಿರುವಿಣ್ ನಹರ್ ವೆ.ಃ.ಕಾ = ಕಂಚಿಯ ಯಥೋಕ್ತಕಾರಿ ಶೊನ್ನವಣ್ಣಂ ಶೆಯ್‌ದ್ ಪೆರುಮಾಳ್ - ವಿರಿತಿರೈನೀರ್ = ಹಿರಿಯಲೆ ಯೇಳುವ ತೀರ್ಥಗಳುಳ್ಳ, ವೇಜ್ಗಡಮ್. ಮಣ್‌ನಹರಂ ಭೂವೈಕುಂಠವೆನಿಸಿರುವ, ಮಾಮಾಡಮ್ = ಬೃಹದುನ್ನತಸಾಧಗಳುಳ್ಳ, ವೇಳುಕ್ಕೈ = ತಿರುವೇಳುಕ್ಕೈ ದಿವ್ಯದೇಶ. ಮಣ್ ಅಹತ್ತ = ಈ ಮಣ್‌ನೆಲದಲ್ಲೂ ಏನೇನೂ ಕೊರೆಯಿಲ್ಲದ, ದೇವಮಂದಿರವಾದ, ತೆನ್ ಕುಡನ್ನೈ = ತೆಂಕಣ ಕುಂಭಕೋಣ. ತೇನ್ ಅರ್ = ಮಧುಸ್ಯಂದಿ ಪ್ರಸೂನಗಳೂ, ಭೃಂಗಗಳೂ ಪೂರ್ಣಪುಷ್ಕಳವಾಗಿರುವ, ತಿರುವರಜ್ಗಂ = ಶ್ರೀರಂಗ, ತೆನ್‌ಕೋಟ್ಟಿ = ದಕ್ಷಿಣದ ಗೋಷ್ಠೀಪುರ ತಿರುಕ್ಕೋಟ್ಟಿಯೂರ್. ಇವೆಲ್ಲವೂ, ತನ್‌ಕುಡಮ್‌ಕ್ಕೆ = ಪರಾತ್‌ಪರನಾರೂ, ತನ್ನ ಸ್ವತ್ತುಗಳನ್ನು ತಾನು ಪಡೆಯಲು, ಬಲಿರಾಯನ ಮುಂದೆ ಭಿಕ್ಷೆ ಬೇಡುವ, ಅಷ್ಟೊಂದು ನಿರಹಂಕಾರಿ ವಿನಯ ಸಮ್ರಾಟನ, ಸರ್ವರಿಗೂ ಸರ್ವಫಲಗಳನ್ನು ಕೊಡುವ ಕೈಯ್ಯಿಂದ, ನೀರ್ = ಭೂದಾನ ಧಾರಾಜಲವನ್ನು, ಏತ್ತಾನ್ = ಸ್ವೀಕರಿಸಿದವನ, ತಾಳ್‌ವು = ತಾಳ್ಮೆಯ ಸೌಲಭ್ಯ ಸೌಶೀಲ್ಯಗಳನ್ನು ಪ್ರಕಾಶಪಡಿಸುವ ದಿವ್ಯಸ್ಥಾನಗಳೇ.

ತಮಿಳ್ ತಿರಳ್ ೩ - ೬೩

ತಾಳ್ ಶಡೈಯುಮ್ ನೀಣ್ ಮುಡಿಯುಮ್ ಒಣ್ ಮಳುವುಮ್ ಶಕ್ಕರಮುಮ್ ಶೂಳ್ ಅರವುಮ್ ಪೊನ್ನಾಣುಮ್ ತೋನ್ನುಮಾಲ್
- ಶೂಳುಮ್ - ತಿರಣ್ಡರುವಿ ಪಾಯುಮ್ ತಿರುಮಲೈ ಮೇಲ್ ಎನ್ನೈಕ್ಕು ಇರಣ್ಡುರುವುಮ್ ಒನ್ನಾಯ್ ಇಶೈನ್ದು||

ಕನ್ನಡ ನೆರಳ್

ತಾಳ್ ಪಿನ್‌ಜಡೆಯೂ, ತಲೆನೀಳ್ ಮುಡಿಯೂ ಒಳ್ ಪರಶುವೂ ಚಕ್ರವೂ ಸೂಳ್ ಸರ್ಪವೂ ಹೊನ್ ಸೂತ್ರವೂ ತೋರ್ಪುದಲಾ!|
ಪರಿತೋ ಝರಿಗಳು ಹಾಯುವ ಶ್ರೀಗಿರಿಮೆಲೆನ್ ತಂದೆಗೆ ಎರಡೂ ರೂಹೂ ಒಂದಾಗೊಪ್ಪಿಹುದೈ||

"ತಿರುಪತಿ ತಿಮ್ಮಪ್ಪ ತಾನೇ ಎಲ್ಲರ ಎಲ್ಲವುಗಳ ಒಡೆಯನೆಂಬುದನ್ನು", ತನ್ನ ಸಿರಿಮೂರುತಿಯಲ್ಲೇ ಈ ಹುಚ್ಚಪ್ಪ ಆಳ್ವಾರ್ ಶರಣರು ತೋರುತ್ತಿದ್ದಾರೆ! ಸಾಧಕರ ಚಿಹ್ನೆಯೂ ಸಿದ್ಧ ಪುರುಷೋತ್ತಮನ ಗುರುತೂ, ಒಂದೇ ದಿವ್ಯಮಂಗಳ ಮೂಲವಿಗ್ರಹದಲ್ಲಿ ಒಂದಕ್ಕೊಂದು ಅದೇನು ಒಪ್ಪಿದೆ!

ಶೂಳುಮ್ ತಿರಣ್ಡು = ಸುತ್ತಲೂ ಸಮೃದ್ಧವಾದ, ಅರುವಿ = ಗಿರಿಹರುವಿಗಳು, ಪಾಯುಮ್ = ಯಾವಾಗಲೂ ಜುಳುಜುಳು ಹರಿಯುತ್ತಲೇ ಇರುವ, ತಿರುಮಲೈ ಮೇಲ್ = ಈ ಶ್ರೀಶೈಲದ ಮೇಲೆ ಬಿಜಯ ಮಾಡಿರುವ, ಎನ್ನೈಕ್ಕು = ನಮಗೆಲ್ಲಾ ಪರಮೇಶ್ವರನಾದ ಶ್ರೀನಿವಾಸನಿಗೆ, ತಾಳ್, ಶಡೈಯುಮ್ = ಹಿಂದುಗಡೆ ಜೋಲಾಡುತ್ತಿರುವ ಜಟೆಯೂ, ಎಂದರೆ ಸಿದ್ಧಿಗಾಗಿ ಸಾಧನೆ ಮಾಡುವ ಸಾಧಕರಿಗೆ ಜಡೆ ಮೂಡಿ ಹೋಗುವಂತಹ, ಕೇಶಾದ್ಯಲಂಕಾರಗಳಲ್ಲಿ ವೈರಾಗ್ಯದ ಭಾವವಿರಬೇಕೆಂಬ ರಹಸ್ಯ. ಶಿವಪರಮವೈರಾಗ್ಯದಿಂದಲೇ ಶ್ರೀರಾಮಭಕ್ತನಾದುದು. **"ವೈಷ್ಣವಾನಾಂ ಯಥಾ ಶಮ್ಭುಃ"** ಎಂಬ ಶುಕ ಬ್ರಹ್ಮರ ಭಾಗವತವಚನದಂತೆ **ಪಾರ್ವತೀರಮಣ ವೈಷ್ಣವಾಗ್ರೇಸರ.** ತಾನೇ ಭಕ್ತನಾಗಿಯೂ ಭಕ್ತನವ್ಯನಾಗಿಯೂ ಇರುವ ಉಭಯವಮೂರ್ತಿ. ನೀಳ್ ಮುಡಿಯುಮ್ = ವೈಷ್ಣವ ಚಿಹ್ನೆಯಾದ ಉದ್ದನ ಕಿರೀಟವೂ ಸಿದ್ಧ ಪುರುಷೋತ್ತಮನಿಗೆ ಆ ಪುರುಷೋತ್ತಮತೆಯನ್ನು ನಿರಪವಾದವಾಗಿ ಸೂಚಿಸುವಂಥದು, ಒಳ್‌ಮಳುವುಮ್ = ಒಳ್ಳೆ ಹರಿತವಾದ ಪರಶೂ ಎಡಗೈಲಲ್ಲಿದ್ದರೆ, ಬಲಹಸ್ತದಲ್ಲಿ ಶಕ್ಕರಮುಮ್ = ಸುದರ್ಶನವೂ*, ಶೂಳ್ ಅರುವುಮ್ = ಸೊಂಟಕ್ಕೆ ಸುತ್ತಿಕೊಂಡಿರುವ ಸರ್ಪವೂ, ಪೊನ್ ನಾಣುಮ್ = ಹೊನ್ನಿನ ಜನಿವಾರವೂ,

ತೋನ್ನುಮ್ = ನನಗಿದೋ ಕಾಣಿಸಿಕೊಳ್ಳುತ್ತಿದೆ! ಉಭಯ ಲಕ್ಷಣಗಳೂ, ''ಈ ಸರ್ವಲಕ್ಷಣಲಕ್ಷಣ್ಯ''ನಲ್ಲಿ ಅದರೂ ಲಕ್ಷ್ಮೀವಾನ್! 'ಶ್ರೀ-ನಿವಾಸ' ಶರಣರಿಗೆ ನಾನಾ ಬಗೆ, ವಿಶ್ವರೂಪ ತೋರುತ್ತಾನೆ. ಸರ್ವಾಧಾರ ವಿಶ್ವರೂಪನಿಗೆ ಎಲ್ಲವೂ ಅನುರೂಪವೇ. ಉಭಯ ಲಿಂಗಗಳೂ, ಒನ್ನಾಯ್ = ಕೂಡಿ ಒಂದಾಗಿ, ಇಶೈನ್ದು = ಹರಿ ಹರರೂ, ಪರಸ್ಪರ ಒಪ್ಪುವಂತೆ! ಒಂದಕ್ಕೊಂದು ಎಷ್ಟು ಸಮರಸವಾಗಿದೆ ಎಂಬುದು ಈ ಪದದ ಭಾವ, ಸುಘಟಿತತ್ವ ಎಂಬ ಶ್ರೀಮೂರ್ತಿಯ ಒಟ್ಟು ಸೌಂದರ್ಯದ ವಿಶೇಷ.

ತಮಿಳ್ ತಿರಳ್ ೩ - ೬೮

ಪಾರ್ತ್ತ ಕಡುವನ್ ಶುನೈ ನೀರ್ ನಿಳಲ್ ಕಣ್ಡು ಪೇರ್ತ್ತೋರ್ ಕಡುವನ್ ಎನಪ್ಪೇರ್ನ್ದು - ಕಾರ್ತ|
ಕಳಙ್ಗನಿಕ್ಕು ಕೈ ನೀಟ್ಟುಮ್ ವೇಙ್ಗಡಮೇ, ಮೇನಾಳ್ ವಿಳಙ್ಗನಿಕ್ಕು ಕನ್ನೆರಿನ್ದಾನ್ ವೆರ್ಪ್ಪು||

ಕನ್ನಡ ನೆರಳ್

ಕಂಡೋರ್ ಕಪಿಗಡವ, ದೊಣೆನೀರೊಳು ತನ್‌ನೆರಳ್‌ಕಂಡು, ಬೇ ರೊಂದಾಗದ ಗಡವ! ಎಂದದರ್ ಮೇಲೆಸೆದು ಕೀಳ್‌ನೀರೊಳ ಕಳೆಕರಿ|
ಹಣ್ಣಿಗೆ, ತನ್ ಕೈ ನೀಡುವ! 'ವೇಂಕಟವೇ'' ದ್ವಾಪರಮೇಲ್‌ನಾಳ್ ಹಣ್ಣನೂ ಬೇಲದತರುವಿಗೆ ವತ್ಸವನೆಸೆದವನ್ ಗಿರಿಯು||

ಎಲ್ಲಾ ಬಗೆಯ ಜಂತು ಜಾತಗಳಿರಲಿ! ಮರ್ಕಟಗಳೂ, ಬಾಲ ಕೃಷ್ಣಾऽऽವತಾರದ, ಒಂದು ಸುಂದರವಾದ, ಅಂದರೆ ಬೇಲಾಸುರನಿಗೆ ವತ್ಸಾಸುರನನ್ನು ಎಸೆದೇ ''ಏಕ್‌ಮಾರ್ ದೋ ತುಕಡಾ'' ಎಂಬ ರಾಷ್ಟ್ರಭಾಷೆಯಾದ ಹಿಂದೀಗಾದೆಯಂತೆ ಈ ತಮಿಳ್ ಗಾಧೆಯಲ್ಲೂ, ಗಂಡು ಗಡವ ಒಂದು, ಹಣ್ಣನ್ನು ಎಸೆದುದರ ಅನುಕರಣವನ್ನು ಮಾಡುವ ಸಂನಿವೇಶ, ಈ ಹಾಡಿನಲ್ಲಿ, ಶುನೈನೀರ್ = ತಿರುಪತಿ ದೊಣೆಗಳ ಆ ಸ್ವಚ್ಛತೀರ್ಥಗಳಲ್ಲಿ, ಪಾರ್ತ್ತ = ಕನ್ನಡಿಯಲ್ಲಿ ಕಂಡಂತೆ ಕಂಡು, ಯಾವುದನ್ನು? ತನ್ನ ಕೈಯ್ಯಲ್ಲೇ ಹಿಡಿದಿರುವ ''ಕಾಡುಕಳೇ'' ಹಣ್ಣನ್ನು, ಪೇರ್ತ್ತು ಓರ್ ಕಡುವನ್ ಎನ ಪ್ಪೇರ್ನ್ದು = ಮತ್ತೊಂದು ಗಡವಕ್ಕೆ, ತನ್ನ ಪ್ರತಿಬಿಂಬವೆಂದರಿಯದೆ ಎಸೆದುಬಿಟ್ಟು! ನೀರ್ ನೆರಳಲ್ಲಿ ಕಂಡ ಹಣ್ಣಿನಾಸೆಗೆ, ಕಾರ್ತ ಕಳಂ ಕನ್ನಿಕ್ಕು = ಕರಿಕಪ್ಪನ ಹಣ್ಣಿಗಾಗಿ, ಅದು ತನಗೆ ಬೇಕೆಂದು, ನೀರಿನ ತನ್ನ ನೆರಳಿಗೇ, ಕೈ ನೀಟ್ಟುಂ = ಮಂಗ ತನ್ನ ಕೈಯನ್ನೇ ನೀಡುತ್ತಿರುವ, ಸಂನಿವೆಶದ ವೇಙ್ಗಡಮೇ ಮೇಲ್‌ನಾಳ್ = ದ್ವಾಪರ ಯುಗಾಂತ್ಯದ ಆ ದಿನದಲ್ಲಿ, ವಿಳಂಕನಿಕ್ಕು = ಕಪಿತಾऽಸುರನಿಗೆ, - ಬೇಲದಲ್ಲಿ ಓರ್ವ ಅಸುರ ಅಡಗಿಕೊಂಡಿದ್ದನಷ್ಟೆ! - ಕನ್ನು = ತನ್ನ ಮಂದೆಯಲ್ಲೇ ಕಳ್ಳವೇಷದಿಂದ, ಒಂದು ಕರುವಿನ ರೂಪವನ್ನಾಂತವನನ್ನೇ. ಎರಿನ್ದಾನ್ = ಕವಣೆಯನ್ನಾಗಿಸಿ, ಮೇಲ್ ಬೀಸಿಯೆಸೆದವನ, ವೆರ್ಪು = ಪರ್ವತವು. ಈ ತಿರುಪತಿಯೇ. ದೇವದೇವ ಬಾಲಕೃಷ್ಣನ, ಪ್ರತ್ಯಕ್ಷ ಹಾಗೂ ಸದ್ಯಾರಕ ಕರಸ್ಪರ್ಶದಿಂದ ಎರಡರ ಅಸುರತ್ವ ನೀಗಿದ ಮೇಲೆ, ಅವನೇ ತಿಮ್ಮಪ್ಪನಾಗಿ ಗಿರಿಗೇ ಬಂದಿರುವಾಗ, ಯಾವ ವಸ್ತು ತಾನೇ ತಿರುಮಲೆಯಲ್ಲಿ ಪ್ರಾಕೃತವಾಗಿರಲು ಸಾಧ್ಯ? ಎಲ್ಲವೂ ದಿವ್ಯವೇ! ಎಲ್ಲಾ ಪ್ರಾಣಿಗಳ ಬಗೆಬಗೆಯ ರಸಾನುಭವಗಳನ್ನೂ ಅವು ಭ್ರಾನ್ತಿರೂಪಗಳಲ್ಲೇ ಹಲವರಿಗೆ ಇದ್ದರೂ! ಈ ಸಂತರು ಅವವುಗಳನ್ನು ಭಗವತ್ ಸಂಬಂಧಿಗಳನ್ನಾಗಿಯೇ ನೋಡುತ್ತಾರೆ. ಈಶ್ವರೀ ಕೃಪೆಯೊಂದರಿಂದಲೇ ಈಶ್ವರೀ ಭೂಮಿಕೆಗೆ ಏರಿ ಸ್ಥಿರವಾಗಿರುವ ಇಂತಹ ಆಳ್ವಾರ್ ಶರಣರಿಗೆ, ಎಲ್ಲವೂ ''ರಸೋವೈಸಃ'' ಎಂಬ ''ಪರಂಬ್ರಹ್ಮ''ವಾಗಿಯೇ ತೋರುವುದು ಸಹಜ. ತೀರ್ಥದ ನೀರಿನ ಸ್ವಚ್ಛತೆ ಇಲ್ಲಿನ ಧ್ವನ್ಯರ್ಥ! ಗಡವನ ಅರಿವು, ಅನ್ಯಥಾ ಜ್ಞಾನವಿರಬಹುದು. ಆದರೆ ಅದೂ ಯಥಾರ್ಥ ಜ್ಞಾನವೇ! ತಿಮ್ಮಪ್ಪನ ಸಾನ್ನಿಧ್ಯದಿಂದ, ಭ್ರಾನ್ತಿಯೆಂಬುದೂ, ನಿಜದರಿವು! ಈ ಆಳ್ವಾರ್‌ರ ರಹಸ್ಯವನ್ನೇ ಶ್ರೀ ಭಾಷ್ಯಕಾರರು, **''ಯಥಾರ್ಥಂ ಸರ್ವ ವಿಜ್ಞಾನಮ್''** ಎಂಬ ಅಪೂರ್ವ ಪ್ರಮೇಯವನ್ನಾಗಿ ಸಂಶೋಧಿಸಿ **''ಜ್ಞಾನದಲ್ಲಿ ದೋಷ ಇಲ್ಲ. ಅದನ್ನು ಗ್ರಹಿಸುವ, ಸಾಮಗ್ರೀ ದೋಷವನ್ನು, ಜ್ಞಾನಕ್ಕೆ ಆರೋಪಿಸುತ್ತೇವಷ್ಟೆ!''** ಎಂದಿದ್ದಾರೆ.

ತಮಿಳ್ ತಿರಳ್ ೩ - ೬೯

ವೆರ್ಪ್ಪೆನ್ನು ವೇಙ್ಗಡಮ್ ಪಾಡುಮ್ ವಿಯನ್ ತುಳಾಯ್ ಕರ್ಪ್ಪೆನ್ನು ಶೂಡುಮ್ ಕರುಙ್ಗುಳಲ್ ಮೇಲ್, ಮರ್ಪೊನ್ನ|
ನೀಣ್ದತೋಳ್ ಮಾಲ್ ಕಿಡನ್ದ ನೀಳ್ ಕಡಲ್ ನೀರಾಡುವಾನ್ ಪೂಣ್ದ ನಾಳಿಲ್ಲಾಮ್ ಪುಹುಮ್||

ಕನ್ನಡ ನೆರಳ್ ೩ - ೬೯

ಗಿರಿಯೆನು ವೇಂಕಟಮೇ ಪಾಡುಗೆ! ಹಾ! ತುಳಸೀ ತುರುಬಿಗೆ ಸೂಡುಗೆ! ಕಪ್ಪನ ಕೂದಲ ಜಡೆಮೇಲ್ - ಮಲ್ಲಾರ್ದನ |
ನೀಳ್ ದೋಳ್ ಮುಗುದನ್ ಪವಡಿಹ ನೀಳ್‌ಗಡಲ್ ನೀರಾಡಲ್ ಕೀಳ್ ನಾಳ್ ಮುಂಮುಂಜಾನೆಯೇ ಹೋಗುಗ್ಯೆಯ್ಯೆ! ||

ಈ ಹುಚ್ಚಾಳ್ವಾರರಿಗೆ, ಈ ಒಂದು ಅವಸ್ಥೆಯಲ್ಲಿ, ಪಾವನ ಸುಂದರಾಂಗನ ವಿರಹತಾಪ ಮಿತಿಮೀರಿದಂತಾಗಿದೆ. ಈ ಕಾಲದ ಶಿಕ್ಷಿತ ಜನಗಳಿಗೂ, ಸಮಾಜದ ಹೆಚ್ಚು ಮಂದಿಗೂ ಈ "ದೇವರ ವಿಶ್ಲೇಷ" ಎನ್ನುವುದು ಅರ್ಥವಾಗದಿರಬಹುದು ನಿಜ. ಇದರ ಬಗೆಗೆ ಶರಣ ಸಾಹಿತ್ಯ ವಿವೇಚಕರು ಅಳವಾಗಿ ಹೀಗೆ ಅಭಿಪ್ರಾಯ ಪಡುತ್ತಾರೆ.

ದೇವರ ಸ್ವರೂಪ, ನಿರಾಕಾರವೇ. ಅತನ ಮೂರ್ತಿ ಸಹ, ಬೇರೆ ಬೇರೆಯೇ. ನಮಗೂ ನಿಮಗೂ ಸ್ಥೂಲವಾಗಿ ಕಾಣುವ ವಸ್ತುಗಳ ಆಕಾರದಂತಲ್ಲ. ಆದರೂ ಭಕ್ತಿಮಾರ್ಗ ಬಯಸಿದಂತೆ, ಆಕಾರ ತಳೆದು ಬರುತ್ತಾನೆ. ಭಕ್ತರ ಆಸೆಯ ಪೂರ್ತಿಗಾಗಿ, ಇದು ಎರಡು ಬಗೆಯಲ್ಲಿ ಕಾಣುವ ಪ್ರತಿಮೆ, ಚಿತ್ರ, ಅಥವಾ ಅವರವರು ಇಷ್ಟ ಪಡುವ ನಾನಾ ಗುರುತುಗಳು, ಶಬ್ದ, ದೀಪ, ಕನ್ನಡಿ, ಪುಸ್ತಕ, ಸಿಲುಬೆ, ಚಂದ್ರಕಲೆ ನಕ್ಷತ್ರದ ಹಸಿರು ಬಟ್ಟೆ, ಸ್ತೂಪ, ದರ್ಗಾ, ಲೆಕ್ಕವಿಲ್ಲದಷ್ಟು. ಈ ಆಳ್ವಾರ್ ಶರಣರಿಗೆ, ಅಂದು ರಾತ್ರಿ ತಿರುಕ್ಕೋವಲೂರಿನಲ್ಲಿ, ಉಳಿದೆರಡು ಆಳ್ವಾರ್‌ಗಳು, ವ್ಯಾಪಕ ಪ್ರೇಮದ ಹಣತೆ ಹಚ್ಚಿದಾಗ, ಈ ಪೇಯಾಳ್ವಾರ್‌ರರಿಗೆ ಆದ ಸಾಕ್ಷಾತ್ಕಾರ, "ತಿರು"ವಿನಿಂದ ಅಂದರೆ, ಚಕ್ರಧಾರಿಗೆ, ಶರಣರಿಗೆ ಅತ್ಯಂತ ಸನಿಯದ **"ಭಕ್ತ ಶರಣೆ ದಾಸಿ ಶಿಷ್ಯಾ ಮಹಾಲಕ್ಷ್ಮಿ"**ಯಿಂದಲೇ ಆರಂಭವಾಗಿ ಆಗುತ್ತಾ ಬಂದಿದೆ. ಅದರ ಭಿನ್ನ ಭಿನ್ನ ಸೂಕ್ಷ್ಮಗಳನ್ನೆಲ್ಲಾ ಅವರೇ ಒಳಗಾಢಾನುಭಾವದಿಂದ, ೬೮ ಹಾಡುಗಳಿಂದ ಹಾಡಿದರು.

ಇವೆಲ್ಲವೂ ಕೇವಲ ಮಾನಸಿಕ ಒಳದರ್ಶನ, ಅಷ್ಟರಿಂದಲೇ ತೃಪ್ತಿ ಪಡರು, ಹೊರಗಿನಿಂದಲೂ ಸಂಸೇವಿಸಬೇಕು! ಅದೂ ಈಗಲೇ! ಆದರೆ ಸ್ವಾಮಿ, ಈಡೇರಿಸನು. ಈ ತುಡಿತ, ಮಿಡಿತಗಳನ್ನು ವ್ಯಕ್ತೀಕೃತ (Personification; ಪರ್‌ಸಾನಿಫಿಕೇಷನ್) ಮಾಡುವುದೇ "ಮಗಳು" ಎಂಬ ಶರಣರ, ಉತ್ತಮ ಪವಿತ್ರ ವಾಙ್ಮಯಗಳ ಪರಿಭಾಷೆ. ರಾಮಕೃಷ್ಣ ಪರಮಹಂಸರ "ರಾಧಾಭಾವ" ಅಕ್ಕಮಹಾದೇವಿಯ, "ಕಣ್ಣಿನ ಬರ!" ಇವುಗಳನ್ನು ಪಾಠಕರು ಸ್ವಲ್ಪ ನೆನಪಿಸಿಕೊಂಡರೆ ಈ ಘಟ್ಟ, ಸುಲಭವಾಗಿ ಅರ್ಥವಾಗುತ್ತದೆ. ಆದರೂ ಈ ತಮಿಳ್ ಆಳ್ವಾರ್‌ಗಳ ಆಳ ಇನ್ನೂ ಅಂತರತಮಕ್ಕಿಳಿದು, ಲೌಕಿಕ ಬಾಹ್ಯಗಳಾದ ವಾಕ್ - ಕಾಯಗಳೆಲ್ಲವೂ ಸ್ವಾಮಿಯೇ ಎಂಬ "ಸತೀ" ಭಾವ. **"ಆತ ಪತಿ. ಶರಣ ಸತಿ! ಆಗ ತಡೆಯುವುದೇ ತಾಯಿ"!** ಈ ತಾಯಿಯ ಭಾಷೆ ಈ ೬೯ನೇ ಪಾಶುರದ ಭಾವದಿಂದ ಸ್ಪಷ್ಟಪಡುವುದು. **"ತಾಯಿ, ಮಗಳನ್ನು ಸತಾಯಿಸುತ್ತಿರುವ ಅಳಿಯಂದಿರಿಗೆ ಛಿಮಾರಿ ರೂಪದಲ್ಲಿ ಹೇಳುತ್ತಾಳೆ!"**

ವೆರ್‌ಪ್ಪು = ಜನರಿಗೆ, ಸಾಮಾನ್ಯ "ಬೆಟ್ಟ"ವಾಗಿ ಕಾಣುವುದನ್ನು ಈಗ ನನ್ನ ಮಗಳು, ವೇಙ್ಕಡಮ್ = ತಿರುಪತಿ ತಿರುಮಲೈಯೇ! ಎನ್ನು = ಎಂದು, ಪಾಡುಮ್ = ಹಾಡುವಳಪ್ಪಾ! ವಿಶಿಷ್ಟ ವಿರಹರಾಗದಲ್ಲಿ. ಮತ್ತೊಂದು ಭಾವವೆಂದರೆ, ಈ ಪಾಶುರ ಆಳ್ವಾರರ ಪರೋಪದೇಶರೂಪವೂ ಆಗುತ್ತದೆ ಆಗ, ಪಾಡುಮ್ = ನೀವೆಲ್ಲಾ "ವೇಂಕಟಗಿರಿ"ಯನ್ನೇ ಕುರಿತುಹಾಡಿರಿ. ನಾಡಿನ ಈ ಹೊರ ಹೂವುಗಳು ಈಕೆಗೆ ಬೇಡವಂತೆ. ಕರುಮ್ ಕುಳಲ್ ಮೇಲ್ = ಬಲು ನೀಲ ಮೆದು ಹಾಗೂ ಅಂದವಾದ ತನ್ನ ಕೇಶಪಾಶ, ಜಡೆಯ ಮೇಲೆ, ವಿಯನ್ ತುಳಾಯ್ = ಅದ್‌ಭುತವಾದ ತೊಳಸಿಯೊಂದನ್ನೇ, ಶೂಡುಮ್ = ಸೂಡಬೇಕೆನ್ನುವಳು, ಕರ್‌ಪ್ಪು = ಪಾತಿವ್ರತ್ಯ ಧರ್ಮವೆಂದು ಅದನ್ನೇ ಮುಡಿಯುವುದು. ಓ ಭಕ್ತರೇ ನೀವೂ "ಸ್ವರೂಪಪ್ರಾಪ್ತ"ವೆಂದು ತುಳಸಿಯನ್ನೇ ಶಿರಸಾವಹಿಸಿ, ಮೂಸಿ, ಅಗಿದು ತಿನ್ನಿರಪ್ಪಾ! ತುಳಸಿ, ಆರೋಗ್ಯಕ್ಕೆ ಅಮೃತ! **'ತುಳಸಿ ಅಮೃತಜನ್ಮಾsಸಿ'**, ಮಲ್ = ಜಟ್ಟಿಗಳೆಂಬ ಮದಮಾನಗಳನ್ನು, ಪೊನ್ನ = ಕುಟ್ಟಿಹಾಕುವುದರಲ್ಲಿ ಸಮರ್ಥವಾದ, ತೋಳ್ = ಸುಂದರ ಬಾಹುಗಳುಳ್ಳ, ಮಾಲ್ = ನಮ್ಮಲ್ಲಿ ಅತಿವ್ಯಾಮೋಹಪಡುವ ಓ ದೇವಾ! ನಾನು, ಕಿಡನ್ವ = ಮಲಗಿರುವ, ನೀಳ್ ಕಡಲ್ = ಉದ್ದಗಲದ ಕ್ಷೀರಾರ್ಣವದಲ್ಲಿ, ಪೂಣ್ಣನಾಳೆಲ್ಲಾಮ್ = ಸೂರ್ಯೋದಯಕ್ಕೆ ಮುಂಚೆ ಪಂಚೋಷಃ ಕಾಲದಲ್ಲೇ, 'ಶಿತ್ತಮ್ ಶಿರುಕಾಲೇ'. 'ಬೆಳ್ಳಂಬೆಳಗಿನ ಜಾವದೊಳೇ. ನೀರಾಡುವಾನ್'. ಪುಹುಂ = ಸಖಿಯರೊಡನೆ ಜಲಕ್ರೀಡೆಯಾಡಲು, ನಿನ್ನನ್ನು ಮುನಿಸಿನಿಂದ ಬಿಟ್ಟೇ! ಮುಳುಗಾಡಲು ಹೋಗಿಯೇ ಬಿಡುವಳಪ್ಪಾ! ಭಕ್ತ ಸಮಾಜದವರೇ! ಹೊರಡಿರಿ. ಇಲ್ಲಿಯವರಿಗೂ, ಆಳ್ವಾರ್, ತಾನಾಗಿ ಆಡಿದ ಭಾವ ಬಂದಿತ್ತಲ್ಲಾ, ಈ ಒಂದು ಹಾಡಿನಲ್ಲಿ ಮಾತ್ರ 'ಅನ್ಯಾsಪದೇಶಶೈಲಿ!' ೭ನೆಯ ಹಾಡಲ್ಲೂ, ಶರಣರ ಸಾಮಾನ್ಯಾsವಸ್ಥೆಯಿದೆ. ಇದು ಈ ಪ್ರಕರಣಕ್ಕೆ ಸರಿಹೊಂದುವುದು ಹೇಗೆ? ನಾಯಿಕಾಭಾವ ಏರಲು ವಿವರಣೆಯೇನು?

ಟಿಪ್ಪಣಿ :-

(ಆಳ್ವಾರರುಗಳ ಜ್ಞಾನ ಪರ ದೈವದೊಂದರಿಂದಲೇ ದತ್ತ. ಸ್ವ ತಪ್ಪೋಲಬ್ಧವಲ್ಲ. ಬದ್ಧ ಚೇತನರ ಅರಿವು ಸ್ವಬುದ್ಧ್ಯಧೀನವಾಗಿರುತ್ತದೆ. ಈ ಹುಟ್ಟು-ಸಾವಿನ ಬಂಧನದಿಂದ ಮುಕ್ತಿ ಪಡೆಯುವ ಆಸೆ ಹುಟ್ಟಿದರೆ ಅವರೇ ಮುಮುಕ್ಷುಗಳು. ಈ ಬದ್ಧ 'ಮುಮುಕ್ಷು'ಗಳನ್ನು ಮೀರಿದ ತೀವ್ರ ಸಂವೇಗಿಗಳಿಗೆ, ಕರುಣಾಳುವಿನ ಮೇಲ್ ಮಟ್ಟಿದ, ವಿಶೇಷ ಕೃಪಾರಶ್ಮಿಯೇ, ಅದೂ ಅಪ್ರಾರ್ಥಿತವಾಗಿ ತಾನಾಗಿಯೇ ಬೀಳಬೇಕು. ಇದು ಎಲ್ಲಾ ಕಾಲದೇಶಗಳ ಸರ್ವಸಂತರಲ್ಲೂ, ಕಂಡು ಬರುವ ಸಮಾನಾಂಶ.)

(ಯೇಸು ಕುಮಾರ, ಕುರಿಹಟ್ಟಿಯಲ್ಲಿ ಹುಟ್ಟಿದ. ಅವನಿಗೆ ಸ್ವಂತ ಬಂಡವಾಳವೇನಿತ್ತು? ಅನಕ್ಷರಸ್ಥರಾದ ಮಹಮದ್ ಅವರಿಗೆ, ಏನು ವಿದ್ಯೆಯಿತ್ತು? ಕ್ರಿಸ್ತನ ಶಿಷ್ಯರೆಲ್ಲರೂ ಕೇವಲ ಕಸಬುದಾರರೇ ಹೊರತು ವಿದ್ಯೆಯಲ್ಲಿ ಸೊನ್ನೆಯವರೇ. "ನ ಅಯಮಾತ್ಮಾ ಪ್ರವಚನೇನ ಲಭ್ಯಃ ನ

ಮೇಧಯಾ ನ ಬಹುನಾ ಶ್ರುತೇನ! ಯಮೇವ ಏಷ ವೃಣುತೇ ತೇನ ಲಭ್ಯಃ! ತಸ್ಯೈಷ ಆತ್ಮಾ ವಿವೃಣುತೇ ತನೂಂಸ್ವಾಮ್" ಈ ಉಪನಿಷತ್ತಿನ ಸತ್ಯವೇ ಪರಮ ಸತ್ಯ. "ನೀನೊಲಿದರೆ ಕೊರಡು ಕೊನರುವುದಯ್ಯಾ!" ಇದೇ ಈ ಆಳ್ವಾರ್ ಭೂಮಿಕೆ! ಈ ಪಾಶುರದಲ್ಲಿ ಅತ್ಯಂತ ಗಾಢತಮವಾಗಿ ಬಂದಿದೆ.)

ಇಂತಹ ಶರಣರು, ದೇವರು ಅನುಗ್ರಹಿಸಿರುವ ಪ್ರಜ್ಞಾವಿಶೇಷದಿಂದ ಹಾರ್ದಿಕತೆಯಿಂದ ಆ ಶ್ರೇಷ್ಠವಸ್ತುವನ್ನು ತಮ್ಮ ತಂದೆಯಂತೆ ಕಂಡು ತಾವೆಲ್ಲಾ ಅತನ ಸಂತಾನವೆಂತಲೂ ದೃಢವಾಗಿ ಭಾವಿಸುತ್ತಾರೆ. ನಮ್ಮನ್ನೆಲ್ಲಾ ಕಾಪಾಡುತ್ತಿರುವವನೂ ಅತನೇ. ನಾವೆಲ್ಲಾ ಅವನ ಸೇವಾಪರರು! ಇದಕ್ಕೂ ಮೇಲೆ ಅತನೇ "ಭರ್ತಾ"! ನಾವೆಲ್ಲಾ "ಭಾರ್ಯಾ ಪ್ರಾಯರು" ಕೇವಲ ಶಾರೀರಕ ಪತಿಪತ್ನೀ ಭಾವವಲ್ಲ. ಆತ್ಮ - ಪರಮಾತ್ಮರಿಗೆ ನಿಜಕ್ಕೂ ಅಧ್ಯಾತ್ಮದ ಉಚ್ಚತಮ ಸಂಬಂಧವೆಂದರೆ ಇದೇ. ಈ ನಿಷ್ಠೆಯ ಸಂಬಂಧ ಜ್ಞಾನವೇ ಈ ಆಳ್ವಾರರಲ್ಲಿ ಈಗ ಉಮ್ಮಳಿಸಿದೆ. ಉಳಿದ ೫ ಸಂಬಂಧಗಳು ಕೆಳಮೊಗವಾಗಿವೆ. ಭೋಗಿಸುವವನೂ ಅವನೇ. ನಾವೆಲ್ಲಾ ಅವನಿಗೆ ಭೋಗ್ಯರಷ್ಟೆ. ಅವು ಯಾವುವೆಂದರೆ, ಎಲ್ಲಾ ಜ್ಞಾನವನ್ನೂ ನಾವು ತಿಳಿಯಲಾರೆವಷ್ಟೆ. ಸರ್ವಜ್ಞ ಓರ್ವನೇ! ನಾವೆಲ್ಲರೂ ಅತನ ಅರಿವಿಗೆ ಬರಬಹುದಾದ "ಜ್ಞೇಯರೇ" ಹೊರತು, 'ಜ್ಞಾತಾ' ಆಗಲಾರೆವು. ಇಲ್ಲೆಲ್ಲಾ ಜೀವಾತ್ಮರು ಇದ್ದರೂ ಇಲ್ಲದ ಲೆಕ್ಕ! ಈ ಶೂನ್ಯಭಾವವೇ ಗಟ್ಟಿಯಾದುದು. ಒನೆಯದು ಜೀವ -ಪರಮಾತ್ಮರ ಸಂಬಂಧ, ನಾವೆಲ್ಲಾ, ಅತನ ಸ್ವತ್ತು. ಅತನೇ ಸ್ವಾಮಿ, ನಾವೆಲ್ಲಾ ಆ ಹಿರಿದಾದುದರ ಆಸರೆಯಲ್ಲಿರುವ ಅಣುಗಳಷ್ಟೇ! **"ಅವನೇ ಸರ್ವಾSSಧಾರ ನಾವೆಲ್ಲಾ ಆತನಿಗೆ ಆಧೇಯ ಶರೀರದಂತಷ್ಟೆ. ಆತನೇ ಸರ್ವರಿಗೂ, ಸರ್ವಕ್ಕೂ 'ಶರೀರಿ-ಆತ್ಮಾ-ಪರಮಾತ್ಮಾ'. ಆತನಿಗೆ ಬೇರೋರ್ವ ಪರಮನಿಲ್ಲ. ನಾವೆಲ್ಲಾ ಅವನಲ್ಲಿಯೇ ಅಡಗಿರುವ ವಿಶೇಷಣಗಳು. ಸರ್ವವಿಶೇಷ್ಯನೂ ಆತನೇ".** ಈ ೯ ವಿಧದ ಸಂಬಂಧವೇ 'ಸಖಿ'! ಅವನೇ ನಮ್ಮ ಭಾಗದ ಸಾಧಕ. ಸಾಧಕರು ನಾವಲ್ಲ. ಅಂದರೆ ಅತನೇ ಎಲ್ಲಕ್ಕೂ ಉಪಾಯ! **"ಈ ದೃಢವೇ ಜಗತ್ತಿನ ಸರ್ವ ಜಾನಪದ ಸತ್ ಸಾಹಿತ್ಯಗಳಲ್ಲಿ, ಒಳಹೊಕ್ಕು ನೋಡಿದಾಗ ಕಾಣಬಹುದಾದ, ಸಿದ್ಧೋಪಾಯದಾರ್ಢ್ಯವೇ ತಾಯಿ".**

*ಅ-ಉ-ಮ್ = ಓಮ್. ಇಂತಹ ಸರ್ವ ರಕ್ಷಕನಿಗೇ, ಸರ್ವವ್ಯಾಪಿಗೇ ಮೇಲೆ ಹೇಳಿದವುಗಳೆಲ್ಲಾ ಇಲ್ಲಿ ವಿವಕ್ಷಿತ. ಮ್ = ಈ ಜೀವಾತ್ಮರು. "ಉ" ಎಂದರೆ ಒತ್ತಿ ಹೇಳುವಿಕೆ, ಬೇರೆ ಯಾರಿಗೂ ಈ ನವವಿಧ ಸಂಬಂಧ ಇಲ್ಲ. ಆಳ್ವಾರ್‌ಗಳದು ಇನ್ನೊಂದು ರಹಸ್ಯ. ನಾಮರೂಪಧಾರಿಗಳಾದ ನಮಗೆ, ಸರ್ವೇಶ್ವರನೂ ಕಾಣುವಂತೆಯೇ ಅತ ನಮ್ಮೆಡೆಗೆ ಬರಬೇಕು ಇದೊಂದು ಬವಣೆ.

ತಮಿಳ್ ತಿರಳ್ ೩ - ೭೦

ಪುಹುಮದತ್ತಾಲ್ ವಾಯ್ ಪೂಶಿ ಕೀಳ್ ತಾಳ್ನ್ದ, ಅರುವಿ ಉಹು ಮದತ್ತಾಲ್ ಕಾಲ್ ಕಳುವಿ ಕ್ಕೈಯ್ಯಾಲ್ |
ಮಿಹುಮದತ್ತೇ ವಿನ್ದ ಮಲರ್ ಕೊಣ್ದು ವಿರಲ್ ವೇಜ್ಗಡವನ್ನೈಯೇ ಕಣ್ದು ವಣಙ್ಗುಮ್ ಕಳಿರು||

ಕನ್ನಡ ನೆರಳ್

ಜುಳು ಮದದಿಂ ಬಾಯ್ ಪೂಸಿ ಕೀಳ್ ತಾಳ್ನ್ದ, ಹೊಳಿಪೋಲ್ ಬಲುಸುರಿಮದದಿಂ ಪದ ತೊಳೆದು ಕರದಿಂ ಮಾಮದ ಜೇನ್|
ಬಿರಿ ಮಲರ್ ಕೊಂಡದ್ಭುತವರಿವೀಯುವ ವೇಂಕಟನನ್ನೇ ಪರಿಕಿಸಿ ಬಾಗುವುದಾನೆ||

ಪೇಯಾಳ್ವಾರ್ರಿಗೆ 'ಅನುಕೂಲ್ಯಸ್ಯ ಸಂಕಲ್ಪಃ' ಎಂದರೆ ನಾವು ಯಾವೊಂದು ಬಗೆಯ ವಿರೋಧವೂ ಇಲ್ಲದಂತೆ ಒಳ್ಳೆಯ ಎಚ್ಚರಿಕೆಯಿಂದಿರುವುದು, ಅದಕ್ಕೆ ತಕ್ಕಂತೆ ಜೀವನ ಚರ್ಯೆಯನ್ನೂ ದೃಢವಾಗಿಸಿಕೊಳ್ಳುವ ಪ್ರತಿಜ್ಞೆ ಮಾಡುವುದು. ಅವುಗಳು ಆಗ ನಮ್ಮನ್ನೂ 'ಅನುಕೂಲ'ವಾಗಿಯೇ ನೋಡುವುವು. **"ಮಿತ್ರಸ್ಯ ಚಕ್ಷುಷಾ ಪ್ರೇಕ್ಷೇ"** ಸರ್ವತ್ರಮೈತ್ರೀ ದೃಷ್ಟಿ ನಮ್ಮಲ್ಲಿ ಮೊದಲು ಭದ್ರವಿದ್ದರೆ, ಎಲ್ಲರೂ ಎಲ್ಲರ ಮಿತ್ರರೇ ಆಗಿ ಬಿಡುತ್ತಾರೆ. 'ಅಹಿಂಸಾ ಪ್ರತಿಷ್ಠಾಯಾಂ ವೈರತ್ಯಾಗಃ' ಅರ್ಧಂಬರ್ಧ ಅಂದರೆ ಅವರು ಶತ್ರುತ್ವವನ್ನೇ ಸಾಧಿಸುತ್ತಿರುವಾಗ, ನಾವೂ ಅವರಂತೆಯೇ ಮುಯ್ ತೀರಿಸಿಕೊಳ್ಳುವುದು, 'ದುಷ್ಕಲ್ಪ' ಸಮ್ಯಕ್ ಕಲ್ಪವಲ್ಲ. ತ್ಯಾಗ, ತಾಳ್ಮೆಗಳು ಬಹಳ ಬೇಕು (He lives allone who waits allone). ಇದೀಗ ಆಸ್ತಿಕತೆಯ ಪರೀಕ್ಷೆ. ಇತರರು ಹೇಗೇ ಇರಲಿ, ನಾವು ನಮ್ಮ "ಸರ್ವಾನುಕೂಲ್ಯ" ಭಾವವನ್ನು ಬಿಟ್ಟು, ಅವರಿಗೇ ಗುಲಾಮರಾಗಬಾರದು. ಎಲ್ಲೆಲ್ಲೂ ಶುಭದರ್ಶನವನ್ನೇ ತಾವು ಮಾಡುವ ಪರಿಪಾಟಿ ಈ ಪ್ರಪನ್ನಾSಗ್ರೇಸರಿಗೆ ಸಹಜವಾಗಿಯೇ ದಕ್ಕಿದೆ. ಕಾಡಾನೆಗಳ ಸ್ವಭಾವ, ಅವುಗಳ ಜೀವನ ಚರ್ಯೆ ಎಲ್ಲದರಲ್ಲೂ ಅವು ತಿರುಪತಿಯ ನಮ್ಮಪ್ಪನಿಗೆ ಕೈಂಕರ್ಯ ಮಾಡುತ್ತಿವೆಯೆಂದೇ ಇವರ ಭಾವ! ಭಗವಂತನಿಗೆ ಅನುಕೂಲವಾದ ವೃತ್ತಿಗಳೇ ಜಗತ್ತಿನ ಸರ್ವೋದ್ಯೋಗಗಳೂ. ಎಲ್ಲಾ ಭೂತಗಳ ಪುಣ್ಯಪಾಪಗಳನ್ನು ತಾವು ತಾಯಿಯಂತೆ ಅತುಕೊಳ್ಳುವ ಮಾತೃಹೃದಯ ಶರಣರದೆಲ್ಲಾ. **"ಓ! ತಂದೇ! ನನ್ನನ್ನು ಸಿಲುಬೆಯಲ್ಲಿ ಏರಿಸಲು ಅವರು ತೊಡಗಿರುವುದರ**

* ಪಿತಾ ಚ ರಕ್ಷಕಶ್ಚೇಷೇ ಭರ್ತಾ ಜ್ಞೇಯೋ ರಮಾಪತಿಃ |
ಸ್ವಾಮ್ಯಾಧಾರೋ ಮಮಾತ್ಮಾ ಚ ಭೋಕ್ತಾಚಾದ್ಯಮನೂದಿತಃ ||
ಅದ್ಯಮನು = ಅದ್ಯಮಂತ್ರ 'ಓಮ್' ಅದರದೇ ವಿವರಣೆಯಾದ 'ಓಮ್ ನಮೋ ನಾರಾಯಣಾಯ', ಈ ತೆರದ ಮಂತ್ರದಿಂದ ನವವಿಧ ಸಂಬಂಧದ ಅರಿವಾಗುವುದು.

ಬಗೆಗೆ ಅವರಿಗೆ ಪಾಪ! ಗೊತ್ತಿಲ್ಲ. ಕರುಣಾಳೋ! ಅವರನ್ನು ಮನ್ನಿಸಯ್ಯಾ! "ನಿಂದಕರು ಇರಬೇಕು ಕೊಂಡೊಯ್ದು ಕೊಲುವವರ ಕೊಂಡಾಡುತಿರಬೇಕು. ಧರ್ಮವೇ ಜಯವೆಂಬ ದಿವ್ಯ ಮಂತ್ರ! ಮಾಡಲು ಬೇಕಿದೆ ತಂತ್ರ!" ಪಾರಮಾರ್ಥಿಕ ವ್ಯಾವಹಾರಿಕಗಳ ನಡುವೆ ಅಂತರ ಗೈಯ್ಯುವುದೆಂದರೆ, ಆಸ್ತಿಕ-ನಾಸ್ತಿಕತೆ! ಪ್ರಕೃತ, ಪುಣ್ಯಕ್ಷೇತ್ರಗಳಲ್ಲಿ ವಾಸಿಸುವ ತಿರ್ಯಕ್ ಪ್ರಾಣಿಗಳಿಗೂ, ಆ ಕ್ಷೇತ್ರವಾಸದ ಫಲವುಂಟು. ಮಾನವ ಜನ್ಮಕ್ಕೆ ಮಾತ್ರ ಮೋಕ್ಷವೆಂಬ ಶಾಸ್ತ್ರದೃಷ್ಟಿ, ಸಮಗ್ರ ಸಂಪೂರ್ಣವಲ್ಲ. ಆಳ್ವಾರ್ ಶರಣರಿಂದಲೇ, ವೇದಾನ್ತ, ಸಮಾಜ ವಿಜ್ಞಾನ ಮರ್ಯಾದೆ ಕಾಣಬೇಕಾದರೆ ಒಳ್ಳೆಯದೆಲ್ಲದರ ಸಮಾಜೀಕರಣ, ಜಾಗತೀಕರಣದ ಮರ್ಮ ಇಲ್ಲಿ ಅಡಗಿದೆ.

ಪುಹುಮದತ್ತಾಲ್ = ಅನೆಯ ಬಾಯಿಂದ ಸೋರುವ ಮದಜಲದಿಂದ, ವಾಯ್ = ತನ್ನ ಮುಖ ಶುದ್ಧಿ ಪೂರ್ವಕ, ಪೂಶಿ = ತಿಮ್ಮಪ್ಪನಿಗೂ ಆಚಮನವಿತ್ತು. ಕೀಳ್ = ಜನನೇಂದ್ರಿಯದಿಂದ, ತಾಳ್ನ್ದು = ತಿರುಪತಿ ಕಮರಿಗಳಲ್ಲಿ ಹರಿದು ಬರುವ ತೀರ್ಥ ಪ್ರವಾಹಗಳಂತೆ, ಒಂದೇ ಸಮನಾಗಿ, ಉಹು = ಹರಿಯುತ್ತಲೇ ಇರುವ (ಮದತ್ತಾಲ್) ತನ್ನ ಮದ ತೀರ್ಥದಿಂದಲೇ, ಕಾಲ್ ಕಳುವಿ = ತಮ್ಮ ಹಾಗೂ ತಿರುಮಲ ಸ್ವಾಮಿಯ ಚರಣಗಳನ್ನು ತೊಳೆದು, ಆಚಯ್ಯ ಪಾಣಿಪಾದಾನ್ ಪ್ರಕ್ಷಾಳ್ಯ - ಎಂಬ ಶಾಸ್ತ್ರೀಯ ಪ್ರಯೋಗದಂತೆಯೇ, ತೊಳೆದುಕೊಂಡೇ, ಪಾದ್ಯವನ್ನೂ ಸಮರ್ಪಿಸಿ, ಕೈಯ್ಯಾಲ್ = ಸೊಂಡಲಿನ ಕರದಿಂದ, ಮಿಹು = ಹೆಚ್ಚಾದ, ಮದಂ = ಮದಕಾರಿಯಾದ, ತ್ತೇನ್ = ಜೇನುಗೂಡುಗಳು ಹೇರಳವಾಗಿರುವ, ಮಲರ್ = ಅರಳಿದ ಹೂಗಳನ್ನು ಎತ್ತಿಕೊಂಡು, "ಕರಸ್ಥಕಮಲಾನೇವ" ಎಂಬ ಆ ಗಜೇಂದ್ರನ ಸಂತತಿ ತಾನೇ!, ವಿರಲ್ ವೇಙ್ಗಡವನ್ನೆಯೇ = ತಿರ್ಯಕ್ಕುಗಳಿಗೂ ಅದ್ಭುತ ಹಾಗೂ ಅತ್ಯಾಶ್ಚರ್ಯಕರವಾದ ಜ್ಞಾನಪ್ರದನಾದ ತಿರುಪತಿ ತಿಮ್ಮಪ್ಪನನ್ನೇ, ಕಣ್ಡು = ಸಂದರ್ಶಿಸಿ! ಇದರಿಂದ ಆ ಕಾಲದಲ್ಲಿ ವೆಂಕಟೇಶ ಇನ್ನೂ ಮಂದಿರದ ಸೆರೆಗೆ ಸಿಕ್ಕಿರಲಿಲ್ಲವೆಂದು ತೋರುತ್ತದೆ! ಕಳಿರು = ಅನೆಯೂ ಕೂಡ, ವಣಙ್ಗುಮ್ = ಅತ್ಯಂತ ವಿನಯಾವನತಗಳಾಗಿ ಬಗ್ಗಿ ನಮಸ್ಕರಿಸುತ್ತಿವೆ. ತಿರುಪತಿಗೆ ಯಾತ್ರೆ ಹೊರಡಿ! ಆ ಕಾಡು, ಕಮರಿ ತೀರ್ಥಗಳನ್ನು ಸುತ್ತಿ ನೋಡಿ, ಅತನ 'ನಿತ್ಯಶ್ರೀ-ಆ ವಾರಣಶ್ರೀ' ಎಲ್ಲಾ ನಿಮಗೂ ಕಣ್ಣಿಗೆ ಕಟ್ಟಿ ಎಂದೂ ಮರೆಯದಂತಾಗುತ್ತದೆ. ದಿಢೀರ್ ಹೋಗಿ ಬರುವುದು ಶರಣ ಸಂಮತವಲ್ಲ.

ತಮಿಳ್ ತಿರಳ್ ೩ - ೭೧

ಕಳಿರು ಮುಹಿಲ್ ಕುತ್ತ ಕೈಯೆಡುತ್ತೋಡಿ ಒಳಿರು ಮರುಪ್ಪೊಶಿ ಕೈಯಾಳಿ ಪಿಳಿರಿ|
ವಿಳ, ಕೊನ್ನು ನಿನ್ನದಿರುಮ್ ವೇಙ್ಗಡಮೇ, ಮೇನಾಳ್ ಕುಳಕ್ಕನ್ನು ಕೊಣ್ಡೆರಿನ್ದಾನ್ ಕುನ್ನು||

ಕನ್ನಡ ನೆರಳ್

ಗಜ, ಮುಗಿಲಂ ಚುಚ್ಚುವೊಲ್ ತನ್ ಕರ ಸೊಂಡಲನೆತ್ತೋಡುವೊಲೂ ಗಜಘನದಂತಗಳ್ ಮುರಿಯುವೊಲೂ ಕೈವ್ಯಾಳಿ - ಅಂಜುತ|
ಕುಸಿವೊಲ್ ಆನೆಯ ಕೊಂದು ನಿಂತದಿರ್ ವೆಂಕಟಗಿರಿಯೇ, ಪಿನ್ನಾಳ್ ಶಿಶುಕರುವಂ ಕೊಂಡೆಸೆದಾ ಶಿಶು ಕಣ್ಣನ ತಣ್ ಗಿರಿಯೈ||

ಆನೆಗಳ ಕೊಂಬು ದಂತಗಳನ್ನು ಮುರಿದು ಕೊಲ್ಲುವಂತಹ ವ್ಯಾಳಿ ಎಂಬ ಬಲಿಷ್ಠ ವನ್ಯಮೃಗವೂ ತಿರುಪತಿ ಬೆಟ್ಟಗಳಲ್ಲುಂಟು! ಎಂದರೆ ಎಂತಹ ಅಹಂಕಾರದ ಮದವನ್ನೂ ನೀಗುವ ಶಕ್ತಿ ಈ ಗಿರಿಗೇ ಇದೆ ಎಂಬ ಭಾವ. ಅಂತಹ ಶ್ರೀಶೈಲವೇ ವತ್ಸಾsಸುರನನ್ನು ಕಪಿತ್ಥಾsಸುರನಿಗೆ ಗುರಿಯಿಟ್ಟು ಕಲ್ಲು ಬೀರಿದ ಶ್ರೀ ಬಾಲಮುರಳೀಧರನ ಅಯಾಸ ಪರಿಹಾರಕ್ಕಾಗಿ ಈಗ ಅವನೇ ತಿಮ್ಮಪ್ಪನಾಗಿ ಆಸರಿಸಿರುವ ವಿಶ್ರಾಮಧಾಮ.

ದಂತಿಗಳ ಸಾಮರ್ಥ್ಯವೇನು? ಮುಹಿಲ್ = ಗಗನದ ಮುಗಿಲನ್ನೇ, ಕುತ್ತ = ಚುಚ್ಚುವಂತೆ, ಕೈ = ತಮ್ಮ ಸೊಂಡಲುಗಳನ್ನು ಎಡುತ್ತು = ಮೇಲ್ ಮೊಗವಾಗಿ ಎತ್ತಿ, ಓಡಿ = ಧಾವಿಸುತ್ತಿರಲು, ಅಂತಹ = ಮತ್ತಗಜಗಳೂ, ಪಿಳಿರಿ = ಪಿಳಿ ಪಿಳಿಗುಟ್ಟುತ್ತಾ ಹೆದರಿ! ಒಳಿರು ಬೆಳ್ಳಂಬೆಳಗುವ, ಮರುಪ್ಪು = ದಂತಗಳನ್ನು, ಒಶಿ = ಹೊಸಕುವ ಆ ವ್ಯಾಳಿಗಳಿಗೆ ಸಾಧನವೇನು? ಯಾವ ಮೃಗ? ಆಳಿ = ಶರಭವೆಂಬ ವ್ಯಾಳಿ = ಈಗೀಗ ಅವು ಕ್ಷೀಣಿಸಿದ್ದರೂ. ದೇವಾಲಯದ ಕಂಬಗಳಲ್ಲಿ ಕಾಣಬಹುದು. ಅಂತಹ ಬೃಹತ್ ಗಾತ್ರದ ಗಜರಾಜರ ಗತಿ ಏನಾಯಿತು? ವಿಳ = ಕುಸಿದು ದೊಪ್ಪನೆ ನೆಲಕ್ಕೆ ಬೀಳಲು, ಕೊನ್ನು = ಅವನ್ನು ಕೊಂದು, ನಿನ್ನು = ಅಹಂಕಾರದ ಬೃಹದಾಕಾರದ ಪ್ರತೀಕವಾದ ಸಲಗಗಳ ಮೆಲಿನ ವಿಜಯೋತ್ಸವದಿಂದ ಸ್ಥೈರ್ಯವನ್ನು ತಾಳಿ, ಅದಿರುಮ್ = ಗರ್ಜಿಸುವ ಸಂಭ್ರಮ ಸನ್ನಿವೇಶದ, ವೇಙ್ಗಡಮೇ, ಮೇಲ್ನಾಳ್ = ಹಿಂದಿನ ಆ ದಿನಗಳಲ್ಲಿ, ಜಗತ್ತಿಗೇ ಮೇಲ್ಮೆಯನ್ನು ತಂದ ಶ್ರೀ ಕೃಷ್ಣನ ಕಾಲದಲ್ಲಿ, ಕುಳಕ್ಕನ್ನು = ಮಾಯಾ ಕರುವಿನ ರೂಪದ ಅಸುರನನ್ನು, ಕೊಂಡು = ತನ್ನ ಹಸ್ತವೆಂಬ ಕವಣೆಯಲ್ಲಿನ ಕಲ್ಲಿನಂತೆ, ಬಲಮಂಡಿಯನ್ನು ಸುಂದರವಾಗಿ ಮಡಿಚಿ ಮನೋಜ್ಞವಾದ ತೋಳಿನಿಂದ ಬೀಸಿದವನ, ಶ್ರಮಪರಿಹಾರಿಯಾದ, ಕುನ್ನು = ಎಂದಿಗೂ ಕುಂದದ "ಅಚಲ ತಂಪಾದ ಎತ್ತರದಲ್ಲಿರುವ ತಾಣ ತಿರುಪತಿ".

ಅಭಯ ಸತ್ವ ಶುದ್ಧಿ ಮೊದಲಾದ ದೈವೀ ಸಂಪತ್ತುಗಳನ್ನು ಕೊಲ್ಲುವ ಎಷ್ಟೇ ಷಡ್‌ಯಂತ್ರ ನಡೆಸಿದರೂ ಮದ, ಮಾನಾದಿ ದುರ್ಗುಣಗಳು, ಅವವುಗಳೇ ಪರಸ್ಪರ ಕಚ್ಚಾಡಿ ಹೊಡೆದಾಡಿ ಸ್ವಯಂ ಸಾಯುವುವು! ಅಧ್ಯಾತ್ಮದ ಹೊರವರ್ಣನೆಗಳೆಲ್ಲಾ, ಆಳ್ವಾರ್ ಶರಣರಿಗೆ ಅನಿಷ್ಟ ಪರಿಹಾರ, ಇಷ್ಟಪ್ರಾಪಣವೆಂಬ ಭಗವಂತನ "ಶರಣ್ಯ"ತೆಯನ್ನು ತೋರಿಸಿ, ಆಶ್ವಾಸನೆ ಕೊಡುವಂಥವೇ ಹೊರತು, ಕೇವಲ ಮೋಜಿನ ನಿರುದ್ದೇಶ್ಯವಾದ ಕಥನಗಳಲ್ಲ. ವೇದ, ಇತಿಹಾಸ, ಪುರಾಣ, ಆಳ್ವಾರ್ ಶರಣರ ದಿವ್ಯ ಪ್ರಬಂಧಗಳು, ವಚನಾದಿಗಳೆಲ್ಲಾ, ಮಾನವನ ವಿಕಾಸಕ್ಕೆ ಮಹಾಶಕ್ತಿಯ ಬಗ್ಗೆ ಮಹಾವಿಶ್ವಾಸ, ತಮ್ಮ, ತಮ್ಮ ಭಾಗದ ಪಾಲುಗಾರಿಕೆ ಎಲ್ಲದರ ಬಗ್ಗೆ ಬೆಳಕು ಚೆಲ್ಲುತ್ತವೆ. ಎದುರಿಸಿ ಆರ್ಭಟಿಸಿಕೊಂಡು ಧಂಭ ದರ್ಪಾದಿ ಆಸುರೀ ಸಂಪತ್ತುಗಳೆಂದು ಕಂಸನ ದುಷ್‌ಪ್ರೇರಣೆಯಿಂದ ಕೃಷ್ಣನನ್ನೇ ಕೊಲ್ಲಲು ಬಂದ ಕರು ಹಾಗೂ ಬೇಲ. ಕೃಷ್ಣನಿಂದಲೇ ಹತರಾದರೂ ಆ ಪಾಪಕ್ಕೆ ಕೃಷ್ಣ ಭಾಗಿಯಲ್ಲ. ಅವನಿಗೆ ಯಾವಾಗಲೂ ಯಾವುದರಿಂದಲೂ ಸಾವಿಲ್ಲ. "ಕೃಷ್ಣಂ ಧರ್ಮಂ ಸನಾತನಂ" ಸನಾತನ ಎಂದರೆ, ಈಗಿನ ಕಾಲಕ್ಕೆ ಉಪಯೋಗವಿಲ್ಲದ "ಹಳೆಕಂತೆ ಬೊಂತೆ"ಯಲ್ಲ. ಹಳತೇ ಅತ್ಯಂತ ಹೊಸತೂ ಆಗಿ ಬಿಡುತ್ತದೆ! "ಸದಾತನ" ಆ ಕೃಷ್ಣಾವತಾರಕ್ಕೂ ಮುಂಚೆ "ಬ್ರಹ್ಮಣ್ಯಃ ದೇವಕೀಪುತ್ರ"ನಿದ್ದವನೇ! ರಾಮಾವತಾರಾದಿಗಳಲ್ಲೂ ಅಷ್ಟೇ! ಅನಾದಿ ಆತ್ಮಾರಾಮನೇ ಆ ಕಾಲಕ್ಕೆ ದಶರಥನಂದನನಾಗಿ ಬಂದನಷ್ಟೆ. ಸರ್ವ ಪ್ರಾಚೀನತಮನೂ ಹೌದು, ಸರ್ವ ನವೀನತಮನೂ ಹೌದು.

ತಮಿಳ್ ತಿರಳ್ ೩ - ೭೨

ಕುನ್ನೊನ್ನಿನಾಯ ಕುರಮಹಳಿರ್ ಕೋಲ್ ವಳೈ ಕ್ಕೈ ಶೆನ್ನು ವಿಳೈಯಾಡುಮ್ ತೀಙ್ಗಳೈ ಪೋಯ್ - ವೆನ್ನು |
ವಿಳಙ್ಗು ಮದಿ ಕೋಳ್ ವಿಡುಕ್ಕುಮ್ ವೇಙ್ಗಡಮೇ, ಮೇಲೈ ಇಳಙ್ಕುಮರರ್ ಕೋಮಾನಿಡಮ್ ||

ಕನ್ನಡ ನೆರಳ್

ಗಿರಿಗೇ ಬಾಳುವ ಕೊರಚಿಯರಾ ಕೋಲ್ ಬಳೆ ಕೈಯ್ಯಿಂ ಸರಿದಾಡುವ ಚೆಂಬಿದಿಲ್ ಬಿಲ್ಲೆಯು ಪೋಗುತ ದಾಂಟಿ |
ಬೆಳಗುವ ಚಂದಿರನ್ ದುಗುಡವ ಬಿಡಿಪಾ ವೆಂಕಟವೇ ಮೇಲ್ ಅಹ ಎಳೆಕುವರರ್ ಗೆರೆಯನೆಡೆ ||

ಆದಿವಾಸಿಗಳಾದ ಕೊರಚಿಯರು ತಿರುಪತಿ ಬೆಟ್ಟಗಳನ್ನು ಬಿಟ್ಟು ಇಳಿಯುವುದೇ ಇಲ್ಲ! ಹಾಗೆ ತಮ್ಮ ಮೂಲನಿವಾಸವನ್ನು ತೊರೆಯುವುದು ಅವರಲ್ಲಿ ಮಹಾಕುಲಾಪರಾಧ! ಎಂದೂ ದಿವ್ಯ ದೇಶಗಳಲ್ಲೇ "ಸ್ಥಳವಾಸ" ಮಾಡುವ ಆ ಹೆಂಗಳರ ರಿಂಗ್ ಆಟಗಳಲ್ಲಿ ಆ ಬೆತ್ತ ಗಿರ್ರನೆ ಮೇಲೆ ಹಾರಿ, ಚಂದ್ರನಿಗೆ ವಕ್ಕಿಸುವ ರಾಹುವನ್ನು ಕೊಲ್ಲುವುವು! ಕಿರಾತರನ್ನು "ಅಜ್ಞಾನಿ"ಗಳೆಂದು ಕರೆದರೂ ಅವರು "ದೃಢಾಧ್ಯವಸಾಯಿಗಳು" **"ತತೋಭೂಯ ಇವತೇ ಯೇ ಉ ವಿದ್ಯಾಯಾಂ ರತಾಃ"** ಎಂಬ ಈಶೋಪನಿಷತ್ತಿನ ಮಂತ್ರದಂತೆ, ಕೇವಲ ವಿದ್ಯಾವಂತರೆನಿಸಿಕೊಳ್ಳುವವರೇ, ಗ್ರಾಮಭಕ್ತಿಯಿಲ್ಲದ "ಕಾರ್‌ಗತ್ತಲೆ"ಯಲ್ಲಿ ತಾವೂ ಬಿದ್ದು, ದೇಶಭಕ್ತಿಗೇ ಅಪಾಯತರುವರು! ತಿರುಪತಿ ಕ್ಷೇತ್ರವಾಸಿಗಳೇ, ಅಣ್ಣನನ್ನು ಬಿಡದ ಲಕ್ಷ್ಮಣನಿಂದ, ಇಂದ್ರಜಿತ್ ಸಂಹೃತನಾದಂತೆ ಭೂಮಿಯನ್ನೇ ಛಾಯೆಯಿಂದ ಗ್ರಹಿಸುವ ರಾಹುವನ್ನು ಕೊಲ್ಲಬಲ್ಲವರು! ದೇಶದ ರಕ್ಷಣೆಗೆ ಪ್ರತಿಪ್ರಜೆಯ ಸ್ವಂತ ಗ್ರಾಮವಾಸದ ಪರಿಸರವನ್ನೇ ನಿರ್ಮಾಣ ಮಾಡಬೇಕಾದ್ದೇ ಬಹು ಮುಖ್ಯ.

ಕುನ್ನು = ಕುಂದದೆ ಎಂದೂ ದೃಢವಾದ ತಿರುಪತಿಗಿರಿ, ಒನ್ನು = ಒಂದಕ್ಕೇ ಅನನ್ಯವಾಗಿ, ಒನ್ನಿನಾಯ = ಅಂಟಿಕೊಂಡಿರುವ ಗ್ರಾಮಾಭಿಮಾನಿಗಳಾದ ಕುರಮಹಳಿರ್ ಕೊರಮರ ಹೆಣ್ಣಳ ಹುಟ್ಟೂರು ಸೇರುವ ಗಂಡನ ಮನೆಯೂ ಎಲ್ಲಾ "ತಿರುಮಲೆಯೇ". ಅವರ ಕೈಲಿನ, ಕೋಲ್ ವಳೈಕ್ಕೈ = ದುಂಡನ ಬಿದಿರ್ ಗೋಲ್‌ಗಳ ಆಟಿಕೆಗಳು, ಕ್ಕೈ = ಕೈ ಚಳಕದಿಂದ, ಶೆನ್ನು = ತಾವೇ ಸಂದು ಛಾಯಾಗ್ರಹಿಯಾದ ರಾಹುವನ್ನು, ವಿಳೈಯಾಡುಮ್, ತೀಮ್ ಕಿಳೈ (ಳೈ) ಎರಡೂ ಪಾಠವುಂಟು. ತೂಗುಯ್ಯಾಲೆಯ ಬಿದಿರು ಅಷ್ಟೊಂದು ಎತ್ತರಕ್ಕೆ ಚಲಿಸುವಂತೆ ಅವರ "ಜೋಕಾಲಿ"ಯ ಜೋಕು! ಪೋಯ್ ವೆನ್ನು = ರಾಹುವಿಗೆ ಹೊಡೆತ ಬೀಳುವಂತೆ, ಮದಿಕೋಳ್ = ಚಂದ್ರನ ಗ್ರಹಣ, ವಿಡುಕ್ಕುಂ = ನೀಗಿಸುವ ವೇಙ್ಗಡಮ್.

ತರ್ಪಣಾದಿಗಳಿಂದ ಶಿಷ್ಟರು, ಸರ್ವಗ್ರಹಾಧಿಪನಾದ ಚಂದ್ರನಿಗೆ ಛಾಯಾದೋಷ ಹೋಗಲು ಒತ್ತಾಸೆಯಾಗಿ ಸೇವೆ ಮಾಡಿದರೆ, ಈ ಗಿರಿ ಮಹಿಳೆಯರು ತಮ್ಮ ಸಹಜವಾದ ಆಟದಿಂದಲೇ ಚಂದ್ರನನ್ನು ಸಂತೋಷ ಪಡಿಸುವರು! ಅವರವರ ಸ್ವಧರ್ಮ ಅವರವರಿಗೆ. ಫಲಮಾತ್ರ ಒಂದೇ! ಈ ಸಾಮಾಜಿಕ ಮೌಲ್ಯವನ್ನು ಗಮನಿಸಿ, ಸ್ವಸ್ವಧರ್ಮಗಳಲ್ಲಿ ಸ್ಪರ್ಧಾಭಾವನೆ ಸಾಂಕರ್ಯ ಮೂಡಿಸಬಾರದು. ಅಂತಹ "ತಿರುವೇಂಗಡಂ ಉಡೈಯಾನನ" ಮಲೆಯೇ, ಮೇಲೈ = ತ್ರೇತಾಯುಗದಲ್ಲಿ, ಇಳಮ್ ಕುಮರರ್ = ತಮ್ಮನಾದ ಸೌಮಿತ್ರಿಗೆ ಅಣ್ಣನಾದ ದಾಶರಥಿ ರಾಮನ, ಇಡಮ್ = ನಿತ್ಯವಾಸಸ್ಥಾನ ಈ ಬನವಾಸಿನಿಯರಿಂದ ತನ್ನ ೧೪ ವರ್ಷದ ವನವಾಸದ ಪಾಠ ಕಲಿತನೇನೋ! ಇಳಮ್ ಕುಮರರ್ = ವೈಕುಂಠದ ನಿತ್ಯಸೂರಿಗಳು ಯಾವಾಗಲೂ ೧೨ಡೇ ವಯಸ್ಸಿನ ಎಳೆಯರೇ ಆಗಿರುವುದು. ಅಂತಹವರ ಅಧಿಪತಿ, 'ಪರಮಪದನಾಥ', ತಿರುಮಲೆಯಲ್ಲೇ ನಿತ್ಯವಾಸಿ.

''ಇಳ್ಯೆಯಪೆರುಮಾಳ್'' ಎಂಬುದೇ ಸತ್ ಸಂಪ್ರದಾಯದಲ್ಲಿ ಲಕ್ಷ್ಮಣನ ಹೆಸರು. ಅದಕ್ಕೆ ಈ ಆಳ್ವಾರರ ''ಇಳಮ್ ಕುಮರರ್'' ಈ ಪದವೇ ಮೂಲಾಧಾರ.

ತಮಿಳ್ ತಿರಳ್ ೩ - ೭೩

ಇಡಮ್ ವಲಮೇಳ್, ಪೂಣ್ಡ ವಿರವಿತ್ತೇರ್ ಓಟ್ಟಿ ವಡಮುಹ ವೇಙ್ಗಡತ್ತು ಮನ್ನುಮ್ - ಕುಡನಯನ್ದ
ಕೂತ್ತನಾಯ್ ನಿನ್ರಾನ್ ಕುರೈ ಕಳಲೇ ಕೂರುವದೇ ನಾತ್ತನ್ನಾಲ್ ಉಳ್ಳನಲಮ್

ಕನ್ನಡ ನೆರಳ್

ಎಡಬಲ್ ಏಳ್ ಎನು ಅಶ್ವಗಳ್ ಹೂಡಿಹ ರವಿ ತೇರ್ ಓಡಿಸಿ ಬಡಮೊಗ ವೇಂಕಟನೆಲೆಯನ್ ಕೊಡವೆತ್ತಿದ|
ರಸನಟ ನಿಂತಾssಫಲ ಪದಗಳಂ ಪಾಡುವುದೇ ರಸನೆಯಿಂ ಮುಖ್ಯ ಪ್ರಾಪ್ಯ ನಲಂ ||

ಆದಿತ್ಯ ಮಂಡಲಮಧ್ಯಸ್ಥನಾದ ಅಂತರ್‌ಯಾಮಿ, ಏಳ್‌ಗುದುರೆಗಳನ್ನು ಹೂಡಿರುವ ರಥ ನಡೆಸುತ್ತಿರುವವ ಅಥವಾ ಮಹಾಭಾರತ ಯುದ್ಧಕ್ಕೆ ಮುಂಚೆ ಸೂರ್ಯ ತಂದುಕೊಟ್ಟ ''ವಿಜಯಸ್ಯಂದನ'' ಅರ್ಜುನನ ಆ ರಥವನ್ನು ನಡೆಸಿಕೊಟ್ಟ ಭಗವಾನ್ ಶ್ರೀ ಕೃಷ್ಣನೆಂದೂ ಆಗಬಹುದು. ಬಾಲಕೃಷ್ಣ ಗೋಕುಲದಲ್ಲಿ, ಗೊಲ್ಲರ ಸಂತೋಷ ಸಡಗರ ಸೂಚಿಸಲು ಹಳ್ಳಿಗಳಲ್ಲಿ ಸುಗ್ಗಿ ಕುಣಿತ ಇತ್ಯಾದಿಗಳಂತೆ ''ಕುಂಭನಾಟ್ಯ''ವನ್ನು ಬಲು ಚೆನ್ನಾಗಿ ಆಡುತ್ತಿದ್ದ. ತಲೆಯ ಮೇಲೆ ಒಂದರ ಮೇಲೊಂದು ಮಣ್ಣಿನ ಗಡಿಗೆಗಳನ್ನು ಬೀಳದಂತೆ ಬಿಗಿಯಾಗಿಟ್ಟುಕೊಂಡು ಆಡುತ್ತಾ ಕೈಯಿಂದ ಕುಂಭಗಳನ್ನು ಹಿಡಿಯದೆಯೇ ''ಕರಗ ನೃತ್ಯ''. ಈ ನಾಟ್ಯಾಚಾರ್ಯನನ್ನು ನೀವು ಈಗಲೂ ಸೇರಿಹಾಡಬೇಕೆಂದಿದ್ದರೆ ಆ ಕೃಷ್ಣನೇ ಕಲಿಯುಗದಲ್ಲಿ ತಿಮ್ಮಪ್ಪನಾಗಿರುವುದರಿಂದ ತಿರುಮಲೆಗೇ ಬಂದು ನಾಮಗಾನಗೈಯ್ಯಿರೆನ್ನುತ್ತಾರೆ ಈ ಪೇಯಾಳ್ವಾರ್.

ಇಡಮ್ ವಲಮ್ = ಮಹಾಮೇರುವಿಗೆ ಎಡಕ್ಕೂ ಬಲಕ್ಕೂ ಆ ದಾರಿಗುಂಟ ಓಡುವ ತೇರು, ರವಿರಥ, ಏಳ್ ಇರವಿತ್ತೇರ್ = ಏಳ್‌ಕುದುರೆಗಳನ್ನು ಹೂಡಿರುವ ಅಂಥ ವಿಜಯರಥವನ್ನು ಆ ಮಾರ್ಗವಾಗಿ ಓಡಿಸಿ, ವಡ ಮುಹಂ = ತಮಿಳು ನಾಡಿನ ಬಡಗಲ ದೆಸೆಗೇ ಬಲು ಮುಖ್ಯವಾದ, ವೇಙ್ಗಡತ್ತು = ವೆಂಕಟಾಚಲದಲ್ಲಿಯೇ, ಮನ್ನುಮ್ = ನಿತ್ಯವೂ ವಾಸಿಸುತ್ತಿರುವ. ಕರಗದ ಕುಣಿತದಿಂದುಂಟಾದ ಆಯಾಸವನ್ನು ತೀರಿಸಿಕೊಳ್ಳುತ್ತಿರುವವ. ಇವೆಲ್ಲಾ ಮಂಗಳಾಶಾssಸನಕ್ಕೆ ಬೇಕಿರುವ ಉಪಪತ್ತಿಗಳು. ಕುಡಂ ನಯನ್ದ = ಆ ಕುಂಭನರ್ತನದಲ್ಲಿ ಪ್ರೀತನಾದವನ, ಕುರೈ = ಗೆಜ್ಜೆಗಳು ಘಲು ಘಲಿಸುವ, ಕಳಲೇ = ಚರಣಗಳನ್ನೇ ಕುರಿತು, ಕೂರುವದೇ = ಎತ್ತಿ ಹಾಡುವುದೇ, ನಾತ್ತನ್ನಾಲ್ = ನಾಲಿಗೆಯಿಂದ ಮುಖ್ಯವಾಗಿ ಆಗಬೇಕಾಗಿರುವ, ನಲಮ್ = ಒಳ್ಳೆಯ ಕೆಲಸ.

ತಮಿಳ್ ತಿರಳ್ ೩ - ೭೫

ಶಾರ್ನ್ದಹಡು ತೇಯ್ಪ್ಪ ತ್ತಡಾವಿಯ ಕೋಟ್ಟುಚ್ಚಿವಾಯ್ ಊರ್ನ್ದಿಯೆಙ್ಗುಮ್ ವೆಣ್ ಮದಿಯನ್ ಒಣ್ ಮುಯಲ್ಯೆ -
ಶೇರ್ನ್ದು| ಶಿನ ವೇಙ್ಗೈ ಪಾರ್ಕ್ಕುಮ್ ತಿರುಮಲೈಯೇ, ಆಯನ್ ಪುನ ವೇಙ್ಗೈ ನಾರುಮ್ ಪೊರುಪ್ಪು ||

ಕನ್ನಡ ನೆರಳ್

ಸೇರ್ ಕಿಬ್ಬದಿ ತೇಯ್ ಕೋಡಿನ ತುದಿಯಡಿಯೊಳಗೇ ಸಾರುತ ತೆವಳುವ ಬೆಳ್ಳನ ಪೆರೆಯೊಳನಲ್ ಮೊಲವಂ, - ಸಾರ್ದೇಹಾಯ್ |
ಕೋಪದಿ ಪುಲಿ ದುರುದುರು ದಿಟ್ಟಿಪ ಸಿರಿಮಲೆಯೇ, ಗೋಪರ ಕುವರಗೆ ತೋಪೊಳ ''ವೇಂಗೈ'' ಪೂಕಂಪನು ಸೂಸುವ ಗಿರಿಯೈ! ||

ತಿರುಮಲೆಯ ಶಿಖರಗಳು ಎಷ್ಟು ಎತ್ತರ? ಯಾವ ಯಾವ ಪ್ರಾಣಿಗಳು ಅಲ್ಲಿವೆ? ಗೊಲ್ಲರಿಗೆ ಪ್ರಿಯಕರವಾದ ''ವೇಂಗೈ'' ಹೂವಿನ ಸುಗಂಧ! ಇವೆಲ್ಲಾ ಸ್ವಭಾವಾಲಂಕಾರದಲ್ಲಿ ಹೇಳಲ್ಪಟ್ಟಿದ್ದರೂ ತಿಮ್ಮಪ್ಪ ತನ್ನ ಕಲ್ಯಾಣ ಗುಣಗಣಗಳ ಸೌರಭದಲ್ಲಿ ತಾತ್ಪರ್ಯ. ವೇಂಕಟಗಿರಿಯ ಆ ಕೋಡುಗಳ ಕೆಳಭಾಗದಲ್ಲೇ ನುಸುಳುವ ಚಂದ್ರ, ಅವನಲ್ಲಿ ಕಳಂಕವಾಗಿ ಕಾಣುವ ಮೊಲ, ಅದರ ಮೇಲೆರಗುವ ಹುಲಿ ಇವುಗಳು, ಧ್ವನಿ ಸಾಹಿತ್ಯಕ್ಕೆ ಉತ್ತಮ ಉದಾಹರಣೆಗಳು. ತ್ರಿವಿಕ್ರಮಾವತಾರದಲ್ಲಿ ಉದಾರಿ ಸಜ್ಜನರ ರಾಜ್ಯಲೋಭಾದಿ ಕಳಂಕವನ್ನು ನಾಶಮಾಡುವ. ಲೋಕ ರಕ್ಷಣೆಯ ಅಂತರಾರ್ಥವನ್ನು ಇಲ್ಲಿ ಆಳ್ವಾರ್ ಸೊಗಸಾಗಿ ವರ್ಣಿಸುತ್ತಾರೆ.

ತಡಾವಿಯ = ಅತಿವಿಶಾಲವಾದ, ಕೋಡು = ಗಿರಿಶೃಂಗಗಳ, ಉಚ್ಚಿವಾಯ್ = ಉಚ್ಚವಾದ ತುಟ್ಟ ತುದಿಯ, ಅಹಡು = ಅಡಿಭಾಗದಲ್ಲಿಯೇ ಚಂದ್ರನೂ ಪವಿತ್ರ ಗಿರಿಶಿಖರಗಳನ್ನು ಮೇಲ್‌ವಾಯಬಾರದೆಂಬ ಭಕ್ತಿಯಿಂದಲೂ ಅವನ ಆ ಅಶಕ್ತಿಯಿಂದಲೂ, ತೇಯ್ಪ್ಪ = ತೆವಳುತ್ತಾ! ಶಾರ್ನ್ದುಊರ್ನ್ದು = ಹತ್ತಿರ ಸೇರಿ, ನಿಧಾನವಾಗಿ, ಇಯಙ್ಗುಮ್ = ಸಂಚರಿಸುತ್ತಿರುವ, ವೆಳ್‌ಮದಿಯಿನ್ = ಬೆಳ್ಳನ್ನ ಚಂದಿರನೆಡೆಯೊಳಿರುವ, ನಲ್ = ಸುಂದರವಾದ, ಮುಯಲ್ಯೆ = ಕಳಂಕರೂಪದ ಕರಿಮೊಲವನ್ನು,

ವೇಜ್ಗೈ = ಹುಲಿ, ಶೇರ್ನ್ದು = ಮೇಲ್ ಬಿದ್ದು, ಶಿನಮ್ = ಕೋಪದಿಂದ, ಪಾರ್ಕ್ಕುಮ್ = ದುರುಗುಟ್ಟಿ ನೋಡುತ್ತಿರುವ, ತಿರುಮಲೈಯೇ = ಆ ಸನ್ನಿವೇಶದ ಶ್ರೀಗಿರಿಯೇ. ಆಯನ್ = ಗೋವಳನಾದ ಕೃಷ್ಣನಿಗೆ, ಪುನಮ್ = ವಾಸಸ್ಥಾನವು. "ವೇಜ್ಗೈ" ಎಂಬ ಮರಗಳು, ನಾರುಮ್. ಒಳ್ಳೆ ವಾಸನೆ ಸೂಸುವ, ಪೊರುಪ್ಪು = ಪರ್ವತವು. ಗೊಲ್ಲರ ಆ ಸಿಂಡಿನವಾಸನೆಯಂತೆಯೊ, ವನವೃಕ್ಷದ ಗಂಧವೂ ಗೋಪಾಲ ಕೃಷ್ಣನಿಗೆ ಬಲು ಮಧುರ!

ತಮಿಳ್ ತಿರಳ್ ೩ - ೮೯

ಮುಡಿನ್ದ ಪೊಳುದಿಲ್ ಕುರವಾಣರ್ ಏನಮ್ ಪಡಿನ್ದುಳು ಶಾಲ್ ಪೈಮ್ ತಿನೈಹಳ್ ವಿತ್ತ - ತಡಿನ್ದೆಳುನ್ದ |
ವೇಜ್ಗಳೈ ಪೋಯ್ ವಿಣ್ ತಿರಕ್ಕುಮ್ ವೇಜ್ಗಡಮೇ ಮೇಲ್ ಒರುನಾಳ್ ತೀಜ್ಗುಳಲ್ ವಾಯ್ ವೈತ್ತಾ ಶಿಲಮ್ಬು ||

ಕನ್ನಡ ನೆರಳ್

ಕೊನೆಗಾಲದಿ ಮುದಿಕೊರವರ್, ಹಂದಿಗಳೇ ಆ ನೆಲ ಕಿತ್ತುತ್ತಿರೆ! ನಲ್ ತೆನೆ ಬಿತ್ತನೆ ಗೈಯ್ಯಲ್ - ಹೊಡೆಯೆದ್ದಾ
ಬಿದಿರ್ಗಳು ಹೊಮ್ಮಿ ಬಾನ್ ಬರಿ ವೇಂಕಟವೇ - ಪಿನ್ನೋರ್ ನಾಳ್ ಚೆದುರ್ಗೊಳಲ್ ಬಾಯ್ಗಿಟ್ಟವನ್ - ಬೆಟ್ಟಾ!

ಆಳ್ವಾರರ ದಿವ್ಯ ದೃಷ್ಟಿಯಲ್ಲಿ, ಕೊರಮರೇ ಮುಂತಾದ ಈಶ್ವರೀ ವಿಭೂತಿಗೂ, ಅವುಗಳ ಒಡೆಯನಿಗೂ ಸಮಾನಭಾವನೆಯೇ ಕಾಣುತ್ತದೆ. ಈ ತಮಿಳ್ ಸಂತ ಶರಣರ ಅನುಭಾವ ಅಷ್ಟು ಪಕ್ವಗೊಂಡಿದೆ. ಸರ್ವೇಶ್ವರನಷ್ಟೇ ಸರ್ವವಿಭೂತಿಗಳೂ ಅತನ ಸಂಬಂಧ ಜ್ಞಾನದ ಗಾಢತೆಯಿಂದ ಉದ್ದೇಶ್ಯಗಳೇ! ಸರ್ವಾತ್ಮನಿಂದ ಪೃಥಕ್ ಆಗಿ ಸೃಷ್ಟಿಯಲ್ಲಿ ಇವರಿಗೆ ಏನೊಂದೂ ಗೋಚರಿಸದು. **"ಈ ಅಪೃಥಕ್ ಸಿದ್ಧಿಯೆಂಬುದು, ಸ್ವರೂಪಾದ್ವೈತದ, ಮಧುರ ಪರಿಷ್ಕರಣೆ, ದ್ವೈತ ಅದ್ವೈತಗಳ ಸಾಮಂಜಸ್ಯದ ಸೊಗಸು!"**

ಮುಡಿನ್ದ ಪೊಳುದಿಲ್ = ತಮ್ಮ ಆಯುಸ್ಸಿನ ಕೊನೆಗಾಲದಲ್ಲಿ ಮುದುಕರಾದ, ಕುರವಾಣರ್ = ಕಿರಾತಕರು, ಅವರ ಕೈಲಾಗದುದರಿಂದ, ಏನಮ್ = ಕ್ಷೇತ್ರವಾಸಿಗಳೇ ಆದ ಕಾಡು ಹಂದಿಗಳು, ಪಡಿನ್ದು = ಅಣಿಗೊಳಿಸಿ, ಉಳುಶಾಲ್ = ತಮ್ಮ ಕೋರೆಗಳಿಂದಲೇ ಉತ್ತು ಕೊಟ್ಟ ಹೊಲಗಳಲ್ಲಿ, ತಿನೈಹಳ್ = ಬೆಳೆದ ಬಿದಿರಕ್ಕಿ ಧಾನ್ಯ ಬೀಜಗಳನ್ನು, ವಿತ್ತ = ಹಾಗೇ ಎರಚಿರಲು, ತಡಿನ್ದು ಎಳುನ್ದ = ಮೊಳೆತು ಮೇಲೆದ್ದ, ವೇಮ್ ಕಳೈ = ಬಿದಿರ್ ಗಳುಗಳು ಹಾಗೂ ದಪ್ಪ ಬೊಂಬುಗಳು ಪೋಯ್ = ಮೇಲ್ ಹೊಮ್ಮಿ, ವಿಣ್ = ಆಕಾಶವನ್ನೆಲ್ಲಾ. ತಿರಕ್ಕುಮ್ = ಹರಡಿ ಬಿರಿಯುವ ಸನ್ನಿವೇಶವುಳ್ಳ. ವೇಜ್ಗಡಮೇ. ಮೇಲ್ ಒರುನಾಳ್ = ಹಿಂದೊಮ್ಮೆ. ತೀಮ್ ಕುಳಲ್ = ಮನೋಜ್ಞವಾದ ಮುರಳಿಯನ್ನು, ವಾಯ್ವೈತ್ತಾ = ತನ್ನದಿವ್ಯಾಧರದಲ್ಲಿಟ್ಟೂದಿದವನ, ಶಿಲಮ್ಬು = ಶ್ರೀಶೈಲವು.

"ಸ್ವಧರ್ಮೇ ನಿಧನಂ ಶ್ರೇಯಃ" ಇದು ತಿರುಪತಿಯ ಆದಿವಾಸಿಗಳಲ್ಲಿ ಇಂದಿಗೂ ಕಾಣಬರುತ್ತದೆ. ಆ ಗಿರಿಪ್ರದೇಶದ ಮಹಿಮೆಯೇ ಹೀಗೆ, ಅಶಕ್ತರಾದ ವೃದ್ಧರ ರಕ್ಷಣೆಯನ್ನು ಹಂದಿಗಳ ಮೂಲಕ, ಕರುಣಾಳು ಸರ್ವಪಾಲಕ ನಡೆಸುತ್ತಿದ್ದಾನೆ. ಗೋಕುಲದವರನ್ನೆಲ್ಲಾ ಕೊಳಲಿನ ಕರೆಯಿಂದ ಸೆಳೆದ ಮುರಳೀಧರನೇ ಇಂದು ವೇಂಕಟಾಚಲಪತಿಯಾಗಿ ಜಗತ್ತಿನ ಎಲ್ಲ ಕಡೆಯವರನ್ನೂ ತನ್ನ ಈ ಕ್ಷೇತ್ರಕ್ಕೇ ಆಕರ್ಷಿಸುತ್ತಿದ್ದಾನೆ! ಸಾಕಾರನಾಗಿಯೂ ಜಗದ್ ವ್ಯಾಪಿಯಾಗುತ್ತಿದ್ದಾನೆ! ವರಾಹಾವತಾರಿ ತಾನೇ ಅನ್ಯ ಕಾಲದಲ್ಲಿ ನಮ್ಮನ್ನೆಲ್ಲಾ ಸ್ಮರಿಸಿ, ಮುಂದಿನ ದೇಶವಿಶೇಷದಲ್ಲಿ ನಮಗೆಲ್ಲಾ ಅಮೃತ ಪದವಿ ನೀಡಲು ಊರ್ಧ್ವಗತಿಗೇರಿಸುವುದು.

ತತಸ್ತಂ ಮ್ರಿಯಮಾಣಂ ತು ಕಾಷ್ಠಪಾಷಾಣ ಸನ್ನಿಭಮ್
ಅಹಂ ಸ್ಮರಾಮಿ ಮದ್ಭಕ್ತಂ, ನಯಾಮಿ ಪರಮಾಂ ಗತಿಮ್ - ವರಾಹ ಚರಮ ಶ್ಲೋಕ

ತಿರುಮಳಿಶೈಯಾಳ್ವಾರ್

ಅವತಾರಿಕೆ ತಿರುಚ್ಚಂದ ವಿರುತ್ತಂ

"ತಿರುಚ್ಚನ್ದವಿರುತ್ತಮ್" ಶ್ರೀಛನ್ದೋವೃತ್ತದ - ಮಾರ್ಚಿಂಗ್ ಬ್ಯಾಂಡ್ ಶೈಲಿಯಲ್ಲಿ ಹೊಮ್ಮಿರುವ ೧೨೦ ದಿವ್ಯ ತಮಿಳ್ ಗೀತ. ಹಾಗೂ **"ನಾನ್ ಮುಹನ್ ತಿರುನ್ದಾದಿ - ನಾಲ್ಮೊಗನ್ ಸಿರಿಯನ್ತಾದಿ"**, ಈ ೨ ಕೃತಿಗಳನ್ನು ಕರುಣಿಸಿದವರು. "ತಿರುಮಳಿಶೈ" ಎಂಬ ದಿವ್ಯ ದೇಶದ ಶರಣರು. ಸಂಸ್ಕೃತದಲ್ಲಿ 'ಭಕ್ತಿಸಾರರು'. ದ್ವಾಪರ ಯುಗದ ೮೬೯೯೦೩ ನೆಯ ವರ್ಷ ಸಿದ್ಧಾರ್ಥಿ ಸಂವತ್ಸರ ತುಲಾಮಾಸ ಕೃಷ್ಣಪಕ್ಷ ಪ್ರಥಮಾ ತಿಥಿಯಂದು ಆದಿತ್ಯವಾರ ಮಖಾ ನಕ್ಷತ್ರದ ಶುಭ ದಿನದಲ್ಲಿ ಅವತರಿಸಿದವರು.

ಕನಕಾಂಗಿ ಎಂಬ ಅಪ್ಸರೆಯಲ್ಲಿ ಭಾರ್ಗವ ಮಹರ್ಷಿಗೆ ಪುತ್ರರಾಗಿ ಹುಟ್ಟಿದವರು. ಶ್ರೀದೇವಿ ಮಹಾಲಕ್ಷ್ಮಿಯಿಂದಲೇ ಬರೀಪಿಂಡಾಕಾರವಾಗಿ ಜನಿಸಿದ ಈ ಶಿಶು ಬೆಳೆಸಲ್ಪಟ್ಟು ಒಂದು ಬಿದಿರ್ ಮಳೆಯಲ್ಲಿ, ಮಕ್ಕಳಿಲ್ಲದ ಓರ್ವ ಮೇದರವನಿಗೆ ಸಿಕ್ಕಿತು. ಆತನ ಮನೆಯಲ್ಲೇ ೭-೮ ವರ್ಷಕಾಲ, 'ಕಣಿಕ್ಕಣ್ಣನ್' ಎಂಬ ಹರಿದಾಸರು ನೀಡುತ್ತಿದ್ದ ಶುದ್ಧ ಹಸುವಿನ ಹಾಲಿನಿಂದಲೇ ಬೆಳೆಯಿತು. ಶ್ರಿಯಃ ಪತಿಯ ವಿಶೇಷ ಕಟಾಕ್ಷದಿಂದಲೇ, ಪರಮಾತ್ಮನನ್ನೇ ಧಾರಕ ಪೋಷಕ ಭೋಗ್ಯವಸ್ತುವನ್ನಾಗಿ ಅನುಸಂಧಿಸಿ, ಜೀವನ ನಡೆಸಿದರು. ಗೀತೆ ಇಂತಹವರನ್ನೇ **"ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದರ್ಲಭಃ"** ಎನ್ನುವುದು. ಈ ತಿರುಮಳಿಶೈ ಆಳ್ವಾರ್ ಪರಮ ಯೋಗಿಗಳೂ ಆಗಿ ಸರ್ವ ಮತ ದರ್ಶನಗಳ ಸಾರಜ್ಞರು! ಮೊದಲ್ ಆಳ್ವಾರ್ ಮೂವರ ಸತ್‌ಸಂಗವೂ ಇವರಿಗೆ ಸಿಕ್ಕಿತು. ದಿವ್ಯ ದೇಶಗಳೆಂಬ ಪುಣ್ಯ ಕ್ಷೇತ್ರಗಳನ್ನು ಗ್ರಾಮ್ಯೈಕರಾತ್ರರಾಗಿ ಕಾಲಿಂದಲೇ ಸಂಚರಿಸಿದರು. ಶೈವ ಬೌದ್ಧ ಜೈನಾದಿ ದರ್ಶನಗಳ ಬಗೆಗೂ ಅನೇಕ ಕೃತಿಗಳನ್ನು ರಚಿಸಿಕೊಟ್ಟವರು. ಈ ಶ್ರೀ ಛನ್ದಸ್ಸಿನಲ್ಲೇ "ಪರಶಿವನ" ಬಗೆಗೂ ಇವರ ಗೀತಗಳಿವೆ. ಕೊನೆಗೆ ಈ "ತಿರುಚ್ಚನ್ದವಿರುತ್ತಮ್" ಅವರ ಸಿರಿಬಾಯಿಂದ ಹೊರಬಂದ "ಅರುಳಿಚ್ಚೆಯಲ್" ಕೃಪಾ ಕೃತಿ! ಪರಾತ್‌ಪರನ ನಾನಾ ಬಗೆಯ ದರ್ಶನಾರ್ಥಗಳ ಅವಿರೋಧಿ ಅಂಶಗಳನ್ನು ಮರೆಯದೆ, ಯೋಗ ಶಾಸ್ತ್ರರಹಸ್ಯಗಳನ್ನೂ ಅಲ್ಲಲ್ಲಿಟ್ಟು, ಯಾತ್ರಾಸ್ಥಳ, ಅಲ್ಲಿನ ಶ್ರೀ ಮೂರ್ತಿಗಳು, ಇವೆಲ್ಲದರ ರಮ್ಯತಮ-ಸಾರತಮ-ತತ್ವ ಹಿತ ಪುರುಷಾರ್ಥಗಳೆಂಬ ತ್ರಿವೇಣಿಯ ಪವಿತ್ರ ಸಂಗಮವನ್ನು ಪರದೈವವೊಂದರಲ್ಲೇ ಕಾಣಿಸಿದ ಮಹಾಕಲೆಗಾರರೂ ಆದರು! ಇಂದಿಗೂ ಕುಣಿಕುಣಿದು ಹಾಡುವಂತಹುದೇ "ಈ ತಿರಚ್ಚನ್ದವಿರುತ್ತಮ್". ಮುಂದೆ ಪರದೇವತಾ ವಿಶೇಷ ನಿರ್ಧಾರಕವಾದ ಶ್ರೀಮನ್ನಾರಾಯಣನ ಪರತ್ವವನ್ನು ತಾವೂ ಚೆನ್ನಾಗಿ ಮೆಲಕು ಹಾಕಿ ಕೇಳುವವರಲ್ಲೂ ಈ ವ್ಯಾಪಕ "ನಾರಾಯಣ" ನಾಮದಿಂದಲೇ ಪ್ರತಿಪಾದಿಸಲ್ಪಡುವ ಗಹನವಾದ ಅಮೃತಲಹರಿಯನ್ನೇ ೯೬ ತಮಿಳ್ ಪಾಶುರಗಳಿಂದ **ಸರ್ವಶಾಖಾ ವೇದಾನ್ತ ಪ್ರತ್ಯಯ***ಕ್ಕೆ ಮೆರಗು ಕೊಡುವಂತಹ "ನಾನ್ ಮುಹನ್" ಸಿರಿಯನ್ತ್ಯಾದಿಯನ್ನು ದಯಪಾಲಿಸಿದರು.

ಮೊದಲಾಳ್ವಾರ್, 'ಸರಸ್ಯ, ಭೂತ, ಉನ್ಮತ್ತಮಹಾನ್' ಎಂಬೀ 'ಪೊಯ್‌ಹೈ, ಪೂದಮ್, ಪೇಯ್' ಮುನಿತ್ರಯರೂ, ಆ ಪರಬ್ರಹ್ಮ ವಸ್ತುವನ್ನು ಜೀವಾತ್ಮರೆಲ್ಲಾ ಅನುಭವಿಸಬೇಕಾದರೆ, ಜ್ಞಾನ, ಪ್ರೇಮ, ದರ್ಶನಗಳೆಂಬ ಈ ಮೂರು ಹಂತಗಳಲ್ಲಿ, ವಿಶ್ವಮಾನವರಿಗಿತ್ತರೆ, ಇವರು ಆ ಭೂಮಾತತ್ವದ ಸರ್ವಶ್ರೇಷ್ಠತೆಯನ್ನು ಮುಮುಕ್ಷುವಿನ ಸಾರತಮ ವಿವೇಕಕ್ಕಾಗಿ, ರಾಜಸ ತಾಮಸ ಪೌರಾಣಿಕ ಬ್ರಹ್ಮರುದ್ರಾದಿಗಳು ಬದ್ಧ ಚೇತನರೆಂಬುದನ್ನೂ, ಅದೇ ಔಪನಿಷದ ಪರಮಪುರುಷನಿಗೇ, ಬ್ರಹ್ಮ, ಶಿವಾದಿ ವಾಚಕ ಶಬ್ದಗಳೂ, ಅನ್ವಯಿಸುವುವೆಂಬ ಮಹಾಸಮನ್ವಯದ ಬಂಡವಾಳವನ್ನು ನೀಡುತ್ತಾರೆ. ಇಡೀ ಜಗತ್ತಿಗೆ ಇರುವುದು "ಒಂದೇ ವ್ಯಾಪಕಧರ್ಮ", ಎಂಬ ಸ್ಪಷ್ಟೋಕ್ತಿಯಿಂದ ತಿಳಿಸಿದ್ದಾರೆ. ವೈಶ್ವಿಕ ನರಸಮೂಹಧರ್ಮನೇ "ನಾರಾಯಣ"!

---

* "ಯಾವುದೇ ವೇದಗಳ ನಾನಾ ಶಾಖೆಗಳಲ್ಲಿ ಹೇಳಿರುವ ಅಗ್ನಿಹೋತ್ರ ಎಂಬ ಕರ್ಮವೂ ಒಂದೇ" ಇದು ಸರ್ವಶಾಖಾ ಪ್ರತ್ಯಯ.
"ಯಾವುದೇ ಉಪನಿಷತ್ತಿನಲ್ಲಿ ಹೇಳಿರುವ ಜಗತ್ಕಾರಣ ವಸ್ತುವೂ ಶ್ರಿಯಃ ಪತಿಯಾದ ನಾರಾಯಣನೊಬ್ಬನೇ" ಇದು ಸರ್ವವೇದಾಂತ ಪ್ರತ್ಯಯ.

ತಿರುಚ್ಚನ್ದ ವಿರುತ್ತಮ್ ೪೮

കുന്നില് നിന്നുവാന് ഇരുന്നു നീള് കടല് കിടന്നു മണ് ഒന്നു ശെന്നുതൊഴ്വു യുണ്ടു അതോന് ഇടന്നു പന്നിയായ്|
നന്നു ശെന്ന നാള്അവത്തുള് നല്ഉയിര് പടൈത്തവര്ക്കു അന്നുതേവ് അമൈത്തളിത്ത വാടാദി തേവന് അല്ലൈയേ||

ಕನ್ನಡ ನೆರಳ್

ಬೆಟ್ಟ ನಿಂತು ಬಾನ್ ಕುಂತು ನೀಳ್ಗಡಲ್ ಪವಡಿಸೋರ್, ಮಣ್ಣನೊಟ್ಟಿಳೆದು ಮತ್ತೆ ಅದನೊಂದಾಗಿಉಂಡು, ಅದೊಂದೆಡೆದು ಹಂದಿಯಾಗಿ|
ಸಂದ ಆ ನಲ್ ದಿನಗಳೊಳ್ ನಲ್ಲೆಯುಸಿರ ಮನುಜಜನುಮದವರ್ಗಂದು ದಿವ್ಯ ಸೃಷ್ಟಿಗೈದು, ಅಳಿಸಿದಾದಿದೇವನಲ್ಲವೇ||

ಮಾರ್ಕಂಡೇಯರಂತೆಯೇ 'ತಿರುಮಳಿಶೈ - ಭಕ್ತಿಸಾರ'ರೂ ಚಿರಂಜೀವಿಗಳು. ನಾನ್ ಮುಹನ್ತಿರವನ್ದಾದಿಯಲ್ಲಿ ದೇವರ ಪರತ್ವದ ಬಗ್ಗೆ ಪರೋಪದೇಶ ಪ್ರಧಾನವಾದ ಶೈಲಿಯದು. "ತಿರುಚ್ಚಂದ ವಿರುತ್ತಮ್" ಸ್ವಾನುಭಾವ ಪ್ರಧಾನ! **"ಜಗತ್ತಿನ ಸರ್ವಸ್ವಗಳಿಗೂ ಪ್ರಧಾನ ಕಾರಣ ವಸ್ತು. ಪರಮ ಪದ ನಿಲಯನಾದ ಸರ್ವೇಶ್ವರನೇ"**. ಅವನೇ ಸರ್ವರಿಗೂ ಈಗಿನಿಂದಲೇ ಇಲ್ಲಿ ಅಲ್ಲಿ ಪರಮ ಫಲವಾಗಿ ಹೊಂದಲ್‌ತಕ್ಕ ಪ್ರಾಪ್ಯ! ಈ ಮಹಾಪುರುಷಾರ್ಥಕ್ಕೆ ಸಿದ್ಧೈಕ ಸಾಧನನೂ ಅವನೇ. ಸರ್ವಚೇತನರೂ ಅವನ ಸೇವೆಗಾಗಿಯೇ. ಜಡವೆನ್ನುವ ಅಚೇತನಗಳು, ಸೇವೋಪಕರಣಗಳು. ಅಂತಹ ಓರ್ವನನ್ನೇ, ನಮ್ಮಂತಹವರು, ಅತ್ತಣ "ವೈಕುಂಠಕ್ಕಾಗಲಿ", ಇತ್ತಣ "ವ್ಯೂಹ" ಸ್ಥಾನಕ್ಕಾಗಲಿ ಹೋಗಲಾರೆವಷ್ಟೆ. ಆದುದರಿಂದ ಹೇಗೆ ನಾವೆಲ್ಲಾ ಆಶ್ರಯಿಸುವುದು? ಇವೆರಡಕ್ಕೂ ದೂರ ಉಳಿದಿರುವ ಭಾಗ್ಯಹೀನರಿಗೆ ಪೂಜೆ ಮಾಡುವ ಅವರವರಿಗೆ ಪರಾಧೀನನಂತೆ, ಬಾಯ್ ಬಿಡದೆ, ಅವರವರ ಭಾವಕ್ಕೆ ತಕ್ಕವನಾಗಿ

"ಯೇ ಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಮ್"

"ಪತ್ರಂಪುಷ್ಪಂ ಫಲಂ ತೋಯಮ್" ಅವರವರ ಇಷ್ಟ ದೈವಗಳೇ! ಯಾರೋರ್ವರೂ ನಾಸ್ತಿಕರಿಲ್ಲ. ಅವರವರು ಹೇಗೆ ಭಾವಿಸಿದರೂ, ಹಾಗೆಂದು ಬೇರೆ ಕೆಲವರು ಆ ಹಣೆಪಟ್ಟಿ ಅಂಟಿಸಿದರೂ - "ಮಮವರ್ತ್ಮ" ನನ್ನ ಹಾದಿಯನ್ನೇ "ಅನುವರ್ತನ್ತೇ" ಅನುಭವಿಸಿ ಅನುಸರಿಸುವವರಪ್ಪಾ ಅರ್ಜುನಾ! "ಮನುಷ್ಯಾಃ ಪಾರ್ಥಸರ್ವಶಃ" ಅಧ್ಯಾತ್ಮದಲ್ಲಿ ಮಾನವನನ್ನು ವಿಂಗಡಿಸುವ ಪಕ್ಷಭೇದ ಇಲ್ಲವೇ ಇಲ್ಲ. ಇದೇ "ಅರ್ಚಾವತಾರ". ದೇವನೊಬ್ಬ ನಾಮ ಹಲವು! ಎಲ್ಲಾ ಪವಿತ್ರ ಸ್ಥಾನಗಳೂ ವಿಶ್ವಮಂದಿರಗಳೇ! "ವಿಶ್ವನೀಡಂ" ಹಕ್ಕಿಗಳು ಬೇರೆ ಬೇರೆಡೆಗಳಲ್ಲಿ ಬೆಳಗಿಂದ ಸಂಜೆಯವರೆಗೆ ವಿಹರಿಸಿದರೂ, ಸೇರುವುದು ತಮ್ಮ ತಮ್ಮ ಒಂದೇ ಗೂಡಿಗೆ! **"ಯತ್ರ ವಿಶ್ವಂಭವತ್ಯೇಕನೀಡಮ್"** - ತೈತ್ತಿರೀಯ ಮಹಾನಾರಾಯಣೋಪನಿಷತ್. ಅವರವರ ಭಾವಾನುರೂಪವಾದ ಆರಾಧ್ಯವಸ್ತು, ಅವರವರ ತಪ್ಪುಗಳನ್ನು ಮನ್ನಿಸುತ್ತಲೇ ಇರುವ ಕ್ಷಮಾಮೂರ್ತಿ. ಕೇಳಿದ ಫಲನೀಡುತ್ತಲೂ, ಫಲ ನೀಡದಿದ್ದಾಗ, ಮಾನವನ ಪುನರ್‌ವಿವೇಚನಕ್ಕೇ ಬಿಟ್ಟು, ಸರಿಯಾದ ಕಾಲಪಾಕಕ್ಕಾಗಿ ಅತಿಸಹನೆಯಿಂದಲೂ ಕೂಡಿರುತ್ತದೆ. ಈ ಭಕ್ತರಿಂದ ಅರ್ಚಿಸಲ್ಪಡುವ ಅರ್ಚ್ಯಮೂರ್ತಿ. ಬೇರೆಲ್ಲೂ ಸಿಗದ, ಶಾಂತಿ ಸಮಾಧಾನ, ಸ್ವಾಸ್ಥ್ಯ, ನಿಜವಾದ ನ್ಯಾಯಪರಿಹಾರ, ಗ್ರಾಮ ಗ್ರಾಮಗಳ, ಏಕೋಭಾವ ಎಲ್ಲವನ್ನೂ ವಿವೇಕದಿಂದ ರಕ್ಷಿಸಿಕೊಂಡು ಬರುವಂಥವೇ, ದೇವಾಽಽಲಯಗಳು. ಸೌಲಭ್ಯ, ಸೌಶೀಲ್ಯ, ವಾತ್ಸಲ್ಯ ಗುಣಗಳನ್ನು ಈ ಮೂರ್ತಿಗಳಲ್ಲೇ ಚೆನ್ನಾಗಿ ಭಾವಿಸಲೂಬಹುದು. ಈಗಿನ ಹಲವಾರು ಯಾತ್ರಾಸ್ಥಳಗಳಲ್ಲಿನ, ಅಸಾಮಾಜಿಕ, ಅನೀತಿ, ಅರ್ಥಪ್ರಾಧಾನ್ಯಾದಿಗಳೆಲ್ಲಾ, ಜಗತ್ತಿನ ಬೇರೆ ಬೇರೆ ಸಾರಾಸಗಟಿನ ಸಂಘ ಸಂಸ್ಥೆಗಳ ಪ್ರಭಾವವೇ ಹೊರತು, ಮೂಲತಃ ಆಧ್ಯಾತ್ಮಿಕ ಸಂಸ್ಥೆಗಳದಲ್ಲ. ಅಂತಹ ಏಡೆಗಳನ್ನು ಮಾನವ ರಚನಾತ್ಮಕವಾಗಿ ಪುನಸ್ಸಂಸ್ಕರಿಸಬೇಕಷ್ಟೆ. ಬಹಿಷ್ಕರಿಸಿದ ಮಾತ್ರಕ್ಕೆ ನಮ್ಮ ಕರ್ತವ್ಯ ಮುಗಿಯದು. ಪರ್ಯಾಯ ವ್ಯವಸ್ಥೆಗಳನ್ನು ತರುವ ಥಾಕತ್ತು, ಭಕ್ತಿಯ ಶಕ್ತಿಯಿಂದಲೇ ಹೊರತು, ಕೇವಲ ಸಂಘರ್ಷ ಬಂಡಾಯಗಳಿಂದಲ್ಲ. ಕತ್ತಲೆ ನೀಗಲು ದೀಪಹಚ್ಚುವುದೊಂದೇ ರಚನಾತ್ಮಕ ದಾರಿ. ದೊಣ್ಣೆ ಬರಲುಗಳಿಂದ ಅದು ಹೋಗದು. ಸ್ವಯಂ ಸಂತೋಷದಿಂದ ಸೇವೆ, ಸರಿದಾರಿಯಿಂದಲೇ ಹಿರಿಯ ಗುರಿ, ಇವುಗಳೇ ಮಾನವ ಜೀವನದ ಸರ್ವಸ್ವ. ನಿಸ್ವಾರ್ಥ ಪರಾರ್ಥ ಸುಖವೇ ಶಾಶ್ವತ ಸುಖ.

ಸಾಧನೆಯ ಮಾತು ಬಂದಾಗ ಕರ್ಮ, ಜ್ಞಾನ, ಭಕ್ತಿಮಾರ್ಗಗಳ, ಈ ತ್ರಿವೇಣಿ ಕಾಣಿಸುತ್ತದೆ. ಇವೆಲ್ಲದರ ಪರಿಪಾಕವೇ **"ಶರಣಾಗತಿ - ಪ್ರಪತ್ತಿ."**

ಇದೂ, ಅನನ್ಯದಾಸ್ಯ ಅಕಿಂಚನ್ಯ, ಅನನ್ಯ ಭೋಗ್ಯತೆಗಳೆಂಬ ಮೂರು ಗಿಣ್ಣಿನ ಒಂದೇ ಕಬ್ಬಿನ ಸಿಹಿ ಜಲ್ಲೆಯಿದ್ದಂತೆ! ಇಂಥವರೇ ಶರಣ, ಪ್ರಪನ್ನರು. ಇಂತಹವರ ಪ್ರವೃತ್ತಿಗಳೆಲ್ಲವೂ, ಪರಾತ್‌ಪರನಿತ್ತಿರುವ ಪ್ರಸಾದದ ಫಲವೇ ಹೊರತು, ಸ್ವಂತ ಸ್ವತಂತ್ರ ಸಾಧನವನಲ್ಲ. ಈ ದೃಢತೆಯಿಂದಲೇ ಆಳ್ವಾರ್, ಈ ಶ್ರೀಭನ್ನೋ ವೃತ್ತದಲ್ಲಿ ಸರ್ವಲೋಕ ಶರಣಾಗತಿಗೆ ಏಕಮಾತ್ರ ಶರಣ್ಯನಾದವನನ್ನು ತಾವು ಆಶ್ರಯಿಸಿ, ಅವನ ಕೃಪಾಪೂರ್ವಕ ದರ್ಶನ ಮಾಡಿ ಪೂರ್ಣಮುಕ್ತಿ ಪಡೆದುದನ್ನು ವರ್ಣಿಸಿದ್ದಾರೆ.

ಕುನ್ನಿಲ್ ನಿನ್ನು = ಯಾರು ಬೇಡಿದರಯ್ಯಾ? ಈ ತಿರುಮಲೈಯಲ್ಲಿ ನಿಂತು ಈ ವನರಾಜಿಗೂ, ವಾನರರಿಗೂ, ಬೇಡರಿಗೂ ದರ್ಶನ ಈಯುತ್ತಾ ಇರುವಿಯಲ್ಲಾ! ವಾನ್ ಇರುನ್ದು = ಪರಮವ್ಯೋಮದಲ್ಲಿದ್ದೂ ಸಹ! ಅಲ್ಲಿನ ನಿತ್ಯ ಮುಕ್ತರಿಗೆ ಮಹಿಷೀಪರಿವಾರಗಳಿಗೆ ಪರತ್ವದ ಗಂಭೀರ ದರ್ಶನ ನೀಡುತ್ತಲೇ ಇದ್ದು, ಚತುರ್‌ಮುಖ ಇಂದ್ರಾದಿ ದೇವತೆಗಳಿಗೆ ಆಸುರೀ ಸಂಪನ್ನರಿಂದ ಆಪತ್ತುಗಳು ಒದಗಿದಾಗ ಅವರ ಭೇಟಿಗಾಗಿ, ನೀಳ್ ಕಡಲ್ ಕಿಡನ್ದು = ವಿಶಾಲವಾಗಿ ಕೈ ಬೀಸಿ ಕಾಲ್ ಬೀಸಿ, ಅದಕ್ಕೇ ತಕ್ಕ ಉದ್ದಗಲದ, ಹಾಲ್ಗಡಲಿನಲ್ಲಿ ಹಾಯಾಗಿ ಪವಡಿಸಿ, ''ಭೂರ್ ಭುವಃ ಸುವಃ'' ಎಂಬ ತ್ರೈಲೋಕ್ಯವನ್ನು ಮಾತ್ರ ಬಲಿ ಅಪಹರಿಸಿದ್ದು. ಆದರೂ ''ಮಹರ್ ಜನಸ್ ತಪಸ್ ಸತ್ಯ'' ಲೋಕಗಳಷ್ಟೇ ಅಲ್ಲ! ವಿರಜಾ ನದಿಯನ್ನೂ ದಾಟಿ ವೈಕುಂಠಕ್ಕೂ ತ್ರಿವಿಕ್ರಮನಾಗಿ ಬೆಳೆದು ಪಾದ ನೀಡಿದೆಯಲ್ಲಾ! ''ಸ ಭೂಮಿಂ ವಿಶ್ವತೋವೃತ್ವಾ| ಅತ್ಯತಿಷ್ಠದ್ದಶಾಂಗುಲಮ್'' ಹತ್ತೇ ಅಂಗುಲವೆಂಬರ್ಥವಲ್ಲ. ''ಪರಮಪದತ್ತುಕ್ಕು ಮೇಲ್ ಎಲ್ಲೈಯಿಲ್ಲೈ'' ಎಂಬಂತೆ ಅನನ್ತವಾಗಿ ಹರಡಿಕೊಂಡೆಯಲ್ಲಾ! ಚೈನಾಗಮ ಸಹ ಊರ್ಧ್ವಗತಿಗೆ ಒಂದು ಇತಿಮಿತಿಯಿಲ್ಲ ಎನ್ನುತ್ತದೆ. ಬೌದ್ಧರೂ ''ನಿರ್ವಾಣ'' ಪರಮಾನಂದ, ಸಕಲ ಆಶಾಪಾಶಗಳ ಸಂಪೂರ್ಣ ಕ್ಷಯವೆಂದೇ ಹೇಳುವುದು.

ಸ್ವಾಮಿಗೆ ಹೀಗೆಯೇ ಎಸಗಬೇಕೆಂದು ಯಾರೋರ್ವರೂ ಕೇಳದಿದ್ದರೂ! ಮಣ್ಣೊನ್ನು ಶೆನ್ನು = ಪ್ರಧಾನವಾದ ಮಣ್ಣಿನ ಈ ಲೋಕವನ್ನು ಮಾತ್ರ ಅಳೆದರೂ, ಅನುಷಂಗಿಕವಾಗಿ ಸಮಸ್ತವನ್ನೂ ಮೃದುವಾಗಿಯೇ ವಿಕ್ರಮಿಸಿದೆ! ಅದು, ಒನ್ನೈ ಉಣ್ಡು = ಜಲಪ್ರಳಯ ಕಾಲದಲ್ಲಿ ಭೂಮಿಯನ್ನು ನುಂಗಿ ಅದು ಒನ್ನು ಇಡನ್ದು = ವರಾಹನಾಗಿ ಮುಳುಗಿ ಪಾಚಿ ಕಟ್ಟಿದ್ದ ಅದೇ ಭೂದೇವಿಯನ್ನು ಕೋರೆಗಳಿಂದೆಡೆದು, ನನ್ನು ಶೆನ್ನನಾಳ್ ಅವತ್ತುಳ್ = ಆ ವರಾಹಕಲ್ಪ ಒಳ್ಳೆಯ ಕಾಲ? ಆಗ, ನಲ್‌ಉಯಿರ್ ಪಡೈತ್ತು = ನಿನ್ನ ಅಜ್ಞಾರೂಪವಾದ ಸಚ್ಛಾಸ್ತ್ರಗಳನ್ನು ಸದಸದ್ ವಿವೇಕದಿಂದರಿಯಲು, ಮನನ, ಆಚರಣೆ, ಉಚ್ಚಾರಣೆ ಗೈಯ್ಯಲು ತಕ್ಕುದಾದ ಮಾನವರನ್ನೆಲ್ಲಾ ಮನುವೆಂಬ ಒಬ್ಬನೇ ಆದ ಮೂಲ ಪುರುಷನಿಂದ ಹುಟ್ಟಿಸಿ, ಅವರ್‌ಕ್ಕು = ಅಂತಹ ಸೂಕ್ಷ್ಮಮತಿಗಳಿಗೂ ಕೂಡ, ಸತ್ವಗುಣ ಕಡಿಮೆಯಾಗಿ ರಜೋಗುಣ ತಮೋಗುಣಗಳೇ, ಲಾಭಲೋಭ, ಸೋಮಾರಿತನವೇ ಸಾಮಾಜಿಕ ವೈಶ್ವಿಕವಾದಾಗ, ತೇವು = ಅವರನ್ನೇ ಮೈಬಗ್ಗಿ ಕೆಲಸ ಮಾಡುವ ಸತ್ ಪ್ರಜೆಗಳನ್ನಾಗಿಸಲು, ಅಮೈತ್ತು = ಅವರೊಡನೆ ಹೊಂದಿಕೊಂಡೇ, ಅವರೂ ನಿನ್ನೊಡನೆ ಹೊಂದಿಕೊಳ್ಳುವಂತೆಯೂ ಸಂಧಾನ ಗೈದು! ಮತ್ತೆ ಮತ್ತೆ ನಿರಾಸೆ ಪಡದೆ ಸೃಷ್ಟಿಸಿಯೂ, ಸತ್ ಪುರುಷರನ್ನೂ ಯುಗಪುರುಷ- ಯುಗಮಹಿಳಾಮಣಿಗಳನ್ನು ತೋರಿಯೂ, ಕಾನೂನಿನ ಕಾನನಕ್ಕೆ, ಮದ್ದುಗುಂಡುಗಳಿಗೆ ನಾನಾ ಬಾಂಬುಗಳಿಗೆ ಬದಲಾಗಿ 'ಸತ್ಯ-ಪ್ರೇಮ-ಕರುಣಾ' ಮೂಲಕ ಶಾಂತಿಮಾರ್ಗದಿಂದಲೇ - ಎಂಬಿಷ್ಟೂ ಅರ್ಥ ''ಅಮೈತ್ತು'' ಈ ಮೂರಕ್ಷರದ ಶಕ್ತಿಶಾಲಿಯಾದ ಒಂದೇ ಪದದಲ್ಲಿ ಅಡಗಿದೆ! ಮಿತಿಮೀರಿದಾಗ ನೀನೇ ಕಾಲಕ್ಷಯಕೃತ್ ಪುರುಷನಾಗಿ ಪೂರ್ಣ ಸಂಹರಿಸಿ, ಅಳಿತ್ತು = ಅಂತಹ ನೀನಾರು? ಆದಿದೇವನ್ = ಮೂಲಕಾರಣನಾದ ಆಟಗಾರನೇ, ದೇವಾಽಧಿದೇವ, ಪರಮಾತ್ಮ. ಅಲ್ಲೈಯೇ = ನೀನೇನೋ ಒಂದು ವೇಳೆ ''ನಾನಲ್ಲ'' ಎಂದಾಗಲೀ, ''ಓಹೋ! ಎಲ್ಲಾ ದೇವರೇ ಬಂದು ಮಾಡಿಬಿಡುತ್ತಾನೆ!'' ಎಂಬ ಬೇಜವಾಬುದಾರಿಯ, ಅವಿನಯದ ಮಾತಾಡುವವರಾಗಲೀ! ಅವರಿಗೆ ಮಹಾ ಸಮಷ್ಟಿ ಪ್ರಜ್ಞೆ ಒಂದು ಕಾಲಕ್ಕೆ ಬಂದೇ ತೀರುತ್ತದೆ! ಈ ಮಹಾವಿಶ್ವಾಸ ನನಗಿದೆಯಪ್ಪಾ! ಅದೂ ನಿನ್ನ ಕರುಣೆಯಿಂದಲೇ!

ತಮಿಳ್ ತಿರಳ್ ೬೦

ಶೆಳುಮ್ ಕೊಳುಮ್ ಪೆರುಮ್ ಪನಿ ಪೊಳಿನ್ದಿಡ ವುಯರ್‌ನ್ದ ವೇಯ್
ವಿಳುನ್ದುಲರ್‌ನ್ದೆಳುನ್ದು ವಿಣ್ ಪುಡೈಕ್ಕುಮ್ ವೇಜ್ಗಡತ್ತುಳ್ ನಿನ್ನು |
ಎಳುನ್ದಿರುನ್ದು ತೇನ್ ಪೊರುನ್ದು ಪೂಮ್ ಪೊಳಿಲ್ ತಳೈ ಕ್ಕೊಳುಮ್
ಶೆಳುನ್ದಡ ಕ್ಕುಡನ್ಸ್ರೆಯುಳ್ ಕಿಡನ್ದ ಮಾಲುಮಲ್ಲ್ರೆಯೇ||

ಕನ್ನಡ ನೆರಳ್

ಹದ್ದು ಮೀರಿದ ಹಿರಿಹನಿ, ಸುರಿಯಲ್ ಬಿದ್ದ ದನಿಯಿಂ ಎದ್ದ ಬಿದಿರ್ ಅದೋ
ಎದ್ದು ಬಾಗಿ ಬಾನ್ ಮುಟ್ಟಿರಲ್, ಅಂಥ ವೇಂಕಟಾದ್ರಿಯಲ್ಲಿ ನಿಂತು |
ಎದ್ದಿದ್ದು ಭೃಂಗ ಹರಗುವೋಲ್ ಜೇನ್ ತುಂಬಿ ಹೃಷ್ಟಪುಷ್ಪಭರಿತ, ಸ
ವೊಮ್ಮದ್ದ ಕೆರೆಗಳ ಕುಡನ್ಸ್ರೆಯೊಳ್ ಪವಡಿಸಿರುವ ಮುಗುದನಲ್ಲವೇ||

ಸರ್ವೇಶ್ವರ ತನಗೆ ಭೋಗಸ್ಥಾನಗಳನ್ನಾಗಿ ಯಾತ್ರಾಧಾಮಗಳನ್ನು ಆರಿಸಿಕೊಂಡಿರಲು ಕಾರಣ, ಭಕ್ತರಿಗೂ ಅಂತಹ ದಿವ್ಯ ಮಹಾಪುರುಷನೇ ವರಿಸಿರುವ ಅವವುಗಳಲ್ಲಿಯೂ ಪ್ರಾವಣ್ಯ ಬೆಳೆಯಲೆಂದೇ! ಆಶ್ರಿತರ ಅಭಿರುಚಿಗೆ ತಕ್ಕಂತೆ ಅವರ ಮೇಲಿನ ವ್ಯಾಮೋಹವೇ!

ಕ್ಷೀರಸಮುದ್ರದ ಆ ಕಾರ್ಯವೈಕುಂಠದಲ್ಲೇ ಆದಿಶೇಷನ ಮೇಲೆ ಮಲಗಿದ್ದರೆ ಏನೊಂದು ಆನಂದವೋ ತಿರುಪತಿಯ ಈ ಶೇಷಗಿರಿಯಲ್ಲೂ ಕುಂಭಕೋಣದಲ್ಲೂ ಅದೇ ಆನಂದ ತುಂದಿಲನಾಗಿರುವ ನೆಂಬುದನ್ನು ಈ ಒಂನೆಯ ಪಾಶುರದಲ್ಲಿ ಅನುಭವಿಸುತ್ತಾರೆ ಭಕ್ತಿಸಾರರು.

ಸೂರ್ಯಕಿರಣದಿಂದಲೇ ಮಳೆಹನಿ, "ಆದಿತ್ಯಾತ್ ಜಾಯತೇವೃಷ್ಟಿಃ" ಶೆಳುಮ್ = ಕರಗಿ, ಕೊಳುಮ್ = ಧಾರಾಕಾರವಾಗಿ ಪೆರುಂಪನಿ = ಮಂಜುಗೆಡ್ಡೆಯಂತಹ ಝಿಲ್ಲನ ಹಿರಿ ಹನಿ, ಪೊಳಿನ್ದಿಡ = ಬಿಡದೇ ಸುರಿಯಲು, ಅದರಿಂದಲೇ, ಉಯರ್ನ್ದ = ಮೇಲ್ ಬೆಳೆದ, ವೇಯ್ = ಕೀಚಕಮೆಳೆಗಳು, ಹಿಮದ ಧಾರಾಭಾರಕ್ಕೆ, ವಿಳುನ್ದು = ಕೆಳಗೆ ಬಾಗಿ ಬಿದ್ದು, ಉಲರ್ನ್ದು = ಹಾಗೆಯೇ ಒಣಗಿ, ಎಳುನ್ದು = ಬಿಸಿಲಿನಿಂದ ಚೇತರಿಸಿಕೊಂಡು ಮೇಲ್ ಎದ್ದು, ವಿಣ್ ಪುಡೈಕ್ಕುಮ್ = ಆಕಾಶವನ್ನೇ ಮುಟ್ಟುವ, ಆ ಸನ್ನಿವೇಶದ, ವೇಙ್ಗಡತ್ತುಳ್ = ಪುಣ್ಯಪಾಪಗಳ ಉಭಯ ವಿನಾಶಕ ಮೋಕ್ಷಧಾಮವೂ ಆದ ತಿರುಪತಿಯಲ್ಲಿ, ನಿನ್ನು = ಠೀವಿಯಿಂದ ನಿಂತಿರುವ ಚೆಂದವನ್ನು ತೋರಿಸಿ, ತೇನ್ = ಜೇನ್ ಕುಡಿಯುವ ಭ್ರಮರಗಳು, ಎಳುನ್ದು = ನಿದ್ದೆಯಿಂದೆದ್ದು, ಪೊರುನ್ದು = ಹಾರಿ ಸಂಚರಿಸುವ, ತಳ್ಳೈ = ಹೊರುವಾಗಿ ಬೆಳೆದ ದಳಗಳಿಂದ, ಕೊಳುಮ್ = ಹಳಹಳಿಸುವ, ಪೊಳಿಲ್ = ಪುಷ್ಪೋಪವನಗಳಿಂದ, ಶೂಳ್ = ಸುತ್ತುವರಿದಿರುವ, ತಡಂ = ಕೆರೆಗಳುಳ್ಳ, ಕುಡನ್ದೈಯುಳ್ = 'ತಿರುಕ್ಕುಡನ್ದೈ' ಎಂದು ತಮಿಳಿನಲ್ಲಿ ಕರೆಯಲ್ಪಡುವ ಕುಂಭಕೋಣ ಕ್ಷೇತ್ರದಲ್ಲಿ, ಕಿಡನ್ದ = ಮಲಗಿರುವವ, ಮಾಲುಂ ಅಲ್ಲೆಯೇ = ವಾತ್ಸಲ್ಯಘನನೇ ಅಲ್ಲವೇ? ನಿಂತಿರುವ ಭಂಗಿ ತಿರುವೇಂಕಟದಲ್ಲಿ. ಭಕ್ತರ ರುಚಿಭೇದದಿಂದ ಆಸನಭೇದಗಳಿದ್ದರೂ ಪ್ರಾದೇಶಿಕ ಭಿನ್ನತೆಯಿದ್ದರೂ, ಭಕ್ತವತ್ಸಲ ತಾರತಮ್ಯವಿಲ್ಲದ ಸಂಪೂರ್ಣ! ನಮ್ಮದು 'ದ್ವೈತ' ಪ್ರಪಂಚದಂತೆ ಕಂಡರೂ, ಅವನದು 'ಅದ್ವೈತ'ವೇ! ದ್ವೈತಾದ್ವೈತಗಳ ಸಮನ್ವಯ ಸೌಂದರ್ಯ ಏನೆಂಬುದನ್ನು ಆಳ್ವಾರ್‌ಗಳ, ಇಂತಹ ಅಯಪಾಣಿಯಾದ ಅವರ ಶ್ರೀ ಸೂಕ್ತಿ ಭಾಗಗಳಿಂದ ನಾವು ಕಾಣಬಹುದು.

ತಮಿಳ್ ತಿರಳ್ ೬೫

ನಿರ್ಪ್ಪದುಮೋರ್ ವೆರ್‌ಪಹತ್ತಿರುಪ್ಪು ವಿಣ್, ಕಿಡಪ್ಪದುಮ್ ನರ್‌ಪ್ಪೆರುಮ್ ತಿರೈ ಕ್ಕಡಲುಳ್ ನಾನ್ ಇಲಾದ ಮುನ್ ಎಲಾಮ್|
ಅರ್ ಪುದನನನ್ತ ಶಯನನ್ ಆದಿಪೂದನ್ ಮಾಧವನ್ ನಿರ್ಪ್ಪದುಮ್ ಇರುಪ್ಪದುಮ್ ಕಿಡಪ್ಪದುಮ್ ಎನ್‌ನೆಞ್ಚುಳೇ||

ಕನ್ನಡ ನೆರಳ್

ನಿಲ್ಮೈಯೂ ಒಂದೆ ಗಿರಿಯೊಳು, ಇರುವು ಬಾನೊಳು, ಕೆಡೆವುದೂ ನಲ್ ಹಿರಿತೆರೆಯಕಡಲೊಳ್ ಎಂಬುದೂ, ನಾನೇ ಇಲ್ಲ ಮುಂದೆಲಾ|
ಅದ್‌ಭುತನ್, ಅನಂತಶಯನನ್, ಆದಿಭೂತ, ಮಾಧವನ್ ಸದ್ಯ ನಿಲುಮೆ, ಇರ್ಪುಗೆ ಮಲಗುಗುಗೆನ್ನ ಮನದೊಳೇ||

ಭಗವಂತನ ತಿರುವಡಿಗಳಲ್ಲಿ ರುಚಿ ಇಲ್ಲದಿರುವಾಗಲೇ, ಓರ್ ವೆರ್ ಪಹತ್ತು = ಎಂತಹ ಕೆಳಮಟ್ಟದವರಿಗೂ ಮುಖ ತೋರಿಸುತ್ತಲೇ ಇರುವ, ನಿರುಪಮಗಳಾದ ಸೌಲಭ್ಯ, ಸೌಶೀಲ್ಯ ವಾತ್ಸಲ್ಯಾದಿ. ಗುಣಗಳನ್ನು ಪ್ರಕಾಶಪಡಿಸುವುದರಿಂದ ತಿರುಪತಿ ಬೆಟ್ಟವೂ, ಓರ್ = ಅದ್ವಿತೀಯವಾದುದು. ಅಂತಹ ಗಿರಿಯಲ್ಲಿ, ನಿರ್‌ಪದುಮ್ = ನಿಂತೇ ಇರುವುದೂ, ಆಸೆಯಿಲ್ಲದವರಿಗೂ ಆಸೆ ಹುಟ್ಟಿಸುವುದಕ್ಕಾಗಿಯೇ! ಈಗಾಗಲೇ ರುಚಿ ಹತ್ತಿರುವ ಚೇತನರಿಗೆ, ಇನ್ನೂ ಹೆಚ್ಚುಹೊತ್ತು ನೋಡುತ್ತಲೇ ಇರೋಣ! ಹಾಗೂ "ಸದಾಪಶ್ಯನ್ತಿ ಸೂರಯಃ" ನಿತ್ಯರಿಗೂ ಮುಕ್ತರಿಗೂ ದರ್ಶನ ನೀಡುವುದಕ್ಕಾಗಿಯೇ! ವಿಣ್ ಇರುಪ್ಪು = ವೈಕುಂಠದಲ್ಲಿ, ಬಲಪಾದ ಮುಂದೆ ಪಸರಿಸಿ, ಎಡಪಾದ ಮಡಿಚಿ ಆ ಕುಳಿತಿರುವ ಠೀವಿ, ನಿಂತ ಕುಂತ ಇವೆರಡಕ್ಕೂ ಅಭಿರುಚಿ ತೋರದವರಿಗಾಗಿ, ನಲ್ = ಒಳ್ಳೆಯ ಅಂದರೆ ಇಷ್ಟಬಂದಂತೆ, ಪೆರುಂ = ತೋಳ್ ಬೀಸಿ ಮಲಗಲು ಇಕ್ಕಟ್ಟಾಗದ ತಿರುಮೇನಿಗಿಂತಲೂ ನೀಳ್ವೂ ಅಗಲವೂ ಆಗಿರುವ, ಮತ್ತು ಮೇಲೆದ್ದು ಹೊಡೆಯುತ್ತಲೇ ಇರುವ ಬೃಹತ್ ತರಂಗಗಳು ತಮ್ಮ ಹಸ್ತಗಳಿಂದ ದೇವರ ಪಾದ ಒತ್ತುತ್ತಿವೆಯೋ ಎಂಬಂತೆ; ಫಾಸಿಮಾಡದೆ ಉಪಚರಿಸುವ, ಕಡಲುಳ್ = ಹಾಲ್ಗಡಲಿನಲ್ಲಿ, ಕಿಡಪ್ಪದುಮ್ = ಯೋಗಾನಿದ್ರಾಸನದಲ್ಲಿರುವುದೂ!

ಇವೆಲ್ಲಾ ಒಂದೇ ಸ್ವಾಮಿಯವಲ್ಲಾ, ಅದೇ ಬೇರೆ ದೇವರು! ಇದೇ ಬೇರೆ ದೇವರು ಎಂಬೀ 'ಇರುಪತ್ತೈ' ದ್ವೈತ ಸಂಸ್ಕಾರ ಎಲ್ಲಿಯವರೆಗೆ? ನಾನ್ ಇಲಾದಮ್ಮು ಎಲಾಮ್ = ನನಗೂ ಸ್ವಾಮಿಗೂ ಇರುವ ಸಂಬಂಧಜ್ಞಾನ, ಪಕ್ವವಾಗಿಲ್ಲದಿದ್ದ ಆ ಹಿಂದಿನ ಕಾಲಕ್ಕೇ ಸೀಮಿತ! ಆಗ 'ನಾನು' ಎಂಬ ವಸ್ತುವೇ ಇಲ್ಲದ ಲೆಕ್ಕ! ಅಸತ್‌ಕಲ್ಪವಾಗಿತ್ತು. ಅಡಿನ ಕೊರಳಲ್ಲಿರುವ ಮೊಲೆಯಂತೆ! ಹಾಲಿಲ್ಲದಿದ್ದರೆ ಅದೆಂತಹ ಸ್ತನ? ಜೀವ ಪರಮಾತ್ಮರ ಸಂಬಂಧ ಜ್ಞಾನವೇ ಜೀವನ ಅಸ್ತಿತ್ವ, ಸಂಬಂಧದ ಅಜ್ಞಾನವೇ ನಾಸ್ತಿತ್ವ! ಏಕೆಂದರೆ 'ಆತ್ಮ'ನೆಂಬುದು ಚೈತನ್ಯ ಸ್ವರೂಪ ಹಾಗೂ ಚೈತನ್ಯಕ್ಕೆ ಆಧಾರವಾದ ಚೇತನವೂ ಹೌದು, ಆ ಉಭಯ ಧರ್ಮದ ಅರಿವೇ ಇಲ್ಲದಿದ್ದಾಗ ನಾನೇ ಇಲ್ಲ! ಇಲ್ಲಿ ತಿರುಪತಿಯಲ್ಲಿ ನಿಂತಿರುವಾಗಲೂ,ಕ್ಷೀರಸಾಗರ ವೈಕುಂಠದ ನೆನಪಿದ್ದೇ ಇರಬೇಕಾದುದೇ ಜೀವಾತ್ಮ ಲಕ್ಷಣ. ಇದನ್ನು ತಿಮ್ಮಪ್ಪ ಈಗ ಚೆನ್ನಾಗಿ ತೋರಿಸಿಕೊಟ್ಟ! ಇದೀಗ ಆಶ್ಚರ್ಯ! ಅರ್‌ಪುದನ್ = ಅದ್ಭುತ ಮೂರ್ತಿ! ಜ್ಞಾನ, ಶಕ್ತಿ ತುಂಬಿಯೇ ಇರುವವನು. ಅನನ್ತಶಯನನ್ = ಅಶೇಷ ಕೈಂಕರ್ಯಗಳಿಗೂ ಶ್ರೇಷ್ಠೋಪಮಾನನಾಗಿರುವ ಶೇಷನ ಶೈತ್ಯ, ಮಾರ್ದವ, ಧಾವಳ್ಯ, ಸೌಗಂಧ್ಯ, ವೈಶಾಲ್ಯ, ಈ

ಪಂಚಗುಣೋಪೇತವಾದುದೇ ಗಿರಿ! ಇಲ್ಲಿ ಮಲಗಲೂಬಹುದು, ಕುಳ್ಳಿರಲೂ ಬಹುದು! ಅಲ್ಲೆಲ್ಲಾ ಆ ಮೂರ್ತಿಗಳು ನಿಂತಿರಲೂ ಬಹುದು! ನಕಶ್ಚಿದ್ ವಿರೋಧಃ! ಪ್ರತಿಮೆಗಳನ್ನು ಟೀಕಿಸುವವರು ಈ ಮೂರ್ತಿ ವಿಜ್ಞಾನದ ಸೂಕ್ಷ್ಮಾಂಶಗಳನ್ನು ಸಹೃದಯರಾಗಿ ಅಧ್ಯಯನ ಮಾಡೋಣ. ಅಳಗಲದ ಈ ವಿಜ್ಞಾನದ ಭಾವುಕತೆಯ ರಹಸ್ಯವನ್ನೂ ಮೂಢಭಕ್ತರಾದ ನಾವೂ ತಿಳಿದುಕೊಳ್ಳೋಣ. ಶರಣರ ಮೂರ್ತಿನಿಷ್ಠೆ ಯಾವ ಮಟ್ಟದ್ದು! ಸರ್ವಪಂಚಾ ಸುಮಧುರಾ! ಒಮ್ಮುಖದ ನಿಷ್ಠೆಯಲ್ಲ, ಸರ್ವತೋಮುಖ! ಯಾರೊಬ್ಬರೂ ಏಕಾಂಗಿಗಳಾಗಿರಬಾರದು. ಉಭಯಾಂಗಿಗಳಾಗಬೇಕು. ಉಭಯವೇ ಅಭಯ!

ಆದಿಪೂದನ್ = ಸರ್ವಭೂತಗಳಿಗೂ ಮೊಮ್ಮೊದಲ ಕಾರಣನೂ ಈತನೇ! ಮಹಾಪ್ರಳಯದಲ್ಲಿ ಶ್ರಿಯಃ ಪತಿಯಲ್ಲದೆ, ಬೇರಾರೂ ಇರಲಿಲ್ಲವೆಂಬುದನ್ನು **"ಏಕಮೇವಾsದ್ವಿತೀಯಮ್ | ನ ಬ್ರಹ್ಮಾನೇಶಾನಃ ನೇ ಮೇದ್ಯಾವಾಪೃಥಿವೀ" "ಒನ್ನುಮ್ ತೇವುಮು ಉಲಹಮುಂ ಯಿರುಂ ಮತ್ತುಮ್ ಯಾದುಮಿಲ್ಲಾವನ್ನು"** ಅಂಥ ಪ್ರಪ್ರಥಮ ಕಾರಣ! ಅವನನ್ನೇ ಶಿವನೆನ್ನಿ! ಯಾವ ಹೆಸರಿನಿಂದಾದರೂ ಕರೆಯಿರಿ, "ಸರಿ ಸರಿ" ಎನ್ನುವವನೇ! ಏಕೆಂದರೆ ಸರ್ವಶಬ್ದಗಳೂ ಓರ್ವ ಸರ್ವಕಾರಣ ಪುರುಷನಲ್ಲಿಯೇ, ತಮ್ಮ 'ಶಕ್ತಿ'ಯನ್ನಿಟ್ಟಿವೆ! 'ಅನೇನ' ಜೀವೇನ ಆತ್ಮನಾ ಅನುಪ್ರವಿಶ್ಯ, ಜೀವಾತ್ಮನನ್ನು ಮುಂದಿಟ್ಟೇ ಅತನ ಪುಣ್ಯಪಾಪಾನುಗುಣವಾಗಿ, ಪ್ರಕೃತಿಗೆ ಸೇರಿಸಿ, ಬಳಿಕ ಹೆಸರು, ರೂಪ ಇವೆರಡನ್ನು ನೀಡುವ ಮಹಾ ಸೃಷ್ಟಿಕರ್ತ ಅವನು. ಪ್ರಾಕೃತವಸ್ತುಗಳನ್ನು ಕುರಿತು ಹೇಳುವ ಹೆಸರುಗಳು, ಆ ವಸ್ತುಗಳ ಅಭಿಮಾನಿ ಜೀವರನ್ನೂ ಅವೆಲ್ಲದರ ಅನ್ತರ್ಯಾಮಿಯನ್ನೂ ಹೇಳುತ್ತವೆ. ವಸ್ತು ಮತ್ತು ಜೀವಗಳ ಸ್ತರದಲ್ಲೇ ಶಬ್ದಶಕ್ತಿಯು ಮುಗಿಯದು. ಪರಮಾತ್ಮನವರೆಗೂ ಬೆಳೆದು ನಿಲ್ಲವುದು. ಇದನ್ನೇ **'ಅಪರ್ಯವಸಾನ ವೃತ್ತಿ'** ಎನ್ನುತ್ತದೆ ಶಾಸ್ತ್ರ.

ನಂದಗೋಕುಲದ ಹೆಣ್ಣೊಂದನ್ನು ಮಧುರೆಗೆ, ಹಾಲು, ಮೊಸರು ಬೆಣ್ಣೆ ಮಾರಿ ಬರುವಂತೆ ತಂದೆ ತಾಯಂದಿರೋ, ಅತ್ತೆ ಮಾವಂದಿರೋ ಹೇಳುತ್ತಾರೆ. ಪಾಪ ಆ ಗೋಪಿಬಾಲೆಗೆ ಸದಾ ಕೃಷ್ಣನ ಮೇಲೆಯೇ ಮನಸ್ಸು! ನಗರದ ಬೀದಿಗಳಲ್ಲಿ ಆಕೆ ಏನೆಂದು ಕೂಗುವುದು? 'ಹಾಲ್ ಬೇಕೇ ಹಾಲೂ! ಮೊಸರ್ ಬೇಕೇ! ಮೊಸರೂ ಬೆಣ್ಣೆ ಬೇಕೇನ್ರಮ್ಮಾ?' ಇವಲ್ಲವೇ ಅಲ್ಲ! ಗೋವಿನ್ದಾ ಬೇಕೇ? ದಾಮೋದರ ಬೇಕೇ? ಮಾಧವಬೇಕೇ? "ಇದೇನೇ ಹುಚ್ಚಿ! ನೀನು ಯಾವುದನ್ನು ಮಾರಲು ಬಂದಿರುವುದು?" ನನಗಾವುದೂ, ಕೃಷ್ಣ ಬಿಟ್ಟು ಬೇರೆ ಎಂಬ ಭಾವ ಮಾತೇಬಾರದವ್ವಾ! ಎನ್ನುತ್ತದೆ ಆ ಮುಗ್ಧ ಮಹಿಳೆ! 'ಕೃಷ್ಣ'ನಲ್ಲೇ ಎಲ್ಲಾ ಅಡಗುವುವು. ಅಥವಾ, ಆಯಾಯಾ ಪದಾರ್ಥಗಳ ಹೆಸರು ಹೇಳಿದರೂ 'ಅದು' ಕೊನೆಗೆ ಕೃಷ್ಣನನ್ನೇ ಸ್ಪರ್ಶಿಸುತ್ತವೆ. ಯಾವ ಹೊಳೆ ತಾನೇ ಹರಿದು ಸಮುದ್ರ ಸೇರದು? ಯಾವ ಹೂ ಕಾಯಿ ಗಿಡದಲ್ಲಿ ಮೂಡಲಪ್ಪನ ಕಡೆ ತಿರುಗದೆ ಇರುವುದು? ಯಾವ ಜೀವ ಕೊನೆಗೆ ಯಮಧರ್ಮರಾಯನಿಗೂ ಯಮನಾಗಿರುವನ ಎಡೆಸೇರುವುದಿಲ್ಲ? ಸರ್ವಶಬ್ದವಾಚ್ಯ ಹಾಗೂ ಸರೂಪಾರ್ಥವಾಚಕ ಶ್ರೀ ಭಗವಾನ್! **"ಸರ್ವ ದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ ಕೇಶವಸ್ಯತು ಸತ್ಕಾರಃ ಸರ್ವಭೂತಾನಿಗಚ್ಛತಿ"** ಅತನೇ ಮಾದವನ್ = ಲಕ್ಷ್ಮೀನಾಥ. ಶ್ರಿಯಃ ಪತಿತ್ವ ಇಲ್ಲದಿದ್ದರೆ ಅತನಿಗೆ "ಸರ್ವಾದಿಕಾರಣತ್ವ ಸಿಗುತ್ತಿರಲಿಲ್ಲ!" ಇದೊಂದು ಅಚ್ಚರಿ!

"ಶ್ರದ್ಧಯಾ ದೇವಃ ದೇವತ್ವಂ ಅಶ್ನುತೇ" "ತಯಾ ಸರಾಜರ್ಷಿ ಸುತೋಽಭಿರಾಮಯಾ ಅತೀವ ರಾಮಶ್ಯಶುಭೇಽತಿಕಾಮಯಾ"

ಉಪನಿಷನ್ಮಂತ್ರ ದ್ರಷ್ಟಾರರಿಗೂ, ರಾಮಹಾಡಿದ ಆದಿಕವಿಗೂ ಇದು ಅರ್ಥವಾಗಿದೆ. "ದೇವ" ಕ್ರೀಡಾಪಟು. ಸದ್ಭರ್ತ್ಯ ಲೀಲೆಗಳೆಲ್ಲಾ ಸದ್ಭಾರ್ಯೆಯ ಸಲುವಾಗಿಯೇ! ಮದುವೆಗೆ ಮುಂಚೆಯೂ ರಾಮ ಶೋಭಾಯಮಾನನೇ ಹೌದು! ಆದರೂ ಸೀತಾ ವಿವಾಹವಾದ ಮೇಲೆ ಇನ್ನೂ ಹೆಚ್ಚು ಶೋಭೆ ಕಂಡಿತು! ಅಂದರೆ "ಕಾಮೋಷ್ಟಗುಣಃ ಸ್ತ್ರೀಷು" ಭಕ್ತಿ ಗಂಡಸರಿಗಿಂತ ಹೆಂಗಸರಲ್ಲಿ ಎಂಟು ಪಟ್ಟು ಹೆಚ್ಚು. ಅದುದರಿಂದ ಇವನ ಶಕ್ತಿಗೆ ಆಕೆಯ, ಭಕ್ತಿ ಆವೊತ್ತಿನಿಂದ ಸೇರಿ ಏರಿತು! ಕೇವಲ ಭಕ್ತಿ ಇದ್ದು ಶಕ್ತಿ ಇಲ್ಲದಿದ್ದರೂ, ಲೋಕಸೃಷ್ಟಿ ಸಾಧ್ಯವಿಲ್ಲ. ಮಹಾತಾಯಿಯನ್ನು "ಸೃಷ್ಟಿಪ್ರೇರಕಳು" ಎನ್ನುತ್ತದೆ! ಪ್ರಮಾಣ **"ವಿಷ್ಣೋಃ ಕೃಪಾಕಾsಪಿ ಉಪಜಾಯಕೇ, ತತಃ ಸೃಜತೇ".** ದಯೆಯಿಲ್ಲದ ಧರ್ಮ ಅವುದೈಯ್ಯಾ| ಅದೇ ದಯಾಲಕ್ಷ್ಮೀ! ಮಹಾ ಸೃಷ್ಟಿಕರ್ತಾ ಶ್ರಿಯಃ ಪತಿಯೋರ್ವನೇ! ಇಲ್ಲೆಲ್ಲಾ ಸ್ತ್ರೀಸ್ಥಾನಮಾನಗಳು ಗೌರವ ಹಾಗೂ ಔನ್ನತ್ಯಗಳಿಂದ ಕೂಡಿವೆ ಎಂಬುದರ ಸ್ತ್ರೀಉದ್ಧಾರದ ಬಗೆಗಿನ ವಿಜ್ಞಾನವೂ ನಮಗೆ ಸಿಗುವುದು. ಪೂರ್ಣ ವಿಷಯ ಅರಿಯದೆ ಗುದ್ದಾಟ ವಿವೇಕವಲ್ಲ.

ಪ್ರಕೃತದಲ್ಲಿ, ಅದ್ಭುತತ್ವ-ಅನನ್ತಶಾಯಿತ್ವ - ಶ್ರಿಯಃ ಪತಿತ್ವ, ಇವು ಮೂರು ಕಳೆಯೇರಿದ್ದೂ ಭಕ್ತಿಸಾರರ, ಚಿತ್ತದಲ್ಲಿ ಸ್ವಾಮಿ ಮೂರು ವೇಷದಲ್ಲಿ, **"ಪರಮಪದ, ಕ್ಷೀರಾರ್ಣವ, ತಿರುಮಲೆ"**, ನಿರ್ಪ್ಪದುಮ್ ಇರುಪ್ಪದುಮ್ ಕಿಡಪ್ಪದುಮ್, ಎಂಬಂತೆ, ಸ್ಥಿರವಾಗಿ ನಿಂತಮೇಲೆಯೇ! "ಎನ್ನೆಳ್ಚಿಳೇ"

ತಮಿಳ್ ತಿರುಳ್ ೮೧

ಕಡೈನ್ದಪಾಲ್ ಕಡಲ್ ಕಿಡನ್ದು ಕಾಲನೇಮಿಯೈ ಕ್ಕಡಿ ನ್ದುಡೈನ್ದ ವಾಲಿ ತನ್‌ತನಕ್ಕುದವ ವನ್ದಿರಾಮನಾಯ್|
ಮಿಡೈನ್ದ ವೇಳ್ ಮರಙ್ಗಳುಮ್ ಅಡಙ್ಗವೈಯ್‌ದು ವೇಙ್ಗಡಮ್ ಅಡೈನ್ದ ಮಾಲ ಪಾದಮೇ ಯಡೈನ್ದು ನಾಳುಮುಯ್ ಮಿನೋ||

ಕನ್ನಡ ನೆರಳ್

ಕಡೆದ ಹಾಲ್ಗಡಲಲಿ ಕೆಡೆದು, ಕಾಲನೇಮಿಯನ್ನು ಕಡಿದು, ಒಡೆದ ವಾಲಿ ತಮ್ಮಗೊದಗಿಬಂದು ರಾಮನಾಗುತ|
ತೊಡರಿದೇಳು ಮರಗಳ್ ಸೀಳ್ದು, ವೇಂಕಟಾದ್ರಿಯಂ ಅಡೆದ ಮುಗ್ಧನಾ ಪದವನೇ ಅಡೆದು ನಿತ್ಯ ಬಾಳಿರೋ||

ಪರವೈಕುಂಠ ಬಲದೂರ! ಸತ್ತಮೇಲೆ ಅರ್ಚಿರಾದಿ ಮಾರ್ಗವಾಗಿ ಅಲ್ಲಿಗೆ ಹೋಗಬಹುದೆಂದು ಶಾಸ್ತ್ರ ಹೇಳುತ್ತದೆ. ಅಂತು ನಮ್ಮಂತಹವರಿಗೆ ಈಗ ಇಲ್ಲಿ ಆ ದೇಶ ವಿಶೇಷ ಸಿಗದು. ಪರಾವತಾರಕ್ಕೆ ಈ ಒಂದು ಕೊರೆ ಈ ಲೀಲಾ ವಿಭೂತಿಯಲ್ಲಿರುವ ನಮ್ಮ ದೃಷ್ಟಿಯಲ್ಲಿ ಉಂಟು. ಈ ಬ್ರಹ್ಮಾಂಡದೊಳಗೇ ಇರುವ ಕ್ಷೀರಸಮುದ್ರದಲ್ಲಿ ವ್ಯೂಹ ಮೂರ್ತಿಯಾಗಿರುವ ಆ ಫಣಿಶಾಯಿ, ಚತುರ್‌ಮುಖದೇವ ಸನಕಾದಿಯೋಗಿಗಳಿಗೆ ಮಾತ್ರ ಸಿಗಬಲ್ಲ. ಅದೂ ಬಲುದೂರದಿಂದ. ರಾಮ-ಕೃಷ್ಣಾದಿ ವಿಭವ ಆ ಕಾಲದಲ್ಲಿದ್ದವರಿಗೆ ಮಾತ್ರವಾಯಿತು. ಆದರೆ ಈ ಲೋಕಸ್ಥರಾದ ನಮ್ಮ ದೃಷ್ಟಿಯಿಂದ ಅಪೂರ್ಣತೆ ಏನೂ ಇಲ್ಲದಂತೆ ಪರಮ ಸುಲಭವಾಗಿ ಸುಶೀಲನಾಗಿ ವತ್ಸಲನಾಗಿ ಈ ಹೊರಗಣ್ಣಿಗೆ ಯಾವಾಗ ಬೇಕೆಂದರೂ ಕಾಣುವಂತೆ ಮಂದಮತಿಗಳಾದ ನಮ್ಮ ಜತೆ ಸೇರಿಯೂ ಸಲಿಗೆಯಿಂದ, ನಮ್ಮ ತಪ್ಪುಗಳನ್ನು ಕಂಡೂ ಕಾಣದೆಯೇ, ಆ ಅಪರಾಧಗಳನ್ನೇ ಕಾಣಿಕೆಯಾಗಿ ಸ್ವೀಕರಿಸುವಂಥದು ಅರ್ಚಾವತಾರದ ವಿಶೇಷತೆ. ಕಾಲತಃ ದೇಶತಃ ಸರ್ವಶಿಷ್ಟರೂ ಸರ್ವದುಷ್ಟರೂ ಕಡೆಹಾಯ್ದು ಈ ಜನ್ಮದಲ್ಲೇ ಉಜ್ಜೀವಿಸಲೆಂದು ತಿರುಪತಿ ತಿರುಮಲೆಗೆ ಬಂದು ಅಡಗಿದ್ದಾನೆ! ಅಂತರ್‌ಯಾಮಿತ್ವವನ್ನೂ ಬಿಡದೆ ಇದ್ದಾನೆ. **"ದೂರ್ವಾಸರ ಶಾಪದಿಂದ ಭ್ರಷ್ಟೈಶ್ವರ್ಯನಾದನಷ್ಟೆ ಇಂದ್ರ!"** ಆಗ ಆತನಿಗೆ ಐರಾವತ ಕಲ್ಪವೃಕ್ಷ ಮೊದಲಾದವನ್ನೂ ಅನುಗ್ರಹಿಸಬೇಕಾಯಿತು, ಸರ್ವೇಶ್ವರ ಕಡೈನ್ದ = ಸುಂದರ ಬಾಹುಗಳಿಂದ ಅದೂ ಚತುರ್‌ಭುಜಗಳಿಂದ, ಧರಿಸಿರುವ ಹಾರ ಕೈ ಬಳೆಗಳು ಪರಸ್ಪರ ಸಂಘರ್ಷಗಳಿಂದ ಶ್ರಮವಿತ್ತರೂ ಅಮೃತ ಮಥನ ಮಾಡಿಕೊಟ್ಟ, ಪಾಲ್ ಕಡಲ್ ಕಿಡನ್ದು = ಹಾಲ್ ಗಡಲಿನಲ್ಲಿ ಪವಡಿಸಿ ದೇವತೆಗಳನ್ನು ಪೀಡಿಸುತ್ತಿದ್ದ, ಕಾಲನೇಮಿಯೈ ಕಡಿನ್ದು = ಆ ಹೆಸರಿನ ಅವನನ್ನು, ಉಡೈನ್ದ = ಅಣ್ಣ ತಮ್ಮಂದಿರಾದ ವಾಲಿಸುಗ್ರೀವರು ಒಡೆದು ಹೋದ ಆ ತ್ರೇತಾಯುಗದಲ್ಲಿ ತನಗೆ ಮರಣಪ್ರದವಾದುದರಿಂದ ವಾಲಿ, ಸುಗ್ರೀವನಿರುವ ಆ ಋಷ್ಯಮೂಕ ಪರ್ವತಕ್ಕೆ ಪ್ರವೇಶ ಮಾಡುವಂತಿಲ್ಲ. ಸಖ್ಯ ಶರಣಾಗತಿ ಗೈದಿರುವ ಸುಗ್ರೀವನನ್ನು ಕಾಪಾಡಬೇಕು. ವಾಲಿಗಾದರೋ ಮನಶ್ಶಾಂತಿಯಿಲ್ಲ. ಶತ್ರುವಾದ ತಮ್ಮನನ್ನು ನಿರ್ಮೂಲನ ಮಾಡದ ಕಿಷ್ಕಿಂಧಾರಾಜ್ಯದ ಪೂರ್ಣ ಸುಖವೇ ಆಗಲಿ, ತಾರಾಲಾಭದಿಂದ ಸಂತಸವಾಗಲೀ ನನಗೆಲ್ಲಿ? ಈ ಕೊರೆ! ಅಂತಹ, ವಾಲಿತನ್ ತನುಕ್ಕು = ಆ ಕಾಲದಲ್ಲಿ ರಾವಣನನ್ನೇ ಗೆದ್ದಿದ್ದ ವೀರಾಗ್ರಣಿ ವಾಲಿಗಿತ್ತು, ಈ ಪ್ರಾಧಾನ್ಯವನ್ನು ಅರಿತಿದ್ದರೂ ಎಂಬೀ ಅರ್ಥವೂ ಒಂದಾಗಬಹುದು. ಅಂಥವನ ತಮ್ಮ ಶರಣಾಗತನಾಗಿರುವ ಈ ಸುಗ್ರೀವ, ಇವನಿಗೂ ಪ್ರಾಧಾನ್ಯ, ಇಲ್ಲಿ 'ತನ್' ಶಬ್ದದಿಂದ ಸೂಚಿತ! **"ಶರಣಾಗತ ವಾತ್ಸಲ್ಯವೇ ಶ್ರೀ ರಾಮಾಯಣದ ಉಸಿರು!"** ತಮ್ಮನಿಗೆ ರಾಜ್ಯಭಾರ ಕೊಡಿಸುವುದು, ಮತ್ತು ವಾಲಿಗೂ ಮೋಕ್ಷ ತರುವುದು ಎಂಬೀ ಉಭಯ ವಿಧವಾದ ಸೂಕ್ಷ್ಮರಹಸ್ಯ! ತಟಸ್ಥರಾದ ವಾಲ್ಮೀಕಿಯ **"ರಾಮ ಬಾಣಾSSಸನ ಕ್ಷಿಪ್ತಂ ಆವಹತ್ ಪರಮಾಂಗತಿಮ್"** ಹೇಳಿಕೆ ಗಮನಾರ್ಹ. ವಿಧವೆಯಾದರೂ ತಾರೆ ಸಂತೋಷಿಸುತ್ತಾಳೆ. ಸುಗ್ರೀವನಿಗೆ ಒಂದಳತೆಯ ಧರ್ಮಸಿಕ್ಕಿತು. ಅನವಧಿಕಾನಂದ ಧರ್ಮ ವಾಲಿಗೆ ದೊರೆಯಿತು. ಒಂದು ಧರ್ಮ, ಇನ್ನೊಂದು ಧರ್ಮಸೂಕ್ಷ್ಮ! ಉದವವಂದ್ ಇರಾಮನಾಯ್ = ರಾಮಾವತಾರ ತಾಳಿ ಸಾಮಾನ್ಯ ಮನುಷ್ಯನಂತೆ ತೋರುವ ಶ್ರೀರಾಮನ ಬಲದ ಬಗ್ಗೆ ಸುಗ್ರೀವನಿಗಿದ್ದ ಶಂಕೆಯನ್ನು ಹೋಗಲಾಡಿಸಲು, ಮಿಡೈನ್ದ = ಒಂದಕ್ಕೊಂದು ಘನವಾಗಿ ಗುರಿಯಿಡಲು ತಿಳಿಯದಂತೆ ನಿಬಿಡವಾಗಿ ಹೆಣೆದುಕೊಂಡಿದ್ದ, ಏಳ್‌ಮರಙ್ಗಳುಮ್ = ಸಪ್ತ ಸಾಲವೃಕ್ಷಗಳನ್ನೂ ಸಪ್ತ ಕುಲಾಚಲ ರಸಾತಲಗಳನ್ನೂ, ಅಡಙ್ಗ ಎಯ್‌ದ = "ಸಪ್ತ" ಎಂಬುವ ಸಮಸ್ತ ಅಭೇದ್ಯ ದುಷ್ಟಕೂಟಗಳನ್ನೂ ಭೇದಿಸಿ ಛೇದಿಸಿದ, ಆ ಪರಮಪದದ ವ್ಯೂಹ, ಅನ್ತರ್‌ಯಾಮಿ, ವಿಭವಾವತಾರನೇ ಇಂದಿಗೂ ಈ ತಿರುಪತಿ ತಿರುಮಲೆಯನ್ನು ಆಶ್ರಯ ಸ್ಥಾನವಾಗಿ ಹೊಂದಿ ಅಲ್ಲೇ ಅಡಗಿಕೊಂಡಿರುವ, ಮಾಲ = ಆಶ್ರಿತವ್ಯಾಮುಗ್ಧನಾದವನು 'ತಿಮ್ಮಪ್ಪ!' ಅವನ, ಪಾದಮೇ = ಶ್ರೀಪಾದಗಳನ್ನೇ, ನಾಳುಂ = ಒಂದು ಕಾಲಕ್ಕೆ ಮಾತ್ರವಲ್ಲದೆ ಇಂದಿನಿಂದ ಎಂದೆಂದೂ, ದೇವತಾಂತರ, ಫಲಾನ್ತರ, ಮುಖ್ಯ ಸೇವ್ಯಾನ್ತರಗಳನ್ನು ಮನಸಾರಾ ತೊರೆದು ರಾಮಾನುಜರ ಗಂಭೀರಾರ್ಥಗರ್ಭಿತ ಭಾಷೆಯಲ್ಲಿ "ಐಕಾನ್ತಿಕರೂ ಅತ್ಯನ್ತಿಕರೂ" ಆಗಿ, ನೀವೂ ನಾವೂ, ಅಡೈನ್ದು = ದೃಢವಾಗಿ ಹಿಡಿದು, ಉಯ್‌ಮಿನ್ = ಉತ್ತಮ ಜೀವನ ನಡೆಸುವಾ!

ತಿರುಮಟಿಶೈಯಾಳ್ವಾರ್

ನಾನ್‌ಮುಹನ್ ತಿರುವನ್ದಾದಿ

ತಮಿಳ್ ತಿರಳ್ ೩೪

குரிப்பேனக்கு கோட்டியூர் மேயானை யேத்த குரிப்பேனக்கு னன்மை பயக்க - வேருப்பனோ|
வேஜ்ஜடத்து மேயானை மெய் எனை நோய் எய்தாமல் தாஜ்ஜடத்துமம் தன்மையான் - தாள்||

ಕನ್ನಡ ತಿರಳ್

ಗುರಿಯೆನಗಿಹುದೈ ತಿರುಕ್ಕೋಟ್ಟಿವಾಸಿಯಂ ನುತಿಸಲ್ಕೆ, ಗುರಿಯೆನಗಿಹುದೈ ನಲ್ಮೆಯ ಪೊಂದಲ್‌ಕ್ಕೇ ಅದ ಬಿಡುವೇನೋ|
ವೇಮ್‌ಕಟವಾಸನ, ಎನ್‌ಮೈಗೈಯ್ಯುವ ಪಾಪದ ನೋವ್ ಬಾರದೊಲೇ ತಾಮ್ ಕುಟ್ಟುವ ಮಹಿಮಾ ಪೂರ್ಣನ ಚರಣಗಳಂ||

ಶ್ರಿಯಃಪತಿ ತಾನೇ ಬಯಸಿ ಬಂದು ಉಲ್ಲಾಸದಿಂದ ಅನವರತ ಬಿಡದೆ ಸ್ಥಾವರ ಪ್ರತಿಷ್ಠಿತನಾಗಿರುವುದು ಈ ದಾಸನಿಗಾಗಿಯೇ! ವೈದಿಕರಂತೆ ಪರೋಕ್ಷ ಪ್ರಿಯರಲ್ಲ ಈ ಆಳ್ವಾರ್ ಶರಣರು. ಪರಮಾತ್ಮನ ಯಾವೊಂದು ಚರಿತವನ್ನೂ ಯಾರಿಗಾಗಿಯೋ ಅವೆಲ್ಲಾ; ನಾನು ಅಂತಹ ಕೆಟ್ಟವನೇನೂ ಅಲ್ಲ ಎಂದು ಸಾಮಾನ್ಯರು ತಮತಮಗೆ ಅನ್ವಯಿಸಿಕೊಳ್ಳರು. ನಾನೇನೂ ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣ, ಕುಂಭಕರ್ಣ, ಶಿಶುಪಾಲ, ದನ್ತವಕ್ತ್ರಾದಿಗಳಲ್ಲ. ಅಯಾಯಾ ಅವತಾರಗಳೆಲ್ಲಾ ಅಂದಂದಿನ ಅವರವರಿಗಾಗಿಯಷ್ಟೆ ಆಗಿರುವುದು. ಆ ಕಾಲಕ್ಕೆ ಮಾತ್ರವಷ್ಟೇ! ಎಂಬ ತಮ್ಮ ಸಂಬಂಧ, ಸದ್ಯದ ದೇಶಕಾಲ ಪರಿಸ್ಥಿತಿಗಳನ್ನು ಕಡಿದು ಕೊಂಡೇ ಪ್ರವಚನ, ಪಾರಾಯಣ, ಪೂಜೆ, ಪುರಸ್ಕಾರ ನಡೆಯುವುದೇ ಪ್ರಾಯಃ ಹೆಚ್ಚು. ಈ ಮೌಲ್ಯಗಳ ಮೇಲೆ, ಆಳ್ವಾರರ ಸೌಮ್ಯಪ್ರಹಾರ ಈ ಹಾಡಿನಲ್ಲಿದೆ. ಅವರಿಗೆಲ್ಲೋ ೧೦ ತಲೆ ನನಗಿಂದು ಎಷ್ಟೊಂದು ಸಂಗತ ಅಸಂಗತ ತಲೆಗಳು! ವೈಚಾರಿಕ ಗೊಂದಲ! ದಿನೇ ದಿನೇ ಅಪಾಯಗಳನ್ನು ನಾವೇ ನಿರ್ಮಿಸಿಕೊಂಡು, ಅನಿವಾರ್ಯವಾಗಿ ಸ್ವಾಗತಿಸುತ್ತಿದ್ದೇವೆ! ಈ ಆತ್ಮ ನಿರೀಕ್ಷಣೆಗೆ, ಜನರನ್ನು ತೊಡಗಿಸುವ ವಿಶ್ವಾಸಭಿಮುಖ, ಸಾರ್ವಕಾಲಿಕ, ವೈಯಕ್ತಿಕ ಹೊಣೆಗಾರಿಕೆಯನ್ನು ಶರಣರು ತೋರಿಸುವುದರತ್ತ ನಮ್ಮ ದೃಷ್ಟಿ ಗಾಢವಾಗಿ ಹೊರಳಬೇಕಾದುದ್ದೇ ತುರ್ತು.

ಕೋಟ್ಟಿಯೂರ್ = ತಿರುಕ್ಕೋಟ್ಟಿಯೂರಿನಲ್ಲೇ ಊರಿರುವ ಸ್ಥಿರ ಸ್ಥಳವಾಸಿಯನ್ನೇ, ಏತ್ತ = ನಾನೆಂದೂ ಬಾಯಿಂದ "ಅನ್ಯಾವಾಚೋವಿಮುಂಚಥ" ಬೇರೆ ಬೇರೆ ಚಾತುರ್ಯದ ಭಾಷಣಗಳನ್ನು ಬಿಗಿಯದೆ, "ಜಿಹ್ವೇ! ಕೀರ್ತಯ ಕೇಶವಮ್" ಎಂಬಂತೆ, ಅವನ ಕಲ್ಯಾಣಗುಣಕಥನಕ್ಕಾಗಿಯೇ ಈ ವಾಕ್ ಶಕ್ತಿಯನ್ನು ಸದುಪಯೋಗ ಪಡಿಸಿಕೊಂಡು, ನುತಿಸಲು ಎನಕ್ಕು = ಬೇರೆಯವರಿಗಾಗೆಂದು ನುಣುಚಿಕೊಳ್ಳದೆ, ನನಗಾಗಿ ನನ್ನವಾಕ್ ಶುದ್ಧಿಗಾಗಿ, ನಲ್‌ಮೈ ಪಯಕ್ಕ **"ಧರ್ಮಂ ಪೂರ್ವಂ ಸ್ವಯಂ ಚರೇತ್", "ತಾಂಗಳ್ ತಂಗಳ್‌ಕ್ಕು ನುಣುಚಿಕೊಳ್ಳದೆ, ನನಗಾಗಿ ನನ್ನವಾಕ್ ಶುದ್ಧಿಗಾಗಿ, ನಲ್‌ಮೈ ಪಯಕ್ಕ "ಧರ್ಮಂ ಪೂರ್ವಂ ಸ್ವಯಂ ಚರೇತ್", "ತಾಂಗಳ್ ತಂಗಳ್‌ಕ್ಕು ನಲ್ಲನವೇ ಶೈವಾರ್."**

ಎರಡನೆಯದೆಂದರೆ, ಆ ಮಾತಿನ ಸ್ಪರ್ಶಪಡೆದ ಸುಂದರ ಮನ್ಮಥ ಮನ್ಮಥ ನನ್ನನ್ನು ತನ್ನ ಶ್ರೀಮೂರ್ತಿಯಿಂದಲೂ ಸರ್ವಾssಲಿಂಗನ ಮಾಡಿಕೊಳ್ಳುವ ನಲ್ಮೆಯ ಭಾಗ್ಯವನ್ನು ಹೊಂದಬೇಕೆಂಬುದೇ ನನ್ನ ಜೀವನ ಧ್ಯೇಯ! ಕುರಿಪ್ಪು ಎನಕ್ಕು = ನನಗೆ ಸಂದಿರುವ ಈ ಪರಮೈಶ್ವರ್ಯವನ್ನು ವೆರುಪ್ಪನೋ = ಒದರಿಬಿಡುವೆನೋ? ಖಂಡಿತ ಇಲ್ಲ. ಏಕೆಂದರೆ, ವೇಮ್ ಕಡುತ್ತು = ಎಲ್ಲ ಕೆಟ್ಟದ್ದನ್ನು ಸುಟ್ಟೇಬಿಡುವ ತಿರುಮಲೆ ಮೋಕ್ಷಗಿರಿಯಲ್ಲಿ, ನನಗಾಗಿಯೇ, ಮೇಯಾನೈ = ನಿರುತನಿಂತಿರುವವನನ್ನು, ಅದರಲ್ಲೂ ತಿಮ್ಮಪ್ಪನ ತಿರುವಡಿಗಳನ್ನು! ಅವು ನಮಗೇನು ಅಂತಹ ಉಪಕಾರ ಮಾಡುತ್ತವೆ? ಎನ್ನುವಿರಾ? ಮೆಯ್ = ಈ ಶರೀರ ಸಂಬಂಧದಿಂದಲೇ ಘಟಿಸುವ, ವಿನೈ = ಪುಣ್ಯ ಪಾಪಗಳೆಂಬ, ನೋಯ್ = ಆದಿವ್ಯಾಧಿಗಳನ್ನು. ಏಯ್‌ದಾಮಲ್ = ಎಂದೆಂದೂ ಯಾರೂ ಮತ್ತೆ ಹೊಂದದಂತೆ, ತಾನ್ = ತಾನೇ ಮನಗಂಡು. ತನ್ಮೈಯಾನ್ = ಈ ಸ್ವಭಾವವುಳ್ಳವನಾದುದರಿಂದ, ಅಂದರೆ ತನಗೇ ಆ ನೋವುಗಳೆಲ್ಲಾ ಎಂಬ ಆತ್ಮೀಯ, ಉದಾರ ಭಾವನೆಯಿಂದ, ಹೋಗಲಾಡಿಸಿಕೊಳ್ಳುವವನದಲ್ಲವೋ, ಆ ತಾಳ್ = ಶ್ರೀಪಾದ!.

ಇವೆಲ್ಲಾ ವಿವರಣೆಗಳೂ "ವೇಮ್‌ಕಡಮ್" = ವೇಙ್ಗಡಮ್ ಇದರ ನಿರುಕ್ತಿಗಳೇ! ಪದ - ಅಕ್ಷರಗಳನ್ನು ಬಿಡಿಸಿ ಅರ್ಥೈಸುವ ರೀತಿಗೆ "ನಿರುಕ್ತಿ" ಶಾಸ್ತ್ರ ಎನ್ನುತ್ತಾರೆ. ನಮ್ಮಾಳ್ವಾರರೂ **"ವೇಮ್ ಕಡಙ್ಗಳ್ ಮೆಯ್‌ಮೇಲ್‌ವಿನೈ ಮುತ್ತಮುಮ್" "ಯಥಾ ಇಷೀ ಕತೂಲ ಮಗ್ನೌಪ್ರೋತಂ, ಸರ್ವೇಪಾಪ್ಮಾನಃ ಪ್ರದೂಯನ್ತೇ" "ತೀಯಿನಿಲ್ ತೂಶಾಹುವ್"**, ಉಪನಿಷತ್ ಸಾರಜ್ಞೆಯಾದ ಗೋದಾದೇವಿಯೂ ಈ ಮೊದಲ್ ಆಳ್ವಾರರ ಶೈಲಿಯನ್ನೇ ಅನುಸರಿಸಿದ್ದಾಳೆ, ಎನ್ನಬಹುದು. ಇಯಲ್ವಾ, ಶಠಕೋಪರ ತಮಿಳ್ ವೇದಗಳಿಗೆ "ಉಪಾಂಗಗಳು" ಎಂಬ ಯೋಜನೆಯಿದ್ದರೂ, ಇವರ ಯೋಗಸ್ಫೂರ್ತಿಯೂ ನಿಮಿತ್ತವಾಗಬಹುದು.

ತಮಿಳ್ ತಿರಳ್ ೩೯

ಅಳ್ಳೈಪ್ಪನ್ ತಿರುವೇಙ್ಗಡತ್ತಾನ್ನೈಕ್ಕಾಣ ಇಳ್ಳೈಪ್ಪ ತಿರುಕ್ಕೂಡಲ್ ಕೂಡ - ಮಳ್ಳೈಪ್ಪೇರ್|
ಅರುವಿ ಮಣಿ ವರಣ್ಡ ವನ್ದಿಳಿಯ ಆನೈ ವೆರುವಿ ಯರವೊಡುಙ್ಗುಮ್ ವೆರ್‌ಪು||

ಕನ್ನಡ ನೆರಳ್

ಕೂಗುವೆನೈ ಸಿರಿವೇಂಕಟನಂ ಕಾಣಲ್‌ಕೆ, ಬೇಗುವೆನೈ ಸಿರಿಶಕುನಂ ಕೂಡಲ್ಕೆ! - ಅಗದೀ ಹಿರಿಮಳೆ|
ಝರಿಗಳು ಕೆಂಮಣಿಗಳ ಮುಂತಳ್ಳಿ ಹಾಯ್ದಿಳಿಯಲ್, ಗಜ ಹೆದರಿ, ಹೆಬ್ಬಾವ್‌ಗಳ ಬಾಯ್ ಅಡಗುವ ಮಲೆಯೈ||

ನೀವೇನು ಸ್ವಂತಭೋಗಕ್ಕಾಗಿಯೋ ಮೋಕ್ಷಕ್ಕಾಗಿಯೋ ಇಲ್ಲಿಗೆ ಬಂದಿರುವುದು? ಎಂದು ತಿಮ್ಮಪ್ಪ ಕೇಳುತ್ತಾನೆ. ಅವೆರಡಕ್ಕೂ ಅಲ್ಲ! ನಿನ್ನ ದರ್ಶನವೊಂದಕ್ಕೇ ಬಂದಿರುವೆನು. ನಿನ್ನ ಸಿರಿಮೂರ್ತಿಯನ್ನು ನೋಡುವ ಒಂದೇ ಉದ್ದೇಶ್ಯದಿಂದ ನಿನ್ನನ್ನು ಕರೆಯುತ್ತಿರುವೆನು! ಎಂದುತ್ತರಿಸುತ್ತಾರೆ. ತಿರುಮಳಿಶೈ ಆಳ್ವಾರ್ "ಭಕ್ತಿಸಾರ"ರಲ್ಲವೇ? ಸತತ ಸಹಜ ಪ್ರೀತಿಯಿಂದ ಸುಂದರಾಂಗನ ಪರಮಪಾವನನ ಬಹುಳ ಭೋಗ್ಯನ ದರ್ಶನವೇ ಭಕ್ತಿರೂಪ ಸ್ಮರಣೆಗೆ ಗುರುತು. ಆ ಅರ್ಚಾವತಾರದ ಶ್ರೀಮೂರ್ತಿದರ್ಶನ ಸಾಧಕ ಭಕ್ತರಿಗೆ ಪೂರ್ವಾನುಭವ ರೂಪವಾದುದು. ಅನುಭವದಿಂದಲೇ ಮುಂದೆ ಸ್ಮೃತಿಯುಂಟಾಗುವುದು. ದರ್ಶನಾನುಭವದಿಂದ ಭಾವನೆ, ಅದರಿಂದ ಅಖಂಡಸ್ಮರಣೆ. ಧಾರಾವಾಹಿ ಸ್ಮೃತಿ. ಅದೂ ಆ ಹಿಂದಿನ ಮೂರ್ತಿಯ ಬಗೆಗೆ ಅಹರಹಃ ಮೇಲ್ ಮೇಲ್ ಏರುತ್ತಲೇ ಇರುವ ಪ್ರೀತಿರೂಪ ಹಾಗೂ ಈಗಲೂ ಆ ಹಿಂದಿನದೇ ಕಣ್ಣಿಗೆ ಕಟ್ಟುವಂತಿರಬೇಕು. **"ತೈಲಧಾರಾವತ್ ಅವಿಚ್ಛಿನ್ನ ಸ್ಮೃತಿಸಂತಾನರೂಪಾ ಪ್ರೀತಿ ರೂಪಾSSಪನ್ನಾ ದರ್ಶನ ಸಮಾನಾಕಾರಾ"** ಎಂಬ ಆಚಾರ್ಯರ ವಚನದಂತೆ. ದೇವರೇ ಸಾಧನ ಎಂಬ ಪ್ರಪನ್ನರಿಗೂ ಇವಿಷ್ಟೂ ಲಕ್ಷಣ, ಲಕ್ಷಿತವಾದ ಭಕ್ತಿ ಇದ್ದರೂ ಅದು "ಮೋಕ್ಷಸಾಧನ" ಎಂಬ ಬುದ್ಧಿಯಿರದು. ಈ ಭಕ್ತಿಯೂ ಸ್ವಾಮಿಯದೇ ಕೃಪಾಫಲ. ಈ ಅನುಸಂಧಾನ ವಿಶೇಷ ಇರುತ್ತದೆ. ವಿಹಿತ ಶಾಸ್ತ್ರೀಯ ಸ್ವಸ್ವಧರ್ಮಾSSಚರಣೆಗಳನ್ನು ಕೇವಲ ಭಗವನ್ನಾರಾಯಣನ ಮುಖೋಲ್ಲಾಸ ಹಾಗೂ ಕೈಂಕರ್ಯರೂಪವಾಗಿ ಎಸಗುತ್ತಾರೆ. ಆ ಕರ್ಮಗಳೂ ಸಾಧನಾಂಗಗಳಲ್ಲ. ಆದರೂ ಕರ್ಮ ಸ್ವರೂಪತ್ಯಾಗವಲ್ಲ. ಸಾಧನಬುದ್ಧಿತ್ಯಾಗ ಮಾತ್ರ. ಆಳ್ವಾರ್‌ಗಳಿಗೆ ನೇರಾ ಶ್ರಿಯಃಪತಿಯ ಅಹೇತುಕೀ ಕೃಪೆಯಿಂದ "ಭಕ್ತಿ" ಲಾಭ. ಅವರ ಅನುಯಾಯಿ ಆಚಾರ್ಯರು ದೇವರನ್ನು ಪ್ರಾರ್ಥಿಸಿ "ಭಕ್ತಿ"ಯನ್ನು ಪಡೆಯುತ್ತಾರೆ. **"ಕರ್ಮಂ ಕೈಂಕರ್ಯತ್ತಿಲೇ ಪುಹುಮ್"** - (ಲೋಕಾಚಾರ್ಯ).

ಈ ದರ್ಶನಭಾಗ್ಯ ಸಿಗುವುದು ವಿಳಂಬವಾದರೆ, ಆ ಬಗ್ಗೆ ತ್ವರಾSSತಿಶಯದಿಂದ, ನಿನ್ನ ಕೃಪೆಯಿಂದಲೇ "ಶಕುನ"ವನ್ನೂ ಕೇಳಿ ಬಿಡುವೆನಪ್ಪಾ! ವೃತ್ತಾಕಾರವಾಗಿ ರಂಗೋಲೆಯಿಂದಲೋ, ಚಿತ್ರ ಬರೆದೋ. ದುಂಡಾಗಿರುವ ದೇವಾಲಯಗಳ ಬಲಿಪೀಠಗಳ ಮುಂದೆ ಕುಳಿತೋ, ಆ ದೊಡ್ಡ ವಲಯದೊಳಗೆ, ಸಣ್ಣ ಸಣ್ಣ "ಸೊನ್ನೆ"ಯ ಆಕಾರ ಕಲ್ಪಿಸಿ, ಎರಡೆರಡಾಗಿ ಅವುಗಳನ್ನೆಣಿಸುತ್ತಾ ಇರುವುದು. ಸರಿಸಂಖ್ಯೆಗೆ ನಮ್ಮ ಎದರು ಬದುರಾದ ಜೋಡಿ ಬೆರಳು ನಿಂತು ಕೂಡಿಕೊಂಡರೆ, ದರ್ಶನ ಭಾಗ್ಯ! ಹಾಗಿಲ್ಲದೆ ಬೆಸಿಸಂಖ್ಯೆಯಿಂದ ಕೂಡದೆ ಹೋದರೆ ಸದ್ಯಕ್ಕೆ ಆ ಅದೃಷ್ಟವಿಲ್ಲ, ಎಂಬ ಕ್ರಿಯಾ ಪದ್ಧತಿಗೆ "ಶಕುನ" "ಕೂಡಲ್" ಎನ್ನುತ್ತಾರೆ. ದಕ್ಷಿಣಮಧುರೆಯ ಮೀನಾಕ್ಷಿ ಬೃಹತ್ ಸುಂದರ ಮಂದಿರಕ್ಕೆ ಹತ್ತಿರದಲ್ಲೇ "ಕೂಡಲಳಗ ಹರ್" ಸನ್ನಿಧಿಯಿದೆ.

ಇದನ್ನಾದರೂ ದಾಸ ಗೈಯ್ಯಲು ಇಳಿದುಬಿಡುತ್ತೇನಪ್ಪಾ! ಸುಮ್ಮನಂತೂ, ದರ್ಶನ ಸಿಕ್ಕಿದಾಗ ಸಿಕ್ಕಲಿ ಎಂಬ ಮಂದಪ್ರಜ್ಞೆ ನನಗೆ ನಿನ್ನದಯೆಯಿಂದಿಲ್ಲ. ಶರಣರ ಹೃದಯವೆಲ್ಲಾ ಮಕ್ಕಳಂತಹ ತೀವ್ರಸಂವೇಗಿಗಳು. ಇಂತಹ ತಿರುಕ್ಕೂಡಲ್ ಕೂಡ, ಇಳ್ಳೈಪ್ಪನ್ = ಶಕುನ ಕೇಳುವ ಆ ಕಾರ್ಯಕ್ರಮದಲ್ಲಿಳಿದೇ ಬಿಡುವೆನು. ಆಳ್ವಾರರು ತಾವು ಗಂಡೆಂಬ ಸ್ವಸ್ವರೂಪ ಸ್ಥಿತಿಯಲ್ಲಾಗಲೀ, ನಾಯಿಕಾಭಾವದಲ್ಲಾಗಲೀ ಈ ಕೂಡಲ್ "ಉಪಪನ್ನ". ಕೊನೆಗೆ ಗಿರಿದರ್ಶನವಾದರೂ ಸಾಕು! ತಿರುಮಲಗಿರಿ ಎಂತಹುದು? ಪೇರ್‌ಮಳ್ಳೈ = ಹುಚ್ಚು ಮಳೆಯಿಂದ ಹೆಚ್ಚಿರುವ, ಅರುವಿ = ಮಿಂಚಿನಂತೆ ಥಳಥಳಿಸುವ ತೀರ್ಥಪ್ರವಾಹಗಳನ್ನು ಹೊಂದಿರುವ ಅಗಾಧ ಕಾಡುಮೇಡು! ಅಲ್ಲಲ್ಲೇ ಪರ್ವತ ಪ್ರದೇಶಗಳಲ್ಲಿರುವ ಉತ್ತಮೋತ್ತಮ, ಹೊಳಪಿನ ರತ್ನಗಳನ್ನು, ವರಂಡಿ = ಬಾಚಿ, ವನ್ದು ಇಳಿಯ = ಎತ್ತರದಿಂದ ಹೊಳೆಗಳು ಧಾರಾಕಾರ ಜಲಪಾತದ ರೂಪು ತಾಳುವುವು. ಆ ಸಂದರ್ಭ ಕಂಡು "ಅಯ್ಯೋ! ಬೆಂಕಿ ಬೆಂಕಿ" ಎಂಬ ಭಯದಿಂದ ಆ ಕೆಂಪು ಶಿಲಾರತ್ನಗಳನ್ನು

"ಅಬ್ಬಾ! ಹೆಬ್ಬಾವುಗಳು!" ಎಂದೂ ಕಾಡಾನೆಗಳು, ಆನ್ಯೆ ವೆರುವಿ = ಹೆದರಿ ಅತ್ತದರಿ - ಇತ್ತಪುಲಿ ಎಂಬಂತೆ, ಮಲೆಯ ಬೃಹತ್ ಸರ್ಪಗಳ ಬಾಯೊಳಗೇ ನುಸಿದು ಬಿಡುವ ದೃಶ್ಯ! **"ಮೂರ್ತಿಪ್ರಿಯರಂತೆ, ಪ್ರಕೃತಿ ಪ್ರಿಯರೂ ಆದ ಉಭಯ ಕಲಾರಸಿಕರು ಆಳ್ವಾರ್ ಶರಣರು!"**

ತಮಿಳ್ ತಿರಳ್ ೪೦

ವೆರ್‌ಪ್ಪೆನ್ನ್ ವೇಙ್ಗಡಮ್ ಪಾಡಿನೇನ್, ವೀಡಾಕ್ಕಿ ನಿರ್‌ಕ್ಕಿನ್ನೇನ್, ನಿನ್ನು ನಿನೈಕ್ಕಿನ್ರೇನ್ - ಕರ್‌ಕ್ಕಿನ್ನ|
ನೂಲ್‌ವಲೈಯಿಲ್ ಪಟ್ಟಿರುನ್ದ ನೂಲಾಟ್ಪಿ - ಕೇಳ್ವನಾರ್ ಕಾಲ್‌ವಲೈಯಿಲ್ ಪಟ್ಟಿರುನ್ದೇನ್ ಕಾಣ್||

ಕನ್ನಡ ನೆರಳ್

ಮಲೆಯದುವಿದು ವೆನ್ನುತ, ವೇಂಕಟ ವೆನು ಪಾಡಿದೆ! ಬಿಡುಗಡೆ ಗೊಂಡೆsಚಲಂ ನಿಂದಿಹೆ ವಿದೋ ನಾ! ನಿಂತು ನೆನೆಯುವೆ,-ಕಲಿಕೆಯ ವೈದಿಕರಾ|
ವೇದದ ಬಲೆ ಬಿದ್ದಾ ಶ್ರುತಿ ಸೂಕ್ತದೊಳ್ ಅಡಗಿಹರಾಣಿಯ ಪತಿ ಪಾದದ ಶುಭವಾಗುರದೊಳ್ ನಾ ಬಿದ್ದಿಹೆ ಕಾಣ್||

ಆ ಮಲೆ ಈ ಮಲೆ ಎನ್ನುತ್ತಾ ತಿರುಮಲೆಯ ಹೆಸರು ಹೇಳಿದೆ ನೋಡಿ; ನಾನು ಮತ್ತೇನೂ ಸಾಧನಾsನುಷ್ಠಾನ ನಿರತನಾಗಲಿಲ್ಲ. ನನಗೆ ಮಾತ್ರವಲ್ಲ. ನನ್ನ ಸಂಬಂಧಿ ಸಂಬಂಧಿಗಳಿಗೂ ನನ್ನ ನಾಲಿಗೆಯಿಂದ ಅಕಸ್ಮಾತ್ ಹೊರಬಂದ ಆ "ಗಿರಿನಾಮ"ವೇ, ಈ ಮಾಯಾ ಪ್ರಕೃತಿಯ ಚೇಷ್ಟೆಗಳಿಂದ ಬಿಡುಗಡೆ ಮಾಡಿಸಿದೆ! ಯಾವುದೇ ಕ್ರಿಯಾಕಲಾಪಗಳ ಜಂಜಡಕ್ಕೆ ಬೀಳದೆ ಸುಮ್ಮನಿದ್ದೆ. ಅದೇನು ಧ್ಯಾನ! ಸಹಜವಾದ ನೆನಹು ಸಿದ್ಧಿಸಿ ಬಿಟ್ಟಿತೋ! ಶ್ರೀ ಸೂಕ್ತಾದಿಗಳಲ್ಲಿ ಋಗ್ವೇದ ಪ್ರತಿಪಾದ್ಯಳಾದವಳ ಗಂಡನ ಪಾದದ ಬಲೆಯನ್ನು ಅವನೇ ಬೀಸಿ ಹಾಸಿರುವಾಗ ನಾನು ತಾನೇ ಹೇಗೆ ಬಿಡಿಸಿಕೊಳ್ಳಲಿ? ಸಮರ್ಥಕರುಣಾಳು ಅಶ್ರಿಯಃಪತಿಯದೇ ಎಲ್ಲಾ ಸಂವಿಧಾನಗಳೂ! ನಾವು ಶೂನ್ಯಭಾವದಿಂದಿದ್ದರೆ ಸಾಕು.

ವೆರ್‌ಪ್ಪು ಎನ್ನು = ಬೇರೆ ಬೇರೆ ಬೆಟ್ಟಗಳ ಹೆಸರುಗಳನ್ನು ಹೇಳುತ್ತಿರುವಾಗ "ವೇಙ್ಗಡಂ" ಎಂದು ಬಾಯಲ್ಲಿ ಬಂತೋ ಇಲ್ಲವೋ **"ವೇಙ್ಗಡಮ್- ಪಾಡಿನೇನ್"**. ಅಪ್ರಯತ್ನವಾಗಿ ಅಕಸ್ಮಾತ್ ಹೇಳಿದುದನ್ನೇ, "ಹಾಡು", ಎಂದು ತಿಳಿದ ದೇವರೇ, ಭಲೇ! ಭಲೇ! ಎನ್ನುತ್ತಾ ಕಿವಿಗೊಟ್ಟು ಆಲಿಸಿದ. ವೀಡು = ಎಲ್ಲರಿಗೂ ಮೋಕ್ಷವನ್ನು, ಅಕ್ಕಿ = ಆ ಸ್ವಯಂ ಸಂತುಷ್ಟನಾದವನಿಂದಲೇ ಕೊಡಿಸಿ, ಸುಮ್ಮನೆ, ನಿರ್ ಕ್ಕಿನ್ನೇನ್ = ತೂಷ್ಣೀಂ ಸ್ಥಿತಿಯಲ್ಲಿದ್ದೇನೆ. ವಾಕ್ ಪ್ರಯತ್ನವಿಲ್ಲ. ಮೋಕ್ಷ ಸಾಧನವೆಂಬುದಿಲ್ಲ. ನಾನಾಗಿ ನೆನೆಯುವ ನೆನಹೂ ಇಲ್ಲ, ಕರ್‌ಕ್ಕಿನ್ನ = ಶೋತ್ರಿಯರು ಅಧ್ಯಯನ ಅಧ್ಯಾಪನ ಮಾಡುವ ಹಾಗೂ ತತ್ವಗಳನ್ನು ತಿಳಿದು ಕೊಳ್ಳುವ, ನೂಲ್ = ಸೂಕ್ಷ್ಮವಾದ ವೇದಗಳಲ್ಲಿನ ಶ್ರೀ ಸೂಕ್ತಾದಿಗಳಲ್ಲಿ ಆಟ್ಪಿ = ಪ್ರತಿಪಾದ್ಯಳಾದ ಮಹಾಲಕ್ಷ್ಮಿಯ. ಬ್ರಹ್ಮವಿಚಾರವೇ ವೇದಗಳಲ್ಲಿ ಹೆಚ್ಚು ಬಂದಿರುವಂತೆ ಕಂಡರೂ, ಆ ಬ್ರಹ್ಮ ಸ್ವತಂತ್ರನಾದುದರಿಂದ ತಪ್ಪು ಮಾಡುವವರನ್ನು ಕೈ ಬಿಟ್ಟೇ ಬಿಡಬಹುದು. ಒಮ್ಮೊಮ್ಮೆ ಹಿತಬುದ್ಧಿಯಿಂದ ಅಪ್ರಿಯನಾಗಿ ವರ್ತಿಸುವಂತಾಗಿಯೂ ಬಿಡಬಹುದು. ಜೀವಾತ್ಮರ ರಕ್ಷಣೆಯ ಜವಾಬ್ದಾರಿ ಎಂಬ "ಪ್ರಾಪ್ತಿಸಂಬಂಧ"ವೂ ಕಡಿದೇ ಹೋಗುವಂತಾಗಿ ಬಿಡಬಹುದು. ಅಂತಹ ಸಮಯದಲ್ಲಿ, ಅವನ ಒಳಗಡಗಿರುವ "ವಾತ್ಸಲ್ಯ-ಕ್ಷಮೆ" ಮುಂತಾದ ಕಲ್ಯಾಣಕಾರಿ ರಕ್ಷಣೋಪಯೋಗಿ ಗುಣಗಳನ್ನು ಕೆರಳಿಸುವವಳೇ ಶ್ರೀದೇವಿ. 'ಶೃಙ್ಖಲೇದನೇ'. ಗಂಡನ ಮುನಿಸನ್ನು ನಾನಾಯುಕ್ತಿಗಳಿಂದ ಹೋಗಲಾಡಿಸುವವಳು ಇದ್ದೇ ತೀರ ಬೇಕಷ್ಟೆ. ಅಂದರೆ, ಸಾಪರಾಧಜೀವಾತ್ಮರ ರಕ್ಷಣಾsನುಪಪತ್ತಿ ದೋಷ ಪರಬ್ರಹ್ಮನಿಗೆ ಬರುವುದರಿಂದ, ಅದನ್ನು ನೀಗಿಸುವ ಲಕ್ಷ್ಮೀ ಅವನಲ್ಲೇ ಅಡಗಿದ್ದಾಳೆ. ಈ ಭಾವದಿಂದ ವೇದ ಪುರುಷ, ಬಹಳ ಕಡೆ ಪೃಥಕ್ಕಾಗಿ, ತಾಯಿಯನ್ನು ಶಬ್ದದಿಂದ ನಿರ್ದೇಶಿಸುವುದಿಲ್ಲವಷ್ಟೆ! ಶ್ರೀ ಪರಾಶರಭಟ್ಟರ್ ಈ ಭಾಗಗಳನ್ನೆಲ್ಲಾ ತಮ್ಮ "ಶ್ರೀಗುಣರತ್ನಕೋಶ"ದಲ್ಲಿ ರಮ್ಯವಾಗಿ ಬಣ್ಣಿಸಿದ್ದಾರೆ.*

ಇಂತಹ ರಮಾರಮಣನ, ಕಾಲ್‌ವಲೈಯಿಲ್ = ಪಾದಗಳೆಂಬ ಬಲೆಯಲ್ಲಿ, ಪಟ್ಟಿರುನ್ದೇನ್ = ಬೆಸ್ತರು ಬೀಸಿದ ಬಲೆಯಲ್ಲಿ ಮೀನು ಸಿಕ್ಕಿಕೊಂಡಂತಲ್ಲದೆ, ತದ್ ವ್ಯತಿರೇಕಿದೃಷ್ಟಾನ್ತಗಳಿಂದ ಹಾಯಾಗಿದ್ದೇನೆ. ಇದು ವಾಸುದೇವನ ನಲ್ ಬಲೆ! ಎಲ್ಲರಿಗೂ ಜೀವನೋಜ್ಜೀವನವೇ ಹೊರತು ನೀರಿನಿಂದ ಮೇಲೆ ಬಿದ್ದ ಮೀನಿನಂತಲ್ಲ. ನನ್ನ ವತಿಯಿಂದ ಇದೆಲ್ಲಾ ಆಗಿದ್ದರೆ, ಅದು ಬೇರೆ ಮಾತಾಗುತ್ತಿತ್ತು. ಸಿದ್ಧ-ಶುದ್ಧಸಾಧನನೇ ಅದವನಿಗೇ ಇಂಬುಗೊಟ್ಟೆ. ಆ ಸಮಯದಲ್ಲಿ ನಾನು "ಬೇಡ" ಎಂದು ತಡೆಯಲಿಲ್ಲ. ಅತನೇ ಸರ್ವನಿರ್ವಾಹಕನಾಗಿ ದಾಸನನ್ನು ಸಹಜ ನಿಷ್ಕ್ರಿಯ, ಅಸ್ಮರಣನನ್ನಾಗಿಸಿದ!

---

* ಸ್ವರೂಪಂ ಸ್ವಾತಂತ್ರ್ಯಂ ಭಗವತ ಇದಂ ಚನ್ದ್ರವದನೇ! ತ್ವದಾಶ್ಲೇಷೋತ್‌ಕರ್ಷಾದ್ ಭವತಿ ಖಲು ನಿಷ್ಕರ್ಷ ಸಮಯೇ |
ತ್ವಮಾಸೀಃ ಮಾತಃ ಶ್ರೀಃ ಕಮಿತುರಿದಮಿತ್ಥಂತ್ವವಿಭವಃ; ತದನ್ತರ್‌ಭಾವಾತ್ ತ್ವಾಂ "ನ ಪೃಥಗಭಿಧತ್ತೇ" ಶ್ರುತಿರಪಿ ||

ತಮಿಳ್ ತಿರಳ್

ಕಾಣಲುರುಹಿನ್ನೇನ್ ಕಲ್ಲರುವಿ ಮುತ್ತುದಿರ ಓಣ ವಿಳವಿಲ್ ೞಲಿಯದಿರ - ಪೇಣಿ|
ವರುವೇಙ್ಗಡವಾ ಎನ್ನುಳ್ಳಮ್ ಪುಹುನ್ದಾಯ್ ತಿರುವೇಙ್ಗಡಮದನ್ಮೆ ಚ್ಚೆನ್ನು||

ಕನ್ನಡ ನೆರಳ್

ಕಾಣಲ್ ತವಕಿಪೆನಯ್ಯಾ! ಕಲ್ ಝರಿ ಮುತ್ತೊದರುಗೆ, ಶ್ರವಣೋತ್ಸವದುಲಿ ಮಂಗಳಘೋಷವು ಅದರುವುದಾದರಿಸಿ|
ಬರಲುತ್ಸುಕ ವೆಂಕಟವಾಸಾ! ಎನ್ನೊಳಗನೂ ಹೊಕ್ಕೆಯಲಾ! ಸಿರಿವೇಂಕಟಗಿರಿಯದ ನೀನೇ ಸಂದು||

ದಿವ್ಯದೇಶಗಳ ಉತ್ಸವಾದಿಗಳನ್ನು ಸಂದರ್ಶಿಸುವ ನಮ್ಮ ಆಸೆಯೂ ಸಹ ಪ್ರಪ್ರಥಮ ಸುಕೃತವೆನಿಸಿದ ದೇವರೇ ಅಯಾಯಾ ತಾಣಗಳಿಗೇ ತಾನೇ "ಪೂರ್ವಜ" ಎಂಬಂತೆ ಮೊದಲೇ ಆಗಮಿಸಿರುವುದರಿಂದ. ನಮ್ಮ ಹೃದಯಮಂದಿರಪ್ರವೇಶ ಮಾಡಿ. ಹೃದ್‌ಗತನಾದ ಅತನ ಸನ್ನಾಹಗಳೆಲ್ಲಾ ನಡೆದ ಮೇಲೆಯೇ ಅಲ್ಲಲ್ಲಿಗೆ ಹೋಗಿ ನಾವು ನೋಡುವುದು. ಇಲ್ಲೆಲ್ಲಾ ಆಳ್ವಾರರ "ಶೂನ್ಯ ಸಂಪಾದನೆ" ಎಂದು ಕನ್ನಡ ಶರಣರಾಡುವಂತೆಯೇ **"ಆ ಕಿಂಚನ್ಯ" "ಕಿಂಚನ ಸಾಧನಂ ಅಸ್ಮಾಕಂನಾಸ್ತಿ ಇತಿ ಅಕಿಂಚನಾಃ ಅಕಿಂಚನಾನಾಂಭಾವಃ ಆಕಿಂಚನ್ಯಂ"** ಇದು ಗಮನಾರ್ಹ.

• ವೇಙ್ಗಡವಾ = 'ತಿರುಪತಿ ತಿಮ್ಮಪ್ಪಾ!' ತಿರುವೇಙ್ಗಡಂ ಅದನ್ಮೆ ಶೆನ್ನು = ಪ್ರಸಿದ್ಧವಾದ ತಿರುಮಲೆಯನ್ನು ಮೊಮ್ಮೊದಲೇ ನೀನಾಗಿ ಸೇರಿದ ಮೇಲೆ, ಪೇಣಿ = ನೀನಾಗಿಯೇ ಆಸೆಪಟ್ಟು ವರಿಸಿ, ವರು = ಬರುವವನಾಗಿ, ಎನ್ ಉಳ್ಳಮ್ ಪುಹುನ್ದಾಯ್ = ನನ್ನೀ ಚಿತ್ತ ಮಂದಿರವನ್ನು ಹೊಕ್ಕೆ. ಈಗ ನಾನು, ಕಲ್ ಅರುವಿ = ಬಂಡೆಗಲ್ಲುಗಳ ಮೇಲೆ ಹಾಯುವ ಹೊಳೆಗಳಿಂದ, ಮುತ್ತು = ಗಿರಿಸಂಪದಗಳಾದ ಮುತ್ತುಗಳಂತಹ ಶ್ರೇಷ್ಠ ವಸ್ತುಗಳನ್ನು, ಉದಿರ = ತಳ್ಳಿಕೊಂಡು ಹರಗಿಸುತ್ತಾ ಇರುವುದನ್ನೂ, ಅಂತೆಯೇ, ಓಣವಿಳವಿಲ್ = ಶ್ರವಣ ತಿರುನಕ್ಷತ್ರದ, ಹಿರಿಯರ ಮಂಗಳಾಶಾಸನದ, ಒಲಿ = ಘೋಷ, ಅದಿರ = ದಿಕ್ಕುಗಳಲ್ಲೆಲ್ಲಾ ಮೊಳಗುವಂತೆ, ಅದುರುವಂತಿರುವುದನ್ನು, ಕಾಣಲ್ = ಕಣ್ಣಾರಾಕಾಣಲು ಕಿವಿಯಿಂದ ಕೇಳಿ ಅನುಭವಿಸಲು - ಸ್ವಯಂ ಪಾರಾಯಣ ಸೇವಾ ಕಾಲಕ್ಕಿಂತಲೂ, ಗೋಷ್ಠೀದರ್ಶನ, ಉಚ್ಚಘೋಷ ಶ್ರವಣದಿಂದಲೇ, ಉರುಹಿನ್ನೇನ್ ಶಿಥಿಲಾನ್ತಃ ಕರಣನಾಗುತ್ತಿದ್ದೇನಪ್ಪಾ! ದಿವ್ಯ ದೇಶದ ಅನುಭವಗಳೆಲ್ಲಾ ಇಂದ್ರಿಯಾತೀತ ದಿವ್ಯಗಳಾದರೂ ಇಂದ್ರಿಯಸಹಗಳಾಗುವಂತೆ "ನೀನೇ ಕೃಪೆ ಗೈ ಸ್ವಾಮೀ?" ನನ್ನ ಕುತೂಹಲವಷ್ಟೇ ಸಾಲದು. ನಿನ್ನ ಅನುಗ್ರಹವೂ ಬೇಕೇ ಬೇಕು.

ತಮಿಳ್ ತಿರಳ್ ೪೨

ಶೆನ್ನು ವಣಙ್ಗುಮಿನೋ ಶೇಣ್ ಉಯರ್ ವೇಙ್ಗಡತ್ತೈ ನಿನ್ನು ವಿನ್ಮೆ ಕೆಡುಕ್ಕುಮ್ ನೀರ್ ಮೈಯಾಲ್ - ಎನ್ನುಮ್|
ಕಡಿ ಕ್ಕಮಲ ನಾನ್ ಮುಹನುಮ್ ಕಣ್ ಮೂನ್ನತ್ತಾನುಮ್ ಅಡಿಕ್ಕಮಲಮಿಟ್ಟೇತ್ತುಮಞ್ಞು||

ಕನ್ನಡ ನೆರಳ್

ಸಂದೇ ನಮಿಸಿರಿ - ಶಿಖರೋನ್ನತ, ಬಾಹುಳಮ್ಮೈಮೆಯ ವೇಂಕಟವಂ ನಿಂತೇ ಪಾಪಗಳ್ ಕೆಡಿಪಾ ಸರಳದ ಸಹಜತೆಯಿಂ - ಎಂದೂ|
ಸುಗಂಧ ನಾಭೀ ಕಮಲದಿ ಮೂಡಿದನಾಲ್ಮೊಗನೂ ಕಣ್‌ಮೂರವನೂ ಸೊಗದಡಿ ಗಮಲದೊಳ್ ಪುಷ್ಪಾಂಜಲಿಯಿಟ್ಟು ನುತಿಸುವರಲ್ಲಿ||

ಶಬ್ದಶಕ್ತಿಯೆಂಬ ವ್ಯುತ್ಪತ್ತಿಯ ಸ್ವಭಾವದಿಂದಲೇ 'ವೇಮ್ ಕಟಗಿರಿ' ಪಾಪಾಽಪಹಾರಿ, ಪುಣ್ಯಾಽಪಹಾರಿಯೂ ಸಹ, ಪುಣ್ಯವೂ ಪಾಪಕ್ಕಿಂತ, ಮೋಕ್ಷಮಾರ್ಗವನ್ನು ಪ್ರಚ್ಛನ್ನವಾಗಿ ತಡೆಯುವುದರಿಂದ ಘೋರತರ! ಛಲಗಾರರಾದ ಮುಮುಕ್ಷುಗಳಿಗೆ ಇದು ಸುಲಭವಾಗಿ ಅರ್ಥವಾಗುತ್ತದೆ. ಐಹಿಕ ಕೀರ್ತಿ ಹೆಸರುವಾಸಿ, ಪಾರಲೌಕಿಕ ಸ್ವರ್ಗಾದಿ ಅನುಭವಗಳನ್ನು ಅಗತ್ಯವಾಗಿ ಮಾಡಲೇಬೇಕಾಗಿ ಬರುವುದರಿಂದ, ಪೂರ್ತಿ ಬಿಡುಗಡೆ, ಎಡರು ತೊಡರುಗಳಿಂದ ಮುಂದೂಡತ್ತಲೇ ಹೋಗುತ್ತದೆ. ಸಬೂಬು ಹೇಳುವ ಪ್ರವೃತ್ತಿ ಶಿಷ್ಟಾಽಽಚಾರವೆಂದೇ ಅಗಿಬಿಡುತ್ತದೆ. 'ಕಟ' ಎಂದರೆ ಕಡ, ಸಾಲ ಪಾಪದಂತೆ ಪುಣ್ಯವೂ ಋಣಭಾರವೇ, ಎರಡನ್ನೂ ಸಮಾನವಾಗಿಯೇ ತೀರಿಸದ ಹೊರತು ನಾವು ಅಧ್ಯಾತ್ಮಾಭಿಮುಖರಾಗುವುದು, ನಿಜವಾದ ಅರ್ಥದಲ್ಲಿ ಸಾಧ್ಯವಿಲ್ಲ. ಅದುದರಿಂದ, **"ಓ ಸಜ್ಜನರೇ, ಸನ್‌ಮಹಿಳೆಯರೇ! ನಿಮ್ಮ ಸಂಸಾರ ಸಮೇತ ಗುಂಪುಗುಂಪಾಗಿ ಇಷ್ಟಮಿತ್ರರೊಡನೆ, ತಿರುಪತಿಗೆ ಹೊರಡಿ"**. ಶೆನ್ನು = ಅಲ್ಲಿ ಸೇರಿ, ವಣಙ್ಗುಮಿನೋ = ನಮಸ್ಕರಿಸಿ ಬಿಡಿ.

ಎನ್ನುಮ್ = ಯಾವಾಗಲೂ, ಕಡಿಕ್ಕಮಲಮ್ = ಪರಬ್ರಹ್ಮಗಂಧದಿಂದ ಸುಗಂಧಿತವಾದ, ಸೃಷ್ಟಿಕರ್ತನ ನಾಭೀಕಮಲದಲ್ಲಿ ಅದೇ ನಾರಾಯಣನಿಗೆ **"ನಾರಾಯಣಾತ್ ಬ್ರಹ್ಮಾ ಜಾಯತೇ"** ಎಂಬ ಉಪನಿಷದ್ ವಾಕ್ಯದಂತೆ ನಾಲ್‌ವೇದವನ್ನೂ ಒಂದೇ ಬಾರಿಗೆ

ಅಖಿಂಡ ಹೇಳಿ, ಬ್ರಹ್ಮಾಂಡದೊಳಗಿನ ವೃಷ್ಟಿಸೃಷ್ಟಿಕರ್ತವಾಗಿ, ಹುಟ್ಟಿದವನು. ಅಂತಹ ಚತುರ್‌ಮುಖನೂ **"ನಾರಾಯಣಾದ್ ರುದ್ಯೋಜಾಯತೇ"** ಕಣ್‌ಮೂನ್ನತ್ತಾನುಂ = ಒಳಗಣ್ಣಿನಿಂದ ಶ್ರೀರಾಮನನ್ನೇ ನೋಡುತ್ತಿರುವ ಮಹಾನುಭಾವ. ಸಮಯಬಂದಾಗ ಬ್ರಹ್ಮಾಂಡದೊಳಗೆ ಸಂಹಾರಕ್ಕೆ ನಿಯೋಜಿಸಲ್ಪಟ್ಟ ತ್ರಿನೇತ್ರನೂ, ಅಡಿಕ್ಕಮಲಮ್ = ಶ್ರೀ ವೇಂಕಟೇಶ್ವರನ ಅಡಿದಾವರೆಗಳಿಗೆ ಮಂತ್ರಪುಷ್ಪ, ಇಟ್ಟು = ಸಮರ್ಪಿಸಿ, ಏತ್ತುಮ್ = ಸ್ತುತಿಸುವ, ಅಜ್ಗು = ಅನೇಕ ಬಗೆಯಲ್ಲಿ ಲೋಕವಿಲಕ್ಷಣವಾದ ಪುಷ್ಪಮಂಟಪ, ತೀರ್ಥಪಾವನ, "ಮತಿನಲಮ್ ಅರುಳಿನನ್" ಪ್ರಪನ್ನಜನಕೂಟಸ್ಥದಾದ ಶತಕೋಪರಿಗೂ, **"ಬ್ರಹ್ಮಣಿ ಶ್ರೀನಿವಾಸೇ ಭವತು ಮಮಪರಸ್ಮಿನ್ ಶೇಮುಷೀ ಭಕ್ತಿರೂಪಾ"** ಪ್ರೀತಿರೂಪಕ್ಕೇರಿದ ಜ್ಞಾನವಿಶೇಷವಾದ ಭಕ್ತಿಯನ್ನು ಅನುಗ್ರಹಿಸಿದ, ಆರ್ಷೇಯ, ವೈಖಾನಸಾದಿ ವೈದಿಕರಿಗೆ, ಮುಖ್ಯಕೇಂದ್ರವಾದ, ಶಾಬರ ವಾನರಾದಿಗಳಿಗೂ ಪ್ರೇಮಾಸ್ಪದವಾದ ಸುಂದರ ಗಾಢ ಗಿರಿಪ್ರದೇಶವಾದ, ಅಂತಹ ಕಲಿಯುಗದೈವಾಽಽಸ್ಥಾನವಾದ ತಿರುಪತಿಯಲ್ಲಿ! ಶೇಣ್ ಉಯರ್ = ದೂರದಿಂದಲೇ ಕಾಣುವಂತೆ, ಉನ್ನತವಾದ ಹಾಗೂ ಚೇತೋಹಾರಿಯಾಗಿರುವ ಮತ್ತೂ, ನಿನ್ನು = ಚಲಿಸದೆ, ಅಚಲವಾಗಿದ್ದ, ವಿನೈ = ಸರ್ವವಿಧ ಪಾಪಗಳನ್ನೂ, ಕೆಡುಕ್ಕುಮ್ = ಕಡಿಯುವ, ನೀರ್‌ಮೈಯಾಲ್ = ಶಬ್ದ, ಅರ್ಥ, ಗುಣ ಸ್ವಭಾವಗಳಿಂದ, ಅನ್ವರ್ಥವಾದ, ವೇಜ್ಗಡತ್ತೈ = ಶ್ರೀವೇಂಕಟಾಚಲವನ್ನು, ಶೆನ್ನು = ತಡಮಾಡದೇ. ಶುಭಸ್ಯ ಶೀಘ್ರಂ! ವಾಹನಾಪಘಾತಗಳ ಹೆಚ್ಚಳವಿರುವ ಈ ಕಾಲದಲ್ಲಿ ಶಕ್ತಿಯಿದ್ದವರು ತಮ್ಮ ತಮ್ಮ ಊರುಗಳಿಂದ ಕಾಲ್ನಡಿಗೆಯಲ್ಲೇ ಬಂದು ತಿರುಪತಿ ಬೆಟ್ಟವನ್ನು ಹತ್ತಿ ಬಂದರೆ ನಮಗಾಗಿ ನಿಂತು, ನಿರೀಕ್ಷಿಸುತ್ತಿರುವ ಲೋಕಮೋಹನ ತಿಮ್ಮಪ್ಪನಿಗೆ ಬಲು ಸಂತಸವಾಗುತ್ತದೆ. ಹಾಗೆ ಶ್ರೀ ಕ್ಷೇತ್ರವನ್ನು ಕ್ಷೇತ್ರವಿನೀತ ವೇಷಗಳಿಂದಲೇ ಸೇರಿ, ವಣಜ್ಗುಮಿನೋ = ದೂರದಿಂದಲೇ ಬೆಟ್ಟಕ್ಕೇ ಒಂದು ನಮಸ್ಕಾರ ಹಾಕಿರಿ.

ತಮಿಳ್ ತಿರಳ್ ೪೩

ಮಜ್ಗುಲ್ ತೋಯ್ ಶೆನ್ನಿ ವಡವೇಜ್ಗಡತ್ತಾನೈ ಕ್ಕಜ್ಗುಲ್ ಪುಹುನ್ದಾರ್‌ಹಳ್ ಕಾಪ್ಪಣಿವ್ವಾ - ತಿಜ್ಗಳ್
ಶಡೈಯೇರ ವೈತ್ತಾನುಮ್ ತಾಮರೈಮೇಲಾನುಮ್ ಕುಡೈಯೇರ ತ್ತಾಮ್ ಕುವಿತ್ತು ಕ್ಕೊಣ್ಡು||

ಕನ್ನಡ ನೆರಳ್

ಮುಗಿಲ್ ಅಪ್ಪುವ ಕೋಡಿನ ಬಡಗಲವೇಂಕಟದರಸನಿಗೆ ಹೊಗುವರ್ ಮೂರೂ ಸಂಧ್ಯೆಯ ಕಾಪಿಡಲ್ಕೆ - ತಿಂಗಳ್ |
ಜಡೆಗೇರ್ಸಿಟ್ಟವನೂ ಸ್ವಾಮಿಯ ಹೊಕ್ಕಳ ತಾವರೆಮೇಲಿಹನೂ ಕೊಡೆಗಳಂ ಮೇಲೆತ್ತುತ ತಾವ್ ಪಿಡಿದೇ ಕೊಂಡು ||

ದೊಡ್ಡ ಮನುಷ್ಯರೆಂದು ಕೊಳ್ಳುವವರು ಯಾತ್ರಾಸ್ಥಳಗಳಿಗೆ ದಿಢೀರ್‌ದರ್ಶನ ನೀಡಿ "Flying Visit" ಹೋಗುವಂತೆಯೇ, ಬ್ರಹ್ಮರುದ್ರಾದಿಗಳು? ಹಾಗಲ್ಲ, ತಿಮ್ಮಪ್ಪನ ಎಲ್ಲಾ ಬಗೆಯ ಸಾಮಾನ್ಯ ಮತ್ತು ವಿಶೇಷ ಪೂಜಾ ಸಂದರ್ಭಗಳಲ್ಲೂ, ಆಯಾಯಾ ಕೈಂಕರ್ಯೋಪಕರಣಗಳೊಂದಿಗೆ ತಾವೇ ಸ್ವಯಂಸೇವಕರಾಗಿ ಕಾಯಕಗೈಯ್ಯಲು ಸಜ್ಜಾಗಿರುತ್ತಾರೆ! ಸೇವ್ಯೋತ್ತಮನ ಸಾನ್ನಿಧ್ಯದಲ್ಲಿ, ತಮ್ಮ ತಮ್ಮಲ್ಲಿನ ಔಪಾಧಿಕವಾದ ಸೇವ್ಯ-ಸೇವಕ ನಡೆನುಡಿಗಳನ್ನು ತೋರಲೇ ಬಾರದು, ಎಂಬ ರಹಸ್ಯ ಇದರಲ್ಲಡಗಿದೆ.

ತಿಜ್ಗಳ್ = ತಿಂಗಳ ಮಾವನಾದ ಚಂದ್ರನ ಕಲೆಯನ್ನು. ಶಡೈ = ತನ್ನ ಜಡೆಮುಡಿಯಲ್ಲೇ ಧರಿಸಿರುವುದರಿಂದ ತಂಪಾದ ಸಾತ್ವಿಕತೆಯ ಚಂದ್ರಮೌಳೀಶ್ವರನೂ, ಏರ ವೈತ್ತಾನುಮ್ = ವೃಷಭವಾಹನನೂ, ತಾಮರೈ ಮೇಲಾನುಮ್ = ಪರಮಾತ್ಮನು ನಾಭೀಕಮಲಜನಾದ, ಬ್ರಹ್ಮನೂ, ತಾಮ್ = ತಮ್ ತಮ್ಮ ಆಳುಗಳ ಮೂಲಕವಲ್ಲದೇ ತಾವೇ ತಮ್ಮ ಸ್ವಇಚ್ಛೆ ಹಾಗೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದೇ, ಸ್ವಯಂ ಪ್ರಯೋಜನ ದೃಷ್ಟಿಯಿಂದಲೂ, ಕುವಿತ್ತು = ಪಾರಮಾರ್ಥಿಕರಾಗಿಯೇ, ಎಲ್ಲೆಲ್ಲಿ ಸೇವೋಪಯೋಗಿ ಛತ್ರಿ ಮುಂತಾದ ಸಲಕರಣೆಗಳಿವೆಯೋ ಅವನ್ನೇ ತಮ್ಮ ಸೊಂಟಕ್ಕೂ ಮೇಲೆತ್ತಿ ಹಿಡಿದೇ, **'ಉಪರಿ ಹಿ ದೇವೇಭ್ಯೋ ಧರತಿ'**. ತಮ್ಮ ತಮ್ಮ ಸೇವೆಗಳನ್ನು ಮಾಡುತ್ತಾರೆ. ಮಜ್ಗುಲ್ = ಮೋಡಗಳು, ತೋಯ್ = ಸ್ಪರ್ಶಿಸುವ, ಶೆನ್ನಿ = ಕೋಡುಗಳುಳ್ಳ. ವಡವೇಜ್ಗಡತ್ತಾನೈ ತಿರುವೇಂಕಟಗಿರಿಯ ಪ್ರಭುವಿಗೆ, ಕಾಪ್ಪು = ಮಂಗಳಾಽಽಶಾಸನದ ನಾನಾ ಪ್ರಕಾರಗಳನ್ನು, ಅಣಿವಾನ್ = ಸಮರ್ಪಿಸಲು, ಕಜ್ಗುಲ್ = ತ್ರಿಸಂಧ್ಯಾ ಕಾಲಗಳಲ್ಲೂ, ಪುಹುನ್ದಾರ್‌ಹಳ್ = ದೇವಸ್ಥಾನದ ಒಳಹೊಕ್ಕರು. ಇಂತಹ ಸಕಲ ಪವಿತ್ರಸ್ಥಾನಗಳೂ ತಮ್ಮ ವ್ಯವಸ್ಥೆಗಳನ್ನೆಲ್ಲಾ ಹೇಗೆ ನಿರ್ಮಿಸಿಕೊಳ್ಳಬೇಕೆಂಬ ಸೂಚನೆಗಳನ್ನು ಆಳ್ವಾರ್ ಇಲ್ಲಿ ನೀಡಿದ್ದಾರೆ. ಪ್ರೀತಿ ಪ್ರೇರಿತಗಳಾಗಿಯೇ ಸರ್ವಕೈಂಕರ್ಯಗಳ ಚಾಲನೆಗೇ ಪ್ರಥಮ ಪ್ರಾಶಸ್ತ್ಯ. ಕೇವಲ ಆರ್ಥಿಕ ಹೆಚ್ಚಳದಲ್ಲಲ್ಲ. ದೇವಾಲಯಗಳನ್ನು ಬೆಳೆಯುವ ಮಾಪನದಂಡ, ಕೈಂಕರ್ಯಪರರೂ ವ್ಯವಸ್ಥಾಪಕರೂ ಆಗಬೇಕೆಂಬ ವಾತಾವರಣ ಕಲ್ಪನೆ ಯಾತ್ರಿಕರಿಂದಲೂ ಆದಾಗ "ದುಡ್ಡಿದ್ದವನೇ ದೊಡ್ಡಪ್ಪ" ಎಂಬ ಅನೈತಿಕ, ಅಸಾಮಾಜಿಕ ಮೌಲ್ಯಗಳ ಪರಿವರ್ತನೆಯೇ ಮೊದಲಾದ ಅತ್ಯಾವಶ್ಯಕ ಪ್ರಮೇಯಗಳು ಇಲ್ಲಿ ಸರ್ವರಿಂದಲೂ ಗಮನಿಸಲ್ಪಡಬೇಕಾದ ಅಂಶ.

ತಮಿಳ್ ತಿರಳ್ - ೪೪

ಕೊಣ್ಡು ಕುಡಜ್ಗಾಲ್ ಮೇಲ್ ವೈತ್ತ ಕುಳವಿಯಾಯ್ ತಣ್ಡವರಕ್ಕನ್ ತಲೈ ತಾಳಾಲ್ ಪಣ್ಡೆಣ್ಣಿ |
ಪೋಮ್ ಕುಮರನ್ ನಿರ್‌ಕ್ಕುಮ್ ಪೊಳಿಲ್ ವೇಙ್ಗಡಮಲೈಕ್ಕೇ ಪೋಮ್ ಕುಮರರ್ ಉಳ್ಳೀರ್ ಪುರಿನ್ದು ||

ಕನ್ನಡ ನೆರಳ್

ಕೊಂಡೂ, ಬಾಯೊಳು ಎಡಗಾಲ್, ಬಲಗಾಲ್ ಮೇಲ್ ಎತ್ತಿಹ, ಶಿಶುವಾಗಿ ದಂಡ್ಯ ರಕ್ಕಸನ್ ಹತ್ತೂ ತಲೆತನ್ ತಾಳಿಂ ಪಿನ್ ಗೀರಿ|
ಪೋಗಿಹ ಕುವರನ್ ನಿಲ್‌ಬನ ವೇಂಕಟಮಲೆಗೇ ನಡೆದೇ ಪೋಗಿರಿ ಎಳೆತನದಿಹರೇ! ಪುರಪುರ ಆಸರಿಸಿ.||

ಪುರಾಣಗಳಲ್ಲೂ ಕಾಣದ, ಆಳ್ವಾರ್‌ಗಳಿಗೆ ಮಾತ್ರ ನಿರ್‌ಹೇತುಕ ಭಗವತ್ ಕೃಪೆಯೊದಗಿ ಕಂಡುಬಂದ ಕತೆ ಹೀಗಿದೆ. "ರಾವಣನು ಒಂದಾನೊಂದು ಕಾಲದಲ್ಲಿ ಬಾಲಕನಾದ ಪರಮಾತ್ಮನನ್ನು ಎತ್ತಿಕೊಳ್ಳೋಣ, ಆ ಶಿಶುವು 'ನೀನು ಕ್ರೂರಿ ನಿನ್ನ ಹತ್ತೂತಲೆಗಳನ್ನು ಮುಂದೊಂದು ಕಾಲಕ್ಕೆ ತರಿದು ಹಾಕಿಯೇನು!' ಎಂದು ಹೇಳಿ ಥಟ್ಟನೆ ಮಾಯವಾಯಿತು" ಎಂದು,

ಸೇತುವೆ ಕಟ್ಟುವಾಗ ಅಣಿಲನ್ನು ಶ್ರೀರಾಮ ತನ್ನ ಬಲಗೈ ಮೂರು ಬೆರಳುಗಳಿಂದ ಸವರಿದ್ದೂ. 'ಶ್ರೀ ಮಾಲಿಕನೆಂಬುವನನ್ನು ಚಕ್ರದಿಂದ ವಾಸುದೇವ ಕೊಂದದ್ದೂ ಈಗ ಉಪಲಬ್ಧವಿರುವ ಗ್ರಂಥಗಳಲ್ಲಿಲ್ಲದಂತೆ ಕಂಡರೂ, ಆಳ್ವಾರ್ ಶರಣರ ಬಾಯಿಂದ ಸುಳ್ಳನ್ನು ದೇವರು ಎಂದೂ ಆಡಿಸುವವನಲ್ಲ. ಆ ಪರಮನಿಂದಲೇ ಇವರೂ ಪರಮ ಪ್ರಾಮಾಣಿಕರು. ಪೌರಾಣಿಕರು, ತಮ್ಮ ಸೀಮಿತ ತಪೋಬಲದಿಂದ ಯದ್ಯಪಿ, ಅವರವರ ಸತ್ತ್ವಾದಿ ಗುಣಾನುಗುಣವಾಗಿಯೂ ಹಾಡಿ-ಪಾಡಿದ್ದಾರೆ. "ಶರಣರ ಪರಮಸತ್ವ ಗುಣಭೂಮಿಕೆ, ಸತ್ಯತಮ". **"ಅನುಕ್ತಂ ಅನ್ಯತೋ ಗ್ರಾಹ್ಯಮ್"** ಎಂಬ ನ್ಯಾಯದಂತೆ ಈ ವೃತ್ತಾನ್ತಗಳೆಲ್ಲಾ ಪರಮ ಯಥಾರ್ಥಗಳೇ. ಪ್ರಾಯಃ ನೀಳಾ ಬಾಲಕೃಷ್ಣರ ವೃತ್ತಾನ್ತವೂ ಸ್ಪಷ್ಟವಾಗಿ, ಇತಿಹಾಸ ಪುರಾಣ ಪ್ರಸಿದ್ಧವಲ್ಲವೆಂಬ ಕೆಲ ಪಂಡಿತರ ವಾದಕ್ಕೂ ಈಗ ಸದುತ್ತರ ಸಿಕ್ಕಿದಂತಾಯಿತು.

ಎಷ್ಟೇ ವೇದಾದಿ ಜ್ಞಾನ ಸಂಪನ್ನರೂ ಜ್ಞಾನವಿಕಲರಾಗಿ ಬಿಟ್ಟರೂ ಪರಮಾತ್ಮ ಅವರನ್ನೂ ರಕ್ಷಿಸುವನು. ಇಂತಹ ಹಿತೈಷಿ ತಿಮ್ಮಪ್ಪನನ್ನು ಕರಣ ಪಾಟವ ಇರುವಾಗಲೇ ಆಸರಿಸಿರಿ. **"ಬಾ, ಮುದಿಯೇ ಸ್ವರ್ಗಕ್ಕೆ ಹೋಗೋಣ"** ಎಂದು ಕಾಲಹರಣ ಮಾಡಬೇಡಿರಯ್ಯಾ. ತೀರ್ಥಕ್ಷೇತ್ರ, ಯಾತ್ರೆಗಳನ್ನು ಯೌವ್ವನದಲ್ಲೇ ಮಾಡಿಬಿಡಿ. **"ಕಿಳರ್‌ಒಳಿ ಇಳಮೈ ಕೆಡುವದನ್ ಮುನ್ನಮ್"** (ತಿರುವಾಯ್ಮೊಳಿ) ಎಂದು ನಮ್ಮಾಳ್ವಾರ್ ತೆನ್‌ತಿರುಮಲೆ ತಿರುಮಾಲಿರುಂಶೋಲೆಗೆ ಹೇಳಿದರೆ, ಭಕ್ತಿಸಾರರು ಉತ್ತರದ ತಿರುವೇಂಗಡಪ್ಪನ ಮಲೆಗೆ ಹೇಳಿದ್ದಾರೆ. "ಪೇಶಿತ್ತೇ ಪೇಶುಮ್ ಏಕಕಂಠರ್" ಆಳ್ವಾರ್. ಯಾವುದೇ ಶರಣರಲ್ಲಿ ವಿರೋಧೋಕ್ತಿಗಳ ಗಂಧವಿರದು. ಎಲ್ಲರೂ ಒಂದೇ ಕಂಠದಿಂದ ಸಮಾನ ಹೃದಯತೆಯನ್ನೇ ತಮ್ಮ ಪಾಶುರ ವಚನಗಳಲ್ಲಿ ಪ್ರಸಾದಿಸಿರುತ್ತಾರೆ.

ಕೊಣ್ಡು = ಎಡಗಾಲನ್ನು ಕೈಯ್ಯಿಂದ ಹಿಡಿದು, ಕುಡಮ್ ಕಾಲ್‌ಮೇಲ್ ವೈತ್ತ = ಬಲಗಾಲನ್ನು ಮೇಲೆತ್ತಿರುವ, ಕುಳವಿಯಾಯ್ = ಎಳೆ ಶಿಶುವಾಗಿ, ತಣ್ಡ = ದಂಡ್ಯನಾದ, ಅರಕ್ಕನ್ = ರಾಕ್ಷಸನ, ತಲೈ = ಹತ್ತು ತಲೆಗಳನ್ನೂ, ತಾಳಾಲ್ = ತನ್ನ ಪುಟಾಣಿ ತಿರುವಡಿಗಳಿಂದ, ಪಂಡು = ಹಿಂದೊಮ್ಮೆ, ಎಣ್ಣಿ = ಗೀರಿದ ಕುಮರನ್ = ಆ ಕುವರನೇ, ನಿರ್‌ಕ್ಕುಮ್ = ಈಗಲೂ ಮುಂದೆಯೂ ನಿಂತಿರುವ, ಪೊಳಿಲ್ = ನಂದವನಗಳಿಂದ ಭರಿತವಾದ, "ಪುಷ್ಪಮಂಟಪ"ವೆನಿಸಿದ ವೇಙ್ಗಡ ಮಲೈಕ್ಕೇ = ತಿರುಪತಿ ಬೆಟ್ಟಕ್ಕೇ ಪುರಿನ್ದು = ಆಶ್ರಯಿಸಲು, ಪೋಮ್ = ಪುರುಪುರುಗುಟ್ಟುತ್ತಾ ಉತ್ಸಾಹದಿಂದ ನಡೆಯಿರಿ. ಇವರ ನಕ್ಷತ್ರದಲ್ಲೇ ಹುಟ್ಟಿದ ಕೃಪೆಯಿಂದೇನೋ, ಈ ದಾಸನಿಗೆ ೧೯೬೨ರಲ್ಲಿ ಮೇಲುಕೋಟೆಯಿಂದ ಪಾದಯಾತ್ರೆಯಲ್ಲೇ ತಿರುಮಲೆಗೆ ಹಾಗೂ ಚಿತ್ತೂರ್ ಜಿಲ್ಲೆ ಅನನ್ತಪುರಜಿಲ್ಲೆಗಳ ಗ್ರಾಮ ನಗರಗಳ ಪರಿಕ್ರಮಗಳಾದವು. ಹಿಂದಿನವರೆಲ್ಲಾ ಮುಳಬಾಗಿಲು ಅಥವಾ ಮೂಡಲಬಾಗಿಲು ಮೂಲಕವೇ ಕರ್ಣಾಟಕಕ್ಕೂ, ಆಂಧ್ರಕ್ಕೂ ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತಿದ್ದುದರಿಂದ ಅದೇ ತಿರುಪತಿಗೆ ಪ್ರಮುಖಮಾರ್ಗ.

ತಮಿಳ್ ತಿರಳ್ ೪೫

ಪುರಿನ್ದು ಮಲರ್ ಇಟ್ಟು ಪ್ಪುಣ್ಡರೀಕ ಪ್ಪಾದಮ್ ಪರಿನ್ದು ಪಡುಕಾಡು ನಿರ್‌ಪ್ಪ - ತೆರಿನ್ದೆಙ್ಗುಮ್|
ತಾನೋಙ್ಗಿ ನಿರ್‌ಕ್ಕಿನ್ನಾನ್ ತಣ್ಣರುವಿ ವೇಙ್ಗಡಮೇ ವಾನೋರ್‌ಕ್ಕುಮ್ ಮಣ್ಣೋರ್‌ಕ್ಕುಮ್ ವೈಪ್ಪು||

ಕನ್ನಡ ನೆರಳ್

ಆಸರಿಸಿರಿ ಮಲರ್ ಇಟ್ಟಂಬುಜ ಪಾದಗಳಂ, ನೇಹಿಸಿಪರದಾಡುವ ಬಕುತಿಯ ಬೆಂಟುತ, ತೋರುತಲೆಲ್ಲೂ |
ತಾನದೇ ಪರತೆಯಿಂ ನಿಂದಿಹನಾ, ತಣ್‌ಹೊನಲ್ ವೇಂಕಟನೇ ಬಾನವರ್ಗೂ ಮಣ್ಣವರ್ಗೂ ಅಕ್ಷಯನಿಧಿಯೈ ||

ಹುಟ್ಟಿ ಸಾಯುವ ಬದ್ಧ ಸಂಸಾರಿಗಳಿಗೆ ಮಾತ್ರ ತಿರುಪತಿ ಪಾದಯಾತ್ರೆ ಎನ್ನಬೇಡಿ. ವೈಕುಂಠದ ನಿತ್ಯಸೂರಿಗಳೂ ಇಲ್ಲಿಗೆ, ಯಾತ್ರಾರ್ಥಿಗಳಾಗಿ ಬರುತ್ತಾರೆ. ಚಲಾವಣೆಯಲ್ಲಿರುವ ನಿಧಿ ಯಾರಿಗೆ ಬೇಡ? ಆ ವೈಕುಂಠದ ಪರವಾಸುದೇವನ ದಯಾ, ವಾತ್ಸಲ್ಯ

ಸೌಶೀಲ್ಯ, ಸೌಲಭ್ಯಾದಿ ಗುಣಗಳ ವ್ಯವಹಾರಕ್ಕೇ ಅವಕಾಶವಿಲ್ಲ! ದುಃಖಿತರ ಬಗೆಗೆ ದಯೆಯೆಂಬ ಗುಣವನ್ನು ಕಾಣಬೇಕಿದ್ದರೆ, ತಿರುಪತಿಯಲ್ಲೇ. ದೂರದಲ್ಲಿನ ನಿತ್ಯಮುಕ್ತರಲ್ಲಿ ದೋಷವೇನೇನೂ ಇಲ್ಲ. ದೇವರಲ್ಲಿನ "ನಮ್ಮ ದೋಷವನ್ನೇ ನೋಡದ, ಅಥವಾ ಕಂಡರೂ ದೋಷಭೋಗ್ಯತ್ವವೆಂಬ ವಾತ್ಸಲ್ಯ ಗುಣಕ್ಕೂ" ವೈಂಕುಠದಲ್ಲಿ ಪ್ರಕಾಶದ ಅವಶ್ಯಕತೆಯೇ ಇಲ್ಲ. ಮಂದರಾದವರ ಜತೆಗೇ ಸಲಿಗೆಯಿಂದ ಸೇರಿ ನಿಗರ್ವಿಯಾಗಿ ಏಕೋಭಾವದಿಂದರಬೇಕಾದರೆ ಈ ಮಿಶ್ರಲೀಲಾ ವಿಭೂತಿಯಲ್ಲೇ, ಯಾವಾಗಲೂ "ಸದಾಪಶ್ಯನ್ತಿ"ಯ ನಿತ್ಯ ಸೂರಿಗಳಿಗೆ ಇಲ್ಲೂ ಅಹೋರಾತ್ರ ಯೋಗದಿಂದ ಶ್ರೀನಿವಾಸನನ್ನು ಅನುಭವಿಸಬಹುದು. ಇತ್ತೀಚಿಗೆ ಹಣವಿಲ್ಲದವರಿಗೆ, ವೇಂಕಟೇಶನೂ ಅಷ್ಟೂಸುಲಭತೆಯನ್ನು ತೋರದಿದ್ದರೂ, "ಧರ್ಮದರ್ಶನ" ಇದ್ದೇ ಇರುವುದು ಸೌಲಭ್ಯಕ್ಕೆ ಒಂದು ಸಾಂಕೇತಿಕ ಪರ್ಯಾಯವಾಗಿದೆ!

ಪುರಿನ್ದು = ದೇವರೆಡೆಗೆ ಅಭಿಮುಖರಾಗಿ ತಿರುಗಿ, ಮಲರ್ ಇಟ್ಟು = ಹೂ ಹಾಕಿ, ಎಲ್ಲಿಗೆ? ಪುಣ್ಡರೀಕಪ್ಪಾದಮ್ = ಪಾದವೇ ಹೂವಿಗಿಂತಲೂ ಎಲ್ಲಾ ವಿಧದಲ್ಲಿ ಉತ್ತಮವಿದ್ದರೂ ಭಕ್ತಿಯಿಂದ ಸಮರ್ಪಿಸುವರು, ಪರಿನ್ದು = ಸ್ವಾಮಿಯ ಬಗೆಗೆ ಆಶೆಪಟ್ಟು, ಪಡು ಕಾಡು ನಿರ್ಪ್ಪ = ಯಾವುದನ್ನೂ ಬಿಡದೇ ಐಕಾಂತಿಕ, ಆತ್ಯಂತಿಕ ಅನನ್ಯ ನಿತ್ಯಯುಕ್ತರಾಗಿ, ತೆರಿನ್ದು = ಪ್ರಕಾಶಿಸುತ್ತಾ, ತಾನ್ = ಸ್ವಯಂ ವ್ಯಕ್ತನಾಗಿ, ಓಙ್ಗಿ = ಎತ್ತರದ ಆ ಪರತ್ವ ವಿಶಿಷ್ಟನಾಗಿಯೂ, ನಿರ್ಕ್ಕಿನ್ಱಾನ್ = ನಿಂತೇ ನಿತ್ಯವಾಸಮಾಡುತ್ತಿರುವ, ತಣ್ = ತಂಪಾದ, ಅರುವಿ = ತೀರ್ಥಗಳುಳ್ಳ, ವೇಙ್ಗಡಮೇ = ಇದೊಂದೇ ಗಿರಿಯಲ್ಲೋ ಎನ್ನುವಂತೆ! ವಾನೋರ್ಕ್ಕುಮ್ = ಆ ಬಾನ್‌ವಾಸಿಗಳಾದ ನಿತ್ಯಮುಕ್ತರಿಗೂ, ಮಣ್ಣೋರ್ಕ್ಕುಮ್ = ಈ ಲೀಲಾ ವಿಶ್ವವಿಭೂತಿಸ್ಥರಿಗೂ, ವೈಪ್ಪು = ಉಭಯ ನಿಧಿಯಾಗಿದ್ದಾನೆ. **"ತತ್ತು ಸಮ್ ಅನ್ಯಯಾತ್" ಆ ಕಾರಣ ಪರಬ್ರಹ್ಮ ಎಲ್ಲರಿಗೂ ನಿಧಿಯಂತೆ ಶ್ರೇಷ್ಠ. ಈ ಭಾವವೇ ಬ್ರಹ್ಮಸೂತ್ರಕಾರರದೂ ಆಗಿದೆ. ಬಾದರಾಯಣರ ಭಾಷೆಯಲ್ಲಿ. "ಪರೋಕ್ಷ ಶಬ್ದಪ್ರಮಾಣ ಪ್ರತಿಪಾದ್ಯ. ಇಲ್ಲಿ ಅದೇ ಅಕ್ಷಿಗಮ್ಯ! ಅರ್ಚಾಮೂರ್ತಿಗಳೇ ಸಾರ್ವಜನಿಕರ ಅಕ್ಷಯ ಸ್ವಯಂಪ್ರಯೋಜನ ರೂಪಿ ನಿಧಿ!"**

ತಮಿಳ್ ತಿರಳ್ - ೪೬

ವೈಪ್ಪನ್ ಮಣಿ ವಿಳಕ್ಕಾಮ್ ಮಾಮದಿಯೈ ಮೂಲುಕ್ಕೆನ್ನು ಎಪ್ಪೊೞುದುಮ್ ಕೈ ನೀಟ್ಟುಮ್ ಯಾನೈಯೈ - ಎಪ್ಪಾಡುಮ್ |
ವೇಡು ವೞೈಕ್ಕ ಕುರವರ್ ವಿಲ್ ಎಡುಕ್ಕುಮ್ - ವೇಙ್ಗಡಮೇ ನಾಡು ವೞೈತ್ತಾಡುದುಮ್ ಏಲ್ ನನ್ನು ||

ಕನ್ನಡ ನೆರಳ್

ಇಡುವೆನು ಮಾಚಂದಿರನೆನು ವಜ್ರದ ದೀಪವ ಇದೋ ಮೋಹನಗೆಂದು ಎಡಬಿಡದೇ ಸೊಂಡಲ ನೀಳ್ದಾನೆಯಂ - ಎಲ್ಲೆಡೆಯಿಂ |
ಬೇಡರು ಸುತ್ತಿರಲ್ ಕೊರವರ್ ಬಿಲ್ ಎತ್ತುವ ವೇಂಕಟವನ್ನೇ ನಾಡೂ, ಬೀಡೂ ಬಳಸಾSSಡಿದರಾSSನಂದ! ||

ಜ್ಞಾನಿ - ಅಜ್ಞಾನಿಗಳೀರ್ವರೂ ಅಸರಿಸಬಹುದಾದುದು ತಿರುಪತಿ ಮಾತ್ರ. ಮಣಿ ವಿಳಕ್ಕಾಮ್ = ಅಖಂಡ, ವಜ್ರಮಯ ದೀಪವನ್ನಾಗಿ, ಮಾ ಮದಿಯೈ = ಪೂರ್ಣಚಂದ್ರನನ್ನೇ, ಎತ್ತರದಲ್ಲಿರುವ ತಿಮ್ಮಪ್ಪನಿಗೆ, ಹತ್ತಿರಲ್ಲಿರುವುದರಿಂದ ಆ ಪರಾತ್‌ಪರನೂ, ಅತ್ಯಂತ ಸುಲಭನೂ ಆಗಿರುವ, ಮಾಲುಕ್ಕು = ಆಶ್ರಿತವತ್ಸಲನಿಗೆ, ವೈಪ್ಪನ್ = ಹಚ್ಚಿಡುವೆನು! ಎನ್ನು = ಎಂಬುದಾಗಿ, ಎಪ್ಪೊೞುದುಮ್ = ಒಂದು ಕ್ಷಣ ಮಾತ್ರವಲ್ಲ! ಸರ್ವದಾ, ಕೈ ನೀಟ್ಟುಂ ಯಾನೈಯೈ = ಸೊಂಡಲನ್ನು, ಮೇಲ್ ಎತ್ತಿಯೇ ಇರುವ ಆನೆಯನ್ನು, ಎಪ್ಪಾಡುಮ್ = ಎಲ್ಲಾ ಕಡೆಯಿಂದಲೂ, ವೇಡು = ಬೇಡರು, ವೞೈಕ್ಕ = ಸುತ್ತುವರಿದಿರಲು, ಕುರವರ್ = ಭಾಲ್ಲರು, ವಿಲ್‌ಎಡುಕ್ಕುಮ್ = ಆನೆಗೆ ಅಪಾಯ ಬಾರದಂತೆ, ಜೀವಸಹಿತ ಹಿಡಿದು ಪಳಗಿಸಿ, ವೇಂಕಟೇಶನಿಗೆ ಸಮರ್ಪಿಸುವ ಉದ್ದೇಶ್ಯದಿಂದ ತಮ್ಮ ಬಿಲ್ಲುಗಳನ್ನು ಎತ್ತುತ್ತಾರಷ್ಟೆ! ಇಂತಹ ವೈಶಿಷ್ಟ್ಯವುಳ್ಳ, ವೇಙ್ಗಡಮೇ = ತಿರುಪತಿಯನ್ನೇ. ನಾಡು = ತಿಳಿಯದ, ತಿಳಿದ ಎಲ್ಲಾ ಬಗೆಯ ಜನರೂ, ವೞೈತ್ತು = ಗಿರಿಪ್ರದಕ್ಷಿಣೆ ಗೈದು, ಆಡುದುಮ್ ಏಲ್ = ಆಟದಂತೆ ಸುತ್ತಿದ್ದೇ ಆದರೆ, ಆಹಾ! ನನ್ನು = ಸರ್ವಾನಂದ? ಭಗವದ್ ಭಕ್ತರಾದ ಗಜ, ಬೇಡ, ಕೊರಮ ಎಲ್ಲರನ್ನೂ ಒಳಗೊಂಡ ಆ ವೇಂಕಟಗಿರಿಯ ಪರಿಕ್ರಮ ಗೈಯ್ಯಿರಿ. ಅಂತೆಯೇ ಯಾತ್ರಾ ಸ್ಥಳಗಳಲ್ಲಿನ ಸರ್ವತೀರ್ಥಗಳಲ್ಲಿ ದೇವರಪಾದ ಶಠಾರಿಯೊಡನೆ ಸ್ನಾನ ತೀರ್ಥೋತ್ಸವಗಳೂ, ರಾತ್ರಿ ಬೆಳದಿಂಗಳಲ್ಲಿ ಗಿರಿಪ್ರದಕ್ಷಿಣವೂ ಏರ್ಪಟ್ಟಿರುವುದು.

ತಮಿಳ್ ತಿರಳ್ ೪೬

ನನ್ ಮಣಿವಣ್ಣನೂರ್ - ಆಳಿಯುಮ್ ಕೋಳರಿಯುಮ್ ಪೊನ್ ಮಣಿಯುಮ್ ಮುತ್ತುಮುಮ್ ಪೂಮರಮುಮ್ - ಪನ್‌ಮಣಿನೀ|
ರೋಡು ಪೊರುದುರುಳುಮ್ ಕಾನಮುಮ್ ವಾನರಮುಮ್ ವೇಡುಮ್ ಉಡೈ ವೇಙ್ಗಡಮ್||

ಕನ್ನಡ ನೆರಳ್

ಆನಂದಿಪ ಮಣಿಬಣ್ಣನ ಊರು ಶರಭಂ ಕಲಿಸಿಂಗಂ ಪೊನ್ನಂದದ ಮಣಿಮುತ್ತೂ, ಪೂಮರಂ ಪಲರನ್ನಗಳ್ ನೀರ್
ಓಡಿರೆ ಕೊಚ್ಚುತಲುರುಳಿಪ ಕಾನನಮುಮ್, ವಾನರಮುಮ್ ಬೇಡರುಮ್ ಕಿಂಕರರಾಗುಳ್ಳಾ ವೇಂಕಟವೈ

ದ್ರಾವಿಡ ಭಾಷೆಯಲ್ಲಿ ಊರು ಎನ್ನುವುದಕ್ಕೆ ಅರ್ಥ, ಯಾರೂ, ಆ ಸ್ಥಳ ಬಿಡದೆ ಸ್ಥಿರ ರಕ್ಷಣೆ ಪಡೆಯಬಹುದಾದ ಸ್ಥಾನ ಎಂದೇ. ಉಪ್ಪಿನಲ್ಲಿ ಕಾಯಿ ಊರುವಂತೆ ಜನ ಜಾನುವಾರು ತಮ್ಮ ತಮ್ಮ ಊರುಗಳಲ್ಲೇ ಸ್ವಾವಲಂಬಿ ಸ್ವಪರಿಪೂರ್ಣ ಜೀವನದ ಸರಳ ನಿರಪಾಯ ಮಾರ್ಗದಲ್ಲೇ ಸ್ವತಂತ್ರರಾಗಿದ್ದು, ಅಲ್ಲಿಗಿಲ್ಲಿಗೆ ಚೆಲ್ಲಾಪಿಲ್ಲಿಯಾಗಿ ಅನಿವಾರ್ಯತೆಗಳಿಂದ ಚೆದುರಿ ಹೋಗುವ ಸಂದರ್ಭ ವಿರಬಾರದು. ಋಗ್ವೇದ ಈ ವ್ಯವಸ್ಥೆಯನ್ನೇ ಈ ಮಂತ್ರದಿಂದ ತಿಳಿಸಿದೆ. **"ವಿಶ್ವಂ ಪುಷ್ಟಂ ಗ್ರಾಮೇ ಅಸ್ಮಿನ್ ಅನಾತುರಮ್" "ದೇಶದ ನಿಜವಾದ ರಕ್ಷಣೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ - ಸರಕಾರ ಮಿಲಿಟರಿ ಪೋಲೀಸು ಕಾರ್ಯಾಂಗ, ನ್ಯಾಯಾಂಗಾದಿಗಳಿಂದಲ್ಲ. ಗ್ರಾಮದ ಬುನಿಯಾದಿನಿಂದಲೇ ಆಯಾಯಾ ಗ್ರಾಮವಾಸಿಗಳ ಸತ್ಯಪ್ರೇಮ ಕರುಣಾದಿ ಸಜ್ಜನಿಕೆಯಿಂದಲೇ, ಸ್ವಯಂ ಪ್ರೇರಿತ ಅನ್ಯೋನ್ಯತೆ, ಗ್ರಾಮಾರ್ಪಿತ ಸರ್ವಸ್ವಾಮಿತ್ವ, ಸರ್ವಸಂಮತಿಯಿಂದಲೇ ಆಗಬೇಕೆಂಬ 'ಸುವರ್ಣ ಶಾಶ್ವತ' ಸೂತ್ರವನ್ನೇ ಆಳ್ವಾರ್ ಇಲ್ಲಿ ನಮಗೆಲ್ಲಾ ನೀಡಿರುವುದು".** ಅಂತೆಯೇ ಗ್ರಾಮಸಭೆಗೆ ಕಾನೂನಿನ ಮಾನ್ಯತೆ ದೊರೆತಿರುವುದು ಇನ್ನೂ ಊರ್ಜಿತವಾಗಬೇಕು.

ನಲ್ಮಣಿವಣ್ಣನ್ ಊರ್ = ಅಪ್ಪಟ ನವರತ್ನಗಳಿಗಿಂತಲೂ ಮಿಗಿಲಾದ ತನ್ನ ಕಾಂತಿಯ ಎಲ್ಲೋ ಒಂದಂಶವನ್ನು ಮಾತ್ರ ಪ್ರಸಾದಿಸಿರುವ ಸ್ವಯಂ ಜ್ಯೋತಿ, ಪರಂಜ್ಯೋತಿ ಪರಮ ಪುರುಷನ ಒಂದು ಕಿರುಕಲ್ಪನೆಯ ಸೌಕರ್ಯಕ್ಕಾಗಿ, ಲೌಕಿಕ ಶ್ರೇಷ್ಠವಸ್ತು, ರೂಪಾದಿಗಳ ಉದಾಹರಣೆ ಕೊಡುವುದಷ್ಟೇ ಹೊರತು, **"ತಿಮ್ಮಪ್ಪ ನಿರುಪಮ ರೂಪ! ಇಂತಹ ರೂಪಾತೀತನ ದಿವ್ಯರೂಪ ಶ್ರೀಮಂಗಳವಿಗ್ರಹದ ಕೈಂಕರ್ಯ ಬಿಡದೆ, ದೇವಾಲಯಾಽಽಶ್ರಿತರಾಗಿಯೇ ಜನರಿರುವ ಊರು. ಸ್ಥಳವಾಸಿಗಳನ್ನು ಕದಲಿಸುವ, ಅಥವಾ ತಾವೇ ಕದಲುವ ಪ್ರವೃತ್ತಿ, ಆ ಗಿರಿವಾಸನಿಗೆ ಎಸಗುವ ಘೋರ ಅಪಚಾರ"** ಎಂಬುದು ಊರ್ ಶಬ್ದ ನೀಡುವ ಕಟ್ಟೆಚ್ಚರಿಕೆ! ಇಂಥ ಆಲಯಾಶ್ರಿತ ದೇವಾಲಯಗಳ ಊರುಗಳೆಲ್ಲಾ, **"ಒಂದು ವಿಶ್ವಘಟಕವಾಗುವುದು ಬಲು ಮುಖ್ಯ".** ಏಕೆಂದರೆ, ವಿಶ್ವಶಕ್ತಿ ಇಂತಹ ಗ್ರಾಮಶಕ್ತಿ ಹಾಗೂ ವಾಸ್ತವ ಭಕ್ತಿಗಳಿಂದಲೇ ನಿಜವಾಗಿ ಕುದುರಬೇಕಾಗಿರುವುದು. ಇದೊಂದು ವೈಶ್ವಿಕ ಮೂಲಭೂತ ಸಿದ್ಧಾಂತ ಹಾಗೂ ಸಹಜ ವಿಶ್ವಯೋಜನೆಯಾಗಿ ಬೆಳೆಯಲು, ವಿಶ್ವಸಂಸ್ಥೆ ಪ್ರಬಲವಾಗಿ ಪ್ರಯತ್ನಿಸಬೇಕು. ಅನ್ಯರಕ್ಷಿತರೂ, ಸ್ವಯಂ ಅರಕ್ಷಿತರೂ ದೇಶ ಭಕ್ಷಕರೇ ಆಗಿ ಬಿಡುತ್ತೇವೆ.

ಈ ತಿರುಪತಿಯ ಮಹಾರಣ್ಯ ಪರ್ವತಗಳೇ ಈಗ ಸರ್ವರಕ್ಷಕವಾದ ಊರು. ಅಲ್ಲಿರುವ ಗ್ರಾಮವಾಸಿಗಳ ಸೇವೆಯನ್ನು ಮಾನವರು ಮಾತ್ರವಲ್ಲ, ಆಳಿಯುಮ್ = ವ್ಯಾಳಿಯೆಂಬ ಶರಭ ಮೃಗ, ಕೋಳ್ = ಬಲವುಳ್ಳ, ಅರಿಯುಮ್ = ಸಿಂಹವೂ, ಪೊನ್ = ಬಂಗಾರ, ಮಣಿಯುಮ್ = ನವರತ್ನಗಳು, ಮುತ್ತಮುಮ್ = ಮುತ್ತೂ, ಪೂಮರಮುಮ್ = ಹೂ ಬಿಡದ ಮರಗಳೇ ತಿರುಮಲೆಯಲ್ಲಿಲ್ಲ! ಪಲ್ ಮಣಿನೀರೋಡು = ಹಲವಾರು ಬಗೆ ವಜ್ರ ವೈಢೂರ್ಯಾದಿಗಳು ನೀರಿನಿಂದ ಸೇರಿಯೇ, ಕಾನಮುಮ್ = ದಟ್ಟವಾದ ಕಾನನದ ಐಸಿರಿಯೂ, ವಾನರಮುಮ್ = ವಾನರಗಳ ನಾನಾ ಜಾತಿ. ವೇಡುಮ್ = ಶಾಬರ ಜಾತಿ. ಇವನ್ನೆಲ್ಲಾ ಗಿರಿ ಹೇರಳವಾಗಿ ಉಳ್ಳದ್ದೇ. ಇಂತಹ ಚೈತನ್ಯ ಸಮಾಧಿಯಾಂತ ಕೈಂಕರ್ಯ ಪರರಿಂದ ಸೇವಿಸಲ್ಪಡುವಂತಹದು **"ವೇಙ್ಗಡಮ್"**.

ತಮಿಳ್ ತಿರಳ್ - ೪೮

ವೇಙ್ಗಡಮೇ ವಿಣ್ಣೋರ್ ತೊಳುವದುವುಮ್, ಮೆಯ್‌ಮ್ಮೆಯಾಲ್ ವೇಙ್ಗಡಮೇ ಮೆಯ್ ವಿನೈ ನೋಯ್ ತೀರ್‌ಪದುವುಂ ವೇಙ್ಗಡಮೇ
ದಾನವರೈ ವೀಳ ತ್ತನ್ ಆಳಿ ಪ್ಪಡೈ ತೊಟ್ಟು ವಾನವರೈ ಕ್ಕಾಪ್ಪಾನ್ ಮಲೈ

ಕನ್ನಡ ನೆರಳ್

ವೇಂಕಟವೇ ನಿತ್ಯರು ಮುಕ್ತರು ತೊಳಗುವುದೂ ವೇಂಕಟವೇ ಸತ್ಯವು ಸೈ ನಮ್ ಮೈ ಯೊಟ್ಟಿಹ ಅಘರೋಗವ ತೀರಿಪುದೂ -
ವೇಂಕಟವೇ, ದಾನವರ್ ಬೀಳಲ್ ತನ್ ಚಕ್ರಾಯುಧ ತೊಟ್ಟು ವಾನವರಂ ಕಾಪುವನ್ - ಮಲೈಯೈ||

ಶಿಷ್ಟ ಪರಿಪಾಲನ ದುಷ್ಟಶಿಕ್ಷಣ ಎರಡಕ್ಕೂ ಈ ತಿಮ್ಮಪ್ಪನ ಗಿರಿಯೊಂದೇ ಸಾಕು. ಅಷ್ಟೇ ಅಲ್ಲ, ವೈಕುಂಠದ ಅನಂತ ಗರುಡ ವಿಷ್ವಕ್‌ಸೇನಾದಿ ನಿತ್ಯ ಸೂರಿಗಳಿಗೂ ಮುಕ್ತಾತ್ಮರಿಗೂ ವೈಕುಂಠ ಪ್ರಾಪ್ಯ ಪುರುಷಾರ್ಥ ಎಂಬ ಭಾವನೆಯಿಲ್ಲ. ಈ 'ಭೂ-ವೈಕುಂಠವೇ' ಪ್ರಾಪ್ಯ ಹಾಗೂ ಪ್ರಾಪಕ! ಆ ವೈಕುಂಠದ ಕೇವಲ ಪರತ್ವದ ಅನುಭವ ಮಾತ್ರ ಅವರಿಗೆ ಸಾಲದು. ಪರತ್ವವಿದ್ದೂ ಸೌಲಭ್ಯವಿರುವ, ತಿರುಪತಿಯೇ ಉಭಯಾನುಭವಕ್ಕೂ ತಕ್ಕುದು! ಭೌತಿಕ ಸೃಷ್ಟಿಯಂತೆ, ಕಾಣುವ ಇದು ಅಚೇತನ ಬೆಟ್ಟವಲ್ಲ **"ಶರಣರಿಗೆ ಪರಮ ಚೇತನನ, ಸಮಗ್ರ ಧರ್ಮಗಳನ್ನೂ ತೋರುವುದರಿಂದ, ದೇವರಿಗೇನೂ ಕಡಿಮೆ ದರ್ಜೆಯದಲ್ಲ ಗಿರಿ! ಜಡದಲ್ಲೂ ದಿವ್ಯತೆ ಕಾಣುವುದೇ ಪರಮ ವೈದಿಕ ಧರ್ಮ. ದಿವ್ಯದತ್ತ ಅನುಭಾವದಿಂದಲೇ ಮಾನವರಿಗೆ ಚೆನ್ನಾಗಿ ಈ ಅಂಶ ಮನನಾಟುವಂತೆಸಗುವವರೇ ಶರಣರು".**

ವಿಣ್ಣೋರ್ = 'ಪರಮೇವ್ಯೋಮನ್, ಸದಾ ಪಶ್ಯನ್ತಿಸೂರಯಃ', 'ಪರಂಜ್ಯೋತಿರುಪ ಸಂಪದ್ಯ ಸ್ವೇನರೂಪೇಣ ಅಭಿನಿಷ್ಪದ್ಯತೇ' ಇತ್ಯಾದಿ ಉಪನಿಷತ್ ಪ್ರತಿಪಾದ್ಯರಾದ, ನಿತ್ಯಮುಕ್ತರೂ, ಮೆಯ್‌ಮ್ಮೆಯಾಲ್ = ನಿಜಕ್ಕೂ ಹೊಂದಲ್ಪಡಬೇಕಾದುದೂ

ಹೊಂದಿಸಿಕೊಡುವಂಥದೂ, ತೊಳುವದುವುಮ್, ವೇಙ್ಗಡಮೇ! ವೇಙ್ಗಡಮೇ = ಇಲ್ಲಿ ಎರಡುಬಾರಿ ತಿರುವೇಂಕಟನಾಮದ ಉಲ್ಲೇಖ, ಪ್ರಾಪ್ಯ ಪ್ರಾಪಕ ಉಭಯವೂ ಇದೇ ಎಂಬ ದಾರ್ಢ್ಯವನ್ನು ತಿಳಿಸುವುದು. ಸ್ವಗತ ಹಾಗೂ ಪರರಿಂದ ಒದಗಬಹುದಾದ ಅನಿಷ್ಟಗಳ ಪರಿಹಾರ ರೂಪವಾದ ಶರಣ ಶಬ್ದಾರ್ಥ ಮುಂದೆ. ಕಾರ್ಯ - ಕಾರಣ ಎರಡೂ ವೇಂಕಟಗಿರಿಯೇ. ಪರಮ ಪ್ರಾಪ್ಯವಾದುದರ ಪರತ್ವವೂ, ಇದರಲ್ಲೇ ಒಳಡಗಿದೆ. ಸೌಲಭ್ಯದಿಂದ ನಮ್ಮನ್ನೂ, ವೈಕುಂಠವಾಸಿಗಳನ್ನೂ ಜಯಿಸಿಬಿಡುವ ಉಭಯಶಕ್ತಿ ಅರ್ಚಾವಿಶೇಷಕ್ಕೆ ಇರುವುದೆಂಬುದು ರಹಸ್ಯ. ಅದುದರಿಂದಲೇ, **"ಅರ್ಚಾವತಾರತ್ತಿಲೇ ಆಳ್ವಾರ್‌ಹಳ್ ಪ್ರಪತ್ತಿಪಣ್ಣಿತ್ತುಮ್"** ಸಾಧ್ಯಸಾಧನಗಳಲ್ಲಿ ಅದೇ ಬೇರೆ ಇದೇ ಬೇರೆ, ಯಾವ ಉಪಾಯದಿಂದಲಾದರೂ, ಸಿದ್ಧಿಸಿಬಿಡುವುದು ಎಂದರೆ ಆಗದ ಮಾತು. ಸಾಧನದಲ್ಲೇ ಫಲ ಹುದುಗಿರುತ್ತದೆ. ಬೇವು ಬಿತ್ತಿ ಮಾವಿನ ಹಣ್ಣು ಪಡೆಯಲಾಗದು. ಸರಿದಾರಿ - ಹಿರಿಗುರಿ, ಇದೇ ದ್ವಯಮಂತ್ರ, ಅದರ ಪರಮಾರ್ಥವನ್ನೂ, ಶ್ರೀನಿವಾಸನನ್ನೂ ಕಾಪಾಡುತ್ತಿರುವ ವೇಂಕಟಾಚಲಕ್ಕೇ ಆಳ್ವಾರ್ ಮೂರು ಬಾರಿ. ತಿರುಪತಿಯ ನಾಮ ಸಂಕೀರ್ತನ ಗೈದಿದ್ದಾರೆ! ದಾನವರ್ = ಆಸುರೀ ಸಂಪತ್ತು, ವೀಳ = ಕೆಳವೊಗವಾಗುವಂತೆ, ತನ್ ಆಳಿಪ್ಪಡೈತೊಟ್ಟ = ತನಗೇ ಅಸಾಧಾರಣವಾದ, ಚಕ್ರಾಯುಧ'ಹಿಡಿದು, ವಾನವರೈ = ದೈವೀ ಸಂಪನ್ನರನ್ನು, ಕಾಪ್ಪಾನ್ = ಕಾಪಾಡುವ ಬೆಟ್ಟವೇ ತಿರುಪತಿ.



ನಮ್ಮಾಳ್ವಾರ್

ಅವತಾರಿಕೆ

ತಮಿಳು ನಾಡಿನ ದಕ್ಷಿಣ ದಿಕ್ಕಿನಲ್ಲಿ ಒಂದು ಶ್ರೀನಗರ ಇದೆ. ಉತ್ತರದ ಕಾಶ್ಮೀರದಲ್ಲಿ ಒಂದು ಶ್ರೀನಗರವಾದರೆ, ಇದು 'ತಿರುನಗರಿ'. ಕಲಿಯುಗ ಹುಟ್ಟಿದ ಳಿನೇ ದಿನ, ವೈಯಾಶಿ ವಿಶಾಖಾ ನಕ್ಷತ್ರ! ಒಕ್ಕಲಿಗರ ಕಾರಿಯಪ್ಪ - ಉಡೈಯನಂಗೈ ದಂಪತಿಗಳಲ್ಲಿ ಜನಿಸಿದ ದಿವ್ಯ ಕುವರನೇ ಮುಂದೆ ಕಲಿಯುಗದ ಶರಣರ ಕುಲಕ್ಕೇ ''ಪ್ರಪನ್ನಜನ ಕೂಟಸ್ಥರ್'' ಎಂಬ ಪ್ರಸಿದ್ಧಿಯಿಂದ ಬೆಳಗುತ್ತಾನೆ. ೧೬ ವರ್ಷ ಮೌನ! ೧೬ ವರ್ಷ, ಬಾಯಿಬಿಟ್ಟು ''ಮಧುರ ಕವಿ'' ಎಂಬ, ದ್ವಾಪರಾಂತ್ಯದಲ್ಲೇ ''ತಿರುಕ್ಕೋಳೂರಿ''ನಲ್ಲಿ ಹುಟ್ಟಿ ಶಾಸ್ತ್ರವೇತ್ತಾ ಬ್ರಾಹ್ಮಣೋತ್ತಮರಿಗೆ, ತಮ್ಮ ಅಂತರನುಭಾವಗಳನ್ನು ಬಿಡಿ ಬಿಡಿಸಿ, ಸಿರಿಬಾಯ್ ತೆರೆದು ಅನುಗ್ರಹಿಸಿದರು. ಅವನ್ನೆಲ್ಲಾ, ಮಧುರ ಕವಿ, ತಾಳೆಪ್ರತಿಯಲ್ಲಿ ಬರೆದಿಟ್ಟರು. ''ಪಟ್ಟೋಲೈ ಕೊಂಡಾರ್''! ಎಲ್ಲರಿಗೂ ಪ್ರಿಯಂಹಿತಂ ಆಗುವಂತಹ ತಮಿಳು ಶೈಲಿ! ಈತನ ಮೇಲೆ ಸ್ವಾಮಿಗೂ ವಿಶ್ವದ ಎಲ್ಲಾ ಜನರಿಗೂ ಬಲು ಮಮತೆ! ಆದುದರಿಂದ ಇವರು ''ನಮ್ಮ ಆಳ್ವಾರ್'' ಎಂದೆನಿಸಿಕೊಂಡರು.

ಹಿಂದಿನ ದ್ವಾಪರಯುಗಾಂತ್ಯದ ನಾಲ್ಕೂ ಆಳ್ವಾರ್ ಶರಣರಿಂದ ತಮಿಳುನಾಡಿನ ವಾತಾವರಣದಲ್ಲೇ, ದೇವರ ಹೆಸರನ್ನೇ ಹೇಳದೆ ಅಧ್ಯಾತ್ಮರಹಸ್ಯಗಳನ್ನು ಆರಂಭಿಸಿದ, ಪೊಯ್ಹೆ ಆಳ್ವಾರರ ಮುನ್ನಡೆಯಾಗಿ ಪೂದತ್ತಾರ್, ಜಗತ್‌ಕಾರಣ ವಸ್ತು, ಆ ಕಾಲ ಚಕ್ರಧಾರಿ ''ನಾರಾಯಣ''ನೇ ಎಂಬುದನ್ನು ಕಂಡರಷ್ಟೆ! ಅದಕ್ಕೂ ಮುಂದಿನ ವಿಕಾಸವಾಗಿ, ಶ್ರೀದರ್ಶನ ಪಡೆದವರೇ ''ಪೇಯಾಳ್ವಾರ್'' ಅವರ ಸಂಶೋಧನೆ ''ಶ್ರೀಮನ್ನಾರಾಯಣ''ನೇ ಪರಮತತ್ವ ಎಂಬುದು. ಇದನ್ನೆಲ್ಲಾ ಮನದಟ್ಟು ಮಾಡಿಕೊಂಡು ಸರ್ವದರ್ಶನ ಸಾರಾssಸಾರತದ್ಜ್ಞ ತಿರುಮಳಿಶೈಯಾಳ್ವಾರ್, ಶಾಸ್ತ್ರೀಯ, ಬೌದ್ಧಿಕ ಕ್ಷೇತ್ರಕ್ಕೆ ನಿಸ್ಸಂದೇಹವಾಗಿ ವೇದೋಪನಿಷತ್‌ಗಳ ಜಾಡಿನಲ್ಲೇ ಸಂಸ್ಕೃತ - ದ್ರಾವಿಡ ಉಭಯ ಭಾಷೆಗಳನ್ನೂ ಮೂವರಂತೆಯೇ ಚೆನ್ನಾಗಿ ಬೆಸೆದು, ಶ್ರೀಮನ್ನಾರಾಯಣನಲ್ಲದ ಯಾವುದೇ ದೇವತಾಂತರವೂ ಜಗತ್ಕಾರಣವಾಗದು. ಅದೊಂದನ್ನೇ, ಚತುರ್‌ಮುಖ, ಶಿವ ಇತ್ಯಾದಿ ಯೌಗಿಕ ಹೆಸರಿನಿಂದ ಕರೆಯಬಹುದು. ಶಿವಬ್ರಹ್ಮಾದಿಗಳೂ ಒಂದಳತೆಯಲ್ಲಿ ನರಸಮೂಹಗಳಾದ ಚೇತನ - ಅಚೇತನ ಕೆಲವಾರು ಸಮೂಹಗಳಿಗೆ ''ನಾರ + ಅಯನ = ನಾರಾಯನ''ರಾಗಬಹುದು, ಅವರೇ ಎಂದಿಗೂ ''ನಾರಾಯಣ ಶ್ರೀಮನ್‌ನಾರಾಯಣ''ನಾಗಲಾರರು. ಏಕೆಂದರೆ, ಚತುರ್‌ಮುಖನ ಪತ್ನೀ ಸರಸ್ವತಿಯೆಂದೇ ರಾಜಸಪುರಾಣಗಳಲ್ಲೇ ಹೇಳಿದೆ. ಶಿವ ಪಾರ್ವತೀರಮಣನೆಂದೇ ಹೇಳಿದೆ. ಶ್ರೀದೇವಿಗೆ ಸರಸ್ವತಿ ಎಂಬ ಹೆಸರು ಸಲ್ಲುತ್ತದೆ. ಆದರೆ ಪೌರಾಣಿಕ ಸರಸ್ವತಿಗೆ ಲಕ್ಷ್ಮ್ಯಾಯ ಹೆಸರಿಲ್ಲ. ಪಾರ್ವತಿ, ದುರ್ಗಾ, ಕಾಳೀ ಮುಂತಾದ ಹೆಸರು ಶ್ರೀದೇವಿಗೆ ಒಟ್ಟಿ ಬರುತ್ತದೆ. ಆದರೆ, ಲಕ್ಷ್ಮೀದೇವಿಯೇ, ಶಿವ ಪತ್ನಿಯಾಗಲಾರಳು. ಈ ಬೌದ್ಧಿಕ, ಶಾಸ್ತ್ರೀಯ ವಿವೇಚನಾ ಚಾತುರ್ಯವನ್ನು ಬಳಸಿಕೊಂಡವರೇ - ಭಕ್ತಿಸಾರರು. ಎಲ್ಲರೂ ಕೊಟ್ಟ ಕೊನೆಯ ಮೊಟ್ಟಮೊದಲ ''ಸರ್ವಕಾರಣತ್ವ''ದಿಂದ ಹಿಡಿದು ''ಮೋಕ್ಷ ಪ್ರದತ್ವ''ದವರಿಗೂ ತತ್ವ ಹಿತಪುರುಷಾರ್ಥಗಳ ಐಕಕಂಠ್ಯವನ್ನು ಸಹಜ ಸಹೃದಯತೆಯಿಂದಲೂ, ಮುಗ್ಧವಿದಗ್ಧ ನಾಡು ನಗರಗಳ ಎಲ್ಲರಿಗೂ ಮನದಟ್ಟಾಗುವಂತೆ, ಸುಲಭ ಸರಳ ಜಾನಪದ ಶೈಲಿಯಲ್ಲೇ ತಿಳಿಸಿಕೊಟ್ಟ ವಿವರಣೆಯನ್ನು ನಾವಿಲ್ಲಿ ಸವಿಯುತ್ತಿದ್ದೇವೆ.

ತಿರುವಿರುತ್ತಮ್

ನಮ್ಮಾಳ್ವಾರರ ಚೊಚ್ಚಲ ಕೃತಿ ''ತಿರುವಿರುತ್ತಮ್'' ತಮ್ಮದೇ ಆದ ಆತ್ಮಕಥೆ. ಹುಟ್ಟಿದ ಮೊಗು ಅಳಲಿಲ್ಲ! ಕಣ್ಣು ಬಿಡಲಿಲ್ಲ! ಸ್ತನ್ಯಪಾನ ಮಾಡಲಿಲ್ಲ. ಶೂದ್ರರಾದ ತಂದೆ ತಾಯಿಗಳು, ತಿರುನಗರಿಯ, ಆದಿನಾಥನ ದೇವಾಲಯದ ಎಡಪಕ್ಕದಲ್ಲಿನ ಒಂದು ಹುಣಸೇ ಮರದ ಪೊಟರೆಯಲ್ಲಿ ಆ ಮಗುವನ್ನು ಅರ್ಪಿಸಿಬಿಟ್ಟರು . ಅದೇನು ಕಾರಣವೋ ಯಾರಿಗೂ ತಿಳಿಯದು. ಇದನ್ನೇ ''ಅಹೇತುಕೀಕೃಪೆ'' ಎನ್ನುವುದು. ಮಗುವೇನೋ ಚೆನ್ನಾಗಿ ತೇಜಸ್ವಿಯಾಗಿ ಬೆಳಗುತ್ತಿದೆ! ಏಕೈಕ ಪದ್ಮಾssಸನದಲ್ಲೇ ಕೂತ ಜಾಗದಿಂದ ಕದಲಲೇ ಇಲ್ಲ! ತಲೆ ಜಡೆಗಟ್ಟಿತು! ಒಮ್ಮೆ ಬನ್ನಿ, ಕೇಳಿರಿ! ಎಂಬಂತೆ ಪರೋಪದೇಶ ಮುದ್ರೆ! ಮತ್ತೊಮ್ಮೆ ನಗುನಗುತ್ತಲೇ ದಿವ್ಯಮೂರ್ಛೆ! ಕಣ್ಣೀರು!

ಅಕ್ರಂದನ! ಮತ್ತೊಮ್ಮೆ ದಿವ್ಯದರ್ಶನ! ಅಂತರ್ ಮಾನಸದರ್ಶನ ಮಾತ್ರ! ಈ ಬಾಲಕನಿಗೆ, ಯುವ ಕುಮಾರನಿಗೆ ಅಷ್ಟರಿಂದ ತೃಪ್ತಿಯಿಲ್ಲ! ಹೊರಗಣ್ಣಿಗೂ, ಹೊರಗೈಗೂ ಸಿಕ್ಕಿಯೇ ಬಿಡಬೇಕು. **"ಶ್ರೀಮನ್ ನಾರಾಯಣ!"** ದೇವರೂ ಇವರೊಡನೆ ಕಣ್ಣಾಮುಚ್ಚಾಲೆ ಆಡುತ್ತಲೇ ಇರುತ್ತಾನೆ. ಇವರಿಂದ ಚತುರ್‌ವೇದ ಸಾರ, ದ್ರಾವಿಡಭಾಷೆಯಲ್ಲಿ ಹೊಮ್ಮಿಸಬೇಕು! ಆರ್ಯ - ದ್ರಾವಿಡ ಕಲಹಕ್ಕೆ ಕಲಿಯುಗದ ಜನ ಇಳಿಯಬಾರದು. "ಉಭಯ ವೇದಾನ್ತ" ಇದರ ಅಭಯದರ್ಶನ ಬಲದಿಂದ ಋಗ್ವೇದ ಸಾರವಾಗಿ, ೧೦೧ ಶಾಖೆಯ ಆವೇ ನೂರು ತಮಿಳ್ ಪಾಶುರಗಳಾಗಿ, ಸಹಜವಾಗಿ ಪ್ರವಹಿಸಿತು. **"ಅಗ್ನಿಂ ಈಳೇ ಪುರೋಹಿತಂ"** ಆರಂಭವಾಗಿ **"ಯಥಾವಃ ಸುಸಹಾಸತಿ"** ಜಗತ್ತಿನ ಸರ್ವರ ಸಹಜ ಸುಸಂಘಟನೆಯಲ್ಲಿ ಕೊನೆಗೊಳ್ಳುವ, ವೇದಪುರುಷನ ಸಮಗ್ರಭಾವವನ್ನು, **"ತಿರುವಿರುತ್ತಂ ಶ್ರೀವೃತ್ತಾನ್ತದಲ್ಲಿ ಮಾರಪ್ಪ ತಿಳಿಸಿದ್ದಾರೆ"**. ತಮ್ಮ ತಂದೆಯ ಅಂಕಿತವನ್ನೇ ಕೊನೆಯ ಹಾಡಿನಲ್ಲಿಟ್ಟಿದ್ದಾರೆ.

"ಮಾರನ್ ವಿಣ್ಣಪ್ಪಂಶೈದ" "ಮಾರನು ಬಿನ್ನಪಗೈದ", "ಪಿತೃದೇವೋಭವ" ಸಾಮಾನ್ಯಶಾಸ್ತ್ರ ದೃಷ್ಟಿಯನ್ನೂ, ಉಲ್ಲಂಘಿಸದೆ, ಹಿರಿಯರ ಪ್ರಾರ್ಥನಾಬಲವನ್ನೂ ಕೃತಜ್ಞತೆಯಿಂದ ಸೂಚಿಸುವಂತೆ, ಈ ಶರಣರ ಸಾಹಿತ್ಯ ಶೈಲಿ ಸರ್ವಸ್ಪರ್ಶಿಯಾಗಿರುವುದು. ಇವೊತ್ತಿಗೂ, ನಮ್ಮಾಳ್ವಾರರ ತಿರುನಕ್ಷತ್ರ ಸಂದರ್ಭದಲ್ಲಿ, ತಿರುಕ್ಕುರುಹೂರಿನ ಉತ್ಸವಮೂರ್ತಿ. ನಮ್ಮಾಳ್ವಾರರ ಉತ್ಸವಮೂರ್ತಿ ಎಲ್ಲರನ್ನೂ, ಆಮಾರನ್ ವಂಶಜರು ಬರಮಾಡಿಕೊಳ್ಳುತ್ತಾರೆ. ಮೂರು ಮೈಲಿ ದೂರದ ಆ ಹಳ್ಳಿಗೆ, ಉತ್ಸವ ಸಂಭ್ರಮವಾಗಿ ಜರುಗುತ್ತದೆ!

ತಿರುವಾಶಿರಿಯಂ

ಎರಡನೆಯ ಕೃತಿ **"ತಿರುವಾಶಿರಿಯಂ"** ತಮಿಳ್ ಸರಳ ರಗಳೆಯ ಧಾಟಿ. ಅದರಲ್ಲಿ ಏಳೇ ಪಾಶುರಗಳು. ಸಾಲುಗಳ ಬಗೆಗಳಿಗೆ ಗಮನವಿಲ್ಲ. ತಮ್ಮ ಯಾವುದೇ ಹೆಸರನ್ನು ಹೇಳಿಕೊಳ್ಳದ ಅನಾಮಧೇಯರೇ ಆಗಿ ಬಿಟ್ಟಿದ್ದಾರೆ ಈ ಮಾರಪ್ಪ! "ಮಾರನ್" ಎಂದರೆ, ತಾನೂ ಜೀವನದಲ್ಲಿ ಆರಂಭದಿಂದಲೇ ಬದಲಾವಣೆ ಹೊಂದಿದುದನ್ನು ಜನರ ಜೀವನದಲ್ಲೂ "ಸೌಮ್ಯ ಪರಿವರ್ತನೆ ತರುವವ" ಎಂಬರ್ಥವೂ ಇದೆ. ಇದು ಪರಮಾತ್ಮನ ವಿರಾಟ್ ಜಗದಾಕಾರವನ್ನು ಇವರಿಗೆ ಅತನೇ ತೋರಿಸಿದ ಒಂದು ಅಪೂರ್ವ ವಿಶ್ವರೂಪ ಸೇವೆಯನ್ನು ಬಣ್ಣಿಸುವುದು. ಯಜುರ್‌ವೇದ ಜಗತ್ತಿನ ಬಗೆಗೇ **"ಇಷೇತ್ವಾ, ಊರ್ಜೇತ್ವಾ"** ಆರಂಭಿಸಿ, **"ಸಮ್ ಉದ್ಯೋ ಬನ್ಧುಃ"** ಅನ್ನ, ಶಕ್ತಿ ಇವುಗಳೆಲ್ಲಾ ಯಜ್ಞರೂಪಿ, "ಸರ್ವವ್ಯಾಪಕ ಬಂಧು"ವಿನಿಂದಲೇ ಎಂಬುದನ್ನು ತಿಳಿಸಿರುವ ಶೈಲಿಯನ್ನೇ ಹೋಲುವುದರಿಂದ ತತ್‌ಸಾರವಿದು.

ಪೆರಿಯ ತಿರುವಂದಾದಿ

ಮೂರನೆಯದು ಅಥರ್ವವೇದ ಸಾರ. **"ಪೆರಿಯ ತಿರುವಂದಾದಿ"**, ಹಿಂದಿನ ಮೊದಲ್ ಹಾಗೂ ತಿರುಮಳಿ ಶೈಗಳ ಅನ್ತ್ಯಾದಿ ರೀತಿಯಲ್ಲೇ ೮೭ ಪಾಶುರಗಳಲ್ಲಿ "ನಿಶ್ಚಲವಾದ" ತಮ್ಮ ಮನಸ್ಸನ್ನೇ ಕೇಂದ್ರವಾಗಿಸಿ ಉತ್ಸಾಹ ತುಂಬಿಕೊಂಡು, ನಮಗೂ ಉತ್ಸಾಹ ಹುಟ್ಟಿಸುತ್ತಾರೆ. "ಥರ್ವ" ಎಂದರೆ ಚಂಚಲ ಎಂದರ್ಥ. ಅಥರ್ವ-ಚಂಚಲವಿಲ್ಲದ ಸ್ಥಿರಧೃತಿ! ಇಲ್ಲೂ ತಮ್ಮ ಯಾವುದೇ ಹೆಸರನ್ನು ಹೇಳಿಲ್ಲ!

ತಿರುವಾಯ್ ಮೊಳಿ

ನಾಲ್ಕನೆಯದೇ, ವಿಶ್ವಜನಾನುಮೋದನವಾದ ೧೧೦೨ ಹಾಡುಗಳ ನಾನಾರಸ ಘನ, ಹಾವ ಭಾವ ಸಂಗೀತ ನರ್ತನಾದಿಗಳಿಗೊದಗುವವಂತಹ, ಗೇಯಜಾನಪದ ವಾಙ್ಮಯ! ಯೋಗರಹಸ್ಯಗಳ ಖನಿ! ಗಾನ ಪ್ರಧಾನವಾದ **"ಸಾಮವೇದಕ್ಕೆ ಸರಿ ಸಮ"** **"ತಿರುವಾಯ್ ಮೊಳಿ."** ೧೬ ವರ್ಷದ ಮೌನಭೇದಿಸಿ ೩೨ನೆಯ ವರ್ಷದವರಿಗೆ ಸಿರಿಬಾಯ್ ತೆರೆಯಿಸಿ ದೇವರೇ ಹಾಡಿದ ದಿವ್ಯದೇವಗಾನ "ಸಿರಿಬಾಯ್ ನುಡಿ"! ಸಹಸ್ರಶಾಖಾ ಸಾಮವೇದದ ಸಕಲಾರ್ಥಗಳೂ ಇಲ್ಲಿ ಸಿಗುತ್ತವೆ. ಇಲ್ಲಿ "ಶಠಕೋಪನ್" ಎಂಬ ತಮ್ಮ ನಾಮವನ್ನು ಅಂಕಿತಗೊಳಿಸಿದ್ದಾರೆ. ಈ ಹೆಸರಿನ, ಪದಗಳ ಅರ್ಥ ಹೀಗಿದೆ. ಈ ಪ್ರಾಕೃತ ಮಂಡಲದ ವಾಯುವಿನಲ್ಲಿ "ಶಠ" ಎಂಬುದೊಂದು ಪ್ರದೂಷಕಾಂಶ ಸೇರಿದೆ. ಅದರಿಂದಲೇ ನಾವೆಲ್ಲಾ ಮಾಯಾವಶರಾಗುವುದು. ಹಿಂದಿನ ಜನ್ಮದಲ್ಲಿ ಇವರೂ "ಮಾಯಾಪ್ಪಿರವಿ"ಯಲ್ಲೇ ಬಿದ್ದಿದ್ದವರು. ಎಷ್ಟೇ ಶಕ್ತಿಶಾಲಿಯಾದರೂ ಜಡಶಕ್ತಿ, ಪರಮಚೇತನ ಶಕ್ತಿಗೆ ಮಣಿಯಬೇಕಷ್ಟೆ. ಆ ಮೂಲ ಜನರೇಟರ್‌ನಿಂದಲೇ ಹೊರಟ ಪರಮಚೈತನ್ಯ ದಿವ್ಯ ವಿದ್ಯುದ್‌ರಶ್ಮಿಪಾತ, ಜನನಕಾಲದಲ್ಲೇ ಈ ಹಸುಳೆಯ ಮೇಲೆ ಬಿದ್ದಿದುದರಿಂದ ಶಠವಾಯುವನ್ನು ಗೆದ್ದೇಬಿಟ್ಟ! "ಶಠಕೋಪ ಶಠಾರಿ" ನಾವೆಲ್ಲಾ ಶಠಮಿತ್ರರಾಗಿಬಿಟ್ಟಿದ್ದೇವೆ. ಈ ಶಠಾರಿಯಿಂದಲೇ ಕಲಿಯುಗದಲ್ಲಿ ಇಹ ಪರಸ್ವಾಸ್ಥ್ಯ ಸಂಪಾದಿಸಬೇಕಾಗಿದೆ.

ಈ ಯುಗ ಸಂಧಿಕಾಲ, ಜಗತ್ತಿನ ಇತಿಹಾಸದಲ್ಲೇ ಬಲು ಜೀವಾಳವಾದುದು. ದ್ವಾಪರಯುಗದ ಕೊನೆ. ೩೫೦ ವರ್ಷ, ಕಲಿಯುಗದ ಆದಿ ೩೫೦ ವರ್ಷ ಸುಮಾರಿನಲ್ಲೇ, 'ದ್ರಾವಿಡೇಷುಚಭೂರಿಶಃ' ಎಂಬಂತೆ ೧೨ ಜನ ವ್ಯಾಪಕ ದೃಷ್ಟಿಯ - ವೈಷ್ಣವ ಆಳ್ವಾರ್‌ಗಳೂ, ಮಾಣಿಕ್ಯ ವಾಚಕರ್, ಜ್ಞಾನ ಸಂಬಂಧರ್ ಮುಂತಾದ ಶೈವ ನಾಯನ್‌ಮಾರ್ ೬೩ ಮಂದಿಯೂ, ಭಾವೈಕ್ಯ ನಾಮಭೇದದಿಂದಷ್ಟೇ ಸೊಗಸಾದ ತಮಿಳ್ ದಿವ್ಯ ವಾಙ್ಮಯ ಪೂರವನ್ನೇ ಹರಿಸಿ, ಕಲಿಯುಗವನ್ನೇ ತೊಳೆದು ತೊಡೆದುಹಾಕಿದರು. ಹಾಗೂ ಈ ೭೦೦ ವರ್ಷಗಳಾದ ಮೇಲೆ, ಕಾಲಕ್ರಮದಲ್ಲಿ ವಿಕಸಿತವಾದ ಜೈನ, ಬೌದ್ಧಾದಿ ನೀತಿ ಪ್ರಧಾನ ದರ್ಶನಕ್ಕೆ ಒಂದು ಮೂಲ ಸ್ರೋತಸ್ಸಾದರು! **"ವೇದಧರ್ಮ ಎಂದೂ ಸರ್ವತೋ ಗುಣಗ್ರಾಹಿ!"**

ಪರಮಾಶಕ್ತಿಕೇಂದ್ರದಿಂದ ತಾನಾಗಿಯೇ ನೇರವಾಗಿ ದೊರೆತ "ಕರುಣಾ ಪೂರ್ಣ - ವಿದ್ಯುದ್ವಿವ್ಯರಶ್ಮಿ"ಯನ್ನು ಈ ಹುಡುಗ ಅತುಕೊಂಡುದುದರಿಂದ, ಬೇರೆ ಎಲ್ಲಾ ವಿಧ ಪ್ರಮಾತೃಗಳಂತಲ್ಲದೆ, ಶಕಕೋಪ ವಿಶಿಷ್ಟ, ಅಸಾಧಾರಣ, ನಿರುಪಮ ಭಕ್ತಿಮಾನ್ ಆದ. ಸ್ವಪ್ರಯತ್ನದ ಭಾವದವರಂತೆ, ಕ್ರಮಕ್ರಮವಾಗಿ, ಇವರ ವಿಕಾಸವಲ್ಲವೆಂಬುದನ್ನು, ಇವರ ನಾಲ್ಕೂ ಕೃತಿ ರಚನೆಗಳ ಆಧಾರದಿಂದಲೇ ಹಿಂದಿನ ಆಚಾರ್ಯರೆಲ್ಲಾ ಈ ಕುರುಹೂರ್ ನಗರದ ಆದಿಪ್ರಪತ್ತಿ ಮಾರ್ಗದರ್ಶಕನನ್ನು, "ಪ್ರಮಾತೃತಮ"ರೆಂದು ನಿಶ್ಚಯಿಸಿದ್ದಾರೆ.

ಸಿರಿವೃತ್ತ ತಿರುವಿರುತ್ತಮ್

ಋಜುವಾದ ತೆರೆದ ಮನಸ್ಸಿನಿಂದಲೇ ಕರ್ಮಜ್ಞಾನ ಭಕ್ತಿ ಪ್ರಪತ್ತಿಗಳ ವೈಜ್ಞಾನಿಕ ವಿಕಾಸಗಳನ್ನು ಒಟ್ಟಿಗೆ ಗ್ರಹಿಸಿ, ಅದೇ ಭಗವತ್ ಕೃಪೆಯಂತೆಯೇ ಜನರಿಗೂ ತಮ್ಮದಾಗಿ ಯಾವೊಂದು ಒಡೆತನದ ಹಕ್ಕು (Copy Right) ಇಟ್ಟುಕೊಳ್ಳದೆ, ಪುಕ್ಕಟ್ಟೆ ಭೂರಿದಾನ ಮಾಡಿದುದರಲ್ಲಿ ಇವರ ಮೊಮ್ಮೊದಲ **"ಅರುಳಿಚ್ಚೆಯಲ್" "ಈ ಸಿರಿವೃತ್ತ! ತಿರುವಿರುತ್ತಮ್".**

"ಅವಿದ್ಯಾ, ಕರ್ಮ, ವಾಸನಾ ರುಚಿ, ಪ್ರಕೃತಿ ಸಂಬಂಧ" ಇವೈದೂ ಒಂದು ಚಕ್ರ. ಮಾನವ ತಿಳಿದೋ ತಿಳಿಯದೆಯೋ ಏನೋ ಮಾಡಿ ಬಿಡುತ್ತಾನೆ. ಆ ಕೆಲಸದಿಂದ ಚಿತ್ತಪಟಲದಲ್ಲಿ ಒಂದು "ವಾಸನೆ" ಮುದ್ರೆಯೊತ್ತಿಬಿಡುತ್ತದೆ. ಮತ್ತೆ ಮತ್ತೆ ವಿವೇಕವನ್ನು ಬಳಸದೇ ಅದೇ ಕರ್ಮವಾಸನೆಯಿಂದ ನಾಲ್ಕನೇ ಹಂತದಲ್ಲಿ ಅಭಿರುಚಿ ಪ್ರಬಲವಾಗಿ ಬಿಡುತ್ತದೆ. ಅದರಿಂದ ಮತ್ತೆ, ಈ **"ದೇಹ, ಇಂದ್ರಿಯ, ಮನಸ್, ಪ್ರಾಣ, ಬುದ್ಧಿ"**ಗಳೆಂಬ "ಜಡ ಪ್ರಕೃತಿಗೆ" ವಶ್ಯನಾಗಿ ಬಿಡುತ್ತಾನೆ. ಗಾಣದ ಎತ್ತಿನಂತೆ, ಯಥಾಸ್ಥಿತಿಯಲ್ಲೇ ಬಿದ್ದು ಮತ್ತೆ ಮತ್ತೆ ಹುಟ್ಟಿ, ಸಾಯುವ "ಸಂಸಾರ ಚಕ್ರ"ದಲ್ಲಿ ಬೀಳುತ್ತಾನೆ. ಇದರ ಅರಿವು ಥಟ್ಟನೆ ನಮ್ಮ ಶಕಕೋಪಪ್ಪನಿಗೆ ತಾಗಿಯೇ ಬಿಟ್ಟಿತು. ಅವರ ಅಜೀವ, ಎಲ್ಲರಿಗಾಗಿ ಅತ್ತು, ದೇವಾದಿದೇವನಿಗೆ ಬಿನ್ನೈಸಿಕೊಳ್ಳುವುದೇ "ತಿರುವೃತ್ತ"ದ ಆರಂಭ.

"ಪೊಯ್ ನಿನ್ನ ಜ್ಞಾನಮುಂ ಪೊಲ್ಲಾವೊಳುಕ್ಕುಮ್, ಅಳುಕ್ಕುಡಮ್ಬುಮ್"

"ಇನ್ನಿನ್ನ ನೀರ್ಮೈ ಇನಿ ಯಾಮ್ ಉರಾಮೈ" ಅನಿತ್ಯತ್ವ ಅಲ್ಪತ್ವ ಅಸ್ಥಿರತೆಯೇ ಇಲ್ಲಿನ ಮಿಥ್ಯಾತ್ವ, ಮಿಥ್ಯೆಯನ್ನು ಸತ್ಯವೆಂದು ತಿಳಿಯುವ, ಅವಿದ್ಯೆಯ ಸ್ಥಾನದಲ್ಲಿ "ಸದ್‌ವಿದ್ಯೆ" ಇವರ ಗ್ರಂಥಗಳಿಂದ ಮಾನವನಿಗೆ ಸಂಕ್ರಾಂತವಾಗುವಂತೆ ಇವರೇ **"ಅಡಿಯೇನ್ ಶೆಯ್ಯುಮ್ ವಿಣ್ಣಪ್ಪಮೇ"** ಸರ್ವರಿಗಾಗಿ ಪ್ರಾರ್ಥಿಸುತ್ತಾರೆ. ಈ ಸಂತ ಶರಣ ಆಳ್ವಾರರು ಯಾವ ಅಮೃತಫಲವನ್ನು ಹೊಂದಿದರೋ ಅದು, ಕಲಿತವರಿಗೆಲ್ಲಾ ಸೇರಿ ಬಿಡುತ್ತದೆ. ಆ ಕ್ಷಣ ಬರುವವರಿಗೂ ಕಾಯುವ ಸ್ವಭಾವದವರಲ್ಲ. ಅದಕ್ಕಾಗಿ, ನಡುವಿನ ೯೮ ಹಾಡುಗಳಿಂದ, ತಮ್ಮ ಭಾವನಾ ಲಹರಿಗಳ ಏರಿಳಿತಗಳನ್ನು, ಉತ್ತಮ ಕಾವ್ಯ ಸೌಂದರ್ಯದಿಂದ, ಪ್ರೌಢಶೈಲಿಯಲ್ಲಿಯೇ ದೃಢವಾಗಿ, ಸರ್ವೇಶ್ವರನೊಡನೆ ಸೆಣೆಸಾಟದ ರೂಪದಲ್ಲಿ ನಡೆಸುತ್ತಾರೆ. ಈ ಕೃತಿಯಲ್ಲಿ ಅನ್ಯಾಪದೇಶ ಶೈಲಿ ಅದ್‌ಭುತ ಗಂಭೀರ ರೀತಿಯಲ್ಲಿ ಬಂದಿದೆ. ನಾನು ಒಬ್ಬ ಭಗವದ್ ವಿರಹಿಣಿ. ಭಾಗವತರೇ ದಿವ್ಯದೇಶವಾದ ತಿರುಪತಿಗೆ ಹೋಗುವುದು ಉಂಟೋ ಇಲ್ಲವೋ? ನನಗೆ ಆತನಿಂದ ಯಾರು ಸರಿಯಾದ ಸಂದೇಶ ತರುವವರು? ಈ ಭಕ್ತನ ವಿರಹ ಭಾವನೆಯನ್ನೇ ವಿಶ್ವಕವಿ ರವೀಂದ್ರನಾಥ ಠಾಕೂರರು ತಮ್ಮ "ಪೋಸ್ಟ್‌ಆಫೀಸ್" ಎಂಬ ಪುಟ್ಟ ಕಾವ್ಯದಲ್ಲಿ ಒಬ್ಬ ಚಿಕ್ಕ ಹುಡುಗನ ಕತೆಯಾಗಿ ಹೆಣೆದಿರಬಹುದು. "ಆ ಬಾಲಕ" ಪ್ರತಿನಿತ್ಯ ತನ್ನ ಮನೆಯ ಒಳಕಿಟಕಿಯಲ್ಲೇ ನಿಂತು ಅಂಚೆ ಜವಾನನನ್ನು "ಅಯ್ಯಾ ನನ್ನ ದೊರೆಯಿಂದ 'King' ಇವೊತ್ತೇನೂ ಕಾಗದ ಬಂದಿಲ್ಲವೇ?" ಹೀಗೆ ಪ್ರತಿನಿತ್ಯ ಕೇಳಿ ಕೇಳಿ, ಕೊನೆಗೆ ಪರಮಾತ್ಮನ ಸಾನ್ನಿಧ್ಯ ಸೇರುವ ಮನೋಜ್ಞ ಭಕ್ತಿಕಾವ್ಯವದು!

ಈ ಮಾರಪ್ಪನ ಪ್ರಕೃತಿ ಜಿಹಾಸೆ ಹೆಚ್ಚಲು, ತತ್‌ಕ್ಷಣವೇ ಸಂಸಾರದಿಂದ ಆತ್ಯಂತಿಕ ನಿವೃತ್ತಿ ಸಿಗಲಿಲ್ಲ. ಇವರ ಅಂತರ ತಳಮಳ ಏರುತ್ತದೆ. ಸುತ್ತಮುತ್ತಲ ಭಕ್ತಭಾಗವತರನ್ನು ಕೇಳುವಂತಹ ಭಾವನಾ ಸಂಪತ್ತು! ದೇವರಷ್ಟೇ, ಅತನ ವಿಭೂತಿಯೂ ಇವರಿಗೆ ಉಪಾದೇಯ. ಭಕ್ತರ ಸೇವೆಯಲ್ಲಿ ಇವರ ಕುತೂಹಲ ಕೆರಳುತ್ತದೆ. ಕಲಿಯುಗದಲ್ಲಿ ನಾನಾ ಕಡೆಗಳಿಂದ ಯಾತ್ರಿಗಳು ಮಿಳಿತರಾಗುವುದು, ತಿರುಪತಿ ಕ್ಷೇತ್ರದಲ್ಲಿ ಎಂಬುದು ಇವರ ಸ್ಮೃತಿ ಪಟಲದಲ್ಲಿ ಹಾಗೆಯೇ ಹಾಯ್ದು ಬರುತ್ತದೆ. ಇವರ ಶರೀರ ಆಳ್ವಾರ್ ತಿರುನಗರಿಯ

ಚಿಂಚಾವೃಕ್ಷಮೂಲದಲ್ಲೇ ಇದ್ದರೂ, ಇದೆಲ್ಲಾ ಆ ಒಡೆಯನದೇ ಸಂವಿಧಾನ! ಕೇವಲ ಈ ಮಾನಸ ಸಾಕ್ಷಾತ್‌ಕಾರದಿಂದ ನೆಮ್ಮದಿ ಕಾಣರು! ಈ "ದಿವ್ಯ ಆತೃಪ್ತಿ"ಯನ್ನೇ ದೇವರ ಅಗಲಿಕೆ, ವಿಶ್ಲೇಷ ಎನ್ನುವುದು. ಈ ಜೀವಾತ್ಮ ಸರ್ವಥಾ ಆ ವಿಶ್ವಪತಿಗೆ ಪತ್ನೀ ಪ್ರಾಯ! ಶರೀರದಿಂದ ಹೆಂಗಸುತನವನ್ನು ಹೆಚ್ಚಾಗಿ ತಲೆಗೆ ಹಚ್ಚಿಕೊಳ್ಳದೆ ತಮ್ಮನ್ನು "ಪುರುಷ"ನೆಂದು ಕೊಂಡಾಗಲೇ ಸರಿಯಾದ ಸ್ತ್ರೀ ವಿಮೋಚನೆ! ಆತ್ಮಸ್ವರೂಪಿಯಾದ ನನಗೆ ಈ ವಾಸ್ತವ-ವಸ್ತುನಿಷ್ಠ-ಪವಿತ್ರ ದೇಹಾತೀತಭಾವನೆ ಬಂದರೆ ಬಂಧಮುಕ್ತಿ!

ತಿರುವಿರುತ್ತಮ್ ಹಾಡು ೮

ಕಾಣ್‌ಗಿನ್ನನಹಳುಮ್ ಕೇಳ್‌ಕ್ಕಿನ್ನನಹುಳುಮ್ ಕಾಣಿಲ್, ಇನ್ನಾಳ್ ಪಾಣ್ ಕುನ್ನನಾಡರ್ ಪಯಿಲ್ ಹಿನ್ನನ ಇದೆಲ್ಲಾಮ್ ಅರಿನ್ದೋಮ್
ಮಾಣ್ ಕುನ್ನಮೇನ್ದಿ ತಣ್‌ಮಾಮಲೈ ವೇಙ್ಗಡತ್ತುಮ್ಬರ್ ನಮ್ಬುಮ್ ಶೇಣ್ ಕುನ್ನಮ್ ಶೆನ್ನು ಪೊರುಳ್ ಪಡೈಪ್ಪಾನ್ ಕತ್ತ ತಿಣ್ಣನವೇ||

ಕನ್ನಡ ನೆರಳ್

[1]ಕಾಣಲ್ ಸಿಗುತಿಹವುಂ [2]ಕೇಳಲ್ ಬರುತಿಹವುಂ ಕಾಣಲ್ಕಿಂದು ಕೋಣಂ! ಮಲೆನಾಡರ ಹರಟೆಯಿದೋ! - ಇದನೆಲ್ಲಾ ಅರಿತೆವ್ನೆನಾವ್
ಜಾಣನ ತನದಿಂ ಗಿರಿಯೆತ್ತಿ ತಣ್ಣನ ಮಾಮಲೆ, ವೇಂಕಟದನ್ಪರ್ ನಂಬುವ ಶ್ರೇಣ್ಯುನ್ನತ ಶ್ರೀನಿಧಿ ಸಂದು!
ಆಸ್ತಿಗಳ್ ಹೊಡೆಯಲ್ ಕಲ್ತಾ ಧೈರ್ಯವನು

ಇನ್ನ್ = ಇಂದು, ಕಾಣ್‌ಗಿನ್ನನಹಳುಮ್ = ಸ್ವಾಮಿಯಿಂದ ನೋಡಲ್ ಪಡುತ್ತಿರುವುವನ್ನೂ ಅವನಿಂದ, ಕೇಳ್‌ಕ್ಕಿನ್ನನಹಳುಮ್ = ಕೇಳಲ್ಪಡುತ್ತಿರುವುವನ್ನಾಗಲಿ, ಕಾಣಿಲ್ = ಯೋಚಿಸಿದ್ದೇ ಆದರೆ, ಪಾಣ್ = ಹೃದಯ ಶೂನ್ಯನಾದ, ಕುನ್ನನಾಡರ್ = ಗಿರಿಜನಪದನಾದ! ತಿಮ್ಮಪ್ಪನು, ಪಯಿಲ್ ಹಿನ್ನನ = ಹರಟೆ ಹೊಡೆಯುವ ಇದೆಲ್ಲಾಂ ಇದೆಲ್ಲವನ್ನೂ, ಅರಿನ್ದೋಮ್ = ಅವನಿತ್ತ ಜ್ಞಾನದಿಂದಲೇ, ಚೆನ್ನಾಗಿಯೇ ನಾವ್ ಅರಿತೆವು. ಎಂಬೀ ಬಹುವಚನ ಪ್ರಯೋಗ ಗಮನಾರ್ಹ. ಮಾರನಿಗೆ ಕರುಣಿಸಿದ ದಿವ್ಯಜ್ಞಾನ ಅವರ ಹಾರ್ದಿಕ ಸಂಬಂಧಿ - ಸಂಬಂಧಿಗಳಿಗೂ ಖಂಡಿತ ಉಂಟು. ವಿಶ್ವದ ಅನೇಕ ಕಡೆಗಳಲ್ಲಿ, ಒಂದೇ ಸಲ ಸಚ್ಚರಣರ ಒಳಭಾವಗಳು, ವಿದ್ಯುತೀಕರಣಗೊಂಡು, ಥಟ್ಟನೆ ಇಡೀ ವಿಶ್ವವ್ಯಾಪಿಯಾಗುವುದು ಕಂಡು ಬರುತ್ತದಷ್ಟೆ! ಬುದ್ಧ, ಯೇಸು, ಕನ್‌ಫ್ಯೂಷಸ್ ಇಂತಹವರ ಎಷ್ಟೊಂದು ಉದಾಹರಣೆಗಳು ನಮ್ಮ ಮುಂದಿವೆ. ಇಂದಿಗೂ ಸ್ವಾತಂತ್ರ್ಯ, ಸಮಾನತೆ, ಬಂಧುಭಾವಗಳ ಲಹರಿಗಳನ್ನು ಯಾವ ಶಕ್ತಿ ತಡೆಯಬಲ್ಲದು? ಇದೇ ಅಧ್ಯಾತ್ಮ ಶಕ್ತಿ! ಅದಕ್ಕೆ ವಿಜ್ಞಾನ ಶಕ್ತಿ ಸೇರಿದರಂತೂ, ವಿಳಂಬಿಸಲಿಕ್ಕೇ ಸಾಧ್ಯವಿಲ್ಲ. ಈ ಪರಿಸ್ಥಿತಿಯ ಪುನರಾವೃತ್ತಿ, ನಮ್ಮಾಳ್ವಾರರಂತಹ ವಿಶಾಲ ಹೃದಯರ ಸ್ವಚ್ಛ ಅನುಭಾವ ಪ್ರಸಾದವೇ! ಸ್ವಾತಂತ್ರ್ಯ, ನಿಜವಾದ ಪ್ರಭುವಲ್ಲದವರಿಗೆ ಗುಲಾಮನಾಗದಿರುವಿಕೆಯಷ್ಟೇ ಎಂಬ ವಿವೇಕವೂ ಇಲ್ಲಿ ಅಡಗಿದೆ! ಸಮಷ್ಟಿ ವಿರಾಟ್ ಪ್ರಜೆಗೆ ನಾವು ಗುಲಾಮರಾಗಿರುವುದೇ ನಮ್ಮ ಸ್ವಾತಂತ್ರ್ಯ. ಆಸುರೀ ಸಂಪತ್ತುಗಳಿಗೆ "ಹುಜೂರ್ ಸಲಾಂ" ಹೊಡೆಯಬಾರದು. ವೈಜ್ಞಾನಿಕ ಸಂತರಿಗೆ ಬಾಗಲೇಬೇಕು! ಪರಸ್ಪರ ವಿಶ್ವಾಸಶಕ್ತಿ ಮಾತ್ರ ಈಗ ಕಡಿಮೆಯಾಗುತ್ತಿರುವುದನ್ನು, ಸಂಘ, ಸಂಸ್ಥೆ ಸರಕಾರಗಳಿಗಿಂತಲೂ ನಿರ್ವೈರ, ನಿರ್ಭಯ, ನಿಷ್ಪಕ್ಷ ವ್ಯಕ್ತಿ - ವ್ಯಕ್ತಿಗಳ ಸಹಜ ಸಂಮಿಳನ, ದೇಶ ದೇಶಗಳ ವಿಶ್ವಾಸವನ್ನು ಹೆಚ್ಚಿಸೀತು. ಇದನ್ನೇ ಆಳ್ವಾರ್ "ಮಹಾವಿಶ್ವಾಸ" ಎನ್ನುತ್ತಾರೆ. ವಿರಹದಲ್ಲಿ, ದೇವರ ನಿಂದೆ, ಅವನಲ್ಲಿನ ಮಹಾವಿಶ್ವಾಸವನ್ನೇ, ಭಿನ್ನಮಾಧ್ಯಮದಿಂದ ಸೂಚಿಸುವುದು.

ಈ ಕಪಟ ನಾಟಕ ಸೂತ್ರಧಾರನ ಅಂತರ್ಯವರಿತುದರ ವೃತ್ತವನ್ನು, ಅವನ ಸಕಲ ಪ್ರವೃತ್ತಿ ನಿವೃತ್ತಿಗಳ ಹಿಂದಿರುವ ಇಂಗಿತವನ್ನು, ಈ ಪಾಶುರದ ಮೂರನೆಯ ಪಾದದಿಂದ ಬಿತ್ತರಿಸುತ್ತಾರೆ. ತಿರು = ತಿಮ್ಮಪ್ಪನ, ವಿರುತ್ತಮ್ = ಒಳ ವೃತ್ತಾಂತ ಎಂಬರ್ಥವೂ ಈ ಕೃತಿಗೆ ಸಲ್ಲುತ್ತದೆ, ಎಂಬೀಭಾವ. ಶರಣ ಶರಣ್ಯ ಉಭಯರ ಅಂತರಂಗದ ವಿಶಿಷ್ಟ ವೃತ್ತಿಗಳನ್ನು ಪರಮಾತ್ಮನಿಗೆ ಬಿನ್ನೈಸುತ್ತಾರೆ. ಈ ಕಲಿಯುಗದ ಆದಿ ಶರಣ. ಮಾಣ್ = ಮಳೆ ತಡೆಯುವುದರಲ್ಲಿ ಗೋಗೋಪಗೋಪಿಯರಿಗೆ, ನಂಬಿಕೆಗೆ ಅರ್ಹನಾಗಿ ಕೈ ಬಿಡದೆ, ಗೋವರ್ಧನ ಪರ್ವತವನ್ನೇ, ಕುನ್ನಮ್‌ಏನ್ದಿ = ಕೈ ಬೆರಳುಗಳಿಂದಲೇ ಎತ್ತಿ. ಅಷ್ಟೇ ಅಲ್ಲ, ಅದಕ್ಕಿಂತಲೂ, ತಣ್ = ಆ ಗಿರಿಧರನಿಗಿಂತಲೂ, ತಂಪುಸೇವೆ ಎಸಗುತ್ತಿರುವ, ವೇಙ್ಗಡತ್ತು = ವೆಂಕಟಾಚಲದ, ಉಮ್ಬರ್ ನಮ್ಬುಮ್ = ವೈಕುಂಠದ ನಿವಾಸಿಗಳೂ ಆಸೆ ಪಡುವ, ಶೇಣ್ ಕುನ್ನಮ್ = ಎತ್ತರವಾದ ತಿರುವನ್ನು, ಶೆನ್ನು = ಸಂದು, ಪೊರುಳ್ = ನಿತ್ಯನಾದ ತನ್ನನ್ನು ಭಕ್ತರೂ, ಅಂತೆಯೇ ಭಕ್ತರಾದ ಸಂಸಾರಿ ಚೇತನರನ್ನು ತಾನೂ, ಪಡೈಪ್ಪಾನ್ = ಶಿಖರವನ್ನು, ಶೆನ್ನು = ಸಂದು, ಪೊರುಳ್ = ನಿತ್ಯನಾದ ತನ್ನನ್ನು ಭಕ್ತರೂ, ಅಂತೆಯೇ ಭಕ್ತರಾದ ಸಂಸಾರಿ ಚೇತನರನ್ನು ತಾನೂ, ಪಡೈಪ್ಪಾನ್ = ಉಭಯರೂ ತಮ್ಮ ತಮ್ಮ ಹುರುಳಾದ ಆಸ್ತಿಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ! ಕತ್ತ = ಕಲಿತ, ತಿಣ್ಣನವು = ದಾರ್ಢ್ಯ, ಹೀಗೆ ನಾವೆಲ್ಲಾ ಓ ಪ್ರಭೋ! ನಿನ್ನ ಒಳಗುಟ್ಟನ್ನು ತಿಳಿದಾಯ್ತಪ್ಪಾ! ಆಸ್ತಿ ಯಾರದು? "ಶ್ರೀನಿಧಿ! ಶ್ರೀನಿವಾಸ"ನದು.

[1] ಪ್ರಿಯನ್, ಎನ್ ಕಾಲಪಿಡಿವುದು, ಎನಗೇ ಕೈ ಜೋಡಿಪುದೂ! [2] ಓ ಭಾಮಿನಿ! ನಿನ್ ಪಾದಕೆ ಇದೋ ಎನ್ ಮುಡಿ! ಇನ್ ನಿನ್ನನು ಬಿಡೆನ್ಯೆ!

ಈ ಮುನಿಸಿನ ವಿರಹಿನೇ ಗೀತ ಭಗವದ್ ವಿಶ್ಲೇಷವೊಂದನ್ನೇ ಕುರಿತಿದ್ದಲ್ಲ, ಆಳ್ವಾರ್ ತಿರುನಗರಿಯ ಭಾಗವತೋತ್ತಮರು, ತಿರುಮಲೈ ಪಾದಯಾತ್ರೆಗೆ, ಶತಕೋಪರ ಅಪ್ಪಣೆ ಬೇಡಿದಂತೆ ಭಾವಿಸಿ, ಅವರ ಅಗಲಿಕೆಯನ್ನು ಸಹಿಸಲಾಗದ ಇಬ್ಬಗೆ ದುಃಖದಿಂದ ಪಾಡುವ ಪಾಶುರವಿದು. ನೇರಾ ಆಳ್ವಾರ್ ನಾಯಕಿಯೇ ಹೇಳಿದಂತೆ ಅಗಲಿ, ಆಕೆಯ ಪ್ರಿಯಪ್ರಾಣಸಖಿ ಅಡಿದಂತಾಗಲಿ ಉಭಯಥಾ ಈ ಪಾಶುರ ಉಪಪನ್ನ. ಸ್ವಾಮಿಯ ಹೃದಯ ಈಗ ನನ್ನ ಬಗೆಗೆ ಮಿದುವಾಗಿಲ್ಲ. ಆ ಗೋವರ್ಧನ, ಈ ತಿರುಪತಿ ಬೆಟ್ಟಗಳಂತೆಯೇ ಕಠೋರವಾಗಿ ಬಿಟ್ಟಿದೆಯೇನೋ! ಭಾಗವತರ ಬಗೆಗೇ ಈಗ, "ಅಹಲಕಿಲ್ಲೇನ್" ಉಲ್ಬಣಿಸಿರುವ ಇಂತಹ ಸಮಯದಲ್ಲಿ ನನಗೆ ಸಮಾಧಾನ ಹೇಳದೆ, ಓ ಭಾಗವತರೇ! ನೀವೂ ತಿರುಮಲೆ ಯಾತ್ರೆಗೆ ಹೊರಟೇ ಬಿಟ್ಟಿರಾ!

ತಮಿಳ್ ತಿರಳ್ ೧೦

மாயோன் வட திருவேங்கடனாட வல்லிக்கொடிஹாள்! நோயோ உயிர்க்கிலும் கேள் கிந்நிலீர் உரையீர் - நுமது
வாயோ! அதுவன்னி வல்வினையேனும் கிழியு மேள்ஹும் ஆயோ! அடும் தொண்டையோ! அரையோ விதரிவரிதே!

ಕನ್ನಡ ನೆರಳ್

ಮಾಯಿಗನಾ ಶ್ರೀವೇಂಕಟನಾಡನ ಓಬಳ್ಳೀ ತಳಿರ್‌ಗಳಿರಾ! ನೋವನು ಪೇಳಿದರೂ ಕೇಳದೆ ಇರುವಿರಿ, ಪೇಳಿರೆಲಾ ನಿಮ್|
ಬಾಯೋ! ಅದು ವಲ್ದುರು ಪಾಪಿನಿ ದಾಸಿಯನೂ, ಗಿಳಿಯೂ ಮೆಲಿವೊಲ್ ಗೈಯ್ಯುಲಿಯೋ! ಪೀಡಿಪ ತೊಂಡೆಯು
ಕೆಂದಣ್ಣೋ! ಅರಿಯಲ್ಕಾಗದಿದೆ ||

ತಿಮ್ಮಪ್ಪನನ್ನೂ ತದ್‌ಭಕ್ತರನ್ನೂ ಅಗಲಿರುವ ಈ ಪರಾಂಕುಶನಾಯಕಿಯನ್ನು ಆಕ್ರಮಿಸಿರುವ ಸೌಂದರ್ಯ ಲಹರಿ ಇವರ ಒಳಗೊಳಗೇ ಸುಳಿ ಸುಳಿಯಾಗಿ ತಿರುತಿರುಗಿ ಸುತ್ತಿ ಉಕ್ಕುವ ಭಾವಾವೇಶ ಈ ವಿರಹ ಪ್ರಲಾಪದಲ್ಲಿ ನಮಗೆ, ಕೊಂಚ ಪರಿಚಿತವಾಗುತ್ತದೆ. ಇಂತಹವೇ ನಮ್ಮಂತಹವರಿಗೆ ಭಕ್ತ್ಯುತ್ಪಾದಕ, ಹಾಗೂ ರುಚಿವರ್ಧಕ. ಮರ್ತ್ಯರನ್ನು ದಿವ್ಯೀಕರಿಸುವ ವಾಙ್ಮಯ, ದಿವ್ಯ ಪ್ರಬಂಧ! ಬಾಹ್ಯವಿಶ್ಲೇಷ ಕಾಲದಲ್ಲಿ ಬೇಸರಿಕೆ ತೀರಿಸಿಕೊಳ್ಳುವ ಈ ಪ್ರೇಯಸಿಗೆ ಒಳಮಾನಸದಲ್ಲಿ ಮಾತ್ರ ತೋರಿಸಿಕೊಳ್ಳುವ ತಿರುಮಲೆಯ ಆ ಬಳ್ಳಿಗಳು, ಆ ಹೂಗಳು, ಚಿಲಿಪಿಲಿಗುಟ್ಟುವ ಹಕ್ಕಿಗಳು, ಆ ಮಧುರ ಪಕ್ವಫಲಗಳು, ಎಲ್ಲವೂ ಪ್ರಿಯನ ಸಾನ್ನಿಧ್ಯ ಇಲ್ಲದುದರಿಂದ ಪ್ರತಿಕೂಲಗಳಾಗಿಯೇ ಬಾಧೆ ಪಡಿಸುತ್ತಿವೆ! ಸೃಷ್ಟಿಕರ್ತನ ಈ ಸೃಷ್ಟಿ ರಹಸ್ಯ ಒಂದು ಬಗೆಯಲ್ಲಿ ಸಂತರ ಹೃದಯಕ್ಕೆ ತಾಗಿದರೂ ಪೂರ್ಣವಾಗಿ ತಿಳಿಯದೆಂಬ ವಾಸ್ತವಿಕತೆಯ ವಿನಯವೂ ಇಲ್ಲಿ ಅಡಗಿದೆ. ಓ ಶ್ರೀನಿವಾಸಾ! ನೀನೇ ಹೇಳು, ಮಲೆ ಬಕುತರೇ ತಾವಾದರೂ ಅಪ್ಪಣೆ ಕೊಡಿಸಿ!

ಮಾಯೋನ್ = ಅದ್ಭುತಾಶ್ಚರ್ಯಕಾರಿಯ, ವಡಮ್ = ಬಡಗಲ ಅಂದರೆ ಈಗಿನ ತಮಿಳ್ ನಾಡಿಗೆ ಉತ್ತರದಲ್ಲಿರುವ, ತಿರುವೇಙ್ಗಡನಾಡ = ವೇಂಕಟಾದ್ರಿಯಲ್ಲೇ ಹುಟ್ಟಿ ಅಲ್ಲೇ ಬೆಳೆಯುತ್ತಿರುವ, ವಲ್ಲಿಕ್ಕೊಡಿಹಾಳ್ = ಸ್ತ್ರೀಲತಾ ಸ್ವರೂಪಿಣಿಯರೇ! ನೋಯ್ = ನನ್ನೀ ಒಳ ಬೇಗುದಿಯನ್ನು, ಉರೈಕ್ಕಿಲುಂ = ನಾನಿದೋ ಒರೆದರೂ, ಕೇಳ್ ಕಿನ್ನಿಲೀರ್ = ಕಿವಿಗೊಟ್ಟು ಕೇಳಿರಲ್ಲಾ. ಉರೈಯೀರ್ = ದಯವಿಟ್ಟು ನಿಮ್ ಊರಿನ ಆ ತಿಮ್ಮಪ್ಪನಿಗೆ, ಒಪ್ಪಾಗಿ ಹೇಳಿರವ್ವಾ! ಈ ನನ್ನ ಕಣ್ಣಿಗೆ ಕಾಣುತ್ತಿರುವ ಹೂಗಳು, ನುಮದುವಾಯೋ = ಕೊಡಿಗಳಾದ ನಿಮ್ಮಲ್ಲಿ ಬಿಡುವುದಾದರೂ, ನನ್ನ ಭಾಗಕ್ಕೆ, ನಿಮ್ಮಂತಹವರ ಸುಂದರ ಸುಗಂಧಾಽಧರವೋ? ಆ ಶ್ರೀನಿಧಿಯ ತುಟಿಯೋ! ವಿನೈಯೇನುಮ್ = ಹೊರಗಣ್ಣಿನಿಂದಲೂ ನೋಡಲು ಪುಣ್ಯಪಡೆಯದಿರುವ, ಈ ಪಾಪಿಯಾದವಳನ್ನು, ಕಿಳಿಯುಮ್ = ಬೆಟ್ಟದ ಗಿಳಿಗಳೇ - ಅವುಗಳ ಹಿಂಡೆಲ್ಲವೂ ಸೇರಿ, ಎಳ್‌ಹುಮ್ ಆಯೋ = ನಾನಿದೋ ಇನ್ನೂ ದೀನಳಾಗುವಂತೆ ಅಡುಪ್ = ಕಿರಿಕಿರಿ ಪಡಿಸುವ ನಿಮ್ಮ ಕೊರಳ್‌ದನಿಯೋ! ತೊಂಡೆಯೋ = ನಿಮ್ಮ ಬಿಂಬಾಧರಗಳೋ! ಇದು ಅರಿವು ಅರಿದು = ನನ್ನ ಅರಿವಿಗೂ ಮೀರಿದ್ದು, ಅರೈಯೋ = ನಾ ಸೋತು ಸೊರಗಿದ್ದೇನೆ, ನೀವಾದರೂ ಹೇಳಿ!

ಓ ತಿಮ್ಮಪ್ಪಾ! ನೀ ಮನೋಮಾತ್ರ ಗೋಚರ! ನನ್ನೀ ಒಳ ಬೇಳಂಬಕ್ಕೆ ಸಮಾಧಾನ ಹೇಳಪ್ಪಾ. ತಿರುಪತಿ ಬೆಟ್ಟವನ್ನೇ ನಿನ್ನ ಭೋಗಸ್ಥಾನವಾಗಿಸಿಕೊಂಡೆ! ಪುರುಷೋತ್ತಮನಾದ ನಿನಗೆ, ಆ ಗಿರಿಯೇ ತಿಲಕೋತ್ತಮ! ಜಗತ್ತಿನ ಭಕ್ತರೆಲ್ಲರನ್ನೂ ಸೆಳೆದು ನನ್ನನ್ನು, ನಿನ್ನ ಹಾಗೂ ಭಾಗವತರ ವಿಶ್ಲೇಷದಲ್ಲಿ ಹೀಗೆ ನೋಯಿಸಬಹುದೇ? ಬಾಯ್‌ಬಿಟ್ಟು, ಸಂತೈಸು, ನಾನೇ ಅಂಗಲಾಚಿ ಗೋಗರೆದರೂ, ನೀನೂ ಕೇಳದವನಂತೆ ಇದ್ದೀಯಲ್ಲಾ. ನಿನ್ನನ್ನು ತೊರೆದೇ ಬಿಡಬಹುದಾದ ಪಾಪದ ಭಾಗ್ಯವನ್ನಾದರೂ ನೀನು ಇತ್ತಿಲ್ಲವಲ್ಲಾ! ನಿನ್ನ ಜತೆ ಠೂಠೂ ಎಂಬುದು ಸಂಸಾರಿಗಳ ಭಾಗಕ್ಕೇ. ನನ್ನಂತಹ ಶರಣರಿಗೆ ನೀನಿತ್ತಿರುವ ಶಾಪದ ಪಾಪವೆಂದು ನಿನಗೇ ಗೊತ್ತು? ನಿನ್ನ ವಿರಹದಲ್ಲಿ ತೊಳಲಿ ಬಳಲಿದರೂ ನಿನ್ನನ್ನು ಸಂಪೂರ್ಣ ಪರಿತ್ಯಾಗ ಮಾಡುವ (ಡೈವರ್ಸ್) ವಿಚ್ಛೇದಕ್ಕೇ ಅವಕಾಶವಿಲ್ಲದಂತಹ, "ಐಕಾನ್ತಿಕ ಆತ್ಯನ್ತಿಕ ಪರಭಕ್ತಿ ಪರಜ್ಞಾನ, ಪರಮಭಕ್ತಿ"ಗಳನ್ನು ನೀನೇ ಇತ್ತಿರುವಿ. ಈ ಪಾಪ ಅನಿವಾರ್ಯವಾದಂತೆ, ಈ ನಿನ್ನ ಕೃಪೆಯೂ ಅನಿವಾರ್ಯ. ಅಂದರೆ

ನಿನ್ನ ದಯೆಯಿಂದಲೇ ಪುಟಿದು ಬರುವ ದಿವ್ಯ ಯಾತನೆಯೂ, ಕೈಂಕರ್ಯ ಮಂಗಳಾಽಽಶಾಸಗಳಂತೆ ಪ್ರಾಪ್ಯವೇ! ನಿನ್ನಿಂದಲ್ಲದೇ ಬರುವ ಲೌಕಿಕ ಸುಖೀರಾಜ್ಯವೂ ನರಕವೇ?

ಹೀಗೆ ವಿರಹ ತಪ್ತೆಯಾದ ನನ್ನನ್ನು ಕಾಡಿಸುತ್ತಿರುವ ಇವು ಏನು? ನಿನ್ನ ಮುಖದ ಚೆಲುವೋ! ನಿನ್ನದೇ ಸ್ವರಮಾಧುರ್ಯವೋ! ನಿನ್ನದೇ ಅಧರ ಶೋಭೆಯೋ! ಆಳ್ವಾರರಿಗೆ ಆ ಪರ್ವತ ಪ್ರಕೃತಿಯಲ್ಲೂ, ಪ್ರಕೃತಿ ಪ್ರಭುವಿನದೇ ಛಾಪು! ಮಾಯಾಪತಿಯ ಸಂಬಂಧಜ್ಞಾನದಿಂದಲೇ ಮಾಯಾವಸ್ತುಗಳು ಶರಣರ ಪಾಲಿಗೆ ಸಂಶ್ಲೇಷ ವಿಶ್ಲೇಷ ದಶಾವಿಶೇಷಗಳಿಂದ ದಿವ್ಯಾಽಽನಂದಕರಗಳಾಗಿಯೂ, ನೋವುಗಳನ್ನುಂಟುಮಾಡುವಂತಹವುಗಳಾಗಿಯೂ ತೋರುತ್ತವೆ! ತಮ್ಮ ಅಂತರತಮವನ್ನು ಈ ಕೃತಿಯಲ್ಲಿ ಬಿಚ್ಚಿ-ಬಿಚ್ಚಿ ನಮ್ಮ ಮುಂದೆ ಇಟ್ಟಿರುವುದರಿಂದಲೇ ಇದೊಂದು, **"ಸರ್ವಶರಣರ ಅಂತರಂಗ ವೃತ್ತಾಂತ ತಿರುವಿರುತ್ತಮ್!"** ಭಕ್ತಿಮಾರ್ಗದ ಭಾಷೆಯೇ ಹೀಗೆ, ಅದರಲ್ಲೂ ಪ್ರಭುದತ್ತ ಭಕ್ತಿಮಾನ್‌ಗಳ ಶ್ರೀ ವದನಾರವಿಂದದಿಂದ ಇಂಥ ಸಂವೇದನೆಗಳನ್ನು ಕೇಳುವ ಭಾಗ್ಯವೇ ನಮ್ಮಂತಹ ಭಕ್ತರಾಗಬೇಕಾಗಿರುವವರಿಗೆ ಊಟ. **"ವಯಂ ದೇವಸ್ಯ ಭೋಜನಮ್" "ಶರಣರು ದೇವರ ಸಾಹಿತ್ಯಾಽಮೃತ ಪಾಯಿಗಳು!"**

ಈ ಶಠಕೋಪ ನಾಯಕಿಯನ್ನು ತನ್ನ ದಿವ್ಯೋದ್ಯಾನದಲ್ಲಿ ಸಂಧಿಸಿದ ತಿರುಪತಿ ತಿಮ್ಮಪ್ಪನೇ, ಆಳ್ವಾರರ ಅಗಲಿಕೆಯಲ್ಲಿರುವಾಗ ತಾನೇ ಆ ಲತಾದಿಗಳನ್ನೇ ಗೋಗರೆಯುವ ಪರಗತ ಸ್ವೀಕಾರಭಾವವೂ ಈ ಹಾಡಿನಿಂದ ಉತ್‌ಸ್ಫೂರ್ತವಾಗುವಷ್ಟು ಇಲ್ಲಿನ ಶಬ್ದಾಽರ್ಥ ರಚನೆ ಅಳವಟ್ಟಿದೆ. ದಿವ್ಯ ಪ್ರಬಂಧ, ಶರಣ ವಚನಾದಿಗಳಿಗೆ, ದಾಸವಾಙ್ಮಯಗಳಿಗೆ ಅರ್ಥದ ಒಂದು ಇತಿಮಿತಿಯಿಲ್ಲ. ನಿಜವಾದ ಉತ್ತುಂಗ ಪಾವನ ಪ್ರೇಮ ಜೀವ ಈಶ್ವರ ಉಭಯರಲ್ಲೂ ಇರಬೇಕಷ್ಟೆ. **"ಜ್ಞಾನೀತು ಆತ್ಮೈವ, ಮೇಮತಮ್"** ಗೀತಾ ಜಗದ್ಗುರುವಿನ ವಚನ ಸಾರ್ಥಕವಾಗಿ ದಿವ್ಯದೇಶ ಚರಿತಾರ್ಥವಾಗುವುದು, ಆವಾಗಲೇ ಆಯಾಯಾ ಪವಿತ್ರ ಸ್ಥಾನಗಳು ಯಾವಯಾವ ತೆರದವುಗಳೇ ಇರಲಿ, ಬಾಹ್ಯ ವ್ಯಾಪ್ತಿ, ಅಂತರ್ ವ್ಯಾಪ್ತಿಗಳ ಇಕ್ಕೆಲಗಳ ಚೆಲುವು ಸಮಗ್ರವಾಗಿ 'ಅರ್ಚಾವತಾರ'ಗಳಲ್ಲೇ ಕಾಣುವುದರಿಂದ ಇವೇ ನಿಜವಾದ ಜಾತ್ಯಾತೀತ.

ತಮಿಳ್ ತಿರಳ್ ೧೫

ಕಯಲೋನುಮ ಕಣ್‌ಗಳ್ ಎನ್ನುಕಳಿರು ವಿನವಿ ನಿತ್ತೀರ್ ಅಯಲೋರ್ ಅರಿಯಿಲುಮ್ ಈದೆನ್ನ ವಾರ್ತೈ! ಕಡಲ್ ಕವರ್‌ನ್ದ|
ಪುಯಲೋಡುಲಾಮ್ ಕೊಣ್ಡಲ್ ವಣ್ಣನ್ ಪುನವೇಙ್ಗಡತ್ತೆಮ್ಮೊಡುಮ್ ಪಯಲೋ ವಿಲೀರ್ ಕೊಲ್ಲೈಕಾಕ್ಕಿನ್ನ ನಾಳುಮ್ ಪಲಪಲವೇ||

ಕನ್ನಡ ನೆರಳ್

ಮೀನ್‌ಗಳ್ ನಿಮ್ ಕಣ್ಗಳೋ ಎಂದಾನೆಯ ಕೇಳುತ ನಿಂದಿಹರೇ ಅಹಹಾ!
ಏನ್ ಇದು ಮಾತೈ? ನೆರೆಹೊರೆ ಯರಿತರೂ ಎಲ್ಲಾ ಕಡಲ್‌ಗಳ ನುಂಗಿ
ಹನಿಗಳ ಹೊತ್ತು ತೆವಳುವ ಕಾರ್‌ಮೇಘ ಶ್ಯಾಮಳನು, ಬನವೇಂಕಟದೆಮ್ಮೊಡನೆ
ಓ ನೆಂಟಸ್ತನ ಕಡಿಕೊಂಡಿಹರೇ! ತೋಟವ ಕಾಪುವ ನಾಳ್ ಬೇರ್ ಪಲಬಗೆಗಳವು!

ತಮಿಳು ಸಾಹಿತ್ಯ ಲಕ್ಷಣಕಾರರು "ವೇಳಮ್ ವಿನಾದಲ್" ಎಂಬ ಒಂದು ಸಂದರ್ಭ ಹೇಳುವರು. ಅಂದರೆ ನಾಯಕನೋರ್ವ ತನ್ನ ನಾಯಕಿಯ ಬಳಿಯೇ ಇರುವ ಆಕೆಯ ಪ್ರಾಣ ಸಖಿಯನ್ನು ಪ್ರಶ್ನಿಸುವುದು. "ಅಮ್ಮಾ ನಾನೊಬ್ಬ ರಾಜ. ಹೀಗೆಯೇ ಬೇಟೆಯಾಡಲು ಬಂದೆ. ಈ ಕಡೆ ಏನಾದರೂ ಒಂದು ಆನೆ ಬಂತೆ?" ಈ ಪ್ರಶ್ನೆ ಒಂದು ನೆಪ ಮಾತ್ರ. ವಾಸ್ತವಿಕವಾದ ಅರ್ಥ ಬೇರೆ! ಈ ನಾಯಕ ಪ್ರಸ್ತಾಪಿಸುವ ಪ್ರಸಂಗಕ್ಕೆ, ಉತ್ತರವಾಗಿ ಗೆಳತಿ ಹೇಳುತ್ತಾಳೆ. ಇದು ಆನೆಯ ಬಗೆಗಿನ ಪ್ರಶ್ನೆಯಲ್ಲ. ನನ್ನೀ ಪ್ರಧಾನ ಸಖಿ ನಾಯಿಕಾಮಣಿಯನ್ನು ಕುರಿತ ನಿಮ್ಮ ಪ್ರಶ್ನೆ ಇದೈಯ್ಯಾ. ಸಾಕು, ಸಾಕು ದಯಮಾಡಿಸಿ ಎಂದು ಛಿಮಾರಿ ಹಾಕುತ್ತಾಳೆ. ಅದರಂತೆ ಈ ಹಾಡು, ನಾಯಿಕಾಽವಸ್ಥೆಗೇರಿರುವ ಆಳ್ವಾರರ ಮಾತು, ಆ ತಿಮ್ಮಪ್ಪನನ್ನೇ ಕುರಿತುದು.

ಕಳಿರು = ಆನೆಯನ್ನು, ವಿನವಿ = ಕುರಿತ ಪ್ರಶ್ನೆಯನ್ನು ಕೇಳಿ, ನಿತ್ತೀರ್ = ಇಲ್ಲಿ ನಿಂತಿದ್ದೀರಿ. ನಿಮ್ಮ ಪ್ರಶ್ನೆಯೇನು? ನುಮ ಕಣ್‌ಗಳ್ = ನಿಮ್ಮೀ ನಯನಗಳು, ಕಯಲೋ = ಫಳ ಫಳ ಜಿಗಿದಾಡುವ ಮೀನುಗಳೋ! ಎಂದಲ್ಲವೇ! ಅಯಲೋರ್ = ಭಕ್ತಿಸ್ಥಾನ ತಿಳಿಯದ ಪರಕೀಯರು ಹೊರವಲಯದವರು ನೆರೆಹೊರೆಯ ಸಾಮಾನ್ಯರು, ಅರಿಯಿಲುಮ್ ಈ ಮಾತುಕತೆಯನ್ನು ಕೇಳಿದ್ದೇ ಆದರೆ, ಈದು ಎನ್ನವಾರ್ತೈ = ಇದೇನು ಮಾತು! ಎನ್ನುವರು. ಅವರಿಗೆ ಅನಿಸುತ್ತದೆ ಇದೇನು **"ತಿರುಮಲೆಯ ತಿಮ್ಮಪ್ಪ ನಾಯಕ"** ವಾರಣದ ಬಗೆಗೆ ಕೇಳುತ್ತಾನೋ! ಈ ವಿಹ್ವಲ ಪ್ರೇಯಸಿಯ ವಿಲೋಚನಗಳ ಬಗೆಗೆ ಕೇಳುತ್ತಾನೋ! ಎಂದು ಕಡಲ್ ಕವರ್‌ನ್ದ = ಸಪ್ತ ಸಾಗರಗಳನ್ನೂ ಕಬಳಿಸಿ ಹೀರಿರುವ, ಪುಯಲೋಡು = ಅಂತರ್ ಮಹಾಜಲದೊಂದಿಗೆ, ಉಲಾಮ್ = ಭಾರದಿಂದ ತೆವಳಿ ಬರುವ, ಕೊಣ್ಡಲ್ = ಮೋಡದಂತೆ, ವಣ್ಣನ್ = ಬಣ್ಣ ಮತ್ತು ಸ್ವಭಾವವುಳ್ಳ ಶ್ರಿಯಃ ಪತಿ, ಪುನಮ್ = ಎಂದೂ ಪುಷ್ಟಿತವಾಗಿಯೇ ಇರುವ,

ವೇಙ್ಗಡತ್ತು = ತಿರುಮಲೆಯಲ್ಲಿ ಕೊಲ್ಲೈಕಾಕ್ಕಿನ್ಱ = ತನ್ನ ಸ್ವತ್ತಾದ ತೋಟ ಕಾಯುವ, ನಾಳುಮ್ = ಆ ದಿನಗಳು, ಪಲಪಲವೇ = ಬೇರೆ ಬೇರೆಯಲ್ಲಾ! ದೂರ! ಸುದೂರ! ಎಮ್ಮೊಡು = ಸಖಿಯಾದ ನಮ್ಮ ಪ್ರಾಣವಲ್ಲಭೆಯಾದ ಈ ನಾಯಿಕಾಮಣಿಯ ಬಗೆಗಾಗಲಿ, ಪಯಲೋವಿಲೀರ್ = ಸಂಬಂಧವಿಲ್ಲದುದನ್ನೆಲ್ಲಾ ಅಸಂಬದ್ಧವಾಗಿ ಕೇಳಬೇಡಿ! ತೊಲಗಿ.

ತನ್ನ ಯಜಮಾನಿಯಾದ ಪ್ರಧಾನ ನಾಯಕಿಗಾಗಿ ಬಂದಿರುವ ನಾಯಕನೇ ತಂದಿರುವ ವಿರಹದ ಮುನಿಸಿನಲ್ಲಿ ದಾಸಿ ಗೆಳತಿಯೂ ಕೂಡ ತಿಮ್ಮಪ್ಪನಿಗೆ ಹೀಗೆ ತಿರಸ್ಕಾರವಾಗಿ ಮಾತನಾಡುವುದೂ ಆಳ್ವಾರ್ ಹಾಗೂ ಸ್ವತಂತ್ರ ಪರಮಾತ್ಮನ ಅಭೇದ್ಯ ಸ್ವ-ಸ್ವಾಮಿಭಾವದಿಂದಲೇ ಹೊರತು ನಿಜಕ್ಕೂ ಒಳಗೆ ಭಕ್ತಿಯೇ ತುಂಬಿರುವುದು. ಅದರ ಪರಿಣಾಮೋಕ್ತಿಗಳು ಮಾತ್ರ ಬೇರೆ ಬೇರೆ ಭಾವ ಲಹರಿಗಳಲ್ಲಿ ಕಾಣಿಸುವುದು. ಸ್ವತ್ತನ್ನು ಅನುಭವಿಸದಿದ್ದರೆ ಸ್ವಾಮಿ ಅದೆಂಥವನು?

ತಮಿಳ್ ತಿರಳ್ - ೩೧

ಇಶೈಮಿನ್‌ಗಳ್ ತೂದೆನ್ನು ಇಶೈತ್ತಾಲ್ ಇಶೈಯಿಲುಮ್ ಎನ್ ತಲೈಮೇಲ್
ಅಶೈಮಿನ್‌ಗಳ್ ಎನ್ನಾಲ್ ಅಶೈಯುಙ್ಗೊಲಾಮ್ ಅಮ್ಬೊನ್ ಮಾಮಣಿಹಳ್
ತಿಶೈಮಿನ್ ಮಿಳಿರುಮ್ ತಿರುವೇಙ್ಗಡತ್ತುವನ್ ತಾಳ್ ಶಿಮಯಮ್
ಮಿಶೈ ಮಿನ್ ಮಿಳಿರಿಯ ಪೋವಾನ್ ವಳಿಕ್ಕೊಣ್ಡ ಮೇಹಙ್ಗಳೇ

ಕನ್ನಡ ನೆರಳ್

ಪೇಳಿರಿ ದೌತ್ಯವನೆಂ ದೊಪ್ಪಿಸಿದರೂ ಒಪ್ಪದೆ ಇರುವಿರಿ, ಇದೋ ಎ೯ ತಲೆಮೇಲ್
ಹಾರಿರಿ ಎಂದರೆ ಒಪ್ಪುವಿರಾ! ಅಂದದ ಪೊನ್ ಮಾಮಣಿಗಳ್
ಪರಿತೋಭಾಸಿಪ ಸಿರಿವೇಂಕಟಘನ ತಳಪಾಯದ ಶಿಖರೋ
ಪರಿ ಮಿನ್ ಮಿಂಚುತ ಪೋಗು ವೊಲ್ ಪಥಗೊಂಡಿಹ ಮೇಘಗಳೇ!

"ಪ್ರಪನ್ನಜನ ಕೂಟಸ್ಥರ ಮೇಘದೂತ" ಈ ಹಾಡು. ಈಶ್ವರೀ ಪರಭಕ್ತಿಯಿಂದ ಪ್ರಕಾಶಿಸುವ ಈ ನಮ್ಮಾಳ್ವಾರ್ ಶರಣರು ತಿರುಮಲೆಗೆ ಯಾತ್ರೆ ಹೊರಟಿರುವವರ ತಿರುವಡಿಗಳನ್ನೇ, ಇದೋ ಈ ದಾಸಾನುದಾಸನ ತಲೆಮೇಲಿರಿಸಲಿ. ಅದೇ ನನಗೆ ಪರಮ ಪುರುಷಾರ್ಥ ಎನ್ನುವ ಚರಮನಿಷ್ಠೆಯ ಪರಮಾರ್ಥವನ್ನು "ಮೇಘದೂತ"ವಾಗಿ ವರ್ಣಿಸುತ್ತಿದ್ದಾರೆ.

ಅಮ್‌ಪೊನ್ = ಪುಟಕ್ಕೆ ಹಾಕಿದ ಹೊನ್ನಿಗಿಂತಲೂ, ಮಾಮಣಿಹಳ್ = ಪರಮ ಶ್ಲಾಘ್ಯವಾದ ನವರತ್ನಗಳಿಗಿಂತಲೂ, ಮಿನ್ = ಮಿಗೆ ಮಿಂಚುವ, ತಿರುವೇಙ್ಗಡತ್ತು = ಶ್ರೀ ವೇಂಕಟಾಚಲದ, ಮತ್ತೂ ಈ ಗಿರಿ ಎಂಥದು? ತಿಶೈ = ದಿಕ್ಕುಗಳನ್ನೆಲ್ಲಾ, ತನ್ನ ಪರ್ವತಕಾಂತಿಯಿಂದಲೇ, ಮಿಳಿರುಮ್ = ಕಾಣುವಂತೆ ಪ್ರಕಾಶ ಪಡಿಸುವಂಥದು. ತಿರುಪತಿಯ ಪರ್ವತಶ್ರೇಣಿ ಇಲ್ಲದಿದ್ದರೆ, ದಿಕ್ಕೆಲ್ಲಾ ಶೋಭಿಸುತ್ತಲೇ ಇರಲಿಲ್ಲ. ಸ್ವಯಂ ಜ್ಯೋತಿಯ ನೆಲೆವೀಡೂ, ಸರ್ವಪ್ರಕಾಶಕ! ಅಂತಹ ಬೆಟ್ಟದ ತಳಪಾಯ. ವನ್‌ತಾಳ್ = ಎಂದೂ ಕುಸಿಯದಂಥದು. ಅಷ್ಟೊಂದು ಭದ್ರ ನೆಲೆ. ಕೈಗಾರಿಕೆಯ ಅತಿರೇಕಕ್ಕೆ ಇಲ್ಲೆಲ್ಲಾ ಅವಕಾಶ ಕೊಡಬಾರದೆಂಬ ಸೂಚನೆ! ಹಾಗೂ, ಶಿಮಯಮ್ ಮಿಶೈ = ಶಿಖರಗಳ ಮೇಲೆಯೂ, ಪೋವಾನ್ = ಹೋಗಲು, ವಳಿಕ್ಕೊಣ್ಡ = ದಾರಿಮಾಡಿಕೊಂಡಿರುವ, ಅಂತೆಯೇ ಧೈರ್ಯಸಾಹಸಗಳಿಂದ ಪಯಣ ಹೊರಟಿರುವ, ಮಿನ್ ಮಿಳಿರಿಯ = ರೇಖಾಕಾರವಾಗಿರುವ ವಿದ್ಯುಲ್ಲೇಖೆಗೂ ಹಿನ್ನೆಲೆಯಾಗಿ ಹೆಚ್ಚು ಮಿನುಗಿ ಪ್ರಕಾಶತರುವ, ಮಿಂಚಿನ ಮಂಡಲದ ಮಧ್ಯಸ್ಥರಾದ, ಮೇಹಙ್ಗಾಳ್ = ಓ ಕಾರ್ ಮೇಘರಾಜರೇ! ತೂದು = ನನ್ನ ವತಿಯಿಂದ ವೇಂಕಟೇಶ್ವರನಿಗೆ ರಾಯಭಾರಿಗಳಾಗಿ ಹೋಗಿರಿ ಎಂಬ ತಾತ್ಪರ್ಯ. ಈ 'ದೌತ್ಯಧರ್ಮ'ವನ್ನು ನನ್ನ ಬಗೆಗೆ ಏನು ಬೇಕೋ ಅವೆಲ್ಲವನ್ನೂ ಬಿನ್ನೈಸಿ, ಸ್ವಾಮಿಯ ಮರು ಉತ್ತರವನ್ನು ತರುವ 'ವಾಚಾ ಧರ್ಮ'ವನ್ನು, ಇಶೈಮಿನ್ಗಳ್ = ದಯೆಯಿಟ್ಟು ಒಪ್ಪಿಕೊಳ್ಳಿರಿ. ಎನ್ನು = ಎಂದು, ಇಶೈತ್ತಾಲ್ = ನಿಮ್ಮಲ್ಲಿ ಬಿನ್ನೈಸಿ, ನಿಮ್ಮನ್ನು ಒಪ್ಪಿಸಿದರೂ, ಇಶೈಯಿಲಮ್ = ನೀವು ಒಪ್ಪುತ್ತಿಲ್ಲ, ಏನ್ ತಲೈಮೇಲ್ = ಈ ದಾಸನ ಶಿರದ ಮೇಲೆ, ಅಶೈಮಿನಗಳ್ = ಪರಮಹಂಸರಾದ ತಾವು ಸಂಚರಿಸಿ ಸ್ಪರ್ಶಿಸದೆ ಇರುವಿರೆ! ಹಾಗೆ ಬೇಡ, ನನ್ನ ತಲೆ ಮುಟ್ಟಿ, ಎನ್ನಾಲ್ = ಎಂದರೆ, ಅಶೈಯುಂಕೊಲಾಮ್ = ಸಂಮತಿಸಬಹುದಲ್ಲಾ! ನೀವೇ ಈ ನನಗೆ ಶಿಫಾರಸ್ಸು ಮಾಡುವ ಘಟಕರು. ಸರ್ವಶಕ್ತನಾದ ತಿಮ್ಮಪ್ಪನಿಗೂ ಅಳದಲ್ಲಿರುವ ಗಾಢಾನುಗಾಢರಾದ ನಿಮ್ಮ ಒಳ ಅಳ ತಿಳಿಯದಿರುವಾಗ ಓ! ಹಂಸಗಳೇ, ಎಂದರಾದೀತೆ! ತಿರ್ಚಕ್ಕುಗಳಾದ ನಾವು ದೊಡ್ಡವರೆ? ಸರಿ, ತಮ್ಮ ಸಿರಿಚಿತ್ತ! ಮೋಡಗಳನ್ನೇ ದೂತರನ್ನಾಗಿಸುತ್ತೇನೆ.

ಒಬ್ಬ ಭಾಗವತರು ಸಂಕೋಚದಿಂದ ಭಕ್ತರ ಕೈ ಬಿಟ್ಟರೂ ಪ್ರಾರ್ಥನೆ ನಡೆಸಿ ಕೊಡದಿದ್ದರೂ ಭಕ್ತವರ್ಗ ಅಗಣಿತವಾಗಿರುವುದರಿಂದ, ನಮ್ಮ ಬೇಡಿಕೆ ಮುಂದುವರಿಯುತ್ತಾ, ನಮ್ಮ ಕಡೆಯಿಂದ ಕೊರೆಯಿರಬಾರದು. ಇನ್ನೊಬ್ಬರ ಬಗೆಗೆ ಪೂಜ್ಯತೆಯೂ ಕಡಿಮೆಯಾಗಬಾರದು.

ಎಲ್ಲೆಲ್ಲೂ ಪೂರ್ಣಸಿದ್ಧಾನ್ತ ಕಾಣುತ್ತಿರಬೇಕು. ಅಂದರೆ ನಮ್ಮ ಭಾವನೆಯಲ್ಲಿ ಅವರನ್ನು ಬಿಟ್ಟೆವೆಂದಾಗಲಿ ನಮ್ಮನ್ನೇ ಅವರು ಬಿಟ್ಟರೆಂಬ ಜ್ಞಾನವಾಗಲಿ ಬರಬಾರದು. ನಾವೇ ಆಗ್ರಹಪಡಿಸಿ. ಬಲಾತ್ಕರಿಸಲೂ ಬಾರದು. ಮತ್ತೆ ಮತ್ತೆ ಹೊಸ ಹೊಸ ಸಹಜ ನಮ್ರತೆಯಿಂದಲೇ ಯಾರನ್ನೂ ಬಿಡಲೂ ಬಾರದು. ಭಾಗವತರೆಲ್ಲರೂ ಅನ್ಯೋನ್ಯ ಸಹೃದಯರಾಗಿರುವುದರಿಂದ ಪರಸ್ಪರ ಭಾವಜ್ಞತೆಯನ್ನು ಎಂದೂ ಕಳಕೊಳ್ಳಬಾರದು. ಇಂದಿನ ಪಕ್ಷನೀತಿ ಯುಗದಲ್ಲೇ ಮುಳುಗಿರುವ ನಾವೆಲ್ಲಾ **"ಸಾಮಾಜಿಕ ಸ್ವಸ್ಥನೀತಿ ಸಂಹಿತೆ"**ಯನ್ನು ಕಾಪಾಡೋಣ.

ತಮಿಳ್ ತಿರಳ್ ೫೦

ಒಣ್ ನುದಲ್ ಮಾಮೈ ಒಳಿಪಯವಾಮೈ ವಿರೈನ್ದು ನಮ್‌ತೇರ್
ನನ್‌ಣುದಲ್ ವೇಣ್ದುಮ್ ವಲವ! ಕಡಾಹಿನ್ನು - ತೇನ್ ನವಿನ್ನ
ವಿಣ್ ಮುದಲ್ ನಾಯಹನ್ ನೀಡ್ ಮುಡಿ ವೆಣ್ ಮುತ್ತ ವಾಶಿಹೈತ್ತಾಯ್
ಮಣ್‌ಮುದಲ್ ಶೇರ್‌ವುತ್ತು, ಅರುವಿ ಶೆಯ್ಯಾ ನಿರ್‌ಕ್ಕುಮ್ ಮಾಮಲೈಕ್ಕೇ

ಕನ್ನಡ ನೆರಳ್

ಒಳ್ ನೊಸಲ್ ಇನ ಹೊಳೆಗಳೆ ಮಾಸಲು ಮುನ್ನಾ ಬಿರ್ರನೆ ತೇರ್ ಸೇ
ರಲ್ ಬೇಕೈ, ಓ! ಸಾರಥಿ! ನಡೆಯಿಸೋ - ಜೇನ್ ಕುಡಿ ಮಧುಕರ ಝೇಂಕರಿಪ
ಬಾನ್ ಮೊಮ್ಮೊದಲ್ ನಾಯಕನ್ ನೀಳ್ ಮುಡಿ ಬೆಳ್ಳನ ಮುತ್ತಿನ ಸರಪೋಲ್
ಮಣ್ ಅಡಿವಾರವ ಸೇರ್ ತೀರ್ಥದ ಹರುವಿಗಳ್ ಹರಿಯುವ ಮಾಮಲೆಗೇ-

ಮಕ್ಕಳಂತೆ ಮುಗ್ಧ ಮನಸ್ಸು ಶರಣರದೆಲ್ಲಾ. ಮನದಲ್ಲಿ ಮೂಡಿದ್ದು ಅನುಭವವಾದದ್ದು ಆಗಲೇ ಆ "ಭಗವದ್‌ವಿಷಯ" ದೇಹ ಇಂದ್ರಿಯಾದಿಗಳಿಗೆ ಇಲ್ಲೇ ಸಾಕಾರಗೊಂಡು ಸಿಕ್ಕಿಯೇ ಬಿಡಬೇಕು. ಇಲ್ಲದಿದ್ದರೆ **'ಬಾಲಾನಾಂ ರೋದನಂ ಬಲಂ'** ಎಂಬ, ಕಲ್ಯಾಣರೂಪ ಗುಣವಂತನಾದ ಭಗವಂತನ ಅಲಾಭಕ್ಲೇಶದಿಂದ - ಹೊರಗಣ್ಣಿಗೆ ಕಾಣದ - ಭಗವದಲಾಭದ ಅರ್ತಿ, ಸಿಗದಿದ್ದಾಗ ತುಡಿದು-ಮಿಡಿಯುವ ಸ್ವಭಾವ. ಈ ಅಳ್ವಾರ್ ಚರ್ಯೆಗಳನ್ನೆಲ್ಲಾ ಕೇಳಿದ ದೇಶಾನ್ತರದ ಭಾಗವತೋತ್ತಮರು ಇವರ ಬಳಿ ಸಾರಿ ಬಂದು ಇವರಿಗೆ ಸಮಾಧಾನ ಮಾಡುತ್ತಾರೆ. ಈ ಶಠಕೋಪ ನಾಯಕಿ ಬಲು ಬಾಧೆ ಪಡುತ್ತಿದ್ದಾಳೆ. ಓ ಸಾರಥಿ. ಬೇಗ ತಿರುಪತಿಗೆ ರಥವನ್ನು ನಡೆಸು! ಎಂದು ನಾಯಕ ಹೇಳಿದ ಹಾಗೆ. ಆಗ ಇವರು ಆ ಪತಿಯ ಮಾತನ್ನೇ ತಮ್ಮ ಸಿರಿಬಾಯಿಂದ ಅನುವಾದ ಮಾಡಿರುವುದೇ ಈ ಪಾಶುರದ ಸಂದರ್ಭ.

ವಲವ = ಸಮರ್ಥಸಾರಥಿಯೇ! ಒಣ್ = ಒಳ್ಳೆಯ, ನುದಲ್ ನೊಸಲುಳ್ಳ, ಈ ನನ್ನ ಕಾಂತೆಯ, ಮಾಮೈ ಒಳಿ = ಥಳಥಳಿಸುತ್ತಿರುವ ಮೈ ಹೊಳಪು, ಪಯವಾಮೈ = ಪತಿದೇವನ ಬಳಕೆಗೆ ಬಾರದೆ, ಕಳೆ ಕುಂದದಂತೆ, ತೇನ್ = ಜೇನೇ ಎಂದು, ನವಿನ್ನ = ಹೇಳಲ್ಪಡಬಹುದಾದ, ವಿಣ್‌ಮುದಲ್ ನಾಯಹನ್ = ಮಧುವಿದ್ಯಾ ಪ್ರಾಪ್ಯನಾದ ಪರಮಪದನಾಥನಾದ ನಾನು ಧರಿಸಿರುವ, ನೀಳ್ ಮುಡಿ = ನೀಳನ ಕಿರೀಟದಲ್ಲಿರುವ ವೆಣ್ ಮುತ್ತಮ್ = ಬಿಳಿ ಮುತ್ತಿನ, ವಾಶಿಹೈತ್ತಾಯ್ = ಮಲೆಯಂತಿರುವ, ಮಣ್ ಮುದಲ್ = ಪರ್ವತದ ಮೂಲಭಾಗದಲ್ಲಿ, ಶೇರ್ವುಉತ್ತು = ಸೇರಲು ಬಯಸಿ, ಅರುವಿ = ಗಿರಿ ನಿರ್ಝರಗಳು, ಶೆಯ್ಯಾ ನಿರ್‌ಕ್ಕುಮ್ = ಹರಿಯುತ್ತಲೇ ಇರುವ, ಮಾಮಲೈಕ್ಕೇ = ಅಳ್ವಾರರ ಅತ್ಯಭಿನಿವೇಶದಿಂದ ಹಿರಿದಾದ ಉನ್ನತವಾದ! ವೇಂಕಟಗಿರಿಗೇ, ವಿರೈನ್ದು = ಬಿರ್ರನೆ, ನಮ್ = ನಮ್ಮೆಲ್ಲರನ್ನೂ ಆ ಮಲೆಯಪ್ಪನನ್ನು ಕೂಡಿಕೊಳ್ಳುವಂತೆ, ನಮ್ಮೀ ತೇರನ್ನು, ಕಡಾಹಿನ್ನು ವೇಣ್ದುಮ್ = ಬೇಗ-ಬೇಗ ನಡೆಸಿಯೇ ತೀರಬೇಕಪ್ಪಾ ನೀನು.

ತಮಿಳ್ ತಿರಳ್ - ೬೦

ಮುಲೈಯೋ ಮುಳು ಮುತ್ತುಮ್ ಪೋನ್ದಿಲ ಮೊಯ್‌ಪೂಙ್ಗುಳಲ್ ಕುರಿಯ
ಕಲೈಯೋ ವರೈಯಿಲ್ಲೈ ನಾವೋ ಕುಳರುಮ್ - ಕಡಲ್‌ಮಣ್ಣೈಲ್ಲಾಮ್
ವಿಲೈಯೋವೆನ ಮಿಳಿರುಙ್ಕಣ್ ಇವಳ್‌ಪರಮೆ ಪೆರುಮಾನ್
ಮಲೈಯೋ ತಿರುವೇಙ್ಗಡಮೆನ್ನು ಕರ್‌ಕ್ಕಿನ್ನ ವಾಶಹಮೇ!

ಕನ್ನಡ ನೆರಳ್

ಮೊಲೆಯೋ ಪೂರಾ ಮೊಳೆತಿಲ್ಲಾ! ದಟ್ಟನ ಚೆಂದದ ಕೂದಲ್ ಜಡೆಗಿದೋ ಸಿಗುವುದೂ ಇಲ್ಲ!
ಕಲೆಯಿಂದುಡು ಸೀರೆಯೂ ಸೊಂಟದಿ ನಿಲ್ಲುವುದಿಲ್ಲಾ! ಮಾತೂ ಕೊಂಜುಗೆ! - ಕಡಲ್ ಮಣ್ಣೆಲ್ಲಾ
ಬೆಲೆಯೋ ಎನು ಮಿಳಿರ್ ಗಣ್ಣೆವಳ್ಗೆಂತೀ ಭಾರಂ! ಪರಪರನಾ
ಮಲೆಯೋ "ಸಿರಿವೇಂಕಟ"ವೆಂಬೊಂದೇ ಕಲಿತಿಹ ಮಾತಿದುವೇ!

ಈ ನಮ್ಮಾಳ್ವಾರ್‌ಗೆ ಆ ದಯಾನಿಧಿ ನಿರ್‌ಹೇತುಕವಾಗಿಯೇ, ವಿಶೇಷ ಕಟಾಕ್ಷರಶ್ಮಿ ಬೀರಿದ ಮೇಲೆ ತಮ್ಮ ಜೀವನದಲ್ಲಿ ಜರುಗುತ್ತಿರುವ ಅನಿರೀಕ್ಷಿತ ಅಪ್ರಾರ್ಥಿತ ಸಮಾಚಾರಗಳನ್ನು ತಿಳಿಸುವುದೇ ಈ 'ಸಿರಿವೃತ್ತ' ಮೊಟ್ಟಮೊದಲ ಕೃತಿ. ಹರಯಕ್ಕೇರಿ ಬಂದ ಪ್ರೌಢೆಯಲ್ಲ, ಆಹಾ! ಇದೇನಚ್ಚರಿ! ಈ ನನ್ನ ಬಾಲೆ ಚಿಕ್ಕಂದಿನಿಂದಲೇ ಯಾರೊಬ್ಬರ ಶಿಕ್ಷಣ-ತರಬೇತಿಯಿಲ್ಲದೆ ಆ ಸರ್ವೋತ್ತಮ **"ಶ್ರೀ ನಾಮಗಳನ್ನೇ ಸಂಕೀರ್ತನ ಗೈಯ್ಯುವುದು!"** ಇವನ್ನೆಲ್ಲಾ ತಾನಾಗಿ ತನ್ನ ಚರಿತ್ರ ಹೇಳಲು ಆಗದಷ್ಟು ಆ ಹಿರಿಹಿರಿಯನಲ್ಲೇ ತನ್ಮಯತೆ! ಶರಣಾದರೂ ತಮ್ಮ ಕಡೆಯಿಂದಾಗುವ, ತೀವ್ರತೆ, ಆತುರ ಕೂಡದು ಎಂಬ ನಿಷ್ಠೆಗೆ 'ಸಿದ್ಧೋಪಾಯನಿಷ್ಠೆ' ಎನ್ನುವುದು. ಶರಣರ ಫಲಕ್ಕೆ, ಸರ್ವೇಶ್ವರ ಹೊಣೆಗಾರ. ನಾವೇಕೆ ಹೀಗೆಲ್ಲಾ ಎದ್ದೆದ್ದುಬೀಳಬೇಕು. ಸೀತೆ ಅಶೋಕವನದಲ್ಲಿ ಹತ್ತು ತಿಂಗಳು ಬಿದ್ದಿದ್ದಂತೆ ನಾವು ನಿಷ್ಕ್ರಿಯರಾಗಿರಬೇಕು. 'ಚರಣೌಶರಣಮ್' ಇಷ್ಟೇ ನಮ್ಮ ಜಪವಾಗಬೇಕು. ರಾಮ ಯಾವ ಕಾಲಕ್ಕೆ ಬಂದು, ಸೀತೆಯನ್ನು ತನ್ನಡೆಗೆ ಸೇರಿಸಿಕೊಂಡನೋ ಹಾಗೆ ತಾಳ್ಮೆಯಿಂದರಿರುವುದೇ 'ತಾಯಿ' ಎಂಬುದು. ಆದರೆ 'ಮಗಳ' ನೆಲೆ ಅವನಿತ್ತ ಭರವಸೆಗಳನ್ನು ಅಷ್ಟು ಕಾಲ ತಡೆಯಲಾಗದ ಆತುರ. ಸಕ್ರಿಯತೆ, ಸ್ವಪ್ರಯತ್ನದಂತೆ ಕಾಣುವ ಚಟುವಟಿಕೆಗಳು. ಇವೆರಡು ಭೂಮಿಕೆಗಳಿಗೂ ನಡೆಯುವ, ಮುಖಾಮುಖಿಯ ಚೆಲುವನ್ನು ಸಂತಸಾಹಿತ್ಯ - "ತಾಯಿ-ಮಗಳು" ಎಂದು ರೂಪಿಸುವುದಷ್ಟೆ! ಸಖಿಯೆಂಬುದು, ಜೀವ - ಈಶ್ವರರ ಬಗೆಗಿರುವ ನಾನಾ ಅನಿವಾರ್ಯ ಸಂಬಂಧಗಳ ಪ್ರತಿನಿಧಿ. ಇತ್ತ ತಾಯಿಗೂ, ಅತ್ತ ತನ್ನ ಪ್ರಾಣಸಖಿ, ತೀವ್ರಸಂವೇಗಿಗೂ ಮಧ್ಯೆ ಓಡಾಡುವವಳು ಸ್ವ-ಸ್ವಾಮಿಭಾವ ಉಭಯರನ್ನೂ ಬಿಡದಂತಹ ಸಂಬಂಧ. ಶರೀರದಂತೆ ಈ ಜೀವ. ಆತ್ಮದಂತೆ ಒಡೆಯ. ಇವೆಲ್ಲವನ್ನೂ ತಿಳಿದಿದ್ದರೂ, ಸೇರ್ಪಡೆಯ ಆವೇಶ, ಸತಿ-ಪತಿ ಸಂಬಂಧವೇ ಉಳಿದ ಎಲ್ಲಾ ಸಂಬಂಧಗಳಿಗಿಂತಲೂ ಮೇಲ್ ಕೆರಳಿದಾಗ ಮಗಳ ತ್ವರಾಭೂಮಿಕೆ, ಈ ಆಳ್ವಾರ್ ಶರಣ ವಾಙ್ಮಯದ ರಹಸ್ಯ. ಇವೆಲ್ಲಾ ನಮ್ಮ ಮನೋಭೂಮಿಕೆಗೆ ಏರಿ ಹೃದಯವು ಪಕ್ವವಾದಷ್ಟೂ ಈ ಸಂತ ಸಾಹಿತ್ಯ ಮನದಟ್ಟಾಗುವುದು.

ಪ್ರಕೃತ ನಮ್ಮಾಳ್ವಾರ್ ಶರಣರ ಸ್ಥಿತಿ, ಸ್ವತಃ ನಿವೇದನಕ್ಕೂ ಅಸಮರ್ಥವಾಗಿದೆ. ಆದುದರಿಂದ ತಾಯಿಯ ಮಾತಿನ ರೀತಿ ಹೀಗೆ ಮುಂದುವರಿಯುತ್ತದೆ. ತಾಯಿಗೂ ಆಶ್ಚರ್ಯ, ಮಗಳ ಬಗೆಗೆ! ಮಾತೇ ಬರದಿದ್ದರೂ ಅದೇನು ಸ್ಪಷ್ಟವಾಗಿ ಮಾತನಾಡುತ್ತದೆ, ಈ ನನ್ನ ಪುಟಾಣಿ! ಇನ್ನೂ ಕಣ್ಣೇ ಬಿಟ್ಟಿಲ್ಲ! ಅದೇನು ಒಳ ಹೊರಗಿನ ಧ್ಯಾನಾವಸ್ಥೆ! ಇದೆಲ್ಲಾ ತಾಯಿಯಾದ, ತನ್ನ 'ದೇವರೇ ಎಲ್ಲದಕ್ಕೂ ಸಾಧನ' ಎಂಬುದರಿಂದಲೇ - ತಾಯಿಯಿಂದಲೇ ಹುಟ್ಟಿರುವ ಮಗಳು! ಮುಲೈಯೋ = ಇವಳ ಹೃದಯ (ಎದೆಗಳು), ಮುಳು ಮುತ್ತುಮ್ = ಪೂರಾಪಕ್ವವಾಗಿ, ಪೋನ್ದಿಲ = ಇನ್ನೂ ಬೆಳೆದಿಲ್ಲ! ಮೊಯ್ = ದಟ್ಟವಾದ, ಪೂಮ್ = ಹೂವಿನ ಸುವಾಸನೆಯನ್ನು ಸೂಸುವ ಮೇಲ್ ಮಟ್ಟದ ಭಕ್ತಿಗಂಧ ಹೆಚ್ಚಾದ, ಕುಳಲ್ = ತಲೆಗೂದಲೂ, ಕುರಿಯ = ಜಡೆಗೆ ಬಾರದಷ್ಟು ಪಿಳ್ಳಿಯಾಗಿಯೇ ಇದೆ, ಕಲೈಯೋ = ನಾನಾ ಕಲಾ ವಿಧಾನಗಳಿಂದ ಉಡಬಲ್ಲ ಸೀರೆಯೋ, ಅರೈ ಇಲ್ಲ್ = ಸೊಂಟದಲ್ಲಿ ನಿಲ್ಲದು. (ಈಗಿನ ರೆಡಿಮೇಡ್ ಉಡುಪುಗಳ ವಿನ್ಯಾಸ ಕರಕೌಶಲಗಳನ್ನು ಕೊಲ್ಲುತ್ತಿರುವುದರ ಬಗೆಗೆ ಶರಣರ ಮೂಕಮರುಕ ಇಲ್ಲಿ ಕಾಣಿಸುತ್ತಿದೆ!) ನಾವೋ = ಎಳೆನಾಲಿಗೆ, ಕುಳರುಮ್ = ಕೊಂಜುವುದು! ಕಣ್ = ಕಣ್ಣುಮಾತ್ರ, ಮಿಳಿರುಮ್ = ಫಳಫಳಿಸುತ್ತಿದೆ. ಕಡಲ್ ಮಣ್ ಎಲ್ಲಾಮ್ = ಸಪ್ತಸಾಗರಾವೃತ ಇಡೀ ಭೂಮಂಡಲವೆಲ್ಲಾ ಈ ಕಣ್ಣೊಂದಕ್ಕೆ ಬೆಲೆಯಲ್ಲಿ ಸಾಟಿಯಾಗದು! **"ಈ ಬಾಲಶರಣೆಯ ದರ್ಶನ ಶಕ್ತಿ ಮಹಾರ್ಘವಾದುದು"** ಎಂಬ ಭಾವ. ಪೆರುಮಾನ್ = ಯಾವನಿಗಿಂತ ಬೇರೊಂದು ಹಿರಿದಾದುದಿಲ್ಲವೋ ಅಂತಹ ಪರಮಾತ್ಮ, ಪರಂಬ್ರಹ್ಮ ಶ್ರೀನಿವಾಸ ತಂಗಿರುವ, ತಿರುಮಲೆ = ತಿರುವೇಙ್ಗಡಮ್. ಎನ್ನು = ಎಂದೇ, ಕರ್‌ಕ್ಕಿನ್ನ = ಈ ಹುಡುಗಿ ಕಲಿತಿರುವ, ವಾಶಹಮೇ = ಅರ್ಥವಾಚಕ ಶಬ್ದ! ಒಂದೇ! ಇವೆಲ್ಲಾ, ಇವಳ್ ಪರಮೇ = ಈ ಕಿರಿವಯಸ್ಸಿಗೆ, ನನ್ನೀ ಕಂದ ಹೊತ್ತಿರುವ ಭಾರ! ತಡೆಯಬಲ್ಲುದೇ? ನಾನು ಹೇಳಿದರೆ ತಾನೇ ಕೇಳುತ್ತದೆಯೇ!

ಇಲ್ಲಿನ ಮೊಲೆಯೆಂದರೆ ವಿಶ್ವಪತಿಯ ಭೋಗೋಪಕರಣ! ಅವನೋರ್ವನೇ "ಭೋಕ್ತಾ". "ವಿಶ್ವ ವಿರಾಟ್ ಮಹಾಸಮಾಜದ ಸುಖಕ್ಕಾಗಿಯೇ ನಮ್ಮ ಕಾಯಕವೆಲ್ಲಾ!" ಆಮೇಲೆ ಅದರೊಳಗೆ ನನ್ನ ಉಚಿತ ಸುಖವೂ ಅಡಗಿಯೇ ಇದೆ. ವ್ಯಕ್ತಿ -ಸಮಾಜದ ದ್ವಂದ್ವಯುದ್ಧಕ್ಕೆ ಇಲ್ಲಿ ಪರಿಹಾರವಿದೆ. ಸರ್ವೇಶ್ವರನಿಗೇ ಸರ್ವಭೋಗ ಎಂಬುದೇ ಭಕ್ತಿ. ಇದು ಜ್ಞಾನ, ಭಕ್ತಿ, ಈ ಭಕ್ತಿ ಸಾಧನದಲ್ಲೂ, ಪರಭಕ್ತಿ, ಪರಜ್ಞಾನ ಪರಮ ಭಕ್ತಿ ಕ್ರಮಪಾಕ ಈ ನನ್ನ ಶಠಾರಿ ಕುಮಾರಿಯದಲ್ಲ! ಒಂದೇ ಕ್ಷಣಕ್ಕೇ ಶಬ್ದ, ಇಡೀ ವಿಶ್ವವನ್ನೇ ಹಬ್ಬಿ ಬಿಡುವಂತಹ 'ಮಹಾ ಜ್ಞಾನ!' ನಿರಪಾಯ ಸ್ಫೋಟ, ಅಮೃತಮಯ! ಪಿಳ್ಳಿಜಡೆಯ ಅಂತರಾರ್ಥವೆಂದರೆ, ತಲೆಬಗ್ಗಿ ನಮಸ್ಕಾರಾದಿ ಸಾಧನ ಈ ಬಾಲೆಗೆ ಗೊತ್ತಿಲ್ಲ. ಸೀರೆ ಎಂದರೆ, ಬೌದ್ಧಿಕ ವ್ಯವಸಾಯವನ್ನು ಅರಿಯದವಳು. ಕೊಂಜು ಮಾತೆಂದರೆ ಸಾಧನಾರೂಪನಾಮ ಸಂಕೀರ್ತನ, ಪಿಳಿಪಿಳಿ ಕಣ್ ಎಂದರೇನು? ಸ್ವಾಭಾವಿಕ ಸಹಜ ಜ್ಞಾನವೇ ಹೊರತು **"ಜ್ಞಾನ, ಧ್ಯಾನ, ಸಮಾಧಿ, ಪ್ರಜ್ಞೆ, ತಜ್ಜನ್ಯವಾದ ಬ್ರಾಹ್ಮೀ ಸ್ಥಿತಿ"** ಇವಾವುವೂ ಇಲ್ಲದೆಯೇ ಉಂಟಾಗಿರುವ ಚೈತನ್ಯ ಪ್ರಕಾಶ ವಿಶೇಷ. ಚಿತ್ತವೃತ್ತಿ ರೂಪವಲ್ಲ. ಜೀವಾತ್ಮನ ಸಹಜ ಸ್ವರೂಪವಾದ ಜ್ಞಾನ. ಯಾವುದಕ್ಕೂ ತನ್ನ ಭಾರವಿಲ್ಲದಿರುವಾಗ, ಈ ತ್ವರೆಯೊಂದನ್ನು ಮಾತ್ರ ಈ ಹಸುಳೆ ಹೊರಲಾರದ ಭಾರವನ್ನು ಏಕೆ ಹೊರಲು

ಹೋಗುತ್ತಿದೆಯೋ! ನಾ ಕಾಣೆ. ಪೆರುಮಾನ್‌ಮಲೈ ಎಂದರೆ **"ಈಶಾವಾಸ್ಯಮಿದಂ ಸರ್ವಂ..... ತೇನತ್ಯಕ್ತೇನ ಭುಂಜೀಥಾಃ"** ಈ ಉಪನಿಷದರ್ಥ ಸೂಚಕ. ಆ ಬೆಟ್ಟದ ನಿಮಿತ್ತದಿಂದ ಲೋಕಗಳೆಲ್ಲವೂ, ಸರ್ವೇಶ್ವರನದೇ ಭೋಗಸ್ಥಾನಗಳು. ಈ ಮಹಾಪ್ರಮೇಯ. ಮಾನವ ಜನಾಂಗಕ್ಕೆ ಸರಿನಿಟ್ಟಿನಲ್ಲಿ ಹತ್ತಿದರೆ, ಅದೆಂತಹ ಶಾಂತಿ ಸಮೃದ್ಧ ಜಗನ್ನಿರ್ಮಾಣ ಮಾಡಬಹುದು! ಚಿಗುರು ಬಲಿತು ಗಿಡವಾಗಿ ಹೂವು ಕಾಯಿ, ದೋರುಗಾಯಿ ಕಳಿತಹಣ್ಣಿನಂತಲ್ಲವೆ, ಈ ನನ್ನ ಹೆಣ್ಣು, **"ಪಿಂಜಾಯ್ ಪಳುತ್ತಾಳ್"** ಹುಟ್ಟಿದೊಡನೆಯೇ ಪರಮಪಕ್ವವಾಗಿ ಬಿಟ್ಟಿದ್ದಾಳಲ್ಲಾ!

ಈ ಶರಣೆಯ ಎಲ್ಲಾ, ಅವಯವ, ಕೂದಲು ಇತ್ಯಾದಿಗಳನ್ನು ಎಳೆಯದಾಗಿವೆ ಎಂದು ಹೇಳಿ, ಕಣ್ಣಿಗೆ ಬೆಲೆ ಕಟ್ಟುವ ವಸ್ತುವೇ ಇಲ್ಲವೆಂದು, ಅದೊಂದನ್ನು ಮಾತ್ರ ಹಿಗ್ಗಿಸಿ ಹೇಳುತ್ತಾಳಲ್ಲಾ! ಎಂಬ ಶಂಕೆ ಬಂದಾಗ, ಮಹಾರಸಜ್ಞರೂ, ಮೇಧಾವಿಗಳೂ ಆದ ೧೨ನೆಯ ಶತಮಾನದ "ಪರಾಶರಭಟ್ಟರು" ಸಮಾಧಾನ ಹೇಳಿದರಂತೆ! ತನ್ನ ಕಾನ್ತನಿಗೂ, ತನ್ನ ಜನನಿಗೂ ಏನೊಂದು ತಾರತಮ್ಯವಿಲ್ಲದಂತಹ, ಮುಗ್ಧವಿಮಲಲೋಚನೆ ಈ ಕುವರಿ! ಆದುದರಿಂದ, ಕಣ್ಣಿನ ಹಿರಿಮೆಯನ್ನಲ್ಲ ಇಲ್ಲಿ ಹೇಳಿರುವುದು, ಕಿರಿಮೆಯಾದ ಸೂಕ್ಷ್ಮ ಅವಿಕಾರಿಯಾದ ಕಣ್ಣನ್ನೇ ಎಂದು ಪ್ರಕ್ರಮಭಂಗ ದೋಷವನ್ನು ಸರಿಪಡಿಸಿದರು.

ಮತ್ತೊಂದು ರಸಾಽನುಭವವೆಂದರೆ, ಹಿಂದಿನ ೫೬ನೆಯ ಹಾಡಿನಲ್ಲಿ "ನಾನೇನು ಮಹಾಪಾಪಗೈದು ಈ ಹೆಣ್ಣನ್ನು ಹಡೆದೆನೋ!" ಎಂದು, ತಾಯಿ, ದುಃಖ ಪಟ್ಟುದನ್ನು ಈ ೬೦ನೆಯ ಪಾಶುರದಲ್ಲಿ, ನೆರೆಹೊರೆಯ ಹೆಂಗಸರು "ನೀವೇಕೆ ನೊಂದು ಕೊಳ್ಳುವಿರಿ! ಇಷ್ಟೊಂದು ಅತಿ ಬಾಲ್ಯದಲ್ಲೇ, ದೇವರಲ್ಲಿ ಅತ್ಯಂತ ಪ್ರವಣೆಯಾದುದಕ್ಕೆ ಇನ್ನೂ ಸಂತಸಪಡಬೇಕಲ್ಲವೇ?" ಇದು ಸಖಿಯರು, ಮಾತೆಗೆ ಹೇಳಿದ ಸಮಾಧಾನವೆಂದೂ ಆಗಬಹುದು.

ತಮಿಳ್ ತಿರಳ್ ೬೭

ಕಾವಿಯುಮ್ ನೀಲಮುಮ್ ವೇಲುಮ್ ಕಯಲುಮ್ ಪಲಪಲವೆನ್ನು ಆವಿಯಿನ್ ತನ್ಮೈ ಯಳವಲ್ಲ ಪಾರಿಪ್ಪು - ಅಶುರರೈ ಚ್ಚೆತ್ತ |
ಮಾ ವಿಯಂ ಪುಳ್‌ವಲ್ಲ ಮಾದವನ್ ಗೋವಿನ್ದನ್ ವೇಙ್ಗಡಮ್ ಶೇರ್ ತೂವಿಯಮ್ ಪೇಡೈಯನ್ನಾಳ್ ಕಣ್‌ಗಳಾಯ ತುಣೈ ಮಲರೇ||

ಕನ್ನಡ ನೆರಳ್

ಕೆಂಪೂವುಂ ಕರಿಪೂವುಂ ವೇಲುಂ ಮೀನುಂ ಪಲಪಲ ಗೆಲ್ದು
ಎಂಪ್ರಾಣದ ಸ್ಥಿರತೆಗೂ ಸರಿಯಳತೆಯದಲ್ಲಾ! - ಅಸುರರ ಸಾಯ್ಸುವ
ಸಂಪದದಚ್ಚರಿ ಹಕ್ಕಿಯ ನಡೆಸುವ ಮಾಧವ ಗೋವಿಂದನ ವೇಂಕಟಸೇರ್
ಚೆಂಪುಕ್ಕಗಳ್ ಪೆಣ್ ಅಂಚೆಯ ಪೋಲ್ವಳ ಕಣ್ಗಳು ಎನ್ನುವ ಈರ್ ಪೂ ಭೂರಿಯ ಭಾವಂ! -

ಪರಮ ನಾಯಕನ ಸಿರಿಬಾಯಿಂದಲೇ ತನ್ನ ಪರಮ ಪ್ರೇಯಸಿಯಾದ ಈ ಪರಾಂಕುಶ ನಾಯಕಿಯ ನೇತ್ರ ಸೌಂದರ್ಯದ ವರ್ಣನೆ ಈ ಹಾಡಿನ ಸೌಂದರ್ಯ. ಶಠರಾದವರ ಮೇಲೆ ಈ ಶರಣರ ಸಾತ್ವಿಕ ಅಂಕುಶ ಎಂದೆಂದೂ ನಡೆಯುತ್ತಿರುತ್ತದೆ. "ಗೂಢ ವಿಪ್ರಿಯಕೃತ್" ಆದವರನ್ನು 'ಶಠರು' 'ಪರರು' ಎನ್ನಲಾಗುತ್ತದೆ. ಏನೂ ಹೊರಗೆ ತೋರಿಸಿಕೊಳ್ಳದೆ ಒಳಗೊಳಗೇ ಅಪ್ರಿಯರಾಗಿರುವವರೇ ಶಠರು, ಅಂತಹವರನ್ನೂ, "ಶಠಂಪ್ರತಿ ಶಾಠ್ಯಂ" ಎಂಬ ಮಾಮೂಲಿನ ಸ್ಥೂಲಾರ್ಥದಂತಲ್ಲದೆ, ಅವರು ಶಾಠ್ಯ ತೋರಿದರೂ ತಾವು ಮಾತ್ರ, ಅವರಿಗೆ ಪ್ರತಿಯಾಗಿ, ಅವರು ಮಾಡಿದಂತೆಯೇ ಮಾಡದೆ, ನಿರಪೇಕ್ಷ ಸ್ವತಂತ್ರರಾಗಿ ಸಾಚಾತನದಲ್ಲೇ, ಏನೊಂದೂ ರಹಸ್ಯವಿಲ್ಲದೆಯೇ ಇರುವವರೇ ಈ ಮಹಾ ಮದವೇರಿರುವ ಲೋಕವಂಚಕ, ಗುಲಾಮರಿಗೆ, ಸ್ವಾತಂತ್ರ್ಯದ ಸರಿ ಪಾಠ ಮಾಡುವವರೇ "ಪರಾಂಕುಶರು".

"ಪೆರಿಯ ವಣ್ ಕುರುಹೂರ್ ನಹರ್ ನಂಬಿ" - "ಅನ್ನೈಯಾಯ್, ಅತ್ತನಾಯ್" ಚತುರ್‌ವೇದಿಗಳಾದ ಶಿಷ್ಟರೂ ಮಧುರ ಕವಿಗಳನ್ನು ಕೈ ಬಿಟ್ಟಾಗಲೂ. ಅಂದರೆ ನಾನು ಪರಮ ಶಠನಾಗಿದ್ದರೂ, ಸಜ್ಜನರಿಗೆ "ಪರ" ಮನುಜನಾಗಿ ಕಂಡರೂ ಈ ಶಠಾರಿ ಪರಾಂಕುಶರು, ಮಾತ್ರ ನನ್ನನ್ನು ಅತ್ಯಾದರದಿಂದ ಸ್ವಕೀಯನನ್ನಾಗಿ ಸ್ವಾಗತಿಸಿ, ನನ್ನ ದೋಷಗಳನ್ನು, ತಾವೂ ಅರಿತಿದ್ದರೂ ಅನುಕರಿಸದೆ, ಸರಿಯಾದ "ಪ್ರತ್ಯೌಷಧ", ಕೇಡಿಗೆ ನಲ್ಮೈ! ದ್ವೇಷಕ್ಕೆ ಪ್ರೇಮ! ಕತ್ತಲೆಗೆ ಬೆಳಕು! ಈ ಸಹಜ ಪ್ರತಿಕ್ರಿಯೆ ತೋರಿದವರಿವರು ಎಂಬುದು, ಇವರ ಪ್ರಪ್ರಥಮ ಶಿಷ್ಯರಾದ ಮಧುರಕವಿಗಳು "ಇವರೇ" "ನಂಬಿ" ಪರಿಪೂರ್ಣ ಗುರು ಎಂದು, ಕೊನೆಯವರೆಗೂ, ಇವರನ್ನು ಬಿಡದೆ ಇವರ ತತ್ವಗಳನ್ನೇ ದಿಕ್ಕು ದಿಕ್ಕುಗಳಲ್ಲಿ ಹರಡಿದರು. ಈ ಶಠಾರಿ ಹುಟ್ಟುವಾಗಲೇ ಒಂದು "ವಕುಳ" ಎಂದರೆ, ಪಗಡೆ ಹೂಹಾರದಿಂದಲೇ ಹುಟ್ಟಿದುದರಿಂದ ಇವರಿಗೆ "ವಕುಳಾಭರಣ" ಎಂದೂ ಹೆಸರುಂಟು. ಶ್ರೀರಾಮ "ಪ್ರಾಣೇಭ್ಯೋಪಿ ಗರೀಯಸೀ" ಎಂದು ಸೀತೆಯ ಬಗೆಗೆ ಹೇಳಿದ್ದು ಈವಕುಳಾಽಽಭರಣೆ ನಾಯಕಿಯ ಬಗೆಗೂ, ಈ ತಿಮ್ಮಪ್ಪನಲ್ಲಿ ಹರಿದು ಬಂದಿದೆ. ತನ್ನ ಅಸದಳವಾದ ಕಣ್ಣಿನ ಚೆಂದಕ್ಕೂ

ಮೆಲಾದುದು ಈ ಆಳ್ವಾರರ ನಯನದ ಮನೋಜ್ಞತೆ! ಅಶುರರೈ = ದಂಭ, ದರ್ಪ ಅತ್ಯಭಿಮಾನ, ಒಡೆತನ, ಕುಲೀನತೆಯ ಗರ! ಧನಿತನದ ಮದ ಶಿಕ್ಷಣ! ಸಂಪನ್ನತೆಯ ಗತ್ತು ಒಂದೆ ಎರಡೇ ಆ ಅಸುರೀ ನಡೆನುಡಿಗಳನ್ನೇ ''ಸಂಪತ್ತು'' ಎಂದೇ ಭ್ರಮಿಸಿ ಭಾವಿಸುವ ಅಸುರೀ **''ಪ್ರಕೃತಿ ಸಂಪನ್ನರನ್ನು''** ಶೆತ್ತ = ಅವರ ಆ ದೌಷ್ಟ್ಯ ಮಾತ್ರ ಹೋಗುವಂತೆ, ಶರೀರದ ಆ ಭಾಗವನ್ನಷ್ಟೇ ''ಶಸ್ತ್ರಚಿಕಿತ್ಸೆ'' ಗೈಯ್ಯುವ ವೈದ್ಯನಂತೆ, ಶೆತ್ತ = ತೆಗೆದುಹಾಕಿದ. ಹಾಗೆಂದು ಮಾನವರಾದ ನಮಗಾರಿಗೂ, ಆ ಸೃಷ್ಟಿಕರ್ತನ ''ಸಂಹಾರ ಶಕ್ತಿ'' ಕೂಡದೆಂಬುದೇ ಇಲ್ಲಿನ ಇಂಗಿತ. ಸರ್ವೇಶ್ವರನು ಗೈಯುವ ಪ್ರಾಣಹರಣ, ನಿಜಕ್ಕೂ ಅವನಿಗೆ ಮಾತ್ರ ಸೀಮಿತ. ನಾವು ಸತ್ತವರನ್ನು ಪೂರಾ ಬದುಕಿಸುವವರೆಗಾದರೂ ''ಯುದ್ಧ'' ಮಾನವ ಧರ್ಮವಾಗದು. ಫಾಸಿ ಶಿಕ್ಷೆಯೂ ಅಷ್ಟೆ! ರಾಜಧರ್ಮ ಇಂದು ''ಸಾಮಾನ್ಯ ಪ್ರಜಾ ಧರ್ಮವೇ'' ಆಗುತ್ತಿರುವುದರಿಂದ ಹಿಂದಿನ ಸತ್ ಕ್ಷತ್ರಿಯರ ಉದಾಹರಣೆ ಸನ್ನಿದರ್ಶನವಾಗಲಾರದು. ಮಹಾಭಾರತ ಯುದ್ಧವಾದ ಮೇಲೆ ಶ್ರೀ ಕೃಷ್ಣನೂ **''ರಣಛೋಡಲಾಲ್''** ಕಲಿಯುಗಕ್ಕೆ ಹಿಂಸಾ ಸಾಧನಗಳೆಲ್ಲಾ ''ಕಾಲಬಾಹಿರ'' ಎಂಬುದನ್ನು ತೋರಿದ ಪರಮ ಅಹಿಂಸಾ ಗುರು! ಮಾಂಸಾಹಾರವೂ ಅಂತೆಯೇ. ಅಣ್ಣ ಬಲರಾಮನು ನೇಗಿಲು ಹಿಡಿದ. ತಮ್ಮ ''ಗೋಪಾಲಕ''ನಾದ! ಬೈಬಲ್, ಖುರಾನ್‌ಗಳಲ್ಲೂ ಇದೇ ತಾತ್ಪರ್ಯವಿರುವುದು ಬೆಳೆಯುತ್ತಿರುವ ಇಂದಿನ ವಿಜ್ಞಾನದ ಮುನ್‌ನಡೆಯೂ **''ಈ ಅತ್ಯಾಧುನಿಕ ಪ್ರಜಾಧರ್ಮವನ್ನೇ''** ಎತ್ತಿಹಿಡಿಯುತ್ತಿದೆ. ವೇದ, ಇತಿಹಾಸ, ಸ್ಮೃತಿ ಪುರಾಣ, ಸಂತ ಸಾಹಿತ್ಯಾದಿಗಳಿಗೆ ಈ ರೀತಿ ಅರ್ಥೈಸುವ ಶಿಕ್ಷಣ ಪರಿಪಾಟಿಯೇ ಜಗನ್‌ಮಾನ್ಯವಾಗಬೇಕಾದುದೇ ಕಾಲ ಧರ್ಮ!

ಮಾ ಮಿಯಮ್ = ಮಹಾಶ್ಚರ್ಯಕರನಾದ, ಪುಳ್ = ಅನಿಂಧನ, ಅಯಾಂತ್ರಿಕವಾಗಿಯೇ ಹಾರುವ ವಿಮಾನನಾದ! ಗರುಡನನ್ನೂ, ವಲ್ಲ = ಸರಿವಾಹನವನ್ನಾಗಿ ಬಳಸಬಲ್ಲ, ಮಾದವನ್ = ಕರುಣಾ ಪತಿಯಾದವ, ಗೋವಿಂದನ್. ಅವನದೇ ತಾಣವಾದ, ವೇಙ್ಗಡಮ್ = ತಿರುಪತಿಯನ್ನು ಶೇರ್ = ಸೇರಿರುವ, ಅಮ್ ತೂವಿ = ಸುಂದರ ಹಾಗೂ ಧವಳ ಪಕ್ಷಗಳುಳ್ಳ, ಪೇಡೈ ಅನ್ನಾಲ್ = ಹೆಣ್ಣು ಹಂಸಿಯಂತೆ ಮನೋಜ್ಞೆಯಾದ ನನ್ನೀ ಇನಿಯಳ. ಕಣ್‌ಗಳ್, ಆಯ = ಕಣ್ಣುಗಳೇ ಆಗಿರುವ, ತುಣ್ಬೈಮಲರ್ = ಜೋಡಿ ಹೂವಿನ, ಪಾರಿಪ್ಪು = ಭಾವನಾ ವ್ಯಾಪ್ತಿ! ಕಾವಿಯುಮ್ = ಆ ರಕ್ತ ಸೌಗಂಧಿಕಾಪುಷ್ಪವನ್ನೂ, ನೀಲಮುಮ್ = ನೀಲೋತ್ಪಲವನ್ನೂ, ವೇಲುಮ್ = ಹಾಯುವ ಈಟಿಯನ್ನೂ, ಕಯಲುಮ್ = ಫಳ್ ಫಳ್ ಹಾರುವ ಮೀನನ್ನೂ, ಇಷ್ಟೇ ಅಲ್ಲದೆ ಇನ್ನೂ, ಪಲಪಲ ಅನೇಕ ವಸ್ತುಗಳನ್ನೂ. ವೆನ್ನು = ಗೆದ್ದು, ಪ್ರಸರಿಸುತ್ತಲೇ ಇರುವುದು! ಇಂತಹ ನನ್ನ ಪ್ರಾಣವಲ್ಲಭೆಯ ಈ ಕಣ್ಣಿಗೆ, ಅವಿಯಿನ್ ತನ್ನೈ = ನನ್ನೀ ಪ್ರಾಣಸ್ಥೈರ್ಯವೂ ಸಹ ಅಳವಲ್ಲ = ಸರಿಸಾಟಿಯಾದುದಲ್ಲ! ತಿಮ್ಮಪ್ಪನಿರುವ ಗಿರಿಯನ್ನು ಪೂರಾ ತಮ್ಮ ಭಾವನಾತಿಶಯದ ಬಲದಿಂದ ಕಬಳಿಸಿರುವ, ಈ ನಮ್ಮಾಳ್ವಾರರಿಗೆ ಅದೇ ಶ್ರೀ ಗಿರಿನಿವಾಸಿಯಾದ ಶ್ರೀನಿವಾಸನನ್ನೂ, ತಮ್ಮ ಪರಭಕ್ತ್ಯಾದಿಗಳಿಗೆ, ವಿಷಯವಾಗಿಸಿ ನುಂಗುವುದೇನು ತಾನೇ ಹೆಚ್ಚು! ದೇವರಿಗಿಂತಲೂ ಹಿರಿಹಿರಿದಾದ ದರ್ಶನೋತ್ಕಂಠೆ ಈ ಆಳ್ವಾರರದು. ಆದುದರಿಂದಲೇ, ಸರ್ವೇಶ್ವರನಿಗಿಂತಲೂ ಸರ್ವಶರಣರೇ ಶ್ರೇಷ್ಠತಮರು! ಈ ಗುರುಮಾಧುರ್ಯ ದೇವರನ್ನು ಒಪ್ಪದವರಿಗೂ ಸಿಹಿಸುವುದು! ಶರಣರ ಜ್ಞಾನ ವಿಕಾಸ ಪ್ರಾಕೃತವಲ್ಲ. ದಿವ್ಯವನ್ನೂ ಒಪ್ಪದವರಿಗೂ ಸಿಹಿಸುವುದು. ದಿವ್ಯಕ್ಕೂ ಮೀರಿದುದೇ ಶರಣರ ಭಾವನಾ ಬಲ! ಹೆಣ್ಣು ಹಂಸಿಯ ಪ್ರಸ್ತಾಪದಿಂದ, ಕೇವಲ ತಿರುಪತಿಯೊಂದೇ ಅಲ್ಲ. ಪರಮ ಸಾತ್ವಿಕೆಯೂ, ಸ್ವಾಮಿ ಪರತಂತ್ರಳೂ ಆದ ಪದ್ಮಾವತಿ ತಿರಚ್ಚಾನೂರ್ ಅಮ್ಮ! ''ಅಲರ್ ಮೇಲ್ ಮಂಗೈ''ಗೂ ಈ ಶರಣರ ಮೇಲಿನ, ವಾತ್ಸಲ್ಯ ಸೂಚಿತವಾಗುತ್ತದೆ. ಧವಳ ಪಕ್ಷದ ಪಕ್ಷಿ ಎನ್ನುವುದರಿಂದ, ಆಳ್ವಾರ್, ಪರಮಸಾತ್ವಿಕರೂ, ಜ್ಞಾನ, ಸದಾಚಾರಗಳೆಂಬ ಉಭಯ ರೆಕ್ಕೆಯುಳ್ಳ, ತ್ವರಾ ವೇಗ ಸಂಪನ್ನರೆಂಬುದೂ ಧ್ವನಿತ! ಜೋಡಿ ಕಣ್ಣಿನ ಪ್ರಸಂಗ, ದಿವ್ಯದಂಪತಿಗಳಿಗೂ, ''ಶಠಕೋಪದರ್ಶನ'' ಮಾನ್ಯತಮವೆನ್ನುವುದನ್ನು ದೃಢೀಕರಿಸುತ್ತದೆ.

ತಮಿಳ್ ತಿರಳ್ ೮೧

ಉರುಹಿನ್ನ ಕನ್‌ಮಙ್ಗಳ್ ಮೇಲನ ವೋರ್‌ಪ್ಪಿಲರಾಯ್, ಇವಳ್ಗೆ
ಪೆರುಹಿನ್ನ ತಾಯರ್ ಮೆಯ್ ನೊನ್ದು ಪೆರಾರ್‌ಕೊಲ್, ತುಳಾಯ್ ಕುಳಲ್‌ವಾಯ್
ತುರುಹಿನ್ನಿಲರ್ ತೊಲ್ಲೈ ವೇಙ್ಗಡ ಮಾಟ್ಬವುಮ್ ಶೂಳ್ ಕಿನ್ನಿಲರ್
ಇರುಹಿನ್ನದಾಲ್ ಇವಳಾಹಮ್ ಮೆಲ್ಲಾವಿ ಯೆರಿಕೊಳ್ಳವೇ

ಕನ್ನಡ ನೆರಳ್

ಸಡಗರದಿಂ ಗೈ ಮಾಳ್ಕೆಗಳ್ ಮೇಲ್ ಅಲ್ಲಾ! ಕಾರಣಮರಿಯದೆ ಇವಳಂ
ಹಡೆದಿಹ ಜನನೀ ಮೈ ಬೇನೆಯನಿನಿತೂ ಪೆತ್ತಿಲರೋ! - ತೊಳಸಿಯಂ ತುರುಬೊಳ್
ಇಡುವುದೂ ಇಲ್ಲಾ! ಪ್ರಾಕ್ತನವಧುನಾತನ ವೇಂಕಟಕೊಯ್ಯಲ್ ಚಿಂತಿಸಿಯಿಲ್ಲಾ!
ಉಡುಗುಗೆ ಯಿವಳ್ ಮೈ! ಮೆಲ್ಲುಸಿರ್ ಉರಿಗೊಳ್ಳುತಿದೆ ಹಾ!

ಪ್ರಾಣನಾಥನ ಬಾಹ್ಯವಿರಹ ವೇದನೆ ತಾಳಲಾರದೆ, ಈ ವಕುಳಾಭರಣ ಭಾರ್ಯೆಗೆ ಮೂರ್ಛೆ ಬರುತ್ತದೆ! ತಾಯಿಗೆ ಸಹಿಸಲಾರದಷ್ಟು ದುಃಖ! ಪಕ್ಕದ ನೆರೆಹೊರೆಯವರನ್ನು ಕುರಿತು ಈ ಮೋಹಾವಸ್ಥೆ ನೀಗಿ, ತಿಳಿಮೆ ಹೊಂದಿ ನನ್ನೀ ಮಗಳು ಆರೋಗ್ಯವಾಗಿರಲು ಏನು ಚಿಕಿತ್ಸೆ? ಎಂದು ಕೇಳುತ್ತಾಳೆ. ಅವರು ಏನೇನೋ ಅವರವರಿಗೆ ತೋಚಿದಂತೆ ಲೌಕಿಕ ಉಪಚಾರ ಪದ್ಧತಿಗಳನ್ನು ಸೂಚಿಸುತ್ತಾರೆ.

ತಾಯಿ, ಹೇಗಾದರೂ ಸರಿ ಮಗಳು ಸ್ವಸ್ಥಳಾದರೆ ಸಾಕು! ಎಂಬ ಕರುಳಿನ ವ್ಯಾಮೋಹದಿಂದ, ಅವರಿವರು ಹೇಳಿದಂತೆಲ್ಲಾ ಕುಣಿಯುತ್ತಾಳೆ. ಚಿಕ್ಕಂದಿನಿಂದಲೂ ತಾಯಿಗಿಂತ ಹತ್ತಿರದ ಪರಿಚಯ ಸಂಪನ್ನೆ ಅಳ್ವಾರರ ಸಖಿಯಾದವಳು ಆಗ ತಾಯಿಯನ್ನು ಕುರಿತು ಹೇಳುವ ಮಾತು. ನಿಮ್ಮ ಮಗಳ ಖಾಯಿಲೆ ಬರೀ ಹೊರದೇಹದ್ದಲ್ಲ. ಇದು **"ದಿವ್ಯ ಅಂತರ್ ಮನೋವ್ಯಾಧಿ"**. ಸೂಲಿನ ಅಧಿ. ಮಕ್ಕಳ ಶಾರೀರಕ ಸೇವೆಯಿಂದ ಮಾತ್ರ ಮುದ್ದು ಮಾಡುವ ತಾಯಂದಿರಿಗಿಂತಲೂ ಸಮೀಪತರರಾದವರು, ಮನಸ್ಸಿಗೆ ಆತ್ಮಕ್ಕೆ ಹತ್ತಿರರಾಗಿರುವವರು, ಗೆಣೆ - ಗೆಳತಿಯರೇ!

ಮೆಲ್ = ಈಕೆಯ ಅತಿಮೃದುವಾದ, ಅವಿ = ಮುಖ್ಯಪ್ರಾಣ ವಾದ ಜೀವಾತ್ಮನ ಜತೆಗೇ ದೇಹಪಾತದವರಿಗೂ ಅಖಂಡ ಉಸಿರಾಡುತ್ತಿರುವ ಇವಳ ಈ ಪ್ರಾಣ, ಎರಿಕೊಳ್ಳ = ಸಾಕಾರ ಭಗವಂತನ ವಿರಹಾಗ್ನಿ ಹತ್ತಿಕೊಂಡಿರುವಂತೆ, ಇವಳ್ = ನನ್ನ ಬಳಿ ಯಾವೊತ್ತೂ ಮರೆಮಾಚದ ಈ ನನ್ನ ಗೆಳತಿಯ, ಅಹಂ = ಆತ್ಮನಿಗೆ "ಇದು ನನ್ನ ಮನೆ" ಎಂಬ ಈ ಭೋಗಾssಯತನವಾದ ಒಡಲು, ಇರುಹಿನ್ನದು = ಶಿಥಿಲಗೊಳ್ಳುತ್ತಿದೆ. ಓರ್ಪು = ಸರಿಯಾದ ಕಾರಣ ಜಿಜ್ಞಾಸೆ, ಇಲರಾಯ್ = ಗೈಯ್ಯದೆ, ಉರುಹಿನ್ನ = ಕೇವಲ ಪ್ರಿಯಪರರಾಗಿ ತೋಚಿ ತೋಚಿದ ಅವರಿವರು ಹೇಳುವ, ಕನ್‌ಮಜ್ಗಳ್ = ಪ್ರಯೋಗಾತ್ಮಕವಾದೀ ಉಪಚಾರ ಪದ್ಧತಿಗಳು. ಮೇಲ್ ಅನ = ಒಳ್ಳೆಯವಲ್ಲ! ಇವುಗಳಿಂದ ನಿಮ್ಮ ಮಗಳ ರೋಗ ಇನ್ನೂ ಜಾಸ್ತಿಯಾಗುತ್ತದೆ! ಹೊಸ ಹೊಸ ನಾನಾ ಕೆಟ್ಟ ಪರಿಣಾಮಗಳಿಗೇ ದಾರಿಯಾಗಿ ಬಿಡುತ್ತವೆ. ನಿಜವಾದ ಅರ್ಥದಲ್ಲಿ ಇವಳ ಭೂಮಿಕೆಯನ್ನು ಮೊದಲು ತಿಳಿದುಕೊಳ್ಳಿರಮ್ಮಾ! ಹಾಗಾದಲ್ಲಿ ಏನು ಮಾಡಬೇಕು! ಹೇಳಿ. ಎಂದು ಮತ್ತೆ ಕೇಳುತ್ತಾಳೆ, ತಾಯಿ. ತುಳಾಯ್ = ತುಳಸೀ ದಳಗಳನ್ನು, ಕುಳಲ್ ವಾಯ್ = ಅಂತರ್ ರುಗ್ಣಳಾಗಿ ಜ್ಞಾನ ತಪ್ಪಿರುವ ಇವಳ ತುರುಬಿಗೆ, ತುರುಹಿನ್ನಿಲರ್ = ಏರಿಸಿಡಿ, ಎಂದರೂ, ಅದರಲ್ಲಿ ನಂಬಿಕೆಯಿಲ್ಲದ ತಾಯಂದಿರಾದ ನೀವು, ನನ್ನ ಹಿತದ ಮಾತಿನಂತೆ ನಡೆಸುತ್ತಿಲ್ಲ! ಮತ್ತೂ, ತೊಲ್ನೆ = ಶೀಘ್ರವಾಗಿ, ಅಥವಾ ಅತಿ ಪುರಾತನವೂ ನವೀನ ತಮವೂ ಅದ ಸನಾತನ ಕ್ಷೇತ್ರವಾದ ವೇಜ್ಗಡಮ್ ನಡೆಸುತ್ತಿಲ್ಲ! ಮತ್ತೂ, ತೊಲ್ನೆ = ಶೀಘ್ರವಾಗಿ, ಅಥವಾ ಅತಿ ಪುರಾತನವೂ ನವೀನ ತಮವೂ ಅದ ಸನಾತನ ಕ್ಷೇತ್ರವಾದ ವೇಜ್ಗಡಮ್ = ತಿರುಮಲೆಗೆ! ಅಟ್ಟವುವಮ್ = ಈಕೆಯನ್ನು ಒಯ್ಯಲೂ ಸಹ, ಶೂಳ್‌ಕಿನ್ನಿಲರ್ = ರೋಗನಿದಾನದ ಚಿಂತನೆ ಮಾಡುತ್ತಿಲ್ಲ. ರೋಗ ಇಂಥದೇ ಎಂಬುದನ್ನು ಯಥಾರ್ಥವಾಗಿ ಗುರುತಿಸದೆ, "ಡಯಾಗ್ನೈಸ್" ಮಾಡದೇ ಇರುವಿರಲ್ಲಾ, ಅಲ್ = ಅಯ್ಯೋ! ಏನೇನೋ ಮಾಡುತ್ತಿರುವಿರಲ್ಲಾ! ತಾಯರ್ = ಈ ತಾಯಿ ಇವಳನ್ನು, ಪೆರುಹಿನ್ನ = ಹೆತ್ತಾಗ, ಮೆಯ್‌ನೊನ್ದು = ಪ್ರಸೂತಿವೇದನೆ ಹೊಂದಿ, ಪೆರಾರ್ ಕೊಲ್ = ಹಡೆದಿಲ್ಲವೇನೋ! ಹೆತ್ತ ನೋವು ತಿಳಿದಿದ್ದರೆ ಖಂಡಿತ ಈ ಅನುಚಿತ ಉಪಚಾರ ಎಸಗುತ್ತಿರಲಿಲ್ಲ! ರೋಗಿಗಳ ಒಳ ಸ್ವಭಾವಕ್ಕೆ ಹೊಂದುವಂತಹ ಚಿಕಿತ್ಸೆಯೇ ಕಾರ್ಯಕಾರಿ. **"ಮನ, ಆತ್ಮಗಳನ್ನು ಮರೆತ, ಕೇವಲ ದೈಹಿಕ ಚಿಕಿತ್ಸಾ ಪದ್ಧತಿ ಬೇಡ"**.

ನಮ್ಮಾಳ್ವಾರ್

ಪೆರಿಯ ತಿರುವನ್ದಾದಿ

ಕೇವಲ ಭಗವಂತನ ಕೃಪೆಯೊಂದರಿಂದಲೇ ಆ ಭಗವಂತನನ್ನು 'ಜ್ಞಾನಮಯ ಪ್ರೇಮಮಯ ಸಂಪೂರ್ಣ ಶರಣಾಗತಿ ದೃಷ್ಟಿಯಿಂದ ಕಾಣುತ್ತಿರುವ' ಈ ನಮ್ಮಾಳ್ವಾರ್ ಎಂದು ಪ್ರಥಿತರಾದ, ಮಾರಪ್ಪನ ಮಗ ತಮ್ಮ ಮೊಟ್ಟಮೊದಲ "ಸಿರಿವೃತ್ತ" ಎಂಬ ಸ್ವಾನುಭವದ ಅಂತಸ್ಸಂವೇದನಗಳನ್ನು ತೋಡಿ ತೋಡಿ! ಪ್ರಾರ್ಥಿಸಿದಂತೆ, ಅವರಿಗಾಗಲೀ ಅವರ ಸಂಬಂಧಿ-ಸಂಬಂಧಿಗಳಿಗಾಗಲೀ, ಒಡನೆಯೇ ಏಕೆ, ಈ ಮಾಯಾ ಪ್ರಪಂಚ ನಿವೃತ್ತಿಯನ್ನಾಗಲೀ, ನಿತ್ಯಕೈಂಕರ್ಯವನ್ನಾಗಲೀ ಕರುಣಿಸಲಿಲ್ಲ? ಇದಕ್ಕೆ ಕಾರಣವಿಷ್ಟೆ! ಈ ಶರಣಕುಲಕ್ಕೇ ಮೂಲಪುರುಷರಾದ ಇವರ ಮೂಲಕ, ಲೋಕಕಲ್ಯಾಣವಾಗುವಂತೆ, ಇನ್ನೂ ಹಲವಾರು ದಿವ್ಯಪ್ರಬಂಧಗಳನ್ನು ತಾನೂ ತನ್ನ ದಿವ್ಯ ಮಹಿಷೀ ಪರಿವಾರ ವರ್ಗವೆಲ್ಲವೂ, ಕಿವಿಗಿಂಪಣವಾದ "ಶೆಮ್ ಶೊಲ್" ಸುಂದರ ಚೇತೋಹಾರಿ ವಾಙ್ಮಯಗಳ ರಸಾನುಭವಕ್ಕಾಗಿಯೂ, ಆ ಅತಿ ಭೌತಿಕ ಒಡಲಿನೊಡನೇ ಸ್ವಾಮಿ ಇಷ್ಟಪಟ್ಟೇ ಇಟ್ಟಿದ್ದ! ಅಂತೆಯೇ **"ಶರಣಧರ್ಮದಲ್ಲಿ, ಶರಣರ ಆ ದೇಹಕ್ಕೂ ಬಲು ಪ್ರಾಧಾನ್ಯವಿರುವುದು!"**

ಎರಡನೆಯ ಇವರ ಕೃಪಾಕೃತಿ - ಅರುಳಿಚ್ಚೆಯಲ್ - ಆದ "ತಿರುವಾಶಿರಿಯಮ್" ಎ ಂಬುದರಲ್ಲಿ, ಮಹದೇವ ತನ್ನ ಒಂದು ಬಗೆಯ, ವಿರಾಟ್ ವಿಶ್ವರೂಪ ತೋರಿಸಲಾಗಿ, ಅದರಲ್ಲಿ, ಶಬ್ದರೂಪವಾಗಿ "ತಿರುಪತಿ ತಿಮ್ಮಪ್ಪ"ನ ಉಲ್ಲೇಖ ಮಾಡಿರುವುದು, ನಮ್ಮಂತಹವರ ಸ್ಥೂಲಮನಸ್ಸಿಗೆ ಕಾಣದಿರುವುದರಿಂದ, ಮೂರನೆಯ ರಚನೆಯಾದ ಈ "ಪೆರಿಯ ಸಿರಿಯನ್ತಾದಿ" "ಪೆರಿಯ ತಿರವಂದಾದಿ"ಯಲ್ಲಿ ವೆಂಕಟಾಚಲಪತಿಯ ಸ್ವರೂಪ-ರೂಪ ಗುಣಗಳ ಅನುಭವವನ್ನೂ, ಆಳ್ವಾರರ ಸಿರಿಚಿತ್ತದ ಮೂಲಕ ಕರುಣಿಸಿದ್ದಾನೆ. ಇದರಿಂದ ಬಲು ಉತ್ಸಾಹಗೊಂಡು ಈಶ್ವರೀ ಕಲ್ಯಾಣ ಗುಣಗಳನ್ನೇ, ತಮ್ಮ ಈ ಸಾಹಿತ್ಯದಲ್ಲಿ ಹುದುಗಿಸಿದ್ದಾರೆ. ಅವುಗಳ ಮೇಲ್‌ಪಂಕ್ತಿಯನ್ನೇ ನಾವೂ ಅನುಸರಿಸಿ "ಗುಣ್ಯೆಕ ಕಥನ"ಕ್ಕೇ ಮುಡುಪಾದ ಜೀವನ ಕಲೆಗೇ ತಮ್ಮ ಆದೇಶ ನೀಡಿದ್ದಾರೆ! ತಮಗಿಂತ ತಮ್ಮ ಮನಸ್ಸೇ ಮುಂದೋಡುವ ಉತ್ಸಾಹ ತುಂಬಿಕೊಂಡಿದೆ! **"ಇಳ ಬಾರಿ, ತಮ್ಮ "ಉನ್‌ಮನೀ" ಚಿತ್ತವನ್ನೇ ಕುರಿತು, ಆಳ್ವಾರ್ ಇಲ್ಲಿ ಹಾಡಿರುವುದು ಬಲು ರಮಣೀಯ!"**

ತಿರುಪತಿಗೆ ಸಂಬಂಧಪಟ್ಟದ್ದಾಗಿ ಒಂದು ರೀತಿಯಲ್ಲಿ ನಾವು ಅನುಭವಿಸಬಹುದು. ನಿಜಕ್ಕೂ ಸಂತರ ಮನ ಮಾನವಾಗೋಚರ! ಹೆಚ್ಚು ಕಲ್ಲು ಬಂಡೆಗಳನ್ನೇ ಉಳ್ಳ ತಿರುಮಲೆ ಬೆಟ್ಟವನ್ನೂ ಬಿಟ್ಟು ನನ್ನೋರ್ವನ ಮಾನಸ ಪೀಠದಲ್ಲೇ ತಂಗಿಯೇ ಬಿಟ್ಟಿರುವುದು, ನನಗಿದೆಂತಹ ಮಹಾ ಪಾಪ! "ನನ್ನೀ ಹೊಗಳು ಅತನ ತೆಗಳೇ ಆದೀತು!" ಈ ಹಿರಿ ಮನಸ್ಸಿನಿಂದ ಉತ್‌ಸ್ಫೂರ್ತವಾದ ಈ ಕೃತಿಯ ಹಿರಿತನವೇನೆಂಬುದನ್ನು ಅವರೇ ಸ್ಫುಟಗೊಳಿಸಿದ್ದಾರೆ. "ಲೋಕೋತ್ತರ, ಆದರೂ ಲೋಕಾಭಿಮುಖ ಕಾರುಣ್ಯಪೂರ್ಣ"ರಾದ ಆಳ್ವಾರ್‌ಗಳ ಶ್ರೀ ಚಿತ್ತಕ್ಕೇ ಇವು ಮುತ್ತಲು ಯಾತ್ರಾಸ್ಥಳಗಳೇ ಸರಿಯಾದ ಸ್ಥಳಗಳೆಂಬುದೇ ಇಲ್ಲಿನ, ಗುಣ್ಯೆಕ ಗ್ರಹಣ ರಹಸ್ಯ. ಯದ್ಯಪಿ ಹೊರನೋಟಕ್ಕೆ ಪುಣ್ಯಕ್ಷೇತ್ರಗಳಲ್ಲೂ, ಅನುಚಿತವಾದ, ಮಾನವ ಚಿತ್ತ ನಾನಾ ಹೊಲಸು ಬಗೆಗಳಿಂದ ಕೆಲಸಮಾಡುತ್ತಿರುವಂತೆ ಕಾಣಬಹುದು. ಟೀಕಾಕಾರರು ಸತ್ಯವಂತರಾದ, ವೀಕ್ಷಕ ವಿಮರ್ಶಕರೇ ಆದರೂ ಅವರ ಮಾತುಗಳಿಂದ ತಿದ್ದಿಕೊಳ್ಳಬೇಕಾದುದೂ ಇದೆ. ಈ ತಿದ್ದುಪಾಡು, ಸಂಪೂರ್ಣ ಕರುಣ ಪ್ರೇಮಮಯ ಕ್ರಾಂತಿಯಿಂದ, ಎಲ್ಲರ ಮನಃ ಪರಿವರ್ತನೆಯಿಂದಾಗಬೇಕಾದುದೇ ವಿಹಿತ! ಹಂಸಕ್ಷೀರ ನ್ಯಾಯದಿಂದ, ಸಾಮಾನ್ಯ ಜನ ಹಾಗೆಯೇ ಇದ್ದಾರೆ. ಅದರ ದುರುಪಯೋಗ ಹಾಗೂ ನಿಷೇಧ ಎರಡೂ ಬೇಡ. ಆ ರೀತಿ ರಚನಾತ್ಮಕವಾಗಿ ಇಡೀ ವಿಶ್ವಮಾನವರೆಲ್ಲರೂ, "ಅನಿಂದಾವ್ರತ" ಧಾರಿಗಳಾಗಿ ನಾವು ನಾವೇ "ಅತಿ ಮಾನಸ" ಭೂಮಿಕೆಗೆ ಏರೋಣ. ಎಲ್ಲೆಲ್ಲೂ ನಮ್ಮದು "ಶುಭ ಸಂದರ್ಶನ"ದಿಂದಲೇ ಆರಂಭವಾಗಲಿ. ಬಹಿಷ್ಕಾರವೊಂದೇ ಕಾರ್ಯಕಾರಿಯಾಗದು. ಏಕೆಂದರೆ, ಯಾತ್ರಾ ಸ್ಥಳಗಳು ಕೆಡುವುದಕ್ಕೂ, ನಾವೆಲ್ಲ ಬಾಧ್ಯರೇ! ಈ ಸ್ವದೋಷದ ಸಹಜ ಅರಿವೂ, ನಮ್ಮ ಜವಾಬ್ದಾರಿಯೂ, ಈ ಸ್ವತಂತ್ರ ಯುಗದ ಸತ್‌ಪ್ರಜೆಗಳಿಗಂತೂ ಅತ್ಯನಿವಾರ್ಯ. ಆದುದರಿಂದ ಇಂತಹ ಶರಣರನ್ನು, ಸರಿಯಾಗಿ, ಸಮಗ್ರವಾಗಿ ಅರ್ಥಮಾಡಿಕೊಂಡರೆ, **"ಯಾತ್ರಾ ಧಾಮಗಳ ಪೂರ್ತಿ"** ಎನ್ನುವ ಗುಟ್ಟನ್ನೂ ಗಮನಿಸುವಾ! ಕೇವಲ ಮಾನವನ ಪ್ರವೃತ್ತಿ ನಿವೃತ್ತಿ ಶಕ್ತಿಗಿಂತ ಮೇಲಾದ, ಬಲುಕಾಲದ, ಬಹುಜನರ ಪುಣ್ಯಪುಂಜದ ಅಗೋಚರ ವಾತಾವರಣ ದೇವಾಲಯ,

ಮಸೀದಿ, ಚರ್ಚು, ಬಸ್ತಿ ಗುರುದ್ವಾರ, ನಾಮಘರ್, ಮುಂತಾದ ಪವಿತ್ರಸ್ಥಾನಗಳಲ್ಲಿದೆ. ಸ್ವತಃ ಕರುಣಾಳುವೇ ಸರ್ವಸಹನಾಗಿರುವಾಗ, ನಾವೂ ನಮ್ಮ ಚಿಂತನೆ, ತಾಳ್ಮೆಯನ್ನು ಕಳೆದುಕೊಳ್ಳಬಾರದಷ್ಟೆ! **"ಸಾನ್ನಿಧ್ಯ ವಿಶೇಷಗಳಿಂದ ಕೂಡಿದ ಕ್ಷೇತ್ರಮಹಿಮೆಗಳನ್ನು, ಯಾರೂ ಅಲ್ಲಗಳೆಯಬಾರದು!"**

ತಮಿಳ್ ತಿರಳ್ ೬೮

ಕಲ್ಲುಮ್ ಕನೈಕಡಲುಮ್ ವೈಹುನ್ದ ವಾನಾಡುಮ್ ಪುಲ್ಲೆನ್ನೊಳಿನ್ದನ ಕೊಲ್ ಏಪಾವಮ್! - ವೆಲ್ಲ
ನೆಡಿಯಾನ್ ನಿರ್ಗ್ಯಕ್ಕರಿಯಾನ್ ಉಳ್ಪುಹುನ್ದು ನೀಜ್ಞಾನ್! ಅಡಿಯೇನದುಳ್ಳತ್ತಹಮ್

ಕನ್ನಡ ನೆರಳ್

ಕಲ್ಲೂ ಉಲಿಗಡಲೂ ವೈಕುಂಠವು ಎಂಬಾssಬಾನ್ ನಾಡೂ ಹುಲ್ಲೇ ಬೆಳದ್ ಹೋದವೋ! ಏನಿದು ಪಾಪದ ವಿಧಿಯೋ! ಮೇಲೂ ಒಡೆಯನು ಬಣ್ಣದಿ ಕರಿಕಣ್ಣನು ಒಳಗೊಳಗೂ ಹೊಕ್ಕೇ ನೀಗನಲಾ! ಅಡಿದಾಸನ ಮನದೊಳ ಮನೆಯವನು!

ಈ ಹಿಂದಿನ ನಾಲ್ವರು ಆಳ್ವಾರ್‌ಗಳ, ನಾಲ್ಕೂ ತಿರುವನ್ದಾದಿಗಳನ್ನೂ, ತಿರು ವಿರುತ್ತಮ್, ತಿರುವಾಶಿರಿಯಂ ಎಂಬ ಮಹಾಛಂದಸ್ಸಿನಲ್ಲಿ ಹೊಮ್ಮಿಸಿರುವ ನಮ್ಮಾಳ್ವಾರ್, ಈ ಹಿರಿ ಸಿರಿಯನ್ತ್ಯಾದಿಯನ್ನೂ, ಒಂದು ದೃಷ್ಟಿಯಿಂದ, ನಾಥಮುನಿ "ಇಯಲ್‌ಪಾ" ಎಂಬ ಪ್ರಬಂಧದಲ್ಲಿ ಇಟ್ಟಿದ್ದಾರಷ್ಟೆ. ಏನದು ದೃಷ್ಟಿ? ಒಂದೊಂದು ಗೀತವೂ, ಸ್ವಯಮೇವ ಒಂದೊಂದು ಅರ್ಥಭಾವಗಳನ್ನು ತಿಳಿಸುವಂಥದು. ಪೂರ್ವಾಪರಗಳ ಸಾಂಗತ್ಯಗಳನ್ನೂ ಗಮನಿಸಿ ಹಿರಿಯರು ವ್ಯಾಖಾನಿಸಿಯೂ ಇದ್ದಾರೆ. ಇವೆಲ್ಲಾ, ಬಿಡಿ ಬಿಡಿಯಾಗಿ, ನಮ್ಮ ಅಧ್ಯಯನಕ್ಕೆ ವಿಷಯವಾದರೂ "ಮೊದಲ್ ಆಯಿರಂ" "ಪೆರಿಯತಿರುಮೊಳಿ" "ತಿರುವಾಯ್ ಮೊಳಿ"ಗಳಂತೆ ದಶಕ ದಶಕಗಳಾಗಿ ಹೊಮ್ಮಿಬಂದಿಲ್ಲ "ಇಯಲ್ಪಾ"! ಇದೊಂದು, ಪ್ರಕೀರ್ಣ ಸಹಜ ವಾಙ್ಮಯವೂ ಆಗಬಹುದು.

ಇಲ್ಲಿ ಮೇಲ್ ಕಾಣಿಸಿರುವ ಮೂರು ಸಾವಿರಗಳಲ್ಲಿ, ರಚನೆ, "ಇಯಲ್‌ಪಾ" ಗಿಂತ ಭಿನ್ನರೀತಿಯದು. ಒಂದೇ ಭಾವಕ್ಕೆ ಪುಷ್ಪಿಕೊಡುವ ಬೇರೆ ೯, ೯ ಹಾಡುಗಳು, ಕೆಲವೆಡೆ ೧೦ ಹಾಡುಗಳೂ, ಒಂದೆರಡೆಡೆ ೧೨, ೧೩, ಹಾಡುಗಳೂ ಹಬ್ಬಿಕೊಂಡಿವೆ. ಅವು ಅಂತ್ಯಾದಿಯ ರೂಪದಲ್ಲೂ ಇಲ್ಲ. ಪ್ರಸಂಗಾತ್ ಇದೊಂದು ಸ್ಥೂಲ ಉಪಪತ್ತಿಯಷ್ಟೆ. ಸದಾಚಾರ್ಯರುಗಳಿಂದ ಇನ್ನೂ ರಹಸ್ಯಾಂಶಗಳನ್ನು ನಾವು ತಿಳಿದುಕೊಳ್ಳಬೇಕಾದುದಿದೆ. "ದೀರ್ಘಕಾಲ ನೈರಂತರ್ಯ ಸತ್ಕಾರಾssಸೇವಿತಃ ದೃಢಭೂಮಿಃ" ಸತ್ಕಾರ ಎಂದರೆ ಅದಮ್ಯವಾದ ಆದರ ಇದರ ವಿವರಣೆ, ಮಹರ್ಷಿ ಪತಂಜಲಿಯ ಸುವರ್ಣಸೂತ್ರದಂತೆ ಸತ್ ಸಂಪ್ರದಾಯದಲ್ಲಿ "ಚಿರೋಪಾಸಿತ ಸದ್‌ವೃದ್ಧರು" ಎಂದು ವಿಕಸಿತವಾಗಿದೆ. ಶ್ರೀರಾಮನನ್ನೂ ವಾಲ್ಮೀಕಿ "ಬಹುಶ್ರುತಾನಾಂ ವೃದ್ಧಾನಾಂ ಬ್ರಾಹ್ಮಣಾನಾಂ ಉಪಾಸಿತಾ" ಎನ್ನುತ್ತಾರೆ. ಒರಟುತನ ಸೋಂಕದ, ಬ್ರಹ್ಮಾssಹಾರಿ 'ಬ್ರಹ್ಮ + ಅನ' ಪ್ರಾಣನೇ = ಬ್ರಾಹ್ಮಣ. "ಅಲೂಕ್ಷಾಃ ಧರ್ಮಕಾಮಾಃ". **"ಲೋಕಾಭ್ಯುದಯಕ್ಕಾಗಿಯೇ, ತಮ್ಮ ಸರ್ವಸ್ವವನ್ನೂ ತೇಯುವವರೇ ತಪಸ್ವಿಗಳು. ಬ್ರಾಹ್ಮಣಸ್ಯ ಹಿ ದೇಹೋಯಂ ನ ಕಾಮಾರ್ಥಾಯ ಕರ್ಹಿಚಿತ್ ಅಪಿತು ಕ್ಲೇಶತಪಸೇ! ಲೋಕಾಭ್ಯುದಯ ಹೇತವೇ".**

ಕಲ್ಲುಮ್ = ಶಿಲಾಮಯವಾದ, ಅಂತೆಯೇ ದೃಢಪ್ರದೇಶವಾದ ಶ್ರೀ ವೇಂಕಟಾದ್ರಿಯನ್ನೂ, ಕನೈ = ಭೋರ್ಗರೆಯುವ, ಪಾಲ್ ಕಡಲುಮ್ = ಪಯೋನಿಧಿಯನ್ನೂ, ವೈಹುನ್ದಮ್ = ಯಾವೊಂದು ಬಗೆಯ ಕುಂದುಕೊರತೆಯಿಲ್ಲದ ಜ್ಯೋತಿರ್‌ಜ್ಞಾನಮಯ, ಶುದ್ಧ ಸತ್ವಮಯ, ಹಾಗೂ ನಿತ್ಯ, ಸತ್ಯ, ಪರಂಧಾಮವನ್ನೂ, ಪುಲ್‌ಎನ್ನು = ತೃಣಸಮಾನವಾಗಿಸಿ, ಒಳಿನ್ದನ ಕೊಲ್ = ಬಿಟ್ಟೇ ಬಿಟ್ಟನೋ? ಏಪಾವಮ್ = ಏನಿದು ಕರುಣಾಳುವಿನ ವಿಶೇಷ ದಯೆ, ಕೃಪಾಕಟಾಕ್ಷ! ಅತ ಇನ್ನೂ ಎಂಥವನು? ವೆಲ್ಲ ನೆಡಿಯಾನ್ = ಮಹೋನ್ನತವಾದ ವ್ಯಕ್ತಿತ್ವ ಸಂಪನ್ನ. ಅತನ ಆ ವ್ಯಕ್ತಿತ್ವ, ಎಲ್ಲದರೊಳಗೂ ಅವನ್ನು ಒಳಗಿನಿಂದ ಹಿಡಿದಿದ್ದು, ಎಲ್ಲಕ್ಕೂ ಹೊರಗಿನಿಂದಲೂ ಆಧಾರಭೂತವಾದುದು. ಇವೆಲ್ಲಾ ಈ ಕೃತಿಯ "ಹಿರಿಮೆ". ಅಂತೆಯೇ ಈ ದಿವ್ಯಪ್ರಬನ್ಧ 'ಹಿರಿಸಿರಿಯನ್ತ್ಯಾದಿ!', ನಿರಮ್ ಕರಿಯಾನ್ = ಅವನ ದಿವ್ಯರೂಪೋ ನೀಲಾತಿನೀಲ. ಮಹಾರಾಷ್ಟ್ರದ ಜ್ಞಾನದೇವಾದಿ ಸಂತರಲ್ಲೂ ಈ ಪ್ರಭಾವ ಹಬ್ಬಿದೆ. ಅಂತಹವನು, ಅಡಿಯೇನದು ಅವನ ಅಹೇತುಕೀ ಪ್ರಸಾದದಿಂದಲೇ ಶೇಷತ್ವ, ಪಾರತಂತ್ರ್ಯಜ್ಞಾನ ಪಡೆದ ಈ ದಾಸನ, ಉಳ್ಳತ್ತು = ಒಳಗಿನ, ಅಹಮ್ = ಹೃದಯ ಗುಹಾ ಗೃಹದಲ್ಲಿ ಅದಕ್ಕೂ, ಉಳ್ ಪುಹುನ್ದು = ಅಂತರತಮನಾಗಿ ಒಳಹೊಕ್ಕು, **"ತಸ್ಯಾಃ ಶಿಖಾಯಾಃ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ** ", ಶ್ರೀವಿದ್ಯುಲ್ಲೇಖಾ ಪ್ರಭಾವಳಿಯೊಳಗೆ, ಹೊಕ್ಕು, ನೀಙ್ಗಾನ್ = ನನ್ನನ್ನು ಬಿಡದೆಯೇ ಘನಿಷ್ಠತಮ ಅಪೃಥಕ್ ಸಿದ್ಧನಾಗಿಯೇ ಗಾಢೋಪಗೂಢನಾಗಿಯೇ ಇದ್ದಾನಲ್ಲಾ!

ಈ ಕಲಿಯುಗದ ಆದ್ಯ ಪ್ರಪನ್ನಜನ ಕೂಟಸ್ಥ ನಮ್ಮಾಳ್ವಾರ್, ಇತರ ಸಾಮಾನ್ಯ ಯೋಗಿಗಳಂತೆ, ತಮ್ಮದೇ ಎಂಬ ಭಾವದ ಅಭ್ಯಾಸ ವೈರಾಗ್ಯಗಳಿಂದ **"ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧಾರಣಾ ಧ್ಯಾನ ಸಮಾಧಿ ಅಷ್ಟಾಂಗ ಯೋಗ ಸಿದ್ಧರಲ್ಲ"**. ಇವಿಷ್ಟರ ಸತ್ ಪರಿಣಾಮವೂ, ಶ್ರಿಯಃಪತಿ ಸರ್ವೇಶ್ವರನ ಅಸಾಧಾರಣ ಕೃಪಾರಶ್ಮಿಯೊಂದರಿಂದಲೇ "ಏಕ್‌ದಮ್" ಸಿದ್ಧಿಸಿದೆ. **"ಶೂನ್ಯ ಸಂಪಾದನೆಯವರಿವರು"**. ಮುಂದಿನ "ಪ್ರಜ್ಞಾ ಧೃತಿಗಳೆಲ್ಲಾ" ಸಿದ್ಧೇಶ್ವರನಿಂದಲೇ ಲಭಿಸಿರುವ ಆರೂಢರು. ಇದನ್ನೇ **"ಸಹಜ ಶ್ರೀ ವೈಷ್ಣವರು"** ಎಂಬ ಅತ್ಯಂತ ವ್ಯಾಪಕವಾದ ಹೆಸರಿನಿಂದ ಕರೆಯುವುದು. **'ಎಲ್ಲ ಶರಣರೂ ಸ್ವಸಾಧ್ಯ ಧರ್ಮಿಗಳಲ್ಲ. ಸಿದ್ಧಧರ್ಮ ಸಿದ್ಧರು!' ಸಿದ್ಧಾsರೂಢರು!**

ದೇವರೇ ಏನೊಂದೂ ಕಾರಣ ಹೇಳಲಾರದಷ್ಟು ಪರಮ ಕರುಣೆಯಿಂದ ಹೇಳಿರುವ ಈ ಹಾಡಿನಲ್ಲಿ ತಾಣಗಳನ್ನೆಲ್ಲಾ "ಬಿಟ್ಟೇ ಬಿಟ್ಟನೋ" ಎಂದು ಹೇಳುವಷ್ಟು, ಸರ್ವತ್ರ ಇರುವ ಸಾಧಾರಣ ಸಾನ್ನಿಧ್ಯಕ್ಕಿಂತ ವಿಶೇಷತಮವಾದ ಸ್ವಯಂ ರುಚಿರ ಸಾನಿಧ್ಯವೆಂಬ ಭಾವ! "ಸಚ ಮಮ ಪ್ರಿಯಃ ಅತ್ಯರ್ಥಮ್" - ಗೀತಾ. ಸರ್ವಜ್ಞನಾದ ನನಗೂ ವಾಚಾಂ ಅಗೋಚರವಾದ ಪ್ರೀತಿ, ಜಾತಿಪಾತಿ ನೋಡದೆ ಈ ಮಾರಪ್ಪನ ಮಣ್ಣಿನಮಗನಲ್ಲಿ ಕಾಣಬಹುದು! ಅಂತೆಯೇ ವಿಶ್ವದ ಎಲ್ಲಾ ಶರಣರನ್ನೂ "ಜಂಗಮ ಯಾತ್ರಾಸ್ಥಳಗಳು" ಎನ್ನುವುದು! ಈ 'ವಕುಳಾsಭರಣ' ದ್ರಾವಿಡ ಬ್ರಹ್ಮರ್ಷಿಯಂತೂ ತಾವು ಜನಿಸಿದ "ಕುರುಹೂರಿ"ನಲ್ಲೇ ಒಂದೇ ಎಡೆ ಏಕಾsಸನ ಸ್ಥಿರಸುಖಿಗಳಾಗಿ ಮೂವತ್ತೆರಡು ವರ್ಷವಿದ್ದು, ಇಂದೂ ಮುಂದೂ ಅರ್ಚಾವತಾರದಲ್ಲಿ, ಸಕಲ ಜನಿಧರ್ಮಿಗಳ ಹೃನ್ಮನದಲ್ಲಿ "ವಿಶ್ವಮಾನುಷ"ರಾಗಿಯೇ ಇರತಕ್ಕವರು. ಇವರ ಭಕ್ತಿಗಂಧ, ಪಗಡೆ ಹೂವಿನಂತೆ, ಎಷ್ಟೆಷ್ಟು ಕಾಲ ಸವೆದು ಒಣಗಿದರೂ ಈ ಬ್ರಹ್ಮತುಳಸೀ ಗಂಧಕ್ಕಿಂತಲೂ ಶ್ರೇಷ್ಠವಾದುದು, ಮೇಲ್ಮೇಲೆ ಹಳಹಳನೆ ಘಮಘಮಿಸುತ್ತಲೇ ಉಭಯ ವಿಭೂತಿಗಳಲ್ಲೂ ವಿರಾಜಿಸುತ್ತಲೇ ಇರುವುದು.



ನಮ್ಮಾಳ್ವಾರ್

ಸಿರಿಬಾಯ್ ನುಡಿ ತಿರುವಾಯ್ ಮೊಳಿ

ಭೂತಂ ಶಿರೋ ಹ್ರದ ಮಹಾಹ್ವಯಮಕ್ಷಿಯುಗ್ಮಂ ಭಟ್ಟಾರ್ಯ ಮಾಸ್ಯಮಥ ಭಾರ್ಗವ ಮಸ್ಯ ಕಂಠಮ್|
ಬಾಹೂ ವದನ್ತಿ ಕುಲಶೇಖರ ಯೋಗಿ ವಾಹೌ ದೋರ್ ಮಧ್ಯ ನಾಭಿ ಚರಣಾನ್ ಇತರಾನ್ ಶಠಾರೇಃ||

ಎಂಬೀ ಶ್ಲೋಕದಂತೆ ಉಳಿದ ಆಳ್ವಾರ್‌ಗಳನ್ನೆಲ್ಲಾ ತಮ್ಮ ಅಂಗಾಂಗಗಳನ್ನಾಗಿ ಹೊಂದಿರುವ, ಈ ನಮ್ಮಾಳ್ವಾರ್ ಇಡೀ ಶರಣಕುಲಕ್ಕೇ ಒಂದು ಮಹಾಘಟಕರಾಗಿರುವವರು. ಇಂತಹ ವಿಕವ್ಯಕ್ತಿ ನಿಷ್ಠವಾಗಿ ತೋರುವ ಮಾತುಗಳ ''ಒಳಭಾವ''ವನ್ನು ಮಾನವ ಮನನ ಮಾಡಬೇಕಾದುದು ಮೊಟ್ಟಮೊದಲ ಜವಾಬುದಾರಿ. **''ಎಲ್ಲೆಲ್ಲೂ ಒಂದೇ, ಒಂದರಲ್ಲೇ ಎಲ್ಲವೂ'' ''ನರಸಮೂಹದಲ್ಲಿ ನಾರಾಯಣ, ನಾರಾಯಣನಲ್ಲಿ ನರಸಮೂಹ'' ''ಒಂದೇ ಅಣುವಿನಲ್ಲಿ ಸರ್ವವೂ, ಸರ್ವದಲ್ಲೂ ಅದೇ ಅಣು''** ಈ ಮಹಾಪ್ರಮೇಯ, ಅಧ್ಯಾತ್ಮ ಹಾಗೂ ವಿಜ್ಞಾನಗಳ ಸಮೋಭಯ ಉಪಪತ್ತಿ. ಇದನ್ನು ಮರೆತರೆ, ಅಧ್ಯಾತ್ಮ-ವಿಜ್ಞಾನ ಎರಡೂ ಸೋತಂತೆ. ವಸ್ತುನಿಷ್ಠವಾದ ಸತ್ಯವನ್ನು ಭಾವಜ್ಞತೆಯಿಂದಲೂ ವಿಶ್ಲೇಷಿಸಬೇಕಾದುದೇ ''ಪೂರ್ಣಯೋಗ''!

''ಮಮೈವ ಸತ್ಯಮ್, ತವ ನಾಸ್ತಿ ಸತ್ಯಮ್''

ಈ ವ್ಯಾವರ್ತಕ ಮಮಕಾರ ಇನ್ನು ಸಾಕು! ಎಲ್ಲವನ್ನೂ ವಾಸ್ತವವಾಗಿಯೇ ಬುದ್ಧಿ ಹೃದಯಗಳಿಂದಲೂ ಅಲಂಗಿಸಿಕೊಳ್ಳುವ ಔದಾರ್ಯವೇ ಯುಗಧರ್ಮವಾಗಬೇಕು.

''ಅಸ್ಮತ್ ಸರ್ವಗುರುಭ್ಯೋ ನಮಃ'' ''ಣಮೋ ಲೋಹೇ ಸವ್ವಸಾಹೂಣಂ''

ನನಗಿಂತ ಹಿಂದೆಯೂ ದಿವ್ಯಕುಮಾರರಿದ್ದರು, ಅವರದೇ ಮುನ್‌ನಡೆ ವಿಶ್ವದಲ್ಲಿ ವಿಕೇಶ್ವರನ ಅನೇಕ ಪ್ರವಾದಿಗಳು ಆಗಿಹೋಗಿದ್ದಾರೆ. ಈ ಸರ್ವಧರ್ಮ ಸಂಗ್ರಾಹಕ ದೃಷ್ಟಿಯೇ ಪ್ರಪ್ರಥಮ ಜೀವಾಳ! ಇದರ ಆಧಾರದ ಮೇಲೆಯೇ ಎಲ್ಲಾ ನಿಂತಿದೆ.

ಉಳಿದ ಶರಣರ ಭಾವ ಅನುಭಾವಗಳು ಈ ಶರಣರಲ್ಲಿ ಸಮಗ್ರವಾಗಿ ಸ್ಪಷ್ಟವಾಗಿ ಪೂರ್ಣತೆ ಪಡೆದಿದೆ. ಜಗತ್ತಿನ ಅನುಭಾವಿಗಳೆಲ್ಲರ ಸಾಹಿತ್ಯವೂ ಇಂಥದೇ. **''ಈ ಶಠಕೋಪರು ಆಳಕ್ಕೂ ಇಳಿದು ಅಗಲಕ್ಕೂ ಹರಡಿಕೊಳ್ಳುವ ವಿಶ್ವಜನಾನುಮೋದನ ಶೈಲಿಯ ಶಿರೋಮಣಿಗಳು''.** ನಾಸ್ತಿಕರನ್ನೂ ಹಾಗೆಂದು ಕರೆಯರಿವರು. ಅಸ್ತಿತ್ವ, ನಾಸ್ತಿತ್ವ ಉಭಯವೂ ಪರಮಾತ್ಮನ ಇಕ್ಕೆಲದ ಧರ್ಮಗಳು. ಸಾಕಾರ, ನಿರಾಕಾರಗಳೂ ಅಂತೆಯೇ. ನಿಮ್ಮ ದೇವರು ಅಜ ಶಿವಾದಿಗಳಾಗಲೊಲ್ಲರೇ? ಎಂದರೆ ಇಲ್ಲ ಎನ್ನುವವರಲ್ಲ. ಸರ್ವಶಕ್ತ, ಸರ್ವಾತ್ಮ ಏನಾಗಲೊಲ್ಲ? ನಿಮ್ಮ ದೇವರು ಗಂಡೋ ಹೆಣ್ಣೋ? ಗಂಡೂ ಅಲ್ಲ! ಹೆಣ್ಣೂ ಅಲ್ಲ! ನಪುಂಸಕನೂ ಅಲ್ಲ. ಅವನ ಕಲ್ಪನೆ ಎಂದಿಗೂ ಹೀಗೇ ಎಂಬುದನ್ನು ನಾವು ತಿಳಿಯಲಾರೆವು. ಅತನಿಗೇ ತಾನು ಎಷ್ಟೆಂಬ ಅಳತೆ ಸಿಕ್ಕೀತೇ! ಅಂತೂ ಇದ್ದಾನೆ! ಇಲ್ಲದವನಾಗಿಯೂ ಇದ್ದಾನೆ! ಪೂರ್ಣವಾಸನಾ ಕ್ಷಯವಿಲ್ಲದೆ ಯಾತ್ರಾಸ್ಥಳಗಳಿಗೆ ಹೋದರೂ ತನ್ನನ್ನಾತ ತೋರುವುದಿಲ್ಲ. ಬೌದ್ಧಾವತಾರವೂ ಸರ್ವೇಶ್ವರನ ಮೋಹಾವತಾರವೇ!

ವಿನಯದ ಪರಾಕಾಷ್ಠೆಯೇ ಇವರ ಉಸಿರು, **''ತೊಂಡರ್ ತೊಂಡರ್ ತೊಂಡರ್ ತೊಂಡನ್ ಶಠಕೋಪನ್''** **''ಅಡಿಯಾರಡಿಯಾರ್‌ತಮ್ ಅಡಿಯಾರಡಿಯಾರ್ ತಮ್ ಅಡಿಯಾರ್ ಅಡಿಯೋಜ್ಞಳೇ''** ವಿಶ್ವದಲ್ಲಿ ನಾನೋರ್ವನೇ ಕೊಟ್ಟಕೊನೆಯ **ಸರ್ವರ ಸೇವಕ! ನನಗಾರೂ ಸೇವಕರಿಲ್ಲ! ನನ್ನ ಭಾಗದ ಸಾಧನೆ ಸಿದ್ಧಿ, ನಾನಲ್ಲದವರದೇ! ''ಶಂಡಾಳ ಶಂಡಾಳರ್ ಪಳಾಹಿಲುಮ್''** ಅಂತ್ಯಾಂತ್ಯಜರೂ ನನ್ನ ಭಾಗದ ದೇವರೇ. ಏಕೆಂದರೆ **''ಪಯಿಲುಮ್ ತಿರುವುಡೈಯಾರ್''** ಪರಮಾತ್ಮನ ನಾಮಗಳನ್ನು ಅವರ ನಾಲಿಗೆ ಹೇಳುತ್ತಿದೆ. ಭಕ್ತರ ಸತ್‌ಸಂಗವೇ ನನ್ನ ದೇವಾಲಯ. ಆ ದೂರದ ವೈಕುಂಠಕ್ಕೂ ನಾ ಬರಲೊಲ್ಲೆ! ನೀ ಕರೆದುಕೊಂಡು ಹೋದರೂ, ಅಲ್ಲಿಯೂ ನಿನ್ನ ಭಕ್ತರ ಭಕ್ತರ ಕೈಂಕರ್ಯವೇ ನನ್ನ ಪುರುಷಾರ್ಥ! ಭಕ್ತ ಸಮಾಜವೇ ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಯಾವಾಗಲೂ ನನ್ನ ಜೀವನ ಫಲ! ಅವರ ಮೂಲಕವೇ ನನಗೆ ನೀನು ದೊರಕಿರುವುದು. ಅವರ ಬಾಯಿಂದ ಹೊರಡುವ ಶರಣರ ಸಾಹಿತ್ಯವೇ ನನ್ನ ವೇದ. ''ನಮ್ಮಾಳ್ವಾರರ ಸಿರಿಬಾಯ್‌ನುಡಿಯೇ'' ಕೊಟ್ಟಕೊನೆಯ ಈ ೧೧೦೨ ಹಾಡುಗಳ ಉದ್ಗಾರ!

ತಮಿಳ್ ತಿರಳ್ ೧ - ೮ - ೩

ಕಣ್ಣಾವಾನೆನ್ನುಮ್ ಮಣ್ಣೋರ್ ವಿಣ್ಣೋರ್ಕ್ಕು| ತಣ್ಣಾರ್ ವೇಙ್ಗಡಮ್ ವಿಣ್ಣೋರ್ ವೆರ್ಪನೇ|

ಕನ್ನಡ ನೆರಳ್

ಕಣ್ಣೇ ಆಗುವನೆಂದೂ ಮಣ್ಣವರ್ ವಿಣ್ಣವರ್‌ಗೂ ತಣ್‌ಪೇ ತುಂಬಿದ ವೇಂಕಟವಾಸಿ ಬಾನವರ್‌ಗಿರಿಯನ್!

ಈ ಕೃತಿ ಸಾಮವೇದ ಸಾರ. ಭಗವಂತನ ಅಗಣಿತ ಕಲ್ಯಾಣ ಗುಣಗಣಗಳ ಅನುಭವ ಅವರ ಹೃದಯದೊಳಗಡಗದೆ ಹೊಂಗಿ ಹೊಂಗಿ ಹೊರ ಹೊಮ್ಮಿದ ಉತ್‌ಪೂರ! ೧೦ ಶತಕಗಳಾಗಿಯೂ, ಒಂದೊಂದು ಶತಕವೂ ೧೦ - ೧೦ ದಶಕಗಳನ್ನುಳ್ಳುದಾಗಿಯೂ, ಒಂದೊಂದು ದಶಕವೂ ೧೧ ಪಾಶುರಗಳುಳ್ಳದಾಗಿಯೂ ತಾವೇ ತಾವಾಗಿ ಅಳವಟ್ಟಿವೆ! "ಕೇಶವನ್ ತಮರ್" ಎಂಬ ೨-೭ನೆಯದೊಂದರಲ್ಲಿ ಮಾತ್ರ ಹನ್ನೆರಡು ಹಾಡುಗಳಿವೆ. ಪ್ರತಿ ದಶಕದ ಕೊನೆಗೆ ಅದರ ಪಾಠಫಲ ಹಾಗೂ ತಮ್ಮ ಸಹಸ್ರಗಾಥೆಯ ಒಂದೊಂದು ವೈಶಿಷ್ಟ್ಯ, ನಾನಾ ರೂಪದಲ್ಲಿ ವರ್ಣಿತವಾಗಿರುವುದಲ್ಲದೆ, "ಶಠಕೋಪನ್" ಎಂಬ ತಮ್ಮ ಅಂಕಿತವನ್ನೂ ದೇವರೇ ಇವರಿಂದ ಅಡಿಸಿದ್ದಾನೆ. "ತಿರು" ಎಂದರೆ "ಶ್ರೀ", ದೇವರಿಗೂ ಆ ಹೆಸರಿದೆ. ಅದುದರಿಂದ, ಪರಮಕರುಣಾಮೂರ್ತಿಯೇ ಹೇಳಿದವು. ಅವನದೇ ಪ್ರಥಮ ಉಚ್ಚಾರಣೆ. ತಮ್ಮದು ಅನೂಚ್ಚಾರಣೆ! **"ಅವನ್‌ಮ್ಯು ಶೊಲ್ಲ ನಾನ್‌ಪಿ ಶೊನ್ನೇನ್!" ಅಂಥವನ ವಿಶೇಷ ಕರುಣೆಗೆ ಪಾತ್ರರಾದ ಶಠಕೋಪರು, ತಮ್ಮ ಸಿರಿಬಾಯ್ ಬಿಟ್ಟು, ಹರಿಸಿದ ಮಾಧುರ್ಯಪೂರ್ಣವಾದ ಮಹಾಭಕ್ತಿರಸ ಪ್ರವಾಹ "ತಿರುವಾಯ್‌ಮೊಳಿ" ತಮಿಳ್ ಉಲಿಯಲ್ಲಿ, ತನ್ನ ಸಕಲ ವಿಧವಾದ "ತಿರಳ"ನ್ನೂ ಹಂಚುವಂತಹ ಜಾನಪದ ಸಹಜವಾಙ್ಮಯ. ವೇದಗಳ ಸರ್ವಾರ್ಥಗಳನ್ನೂ, ಅಧಿಕಾರಿ-ಅನಧಿಕಾರಿ ಭೇದವಿಲ್ಲದೆ ಎಲ್ಲರಿಗೂ ತಿಳಿಸುವಂತಹದ್ದು! "ಸರ್ವವರ್ಣಾರ್ಹ ಅಶೇಷವೇದಸಾರ"**

ಈ ಪ್ರಥಮ ಶತಕದ, ಎಂಟನೆಯ ದಶಕದಲ್ಲಿ, "ಸ್ವಾಮಿಯ ಆರ್ಜವ ಗುಣಾನುಭವ. ಹಿಂದೆಲ್ಲಾ ದೇವರ ಪರತ್ವ, ಆಶ್ರಯಿಸಬಹುದಾದ ಸೌಲಭ್ಯ, ಸೌಶೀಲ್ಯಾದಿಗಳನ್ನು ಅನುಭವಿಸಿದವರು ಈಗ, ಕಾಯೇನ ವಾಚಾ ಮನಸಾ ತ್ರಿಕರಣಸಾರೂಪ್ಯ, ಅಂದರೆ, ಭಕ್ತರ ಇಷ್ಟವೇ ತನ್ನ ಇಷ್ಟವೆಂಬಂತೆ, ಸರಳತೆಯಿಂದ ವರ್ತಿಸುವ, ಋಜುತೆ" ಎಂಬ ವಿಶೇಷ ಗುಣವನ್ನು ಇಲ್ಲಿ ನಾವೂ ಸವಿಯೋಣ.

ಇದೇ ದಶಕದ, ಹಿಂದಿನ "ಓಡುಮ್ ಪುಳ್‌ಏರಿ" ಮತ್ತು ಅಮ್ಮಾನಾಯ್ ಎಂಬೀ ೨ ಗಾಥೆಗಳಿಂದ ವೈಕುಂಠದ ಭಕ್ತರಲ್ಲೂ, ಅವರವರ ರುಚಿಭೇದದಿಂದ ಅವರವರ ಇಷ್ಟಾನುಸಾರವೇ ತಾನೂ ನಡೆಯುವ ಋಜುಗುಣವನ್ನೂ ಇಲ್ಲಿ ಅವತರಿಸಿದಾಗಲೂ ಭಕ್ತರಿಗೊದಗುವ ಕಷ್ಟಗಳನ್ನು ಪರಿಹಾರ ಗೈದ ಸರಳ ಸ್ವಭಾವದಿಂದಲೇ ಇರುವುದನ್ನೂ ಇಲ್ಲಿ ನಾವು ಚಿಂತಿಸಬೇಕು. ಪ್ರಕೃತ ಈ ಮೂರನೆಯ ಪಾಶುರದಲ್ಲಿ ಓರ್ವ ತಾಯಿ, ತನ್ನ ಎರಡೂ ಕೂಸುಗಳ ನಡುವೆ ತಾನು ಮಲಗಿದ್ದು ಎರಡಕ್ಕೂ ಸ್ತನ್ಯಪಾನ ಮಾಡಿಸುವಂತೆ, ಈ ಲೋಕ, ಆ ವೈಕುಂಠ ಎರಡರಲ್ಲೂ ಸಂಸಾರಿ ಮತ್ತು ನಿತ್ಯ ಮುಕ್ತರಿಗೆ ಏಕಕಾಲದಲ್ಲೇ ದರ್ಶನ ನೀಡುತ್ತಿರುವ ಈ ಸರಳತೆ ಎಂಬ ಆರ್ಜವ ಮಹಾಗುಣವನ್ನು, ತನ್ನ ನಿಷ್‌ಕಪಟತೆಯನ್ನೂ ತಿರುಪತಿ ತಿಮ್ಮಪ್ಪನಲ್ಲೇ ಆಳ್ವಾರ್ ಅನುಭವಿಸುತ್ತಾರೆ.

ಮಣ್ಣೋರ್ ವಿಣ್ಣೋರ್‌ಕ್ಕು = "ಚಕ್ಷುರ್ ದೇವಾನಾಂ ಉತ ಮರ್ತ್ಯಾನಾಮ್" ಎಂಬಂತೆ ವೈಕುಂಠದಲ್ಲಿರುವರಿಗೂ ಭೂಮಿಯಲ್ಲಿರುವ ನಮಗೂ, ಕಣ್ಣಾವಾನ್= ಅವರವರ ಅಭಿರುಚಿಗೆ ತಕ್ಕಂತೆ ಅವರವರ ಕಣ್ಣಿಗೆ ಗೋಚರವಾದಾಗ ಅನಂದ ನಿಲಯ ವಿಮಾನ ಮಧ್ಯಸ್ಥನೂ ಆದ ತಿರುಪತಿ ತಿಮ್ಮಪ್ಪ ಇಲ್ಲದಿದ್ದರೆ, ಈರ್ವರೂ ಕುರುಡರಂತೆಯೇ! ಎನ್ನುಮ್ = ಯಾವಾಗಲೂ, ತಣ್ ಆರ್‌ವೇಙ್ಗಡಮ್ = ತಂಪೇ ಸಂಪೂರ್ಣ ಮನೆಮಾಡಿರುವ ತಿರುಮಲೆಯೆಂಬ, ವಿಣ್ಣೋರ್ ವೆರ್‌ಪ್ಪನ್ = ನಿತ್ಯಸೂರಿಗಳ ಆಸ್ತಿಯನ್ನಾಗಿಯೇ (Power of Atorny) ಕೊಟ್ಟಿರುವ ತಿಮ್ಮಪ್ಪನ ಬೆಟ್ಟ! ಅವರ ಆಶ್ರಯದಲ್ಲಿ ತಾನು ಭಕ್ತ ಪರಾಧೀನನಾಗಿಬಿಟ್ಟಿದ್ದಾನೆಂಬ ಭಾವ! ತನ್ನ ರಕ್ಷಣೆಯನ್ನು ಬಯಸುವ ತಾಪವನ್ನೂ ತೀರಿಸಿಕೊಂಡು, ಭಕ್ತರ ಭಾಗಕ್ಕೆ ರಕ್ಷಕರಿಲ್ಲವಲ್ಲಾ! ಎಂಬ ತಾಪವೂ ಸುಳಿಯದಂತೆ ಸರ್ವನಿರ್ವಾಹಕನಾದವನು. ತನ್ನ ನಿತ್ಯವಾಸ ಸ್ಥಳವನ್ನಾಗಿ ತಾನೇ ತನ್ನ ಸಾಚಾತನದಿಂದ ಇಷ್ಟಪಟ್ಟು ಸ್ವೀಕರಿಸಿದ್ದಾನೆ ಈ ಶ್ರೀಶೈಲವನ್ನು!

ವಿಣ್ಣೋರ್‌ವೆರ್‌ಪ್ಪು = ಎನ್ನುವುದರಿಂದ, ಈ ಮಣ್ಣಿನಲ್ಲಿರುವ ಸರ್ವರಿಗೂ ವೈಕುಂಠ ವಾಸಿಗಳಂತೆಯೇ ದೇವರು ಮೊಗದೋರಿದರೂ, ಈ ದಿವ್ಯದೇಶದ ಒಡೆತನ "ವಾನವರ್ ನಾಡು" ಎಂಬಂತೆ ನಿತ್ಯಸೂರಿಗಳದೇ! ಅರಣ್ಯವಾಸಿಗಳಿಗೂ ಕಪಿಗಳಿಗೂ ಬೇಡರಿಗೂ ಆವಾಸಸ್ಥಾನವಾದ ಇಲ್ಲೇ ಸ್ವಾಮಿಯ ಸೌಲಭ್ಯ ಸೌಶೀಲ್ಯ ಗುಣಗಳನ್ನು ಇವು ಪರಮಪದದಲ್ಲಿ ಅವಶ್ಯವಿಲ್ಲದಿರುವುದರಿಂದ ವೈಕುಂಠ ವಾಸಿಗಳೂ ಚೆಪ್ಪರಿಸುವರಷ್ಟೆ. ಅಷ್ಟೊಂದು ದೊಡ್ಡ ವನಾಗಿದ್ದೂ ಸಾಮಾನ್ಯ, ತಿರ್ಯಕ್ ಮನುಷ್ಯರೆನ್ನುವ ಭೇದಭಾವವನ್ನೂ ಮರೆತು ಏಕರಸನಾಗಿ ಸ್ವಲ್ಪವೂ ಗರ್ವ ವಿಲ್ಲದೆ, "ಆಹಾ! ಏನಿದು ಮಹಾಗುಣ!" ಎಂದು ವೈಕುಂಠವಾಸಿಗಳಾದ ದಿವ್ಯರೂ ಇಲ್ಲೇ ಬರುವುದರಿಂದ, "ತಿರುಪತಿ" ಅವರದೇ, ಮಾನವರದಲ್ಲ!

ತಮಿಳ್ ತಿರಳ್ ೨-೬-೯

ಎನ್ದಾಯ್ ತಣ್ ತಿರುವೇಙ್ಗಡತ್ತುಳ್ ನಿನ್ರಾಯ್ ಇಲಙ್ಗೈ ಶೆತ್ತಾಯ್ ಮರಾಮರಮ್
ಪೈನ್ದಾಳ್ ವಿಳ್ ಉರುವ ಒರು ವಾಳಿ ಕೋತ್ತ ವಿಲ್ಲಾ
ಕೊನ್ದಾರ್ ತಣ್ಅನ್ರುಳಾ ಯಿನಾಯ್ ಅಮುದೇ ಉನ್ನೈ ಎನ್ರುಳ್ಳೇ ಕುಳೈತ್ತ, ಎಮ್
ಮೈನ್ದಾ ವಾನೇರೇ ಇನಿ ಎಙ್ಗು ಪೋಹಿನ್ನದೇ!

ಕನ್ನಡ ನೆರಳ್

ಅರಸಾ! ತಣ್ ಸಿರಿವೇಂಕಟ ನಿಂತೇ! ಲಂಕಾನಾಶಕನೇ! ವಿಳ್ ಮತ್ತೀಮರಗಳ
ಹಿರಿಬೇರ್ ಮತ್ತೇಳದವೊಲ್ ಓರ್ ಕಣೆಯೇರಿಸಿಯೇ ಬಿಟ್ಟಾ ಬಿಲ್ಲಾಳಾ!
ಬಿರಿದೇ ಕೊತ್ಕೊತ್ತಾಗಿಹ ತುಳಸೀಮಾಲಾ! ನಿನ್ನನು ಎನ್ನೊಳಗೋರ್ಗೈದೆ!
ಬಿರಿಹರೆಯಾ! ಓ ಬಾನ್ಗೂಳೀ! ಇನ್ ಎಲ್ಲಿಗೆ! ಪೋಗಲ್ಕಾದೀತೈ?

ತಿರುವಾಯ್ಮೊಳಿಯ ೨ನೇ ಶತಕದ ೫ನೇ ದಶಕದಲ್ಲಿ "ಅಮ್ ತಾಮತ್ತನ್ಬು" ಎಂಬಲ್ಲಿ ಶರಣಾದ ಈ ಆಳ್ವಾರರ ವಿರಹ ವೇದನೆ ತೀರುವಂತೆ ಮಾನಸ ಸಾಕ್ಷಾತ್ಕಾರದಲ್ಲೇ ದೇವರು ಅದಕ್ಕೂ ಮೇಲಿನ ಮಟ್ಟದಲ್ಲಿ ತೋರಿಕೊಂಡ! ಅದರಿಂದ ಅವರೇನೋ ಹೃಷ್ಟರಾದರು. ಆದರೆ ಸ್ವಾಮಿಗೇ ಒಂದು ಪೀಕಲಾಟ! ಅದೇನೆಂದರೆ ಇವರ ನಾನಾ ವಿಧ ಸ್ವಭಾವಗಳ ಪರಿಚಯ ಅತನಿಗೆ ಇತ್ತು. ತಾವೇ ಆಸೆಪಟ್ಟು ಪರಮನನ್ನೇ, ತನ್ನ ನೀಚತ್ವ ಭಾವನೆಯಿಂದ ಆ ಪವಿತ್ರಾತ್ಮನನ್ನು ಮುಟ್ಟಬಾರದೆಂಬ ಅಸ್ಪೃಶ್ಯತೆಯ ಭಾವದಿಂದಲೇ ಹಿಂಜರಿಯುತ್ತಾರೆ!

ಈಗಲೂ ಹಾಗಾದರೆ ಏನಪ್ಪಾ ನನ್ನ ಪಾಡು! ಎಂಬುದಕ್ಕೆ ಇಂಬು ಮಾಡಿಕೊಡಲಿಲ್ಲ. ಈ ಶರಣರು! ಇದೊಂದು ತನ್ನ ಭಾಗ್ಯ! ಎಂದು ಸ್ವಾಮಿ ಹರ್ಷಿಸುವ ವರ್ಣನೆ ಈ ೬ನೆ ದಶಕದಲ್ಲಿ. ಭಕ್ತರಿಗೆ ದೇವರ ಸೇರ್ಪಡೆಗಿಂತ, ದೇವರಿಗೆ ಭಕ್ತರ ಸಂಗದಿಂದಾಗುವ ಆನಂದ ಹೆಚ್ಚು. ಜೀವಾತ್ಮರು "ಅಣು" ಸ್ವರೂಪರಾಗಿಯೇ ಇರುವುದರಿಂದ ಅವರಿಟ್ಟಿರುವ ದೈವ ಭಕ್ತಿಯೂ ಒಂದಳತೆಗೆ ಒಳಪಡುವುದು. **"ಪರಮಾತ್ಮ ವಿಭುಸ್ವರೂಪನಾಗಿ ಸ್ವತಂತ್ರನಾದುದರಿಂದ ಆತನ ಹರ್ಷ "ಪ್ರಕೃಷ್ಟವಾದ ಹರ್ಷ"! ಅವನಿಗೂ ಇಂತಹ ಶರಣರ ಸೇರ್ಪಡೆ ಅತ್ಯರ್ಥ ಪ್ರೀತಿಕರ. ಸದ್ಯಕ್ಕೆ ಹಿಂದಿನ "ವಳವೇಳು" ಎಂಬ ದಶಕದಲ್ಲಿ ಗೈದಂತೆ ಓಡಿ ಹೋಗುತ್ತಿಲ್ಲ!"**

ದೇವಾ ನೀನು ಶಂಕೆ ಪಡಬೇಡ. ಇದೋ ನಿನಗೀಗ ನಾನೇ "ಮಾಶುಚಃ" ದುಃಖಿಸಬೇಡ ಎಂಬ ಅಭಯ ನೀಡುತ್ತೇನೆ! ಈಗ ನಿನ್ನನ್ನು ಬಿಟ್ಟಿರಲಾರದ ಸ್ಥಿತಿಯಲ್ಲಿ ನೀನೇ ನನ್ನನ್ನು ತಂದು ನಿಲ್ಲಿಸಿರುವುದರಿಂದ, ನನ್ನನ್ನು ತೊರೆಯದಿರು. ಈ ಭಾವೋತ್ಕರ್ಷ ತಲೆಯೆತ್ತಿರುವ ಅಪೂರ್ವ ಸಂದರ್ಭ ಈ ೬ನೇ ಹಾಡು. ನೀನೇ ಈ ಬಂಜರು ಭೂಮಿಯಂತೆ ಭಕ್ತಿಹೀನನಾಗಿದ್ದವನನ್ನು ಕೃಷಿ ಮಾಡಿ ನನ್ನಲ್ಲಿ ಕಲೆತಮೇಲೆ ಇನ್ನೆಲ್ಲಿಗೈಯ್ಯಾ ಹೋಗುವಿ?

ಎನ್ದಾಯ್ = ನನಗೆ ಏನೊಂದೂ ಕಾರಣವಿಲ್ಲದೆ ಸಾಧನ ಅನುಷ್ಠಾನಗಳಿಲ್ಲದೆ, ಅದಕ್ಕೆ ಬೇಕಾದ ಅರಿವೂ ಇಲ್ಲದೆ, ಸ್ವಾಭಾವಿಕ ಸ್ವಾಮಿಯಾದವನೆಂದು ಎಲ್ಲಿ ಗೊತ್ತಾಯಿತು? ತಣ್ ತಿರುವೇಙ್ಗಡತ್ತುಳ್ ನಿನ್ರಾಯ್ = ಶ್ರಮಹರ ಶೀತಲ ಶ್ರೀವೇಂಕಟದಲ್ಲಿ ನಿಂತೆಯಲ್ಲಾ! ಅದರಿಂದಲೀಗ ನಾನೂ ನಿನ್ನ ಕಾಯಕದೂಳಿಗ ಮಾಡಲು ಬಂತು. ಶಾಸ್ತ್ರಗಳಲ್ಲಿ ಕಾಣುವ ನಿನ್ನ ಒಡೆತನ ಬರಿ ಪುಸ್ತಕದ ಬದನೇಕಾಯಿ ಪರೋಕ್ಷ. ಅರ್ಚಾವತಾರವೇ ಅನುಭವ! ಇದು ಎಂತಹವರಿಗೂ ಪ್ರತ್ಯಕ್ಷ! ಸೇವೆಗೂ ಬೇಕಾದಷ್ಟು ಅವಕಾಶಗಳು ಲಭ್ಯ.

ಸೀತೆಗೆ ಒದಗಿದ ನಿನ್ನ ವಿಶ್ಲೇಷದಂತೆ, ನನ್ನದನ್ನೂ ಹೋಗಲಾಡಿಸಿದೆ! ಇಲಙ್ಗೈಶೆತ್ತಾಯ್ = ಭಕ್ತರಿಗೂ ಭಗವಂತನಿಗೂ ಮಧ್ಯೆ ಮಾಯಾನಗರಿಯಾದ ಲಂಕೆಯನ್ನು ಭಸ್ಮಗೈದೆ! ಆಶ್ರಯ ಪಡೆದವರಿಗಾಗಿ ಬಲು ಕಷ್ಟಕರ ಕೆಲಸಗಳನ್ನು ಮಾಡಿದೆ! ನನ್ನೀ ಹತ್ತು ತಲೆಯ ಪಂಚಜ್ಞಾನ ಪಂಚಕರ್ಮೇನ್ದ್ರಿಯಗಳ ದಶವಿಧ ದುರಹಂಕಾರಗಳನ್ನೂ ತರಿದುಹಾಕಿದೆ! ಮನವೆಂಬ ರಕ್ಕಸನನ್ನು ಕೊಂದೆ! ಮರಾಮರಮ್ = ಒಂದಕ್ಕೊಂದು ಪೊದರಾಗಿ ದಟ್ಟನೆ ಅಭೇದ್ಯವಾದ ಸಪ್ತಸಾಲ ವೃಕ್ಷಗಳನ್ನು "ಒಕಬಾಣಂ" ಎಂಬಂತೆ, ಏಳ್ ಉರುವ = ಅವು ಏಳನ್ನೂ ಒಂದೇ ಅಂಬಿನಿಂದ ಛಿದ್ರಹೊಂದಿಸಿದೆ! ನನ್ನೀ **"ತ್ವಕ್ಚರ್ಮ ಮಾಂಸರುಧಿರ ಮೇದಸ್, ಅಸ್ತಿ, ಮಜ್ಜೆ"**ಗಳೆಂಬ ಸಪ್ತಮರ್ತ್ಯಧಾತುಗಳನ್ನು ಜಾಯಮಾನಕಾಲದಲ್ಲೇ, ಅಮೃತಮಯವಾಗಿಸಿದೆ! ಇಲ್ಲೂ ಸಪ್ತಗಿರಿಗಳನ್ನು ದಾಟಿದ ಮೇಲೆಯೇ ನಿನ್ನ ದರ್ಶನ! ನಮ್ಮ ದರ್ಶನ! ಒರುವಾಳಿ ಕೋತ್ತ = ನಿನ್ನ ಕೋದಂಡಕ್ಕೇರಿಸಿದ ಏಕೈಕ ಬಾಣಧಾರಿ, ವಿಲ್ಲಾ = ಅದನ್ನು ಯಾವುದರಲ್ಲಿಟ್ಟು ಪ್ರಯೋಗಿಸಿದೆಯೋ ಅಂತಹ ಕೋದಂಡ ರಾಮಾ! ಆಗಿನ ಆ ನಿನ್ನ ಮೂರ್ತಿ ಸೌಂದರ್ಯ ಹೇಗಿತ್ತು? ಕೊಂದು ಆರ್ ತಣ್ ಅಮ್ ತುಳಾಯ್ = ನಿನ್ನೀಮೂರ್ತಿಯ

ಸಂಬಂಧದಿಂದ ಕೊತ್ತು ಕೊತ್ತಾಗಿ ಒಮ್ಮೆಲೇ ಅರಳಿರುವ ಶೀತಳ ಸುಂದರ ತುಳಸೀ ಮಾಲಾ! ದೇವರಿಗೇನೇನು ಧರಿಸಿದ್ದರೂ, ಆಳ್ವಾರರಿಗೆ, ಅವೆಲ್ಲಾ ತುಳಸಿಯಾಗಿಯೇ ಕಾಣುವುವು! ನನಗೂ ಅದೇ ಸೇವೆ ನೀಡಿದೆ! ನನ್ನ ಭಾಗದ, ಓ ಅಮುದೇ = ಅಮೃತಾ!

ಉನ್ನೈ = ನಿನ್ನನ್ನು, ಎನ್ನುಳ್ಳೇ = ನನ್ನೊಳಗೆ, ಕುಳ್ಳೈತ್ತ = ಒಂದೇ ವಸ್ತುವಂತೆ ಕಲೆಸಿ ಕೊಳಚಿದ, ಎಮ್ಮೈನ್ಬಾ = ನನ್ನ ಭಾಗದ ಯುವಕನೇ! ನನ್ನನ್ನು ಕಲೆತು ಏಕೋಭಾವದಿಂದಿರುವಿಯಾದುದರಿಂದ, ನಿನ್ನ ಹರಯಕ್ಕೆ ಹೊಸ ಹುರುಪು ಬಂತು! ವಾನ್ಏರೇ = ಓ ವೈಕುಂಠ ವೃಷಭಾ! ಆ ನಿತ್ಯವಿಭೂತಿಯ ಪರತ್ವಕ್ಕಿಂತಲೂ, ನನ್ನನ್ನೀಗ, ನನ್ನ ಸಂಮತಿಯನ್ನೂ ಪಡೆಯುವಂತೆ, ಸಂವಿಧಾನ ಎಸಗಿ, ನನ್ನೊಡನೆ ಕಲೆತ ಮೇಲೆಯೇ ನಿಜಕ್ಕೂ ಶ್ರೇಷ್ಠತಮನಾದೆ! ಇಲ್ಲಿಯವರೆಗೂ ನೀನು ಈ ದಾಸನನ್ನು ಬಿಟ್ಟಿರಬಹುದಿತ್ತು. ಈಗ ಹೇಗೆ ತಾನೆ ಬಿಡಲಾದೀತಯ್ಯಾ! ಎಙ್ಙ್ = ಇನ್ನೆಲ್ಲಿಗೆ ತಾನೇ, ಪೋಹಿನ್ನದು = ಹೋಗಲು ಸಾಧ್ಯ? ಸ್ವಾಮಿತ್ವ ಸಂಪನ್ನನಾಗಿ, ಹತ್ತಿರದ ತಿರುಪತಿಯಲ್ಲೇ ಇದ್ದು, ಭಕ್ತರ ಎಡರುಗಳನ್ನು ಪರಿಹರಿಸಿ, ನನ್ನಂಥವರಿಗಾಗಿಯೇ ತುಳಸೀ ಮಾಲೆಧರಿಸಿ, ಅಮೃತಕ್ಕಿಂತ ಮಧುರತಮನಾಗಿ, ನವೋನವೋ ಯುವಕನಾಗಿ, ಆ ಪರತ್ವಕ್ಕೂ, **"ಈ ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿಗಳಿಂದ ಪರತಮನಾಗಿ ಇರುವಾಗ, ಸರ್ವಶಕ್ತನಾದ ನೀನೂ ನನ್ನನ್ನೀಗ ಬಿಟ್ಟು ಹೋಗಲಾರೆ! ನಾವೀರ್ವರೂ ಅಪೃಥಕ್ ಸಿದ್ಧ ವಿಶಿಷ್ಟೈಕ ವಸ್ತುವಾದ ಮೇಲೆ ವಿಶ್ಲೇಷವೆಂಬುದೇ ಇಲ್ಲ!"**

ತಮಿಳ್ ತಿರಳ್ ೨-೬-೧೦

ಪೋಹಿನ್ನ ಕಾಲಙ್ಗಳ್ ಪೋಯ ಕಾಲಙ್ಗಳ್ ಪೋಹು ಕಾಲಙ್ಗಳ್ ತಾಯ್ ತನ್ನ್ವೆಯುಯಿರ್
ಆಹಿನ್ನಾಯ್ ಉನ್ನೈ ನಾನ್ ಅಡೈನ್ದೇನ್ ವಿಡುವೇನೋ!
ಪಾಹಿನ್ನ ತೊಲ್ ಪುಹಳ್ ಮೂವುಲಹುಕ್ಕುಮ್ ನಾಧನೇ ಪರಮಾ! ತಣ್ ವೇಙ್ಗಡಮ್
ಮೇಹಿನ್ನಾಯ್ ತಣ್ದುಳಾಯ್ ವಿರೈ ನಾರು ಕಣ್ಣಿಯನೇ!

ಕನ್ನಡ ನೆರಳ್

ಸಾಗಿಹ ಕಾಲಂ ಸಂದಿಹ ಕಾಲಂ ಮುಂದಿಹ ಕಾಲಂ ತಾಯ್ ತಂದೆಯು ಉಸಿರೂ
ಆಗಿಹೆಯಪ್ಪಾ! ನಿನ್ನಂ ನಾನ್ ಅಡೆದಾಯ್ವೆ! ಇನ್ - ಬಿಡುವೇನೋ!
ಅಗಲಕೂ ಹರಗುವ ಅನಾದಿ ಹೊಗಳುಳ್ಳವನೇ! ಮೂಜಗನ್ನಾಥಾ! ಪರಮಾ ತಣ್ವೇಂಕಟ
ಇಗೋ ಏರಿಹೆ ನೀ! ತಣ್ ತುಳಸೀ ಘಮ ಘಮ ಕಂಪಿಪಮಾಲಾ!

ಶ್ರೀ ಭಗವಾನ್ ಉವಾಚ:- ನಾನೇನೋ ನಿಮ್ಮನ್ನು ಬಿಡಲಾರೆ, ನೀವಾಗಿ ಮತ್ತೆ ಬಿಟ್ಟು ಬಿಟ್ಟರೋ! ಶ್ರೀಶಠಾರಿರುವಾಚ :- ನೀನು ಗೈದಿರುವ ಮಹೋಪಕಾರಗಳನ್ನೆಲ್ಲಾ ನೆನೆದರೆ, ಸರ್ವವಿಧ ಬಂಧುವಾದ ನಿನ್ನನ್ನು, ನಾನು ಬಿಡುವೇನೇ? ಪೋಹಿನ್ನ ಕಾಲಙ್ಗಳ್ = ನಡೆಯುತ್ತಿರುವ ಈಗಾಗಲಿ, ಪೋಯ ಕಾಲಙ್ಗಳ್ = ಕಳೆದ ಆಗಾಗಲಿ, ಪ್ರೋಹುಕಾಲಙ್ಗಳ್ = ಮುಂದೆ ಬರುವ ಕಾಲದಲ್ಲಾಗಲಿ. ಈ ಉಪಕಾರ ಸ್ಮೃತಿಯೂ ನಿನ್ನ ದಯೆಯೊಂದರಿಂದಲೇ ಬಂದಿರುವುದರಿಂದ ತ್ರಿಕಾಲಗಳಲ್ಲೂ ನಿನ್ನನ್ನು ಬಿಡಲಾರೆನಯ್ಯಾ! ಏಕೆಂದರೆ, ತಾಯ್ ತನ್ವೆ ಉಯಿರ್ ಆಹಿನ್ನಾಯ್ = ಹೆತ್ತ ತಾಯಿಗಿಂತ ಹೆಚ್ಚಾಗಿ, ಸಹಜ ನಿತ್ಯಪಿತನಾಗಿ, ಒಳಹೊಕ್ಕು ಸತ್ತಾಧಾರಕ ವಿಶ್ವಾತ್ಮನಾಗಿರುವವನೇ! ನಾನ್ ಉನ್ನೈ ಅಡೈನ್ದು= ವಾತ್ಸಲ್ಯಪಾತ್ರನೂ ಪ್ರಿಯ ಪುತ್ರನೂ ಹಿತಪುತ್ರನೂ ಆದ ನಾನು ನಿನ್ನನ್ನು ಹಿಡಿದು ಬಿಡುವವನೇನೋ? ಅದರ ಸೊಲ್ಲೇ ಎತ್ತಬೇಡ! ಪಾಹಿನ್ನ = ಶತ್ರುಗೋಷ್ಠಿಯಲ್ಲೂ ಹರಗಿರುವ, ತೊಲ್ ಪುಹಳ್, ಸಹಜ ಕಲ್ಯಾಣ ಗುಣನಿಧೇ! ಮೂ ಉಲಹುಕ್ಕುಮ್ ನಾಧನೇ = ತ್ರೈಲೋಕ್ಯ ನಿರ್ವಾಹಕನಾದ ಸ್ವಾಮಿಯೇ. ಪರಮಾ = ಗುಣಗಳಿಗೂ ರಕ್ಷಣೆಗೂ ನಿನ್ನನ್ನೇ ಎಣಿಸಿದ ಮೇಲೆ ಮತ್ತೆ ಎಣಿಸಲು ಯಾರೂ ಸಿಗರು! ಪರಃ-ಮಾ-ಯಸ್ಮಾತ್ ಸಃ ಪರಮಃ ನೀನೋರ್ವನೇ ಗುಣವಂತ. ನೀನೋರ್ವನೇ ರಕ್ಷಣಾಸಾಮರ್ಥ್ಯವಂತ. ಇಂತಹವನು ನನ್ನ ಸೇವಾ ಸ್ವೀಕಾರಕ್ಕಾಗಿಯೇ, ತಣ್ವೇಙ್ಗಡಮ್ = ತಂಪಾಗಿ ಆಸರಿಸಿಕೊಳ್ಳಲು ಸರಿಯಾದ ವೇಂಕಟಾಚಲ ನಿತ್ಯವಾಸಿಯೇ! ನಿನ್ನನ್ನು ಬಿಡುವ ಸಂಭವವೇ ಇಲ್ಲ.

ಆಳ್ವಾರರ ಈ ಭರವಸೆ ಕೇಳಿದ ತಿಮ್ಮಪ್ಪನು ಅದೆಷ್ಟು ಸಂತಸಿಯಾದನೋ! ತಣ್ ತುಳಾಯ್ ವಿರೈನಾರು ಕಣ್ಣಿಯನೇ = ಕುದಿಯುತ್ತಿದ್ದ ತೊಳಸಿ ತಂಪಾಯಿತು! ವಾಸನೆ ಹೋಗಿದ್ದು ಮತ್ತೆ ಪರಿಮಳಿತವಾಯಿತು! ನಮ್ಮಾಳ್ವಾರರ ವಿರಹಾರ್ತಿಯೆಲ್ಲಾ ತೀರುವಂತೆ ತಿರುಪತಿಗೆ ಬಂದು ಇವರನ್ನು ವಿಷಯೀಕರಿಸಿದ ಮೇಲೆ, ತನ್ನನ್ನು ಅವರು ಅನುಭವಿಸುವಂತೆಯೂ ಮನಃ ಪಾಕವನ್ನು ಹೆಚ್ಚಿಸಿ, ತನ್ನ ಶಂಕೆಯನ್ನೂ ನೀಗಿಸಿಕೊಂಡೆ. ತಂಪಾಂತು ಕಂಪಾಂತು ಬೆಳಗುತ್ತಿರುವ ಹೂ ತುಳಸೀ ಮಾಲೆಗಳನ್ನು ಧರಿಸಿ ಉಜ್ವಲವಾಗಿ ನಿಂತಿದ್ದಾನೆ ತಿರುಪತಿ ತಿಮ್ಮಪ್ಪ!

ತಮಿಳ್ ತಿರಳ್ ೨-೭-೧೧

ಪರ್‌ಪನಾಬನ್ ಉಯರ್ವರ ವುಯರುಮ್ ಪೆರುಮ್ ತಿರಲೋನ್ ಎರ್‌ಪರನ್ ಎನ್ನೈಯಾಕ್ಕಿಕ್ಕೊಣ್ಡು ಎನಕ್ಕೇ ತನ್ನೈ ತನ್ನ ಕರ್‌ಪ್ಪಹಮ್ ಎನ್ನ ಮುದಮ್ ಕಾರ್‌ಮುಹಿಲ್ ಪೋಲುಮ್ ವೇಙ್ಗಡನಲ್ ವೆರ್‌ಪನ್ ವಿಶುಮ್ಬೋರ್ ಪಿರ್ಹಾ ಎನ್ನೈ ದಾಮೋದರನೇ!

ಕನ್ನಡ ನೆರಳ್

ಪದ್ಮನಾಭನು ಮೇಲಿಲ್ ತೆರ ಬೆಳೆದೇ ಬರು ಹಿರಿಹಿರಿ ಬಲಶಾಲಿ ಎನ್ನರನಾಗೆನ್ನನು ತನಗಾಗಿಸಿಕೊಂಡೆನಗೇ ತನ್ನನೆ ತಾನೇ ತಂದಾ ಕಲ್ಪಕ ತರು! ಎನ್ ಅಮೃತನು! ಕಾರ್‌ಮುಗಿಲ್ ಪೋಲುವ ವೇಂಕಟ ನಲ್‌ಪರ್ವತ ವಾಸಿ! ಆ ಬಾನವರ್ ಕೋನ್ ಎನ್ನಪ್ಪನು ದಾಮೋದರನೇ!

ಹಿಂದಿನ ದಶಕದಲ್ಲಿ ಆಳ್ವಾರರೊಬ್ಬರ ಮೇಲೆ ಹರಿದ ದೇವರ ಪ್ರೀತ್ಯತಿಶಯವನ್ನು ಅಷ್ಟಕ್ಕೇ ಅವರೊಬ್ಬರಲ್ಲೇ ನಿಲ್ಲಿಸನು, ಶರಣರೂ ಇದನ್ನು ಒಪ್ಪರು. ಸರ್ವೇಶ್ವರನ ಪ್ರೀತಿ, ಓರ್ವಶರಣನ ಸಂಬಂಧಿ ತತ್ಸಂಬಂಧಿಗಳಲ್ಲೂ ಅನಂತವಾಗಿ ಹರಿಯುತ್ತಲೇ ಇರುವುದನ್ನು ಸ್ವಾಮಿ ಈ ಸಂತರಿಗೆ ತೋರಿಸುತ್ತಾನೆ. ಈ ಸಾಕ್ಷಾತ್ಕಾರವೇ ಈ ಏಳನೇ ದಶಕದ ಮುಖ್ಯ ವಿಷಯ.

ಇದೇ ೨ನೆಯ ಶತಕದ, ೬ನೆಯ ದಶಕದಲ್ಲಿ "ಎನ್ನುಳ್ ಮನ್ನಿ" ಪಕ್ಕಮ್ ನೋಕ್ಕರಿಯಾನ್ ಇತ್ಯಾದಿಗಳಿಂದ "ದೇವಾ ನನ್ನೊಳಗೇ ಒಂದೆಡೆಯೂ ಬಿಡದೆ ನೀನೇ ತುಂಬಿರುವಂತೆ ತೋರಿದೆ" ಎಂದು ಹೇಳಿ ನೀವೇನೋ ಅನುಪ್ರೀತರಾದಿರಿ. ಅತ ಸರ್ವ ಸ್ವತಂತ್ರ! ಒಂದು ವೇಳೆ ಅತನೇ ನಿಮ್ಮನ್ನು ತೊರೆದರೆ ನೀವೇನು ಮಾಡುವಿರಿ? ಅದಕ್ಕಿವರ ಉತ್ತರ, ಇತರ ಕಲ್ಯಾಣ ಗುಣಗಳಿಗೆ ಅವಿರೋಧೇನ, ಅನುಗುಣವಾಗಿಯೇ ಅತ ಸ್ವಾತಂತ್ರ್ಯ ತೋರುವವನೇ ಹೊರತು, ನನ್ನನ್ನು ಬಿಡಲು ಅತನ ಅಯಾಯಾ ಶುಭ ಗುಣಗಳೇ ಕಾಲ್‌ತೊಡರ್ ಆಗಿ ಬಿಡುವುವು!

ಹೇಗೆಂದರೆ, ಅತ ಪರ್‌ಪನಾಬನ್ = ಸರ್ವಜಗತ್ ಕಾರಣವಾದ ನಾಭೀ ಕಮಲವುಳ್ಳವನು. ಚತುರ್‌ಮುಖಬ್ರಹ್ಮನ ಮೂಲಕ ತಾನೇ **"ನಾರಾಯಣಾತ್ ಬ್ರಹ್ಮಾ ಜಾಯತೇ" ಎಂಬಂತೆ ಸೃಷ್ಟಿಸಿದ. "ನಾರಾಯಣೇ ಪ್ರವರ್ತನ್ತೇ"** ತನ್ನ ಅಸ್ತಿಗಳಿಗೇ ಅತ ಎಂದೂ ದ್ರೋಹ ಗೈಯ್ಯನು. ಉಯರ್ವರ ಉಯರುಮ್ = ತನಗಿಂತ ಹೆಚ್ಚಿನದಿಲ್ಲದಂತೆ ಇನ್ನೂ ಹೆಚ್ಚುತ್ತಲೇ ಇರುವ, ಪೆರುಮ್ ತಿರಲೋನ್ = ಅಖಿಲಾಂಡ ಕೋಟಿ ಬ್ರಹ್ಮಾಂಡಗಳೆಂಬ ಹಿರಿಹಿರಿದಾದ ಜಗತ್ ಕಾರಣತ್ವದಿಂದ ಬಂದ ಪರತ್ವವಿದ್ದರೂ, ಸ್ವೇತರ ಸಮಸ್ತರನ್ನೂ ಮೆಟ್ಟುವ ಸ್ವಯಂ ಸಾಮರ್ಥ್ಯವಿದ್ದರೂ. ಎರ್‌ಪರ್‌ನ್ = ಮದೇಕಚಿತ್ತ. ಈ ನನ್ನನ್ನೇ ಹಿರಿಹಿರಿಯನೆಂದು ಏಕಾಗ್ರತೆಯಿಂದ ಭಾವಿಸುತ್ತಿದ್ದಾನೆ! ಕರ್‌ಪಹನ್ = ಸ್ವರ್ಗದ ಈ ಕಲ್ಪವೃಕ್ಷವನ್ನೂ ಮೀರಿಸಿದವ. ಹೇಗೆಂದರೆ, ಎನ್ನೈ ಆಕ್ಕಿಕ್ಕೊಣ್ಡು = "ಮಾರಿಮಾರಿ ಪಲಪಿರಪ್ಪುಮ್ ಪಿರನ್ದು" ಎಂದು ನಾನೇ ಹೇಳಿರುವಂತೆ, ಅನಾದಿ ಸಂಸಾರಿಯಾಗಿದ್ದ ಇದೋ ನನ್ನನ್ನೇ, ಕರುಣೆಸಿ, ಒಂದು ವಸ್ತುವನ್ನಾಗಿಸಿದ. "ಅಡಿಹಿಡಿ ಭಾರತ ಭಟ್ಟ" ಎಂಬ ಗಾದೆಯಂತೆ, ಮೊದಲಿಂದಲೇ ಅಸತ್ ಕಲ್ಪನಾಗಿದ್ದ ನನ್ನನ್ನು ಅವನೇ. ತನಗೆ ಆಳಾಗಿಸಿಕೊಂಡನು. ಈ ಕಲ್ಪಕತರು ಬೇರೆ ಫಲಗಳನ್ನು ಮಾತ್ರ ತರುವುದೇ ಹೊರತು ತನ್ನನ್ನು ಮತ್ತಾರಿಗೂ ನೀಡದು.

ಈ ಮಹೌದಾರ್ಯ ಅತನಿಗೆ ಹೇಗೆ ಬಂತು? ಕಾರ್‌ಮುಹಿಲ್ ಪೋಲುಮ್ = ಕಾರ್‌ಮುಗಿಲ್ ಪೋಲುವ ಉದಾರ ತಿರುಮಲೆಯ ಸಂಬಂಧ! ವೆರ್‌ಪನ್ = ಮೋಡ ತಾನಿತ್ತ ಮಳೆಗಾಗಿ ಎಂದೂ ಗರ್ವ ಪಡದು. ಹೀಗೆ ಏನೇನು ಕೊಟ್ಟರೂ ತಾನು ಕೊಟ್ಟೆನೆಂಬ ನೆನಪೇ ಸ್ವಾಮಿಗಿರದು. "ಅವಿಜ್ಞಾತಾ"! ವಿಶುಮ್ಬೋ ಓರ್‌ಪಿರಾನ್ = ಅತ್ಯಣ ನಿತ್ಯಸೂರಿಗಳಿಗೆಲ್ಲಾ ಅಧಿಪತಿಯಾಗಿದ್ದೂ, ದಾಮೋದರನ್ = ಆಶ್ರಿತರಾದ ಎಡಗೈ ಬಲಗೈ ತಿಳಿಯದ ಗೊಲ್ಲ ಗೊಲ್ಲತಿಯರಿಗೆ ಅತ್ಯಂತ ಪರಾಧೀನನಾಗಿ, ಅವರಿಂದ ಹೊಡಿಸಿಕೊಂಡವನು. ಹಗ್ಗದಿಂದ ಒರಳಲ್ಲಿ ಕಟ್ಟಿಸಿಕೊಂಡವನು. ಇಂದಿಗೂ ಆರ್ಚಾ ಮೂರ್ತಿಗಳಲ್ಲಿ, ಹೊಟ್ಟೆಯ ಬಳಿ, ಆ ಕಿರಿ ಗಂಟು ಹಗ್ಗದಿಂದ ಕಟ್ಟಿದ ಜಡ್ಡಿನ ಗುರುತುಂಟು! ಇಂತಹ ಪರಮ ಸೌಶೀಲ್ಯವಂತ, ತನ್ನ ಸರ್ವಸ್ವಾತಂತ್ರ್ಯವನ್ನು ತನ್ನೇ ಸೌಲಭ್ಯಾದಿ ಗುಣಗಳಿಗೆ ಎದುರಾಗಿ ಎಂದೂ ತೋರನು.

"ಯುಕ್ತ ಆಸೀತ ಮತ್‌ಪರಃ"

ಇಂದ್ರಿಯಗಳ ಮೇಲೆ ಜಯ ಸಾಧಿಸಲು ಸ್ವಂತ ಪ್ರಯತ್ನವೆಂಬ ಭಾವದಿಂದ ನಾವೆಷ್ಟೇ ಮಾಡಿದರೂ, ಒಂದು ವೇಳೆ ಸ್ಥೂಲ ನಿಗ್ರಹವಾಗಬಹುದಷ್ಟೆ. "ರಸವರ್ಜಮ್" ಹೊರಗಿನ ನಮ್ಮ ಉಪವಾಸಾದಿಗಳಲ್ಲಿಯೂ ಒಳಗೆ ಪಾರಣೆಯ ಚಿಂತೆ ನಡೆದೇ ಇರಬಹುದಷ್ಟೆ! ಸಂಪೂರ್ಣ ಸರ್ವೇಂದ್ರಿಯ ಸಂಯಮ ಸಾಧಿಸಲು ಅರ್ಜುನಾ! ನನ್ನಲ್ಲೇ ಏಕಾಗ್ರಚಿತ್ತವಿಡು. ನನ್ನನ್ನೇ, ಅಂದರೆ ಭಗವದ್ ವಿಷಯವೊಂದನ್ನೇ ಅಯಾಯಾ ಶಬ್ದಸ್ಪರ್ಶ ರೂಪ ರಸಗಂಧಾದಿ ವಿಷಯಾಂತರಗಳಿಗಿಂತ ಶ್ರೇಷ್ಠತಮ, ನಿರಪಾಯ ವಿಷಯ ಎಂಬುದನ್ನು ಮನದಟ್ಟು ಮಾಡಿಕೋ! ತಾಯಿಗೆ ಮೊಗುವಿನ ಚಿಂತೆ ಹತ್ತಿದಾಗ "ಶೆಲ್ವಪಿಳ್ಳೈ - ಸರ್ವ ಸಂಪತ್‌ಕುಮಾರನನ್ನೇ" ನೆನೆಯಬಹುದಲ್ಲಾ! ಪರಾತ್‌ಪರನೇ ತನ್ನ ಮಗನಾಗಿ

ಬಂದಿರುವ 'ಯಶೋದಾ ಭಕ್ತಿ'! ಕಾಫಿ ಕುಡಿಯುವ ಚಿಂತೆ ಹತ್ತಿದಾಗ ಬಿಸಿನೀರಿನ ಪಾನ! ಹೀಗೆಲ್ಲಾ ಮೇಲ್ಮೇಲೆ ಸೋಪಾನಾರೋಹಣ ನ್ಯಾಯ ಗೀತೆಯ ದೃಷ್ಟಿ! ಶಾಸ್ತ್ರಗಳಿಗೂ ಸಂತರಿಗೂ ವಿರೋಧ ಕಲ್ಪಿಸಬೇಕಿಲ್ಲ! ಇದರ ವಿವರಣೆ, ಈ "ಎನ್‌ಪರನ್" ಇಲ್ಲಿದೆ. ಅದೇ ಕೃಷ್ಣ ಆಳ್ವಾರ್ ಶರಣರಲ್ಲಿಯೇ ಚಿತ್ತವಿಟ್ಟು "ಧ್ಯಾತಾ ನಾರಾಯಣಃ ಪರಃ" ಎಂಬ ಉಪನಿಷದ್ ವಾಣಿಯಂತೆ ಈಗ ಈ ತಿರುಪತಿ ತಿಮ್ಮಪ್ಪನಾಗಿರಲು, ನೀವಾರೂ ಅತನ ಸ್ವಾತಂತ್ರ್ಯದ ಬಗೆಗೆ ಅಪಾರ್ಥ ಕಲ್ಪಿಸಬೇಡಿ. ಉಭಯ ವೇದಾನ್ತಗಳನ್ನೂ ಚೆನ್ನಾಗಿ ಪರಿಶೀಲಿಸಿಯೇ ಹೊರ ಸಮಾಜಕ್ಕೆ ಹೇಳಿ. ಯಾರೋರ್ವರ ಯಾವುದೇ ಜ್ಞಾನ ಯಥಾರ್ಥವೇ. ಆ ಅರಿವಿನ ಪ್ರಕಾಶ ಮನಸ್ಸಿನ ಮೂಲಕ ಹರಿಯುವುದರಿಂದ, ಚಿತ್ತ, ಬುದ್ಧಿ, ಇಂದ್ರಿಯ, ಪರಿಸರ ಮುಂತಾದ ಸಾಮಗ್ರಿಗಳ ದೋಷದಿಂದ ಆಗುವ ತಪ್ಪು ಅದು. ಇದೇ ಸರಿ! ಎಂಬ ಆಗ್ರಹವೂ ಏರ್ಪಡುತ್ತದೆ. ಟೀಕೆ ಮಾಡುವವರು ಮಾನವನ ಸರಿಚಿಂತನೆಗೆ ಇರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಒಡೆತನ ಇತ್ಯಾದಿ ಸಾಮಗ್ರೀ ಪರಿಕರಗಳ ಶೋಧನೆಗೆ ಮೊದಲು ಟೊಂಕ ಕಟ್ಟಬೇಕು. ಅವು ಸರಿಹೋದರೆ, ಪರಸ್ಪರ ನಿಂದೆ ಪ್ರತಿನಿಂದೆ ಇರದು. ಯಥಾಸ್ಥಿತಿಯೊಂದರಲ್ಲೇ ಬಿದ್ದ ನಾವೆಲ್ಲರೂ ಈಗಂತೂ ಚೆನ್ನಾಗಿ ಗಮನಿಸಬೇಕಾದ ಸೂಕ್ಷ್ಮ ವಿಚಾರ ಪದ್ಧತಿ ಇಲ್ಲಿದೆ. **"ಶರಣರು ಎಂದಿಗೂ ಎಲ್ಲರಿಗೂ ಎಲ್ಲೆಲ್ಲೂ ಪ್ರಸ್ತುತರೇ ಹೌದು."**

ತಮಿಳ್ ತಿರಳ್ ೨-೮-೭

ಕಿಡನ್ದಿರುನ್ದು ನಿನ್ನಳನ್ದು ಕೇಳಲಾಯ್ ಕೀಳ್ ಪುಕ್ಕಿಡನ್ದಿಡುಮ್ ತನ್ನುಳ್ ಕರಕ್ಕು ಮುಮಿಳುಮ್
ತಡಮ್ ಪೆರುಂ ತೊಳಾರ ತ್ತಳುವುಮ್ ಪಾರ್ ಎನ್ನುಮ್ ಮಡನ್ದ್ತೈಯೈ ಮಾಲ್ ಶೆಯ್ ಹಿನ್ನ ಮಾಲ್ ಆರ್ ಕಾಣ್‌ಬಾರೇ!

ಕನ್ನಡ ನೆರಳ್

ಕೆಡೆದೂ ಇದ್ದೂ, ನಿಂತೂ, ಅಳೆದೂ, ವರಾಹನಾಗಿ ಕೀಳ್ ಪೊಕ್ಕು,
ಎಡೆ ದಿಡುವನ್, ತನ್ನೊಳೇ ಕಾಣದೊಲ್, ಮರೆಸುವನ್, ಮತ್ತುಗಿಯುವನೈ
ಕಡುಹಿರಿ ನೀಳ್ ತೋಳ್ಗಳಿಂ ತುಂಬುವೊಲ್ ಅಪ್ಪುವನ್ ಧರೆಯೆನುವಾ
ಮಡದಿಯಂ ಸರ್ವೇಶ್ವರ ವತ್ಸಲ ಗೈಯ್ಯುವ ಮೋಹವ ಕಾಣುವರಾರ್?

"ಕೇಶವನ್ ತಮರ್" ದಶಕದಲ್ಲಿ ಆಳ್ವಾರ್ ಸಂಬಂಧ ಜ್ಞಾನವಿರುವ ಎಲ್ಲರನ್ನೂ ತನ್ನ ಪ್ರೀತಿಗೆ ಅತ್ಯರ್ಥ ಪಾತ್ರರಾದ ಶರಣರಂತೆಯೇ ಮೋಹಿಸುವ ವಾತ್ಸಲ್ಯಮಹಾಸಾಗರ ಈ ದೇವರು, ಎಂದರಷ್ಟೆ. ತಮ್ಮ ನೆಂಟು ಅವರಿಗೆಲ್ಲಾ ಚೆನ್ನಾಗಿ ಅಂಟುವಂತೆ, ಸರ್ವರನ್ನೂ ಕುರಿತು **"ನಿಮ್ಮೆಲ್ಲರ ಮೇಲೂ ಸ್ವಾಮಿಯ ಕೃಪಾಪ್ರವಾಹ ಅವಿಚ್ಛಿನ್ನವಾಗಿ ಹರಿಯುವುದು. ಆ ದಯಾವಾಹಿನಿ ಎಂದೂ ಇಂಗದು. ಬನ್ನಿ ಬನ್ನಿ! ನನ್ನ ಮಾತನ್ನಾಲಿಸಿ! ಎನ್ನುತ್ತಾರೆ ಏನು ನೀವನ್ನುವುದು? ಆತ ನನ್ನ ನಿಮ್ಮೆಲ್ಲರ ಬಿಡುಗಡೆಯನ್ನು ನಿಚ್ಚಳವಾಗಿ ಎಸಗಿಯೇ ತೀರುವನು"** ಎಂದು ತಿರುಮಲೇಶನ **"ಮೋಕ್ಷ ಪ್ರದತ್ವವನ್ನು"** ಡಂಗುರ ಹಾಕುವ ದಶಕವಿದು. ಹಿಂದಿನ ದಶಕದಲ್ಲಿ ದೇವರೇ ಸರ್ವೋತ್ತಮನೆಂಬುದನ್ನು, ಅರ್ಜುನ ಪಾಶುಪತಾಸ್ತ್ರಲಾಭಕ್ಕಾಗಿ ತಾನು ಹೊರಟ ಸ್ಥಾನದಲ್ಲಿ ಶ್ರೀ ಕೃಷ್ಣನ ಪಾದದಲ್ಲಿ ಅರ್ಪಿಸಿದ ಹಳಹಳ ಹೂವನ್ನೇ, ಅವನೇ ಹಿಮಾಲಯದಲ್ಲಿ ವೈಷ್ಣವಾಗ್ರೇಸರನಾದ ಶಿವನ ತಲೆ ಮೇಲೆ ಕಂಡು, ಯಾಥಾರ್ಥ್ಯವನ್ನು ತೀರ್‌ಮಾನಿಸಿಕೊಳ್ಳುವ ವಿಚಾರ ಬಂದಿತ್ತು. ಈ ಏಳನೆಯ ಪದ್ಯದಲ್ಲಿ ಇತರರ ಪೌರಾಣಿಕ ಉದಾಹರಣೆಗಳೇ ಬೇಕಿಲ್ಲ. ಶ್ರೀಕೃಷ್ಣನ ಪರತ್ವವೂ, ಮೋಕ್ಷ ಪ್ರದತ್ವವೂ ಸ್ವಯಂಭೂ ಪ್ರಮಾಣವೆನ್ನುತ್ತಾರೆ.

ಕಿಡನ್ದು = ಕ್ಷೀರ ಸಮುದ್ರದ ವ್ಯೂಹಾವತಾರಿಯಾಗಿ, ಅಥವಾ ತೆಂಕಣ ಕಡಲ ತೀರದಲ್ಲಿನ ರಾಮನಾಡು ಜಿಲ್ಲೆಯ "ದರ್ಭಶಯನ" ತಿರುಪ್ಪುಲ್ಲಾಣಿಯಲ್ಲಿ ಶಯನ ಸತ್ಯಾಗ್ರಹ ಮಾಡುತ್ತಿರುವ ಕೋದಂಡರಾಮಾವತಾರಿಯೆಂದೂ ಆಗಬಹುದು! ಇವೆರಡನ್ನೂ ಇಲ್ಲಿ ಹೇಳಲು ಕಾರಣವೆಂದರೆ ಶ್ರೀರಾಮಾಯಣದಲ್ಲಿ ವಾಲ್ಮೀಕಿ ಮಹರ್ಷಿ,

ಬಾಹುಂ ಭುಜಗಭೋಗಾಭಂ ಉಪಧಾಯಾರಿಸೂದನಃ |
ಜಾತರೂಪಮಯೈಶ್ಚೈವ ಭೂಷಣೈರ್ಭೂಷಿತಃ ||

ದರ್ಭಶಯನಾ ರೂಢನಾದಾಗ ಶ್ರೀರಾಮನ ಬಾಹುಗಳು ಆದಿಶೇಷನಂತೆ ತಲೆದಿಂಬಾಗಿತ್ತೆಂದು ಉಪಮಾನ ನೀಡಿದ್ದಾರೆ. ಇದರಿಂದ ಕ್ಷೀರಾರ್ಣವದಲ್ಲಿರುವ ಭೋಗಿಭೋಗಶಯನೀಯಶಾಯಿಯ ಸೂಚನೆ ಕಾಣುತ್ತದೆ.

ಇರುನ್ದು = ಕುಳಿತು. ಪರಮಪದನಾಥನ "ಸವ್ಯಂ ಪಾದಂ ಪ್ರಸಾರ್ಯ" ಇತ್ಯಾದಿಯಂತೆ, ಎಂದಾಗಲಿ, ಚಿತ್ರಕೂಟದಲ್ಲಿ ಭರತ ಬಂದಾಗ ಅಣ್ಣ ಶ್ರೀರಾಮ ಕುಳಿತಿದ್ದ ಠೀವಿಯಾಗಲಿ, ಉಭಯಂ ಸಂಗಚ್ಛತೇ! ಆಳ್ವಾರರ ಇಂಗಿತದಂತೆ, ನಿನ್ನು = ಈ ತಿರುಮಲೆಯಲ್ಲಿ

ನಿಂತ, ನಿಲುಮೆಯನ್ನು ಬಹುಜನಾಽಽಕರ್ಷಕ ಮನೋಜ್ಞ ವ್ಯಾಖ್ಯಾತೃಗಳಾದ "ನಂಬಿಳ್ಳೈ" ಎಂಬ ೧೨-೧೩ನೆಯ ಶತಮಾನದ ಆಚಾರ್ಯವರ್ಯರು, ಮೊದಲಿಗೇ ಅಪ್ಪಣೆ ಕೊಡಿಸಿದ್ದಾರೆ. ವಾಲಿವಧವಾದ ಮೇಲೆ, ಹಾಗೂ ರಾವಣವಧವಾದ ಮೇಲೆ ನಿಂತ ರಾಮನ ನೆಲೆಯೂ ಕ್ರಮವಾಗಿ ಆಗಬಹುದು! ಇದು ನಂಬಿಳ್ಳೈಗಳ ಎರಡನೆಯ ಯೋಜನೆ. ಆಗಲೇ ವಾಲಿ ಹಾಗೂ ರಾವಣನ ವಿಧವಾ ಪತ್ನಿಯರ ಬಾಯಿಂದಲೇ, ಶ್ರೀರಾಮನ ಸರ್ವವಿಧವಾದ ಪರತ್ವದ ಮೇಲ್ಮೆಯ ಗಾನ ಸಾಗಿದೆ.

ತಮಸಃ ಪರಮೋ ಧಾತಾ ಶಂಖಚಕ್ರಗದಾಧರಃ |
ಶ್ರೀವತ್ಸವಕ್ಷಾಃ ನಿತ್ಯಶ್ರೀಃ ಅಜಯ್ಯಃ ಶಾಶ್ವತೋ ಧ್ರುವಃ ||

ಎಂದು ಮಂಡೋದರಿಯೂ,

ತ್ವಮಪ್ರಮೇಯಶ್ಚ ದುರಾಸದಶ್ಚ ಜಿತೇಂದ್ರಿಯಶ್ಚೋತ್ತಮಧಾರ್ಮಿಕಶ್ಚ |
ಅಕ್ಷಯ್ಯಕೀರ್ತಿಶ್ಚ ವಿಚಕ್ಷಣಶ್ಚ ಕ್ಷಿತಿಕ್ಷಮಾರ್ವಾ ಕ್ಷತಜೋಪಮಾಽಕ್ಷ!||

ಎಂದು ತಾರೆಯೂ ಪರಮ ಸಾತ್ವಿಕೆಯರಾಗಿ, ಶ್ರೀ ದಾಶರಥಿಯ ಅವತಾರೇ ಪರತ್ವವನ್ನು ಸಂತಸದಿಂದ ಆಲಾಪಿಸುತ್ತಾರೆ.

ಅಳನ್ದು = ತನ್ನದೇ ಆದ ಭೂಮಿಯನ್ನು, ಮಹಾಬಲಿಯ ಔದಾರ್ಯ ಗುಣವೂ ಜಗತ್ತಿಗೆ ಪ್ರಕಾಶಿಸುವಂತೆ, ಅವನ ಸಂಮತಿಯಿಂದಲೇ ದಾನರೂಪವಾಗಿ ತನ್ನ ವಾಸ್ತವಿಕ ಒಡೆತನದ ಹಕ್ಕನ್ನೂ ಪಡೆದು, ಪಾದದಿಂದ ಅಳೆದೂ, ಕೇಳಲಾಯ್ = ಯಜ್ಞವಹಾಹನಾಗಿ, ಕೀೞ್ = ಈ ಭೂಲೋಕಕ್ಕೆ ಕೆಳಗಿರುವ ಪ್ರಳಯಾರ್ಣವದೊಳಗೆ, ಪುಕ್ಕು= ಕೆಸರು ನೀರಿಗೇ ಆಸೆ ಪಡಲು ಅರ್ಹವಾದ, ಹಂದಿಯಾದುದರಿಂದ, ಹೊಕ್ಕು ಪಾಚಿಕಟ್ಟಿ ಕೊಳೆತುಹೋಗುತ್ತಿದ್ದ, ಭೂದೇವಿಯನ್ನು, ಇಡನ್ದು = ತನ್ನ ಕೋರೆಹಲ್ಲುಗಳೆಂಬ ಎಲೆಗುದ್ದಲಿಯ ಸಲಕರಣೆಯಿಂದ ಎಡೆದು, ಎರಡು ಕೋರೆಗಳ ಬಳೆಯಾಕಾರದಲ್ಲಿ ಬೀಳದಂತೆ, ಇಡುಮ್ = ಯಥಾಸ್ಥಾನದಲ್ಲಿ ಇಡುಮ್ = ಇಡುವವನಾಗಿಯೂ, ತನ್ನುಳ್ ಕರಕ್ಕುಮ್ = ಮತ್ತೊಮ್ಮೆ, ತನ್ನ ಉದರದಲ್ಲೇ ಚೇತನ ಅಚೇತನಗಳ ಸೂಕ್ಷ್ಮಾನಸ್ಥೆಯ ಬೀಜಗಳನ್ನು ಯಾರೂ ಕಾಣದಂತೆ ರಕ್ಷಿಸಿಯೂ, ಉಮಿಳ್ನ್ದು = ಯಥಾಕಾಲದಲ್ಲಿ, ಬಾಯಿಂದ ಅವನ್ನು ಉಗುಳಿಯೂ, ಹೀಗೆ ಅವ್ಯಯ ಪೂರ್ವಕವಾಗಿ ಸೃಷ್ಟಿಗೈದೂ ತ್ರಿವಿಕ್ರಮ ವರಾಹ ಅವತಾರಗಳಿಗಿಂತಲೂ ಪ್ರಳಯ ಕಾಲದ ರಕ್ಷಣೆಯಲ್ಲಿ ಒಂದು ವಿಶೇಷವಿದೆ. ಅವೆಲ್ಲಾ ಮತ್ತೆ ಮತ್ತೆ ಹೊಸಹೊಸ ಕಳ್ಳರಿಗೆ ಸಿಗುವಂತೆಯೇ ಅದವು! ಹಿರಣ್ಯಾಕ್ಷ ಭೂ ಚೋರ! ಸ್ವರ್ಣ ಸಂಪತ್ತಿನ ಚೋರ ತಮ್ಮನಾದ ಹಿರಣ್ಯಕಶಿಪು. ಯಾರಿಗೂ ತನ್ನ ಅಸ್ತಿಗಳೇ ಕಾಣದಂತೆ, ಚೇತನದ ಪ್ರಾಚೀನ ವಾಸನಾ ಸಾಂದ್ರತೆಯೂ ಕುಗ್ಗುವಂತೆ, ಮೌನ ಅಜ್ಞಾತ ರಕ್ಷಣೆ ಪ್ರಳಯದ ವೈಶಿಷ್ಟ್ಯ! ತಾನೇ ಒಳಗಿಟ್ಟುದ್ದು ಏನಾಯಿತೋ ಎಂದು ನೋಡುವ ಸಲುವಾಗಿ, ಬಹಳ ಕಾಲದಿಂದ ಜೈಲಿನಲ್ಲೇ ಇದ್ದು ವಿಧೇಯರಾದ ಖೈದಿಗಳನ್ನು ಖಿಲಾಸೆ ಮಾಡುವಂತೆಸಗಿದುದೇ ಸೃಷ್ಟಿ! ಸ್ವಾಮಿ ಏನೇನು ವಿವಿಧ ಕಾರ್ಯಚಟುವಟಿಕೆಗೈದರೂ ಎಲ್ಲವೂ "ರಕ್ಷಣೆ"ಯಲ್ಲೇ ಅಡಗುತ್ತವೆ. ಏಕೆಂದರೆ ಅತ ಮಹಾ ಕರುಣಾಳು! ರಾಗವಾಗಲಿ ದ್ವೇಷವಾಗಲೀ ಸುತಾರಾಂ ಇಲ್ಲದವನು "ಎಳ್ಹಲ್ ಇರಾಹಂ ಇಲಾದಾನ್" ಎಂದೇ ತಿರುವಾಮ್ಮೊಳಿಯ (೧-೬-೫) ನೆಯದರಲ್ಲಿ ಇದೇ ಶಠಕೋಪರು ಕರುಣಿಸಿದ್ದಾರೆ!

ತಡಮ್ ಪೆರುಮ್ = ವಿಸ್ತಾರವೂ, ಪರಿಪುಷ್ಟಗಳೂ ಆದ, ತೋಳ್= ಭುಜಗಳಿಂದ, ಆರ = ಎಲ್ಲಾ ಅವಯವಗಳೂ ಸ್ಪರ್ಶಿಸುವಂತೆ, ಪರಿಪೂರ್ಣಗಾಢೋಪಗೂಢವಾಗಿ, ಪಾರ್ ಎನ್ನುಮ್ = ಧರಣಿಯೆಂಬ, ಮಡನ್ದೈಯೈ = ಮಹಿಷಿಯನ್ನು, ತಳುವುಮ್ = ಅಪ್ಪಿಕೊಳ್ಳುವಿಕೆ ಇವುಗಳಿಂದೆಲ್ಲಾ, ಪರತ್ವ ಸ್ವಯಮೇವ ಗೋಚರ. ಮಾಲ್ = ಸರ್ವೇಶ್ವರತ್ವ ಪ್ರಯುಕ್ತವಾದ, ಮುಕ್ತಿ ಪ್ರದಾನವೂ ಸಹಜ. ಅಂತಹವನು, ಶೆಯ್ಹಿನ್ನ = ಆಟದಂತೆ ಗೈಯ್ಯುವ ಈ, ಮಾಲ್ = ವ್ಯಾಮೋಹವನ್ನು, ಆರ್ ಕಾಣ್ಬಾರ್ = ಯಾರು ತಾನೇ ಸ್ವಯತ್ನರೂಪಿ ಬುದ್ಧಿಯಿಂದಲೇ ಅರಿಯಬಲ್ಲರು?

ತಮಿಳ್ ತಿರಳ್ ೩-೩-೧

ಒಳಿವಿಲ್ ಕಾಲಮೆಲ್ಲಾಮ್ ಉಡನಾಯ್ ಮನ್ನಿ ವಳುವಿಲಾ ಅಡಿಮೈ ಶೆಯ್ಯ ವೇಣ್ಡು ನಾಮ್
ತೆಳಿ ಕುರಲ್ ಅರುವಿ ತ್ತಿರುವೇಙ್ಗಡತ್ತು ಎಳಿಲ್ ಕೊಳ್ ಶೋದಿ ಯೆನ್ನೆ ತನ್ನೆ ತನ್ನೆಕ್ಕೇ

ಕನ್ನಡ ತಿರಳ್

ಮುಗಿಯದ ಕಾಲವು ಎಲ್ಲಾ ಒಡನೆಂದಿರ್ದೂ ಅಗಲದೆ ಊಳಿಗ ಗೈಬೇಕಿದೋ ನಾವ್
ಮಿಗೆ ಗಂಭೀರದ ಉಲಿ ಝರಿ ಸಿರಿವೇಂಕಟದೊಳ್, ತಗು ಮಿಗೆ ಚೆಲು ಜ್ಯೋತಿಯ ಎನ್ ತಂದೆಯ ತಂದೆಯ ತಂದೆಗಿದೋ

ಇದಕ್ಕೆ ಹಿಂದಿನ ದಶಕದ ಕೊನೆಯಲ್ಲಿ ಇದೇ ಪರಾಂಕುಶರು **"ನೆಲೆಯನು ಪೊಂದೆನ್ ಹೃದಯಂ ನಿತ್ಯತೆ ಪೊಂದಿತು ಎನ್ ಆತ್ಮನ್" "ನಿಲೈಪ್ಪೆತ್ತು ಎನ್‌ನೆಞ್ಞಮ್ ಪೆತ್ತದು ನೀಡುಯಿರೇ"** ಎಂದು ತಾವು ಸ್ವರೂಪಲಾಭ ಪಡೆದುದಾಗಿ ಸಂತಸ ಪಟ್ಟರಷ್ಟೆ. "ಶೇಷತ್ವ" ಎಂದರೆ ಪರಾರ್ಥ ಸೇವೆಯೇ ಈ ಜೀವಾತ್ಮರ ಸ್ವರೂಪವಾದುದರಿಂದ ಅದಕ್ಕೆ ಸರಿಹೊಂದುವಂತೆ "ಸ್ವಾಮಿ, ಏನ್ ಅಪ್ಪಣೆ" ಕಿಂಕರೋಮಿ? ಈಗ ಈ ದಾಸ ಏನು ಕಾಯಕ ಮಾಡಬೇಕು?" ಈ ಮನಸ್ಸು ಇರುವ ಕಿಂಕರ ಅವನೆಸಗುವ ಒಡೆಯನ ಸಂತೋಷವೊಂದಕ್ಕೇ ಹೊಂದುವಂತಹ ಚರ್ಯೆಗಳ "ಕೈಂಕರ್ಯ"ವನ್ನೇ ಎಸಗಬೇಕು. ಈ "ಅಡಿಮೈ"ಯನ್ನೇ ಮೂರನೆಯ ಶತಕದ ಮೂರನೆ ದಶಕದಲ್ಲಿ ಪೂರಾ ಪ್ರಾರ್ಥಿಸುತ್ತಾರೆ, "ಅದೂ ತಿರುಪತಿ ತಿಮ್ಮಪ್ಪನಲ್ಲೇ". ಮುಂದೆ (೬-೧೦)ರ "ಉಹಲಮುಂಡ" ಪೂರಾದಶಕವೂ ವೇಂಕಟೇಶನಿಗೇ! ಇಲ್ಲಿ ಪ್ರಾಪ್ಯ ಪುರುಷಾರ್ಥ ನಿಷ್ಕರ್ಷೆ. ಅಲ್ಲಿ ಅದನ್ನು ಹೊಂದಿಸಿಕೊಡುವ ಪ್ರಾಪಕ ನಿಷ್ಕರ್ಷೆ. ಮನನ ಶೀಲನಾದ ಮಾನವನ ಜೀವನದ ಗುರಿ. ಹಾಗೂ ಅದರ ಸರಿಸಾಧನೆ ಏನು? ಎರಡೂ ತಿಮ್ಮಪ್ಪನೇ! **"ಸರ್ವ ಸೇವಾ ಸಮಾನರತಿ ಗುರಿ. ಭಗವಚ್ಚರಣಾರವಿನ್ದ ಶರಣಾಗತಿ ದಾರಿ".**

ಒಡೆಯನ ಮನವನ್ನು ಅರಿತು ಕೈಂಕರ್ಯ ಎಸಗುವುದರಲ್ಲೇ ಸೊಗಸು. ಲಕ್ಷ್ಮಣ ಅಯೋಧ್ಯೆ ಅರಮನೆಯಲ್ಲಿದ್ದಾಗ ಅಳುಕಾಳುಗಳಿದ್ದುದರಿಂದ ಅಣ್ಣನ ಸರ್ವಸೇವೆ ಸಿಗದೆ ತವಕಪಡುತ್ತಿದ್ದ. ಅವನ ಅದೃಷ್ಟವೋ ಎಂಬಂತೆ, ಶ್ರೀರಾಮನಿಗೆ ವನವಾಸ ಲಭಿಸಿತು!

"ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ"

"ಅಣ್ಣಾ! ತಾವು ಅತ್ತಿಗೆಯೊಡನೆ ಕಾಡಿಗೆ ಹೋಗುವಿರಿ. ಅಲ್ಲಿ ಈ ನಗರದಲ್ಲಿಲ್ಲದ ಗಿರಿಸಾನು ಪ್ರದೇಶಗಳಲ್ಲಿ ನೀವು ಸಂಚರಿಸುತ್ತಾ ರಸಾನುಭವಗೈಯ್ಯುವಿರಿ! ಆ ಸಮಯಕ್ಕೆ ನಿಮ್ಮ ನಿದ್ದೆ ಎಚ್ಚರ ಎರಡೂ ದೆಸೆಗಳಲ್ಲಿ, ದಿವ್ಯ ದಂಪತಿಗಳ ಸರ್ವವಿಧಸೇವೆಗಳನ್ನೂ ಇದೋ ನಾನೆಸಗುವೆ! "ಭವಾಂಸ್ತು ಸಹವೈದೇಹ್ಯಾಗಿರಿಸಾನುಷುರಂಸ್ಯತೇ" ನಾನೂ ನೀವಿರಬೇಕಾದ ಎಡೆಗೇ ಬರಲು ಅಪ್ಪಣೆ ನೀಡಿ." ಇದು ಕೈಂಕರ್ಯಕ್ರಮಭಾವನಾ ದಶಕ.

ಈ ತೆರದ ಬವಣೆಗೆ ಒಂದು ಸ್ವಾರಸ್ಯವಾದ ಲೌಕಿಕ ಕತೆಯನ್ನು ಹಿರಿಯರು ಹೇಳುವುದುಂಟು. "ಊಣ್ ಅಧ್ಯಾಯಂ ಪಡಿಕ್ಕು ಮಾಪ್ಪೋಲೇ" ಅಂದರೆ, ಓರ್ವ ಬ್ರಾಹ್ಮಣ ಊರಿನಲ್ಲಿ ಇಲ್ಲದಾಗ, ಬೇರೆ ಊರಿನ ಅಥವಾ ಅದೇ ಊರಿನ ಮತ್ತೊಬ್ಬ, ಈ ವಿಪ್ರನ ಮನೆಗೆ ಬಂದ. ಆತನ ಧರ್ಮಪತ್ನಿಯ ಬಳಿ, ತಾವು ನಿಮ್ಮ ಯಜಮಾನರ್ನು ನಿಮಂತ್ರಣಕ್ಕೆ ನಾಳೆ ಪ್ರಾರ್ಥಿಸಿರುವುದಾಗಿ ಹೇಳಿ, ಮೊದಲೇ, ಯಜಮಾನರು ಬಂದೊಡನೇ ತಿಳಿಸುವಂತೆ, ಮತ್ತೆ ಮತ್ತೆ ಜ್ಞಾಪಿಸಿ, ತಮ್ಮ ಮನೆ ಸೇರಿದರು. ಆದರೆ ಹೆಂಡತಿ ತನ್ನ ಯಜಮಾನವರು ಊರಿಂದ ವಾಪಸ್ಸು ಬಂದೊಡನೆಯೇ ಹೇಳುವುದನ್ನು ಮರೆತೇ ಬಿಟ್ಟಳು. ಇನ್ನೇನು ಊಟದ ಸಮಯಕ್ಕೆ ಮುಂಚೆ, ಅವರ ಮನೆಗೆ ತಮ್ಮನ್ನು ಶ್ರಾದ್ಧ ಪೂರ್ವಪಂಕ್ತಿಗೇ ಪ್ರಾರ್ಥಿಸಿದ್ದಾರೆ. ನಾನು ಬಂದೊಡನೆಯೇ "ನಿಮಗೆ ಹೇಳುವುದನ್ನು ಮರೆತೆ!" ಎಂದು ಸಂಕೋಚದಿಂದ ಹೇಳಿದಳು. ಬ್ರಾಹ್ಮಣನಿಗೆ ಬಲು ಸಿಟ್ಟೇರಿತು. "ನಾನು ಶ್ರಾದ್ಧ ಭೋಜನದ ಕ್ರಮಗಳನ್ನು ಚೆಪ್ಪರಿಸುವುದು ಯಾವಾಗ? ಮೊದ ಮೊದಲೇ ಬ್ರಾಹ್ಮಣ ಭೋಜನದ ರೀತಿಗಳನ್ನು ಭಾವಿಸುತ್ತಾ ಭಾವಿಸುತ್ತಾ ಹೋದರೀಗ ತೃಪ್ತಿ ಸಿಗುವುದು? ದಿಢೀರ್ ಊಟದಲ್ಲಿ ಅದೇನು ರಸವಿರುವುದು?"

ಬ್ರಾಹ್ಮಣನಿಗೆ ಊಟವೇ ದೇವರ ಕೈಂಕರ್ಯವಾದರೆ, ಈ ವಕುಳಭೂಷಣರಿಗೆ ದೇವರ ಕೈಂಕರ್ಯವೇ ಊಟ! ಅದೇಗೀಳಿನಲ್ಲಿ ಶಠಕೋಪರು "ಸೇವೆ ಒದಗಿ ಬಂದಿತೇ!" ಆ ಸೇವಾಕ್ರಮಗಳೇನು? ಸ್ವಾಮಿಯ ಮುಖೋಲ್ಲಾಸ ಹೇಗೆ ಗೈದರಾದೀತು! ಇದೇ ಅವರ ಅನವರತ ಚಿಂತನೆ! ಅಂತಯೇ "ಕೈಂಕರ್ಯ ಭಾವನಾದಶಕ" ಇದು. ನಿರಾಸೆಯ ನಿರೀಕ್ಷೆಯಲ್ಲೇ ತೊಳಲಾಡುತ್ತಿದ್ದ, ಶರಣರಿಗೆ, ಇದೇ ತಿಮ್ಮಪ್ಪ ನಿಮಗಾಗಿಯೇ ನಾನು ಬಡಗಲ ವೇಂಕಟಾದ್ರಿಯಲ್ಲಿ ನಿರೀಕ್ಷಿಸುತ್ತಾ ನಿಂತಿರುವುದು. ನೀವು ಆಶಾಭಂಗ ಮಾಡಿಕೊಳ್ಳಬೇಡಿ ಎಂಬ ಆಶ್ವಾಸನೆ ನೀಡಿದ್ದಾನೆ. ಅದರಿಂದ ಮಾರಪ್ಪನ ಮಗನಾದ ಕುರುಹೂರ್ ಶಠಕೋಪರದು, ಇಲ್ಲೇ ತಾವು ಮಾಡಬೇಕಾದ ಅಖಂಡ ಸರ್ವ ವಿಧ ಸೇವಾ ಬೇಡಿಕೆ! ರಾಮಾನುಜರಭಾಷೆಯಲ್ಲಿ :-

ಸರ್ವದೇಶ ಸರ್ವಕಾಲ ಸರ್ವಾsವಸ್ಥೋಚಿತ ಅಶೇಷ ಶೇಷತಾ ವಿಕರತಿ ರೂಪ ನಿತ್ಯ ಕೈಂಕರ್ಯ

ಈ ಆಳ್ವಾರ್, ಹಾಗೂ ಆಚಾರ್ಯರ ಆಸೆಯಂತೆಯೇ ಈ ಉಭಯರ ಮಂಗಳಾsssಶಾಸನದಫಲವಾಗಿಯೋ ಎಂಬಂತೆ, ಉಳಿದ ಯಾತ್ರಾ ಸ್ಥಳಗಳಿಗಿಂತಲೂ ಹೆಚ್ಚು ಕಾಲ ತಿಮ್ಮಪ್ಪನ ಸೇವೆ, ಇಂದಿಗೂ ನಡೆಯುತ್ತಿರುವುದು ಗಮನಾರ್ಹ.

ತೆಳಿ ಕುರಲ್ ಅರುವಿ = ಗಂಭೀರ ತಿಳಿಮೆ, ಜುಳು ಜುಳುರವ, ಆಕಾಶಗಂಗೆ ಪಾಪವಿನಾಶಿನಿ ಮುಂತಾದ ೩೩ ಕೋಟಿ ತೀರ್ಥಗಳುಳ್ಳ, ತಿರುವೇಙ್ಗಡತ್ತು = ಶ್ರೀ ವೇಂಕಟಗಿರಿಯಲ್ಲಿ, ಬಂದು ನಿಂತಿದ್ದರಿಂದ, ಎಳಿಲ್ ಕೊಳ್ ಶೋದಿ = ಚೆಲುಗೊಂಡು ಬೆಳಗುವ ಜ್ಯೋತಿರ್ಮಯಮೂರ್ತಿ. ಇದೇ ನಮ್ಮಾಳ್ವಾರ್ ಬೇರೆಡೆ "ವಾನ್ ಆರ್ ಜೋದಿ. ನೀಲಾಳಿಚ್ಚೋದಿ" ಎಂಬ ಸುಂದರ ತೇಜಃಪುಂಜನನ್ನು ಅನುಭವಿಸಿದ್ದರೂ, ಹಗಲುದೀವಟಿಯಂತೆ ಆ ವೈಕುಂಠಜ್ಯೋತಿ! ಯಾವೊಂದೂ ತಮಸ್ ಸ್ಪರ್ಶವೇ ಇಲ್ಲದಿರುವ ಅಲ್ಲಿ, ಯಾರಿಗೆ ಹೇಗೆ

ಉಪಯೋಗ ಆದೀತು? ಎರಡನೆಯದು ಹಾಲ್ಗಡಲಿನಲ್ಲಿ ಹಾವಿನ ಮೇಲೆ ಬಿದ್ದುಕೊಂಡಿರುವುದು ಒಂದು 'ನೀಲಜ್ಯೋತಿ', ಬ್ರಹ್ಮಾದಿಸುರರೂ ಸನಕಾದಿಯೋಗಿಗಳೂ ದೂರನಿಂತೇ ತಮ್ಮ ವಿನಂತಿಗಳನ್ನು ಸಲ್ಲಿಸಬೇಕು! ನಮ್ಮಂತಹವರಿಗೆ ಈ ಬ್ರಹ್ಮಾಂಡದೊಳಗಿದ್ದರೆ ತಾನೇನು ಬಂತು ಭಾಗ್ಯ! ಈ ತಿಮ್ಮನೀಗ, ಈ ರಜಸ್ತಮೋ ಮಿಶ್ರಸತ್ವದ ಲೀಲಾವಿಭೂತಿಯಲ್ಲಿ. ಹಿಂದಿನ ಈರ್ವರನ್ನೂ ಸೇರಿಸಿಯೇ, ನಮ್ಮಂತಹವರಿಗೂ ಕಾಯಕ ಕೈಂಕರ್ಯಕ್ಕೆ ಒದಗಿ ಬರುವ, "ತಿರುವೇಙ್ಗಡತ್ತೆಳಿಲ್ ಕೊಳ್ ಶೋದಿ!" "ಸಿರಿ ವೇಂಕಟವನ್ನೇ, ಬೆಳಗಿಸುತ್ತಲಿರುವ ಜ್ಯೋತಿ" ಪರತ್ವ ಸೌಲಭ್ಯ ಉಭಯವನ್ನೂ ಸಮನಿಸುವ ಸ್ವಯಂ ಜ್ಯೋತಿ!

ಇಂತಹ ಎನ್ನೈ = ಕುಲಕ್ರಮಾಗತವಾಗಿ ನಮ್ಮ ಮನೆ ದೇವರಾದ, ತಂದೈ ತನ್ನೈಕ್ಕೇ = ನನ್ನ ತಂದೆಗೂ ತಂದೆಯಾದವನಿಗೇ ನಾನೂ ಮೀಸಲಾಗಿದ್ದೇ, ಒಳಿವಿಲ್ ಕಾಲಮೆಲ್ಲಾಮ್ = ಸ್ವಲ್ಪವೂ ಬಿಡದೆ ಅಖಂಡ ಕಾಲ ಪೂರಾ, ಉಡನಾಯ್ = ಸರ್ವದೇಶದಲ್ಲೂ ಅತನ ಜತೆಗೇ ಇದ್ದು, ಮನ್ನಿ = ಸರ್ವಾsವಸ್ಥೆಗಳಲ್ಲೂ ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲೂ ನಿತ್ಯವಿದ್ದು, ವಳುವು ಇಲಾ = ಸೇವೆಗಳಲ್ಲಿ ಒಂದನ್ನೂ ಬಿಡದೆ ಬೇರಾರಿಗೂ ಪಾಲು ಕೊಡದಷ್ಟು ಏಕೆಂದರೆ ನಾನಲ್ಲದ ಎಲ್ಲರೂ ನನ್ನ ಸೇವಾ ಪಾತ್ರರು! ಅಡಿಮೈ = ಸಿರಿಯಡಿಯೊಳಿಗವನ್ನು, ನಾಮ್ = ನಾವೆಲ್ಲರೂ ಸೇರಿ ಸಾಮೂಹಿಕವಾಗಿ, ವಿಶ್ವಶರಣರ ಸಿರಿಬಾಯಿಂದ, ಚೇತನರ ಬಗೆಗೆ ಏಕವಚನ ಎಂದೂ ಹೊರಡದು. ಫಲ ಎಲ್ಲರಿಗೂ! ಇಷ್ಟಪಟ್ಟವರೆಲ್ಲರೊಡನೆಯೂ ಸೇರಿಯೇ! ಯಾರಿಗೂ ಮೂರ್ತಿ ಪೂಜೆಯ ಬಲಾತ್ಕಾರವೂ ಇಲ್ಲ! ಶರಣ ಧರ್ಮಗಳೆಲ್ಲಾ ಐಚ್ಛಿಕ! ಶೆಯ್ಯವೇಣ್ಡುಮ್ = ಪೊರ್ಪ್ಪೋಕ್ತವಾದ ಕೈಂಕರ್ಯ ಗೈಯ್ಯುವಂತೆಸಗಯ್ಯಾ! "ಪರಿಶೆಯೊಂದಿಗೆ ಗೋವಿನ್ದಾ!"

ಯಾಮುನಾಚಾರ್ಯರ ಸುಪುತ್ರರಾದ, ತಿರುವರಂಗಪ್ಪೆರುಮಾಳ್ಅರೈಯರ್ಸ್ವಾಮಿಗಳು ಈ ಹಾಡನ್ನು ಪೂರಾಹಾಡಲು ಅವರ ಭಾವಾsಸವೇಶ ಎಡೆಗೊಡುತ್ತಿರಲಿಲ್ಲವಂತೆ! ಕಾರಣವೆಂದರೆ "ಒಳಿವಿಲ್ ಕಾಲಮೆಲ್ಲಾಮ್ ಕಾಲಮೆಲ್ಲಾಮ್, ಕಾಲಮೆಲ್ಲಾಮ್" "ಮುಗಿಯದ ಕಾಲವೂ" ಎಂದಲ್ಲವೋ ಆಳ್ವಾರ್ ಅರುಳಿಚ್ಚೆಯಲ್. ದಿವ್ಯದೇಶದ ಎಲ್ಲಾ ಅರೈಯರ್ಗಳೂ, ಆಳ್ವಾರರ ಈ ಭಾವಕ್ಕೆ ಏರಬೇಕಾದುದೇ ವಿಹಿತ! ಅಂತೆಯೇ ಅವರು, "ದಿವ್ಯ ಪ್ರಬಂಧಗಳ ತನಿಯನ್ ಪದ್ಯ"ಗಳನ್ನು ಅನುಸಂಧಿಸಲು ಬೇಕಿಲ್ಲ! ಆಳ್ವಾರರೇ ಕಾಲಮೆಲ್ಲಾಮ್, ಎಂದೇ ಅನುಗ್ರಹಿಸಿರುವಾಗ ತಿರುವರಂಗ ಪೆರುಮಾಳ್ ಅರೈಯರಿಗೆ ಮುಕ್ತಾಯವಾಗಲೀ, ಅನುಪೂರ್ವಿಯ ಮುಂದರಿದ ಗಾನವಾಗಲಿ ಸಾಧ್ಯವಾಗಲಿಲ್ಲ! ಅಭಿನಯ ಮುಗಿಸುವುದೇ ಕಡು ಕಷ್ಟವಾಗುತ್ತಿತ್ತಂತೆ! ಅಯೋಧ್ಯೆಯಿಂದ ಚಿತ್ರಕೂಟದವರೆಗೂ, ಮುಂದೆ, ಶ್ರೀರಾಮನ ಪ್ರತ್ಯಾsಗಮನದವರೆಗೂ ಭರತನಿಗೆ ಕೈಂಕರ್ಯದ ಆಸೆಯೊಂದೇ ಇತ್ತು! ನಮ್ಮಾಳ್ವಾರರಲ್ಲಿ ಲಕ್ಷ್ಮಣನಂತೆ ಶೇಷತ್ವವೂ, ಭರತನಂತೆ ಪ್ರತೀಕ್ಷಾಭಾವನೆಯೂ, ಮಿಳನಗೊಂಡಿತ್ತು! "ಉಪಮಾನಂ ಅಶೇಷಾಣಾಮ್" ಜಗತ್ತಿನ ಸಂತರೆಲ್ಲರೂ, ಸಚ್ಚರಣರೆಲ್ಲರನ್ನೂ ಹೋಲುತ್ತಾರೆ.

ತಮಿಳ್ ತಿರಳ್ ೩-೩-೨

ಎನ್ನೈ ತನ್ನೈ ತನ್ನೈ ತನ್ನೈಕ್ಕುಮ್! ಮುಂದೈ ವಾನವರ್ ವಾನವರ್ ಕೋನೊಡುಮ್
ಶಿನ್ದು ಪೂಮ್ ಮಹಿಳುಮ್ ತಿರುವೇಙ್ಗಡತ್ತು ಅನ್ದಮಿಲ್ ಪುಹಳ್ ಕಾರ್ ಎಳಿಲಣ್ಣಲೇ

ಕನ್ನಡ ನೆರಳ್

ಎನ್ ತಂದೆಯ ತಂದೆಯ ತಂದೆಯ ತಂದೆಗೂ ಮುನ್ದವ ಬಾನವರ್ ಬಾನವರ್ - ಮುಂದಾಳೊಡನೆ
ಚೆಲ್ ಪೂ ಬಿರಿ ಸಿರಿವೆಂಕಟದೊಳ್, ಅಂತವೆ ಇಲ್ ಗುಣವಾನ್ ಕಾರ್ ಒಪ್ಪುವ ಮೂರುತಿ, ಸಿರಿಯಣ್ಣನಲಾ

ಎರಡನೆಯ ಪಾಶುರದಿಂದ, ಇಂತಿಂತಹ ತಿಮ್ಮಪ್ಪನಿಗೇ **"ಕೈಂಕರ್ಯಗೈದೇವು"** ಎಂಬ ಕ್ರಿಯಾಪದವನ್ನು ಸೇರಿಸಿ ಅನ್ವಯಿಸಿಕೊಳ್ಳಬೇಕು. ಪೂರ್ಣವಾಗಿ ಈ ಹತ್ತು ಹಾಡುಗಳೂ **"ತಿರುಮಂತ್ರವೆನಿಸಿದ ಅಷ್ಟಾಕ್ಷರಿಯ ವಿವರಣೆ"**. ಮುಂದೆ ೬-೧೦ ಈ **"ಉಲಹಮುಂಡ"** ಹತ್ತು ಗಾಥೆಗಳೂ ದ್ವಯ ಮಂತ್ರದ ಅರ್ಥ. ಓಮ್ ನಮೋ ನಾರಾಯಣಾಯ ಎಂಬೀ ಅಷ್ಟಾಕ್ಷರಿಯ ನಾರಾಯಣಾಯ ಶಬ್ದಾರ್ಥವನ್ನು ಈ ಒಳಿವಿಲ್ ಕಾಲಮ್ ಮೊದಲ ಪಾಶುರವು ತಿಳಿಸುವುದು. ಹೇಗೆಂದರೆ **"ನಾರಾಯಣನ"** ಸೇವೆಗೋಸ್ಕರ. ಇಲ್ಲಿನ ಚತುರ್ಥೀ ವಿಭಕ್ತಿ **"ಆಯ"** ಎನ್ನುವುದು ಪ್ರಕೃತ್ಯರ್ಥಕ್ಕಾಗಿ, ಅಂದರೆ ನಾರಾಯಣನ ಪ್ರಯೋಜನಕ್ಕಾಗಿಯೇ. ಇದನ್ನು **"ತಾದರ್ಥ್ಯೇ ಚತುರ್ಥೀ"** ಎಂದು ವ್ಯಾಕರಣ ಶಾಸ್ತ್ರ ತಿಳಿಸುತ್ತದೆ. ಎಂದರೆ ಕೈಂಕರ್ಯ ಪ್ರಾರ್ಥನೆ ಈ ಪದದಿಂದ ಬಂದ ಹಾಗಾಯಿತಷ್ಟೆ. **"ಆಯ"** ಎನ್ನುವ ಪ್ರತ್ಯಯದ ಅರ್ಥ - ಕೈಂಕರ್ಯದ ಕಾಳಜಿಯನ್ನು ಹೇಳುವುದು - ಎಂದಾಯಿತು. ಎನ್ನೈ ತನ್ನೈ ತನ್ನೈ = ನಾರಾಯಣ. ಊಳಿಗ ಗೈ ಬೇಕಿದೋ ನಾವ್..... "ಸಿರಿವೇಂಕಟ....." ಎನ್ ತಂದೆಯ ತಂದೆಯ ತಂದೆಗಿದೋ. ಎಲ್ಲಕ್ಕೂ ಅದಿಕಾರಣನೂ ರಕ್ಷಕನೂ ಆಗಿರುವ ನಾರಾಯಣನಿಗೆ ಎಂದರ್ಥ.

ಇಲ್ಲಿನ ನಾಮ್ ''ನಾವು ಎಂಬುದು'' ಅ ಉ ಮ್ = ಓಮ್‌ಕಾರದ ಅರ್ಥ. ಮ್ ಜೀವಾತ್ಮರಾದವರೆಲ್ಲಾ, ಅ, ಅಯ. ಇಲ್ಲಿ ಚತುರ್ಥಿ ವಿಭಕ್ತಿಗೆ ಲೋಪ ಬಂದಿದ್ದರೂ ಅರ್ಥ ಇದ್ದೇ ಇದೆ. ''ಅವ'' ರಕ್ಷಣೆ. ಅವತೀತಿ ಅಃ, ಸರ್ವ ರಕ್ಷಕನಾದವನಿಗೆ, ಎಲ್ಲ ಭಾಷೆಗಳಲ್ಲೂ ಪ್ರಾಯಃ ಚಿಕ್ಕ ಮಕ್ಕಳೂ ''ಅ'' ಎಂದೇ ಪ್ರಥಮಾಕ್ಷರವನ್ನೇ ಮುದ್ದಾಗಿ ಹೇಳುವುದು, ಒಂದು ಸಹಜತೆ ''ಅ'' ಒಡೆಯನನ್ನೇ ಸೂಚಿಸುವುದು. ಹಾಗೂ ವ್ಯಂಜನಾಕ್ಷರಗಳನ್ನು, ''ಕ್, ಖ್, ಗ್, ಘ್'' ಹೀಗೇ ಉಚ್ಚರಿಸಬೇಕಾದ್ದು. ಅದು ಸ್ವಲ್ಪ ಕಷ್ಟ. ಕೊನೆಯಲ್ಲಿ ''ಅ'' ಸೇರಿಸಿದರೆ ಕ್+ಅ=ಕ ಸುಲಭವಾಗಿ ಹೇಳಲು ಬರುತ್ತದೆ. ಎಲ್ಲದರಲ್ಲೂ ಅನುಸ್ಯೂತನಾಗಿಯೇ ಇರುವ ಪರಮಾತ್ಮನನ್ನೇ ''ಅ'' ಹೇಳಿದಂತಾಯಿತು.

''ಮ್'' ಎಂಬುದು ಪವರ್ಗದ ಪಂಚಮಾಕ್ಷರ. ಇದಕ್ಕೆ ಹಿಂದೆ ೨೪ ವರ್ಣಗಳಿವೆ. ಕ ಇಂದ ಫ ವರೆಗೂ ''ಮ್'' ಎಂಬುದು ''ಮನ'' ಜ್ಞಾನೇ ಎಂಬರ್ಥದಲ್ಲಿದೆ. ''ಮನು'' ಅವಭೋಧನೆ. ತಾನೂ ತಿಳಿದುಕೊಳ್ಳುವುದು. ಇತರರಿಗೆ ತಿಳಿಸುವುದು ಈ ಎರಡರ್ಥವೂ ''ಮ್'' ಎಂಬುದರಿಂದ ಸಿದ್ಧವಾಗುತ್ತದೆ ಅಂದರೆ, ಜ್ಞಾನವನ್ನೇ ತನ್ನ ಮೂಲ ಸ್ವರೂಪವನ್ನಾಗಿಯೂ, ಅದರಿಂದ ಹೊರಡುವ ''ಪ್ರಕಾಶ''ವನ್ನು ತನ್ನ ಧರ್ಮವನ್ನಾಗಿಯೂ ತಿಳಿಯುವ ''ಚೇತನರು'' ಎಂಬ ಎರಡರ್ಥವೂ ಸಿದ್ಧಿಸಿದಂತಾಯಿತು.

ಹೀಗೆ ಇಲ್ಲದಿರುವ ಜಡವಸ್ತುಗಳೇ, ಹಿಂದಿನ ೨೪ ವರ್ಣಗಳಿಗೆ ಸೂಚಕ. ಜಡ ವಸ್ತುಗಳ ವಿವೇಚನೆ ಹೀಗಿದೆ. ಮೂಲ ಪ್ರಕೃತಿ. ಈಗ ಏನನ್ನು ಅಣು ಎಂದು ಕರೆಯುತ್ತೇವೆಯೋ ಅದರ ಕೊಟ್ಟಕೊನೆಯ ಅತ್ಯಂತ ಸೂಕ್ಷ್ಮವಸ್ತು. ಇದು ''ಜ್ಞಾನ''ವಲ್ಲ, ''ಜ್ಞಾನವುಳ್ಳದ್ದೂ'' ಅಲ್ಲ. ಅಚೈತನ್ಯ ಹಾಗೂ ಅಚೇತನ. ಮುಂದಿನ ೨೩ ಅವಸ್ಥೆಗಳ ಸ್ಥೂಲತೆಗೆ ಈ ಮೂಲಾಣುವೇ ಮೂಲ. ಕಚ್ಚಾಮಾಲು ಉಪಾದಾನ ಕಾರಣ. ಅದೂ ಬ್ರಹ್ಮಾತ್ಮಕವಾಗಿಯೇ ಈ ಅಣುವಿನ ಸುತ್ತಲೂ ಎಲೆಕ್ಟ್ರಾನ್‌ಗಳ ಚಲನೆಯನ್ನು ವಿಜ್ಞಾನಿಗಳೂ ಕಂಡುಹಿಡಿದಿದ್ದಾರಷ್ಟೆ. ಇದೇ, ಮೂಲ ಪ್ರಕೃತಿಯ ಸ್ಫುರಣ. ಈ ಸ್ಫೂರ್ತಿಯೇ ''ಸುಪ್ರೀಮ್'' ಪರಮ ಚೇತನನ ಇಚ್ಛಾತರಂಗ. ಪರಮಾತ್ಮನ ಸಂಕಲ್ಪ! ಮೂಲ ಪ್ರಕೃತಿಯೇ ಸ್ವಲ್ಪ ಹಿಗ್ಗುವುದು. ಬಿತ್ತನೆಯ ಬೀಜಕ್ಕೆ ನೀರು ಮಣ್ಣಿನ ಅಂಶ ಸೇರಿಸಿದರೆ ''ಉಚ್ಛ್ವಾನ'' ಅಂದರೆ ಉಬ್ಬುವುದಷ್ಟೆ. ಈ ದೆಸೆಗೆ ''ಮಹಾನ್'' ಎಂಬ ಸಂಜ್ಞೆ. ಬಲು ಚಿಕ್ಕದಾಗಿದ್ದುದು ''ಬುದ್ಧಿ''ಯ ರೂಪದಲ್ಲಿ ದೊಡ್ಡದಾಗುವುದರಿಂದಲೇ ಇದು ''ಮಹಾನ್''. ''ಮಹಾನ್ ವೈ ಬುದ್ಧಿಲಕ್ಷಣಃ''. ಇದರಿಂದ ಮುಂದಣ ಅವಸ್ಥೆಯೇ ಅಹಂಕಾರ ಅಸ್ಮಿತೆ EGO ''ಇದೋ ನಾನು'' ಎಂಬ ಭಾವನೆಗೆ ಈ ಮೂರನೆಯ ಜಡತತ್ವವೇ ಕಾರಣ. ಪ್ರಕೃತಿ, ಮಹಾನ್, ಅಹಂಕಾರ, ಮೂರಾಯಿತು. ಇವು ಮೂರನ್ನೂ ಸಾಮಾನ್ಯವಾಗಿ ''ಅವ್ಯಕ್ತ'' ಎಂದು ಕರೆಯಲಾಗುತ್ತದೆ. ಬೀಜ, ದಪ್ಪನಾಗಿ, ಮೊಳಕೆ ಒಡೆದು, ಇನ್ನೂ ಮಣ್ಣಿನಿಂದ ಮೇಲೆದ್ದು ಕಾಣಿಸಿಕೊಂಡಿಲ್ಲ. ಮಣ್ಣಿನಲ್ಲಿ ಮೂರು ಬಿರುಕುಗಳು ಮಾತ್ರ, ಕೆಳಗಿನ ವಸ್ತುವಿನ ಒತ್ತಡದಿಂದ ಕಾಣುವುದು, ಳನೆಯ ಅವಸ್ಥೆ, ಒಟ್ಟಿನಲ್ಲಿ ೨ ದಳ, ಎಲೆ, ಮಿದುವಾದ ಕಾಂಡ! ಇದು ''ವ್ಯಕ್ತ'' ಎನಿಸುತ್ತದೆ. ಹಿಂದಿನ ಅಹಂಕಾರ, ಅವ್ಯಕ್ತದ ಮೂರನೆಯ ಭೂಮಿಕೆ ಮತ್ತೆ, ಸಾತ್ವಿಕ, ರಾಜಸ, ತಾಮಸ ಎಂಬ ಮೂರು ಉಪವಿಭಾಗಗಳಲ್ಲಿ ಬರುತ್ತವೆ. ಎಂದರೆ, ಅಹಂಕಾರವೆಂಬ ಸೂಕ್ಷ್ಮತತ್ವಾಂಶದಲ್ಲಿ, ಸತ್ವಗುಣ ಹೆಚ್ಚಿದ್ದರೆ, ಅದು ಸಾತ್ವಿಕಾಹಂಕಾರ, ರಜಸ್, ತಮಸ್‌ಗಳು ಹೆಚ್ಚಿದ್ದರೆ, ರಾಜಸಾಹಂಕಾರ - ತಾಮಸಾಹಂಕಾರ ಎನಿಸಿಕೊಳ್ಳುತ್ತವೆ.

ಸಾತ್ವಿಕಾಽಹಂಕಾರವೇ, ಮುಂದಿನ ೧೧ ಇಂದ್ರಿಯಗಳಾಗಿ ಬೆಳೆಯುತ್ತದೆ. ಇದರ ಹಿಂದೆಲ್ಲಾ, ಒಬ್ಬ ''ಮಹಾವಿಜ್ಞಾನಿ''ಯ ಕೈವಾಡ ಇದ್ದೇ ಇರುತ್ತದೆ. ಆ ವಿಜ್ಞಾನಿಯಿಲ್ಲದೆ, ಯಾವೊಂದು ಜಡವೂ ಕೆಲಸ ಮಾಡದು. ಕೇವಲ ಎಂಜಿನ್ ಓಡದು. ಮಾನವ ರಹಿತ ಯಂತ್ರವಾದರೂ, ಮೊಟ್ಟ ಮೊದಲಿಗೇ ಚಾಲಕ ಸಮರ್ಥ ಬುದ್ಧಿವಂತ ಇರಲೇಬೇಕು. ಅಚೈತನ್ಯ, ಅಚೇತನ, ಚೇತನ ನಿರಪೇಕ್ಷವಲ್ಲ, ಸಾಪೇಕ್ಷ. ಇದೇ ಐನ್‌ಸ್ಟೈನ್ ಮಹಾಶಯನ ಆಶಯವೂ ಹೌದಷ್ಟೇ! ಎಲ್ಲರ ಅನುಭವದಲ್ಲೂ ಇದೇ ತಾನೇ ಕಂಡುಬರುವುದು!

''ವಾಕ್, ಪಾಣಿ, ಪಾದ, ಗುದ, ಜನನೇಂದ್ರಿಗಳೇ ಪಂಚ ಕರ್ಮೇಂರ್ಮೇದ್ರಿಯ, ಶ್ರೋತ್ರ ತ್ವಕ್ ಚಕ್ಷುರ್ ಜಿಹ್ವಾ ಘ್ರಾಣಿಗಳೇ ೫ ಜ್ಞಾನೇಂದ್ರಿಯಗಳು. ಎಲ್ಲಕ್ಕೂ ಮುಖ್ಯವಾದ ೧೧ನೆಯ ''ಕರಣ'' ಇಂದ್ರಿಯವೇ ''ಮನಸ್ಸು''. ಈ ೧೪ ಅಕ್ಷರಗಳ ಸಾಂಕೇತಿಕ ಅರ್ಥ ಇಲ್ಲಿಯವರೆಗೂ ಸಾಗಿದಂತಾಯಿತು. 'ಕ' ಇಂದ 'ಞ' ವರೆಗೆ. 'ಟ' ಇಂದ ಯಾವುವು? ತಾಮಸಾಹಂಕಾರದಿಂದ ಬೆಳೆಯುವ, ಪೃಥಿವೀ, ಅಪ್ ತೇಜಸ್ ವಾಯು ಆಕಾಶವೆಂಬ ಪಂಚಭೂತಗಳು ಹಾಗೂ ಅವುಗಳ ಪೂರ್ವಭಾವಿ ''ವೈಬ್ರೇಷನ್'' ಅತ್ಯಂತ ಸೂಕ್ಷ್ಮ ಪಂಚಭೂತಗಳ ಗುಣ, ಸ್ವಭಾವಾವಸ್ಥೆ. ಇದಕ್ಕೆ ''ತನ್ಮಾತ್ರ'' ಎನ್ನುತ್ತಾರೆ. ಭೂತಗಳು ೫, ಅವವುಗಳ ವಿಷಯಗಳಾದ, ಗಂಧ, ರಸ, ರೂಪ, ಸ್ಪರ್ಶ ಶಬ್ದಗಳೆಂದಾಗಲಿ, ಎರಡರಲ್ಲೂ ವಿಕಲ್ಪವುಂಟು. ಅಂತೂ ಒಟ್ಟಿನಲ್ಲಿ ಸ್ಥೂಲಾವಸ್ಥೆ ಇಲ್ಲಿಗೆ ಮುಗಿದಂತಾಗುತ್ತದೆ. 'ಟ' ಇಂದ 'ಫ' ವರೆಗಿನ ಸಾಂಕೇತಿಕಾರ್ಥ ೧೦. ಮೂಲ ಪ್ರಕೃತಿಯಿಂದ ೧೪+೧೦=೨೪ ಇವಿಷ್ಟೂ ಜಡ. ಇವಲ್ಲದುದೇ ೨೫ನೇ ಅಕ್ಷರ 'ಮ್' ಜೀವಾತ್ಮ. ೪೬ ಲಕ್ಷ ಜೀವ ವರ್ಗಗಳಲ್ಲೂ ಒಳಗಿದ್ದು, ಅಷ್ಟಪ್ಟು ಅನುಪಾತದಲ್ಲಿ ಮಾತ್ರ. ಓರ್ವನೇ, ನಮಗೆ ಕಾಣುವ ಜಗತ್ತಿನ ಎಲ್ಲಾ ಬಗೆಯ ಎಲ್ಲಾ ವಾಹನ, ಯಂತ್ರಗಳನ್ನೂ ಏಕಕಾಲದಲ್ಲಿ ಈ ಡ್ರೈವರ್ ನಡೆಸಲಾರ. ೨೬ನೆಯದೇ, ಈ ಅಚೇತನ, ಹಾಗೂ ಚೇತನ ವಸ್ತುಗಳಿಗಿಂತ

ಮೇಲಾದ ಪರಮ ಪ್ರಭುತ್ವ ಉಳ್ಳವನೇ **"ಸರ್ವೇಶ್ವರ". "ಷಡ್‌ವಿಂಶಃ ಮಹಾಪುರುಷಃ. ಪಂಚವಿಂಶಃ ಪುರುಷಃ"** ಪ್ರಾಚೀನ ವೈಜ್ಞಾನಿಕರಾದ, ಕರಾರುವಾಕ್ಕಿನ "ಸಾಂಖ್ಯ" ಶಾಸ್ತ್ರತದ್ಜ್ಞರ ಸಂಶೋಧನೆ, ವೇಗವಾಗಿ ಬೆಳೆಯುತ್ತಿರುವ ಈಗಿನ ವಿಜ್ಞಾನ ಪ್ರಪಂಚಕ್ಕೂ ಉಪಕಾರ ನೀಡಿ, ತತ್ವಶಾಸ್ತ್ರದ ವಿವೇಚನೆಗೆ ವೇದಾನ್ತ, ಅಧ್ಯಾತ್ಮಿಕ ಕ್ಷೇತ್ರವೂ ಹೇಗೋ ಹಾಗೆಯೇ ವೈಜ್ಞಾನಿಕ ಕ್ಷೇತ್ರವೂ ಹೊಂದಿಕೊಂಡೇ ಬೆಳೆಯುತ್ತವೆ.

ಸರ್ವೇಶ್ವರ, ಎಲ್ಲಾ ಜಡ ಹಾಗೂ ಚೇತನರ ಒಳಗೂ ಹೊರಗೂ ವ್ಯಾಪಕವಾಗಿ, ಅತಿ ಸೂಕ್ಷ್ಮವಾಗಿ ವ್ಯಾಪಿಸಿದ್ದಾನೆ. ಈ ೨೫ ತತ್ವಗಳೂ, ಸೂಕ್ಷ್ಮ ಅವಸ್ಥೆಯಲ್ಲಿ "ನ.ರ." ನಾಶವಾಗುವುವಲ್ಲ "ರಿಚ್" "ಕ್ಷಯೇ" "ನರ" ವಸ್ತುಗಳ ಒಂದನ್ನೂ ಬಿಡದ ಸರ್ವ ಸಮೂಹ ಘಟಕ "ನರಾಣಾಂ ಸಮೂಹಃ" "ನಾರಾಃ" ನಾರಾಣಾಂ + ಅಯನಮ್ = ನಾರಾಯಣಃ. ಈ ೨೫ ವಸ್ತುಗಳ ಒಳಗೂ ತಾನಿರುವುದರಿಂದ ನಾರಾಃ + ಅಯನಂ + ಯಸ್ಯಸಃ ನಾರಾಯಣಃ ಈ "ಸರ್ವಾಧಾರ ಸರ್ವಾಂತರ್ಯಾಮಿ ನಿಯಂತೃ" ೨ ಅರ್ಥಗಳೂ **"ನಾರಾಯಣ"** ಈ ಸರಳವಾದ ೪ ಅಕ್ಷರಗಳುಳ್ಳ ನಾಮಕ್ಕೆ. ಒಂದಷ್ಟೇ ಮಾತ್ರವಲ್ಲ, ಸಂಪೂರ್ಣ ಸಮಗ್ರ, ವ್ಯಾಪಕಾರ್ಥವಿದೆ. ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲೆ, ಹೇಗೆ ಅಪೀಲ್ ಇಲ್ಲವೋ, ಅದಕ್ಕಿಂತಲೂ ವಾಸ್ತವ ಹಾಗೂ ವೈಜ್ಞಾನಿಕವಾಗಿ, ಸರ್ವಶ್ರೇಯಃ ಪ್ರೇಯಾರ್ಥ "ನಾರಾಯಣ" ಎಂಬೊಂದರಲ್ಲೇ ಸಕಲಾರ್ಥಗಳೂ ಪುಷ್ಕಳವಾಗಿ ತುಂಬಿವೆ.

"ತಿರುವೇಙ್ಗಡತ್ತು" ಎಲ್ಲಾ ಹಾಡುಗಳಲ್ಲೂ ಬರುವುದು. ಆ ನಾರಾಯಣನೇ ಇಲ್ಲಿ ಅತ್ಯಂತ ಸುಲಭ, ಸುಶೀಲ, ವತ್ಸಲನಾದ, ಸರ್ವರಸ್ವಾಮಿ ವಿಶ್ವಪತಿ. ಅಷ್ಟಾಕ್ಷರಿಯ "ನಾರಾಯಣ" ಎಂಬುದರ ಪ್ರಾಯೋಗಿಕರೂಪವಾದ ತಿರುಪತಿತಿಮ್ಮಪ್ಪನಿಲ್ಲದಿದ್ದರೆ, ಎಷ್ಟೊಂದು ನಾರಸಮೂಹ, ತನ್ನ ನಿಜವಾದ, "ಸೇವೆ"ಯೆಂಬ ಅಸ್ತಿತ್ವದಿಂದ ವಂಚಿತವಾಗುತ್ತಿತ್ತು! ಸರ್ವಕಾಲ, ಸರ್ವದೇಶ ಸರ್ವಾವಸ್ಥೋಚಿತವಾದ ನಿಶ್ಶೇಷ ಕೈಂಕರ್ಯಗಳೂ ಆ ಅತ್ತಣ ವೈಕುಂಠದಲ್ಲಿ ತಾನೇ? ಇಲ್ಲಿ ನಮಗೆಂತು ಸಾಧ್ಯ? ಎಂದು ತಿಮ್ಮಪ್ಪ ಅಳ್ವಾರರನ್ನು ಪ್ರಶ್ನಿಸಿದಂತೆ, ಭಾವಿಸಿ, ಅವರು ನೀಡುವ ಉತ್ತರ ಈ ದ್ವಿತೀಯ ಗೇಯಗಾಥಾ. ವೈಕುಂಠದವರೂ, ಅದನ್ನು ಬಿಟ್ಟು, ಅಲ್ಲೂ ಸಿಗದಂತಹ ಸೇವಾ ಕೈಂಕರ್ಯಗಳನ್ನು ತಿರುಪತಿಯಲ್ಲೇ ಬಂದು ಮಾಡುವಾಗ ಈ ಕ್ಷೇತ್ರಕ್ಕೂ ಆ ವೈಂಕುಂಠಕ್ಕೂ ಏನೇನೂ ಭೇದವಿಲ್ಲ. ಅದಕ್ಕಿಂತಲೂ, ಒಂದರ್ಥದಲ್ಲಿ ಹೆಚ್ಚು. ಅಲ್ಲಿ, ಪರತ್ವದ ಅನುಭವ, ಕೈಂಕರ್ಯ, ಮಂಗಳಶಾಸನಾದಿಗಳು, ಉಂಟಾದರೂ, ಸೌಲಭ್ಯದ ಅನುಭವ ಅಲ್ಲಿಲ್ಲ. ಇಲ್ಲಾದರೆ ಉಭಯವೂ ಇಕ್ಕೆಲಗಳಾಗಿ ಸಮನ್ವಿತ! **"ತಿಮ್ಮಪ್ಪ ಪರಾತ್‌ಪರನೂ ಹೌದು, ಸುಲಭನೂ ಹೌದು. ಆದುದರಿಂದ, ನಿನಗೇ ನಮ್ಮೆಲ್ಲರ ಕಾಯಕ ಮೀಸಲಾಗುವಂತೆ ಅನುಗ್ರಹಿಸು. "ಛತ್ರ ಚಾಮರಗಳಂತೆ"** ಉಭಯ ಲಿಂಗವೆನಿಸುವ ಪರತ್ವ ಸೌಲಭ್ಯಗಳೆರಡೂ ಇಲ್ಲೇ.

ಎನ್ವೆ = ಪಿತೃ, ತನ್ವೆ = ಪಿತಾಮಹ, ತನ್ವೆ = ಪ್ರಪಿತಾಮಹ, ತನ್ವೆ = ಪಿತುಃ ಪ್ರಪಿತಾಮಹ. ತಂದೆ, ತಾತ, ಮುತ್ತಾತ, ಕೊಳ್ಳುಮುತ್ತಾತ. ಇವರೆಲ್ಲರಿಗೂ ಅಂದರೆ, ಮುನ್ವೆ = ಹಿಂದಿನ ಸರ್ವ ಪೀಳಿಗೆ, ಹಾಗೆಯೇ ಮುಂದಿನ, ಮಗ, ಮೊಮ್ಮಗ, ಮರಿಮಗ, ಮರಿಮರಿಮಗ "ತಮೀಶ್ವರಾಣಾಂ ಪರಮಂ ಮಹೇಶ್ವರಮ್" ಹೇಳಿದ ಇಷ್ಟೇ ಅಲ್ಲ. ಸರ್ವರಿಗೂ ನೀನೇ ತತ್ವ, ನೀನೇ ಸಾಧನ, ನೀನೇ ಫಲ. ದೇವರನ್ನಷ್ಟೇ ಶರಣರು ಪೂಜಿಸುವುದಿಲ್ಲ. ತಮ್ಮನ್ನೇ ಕೇಂದ್ರಬಿಂದುವಾಗಿರಿಸಿ ಉಳಿದ ಎಲ್ಲರಿಗೂ ತಾವು ಅಂತ್ಯಾಂತ್ಯ ಚರಮಸೇವಕರೆಂದೇ ಅನುಸಂಧಿಸುತ್ತಾರೆ.

ದಾಸರ ದಾಸರ ದಾಸರ ದಾಸರ ದಾಸ! ಅಷ್ಟಕ್ಕೂ ನಿಲ್ಲದ ದಾಸರ ದಾಸರ ದಾಸ! "ತ್ವದ್ ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ ಭೃತ್ಯಸ್ಯ ಭೃತ್ಯಃ" ಈ ಹಾಡಿನ ಎನ್ವೆ..... ಇತ್ಯಾದಿ ಶೈಲಿಗೆ "ಆರೋಹಣಕ್ರಮ"ವೆಂದೂ, ದೇವರಿಂದ ಹಿಡಿದು ಅವರವರ ಪೂಜ್ಯ ಗುರು, ಭಾಗವತರವರಿಗಿನ ಶೈಲಿಗೆ "ಅವರೋಹಣ" ಕ್ರಮವೆಂದೂ ಕರೆಯುತ್ತಾರೆ. "ಅಸ್ಮದ್ ಗುರು ಸಮಾರಂಭಾಮ್" ಹಾಗೂ "ಲಕ್ಷ್ಮೀನಾಥ ಸಮಾರಂಭಾಮ್" ಎಂದು ಹೇಳುಲಾಗುತ್ತದೆ.*

ವಾನವರ್ = ನಿತ್ಯಸೂರಿಗಳೂ, ವಾನವರ್ ಕೋನ್ ಒಡು = ಅವರಿಗೂ ಸ್ವಾಮಿಯಾದ ವಿಷ್ವಕ್‌ಸೇನರೊಂದಿಗೂ, ಮೂವತ್ತ ಮೂರು ಕೋಟಿ ದೇವತೆಗಳೂ, ಇಂದ್ರ ರುದ್ರ ಬ್ರಹ್ಮಾದಿಗಳೊಡನೆಯೂ ಎರಡೂ ಅರ್ಥವಾಗಬಹುದು. ಮೊದಲನೆಯವರು, ಶಿನ್ದು = ಶ್ರೀಶೈಲೇಶನ ಸೌಶೀಲ್ಯಾದಿ ಗುಣಾಽನು ಸಂಧಾನದಿಂದ, ಮೈಮೇಲಿನ ಎಚ್ಚರ ತಪ್ಪಿ ಸಿಕ್ಕಾಪಟ್ಟೆ ಹೂ ಎರಚುತ್ತಿರುವ ದೃಶ್ಯ! ಅಂತಹ, ಪೂ = ದಿವ್ಯಪುಷ್ಪಗಳು, ಮಹಿಳುಮ್ = ತಿಮ್ಮಪ್ಪನ ಶ್ರೀಮೂರ್ತಿಯ ಮೇಲೆ ಬಿದ್ದ ಮೇಲೆ, ಇನ್ನೂ ಹಳಹಳನೇ ಹೆಚ್ಚು ವಾಸನೆಯಿಂದ ಕಂಗೊಳಿಸುತ್ತಿವೆ ಅಂತಹ, ತಿರುವೇಙ್ಗಡತ್ತು = ಶ್ರೀ ವೃಷಗಿರಿಯಲ್ಲಿ ಇನ್ನೊಂದು ಭಾವವೆಂದರೆ, ಶಿನ್ದುಪೂಮಹಿಳ್ಗುಮ್ = ಗಿರಿಪ್ರದೇಶಕ್ಕೇ ಅನ್ವಯಿಸುವಂತೆ! ಕಾಡಿನಲ್ಲೆಲ್ಲಾ ಹೂಗಳನ್ನು ಕುಯ್ಯುವವರೇ ಇಲ್ಲದೆ, ಗಿರಿಗೂ ಅರ್ಪಿತ! ಮೊಗ್ಗುಗಳಿಗೂ ವಿಕಸನಶಕ್ತಿ ನೀಡುವುದು ಈ ಕ್ಷೇತ್ರ ಮಾಹಾತ್ಮ್ಯ.

---

* ಅಸ್ಮದ್ಗುರು ಸಮಾರಂಭಾಂ ಯತಿಶೇಖರ ಮಧ್ಯಮಾಂ| ಲಕ್ಷ್ಮೀವಲ್ಲಭ ಪರ್ಯಂತಾಂ ವಂದೇ ಗುರುಪರಂಪರಾಂ || :- ಮುದಲಿಯಾಂಡನ್
ಲಕ್ಷ್ಮೀನಾಥ ಸಮಾರಂಭಾಂ ನಾಥಯಾಮುನಮಧ್ಯಮಾಂ| ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪದಾಂ || : - ಭಗವದ್ ರಾಮಾನುಜ

ಅನ್ದಮ್ ಇಲ್ ಪುಹಳ್ = ವೈಕುಂಠಾಧಿಪನ ಗುಣಗಳಿಗೆ, ಒಂದು ಎಲ್ಲೆ ಇರಬಹುದೆಂಬ ಭಾವ. ದಯಾ, ಸೌಲಭ್ಯ, ಸೌಶೀಲ್ಯಗಳು ಅಲ್ಲಿ ಅಪೇಕ್ಷಿತವಲ್ಲ ತಾನೇ? ಇಲ್ಲಿ ತಿಮ್ಮಪ್ಪ ಅರ್ಚಾವತಾರಿಯ ಗುಣ ಅನಂತ! ಇಲ್ಲಿ ಅಯೋಗ್ಯನಾದ ನನಗೂ, ಶರಭ ಸಿಂಹ ವ್ಯಾಘ್ರ ಆನೆ, ಹೊನ್ನು ರನ್ನ ಕಾಡು, ಮರ, ಹೊಳೆ, ಬೇಡರು, ಕೊರಮರು, ಗಿರಿಜನ, ಕಪಿ, ಕರಡಿ, ಹಾವು ಒಂದೇ ಎರಡೇ ಎಷ್ಟು ಹೇಳೋಣ. ಇವೆಲ್ಲಕ್ಕೂ ಆ ವೈಕುಂಠಾನುಭವವನ್ನೇ ತಾರತಮ್ಯವಿಲ್ಲದೆ ನೀಡುತ್ತಲೇ ಇರುವ ಅವನ ಈ ಗುಣದ ಅನುಭವಕ್ಕಾಗಿಯೇ ಶ್ರೀಮದನಂದಾಳ್ವಾರರೂ, ಕರ್ನಾಟಕದ ಶ್ರೀರಂಗಪಟ್ಟಣದ "ಕಿರಂಗೂರಿ"ನಿಂದ ಗರ್ಭಿಣಿಪತ್ನೀ ಸಮೇತ, ತಿರುಮಲ ಗಿರಿಗೆ ಬಂದು, ಕೆರೆ ಅಗೆದು ನಿರ್ಮಿಸಿ ಹೂ ಬೆಳೆದು ಮಾಲೆ ಕಟ್ಟಿ ಸಮರ್ಪಿಸುತ್ತಿದ್ದರು! "ನೀನೀಗ ಗಂಡು!" "ಅನಂದಾಣ್‌ಪಿಳ್ಳೈ!" ಎಂದು ರಾಮಾನುಜರ ಮೆಚ್ಚುಗೆಗೆ ಪಾತ್ರರಾದರು. ಸ್ವಾಮಿಯ ಚೆಲುವು ಎಂಥದು? ಕಾರ್ ಎಳಿಲ್ = ಮೇಘಶ್ಯಾಮಸುಂದರ! ವಿಕೃತನಾಗಿದ್ದರೂ, ಸ್ವಾಮಿತ್ವ ಸಂಬಂಧದಿಂದ, ಎನ್ನೆತನ್ನೆ, ತನ್ನೆ ಅಣ್ಣಲೇ – ಅವನಿಗೇ ಒಪ್ಪುವಂತೆ, ಅಡಿಮೈ ಶೆಯ್ಯು ವೇಣ್ಡುಮ್ ನಾಮ್ = ನಾವು ಸಕಲ ವಿಧ ಕೈಂಕರ್ಯಗಳನ್ನೂ ಮಾಡಬೇಕು.

ತಮಿಳ್ ತಿರಳ್ ೩-೩-೩

ಅಣ್ಣಲ್ ಮಾಯನ್ ಅಣಿಕೊಳ್ ಶೆನ್ದಾಮರೈ ಕ್ಕಣ್ಣನ್ ಶೆಙ್ಗನಿವಾಯ್ ಕರು ಮಾಣಿಕ್ಕಮ್
ತೆನ್ನಿರೈ ಚ್ಚುನೈನೀರ್ ತಿರುವೇಙ್ಗಡತ್ತು ಎನ್ನಿಲ್ ತೊಲ್ ಪುಹಳ್ ವಾನವರ್ ಈಶನೇ

ಕನ್ನಡ ನೆರಳ್

ಅಣ್ಣನು ಮಾಯಿಗನ್ ಅಂದವ ಗೊಳ್ ಕೆಂದಾವರೆ ಕಣ್ಣಿನವನ್ ಕೆಂಬಣ್‌ದುಟಿಯವನ್ ಕರಿಮಾಮಾಣಿಕ್ಕಮ್ ತೆಳ್ನೀರ್ ಥಳ ಥಳ
ದೊನೆತೀರ್ಥದ ಶ್ರೀಮದ್ ವೇಂಕಟಗಿರಿಯೊಳ್ ಎಣೆಸಲ್ಯಾಗದ ನಿತ್ಯದ ಸಹಜಗುಣಾಕರ ಬಾನವರ್ಗೀಶನ್!

ನಾವೇನೋ ಭಾವಿಸಿ ಭಾವಿಸಿ ಕೈಂಕರ್ಯಾರ್ಥ ಪ್ರಾರ್ಥಿಸಬಹುದು! ಆದರೆ ತಿಮ್ಮಪ್ಪ ನೀಡಬೇಕಲ್ಲಾ! ಹಾಗೆನ್ನಬೇಡಿ. ನಿಷ್ಕಾಮರಿಗೇ ತನ್ನ ಸರ್ವಸ್ವವನ್ನೂ ಕೊಡುವಾತ ಸಕಾಮರಿಗೆ ಕೊಡದಿರುವನೇ? ಇಲ್ಲಿನ ಕಾಮ "ನಲ್ ಆಶೆ' ಎಂಬರ್ಥದಲ್ಲಿ ಗ್ರಾಹ್ಯ. ತಾಯಿ ಮಗುವಿಗೆ ಆಹಾರ ಕೊಡಲು ತಯಾರ್ ಆಗಿದ್ದಾಳೆ. ಅತ್ತು ಕೇಳಿದರಂತೂ ಇನ್ನೂ ಸಂತಸಪಟ್ಟೇ, ನೀಡುತ್ತಾಳಷ್ಟೆ! **"ಪ್ರಾಪ್ಯತ್ವೈ ಪ್ರಾರ್ಥಿತ್ತೇ ಪೆರವೇಣುಮ್"** ಆಗಲೇ ಉಭಯ ಕುಶಲ!

ಅಣ್ಣಲ್ = 'ರೂಪಮೇವ ಅಸ್ಯ ಮಹಿಮಾನಂ ವ್ಯಾಚಷ್ಟೇ' ನೋಡಿದರೇ ಸಾಕು. ಈತನೇ ಸರ್ವರ ಒಡೆಯ ಎನ್ನುವುದು ತಿಳಿದೇ ಬಿಡುವುದು. ಮಲೆನಾಡಿನ ಧೀರೋದಾತ್ತ ನಾಯಕ ಎಂಬುದೂ "ಅಣ್ಣಲ್" ಶಬ್ದಕ್ಕೆ ಅರ್ಥವಾಗಬಹುದು. ಸ್ವಾಮಿಯಾದ ಮೇಲೆ ಅದಕ್ಕೆ ಸರಿಹೊಂದುವ ಸೌಂದರ್ಯ ಸೌಶೀಲ್ಯಾದಿ, ಆಕಾರಗುಣ, ಸ್ವರೂಪಗುಣ ಉಭಯದಿಂದಲೂ ಚಕಿತಗೊಳಿಸುವ, ಮಾಯನ್ = ಮಾಯಾವಿ! ಅಣಿಕೊಳ್ = ಸ್ವಯಮೇವ ಆಭರಣದಂತಿರುವ, ಶೆಮ್ ತಾಮರೈಕ್ಕಣ್ಣನ್ = ಕಣ್ಣು ತೊಳೆದು, ಅಂಜನಾಲಂಕಾರ ಮಾಡಲೇ ಬೇಕಿಲ್ಲದಂಥ ಕಣ್ಣುಳ್ಳವನು "ರಕ್ತತಾಮರಸನಯನ!" ಅರಳಿ, ಹಳಹಳನೆ ತಂಪೂ ಕಂಪೂ ಸೂಸುವ ತಾವರೆ ಹೂವೂ ಕೆಲ ಅಂಶದಲ್ಲಿ ಮಾತ್ರವೇ ತಿಮ್ಮಪ್ಪನ ನಯನಗಳಿಗೆ ಹೋಲಿಕೆಯಾಗಿ ಹೊಂದಿಸಿರಬಹುದೇ ಹೊರತು, ಪೂರ್ಣೋಪಮಾನ ಎಲ್ಲೆಲ್ಲಿ ಹುಡುಕಾಡಿದರೂ ಸಿಗದು. **"ಗಂಭೀರಾಮ್ಭಸ್ಸಮುದ್‌ಭೂತ ಸುಮೃಷ್ಟ ನಾಳ ರವಿಕರವಿಕಸಿತ ಪುಂಡರೀಕ ದಳಾSಮಲಾSSಯತೇಕ್ಷಣಃ"** ಶ್ರೀಮದ್ ರಾಮಾನುಜರು ತಮ್ಮ ಸಂಸ್ಕೃತ ಕೃತಿಗಳನ್ನು ತಿರುವಾಯ್ ಮೊಳಿಯಿಂದಲೇ ಮಧುರಗೊಳಿಸಿದರು. ಜಾನಪದ ವಾಙ್ಮಯಗಳಿಂದಲೂ ಸಂಸ್ಕೃತ ಸುಸಂಸ್ಕೃತವಾಗಿದೆ. ಸಂಸ್ಕೃತದಿಂದಲೂ ವಿಶ್ವದ ದೇಶಭಾಷೆಗಳೂ ಪರಿಪುಷ್ಟವಾಗಿವೆ. ವಿಚಾರಕರು ಉಭಯತ್ರ ಸರ್ವತ್ರ ಸಮಾನ ಗೌರವ ದೃಷ್ಟಿಯಿಉಳ್ಳವರಾಗಿರಲೇ ಬೇಕು. ಏಕಪಕ್ಷೀಯರಾಗಿರಬಾರದು.

ಶೆಮ್ ಕನಿವಾಯ್ = ದೇವರ ನೇತ್ರ ಸೌಂದರ್ಯಕ್ಕೆ ಸೋತು ಸುಸ್ತಾದವರನ್ನು ಸಾಂತ್ವನ ಗೊಳಿಸಲು, ಅನುರಾಗ ಗರ್ಭಿತ ಸ್ಮಿತ ಗೈಯ್ಯುವ ಬಿಂಬ ಫಲಕ್ಕಿಂತಲೂ ಚೆಲುವಾದ ಶ್ರೀ ಅಧರ ಸ್ಫುರಣವಳ್ಳವನು. ತಿಮ್ಮಪ್ಪನ ಆ ಹುಸಿನಗೆಗೇ ಈ ವಿಶ್ವಶರಣರೂ ಸೋತಿರುವರು! ಇಂಥ ರೂಪ ಗುಣಾಪೇಕ್ಷಿಗಳನ್ನೂ, ತನ್ನಿಂದ ಹಿಂದಿರುಗದಂತೆ ಆಳಕ್ಕಿಳೆಯುವ, ಕರುಮಾ ಮಾಣಿಕ್ಕಮ್ = ಇಂದ್ರನೀಲ ಮಹಾ ಮಾಣಿಕ್ಯವನ್ನೂ ಮೂದಲಿಸಿ ಮೀರಿಸಿರುವ ದಿವ್ಯಶ್ರೀ ಮಂಗಳ ವಿಗ್ರಹವಾಂತವನು. ಅಂತಹ ಅನ್ಯಾದೃಶ ಮನೋಹಾರಿ ಮನ್ಮಥ ಮನ್ಮಥನ ರೂಪಾಂತಿರುವವನ ಶ್ರೀಕ್ಷೇತ್ರವೂ, ತೆಳ್‌ನಿರೈ ಶುನ್ಯೆನೀರ್ = ತಿಳಿಯಾದ, ಅಭಾಸ್ವರ ಶುಕ್ಲ ಕಾಂತಿಯಿಂದ ಕೂಡಿದ ನೀರಿನಿಂದ ಪರಿಪೂರ್ಣವಾದ ದೂಣೆಗಳೇ ಬಹಳವಿರುವ, ತಿರುವೇಙ್ಗಡತ್ತು. ಇಲ್ಲಿ ನಿಂತಿರುವುದರಿಂದಲೇ **"ಸ್ವಾಮಿತ್ವ, ಆಶ್ಚರ್ಯಕರತ್ವ-ಸ್ವಯಮಲಂಕೃತಿತ್ವ-ಪುಂಡರೀಕಾಕ್ಷತ್ವ-ಸಸ್ಮಿತಾSಧರತ್ವ"**, ಈ ಸೂರಿಗಳಿಗೆ ಅತಿಶಯಿತವಾಗಿ ಕಾಣುತ್ತಿದೆ! ಇನ್ನು ಬ್ರಹ್ಮಸ್ವರೂಪಗುಣಾನುಭವವನ್ನು

ತೋಡಿಕೊಳ್ಳುತ್ತಾರೆ. ಎಣ್ಣೆಲ್ = ಆ ಸಂಖ್ಯೇಯ ಅಚಿನ್ವ, ತೊಲ್ = ಅನಾದಿಸಿದ್ಧ ಅಂದರೆ ಸ್ವಾಭಾವಿಕವಾದ, ಪುಹಳ್ = **"ಜ್ಞಾನ ಶಕ್ತಿ ಬಲ ಐಶ್ವರ್ಯ ವೀರ್ಯ ತೇಜಸ್ ಸೌಶೀಲ್ಯ ವಾತ್ಸಲ್ಯ ಮಾರ್ದವಾರ್ಜವ ಸೌಹಾರ್ದ ಸಾಮ್ಯ ಕಾರುಣ್ಯ ಮಾಧುರ್ಯ ಗಾಮ್ಭೀರ್ಯೌದಾರ್ಯ ಚಾತುರ್ಯ ಸ್ಥೈರ್ಯ ಧೈರ್ಯ ಶೌರ್ಯ ಪರಾಕ್ರಮ ಸತ್ಯಕಾಮ ಸತ್ಯ ಸಂಕಲ್ಪ ಕೃತಿತ್ವ ಕೃತಜ್ಞತಾದಿ ಅಸಂಖ್ಯೇಯ ಕಲ್ಯಾಣಗುಣ ಗಣೌಘ ಮಹಾರ್ಣವಮ್."** ವಾನವರ್ ಈಶನ್ = ಪರಮಾಕಾಶವಾಸಿಗಳಿಗೂ ಪರಮೇಶ್ವರ, ಅವರ ನಿತ್ಯತ್ವವನ್ನೂ ಸದಾದರ್ಶನ ಶಕ್ತಿಯನ್ನೂ ನಿರ್ವಹಿಸುತ್ತಿರುವವನು. ಇಂತಹ ಮಹಾತ್ಮರನ್ನೇ ಸಂತೈಸುವವನು, ನಮ್ಮ ನಿಮ್ಮನ್ನು ತಣಿಸನೇ? ಅಂತಹವನ ಮುಖೋಲ್ಲಾಸಕ್ಕಾಗಿಯೇ ಸರ್ವ ಸೇವಕರಾಗೋಣ! ಅಸೆಗೇನು ಕಾಸು ಕೊಡಬೇಕೇ? **"ಅಡಿಮೈ ಶೆಯ್ಯವೇಣ್ಡುಂ ನಾಮ್."**

ತಮಿಳ್ ತಿರಳ್ ೩-೩-೪

ಈಶನ್ ವಾನವರ್ ಕೈನ್‌ಬನ್ ಎನ್ನಾಲ್ ಅದು ತೇಶಮೋ ತಿರುವೇಙ್ಗಡತ್ತಾನುಕ್ಕು
ನೀಶನೇನ್ ನಿರೈವೊನ್ನುಮಿಲೇನ್, ಎನ್‌ಗಣ್ ಪಾಶಮ್ ವೈತ್ತ ಪರಞ್ಜುಡರ್ ಶೋದಿಕ್ಕೇ?

ಕನ್ನಡ ನೆರಳ್

ಈಶನು ಬಾನವರ್ಗೆಂದೆನು ಎಂದರೆ ಅದು ತೇಜವೋ! ಸಿರಿ ವೇಂಕಟಗಿರಿ ನಿಲಯನಿಗೆ?
ನೀಚನೆ ಆಗಿ ಪರಿಪೂರ್ಣತೆಯೊಂದಿಲ್ಲದ ವೆನ್‌ಮೇಲ್ ಪಾಶವ ನಿಟ್ಟಾ ಪರಂ ಜೊಡರ್ ತೇಜನಿಗೆ! -

ನನ್ನಂತಹ ನೀಚಾತಿ ನೀಚನಿಗೇ ತನ್ನನ್ನೇ ತಂದಿರುವ ತಂದೆ ಶ್ರೀ ವೇಂಕಟೇಶ ನಿತ್ಯಸೂರಿಗಳಿಗೆ, ಬ್ರಹ್ಮರುದ್ರೇಂದ್ರಾದಿ ನಿರ್ಜರರಿಗೆ ತನ್ನ ದರ್ಶನಾನುಭವಗಳನ್ನು ನೀಡುತ್ತಿರುವನೆಂಬುದು ಅವನಿಗೊಂದು ಅತಿಶಯದ ತೇಜವೇರಿಸುವುದೋ? ನಮ್ಮ ಹೇಳಿಕೆಗಳೆಲ್ಲಾ, ಪರಮಾತ್ಮನ ಪರಮ ಸೌಶೀಲ್ಯಕ್ಕೆ ನಮ್ಮಲ್ಲಿ ಅತ ತೋರುವ ಮೋಹ ಅಸಕ್ತಿಗಳಿಗೆ ಸರಿಹೊಂದುವಂಥವಲ್ಲ. ನಮ್ಮ ನುತಿ, ಸ್ತುತಿ ನಮಸ್ಕಾರಾದಿಗಳೆಲ್ಲಾ ಪರಿಶುದ್ಧ ನಿರ್ಲಿಪ್ತ ಪಾವನತಮನಾದವನಿಗೆ ಇನ್ನೂ ಮಂಕು ತರುವುವೇ ಹೊರತು ತೇಜಸ್ಕರಗಳಲ್ಲ. ಪ್ರಾಟಿಸ್ಟೆಂಟ್, ಇಸ್ಲಾಂ ಆರ್ಯ ಸಮಾಜ ಮುಂತಾದ ಬ್ರಹ್ಮವಾದಿಗಳಿಗಿಂತಲೂ, ಈ ಆಳ್ವಾರ್ ಮುಂದಿದ್ದಾರೆ. 'ರೂಪ ವಿಗ್ರಹವಿಲ್ಲ' ಎಂದರಷ್ಟೇ, ಅವರೆಲ್ಲಾ! ನಮ್ಮ ನಾಲಿಗೆಯ ಸ್ತುತಿಯೂ ಅವನಿಗೆ ತಕ್ಕುದಲ್ಲ, ಅನುಚಿತ! ಶಂಕರಾಚಾರ್ಯರೂ ಗುಣವೂ ಇಲ್ಲವೆಂದರು! ಇಲ್ಲೆಲ್ಲಾ ಬಲು ಸೂಕ್ಷ್ಮ ಸಾಕ್ಷಾತ್ಕಾರ ರಹಸ್ಯ ಜ್ಞಾನ ಅತ್ಯವಶ್ಯ. ಇವರೆಲ್ಲರೂ, ಮೂಲ ಶಕ್ತಿಸ್ರೋತಸ್ಸಿನಿಂದಲೇ ಭಕ್ತಿ ಪಡೆದವರು!

ಹಾಗೆಂದು ಸ್ತುತಿಸದಿರೋಣವೇ? ಶಬ್ದಾತೀತನಾದರೂ, ಶಬ್ದಸಹ! ಬೌದ್ಧಿಕ ಹಮ್ಮಿನಿಂದ ನಾವಾಡುವುದೆಲ್ಲಾ ಅತನಿಗಂಟದು. ವಿನಯದ ಪರಾಕಾಷ್ಠೆಗೇರಿ, ಅವನ ಏಕೈಕ ಕೃಪಾಫಲವಾಗಿ ನಮ್ಮ ಸಮಸ್ತವಾಕ್, ಪಾಣಿಪಾದ, ನಯನಾದಿ ವ್ಯಾಪಾರಗಳೂ ಸಹಜವಾಗಿರಬೇಕೆಂಬ ಭಾವ ಇಲ್ಲಿಗೃಹೀತ, ಹಿಂದಿನ ಪಾಶುರದಂತೆ, ಸರ್ವೇಶ್ವರ, ನಮ್ಮ ನಿಮ್ಮಂತಹ ರೂಪಗಳಿಂದ ಅತೀತನಾದರೂ ಅವನೇ ಇಷ್ಟಪಡುವ ಅಪ್ರಾಕೃತ ದಿವ್ಯರೂಪವಿಲ್ಲ ಎಂದಾಗಲೀ, ಈ ಪ್ರಾಕೃತ ರೂಪಗಳೂ ಅವನದಲ್ಲ ವೆಂದಾಗಲೀ ನಾವಾರೂ ತೀರ್ಪುಗಾರರಾಗಲಾರೆವು. ಗುಣಾತೀತನೆಂದರೂ ನಮಗೆ ಪರಿಚಿತವಾಗಿರುವ ಇಲ್ಲಿನ ಗುಣಗಳಂತಲ್ಲದೆ ಅತೀಂದ್ರಿಯ ಗಮ್ಯವಾದ **"ಕಲ್ಯಾನೈಕ ನಿತ್ಯ ನಿರವದ್ಯ"** ಗುಣಗಳಿಲ್ಲದೆ ಹೋಗುವುವೆ? ಈಗೀಗಿನ ಹಾಗೂ ಹಿಂದಿನಿಂದಲೇ ವಾಸನಾಯುಕ್ತವಾಗಿ ಅಂಟಿಬಂದಿರುವ ನಮ್ಮ ಪ್ರಖರ ಬುದ್ಧಿಗೆ ತಾನೇ ಆ ದಿವ್ಯ ಯಥಾರ್ಥದರ್ಶನ ಯಥಾರ್ಥ ಉಚ್ಚಾರಣ, ಯಥಾರ್ಥ ಶ್ರವಣ, ಮನನಾದಿಗಳಾದಾವೇ? ಯೋಗಶಾಸ್ತ್ರದ ಕೇವಲ ಹೊರಗಿನ ಪ್ರಕ್ರಿಯೆಗಳಿಗಿಂತಲೂ ವಿಲಕ್ಷಣವಾದ ಯೋಗೇಶ್ವರನ ಕೇಂದ್ರದಿಂದಲೇ 'ಕಾಲಿಂಗ್ ಬೆಲ್' ಕೇಳಿದ, ಇಂತಹ ಜಗಚ್ಚರಣ ಸಂತರ ಅಂತರಂಗದ ಸತ್‌ಸಂಗ, ಬಲು ಅನಿವಾರ್ಯ!

ವಾನವರ್ಕು ಈಶನ್ ಎನ್ಬನ್ = ದೇವತಾಸಾರ್ವಭೌಮಾ! ನಿತ್ಯ ಸೂರಿಸಂಸೇವ್ಯಾ! ಎಂದರೆ ತಾನೇ, ಅದೂ ಖಂಡಿತ ಸ್ವಾಮಿಗೆ ಕಳೆತರುವ ಮಾತಲ್ಲಾ! ಏಕೆಂದರೆ, ನೀಶನೇನ್ ನಿರೈ ಒನ್ನುಮ್ ಇಲೇನ್ = ಹೇಯ ಗುಣಗಳಿಂದಲೇ ತುಂಬಿರುವ ಈ ನೀಚತಮನಾದ ನಾನು ಗುಣಪೂರ್ತಿಯೊಂದೂ ಇಲ್ಲದವ! ಹೀಗೆ ನಾನು ಸರ್ವಥಾ ಅಪೂರ್ಣನಾಗಿರುವುದರಿಂದಲೇ ಹಿಂದೆಲ್ಲಾ ಹಾಗೆ ಸ್ತೋತ್ರ ಮಾಡಿದ್ದು. ಅಂತಹ ನನ್ನ ಮೇಲೂ, ಎಮ್‌ಕಣ್ ಪಾಶಮ್ ವೈತ್ತ = ಸ್ನೇಹಾಸಕ್ತಿಯಿಟ್ಟಿರುವ, ಪರಂಶುಡರ್ ಶೋದಿಕ್ಕು = ಪರಂಜ್ಯೋತಿಯಾಗಿ ಬೆಳಗುವ ಮೂರ್ತಿಯಾಂತವನಿಗೆ, ಅದು = ನಾನಿಷ್ಟೂ ಗಾನಮಾಡಿದ ವಾಙ್ಮಯ ಸ್ತುತಿ, "ತೇಶಮೋ ತಿರುವೇಙ್ಗಡತ್ತಾನುಕ್ಕು? ಮಿಥ್ಯಾ ಪ್ರಪನ್ನನಾದ ನನಗೇ ದಯೆ ತೋರುವ ತಿಮ್ಮಪ್ಪ" ಎಂದು ಸ್ತುತಿಸದೆ, "ದನಗಾಹಿ" ಎಂದನ್ನದೆ, ಪರತ್ವದ ಮಾತೇಕೆ ಆಡಿದೆನಪ್ಪಾ! ಅಂತೆಯೇ "ಗೋವಿನ್ದಾ! ಗೋವಿನ್ದಾ" ನಾಮೋಚ್ಚಾರಣೆಯೇ ತಿರುಪತಿ ಯಾತ್ರಿಕರಲ್ಲಿ ಬಲುಕಾಲದಿಂದ ಸ್ಥಿರಪಟ್ಟಿರುವುದು!

ತಮಿಳ್ ತಿರಳ್ ೩-೩-೫

ಶೋದಿಯಾಹಿ ಎಲ್ಲಾವುಲಹುಮ್ ತೊಳುಮ್ ಆದಿಮೂರ್ತಿ ಎನ್ನಾಲ್ ಅಳವಾಹುಮೋ?
ವೇದಿಯರ್ ಮುಳು ವೇದತ್ತಮುದತ್ತೈ ತೀದಿಲ್ ಶೀರ್ ತಿರುವೇಜ್ಗಡತ್ತಾನೈಯೇ

ಕನ್ನಡ ನೆರಳ್

- ತೇಜವೆ ಆಗೆಲ್ಲಾ ಲೋಕವೂ ತೊಳಗುವೊಲ್ ಇರುವಾ ಆದಿಯ ಮೂರುತಿ ಎನ್ನಲು ಸರಿಹೊಂದುವುದೋ!
ವೈದಿಕರೆಲ್ಲರ ಎಲ್ಲಾ ವೇದಗಳಃಮೃತನಂ ನಿರ್ದೋಷದ ಸಾಮ್ಯಸುಶೀಲನಂ ಸಿರಿವೇಂಕಟದವನಂ-||

ನಮ್ಮಾಳ್ವಾರರ ಈ ಸ್ವನೈಚ್ಛಾನುಸನ್ಧಾನಗಳನ್ನೆಲ್ಲಾ, ತಮ್ಮೊಬ್ಬರ ಮೇಲೆಯೇ ಏರಿಸಿಕೊಂಡು, ಯಾಮುನಾಚಾರ್ಯರು, ತಮ್ಮ ಸ್ತೋತ್ರರತ್ನದಲ್ಲಿ ಮುಂದಿನ ಈ ಅಯಪಾಣಿಯಾದ ಶ್ಲೋಕ ರಚಿಸಿ, ಈ ಶಠಕೋಪರು ಪಟ್ಟ ಪಾಡನ್ನೆಲ್ಲಾ ಹೋಗಲಾಡಿಸದಂತಿದೆ! ನಾಥಮುನಿಗಳ ಕ್ರಿ.ಶ. ೮, ೯, ಹತ್ತನೆ ಶತಮಾನಗಳಿಂದಲೇ ಈ ಶರಣರುಗಳ ಅಪೂರ್ವ ಗಾಥೆಗಳಿಂದ ತಮ್ಮ ಕೃತಿಗಳನ್ನು ಉಜ್ಜ್ವಲತರವಾಗಿಸಿದ್ದು ಒಂದು ಮಹಾಘಟ್ಟ. ಅವರ ಮೊಮ್ಮಗ ಈ ಅಳವನ್ದಾರ್.

ಅಮರ್ಯಾದಃ ಕ್ಷುದ್ರಃ ಚಲಮತಿಃ ಅಸೂಯಾ ಪ್ರಸವಭೂಃ|
ಕೃತಘ್ನೋ ದುರ್‌ಮಾನೀ ಸ್ಮರ ಪರವಶೋ ವಂಚನಪರಃ||

ನೃಶಂಸಃ ಪಾಪಿಷ್ಠಃ .... ಈ ಪರಮಾಚಾರ್ಯರ ಹಾದಿಯಲ್ಲೇ ಲಕ್ಷ್ಮಣ ಮುನಿಗಳೂ **"ಅಜ್ಞಾನ ಜನ್ಮ ಗೃಹಂ ಆತ್ಮಗುಣೈರ್ ವಿಮುಕ್ತಂ ಆಜ್ಞಾತಿಲಂಘನ ಪರಂ ಯದುಶೈಲನಾಥ! ಮಿಥ್ಯಾಪ್ರಪನ್ನಮಪಿಮಾಂ ಅವಲೋಕಯ ತ್ವಂ, ಲಕ್ಷ್ಮ್ಯಾಂ ಕ್ಷಮಾಮಪಿ ಗುರೂನ್ ಅವಲೋಕ್ಯ ಪೂರ್ವಾನ್"** ಎಂದರು, ತಿರುನಾರಾಯಣಪುರದ ಜೀರ್ಣೋದ್ಧಾರ ವರ್ಷವಾದ ಕ್ರಿ.ಶ. ೧೦೯೭ರಲ್ಲಿ ಈ ಷಷ್ಠಜಿತಂತಾ ಶ್ಲೋಕವನ್ನು ಇಂದಿಗೂ ಮೇಲುಕೋಟೆಯಲ್ಲಿ ಬಳಕೆಯಲ್ಲಿ ತಂದರು. ಮುಂದೆ, ವೇದಾನ್ತ ದೇಶಿಕರೂ "ಅಪರಾಧ ಚಕ್ರವರ್ತಿ" ತಾನೆಂದು ಇದೇ ತಿಮ್ಮಪ್ಪನಲ್ಲೇ ತಮ್ಮ "ದಯಾಶತಕ"ದಲ್ಲಿ ಸಮರ್ಪಿಸಿದರು. ನಮ್ಮಾಳ್ವಾರರ ಧಾಟಿ, ಗೋದಾದೇವಿಯ ಮೇಲೂ ಪರಿಣಾಮ ಬೀರಿದೆ.

"ಶಿರುಪೇರು ಅಳೈತ್ತನವುಮ್ ಶೀರಿಯರುಳಾದೇ".....(೨೮ ತಿರುಪ್ಪಾವೈ)

"ನಾರಾಯಣನೇ" "ಉತ್ತಮನ್" "ಉಮ್ಬರ್ ಕೋಮಾನೇ" ಇತ್ಯಾದಿಗಳೆಲ್ಲಾ ಸ್ವಾಮಿಯ ದೊಡ್ಡಸ್ತಿಕೆಯನ್ನು ಹೇಳುವಂಥವು. ಗೋಪಕುಲಕ್ಕೆ ಸೇರಿದ ಪರಮ ಸುಶೀಲನಿಗೆ ಅವೆಲ್ಲಾ ಕರ್ಣ ಕಠೋರವಾಗಿ ಕೇಳಿಸಿ, ಕೋಪ ಉಕ್ಕಿದಂತೆ ಅಂಡಾಳ್ ಭಾವಿಸಿ, ಮನ್ನಿಸಲೂ ಬೇಡಿ, "ಗೋವಿನ್ದಾ" ಎಂದರೆ ಮಾತ್ರ ನನ್ನ ಈ ಅಂತ್ಯಕುಲದವರ ನಡುವೆ ಏಕರಸನಾಗಿ ಕಲೆತಾಡುವ ಮಹಾಗುಣವಾಚಕ ಹಾಗೂ ಇಂಪಾದ "ಗೋವಿನ್ದಾ" ನಾಮ ಕೇಳಿದೆನಮ್ಮಾ! ಸಂತುಷ್ಟನಾದೆ. ಈಗಲೀಗ ನಾನು ಪರಂಪರೆಯ ರಹಸ್ಯಾಧ್ಯಯನದ ಒಂದು ಮಾನವೀಯ ಸಂಪತ್ತನ್ನು ಕಂಡುಕೊಂಡೆ.

ಪ್ರಕೃತ, ನನ್ನಂತಹ ನೀಚನಿಗೂ ತನ್ನನ್ನು ತಂದನೆನ್ನುವುದೂ ಅವನ ಮಹಿಮಾ ಸ್ತುತಿಯಲ್ಲ. ನನಗಿಂತಲೂ ಕ್ಷುದ್ರರನ್ನು ಲೋಕದಲ್ಲೆಲ್ಲಾ ಹುಡುಕಿ ನೋಡಿದ. ಆದರೆ ಅಂತಹವರು ಯಾರೂ ಈ ಸರ್ವಜ್ಞ, ಸರ್ವಸಮರ್ಥನಿಗೆ ಸಿಗಲಿಲ್ಲ. ನಾನೇ ನೀಚರ ರಾಜಾಧಿರಾಜ! ಹೀಗೆ ಈ ಪರಮ ವಿನಯಮೂರ್ತಿ ಈ ಶರಣನ ಉದ್ಧಾರ! ಯಾರಿಗೆ ತಾನೇ ಮೇಲ್ ಪಙ್ತಿಯಾಗದು? ಪರಮಾತ್ಮನ ಚರಮಮಹಿಮೆ ಈ ಹಾಡಿನ ವೈಶಿಷ್ಟ್ಯ. ಆಶ್ರಿತರ ಗುಣದೋಷ ನೋಡಿ ಅಸರೆ, ನೀಡುವುದು, ನೀಡದಿರುವುದು ಗುಣವಂತನಾದವನಿಗೆ ಶೋಭೆ ತಾರದು. ಪರಮಾತ್ಮ ಪರಮ ಕಲ್ಯಾಣಗುಣನಿಧಿಯಾದುದು, ನನ್ನಂತಹ ಅಂತ್ಯಾಂತ್ಯ ಹಿಂದುಳಿದವನನ್ನೂ ಅಂಗೀಕರಿಸಿದುದರಿಂದಲೇ! ಅಹಾ, ಶ್ರೀ ನಿಧಿ ಎಂತಹ ಮಹೋದಾರಿ! ಅಂತ್ಯೋದಯ ಕಾರಿ!

ಶೋದಿಯಾಹಿ = ಉಳಿದ ಎಲ್ಲಾ ಜ್ಯೋತಿಗಳನ್ನೂ ನುಂಗಿರುವ, ಪರಂಜ್ಯೋತಿರ್‌ಮಯವಾದ ತಿರುಮೇನಿ ಈ ತಿಮ್ಮಪ್ಪನದು. ಈತನ ಈ ಪ್ರಾಕೃತ ಸಜಾತೀಯವಾಗಿ ಹೊರಗೆ ಕಂಡರೂ ಅಪ್ರಾಕೃತ ಪೂರ್ಣ ಮೌಲ್ಯತುಂಬಿಕೊಂಡೇ ಮೈವೆತ್ತಿದೆ. ಭಕ್ತರೆಲ್ಲರ ಮನೋಮಯ ಮೂರ್ತಿಯೇ, ಈ ಮನೋಜ್ಞ ಬಾಹ್ಯಮೂರ್ತಿಯಾಗಿ, ಆತನ ಸೌಲಭ್ಯ ಗುಣದಿಂದಲೇ ಕಾಣುತ್ತಿದೆ! ವೇದೋಪನಿಷತ್ತುಗಳಲ್ಲಿ ಸಾಕ್ಷಾತ್ಕರಿಸಿರುವ, ಮಂತ್ರ, ಮಂತ್ರಾರ್ಥ ದ್ರಷ್ಟಾರರಾದ ಮಹರ್ಷಿಗಳಂತೆಯೇ ಈಗ ಈ ದ್ರಾವಿಡ ಮಹರ್ಷಿ ಸಂತರಿಗೂ ಸಾಕ್ಷಾತ್‌ಕಾರವಾಗುತ್ತಿದೆ! ವಿಗ್ರಹದಿಂದ ಹೊರಸೂಸುವ ದಿವ್ಯಕಾಂತಿ, ಉಳಿದ ಜ್ಯೋತಿಗಳನ್ನೆಲ್ಲಾ ಕಬಳಿಸಿಬಿಟ್ಟಿದೆ! ಅವೆಲ್ಲಾ ಇದರೊಳಗೇ ಅಡಗಿವೆ! ಶಿವ ನಕ್ಕಾಗ ಅಕ್ಕಮಹಾದೇವಿಗೂ,

"ಈರೇಳು ಲೋಕಮುಂಬೆಳಗುವ ಈ ಪಲ್ ಕಾಂತಿಯಿದಿಗೋ!"

ಎಂಬ ಭಾವ ಉಕ್ಕಿದೆ. ಎಲ್ಲರ ಎಲ್ಲ ಬಗೆಯ ಶ್ರಮವನ್ನೂ ಆರಿಸಿ ತಣಿಸುವ ಕಾಂತಿಜ್ಯೋತಿ ಈ ವಿಗ್ರಹವನ್ನೂ ನುಂಗಿದೆ! ಅಂದರೆ ದೇವರ ಮೂರ್ತಿಗಳೇ ಆಗಲಿ, ಅದರ ಜ್ಯೋತಿಃ ಪ್ರಸರಣವೇ ಆಗಲಿ ಎರಡೂ ನಿರಪೇಕ್ಷ ಸ್ವತಂತ್ರವಸ್ತುಗಳು. ಸ್ವಚ್ಛವಾದ ಕನ್ನಡಿಯಿಂದ ಬಿಂಬ ಪ್ರಜ್ವಲಿಸುವಂತೆ, ಆ ಪ್ರತಿಮಾಬಿಂಬದಿಂದ ಕನ್ನಡಿಯೂ ಕಳೆಯೇರುತ್ತದೆ. **"ವಿಸ್ತೀರ್ಯ ದರ್ಪಣ ಇವ ಪ್ರಚುರಂಸ್ವದನ್ತೇ"**. ಬಾಹ್ಯ ಸೃಷ್ಟಿಯಿಂದಲೇ ಅವುಗಳ ಮೂಲಕವೇ, ಸೃಷ್ಟಿಕರ್ತನನ್ನು ಕಾಣುವ ಕಲೆ ಈ ಮಾನವನಿಗೆ ಕರಗತವಾದಾಗಲೇ ಅದೇ ಕರ್ತಾರನ ಮೂಲಕವೇ, ಸೃಷ್ಟಿಯ ಪಾವನ ಪರಿಪೂರ್ಣತೆ, ಸಂವೇದ್ಯವಾಗುವುದು. ಈ ಪರಸ್ಪರೋಭಯಸಹದರ್ಶನ, ಸಹಭಾವರಸ ಪ್ರಚ್ಛೆಯೇ ವಿಶಾಲ ಜಗತ್ತಿನ ಅನ್ತಸ್ಸ್ಥಲವನ್ನು ತೋರಿಸುವುದು. ಅದಕ್ಕಾಗಿಯೇ ಈ ಶರಣರು, ತಿರುಪತಿಯ ಸ್ವಚ್ಛ ಕಲ್ಲಿನ ಮೇಲೆ ಹರಿಯುವ, ನೀರು, ಆಳವಾದ ಮತ್ಸ್ಯತೀರ್ಥಾದಿಗಳು, ಕೆಳಗೆ ಮೂರು ನಾಲ್ಕು ಆಳದಲ್ಲಿರುವುದನ್ನೂ ತೋರಿಸುವ ಪ್ರಕೃತಿವರ್ಣನೆ ಗೈದಿರುವುದು, ಅರ್ಥಪೂರ್ಣ! ತಿರುಪತಿ, ಕೇವಲ ಜಡಭೌತಿಕ ಪ್ರದೇಶ ಮಾತ್ರವಲ್ಲ. ಹಿಮಗಿರಿ ಬರೀ ಮಂಜಿನಪುಂಜವಲ್ಲ **"ಅಸ್ತಿ ಉತ್ತರಸ್ಯಾಂದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ"** ಎಂದ ಮಹಾಕವಿ ಕಾಳಿದಾಸನಂತೆ ಇವರೂ.

"ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ.... ಪೀತಾಭಾ ಸ್ಯಾತ್"

ಎಂಬ ನಾರಾಯಣ ಸೂಕ್ತದಲ್ಲಿ ಬರುವ ದಹರವಿದ್ಯೆಯ ಗಹನ ಅನುಭವ ನಿಲಮೇಘವನ್ನು ತನ್ನ ನಡುವೆ ಅಡಗಿಸಿಕೊಂಡು, ಒಂದು ವಿದ್ಯುಲ್ಲೇಖೆ ಇದ್ದರೆ ಹೇಗೋ ಹಾಗೆ, ಅದಕ್ಕಿಂತಲೂ ಭಾಸುರ ಸ್ವಾಮಿಯ ಜ್ಯೋತಿರ್ಮಯ ನೀಲಮೂರ್ತಿ! ಯಾವ ಶ್ರೀಮೂರ್ತಿ ಶ್ರೀ ಪ್ರಭಾವಳಿಯಲ್ಲಿದ್ದು ಅದರ ಶ್ರೀಕಾಂತಿ ಈ ಎರಡೂ, ವಿಶಿಷ್ಟ ಉಭಯರೂಪವನ್ನು ಕುಡಿದಿದೆಯೋ ಅಂತಹ ಒಂದಕ್ಕೊಂದೊಪ್ಪುವ ಶ್ರೀಮನ್ ನಾರಾಯಣನ ಸಾಕ್ಷಾತ್ಕಾರದ ಸ್ವಚ್ಛವರ್ಣನೆ ಇಲ್ಲಿ ಸಿಗುತ್ತದೆ. ಒಟ್ಟಿನಲ್ಲಿ ಮೂರ್ತಿ ಎನ್ನುವುದು "ತೇಜೋರಾಶಿ" ಎಂಬುದೀಗ, ಆ ಉಪಾಸನೆ, ಹಲವರಿಗೆ ಸಾಧನದಂತಾದರೆ, ಈ ದ್ರಾವಿಡಬ್ರಹ್ಮರ್ಷಿಗೆ, ಅದೇ ಸಾಕ್ಷಾತ್ಕಾರವನ್ನೇ ತಿಮ್ಮಪ್ಪನ ಮೂರ್ತಿಯೇ ತಾನೇ ಸಾಧನವಾಗಿದ್ದು ತನ್ನ ಕೃಪಾಫಲವಾಗಿ ಉಕ್ಕುಕ್ಕುವ ಪ್ರೀತಿರೂಪವೂ ವಸ್ತುನಿಷ್ಠ ದರ್ಶನರೂಪವೂ ಆದುದೇ ನಮಗೂ ಪ್ರಾಪ್ಯ ಹಾಗೂ ಪ್ರಾಪಕ! ಎಂಬೀ ನಿಷ್ಠೆ.

ಹೀಗಿರುವ ದಿವ್ಯಮಂಗಳ ವಿಗ್ರಹವನ್ನು, ಆದಿಮೂರ್ತಿ ಸರ್ವಕ್ಕೂ ಪ್ರಪ್ರಥಮ ಕಾರಣಮೂರ್ತಿ **"ಮುನ್ನೀರ್ ಞಾಲಂಪಡೈತ್ತ ಎಂ ಮುಹಿಲ್ ವಣ್ಣನ್"** ಸೃಷ್ಟಿಯಲ್ಲೂ ಸಾಕಾರನಾಗಿಯೇ ಈ ಸ್ವಾಮಿ ಇರುವನೆಂಬ ರಹಸ್ಯ! ಇದನ್ನು ಸೇವಿಸುವುದಕ್ಕೆ ನಿರ್ಬಂಧ ಉಂಟೋ? ಎಲ್ಲಾ ಉಲಹುಮ್ ತೊಳುಮ್ = ಲೋಕದಲ್ಲೆಲ್ಲಾ ಕೊಟ್ಟಕೊನೆಯವನಾದ ತಾನೇ ಸೇವಿಸುತ್ತಿರುವಾಗ ಉಳಿದ ಸರ್ವರಿಗೂ ಕೇಳಬೇಕೆ? ತೊಳುಮ್ = ನಾನು ದೇವರನ್ನು ನೋಡುವವನೇ ಅಲ್ಲ, ಎನ್ನುವವರೂ, ಅವಶರಾಗಿ ಆನಂದದಿಂದ ನೋಡುವಂತೆಸಗುವ ಚಾಣ ತಿಮ್ಮಪ್ಪ! "ಏಷ ಹ್ಯೇವ ಆನಂದಯಾತಿ!" (ತೈತ್ತಿರೀಯ ಉಪನಿಷತ್)

ಎನ್ನಿಲ್ = ಹೀಗೆಲ್ಲಾ ಹೇಳಿ ನಾನು ಸ್ತುತಿಸಿದರೆ - ಒಳವು ಆಹುವೋ = ಸಾಕಾಗುತ್ತದೆಯೇ? ಮೂಲ ಪ್ರಮಾಣವಾದ ವೇದವನ್ನೇ ಅಸ್ತಿಯಾಗುಳ್ಳ ವೈದಿಕರೆಲ್ಲರ ವೇದಗಳೆಲ್ಲದರ ಭೋಗ್ಯತಾ ಪ್ರಕರ್ಷವೇ ಈ ಆನಂದ ನಿಲಯ ವಿಮಾನ ಮಧ್ಯಸ್ಥನಲ್ಲಿ ಕಾಣುತ್ತಿರುವುದು, ಒಂದಲ್ಲ ಎರಡಲ್ಲ, ಜಗತ್ತಿನ ಸರ್ವವೇದ ವೇದ್ಯನೂ ಅದವ ನೀತ. ವೇದಿಯರ್ ಮುಳು ವೇದತ್ತು ಅಮುದತ್ತೈ = ಕರ್ಮ, ಜ್ಞಾನ, ಉಪಾಸನಾ, ದೇವತಾಕಾಂಡ, ಎಲ್ಲಾ ವೇದಭಾಗಗಳಿಗೂ ಒಂದೇ ಪರಮ ಹುರುಳಾದವನು! ಇಂತಹವರೇ ನನಗಾಗುವವರು, ಇಂತಹವರಲ್ಲ, ಎಂಬ ಹೇಯವಾದ ತಾರತಮ್ಯ ಗುಣವಿಲ್ಲದ, **"ಪರಮ ಸಾಮ್ಯಯೋಗಿ ಶ್ರೀನಿವಾಸ ಪರಬ್ರಹ್ಮ"**. ತೀದು ಇಲ್ = ಅವಗುಣ ಸಂಭಾವನೆಯೇ ಇಲ್ಲದ, ಅಖಿಲ ಹೇಯಗಳಿಗೂ ಪ್ರತ್ಯನೀಕ! ಗ್ರಂಥವೇದ್ಯನಂತಿದ್ದರೂ ನಿರ್ಗ್ರಂಥಿ! ಈ ಗಿರಿಯಲ್ಲಿ ತೇಜಃಪುಂಜ ಸುಂದರ ಪಾವನ ಶ್ರೀಮೂರ್ತಿಯಾಂತು ಒಳ್ಳೆಯವರು, ಕೆಟ್ಟವರು ಎಂಬ ಭೇದವಿಲ್ಲದೆ ಸರ್ವ ಸಂಸೇವ್ಯನಾಗಿದ್ದಾನೆ. ಹೇಗೆ ಹೇಗೆ ತಿಮ್ಮಪ್ಪನಿಗೆ ಮಂಗಳಾSSಶಾಸನ ಮಾಡಿದರೂ ಸಾಲದಲ್ಲಾ, ಸಾಲದಲ್ಲಾ! ಇದೇ ಈ ಶರಣಕುಲಪತಿಗಳ ಕೊರೆ.

ತಮಿಳ್ ತಿರಳ್ ೩-೩-೬

ವೇಮ್ ಕಡಜ್ಗಳ್ ಮೆಯ್ ಮೇಲ್ ವಿನೈ ಮುತ್ತವುಮ್ ತಾಜ್ಗಳ್ ತಜ್ಗಳ್ಕ್ಕು ನಲ್ಲನವೇ ಶೈವಾರ್|
ವೇಜ್ಗಡತ್ತು ರೈವಾರ್ಕ್ಕು ನಮೊವೆನ್ನಲಾಜ್ಗಡಮ್ಮೆ ಅದು ಶುಮನ್ವಾರ್ ಹಳ್ಕ್ಕೇ-||

ಕನ್ನಡ ನೆರಳ್

- ಕಡಗಳು ಬೇಯುವುವೆ - ನಿಜ! ಮೇಲ್ ಪಾಪಂ ಮೊತ್ತವೂ, ಒಳಿತನೆ ತಾವುಗಳ್ ತಮಗೇ ಗೈವರಲಾ!
ವೇಂಕಟದಿರುವಗೆ 'ನಮ'ವೆನ್ನಲು ಸೋಂಕುವ ಕೊಂಕೇ ಇಲ್ಲದೆವಾಗುಗೆ ನಿಚ್ಚಳ! ಆ ಭರ ಹೊತ್ತಿರುವರ್ಗೆ!-

ಜೀವಾತ್ಮರೆಲ್ಲರ ಸ್ವರೂಪವೇ ಶೇಷತ್ವ ಅಂದರೆ ಪರಾರ್ಥತೆ. ಇಲ್ಲಿನ "ಪರಶಬ್ದ"ವು ತಾನಲ್ಲದ ಇತರರು ಎಂಬರ್ಥದೊಡನೆಯೇ "ಸರ್ವ ಶ್ರೇಷ್ಠ" ಎಂಬುದನ್ನೂ ತನ್ನ ಶಬ್ದ ಶಕ್ತಿಯಿಂದಲೇ ತೋರುವುದು. ಇದಕ್ಕೆ ಅನುಗುಣವಾದ ಪ್ರಾಪ್ಯವಾದುದು ಭಗವದ್ ಭಾಗವತ ಕೈಂಕರ್ಯ. ಇದರ ಬಗ್ಗೆ ಕಾಳಜಿ ಹುಟ್ಟಿದರೇ ಸಾಕು ಈ ಶರೀರ ಇಂದ್ರಿಯ, ಭೋಗಾರ್ಹವೆಂಬ ನಾನಾ ವಿಷಯಗಳು, ಕೊನೆಗೆ ಸೂಕ್ಷ್ಮಪ್ರಕೃತಿ, ಈ ಸಂಸರ್ಗದಿಂದ ಅಂಟಿರುವ ಜೀವಾತ್ಮರು ತಮಗೂ, ಸಮಾಜಕ್ಕೂ ವಿಶ್ವಾತ್ಮನಿಗೂ ದ್ರೋಹ ಬಗೆಯುವ ಎಲ್ಲಾ ಬಗೆಯ "ಭಗವನ್ನಿಗ್ರಹ ವೆಂಬ" ಪಾಪಗಳೂ ತಾವಾಗಿಯೇ ಸರಿದುಹೋಗುವುವು. ಸ್ವಾಮಿಗೆ ಸಂತಸವಾಗುವಂತೆ ನಾವು ಜೀವನ ರೂಪಿಸಿಕೊಂಡಾಗ ಸರ್ವ ಸಮಷ್ಟಿ ವಿರಾಟ್ ಮಹಾಪುರುಷನ ಕಿರಿಕಿರಿ ಹೋಗಿಬಿಡುವುದು.

ತಿಮ್ಮಪ್ಪನಿಗೇ ಹೊರತು ನಮಃ "ನನಗಲ್ಲ". "ವೇಂಕಟಪತಯೇ ನಮಃ" ಎನ್ನುತ್ತಿರಿ. ಹೀಗೆ ಈ ಶತಕೋಪರು ಈ ದಶಕದ ಮೊದಲ ಹಾಡಿನ ಅಷ್ಟಾಕ್ಷರಿ ಮಂತ್ರದ ನಮಸ್ ಶಬ್ದಾರ್ಥವನ್ನು ಇಲ್ಲಿ ತಾವೇ ಒಡೆದು ಹೇಳುತ್ತಾರೆ. "ನಮಃ ನಮಃ" ಇದೇನೂ ನಾಲಿಗೆ ಇರುವ ಯಾರಿಗೂ ಕಷ್ಟವಲ್ಲ. ಸುಮ್ಮನೆ ಒರಲುತ್ತಿರಿ! ಕಡಜ್ಗಳ್ = ಋಣರೂಪದಲ್ಲಿರುವ, ಪುಣ್ಯಪಾಪಗಳನ್ನು ಹೇಗೆ ತೀರಿಸಿಯೇ ಬಿಡಬೇಕೋ, ಹಾಗೆ, ಮೆಯ್‌ಮೇಲ್ ವಿನೈ ಮುತ್ತವುಮ್ = ಮೈ ಮೇಲಂಟಿರುವ ಆಗಂತುಕ ಪೂರಾಪಾಪಗಳು ಸ್ವ, ಪರ, ಪರಮಾರ್ಥ ವಿಘಾತುಕಗಳಾದ ದುರ್ಭಾವ, ದುರ್ವಾಕ್ಯ, ದುಶ್ಚರಿತಾದಿಗಳು ತಜ್ಜನ್ಯವಾದ ಪರಮಾತ್ಮನ ನಿಗ್ರಹಬುದ್ಧಿ, ವೇಮ್ = ಬೆಂದೇ ಹೋಗುವುವು, ಆಗ ಪ್ರಕೃತಿ ಸಂಬಂಧಗಳೆಲ್ಲಾ, ಪರಿಶೋಧಿತ ಪರಿವರ್ತಿತಗಳಾಗಿ ಎಲ್ಲೆಲ್ಲೂ ಹಾಸಲಾಸ್ಯವೇ ಚಿಮ್ಮುವುದು, "ನನ್ನದು, ನನ್ನದು" "ಮೇ ಮೇ" ಇದರಿಂದಲೇ ಸರ್ವತಾಪತ್ರಯಗಳೂ, ನನ್ನದಲ್ಲ, ನಮ್ಮದು, ದಿವ್ಯದೇಶದ್ದು, ಕೊನೆಗೆ ಸರ್ವದೇಶಾಧಿಪತಿಯದು ಎಂದರೆ ಈ ಸ್ವಸ್ವಾಮಿತ್ವ ವಿಸರ್ಜನದ, ಸ್ವ ಸಂತೋಷದಿಂದಲೇ ಗೈಯ್ಯುವ ಪ್ರಕ್ರಿಯೆಯ ಬೆಳಕಿನಲ್ಲಿ, ಪಾಪಗಳ ಕತ್ತಲೆ ಸೌಮ್ಯವಾಗಿಯೇ ಕಂಬಿಕೀಳುವುದು. ವಿಶ್ವದವರೆಲ್ಲರನ್ನೂ ಸರಿನಿಟ್ಟಿಗೇರಿಸಲು ಎಂತಹ ಒಪ್ಪುವ ಶೈಲಿ ಈ ಶರಣರದು. **"ಇದೇ ಪ್ರೇಮಳ ಅಹಿಂಸಾ ಕ್ರಾಂತಿ!"**

ಮತ್ತೊಂದು ಯೋಜನೆಯೆಂದರೆ, ಕಡಜ್ಗಳ್, ಮೇಲ್ ಮುತ್ತವುಮ್ = ಶರಣನಾದ ಪ್ರಪನ್ನನಿಗೆ, ಜ್ಞಾನ ಹುಟ್ಟಿದ ಮೇಲೆಯೂ ಪ್ರಮಾದದಿಂದ ಅನಿವಾರ್ಯವಾಗಿ ಉಂಟಾಗಬಹುದಾದ, ಉತ್ತರಾಘವೂ, ವೇಮ್ = ದಹಿಸಿ ಹೋಗುವುದು, ಅದಕ್ಕೂ ಮುಂಚೆ ಅಂಥವನ್ನು ಬರಗೊಡುವುದೇ ಇಲ್ಲ. ಈ ಬ್ರಹ್ಮಸೂತ್ರಕಾರರ 'ಉತ್ತರ ಪೂರ್ವಾಘಯೋಃ ಅಶ್ಲೇಷವಿನಾಶೌ' (ಬ್ರ.ಸೂ. - ೧೨) ಉತ್ತರ ಪೂರ್ವ ಪಾಪಗಳು, ಅದರಲ್ಲಿ ಹಿಂದೆ ಮಾಡಿದ್ದವೆಲ್ಲಾ ನಶಿಸಿಯೇ ಹೋಗುವುವು. ಬುದ್ಧಿ ಪೂರ್ವಕವಾಗಿದ್ದರೂ, ಈ 'ನ.ಮಃ' ಶಬ್ದ ಬಲದಿಂದ ಹಾಗಾಗಲು ನಾವಾರೂ ಅಡ್ಡಿ ಮಾಡಲು ಬರುವುದಿಲ್ಲ. ನಾವಾರೂ ವಾದಿ ಪ್ರತಿವಾದಿ, ತೀರ್ಪುಗಾರರೂ ಅಲ್ಲ. ಅದ್ವೈತ ಪರಮಾರ್ಥದ ನಿಷ್ಠೆ ಈ ಶರಣರ ಭೂಮಿಕೆ! ಉತ್ತರಕಾಲೀನ ಪುಣ್ಯಪಾಪಗಳು ಪ್ರಾಮಾದಿಕವಾಗಿ ಸಂಭವಿಸಬಹುದಾದವೂ ಅಂಟವು. ದೇವರಿಗೆ, ಸಮಾಜಕ್ಕೆ, ನನಗೇ ಎಸಗುವ ಪ್ರಾತಿಕೂಲ್ಯವೇ 'ಪಾಪ' ಎನ್ನುವುದು. 'ನಮಃ' ನಮಗಾವೂದೂ, ತತ್ವ ಸಾಧನ ಫಲ, ಈ ಮೂರರಲ್ಲೂ, ಸಂಬಂಧವಿಲ್ಲ. ದೈವದತ್ತ ಜ್ಞಾನವಿಶೇಷದಿಂದ, ಈತ ಸರ್ವಾನುಕೂಲನೇ ಆಗಿಬಿಡುತ್ತಾನೆ. ತಾಜ್ಗಳ್ ತಜ್ಗಳ್‌ಕ್ಕು ನಲ್ಲನವೇ ಶೆಯ್‌ವಾರ್ = ತಾವೇ ತಮಗೆ ಒಳ್ಳೆಯದನ್ನೇ ಮಾಡಿಕೊಂಡಂತಾಗುತ್ತದೆ. ಅನೇಕ ಜನರಿಗೆ, ವೇದಾನ್ತಮಾರ್ಗ ಎಂದರೆ ಭಯವಿರುವುದು, ಈ ಪಥದಿಂದ ಕರಗಿಹೋಗುತ್ತದೆ. "ಸ್ವಾರ್ಥಬೇಡ" ಎಂದು ಅಧ್ಯಾತ್ಮ ಹೇಳುವುದಿಲ್ಲ. ಅದು ಪರಾರ್ಥ, ಪರಮಾರ್ಥಕ್ಕೆ ವಿರುದ್ಧವಾಗಿಲ್ಲದಿದ್ದರೆ ಸರಿ! "ಸರ್ವೇಷಾಂ ಅವಿರೋಧೇನ" ಜೀವಿಸುವ ಹಕ್ಕು ಈ ಪ್ರಜ್ಞೆಯಿಂದಲೇ ಪ್ರಜೆಗಳಿಗೆ ದೊರಕಬೇಕಷ್ಟೆ.

ನಮ ಉಕ್ತಿಂ ವಿಧೇಮ - ಈಶೋಪನಿಷತ್

ತೆಂಕಣ ಕಡಲತೀರಲ್ಲಿ, ಲಂಕೆಗೆ ಸೇತುವೆ ಕಟ್ಟಲು "ನೀನು ಅನುಕೂಲನಾಗಪ್ಪಾ" ಎಂದು ಶ್ರೀರಾಮ ಸಮುದ್ರರಾಜನಲ್ಲಿ ಶರಣಾಗತಿ ಮಾಡಿದ. ಮೊದಮೊದಲು ಅತ ಈ ವಿಶ್ವಪತಿಗೆ ಮೊಗ ತೋರಲಿಲ್ಲ. ಲಕ್ಷ್ಮಣಾ! ಆ ನನ್ನ ಕೋದಂಡ ಬಾಣಗಳನ್ನು ತಾ, ಎಂದಾಗ ಮೊಗ ತೋರಿಕೊಂಡ. ಬಾಣ ಹೆದೆಗೇರಿತ್ತು! ಸಮುದ್ರ ಶರಣು ಮಾಡಿದ್ದಾಗಿದೆ! ರಾಮ ಬಾಣ ವ್ಯರ್ಥವಾಗಬಾರದು. ಯಾರ ಮೇಲೆ ಪ್ರಯೋಗಿಸಲಿ? ಉತ್ತರ ಧ್ರುವದ ಕಡೆ ಆ ಬಾಣ ವರುಣನ ವೈರಿಗಳ ಮೇಲೆ ತನ್ನ ಕೆಲಸ ಮಾಡಿತು. ಈ ಇತಿಹಾಸದಿಂದ "ದೇವರಿಗೆ ಅಭಿಮುಖರಾದರೆ ಸಾಕು. ಪರಮಾತ್ಮ ಸರ್ವಲೋಕ ಶರಣ್ಯ ವಾತ್ಸಲ್ಯಧಾಮ ಪ್ರಸನ್ನನಾಗಿ ಬಿಡುತ್ತಾನೆ" ಎಂಬುದು ಸ್ಪಷ್ಟವಾದಂತಾಯಿತು.

ತಾಜ್ಗಳ್ ತಜ್ಗಳ್‌ಕ್ಕು ಎನ್ನುವುದರಿಂದ - ಶರಣಾಗತ ಇತರ ಸ್ವಗತ ಸಾಧಕರಂತಲ್ಲ. ಈತ ಗೈಯ್ಯುವ ಸರ್ವ ಕೈಂಕರ್ಯ ಕಾಯಕವೂ ಬೇರೆಯವರು ಹೊಂದುವ ಸಾಮಾನ್ಯ ಫಲಗಳಂತಲ್ಲ, ಎಂಬ ಗುಟ್ಟು ರಟ್ಟಾಗುತ್ತದೆ. ಹಾಗೆ ತಾನು ವಿಲಕ್ಷಣನೆಂಬ ಗರ್ವವೂ ಇಲ್ಲ. ಸಾತ್ವಿಕ ಫಲದ ಆಗ್ರಹ ಮಾತ್ರ ಅದೂ ತನ್ನ ಮಟ್ಟಿಗೆ ಇರುತ್ತದೆ. ನಿಜ ಶರಣ ಪರರರಲ್ಲಿ ನಿರಾಗ್ರಹಿ ಆಗಿರುತ್ತಾನೆ. ಪರಮಾತ್ಮನಲ್ಲಿ ಪ್ರಾರ್ಥಿಸುತ್ತಲೇ ಇರುತ್ತಾನೆ. ಮಹಾ ವಿಶ್ವಾಸದಿಂದ ನಗುನಗುತ್ತಲೇ ಇರುತ್ತಾನೆ.

ನಮ ಎನ್ನಲಾಮ್ ಕಡಮ್ಮೈ = ಈ ಎರಡಕ್ಷರ ಹೇಳಲು ಬಲು ಸುಲಭವಲ್ಲವೇ? ಎಲ್ಲರೂ ಹೇಳಬಹುದು "ನಮಸ್ತೇ" ಈ ಅತ್ಯಲ್ಪಪ್ರಯಾಸದಿಂದಲೇ ಘನವಾದ ಫಲ ಸಿಕ್ಕಿದರೆ, - ಅನಿಷ್ಟ ನಿವಾರಣ ಪೂರ್ವಕ ಇಷ್ಟಸಿದ್ಧಿಯಾದರೆ - ಅದು = ಆ ನಮಶ್ಶಬ್ದದ ಭಾರವನ್ನು, ಶುಮನ್ದಾರ್ ಹಳ್ಕ್ಕೇ = ದೇವರ ದೃಷ್ಟಿಯಿಂದ, ಅಹಹಾ! ನೀವೆಷ್ಟೊಂದು ದೊಡ್ಡ ಬೆಟ್ಟ ಎತ್ತಿದಿರಪ್ಪಾ! ಎನ್ನಲು ಬರುತ್ತದೆ. ಅಂಥವರ ಭಾಗಕ್ಕೆ, ಕಡಜ್ಗಳ್ ವೇಮ್. ಇದು ಮೆಯ್ = ಸತ್ಯ. ಈಶೋಪನಿಷತ್ತಿನಲ್ಲೂ, "ಭೂಯಿಷ್ಠಾಂ ನಮ ಉಕ್ತಿಮ್" ಇಲ್ಲಿಗೆ ಸಂಮತಿ ನೀಡುವುದು. ದ್ರೌಪದಿಯ ಮಾನಭಂಗ ಸಮಯದಲ್ಲಿ, ಕೃಷ್ಣ ಮೂರ್ತಿ ದೂರದಲ್ಲಿದ್ದರೂ, ನಾಮಮಾತ್ರದಿಂದ, ತಾನು ವಸ್ತ್ರ ನೀಡಿದ್ದೂ ಸಾಲದು. ಅಕೆ "ನಮಃ" ಎಂದು ಮಾಡಿದ ಶರಣಾಗತಿಗೆ, ನಾನೇ ಮುಖತಃ ಹೋಗಿ ಅಕೆಯ ಮಾನ, ಮನ ನಯನಗಳನ್ನು ಸಂತೈಸಬೇಕಿತ್ತು. ಈ ವ್ಯಥೆ ಕೊನೆ ಕಾಲದಲ್ಲೂ ಅವನಿಗೆ ಇತ್ತು. **ನಾತಿಸ್ವಸ್ಥಮನಾ ಯಯೌ!**

ತಮಿಳ್ ತಿರಳ್ ೩-೩-೭

ಶುಮನ್ದು ಮಾ ಮಲರ್ ನೀರ್ ಶುಡರ್ ದೂಪಮ್ ಕೊಣ್ಡು ಅಮರ್ನ್ದು ವಾನವರ್ ವಾನವರ್ ಕೋನೊಡುಮ್
ನಮನ್ನೆಳುಮ್ ತಿರುವೇಜ್ಗಡಮ್ ನಜ್ಗಳ್ಕ್ಕು ಶಮನ್ಗೊಳ್ ವೀಡು ತರುಮ್ ತಡಜ್ಕುನ್ನಮೇ

ಕನ್ನಡ ನೆರಳ್

ಹೊತ್ತದೊ ಮಾಮಲರ್ ನೀರ್ ದೀಪವ ಧೂಪವ ಕೊಂಡು ಪತ್ತದೆ ಬೇರ್ ಫಲವೊಂದನೂ ಬಾನವರ್ ಬಾನವರರಸೊಡನೆ |
ನಮಿಸುತಲುಜ್ಜೀವಿಪ ವೆಮಗೆ ಸಿರಿವೇಂಕಟ ವೆಂಬೀ,- ಸಮತೆಯ ಮುಕುತಿಯ ತರುವುದ್ಯೆ, ಮಾ ಬೆಟ್ಟವದೇ-||

ಪರಮಾತ್ಮನನ್ನು ಅಶ್ರಯಿಸುವುದರ ಚರಮ ಇಂಗಿತವೇನು? ದೇಶಭಕ್ತಿ! ಅದರಿಂದಲೇ ಪರಮಸಾಮ್ಯರೂಪ ಮುಕ್ತಿ! ಬೆಟ್ಟದಲ್ಲಿರುವ ಈ ನಮ್ಮಪ್ಪ ಬೇರೆಯಲ್ಲ, ಬೆಟ್ಟ ಬೇರೆಯಲ್ಲ. ಹೀಗೆ ಪ್ರತಿಯೊಂದು ಎಡೆಯಲ್ಲೂ ಸಂತರು ದೇಶಭಕ್ತಿಯನ್ನು ಹಿಗ್ಗಿಸಿ ಅಧ್ಯಾತ್ಮೀಕರಿಸಿ, ವೈಜ್ಞಾನಿಕವಾಗಿ ಸ್ಥಿರಗೊಳಿಸಿದ್ದಾರೆ! ಎಲ್ಲ ರಾಷ್ಟ್ರದವರೂ ಗಮನಿಸಬೇಕಾದ ವಿಚಾರವಿದು. ವಿಶ್ವದ ಎಲ್ಲೆಲ್ಲೂ ಹೊಸ ಹೊಸ ಪಾರ್ಟಿ ನೀತಿ, ಹಿಂಸಾಮೌಲ್ಯ, ಅತಂತ್ರ ಆರ್ಥಿಕ ವಾಣಿಜ್ಯ ನೀತಿ, ಸರಿಯಾದ ಮಾನವೀಯ ಶಿಕ್ಷಣದ ಉಪೇಕ್ಷೆ ಇತ್ಯಾದಿ ಇತ್ಯಾದಿ ಸಮಸ್ಯೆಗಳ ಸರಮಾಲೆಯೇ ಅಸಂತುಲಿತ ಅಸಂತುಷ್ಟವಾಗುತ್ತಿರುವಾಗ, ಇಂತಹ ಶರಣ ಸಾಹಿತ್ಯಗಳೇ ತಳಪಾಯದ ರಕ್ಷಣಾ ಮಾಧ್ಯಮ. ಪ್ರಜಾಶಕ್ತಿ, ಅವರವರಿಂದಲೇ ಪುಟಿದು ಬಂದು, **ಸ್ವಾsನುಶಾಸನ ಸಮರ್ಥರಾಗುವಂತೆ** ಸಕ್ರಿಯ ದಿಗ್ದರ್ಶನವನ್ನೂ ಸಾತ್ವಿಕ ಪರಮ ವೀರ್ಯವನ್ನೂ ತುಂಬುವ ದಿವ್ಯೌಷಧ, ಟಾನಿಕ್.

ಮಾಮಲರ್ ಶುಮನ್ದು = ಭಕ್ತಿಭಾವದಿಂದ, ಭಾರವಾಗಿ ಪುಷ್ಪ ತೋಮಾಲೆಗಳು, ತೋರುತ್ತಿವೆ ಈ ಗಿರಿನಾಥನಿಗೆ! ರಾಮಾನುಜರ ಪ್ರತಿನಿಧಿಯಾದ ತಿರುಪತಿ 'ಪೆರಿಯ ಜೀಯರ್' ಅವರಿಲ್ಲದಿದ್ದಾಗ "ಚಿನ್ನಜೀಯರ್" ಬಾಯಿಗೆ ಮೇಲೆ, ವಾಸನೆ ತಮಗೆ ಬರಬಾರದೆಂದು ವಸ್ತ್ರ ಕಟ್ಟಿ, ಮಾಲೆ ಮುಂತಾದ ಪೂಜೋಪಕರಣಗಳನ್ನು ಶಿರಸಾವಹಿಸಿ, ಸ್ವಾಮಿಯ ಬಲ ಬಂದೇ ಗಂಭೀರವಾಗಿ "ಅರ್ಚಕಸ್ತು ಹರಿಃ ಸಾಕ್ಷಾತ್" ಎಂಬಂತೆ ಅವರಹಸ್ತ ಗುರು ಮುಟ್ಟಿದವುಗಳನ್ನು ಸಮರ್ಪಿಸುವ ಸುಂದರ ಅದ್ಭುತ ಸನ್ನಿವೇಶ! ಇಲ್ಲಿ ಸೂಚಿತವಾಗುತ್ತದೆ. ದೇವಾಲಯಗಳಲ್ಲಿ ಯಾವೊಂದೂ ಸದಾಚಾರದ ಹಿಂದೆ ಬಲು ಗಟ್ಟಿಯಾದ "ಜ್ಞಾನ" ಅಡಗಿದೆ! ವಿಚಾರ ಶಕ್ತಿಯ ಆಳವಿದೆ, ವಿಜ್ಞಾನವಿದೆ, ವಿನಯವಿದೆ.

ಶ್ರಿಯಃಪತಿ ಇದನ್ನು ಸ್ವೀಕರಿಸುವನೇ? ತನ್ನ ಒಡಲಿಗೇರಿಸಿಕೊಳ್ಳುವನೇ? ದಾಸರನ್ನು ವಿಶೇಷ ರೀತಿಯಲ್ಲಿ ಕಟಾಕ್ಷಿಸುವನೇ? ಎಂಬೀ ಭಾವದಿಂದ ಸಮರ್ಪಿಸಿದಾಗ ಭಕ್ತನಿಗೆ ಹಗುರವಾದ ಹೂವೂ ದೇವರಿಗೆ ಭಾರವಾಗುತ್ತದೆ! ಪೂರಿ ಜಗನ್ನಾಥದ ಶ್ರೀ ಪುರುಷೋತ್ತಮ ಕ್ಷೇತ್ರದಲ್ಲಿ, ಮಾರುಕಟ್ಟೆಯಲ್ಲಿ ಒಂದೇ ಒಂದು ಸಂಪಿಗೆ ಹೂ ಉಳಿದಿರುವಾಗ, ಅನೇಕ ರಾಜಪುತ್ರರಲ್ಲಿ "ತಾವು ಸಮರ್ಪಿಸಬೇಕು! ತಾವು ಸಮರ್ಪಿಸಬೇಕು!" ಎಂದು ಮೇಲಾಟದ ಸ್ಪರ್ಧೆಯೇ ಏರಿಬಿಟ್ಟಿತು. ಹೆಚ್ಚು ಬೆಲೆ ಕೊಟ್ಟವನು ದೇವರಿಗಿಷ್ಟವಾದ ಆ ಚಂಪಕ ಕುಸುಮವನ್ನು ಸಮರ್ಪಿಸಬೇಕು!" ಎಂದು ಮೇಲಾಟದ ಸ್ಪರ್ಧೆಯೇ ಏರಿಬಿಟ್ಟಿತು. ಹೆಚ್ಚು ಬೆಲೆ ಕೊಟ್ಟವನು ದೇವರಿಗಿಷ್ಟವಾದ ಆ ಚಂಪಕ ಕುಸುಮವನ್ನು ಸಮರ್ಪಿಸಬೇಕು! ಅಂದು ರಾತ್ರಿ ಕನಸಿನಲ್ಲಿ 'ಅಯ್ಯೋ! ನೀನು ಅಷ್ಟೊಂದು ಹಣವನ್ನು ಭಕ್ತಿಯಿಂದ ತೆತ್ತು ಸಮರ್ಪಿಸಿದ ಕೇವಲ ಒಂದೇ ಸುಮವಾದರೂ ನನಗೆ ಎಷ್ಟೊಂದು ಭಾರವಾಗಿತ್ತು ಗೊತ್ತೇ!' ಎಂದನಂತೆ, ಸುಭದ್ರಾ ಬಲರಾಮಸಮೇತ ಶ್ರೀ ವಾಸುದೇವ ಪುರುಷೋತ್ತಮ!

ನೀರ್ ಶುಡರ್ ದೂಪಂ ಕೊಣ್ಡು = ತೀರ್ಥ ಧೂಪ ದೀಪಗಳನ್ನು ಮೇಲಕ್ಕೆತ್ತಿ ಹಿಡಿದು - ನಮ್ಮ ಸೊಂಟಕ್ಕೇ ಕೆಳಗೆ - ದೇವ ಸಮರ್ಪಣೆಗಾದುದು ಇರಬಾರದು - 'ಉಪರಿ ಹಿ ದೇವೇಭ್ಯೋ ಧರತಿ!' ಅಮರ್ನ್ದು = ಪ್ರಯೋಜನಾನ್ತsರ ಪರರಾಗದೆ, ವಾನವರ್ = ದೇವತೆಗಳೂ ನಿಸ್ಸ್ವಾರ್ಥಿಗಳಾಗಿಯೇ ಬಿಡುತ್ತಾರೆ. ವಾನವರ್ ಕೋನ್ ಒಡುಮ್ = ದೇವೇಂದ್ರಾದಿಗಳೊಡನೆ. ಚತುರ್ಮುಖನೊಂದಿಗೆ

ಎಂದೂ ಆಗಬಹುದು. ಕ್ಷೇತ್ರ ಮಹಿಮೆ ಎಲ್ಲರನ್ನೂ ಸೌಮ್ಯರೀತಿಯಲ್ಲಿ ಹದಗೊಳಿಸುವುದು! ನಮ್ಮನ್ನು ಎಳುಮ್ = ನಮಿಸುವವರನ್ನು ಕೃತಾರ್ಥರಾಗಿಸುವ, ತಿರುವೇಙ್ಗಡಮೇ = ಸರ್ವ ಪಾಪಾಪಹಾರಿ ಶ್ರೀಶೈಲವೇ. ನಙ್ಗಳ್‌ಕ್ಕು = ಯಾರಿಗೆ ಕೈಂಕರ್ಯ ಫಲ ದೊರಕಿದರೂ ಪರಸಮೃದ್ಧ್ಯೇಕ ಕಾಮರಾದ ಈ ಮಾತೃಸ್ವಭಾವದ ಶಠಕೋಪರಿಗೆ ತಮಗೇ ಸಿಕ್ಕಿದಷ್ಟು ಸಂತೋಷ.

"ಪರಮಂಸಾಮ್ಯಂ ಉಪೈತಿ" "ಮಮಸಾಧರ್ಮ್ಯಮಾಗತಾಃ" ಎಂಬ ಶ್ರುತಿ ಸ್ಮೃತಿಗಳಂತೆಯೂ. ಶಮನ್‌ಗೊಳ್ = "ತಮ್ಮೈಯೇ ಒಕ್ಕ ಅರುಳ್ ಶೈವರ್" ಎಂಬ ದ್ರಾವಿಡ ಕೃಪಾಸೂಕ್ತಿ - ಅರುಳಿಚ್ಚೆಯಲ್ ಅಂತೆಯೂ ಶ್ರಿಯಃ ಪತಿತ್ವ- ಸಕಲ ಜಗದ್ ವ್ಯಾಪಾರ ಬಿಟ್ಟು ಮತ್ತು ಪ್ರಾಯಿಕವಾಗಿ ಪರಮಸಾಮ್ಯಾssಪತ್ತಿ . ತದ್ ರೂಪವಾದ, ವೀಡುತರುಮ್ = ಮುಕ್ತಿ ತರುವುದು. ಅದಾವುದೆಂದರೆ, ತಡಮ್ ತಿಮ್ಮಪ್ಪನಿಗಿಂತಲೂ ವಿಶಾಲವಾದ, ಅವನಿಗೂ ಆಸರೆ ನೀಡಿರುವ, ಹಾಗೂ ಉಲ್ಲಾಸಗೊಳಿಸುತ್ತಲೇ ಇರುವ, ಕುನ್ನಮೇ = ಈ ಪರ್ವತವೇ! ದಿವ್ಯದಂಪತಿಗಳು ಪ್ರಣಯ ಯಾತ್ರೆ ಗೈಯ್ಯಲು ತಕ್ಕ ಆನಂದ ನಿಲಯವಾಗಿದೆ! ಶ್ರೀ ಸೀತಾರಾಮ ಮನೋಜ್ಞವಾದ ಗಿರಿರಾಜ ಚಿತ್ರಕೂಟದಲ್ಲಿ ವಿಹರಿಸಿದಂತೆ!

ತಮಿಳ್ ತಿರಳ್ ೩-೩-೮

ಕುನ್ದಮೇನ್ದಿ ಕುಳಿರ್ ಮಳೈ ಕಾತ್ತವನ್ ಅನ್ನು ಞಾಲಮಳನ್ದ ಪಿರಾನ್ ಪರನ್
ಶೆನ್ನು ಶೇರ್ ತಿರುವೇಙ್ಗಡ ಮಾ ಮಲೈ ಒನ್ನುಮೇ ತೊಳ ನಮ್ ವಿನೈಯೋಯುಮೇ

ಕನ್ನಡ ನೆರಳ್

ಬೆಟ್ಟವನೆತ್ತಿ ಕೊರೆ ಮಳೆ ಕಾಯ್ದವನು ಗಟ್ಟಿಗನಂದು ಇಳೆಯಳೆದುಪಕಾರಿ|
ಬಂದಿದೋ ಸೇರಿಹ ತಿರುವೇಂಕಟಮಾಮಲೆ ಯೊಂದನೆ ತೊಳಗಲ್ ನಮ್ ಪೊಲೆ ಪೋಗುವುದೈ|

ತಿರುಮಲಪ್ಪನೇ ಸ್ವಯಂ ಸಂತಸದಿಂದ ಹಾಗೂ ಸ್ವಪ್ರಾಪ್ಯಫಲ ದೃಷ್ಟಿಯಿಂದ ದೂರದಿಂದ ಸಂದು ಸೇರಿರುವ ಈ ಸಿರಿವೇಂಕಟ ಹಿರಿಮಲೆಯೇ ನಮ್ಮೆಲ್ಲರಿಗೂ ಪುರುಷಾರ್ಥವೆಂಬುದನ್ನು ಹೇಳಬೇಕಾದುದೇ ಇಲ್ಲ. ಕುಳಿರ್‌ಮಳೈ = ಮಂಜುಗಲ್ಲನ್ನೇ ಧಡಧಡ ಕರೆಯುವ ಬಲು ಛಳಿ ತರುವ ಪ್ರಬಲವಾದ ಮಳೆಯನ್ನು. ಪರದೇವತಾ ಸ್ವರೂಪನಾದ ಕೃಷ್ಣನ ಮಾತಿನಂತೆ, ಪ್ರತಿ ವರ್ಷ ಇಂದ್ರನಿಗೆ ಕೊಡುತ್ತಿದ್ದ ಪೊರವನ್ನು, ಅನ್ನಾದಿ ಭೋಜ್ಯ ವಸ್ತುಗಳನ್ನು ಕೃಷ್ಣನ ಮಾತಿನಂತೆ ತಮಗೆ ಅತ್ಯಾಸರೆ ನೀಡುತ್ತಿರುವ ಗೋವರ್ಧನ ಗಿರಿಗೇ ಪುಷ್ಕಳವಾಗಿ ಗೋವಳರು ಕೊಟ್ಟರು. ಸ್ವಾಮಿಯೇ ಒಂದು ವಿಶಿಷ್ಟ ಮಹಾಕಾಯದಿಂದ ಅವೆಲ್ಲವನ್ನೂ "ಗೋವರ್ಧನೋಸ್ಮಿ" ಇದೋ ನಾನೇ ಗೋವರ್ಧನ! ಎಂದು ಹೇಳುತ್ತಾ ಒಂದೇ ತುತ್ತಿಗೆ ತಿಂದೇ ಬಿಟ್ಟ! ದೇವೇಂದ್ರನಿಗೆ ಹಸಿವು ಹೆಚ್ಚಿ, ಕುಪಿತನಾಗುತ್ತಾನೆ. ತನ್ನ ಆಡಳಿತಕ್ಕೆ ಸೇರಿದ ನಾನಾ ಬಗೆಯ ಶಕ್ತಿಶಾಲಿ ಮೇಘಗಳಿಗೆ, ರೌದ್ರಾಕಾರಿ ಕಲ್‌ಮಳೆ ಸುರಿಸಲು ಅಪ್ಪಣೆ ನೀಡಿ ಬಿಡುತ್ತಾನೆ. ಕೃಷ್ಣಾ! ನಿನ್ನ ಮಾತು ಕೇಳಿ, ನಾವೀಗ ಬಲು ಕಷ್ಟ ಪಡುತ್ತಿದ್ದೇವೆ, ಎಂದು ಗೋ-ಗೋಪೀಗೋವಳರು ಪ್ರಾರ್ಥಿಸುತ್ತಾರೆ. ಕೃಷ್ಣನ ಸತ್ಯಾssಗ್ರಹ! ಆ ಊರಿನ ಎಲ್ಲ ವಯಸ್ಸಿನ ಗಂಡು ಹೆಣ್ಣು ಎಲ್ಲರನ್ನೂ ಹುರಿದುಂಬಿಸಿ, ಆ ಪರ್ವತವನ್ನೇ ತನ್ನ ಕೈ ಬೆರಳಿನಿಂದ, ಅಖಂಡ ಏಳು ದಿನ ಎತ್ತಿಯೇ ಎಲ್ಲರಿಗೂ ಆ ಮಹಾ ಗಿರಿಛತ್ರಿಯ ಕೆಳಗೆ ಇರಲು ನಿರ್ದೇಶಿಸುತ್ತಾನೆ. ಇಂದ್ರನಿಗೆ ಬುದ್ಧಿ ಬರುತ್ತದೆ. ನನ್ನ ಎಷ್ಟೋ ಆಪತ್ತಿನಲ್ಲಿ ಆ ಕೃಷ್ಣ ನಮ್ಮನ್ನು ತಲೆ ಕಾಯ್ದಿದ್ದಾನೆ. ಈಗಲೂ ನನ್ನ ದಬ್ಬಾಳಿಕೆಗೆ ಬಗ್ಗದೆ, ಜನ ಶಕ್ತಿಯನ್ನೂ ಉಪಯೋಗಿಸಿಕೊಂಡು, ಶಾಂತರೀತಿಯಿಂದಲೇ ನನಗೂ ಬುದ್ಧಿ ಕಲಿಸಿದ. ನನ್ನೀ ಘೋರವಾದ ಏಳು ದಿನಗಳ ಮಹಾವರ್ಷವನ್ನು ಮಳೈ, ಕಾತ್ತವನ್ ಆ ಊರಿನ ಎಲ್ಲರನ್ನೂ ಪಶುಸಂಪತ್ತು ಸಮೇತ ಕಾಯ್ದವನು!

ಇದೆಲ್ಲೋ ಒಂದು ಗ್ರಾಮದ ಮಟ್ಟಿಗಾಯಿತು. ಞಾಲಮ್ = ಇಡೀ ನೆಲವನ್ನೇ ಇಂದ್ರನಿಂದ ವಶಪಡಿಸಿಕೊಂಡು, ತನ್ನದಾಗಿಸಿಕೊಂಡಿದ್ದ ಮಹಾಬಲಿ ಚಕ್ರವರ್ತಿ. ಅಂಥದನ್ನು, ಅಳನ್ದ ತನ್ನ ಹೊಂಗುತ್ತಲೇ ಇರುವ ವ್ಯಾಪಕವಾದ ಪಾದದಿಂದ, ಎಲ್ಲರೂ ಕಾಣುವಂತೆಯೇ ಅಳೆದೇ ಬಿಟ್ಟ ಎಲ್ಲಾ ಭೂ ಭಾಗವನ್ನೂ! ವಾಮನನಾಗಿ ಬಂದು ತ್ರಿವಿಕ್ರಮನಾದವನೇ ಪರಾತ್‌ಪರ, ನಾನೆಂತಹ ಒಡೆಯ? ಎಂಬ ಸದ್ ಬುದ್ಧಿ ಎಲ್ಲರಿಗೂ ಬಂತು! ಇಂತಹ ಪಿರಾನ್ = ಸರ್ವಲೋಕಗಳ ಒಡೆತನವುಳ್ಳವ. ಉಪಕಾರಿ, ಕ್ರಾಂತಿಕಾರಿ! ಇಂತಹವನೂ ಶೆನ್ನು ಶೇರ್ = ಶ್ರೀನಿವಾಸನಾಗಿ ಬಂದು, ಬೀಡುಬಿಟ್ಟಿರುವ ಈ, ವೇಂಕಟಮಾ ಮಲೈ = ಸಮಷ್ಟಿ ಸಾಮಾಜಿಕ ಒಡೆತನದ ಏರ್ಪಾಟಿನಿಂದ, ನಾನಾ ವಿಧವಾದ, ಭೂ ಸಮಸ್ಯೆಯಿಂದಲೇ ಮುಖ್ಯವಾಗಿ ಉದ್‌ಭವಿಸುವ, ಪಾಪ ಮನುಷ್ಯನ ಮೂಲಕವೇ ಜರುಗುತ್ತಿರುವ ಅನಾಹುತಗಳೆಲ್ಲವನ್ನೂ ತಪ್ಪಿಸಿದವನ ಈ ಗಿರಿಯೊಂದೇ ಸಾಕು! ವಿಶ್ವಕ್ಕೇ ಉದಾಹರಣೆಯಾಗಿ ಬಿಡಲು! ಇಂತಹ, ಒನ್ನುಮೇ ತೊಳ = ಸರಕಾರದ, ವ್ಯಕ್ತಿಯ, ಸಂಘಗಳ ಒಡೆತನದ ಹಾವಳಿಯಿಲ್ಲದ ಈ ಆದರ್ಶ ದಿವ್ಯದೇಶವೊಂದನ್ನೇ ನಾವೆಲ್ಲರೂ ತ್ರಿಕರಣದಿಂದ, ಸರಹಸ್ಯವಾಗಿ

ಸೇವಿಸಿ, ತದನುಗುಣ ಕ್ರಿಯಾವಾನ್ ಕೈಂಕರ್ಯಪರರಾದರೆ, ನಮ್‌ವಿನೈ = ಮಾನವ ವ್ಯವಸ್ಥಾಕಲ್ಪಿತವಾದ, ಪಾಪದ ಸರಪಳಿಗಳೆಲ್ಲಾ, ಓಯುಮೇ = ಈ ರಚನಾತ್ಮಕ ಧೃತಿಯಿಂದ, ತಮಗೆ ತಾವೇ ಕಳಚಿಹೋಗುವುವು. ಎಲ್ಲಾ ಜೀವಿಗಳಿಗೂ ದಿವ್ಯನ ಪ್ರಭುತ್ವದೊಳಗೆ ಅಡಗುವ ವ್ಯಾವಹಾರಿಕ ಶಾಶ್ವತ ಪ್ರಶಾಂತ ಪಥ ಸಿಗುವುದು. ತಿಮ್ಮಪ್ಪನಿಗಿಂತಲೂ ಒಡೆತನದ ಸರ್ವ ಪಾಪಾಪಹಾರಿಬೆಟ್ಟವೇ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ದೈವ! ಅಂತೆಯೇ ಸ್ವಾಮಿ ಒಕ್ಕಲಿನ ಭಕ್ತರು, ತಿರುಮಲೆ, ಬೆಟ್ಟಪ್ಪ, ಗಿರಿಯಪ್ಪ ವೆಂಕಟಪ್ಪ, ತಿಮ್ಮಪ್ಪ ಎಂದೇ ಮಕ್ಕಳಿಗೆ ನಾಮಕರಣ, ಮಾಡುವರು!

ತಮಿಳ್ ತಿರಳ್ ೩-೩-೯

ಓಯುಮೂಪ್ಪು ಪಿರಪ್ಪಿರಪ್ಪು, ಪಿಣಿ ವೀಯುಮಾರು ಶೆಯ್‌ವಾನ್ ತಿರುವೇಙ್ಗಡ-
ತ್ತಾಯನ್ ನಾಣ್ ಮಲರಾಮ್ ಅಡಿತ್ತಾ ಮರ್ಕೆ ವಾಯುಳ್ಳುಮ್ ಮನತ್ತುಳ್ಳುಮ್ ವೈಪ್ಪಾರ್‌ಹಳ್‌ಕ್ಕೇ|

ಕನ್ನಡ ನೆರಳ್

ಪೋಗುಗೆ ಜರೆ ಜನಿ ಮರಣಂ - ಹೆಣೆ ರೋಗಂ ಪೋಗುವ ತೆರ ಗೈಯ್ಯುವ ಸಿರಿವೇಂಕಟ
ಗೋವಳನಾ ಹಳ ಹಳ ಹೊಸ ಹೂವೆನು ಅಡಿದಾವರೆಯಂ ಬಾಯೊಳು ಮನದೊಳು ಕಾಯದೊಳಿಡುವರ್ಗೇ||

ಹಿಂದಿನ ಹಾಡಿನಲ್ಲಿ ಹೇಳಿದಂತೆ ಪಾಪಪರಿಹಾರಕ್ಕೆ ಇಡೀ ಬೆಟ್ಟವೂ ಬೇಕಿಲ್ಲ, ಅದಕ್ಕೆ ಸೇರಿರುವ ಒಂದು ಕೋಡುಗಲ್ಲಿನ ಚೂರು ಪಾರಾದರೂ ಸಾಕು! ಇಂದಿನ ಮಹಾಮಹಾವಿಜ್ಞಾನಿಗಳು ಬಹಳ ಬಹಳ ಬುದ್ಧಿಶಕ್ತಿ, ಧನಶಕ್ತಿ ವ್ಯಯಮಾಡಿ ಕಂಡುಹಿಡಿದಿರುವ ಒಂದೇ ಅಣುವಿನಲ್ಲೂ ಇರುವ ಸರ್ವಮಹಾಶಕ್ತಿಯನ್ನು, ಪುರಾಣ ಪುಕ್ಕಟ್ಟೆಯಾಗಿ, ಈ ಆಳ್ವಾರ್ ಕಂಡೇ ಅಡುತ್ತಿದ್ದಾರೆ! ಕೊಟ್ಟಕೊನೆಯ "ಆಳ್ವಾರ್ ಕಡೆಕುಟ್ಟಿ" ಎಂದೇ ಕೀರ್ತಿವೆತ್ತ ತಿರುಮಂಗೈ ಶರಣರೂ ಈ ಭಾವವನ್ನೇ ವಿವರಿಸುತ್ತಾರೆ.

"ವಡ ಮಾಮಲೈ ಉಚ್ಚಿಯೈ"

ಅಂದರೆ ದಿವ್ಯದೇಶದ ಸಂಬಂಧದ ಮಹಿಮೆಯಿಂದ, ಎಂತಹ ಕ್ಷುದ್ರ ಅಂಶಗಳಿಗಾದರೂ ಆ ಪ್ರದೇಶವನ್ನು ಎಂದೂ ಬಿಡದ ಸರ್ವೇಶ್ವರನೇ, ಅಂಥ ಶಕ್ತಿ ನೀಡಿದ್ದಾನೆ. ಪ್ರತಿ 'ಅಂಶ'ವೂ 'ಮಹಾಅಂಶಿಯೂ' ಆಗಿದೆ, ಈ ಸೂತ್ರ ಇಲ್ಲಿನ ರಹಸ್ಯ. ಇದರ ಮೇಲೆಯೇ ವಿಶೇಷ - ಸಾಮಾನ್ಯ, ರಾಜ್ಯ-ಕೇಂದ್ರ, ನಾಯಕ-ಪ್ರಜೆ, ಗುರು-ಶಿಷ್ಯ, ಪೂಜ್ಯರು-ಸಾಮಾನ್ಯರು, ಗಂಡು-ಹೆಣ್ಣು, ಕಾರ್ಮಿಕ-ಒಡೆಯ ಎಲ್ಲಾ ದ್ವಂದ್ವ ಸಂಘರ್ಷಗಳನ್ನೂ ಸ್ನೇಹೀಕರಿಸಿಬಿಡಬಹುದು! ಎಷ್ಟೇ ಬೃಹದಾಕಾರ, ಬಹುಮತ, ಬಂಡವಾಳ, ಶಸ್ತ್ರಾಸ್ತ್ರ ಶಕ್ತಿ, ಇತ್ಯಾದಿ ಸಮಸ್ತದ ಅತಿ ಅಟ್ಟಹಾಸಕ್ಕೆ ಕಡಿವಾಣ ಸಿಗುವುದು. ನೂರಕ್ಕೆ ನೂರು ಶಾಂತಿ ಸಮೃದ್ಧಿ ನೆಲೆಸುವುದು.

ಓಯುಮ್ = ಒಡನೆಯೇ ತಾವು ತಾವೇ ತಮ್ಮ ತಮ್ಮ ಕ್ಷೇಮಕ್ಕಾಗಿಯೇ ಮಾಯವಾಗಿ ಕರಗಿಬಿಡುವುವು! ಮೊದಲಿಗೆ ಕ್ರಿಯಾಪದ ಹೇಳುವ ಆಳ್ವಾರರ ಭಾವವೆಂದರೆ, "ವೀಡುಮಿನ್" ಬಿಡಿ, ಬಿಡಿ! ಸ್ವಾಮಿಯಲ್ಲದ ಅವನ ಯೋಜನೆಗೆ ತೊಡರು ಗಾಲಾಗಬಹುದಾದವುಗಳೆಲ್ಲವನ್ನು ಮೊಟ್ಟಮೊದಲೇ ತೊರೆಯಿರಿ. ಪಾಪಗಳ ನಿವೃತ್ತಿ ಮೊದಲಾಗದೆ, ಮಾನವನ ಎಚ್ಚರಿಕೆ ದೃಷ್ಟಿಯಿಂದ ಮಂಗಳ ಹೇಗೆ ಸಿಕ್ಕೀತು? ನಾನಾ ರಂಧ್ರಗಳಿಂದ ನೀರು ಸೋರುತ್ತಲೇ ಇದ್ದರೆ, ಆ ತೊಟ್ಟಿಗೆ ನೀವೆಷ್ಟು ನೀರು ತುಂಬಿದರೇನು ಬಂತು? ಮೊದಲು ಸಂದುಗಳನ್ನೆಲ್ಲಾ ಮುಚ್ಚಿರಿ.

ತಿಮ್ಮಪ್ಪನ ಪೂರಾಮೂರ್ತಿಯೇ ಬೇಕಿಲ್ಲ, ಪಾದತಲಗಳಲ್ಲಿ ಬೀಳೋಣ, ಆ ಶ್ರೀಪಾದರೇಣು ನಮ್ಮ ತಲೆಗೆ ಸೊಂಕಿದರೆ ಸಾಕು. ತೊಲಗಿಹೋಗುವ ವಸ್ತುಗಳಾವುವು? ಮೂಪ್ಪು = ಮುಪ್ಪು! ಲಾಭಾಽಲಾಭ ನಿರೀಕ್ಷಿಸದೆ, ಮೈ ಯಂತ್ರವನ್ನೇ ದಂಡಿಸಿ, ಅರಂಭವನ್ನೇ ವ್ರತವಾಗುಳ್ಳ ರೈತ, ಉನ್ನತ ಪಾವನ ಚಿಂತನಾಪರರಾದ ಸಜ್ಜನ ಸನ್ ಮಹಿಳೆಯರು, ಯುಕ್ತಾಹಾರ ಯುಕ್ತವಿಹಾರದ ವ್ರತನಿಷ್ಠರು, ವಯಸ್ಸಾದರೂ ಯೌವ್ವನದ ಕಳೆಯಿಂದ ಕೂಡಿರುವುದನ್ನು ನಾವೀಗಲೂ ಗಮನಿಸಬಹುದು. ಶರೀರ ಪಾಟವ, ಸ್ಮರಣ ಶಕ್ತಿ ಕುಗ್ಗದ ಸದ್ ವೃದ್ಧ ವೃದ್ಧೆಯರನ್ನು ನಾವಿಂದಿಗೂ ಸನ್ಮಾನಿಸುತ್ತಿದ್ದೇವಲ್ಲವೇ?

ಮುಪ್ಪಿಗೆ ಕಾರಣ ಮೂಲತಃ ಆ ಶರೀರದಲ್ಲಿ, ಜೀವಶಕ್ತಿ ತನ್ನ ಅನೇಕ ಪಾಪದ ಮೂಟೆಗಳನ್ನು ಕರಗಿಸಬೇಕಾಗಿರುವುದೇ. ಹೊಸ ಹೊಸ ಪಾಪ ಕಟ್ಟಿಕೊಳ್ಳದೆ, ಬೆವರಿನಿಂದ, ಸ್ವಾವಲಂಬನೆಯಿಂದ ಸ್ವಾಸ್ಥ್ಯ ಕಾಪಾಡಿಕೊಂಡು, ಧಾತುಸಾಮ್ಯವನ್ನು ರಕ್ಷಿಸಿಕೊಂಡ ಆ ಶರೀರ, ಕೊನೆಗೆ ಬಿದ್ದವೇಲೆ, ಆ ಆತ್ಮಕ್ಕೆ ಮತ್ತೊಂದು ಕರ್ಮಫಲಾನುಭವಿ ಶರೀರ ಬಾರದು. ಪಿರಪ್ಪು = ಶಾರೀರಕ ಜನ್ಮ, ಓಯುಮ್ = ಹುಟ್ಟಿದ ಮೇಲೆ ಅನಿವಾರ್ಯವಾದ ಸಾವೂ, ಮಾಯವಾಗುವುದು. ಅಂದರೆ ಅದಕ್ಕೆ ಅವಕಾಶವೇ ಇಲ್ಲದಂತಾಗುವುದು.

ಶಾಸ್ತ್ರೀಯ ಭಾಷೆಯಲ್ಲಿ "ಜನ್ಮ ಪ್ರಾಗಭಾವ". ತಿಮ್ಮಪ್ಪನನ್ನು ಬಾಯಾರಾ, ಮನಸಾರಾ ಅಡದ ನೆನೆಯದ ಆ ಹಿಂದೆಲ್ಲಾ ಜರಾಮೃತ್ಯು ಜನ್ಮಗಳು ಒಂದಾದ ಮೇಲೊಂದು ಬಲು ರಂಪ ಮಾಡುತ್ತಿದ್ದವು. ಈ ದೃಷ್ಟ ಉದಾಹರಣೆಗಳಂತೆಯೇ, ಕಾಣದ ಅಗೋಚರೀ ಶಕ್ತಿಯಿಂದಲೂ, ಈ ಬೆಟ್ಟದ ಚೂರುಪಾರೂ ಸಹ, ಸರ್ವಪಾಪನೀಗುವುದರಲ್ಲಿ ಸಮರ್ಥವಾಗುವುವು. ವೀಯುಂ ಅರು ಶೆಯ್‌ವಾನ್ = ಬೆಟ್ಟದ ಕೋಡುಗಲ್ ಸ್ವಾಮಿ ಗೋವರ್ಧನಧಾರಿ ಬೆಟ್ಟವೆತ್ತಿ, ಬೃಂದಾವನ ಸುತ್ತಾಡಿದ, ಆಯನ್ ಆ ಗೋಪಾಲನೇ ತಿರುವೇಂಗಡತ್ತು = ಈಗ ತಿರುವೇಂಗಡಂ ಉಡೈಯಾನ್ ಆಗಿ ಬಂದಿರುವವ. ಆ ಗೋಪಾಲ ಕೃಷ್ಣ ಎಂಬ ಅವತಾರಕ್ಕೆ ಮಾತ್ರ "ಮೋಕ್ಷಯಿಷ್ಯಾಮಿ" ಪಾಪವಿಮೋಕ್ಷಣ ಸಾಮರ್ಥ್ಯ ಸೀಮಿತವಲ್ಲ. ಮುಂದೆ ಮುಂದೆಯೂ ಅರ್ಚಾವತಾರದಿಂದ, ಭವಿಷ್ಯತ್ತಿನಲ್ಲಿಯೂ ನಡೆಯುವಂತಹುದೇ! ಶತಾಯುಗತಾಯು ನಮ್ಮಿಂದ ನಮ್ಮ ಪಾಪ ಹೋಗದು. ಮಹಾಶಕ್ತಿ ಕೇಂದ್ರದಿಂದ, ಅಣು ಅಣುಗಳಿಗೂ, ಹರಿಯುತ್ತಲೇ ಇರುವ ಸೂಕ್ಷತಮ ಸಂಬಂಧದ ಅರಿವು "ರೆಸ್‌ಪಾನ್ಸ್" ಬೇಕಾಗುತ್ತದೆ. ಎಲ್ಲ ಕೆಲಸಗಳೂ ಸಾಪೇಕ್ಷಗಳೇ! ಅದೆಂತಹ ಪಾದತಲ? ನಾಳ್ ಮಲರಾಮ್ ಅಡಿತ್ತಾಮರೈ = ಹೊಸ ಹೊಸದಾಗಿ ಹಳಹಳನೆ ಅರುಳುತ್ತಲೇ ಇರುವ ಸುಕುಮಾರ ಕುಸುಮ ರೂಪಿ! ತಲೆಯಿಟ್ಟು ನೋಡಿ! ಅಂತೆಯೇ ಸ್ವಾಮಿಪಾದಗಳನ್ನೇ ಈ ಶಠಾರಿ ಎನ್ನುವುದು. ಅರ್ಚಕರೇ ನಮ್ಮ ಶಿರಸ್ಸಿಗೇರಿಸುವರು!

ವಾಯುಳ್ಳುಮ್ ಮನತ್ತುಳ್ಳುಮ್ = ಬಾಯೊಳಗೂ ಮನಸ್ಸಿನೊಳಗೂ, ವೈಪ್ಪಾರ್‌ಹಳ್‌ಕ್ಕು = ಇಡುವ ಎಲ್ಲರಿಗೂ, ಮನೋ ವಾಕ್ ಕಾಯಗಳಿಂದ. ಶಿಶು, ತಾಯಿಯ ಎದೆಗೇ ಬಾಯಿ ಹಾಕುವಂತೆ, ಈ ಭಕ್ತನಿಗೆ ಮೂರ್ತಿಯ ಪಾದಾಂಶವೇ ಸಾಕು!

ರಕ್ಷಾಪೇಕ್ಷಾಂ ಪ್ರತೀಕ್ಷತೇ

ತಿರುಪತಿ ಕೋಡುಗಲ್ ತಿಮ್ಮಪ್ಪ ನಮಗಾಗಿ ಕಾಯುತ್ತಾ ಬಿದ್ದಿದ್ದಾನೆ. ನಮ್ಮ ಚೈತನ್ಯಕಾರ್ಯವಾಗಿ, ಜೀವಾತ್ಮರು ಆಸೆ ತೋರಿದರೆ, ಸರ್ವಕ್ಷೇಮಕ್ಕೇನೇನೂ ಕೊರತೆಯಿಲ್ಲ. ಅಂಶಾಂಶಿಗಳ, ಶರೀರಾತ್ಮಗಳ, ಶಕ್ತಿ, ಜವಾಬುದಾರಿ, ಇವುಗಳ ಸ್ವಚ್ಛ ಸಚ್ಚಿಕ್ಷಣ ಈ ಪಾಶುರದಿಂದ ಸಾಕಷ್ಟು ಹಿಗ್ಗಿ ಹಿಗ್ಗಿ ಬರುತ್ತಲೇ ಇರುವುದು.

ತಮಿಳ್ ತಿರಳ್ ೩-೩-೧೦

ವೈತ್ತನಾಳ್ ವರೈ ಯೆಲ್ಲ್ಲ್ ಕುರುಹಿ ಚ್ಚೆನ್ನು ಎಯ್ತ್ತಿಳೈಪ್ಪದನ್ ಮುನ್ನಮ್ ಅಡೈಮಿನೋ|
ಪೈತ್ತ ಪಾಮ್ಬಣೈಯಾನ್ ತಿರುವೇಙ್ಗಡಮ್ ಮೊಯ್ತ್ತ ಶೋಲೈ ಮೊಯ್ ಪೂಮ್ ತಡಂತಾಳ್‌ವರೇ|

ಕನ್ನಡ ನೆರಳ್

ಇಡು ದಿನ ಮುಗಿಯುವ ಗಡುವು ಬಳಿಸಾರ್ದು ಉಡುಗುವ ಬಲದದೋ ಹಾನಿಗೆ ಮುನ್ - ಅಡೆಯಿರೆಲೋ!- |
ಹೆಡೆಬಿರಿ ಹಾವ್ ಹಾಸಿಗೆಯಹ "ಶೇಷಾಚಲದ" ಒ ತ್ತಡ ತೋಟದ ಚೆಂಗೆರೆಗಳ ಅಡಿವಾರವನೇ ||

ನಮ್ಮಾಳ್ವಾರ್ ಹೀಗೆಲ್ಲಾ ತಮ್ಮ ಸಿರಿಬಾಯಿಂದ ಹಾಡುತ್ತಿರುವುದನ್ನು ಕೇಳಲು ಆ ಆಳ್ವಾರ್ ತಿರುನಗರಿಗೇ ವಿಶ್ವದ ನಾನಾ ಕಡೆಗಳಿಂದ, ಹೇರಳವಾಗಿ ಹಣ್ಣು ಬಿಟ್ಟಿರುವ ಮರಕ್ಕೆ ಗಿಣಿಗಳು ಮುತ್ತಿಕೊಳ್ಳುವಂತೆ ಜನ ಸಂದಣಿ ಸೇರಿದೆ! ಅವರಿಗೆಲ್ಲಾ ತಮ್ಮ ಒಳಭಾವದ ಒಟ್ಟರ್ಥವನ್ನು ಈಗ ಉಪದೇಶಿಸುತ್ತಾರೆ. **"ನಿಧಾನ ಮಾಡಬೇಡಿ"** ಎಂದು ತ್ವರೆ ಹುಟ್ಟಿಸುತ್ತಾರೆ.

ಅಡೈಮಿನೋ = ಸೇರಿಯೇ ಬಿಡಿ, ಮುನ್ನಮ್ = ಮುಂದಾಗಿಯೇ! ಏಕೆಂದರೆ, ಎಯ್ತ್ತು ಇಳೈಪ್ಪದನ್ = ಶರೀರ ಇಂದ್ರಿಯಾದಿಗಳ ಬಲಹಾನಿಯಿಂದ, ಹೃದಯಕ್ರಿಯೆ ನಿಲ್ಲುವುದಕ್ಕೆ ಮುಂಚೆಯೇ! ಬೆಟ್ಟದ ವಿಸ್ತಾರವಾದ ಅಡಿವಾರಸೇರಿರಯ್ಯಾ. ತಾಮಸ ಮಾಡಿದರೆ ನೀವು ಯಾವುದನ್ನು ಸೇರಬಹುದು ಗೊತ್ತೇ? ವೈತ್ತನಾಳ್ ವರೈ ಎಲ್ಲ್ಲ್ ಕುರುಹಿಚ್ಚೆನ್ನು = ಸರ್ವೇಶ್ವರ ನಿರ್ಧಸಿರುವ ಆಯುಸ್ಸಿನ ಗಡುವು ಸಮೀಪಿಸಿ ಸೇರಿದಾಗ, ಅದಕ್ಕೂ ಮುಂಚಿತವಾಗಿ, ಪೈತ್ತ ಪಾಮ್ಬಣೈಯಾನ್ = ಮಲೆಯಪ್ಪನ ಸ್ಪರ್ಶದಿಂದ, ವಿಕಸಿತವಾದ ಇದೇ ಶೇಷಗಿರಿ ಶಾಯಿಯಾದವನ, ತಿರುವೇಙ್ಗಡಮ್ = ಅವನು ವಾಸಮಾಡುತ್ತಿರುವ ಗಿರಿಯ, ಮೊಯ್ತ್ತ ಶೋಲೈ = ಒತ್ತಾದ ತೋಪುಗಳುಳ್ಳ, ಮೊಯ್ ಪೂಮ್ = ಸುಂದರ ಪುಷ್ಪಗಳಿಂದಲೇ ತುಂಬಿರುವ ತಡಮ್ ತಾಳ್‌ವರೈ. ಎಷ್ಟು ಜನಸಂದಣಿ ಸೇರಿದರೂ ಆತುಕೊಳ್ಳುವಷ್ಟು ಅಗಲವಾದ ನಾನಾ ಪ್ರದೇಶಗಳನ್ನು, ಶೆನ್ನು ಅಡೈಮಿನೋ = ಇಂತಹ ದಿವ್ಯಧಾಮಗಳು ಬಿಡಿ ಬಿಡಿ ವ್ಯಕ್ತಿಗತ ಭಕ್ತಿ ಕ್ಷೇತ್ರಗಳಷ್ಟೇ ಅಲ್ಲ. ಸಾಮೂಹಿಕ ಆಧ್ಯಾತ್ಮಿಕ ಶಿಬಿರಗಳು ಇವು. ತಿಮ್ಮಪ್ಪನ ಸರ್ವವಿಧ ಸೇವಾ ನಿರತರಾಗುವಂತೆ ಆಸೆ ಹೆಚ್ಚಿಸಿಕೊಳ್ಳಿ.

ತಮಿಳ್ ತಿರಳ್ ೩-೩-೧೧

ತಾಳ್ ಪರಪ್ಪಿ ಮಣ್ ತಾವಿಯ ವೀಶನೈ ನೀಳ್ ಪೊಳಿಲ್ ಕುರುಹೂರ್ ಚ್ಚಡಕೋಪನ್ ಶೊಲ್|
ಕೇಳಿಲ್ ಆಯಿರತ್ತಿಪ್ಪತ್ತುಮ್ ವಲ್ಲವರ್ ವಾಳ್ವರ್ ವಾಳ್ವೈದಿ ಞಾಲಮ್ ಪುಹಳವೇ||

ಕನ್ನಡ ನೆರಳ್

ಅಡಿ ಹರವುತ ಮಣ್ಣಳೆದೀಶನಂ ಕುರಿತಾ ನಿಡು ತೋಟದ ಕುರುಹೂರ್ ಶಠಕೋಪನ ಸೊಲ್|
ಪಡಿಯೊಪ್ಪಿಲ್ಲದ ಸಾಸಿರದೀ ಹತ್ತುಂ ಬಲ್ಲವರ್ ಪಡೆಯುತಲೂಳಿಗ, ಬಾಳುವರ್ ಜಗಪೊಗಳುವೊಲೇ||

ಈ ದಶಕವೆಂಬ "ತಿರುವಾಯ್‌ಮೊಳಿ"ಯನ್ನು ಬಲ್ಲವರು ಸರ್ವದೇಶ ಸರ್ವಕಾಲ ಸರ್ವಾsವಸ್ಥೋಚಿತವಾದ ಸರ್ವವಿಧ ಕೈಂಕರ್ಯಭಾಗ್ಯಗಳಿಗೂ ಭಾಗಿಗಳಾಗುತ್ತಾರೆ. ಅಂತಹ ವೈಶಿಷ್ಟ್ಯವೇನು? ಎನ್ನುವಿರಾ! ಕೇಳಿ. ತಾಳ್ ಪರಪ್ಪಿ = ಅಶುಚಿ ಹಾಗೂ ಕಠಿಣವಾದ ಸ್ಥಳಗಳಲ್ಲೂ ಪವಿತ್ರ ಸುಕುಮಾರವಾದ, ತನ್ನ ಪಾದ ಹರಗಿ, ಮಣ್ = ಕಾಡೂ, ಮೇಡೂ ಆಗಿರುವ ಭೂಮಿಯನ್ನು, ತಾವಿಯ = ಒಂದೇ ಸ್ಥಳದಲ್ಲಿ ನಿಂತೇ ಲೀಲಾಜಾಲವಾಗಿ ಹರಗಿ ಅಳೆದ, ಈಶನೈ = ಒಡೆತನದ ಸಾಮರ್ಥ್ಯ ಉಳ್ಳವನನ್ನೇ. ಅವನೇ ಈ ತಿಮ್ಮಪ್ಪನೆನ್ನುವುದನ್ನೇ ಕುರಿತುದು ಈ ಸಿರಿಬಾಯ್ ನುಡಿಯ ದಶಕ. ತ್ರಿವಿಕ್ರಮನಾಗಿಯೇ ಏಕೆ ಬೆಳೆಯಬೇಕಿತ್ತು? ಯಾರೊಬ್ಬರನ್ನೂ ಬಿಡದೆ, ಯಾವುದೊಂದನ್ನೂ ಬಿಡದೆ, ಸರ್ವಜಂತುಗಳೂ, ವನದೇವತೆ, ವಾನರಾದಿ ಸರ್ವವೂ ತನ್ನ ಸೇವೆಯನ್ನು ಅವವುಗಳಿಗೆ ತಕ್ಕಂತೆ ಮಾಡಲೆಂದೇ! ತ್ರಿವಿಕ್ರಮಾವತಾರ ಆಗದೆ ಇದ್ದಿದ್ದರೆ, ಯಾರೊಬ್ಬರಿಗೂ ಸ್ವಾಮಿಯ ಪರಿಚಯ, ಪರಿಸ್ಪರ್ಶ, ಸಂವೇದನೆ ಇಷ್ಟೊಂದು ಪ್ರತ್ಯಕ್ಷ ಸುಲಭವಾಗಿ ಆಗುತ್ತಿರಲಿಲ್ಲ!

ನೀಳ್ ಪೊಳಿಲ್ = ಹೊಂಗಿ ಬೆಳೆದು ನಿಂತಿರುವ, ನೀಡಿದ ಆ ಒಂದು ಪಾದವನ್ನು ಈ ತೋಪುಗಳೇ ತೋರಿಸುತ್ತಿವೆಯೋ! ತೋಪುಗಳಿಗೆ ಪ್ರಸಿದ್ಧವಾದ, ಕುರುಹೂರ್ ತೆಂಕಣ ತಿರುನಗರಿಗೆ ನಿರ್ವಾಹಕರಾದ, ಸಂತರೇ ನಿಜಕ್ಕೂ ಗ್ರಾಮನಿರ್ಮಾಹಕರಾಗಲು ತಕ್ಕವರು. ಅವರೇ ಸೌಮ್ಯವಾಗಿ ಒಳಗೂ ಹೊರಗೂ ಜನರ ಕೈ ಹಿಡಿದು ಎತ್ತಿ ಆಳುವವರು! ಅಂತೆಯೇ 'ಆಳ್ವಾರ್'! ಉಳಿದ ಅಳ್ವಿಕೆಗಳೆಲ್ಲಾ, ಅಸ್ಥಿರ ಹಾಗೂ ಸಾಪಾಯಗಳು. ಜನರನ್ನೂ ಕತ್ತಲಲ್ಲೇ ಇಟ್ಟು, ಪರಾವಲಂಬಿಗಳನ್ನಾಗಿಸಿ ಬಿಡುವುವು. ಪರದೂಷಣೆಯೊಂದನ್ನು ಮಾತ್ರ ಎಂಥ ಸಾತ್ವಿಕರಿಗೂ ಕಲಿಸಿಯೇ ತೀರುವುವು! "ಶರಣರು, ನಿರ್ವೈರ, ನಿಷ್ಪಕ್ಷ, ನಿರ್ಭಯ ಪರಮ ದಯಾಳುಗಳು."

ಶಠಕೋಪನ್ = ಜನರ ವಿತ್ತಶಾಠ್ಯ, ಬುದ್ಧಿ ಶಾಠ್ಯಾದಿಗಳನ್ನು ನೀಗಿಸುವವರು. ವಂಚಕರನ್ನು ನಿರ್ವಂಚನೆಯಿಂದ ತಾವೇ ಸರಿದಾರಿಗೆ ತಿರುಗಿಸುವವರು. "ಏತಿ"ಗೆ "ಪ್ರೇತಿ" ಹೇಳರು. ಇನ್ನೂ ಪ್ರೀತಿಯನ್ನೇ ಗೈದು ಪ್ರೀತಿಯ ವಾತಾವರಣವನ್ನೇ ಸೃಷ್ಟಿಸುವವರು! ಇಂಥವರ ಶೊಲ್ = ಹೇಳಿಕೆಯಾದ, ಕೇಳು, ಇಲ್ = ಬೇರೆ ಒಪ್ಪಿಲ್ಲದ, ಆಯಿರತ್ತು = ಸಹಸ್ರಗಾಥೆಗಳಲ್ಲಿನ, ಇಪ್ಪತ್ತುಂ = ಈ ೧೦ಗೇಯ ಗೀತೆಗಳನ್ನು, ವಲ್ಲವರ್ = ಕೈಂಕರ್ಯ ಬುದ್ಧಿಯಿಂದಲೇ, ಅಭ್ಯಸಿಸಿ ಅರ್ಥಮಾಡಿಕೊಳ್ಳುವವರು. ಕೇವಲ ಪಾಠ ಕಾಲಕ್ಷೇಪಗಳಲ್ಲಷ್ಟೇ ನಿಲ್ಲದೆ ಸಮಾಜದ ಸರ್ವಸೇವಾ ಸಂಪನ್ನರಾಗುವವರು. ಞಾಲಮ್ ಪುಹಳವೇ = ಇಡೀ ಜಗತ್ತಿನವರೆಲ್ಲಾ "ಭಲೆ, ಭಲೆ" ಎನ್ನುವಂತೆ, ರಾಷ್ಟ್ರೀಯತೆಯ ಸಂಕುಚಿತತೆಯನ್ನೂ ಮೀರಿ. ವಾಳ್ ವರ್ = ಸೇವಾಸಮ್ಯಾಟರಾಗಿ ಶಾಶ್ವತ ಹೆಸರಾಂತು ಬಾಳುವರು. ಪರಸ್ಪರ ಹಿತೈಷಿ ಸಮಾಜ ನಿರ್ಮಾಣವನ್ನು ಗ್ರಾಮದ ಮಟ್ಟದಿಂದಲೇ ಕ್ರಿಯಾತ್ಮಕವಾಗಿ ದಕ್ಷತೆಯಿಂದ ತಾವು ತಾವೇ ನಿರ್ವಹಿಸಿಕೊಳ್ಳುವರು. ತಿರುಪತಿಯಲ್ಲೂ ಅಸುರೀ ಕ್ರಿಯೆಗಳು ನಡೆಯದಂತೆ, ದೈವೀ ಸಂಪತ್ತಿನ ಒಂದು ಜಗದಾದರ್ಶ ತೋರಿಸುವವರಾಗುವರು.

ತಮಿಳ್ ತಿರಳ್ ೩-೫-೮

ವಾರ್‌ಪುನಲ್ ಅನ್ದಣ್ ಅರುವಿ ವಡ ತಿರುವೇಙ್ಗಡತ್ತೆನ್ನ್ರು ಪೇರ್‌ಪಲ ಶೊಲ್ಲಿ ಪ್ಪಿದತ್ತಿ ಪಿತ್ತರ್ ಎನ್ನೇ ಪಿರರ್ ಕೂರ|
ಊರ್‌ಪಲ ಪುಕ್ಕುಮ್ ಪುಹಾದುಮ್ ಉಲೋಕರ್ ಶಿರಿಕ್ಕ ನಿನ್ನಾಡಿ ಆರ್‌ವಮ್ ಪೆರಿಹಿ ಕ್ಕುನಿಪ್ಪಾರ್ ಅಮರರ್ ತೊಳಪ್ಪಡುವಾರೇ|

ಕನ್ನಡ ನೆರಳ್

ಹಿರಿನೀರ್ ಅಂದದ ತಣ್‌ಹೊನಲ್ ಸಿರಿವೇಂಕಟದೀಶ್ವರನ
ಪರಿಪರಿನಾಮಂಗಳ ಪೇಳುತಲೊದರಿರೆ! ಹುಚ್ಚರು ಎಂದೇ ಪರರ್ ಅರಚಿದರೂ|
ಪರಿಪರಿ ಊರುಂ ಹೊಗದವ ಹೊಕ್ಕೂ, ಲೋಗರು ನಕ್ಕರೆ ನಿಂತಾಡಿ!
ಹರಿದೇ ಬರುವುರು ನೇಹದಿಂ ಕುಣಿವವರ್, ಅಮರರಿಂ ತೊಳಗಲ್ಪಡುವರಲಾ||

ಹುಟ್ಟಿನಿಂದ ಬಂದು ಚಟ್ಟದಲ್ಲೇ ಹೋಗುವ "ವರ್ಣಗರ್ವ" ವರ್ಣಧರ್ಮದ ಅಂಶವಲ್ಲ. ಅದು ಬೇರೆ ಬೇರೆ ಸಾಮಾಜಿಕ ಮಿಥ್ಯಾಮೌಲ್ಯಗಳಿಂದ ಅಂಟುವ ಜಾಡ್ಯವಷ್ಟೆ! ಪುರುಷೋತ್ತಮನ ಸಕಲ ಮಂಗಳ ಗುಣಗಳ ಚಿಂತನ ಹಾಗೂ ನಮ್ಮ ನಮ್ಮಲ್ಲಿ ಯಾವ ಗುಣ ಕಡಿಮೆಯಿದೆ ಅದನ್ನು ಅವನಿಂದ ಪಡೆದುಕೊಳ್ಳುವ ಜೀವನ ಸಿದ್ಧತೆ ಇದ್ದರೆ ವರ್ಣ ನಿಂದ್ಯವಾಗದು. ಸರ್ವಾಽವಿರೋಧಿಯಾಗಿ ತನ್ನಕರ್ತವ್ಯ ಪ್ರಜ್ಞೆಗೆ ಒಳ್ಳೆಯ ಸಾಧನವೇ ಆಗುವುದು. ಸಮಾಜಕ್ಕೂ ಭಾರವಾಗದ ಲಾಭವುಂಟು.

ಎರಡನೆಯದು, ಜನ ಜನರಲ್ಲಿರುವ "ಜ್ಞಾನ ತಾರತಮ್ಯ" ಇದೂ ಆ ಜ್ಞಾನದ ತಪ್ಪಲ್ಲ, ಅನ್ಯ ಸಹವಾಸಾಧೀನ. ಅದೇ ಫಲಾಪೇಕ್ಷೆಯಿಂದ ಮಾಡುವ ಶುಭ ರೂಪಿ "ಪುಣ್ಯ". ಜ್ಞಾನಕ್ಕೆ ಶತ್ರು ರಜೋಗುಣ ಹಾಗೂ ತಮೋಗುಣ. ಮಿಶ್ರ ಸತ್ವಗುಣ. ಈ ಶುದ್ಧ ಸಾತ್ವಿಕತೆಗೇ ಹೆಚ್ಚು ಮೌಲ್ಯ ಸಮಾಜದಲ್ಲಿ ಬಂದರೆ, ಎಲ್ಲರೂ 'ಜ್ಞಾನಿ'ಗಳಾಗಿಯೇ ತೀರುತ್ತಾರೆ. ಅವರವರ ಸ್ವಧರ್ಮದಲ್ಲೇ ಸ್ಥಿರತೆ! ಬೇರೆಯವರ ಜ್ಞಾನದ ಬಗೆಗೆ, ಮಾತ್ಸರ್ಯಬಾರದು. ಅದು ಅವರಿಗಿರಲಿ. ಇದೇ ನನಗಿರಲಿ! ಈ ಉದಾರ ಜೀವನ, ಸ್ಪರ್ಧೆಗಳನ್ನು ತಪ್ಪಿಸುವುದು. ಸಮಾಜ ಶಾಂತಿಯತ್ತಲೇ ಪಯಣಿಸುತ್ತಾ ವಿಕಾಸ ಹೊಂದುವುದು.

ಇನ್ನು ಮೂರನೆಯ, ಜೀವನಚರ್ಯೆ ನಡತೆ, ಹಿಂದಿನ ವರ್ಣ ಹಾಗೂ ವೃತ್ತ ಸ್ವಚ್ಛವಾಗುತ್ತಾ ಬಂದರೆ, ಅವುಗಳ ಸಹಜ ಪ್ರಸಾದವಾಗಿ ತಾವು ತಾವೇ ಸ್ವಸಂತೋಷದಿಂದ ಒಳ್ಳೆಯ ನಡತೆಗೇ ವಾಲಿಬಿಡುತ್ತಾರೆ. ಈ ತ್ರಿವಿಧ ರಚನಾತ್ಮಕ ಪರಿವರ್ತನೆಯೇ ಭಗವಂತನ ಕಲ್ಯಾಣ ಗುಣಾನುಭವಕ್ಕೆ ಗುರುತು.

ಇಂತಿಂತಹ ಸ್ಥಿರ, ನಿರಪಾಯ ಗುಣಮೌಲ್ಯಗಳನ್ನೇ ಹಾಡುತ್ತಾ, ಕೇಳುತ್ತಾ, ತಮ್ಮ ಶರೀರ, ಅಂಗಗಳ ಉತ್ಸಾಹ ತೋರಿಸುವವರೇ ಈ ನಮ್ಮಾಳ್ವಾರರಿಗೆ "ದೇವರು", ಅವರಿಗೇ ತಾವು "ತೊತ್ತು". ಈ ಭಾವ ಈ ೫ನೇ ದಶಕದಲ್ಲಿ. **"ನಿಂದಾಚ ಮೇ ಅನಿಂದಾಚಮೇ"** ಗುಣಗಾನ ಕೇಳಿಯೂ, ಕೃತಕ ಗಾಂಭೀರ್ಯದಿಂದ ಇರುವವರನ್ನು ಇವರು, ಹಿಂದೆ ನಿಂದಿಸಿದರು. ಈ ಅನೆಯ ಹಾಡಿನಲ್ಲಿ ತಿಮ್ಮಪ್ಪನ **"ಚರಮ ಸುಲಭತೆ"** ಎಂಬ ಮಹಾಗುಣವನ್ನು ಅನುಭವಿಸುವವರೇ, ಅತ್ತಣ ವೈಕುಂಠ ವಾಸಿಗಳಿಗೂ, ಸತ್ಕಾರ್ಯರಾಗುವರು. ಇಂಥ ಗುಣೈಕಗ್ರಾಹಿ, ಗುಣೈಕವಕೃತ್ವ ಸ್ವಗುಣವಿಕಾಸಕತ್ವಕ್ಕೇ ತಮ್ಮ ಕಾಣಿಕೆ ಸಲ್ಲಿಸುತ್ತಾರೆ. ದೋಷಗಳ ಹೇಳಿಕೆ, ಕೇಳಿಕೆಗಳಿಗೆ ಶರಣರು ಬಗ್ಗರು! ಆತ್ಮ ನಿರೀಕ್ಷಣೆ, ಅಂತರಿಕ ಬಲ ಸಂವರ್ಧನೆಗೇ ಹೆಚ್ಚು ಒತ್ತು ನೀಡುತ್ತಾ ಅಕ್ಷುಬ್ಧರಾಗಿಯೇ ಇದ್ದು ಪ್ರಕ್ಷುಬ್ಧ ಪರಿಸ್ಥಿತಿಯನ್ನೂ ಶಾಂತಿಯಿಂದಲೇ ಎದುರಿಸುತ್ತಾರೆ! ಎಂದೂ ಧೃತಿಗೆಡದೆ ಇರುತ್ತಾರೆ.

ವಾರ್ = ಬೀಳುತ್ತಲೇ ಇರುವ, ಪುನಲ್ = ಜಲಪಾತಗಳಿಂದ ಚೆಂದಗೊಂಡಿರುವ, ತಣ್ ಅರುವಿ = ಶೀತಳ ತೀರ್ಥಗಳುಳ್ಳ, ವಡಮ್ = ಬಡಗಲ ದಿಕ್ಕಿಗೇ ತಿಲಕಪ್ರಾಯವಾದ, ತಿರುವೇಙ್ಗಡತ್ತು = ಶ್ರೀ ವೆಂಕಟಗಿರಿಯ, ಎನ್ದ್ರು = ಎಲ್ಲರ ಹಿತೈಷಿಯಾದ ವೆಂಕಟೇಶನ, ಪೇರ್ಪಲ ಶೊಲ್ಲಿ = ಒಂದೇ ಎರಡೇ ಅನಂತ, ಗುಣವಾಚಕ ನಾಮಗಳನ್ನೇ ಒರಲಿ, ಒರಲಿ! ಬ್ರಹ್ಮಸ್ವರೂಪ, ರೂಪ, ಗುಣ, ವೈಭವ, ಅಚಾರ, ವಿಭೂತ್ಯೈಶ್ವರ್ಯ ಇವುಗಳನ್ನೇ, ಪಿದತ್ತಿ = ಪಲುಕುತ್ತಾ, ಲೌಕಿಕ ನಾಚಿಕೆಗಳನ್ನೆಲ್ಲಾ ಮೀರಿ, ಅತ್ಯಂತ ಭಕ್ತಿಪರವಶರಾಗಿ, ಸಾಮಾನ್ಯ ಮಾತುಗಾರಿಕೆಯ ಕ್ರಮಬದ್ಧತೆಗಳನ್ನೂ ಮೀರಿ, ಪಿತ್ತರ್ = ಇವರೆಂತಹ ಹುಚ್ಚರು!, ಎನ್ನೇ ಪಿರರ್ ಕೂರ = ಎಂದೇ ಜನಜಂಗುಳಿ ಆಡಿಕೊಂಬಂತೆ! ಏಕೆಂದರೆ, ಪಾಪ, ಈ ಆಳ್ವಾರರ, ಹೃದಯಾಂತರಾಳದ ಭಾವ ಪರಿಚಯ ಸಾಲದೆ, ಎಲ್ಲೆಲ್ಲೂ ಗುಣಮೌಲ್ಯಗಳ ಬಗೆಗೆ, ಅವಿಶ್ವಾಸವೇ ಹೆಚ್ಚೇರಿರುವುದರಿಂದ, ಇಂಥವರ ಹುಚ್ಚನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಸುಮ್ಮನೆ ಯಾಕಿವರು, ಆಗದ ಹೋಗದ ಗಾಳಿ ಗುದ್ದಿ, ಮೈ ನೋಯಿಸಿಕೊಳ್ಳುತ್ತಿದ್ದಾರೋ! ಸುಮ್ಮನೆ ಅವರವರ ಮನೆಯಲ್ಲಿ ಸುಖವಾಗಿರಬಾರದೇ?

ಉದಾಹರಣೆಯನ್ನೇ ನೋಡಿ. ಬೆಟ್ಟಗಳೆಲ್ಲಾ ದೇವರಂತೆ, ದೇವರು! ಒಡನೆಯೇ "ಪುಂಕಜಾಕ್ಷ" ಬೆಟ್ಟಕ್ಕೇನು ಕಮಲದಂತೆ ಕಣ್ಣಿದೆಯೇ? ಅಥವಾ "ಪಂಕಜಾಕ್ಷ"ನು ಬೆಟ್ಟವಾದಾನೇ? ಏನಿದು ಅಸಂಬದ್ಧಪ್ರಲಾಪ! ಹೀಗೆ ಏನಾದರೂ ಆಗಬಹುದಾದ "ಬಹು ಸ್ಯಾಮ್" ವಿಶ್ವರೂಪನ ರಹಸ್ಯ ತಿಳಿಯದವರು ಹಾಗೆಂದು ನಮ್ಮನ್ನು ಕರೆಯುವುದೇ ನಮಗೆ ಭೂಷಣ! ಅದೇನೂ ದೂಷಣೆಯಲ್ಲ. ಅವರ ಮೇಲೆ ನಮಗಿನ್ನೂ ಕರುಣೆ ಹೆಚ್ಚಿ, ಅವರ ಸೇವೆಗೇ ತಕ್ಕ ಪ್ರೇಮಶಕ್ತಿ ನಮ್ಮಲ್ಲಿ ಬೆಳೆಯುತ್ತದೆ. ದೇವರ ಅಂಗೀಕಾರದಂತೆಯೇ, ಲೋಗರ ತಿರಸ್ಕಾರವೂ ನಮಗೆ ಪುರುಷಾರ್ಥವೇ! ಅವರು ಲೇವಡಿ ಮಾಡುವಂತೆ, ಪಲ ಊರ್‌ಪುಕ್ಕುಮ್ = ಮಾನವರಿರುವ ಊರುಗಳನ್ನೆಲ್ಲಾ ಅಲೆದು! ಪುಹಾದುಮ್ = ನಿರ್ಜನ ಸ್ಥಳಗಳಲ್ಲಿಯೂ, ಉಲೋಹರ್ ಶಿರಿಕ್ಕ = ನಕ್ಕರೆನಗಲಿ! ನಿನ್ನು = ಅಯಾಯ ಪ್ರದೇಶ ಬಿಡದೆ ಸಾತ್ವಿಕ ಛಲದಿಂದ ನಿಂತೇ! ಅವರಸತ್‌ಸಂಗ ಬಿಡದೆ! ಅವರ ಗದ್ದಲ, ಕೋಲಾಹಲಗಳನ್ನೆಲ್ಲಾ, ನಮ್ಮ ಭಗವದ್ ಗುಣಗಾನ ಸಂಗೀತಕ್ಕೆ, ಅಕ್ಕಪಕ್ಕ, ವಾದ್ಯ ತಾಳಗಳೆಂದು, ಸಮಾಧಾನದಿಂದಲೇ ಇದ್ದು, ಆರ್ವಂ = ಅವರಿಂದ ಇನ್ನೂ ಹೆಚ್ಚಿನ ಭಕ್ತಿಯಿಂದ, ಕುನಿಪ್ಪಾರ್ = ಮೈಮರೆತು ಕುಣಿದಾಡುವವರೇ? ಅಮರರ್ ತೊಳಪ್ಪಡುವಾರ್ = ದೇವರ ಆ ನಿತ್ಯಸೂರಿಗಳಿಗೂ ಸಂಸೇವ್ಯರಾಗುವರು.

ತಮಿಳ್ ತಿರಳ್ ೩-೯-೧

శొన్నాల్ విరోదమిదు, ఆహిలుమ్ శొల్లువన్ కేళ్మినో ఎన్నావిల్ ఇన్కవి యాన్ ఒరువర్క్కుమ్ కొడుక్కిలేన్|
తెన్నా తెనావెన్ను వణ్ణు మురల్ తిరువేఙ్గడత్తుఎన్నానై యెన్నప్పన్ ఎమ్బెరుమాన్ ఉళనాహవే||

ಕನ್ನಡ ನೆರಳ್

ಪೇಳಲು ಘೋರ ವಿರೋಧವಿದಾದರು ಪೇಳುವೆ ಕೇಳಿರೋ ಎನ್‌ನಾಲಿಗೆ ಇನಿದಾಕವಿತೆಯನಾನೊಬ್ಬರಿಗೂ ಕೊಡುವುದು ಇಲ್ಲಾ
ರ್ದುರ್ದು ಎನುತಾ ಬಂಡುಣಿಮೊರೆಯುವ ಸಿರಿವೇಂಕಟದಾ ನನ್ನಾನೆ ನನ್ನಪ್ಪ ಎಮ್ಮಹಿರಿಸ್ವಾಮಿಗೇ ಉಳ್ಳವನಾಗಿಹೆ ಏ!

ಪ್ರಪಂಚದ ಹಲವಾರು ಸಾಹಿತಿಗಳು, ಇರುವ ಪರಿಸ್ಥಿತಿಯ ಚಿತ್ರಣ ಸಾಹಿತ್ಯಪ್ರಿಯರು. ಹಣ ಸಿಗಬೇಕು. ಎಲ್ಲರೂ ತಮ್ಮನ್ನು ಹೊಗಳುವುದನ್ನು ಈ ಕವಿಯಾರಾ ಕೇಳಿಯೇ ಬಿಡಬೇಕು! ಅಂತಹ ರಚನಾಕಾರರ ಮೇಲೂ ಈ ಸಂತ ತಿರುಮಾಲ್ ಕವಿಗೆ ಕನಿಕರ. ಅವರ ಈ ಅಜ್ಞಾತ ಅನರ್ಥ ಪರಿಹರಿಸಬೇಕೆಂದು, ಇಲ್ಲಿ ಅವರನ್ನು ಕುರಿತು ಮಾರ್ಮಿಕವಾಗಿ ಕೆಲ ಮಾತುಗಳನ್ನಾಡುತ್ತಾರೆ.

ಸಮಸ್ತ ಕಲ್ಯಾಣಕಾರಿ, ಆದರ್ಶನಾಯಕನನ್ನು ಕುರಿತು ಬರೆಯುವ ಸಾಹಿತ್ಯವೇ ಸತ್ಯ ಸಾಹಿತ್ಯ. ಉದಾತ್ತ ವ್ಯಕ್ತಿಯಲ್ಲಿ ಪ್ರೇಮವೂ ತುಂಬಿರುವುದರಿಂದ, ಅತನ ಬಗೆಗೆ ರಚಿಸುವ ಕಾವ್ಯಾದಿ ವಾಙ್ಮಯ "ಲೋಕಪ್ರಿಯ"ವೂ ಆಗುತ್ತದೆ. ಹೋಗಲಿ, ಸಾಮಾನ್ಯ ಹುಲುಮಾನವರನ್ನು ಮೇಲೇರಿಸಿ ಕೂರಿಸುವಂತಹ ಅಥವಾ ಕೆಳಗಿಳಿಸುವಂತಹ ಪುಸ್ತಕಗಳನ್ನು ರಂಜಿಸಿ ಬರೆದರೂ ನಿರೀಕ್ಷಿಸಿದ ಫಲವನ್ನಾದರೂ ಹೊಂದುವಿರಾ? ಇಹಪರ ಎರಡೂ ಸಿಗುವಂತಹ ವಿಶ್ವಾತ್ಮನನ್ನೇ ಕುರಿತು, ಅದರೊಳಗೆ ಔಚಿತ್ಯದಿಂದ ಕೆಟ್ಟದ್ದು ಕಡಿಮೆಯಾಗಿ, ಒಳಿತೇ ಬಲಿಯುವಂತೆ ಅದಕ್ಕೆ ಹಿನ್ನೆಲೆಯಾಗಿ, ರಾಜಸಾಂಶ, ಮಿಶ್ರ ಸಾತ್ವಿಕಾಂಶ ಸೇರಿಸಿ! ಸಾಹಿತ್ಯ ಎಂದಿಗೂ ಯಾರ ಕೇಡನ್ನೂ ಬಯಸದೆ, ಸರ್ವರ ಲೇಸನ್ನೇ ಬಯಸುವಂತಹದಾಗಿರಲಿ, ನರಗಳ ಉದ್ರೇಕ, ಕಡಿಮೆಯಾಗಿ ತಣ್‌ಪುನೀಡುವ ಪೂರ್ಣಿಮಾ ಬೆಳದಿಂಗಳಿನ ವಾಣೀವಿಲಾಸ ಹರಿಯಲಿ, ಸರ್ವಾಹ್ಲಾದಕರವಾಗಿರಲಿ. ಯಥಾಸ್ಥಿತ ಚಿತ್ರಣ ಸಾಹಿತ್ಯಕ್ಕಿಂತಲೂ ಆ ವಿಚಾರ ಜನಸಾಮಾನ್ಯರಿಗೆ ತಿಳಿದೇ ಇರುತ್ತದೆ; ಕೆಟ್ಟದ್ದು ತಿಳಿಯದಿದ್ದರೂ ಅಂತಹವರಿಂದ ಸಮಾಜಕ್ಕೇನೂ ಅಷ್ಟೊಂದು ಪೀಡೆಯಾಗದು. ಸಮಾಜ ಕೆಡದೆ ಇದ್ದುದೂ, ಅವಗುಣಗಳ ಸಾಹಿತ್ಯೀಕರಣದಿಂದ, ಎಲ್ಲೆಲ್ಲೂ ರೊಚ್ಚೆ ಏಕೆ ಹಬ್ಬಿಸುವಿರಯ್ಯಾ!

ಶೊನ್ನಾಲ್ = ನನ್ನ ಅನುಭವವನ್ನೇ ಹೇಳಿದರೆ, ವಿರೋದಮಿದು **'యద్యపిశుద్ధం లోకవిరుద్ధం'** ಪ್ರಹ್ಲಾದ ಆಸುರೀ ಪ್ರಕೃತಿಯವರ ಮಕ್ಕಳಿಗೆ, ತನ್ನ ಗೆಳೆಯರಿಗೆ ವಿವೇಕ ಹೇಳದೆ ಬಿಡಲಿಲ್ಲ! ನೀವೊಪ್ಪದಿದ್ದರೂ ನಾನು ಹೇಳುವುದರಿಂದ, ಸಚ್ಚಬ್ದದ ಅಲೆಗಳು, ಹರಿಹರಿದು ಯಾರಾದರೂ, ಕಿವಿಗೊಡುವವರಿಗೆ ಇಂದಲ್ಲ, ಇಲ್ಲಲ್ಲ, ಎಂದಾದರೂ, ಎಲ್ಲಾದರೂ ಕೇಳಿಸುತ್ತದೆ. ಈ ಸದ್ವಾರ್ತೆ ಉಳಿಯುವುದರಿಂದ, ನಷ್ಟವಂತೂ ಇಲ್ಲವಲ್ಲ! **'యోఽవసాదః స ఉచ్యతాం'** ಒಳ್ಳೆಯ ಮಾತಿನಿಂದ ಏನು ಶ್ರಮ ಹೇಳಿ? ಮಹಾಕವಿ ಭವಭೂತಿಯೂ, **కాలోహ్యయం నిరవధిః విపులా చ పృథ్వీ ఉత్పత్స్యతే మమ తు కోఽపి సమానధర్మా** ವಿವೇಕ ಸಾಹಿತ್ಯ ನಿರ್ಮಾಪಕರಿಗೆ, ಎಂದೂ ನಿರಾಸೆ ಕೂಡದು, ಅವರು ಸತ್ತರೂ ಅವರ ವಾಙ್ಮಯ ಅಮರ! ಸದ್ಯಕ್ಕೆ ಅಪ್ರಿಯದಂತೆ ಕಂಡರೂ ದೂರಾಲೋಚನೆಯಿಂದ ಹಿತೈಷಿಯಾಗಿ ಹೇಳುತ್ತೇನೆ. ಅಹಿಲುಮ್ ಶೊಲ್ಲುವನ್ = ಜನ ಎಂಥದನ್ನು ಬಯಸಬೇಕು? ಯಾವುದರಲ್ಲಿ ಅವರ ಭಾವೀ ಹಿತವಡಗಿದೆ! ಅಂತಹುದನ್ನು ನಾನಂತೂ ಹೇಳುವವನೇ! ಹೆಚ್ಚು ಜನರ ಬೆಂಬಲ ಈಗ ನನಗಿಲ್ಲದಿದ್ದರೂ, ನನಗೇ ಒಂದು ವೇಳೆ ವಿರುದ್ಧವಾತಾವರಣ ಎರಗಿ ಬಂದರೂ ಅದನ್ನು ಲೆಕ್ಕಿಸುವವನಲ್ಲ. ಇಡೀ ಜಗತ್ತೇ ವಿರೋಧಿಸಿದರೂ ನಾನು ಸತ್ಯ ಪ್ರೇಮ ಕರುಣೆಗಾಗಿ ಕ್ಷಯ ಹೊಂದಲೂ ಸಿದ್ಧ. ಇದೇ ಕೆಚ್ಚಿನ ಮಾತು, ನಾವು ಕಂಡಂತೆ "ಮಹಾತ್ಮಾಗಾಂಧಿಯವರಿಂದಲೂ" ಹೊರಟಿತು. ಅವರೇನು ನಮ್ಮ ಭಾಗದ "ಬಾಪು" ಆಗಲಿಲ್ಲವೇ? ಅವರ ಸತ್ಯಶೋಧನೆ, ಆತ್ಮಕಥೆ ಸಾಹಿತ್ಯವಲ್ಲವೇ?

ಕೇಳ್ಮಿನೋ = ಕಿವಿಗೊಡಿ. ನಾನೇನೂ ನಿಮಗೆ ವಿಧಿಸುತ್ತಿಲ್ಲ. ನನ್ನದು ವಿಧಿಸಾಹಿತ್ಯವಲ್ಲ. ಮೈತ್ರೀ, ಪ್ರೀತಿವಾಣಿ! ನೀವೆಲ್ಲಾ "ಹಾಲ್‌ಕುಡಿಯಿರೆಂದು ಕಾಲ್‌ಕಟ್ಟಿಕೊಳ್ಳುತ್ತಿದ್ದೇನೆ!" ಎನ್ ನಾವಿಲ್ ಇನ್ ಕವಿ = ನಾಲಿಗೆಗೆ ನಾನು ದಾಸನಲ್ಲ. ನನ್ನ ಹತೋಟಿಯಲ್ಲಿ ಈ ಜಿಹ್ವೆ ಇರಬೇಕಾದ್ದು. ಯಾನ್ = ಪವಿತ್ರ ಪರಮಾತ್ಮನ ಅಳಾದ ನಾನಿದೋ ಈ ರಸನೆಯನ್ನು, ಒರುವರ್‌ಕ್ಕುಮ್ = ಅವನಲ್ಲದ ಭಾವನೆಯ ಬೇರೆ ಯಾರಿಗೂ ಕೊಡಲು ಸಾಧ್ಯವೇ ಇಲ್ಲ. ತೆನ್ನಾ ತೆನಾವೆನ್ನು = ತನನಾ ತನನಾ! ಎಂದು. ವಂಡುಮುರಲ್ ತಿರುವೇಙ್ಗಡತ್ತೇ = ದುಂಬಿಗಳು ಮಧುರ ಕುಸುಮರಸಪಾನ ಮಾಡಿ ಹಾಡುತ್ತಿರುವ ಪುಷ್ಪಮಂಟಪವೆನಿಸಿದ ತಿರುಮಲೆಯ, ಎನ್ನಾನೈ = ಈ ಗಿರಿಗಜವನ್ನು, ಇದೋ ನಾನು ಹಾಡಿದರೆ, ಹೇಗೆ ಅನೆ ಅಲಿಸುತ್ತಿದೆ ನೋಡಿ! ಎನ್ ಅಪ್ಪನ್ = ನನ್ನನ್ನು ಲೋಕಹಿತೈಷಿಯಾಗಿಸಿದ ಮಹೋಪಕಾರಿ! ಎಮ್ ಪೆರುಮಾನ್ = ಈ ದಾಸನ ಸ್ವಾಮಿಯೀತ! ನಾನಾಗಲಿ, ಅವನಾಗಲಿ = ಈ ಸಂಬಂಧ ಬಿಡಲು ಸಾಧ್ಯವೇ ಇಲ್ಲ! ನಿಮ್ಮ ಸಾಹಿತ್ಯದ ವಸ್ತುಗಳೆಲ್ಲಾ ನಿಮ್ಮನ್ನು ಬಿಟ್ಟು ಸರಿದಾವು. ಈ ಕಲ್ಯಾಣನಿಧಿ ಮಾತ್ರ ಯಾರನ್ನೂ ಬಿಟ್ಟು ಕೊಡುವುದಿಲ್ಲ! ಉಳನ್ ಅಹವೇ = ನಾನೀ

ಸಿರಿಬಾಯ್ ನುಡಿ ಹಾಡಿದರೆ, ದೇವರಿಗೆ ನಾನೀಗ ಜೀವಿಸಿದೆ ಎಂದೆನಿಸುತ್ತದೆ! ಅತ್ಯಾಧುನಿಕ ಮಹಾಸಮಾಜ ವಿಜ್ಞಾನಿ, ಗಾಂಧಿಗೂ ಆಚಾರ್ಯ ವಿನೋಬಾ, "**ಕಾವ್ಯೋದ್ದೇಶ್ಯಾನಿ ಚತ್ವಾರಿ**" ೪ ಈ ಉದ್ದೇಶಗಳಿಂದಲೇ, ಸಾಹಿತ್ಯ ಸಂಪದ್ ಭರಿತವಾಗುವುದು ಎಂದಿದ್ದಾರೆ.

"ಹರಿಕೀರ್ತಿಪ್ರಗಾನಂಚ ಜೀವನಾರ್ಥಪ್ರಬೋಧನಂ| ಕರ್ತವ್ಯ ಪಥನಿರ್ದೇಶಃ ಚಿತ್ತಮಾಲಿನ್ಯಶೋಧನಂ||"

ಈ ದಶಕದ ೨ನೆಯ ಹಾಡಿನಲ್ಲೂ ಗರ್ವಿಪ ಮಾನವಜಾತಿಯ ಕವಿಯಾದರೆ ಏನ್ ಫಲವ್ಯೆ? ಹಾಡು ೩ ಸಾಹಿತಿಗಳೇ! ನೀವು "ಅರಿತವರೇ ಹೌದು, ಬೀಳುವ ಮಾನವರಿದ ಪಾಡುವುದೇನಾಗುವುದ್ಯೆ? ಳರಲ್ಲಿ ಪದಪದಕರ್ಥಜ್ಞರಿರಾ! ನಿಲ್ಲದ ಮನುಜರ ಪಾಡಿ, ಎಷ್ಟೆ ದಿನಕದು ಸಾಲುವುದ್ಯೆ? ಜರಲ್ಲಿ "ಕಸಬೆದಕಿದ ತೆರವಿಹಸಿರಿ"ಯವರನ್ನು ಹಾಡಿ ನಿಮ್ಮ "ವಾಗ್ಮಿತ್ವ"ವನ್ನು ವ್ಯರ್ಥಮಾಡಿಕೊಳ್ಳುವಿರಲ್ಲಾ! ೬ ಆದುದರಿಂದ ಆ ಹಣದ ಹಾದಿ ಹಿಡಿಯದೆ "ಮೈ ದಂಡಿಸಿ ಕಾಯಕಗೈದುಜ್ಜೀವಿಸಿರೈ" ಕಾವ್ಯಸ್ಫೂರ್ತಿ ಇನ್ನೂ ನಿಮಗೆ ಹೆಚ್ಚುವುದು. ೭ ಹಸಿಹುಸಿಗಳ ಹೇಳಲ್ಕೆಶಕ್ತನು ನಾನಲ್ಲನ್, ೮ ಸಲ್ಲದ ಪೊಗಳ್ ಪಾಡುತ ಪೋಗಿ, ೯ ಮನುಜರ ಬಣ್ಣಿಸಲ್ ಕವಿಯಾದವ ನಾನಲ್ಲಾ! ೧೦ ಈ ಶಠಕೋಪನಾದ ನಾನು ಲೋಕಗಳ್ ಪಡೆದವನ್ - ಕವಿ! ಮತ್ತೋರ್ವರ ಮೇಲ್ ಕಾವ್ಯವು ಸರಿಪೊಂದುವುದೇ? ೧೧ ನೀವೂ ಹಿರಿಯೀರ್‌ಜಸ ಪಡೆಯಲು ಬೇಕಿರೆ, ಮಹಾಕವಿಗಳಂತೆ ಉತ್ತಮೋತ್ತಮ ವಸ್ತುವನ್ನೇ ಆರಿಸಿಕೊಳ್ಳಿ. ಈ ಹಿತೋಕ್ತಿ, ಪತ್ರಿಕಾಕರ್ತರಿಗೂ ವಾರ್ತಾಮಾಧ್ಯಮಕ್ಕೂ ದಿಕ್‌ಸೂಚಿಯಾಗಿದೆ, ಬರೀ ರಾಜಕೀಯ ವೃತ್ತಾಂತಕ್ಕೇ ಹೆಚ್ಚು ಒಲವು ಬೇಡ!

ತಮಿಳ್ ತಿರಳ್ ೪-೫-೧೧

ಮಾರಿ ಮಾರಾದ ತಣ್ ಅಮ್ಮಲೈ ವೇಙ್ಗಡತ್ತಣ್ಣಲೈ ವಾರಿ ಮಾರಾದ ಪೈಮ್ ಪೂಮ್ ಪೊಳಿಲ್ ಶೂಳ್, ಕುರಹೂರ್ ನಹರ್
ಕಾರಿ ಮಾರನ್ ಶಡಕೋಪನ್ ಶೊಲ್ ಆಯಿರತ್ತಿಪ್ಪತ್ತಾಲ್ ವೇರಿ ಮಾರಾದ ಪೂಮೇಲ್ ಇರುಪ್ಪಾಳ್ ಏನೈ ತೀರ್ಕುಮೇ

ಕನ್ನಡ ನೆರಳ್

ಮೇಘವು ಮಾರಾಡದ ತಣ್ ಅಂದದ ಮಲೆವೇಂಕಟದೊಡೆಯನಮೇಲ್, ವಾ -
ರ್ಯೋಘವು ಮಾರಾಡದ, ಅಂದದ ಪೂಬನಸೂಳ್ ಕುರುಕಾನಗರಿಯ, ಶ -
ಠ ಕೋಪನ ಕಾರಿಯನ್ ಮಾರನ ಸೊಲ್ ಅಹ ಸಾಸಿರದೀ ಹತ್ತೂ ಪಾಶುರದಿಂ
ಸೌಗಂಧ್ಯವು ಮಾರಾಡದ ಪೂಮೇಲ್ ಇರುವಾಕೆಯು ವಿರಹದ ಅಘ ತೀರಿಪಳ್ಳೆ

ಇದಕ್ಕೆ ಹಿಂದಿನ "ಮಣ್ಣೆ ಇರುನ್ದು" ತಿರುವಾಯ್ ಮೊಳಿಯಲ್ಲಿ ಇದೇ ಶರಣ ಆಳ್ವಾರ್, ಸ್ವಾಮಿಯ ಬಾಹ್ಯ ವಿಶ್ಲೇಷದಿಂದ ಪಟ್ಟಪಾಡನ್ನು ಕರುಣಾಳು ತೀರಿಸಿದ! "ನನಗೆ ಇನ್ನೇನೂ ಕೊರೆಯಿಲ್ಲ. ಇನಿಎನ್ ಕುರ್ಯೆ? ಎಂದವರನ್ನು ದೇವರು, ಸಂಶ್ಲೇಷ ನೀಡಿ ಸಂತೈಸಿದ. ಅದರಿಂದ ಸಂತೋಷವುಕ್ಕಿ ಹಾಡುವುದೇ ಈ ದಶಕ. "ವೀತ್ತಿರುನ್ದು". ಆನಂದ ನಿಲಯ ವಿಮಾನ ಮಧ್ಯಸ್ಥನಾದ ಈ ಸರ್ವೇಶ್ವರನ ಬಗೆಗೆ ಇವರ ಇಲ್ಲಿನ ಮಾನಸಿಕ ಅನುಭಾವದ ಪಾಕ, ಇದೇ ಕೃತಿಯ ಅಂತಿಮ ಸ್ಥಿತಿಯನ್ನು ಹೋಲುವಂತಿದೆ. "ಈ ೧೧ ಹಾಡುಗಳೂ ಶತಮಾನದ, ತಮಿಳ್ ದಿವ್ಯ ಪ್ರಬಂಧ ಪ್ರವಚನಕಾರರಾದ ಹಿರಿಯ ಸದಾಚಾರ್ಯರು ಹೀಗೆ ವಿಮರ್ಶಿಸುತ್ತಿದ್ದರು! ಕರ್ನಾಟಕದ ವೇದಾನ್ತಿ 'ನಮ್‌ಜೀಯರ್' ೧೨ನೆಯ

ಎಂತಹ ಭಗವದ್ ವಿರಹ ತಪ್ತರನ್ನೂ ತನ್ನ ಸೌಶೀಲ್ಯ ಗುಣದಿಂದ ತಂಪುಗೊಳಿಸುವ ವರ್ಣನೆಯೇ ಈ ದಶಕದ ಉದ್ದಕ್ಕೂ ಸಾಗಿ ಬಂದಿರುವುದು. ಈ ಸುಶೀಲತೆ ಮೇಲ್‌ಗೆರಳಲು ಲಕ್ಷ್ಮಿಯೇ ಮುಖ್ಯಪಾತ್ರಿ! ಆಕೆಯೇ ಶರಣರಿಗೆ ಖಚಿತವಾಗಿಯೇ ಫಲನೀಡುವವಳೆಂಬ ವಿಶೇಷ. ಮಾರಿ = ಮಳೆಯಾದುದು, ಮಾರಾದ = ಎಡಬಿಡದೆ. ಅದರಿಂದ, ತಣ್ = ತಂಪಾದ, ಅಮ್ = ಅಂದವಾದ, ಮಲ್ಯೆ = ಕಾವೇರಿಗೆ ಸಹ್ಯಾದ್ರಿಯಂತಿರುವ, ವೇಙ್ಗಡತ್ತು ಈ ತಿರುಪತಿಯ, ಅಣ್ಣಲ್ಯೆ = ಸರ್ವಬಂಧುವಾದ ಸರ್ವಸ್ವಾಮಿಯನ್ನು ಕುರಿತು, ಎಂಬಲ್ಲಿಯವರಿಗೂ, ತಮ್ಮ ಕಾವ್ಯ ನಾಯಕನ ವರ್ಣನೆಯಾಯಿತು.

ಮುಂದೆ, ಹಾಡಿದ ಈಗಾಯಕ ಶರಣನ ವ್ಯಕ್ತಿ ವರ್ಣನೆ. ಮಾರಿ ಮಾರಾದ = ನೀರಾದುದು ಎಂದೂ ಇಂಗದೆ. ಪೈಮ್‌ಪೂಮ್ = ಘನವಾದ ಹೂಗಳಿಂದ ಸುವಾಸಿತವಾದ, ಪೊಳಿಲ್ = ಉದ್ಯಾನಗಳಿಂದ, ಶೂಳ್ = ಸುತ್ತುವರಿದಿರುವ, ಕುರುಹೂರ್ ನಗರ್ = ಕುರುಕಾಪುರಿಯನ್ನೇ ಜನ್ಮಸ್ಥಿತಿ ಮೋಕ್ಷಧಾಮವಾಗುಳ್ಳ, ಕಾರಿಮಾರ್ = "ಕಾರಿ" ಎಂಬ ಚತುರ್ಥವರ್ಣದ ಮರ್ಯಾದಸ್ತನಾದ ಗ್ರಾಮಪಟೇಲನ ವಂಶಜರಾದ ಮಾರನ್ ಎಂಬ ತಂದೆಗೆ ಮಗನಾಗಿ ಹುಟ್ಟಿದ, ಶಠಕೋಪನ್ = ಎಲ್ಲರಿಗೂ ಸುಂದರ ಪಾವನ ಸುಕುಮಾರನ ಅಗಲಿಕೆಯ ವಿರಹವೇದನೆಯನ್ನು ಹೋಗಲಾಡಿಸುವವನ, ಆಯಿರತ್ತು = ೧೧೦೨ ದ್ರಾವಿಡ ವೇದರೂಪವಾದ ಈ ಮಹತ್ ಕೃತಿಯಲ್ಲಿ, ಇಪ್ಪತ್ತಾಲ್ = ಆತ ಬಾಯ್ ಬಿಟ್ಟಾಡಿದುದರಲ್ಲಿ, ಈ ಹತ್ತಿನಿಂದ. ಈ ಅತ್ಯಾನಂದ ದಶಕದ ಸಂಬಂಧ ಮಾತ್ರದಿಂದಲೇ, ವೇರಿಮಾರಾದ = ವಾಸನೆ

ಬಿಡದ, ಪೂಮೇಲ್ ಇರುಪ್ಪಾಳ್ = ಪದ್ಮಾಲಯೆ ಯಾದ, 'ಅಲರ್‌ಮೇಲ್ ಮಂಗೈಮಹಾತಾಯಿಯೇ', ವಿನೈ = ಪಾಠಕರ, ಅರ್ಥಚಿಂತಕರ, ಭಗವದ್ ವಿರಹವೆಂಬ ಪಾಪವನ್ನು, ತಾನು ಪುರುಷಕಾರಳಾಗಿದ್ದು, ಅದರ ಪರಿಣಾಮವಾಗಿ ಸರ್ವಸ್ವತಂತ್ರ ತಿರುಮಲಪ್ಪ, ಅತಿ ವಿರಹಾರ್ತರಾಗಿದ್ದ ಈ ಆಳ್ವಾರರಿಗೆ ಸೌಶೀಲ್ಯಗುಣಾವಿಷ್ಕಾರದಿಂದ ಫಲ ನೀಡುವ ಆಸೆಯನ್ನು ಬೇಡವೆನ್ನುತ್ತಾನೆಯೇ?

ತಮಿಳ್ ತಿರಳ್ ೫-೧೦-೬

ನಿನ್ನವಾರುಮ್ ಇರುನ್ದ ವಾರುಮ್ ಕಿಡನ್ದವಾರುಂ ನಿನೈಪ್ಪರಿಯನ ಒನ್ನಲಾಯ್ ಉರುವಾಯ್ ಅರುವಾಯ ನಿನ್ ಮಾಯಙ್ಗಳ್
ನಿನ್ನು ನಿನ್ನು ನಿನೈಕ್ಕಿನ್ನೇನ್ ಉನ್ನೈ ಯೆಙ್ಗನಮ್ ನಿನೈಕಿರ್‌ಪನ್ ಪಾವಿಯೇ ರ್ಕೊನ್ನು ನನ್‌ಗುರೈಯಾಯ್, ಉಲಹಮುಣ್ಡವೊಣ್‌ಶುಡರೇ

ಕನ್ನಡ ನೆರಳ್

ನಿಂತಹ ಬಗೆಯುಂ ಕುಂತಿಹ ಬಗೆಯುಂ ಮಲಗಿಹ ಬಗೆಯುಂ ನೆನೆಯಲೂ ಆಗದ
ಒಂದಲ್ಲದ ಪರಿಪರಿ ರೂಹಾಗರುವಾಗಿಹ ಇಂತಲ್ಲದ ನಿನ್ನದೆ ಆದಚ್ಚರಿ ತರು ಮಾಯೆಗಳಂ
ನಿಂತೂ ನಿಂತೂ ನೆನೆಯುತ್ತಿಹೆನ್ಯೆ, ಆಸೆಯಿಂದಷ್ಟೇ ನಿನ್ನನು ಎಂತೈ ನಾನಾಗಿಯೇ ನೆನೆಯಲ್ ಬಲ್ಲವನಾಗುವೆ?
ಪಾಪಿಗಿದೋ ಒಂದಹ ನಲ್ ವಾತನು ಪೇಳಾ! ಲೋಕವನೆಲ್ಲವನೊಮ್ಮೆಗೆ ಉಂಡೊಳ್ಕೆಯ ಸೊಡರೇ?

ಇದಕ್ಕೆ ಹಿಂದೆಲ್ಲಾ ತೋತಾದ್ರಿ ನಾಂಗುನೇರಿ ವಾನಮಾಮಲೈ, ಅಥವಾ ಶಿರೀವರ ಮಂಗಲನಗರ್ ಮತ್ತು ಕುಂಭಕೋಣ ಅಥವಾ ತಿರುಕ್ಕುಡನ್ಸ್ಯೆ ಹಾಗೂ ತಿರುವಲ್ಲವಾಳ್ ಎಂಬ ಆಯಾಯಾ ದಿವ್ಯದೇಶಗಳಲ್ಲಿ ಈ ಆಳ್ವಾರ್ ತಾವು ಬಯಸಿದಂತೆ ಅನುಭವಿಸಲು ಆಗದೆ ಹೋದುದರಿಂದ ಕೃಷ್ಣಾವತಾರದಲ್ಲಿ ಮನಃ ಪ್ರಣಿಧಾನಗೈಯ್ಯುತ್ತಾರೆ. ಸ್ವಾಮಿ ಉತ್ತರ ಮಧುರಾ ನಗರದಲ್ಲಿ ವಸುದೇವನಿಗೆ ಕಂದನಾಗಿ ಹುಟ್ಟಿ, ಗೋಕುಲದಲ್ಲಿ ಬೆಳೆದುದು, ಸರ್ವಮನುಜ ಮನೋನಯನಹಾರಿ ಅತಿದೈವತ ಅತಿಮಾನುಷ ಪ್ರಭಾವ ತೋರಿದುದು ಮತ್ತಿತರ ಅವತಾರ ಲೀಲೆಗಳೆಲ್ಲಾ ಇವರ ಚಿತ್ತಪಟಲದಲ್ಲಿ ತೆರೆಯೇಳುತ್ತಿವೆ. ಅವುಗಳನ್ನು ಒಂದು ಹದ್ದಿನಲ್ಲಿಟ್ಟು ಚೆಪ್ಪರಿಸಲು ಈ ಆಳ್ವಾರಿಗೆ ಶಕ್ತಿಸಾಲದು! ಈ ಶೈಥಿಲ್ಯವನ್ನು ನೀನೇ ಹೋಗಲಾಡಿಸಬೇಕೆಂಬ ಬೇಡಿಕೆಯೇ ಈ ದಶಕದ ಮುಖ್ಯ ವಿಷಯ. ''ಪಿರನ್ದವಾರುಮ್''

ದೇವಾ! ನಿನ್ನ ಸಕಲ ಲೀಲಾ ವಿನೋದಗಳನ್ನು ನೋಡಲು ಆಸೆಯಿದೆಯೇ ಹೊರತು ಅವನ್ನು ಮರು ನೆನೆಯಲು ಮನಶ್ಶಕ್ತಿ ಸಾಲದಯ್ಯಾ! ನಿನ್ನ ಆಯಾಯಾ ಶುಭ ಗುಣಗಳ ಪ್ರಸಂಗ ಬಂದರೇ ಸಾಕು, ಚಿತ್ತ ಕರಗಿ ಧಾರಣ ಸಾಮರ್ಥ್ಯವನ್ನೇ ಕಳೆದು ಕೊಳ್ಳುತ್ತಿದೆ. ಇದಕ್ಕೇನು ಚಿಕಿತ್ಸೆ? ''ಭೇಷಜಂಭಿಷಕ್'' ಔಷಧವೂ ವೈದ್ಯನೂ ಆದ ನೀನೇ ದಯಮಾಡಿ ಬಂದು ನನಗೆ ಹೇಳಪ್ಪಾ!

ಓ ರಾಮಾ! ಓ ಕೃಷ್ಣಾ! ನಿನ್ನ ಆರುಮ್ = ಆ ಲಂಕಾದ್ವಾರದಲ್ಲಿ ನೀ ನಿಂತ ಆ ಬಗೆಯನ್ನೂ, ಅಥವಾ ಯಶೋದೆ ಕಟ್ಟಿದ ತೊಟ್ಟಿಲ ಸರಪಳಿ ಹಿಡಿದು ನಿಂತಿರುವ ಆ ಬಾಲಭಂಗಿಯನ್ನೂ, ಇರುನ್ದವಾರುಮ್ = ಚಿತ್ರಕೂಟಾಶ್ರಮದಲ್ಲಿ ಜಟಾಮಂಡಲ ಧಾರಿಯಾಗಿ ಸೀತೆಯೊಡನೆ ಲಕ್ಷ್ಮಣ ಸಂಸೇವ್ಯನಾದವನು ಇರುವ ಠೀವಿಯನ್ನೂ, ರಾಸಕ್ರೀಡಾಕೂಟದಲ್ಲಿ ಗೋಪೀವಲಯಾವೃತನಾಗಿರುವ ಆ ನಿಲುವನ್ನೂ, ಕಿಡನ್ದವಾರುಮ್ = ದರ್ಭಶಯನದ ಆ ಅದ್‌ಭುತ ಶಯನ ಸತ್ಯಾಗ್ರಹವನ್ನೂ ಒಬ್ಬೊಬ್ಬ ಗೊಲ್ಲರ ಪೆಣ್‌ಗಳ ಮಡಿಲಲ್ಲೂ ಮಲಗಿದ ಆ ದಿವ್ಯ ಪ್ರಣಯ ಸೌಂದರ್ಯದ ರೀತಿಯನ್ನೂ, ನಿನೈಪ್ಪು = ಸ್ಮರಿಸುವುದೇ, ಅರಿಯನ = ನನಗೆ ಅಸಾಧ್ಯವಪ್ಪಾ! ಒನ್ನಲಾ ಉರುವಾಯ್ = ಒಂದೇ ಮೂರ್ತಿ ಸಾಲದೆ ಅನೇಕ ಬಗೆಯ ರೂಹಾಂತವನೇ! ಬರಿ ಬಾಹ್ಯಮೂರ್ತಿಯಾಗಿ, ಪ್ರತೀಕ ಬಿಂಬ ಮಾತ್ರವಾಗಿ ನೀ ತೋರುತ್ತಿಲ್ಲ! ಅರುವಾಯ = ನಿರಾಕಾರ, ಆ ದಿವ್ಯಾದ್‌ಭುತ ರೂಪವನ್ನೊಳಗಿಟ್ಟೇ. ನಿನ್ ಮಾಯಂಗಳ್ = ನೀ ಗೈಯ್ಯುವ ಅತ್ಯಾಶ್ಚರ್ಯಕರ ಕೆಲಸಗಳನ್ನೆಲ್ಲಾ ನಿನ್ನು ನಿನ್ನು ನಿನೈಕ್ಕಿನ್ನೇನ್ = ಅಲ್ಲಲ್ಲೇ ವಿಶ್ರಮಿಸಿ ವಿಶ್ರಮಿಸಿಕೊಂಡು ನೆನೆಯ ಬೇಕೆನಿಸಿದರೂ! ಪೂರ್ಣ ಆಕಲನ ಶಕ್ತಿ ಸಾಲದು! ಬಲು ಸುಸ್ತಾಗಿದೆ! ಬೆಟ್ಟದ ಮೆಟ್ಟಿಲು, ಹತ್ತುವಾಗ ಹಸುಗಳು ನಿಂತು ನಿಂತು ಮೆಲ್ಲನೆ ಮೇಲೇರುವಂತೆ ಆಳ್ವಾರರ ಬಳಲಿಕೆ! ನೆನೆಯಲೂ ಆಗದೆ ನೆನೆಯದಿರಲೂ ಆಗದೆ ಇರುವಂತಹ ವಿಚಿತ್ರ ಮಾನಸಿಕ ತೊಳಲಾಟದಲ್ಲಿದ್ದೇನೆ!

ಉನ್ನೈ ಎಙ್ಗನಮ್ = ನಿನ್ನನ್ನು ಅಶಕ್ತನೂ ಅಜ್ಞನೂ ಆದ ಇದೋ ಈ ದಾಸನನ್ನು ಸರ್ವಜ್ಞ ಶಕ್ತನಾಗಿದ್ದೂ ನೀನು ಕೈ ಬಿಟ್ಟರೆ ಹೇಗೆ ತಾನೇ ನೆನೆಯಲು ಸಮರ್ಥನಾದೇನು? ಪ್ರಯೋಜನಾಂತರ ಪರನನ್ನಾಗಿ ನನ್ನನ್ನು ನೀನಿರಿಸಿದ್ದರೆ ಆ ಮಾತು ಬೇರೆಯಾಗುತ್ತಿತ್ತು! ನಿನ್ನಲ್ಲೇ ನೆಟ್ಟಮನ ಕೊಟ್ಟು ಅದಕ್ಕೆ ಬಲ ತುಂಬುವುದೂ ನಿನ್ನ ಹೊಣೆಯಲ್ಲವೇ ಪ್ರಭೋ! ಪಾವಿಯೇರ್‌ಕ್ಕು = ನನ್ನನ್ನು ಬಿಟ್ಟು ಅನೇಕರು ಧ್ಯಾನ ಸಮರ್ಥರಾಗಿದ್ದಾರೆ. ನಿನ್ನ ಧ್ಯಾತೃಗಳಿಗೆ ನೀನು ಶೋಭನಪರಂಪರೆ ನೀಡುತ್ತಿದ್ದೀಯೆ. 'ಸ್ಮೃತೋ ಯಚ್ಛತಿ ಶೋಭನಂ' ವಿಲಕ್ಷಣಾಧಿಕಾರಿಯಾಗಿ ಒಂಟಿಯಾಗಿ ದೀನನಾಗಿರುವ ನನ್ನನ್ನು ಕುರಿತು, ಒನ್ನು ನನ್‌ಗು ಉರೈಯಾಯ್ = ಅರ್ಜುನನಿಗೆ, ಕೊಟ್ಟಕೊನೆಗೆ ಬೇರೊಂದಿಲ್ಲದಂತೆ ಅಸಮಾನ ಅದ್ವಿತೀಯವಾದ ಆ ನಲ್ಮೆಯ ಚರಮಶ್ಲೋಕವನ್ನು ಚರಮೋಪಾಯವಾಗಿ ಹೇಳಿದಂತೆ, ಜಗದ್‌ಗುರೋ!

ನನಗೂ ಉಪದೇಶಿಸಿ ಸಂತೈಸಯ್ಯಾ! "ಸರ್ವಪಾಪೇಭ್ಯಃ ಮೋಕ್ಷಯಿಷ್ಯಾಮಿ" ನನ್ನ ಪಾಪವೂ ಸರ್ವೇತರವಿಲಕ್ಷಣ. ಬೇರೆ ಬೇರೆಯವರದಂತಲ್ಲ. ಏಕೆಂದರೆ ನಿನ್ನ ನಿರ್ಹೇತುಕ ಅಸಾಧಾರಣ ಕೃಪಾವಿಶೇಷವೂ ಅಂಥದೇ. ಇದೋ ಮಹಾಮಾತೆ, ನಾಥನಾಯಕಿ, ಉಡೈಯನಙ್ಗೈಯ ಉದರದಿಂದ ಜನಿಸುವಾಗಲೇ ನಾನೇನೂ ಬೇಡಲಿಲ್ಲ! ನೀನಾಗಿಯೇ ಇತ್ತ 'ಮತಿ ನಲಮ್' ಜ್ಞಾನ ಹಾಗೂ ಭಕ್ತಿ! ಅಥವಾ ಭಕ್ತಿರೂಪವಾಗಿಯೇ ಪರಿಪಕ್ವವಾದ ಜ್ಞಾನ. ಅದರಿಂದಲೇ ಸಹಜವಾಗಿ ನೀನೇ ಅರಳಿಸಿರುವುದು! ಈ ಮನದ ಸಡಿಲು ಇದೀಗ ಈ ದಾಸನ ಪಾಪ! ಭಕ್ತಿಯಿಂದ "ಪಾಪ" ಹೇಗಯ್ಯಾ? ಎನ್ನುವಿಯಾ? ನಿನ್ನ ಗುಣಾನುಭವ ಮಾಡುವ ಈ ನನ್ನ ಉದ್ದೇಶ್ಯ ನೆರವೇರದಂತೆ ಈ ಮನಃಶೈಥಿಲ್ಯ ಅಡ್ಡಿಪಡಿಸುತ್ತಿರುವುದರಿಂದಷ್ಟೆ "ಪಾಪ" ಎನ್ನುತ್ತೇನೆ. ಸ್ವೋದ್ದೇಶ್ಯ ವಿರೋಧಿಯೇ ತಾನೇ ಪಾಪ!

ಇವರ ಮಾತಿನ ಆಳಕ್ಕೆ ಪರಮಾತ್ಮ ಸಂತೋಷಪಟ್ಟು ಪ್ರಳಯ ಕಾಲದ ಸಂಹಾರದ ಆ ಅದ್‌ಭುತ, ಅನ್ಯೈರದೃಷ್ಟ ಪೂರ್ವವಾದ ಸಂನಿವೇಶ ತೋರುತ್ತಾನೆ. ಇವರ ಮನಸ್ಸು ಶಕ್ತವಲ್ಲ. ಆದರೂ ಅಷ್ಟಷ್ಟು ಚೆಪ್ಪರಿಸಿ ದೇವರಲ್ಲಿ ಹೇಳಿಕೊಳ್ಳುವ ಮಾತು. ಉಲಹಂ ಉಂಡ ಒಣ್ ಶುಡರೇ = ಸರ್ವ ಲೋಕವನ್ನೂ ಉಂಡನಲ್ ಪರಂಜ್ಯೋತಿ! ಅತ್ತ ಸ್ವಾಮಿಯ ಲೀಲಾಪ್ರದರ್ಶನ. ಇತ್ತ ಈ ಶರಣರ ವರದಿ! ಏಕಕಾಲಕ್ಕೇ ಯುಗಪತ್ ಸಂಹಾರ ದರ್ಶನಾನಂದ! ಇದರ ತಾತ್ಪರ್ಯವಿಷ್ಟೆ. ಆಗ ಯಾರೇನು ಪ್ರಾರ್ಥಿಸಿದರೆ ನಾನೇ ಎಲ್ಲವನ್ನೂ ಸೂಕ್ಷ್ಮರೂಪಕ್ಕೆ ವಿದ್ಯುತೀಕರಣಗೈದು ನನ್ನ ಒಳಗೆ ಬಚ್ಚಿಟ್ಟುಕೊಂಡದ್ದು. ಹಾಗೆ ನೀವೂ ಬೇಡಲಿಲ್ಲ. ಅದು ನನ್ನಿಷ್ಟ. ನೀವೇಕೆ ಪ್ರಶ್ನಿಸುವಿರಿ? ಲೀಲೆಗಳನ್ನು ನೋಡಲು ಚಿತ್ತವನ್ನು ದೃಢಗೊಳಿಸಿರಿ. ಈ ಪ್ರಾರ್ಥನೆಯನ್ನು ನೀವೇಕೆ ಮತ್ತೆ ಮತ್ತೆ ಮಂಡಿಸುತ್ತಲೇ ಇದ್ದೀರಿ! "ಹಾಗಲ್ಲವಪ್ಪಾ! ಪ್ರಳಯ ಕಾಲದಲ್ಲಿ, ಸೂಕ್ಷ್ಮವಾಗಿಸಿ, ಮತ್ತಾರಿಗೂ, ಪ್ರಳಯಕ್ಕೂ ಸಿಗದಂತೆ, ಮುಂದಿನ ಸೃಷ್ಟಿಗೆ, ಬೀಜಗಳನ್ನು ರೈತ ರಕ್ಷಿಸುವಂತೆ ಮಾಡಿದ್ದನ್ನು ಅವು ಅರಿತವಲ್ಲ. ನನಗೆ ನೀನೇ ಸರ್ವಜ್ಞತೆ ಇತ್ತಿರುವಿ!" ಶರಣರೆಲ್ಲರೂ "ಸರ್ವಜ್ಞರು" - ಅವುಗಳಿಗಾದರೆ ಉಪಕಾರ ಸ್ಮೃತಿಯೂ ಇಲ್ಲ. ನಾನು ಎಲ್ಲರಂತಲ್ಲ. ಎಲ್ಲವುಗಳಂತಲ್ಲ. ಅವುಗಳನ್ನೇ ರಕ್ಷಿಸಿದವ ನೀನೇ, ನಾನಿದೋ ನೋಡುತ್ತಿದ್ದೇನೆ. ಜಗವನ್ನೆಲ್ಲಾ ಗಡದ್ದಾಗಿ ಉಂಡು ತೃಪ್ತಿಯಿಂದಿರುವಂತೆ ನನ್ನನ್ನೂ ಪೂರ್ಣ ಭೋಜಿಯನ್ನಾಗಿಸು! ಬಳಲಿಸಬೇಡಾ!

ತಮಿಳ್ ತಿರಳ್ ೬-೬-೧೧

ಕಟ್ಟೆಳಿಲ್ ಶೋಲೈ ನಲ್‌ವೇಙ್ಗಡ ವಾಣನೈ ಕಟ್ಟೆಳಿಲ್ ತೆನ್ ಕುರುಹೂರ್ ಚ್ಚಡಕೋಪನ್ ಶೊಲ್
ಕಟ್ಟೆಳಿಲ್ ಆಯಿರತ್ತಿಪ್ಪತ್ತುಮ್ ವಲ್ಲವರ್ ಕಟ್ಟೆಳಿಲ್ ವಾನವರ್ ಪೋಹಂ ಉಣ್ಬಾರ್ ಏ!

ಕನ್ನಡ ನೆರಳ್

ಗಂಧವ ತೀಡುವ ಚೆಲು ಕಂಪಿನ ವೆಂಕಟಗಿರಿ ನಿರ್ವಾಹಕನ್ ಕುರಿತಾ
ಅಂದದ ಕೋಟೆಯಿಂ ಚೆಂದದ ತೆಂಕಣ ಕುರುಹೂರ್ ಶಠಕೋಪನ ಸೊಲ್
ಬಂಧುರ ಬಂಧದ ಸಾಸಿರದೀ ಪಾಶುರ ಹತ್ತನು ಬಲ್ಲವರ್, ದೇವನ
ಛಂದಾಽನುವರ್ತನ ನಿತ್ಯಾಽಽನಂದದ ನಿತ್ಯಸೂರಿಗಳ್ ಭೋಗವನುಣ್ಣುವರೈ

"ಸದಾಪಶ್ಯನ್ತಿ ಸೂರಯಃ" ಎಂದೂ "ಯತ್ರ ಪೂರ್ವೇ ಸಾಧ್ಯಾಃ ಸನ್ತಿದೇವಾಃ" ಎಂದೂ, ಹಿಂದಿನ ದೈವೀಸ್ವಭಾವದ ಎಲ್ಲರೂ, ಪರವಾಸುದೇವನ ಕೃಪಾಸಾಧ್ಯರೇ ಹೊರತು, ತಮ್ಮಿಂದ ತಾವು "ನಿತ್ಯದರ್ಶಕರಲ್ಲ". ಪರಮಪದ ವಾಸಿಗಳಾಗಿರಲೂ ಸಾಧ್ಯವಿಲ್ಲ, **"ಇವರೆಲ್ಲರೂ ಈ ವೈಕುಂಠದಲ್ಲೇ ಎಂದೆಂದೂ ನಿತ್ಯರಾಗಿಯೇ ಇದ್ದು, ನನ್ನನ್ನು ಸದಾ ನೋಡುತ್ತಿರಲಿ"** ಎಂಬ ಸತ್ಯ ಸಂಕಲ್ಪನ ನಿತ್ಯೇಚ್ಛೆ ಇರುವುದಿರಂದಲೇ! ಇಂಥವರೇ, ಅನಂತ ಗರುಡ ವಿಷ್ವಕ್ ಸೇನಾದಿಗಳು. ಅವರುಗಳಂತೆಯೇ, ಈ ದಶಕಾರ್ಥಜ್ಞರೂ ಆಗಿ ಬಿಡುವರೆಂಬ ಫಲಶ್ರುತಿ ಹೇಳುವ ಹಾಡಿದು. ಕಟ್ಟು ಎಳಿಲ್ = ಅಚ್ಚುಗಟ್ಟಾದ, ಹಾಗೂ ಚೆಲುವೇ ಮೇಲ್ ಮೇಲೆ ಚಿಮ್ಮಿ ಏಳುತ್ತಲೇ ಇರುವ, ಶೋಲೈ = ಸೊಂಪಾದ ಮರಗಳ ತೋಪೇ ತೋಪುಗಳುಳ್ಳ, "ಬ್ರಹ್ಮವನಂ, ಸ ಉವೃಕ್ಷ ಆಸೀತ್" ವೇದಪುರುಷನ ಭಾವವನ್ನೇ ದ್ರಾವಿಡ ಭಾಷೆಯಲ್ಲಿ ಇವರು **"ವೇದಂ ತಮಿಳ್, ಶೆಯ್ದ ಮಾರನ್"** ಆದುದರಿಂದ, ಅದೇ ಛಾಯೆಯಲ್ಲಿ, ಅವನ ಕೃಪೆಯಿಂದಲೇ ಭಾವಿಸುತ್ತಾರೆ! ನಲ್ = ಸೇವ್ಯ, ಸೇವಕರೀರ್ವರಿಗೂ ಒಪ್ಪುವ, ವೇಙ್ಗಡಮ್, ಈ ವೇಂಕಟಗಿರಿಗೆ, ವಾಣನೈ = ರಾಜನಾದ ತಿಮ್ಮಪ್ಪನನ್ನೇ ಕುರಿತುದು ಸಾವಿರಹಾಡುಗಳೂ. ಇದೇ ಆಳ್ವಾರ್ ತಿರುವೇಂಕಟದ ಆನೆ ಇರುವಾಗ ನನ್ನೀ ನಾಲಿಗೆಯಿಂದ ಹೊರಡುವ ಕಾವ್ಯವೂ ಅವನಿಗೇ ಮೀಸಲು. ಮತ್ತಾರಿಗೂ ನೀಡೆನು. **"ತಿರುವೇಙ್ಗಡುತ್ತು ಎನ್ನಾನೈ ಉಳನಾಹವೇ ಎನ್‌ನಾವಿಲ್ ಇನ್‌ಕವಿ ಯಾನ್ ಒರುವರ್‌ಕ್ಕುಮ್ ಕೊಡುಕ್ಕಿಲೇನ್"** ಎಂದಿದ್ದಾರಷ್ಟೆ ಹಿಂದೆ ೩ನೆಯ ಶತಕ, ೩ನೆಯ ದಶಕದಲ್ಲಿ. ವಸ್ತುತಃ, **"ಓರ್ವನೇ ಎಂಬ ಅದ್ವೈತ ನಿಷ್ಠೆ ದ್ವೈತದಂತೆ ಕಾಣುವ ಭಾಷೆ"**. ಈ ಉಭಯ ಸಮನ್ವಯ! ಬ್ರಹ್ಮ ಸ್ವರೂಪ ಒಂದೇ. ಅದರಿಂದಲೇ, ಆಸೆ ಪಡುವ ಭಕ್ತ ಶರಣರಿಗಾಗಿ ಮೂರ್ತಿಭೇದ, ಗುಣಭೇದಾದಿಗಳು, ಮಾತಿಗೆ ಸಿಕ್ಕಿಕೊಳ್ಳವುದು ಕೃಪೆಯಿಂದ. ಮಾತಿಗೆ ಅತೀತನಾಗಿರುವುದು ತನ್ನ **"ಸ್ವಚ್ಛಂದದಿಂದ"**. ದಯೆಯಿಂದ ದ್ವೈತ ಸೌಂದರ್ಯ, ಸ್ವರೂಪದಿಂದ

ಅದ್ಭುತ ಸೌಂದರ್ಯ, ಇದು ಆಳ್ವಾರ್ ಶರಣರು ತೋರುವ ಸಮನ್ವಯ ವೈಖರೀ ವಿಲಾಸ! ಈ ಪಾಶುರಗಳಿಷ್ಟೇ ತಿಮ್ಮಪ್ಪನ ಮೇಲೆ ಇತ್ಯಾದಿ ನಮ್ಮ ಹವ್ಯಾಸಗಳೆಲ್ಲಾ ಆತನಿಗೆ ಸಹ್ಯವೇ ಆದರೂ ನಮ್ಮ ನಮ್ಮ ಅನಿಸಿಕೆಗಳನ್ನು ಮೀರಿಯೂ ಇದ್ದಾನೆ. ಹೀಗೆ ದಿವ್ಯ ಪ್ರಬಂಧದ ಪ್ರತಿಪಾದ್ಯವೈ ಲಕ್ಷಣ್ಯವನ್ನು ಹೇಳಿ ಮುಂದೆ ಪ್ರಬಂಧದ ವೈಶಿಷ್ಯವನ್ನೂ, ಪ್ರಬಂಧಕರ್ತೃವಿನ ವಿನ್ಯಾಸ ವೈಭವವನ್ನೂ ಹೇಳುತ್ತಾರೆ.

ಪ್ರಬಂಧ ಕಾರನನ್ನು ಹೆತ್ತು ಬೆಳಸಿ ಆಶ್ರಯನೀಡಿದ, ಜನ್ಮಭೂಮಿಯನ್ನು ಮಧ್ಯೆ ವರ್ಣಿಸುತ್ತಾರೆ. ಕಟ್ಟು = ಕೋಟೆ ಕೊತ್ತಲುಗಳು, ಜಡವಸ್ತುಗಳಂತೆ ಕಾಣುವ ಇವೂ ದೇವರ ಶರಣರ, ಸಮಾಜದ ರಕ್ಷಣೆಗೆ ಒದಗುವುದರಿಂದ, ಎಲ್ಲವೂ ಪರಬ್ರಹ್ಮದಷ್ಟೇ ಮೌಲ್ಯವುಳ್ಳವು. ಅವನೇ ಇವೆಲ್ಲಾ, ಇವೆಲ್ಲಾ ಅವನೇ! **"ಬ್ರಹ್ಮೈವ ಇದಂ ಸರ್ವಮ್. ಇದಂ ಸರ್ವಮಪಿ ಬ್ರಹ್ಮೈವ"** ಈ ವೇದದ ಭಾವವನ್ನೇ, ಸರಳೀಕರಿಸುವ ಸಮಂಜಸಕಾರಿ ಪದ್ಧತಿ ಶರಣರದು. ಯಾವುದರ ಖಂಡನವೂ ಇಲ್ಲ. ಯಾವುದರ ಹಠದ ಮಂಡನವೂ ಇಲ್ಲ! ಹೀಗೆ ಕೋಟೆಕೊತ್ತಲುಗಳಿಂದ ಶೋಭಿಸುವ, ತೆನ್ = ಭರತಖಂಡದ ದಕ್ಷಿಣಾಗ್ರದಲ್ಲಿರುವ, ಕುರುಹೂರ್ = ಕುರುಕಾಪುರಿಗೆ, ದೇವರಿಗೆ ತಕ್ಕ ಊರಾದ ಮೇಲೆ, ಆ ಊರನ್ನೆಲ್ಲಾ ಭಗವಂತನ ಸಕಲ ಸೇವೆಗಳಿಗೂ ಅಣಿಗೊಳಿಸುವುದೇ, ಆಧ್ಯಾತ್ಮಿಕ ಗ್ರಾಮ ರಚನೆಯೇ ಶರಣರ ಯೋಜನೆ. ಇದನ್ನೇ ಗಾಂಧೀಜಿ 'ಗ್ರಾಮಸ್ವರಾಜ್ಯ' ಎಂದು ಮುಂದುವರಿಸಿದ್ದು. ವಿನೋಬಾಜಿಗೆ "ಗ್ರಾಮದಾನ" ಸ್ಫುರಿಸಿದ್ದೂ ಎಲ್ಲಾ ಭಗವಂತನ ಅಹೇತುಕೀ ಕೃಪೆಯೇ. **"ವಿಶ್ವಂ ಪುಷ್ಪಂ ಗ್ರಾಮೇ ಅಸ್ಮಿನ್ ಅನಾತುರಮ್"** – ಋಗ್ವೇದ.

ಉತ್ತರದ ಕಾಶ್ಮೀರದ ಆ ಶ್ರೀನಗರ ಸಂಸ್ಕೃತ ದರ್ಶನ ಸಾಹಿತ್ಯಕಾರರನ್ನು ನೀಡಿದ ನಗರ. ದಕ್ಷಿಣದ ಈ ಶ್ರೀನಗರ ತಿರುನಗರಿ ದ್ರಾವಿಡ ದಿವ್ಯವಾಙ್ಮಯಕಾರರನ್ನಿತ್ತನಗರ! ಭರತಖಂಡದ ಅಖಂಡತೆಯ ನಿಜವಾದ ರಕ್ಷಕರು ಸಂತ ಸಾಧುಗಳೇ, ಸಂಸ್ಕೃತ ಹಾಗೂ ಜಾನಪದ ಭಾಷೆಗಳೇ! ಇಂದಿಗೂ ಲೋಕಸಭೆಗೆ ಆರಿಸಿಬರುವವರೂ, ಹಿಂದಿ, ಸಂಸ್ಕೃತ, ತತ್ತಜ್ಞಾನಪದ ಶರಣ ಸಾಹಿತ್ಯಜ್ಞರೇ ಆದರೆ ಅದೆಷ್ಟು ಚೆಂದ! ಜನಪದ ಸಾಹಿತಿಗಳೂ ಹಿಂದಿ, ಸಂಸ್ಕೃತಗಳನ್ನೂ, ಜಾನಪದಗಳಿಗೆ ಪೂರಕ ಪೋಷಕವೆಂದೂ, ಜಾನಪದವೂ ಹಿಂದಿ ಸಂಸ್ಕೃತದ ಶೋಭೆಯನ್ನೇ ಹೆಚ್ಚಿಸುವುವೆಂಬ ಮಹಾನಿಧಿಯನ್ನು ರಕ್ಷಿಸಿಕೊಂಡರೆ, ಈ ಅತ್ಯಾssಗ್ರಹದ ಪಿಡುಗು ನೀಗುವುದಿಲ್ಲವೇ? ಒಳ ಶಾಂತಿಯನ್ನೇ ಅಸಂತುಲಿತವಾಗಿ ಕದಡಿ ಬಿಟ್ಟರೆ, ದೇಶಕ್ಕೆಂತು ಶಾಂತಿ? ಜಾನಪದ, ಸಂಸ್ಕೃತಿಯಿಂದಲೇ "ಜಾತ್ಯಾತೀತತೆ"ಯನ್ನು ಸತ್ಯವಾದ, ಅರ್ಥದಲ್ಲಿ ನಿಲ್ಲಿಸಬಹುದು, ಪಕ್ಷ ಪ್ರತಿಪಕ್ಷಗಳ ಹಾವಳಿ ಕಡಿಮೆಯಾದಷ್ಟೂ, ನಾಶವಾದಷ್ಟೂ ದೇಶದ ಅಖಂಡತೆಗೂ, ರಾಜ್ಯಗಳ ಗ್ರಾಮ ವಿಕಾಸಕ್ಕೂ ಅತ್ತ ಜೈ ಜಗತ್ತಿಗೂ ಶುಭಾರಂಭವಾದೀತು. ಈಗಿರುವಂತೆಯೇ 'ಜಾಗತೀಕರಣ' ಮಾಹಿತಿತಂತ್ರ ಮಹಾsಪಾಯ.

ಶಠಕೋಪನ್ = ಸಂಸಾರಾssಸಕ್ತಿಯನ್ನು ಹದ್ದುಮೀರಿ ಬೆಳೆಸುವ ಒಂದು ಪ್ರದೂಷಕ ವಾಯುವನ್ನು "ಶಠವಾಯು" ಎನ್ನುತ್ತಾರೆ. ಹುಟ್ಟುವಾಗಲೇ ಅದರ ಆಕ್ರಮಣಕ್ಕೆ ಈ ಶಿಶು ಇಂಬಾಗಲಿಲ್ಲ. ದೇವರ ಒಲುಮೆಯಿಂದ ಶಠವಾಯುವಿಗೆ ಧಿಕ್ಕಾರಹೇಳಿಬಿಟ್ಟ! ಅಂತೆಯೇ ನಮ್ಮಂತೆ ಈ ಮಗು ಅಳಲಿಲ್ಲ. ಮೂವತ್ತೆರಡು ವರ್ಷಗಳೂ, ಆ "ಶಠ" ವಾಯುವಿನ ಅಭಾವ ಬಲದಿಂದಲೇ ಸ್ತನ್ಯವೂ ಬೇಡ, ಹಾಲೂ ಬೇಡ, ಅನ್ನಾದಿಗಳಂತೂ ಅವಶ್ಯವೇ ಇಲ್ಲ. ಇಲ್ಲಿದ್ದೂ ಇಲ್ಲಿನ ದೋಷವರ್ಧಕ ವಾತಾವರಣ ಈ ಶರಣರ ಮೈ ಮೇಲೆ ಏನೂ ಪ್ರತಿಕ್ರಿಯೆ ತೋರಲಿಲ್ಲ. ಈ ಒಂದು, "ನಿಸರ್ಗ ಸಹಜ ಜೀವನ"ದ ಬಗೆಗೆ ಜರ್ಮನಿಯ ಡಾ. ಎಹರೆಟ್ ಸಹ ತನ್ನ ಸ್ವಂತ ಅನುಭವವನ್ನು ಪ್ರಾಯೋಗಿಕವಾಗಿ ಪಡೆದು ಹೇಳಿದ್ದಾನೆ. ಈ ಶಠಕೋಪರಿಗೆ ಅತ, ಹತ್ತಿರ ಬಂದಿರುವ ಒಂದು ಭಕ್ತ ಶರಣ ಜೀವ! ವಿಶ್ವದಲ್ಲಿ ಈಗಲೂ ಇಂತಹವರಿಲ್ಲದಿಲ್ಲ. ದೇವರಿಲ್ಲವೆಂದರೂ, ಯಾರಿಗೇನೂ ನಷ್ಟವಿಲ್ಲ. **"ಸಂತ ಶರಣ ವಿಜ್ಞಾನಿಗಳು ಸರ್ವ ಸಂಮತರಾಗಿದ್ದೇ ಇರುತ್ತಾರೆ. ಇದೇ ಒಂದು ಅಹೋಭಾಗ್ಯ!"**

ಯಥಾರ್ಥವಾದ ವಿಚಾರಗಳೇ, ಕಂಡಾಡುವ ಇಂತಹವರಿಂದ ಬಾಯ್ ಮೂಲಕ ಹೊರಡುವುದು. ಶೊಲ್ = ಹೇಳಿಕೆಯಾಗಿ, ಮಧುರಕವಿಗಳಿಂದ ಪ್ರಾಕಾಶಿಸಲ್ಪಟ್ಟ, ೧೨೦೦ ವರ್ಷಗಳಲ್ಲಿ ನಾಥಮುನಿಗಳಿಂದ ಮತ್ತೆ ಯೋಗದೃಷ್ಟವಾದ, ಕಟ್ಟು = ಶಬ್ದ, ಅರ್ಥ, ಶೈಲಿ ಮುಂತಾದ ಕಾವ್ಯಗುಣಗಳಿಂದ, ಎಳಿಲ್ = ರಮಣೀಯವಾದ, ಆಯಿರತ್ತು = ಸಾಮವೇದ ಸಹಸ್ರಶಾಖೆಗಳ ಸಾರವಾಗಿ, ಸಾವಿರ ಹಾಡುಗಳ ನಡುವೆ. ಇಪ್ಪತ್ತುಂ = ಈ ಹತ್ತು ಹಾಡುಗಳನ್ನು, ವಲ್ಲವರ್ = ಬಲ್ಲವರು, ಮುಂದೆ ನಿತ್ಯಸೂರಿಗಳ ಭೋಗವೂ ಸಹ, ಕಟ್ಟು ಎಳಿಲ್ = ಭಗವದನುಭಾವೈಕ್ಯ ಸೌಂದರ್ಯವುಳ್ಳ, ವಾನವರ್ "ಸಃ ಸ್ವರಾಟ್ ಭವತಿ" ಕರ್ಮಪರತಂತ್ರರಲ್ಲದ ಶ್ರೀ ನಿತ್ಯಸೂರಿಗಳ, ಪೋಹಮ್ = ನಿರಾಬಾಧವಾದ ನಿತ್ಯಕೈಂಕರ್ಯವನ್ನು. ಜೀವನಾsನುಭ ರೂಪವಾಗಿ, ನಮ್ಮ ಇಲ್ಲಿನ ದಂತೆ, ಅಲ್ಪ ಅಸ್ಥಿರವಲ್ಲದೆ, ಅನಂತ ಕಾಯಕಾsನುಭವಿಗಳಾಗಿ ಬಿಡುವರು, ಮತ್ತಿಲ್ಲಿಗೆ ಗುಲಾಮರಾಗಿ ಮರಳರು. ಬಂದರೂ ಅತಿಮಾನಸರಾಗಿ, ರಾಗದ್ವೇಷಾದಿಗಳ ಸುಳಿವೇ ಇಲ್ಲದ, ನಿಜ ಶರಣರಾಗಿ ಜಗತ್ತಿನ ಸರ್ವಸೇವಾ ಪರಿಶುದ್ಧವಿನೀತರಾಗಿ ಆದರ್ಶ ಸ್ವತಂತ್ರ ಪ್ರಜೆಗಳಾಗಿ, ಬರುತ್ತಾರೆ. ಯೋಗಿ ಅರವಿಂದರ ಸಾಕ್ಷಾತ್‌ಕಾರವೂ ಇದೇ ಆಗಿದೆ. Supramentel Stage ಅಂಥವರೇ ನಿಜವಾದ ವ್ಯಕ್ತಿ ಸ್ವಾತಂತ್ರ್ಯ, ರಾಜ್ಯ ಸ್ವಾತಂತ್ರ್ಯ, ರಾಷ್ಟ್ರ ಸ್ವಾತಂತ್ರ್ಯ, ವಿಶ್ವ ಸ್ವಾತಂತ್ರ್ಯ, ಸಮಾನತೆ, ಬಂಧು ಭಾವಗಳನ್ನು ಇಲ್ಲೂ ನೆಲೆ ನಿಲ್ಲಿಸುವರು. ತಾನಲ್ಲದ ಉಳಿದ ಎಲ್ಲರಿಗೂ, ತಾನು "ಸಹಜ ಸರ್ವ ಸೇವಕ" ತಾನೊಬ್ಬನೇ **ಸ್ವಯಂ ಸರ್ವದಾಸ್ಯ ಸ್ವತಂತ್ರ!** ಉಳಿದವರೆಲ್ಲರೂ ತನಗೆ ದೇವರು. ಜಗತ್ತಿನ ಸೃಷ್ಟಿಯೆಲ್ಲವೂ

ಆತನ ಸೇವೋಪಕರಣ. ಒಂದು ಕಡೆ, ಈಶ, ಜೀವ, ಜಡ ಎಂದಾದರೆ, ನಾನೋರ್ವನೇ ಒಂದು ಕಡೆ, ಎರಡೇ ಹೊರತು ಮೂರಿಲ್ಲ. "ಅತ್ಯೆತಮ್"! ಎಂತಹ ಸರ್ವ ಸಮನ್ವಯ ಸೂತ್ರ ಯುಗ ಸಂತರೂ, ಸಮಾಜ ವಿಜ್ಞಾನಿಗಳೂ ಆದ, ವಿನೋಬಾರಚಿತ ಸೂತ್ರ! ಎಲ್ಲಾ ಈ ಶಠಕೋಪ ಕೃಪಾಪ್ರವಾಹ!

ಈ ಪಾಶುರದ ನಾಲ್ಕು ಪಾದಗಳಲ್ಲಿ "ಕಟ್ಟು ಎಳಿಲ್" ಬಂದಿರುವುದು, ಸಾಕಲ್ಯ, ಸಮಗ್ರತೆ, ತಿಮ್ಮಪ್ಪನ ಸೌಶೀಲ್ಯದಲ್ಲೂ ಇವುಗಳೇ. ತಿರುಮಲೆಗೂ, ಇವುಗಳೇ! ಶರಣರ ಹುಟ್ಟೂರಿಗೂ, ಶರಣರಿಗೂ, ಅವರ ದಿವ್ಯ ವಾಙ್ಮಯಗಳಿಗೂ, ಈ ದಶಕಕ್ಕೂ ಈ ಉಭಯ ಪೌಷ್ಕಳ್ಯ ಇಲ್ಲಿನ ರಹಸ್ಯ! ಆ ವೈಕುಂಠ ಭೋಗಸ್ಥಾನ. ಇಲ್ಲಿನ ದಿವ್ಯದೇಶ ಆಶ್ರಯಸ್ಥಾನ, ತೋಪು, ಕ್ಷೇತ್ರ, ಕ್ಷೇತ್ರಗಾಯಕ, ಕ್ಷೇತ್ರಪತಿ ಹಾಡಿದ ಪ್ರಬಂಧ, ತದ್ಜ್ಞರು, ಎಷ್ಟೊಂದು ಸಮಗ್ರ, ಸರ್ವಸ್ಪರ್ಶಿ! ಯಾವುದು ಯಾರಿಗೆ ಬೇಡ? ನಿತ್ಯ ನಿರವದ್ಯಸೇವಾಭಾಗ್ಯ!

ತಮಿಳ್ ತಿರಳ್ ೬-೯-೫

ವಿಣ್ ಮೀದಿರುಪ್ಪಾಯ್ ಮಲೈಮೇಲ್ ನಿರ್ಪ್ಪಾಯ್ ಕಡಲ್ ಶೇರ್ಪ್ಪಾಯ್
ಮಣ್ ಮೀದುಳಲ್ವಾಯ್ ಇವತ್ತುಳ್ ಎಜ್ಗುಮ್ ಮರೈನ್ದುರೈವಾಯ್
ಎನ್ ಮೀದಿಯನ್ನ ಪುರವಣ್ಣತ್ತಾಯ್ ಎನದಾವಿ
ಉನ್ ಮೀದಾಡಿ ಯುರುಕ್ಕಾಟ್ಟಾದೇ ಯೊಳಿಪ್ಪಾಯೋ

ಕನ್ನಡ ನೆರಳ್

ಆ ಬಾನ್‌ಮೇಲ್ ಇರುವಿ! ಮಲೆಮೇಲ್ ನಿಲ್ಲುವಿ! ಕಡಲ್ ಸೇರುವೆ ನೀ
ಈ ಭೂಮಿಯ ಮೇಲ್ ಅಲೆಯುವಿ! ಇವುಗಳೊಳೆಲ್ಲೂ ಮರೆಸಿರುವಿ|
ಅಳೆಯಲ್ಕೆಣ್ ಮೀರ್ ತೆರ ಬಿಡದೇ ಹೊರ ಅಂಡಾಂಡದೊಳ್ ಇರುವಿ, ಎನ್‌ಜೀವದೊಳೂ
ಒಳಗೂ ಹೊರಗೂ ಆಟವನಾಡಿ, ರೂಪವ ತೋರದೆ ಮರೆಸಿಟ್ಟೆಹೆಯಾ! ||

ಏಕಿಷ್ಟು ಪರದಾಟ? ಎನ್ನುವಿಯಾ! ತಿಮ್ಮಪ್ಪಾ ನೀನು ಸರ್ವತ್ರ ಸನ್ನಿಧಾನ ಮಾಡಿ ನನ್ನಿದೋ ಹೃದಯದಲ್ಲೂ ಸ್ಪಷ್ಟವಾಗಿ ಪ್ರಕಾಶಿಸುತ್ತಿದ್ದೀಯೆ. ಈ ಹೊರಗಣ್ಣಿಗೂ ತೋರದಿದ್ದರೆ ಸಶರೀರನಾದ ನಾನು ಪರದಾಡದಿರಲು ಹೇಗೆ ಸಾಧ್ಯ? ದೇಹಧಾರಿಗಳಿಗೆ ದೇವರೂ ದೇಹವಾಂತೇ ದರ್ಶನ ನೀಡಿದರೀಗ ಉಲ್ಲಾಸ! ಮೂವತ್ತೆರಡು ವರ್ಷಕಾಲವೂ ಈ ನಮ್ಮಾಳ್ವಾರರಿಗೆ ತಮ್ಮೂರಿನ ಹುಣಸೇ ಮರದ ಪೊಟರೆಯೇ ತಾನೇ ಆಸರೆ! ಬರಿ ಮಾನಸ ಸಾಕ್ಷಾತ್ಕಾರ ಇವರಿಗೆ ಸಾಲದಾಗಿ ಬರುವ ಅನುಭವ ಇಲ್ಲಿ ಉಮ್ಮಳಿಸಿರುವುದು ಗಮನಾರ್ಹ.

ವಿಣ್‌ಮೀದು = ಅತ್ಯಣ ಪರಮಾಕಾಶದಲ್ಲಿ. ಇರುಪ್ಪಾಯ್ = ಕುಳಿತಿರುವಿ. ಸದಾ ದರ್ಶನ ಮಾಡುವಂತಹ ಮನಃ ಪಾಕದವರಿಗಾಗಿ ದರ್ಶನ ನೀಡುತ್ತಲೇ ಇರುವ ಆ ವೈಕುಂಠವಾಸಿಯದೇ ರೂಪು ಇವರಿಗೆ ಮೊಟ್ಟಮೊದಲು ತೋರಿಕೊಳ್ಳುತ್ತದೆ. ಅಮೇಲೆ, ಮಲೈಮೇಲ್ = ಈ ತಿರುಮಲೆ ಮೇಲೆ. ನಿರ್‌ಪ್ಪಾಯ್ = ಮುಕ್ತ ನಿತ್ಯಸೂರಿ, ಬದ್ಧ ಮುಮುಕ್ಷು ಚೇತನರಿಗಾಗಿ ನಿಂತಿದ್ದೀಯೆ. ಉದಾಸೀನರಾಗಿರುವವರಿಗೂ ಅಭಿರುಚಿ ಹುಟ್ಟಲೆಂಬುದೇ ಅರ್ಚಾವತಾರದ ಅಂತರಂಗ. ಕಡಲ್‌ಶೇರ್ಪ್ಪಾಯ್ = ಹಾಲ್ಗಡಲಿನಲ್ಲಿ ಮಲಗಿ ಸೇರಿದ್ದೀಯೆ. ಸುಖಾಸೀನನಾಗಿ ಕುಳಿತಿರುವ ಠೀವಿಗೆ ವೈಕುಂಠ! ನಿಂತ ನಿಲುವಿಗೆ ತಿರುಮಲೆ, ಪವಡಿರುವ ಚೆಲುವಿಗೆ ಕ್ಷೀರಾರ್ಣವದ ವ್ಯೂಹಸ್ಥಾನ. ಬ್ರಹ್ಮಾದಿಸುರರಿಗೂ, ಸನಕಾದಿಯೋಗಿಗಳಿಗೂ ಗಮ್ಯ, ನಮ್ಮಂತಹವರಿಗಾಗಿ, ಮಣ್‌ಮೀದು = ಈ ದೃಶ್ಯ ಭೂಮಿಯಲ್ಲಿ ಒಂದೊಂದು ಯುಗದಲ್ಲಿ ರಾಮಕೃಷ್ಣಾದಿ ವಿಭವಾವತಾರ ತಾಳಿ ಅಲೆದಾಡುವೆ. ಉಳಲ್ ವಾಯ್! = ನಿನ್ನ ವೈಭವ ತಿಳಿಯದ ಜನರಿಂದ ಬಲು ಪಾಡುಪಡುವಿ. ಕೃಷ್ಣಾ! ಸ್ವಂತ ತಾಯಿಯಂತೆಯೇ ಬೆಳೆಸಿದ ಯಶೋದೆಯೂ ನಿನ್ನನ್ನು ಹಗ್ಗದಿಂದ ಬಿಗಿದಳು! ಪ್ರತಿಕೂಲನಾಗಿದ್ದ ಕಾಳಿಂಗನೂ ತನ್ನ ಸರ್ಪಶರೀರದಿಂದ ಮಡುವಿನೊಳಗೆ ಅದೂ ನೀನು ನೀರೊಳಗೆ ಮುಳುಗಿರುವಾಗ! ಹೊರಗಿನವರಿಗೆಷ್ಟು ಭಯವಾಯಿತು! ಜಗತ್ತಿನಲ್ಲಿ "ಚೇವೇ ಇದೆಯೆಂದಲ್ಲ; ಬೆಲ್ಲವೂ ಇದೆ".

ಕಣ್ಣಿಗೆ ಕಂಡರೆ ತಾನೇ ಈ ಸಂಸಾರಿಗಳು ನನ್ನ ಮೇಲೆ, ತಿಳಿಯದೆ ಕೋಪಿಸಿ ಕೊಳ್ಳುವುದು. ತಿರಸ್ಕರಿಸುವುದು ಎಂದು ಹೊರನೋಟಕ್ಕೆ ತೋರಿಕೊಳ್ಳದೆ. ಇವತ್ತುಳ್ = ಈಗ ಹೇಳಿದ, ಹೇಳಿಲ್ಲದ ಸಮಸ್ತಚೇತನಾಚೇತನರಲ್ಲೂ, ಮರೈನ್ದು = ಅಂತರ್‌ಯಾಮಿಯಾಗಿ, ಉರೈವಾಯ್ = ಮರೆಸಿಕೊಂಡು, ನಿತ್ಯವಾಸಿಯಾಗಿರುತ್ತಿ. ಹಾಗಿಲ್ಲದಿದ್ದರೆ, ಅವರ ಮತ್ತು ಅವುಗಳ ಸ್ಥಿತಿ ಗತಿಗಳೇ ನಡೆಯುತ್ತಿರಲಿಲ್ಲ. ನಿಯಂತ್ರಣಗೈದು, ಸರ್ವತ್ರ ಅವವುಗಳ ಅಂತರತಮ ಪರಮಾತ್ಮನಾಗಿ ಪ್ರೇರಣಾದಾತೃ ನೀನೇ. ಅನುಕೂಲರಾಗಿ ಸಮಯಕೂಡಿದಾಗ ಅವರ ನೆನಹಿಗೆ

ಸ್ವಾಗತ ನೀಡುತ್ತಿರುವಿ. ಸ್ವರೂಪಾಂತರ್ಯಾಮಿತ್ವ ಮತ್ತು ದಿವ್ಯ ಮಂಗಳ ವಿಗ್ರಹಾಂತರ್ಯಾಮಿತ್ವ ಎರಡೂ ವಿಧದಲ್ಲಿ ಹಾರ್ದಪುರುಷನಾಗಿದ್ದೀಯೆ, ಶಿಶುಪಾಲ ಅಷ್ಟೊಂದು ನಿಂದಿಸಿದರೂ, ನೀನಿಲ್ಲವೆಂದೇ ಕೆಲವಾರು ವಿಚಾರ ಪರರೆಂದು ಕೊಳ್ಳುವವರ ಹೃದಯವನ್ನೂ ನೀನು ಬಿಡಲೊಲ್ಲೆ.

ಎಣ್ಮೀದು ಇಯನ್ನ = ಎಣಿಕೆಗೆ ಮೀರಿ, ಇದ್ದೇ ಇರುವ, ಪುರಂ ಲಣ್ಡತ್ತು = ಹೊರಗಿನ ಈ ಅಖಿಲಾಂಡ ಕೋಟಿ ಬ್ರಹ್ಮಾಂಡಗಳಲ್ಲಿ. ಅಯ್ = ಅವುಗಳೆಲ್ಲವನ್ನೂ ನಿನ್ನ ಶರೀರವನ್ನಾಗಿಸಿಕೊಂಡೇ, ಅವುಗಳೆಲ್ಲಕ್ಕೂ ಶರೀರಿಯಾಗಿರುವವನೇ! ಇವುಗಳೆಲ್ಲದರ ಬಗೆಗೆ, ನೀನಿಟ್ಟಿರುವ ಪ್ರೀತಿವಾತ್ಸಲ್ಯಗಳಿಗಿಂತಲೂ ವಿಶೇಷವಾಗಿ, ಎನದು ಅವಿ = ನನ್ನೀ ಪ್ರಾಣಾಶ್ರಯವಾದ, ಶರೀರಕ್ಕೂ ಒಳಗಿರುವ ಜೀವಾತ್ಮನಲ್ಲೂ, ಉಳ್ಮೀದು = ಒಳ ಭಾಗದಲ್ಲಿ "ಅನ್ತರ್ ಬಹಿಶ್ಚ" ನೀರಿನ ಕಣಕಣದಲ್ಲೂ, ಬ್ರಹ್ಮಾಂಡದೊಳಗೆ ವಿಶಾಲವಾಗಿ, ಕೈಬೀಸಿ ಕಾಲ್ಬೀಸಿ ಇರುವ ಅಚಿಂತ್ಯ, ತರ್ಕಾತೀತನೇ! ಅಡಿ = ಲೀಲೆಯಾಡುತ್ತಾ, ಉರು = ನಿನ್ನ ಆ ದಿವ್ಯ ಮೂಲ ರೂಪ ತೋರದೆ, ಕಾಟ್ಟಾದೇ = ನನ್ನೀ ಹೊರ ಇಂದ್ರಿಯಾದಿಗಳಿಗೆ ಗೋಚರವಾಗದೆ, ಒಳಿಪ್ಪಾಯೋ = ಅವಿತು ಮರೆಸಿಕೊಂಡಿರುವಿಯಲ್ಲಾ! ಇದು ಸರಿಯೇ? ಕೇವಲ ನಿನ್ನೀ ಕಲ್ಯಾಣಗುಣ ಧ್ಯಾನಿಗಳಿಗಾದರೆ ನಿರಾಕಾರವೋ, ಜಗದಾಽಽಕಾರವೋ ಅಷ್ಟೇ ಸಾಕು. ನನ್ನಂಥವರನ್ನು ಅವರು, ವಿಮರ್ಶಿಸಿಕೊಳ್ಳಲಿ. ನಿನ್ನ ಸರ್ವಾತೀತ ಸರ್ವವಿಲಕ್ಷಣ ಅಪ್ರಾಕೃತ ದಿವ್ಯಮೂರ್ತಿಯೂ ನೀನಾಗಿರುವಾಗ ಆ ಮೂಲ ಭಂಡಾರವನ್ನು ನಾನು ಲೂಟಿ ಮಾಡುವವನಯ್ಯಾ. ಅವರು ಗುಣ ಹಾಗೂ ವಿಶ್ವಾಽಽಕಾರಗಳಲ್ಲೇ ನಿನ್ನನ್ನು ಕಾಣುವುದು ತಪ್ಪಲ್ಲ. ಆದರೆ ಈ ದಾಸನಿಗೆ ನಿನ್ನ ಪರಿಪೂರ್ಣ ಕೃಪೆಯಿರಲಾಗಿ, ಪರಿಪೂರ್ಣದರ್ಶನ, ಇಲ್ಲೇ ಈಗಲೇ ಈ ಶರೀರ ಇಂದ್ರಿಯಾದಿಗಳಿಂದಲೇ, ಆ ಕೊಟ್ಟ ಕೊನೆಯ, ಮೊಟ್ಟ ಮೊದಲಿನ ಅಸಾಧಾರಣ ರೂಪವನ್ನು ನೋಡಲು ಹಂಬಲವಯ್ಯಾ! ಅದು ಕಾಣದಿದ್ದರೆ, ಇದ್ದರೂ ಇಲ್ಲದಂತಾಗುವ "ಸಾವು" ಬಂದಂತಾಗುತ್ತದೆಯಪ್ಪಾ! ಈ ಅತ್ಯುತ್ಕಟ ದರ್ಶನೇಚ್ಛೆ ಈ ಶರಣರದು!

"ಯತ್ ತೇ ರೂಪಂ ಕಲ್ಯಾಣ ತಮಂ ತತ್ ತೇ ಪಶ್ಯಾಮಿ" ಎಂಬ ಈಶೋಪನಿಷತ್ತಿನ ಆ ಋಷಿಯಂತೆ, ಅತ್ಯನ್ತಿಕ ಅಗಾಧ ದೃಷ್ಟಿ, ಮಹಾಪೇರಾಶೆ! ಶರಣರದು. ಖಿಲ ಋಗ್ವೇದದ ಜಿತಂತಾಮಂತ್ರದಲ್ಲೂ,

"ನ ತೇ ರೂಪಂ ನ ಚಾಕಾರಃ ನಾಯುಧಾನಿ ನ ಚಾಸ್ಪದಂ ತಥಾ ಪಿ ಪುರುಷಾಕಾರಃ ಭಕ್ತಾನಾಂ ತ್ವಂ ಪ್ರಕಾಶಸೇ"

ಗೀತೆಯಲ್ಲೂ "ಯೇ ಯಥಾಮಾಂ ಪ್ರಪದ್ಯನ್ತೇ" ಹೇಗೇಗೆ ಶರಣುಗೈದು ಬಯಸುತ್ತಾರೋ, ಎಲ್ಲವನ್ನೂ ಸತ್ಯವಾಗಿಯೇ ಉಳ್ಳ ನೀನು ನಮ್ಮಂತಹ ಆಸೆ ಪಡುವವರೆಲ್ಲರನ್ನೂ ತಣಿಸಪ್ಪಾ! ತೃಪ್ತಿಯಿಂದಿರುವವರಿರಲಿ! ನಾನು ಅವರನ್ನು ಆಕ್ಷೇಪಿಸುವುದಿಲ್ಲ. ನನಗಂತೂ ಏನು ಬೇಕೆಂಬುದನ್ನು ಬಿನ್ನೈಸಿದ್ದೇನೆ. ನಿನ್ನ ಚಿತ್ತ! "ಸತ್ಯಧರ್ಮಾಯ ದೃಷ್ಟಯೇ" ಈ ಆಕಾಂಕ್ಷೆ ಅಸತ್ಯ ವಸ್ತುವಿನದಲ್ಲ. "ಪರಮೇಷ್ಠಿ, ಪುಮಾನ್, ವಿಶ್ವ, ನಿವೃತ್ತಿ, ಸರ್ವ" ಎಂಬ ಅತ್ತಣ ಪಾಂಚದೈವಿಕ ಶ್ರೀ ಮೂರ್ತಿ ಸತ್ಯ. ಅದರ ಧರ್ಮ, ಎಂದರೆ ಆದಿವ್ಯ ರೂಪ. ಅದರ ದೃಷ್ಟಿ, ಎಂದರೆ ದರ್ಶನಾಽಽಕಾಂಕ್ಷೆ.

ತಮಿಳ್ ತಿರಳ್ ೬-೧೦-೧

ಉಲಹಮುಂಡ ಪೆರುವಾಯಾ ಉಲಪ್ಪಿಲ್ ಕೀರ್ತಿಯಮ್ಮಾನೇ
ನಿಲವುಮ್ ಶುಡರ್ ಶೂಳೊಳಿ ಮೂರ್ತಿ ನೆಡಿಯಾಯ್ ಅಡಿಯೇನ್ ಆರ್ ಉಯಿರೇ
ತಿಲದ ಮುಲಹುಕ್ಕಾಯ್ ನಿನ್ನ ತಿರುವೇಜ್ಗಡತ್ತೆಮ್ಬರುಮಾನೇ
ಕುಲತೊಲ್ ಅಡಿಯೇನ್ ಉನಪಾದಂ ಕೂಡುಮಾರು ಕೂರಾಯೇ

ಕನ್ನಡ ನೆರಳ್

ಓ ಲೋಕವನುಂಡಾ ಹಿರಿಬಾಯಾ! ಕೊನೆಯಿಲ್ಲದ ಕೀರುತಿರಾಯಾ
ನೆಲೆನಿಲ್ ಸೊಡರ್‌ಸೂಳ್ ಮೂರುತಿಯೇ! ಹಿರಿಯಾ! ದಾಸನ ತುಂಬುಸಿರೇ!
ಓ ಲೋಕಕೆ ತಿಲಕವೆ ಆಗಿ ನಿಂದಿಹ ಸಿರಿವೇಂಕಟದೆನ್ ಪ್ರಭುವೇ!
ಕುಲವಾಗಿಹ ಪಳೆಯಾಳಾಂ ನಿನ್ ಪಾದವ ಕೂಡುವ ಬಗೆ ಹೇಳಾ!

ಹಿಂದಿನ ದಶಕದಲ್ಲಿ, ತಿರುಮಾಲ್ ಎಂದರೆ ರಮಾರಮಣನಾಗಿದ್ದೂ ಇತ್ತ ತಮಗೆ ಬಾಹ್ಯ ಸಂಶ್ಲೇಷವನ್ನೂ ಪರಿಪೂರ್ಣವಾಗಿ ನೀಡದೆ ಅತ್ತ ವೈಕುಂಠಕ್ಕೂ ಕರೆಸಿಕೊಳ್ಳದೆ ಇರುವನಲ್ಲಾ! ಎಂದು ಮಹಾಽರ್ತನಾದದಿಂದ, ವಾರಾಯ್, ನಡವಾಯೇ, ಇನ್ನಮ್ ತಳರ್‌ವೇನೋ, ಒಳಿಪ್ಪಾಯೋ, ಮೆಳುಹಾಯ್ ಉಲಹಿಲ್ ತಿರಿವೇನೋ, ಅರುಳಾಯೇ, ಇನ್ನಮ್ ಕೆಡುಪ್ಪಾಯೋ ಕೂವಿಕ್ಕೊಳ್ಳುಮ್ ಕಾಲಂ ಇನ್ನಮ್ ಕುರುಹಾದೋ! ಎಂದೆಲ್ಲಾ ಕೂಗಾಡಿದರು!

ಇನ್ನಾದರೂ ಆ ಮೌಲಿಕ ದಿವ್ಯ ಮೂರ್ತಿಯ ಸಾಕ್ಷಾತ್ಕಾರ ನೀಡಲು ಇದೇ ತಿಮ್ಮಪ್ಪನ ಪಾದಾರವಿಂದಗಳಲ್ಲಿ, ಈ ಆರ್ತ ಪ್ರಪನ್ನಾಗ್ರೇಸರರು, **"ಪರಿಪೂರ್ಣಶರಣಾಗತಿ"** ಗೈಯ್ಯುವುದೇ, ಈ 'ಉಲಹಮುಂಡ ಪೆರುವಾಯಾ' ದಶಕ! ಶ್ರೀನಿವಾಸನ ನಿರುಪಮವಾದ ವಾತ್ಸಲ್ಯ ಸೌಲಭ್ಯ ಸೌಶೀಲ್ಯಾದಿ ಗುಣಗಳನ್ನು ೯ ಪಾಶುರಗಳಿಂದಲೂ ಹೇಳಿ, ೧೦ನೆಯದರಲ್ಲಿ **"ಅಲರ್‌ಮೇಲ್ ಮಂಗೈ"** ಪದ್ಮಾssಲಯಳಾದ ಶ್ರೀದೇವಿಯನ್ನು, ತಮಗೆ ಶಿಫಾರಸ್ಸು ಮಾಡುವಂತೆ "ಪುರುಷಕಾರ"ವಾಗಿ ಮುಂದಿಟ್ಟು ಸಾಂಗೋಪಾಂಗವಾಗಿಯೇ **"ಪರಿಪೂರ್ಣ ಶರಣಾಗತಿ"** ಎಸಗುತ್ತಾರೆ. ಇದು ನಮ್ಮಾಳ್ವಾರರ ಪ್ರಪತ್ತ್ಯನುಷ್ಠಾನ ದಶಕ.

ಹಿರಿಯರು ಈ ದಶಕವನ್ನು "ಪ್ರಾಪಕಪ್ರಧಾನ" ಎನ್ನುತ್ತಾರೆ. ಅಂದರೆ ಸಿದ್ಧೋಪಾಯನಾದ ಪದ್ಮಾವತೀ ಹೃದಯವಲ್ಲಭನೇ, ಶರಣಾಗತಿಗೆ ಫಲರೂಪವಾದ ದಿವ್ಯದಂಪತೀ ಕೈಂಕರ್ಯವನ್ನೂ ತರುವವನು. ಸಾಧ್ಯ ಸಾಧನಗಳಲ್ಲಿ ಭೇದವಿಲ್ಲ. ಅಯಾಯಾ ಪರ ವ್ಯೂಹ ವಿಭವಗಳಲ್ಲಿ ನಮ್ಮಂತಹವರಿಗೆ ಪ್ರಪತ್ತಿ ಅಸಾಧ್ಯ! ಆದುದರಿಂದ ಇಂದಿನ ಮುಂದಿನ ಭವಿಗಳು ನಷ್ಟವಾಗಬಾರದೆಂದು ತಿಮ್ಮಪ್ಪನಾಗಿ ಅದೂ ಮಹಾಮಾತೆಯೊಡನೆ. ಈ ತಿರುಮಲೆಯಲ್ಲಿರುವುದು. ಜನಗಳಿಗೆ ಅಭಿರುಚಿ ಹುಟ್ಟಿ ಬೆಳೆದು ದೃಢವಾಗಬೇಕಾದರೆ ಒಂದು ಆದರ್ಶಮೂರ್ತಿ ಬೇಕೇ ಬೇಕು. ಆ ಪರಮಲಕ್ಷ್ಯವಾದ ವಸ್ತು, ಗುಣ ಪೂರ್ಣವಾಗಿರಬೇಕು. ಪವಿತ್ರಾಣಾಂ ಪವಿತ್ರವೂ ಮಂಗಳಾನಾಂಚ ಮಂಗಳವೂ ಆಗಿರಬೇಕಷ್ಟೆ! ಅವೆಲ್ಲಾ ಸರ್ವಲೋಕ ಶರಣ್ಯನಾದ ಈ ಸ್ವಾಮಿಯಲ್ಲಿವೆ. ಪುಷ್ಕಳವಾಗಿವೆ. ಆಳ್ವಾರ್ ಆದ ತಾವೂ ಬಹಳ ಹಸಿವಿನಿಂದಲೇ ಕೂಡಿದ್ದಾರೆ! ತಳ್ಳಿದರೂ, ತಿಮ್ಮಪ್ಪನ ಶ್ರೀಮಚ್ಚರಣಗಳನ್ನು ಬಿಟ್ಟು ಓಡಿಹೋಗುವ ಚಂಚಲರಲ್ಲ. ಮಹಾ ದೃಢಾಧ್ಯವಸಾಯಿಗಳು! ಮಹಾ ವಿಶ್ವಾಸಿಗಳಾದ ಶರಣರಿವರು!

ಇದಕ್ಕೆ ಹಿಂದೆಯೂ ಇದೇ ನಮ್ಮಾಳ್ವಾರ್, ಬಹಳಎಡೆಗಳಲ್ಲಿ, ಶ್ರೀಮನ್ನಾರಾಯಣ ಚರಣಾರವಿಂದ ಶರಣಾಗತಿಯನ್ನು ನಾನಾ ದಿವ್ಯ ದೇಶಗಳ ಅರ್ಚಾಮೂರ್ತಿಗಳಲ್ಲಿ ಎಸಗಿದ್ದಾರೆ. ಅಲ್ಲೆಲ್ಲಾ, ಒಟ್ಟು ವಿಶಿಷ್ಟ ಧರ್ಮಿ ಸ್ವರೂಪನಾದ ಸರ್ವೇಶ್ವರನಲ್ಲೇ, ಧರ್ಮ ಸ್ವರೂಪಿಣಿಯಾದ ಶ್ರೀದೇವಿಯೂ ಅಂತರ್ ಭೂತಳೆಂಬುದು ಗೃಹೀತ. ಆದರೆ ಇಲ್ಲಿನ ವಿಶೇಷವೆಂದರೆ,

"ಅಲರ್‌ಮೇಲ್ ಮಙ್ಗೈ ಉರೈ ಮಾರ್ಬಾ! ಅಲರ್ ಮೇಲಮ್ಮನ ಬಿಡದೆದೆಯಾ!"

ಅವಳನ್ನೂ ಈತ ಬಿಡದ, ಈಕೆಯೂ ಅತನನ್ನು ಬಿಡದಿರುವ, "ಶ್ರೀಮನ್" "ಶ್ರೀಮತೇ" ಉಭಯಧಾ ಗಾಢೋಪಗೂಢ ಸಂಬಂಧ! ಅನ್ಯೋನ್ಯಾssದ್ಯೆತನಿಷ್ಠೆ! ಕಠಶ್ರೌತ **"ದ್ವಯಮಂತ್ರ"**ದಂತೆಯೇ, ಈ ದ್ರಾವಿಡ ದ್ವಯಮಂತ್ರವೂ ಇವರ ಬಾಯಿಂದ ಹೊರಟು, ಇವರ ಬಾಯೂ "ತಿರುವಾಯ್" ಸಿರಿಬಾಯ್ ಆಯಿತು! ಪೂರಾ ತಿರುವಾಯ್ ಮೊಳಿಗೂ "ದೀರ್ಘಶರಣಾಗತಿ" ಎನ್ನುವುದರ ಗುಟ್ಟೂ ಇಲ್ಲಿ ಕಂಠರವೇಣ, ಶ್ರೀದೇವಿ ಉಲ್ಲಿಖಿತಳಾಗಿರುವುದರಿಂದ ಸ್ಪಷ್ಟವಾಗುವುದು.

ಈ ಮೊದಲಿನ ಹಾಡಿನಲ್ಲಿ "ಓ ತಿರುವೇಂಕಟೇಶ್ವರಾ" ನೀನು ಯಾರೊಬ್ಬರನ್ನೂ ಬಿಡದೆ ಅಖಿಲ ಜಗದ್ ರಕ್ಷಣಾರ್ಥವಾಗಿ ತಿರುಮಲೆಯಲ್ಲಿ ನಿತ್ಯ ನೆಲೆಯಾಂತಿರುವೆ. ಸರ್ವ ಚೇತನರಿಗೂ ಅನಾದಿ ಸ್ವತಸ್ಸಿದ್ಧವಾದ, ನಿನ್ನ ಕೈಂಕರ್ಯವೆಂಬ ಮಹಾ ಹಕ್ಕುದಾರಿ ಅಸ್ತಿಯಿದೆ. ಇದನ್ನು ಭದ್ರಪಡಿಸಲೆಂದೇ ಮುಂದೆ ಆಚಾರ್ಯರೂ, ವಂಶಪಾರಂಪರ್ಯವಾದ ಒಂದು ಮಹಾಸಂಸ್ಕಾರವನ್ನು ಅಖಿಂಡವಾಗಿ ಬೆಳೆದೇ ಬರುವಂತೆ ವ್ಯವಸ್ಥೆ ಗೈಯ್ಯುತ್ತಾರೆ. ಬೇರೆ ಬೇರೆ ವಸ್ತುಗಳ ಮೇಲೆ ಕರ್ತವ್ಯಕ್ಕಾಗಿ "ಸಿವಿಲ್ ರೈಟ್" ಇರುವವರೆಗೂ, ಈ ದೇವಾಲಯಗಳ ಬರಾಬರ್ದು ಪದ್ಧತಿ ರದ್ದಾಗಕೂಡದು. ಸೇವಾರ್ಹತೆಗೆ ತಕ್ಕ ವಾತಾವರಣ ಕಲ್ಪಿಸುವುದೂ, ಆಚಾರ್ಯ ಪುರುಷರ ಸರ್ವ ಸಂಮತ ಸಲಹೆಯಂತೆ ಸರಕಾರಗಳ, ವ್ಯವಸ್ಥಾಪಕರ ಜವಾಬುದಾರಿ. ಪಾರಮಾರ್ಥಿಕವೂ ಆದ, ಈ ಮಾರ್ಗ ನಿರ್ದೇಶನ ಈ ದಶಕದ, ವ್ಯಾವಹಾರಿಕ ಮಹಾಪ್ರಸಾದವೂ ಆಗುತ್ತದೆ. ಈ ನಿಟ್ಟಿನಿಂದಲೇ, ಸರ್ವ ಮಾನವರೂ ಶಿಕ್ಷಿತರಾಗಬೇಕಾಗಿದೆ. ಶಿಕ್ಷಣ ಕ್ರಮದಲ್ಲಿ ವಿಶ್ವದ ಸರ್ವಶರಣ ಸಾಹಿತ್ಯ, ಓತ ಪ್ರೋತವಾಗಲೇಬೇಕು. ಇದೇ ಯುಗಧರ್ಮ. ವಿಜ್ಞಾನದ ಕರೆಯೂ ಇದೇ! ತಂತಮ್ಮ ಸಹಜಕರ್ತವ್ಯದಿಂದಲೇ "ಹಕ್ಕು". ಇಲ್ಲದಿದ್ದರೆ ಇಲ್ಲ.

ನೀನೇ ಸರ್ವೋಪಾಯನಾಗಿದ್ದು ಸರ್ವರನ್ನೂ ರಕ್ಷಿಸಯ್ಯಾ. ಇದೇ ಈ ಮೊದಲ ಹಾಡಿನ ಸಂದರ್ಭ. ಸರ್ವರೂ, ಯಥಾರ್ಥ ಶರಣಾಗತಿ ಗೈಯ್ಯಲು, ನಿನ್ನಲ್ಲಿ "ಅನನ್ಯ ರಕ್ಷಕತ್ವ" ಪರಿಪೂರ್ಣವಾಗಿರಲಾಗಿ ಬೇರೆಲ್ಲಿಗೆ ನಾನು ಹೋಗಲಿ? ಮೊದಲ ಪಾಶುರದಲ್ಲೇ ನೇರಾ ದೇವರನ್ನು ಆರು ಸಂಬೋಧನೆಗಳಿಂದ, ತಮ್ಮ ಕಡೆಗೆ ಅಭಿಮುಖ್ಯಗೊಳಿಸುವ ಈ ಪ್ರತ್ಯಕ್ಷ ಶೈಲಿ ಅನ್ಯಾದೃಶ್ಯ! ಅಂತೆಯೇ,

"ಶ್ರೀಮನ್! ನಾರಾಯಣ! ತವ ಚರಣಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ!"

ಎಂದೇ ಶ್ರೀಭಾಷ್ಯಕಾರರೂ ಶರಣಾಗತಿ ಗದ್ಯದಲ್ಲಿ ಈ ಮುಖಾಮುಖಿ ಸ್ವಾರಸ್ಯವನ್ನು ಸ್ಫೋರಿಸಿದ್ದಾರೆ. ನಾವು ಯಾವ ಪ್ರದೇಶದಲ್ಲಿದ್ದರೂ, ತಿರುಪತಿ ತಿಮ್ಮಪ್ಪನ ಎದುರಿಗೇ ನಿಂತಿರುವಂತಹ "ಭಕ್ತಿಸಂವೇದನೆ, ಸಾನ್ನಿಧ್ಯಸ್ಫೃತಿ" ಈ ದಶಕ ಹೇಳಿದವರಿಗೂ, ಕೇಳಿದವರಿಗೂ ತಾಗಿಯೇ ಬಿಡುತ್ತದೆ. ಆಳ್ವಾರರ ಈ ಸಮಗ್ರ ಪ್ರಪತ್ತಿಯೇ, ಸರ್ವಭಾಷಾ ಮಹರ್ಷಿಗಳನ್ನೂ ಒಳಗೊಂಡು ಸರ್ವಾಚಾರ್ಯರಿಗೂ ಅವರ ಮೂಲಕ ಮಾನವ ಜಾತಿಗೆಲ್ಲಾ ತಾರಕ ಉತ್ತಾರಕ.

ಉಲಹಮ್ = ಒಂದೂ ಬಿಡದಂತೆ ಸರ್ವಲೋಕಗಳನ್ನೂ ಮಹಾಪ್ರಳಯ ಕಾಲದಲ್ಲಿ, ಎಲ್ಲಾ ಜಗತ್ತುಗಳ, ಎಲ್ಲ ಚೇತನ ಅಚೇತನಗಳ ಆ ಸೂಕ್ಷ್ಮಬೀಜಗಳನ್ನು ತನ್ನಲ್ಲಡಗಿಸಿಕೊಂಡ, ಸರ್ವಲೋಕಪಾಲಕನೇ! ಉಂಡ ಪೆರುವಾಯಾ! = ನಿನ್ನ ಭಕ್ಷಣವೂ ರಕ್ಷಣವೇ! ಬೇರೆಯವರ ರಕ್ಷಣೆಯೆಲ್ಲಾ ಭಕ್ಷಣೆಯೇ. ಇದೆಲ್ಲಾ ವೇದ ಉಪನಿಷದ್ ರಹಸ್ಯ. ದಾರ್ಶನಿಕವಾಗಿ ವ್ಯಾಸ ಮಹರ್ಷಿಗಳೂ "ಅತ್ತಾ ಚರಾಚರ ಗ್ರಹಣಾತ್" ಎಂದು ತಮ್ಮ ಬ್ರಹ್ಮ ಸೂತ್ರಗೈದರು. ಕೊನೆಗೆ ಪರಬ್ರಹ್ಮನೋರ್ವನಿಗೇ ಸರ್ವಲೋಕ ಸೃಷ್ಟಿ ಸ್ಥಿತಿ ಸಂಹಾರ ರೂಪವಾದ ವ್ಯಾಪಾರವೆಂಬುದನ್ನು "ಜಗದ್ ವ್ಯಾಪಾರವರ್ಜಂ" ಎಂದರು. ಈ "ಸರ್ವಶಬ್ದ" ಉಪನಿಷತ್ತುಗಳ ಒಂದು ಮಹಾ ನಿಧಿ. ಒಂದೊಂದು ಬ್ರಹ್ಮಾಂಡ, ಅದರೊಳಗಿನ, ವ್ಯಷ್ಟಿ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಬ್ರಹ್ಮ, ರುದ್ರಾದಿಗಳೂ ಅದಕ್ಕಿಂತಲೂ ಮುಖ್ಯವಾಗಿ, ವೈಕುಂಠದ ನಿತ್ಯಸೂರಿಗಳೂ ಮಾಡಬಲ್ಲರು. ಇವರೆಲ್ಲರೂ ಪರಬ್ರಹ್ಮನಲ್ಲಿ ಅಡಗುವವರೇ ಹೊರತು, ಸ್ವತಂತ್ರ ಸರ್ವಲೋಕ ವ್ಯವಸ್ಥಾಪಕರಲ್ಲ. ಇಲ್ಲಿಂದ ಮುಕ್ತರಾದವರಿಗೆ "ಪರಮಸಾಮ್ಯ" ಎಂದು ಇರುವುದು. ಈ ಸರ್ವಲೋಕವ್ಯಾಪಾರವೊಂದನ್ನು ಬಿಟ್ಟೇ. ಈ ಸೂಕ್ಷ್ಮ ಮೀಮಾಂಸೆ, ಆ ಸೂತ್ರದಿಂದ ಸಾಗಿರುವಂತೆಯೇ ಮತ್ತೊಂದು ಅಂಶವೆಂದರೆ "ಶ್ರಿಯಃ ಪತಿತ್ವ" ಪರಬ್ರಹ್ಮನಿಗೇ ಹೊರತು ಬೇರೆಯವರಿಗಿಲ್ಲ. ಇದನ್ನು ಈ ಸೂತ್ರಾರ್ಥವಾಗಿ, ರಹಸ್ಯ ಪ್ರಸ್ಥಾನದಲ್ಲಿ, ಶ್ರೀ ಭಾಷ್ಯಕಾರರು ಬಳಸಿಕೊಂಡಿದ್ದಾರೆ. "ಉಲಹಂ ಉಂಡ ಪೆರುವಾಯಾ" ಮತ್ತು "ಅಲರ್‌ಮೇಲ್ ಮಂಗೈ ಉರೈಮಾರ್ವಾ" ಈ ದಶಕದ ಅದ್ಯಂತ ಎರಡೂ, ಪದಗಳು ಇಲ್ಲಿ ಸರ್ವ ವಾಜ್ಮಯ ಸಮನ್ವಯಕಾರಿಗಳಿಗೆ ಬಲು ಒತ್ತಾಸೆ ನೀಡುವುವು.

ಸಕಲ ಜಗದ್ ವ್ಯಾಪಾರಿಯಾದ ಶ್ರಿಯಃ ಪತಿಯ ಬಾಯಲ್ಲಿ ಹೋದುದು ಹೊಟ್ಟೆಯಲ್ಲಿ ತಂಗಿ ಮತ್ತೆ ಸೃಷ್ಟಿಯಲ್ಲಿ ಹೊರ ಬರುತ್ತದೆ. ಉಲಪ್ಪು ಇಲ್ ಕೀರ್ತಿ ಅಮ್ಮಾನೇ = ಕೊನೆಯಿಲ್ಲದ ಸೌಶೀಲ್ಯ ಕಾರುಣ್ಯ ವಾತ್ಸಲ್ಯಾದಿ ಕಲ್ಯಾಣ ಗುಣಗಣ ಕೀರ್ತಿಯುಳ್ಳ ಸರ್ವಸ್ವಾಮಿನ್. ಗುಣ ಕೀರ್ತಿ ನಿರಾಕಾರ. ಅಷ್ಟೇ ಅಲ್ಲ. ನೀನು, ನಿಲವುಮ್ = ಬಹಳ, ಶುಡರ್ = ಪ್ರಕಾಶಿಸುವ, ಒಳಿ = ಕಾಂತಿಯಿಂದ ಲೋಕವನ್ನೆಲ್ಲಾ ಬೆಳಗಿಸುವ ಅಪ್ರಾಕೃತ, ಅಚಿಂತ್ಯ ದಿವ್ಯ ಅದ್ಭುತವಾದ ಲೋಕಾತೀತವಾದ ಮೂರ್ತಿಯನ್ನೊಳಗೊಂಡೂ, ಈ ಪ್ರಾಕೃತ ಸಜಾತೀಯನಾಗಿರುವಂತೆ "ಕಲ್ಲು ದೇವರು" ಇತ್ಯಾದಿ ನ್ಯಾಯವಾದ ಟೀಕೆಗಳಿಗೂ ಪಾತ್ರನಾಗಿ ಕಲ್ಲಿನಂತೆಯೇ ದೃಢತಮನೂ ನಿರ್ವಿಕಾರಿಯಾಗಿಯೂ! ನಿಂದಾ ಸ್ತುತಿ ಉಭಯಾತೀತನೂ ಆಗಿ, ಮೂರ್ತೀ = ಸರ್ವಮೌಲ್ಯ ಪೂರ್ತಿ! ಓ ಚಿನ್ಮಯ ಪರಂಜ್ಯೋತಿರ್ ಮೂರ್ತಿ! ಸಂಪೂರ್ಣ ಸಮಗ್ರ ಭಕ್ತ ಹೃದಯರಾದವರಿಗೆ, ದೇವರ ಮೂರ್ತಿ ನಿರ್ಜೀವ ಬಿಂಬ ಪ್ರತೀಕ ಮಾತ್ರವಲ್ಲ. ರಾಷ್ಟ್ರ ವಿನೀತನಾದ ಸತ್‌ಪ್ರಜೆಗೆ, ರಾಷ್ಟ್ರಧ್ವಜ, ಡಾಲರ್, ನೋಟು ಇತ್ಯಾದಿಗಳು ಕೇವಲ ಬಟ್ಟೆ ಕಾಗದಗಳಲ್ಲ. ಸಮಾನ ಮೌಲ್ಯ ಪರಿಪೂರ್ಣ. "ಪೂರ್ಣಮದಃ ಪೂರ್ಣಮಿದಮ್" ಅದುಪೂರ್ಣ ಇದು ಪೂರ್ಣ!

ಅಡಿಯೇನ್ = ದಾಸನ, ಆರ್ ಉಯಿರೇ = ತುಂಬುಸಿರೇ ಪ್ರಾಣಾನಾಂ ಪ್ರಾಣನಾದವನೇ, ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ, ಮೈಸೂರು ಅರಮನೆಗೆ ದಕ್ಷಿಣಕ್ಕೆ ಸೇರಿರುವ ಅಂಬೆಗಾಲು ಕೃಷ್ಣನ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ ಸಂದರ್ಭ. ಮೇಲುಕೋಟೆಯ ಆಗಮಿಕರು "ತೋಡಾಭಟ್ಟರು" ಎಂದೇ ಪ್ರಸಿದ್ಧರಾದವರು. ಆಗಮೋಕ್ತ ರೀತಿಯಲ್ಲಿ ಎಲ್ಲಾ ನಡೆಸಿಕೊಟ್ಟರು. ಭಟ್ಟರೂ, ರಾಜರೂ ಒಳ್ಳೆಯ ಸ್ನೇಹಪರರೂ ಆಗಿದ್ದರು. ಒಡೆಯರು "ಲೋ ಭಟ್ಟಾ! ನನ್ನಿಂದ ಹೊನ್ನಿನ ತೋಡಾ ತೊಡಿಸಿಕೊಂಡು, ಇಷ್ಟೆಲ್ಲಾ ಖರ್ಚು ಮಾಡಿಸಿ, ನಿರ್ಜೀವ ಬೊಂಬೆಯೊಂದನ್ನು - ಅದೇನೋ ಬಲು ಸುಂದರ ಕೂರಿಸಿ ಬಲು ಆದಾಯ ಮರ್ಯಾದೆ ಗಿಟ್ಟಿಸಿಕೊಂಡೆ! ನಿನ್ನ ಕೃಷ್ಣಮೂರ್ತಿಯಲ್ಲಿ ಪ್ರಾಣ ಸಂಚಲನ ಉಂಟೇನೋ?" ಎಂದು ಪ್ರಶ್ನಿಸಿಯೇ ಬಿಟ್ಟರು.

ಬಿಡಿಸಿದ ಹತ್ತಿಯ ತೆಳುವಾದ ಬತ್ತಿಯೊಂದನ್ನು, ಭಟ್ಟರು ಮೂರ್ತಿಯ ಮೂಗಿಗೆ ಕೆಳಭಾಗದಲ್ಲಿ ಹಿಡಿದು ತೋರಿಸುತ್ತಾರೆ. ಹತ್ತಿ ಹಿಂದಕ್ಕೂ ಮುಂದಕ್ಕೂ ಚಲಿಸುತ್ತದೆ. ತೆರೆ ಎಳೆದು, ಆ ನಿರ್ವಾಯು ಗರ್ಭಗೃಹದ ವಾತಾವರಣದಲ್ಲಿ, ತುಪ್ಪದ ದೀಪ ಹೇಗೆ ಅಳ್ಳಾಡದೇ "ನಿವಾತಸ್ಥ" ನಿಶ್ಚಲ ನಿಷ್ಕಂಪವಾಗಿರುತ್ತದೋ, ಹತ್ತಿಯ ನೀಳ್ಜಾಲವೂ ಆಗ ಚಲಿಸಲಿಲ್ಲ. ಮತ್ತೆ ತೆರೆ ತೆಗೆದು ಅದನ್ನೇ ಬಾಲ ನವನೀತ ಕೃಷ್ಣನ ನಾಸಿಕಾಗ್ರದಲ್ಲಿ ಹಿಡಿಯೋಣ, ಅತ್ತ ಇತ್ತ ಮೆಲ್ಲನೆ ಹಾರಾಡಿತು! ನಿಜ! "ನ ತಸ್ಯ ಪ್ರತಿಮಾ ಮೂರ್ತಿಃ" ಎಂಬ ವಾದ ಹಿಂದಿನಿಂದಲೂ ಉಂಟು. ಮೀಮಾಂಸಾಶಾಸ್ತ್ರಜ್ಞರೇ, ದೇವರ ಮೂರ್ತಿಯನ್ನು ಮಂತ್ರಮೂರ್ತಿಯಾಗಿಯೇ ಭಾವಿಸುತ್ತಾರೆ. "ಇನ್ಪ್" ಎಂದರೆ ಇ, ನ್, ದ್, ರ್, ಅ = ಇನ್‌ದ್ರ. ಇಸ್ಲಾಂ ಆರ್ಯ ಸಮಾಜ ಮುಂತಾದವೂ, ಪರಮಾತ್ಮನನ್ನು ಮೂರ್ತಿ ರೂಪೇಣ ಪೂಜಿಸುವುದಿಲ್ಲ. ಗಾಂಧೀಜಿ ಹೇಳಿದಂತೆ, ಬೇರೆ ತರಹದ ಏನಾದರೂ ಒಂದು, ಅಲ್ಲಾಹನಿಗೆ ಸರಿಮೌಲ್ಯದ ಪದಾರ್ಥಕ್ಕೆ ಅಷ್ಟೇ ಗೌರವ ನೀಡುತ್ತಾರೆ ಎಂದರು. ಅವರನ್ನೂ ಮೀರಿಸಿದ, ಶಬ್ದಾರ್ಥ ಕೋವಿದ ವಿನೋಬಾ ಅವರು "ನತಸ್ಯ" ವಿನಯ ವಿಶ್ವಾಸದಿಂದ ಬಗ್ಗಿದವನಿಗೆ (ಳಿ) ಪ್ರತಿಮಾ, ಭಗವನ್ ಮೂರ್ತಿ ರೂಪವೂ ಸತ್ಯ! ಎಂದರು!

ನೆಡಿಯಾಯ್ = ಪರಮೋರ್ಧ್ವನಿವಾಸಾ! ಉಲಹುಕ್ಕು ಅಯ್‌ನಿನ್ನ = ಈಗ ಅಂತಹ ಮೇಲ್ ದೂರದಲ್ಲಿದ್ದವನೇ, ಈ ದೃಶ್ಯಪ್ರಪಂಚಕ್ಕೆ ಇಳಿದು ಬಂದಿದ್ದಾನೆ. ತಿಲದಮಾಯ್ = ಹಣ್ಣಿಗೆ ತಿಲಕದಂತೆ ಸರಸಿಗೆ ತಾವರೆಯೇ ಚೆಂದ! ಆಗಸಕ್ಕೆ ಹುಣ್ಣಿಮೆ ಚಂದ್ರನೇ ಚೆಂದ, ಇತ್ಯಾದಿ ಉದ್ಗರಿಸಿದ ಮಹಾ ಶರಣೆ ಅಕ್ಕಮಹಾದೇವಿಯ ಬಾಯಲ್ಲೂ ಇದೇ ವಚನಾಮೃತ ಕೇಳಲು ಸಿಗುತ್ತದೆ. ತಿಮ್ಮಪ್ಪನಿಲ್ಲದಿದ್ದರೆ

ಈ ಜಗ, ನಿರಲಂಕಾರ. ಈಗ ಸಾಲಂಕಾರ, "ಅಲಂಕಾರಪ್ರಿಯೋ ವಿಷ್ಣುಃ", ತಿರುವೇಙ್ಗಡತ್ತು = ಅಂತಹ ಶ್ರೀ ವೇಂಕಟಾಚಲದಲ್ಲಿ ಸೌಂದರ್ಯಪ್ರಿಯರಾದ ಭಕ್ತರಸಿಕರಿಗೆ ರಸಪೋಷಣೆ ನೀಡುತ್ತಿದ್ದಾನೆ. ಎಮ್ = ಎಲ್ಲಾ ತೆರನ ಜೀವಿ ಪ್ರಾಣಿಗಳಿಗೂ, ಪೆರುಮಾನೇ = ಹಿರಿ ಹಿಗ್ಗು, ನೀಡುವವನೇ! ಅಡಿಯೇನ್ = ಅನಾದಿ ಕಾಲದಿಂದಲೂ ಶೇಷತ್ವ, ಪಾರತಂತ್ರ್ಯಗಳೆಂಬ ಐಸಿರಿಯುಳ್ಳ ಈ ಶರಣ ದಾಸನು, ಉನ = ನಿನ್ನ, ಪಾದಮ್ = ತಿರುವಡಿಯನ್ನು, ಕೂಡುಂ = ಆಶ್ರಯಿಸಿ ಸೇರುವ, ಆರು = ಬಗೆಯೇನೆಂಬುದನ್ನು, ಕೂರಾಯ್ = ನಿನ್ನ ಸುಂದರವಾದ ಬಾಯ್ ತೆರೆದು ಒಂದು ಮಾತಿನ ದಯೆ ತೋರಾ! ಪ್ರಳಯದಲ್ಲಿ ತ್ವರೆ ಪಟ್ಟವನು, ಈಗೇಕೆ ವಿಳಂಬ ಮಾಡುತ್ತೀ! ಈಗೇನು ಈ ಜನಗಳಿಗೆ, ಆ ಪ್ರಳಯಕ್ಕಿಂತ ಕಡಿಮೆ ಆಪತ್ತೇ! ಆ ಪ್ರಳಯಾರ್ಣವಕ್ಕಿಂತ ಭವಸಾಗರ ಚಿಕ್ಕದೇನು? ಕೇಳದೆಯೇ ಆಗ ರಕ್ಷಿಸಿದವ ಈಗ ಕೇಳಿಸಿಕೊಂಡೂ ರಕ್ಷಿಸದಿರಬಹುದೇ! ಹೀಗೆಲ್ಲಾ ಈ "**ಉಲಹಮ್ ಉಣ್ಡು ಪೆರು ವಾಯಾ**" ಚತುಷ್ಪದಗಳಿಗೆ ಪುಂಖಾನುಪುಂಖವಾಗಿ ಹೊರಹೊಮ್ಮುತ್ತಲೇ ಇರುವ ಧ್ವನಿ ಶಕ್ತಿ ಇದೆ. ಶಬ್ದ ಚಿಕ್ಕದಾದರೂ ಅರ್ಥಭಾವ ಅನಂತ!

ತಮಿಳ್ ತಿರಳ್ ೬-೧೦-೨

கூராய் நீராய் நிலனாஹி கொடுவல்லசுரர் குலமெல்லாமம்
சீரா வெரியுமம் திருநேமி வலவா! தெய்வக்கோமானே
சேராச் சுனைத்தாமரை சென்றீ மலருமம் திருவேங்கடத்தானே
ஆராவன்பில் அடியேன் உன்னடி சேர் வண்ணமருளாயே

ಕನ್ನಡ ನೆರಳ್

ಹೋಳಾಗಿಸಿ ಧೂಳಾಗಿಸಿ ನೆಲಸಮವಾಗಿಸುತಾ ಕ್ರೂರಬಲಾSಸುರ ಕುಲಮೆಲ್ಲವನುಂ
ಸೀರಾನುತ ಉರಿಸುವ ಸಿರಿಸುದರ್ಶನ ಚಕ್ರವ ಬಲಕಾಂತವನೇ! ದೈವಗಳ್ಗರಸೇ! ಕೆ.
ಸರಿಂ ತುಂಬಿಹ ದೊಣೆದಾವರೆ, ಕೆಂಬೆಂಕಿಯ ತೆರವರಳ್ ಸಿರಿವೇಂಕಟದವನೇ!
ಆರದ ನೇಹದೊಳ್ ಮುಳುಗಿಹ ವೀದಾಸನು ನಿನ್ನಡಿ ಸೇರುವ ತೆರವರುಳೋ!

ಎಲೈ ಅಳ್ವಾರರೇ! ನನ್ನ ಪಾದ ಹಿಡಿಯಬೇಕಾದರೆ ನಿಮಗಿರುವ ಅಡ್ಡಿ ಅತಂಕ ಹೋಗಬೇಕು. ನಿಮ್ಮ ಪಾಪಪುಂಜ ಪ್ರತಿಬಂಧಕವಾಗಿರುವಾಗ ನಿಮ್ಮನ್ನು ನಾನು ಹೇಗೆ ಸ್ವೀಕರಿಸಲಿ? "ಅದೆಲ್ಲಾ ಸರಿಯಾದ ಕಾರಣವಾಗದು. ಪಾಪವೆಂಬುದೇನು? ನಿನ್ನ ಅಪ್ರೀತಿರೂಪವಾದ ನಿಗ್ರಹವಷ್ಟೆ. ಈ ಬೆಟ್ಟಕ್ಕೇಕೆ ಬಂದೆ? ನಿನ್ನ ಕೈಲಿ ಚಕ್ರವಿರುವುದು ತಾನೆ ಏಕೆ? ನಿನಗೆ ನಿಗ್ರಹ ಬುದ್ಧಿ ಇದ್ದಿದ್ದರೆ ಗಿರಿಗೆ ಬರುತ್ತಲೇ ಇರಲಿಲ್ಲ! ಪಾಪದಾಹಕ ಶಕ್ತಿ ಸುದರ್ಶನಕ್ಕಿಲ್ಲವೇ?" ಇದಿವರ ಮರು ಸವಾಲು!

ತೈವಮ್ = ದೈವೀ ಗುಣಸಂಪನ್ನರಿಗೆ, ಕೋಮಾನೇ = ಅಂತಹವರನ್ನು ನಿನ್ನ ಸ್ವಂತ ಸ್ವತ್ತನ್ನಾಗಿ ಉಪಯೋಗಿಸಿಕೊಳ್ಳುವ ಓ ಸ್ವಾಮಿ! ಅಶುರರ್ = ಆಸುರೀ ಸಂಪನ್ನರ ಕುಲಮ್ ಎಲ್ಲಾಮ್ = ಒಂದು ಬೊಡ್ಡೆಯನ್ನೂ ಬಿಡದೆ, ಎಲ್ಲಾಕುಳಗಳನ್ನೂ, ಕೂರಾಯ್ = ಛೇದಿಸುವವನೇ! ದಂಭ ದರ್ಪ, ಅತ್ಯಭಿಮಾನ, ಒಡೆತನ, ಇವೆಲ್ಲಾ ಒಂದಕ್ಕೊಂದು ಅವವುಗಳೇ ಹೊಡೆದಾಡಿ, ಒಂದೆರಡಾಗಿ, ಎರಡು ನಾಲ್ಕಾಗಿ ಹೋಳುಹೋಳಾಗಿ, ನೀರಾಯ್ = ಆಸುರೀ ವಾಸನೆಯೇ ಜಗತ್ತಿನಲ್ಲಿಲ್ಲದಂತೆ ಬೂದಿಯಾಗಿ, ನಿಲನ್ ಆಹಿ = ನೆಲಸಮವಾಗಿ, ಆಸುರ ಸ್ವಭಾವದ ಅತಿ ಹೆಚ್ಚಳ, ಅತಿ ಆಳದ ವ್ಯತ್ಯಾಸ ಕಾಣದಂತೆ, ನೀರಿನ ಹಾಗೆ, ಸಮತಲನೆಲದ ಹಾಗೆ ಎಂದೂ ಅರ್ಥೈಸಬಹುದು. ಶೀರಾ = ಕೇಡಿನ ಮೆಲಿನ ರೋಷದಿಂದ, ಎರಿಯುಂ ತಿರುನೇಮಿವಲವಾ = ಸಹಸ್ರಾರ ಶಿಖಾಽತಿ ತೀವ್ರನೂ, ಆಸುರ ಸ್ವಭಾವದ ಪ್ರಾಣಾಪಹಾರಿಯೂ ಆದ, ಸುದರ್ಶನನನ್ನು, ಬಲ ಹಸ್ತದಲ್ಲಾಂತಿಹನೇ! ಓ ಧರ್ಮಚಕ್ರ, ಕಾಲಚಕ್ರ ಪ್ರವರ್ತಕಾ! ಶೇರು ಆರ್ = ಕೆಸರು ತುಂಬಿರುವ, ಶುನೈ = ದೊಣೆಗಳಲ್ಲಿನ, ತಾಮರೈ ಶೆಮ್ ತೀಮಲರುಮ್ = ಕೆಂದಾವರೆ ಜ್ವಾಲೆ ಹರಗುವಂತೆ, ಎಲ್ಲೆಲ್ಲೂ ತುಂಬಿರುವ ಪದ್ಮಾಕರಗಳುಳ್ಳ, ತಿರುವೇಙ್ಗಡತ್ತಾನೇ. ಆರಾ ಅನ್ಬಿಲ್ = ಹಿಂಗದ ಹಿರಿಯಾಸೆಯಲ್ಲೇ ಬಿದ್ದಿರುವ, ಅಡಿಯೇನ್ = ಈ ಅಡಿಯಾಳು, ಉನ್ ಅಡಿ ಶೇರ್ = ನಿನ್ನಡಿ ಸೇರುವ - ನಿನ್ನಲ್ಲಿ ಪ್ರಪತ್ತಿ ಮಾಡುವ - ಅದೂ ವಣ್ಣಮ್ = ಯಥಾರ್ಥ ಅವಿರತ ಪಾರಮಾರ್ಥಿಕವಾದ ಬಗೆಯನ್ನು, ಅರುಳಾಯ್ = ದಯೆಗೈ

ಹತ್ತನೆಯ ಅಹಲಹಿಲ್ಲೇನ್ ಎಂಬ ಪ್ರಧಾನವಾದ ಆ ಹಾಡನ್ನು ಒಂದೊಂದು ಪಾಶುರಕ್ಕೂ ಅಧಿಕಾರ ಸೂತ್ರದಂತೆ ಸೇರಿಸಿಕೊಂಡೇ ಅರ್ಥೈಸಿದರೆ ಶ್ರೀದೇವಿಯನ್ನು ಮುಂದಿಟ್ಟು, ಶ್ರೀ ರಾಮಾನುಜರು, ಅವರ ಗದ್ಯತ್ರಯದ ಆರಂಭದಲ್ಲೇ "……ಶರಣಾಗತಿಃ ಯಥಾವ ಸ್ಥಿತಾ ಅವಿರತಾSಸ್ತುಮೇ" ಎನ್ನುವ ಭಾಗ, ಶಠಾರಿ ಪ್ರಸಾದವೆನ್ನುವುದು ವ್ಯಕ್ತವಾಗುತ್ತದೆ.

ತಮಿಳ್ ತಿರಳ್ ೬-೧೦-೩

വണ്ണമരുള്‍ കൊള്‍ അണി മേഹവണ്ണാ മായവമ്മാനേ എണ്ണമ് പുകുന്ദു തിത്തിക്കു മമുദേ! ഇമൈയോരധി പതിയേ
തെണ്ണലരുവി മണിപ്പൊന്‍ മുത്തലൈക്കുമ് തിരവേങ്കടത്താനേ അണ്ണലേ! ഉന്നടി ശേര അടിയേര്‍ക്കാവാവെന്നായേ

ಕನ್ನಡ ನೆರಳ್

ಅರುಳನೆ ಕೊಂಡಿಹ ತೆರ ಚೆಂದದ ಮೇಘದ ಬಣ್ಣಾ! ಮಾಯಿಗನಮ್ಮಾ! ಉರದೊಳು ಹೊಕ್ಕೇ ತಿಗುಟುವ ವಮ್ಯತಾ! ಎವೆಯಿಲರಧಿಪಾ!
ತಿಳಿನಲ್‌ಹರುವಿಗಳ್ ಮಣಿಹೊನ್ ಮುತ್ತನು ದಡಕಿದು ಸಿರಿವೇಂಕಟ ವಾಸಾ ಬಳಿ ಸಾರ್ದೆರೆತನ ತೋರಿದ ಅಣ್ಣಾ! ನಿನ್ನಡಿ ಸೇರಲು
ಅಡಿಗರಿಗೆನ್ನೋ ಆ! ಆ!

"ನನ್ನ ಪಾದಗಳನ್ನು ಶರಣು ಮಾಡಿ ನೀವು ಕೈಂಕರ್ಯವೆಸಗಲು ಬಯಸುತ್ತೀರಿ ಓ ಅಳ್ವಾರರೇ! ಅದು ಅಷ್ಟೊಂದು ಸುಲಭವೆಂದರಿತಿರಾ? ಮೋಕ್ಷ ಫಲವಾದ ಅಂತಹ ನಿತ್ಯ ಊಳಿಗಕ್ಕೆ, ಸಾಂಗೋಪಾಂಗವಾದ ಸಾಧನ ಸಂಪತ್ತಿರಬೇಕು". ಇದು ದೇವರ ಆಕ್ಷೇಪಣೆ. ಅದಕ್ಕೆ ಇವರ ಉತ್ತರ, "ನೀನೇ ಸದಾ ನನಗೆ ಬಲು ಸಿಹಿಯಾಗಿರುವಂತೆ ರಸ್ಯನಾಗಿದ್ದೀಯೆ. ಆ ಅರಿವನ್ನೂ ನೀನೇ ಹುಟ್ಟಿಸಿರುವಿ. ನನ್ನ ವತಿಯಿಂದ ಏನೊಂದೂ ಕೊರೆಯಿಲ್ಲದಂತೆ ನೀನು ಆಕ್ಷೇಪಿಸಿದ ಅಡೆತಡೆಗಳನ್ನೂ ನೀನೇ ಹೋಗಲಾಡಿಸಿದ್ದೀಯೆ! ಸಾಂಗೋಪಾಂಗ ಸಾಧನ ಸಂಪತ್‌ಕುಮಾರನೂ ನೀನೇ! ಯಾವೊಂದು ಹಂತದಲ್ಲೂ, ಅವೆಲ್ಲಾ ನೀನೇ ಆಗಿದ್ದೀಯೆ. ಹೀಗಿರುವಾಗ ನಿನಗೇನು ತಾನೇ ಅಸಾಧ್ಯ? ನಾನಿದ್ದೋ ನಿನ್ನನ್ನು ಬಿಟ್ಟು ಬೇರೆ ರಕ್ಷಕರನ್ನು ಮನಸಾರಾ ಭಾವಿಸೆನು. ನೀನೇ ಅನನ್ಯ ರಕ್ಷಕ. ನಾನಿದ್ದೋ ಅನನ್ಯ ರಕ್ಷ್ಯ. ಇವೆಲ್ಲವನ್ನೂ ತಿಳಿಸಿಕೊಟ್ಟಿರುವವನೂ ನೀನೇ. ಈಗಲೂ "ಅಯ್ಯೋ" ಎಂದು ಕನಿಕರಿಸಯ್ಯಾ!

ಇಮೈಯೋರ್ = ಕಣ್ಣೇಮುಚ್ಚದ ಸುರರಿಗೂ (ಇವರಿಗೆ ರೆಪ್ಪೆಯಿಲ್ಲ) ದಿವ್ಯಾಂಗರಚನೆಯ ಆ ವೈಕುಂಠದ ಮುಕ್ತರಿಗೂ ನಿತ್ಯಸೂರಿಗಳಿಗೂ ಅವಿಚ್ಛಿನ್ನ ಭಗವದನುಭವದೃಷ್ಟಿಯುಳ್ಳವರಿಗೂ, ಅಧಿಪತಿಯೇ = ಅವರೆಲ್ಲರನ್ನೂ ಸ್ವತ್ತಾಗಿ ಉಳ್ಳ, ಗೋಮಂದೆಗಳ ನಡುವಿನ ಬಸವಣ್ಣನಂತೆ, ಅಧಿಕಃ ಪತಿಃ ಅಧಿಪತಿಯಾಗಿರುವವನೇ! ವಣ್ಣಮ್ ಅರುಳ್‌ಕೊಳ್ = ಸ್ವಾಭಾವಿಕ ಧರ್ಮ ನಿನ್ನದು ದಯೆಯೇ. ಅಂತಹ ಕರುಣಾಳೋ! ಇದಕ್ಕೂ ಮೇಲೆ, ಅಣಿಮೇಹಮ್ ವಣ್ಣಾ = ಸುಂದರಮೇಘ ಶ್ಯಾಮಳನೇ! ಮಾಯಮ್ = ಅಚ್ಚರಿ ತರುವ. ಅಮ್ಮಾನೇ = ಸಹಜ ಸ್ವಾಮಿತ್ವವುಳ್ಳ ಮಾತೃಸ್ವಭಾವನೇ, ಸರ್ವರಿಗೂ ಒಡೆಯನಾದ ಮಾವನೇ! ಎಣ್ಣಮ್ = ನನ್ನ ಚಿಂತನೇಂದ್ರಿಯವಾದ, ಹೃದಯಕ್ಕೆ ಹತ್ತಿರವೇ ಇರುವ ಚಿತ್ತದೊಳಗೆ, ಪುಹುನ್ದು = ನೀನೇ ಹೊಕ್ಕು, ತಿತ್ತಿಕ್ಕುಮ್ = ಸಿಹಿಸುತ್ತಲೇ ಇರುವ. ಅಮುದೇ = ಓ ಮಧುರಾSಮೃತಾ! ತೆಳ್ ನಲ್ ಅರುವಿ = ತಿಳಿನೀರಿನ ಪವಿತ್ರವಾದ ತೀರ್ಥಪ್ರವಾಹಗಳೂ, ಮಣಿ = ಗಿರಿಪ್ರದೇಶಗಳಲ್ಲಿರುವ ನವರತ್ನ, ಪೊನ್ = ಹೊನ್ನು ಮುತ್ತು ಇವುಗಳನ್ನು, ಅಲೈಕ್ಕುಮ್ = ಅಲೆಗಳ ಮೂಲಕ ದಡಕ್ಕೆ ನೂಕುತ್ತಲೇ ಇರುವ, ತಿರುವೇಂಗಡತ್ತಾನೇ = ತಿರುಮಲವಾಸಾ! ಅಣ್ಣಲೇ = ಹೀಗೆ ರಂಜಕ ಮಾತ್ರನಲ್ಲದೆ, ಸ್ವಾಮಿತ್ವ ತಿಳಿಸುವವನೂ ಆಗಿರುವವನೇ, ಅಡಿ = ನಿನ್ನ ಸಿರಿಯಡಿಗಳನ್ನು, ಶೇರ = ಉಪಾಯವನ್ನಾಗಿ ಹಿಡಿಯಲು, ಆ ಆ ಎನ್ನು = ಅಯ್ಯೋ! ಅಯ್ಯೋ! ಎಂದು, ಅಡಿಯೇರ್‌ಕ್ಕು ದಾಸನಿಗೆ, ಎನ್ನಾಯೇ = ಹೇಳಲೊಲ್ಲೆಯಾ? ನಮ್ಮೆಲ್ಲರ ಬಳಿ ನೀನಾಗಿಯೇ ಬಂದೆ. ನಿನಗೂ ನಮಗೂ ಇರುವ ನೆಂಟಸ್ತನದಲ್ಲಿ ಮುಖ್ಯವಾದ ಶೇಷ ಶೇಷಿಭಾವವನ್ನು ಕಾಣಿಸಿಕೊಟ್ಟೆ! ಶೇಷ ವೃತ್ತಿ - ಕಾಯಕ - ರೂಪವಾದ ಕೈಂಕರ್ಯವನ್ನೂ ಈ ಕಿಂಕರರಿಂದ ಪಡೆದೇ ಬಿಡು.

ತಮಿಳ್ ತಿರಳ್ ೬-೧೦-೪

ആവാവെന്നാದുലകത്തൈ അലൈക്കുമശുരര്‍ വാണാള്‍ മേല്‍
തീവായ് വാഴി മഴൈ പൊഴിന്ദ ശിലൈയാ തിരുമാമകള്‍ കേള്‍വാ
തേവാ! ശുരര്‍കള്‍ മുനിക്കണങ്കള്‍ വിരുമ്പുമ് തിരുവേങ്കടത്താനേ
പൂവാര്‍ കഴല്‍കള്‍ അരുവിനൈയേന്‍ പൊരുന്ദുമാരു പുണരായേ

ಕನ್ನಡ ನೆರಳ್

ಆ! ಆ! ಎನ್ನದೆ ಲೋಕವ ಪೀಡಿಪ ಅಸುರರ ಅಸುಗಳ ಮೇಲ್
ಹಾ!! ಹಾ!! ಬೆಂಬಾಯ್ ಅಂಬುಗಳ್ ಮಳೆಗರೆ ಬಿಲ್ಲಾಳಾ! ಐಸಿರಿ ಮಾಮಗಳ್‌ಗೆಣೆಯಾ!
ದೇವಾ! ಸುರರೂ ಮುನಿಗಡಣಗಳೂ ಆಶಿಪ ಸಿರಿವೇಂಕಟದವನೇ!
ಹೂ ವೇರಿಹ ಚರಣಗಳಂ ಈ ಕಡುಪಾಪಿ! ನಾನಿದ್ದೋ ಹೊಂದುವ ಪರಿ ಹೆಣೆಯಯ್ಯಾ!

ಓ ಶ್ರಿಯಃಪತೇ! ನೀನು, ನನ್ನ-ನಮ್ಮ ಮೋಕ್ಷಕ್ಕೆ ಕೇಳುವಂತಹ ವ್ಯಾಜಗಳೇನೇನೂ ನನ್ನದಾಗಿ ನನ್ನಲ್ಲಿಲ್ಲ. ಈ ಅಕಿಂಚನ ಹಾಗೂ ಅನನ್ಯಗತಿಯಾದ ನನಗಾಗಿಯೇ, ಅಸಾಧಾರಣ ವಿಶಿಷ್ಟ ಸಂವಿಧಾನವನ್ನು ನೀನೇ ಕಲ್ಪಿಸಿಬಿಡು! ನಿನ್ನ ಪ್ರೇಯಸಿಯೇನು "ಬೇಡ"

ಎನ್ನುತ್ತಾಳೆಯೇ? ಕೃಷ್ಣನಿದ್ದೂ ದ್ರೌಪದಿಯ ಮೇಲೆ ಅಂತಹ ಮಾನಹಾನಿ ಪ್ರಯತ್ನ ಯುಕ್ತವೇ? ಶರಣಾಗತಿ ಮಾಡಿಸಿಕೊಂಡ ಮೇಲೆಯೂ ಕೈ ಬಿಡುವುದೆಂದರೇನು? **"ಕಿಂತು ತ್ವದಗ್ರೇ ಶರಣಾಗತಾನಾಂ ಪರಾಭವೋ ನಾಥ ನ ತೇऽನುರೂಪಃ".**

ಆ ಆ ಎನ್ನಾದು = ಸ್ವಲ್ಪವೂ ಬಾಯಿಂದಲೂ ಆಹಾ! ಆಹಾ! ಎಂದು ಕರುಣೆ ತೋರದೆ, ನಿನ್ನ ವಿಭೂತಿಯಾದ ಎಲ್ಲವನ್ನೂ ಎಲ್ಲ ಜೀವಿಗಳನ್ನೂ, ಅಲೈಕ್ಕುಮ್ = ಛಳಿಸುವ. ಅಶುರರ್ = ಅಸುರ ಪ್ರವೃತ್ತಿಯವರು, ವಾಳ್ ನಾಳ್ ಮೇಲ್ = ಜೀವಿಸುವ ಆ ಕಾಲದ ಮೇಲೆ, ತೀವಾಯ್ ಅಗ್ನಿಮುಖವಾದ, ವಾಳಿಮಳೈ = ಶರವರ್ಷವನ್ನೇ, ಪೊಳಿನ್ದ = ಸುರಿಸಿದ, ಶಿಲೈಯಾ = ಓ ಕೋದಂಡ ರಾಮಾ! ವಿಭೀಷಣರಂತಹ ಹಿತೈಷಿ ಅನುಕೂಲರಲ್ಲೇ ರಾವಣ ದ್ವೇಷ ಮಾಡಿದ. ಶ್ರೀ ರಾಮ ಪ್ರತಿಕೂಲನಾದ ರಾವಣನನ್ನೂ ಬಿಡಲೊಪ್ಪದೆ ಪ್ರೀತಿಸಿದ!

"ಯದಿವಾ ರಾವಣಃ ಸ್ವಯಮ್ ..... ನ ತ್ಯಜೇಯಂ....."

ಲಂಕೆಯನ್ನು ವಿಭೀಷಣನೇ ಆಳುವಂತೆ ಪಟ್ಟಾಭಿಷೇಕವೂ ಕಡಲತೀರದಲ್ಲಾಗಿದೆ! ಈಗ ರಾವಣ ಒಂದು ವೇಳೆ ಶರಣು ಗೈದರೆ, ಅವನಿಗೇನು ನೀಡುವಿ? ಎನ್ನುವಿರಾ? **"ನನ್ನ ಕೋಸಲ ರಾಜ್ಯ!"** ರಾವಣ, ಚಾಣಾಗಿ ಈ ಸದವಕಾಶವನ್ನು ಉಪಯೋಗಿಸಿಕೊಂಡಿದ್ದರೆ ಅವನ ವಧ ಆಗುತ್ತಿರಲಿಲ್ಲ. ಅವರವರ ತಪ್ಪುಗಳಿಂದಲೇ ಅವರವರು ಸಾಯುತ್ತಾರೆ. ದೈವೀಗುಣ ಯಾರೋರ್ವರನ್ನೂ ಕೊಲ್ಲದು. ಅಹಿಂಸೆಯೇ ಅದರ ಪರಮಧರ್ಮ! ಹೀಗೆ ಲೋಕಾಭಿರಾಮ ಶ್ರೀರಾಮ. ನೀರು ಕುಡಿಯುವ ಉದ್ದೇಶ್ಯದಿಂದಲೇ ಕಟ್ಟಿರುವ ಕೆರೆಯಲ್ಲಿ, ನಾವಾಗಿಯೇ ತಲೆಯಿಟ್ಟು ಸತ್ತರೆ, ಕೆರೆಯ ತಪ್ಪೇ? ಕಟ್ಟಿಸಿದ ಧರ್ಮಾತ್ಮರ ತಪ್ಪೇ?

ಧರ್ಮ ಮೂರ್ತಿಯೇ ಆದ ರಾಮನೋರ್ವನೇ ಜನ ಸ್ಥಾನದ ೧೪೦೦೦ ರಾಕ್ಷಸರನ್ನು ಕೊಂದು ಹಿಂದಿರುಗುತ್ತಿದ್ದಾನೆ! ಪೈದೇಹಿ, ಲಕ್ಷ್ಮಣ ಹಾಗೂ ಮಹರ್ಷಿಗಳೊಂದಿಗೆ ಗಂಡನನ್ನು, ಸ್ವಾಗತಿಸುತ್ತಿದ್ದಾಳೆ. ಏನದು ಸ್ವಾಗತ? "ಭರ್ತಾರಂ ಪರಿಷಸ್ವಜೇ" ವೀರಪತಿಯನ್ನು, ರಣಾಂಗಣದಲ್ಲಿ ಅತನಿಗಾದ ಗಾಯಗಳಿಗೆ ಚಿಕಿತ್ಸಾರೂಪವಾಗಿ ತಬ್ಬಿ ತಬ್ಬಿ ಶಾಖ ಕೊಡುತ್ತಾಳೆ "ಸಸ್ವಜೇ ಪರಿಷಸ್ವಜೇ" ಹಿಂದೆ ಮುಂದೆ ಲಕ್ಕಪಕ್ಕದ ನೋವೆಲ್ಲಾ ರಾಘವನಿಗೆ ವಾಸಿಯಾಗುತ್ತದೆ! ಇದರ ಸೂಚನೆಯನ್ನು ಆಳ್ವಾರ್ ಈ ಹಾಡಿನಲ್ಲಿ ಕಾಣಿಸಿದ್ದಾರೆ.

ತಿರುಮಾಮಹಳ್ = ಮಹಾಲಕ್ಷ್ಮಿಯೆಂಬ ಒಬ್ಬ ಹೆಣ್ಣು ಮಗಳ, ಕೇಳ್ವಾ = ಪತಿಯಾದವನೇ! ತೇವಾ = ನೋಡಲಸದಳವಾದ ತೇಜಸ್ಸುಳ್ಳವನೇ! ಶುರರ್‌ಹಳ್ = ಸೇವಾನಿರತ ದೈವೀ ಸಂಪನ್ನರೂ, ಮುನಿಕ್ಕಣಂಗಳ್ = ಮನನ ಶೀಲರಾದವರೂ ಅಂದರೆ ದೇವರ ಗುಣ, ಸೌಂದರ್ಯಾದಿಗಳ ಬಗೆಗೆ ಬಾಯಿ ಬಿಡಲಾರದೆ ಒಳಗೊಳಗೇ ಮೌನದಿಂದಿರುವವರು. ಅಂತಹವರ ಮಹಾಗೋಷ್ಠಿಗಳೂ, ವಿರುಮ್ಬುಮ್ = ಆಸೆ ಪಡುವ, ತಿರುವೇಙ್ಗಡತ್ತಾನೇ = ಅವರವರ ಇಷ್ಟ ನೆರವೇರಿಸಲೆಂದೇ ವೇಂಕಟಗಿರಿಯಲ್ಲಿ ಸಾನ್ನಿಧ್ಯ ಮಾಡಿರುವವನೇ! ಪೂ ಅರ್ ಕಳಲ್‌ಹಳ್ = ಹೂಗಳಿಂದ ತುಂಬಿ ಒತ್ತಡವಾಗಿರುವ "ತೋಮಾಲೆ ಸೇವ್ಯಾ!" ಕಳಲ್ ಹಳ್ = ನಿನ್ನ ಪಾದವನ್ನು, ಅರು ವಿನ್ಯೆಯೇನ್ = ನಿನ್ನ ವತಿಯಿಂದಾಗಲಿ ನನ್ನ ವತಿಯಿಂದಾಗಲಿ ಅಡ್ಡಿ ಆತಂಕವಿಲ್ಲದಿದ್ದರೂ ಸೇವೆ ದೊರಕದಿರುವುದೇ ಪ್ರಕೃತ ಪಾಪವೆನಿಸುವುದು, ಅದು ನನಗಿದೋ ವಕ್ಕಿಸಿದೆ! ಇಂತಹ ಪಾಪಿ, ಪೊರುನ್ದು ಅರು = ನೆಮ್ಮದಿಯಾಗಿ ತಿಮ್ಮಪ್ಪಾ! ನಿನ್ನ ಖಾಸಾ ಸೇವೆ ಎಸಗುವುದಕ್ಕೆ ಬೇಕಾದ ಕ್ರಮಗಳನ್ನು. ಪುಣರಾಯ್ = ನೀನೇ ಸಂವಿಧಾನಗೊಳಿಸು. ಅಶೋಕವನದಲ್ಲಿದ್ದ ಸೀತೆಯಂತೆ ನನ್ನನ್ನು ಬಾಡಿಸದೆ, ಈ ಪರಾಂಕುಶ ಪ್ರೇಯಸಿಯನ್ನು ಅಲಂಗಿಸಿಕೋ! ಪುಣರಾಯ್ ಎಂಬೀ ಶಬ್ದಕ್ಕೆ ಎರಡೂ ಅರ್ಥಗಳಿವೆ.

ತಮಿಳ್ ತಿರಳ್ ೬-೧೦-೫

ಪುಣರಾ ನಿನ್ನ ಮರಮೇಳ್ ಅನ್ಯೆಯ್‌ದ ಒರುವಿಲ್ ವಲವಾ ಓ, ಪುಣರೇಯ್ ನಿನ್ನ ಮರಮಿರಣ್ಡಿನ್ ನಡುವೇ ಪೋನಮುದಲ್ವಾ! ಓ ತಿಣರಾರ್ ಮೇಹಮೆನ ಕ್ಕಳಿರು ತೇರುಮ್ ತಿರುವೇಙ್ಗಡತ್ತಾನೇ! ತಿಣರಾರ್ ಶಾರ್‌ಙ್ಗತ್ತುನ ಪಾದಂ ಶೇರ್ವದಡಿಯೇನ್ ಎನ್ನಾಳೇ!

ಕನ್ನಡ ನೆರಳ್

ಹೆಣೆದೇ ದಟ್ಟನೆ ನಿಂತಾ ಮರಗಳನೇಳನು ಅಂದೆಚ್ಚಿದ ಪೋರ್ ಬಿಲ್ ಬಲಬೀರಾ! ಓ
ಹೆಣೆದೊಂದೆನೆ ನಿಂತಾ ಮರವೆರಡಿನ ನಡುವೇ ಹೋದಾ ಮೊದಲಿಗ ಓ
ತಿಣರ್ ಮೇಘುಗಳೆನೆ ಸಲಗಗಳ್ ಸೇರ್ ಸಿರಿವೇಂಕಟದವನೇ
ತಿಣರ್ ಆರವ ಶಾರ್‌ಙ್ಗದ ಧಾರೀ! ನಿನ್ ಪಾದವ ಅಡೆಯುವುದಡಿಯಡಿಗನಿಗೆಂದಿಹುದೋ!

ಆತುರಗಾರನಿಗೆ ಬುದ್ಧಿ ಮಟ್ಟು! ಸ್ವಲ್ಪ ತಾಳಿ ಎನ್ನುವಿಯಾ! ವಾಲಿ ಸಂಹಾರ ಗೈದು, 'ತನ್ನನ್ನು ಈ ಮಾನವರಾಮ ರಕ್ಷಿಸಬಲ್ಲನೇ?" ಎಂಬ ಶಂಕೆಗೊಳಗಾದ ಆ ಸುಗ್ರೀವನೇ ನಾನು? ಅಂತಹವನಿಗೂ ನೀನೊದಗಿ ಬಂದೆ. ನನಗೆ ನಿನ್ನ ಶಕ್ತಿಯ ಬಗ್ಗೆ ಮಹಾವಿಶ್ವಾಸವಿದೆ. ಇಂಥವನ ಬಗೆಗೆ, ಅಲಸ್ಯದಿಂದಿರಲಿಕ್ಕೆ ಯಾರಿಗೆ ತಾನೇ ಸಾಧ್ಯ? ನಿನ್ನ ಮಂದಗತಿಯನ್ನು ನಾನು ಆತುರಗಾರನೆಂದು ನನ್ನ ಮೇಲೆ ಆರೋಪಿಸುತ್ತೀಯಾ, ತಿಮ್ಮಪ್ಪಾ?

ಪುಣರಾನಿನ್ನ = ದಟ್ಟವಾಗಿ ಬೆಳೆದು ನಿಂತಿದ್ದರಿಂದ ಗುರಿಯಿಟ್ಟು ಭೇದಿಸಲಸಾಧ್ಯವಾದ, ಮರಮ್ ಏಳ್ = ಸಪ್ತ ಸಾಲವೃಕ್ಷಗಳನ್ನೂ, ಅನ್ನು = ಸುಗ್ರೀವ ರಾಜ್ಯ ಹಾಗೂ ಪತ್ನಿಯನ್ನು ಅಣ್ಣನಿಂದಲೇ ಕಳೆದುಕೊಂಡು, ಆರ್ತನಾಗಿ ನಿನ್ನ ಸಖ್ಯ ಶರಣಾಗತಿಗೈದಾಗ, ಎಯ್ದ = ನಿನ್ನಾssಮುಷ್ಟಿಯ ಬಿಗಿ, ನಿಂತ ಠೀವಿ, ಇವುಗಳಿಂದಲೇ ಒರು = ಅಸಮಾನ ವಿಲ್ ವಲವಾ ಓ = ಬಿಲ್ಲಾರಾ! ಈ 'ಓ' ಎಂಬುದು ಆಳ್ವಾರರ ವಿಷಾದಯೋಗ ಸೂಚಕ. ಸಶಂಕನನ್ನೇ ರಕ್ಷಿಸಿದವ ನಿಶ್ಶಂಕನನ್ನು ಕಾಪಾಡುತ್ತಿಲ್ಲವಲ್ಲಾ!

'ಅದು ಹಿಂದಿನ ತ್ರೇತಾಯುಗದ ಸಮಾಚಾರ. ಎನ್ನುವಿಯಾ? ನಾನು ಹುಟ್ಟುವುದಕ್ಕೆ ಸ್ವಲ್ಪ ಹಿಂದೆ, ಓ ಬಾಲ ಕೃಷ್ಣಾ, ನೀನು ಪುಣರ್ ಏಯ್ ನಿನ್ನ = ಪರಸ್ಪರ ಸಂಕೇತ ಗೈದು, ಜಂಟಿಯಾಗಿ ಸೇರಿ ಹಣೆದುಕೊಂಡು ಸ್ಥಿರವಾಗಿದ್ದ, ಮರಮ್ ಇರಣ್ಡುಮ್ = ಯಮಳಾರ್ಜುನಗಳ ಮಧ್ಯೆ. ತೋಳುಗಳಿಂದಲೇ ಭೇದಿಸಿಕೊಂಡು, ತೊಡೆಗಳಿಂದಲೇ ತಾಣ ಮಾಡಿಕೊಂಡು, ಪೋನ = ಹೋದ, ಮುದಲ್ವಾ = ನಿರನ್ವಯ ನಾಶವಾಗದಂತೆ ಜಗತ್ ಕಾರಣ ವಸ್ತುವಾದ ನಿನ್ನನ್ನು, ಎಲ್ಲರಿಗೂ ತಂದುಳಿಸಿಕೊಟ್ಟವನೇ! ಪ್ರಳಯದಲ್ಲೂ 'ಸತ್' ಆಗಿರುವ ನೀನು, ಈ ಸೃಷ್ಟಿಯಲ್ಲಿ 'ಅಸತ್' ಆಗಿ ಬಿಡುತ್ತಿದ್ದೆಯಲ್ಲಾ! ಓ ಇಂತಹ ಭೂರಿ ಭೂಮಾದಾನಿಯೇ! ಈಗ ನನ್ನ ಇರುವಿಕೆಯಾದ ಸೇವೆಯನ್ನು ನಾಶಮಾಡಬಹುದೇ? ಜೀವಾತ್ಮನ 'ಸತ್ತೆ' ಎಂದರೆ "ಕೈಂಕರ್ಯ"ವೇ ಅದನ್ನು ನೀನು ನೀಡದೆ ಇದ್ದರೆ, ಅಸತ್‌ಪ್ರಾಯ.

ನೀನೇನೂ ಈಗ ಕಾಲತಃ ದೇಶತಃ ದೂರದಲ್ಲಿಲ್ಲ. ತಿಣರ್ = ಗಾತ್ರವೇ, ಆರ್ = ಬಹಳ ತುಂಬಿರುವ, ಮೇಹಮ್ = ಮೇಘವೇ, ಎನ = ಎಂದು ಹೇಳುವಂತಹ, ಕಳಿರು = ಮದ್ದಾನೆಗಳೇ.ಶೇರುಂ ಹೊಸ ಹೊಸದಾಗಿ ಸೇರುತ್ತಲೇ ಇರುವ. ಕ್ಷೇತ್ರಾಕರ್ಷಣೆಗೇನೂ ಕೊರೆಯಿಲ್ಲ! ತಿರುವೇಙ್ಗಡತ್ತಾನೇ = ಅಂತಹ ಮಹಿಮಾನ್ವಿತ ಕ್ಷೇತ್ರವಾಸಿನ್! ತಿಣರ್ ಆರ್ = ಬಾಣದಿಂದ ಪೂರ್ಣವಾದ. ಶಾರ್ಙ್ಗತ್ತು = ಶಾರ್ಙ್ಗ ಧನುರ್ಧಾರಿನ್! ನಿನ್ನಾssಬಿಲ್ಲೆತ್ತಲು ಯಾರೂ ಸಮರ್ಥರಾಗರು. ಬಾಣ ಪ್ರಯೋಗಿಸಲೇ ಬೇಕಿಲ್ಲ! ಬಿಲ್ಲನ್ನು ನೀನು ಬಗ್ಗಿಸಿದಾಗಲೇ ಎದುರಾಳಿ ವಶನಾಗಿ ಬಿಡುತ್ತಾನೆ. ನಾನಂತಹ ಎದುರಾಳಿಯೇ ನಿನಗೆ!, ಉನಪಾದಂ = ನಿನ್ನ ಕೈಂಕರ್ಯಕ್ಕೆ ಸರಿಯೊಪ್ಪುವ ಪಾದಗಳನ್ನು ಅಡಿಯೇನ್ ಶೇರ್ವದು ಎನ್‌ನಾಳ್ = ದಾಸನನ್ನು ಸೇವೋಪಯೋಗಿಯಾಗಿಸಿಕೊಳ್ಳುವುದು ಎಂದು? ನಿನಗೇನು ಕಷ್ಟ? ಹಾಗೆ ಸಬೂಬು ಹೇಳಿದರೂ ಇಂತಹದಿನ ಎಂದಾದರೂ ಕಾಲ ನಿಷ್ಕರ್ಷಿಸಿ ಹೇಳಿಬಿಡು! ನಾನಾಗ ಸುಮ್ಮನೆ ಆತುರ ಪಡದೆ ಬಿದ್ದಿರುವೆನು.

ತಮಿಳ್ ತಿರಳ್ ೬-೧೦-೬

ಎನ್ನಾಳೇ ನಾಮ್, ಮಣ್ಣಳನ್ದ ಇನ್ನೈ ತ್ತಾಮರೈಹಳ್ ಕಾಣ್‌ಬದರ್‌ಕ್ಕೆನ್ನು
ಎನ್ನಾಳುಮ್ ನಿನ್ನು ಇಮ್ಮೈಯೋರ್‌ಹಳ್ ಏತ್ತಿ ಇರೈಞ್ಜಿಯಿನಮಿನಮಾಯ್
ಮೆಯ್‌ನಾ ಮನತ್ತಾಲ್ ವಳಿಪಾಡು ಶೆಯ್ಯುಮ್‌ತಿರುವೇಙ್ಗಡತ್ತಾನೇ
ಮೆಯ್‌ನಾನೆಯ್‌ದಿ ಎನ್ನಾಳ್ ಉನ್ನಡಿಕ್ಕಳ್ ಅಡಿಯೇನ್ ಮೇವುವದೇ

ಕನ್ನಡ ನೆರಳ್

ಎಂದಿಗೆ ನಾವ್ ಆ ಮಣ್ ಅಳೆದಾ ಎಣೆದಾವರೆಗಳ ಕಾಣುವುದೆಂದ್
ಎಂದೂ ನಿಂತೆವೆಯಿಲರ್ ವಿರಿಸಿ ಎರಗುತ ಗಣಗಣಮಾಗಿ
ಈ ಮೈ ನಾಲಿಗೆ ಮನಗಳಿಂ ಸೇವೆಗಳ್ ಗೆಯ್ಯುವ ಶ್ರೀಗಿರಿಯೊಳಗಿಹನೇ!
ಈ ಮೈಯೊಡೆ ನಾನ್ ಎಯ್ದಿಯೆ ಎಂದಿಗೆ ನಿನ್ನಡಿಗಳ್ಗಡಿಗನು ಸೇರುವುದೈ?

ನೇರಾ ಶರಣ ಶರಣ್ಯರೀರ್ವರ ಸಂವಾದ ಸೌಭಾಗ್ಯ ಈ ದಶಕದ್ದು

ಶ್ರೀ ಭಗವಾನ್ ಉವಾಚ :-

ಗಡುವು ನಿಖರ ಪಡಿಸಬೇಕೆನ್ನುತ್ತೀರಾ! ಮುಕ್ತಿ ಎಂಬುದು. ಈ ಪ್ರಕೃತಿ ಮಂಡಲ ದಾಟಿ ಅರ್ಚಿರಾದಿ ಮಾರ್ಗದಲ್ಲಿ ಹೋದ ಮೆಲಲ್ಲವೋ! ಶಾಸ್ತ್ರವ್ಯವಸ್ಥೆ. ನೀವು ಹೀಗೆ ಅತ್ಯಾತುರ ಪಡಬಾರದು.

ಶ್ರೀ ಶಠಕೋಪ ಉವಾಚ :-

ಆ ವೈಕುಂಠದ ಅನಂತ ಗರುಡ ವಿಷ್ವಕ್‌ಸೇನರೇ ಮೊದಲಾದವರೂ ನಿನ್ನದೇ ಆದ ಈ ಬೆಟ್ಟಕ್ಕೇ ಬಂದು ಅನುಭವಿಸುವರಲ್ಲಾ! ನಾನೇನು 'ಸತ್ತು' ಆಮೇಲಿನ 'ಮುಕ್ತಿ' ಮಾತ್ರ ಬೇಕೆನ್ನುವವನೇ? ಅಥವಾ ಅನ್ಯಫಲಗಳನ್ನು ಕೋರುವ ಅಂತರ ಜಾತಿಗಳು ನಿನ್ನೀ ಗಿರಿಗೆ ಬಂದೂ ಅನನ್ಯಭಕ್ತರಂತೆ ಸೇವೆ ಮಾಡುವ ಇದನ್ನೇ ನಾನು ಬಯಸುವುದು? ಅತ್ಯಣ ನಿನ್ನ ಚರಣಾಗಳ ಅಖಂಡ ಸೇವಾ ರೂಪಿ ಮೋಕ್ಷಫಲವೇ

ಇಲ್ಲೂ ಬೇಕಪ್ಪಾ! ಜೀವಾತ್ಮನ ಸ್ವರೂಪವೆ "ಪರಾರ್ಥ ಪರಮಾರ್ಥಶೇಷತ್ವ". ಅದಕ್ಕನುಗುಣವಾದ ಫಲಬೇಕೆನ್ನುವುದು ಶಾಸ್ತ್ರ ವಿರುದ್ಧವಲ್ಲವಲ್ಲಾ!

ಶ್ರೀ ಭಗವಾನ್ ಉವಾಚ :-

ತಿರುಪತಿಯಲ್ಲೀಗ ನಿಮಗೇನು ಕೊರೆ ನಾನು ಮಾಡಿರುವುದು?

ಶ್ರೀ ಶಠಕೋಪ ಉವಾಚ :-

ನಿನ್ನ ಗುಣಗಳನ್ನು ಮಾತ್ರ ನನ್ನ ಮನಸ್ಸಿನಲ್ಲಿ ಹಾಯಿಸುತ್ತಿದ್ದೀಯೆ. ಅನಂತ ಇಂದ್ರಿಯ ಹಾಗೂ ಶರೀರಗಳಿಂದಲೂ ಸರ್ವಕಾಲ ಸರ್ವಾವಸ್ಥೋಚಿತ ಸರ್ವ ಕಾಯಕ ಕೈಂಕರ್ಯಗಳನ್ನು ಇಲ್ಲೇ ನಾನೀಗಲೇ ಮಾಡುವಂತಾಗಬೇಕು, ನೀನೀಗ ಕಾಲತಃ ದೇಶತಃ ದೂರದಲ್ಲಿಲ್ಲ. ಸಾಮಾಜಿಕ ಕೈಂಕರ್ಯಸಮಾಧಿ ನಿನ್ನ ಕೃಪೆಯಿಂದಲೇ ಬರಬೇಕಪ್ಪಾ! ಇದೇ ಗೋಷ್ಠೀನಿಷ್ಠಾ ಪ್ರಾರ್ಥನೆ.

ಆಳ್ವಾರ್ ಕೇವಲ ಗುಣಾನುಭವ ಮಾತ್ರದಿಂದ ತೃಪ್ತಿಹೊಂದುವ ಸ್ವಭಾವದವರಲ್ಲ. ಗುಣಗಳೊಂದಿಗೇ ಕೂಡಿದ, ಆ ಗುಣ ಮಹಿಮಾ ಪ್ರಕಾಶಕವೂ ಆದ ಸ್ವಾಮಿಯ, ಭೌತಿಕದಂತೆ ಕಾಣುವಂತಿದ್ದರೂ ಅತಿ ಭೌತಿಕ ಆ ಪರಿಚೋಪನಿಷಣ್ಮಯವಾದ ದಿವ್ಯರೂಪಾನುಭವವೂ ಸಮಗ್ರವಾಗಿ ಎಲ್ಲರಿಗೂ ಇಲ್ಲೇ ಈಗಲೇ ಆಗಿಯೇ ಬಿಡಬೇಕೆನ್ನುವ ಆರ್ತಪ್ರಪನ್ನರು ಎಂಬ ರಹಸ್ಯ ಇಲ್ಲಿ ಸ್ಫುಟ.

ಮಣ್ ಅಳನ್ದ = ಭೂಮಿಯನ್ನು ಇಂದ್ರನಿಗಾಗಿ ಬಲಿಯಿಂದ ಉದಾರದಾನವಾಗಿ ಪಡೆದು, ತನ್ನದೆಂಬುದನ್ನು ತೋರಲು ಪೂರಾ ತನ್ನ ಪಾದದಿಂದಲೇ ಅಳೆದ ಈ ಶಕ್ತಿ ಬೇರಾರಿಗುಂಟು? ಯಾವ ಸಾರ್ವಭೌಮರೆಂದು ಹೇಳಿಕೊಳ್ಳುವ ಸರಕಾರ, ಸಂಸ್ಥೆಗಳಿಗಾಗಲೀ ಇದೆಯೇ! ಈ ಸವಾಲು, ಈ ಎರಡು ಪದಗಳಲ್ಲಡಗಿದೆ! ಸಂತರ ಒಂದೊಂದು ಪದ, ಅಕ್ಷರ ಬಾಹ್ಯಸಮಾಜವನ್ನು ಸ್ಥಿರ ನಿರ್ದುಷ್ಟ ಯೋಜನೆಗಳಿಂದ ಮೇಲೇರಿಸುವುದೇ ಆಗಿದೆ. ವಿಶ್ವದ ಎಲ್ಲಾ ಭೂ, ನಭ, ಕಡಲೂ ಎಲ್ಲರಿಗೂ ಸೇರಿದ್ದು. ಇದರೊಳಗೆ ಅಡಗುವಂತಹ ವ್ಯವಸ್ಥೆಯೇ ಸರ್ವರ ಲೇಸನ್ನು ತರುವುದು!

ಇಂತಹ ವಿರಾಟ್ ವಿಶ್ವವ್ಯಾಪಕ ಪ್ರಭುವಿನ, ತಾಮರೈ ಹಳ್ ಇಣೈ = ಪಾದಾರವಿಂದಗಳ ಜೋಡಿಯನ್ನು, ನಾಮ್ ಕಾಣ್‌ಬದರ್‌ಕ್ಕು = ಈ ಕಣ್ಣಿಂದಲೇ ನಾವೆಲ್ಲರೂ ಸೇವಿಸಲು ತಕ್ಕುದು, ಎನ್ನಾಳ್ = ಯಾವ ದಿನವಯ್ಯಾ! ಇಡೀ ಜಗತ್ತೇ ಎಂದಿಗೂ ಭೂದಾನ, ಗ್ರಾಮದಾನ ತತ್ವಗಳನ್ನು ಕ್ರಿಯಾತ್ಮಕವಾಗಿ, ಅಹಿಂಸಾಮಾರ್ಗದಿಂದಲೇ ಊರ್ಜಿತ ಪಡಿಸಬೇಕೆನ್ನುವುದೇ ಶರಣರ ಒಳ ಇಂಗಿತ! ಇಮ್ಮೈಯೋರ್ ಹಳ್ = ನಿತ್ಯಾsಖಂಡ ಕೈಂಕರ್ಯ ಪರರಾದ ನಿತ್ಯಸೂರಿಗಳೂ, ಪ್ರಯೋಜನಾಂತರ ಪರರಾದ ಬ್ರಹ್ಮರುದ್ರೇಂದಾದಿ ದೇವತೆಗಳೂ. ಎನ್ನಾಳುಮ್ = ಸದಾಸರ್ವಕಾಲವೂ ಇನಮಿನಮಾಯ್ = ಗಣಗಣ ಗುಂಗುಂಪಾಗಿ, ನಿನ್ನು = ಗಿರಿಯಲ್ಲೇ ತಂಗಿ, ಏತ್ತಿ = ಸ್ತುತಿಸಿ, ಇರೈಂಜಿ = ನಮಸ್ಕರಿಸಿ, ಮೆಯ್ ನಾ ಮನತ್ತಾಲ್ = ಕಾಯೇನ ವಾಚಾ ಮನಸಾ, ವಳಿ ಪಾಡು ಶೆಯ್ಯುಮ್ = ಹೊರ, ಒಳಗಿನ ಎಲ್ಲಾ ಕಾಯಕ ಗೈಯ್ಯುವಂತೆ. ತಿರುವೇಙ್ಗಡತ್ತಾನೇ = ಓ ಬೆಟ್ಟದ ದೊರೆಯೇ! ನಾ = ಇದೋ ಈ ದಾಸ, ಮೆಯ್ = ನಿಜಕ್ಕೂ, ಅಂದರೆ ಬರೀ ಮಾನಸವಾಗಿ ಮಾತ್ರವಲ್ಲದೆ, ಎಯ್ದು = ನಿನ್ನನ್ನೇ ಆಸರಿಸಿ, ಅನನ್ಯ ಸಾಧನನನ್ನಾಗಿರಿಸಿ, ಅಡಿಕ್ಕಣ್ = ಸಾಕಾರವೂ ಐಹಿಕದಂತೆ ಕಾಣುವ, ಇಡೀ "ಭೂಃಪಾದೌ" ಎಂಬಂತೆ ಈ ಭೂಲೋಕದಲ್ಲೇ, ಮೇವುವದು = ಬಿಡದೆ ಅವಿಚ್ಛಿನ್ನ ಸರ್ವವಿಧ ಸೇವೆಗಳನ್ನೂ ಈ ದೇಹೇಂದ್ರಿಯಾದಿಗಳಿಂದಲೇ ಎಸಗುವುದು. ಎನ್‌ನಾಳೇ = ಯಾವೊತ್ತೋ! ತಿಮ್ಮಪ್ಪಾ ಆ ಕಾಲ ನಿಗದಿಪಡಿಸಿಬಿಡು. ಎಲ್ಲರ ಪರವಾಗಿ ಇದೋ ನನ್ನ ಬಿನ್ನಹ.

ತಮಿಳ್ ತಿರಳ್ ೬-೧೦-೭

ಅಡಿಯೇನ್ ಮೇವಿ ಅಮರ್‌ಹಿನ್ನವಮುದೇ ಇಮ್ಮೈಯೋರ್ ಅದಿಪತಿಯೇ!
ಕೊಡಿಯಾ ವಡು ಪುಳ್ ಉಡ್ಡೈಯಾನೇ ಕೋಲಕ್ಕನಿವಾಯ್ ಪೆರುಮಾನೇ|
ಶೆಡಿಯಾರ್ ವಿನೈಹಳ್ ತೀರ್ ಮರುನ್ದೇ ತಿರುವೇಙ್ಗಡತ್ತೆಮ್ಬೆರುಮಾನೇ
ನೊಡಿಯಾರ್ ಪೊಳುದುಮ್ ಉನಪಾದಮ್ ಕಾಣ ನೋಲಾದಾತ್ತೇನೇ||

ಕನ್ನಡ ನೆರಳ್

ಅಡಿಗನು ಅಗಲದೆ ಸೇವೆಯ ಗೈಯಲು ಅಮರುವ ವಮ್ಮತಾ! ಎವೆಯಿಲರಧಿಪಾ! ಅಘು
ಸುಡು ಹಕ್ಕಿಯ ಗುಡಿಯವನಾಗಿ ಅರಿಗಳನಟ್ಟುವ ಒಡೆಯಾ! ಅಂದದ ತೊಂಡೆಯ ಹಣ್ ಬಾಯ್ ಹಿರಿಯಾ!
ಗಿಡಪೊದೆಯಂತಿಹ ಬೇನೆಗಳ್ ತೀರಿಪ ಮದ್ದೇ! ಸಿರಿವೆಂಕಟದೆಮ್ ಪೆರ್‌ಮಾನೇ
ಮಿಡುಕೆವೆ ಪೊಳ್‌ತಣಂ ನಿನ್ನಡಿ ಕಾಣಲು ನೋಂಪಿಲಿ ಸಹಿಸಿರೆನ್ನೆ

ನಿಮ್ಮನ್ನು "ಮೆಯ್ ನಾನ್ ಎಯ್‌ದಿ" ಎಂದು ಹೇಳಿಕೊಂಡಿರಿ. ನಿಜ ಶರಣರಾದ ನಿಮಗೆ ಫಲವಿದ್ದೇ ಇದೆ. ಯಾವುದಕ್ಕೂ ಒಂದು ಕ್ರಮ ವ್ಯವಸ್ಥೆ ಇದೆ. ಸ್ವಲ್ಪ ತಾಳಿ.

ನೀನೆಷ್ಟು ರುಚಿಕರನಾಗಿದ್ದೀಯೇ! ತಿಮ್ಮಪ್ಪಾ! ನಿನ್ನ ಆ ಭೋಗ್ಯಮನೋಜ್ಞತೆ, ಕ್ರಮ ನಿಯಮ ಸಹಿಸಲು ಬಿಟ್ಟರೆ ತಾನೇ! ರಸಪ್ರಜ್ಞೆಯಿಲ್ಲದೆ ಕೇವಲ ಶಾಸ್ತ್ರೀಯ ಕಾನೂನು ದೃಷ್ಟಿಯಿರುವವರಿಗೆ ನಿಧಾನ ಮಾಡು. ನನ್ನದು ಆ ವಿಳಂಬ ಸಹಿಸಲಾರದ ಪ್ರಕೃತಿಯಪ್ಪಾ. ಅದೂ ನಿನ್ನ ಕರುಣೆಯಿಂದಲೇ ಬಂದುದು. ನನ್ನ ಸಕಲಸಾಧನನೂ ನೀನೇ. ಇತರ ಸ್ವಪ್ರಯತ್ನ ಸಾಧ್ಯ ಸಾಧಕರಿಗೆ ಬರಬಹುದಾದ ವೈಕಲ್ಯಕ್ಕೆ ಏನೇನೂ ನನ್ನಲ್ಲಿ ಅವಕಾಶವಿಲ್ಲ. ಒಂದು ಕ್ಷಣ ಕಾಲವೂ ಸಹಿಸಲಾರೆನು.

ನಿನ್ನ ದಯಾವಾಹಿನಿ ಹರಿದೇ ಬರುತ್ತಿದೆ. ಅದು ಈ ಜೀವನದಿಗಳಿಗೂ ಜೀವನಧಾರೆ. ಅದು ಏರಿಳಿತದ ಕರುಣಾಝರಿಯಾಗಿದ್ದಿದ್ದರೆ, ಇಷ್ಟೊಂದು ಕಳವಳ ನಾನು ಪಡುತ್ತಿರಲಿಲ್ಲ. ಇಲ್ಲೆಲ್ಲಾ ಈ ಅದ್ಯ ಕಲಿಯುಗದ ಕೂಟಸ್ಥ ಶರಣರ ಮೆಲೆ ದಯಾಸಾಗರನ ವಿಶೇಷ ಕಟಾಕ್ಷವೆಂಥದೆಂಬುದರ ಕಲ್ಪನೆ ಮೂಡುವುದು. ಇಲ್ಲದಿದ್ದರೆ, ದೇವರ ವಿಚಾರದಲ್ಲಿ ಕೊನೆ ಮೊದಲಿಲ್ಲದ ವಾದ ವಿವಾದಗಳು ಬೌದ್ಧಿಕ ಕ್ಷೇತ್ರದಲ್ಲಿ ನಿಲ್ಲವು.

ಇಮ್ಮೈಯೋರ್ ಅಧಿಪತಿಯೇ = ನಿರ್ನಿಮೇಷ ಎಂದರೆ ಎವೆಯಿಕ್ಕದೆ ಸದಾ ನೋಡುತ್ತಿರುವ ನಿತ್ಯಸೂರಿಗಳ ಅಧಿರಾಜಾ! ರಾಜಾಽಧಿರಾಜಾ, ಕೊಡಿಯಾ ಅಡುಪುಳ್ ಉಡೈಯಾನೇ = ಆಶ್ರಿತರಿಗೆ ವಿರೋಧ ಎರಗಿದಾಗ ಅದನ್ನು ಕುಟ್ಟಿ ಹಾಕುವ, ಪಕ್ಷಿರಾಜನಿಗೂ ನಿರ್ವಾಹಕನಾದವನೇ. ಗರುಡ ಧ್ವಜ ಕಂಡರೇ ಸಾಕು. ಭಕ್ತರ ಭಾಗಕ್ಕೆ ಏನೇನೂ ಅಡ್ಡಿ ಆತಂಕಗಳಿಲ್ಲ. ಎಂದು ದೂರದಿಂದಲೇ ಸೂಚನೆ ಸಿಕ್ಕಿ ಬಿಡುತ್ತದೆ. ತಿರುವೇಜ್ಗಡತ್ತು ಎಮ್ ಬೆರುಮಾನೇ = ಹೀಗೆ ತಾರ್ಕ್ಷ್ಯನ ಮೂಲಕ ಆಶ್ರಿತರು ಪಾಪಕ್ಕಂಜಬೇಕಿಲ್ಲ ಎಂಬುದನ್ನು, ಈ ಕ್ಷೇತ್ರದಲ್ಲಿ, ಓ ವೇಂಕಟಾಚಲಾಧಿಪತೇ! ಚೆನ್ನಾಗಿ ತೋರುತ್ತಿರುವಿ. ಹಾಗೂ ನೀನೇ, ಅಡಿಯೇನ್ ಮೇವಿ = ನಾನು ನಿನ್ನ ಗುಣ ರೂಪಾದಿಗಳಿಗೆ ಸೋತು ನಿನ್ನ ರಸಪಾನ ಮಾಡುತ್ತಿರಲು ಅತ್ತಿತ್ತ ಅಲುಗದೆ. ಅಮರ್ ಹಿನ್ನ ಅಮುದೇ = ಸ್ಥಿರವಾಗಿ ಒದಗುತ್ತಲೇ ಇರುವ ಅಮೃತ ಸ್ವರೂಪನೇ! ಅಮೃತ ಕಲಶತಂದ ಸುಪರ್ಣನ ಪುರುಷಕಾರದಿಂದ, ಅಮೃತಕ್ಕೂ ಅಮೃತನಾದ ನೀನು ಅತ್ಯಂತ ಆತ್ಮ ಸಂಜೀವನನಲ್ಲವೇ? ಪ್ರಯೋಜನಾಂತರ ಪರರಿಗೆ ಅಮೃತವಾಗಲಾರೆಯಷ್ಟೆ. ಅವರ ಟಾನಿಕ್ಕುಗಳೆಲ್ಲಾ ಮತ್ತೆ ಮತ್ತೆ ಹುಟ್ಟು ಸಾವುಗಳನ್ನು ಪೂರಾ ಹೋಗಲಾಡಿಸವು. ನೀನಾದರೆ "**ಮೃತ್ಯೋರ್ ಮಾಂ ಅಮೃತಂ ಗಮಯಸಿ!**".

ಯಾವ ಯಾವುದರಲ್ಲಿ ನಿಮಗೆ ರಸವೇರಿದೆ? ಕೋಲಂ = ನಿರತಿಶಯ ಸುಂದರವಾದ, ಕನಿವಾಯ್ = ರಕ್ತ ಬಿಂಬಫಲವನ್ನೂ ಮೀರಿಸಿರುವ ಅಧರ ಸ್ಫುರಣದಿಂದ ಘನವಾದ ಸ್ವಾಮಿಯೇ! ಇಲ್ಲಿ ಇಂತಿಂತಹ ಚೆಂದಗಳುಂಟು. ನೋಡಬಯಸುವವರೆಲ್ಲಾ ಬನ್ನಿ ಬನ್ನಿ! ಎಂದಿದೋ ಗರುಡನ ಗುಡಿ ಆಗಸದಲ್ಲಿ ಹಾರಾಡುತ್ತಾ ಕರೆಯುವಂತಿದೆ! ಶೆಡಿ ಆರ್ = ಪಾಪಗಳೆಂಬ ಗಿಡಗಳ ಪೊದರು ದಟ್ಟವಾಗಿ ತುಂಬಿದ, ವಿನೈಹಳ್ = ದುಃಖಿಗಳನ್ನು, ತೀರ್‌ಮರುನ್ದೇ = ತೀರಿಸುವ ಭೇಷಜಸ್ವರೂಪಾ! ಮಲೆನಾಡುಗಳಲ್ಲೇ ಮದ್ದಾಗುವ ಗಿಡ ಮೂಲಿಕೆ ಪತ್ರೆ ಮುಂತಾದವು ಸಿಗುವುದು. ಅಮೃತವೂ ನೀನೇ! ಅಮೃತದಾತೃವೂ ನೀನೇ, ಕುಡಿಯುವವರು ಕೆಳಗೆ ಕುಳಿತು ಎತ್ತರದಲ್ಲಿರುವ ನಿನ್ನಿಂದ ಅಮೃತಧಾರೆಯ ಪಾನ ಮಾಡುತ್ತಾರೆ!

ಇಲ್ಲಿನ ಒಂದೊಂದು ಸಂಬೋಧನೆಯೂ ಎಂತೆಂತಹ ವಿಶೇಷಭಾವಗಳನ್ನು ತಿಳಿಸುತ್ತವೆ! "ನಿರನಿರೈ ಆಯಿರತ್ತು" ಶಬ್ದ, ಅರ್ಥಭಾವಗಳ ಪುಷ್ಟಿಯನ್ನು ಮೈದೋರಿಸುತ್ತವೆ! ಎಂದು ಅತ್ಯಂತ ಸರಸಿ ಮೇಧಾವಿ, ಯಾಮನಾಚಾರ್ಯ, ಶ್ರೀಪರಾಶರಭಟ್ಟರು ಮೈ ಮರೆಯುತ್ತಿದ್ದರೆಂದು ಐತಿಹ್ಯ. ಜತೆ ಜತೆಗೇ, ತೊಂಡರ್ ಅಡಿಪ್ಪೊಡಿ. ಭಕ್ತಾಂಘ್ರಿರೇಣುಗಳ "ತಿರುಮಾಲೈಯ" ಎನೇ ಪಾಶುರ

ಪಚ್ಚೈಮಾ ಮಲೈಪೋಲ್ ಮೇನಿ ಪವಳವಾಯ್ ಕಮಲಚ್ಚೆಙ್ಗಣ್ ಅಚ್ಚುದಾ! ಅಮರರ್ ಏರೇ! ಆಯರ್‌ದಮ್ ಕೊಳುನ್ದೇ! ಯೆನ್ನುಮ್ ಇಚ್ಚುವೈ ತ್ತವಿರ ಯಾನ್ ಪೋಯ್ ಇನ್ದಿರ ಲೋಕಮಾಳುಮ್ ಅಚ್ಚುವೈ ಪೆರಿನುಮ್ ವೇಣ್ಡೇನ್ ಅರಙ್ಗ ಮಾ ನಗರುಳಾನೇ

ಎಂಬೀ ಪಾಶುರವನ್ನೂ ಅನುಭವಿಸುತ್ತಿದ್ದರೆಂದೂ ಹಿರಿಯರ ಅಂಬೋಣ. ಕನ್ನಡದಲ್ಲಿ (ದ್ರುತಗತಿಯಲ್ಲಿ)

"ಪಚ್ಚೆಮಾ ಮಲೆಯಪೋಲ್ ಒಡಲ್ ಪವಳಬಾಯ್ ಕಮಲ ಕೆಂಗಣ್
ಅಚ್ಚುತಾ! ಅಮರರಸೇ! ಗೊಲ್ಲರ್ ತಳಿರೆ! ಎನ್ನುತಾ
ಇಂಥ ಸಿರಿಯ ತೊರೆದು ನಾನ್ ಪೋಗುತಿಂದ್ರಲೋಕ ವಾಳುವಾ
ಅಂಥ ಸಿಹಿಯ ಪೆತ್ತರೂ ಬೇಡ ರಂಗಮಾ ನಗರದಿಹನೇ:"

ಕಣ್ಣುಮಿಟಿಕಿಸಿ ತೆರೆಯುವ ಕಾಲಕ್ಕೆ "ನೊಡಿ" ಎನ್ನುತ್ತಾರೆ. ಕನ್ನಡದಲ್ಲೂ "ರೆಪ್ಪೆಮಿಡಿ"! ನೊಡಿ ಅರ್ ಪೊಳುದಮ್, ಉನಪಾದಂ ಹಿಂದೆ ಹೇಳಿದ ನಾನಾ ಪರಿಗಳಿಂದ ಪರಮಭೋಗ್ಯವಾದ ಪಾದಗಳುಳ್ಳ ನಿನ್ನನ್ನು, ಕಾಣ = ಈಗಲೇ ಕಂಡೇ ಬಿಡಬೇಕೆಂಬ ಆಸೆ ಹೊರತು. ನೋಲಾದು = ಏನೂ ಸ್ವಂತ ಬಂಡವಾಳವಿಲ್ಲದಿದ್ದರೂ, ಆತ್ತೇನ್ = ಸಹಿಸಲಾರೆನಯ್ಯಾ!

ತಮಿಳ್ ತಿರಳ್ ೬-೧೦-೮

ನೋಲಾದಾತ್ತೇನ್ ಉನಪಾದಮ್ ಕಾಣವೆನ್ನು ನುಣ್ ಉಣರ್ಕಿಲ್
ನೀಲಾರ್ ಕಣ್ಣತ್ತಮ್ಮಾನುಮ್ ನಿರೈ ನಾನ್ ಮುಹನುಂ ಇನ್ದಿರನುಮ್
ಶೇಲೇಯ್ ಕಣ್ಣಾರ್ ಪಲರ್ ಶೂಳ ವಿರುಮ್ಬುಮ್ ತಿರುವೇಙ್ಗಡತ್ತಾನೇ
ಮಾಲಾಯ್ ಮಯಕ್ಕಿ ಅಡಿಯೇನ್ ಪಾಲ್ ವನ್ದಾಯ್ ಪೋಲೇ ವಾರಾಯೇ!

ಕನ್ನಡ ನೆರಳ್

ನೋಂಪದೆ ಆರೆನು ನಿನ್ ಪಾದವ ಕಾಣಲ್‌ಕೆಂದು, ನುಣ್ಣನ ಅರಿವಿರಲೊಂದು
ಸೊಂಪಿನ ನೀಲಿಯ ವಿಷ ಕಂಠದ ವಮ್ಮನ್ ನೆರೆ ನಾಲ್‌ಮೊಗನೂ ಇಂದಿರನೂ
ಸೆಳೆಮೀನ್ ಬಿತ್ತರ ಗಣ್ಣಿನ ಪೆಣ್ ಪಲರ್ ಸುಳಿದೂ ಕೋರುವ ಸಿರಿವೇಂಕಟದವನೇ!
ಬೆಳೆ ಮೋಹನನಾಗಿಯೆ ಮೋಹವಗೊಳಿಸಿ ಅಡಿಗನ ಇದೋ ಎನ್ ಬಳಿ ಬಂದವೊಲ್ ಬಾರಾ!

ಫಲಾಂತರ ಪರರಾದ ದೇವತಾಂತರಗಳೂ ಸಮಯ ಬಂದಾಗ ಸಂಕಟ ಬಂದರೆ ವೆಂಕಟರಮಣಾ! ಅಂತೂ ಸಕಾಮ ನಿಷ್ಕಾಮರೀರ್ವರಿಗೂ ನೀನೇ ಉಪಾಯನಾಗುವಿ. ಅವರು ಅವರವರ ಫಲ ಪಡೆದು, ಉಪಕರಣವನ್ನು ಕೈ ಬಿಡುವರು, "ದೋಣಿಯಿಂದ ಹೊಳೆ ದಾಟಿದ ಮೇಲೆ ಅಂಬಿಗ ಮಿಂಡ!" ಉಪಾಧ್ಯಾಯಾಶ್ಚವೈದ್ಯಾಶ್ಚಕಾರ್ಯಾನ್ತೇ ಅಪ್ರಯೋಜಕಾಃ! ಐಕಾನ್ತಿಕತ್ವ, ನೀನೇ ಸಾಧನವೆಂಬ ನಿಷ್ಠೆಯಿದ್ದರೂ, ಅತ್ಯಂತಿಕ ಭಕ್ತರಲ್ಲ! ನಾನಿದೋ ಅಂತಹವನಲ್ಲ. ನಿನ್ನ ಕೃಪೆಯಿಂದ "ನಿತ್ಯಯುಕ್ತ" ಫಲ ನೀಡುವೆಯೋ! ಸಂಕಟ ಪರಂಪರೆಗಳನ್ನೇ ಈಯುವೆಯೋ, ನೀನೇ ಶ್ರೀರಕ್ಷೆ. "ಕಳ್ಳೈವಾಯ್‌ತುನ್‌ಬಮ್ ಕಳ್ಳೈಯಾದು ಒಳಿವಾಯ್. ಕಳೆಕಣ್ ಮತ್ತಿಲೇನ್!" ಆತ್ಯಂತಿಕ ಪರಮೈಕಾನ್ತಿ! ದಾಸ ಆ ಸಕಾಮರಿಗೆ ಬಂದಂತೆ ನನ್ನ ಭಾಗಕ್ಕೆ ಬಾರದಿರುವೆ! ವನ್ದಾಯ್ ಪೋಲೇ ವಾರಾಯೇ!

ಬ್ರಹ್ಮರುದ್ರ ಇಂದ್ರಾದಿಗಳು ತಿಮ್ಮಪ್ಪನನ್ನು ಕುರಿತು ಆ ಆಳ್ವಾರರಂತೆಯೇ ಸ್ತುತಿಸುವುದನ್ನು ಈ ಪಾಶುರದ ಮೊದಲಲ್ಲೇ ಇವರೇ ಅನುವದಿಸಿ ಹೇಳುತ್ತಾರೆ. ಉನ ಪಾದಮ್ ಕಾಣ = ನಿನ್ನ ಪಾದ ಸಂದರ್ಶಿಸಲು, ನೋಲಾದು = ಏನೊಂದೂ ಸಾಧನವಿಲ್ಲದೆ, ಅಕಿಂಚನ್ಯದ ವಿನಯದಿಂದ ಕೂಡಿದ್ದರೂ, ಆತ್ತೇನ್ = ನಿನ್ನ ದರ್ಶನ ಹಾಗೂ ಕಾಯಕ ಸೇವೆ ಗೈಯ್ಯದೆ ಒಂದು ಕ್ಷಣವೂ ಸಹಿಸಲಾರೆನಪ್ಪಾ! ಎನ್ನು = ಎಂದೇ, ಫಲಾನ್ತರಾऽऽಸಕ್ತಿ ಇರುವ ಪ್ರತಿಯೊರ್ವರೂ ಹೀಗೆಯೇ, ಮತ್ತೂ ಅವರವರ ಪತ್ನಿಯರೂ ಎಂಬುದು ಪಾಶುರದ ಅನ್ವಯ ಕ್ರಮ.

ನುಣ್ ಉಣರ್ವು ಇಲ್ = ಸೂಕ್ಷ್ಮ ಮತಿಯಲ್ಲಿರುವ. ನೀಲಾರ್ = ವಿಷದ ಕಪ್ಪು ತುಂಬಿರುವ, ಕಣ್ಣತ್ತು = ನೀಲಕಂಠನೆಂದೇ ಪ್ರಸಿದ್ಧನಾದ, ಅಮ್ಮಾನುಮ್ = ಜಗತ್ ಪ್ರಧಾನನೆನ್ನುವಷ್ಟು ಜಸವಾಂತ ಶಿವನೂ, ನಿರೈ =: ಅವನಿಗೂ ಜನಕನಾದ, ಸೂಕ್ಷ್ಮಾತಿಸೂಕ್ಷ್ಮ ಜ್ಞಾನಾಧಿಕನಾದ, ನಾನ್ ಮುಹನುಮ್ = ಚತುರ್‌ಮುಖ ಬ್ರಹ್ಮನೂ, ಇನ್ದಿರನುಮ್

"ಸ ಬ್ರಹ್ಮಾ ಸ ಶಿವಃ ಸೇನ್ದ್ರಃ"

ಎಂದು ನಾರಾಯಣ ಸೂಕ್ತದಲ್ಲಿ, ಹೇಳಲ್ಪಟ್ಟಿರುವಂತೆ, ಸಕಲ ಬ್ರಹ್ಮಾಂಡ ಸೃಷ್ಟ್ಯಾದಿಗಳಲ್ಲಿ ಸಮಗ್ರ ಸಂಪೂರ್ಣ ಅನ್ವಯವಿಲ್ಲದಿದ್ದರೂ, ದೇವೇಂದ್ರನೆನಿಸಿಕೊಂಡಿರುವವನೂ, ಶೇಲ್ ಏಯ್ ಕಣ್ಣಾರ್ = ಮೀನನ್ನು ಹೋಲುವ ಚಂಚಲ ಹಾಗೂ ವಿಶಾಲಾಕ್ಷಿಯರಾದ ಅವರವರ ಮಹಿಷಿಯರಾದ, ಸರಸ್ವತೀ, ಉಮಾ, ಶಚೀದೇವಿಯರೂ, ಪಲರ್ ಶೂಳ = ಅವರವರ ದಾಸದಾಸಿಯರೂ, ತಮ್ಮ ತಮ್ಮ ಯಜಮಾನರಿಗೆ ಕಷ್ಟ ಒದಗಿದಾಗ ತಿಮ್ಮಪ್ಪನ ಪ್ರಾಕಾರ ಪ್ರದಕ್ಷಿಣೆ ಮಾಡುತ್ತಿರಲೂ ಸಹ, ವಿರುಮ್ಬುಮ್ = ಅರ್ಥಾರ್ಥಿಗಳಾಗಿದ್ದವರನ್ನೂ, "ಉದಾರಾಸ್ಸರ್ವಏವೈತೇ" ಅರ್ಜುನಾ, ನನ್ನ ಬಳಿ ಬಂದರಲ್ಲಾ. ನಾನು ಮೋಕ್ಷವಲ್ಲದ ಫಲಗಳನ್ನೂ ನೀಡುವೆನೆಂಬ ಕೀರ್ತಿಯನ್ನು ನನಗೆ ತರುವವರಯ್ಯಾ ಅವರು ಎಂದು ಸಂತಸಪಡುವವನಲ್ಲವೇ! ಇಂತಹ ತಿರುವೇಙ್ಗಡತ್ತಾನೇ! ಅಡಿಯೇನ್ ಪಾಲ್ = ಈ ಅಕಿಂಚನ ಅನನ್ಯಗತಿಕ ಅನನ್ಯ ಪ್ರಯೋಜನನಾದ ನನ್ನ ಬಳಿಗೆ, ವನ್ದಾಯ್ ಪೋಲೇ = ಆ ಗಜೇಂದ್ರನ ಬಳಿ ಧಾವಿಸಿ ಬಂದು ರಕ್ಷಿಸಿದಂತೆ, ವಾರಾಯೇ = ಬಾರದಿರುವಿಯಲ್ಲೋ ತಿರುಮಲ ನಿವಾಸಾ! ಕೈಂಕರ್ಯ ಅದೂ, ಸ್ವಗತ, ಸ್ವಾರ್ಥವಲ್ಲದ ನಿನ್ನ ಮುಖೋಲ್ಲಾಸಕ್ಕಾಗಿಯೇ, "ಕರಸ್ಥಕಮಲ" ಬಾಡಿಹೋಗುತ್ತದೆಯಲ್ಲಾ! ಆದಿ ಮೂಲಾ! ಬೇಗ ಬಾರೋ, ಇದೋ ನಿನಗಾಗಿಯೇ ತಾವರೆ

ನನ್ನ ಸೊಂಡಲಿನಲ್ಲಿ ನಿರುದ್ಯೋಗಿಯಾಗಿದೆ! ಇಲ್ಲಿನ ರಹಸ್ಯವೆಂದರೆ ಮೊಸಳೆಯ ವತಿಯಿಂದಾಗುವುದು ಸಾಮಾನ್ಯ ಆಪತ್ತಷ್ಟೆ! ''ಪರಮಾಽಽಪದಂ ಆಪನ್ನಃ'' ಈ ಆರ್ಷವಾಕ್ಯದಂತೆ ಪುಷ್ಪಕೈಂಕರ್ಯ ಸ್ವೀಕರಿಸದಿರುವ ಮಹಾ ವಿಪತ್ತನ್ನು ಅನೆ ಪ್ರಸಂಗಿಸಿದ್ದು! ಅಂತೆಯೇ ಅದು ''ಗಜೇಂದ್ರಾಳ್ವಾನ್'' ಎಂಬ ಪ್ರಸಿದ್ಧಿ ಹೊಂದಿತು!

ಫಲಾಂತರ ಕಾಮಿಗಳಾದ ಭಗವದ್ ಭಕ್ತರಿಗೆ-ಹರಕೆ ಭಕ್ತರಿಗೆ-'ಮತಂ ಯಸ್ಯ ನವೇದ ಸಃ' ಅವರ ದೃಷ್ಟಿಯಿಂದ ನೀನು ಬಂದಂತೆ, ಒಲಿದಂತೆ ಕಂಡರೂ, 'ನವೇದ ಸಃ', ಮಹತ್ತಮ ಫಲದ ಬಗೆಗೆ ಅವರಿನ್ನೂ ತಿಳಿದವರಲ್ಲ. ಆದರೂ ಅವರ ದೃಷ್ಟಿಯಲ್ಲಿ ಒಂದು ತೃಪ್ತಿಯ ಭಾವನೆ ಇರುತ್ತದೆ. ನೀನು ಮಾತ್ರ ಅವರ ಬಗೆಗೆ ಅತೃಪ್ತನಾಗಿ, ಐಯ್ಯೋ! ನನ್ನನ್ನೇ ನೀಡುತ್ತಿದ್ದೆನಲ್ಲಾ! ಆದರೆ ನನ್ನಂಥವರ ಬಗೆಗೆ 'ಯಸ್ಯ ಅಮತಂ' ಶರಣರಿಗೆ, ಸ್ವಗತ ಏನೇನೂ ಬುದ್ಧಿಗೆ ಹತ್ತದು. ವರ್ಣಧರ್ಮ, ಜಾತಿಧರ್ಮಗಳ ಧನದವಲತ್ತುಗಳ ಸಾಧನತ್ವ ಬುದ್ಧಿ ಅವರಲ್ಲಿ ಕಿಂಚಿತ್ತೂ ಇಲ್ಲ. ಅಂತೆಯೇ ತಸ್ಯಮತಮ್, ಆಳ್ವಾರರದೇ ಯಥಾರ್ಥತಮವಾದ 'ಮತ', ಮತಿ ವಿಶೇಷ! ಅದೂ ನಿನ್ನಿಂದ! ಬಂದಂತಿರುವೆ! ಬಾರದಿರುವೆ! ''ವನ್ಬಾಯ್ ಪೋಲೇ ವಾರಾಯ್ಏ!''

ನಮ್ಮಾಳ್ವಾರರ ಶ್ರೀ ವದನದಿಂದ ಹೊರಟ ಈ ವಿಚಿತ್ರವಾದ ಒಗಟಿನ ಮಾತು ಶ್ರೀ ಭಗವಾನನ ಪ್ರಹಸನ್ ಇವ ಎಂಬಂತೆ ನಗುಮೊಗದಿಂದ ಹೊರಟ ಗೀತಾರಹಸ್ಯ!

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ, ಯಸ್ಯಾಂಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ

ಪ್ರಾಯಃ ಆತ್ಮಜ್ಞಾನದಲ್ಲಿ ಜನ ಕುರುಡರಾದರೆ, ಸಂಯಮದಿಂದ ಆತ್ಮಜ್ಞಾನಸಾಧಕ ಜಾಗೃತಿಯಿಂದ ಒಳಗಣ್ಣಿನಿಂದ ನೋಡುತ್ತಿರುತ್ತಾನೆ. ಬಹು ವಿಪುಲಾರ್ಥಕ! ಇಂತಹ ಸೂತ್ರ ಪ್ರಾಯವಾದ ವಾಕ್ಯಗಳಿಗೆ ಇಷ್ಟೇ ಅರ್ಥವೆಂದು ಹೇಳುವುದು, ಭಗವಂತನಿಗೂ ತಚ್ಚರಣರಿಗೂ ಅಪಚಾರವೆಸಗಿದಂತೆ! ಆದರೂ ಭಾವಜ್ಞರಾದ ಹಿರಿಯರಿಂದ ಅಷ್ಟಷ್ಟು ಭಾವಗ್ರಹಿಸಿಕೊಳ್ಳಬಹುದು.

ಆಗಲಿ! ನಿಮ್ಮ ಬಳಿಗೆ ನಾನು ಹೇಗೆ ಬರಬೇಕು ಹೇಳಿ. ಎಂದು ಸರ್ವಜ್ಞ ಕೇಳಿದಂತೆ! ಅದಕ್ಕಿವರ ಜವಾಬು, ಮಾಲ್ಅಯ್ = ನಾನು ನಿನ್ನ ಕಾಯಕದ ಸೇವಾ ಸೇರ್ಪಡೆಯಿಂದ ಮೈಮರೆಯುವಂತೆ! ಮಯಕ್ಕಿ ಮರುಳು ಸಿದ್ಧನನ್ನಾಗಿಸಿ, ನೀನು ಮರುಳು ದೇವರೆಂದು ಕರೆಸಿಕೊಳ್ಳುವಂತೆ ನನ್ನ ಸೇರ್‌ಪಡೆಯಿಂದ ನೀನೂ ಅತಿವ್ಯಾಮುಗ್ಧನಾಗಿ! ವಾರಾಯ್ = ಬಾರಾ! ತಮಿಳ್ ಸಾಹಿತ್ಯಕಾರರ ಭಾವ ಈಗ ಹೇಳಿದ್ದು.

ಆದರೆ ತಿರುವಾಯ್‌ಮೊಳಿಗೆ ತಕ್ಕ ''ಈಡಾದ'' ತೃಪಾರ್ತರಿಗೆ ಹದವಾದ ಎಳನೀರಿನಂತೆ! ಶ್ರೋತೃಗಳನ್ನು ತಣಿಸುವ, ಭಟ್ಟರ್, ನವ್‌ಜೀಯರ್ ಪರಂಪರಾ ತಜ್ಞರಾದ ''ನಂಬಿಳ್ಳೈ'' ಎಂಬುವರ ಪ್ರವಚನವೇ ಆದ ''ಭಗವದ್ ವಿಷಯ''ವೆಂಬುದರಲ್ಲಿ, ''ಮಾಲ್'' ಎಂದರೆ ಕಪ್ಪುಬಣ್ಣ, ''ನೀಲವರ್ಣ'' ಎನ್ನಲಾಗಿದೆ! ಇದರಿಂದ ಕೃಷ್ಣನ ನೆನಪೇ ಆಳ್ವಾರ್ರಿಗೆ ಆಗುತ್ತದೆ. ''ಕರ್ಷತಿ ಇತಿ ಕೃಷ್ಣಃ '' ರೂಪಿನಿಂದ ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸುವವನು. ಜನರನ್ನು ಮಾತ್ರವಲ್ಲ! ಸಕಲ ಗ್ರಹಾದಿಗೋಳಗಳನ್ನೂ ಅವು ನಿರಾಧಾರದಂತೆ ಕಂಡರೂ - ಮಹಾಕರ್ಷಣ ಶಕ್ತಿ ಸಂಪನ್ನ! ''ವಿಷ್ಣುನಾ ವಿಧೃತೇ ಭೂಮೀ ಇತಿ ವತ್ಸಸ್ಯ ವೇದನಾ''. ಆರಣ್ಯಕ ಋಷಿ ವತ್ಸರಿಗೆ ಈ ಸಾಕ್ಷಾತ್ಕಾರವಾಗಿದೆ.

ತನ್ನ ಗುಣಗಳಿಂದಲೂ, ಅತಿ ಮಾನುಷ ಅದ್‌ಭುತ ಕಾರ್ಯಗಳಿಂದಲೂ ಎಲ್ಲರನ್ನೂ ಆಕರ್ಷಿಸಿ ಮರುಳುಗೊಳಿಸುವವನು. ನಮ್ಮ ನಮ್ಮ ಪುಣ್ಯಪಾಪಗಳಿಂದ ಅಂಟುವ ಮಂಕಿನ ಮರುಳಲ್ಲ. ಬ್ರಹ್ಮದತ್ತ ಜ್ಞಾನಕೃತ ಅಜ್ಞಾನವೆನ್ನುತ್ತಾರೆ ಹಿರಿಯರು. ಈ ವಿಚಾರ ಕೇವಲ ದಾರ್ಶನಿಕ ಭೂಮಿಕೆಯೊಂದರಲ್ಲೇ ತದ್‌ಜ್ಞರಾದವರಿಗೂ ಆಶ್ಚರ್ಯವಾಗಿ ತೋರುವುದುಂಟು. ಹಾಗೆ ದ್ವಾಪರಾಂತ್ಯದ, ಹಾರ್ದಭಕ್ತರನ್ನು ಹುಚ್ಚುಗೊಳಿಸಿದಂತೆ, ನನಗಾಗಿಯೇ ಒಂದು ಮನಮೋಹನ ಭಂಗಿಯಲ್ಲಿ ಬಾರೋ ತಿಮ್ಮಪ್ಪಾ! ಈ ''ಮಾಲ್'' ಎಂಬ ಶಬ್ದ ತಮಿಳ್ ಉಲಿಯಲ್ಲಿ ಬಲು ಆಳ ಹಾಗೂ ಅಗಲವಾದ ಭಾವಾರ್ಥಕ! ಅತನು ಅನುಭಾವಿಗಳಿಗೆ ಹುಚ್ಚೇರಿಸುವವನೂ ಹೌದು. ಅವರಿಂದ ಹುಚ್ಚೇರಿಸಿಕೊಳ್ಳುವವನೂ ಹೌದು ಆಳ್ವಾರ್ ಆಚಾರ್ಯರದೆಲ್ಲಾ, ಏಕಾಂಗಿ ದೃಷ್ಟಿಯಲ್ಲ, ಉಭಯ ದೃಷ್ಟಿಯ ಅದೃಷ್ಟವಂತರು! ಅಂತೆಯೇ ಅವರನ್ನು,

''ಉಭಯ ವೇದಾನ್ತಿಗಳು ಉಭಯ ವೇದಾನ್ತ ಪ್ರವರ್ತಕರು ವೇದಾನ್ತ ವಿಜ್ಞಾನ ಸುನಿಶ್ಚಿತಾರ್ಥಾಃ''

ಎಂದೆಲ್ಲಾ ಕರೆಯುವುದು. ವಿಜ್ಞಾನಿ ಕಲಾವಂತರು! ಕಲೆಗಾರರಾದ ವಿಜ್ಞಾನಿಗಳು. ಬುದ್ಧಿಯನ್ನು ಹೃದಯೇಶ್ವರನಿಗೆ ಅರ್ಪಿಸಿಕೊಂಡವರು! ರಚನಾತ್ಮಕ ಗ್ರಾಮ, ದೇಶ, ವಿಶ್ವದ ಸರ್ವಸೇವಕರು. ಅದರಲ್ಲೂ ಸ್ವಯಂ ಸೇವಕರು.

ಸಂಪೂರ್ಣ ಅಹಿಂಸಕ ಕ್ರಾಂತಿಕಾರರು!

ತಮಿಳ್ ತಿರಳ್ ೬-೧೦-೯

ವನ್ದಾಯ್ ಪೋಲೇ ವಾರಾದಾಯ್, ವಾರಾದಾಯ್ ಪೋಲ್ ವರುವಾನೇ
ಶೆನ್ದಾಮರೈಕ್ಕಣ್ ಶೆಙ್ಗನಿವಾಯ್ ನಾಲ್‌ತೋಳಮುದೇ ಎನದುಯಿರೇ
ಶಿನ್ದಾಮಣಿಹಳ್ ಪಹರಲ್ಲ್ಯ ಪಹಲ್ ಶೆಯ್ ತಿರುವೇಙ್ಗಡತ್ತಾನೇ
ಅನ್ದೋ ಅಡಿಯೇನ್ ಉನಪಾದಮ್ ಅಹಲಹಿಲ್ಲೇನ್ ಇರೈಯುಮೇ

ಕನ್ನಡ ನೆರಳ್

ಬಂದಿಹವೋಲ್ ಬಾರದೆ ಇಹನೇ! ಬಾರದವೋಲ್ ತ್ಹಾ ಬರುವವನೇ
ಕೆಂದಾವರೆ ಗಣ್ ಚೆಂಬಣ್‌ದುಟಿಯಾ! ನಾಲ್‌ದೋಳಮ್ಯತಾ, ಎನ್ನುಸಿರೇ
ಚಿಂತಾಮಣಿಗಳ ಹೊಗರ್ ಇರುಳುಮ್ ಹಗಲ್‌ಗೈಯ್ಯುವ ಸಿರಿವೇಂಕಟದವನೇ
ಅಂದೋ! ಅಡಿಗನು ನಾ ನಿನ್ ಪಾದವ ಅಗಲಿರಲಾರೆನು ಅರೆಚಣವೂ!

ತಮ್ಮ ಬಯಕೆಯಂತೆ ದೇವರು ಬಾರ! ಇನ್ನಿದೋ ನಾನು ಒಂದು ಕ್ಷಣವೂ ತಾಳಲಾರೆ ಎನ್ನುತ್ತಾರೆ ಕುರುಹೂರ್ ಶಠಕೋಪರು. ತಿಮ್ಮಪ್ಪ ಮನದಲ್ಲಿ ಮಾತ್ರ ಸಾಕ್ಷಾತ್ಕಾರ ನೀಡುತ್ತಾನೆ. ಇದು ವಿಶದ ವಿಶದತರವಾಗುವಾಗ ಹೊರಗಣ್ಣಿಗೂ ಕಟ್ಟಿದಂತಾಗುತ್ತದೆ. ಮುಚ್ಚಿದ್ದ ಕಣ್ಣು ತೆರೆದರೆ ಏನೂ ಎಲ್ಲ! ಈ ತೊಳಲಿಕೆ ಬಳಲಿಕೆಯ ವರ್ಣನೆಯೇ ತಿರುವಾಯ್ಮೊಳಿಯ ೯೮ ದಶಕಗಳಿಂದ, ಅಲ್ಲಿಯವರಿಗೂ ಇವರ "ಕಾಣ್ಗೆ" ಎಲ್ಲವೂ ಮಾನಸ ಮಾತ್ರ! ಈ ರಹಸ್ಯ ಓದುಗರಿಗೆ ಮನದಟ್ಟಾಗಿರಲಿ. ಎಂತಹವರಿಗೂ ಈ ಏರುಬೀಳು ಇದ್ದೇ ಇರುತ್ತದೆ. ೯೯ನೇ ದಶಕದಲ್ಲಿ "ವಿಶದತರ ಸಾಕ್ಷಾತ್ಕಾರ! ೧೦೦ನೆಯ ಕೊಟ್ಟ ಕೊನೆಗೆ **'ಪರಿಪೂರ್ಣ ಭಗವತ್ ಪ್ರಾಪ್ತಿ'!** ಈ ಉತ್ತರೋತ್ತಮ ಭೂಮಿಕೆಗಳ ಪರಿಚಯ ಮುಮುಕ್ಷುಗಳಿಗಾಗಲಿ" ಎಂಬ ಲೋಕ ಕಲ್ಯಾಣ ದೃಷ್ಟಿಯೊಂದರಿಂದಲೇ ಈ ಮಾರಪ್ಪನನ್ನು ಸರ್ವೇಶ್ವರ ಮಿಲಿಮಿಲಿ ಗುಟ್ಟಿಸುವುದು. **"ಶರಣರ ಈ ದಿವ್ಯವೇದನೆಯ ದುಃಖ, ಮಾನವ ಮುಮುಕ್ಷುಗಳ ಸುಖ!"**

ಆಶ್ರಿತರ ಬಳಿಗೇ ಬಂದಂತೆ ತೋರುವಿ! ಬರದಿರುವಿ! ದೇವರೇ! ನೀನು ಬರುವುದಿಲ್ಲ ಎಂದಿದ್ದಾಗ ಬಂದೇ ತೀರುವಿ! ಮೊದಲು ದೇವರನ್ನು ಒಳಗೇ ಕಂಡ ತೃಪ್ತಿ! ಕೊನೆಗೆ ಹೊರಗೆ ಕಾಣದ ಅತೃಪ್ತಿ! ಇದನ್ನೇ,

"ವನ್ದಾಯ್ ಪೋಲೇ ವಾರಾದಾಯ್ ವಾರಾದಾಯ್ ಪೋಲ್ ವರುವಾನೇ!"

ಎನ್ನುವುದು. ಬರುವುದು, ಬಾರದಿರುವುದು ಹರಿಯಿಚ್ಛೆ! ನರರಾದ ನಾವೆರಡಕ್ಕೂ ಸಿದ್ಧರಾಗಿರಬೇಕಾದರೂ, ನಿರಾಸೆಯ ಝಳಕನ್ನು ಮಹಾ ವಿಶ್ವಾಸಕ್ಕೇರಿಸಿಕೊಳ್ಳಬೇಕೆಂಬುದೂ ಇಲ್ಲಿನ ಮರ್ಮ.

ಫಲಾಸಕ್ತರಿಗೆ ಈ ವಿಲಕ್ಷಣವಾದ ವಾಕ್ಯವನ್ನು ಅನ್ವಯಿಸುವಾಗ ಆಹಾ ನಮಗೆ ದೇವರು ಸಿಕ್ಕಿಬಿಟ್ಟ. ನಾವೆಷ್ಟು ಧನ್ಯರೋ! ಈ ಸಾತ್ವಿಕ "ಸ್ಮಯ" ಎಂದರೆ ಗರ್ವ ಬಂದು ಬಿಡುತ್ತದೆ. ಅದು ಸಾಕ್ಷಾತ್ಕಾರವಲ್ಲ. ಕರುಣಾಳುವಿನ ಒಂದು ಹಂತದ ಆಶ್ವಾಸನೆ ಮಾತ್ರ, ಎಂದು ತಿಳಿದರೇ ಒಳಿತು, ಮುಂದೆ ನಮ್ಮ ವಿಕಾಸವಾಗುವುದು. ಇಲ್ಲದಿದ್ದರೆ ದಾರಿ ತಪ್ಪಿ ನಮಗೂ, ಲೋಕಕ್ಕೂ ನಷ್ಟವಾದೀತು. ಈ ಎಚ್ಚರಿಕೆ ಇಲ್ಲಿದೆ.

ತಮ್ಮ ಮಾನಸ ಸಾಕ್ಷಾತ್ಕಾರವನ್ನೂ, ತಜ್ಜನ್ಯವಾದ ತಮ್ಮ, ಸೇರ್‌ಪಡೆಯ ಅವಿಚ್ಛೇದವನ್ನೂ ತೋಡಿಕೊಳ್ಳುತ್ತಾರೆ. ಶೆಮ್ ತಾಮರೈಕ್ಕಣ್ = ಸಕಲ ತಾಪಗಳೂ ಆರುವಂತೆ ತಂಪಾಗಿಸುವ, ಆರಕ್ತ ಪಂಕಜಾಕ್ಷಾ! ಕೆಂದಾವರೆಗಣ್ಣಪ್ಪಾ! ಶೆಮ್ ಕನಿವಾಯ್ = ಕಳಿತು ಕೆಂಪಾಗಿರುವ ಹಣ್ಣನ್ನೂ ಮೀರಿಸಿರುವ ತುಟಿಯುಳ್ಳವನೇ! ನಿನ್ನ ಅಧರ ರಕ್ತಿಮೆಯ ಎಲ್ಲೋ ಸ್ವಲ್ಪಾಂಶವನ್ನು ಅಲ್ಲಿ ನೀನೇ ಇಟ್ಟಿದೀಯೆ! ಪೂರ್ಣೋಪಮಾನ ನಿನಗೆಲ್ಲಿ ಲಭ್ಯ? ಅದರಲ್ಲಿ ನೀನು ಬಡವನೇ ಸೈ! ದೇವರ ಬಗೆಗೆ ನಮ್ಮ ನಮ್ಮ ಹೊಗಳು ತೆಗಳುಗಳೆಲ್ಲಾ ಬೇರೆ ಬೇರೆ ದೃಷ್ಟಾಂತಗಳ ಪ್ರಾಚೀನ ದೃಢ ಸಂಸ್ಕಾರದ ಶುಭಾಶುಭ ಫಲಗಳಷ್ಟೇ ಹೊರತು ನಿರಂಜನ ನಾರಾಯಣ ಎಲ್ಲದರಿಂದಲೂ ನಿರ್ಲಿಪ್ತ! ಒಂದು ರೀತಿಯಲ್ಲಿ ತೆಗಳು-ಹೊಗಳುಗಳೂ, ಹೊಗಳು-ತೆಗಳೇ ಆಗಿಬಿಡಬಹುದು.

ನಾಲ್ ತೋಳ್ ಅಮುದೇ = ಕಲ್ಪಕ ತರುವಿನಂತೆ ಹರಗಿರುವ ಚತುರ್ಭುಜಾಽಮೃತನೇ! ಎನದು ಉಯಿರೇ = ನನ್ನ ಪ್ರಾಣಾನಾಂ ಪ್ರಾಣನಾಥನೇ! ನನ್ನ ಭಾಗಕ್ಕೆ ಈ ಸುಂದರ ದಿವ್ಯಾಂಗ ರೂಪ ಸೌಂದರ್ಯ ತೋರಿ ನನ್ನನ್ನುಳಿಸಿದೆ! ಈ ತಿಮ್ಮಪ್ಪನ ಶ್ರೀಮೂರ್ತಿಯಂತೆಯೇ ಈ ಆಳ್ವಾರ್ ಶರಣರಿಗೆ, ಈ ಗಿರಿಯೂ ಸ್ವಚ್ಛ ಮಾನಸದರ್ಶನ ನೀಡುತ್ತಿದೆ. ಶಿನ್ದಾಮಣಿಹಳ್ = ಜ್ಯೋತಿಷ್ಮತೀತೆಗಳಂತೆ,

ಚಿಂತಾಮಣಿರತ್ನಗಳು, ಪಹರ್ = ತಮ್ಮ, ಹೊಗರಿನಿಂದ, ಅಲ್ಲ್ = ಇರುಳನ್ನೂ, ಪಹಲ್ ಶೆಯ್ = ಹಗಲಾಗಿಸುವಂತಹ, ತಿರುವೇಙ್ಗಡತ್ತಾನೇ! = ಶ್ರೀಗಿರಿಯ ದೊರೆಯೇ! ಆ ವೈಕುಂಠದಲ್ಲಿ ಹೇಗೆ ಹಗಲು ಇರುಳೆಂಬ ಭೇದವಿಲ್ಲವೋ ಈ ಭೂವೈಕುಂಠದಲ್ಲೂ ಹಾಗೆಯೇ ಎನ್ನುತ್ತಿರುವಂತೆಯೇ ಶರಣರ ಬಾಹ್ಯ ಸಾಕ್ಷಾತ್ಕಾರದ ಬಯಕೆ ಕೆರಳಿ ಬಿಡುತ್ತದೆ. ವಿಷಾದ ಯೋಗಕ್ಕೆ ಸ್ವಾಮಿ ಕರೆತರುವುದರ ವರ್ಣನೆ ಮುಂದೆ!

ಅನ್ನೋ = ಅಕಟಾ! ರಸಸ್ವರೂಪನೂ, ರಸವಂತನೂ ರಸದಾತನೂ ರಸವರ್ಧಕನೂ ಆಗಿ ಹೀಗೆ ನೀನಿದ್ದರೂ ಬಾಹ್ಯ ಸಾಮೀಪ್ಯ ಮಾತ್ರ ಸಿಗಲಿಲ್ಲವಲ್ಲಾ! ಇದೀಗ ದಾಸನ ವ್ಯಥೆ! ಅಡಿಯೇನ್ = ನಿನ್ನ ದಯೆಯೊಂದರಿಂದಲೇ ನಿನ್ನಡಿದಾಸನೇ ಆದವ ಈತ, ಜಡದಂತೆ ಶೂನ್ಯನಾಗಿರಬೇಕಾದ "ಅತ್ಯಂತ ಪಾರತಂತ್ರ್ಯ"ವೆಂಬ ಸ್ವಸ್ವರೂಪ ಯಾಥಾತ್ಮ್ಯ ಜ್ಞಾನ ಎಂಬುದೂ ನಿನ್ನಿಂದಲೇ ವಿಕಸಿತವಾಗಿದೆ. ಆದರೂ, ನಿನ್ನ ನಿತ್ಯೇಚ್ಛಾ ರೂಪವಾದ ಶಿವಚ್ಛಂದದಿಂದ ಚೈತನ್ಯ ಇದೆಯಷ್ಟೆ. ಅದು ಸುಮ್ಮನಿರಿಸದು. ಚೈತನ್ಯ ಕಾರ್ಯವಾಗಿ ಎದೆ ಬಡಿದುಕೊಳ್ಳುತ್ತದೆ. ಈ ಮಾನಸ ಮಾತ್ರ ಸಾಕ್ಷಾತ್ಕಾರಕ್ಕೆ ಗೋಚರವಾಗುತ್ತಿರುವ, ಉನಪಾದಮ್ = ನಿನ್ನ ಶ್ರೀಪಾದಗಳನ್ನು, ಅಹಲ = ಅಗಲಲು, ಎಂದರೆ, ಆ ನೋಟದ ಹರವಿಗಾಗಿ ವೇಗ ನೀಡಲು, ಇರೈಯುಮ್ = ರೆಪ್ಪೆಮುಚ್ಚಲೂ ಸಹ, ಕಿಲ್ಲೇನ್ = ಶಕ್ತನಲ್ಲ. ನಿರ್ ನಿಮೇಷ "ತ್ರಾಟಕಾಕ್ಷಿ"ಯೆಂಬ ಯೋಗಾವಸ್ಥೆಗೆ ಈ ಶರಣರನ್ನು ತಿಮ್ಮಪ್ಪನೇ ಏರಿಸಿದ್ದಾನೆ.

ತಮಿಳ್ ತಿರಳ್ ೬-೧೦-೧೦

ಅಹಲಕಿಲ್ಲೇನ್ ಇರೈಯುಮೆನ್ನು ಅಲರ್‌ಮೇಲ್ ಮಙ್ಗೈ ಉರೈ ಮಾರ್ವಾ
ನಿಹರಿಲ್ ಪುಹಳಾಯ್ ಉಲಹಮ್ ಮೂನ್ನುಡೈಯಾಯ್ ಎನ್ನೈಯಾಳ್ವಾನೇ
ನಿಹರಿಲ್ ಅಮರರ್ ಮುನಿಕ್ಕಣಙ್ಗಳ್ ವಿರುಮ್ಬುಮ್ ತಿರುವೇಙ್ಗಡತ್ತಾನೇ
ಪುಹಲೊನ್ನಿಲ್ಲಾ ವಡಿಯೇನ್ ಉನ್ನಡಿಕ್ಕೀಳ್ ಅಮರ್‌ನ್ದು ಪುಹುನ್ದೇನೇ!

ಕನ್ನಡ ನೆರಳ್

"ಅಗಲಿರಲಾರೆನು ಚಣ" ವೆಂದಲರ್ ಮೇಲ್ ಮಹಿಳೆಯನುರೆ ಎದೆಗೊಳ್
ನಿಖರಣೆಯಿಲ್ಲದ ಪೊಗಳಾಗೀ ಲೋಕವ ಮೂರನೂ ಅಡೆದೊಡೆಯಾ! ಎನ್ನಾಳುವನೇ
ನಿಖರಣೆಯಿಲ್ಲದ ವಮರರು ಮುನಿಗಣಗಳು ಹರಸುವ ಸಿರಿವೇಂಕಟದವನೇ
ಹುಗಲೊಂದಿಲ್ಲದ ಅಡಿಗನು ನಾ ನಿನ್ ಅಡಿ ಕೆಳಗಮರುತ ಹುಗುವಡೆದೆನಲಾ

ಹಿಂದೆಲ್ಲಾ ನಾವು ಅನುಭವಿಸಿದ ೯ ಹಾಡುಗಳೂ, ಶರಣಾಗತಿಗೇ ಸತ್ ಪಾತ್ರನಾದ ಶರಣ್ಯ ತಿಮ್ಮಪ್ಪನ ಸ್ವರೂಪವೇನೆಂಬುದನ್ನು ಚೊಕ್ಕವಾಗಿ ವಿವರಿಸಿದವು. ಅವನೋರ್ವನೇ ಜಗತ್ತನ್ನು ರಕ್ಷಿಸಬಲ್ಲವನೇ ಹೊರತು ಮತ್ತಾರೂ ಅಲ್ಲ. ಹೀಗೆ ಅನನ್ಯ ರಕ್ಷಕತ್ವ ಎಂಬ ಅತನ ಸ್ವರೂಪ ಶೋಧನೆಯನ್ನು ಆಳ್ವಾರ್ ಆರಂಭಿಸಿ ತಾವು ಅತನಿಗೆ ಅತ್ಯಂತ ಶೇಷಭೂತರೆಂದೂ, ಪ್ರತಿ ಬಂಧಕವನ್ನು ಹೊಂದಿರುವ ಮಹಾಪಾಪಿ ತಾವೆಂದೂ, ಶೇಷಿಯಾದವನೇ ಶರಣ್ಯನೆಂದೂ, ತಮ್ಮ ಅಡೆತಡೆಗಳನ್ನು ಹೋಗಲಾಡಿಸಲೇ ಶ್ರೀನಿವಾಸ ಚಕ್ರಹಿಡಿದಿರುವನೆಂದೂ, ಇತ್ಯಾದಿಯಾಗಿ ಭಗವಂತನಿಗೇ ಶರಣ್ಯತೆಯ ಪಟ್ಟ ಕಟ್ಟಿದರು.

ಆದರೂ ತಿಮ್ಮಪ್ಪ ವಿಳಂಬ ಗೈದುದನ್ನು ಸಹಿಸಲಾರದೆ ತಮ್ಮಲ್ಲಿ ಏನೇನೂ ಸಾಧನಾಂಶ ಇಲ್ಲವೇ ಇಲ್ಲವೆಂಬ ಅಕಿಂಚನ್ಯಪುರಸ್ಸರವಾಗಿ, ಶ್ರೀ ಮಹಾಲಕ್ಷ್ಮಿಯ ಪುರುಷಕಾರದಿಂದ ಸ್ವಾಮಿಯಲ್ಲಿ ಕೈಂಕರ್ಯ ಪ್ರಾಪ್ತಿಗಾಗಿ ಪರಿಪೂರ್ಣ ಶರಣಾಗತಿ ಎಸಗುವುದೇ ಈ ೧೦ನೆಯ ಹಾಡು. ಇಲ್ಲಿನ ತಮಿಳ್ ಪದಗಳು ಸಂಸ್ಕೃತದ ದ್ವಯಮಂತ್ರದಂತೆಯೇ ಅಳವಟ್ಟಿವೆ. ಆದರೂ "ಅಹಲಹಿಲ್ಲೇನ್" ಎಂಬೀ ನಮ್ಮಾಳ್ವಾರರ ಸಿರಿಬಾಯಿಂದ ಹೊರಬೀಳುವ, ದ್ರಾವಿಡ ಮಂತ್ರರತ್ನದಲ್ಲಿ "ಅಡಿಯೇನ್" ಎಂಬ ಪ್ರಪನ್ನಾSಧಿಕಾರಿಯ ಸ್ವರೂಪ ನಿರ್ದೇಶಕ ಶಬ್ದವಿದೆ. ಕಠಶಾಖೆಯ ಆ ಮಂತ್ರದಲ್ಲಿ ಅದು ಅರ್ಥಾತ್ ಸಿದ್ಧವಾಗುತ್ತದೆ. ಶರಣು ಮಾಡುವವನ(ಳ) ನಿಷ್ಪ್ರಪ್ಪ ಸ್ವಸ್ವರೂಪವನ್ನು ಕೊಟ್ಟಕೊನೆಯ ಶರಣಾಗತಿ ಘಟ್ಟದಲ್ಲಿ, ಅದು ಪರಿಷ್ಕರಿಸಲ್ಪಟ್ಟು ಶಬ್ದವಾಚ್ಯವಾಗಿಯೇ ಇರುವುದು ಇಲ್ಲಿನ ವಿಶೇಷ!

"ಆಳ್ವಾರರೇ! ನೀವಿಷ್ಟು ಸ್ಪಷ್ಟವಾಗಿ ಅಂದದ್ದು ಸರಿ. ನಿಮ್ಮವತಿಯಿಂದಲೂ ಏನಾದರೊಂದು ಇರಬೇಡವೇ? ನೀವೇನು ಸಾಧನೆ ಗೈದಿದ್ದೀರಿ ಹೇಳಿ". ನನ್ನ ಕಡೆಯಿಂದಲೂ ಅವಶ್ಯವೆಂದರೆ ನಿನ್ನ ಪೂರ್ಣ "ಸಿದ್ಧೋಪಾಯತ್ವ"ವೆಂಬ ಸ್ವರೂಪಕ್ಕೆ ನ್ಯೂನತೆ ಬಂದೀತು. ನೀನು ನಿರಪೇಕ್ಷ ಉಪಾಯನಲ್ಲವೋ? ಅಕಿಂಚನ್ಯ - ಸಾಧನ ಶೂನ್ಯಭಾವವೇ ನನ್ನ ಬಂಡವಾಳ.

ಇರೈಯುಮ್ = ಕ್ಷಣಕಾಲವೂ. ಇದು ಮಹಾಮಾತೆ, ಸ್ವಾಮಿಯಲ್ಲಿ ಹೇಳುತ್ತಿರುವ ಮಾತು. ಅಹಲ ಕಿಲ್ಲೇನ್ = ನಿನ್ನನ್ನು ಅಗಲಿರಲು ನಾನಿದೋ ಸಮರ್ಥಳಲ್ಲ. ಎನ್ನು = ಎಂದು. ನಿತ್ಯಾನಪಾಯಿನಿಯಾದವಳೂ ಇಂತು ಹೇಳಬಹುದೇ? ಪಕ್ಕದೊಡನೆ ವಿಶ್ಲೇಷ ಪ್ರಸಂಗವೇ ಇಲ್ಲವಲ್ಲಾ! ನಾವಾದರೆ ನಮ್ಮ ಕರ್ಮದಿಂದ ಶರಣ್ಯನನ್ನು ಬಿಡಬಹುದು. ಅವಳನ್ನು ಸರ್ವಸ್ವತಂತ್ರ ಒಡೆಯ ಬಿಡಬಹುದು. ಆ ಸ್ವರೂಪ ವೈಶಿಷ್ಟ್ಯ ಲಕ್ಷ್ಮಿಯನ್ನೂ ಗಾಬರಿ ಪಡಿಸುತ್ತದೆ. ಆಕೆ ಹಾಗೂ ನಾವು "ಅಗಲಿರಲಾರೆವು" ಎಂಬುದಕ್ಕೆ ಬೇರೆ ಬೇರೆ ಕಾರಣಗಳನ್ನು ಹೊಂದಿದ್ದೇವೆ. ಆಕೆ ಭಯಶಂಕಿತಳು! ಪುರುಷೋತ್ತಮನ ಬಗೆಗೆ ನಾರೀಣಾಂ ಉತ್ತಮೆಯಾದವಳು ಹಾಗೆ ಇರುವುದೇ ಭೂಷಣ. ಇಲ್ಲದೆ ಇದ್ದರೆ "ನವೋನವೋಭವತಿ" ಎಂಬ ಸರ್ವೇಶ್ವರನ "ನಿತ್ಯಾನಪೂರ್ವತೆ" ಹೊಸಹೊಸತನ ಶೋಭಿಸದು. ದಿವ್ಯದಂಪತಿಗಳ ನಿತ್ಯಯೋಗವನ್ನು, ಹೆಣ್ಣು ಹೃದಯದ ಮಾಧ್ಯಮದಿಂದ ಈ ಪ್ರಪನ್ನಜನಕೂಟಸ್ಥರು, ಅನುವದಿಸಿರುವುದು, ಅವರಿಂದಲೇ ಪಡೆದ ಪ್ರಸಾದ ಅಂತೆಯೇ ನಮ್ಮಾಳ್ವಾರ್ ನಾಯಕೀ ಅವಸ್ಥೆ! ಆಗ "ತಿರುಮಹಳ್‌ಕೊಲ್" ಎಂದೇ ತಾಯ್‌ಮಾತು, ಅಲ್ಲಲ್ಲೇ ಬಂದಿರುವುದು.

ಲಕ್ಷ್ಮಿಯ ಈ ಅತ್ಯಭಿನಿವೇಶ, ಆಗದುದನ್ನೂ ಶಂಕಿಸುವ ಭೀರುತೆಯೇ "ಪರಮಭಕ್ತಿ". ಗಾಢೋಪಗೂಢಳಾಗಿದ್ದರೂ, ಆತನ ಸೌಭಗಾತಿಶಯದ ಮೇಲ್ಮಟ್ಟದ ಅನುಭವದ ಗಾಢತೆಯಿಂದಲೇ ವಿರಹ ಸಂಭಾವನೆ ಈಕೆಯನ್ನು ಬಿಡದು! ಅತ್ಯಂತ ಉತ್ತಮೋತ್ತಮವಾದ ಪ್ರೇಮದ ಭೂಮಾನವಸ್ಥೆಯನ್ನು ತಿಳಿಸಲು, ಪ್ರೇಮಪುತ್ಥಳಿಯೇ ಸರಿ! ಇದನ್ನು ಈ ಆಳ್ವಾರ್, ಕೃತಿಯ ಕೊನೆಯ ಘಟ್ಟದಲ್ಲಿ ಹೊಂದಿಯೇ ಬಿಡುವರು. ಸರ್ವಸ್ವತಂತ್ರನೇನೂ ಈಕೆಯನ್ನೂ ಬಿಡ!

ನ ಜೀವೇಯಂ ಕ್ಷಣಮಪಿ!

ಈ ಪರಸ್ಪರ ಬಿಡದಿರುವ ಉಭಯ ಸ್ಪರ್ಧೆಯ ಸೌಂದರ್ಯವನ್ನು ಆಂಡಾಳ್ ಇವರ ಪಿತ್ರಾರ್ಜಿತ ಆಸ್ತಿಯಿಂದಲೇ ಇನ್ನೂ ವೃದ್ಧಿಪಡಿಸಿ, ತಿರುಪ್ಪಾವೈಯ ೧೮, ೧೯ ಮತ್ತು ೨೦ನೆಯ ಹಾಡುಗಳಲ್ಲಿ "ನಿತ್ಯಯೋಗ"ದ ಪರಿಪೂರ್ಣ ಮನೋಜ್ಞ ವರ್ಣನೆ ಗೈದಿದ್ದಾಳೆ! ಇಲ್ಲಿನ "ಅಲರ್‌ಮೇಲ್" ಶಬ್ದದ ಸ್ವಾರಸ್ಯವೇನು? "ಮಂಗೈ" ಮಡದಿ ಎಂಬುದಷ್ಟೇ ಸಾಕಾಗಿತ್ತಲ್ಲಾ? ಪತಿಗೂ ಈಕೆ ಭೋಗ್ಯಳೆಂಬುದೂ, ಆ ಅನುರೂಪ್ಯದ ಪರಿಮಳವೂ ಇವಳು ನಿತ್ಯವಾಸ ಮಾಡುವ "ತಾವರೆ"ಯಲ್ಲೇ ಕಾಣುತ್ತದೆ. ಅರಳಿರುವ ಕಮಲದ ಮೇಲಿರುವ ತುಂಬಿದ ಮಹಿಳೆಯ, ಮೇಲೆ ಉರೈ = ನಿತ್ಯವಾಸಕ್ಕಾಗಿ, ಮಾರ್ವ = ತನ್ನ ಎದೆಯಿಟ್ಟಿರುವವನೇ. ಆಕೆ, ಈತನ ಎದೆಯ ಮೇಲೆ ಏಳದಂತೆ ಬಿಗಿದಿರುವವಳು! ಈ ಉಭಯಾರ್ಥ ಇಲ್ಲಿನ ಸೂಕ್ಷ್ಮತೆ! ಅಂದರೆ, ಅನ್ಯೋನ್ಯ ದಿವ್ಯ ದಾಂಪತ್ಯದ ಆಳವನ್ನು, ಪ್ರಪತ್ತಿಗೆ ಬೇಕಾದ ಟಾನಿಕ್ಕಾಗಿ ಭಾವಿಸುವ ಈ ಶರಣರ, ಭಾವ ಪೋಷಕವಾದ ವಾಗ್ಮಿತೆ! ನಮ್ಮಂಥವರಿಗೆ ನಿತ್ಯಯೋಗದ ಚೇತೋಹಾರಿ ಶಿಕ್ಷಣ!

ಹೀಗೆ ಯಾವಾಗಲೂ ಜಗನ್ಮಾತೆಯೂ ವಿಶ್ವಪಿತನೂ ಸೇರಿಯೇ, ಅನ್ಯೋನ್ಯ ಅತಿಕುತೂಹಲಿಗಳೂ ಆಗಿರುವುದರಿಂದ, ಶ್ರೀಮನ್ ನಾರಾಯಣನಲ್ಲಿ ಶರಣು ಮಾಡುವ ನನಗೇನು ಕೊರೆ! ಪ್ರಪತ್ತಿಗಾಗಿ ಸಮಯ ಹುಡುಕಬೇಕಿಲ್ಲ. ನನ್ನ ಅಪರಾಧಗಳನ್ನೂ ಸರ್ವಸ್ವತಂತ್ರನ ಸ್ವಾತಂತ್ರ್ಯವನ್ನೂ ನೆನೆದು ದಾಸ, ಹಿಂದೇಟು ಹಾಕಬೇಕಿಲ್ಲ.

ಕಾಕಾಸುರ, ರಾವಣನಿಗಿಂತಲೂ ತಪ್ಪಿತಸ್ಥ, ರಾವಣ ಮುಟ್ಟಲಿಲ್ಲ! ಕಾಗೆ ಸೀತೆಯ ಎದೆಯನ್ನೇ ಕುಕ್ಕಿತು! ಸೀತಾಸಾನ್ನಿಧ್ಯದಿಂದ ಬದುಕಿಕೊಂಡಿತು. ಅದಿಲ್ಲದೆ ರಾವಣ ಸತ್ತ! ಯಾವ ಒಳ್ಳೆಯ ತಾಯಿಯೂ ಮಕ್ಕಳ ತಪ್ಪುಗಳನ್ನು ಗಂಡನ ಬಳಿ ಹೇಳುವುದೇ ಇಲ್ಲ. ಇನ್ನೂ ಪತಿಯು ಮಕ್ಕಳ ಬಗ್ಗೆ ಇಟ್ಟಿರುವ ತಪ್ಪುಭಾವನೆಗಳನ್ನು ನೀಗಿಸಿ ಶಾಂತಿಯನ್ನೇ ತರುತ್ತಾಳೆ. ತಂದೆಯ ಮುಂಗೋಪವನ್ನಡಗಿಸಿ ಮಕ್ಕಳಿಗೂ ಪ್ರಿಯವಾಗುವಂತೆ ಒಳ್ಳೆಯ ಬುದ್ಧಿ ಹೇಳುತ್ತಾಳೆ. ಮಕ್ಕಳ ಸೇವೆ ಮಾಡುತ್ತಾಳೆ.

ರಾಮ ವಿರಹದಲ್ಲೂ ಅತ್ತ ರಾವಣನಿಗೂ "ತೇನಮೈತ್ರೀ ಭವತುತೇ" ನಡುವೆ ಒಂದು ಹುಲ್ಲುಕಡ್ಡಿಯಿಟ್ಟು ಅದಕ್ಕೆ ಹೇಳುವಂತೆ, ನನ್ನ ಗಂಡ ಶರಣಾಗತ ವತ್ಸಲ. ಆತ ಕೋಸಲೇಶ್ವರ. ನೀನು ಲಂಕೇಶ್ವರ. ಪಾದಕ್ಕೇನು ಅಡ್ಡ ಬೀಳಬೇಡ. ಗೆಳೆತನ ಬೆಳಸು ಎನ್ನುತ್ತಾಳೆ.

ರಾವಣ ವಧವಾದ ಮೇಲೆ, ವಿಜಯ ವೃತ್ತಾಂತ ಕೇಳಿ ಅಂತಸ್ಸಂತೋಷದಿಂದ ಸ್ತಬ್ಧಳಾಗಿದ್ದ ಸೀತಾಮಾತೆಯನ್ನು ಕುರಿತು ಒಂದು ವರ ಕೇಳುತ್ತಾನೆ, ಸಂದೇಶವಾಹಕ ರಾಮಭಂಟ. ನಿನ್ನ ಈ ಅಶೋಕವನದ ಪಹರೆಗಾತಿಯರು ೧೦ ತಿಂಗಳೂ ನಿನಗೆ ಬಲು ಮನನೋಯುವಂತೆ ಹೆದರಿಸಿದ್ದಾರೆ! ಅವರಿಗೆ ತಕ್ಕಶಾಸ್ತಿ "ಅವರ ಚಿತ್ರವಧ", ನನಗಿದೋ "ಹೂಂ" ಅನ್ನು! ಎಂದು.

ಆಗ ಸ್ತ್ರೀಶಕ್ತಿ ಏನೆನ್ನುವುದನ್ನು ಜಗನ್ಮಾತೆ ಆಂಜನೇಯನಿಗೂ ತೋರಿಸುತ್ತಾಳೆ. ಕರುಣೆಯೇ ಸ್ತ್ರೀಯರ ಮಹಾ ಶಕ್ತಿ! ಯಾರು ತಾನೇ ತಪ್ಪು ಮಾಡರು? "ನಕಶ್ಚಿತ್ ನ ಅಪರಾಧ್ಯತಿ" ಮಾಯಾಜಿಂಕೆಯ ಬಯಕೆ, ಲಕ್ಷ್ಮಣನನ್ನೂ ಶಂಕಿಸಿ ಪಂಚವಟೀ ಆಶ್ರಮದಿಂದ

ಹೊರಗಟ್ಟಿದ್ದು ನನ್ನ ತಪ್ಪಲ್ಲವೇ? ಎಷ್ಟೊಂದು ಕ್ಷಣಗಳು ಉರುಳಿಯೇ ಹೋದವು ನಿನ್ನ ಪ್ರಭು ಇನ್ನೂ ಇದ್ದಾರಲ್ಲಾ! ಅವರದು ತಪ್ಪಲ್ಲವೇ? ನೀನು ನನಗೆ ಸಂದೇಶ ತಲುಪಿಸುವುದಷ್ಟನ್ನೇ ಬಿಟ್ಟು, ಈ ಅಧಿಕ ಪ್ರಸಂಗ! ನಿನ್ನದು ತಪ್ಪಿಲ್ಲವೋ? ಪಾಪ ಈ ೭೦೦ ರಾಕ್ಷಸಿಯರು. ಅವರ ದೊರೆಯ ಆಣತಿ ನಡೆಸಿದ ಸತ್ ಸೇವಕಿಯರು. ನೀನೇ ಕಪಿಬುದ್ಧಿಯ ದುಷ್ಟ ಸೇವಕ ಎಂದು!

ಹೀಗೆಲ್ಲಾ ಸರ್ವರನ್ನೂ ಮನ್ನಿಸುವ ಕ್ಷಮಾ ಮೂರ್ತಿಯೇ ಸ್ತ್ರೀ ಮಾತೆಯಾಗಲು ಅರ್ಹೆ! ಇವಿಷ್ಟೂ ಮೊದಲ ವಾಕ್ಯದ ಭಾವಾರ್ಥಗಳಾದವು. 'ಶ್ರೀಮತ್' ಸಂಸ್ಕೃತದ ತಮಿಳ್ ಭಾಷ್ಯವಾಯಿತು!

ನಿಹರ್ ಇಲ್ ಪುಹಳ್ಅಯ್ = ನಾರಾಯಣ ಶಬ್ದ ಭಾಷ್ಯ ಇಲ್ಲಿಂದ, ನಾರ ಎಂದರೆ ಗುಣಗಳೆಂಬುದೂ ಅರ್ಥ. ನಿರ್ಗುಣಿಯಾದವ ಹೇಗೆ ಶರಣ್ಯನಾಗಬಲ್ಲ? ಗುಣಗಳಾವುವು? ಅವು ಎಂಥವು? ನಿರುಪಮವಾದ ಆಶ್ರಯಣಾನುಕೂಲವಾದ ಮಹಾಕಲ್ಯಾಣ ಗುಣನಿಧಿಯೇ! ಎದುರಿಗೇ ದರ್ಶನೀಡುತ್ತಿರುವುದೇ ಅತನ ಗುಣಕ್ಕೆ ಸಾಕು. ಇದು "ಸೌಲಭ್ಯ" ಎನಿಸುವುದು. ಶರಣ್ಯ ಕಣ್ಣಿಗೆ ಬಿದ್ದರೆ ತಾನೇ ಶರಣ, ಶರಣಾಗತಿ ಮಾಡಬಹುದು! ಮಹಾತಾಯಿಯೇ ಮಕ್ಕಳ ಮೇಲೆ "ನಾನೇ ನೋಡಿದೆ ಅಂದ್ರೆ" ಎಂದು ಗಂಡನ ಬಳಿ ಚಾಡಿ ಹೇಳಿದಾಗಲೂ "ಎನ್ ಅಡಿಯಾರ್ ಅದು ಶೆಯ್ಯಾರ್" ನನ್ನ ಸೇವಾ ಕುತೂಹಲಿಗಳು ಅದನ್ನೆಲ್ಲಾ ಮಾಡರು. ಒಂದು ವೇಳೆ ಹಾಗೆ ಗೈದರೂ ನನಗೆ ಅದು ರುಚಿಕರವೇ! ಎಂಬ ವಾತ್ಸಲ್ಯ. ಗಂಡನ ಪರೀಕ್ಷಾರ್ಥ ಹೆಂಡತಿ ಹೇಳಿದ್ದಷ್ಟೆ! ಸ್ವ-ಸ್ವಾಮಿಭಾವ ಸಂಬಂಧ ಜೀವ ದೇವ ಈರ್ವರದೂ ನಿತ್ಯ. ಬಿಟ್ಟೀತು ಹೇಗೆ? ಸ್ವಾಮಿತ್ವದ ಹೊಣೆಗಾರಿಕೆ ಇದೊಂದು ನಿರುಪಮ ಧರ್ಮ, ಉಲಹಮ್ಮೂನ್ನು ಉಡೈಯಾಯ್ = ಓ ವಿಶ್ವಪತಿಯೇ, ಸರ್ವೇಶ್ವರಾ! ಸರ್ವಸೃಷ್ಟಿ ಸರ್ವಸ್ಥಿತಿ ಕರ್ತಾ! ಮೊದಲ ಹಾಡಿನಲ್ಲೇ "ಉಲಹಂ ಉಂಡ ಪೆರುವಾಯಾ! ಎಂದು ಹೇಳಿದ ಸಂಹಾರವೂ ನಿರುಪಮ ಗುಣವೇ! ಸರ್ವಾವಸ್ಥೆಗಳಲ್ಲೂ ಸರ್ವಚೇತನ ಅಚೇತನಗಳ ರಕ್ಷೈಕದೀಕ್ಷಾ! ನೀನೇ ಸರ್ವಸ್ವಾಮಿ. ನಾವೆಲ್ಲಾ ನಿನ್ನ ಸ್ವತ್ತು. ಯಾವೊಂದು ಆತ್ಮಕ್ಕೂ ಜಡಪದಾರ್ಥಕ್ಕೂ ನಾವು ಒಡೆಯರಲ್ಲ. ಎಲ್ಲವೂ ನಿನ್ನದೇ ಆಸ್ತಿ. ನಮ್ಮದೇನೇನೂ ನಾSಸ್ತಿ! ಈ ಸಂಬಂಧ ಬರೀ ಕಾಗದ ಪತ್ರದಲ್ಲಿದ್ದರೇನು ಬಂತು? ಎನ್ನೈ ಆಳ್ವಾನೇ = ನೀಚಾತಿನೀಚ ಈ ದಾಸನಾದ ನನ್ನನ್ನು, ಸೇವೆಗೆ ಉಪಯೋಗಿಸಿಕೊಂಡು ಉಪಭೋಗಿಸಯ್ಯಾ! ಮಹತೋಮಹೀಯಾನ್ ಆದ ನೀನು, ಅಣೋರಣುಗಳಾದ ನಮ್ಮಾನ್ನಾಳುವುದೂ ನಿತ್ಯ ಕೈಂಕರ್ಯದಾನ, ಅದರ ಅವಿಚ್ಛಿನ್ನತೆಯ ಪ್ರದಾನವೇ ನಡೆಯಲಿ. ವಾತ್ಸಲ್ಯ, ಸೌಶೀಲ್ಯ, ಸ್ವಾಮಿತ್ವಗಳನ್ನು ಹೇಳಿದ್ದಾಯಿತು.

ಸೌಲಭ್ಯಕ್ಕೆ ಈ ಕ್ಷೇತ್ರವೇ ಸಾಕ್ಷಿ ಎನ್ನುವುದನ್ನು ವಿವರಿಸುವುದೇ **"ನಿಹರಿಲ್ ಅಮರರ್ ಮುನಿಕ್ಕಣಜ್ಗಳ್ ವಿರುಮ್ಬುಮ್ ತಿರುವೇಂಗಡತ್ತಾನೇ!"** ನಿರುಪಮರಾದ ಕಾಯಕ ಕೈಂಕರ್ಯಪರರೂ, ನಿತ್ಯಸೂರಿಗಳಾದವರೂ ಕೇವಲ ಗುಣಾನುಭವಗೈಯ್ಯುವ ಧ್ಯಾನಿ ಮೌನಿ ಸಮೂಹಗಳೂ, ಆಸೆ ಪಡುವಂತಹ, ಈ ಉಭಯ ಶ್ರೀಯುಳ್ಳ ತಿರುಪತಿಯಲ್ಲಿ ಸರ್ವಸುಲಭನಾಗಿ ನಿತ್ಯವಾಸ ಮಾಡುತ್ತಾ ಸರ್ವರಿಗೂ ಇಂದ್ರಿಯಗೋಚರನಾಗಿರುವವನೇ!

ನಾಲ್ಕನೆಯ ವಾಕ್ಯ "ಚರಣೌ ಶರಣಂ ಪ್ರಪದ್ಯೇ" ಉನ್ ಅಡಿಕ್ಕೀಳ್ = ಕಾಣುತ್ತಿರುವ ತಿಮ್ಮಪ್ಪಾ! ನಿನ್ನ ತಿರುವಡಿಗಳ ಕೆಳಗೆ, ಹಾಗೂ ನಿನ್ನ ತಿರುವಡಿಗಳೂ ನನ್ನ ಶಿರದ ಕೆಳಗೆ ಬರುವಂತೆ! ಅಂಗಾಲಿನ ಧೂಳಿನಲ್ಲಿ ಬಲು ಪಾವನಶಕ್ತಿ, ಪರಮಾತ್ಮನಸರ್ವ ಮೂರ್ತಿ ಪ್ರತ್ಯಂಗಗಳ ಮೂಲಾಧಾರಶಕ್ತಿ ಇದೆ. ದಾಸರ ಆಸರೆಗೆ ವಿನಯದ ಪರಾಕಾಷ್ಠೆಗೆ ನಮ್ಮ ತಲೆಯ ಮೇಲೆ ನಿನ್ನ ಅಂಗಾಲು ಸೋಂಕಲಿ!

ಪುಹಲ್ ಒನ್ನು ಇಲ್ಲಾ = ಅನನ್ಯತೆಯ ಸೂಚಕ. ರಕ್ಷಕಾಂತರ ಉಪಾಯಾನ್ತರ ಕಿಂಚಿತ್ತೂ ಇಲ್ಲದ, ಅಡಿಯೇನ್ = ಒಡೆಯನ ಈ ಅಡಿಯಾಳು. ಅಮರ್ನ್ದು = ನನ್ನ ತಲೆಗೂ, ಸ್ವಾಮಿ ಪಾದಕ್ಕೂ ಮಧ್ಯೆ ಸ್ವಲ್ಪವೂ ಛಿದ್ರವಿಲ್ಲದಂತೆ ಅಚ್ಛಿದ್ರವಾಗಿ, ಸರ್ವಥಾ ಯಥಾವಸ್ಥಿತವಾಗಿರುವಂತೆ, ಜೀವವರ್ಗಗಳ ತಲೆ, ಪ್ರಭುಪಾದ, ಅಷ್ಟೊಂದು ವಿಶಿಷ್ಟ ಒಂದೇ ವಸ್ತು ಎನ್ನುವಂತಾಗಬೇಕು. ಶಿರಃ ಪಾದಾದ್ಯೈತ! ಅವಿರತವಾಗಿ, ಪುಹುನ್ದೇನ್ = ಬಂದು ಬಿದ್ದು ಕೊಂಡಿರುವೆನಯ್ಯಾ! ಆಳ್ವಾರರ ದೃಢಾಧ್ಯವಸಾಯರೂಪಿ ಪ್ರಜ್ಞಾವಿಶೇಷ ಅವರಲ್ಲಿ ದೈವದತ್ತವಾಗಿರುವ ೨ನೆಯ ಹಂತದ ಸಹಜ ಸ್ವಧರ್ಮವಷ್ಟೇ ಹೊರತು, ಅದು ಸಾಧನವಲ್ಲ! ಈ ಜೀವ ಚೈತನ್ಯ ರೂಪನೂ ಚೈತನ್ಯ ಧರ್ಮ ಉಳ್ಳವನೂ ಆದುದರಿಂದ ಸಿದ್ಧೋಪಾಯ ಸ್ವೀಕಾರವೂ ಉಪಕಾರಸ್ಮೃತಿಯೂ ಸಹಜವಾಗಿರುವುವಷ್ಟೆ. ಪ್ರಪತ್ತಿಯಲ್ಲಿನ ಅಹಮಸ್ಮಿತೆಯನ್ನೂ, ಮಮಫಲಾಸಕ್ತಿಯನ್ನೂ ಕಳೆದುಕೊಳ್ಳುತ್ತಿದ್ದಾರೆ ಆಳ್ವಾರ್. ಸ್ಮೃತಿ ಸಂತಾನರೂಪಿ ಶಾಸ್ತ್ರ ವಿಹಿತ ಭಕ್ತಿಯಂತೆ ಇವರ ಪ್ರಪತ್ತಿಯಲ್ಲ. ರಾಗ ಪ್ರಾಪ್ತ. ರುಚಿಕಾರ್ಯವಾಗಿ ಭಗವತ್ ಕಟಾಕ್ಷೈಕ ಫಲವಾಗಿ ಬಂದುದಿದು.

ತಮಿಳ್ ತಿರಳ್ ೬-೧೦-೧೧

ಅಡಿಕ್ಕೀಳ್ ಅಮರ್‌ನ್ದು ಪುಹುನ್ದು ಅಡಿಯೀರ್ ವಾೞ್ಮಿನ್ ಎನ್ ಎನ್ನು ಅರುಳ್‌ಕೊಡುಕ್ಕುಮ್
ಪಡಿಕ್ಕೇಳಿಲ್ಲಾ ಪೆರುಮಾನೈ ಪಳನ ಕ್ಕುರುಹೂರ್ ಚ್ಚಡಹೋಪನ್
ಮುಡಿಪ್ಪಾನ್ ಶೊನ್ನ ವಾಯಿರತ್ತು ತಿರುವೇಙ್ಗಡತ್ತುಕ್ಕಿವ್ಯೆ ಪತ್ತುಮ್
ಪಿಡಿತ್ತಾರ್ ಪಿಡಿತ್ತಾರ್ ವೀತ್ತಿರುನ್ದು ಪೆರಿಯ ವಾನುಳ್ ನಿಲಾವುವರೇ

ಕನ್ನಡ ನೆರಳ್

ಅಡಿಕೆಳಗಮರುತ ಹೊಕ್ಕಿಹ ಅಡಿದಾಸರೇ! ಬಾಳಿರಿ ನೀವೆಂದೆಂದೇ ದಯೆ ನೀಡುವ
ಪಡಿಗೊಪ್ಪಿಲ್ಲದ ಪೆರುಮಾನ್ ಎಂಬಿವನ್ ಬಗೆಗೆ ಫಸಲಿನ ಕುರುಹೂರಿನ ಶಠಕೋಪನ್
ಮುಡಿವೊಲೆ ಮುಗಿಸುವೆನೆಂದೀ ಪೇಳಿಹ ಸಾಸಿರವಹ, ಹಿರಿವೇಂಕಟಗಿರಿಗಿವ ಹತ್ತುಂ
ಪಿಡಿದೊರೆವರ ಪಿಡಿವರು ಸಹ ಕೂರುತಲಾಽಽಬಾನೊಳ್ ಹಿರಿನೆಲೆಗೊಳುವರ್

ನಮ್ಮಾೞ್ವಾರ್ ಮಾಡಿದ ಜಾನಪದ ಭಾಷೆಯ ಪ್ರಪತ್ತಿಯಿಂದಲೇ ಅವರನ್ನು ಮನಃಪೂರ್ವಕ ಆತ್ಮೀಯವಾಗಿ ಭಾವಿಸುವವರಿಗೆಲ್ಲಾ ಫಲ ಸಿಗುವುದು. ಧೇನು ತನ್ನ ಕರುವಿಗೆ ಹಾಲ್ ಸೊರೆ ನೀಡುವಂತೆ, ಸತ್ತ ಕರುವೊಂದರ ಚರ್ಮ ಹೊದಿಸಿ ಕೃತಕವಾಗಿ ಮಾಡಿರುವುದನ್ನೂ ಕಂಡು ಹಾಲು ಸೋರಿಸುವಂತೆ! ಮುಖ್ಯವಾದುದು ಸರ್ವ ಸುಹೃತ್ತುಗಳಾದ ಶರಣ ಶರಣೆಯರ ಸಂಬಂಧ ಜ್ಞಾನ ನಮ್ಮಲ್ಲಿದ್ದರೆ ಸಾಕು. ಕಾಲ ಕ್ರಮೇಣ ಎಲ್ಲಾ ಸರಿಹೋಗುತ್ತದೆ. ಈ ಸಂತ ಸಾಹಿತ್ಯವನ್ನು ಯಾರು ನಮ್ಮ ಕಿವಿಗೆ ಪ್ರೀತಿಯಿಂದ ಉಣಿಸುವರೋ ಅಂತಹವರ ಸಂಬಂಧದ ಪ್ರಜ್ಞೆಯಿದ್ದರೂ ಸಾಕು ಎಂಬ ಸುಲಭತಮ ಫಲಶ್ರುತಿ ಈ ಪಾಶುರದಲ್ಲಿದೆ. ವಿಭೀಷಣನೋರ್ವ ಮಾಡಿದ ಶ್ರೀರಾಮ ಪ್ರಪತ್ತಿಯಿಂದ ಅವನ ಕಡೆಯ ನಾಲ್ಕು ಉಪಸಚಿವರೂ ರಾಮಗೋಷ್ಠಿಗೆ ಅಳಾಗಲಿಲ್ಲವೇ? ಗರ್ಭಿಣಿ, ಬಾಣಂತಿಯರ ಸರಿಯಾದ ಆಹಾರ, ಒಳಗಿನ ಹಾಗೂ ಶಿಶುವಿನ ರಕ್ಷಣೆಗೆ ಒದಗದೆ? ಓರ್ವ ಮಹಾ ವಿಜ್ಞಾನಿಯ, ಜಡವಸ್ತುವಿನ ಮೇಲಿನ ಪರಿಶ್ರಮ, ಸಂಶೋಧನೆಗಳನ್ನು ಜಗತ್ತಿನವರೆಲ್ಲಾ ಅನುಭವಿಸುತ್ತಿರುವ ಈ ಕಾಲದಲ್ಲಿ, ಶರಣ ವಿಜ್ಞಾನಿಯ, ಚೈತನ್ಯಹಾಗೂ ಪರಮ ಚೈತನ್ಯ ಭಾವನಾಫಲ ಆತುಕೊಳ್ಳುವ ಭಾವನೆಯ ಸಿದ್ಧತೆ ಇರುವವರಿಗೆಲ್ಲಾ ಸಿಗಲು ಅಭ್ಯಂತರವೇನಿದೆ?

ಅಡಿಯೀರ್ = ಎಲೈ ಅಡಿದಾಸರುಗಳಿರಾ. ಅಡಿಕ್ಕೀಳ್ = ಅರ್ಚಾವತಾರಿಯಾದ ನನ್ನ ಪರಮ ಚಿನ್ಮಯ ಶ್ರೀಪಾದದ ಕೆಳಗೆ, ಅಮರ್‌ನ್ದು ಪುಹುನ್ದು = ದೃಢಸ್ಥೈರ್ಯದಿಂದ ಹೊಕ್ಕು, ವಾೞ್‌ಮಿನ್ = ಇಲ್ಲಿ ಅಲ್ಲಿ ಉಭಯ ಕ್ಷೇಮದಿಂದಿರಿ. ಎನ್ನೆನ್ನು = ಅರ್ಜುನ ಒಬ್ಬನಿಗೆ ಮಾತ್ರ ಹೇಳಿದ ಸಂದರ್ಭವಲ್ಲ, ತಿರುಪತಿ ತಿಮ್ಮಪ್ಪನ ಬಲ ಹಸ್ತದ ಅಧಃ ಪ್ರದರ್ಶನ, ಈ ಪಾದ ಸಕಲೇತರ ವಿಲಕ್ಷಣ ಎಂದು ಎಲ್ಲರಿಗೂ ತೋರುತ್ತಿದ್ದಾನೆ. ಈಗ ಮಾತ್ರವಲ್ಲ. ಮುಂದಕ್ಕೂ ಸಾಂತ್ವನ ನೀಡುತ್ತಲೇ ಇರುತ್ತದೆ. ಅರುಳ್ ಕೊಡುಕ್ಕುಮ್ = ಸರ್ವ ಪಾಪಗಳಿಂದ ಬಿಡುಗಡೆ ಮಾಡುವುದಲ್ಲದೆ, ಕೈಂಕರ್ಯವೆಸಗಲು ''ಅರುಳ್ ಪಾಡು'' ಎಂದು, ಅಖಂಡ ಕೃಪಾಪ್ರವಾಹ ಹರಿಸುತ್ತಲೇ ಇರುತ್ತಾನೆ. ಮಾಶುಚಃ = ಎಂದು ಅರ್ಜುನನಿಗೆ ತನ್ನ ಅತ್ಯಂತ ಪಾರತಂತ್ರ್ಯದ ಸ್ಮೃತಿಯಿಂದ ಬಂದೊದಗಿದ ಚರಮ ಹಂತದ ಮಹಾಶೋಕ ನಿವೃತ್ತಿಗೈದ ಶ್ರೀ ಗೀತಾ ಕೃಷ್ಣನಿಗಿಂತಲೂ, ಪಡಿಕ್ಕೇಳಿಲ್ಲಾ = ಈ ಅಸಾಧಾರಣವಾದ ತನ್ನ ವ್ಯಕ್ತಿತ್ವಕ್ಕೆ ಬೇರೊಂದು ಒಪ್ಪಿಲ್ಲದ, ಪೆರುಮಾನೈ = ಉತ್ತಮೋತ್ತಮ ಮಹಿಮಾನ್ವಿತನನ್ನು, ಪಳನಮ್ = ಒಳ್ಳೆ ಜನ ವಸತಿಯುಳ್ಳ, ಕುರುಹೂರ್ = ಎಂಬ ಊರಿಗೇ ನಿರ್ವಾಹಕನಾದ, ಶಠಕೋಪನ್ ತನ್ನ ಬಗೆಗೆ ಭಾವನಾ ಸಂಪನ್ನರಾಗಿದ್ದರೆ ಸಾಕು, ಅವರದಷ್ಟೇ ಅಲ್ಲ, ತತ್ ಸಂಬಂಧಿ ಸಂಬಂಧಿಗಳ ಢೋಂಗಿ ಶಠತನವನ್ನೆಲ್ಲಾ ಪರಮವಾತ್ಸಲ್ಯಾSಮೃತ ಸಾಗರನ ಅಹೇತುಕೀ ವಿಶಿಷ್ಟ ಕರುಣಾಬಲದಿಂದ ಹೋಗಲಾಡಿಸುವ ಶಠಕೋಪನೆಂಬಿವನು, ಮುಡಿಪ್ಪಾನ್ ಶೊನ್ನ = ಮತ್ತೆ ಕರ್ಮ ಕೃತ ಪುನರ್ ಜನ್ಮ ಬರದಂತೆ, ಇದೇ ಕೊಟ್ಟ ಕೊನೆಯ, ''ಹುಟ್ಟು - ಚಟ್ಟ''ವಾಗುವಂತೆ ಮಾರ್ಗದರ್ಶನೀಡಿರುವ. ಆಯಿರತ್ತು ಈ ೧೧೦೨ ಹಾಡುಗಳಲ್ಲಿಯೂ ತಿರುವೇಙ್ಗಡತ್ತುಕ್ಕು = ಶ್ರೀ ವೇಂಕಟಾಚಲಕ್ಕಾಗಿಯೇ ಮೀಸಲಾದ ಈ ೧೦ ಹಾಡುಗಳನ್ನು, ಪಿಡಿತ್ತಾರ್ = ಹಾಡಿ ತಿಮ್ಮಪ್ಪನನ್ನು ಹಿಡಿದಿರುವ ಪ್ರಪನ್ನರನ್ನು ಅಷ್ಟೇ ಅಲ್ಲ, ಪಿಡಿತ್ತಾರ್ = ಅಂತಹವರನ್ನೂ ನಾವು ಹೇಳದಿದ್ದರೂ, ಭಕ್ತ್ಯಾದರದಿಂದ ಸತ್ಕರಿಸಿದವರಿಗೂ; ''ನಮ್ಮ ಕಿವಿಗೆ ಎಂತಹ ಅಮೃತ ಊಡಿಸಿದರು!'' ಎಂಬೀ ಶ್ರವಣ ನಿಷ್ಠೆಯಿಂದಿರುವ ಜನರೂ, ಪೆರಿಯ ವಾನುಳ್ = ತ್ರಿಪಾದ್ವಿಭೂತಿಯಲ್ಲಿ, ನಿಲಾವುವರ್ = ನಿತ್ಯವಾಸ ಮಾಡುವರು, ಕೇವಲ ಭಗವತ್ ಕೈಂಕರ್ಯವಷ್ಟೇ ಅಲ್ಲದೆ, ಪರಮಪದನಾಥನ ಅಭಿಮಾನ ಪಾತ್ರರಾದ ಅಲ್ಲಿರುವ ''ಆಚಾರ್ಯರ ಕೈಂಕರ್ಯ''ವೆಂಬ ''ಪೆರಿಯ ನಿಲಾವು'' ಮಹತ್ತರ ಫಲವನ್ನು ನೀಡುವನು ಎಂಬ ವಿಶೇಷಾರ್ಥವೂ ಇಲ್ಲಿನ ಚರಮ ರಹಸ್ಯ!

ತಮಿಳ್ ತಿರಳ್ ೮-೨-೧

ನಜ್ಗಳ್ ವರಿವಳ್ಗೆ ಯಾಯಜ್ಗಾಳೋ ನಮ್ಮುಡೈಯೇದಲರ್ ಮುನ್ಬು ನಾನೆ
ನುಜ್ಗಳ್ಕ್ಕು ಯಾನ್ ಒನ್ನುರೈಕ್ಕುಮ್ ಮಾತ್ತುಮ್ ನೋಕ್ಕುಹಿನ್ನೇನ್ ಎಜ್ಗುಮ್ ಕಾಣಮಾಟ್ಟೇನ್
ಶಜ್ಗಮ್ ಶರಿನ್ದನ ಶಾಯ್ ಇಳನ್ದೇನ್ ತಡಮುಲೈ ಪೊನ್‌ನಿರಮಾಯ್ ತಳರ್‌ನ್ದೇನ್
ವೆಜ್ಞಣ್ ಪರವೈಯಿನ್ ಪಾಹನೆಜ್ಗೋನ್ ವೇಜ್ಗಡವಾಣನೈ ವೇಣ್ಡಿಚ್ಚೆನ್ನೇ

ಕನ್ನಡ ನೆರಳ್

ನಮ್ಮಯ ಶಂಖದ ಬಳೆ ತೊಟ್ಟಿಹ ಗೆಳತಿಯರಾ! ಅಯ್ಯೋ ನಮಗಾಗದ ವವರ್ - ಮುಂದೆಡೆ ನಾಚುತಲಿ
ನಿಮಗೆಂದಿದೋ ನಾನ್ ಓರ್ ವಾತನು ಪೇಳಲ್ ನೋಡುತಿಹೆ! ಎಂತೆಂತೆಯೂ ಪೇಳಲ್ಕಾಗದಿಹೆನ್
ಶಂಖವೂ ಸರಿಯಿತಲಾ! ಛವಿಯಳಿದೆನಲಾ ಘನ ಮೊಲೆ ಬಿಳಿಚಾಂತಿದೊ ತಳರ್‌ದೆನಲಾ
ಬೆಂಗಣ್ ಹಕ್ಕಿಯ ನಡೆಸುವನಂ ಎನ್ ಕೋನನಂ ವೇಂಕಟ ಸುಲಭನಂ ಬಯಸುವೆ ಸೇರ್ದೇ

ಈ ಸಂತ ಮೃದುಳ ಶರಣರೇ, ತಮ್ಮ ಇದೇ ''ತಿರುವಾಯ್ ಮೊಳಿ'' ಸಿರಿಬಾಯ್ ನುಡಿಯ ಅಂತಿಮ ಕೃತಿಯಲ್ಲಿ, ೧-ಳ ಅಂದರೆ ಪ್ರಥಮ ಶತಕದ ನಾಲ್ಕನೇ ದಶಕವಾದ ''ಅಮ್‌ಶಿರೈಯ ಮಡನಾರಾಯ್'' ಎಂಬಲ್ಲಿ, ಸ್ತ್ರೀಭಾವಾSಪನ್ನರಾಗಿ, ಸ್ವಾಮಿಯೆಡೆಗೆ ಹಕ್ಕಿಗಳನ್ನೇ ತಮ್ಮ ಸಂದೇಶವಾಹಕರನ್ನಾಗಿ ಕಳಿಸಿದ್ದಾರೆ. ಮುಂದೆಯೂ ಇವರಿಗೆ ಹೆಣ್ಣಿನ ಭಾವ ಉಲ್ಬಣಿಸಿರುವ ಅನೇಕ ಸಂದರ್ಭಗಳೂ ಬಂದಿವೆ. ಇಲ್ಲಿನದೂ ಹಾಗೆಯೇ ಇದರ ಸೂಕ್ಷ್ಮಭಾವವೆಂದರೆ;

ದೇವರು ''ವಿಶ್ವಪತಿ''ಯಾದರೆ ಜೀವಾತ್ಮರೆಲ್ಲರೂ ಆತನಿಗೆ ''ಸತಿ''ಯರಾಗುವುದು ನೈಜ ಸ್ವರೂಪ. ಸಂತ ಶರಣರ ಭೂಮಿಕೆ, ಪ್ರೇಮಪ್ರಧಾನ, ಅದರಲ್ಲೇ ಬ್ರಹ್ಮಜ್ಞಾನ ಅಡಗಿದೆ. ಅದರಲ್ಲೂ, ಹೊರಸಾಕ್ಷಾತ್ಕಾರ ಹೊರ ಇಂದ್ರಿಯಗಳಿಂದ ಆಗದಾಗ ಅವರು ಮತ್ತೂ ತಳರಿಹೋಗುವ ಮೆದುಸ್ವಭಾವದವರು. ಈ ಸ್ವಭಾವವನ್ನು ಭಕ್ತಿಮಾರ್ಗದಲ್ಲಿ ''ಮಧುರಭಕ್ತಿ'' ಎನ್ನುತ್ತಾರೆ. ಶರೀರದಿಂದ ಹೆಂಗಸಾಗಿದ್ದವರಿಗಂತೂ ಇದು ಬಲು ಸಹಜ. ಕಲಿಯುಗದಲ್ಲಿ ''ಸ್ತ್ರಿಯಃ ಸಾಧುಃ'' ಎನ್ನುತ್ತಾರೆ ವ್ಯಾಸಮಹರ್ಷಿಗಳು. ಇವರು, ಎಂದರೆ ಶಠಕೋಪರು ದೈಹಿಕವಾಗಿ ಗಂಡಸಾಗಿದ್ದರೂ ವಿಶೇಷ ಕೃಪೆಯಿಂದ ಆಳ್ವಾರ್ ಆಗಿರುವವರು. ಇವರಿಗೆ ಸಂದರ್ಭ ವಿಶೇಷಗಳಲ್ಲಿ, ಭಕ್ತಿಯ ಉತ್ಕಟತೆಯಲ್ಲಿ ಸ್ತ್ರೀಭಾವ ಸಹಜ.

ಈ ದಶಕದಲ್ಲಿ, ಪ್ರಧಾನ ನಾಯಕಿ, ಸಖಿ, ತಾಯಿಯರ ಬಗ್ಗೆ ಅಂತರಾರ್ಥ ಹೀಗಿದೆ. ಭರ್ತೃ -ಭಾರ್ಯಾಭಾವ ಸಂಬಂಧಜ್ಞಾನ ಏರಿರುವುದೇ ವಿರಹಿಣಿಯ ಸ್ಥಿತಿ. ಬೇರೆ ಬೇರೆ ಸಂಬಂಧಗಳೂ ಉಂಟಲ್ಲಾ! ನೀನೇಕೆ ಎದ್ದು ಬೀಳುತ್ತೀ! ತಡೆದುಕೋ! ಎನ್ನುವುದೇ ಗೆಳತಿ. ತಾಯಿಯೆಂದರೆ, ಸ್ವಾಮಿಯೇ ಸಿದ್ಧ ಉಪಾಯವಾಗಿರುವಾಗ, ಅತ ಫಲ ನೀಡುವ ಕಾಲದವರಿಗೂ ನೀನೇಕೆ ಹೀಗೆಲ್ಲಾ ರಂಪಮಾಡುವುದು? ಸ್ವಸ್ವರೂಪ ಭಾರ್ಯಾಜ್ಞಾನ, ಜೀವ - ಈಶ್ವರರ ಸಂಬಂಧಜ್ಞಾನ ಹಾಗೂ ಉಪಾಯ - ನಿಷ್ಠೆ. ಇವುಗಳ ಪರಸ್ಪರ ಸಲ್ಲಾಪ ಸೌಂದರ್ಯವೇ ಈ ಹತ್ತು ಹಾಡುಗಳಲ್ಲಿ.

ದೇವಾ! ಖಂಡಿತವಾಗಿಯೂ ನೀನೋರ್ವನಲ್ಲದೆ ನನಗಿನ್ನಾರಲ್ಲೂ ನಿನ್ನ ಭೋಗಕ್ಕೆ ಒದಗುವಿಕೆಯಲ್ಲದೆ ಮತ್ತಾವ ಫಲವೂ ಬೇಕಿಲ್ಲ. ಈ ಭಾವಾವೇಶವನ್ನು, ತಾವಾಗಿ ತಾವು ಹೇಳಲಾರದಷ್ಟು ತಳರುಗೆ ತಾಗುತ್ತದೆ. ಆಗ ಪ್ರಾಣವಲ್ಲಭೆಯ ಭೂಮಿಕೆಯಾಂತು, ತಾಯಂದಿರನ್ನೂ ಸಖಿಯರನ್ನೂ ಸಹ ತೊರೆದು ನಾಯಕನ ಬಳಿಗೇ ಧಾವಿಸುವಂತೆ ''ಅಭಿಸಾರಿಕಾ'' ಆಗಿ ಗೆಳತಿಯರಿಗೆ ಹೇಳುವ ಮಾತು. ಅದೂ ಅವರು ''ನೀನೇಕೆ ಹೀಗಾದೆ? ನಿನ್ನ ಒಳಗುಟ್ಟನ್ನು ಬಿಚ್ಚಿ ಹೇಳವ್ವಾ! ಬಚ್ಚಿಡ ಬೇಡಾ'' ಎಂದು ಬಲಾತ್ಕರಿಸಿದಾಗ!

ಓ ಅಯಜ್ಗಾಳ್ = ಓ ಸಖಿಯರೇ! ನಮ್‌ಗಳ್, ವರಿವಳ್ಗೆ = ನನ್ನ ಕೈಗಳಿಂದ, ಈ ಸುಂದರವಾದ ಬಳೆಗಳೆಲ್ಲಾ ಕಳಚಿ ಬೀಳುತ್ತಿವೆ. ನಿಮ್ಮ ಕೈಗಳಲ್ಲಿ ಮಾತ್ರ ಹಾಗೇ ದೃಢವಾಗಿಯೇ ಇವೆಯಲ್ಲಾ! ಅಂದರೆ ನಾಯಕನ ವಿರಹಾತಿಶಯದಲ್ಲಿ ಈ ಪ್ರಧಾನ ಪ್ರೇಯಸಿ ಬಲು ಕೃಶಳಾಗಿ ಹೋಗಿದ್ದಾಳೆ. ಅದರಿಂದ ಸಮಾನ ಸುಖದುಃಖಭಾಗಿಗಳಾದ ನೀವೂ ಹಾಗೆಯೇ ಇರಬೇಕಲ್ಲವೋ! ಅವರೂ, ಇವಳ ಬಗೆಗೆ ಸಹಾನುಭೂತಿಯುಳ್ಳವರೇ ಆದರೂ, ಇವಳಿಗೆ ಸಮಾಧಾನ ಹೇಳುವ ಸಲುವಾಗಿ ಸ್ವಲ್ಪ ಗಡುಸಾಗಿದ್ದಾರಷ್ಟೆ. ಸೀತಾ ವಿರಹದಲ್ಲಿ ಸೀತಾಪತಿ, ಬಲುನೊಂದು ಹೋಗುತ್ತಾನೆ. ಲಕ್ಷ್ಮಣನ ಒಳಗೂ ದುಃಖವಿಲ್ಲದಿಲ್ಲ. ಆದರೂ ಧೃತಿಯಿಂದ ಒಳಗೇ ಅಡಗಿಸಿಕೊಂಡು ಅಣ್ಣ ರಾಮನಿಗೆ ಸಾಂತ್ವನ ಹೇಳಿದಂತೆ.

ನಮ್ ಉಡ್ಯೆ ಏದಲರ್ ಮುನ್‌ಬು = ನಮ್ಮೀರ್ವರಿಗೂ ತಲೆನೋವಿನಂತಿರುವ ಈ ಅಮ್ಮ, ನಮ್ಮನ್ನು ನಿಮಗಿಂತ ಹೆಚ್ಚಾಗಿಯೇ ಪೀಡಿಸುತ್ತಾಳೆ. ಇವಳ ಕಣ್ಣ ಮುಂದೆಯೇ, ಇವಳು ನಾಚುವಂತೆ ನಾಣಿ, ನೀವೇನೋ ನನಗೆ ಸಮವಯಸ್ಸಿನವರೇ! ಆದರೂ ಅವಳಿಗೂ, ನಿಮಗೂ, ನುಜ್ಗಳ್‌ಕ್ಕು ಯಾನ್ = ಇದೋ ಉಭಯ ವಿಲಕ್ಷಣೆಯಾದ ನಾನು, ಒನ್ನು = ಒಂದನ್ನಾದರೂ, ನೋಕ್ಕು ಹಿನ್ನೇನ್ ಉರೈಕ್ಕುಮ್ ಮಾತ್ತಮ್ = ಹೇಳಬಹುದಾದ ಮಾತನ್ನು, ಹೇಳೋಣವೆಂದು ಯೋಚಿಸಿದರೂ, ಎಜ್ಗುಮ್ = ಯಾವರೀತಿಯಲ್ಲೂ, ಕಾಣಮಾಟ್ಟೇನ್ = ಹೇಳಲು ತೋಚುತ್ತಿಲ್ಲ! ನಾವೇನೂ ನಿನ್ನ ತಾಯಿಯಷ್ಟು ದೂರದವರಲ್ಲಾ. ಹೇಳವ್ವಾ, ಎನ್ನುತ್ತೀರಾ?

ಸರಿ, ನೀವೇ ನೋಡಿ. ಶಜ್ಗಮ್ = ತೋಳ್ಬಂದಿಯೂ, ಶೆರಿನ್ದನ = ಮುಂಗೈಗಿಂತ ತೋಳುದಪ್ಪ. ಅದೂ ಕೃಶವಾಗಿ ಬಿಟ್ಟಿತು. ಕಾರ್ಶ್ಯ ಎಲ್ಲೆಲ್ಲೂ ಏರುತ್ತಲೇ ಇದೆ ಎಂಬ ಭಾವ. ನಾನೇ ಹೀಗಾದರೆ, ಆ ಪರಮಪ್ರಣಯಿ ಇನ್ನೇನಾಗುತ್ತಾನೋ! ಅದೇ ನನ್ನ ಚಿಂತೆ! "ಓ-ಓ" ಎಂಬ ವಿಷಾದಾತಿಶಯ ಸೂಚಕ ಇಲ್ಲಿ ಬಂದಿದೆಯಷ್ಟೆ. ಈ ಆಳ್ವಾರರೂ ಉತ್ತಮನಾಯಕಿಯಾದ ಲಕ್ಷ್ಮೀ ದೇವಿಯಂತೆಯೇ ಪರಮಾತ್ಮನಿಗೆ ಪ್ರೀತಿಪಾತ್ರಳು. ಹೀಗೆ, ಜಗನ್ಮಾತಾ ಪಿತೃಗಳ ಗತಿಯಾದರೆ ಜಗತ್ತಿನ ಶಿಶು ಪ್ರಜೆಗಳ ಗತಿಯೇನು? ಅಭಿಸಾರಿಕಾವಸ್ಥೆಯಲ್ಲೂ ವ್ಯಾಪಕ ಜಗದ್‌ರಕ್ಷಣೆಯ ಚಿಂತೆಯೇ ಎಂಬುದೀಗ ಈ ಶರಣರ ಶೃಂಗಾರ ರಸದ ಒಳ ಭಾವ! ಶರಣರದು ಮರ್ತ್ಯರ ಕ್ಷುದ್ರ ಕಾಮವಲ್ಲ. ನಲ್ ಕಾಮ "ನಿದಿಧ್ಯಾಸಿತವ್ಯಃ" ಭಕ್ತಿಸ್ಥಳದ ಶೃಂಗಾಗ್ರ! ಈ, ರಂಜಕ ಭಾಷೆಯಲ್ಲಿ ಹೇಳದಿದ್ದರೆ, ತತ್ವಜ್ಞಾನ ಹೇಗೆ ಸಾರ್ವಜನಿಕವಾದೀತು?

ಈ ತಾಯಿ ಹೇಳುವುದೇನು? ನಾಯಕನೇ ತಾನಾಗಿ ಬರುವವರಿಗೂ ತಾಳಿಕೊಳ್ಳಬೇಕೆಂದು! ಅವನೇ ಸಿದ್ಧ ಉಪಾಯ. ನಮ್ಮ ಕಡೆಯಿಂದ ಪದರಾಟ, ತ್ವರೆ ಕೂಡದು! ಮಗಳೋ, ಸುಮ್ಮನೆ ಬಿದ್ದಿದ್ದರೆ ಆತನ ಗುಣ, ಸೌಂದರ್ಯಾsನುಭವದಲ್ಲಿ ಕೊರೆ ಎಣಿಸಿದಂತೆ. ಪಾವನ ಸೌಂದರ್ಯ ನಿಧಿಯನ್ನು ಈಗಲೇ ಅಪ್ಪಿಕೊಂಡೇಬಿಡಬೇಕು. ಇವರಿಬ್ಬರಲ್ಲೂ ಸಖಿ ಎಂದರೆ ನವ ವಿಧ ಸಂಬಂಧಗಳ ಸಮತೂಕ ಕಾಯ್ದುಕೊಂಡೇ, ಇಬ್ಬರನ್ನೂ ಗೌರವಿಸುವುದು, ಎಂಬ ಭಾವ.

ಹಿಂದೆ ಭಗವಂತನಿತ್ತ ಚಿತ್ತಭೂಮಿಕೆಯ ಸೇರ್‌ಪಡೆಯಲ್ಲಿ ಹೊಂದಿದ್ದ, ಶಾಯ್ = ಆ ಕಳೆಯನ್ನೂ, ಇಳನ್ದೇನ್ = ಕಳೆದುಳಿದುಕೊಂಡೆ. ತಡಮ್ ಮುಲೈ = ಪರಮಾತ್ಮಭೋಗಪಡುವುದಕ್ಕೂ ಮೀರಿಸಿರುವ ವಿಸ್ತೃತೋನ್ನತವಾದ ಎದೆ, ನನ್ನ ಭಕ್ತಿ! ಹಾರ್ದಿಕತೆ. ಪೊನ್ ನಿರಮಾಯ್ = ವಿವರ್ಣವಾಗುವಂತೆ ಒಳ್ಳೆಯ ಗದ್ದೆ ಬಯಲು, ಎರೆಮಣ್ಣಿನಿಂದ ಕೆಸರುಗದ್ದೆಯಾಗಿದ್ದುದು, ಮರಳೋ ಮರಳಾದಂತೆ ನನ್ನೀ ಸ್ತನತಲವನ್ನು, ತಳರ್‌ನ್ದೇನ್ = ಬಂಜರು ಮಾಡಿಕೊಂಡೆ! ಈಗ ಆ ಭೋಕ್ತಾ ಬಂದರೂ, ಧರ್ಮಿಯಾದ ಈ ನಾನೇ ಇರುವುದಿಲ್ಲವಲ್ಲಾ! ಸ್ವಾಮಿಗೆಷ್ಟು ಆಶಾಭಂಗ ಹಾಗೂ ದುಃಖವಾದೀತು ಎಂದರೆ ಮಗಳದು ಪರಮಾರ್ಥಕ್ಕಾಗಿ ತ್ವರೆಯೇ ಹೊರತು, ಸ್ವಾರ್ಥಕ್ಕಾಗಿ ಹಾರಾಟವಲ್ಲ!

ನೀನಿಷ್ಟು ಪರವಶೆಯಾಗಿರುವುದು ಯಜಮಾನರ ಅಂದವನ್ನು ಕಂಡು. ವೆಮ್‌ಗಣ್ ಪರವ್ಯೆ = ಶತ್ರು ಸಂಹಾರದಲ್ಲಿ ಕೂರ್‌ದಿಟ್ಟಿಯಾಂತ ಗರುಡನನ್ನು, ಪಾಹನ್ = ನಡೆಸುವಾತ, ಎಮ್ ಕೋನ್ = ನಮ್ಮಗಳೆಲ್ಲರ ಒಡೆಯ, ಸುಮ್ಮನೆ ಸಾಮಾನ್ಯವಾಗಿ ಹೇಳಿದರೇನು ಬಂತು? ಯಾವನೇ ಅವ? ವೇಜ್ಗಡವಾಣನ್ಯೆ = ತಿರುಮಲೆಯ ತಿಮ್ಮಪ್ಪನಾಯಕ. ಎನ್ನಮ್ಮಾ! ವೇಣ್ಡಿ = ಇದೋ ನಾನೇ ಆಸೆಯಿಂದ ಮೇಲ್ ಬಿದ್ದು, ಶೆನ್ನೇ = ಸಂದೇಶತೀರುತ್ತೇನೆ.

ತಮಿಳ್ ತಿರಳ್ ೮-೨-೮

ಇಡೈಯಿಲ್ಲೈ ಯಾನ್ ವಳರ್‌ತ್ತ ಕಿಳಿಹಾಳ್ ಕುಯಿಲ್ ಹಾಳ್ ಮಯಿಲ್‌ಹಾಳ್
ಉಡೈಯ ನಮ್ ಮಾಮೈಯುಮ್ ಶಜ್ಗುಮ್ ನೆಞ್ಜುಮ್ ಒನ್ನುಮೊಳಿಯ ವೊಟ್ಟಾದು ಕೊಣ್ಡಾನ್
ಅಡೈಯುಮ್ ವೈಹುನ್ದಮುಮ್ ಪಾರ್ ಕ್ಕಡಲುಮ್ ಅಞ್ಜನ ವೆರ್‌ಪುಮ್ ಅವ್ಯೆ ನಣಿಯ
ಕಡೈಯರ ಪ್ಪಾಶಜ್ಗಳ್ ವಿಟ್ಟ ಪಿನ್ನೈಯನ್ನಿ ಅವನ್ ಅವ್ಯೆ ಕಾಣ್ ಕೊಡಾನೇ

ಕನ್ನಡ ನೆರಳ್

ಅನ್ಬಯಮಿಲ್ಲವ್ಯೆ ನಾನ್ ಬೆಳೆಸಿದ ಗಿಳಿಗಳಿರಾ ಶಾರಿಕೆಗಳಿರಾ ಕೋಗಿಲೆಗಳಿರಾ ನವಿಲ್‌ಗಳಿರಾ
ನಮ್ಮಯ ಕಳೆಯನೂ ಶಂಖವನೂ ಚಿತ್ತವನೂ ಒಂದೂ ಎನ್ನೆಡೆ ಬಿಡಲೊಪ್ಪದೆ ದೋಚಿದನ್ಯೆ
ಆಶಿಪ ವೈಕುಂಠವೂ ಹಾಲ್ಗಡಲೂ ಅಂಜನ ಪರುವತವೂ ಅವು ಸನಿಯಂ
ವಾಸನೆಲೇಶವು ಇಲ್ಲೊದಲು ಪಾಶವೆ ಬಿಟ್ಟದೊ ಮೇಲಲ್ಲದೆ ಅವುಗಳನವನ್ ಕಾಣಲ್‌ಕೊಡನ್ಯೆ!

ತನ್ನ ಲೀಲೋಪಕರಣಗಳಾದ ಗಿಣಿ, ಮೈನಾ, ಕೋಗಿಲೆ, ನವಿಲು ಮುಂತಾದವುಗಳಲ್ಲಿ ಈ ಪತಿವಿಯೋಗಿನಿಗೆ ಜಿಹಾಸೆ! ಅಷ್ಟೊಂದು ಇವಳ ಪ್ರಾಪಕಾssಭಾಸ ಪ್ರಾಪ್ಯಾssಭಾಸಗಳಲ್ಲಿ ತ್ಯಾಗಬುದ್ಧಿ ಪಕ್ವವಾಗಿದೆ.

ಪಿತರಂ ಮಾತರಂ ದಾರಾನ್ ಪುತ್ರಾನ್ ಬಂಧೂನ್ ಸಖೀ೯ ಗುರೂನ್
ರತ್ನಾನಿ ಧನಧಾನ್ಯಾನಿ ಕ್ಷೇತ್ರಾಣಿ ಚ ಗೃಹಾಣಿ ಚ |
ಸರ್ವಧರ್ಮಾಂಶ್ಚ ಸಂತ್ಯಜ್ಯ ಸರ್ವ ಕಾಮಾಂಶ್ಚ ಸಾSಕ್ಷರಾನ್
ಲೋಕವಿಕ್ರಾನ್ತಚರಣೌ ಶರಣಂ ತೇSವ್ರಜಂ ವಿಭೋ!||

ಈ ಅರ್ಷ ಪೌರಾಣಿಕ ಶಿಷ್ಟರ ನಿಷ್ಠೆ ಈ ಪರಾಂಕುಶ ಶರಣೆಯದು.

ಇಡೈಯಿಲ್ಲೈ = ನನ್ನ ಬಳಿ ನಿಮಗಿನ್ನು ಸ್ಥಾನವಿಲ್ಲ. ಗಿಳಿಗಳನ್ನು ಸಂಬೋಧಿಸುವುದಕ್ಕಿಂತ ಮುಂಚೆಯೇ, ಭಗವತ್‌ಸಂಶ್ಲೇಷಕ್ಕೆ ಒದಗಿ ಬರದವುಗಳ ನಿಷೇಧಕ ಭಾಷೆ! ಯಾರಿಗಿದು ಹೇಳುತ್ತಿರುವ ಮಾತು? ಯಾನ್ ವಳರ್ತ್ತ ಕಿಳಿಹಾಳ್ = ನಾನೇ ಹಣ್ಣಿನ ರಸ, ಹಾಲು ಕೊಟ್ಟು ಬೆಳೆಸಿದ ಶುಕಗಳೇ! ಮಹಾರಾಣಿಯವರು ತಾವೇ ತಮ್ಮ ಕೈಯಿಂದಲೇ ತಮಗೆ ಅತ್ಯನ್ತ ಪ್ರಿಯವಾದ ಅಂತಃಪುರದ ಜಂತುಗಳಿಗೆ ಹಾಲ್ ಊಡಿಸುವಂತೆ! ಅದೆಲ್ಲಾ ಹಳೆಗಾಲದ ಕತೆ! ಈಗ ನೀವು ನನ್ನನ್ನು ತಣಿಸುವ ಉಪಕರಣಗಳಾಗಿ ಉಳಿಯಲಿಲ್ಲ. ದಿವ್ಯದ ಝಳುಕು ಏರೇರುತ್ತಾ ಬಂದರೆ ಈ ಭವ್ಯ ಆ ದಿವ್ಯಾSನುಭವಕ್ಕೆ ಸಾಲದಾಗುತ್ತದೆ. ದೇವರಲ್ಲದ, ಬ್ರಹ್ಮಾನುಭವಕ್ಕೆ ಸಲ್ಲದವು ಎಷ್ಟೇ ಮೋಹಕವಾಗಿದ್ದರೂ ತೀವ್ರ ಭಕ್ತಿಗೆ ಅವೆಲ್ಲಾ, ವಿವೇಕ, ಕೃತಜ್ಞತೆಯಿಂದಲೇ ಜಾರಿಕೊಳ್ಳಲು ತಕ್ಕ ಸಿದ್ಧತೆಯಲ್ಲಿರುತ್ತವೆ.

ಪೂವೈಹಳ್ ಹಾಳ್ = ನಾಯಕನ ಲೀಲೋಪಕರಣಕ್ಕಿಂತಲೂ ಹೆಚ್ಚಾಗಿ ನಾನು ಆದರಿಸಿದ್ದ ಮೈನಾ, ಗುಬ್ಬಚ್ಚಿಗಳೇ!, ಕುಯಿಲ್ ಹಾಳ್ ಮಯಿಲ್‌ಹಾಳ್ = ಕೋಗಿಲೆಗಳಿರಾ! ನವಿಲ್‌ಗಳಿರಾ! "ಸಖೀನ್ ಗುರೂನ್" ಎಂಬಲ್ಲಿನ ಸಬ್ರಹ್ಮಚಾರಿಗಳನ್ನೂ, ಗುರುಗಳನ್ನೂ ಸೇರಿಸಿಯೇ ತೊರೆಯುವ ತೀವ್ರತೆ! ಸಂಶ್ಲೇಷ ಕಾಲದಲ್ಲಿ, ಅವರೆಲ್ಲರೂ ಸಹೋದ್ಯೋಗಿಗಳೇ ಆಗಿದ್ದ ಫಲ ಸ್ವರೂಪರೇ ಹೌದು. ಆದರೆ ಈ ವಿರಹಾSತಿರೇಕದಲ್ಲಿ ಬೇಡವೆಂಬ ಭಾವ! ಇಷ್ಟೊಂದು ತ್ಯಾಜ್ಯ ಬುದ್ಧಿ ಏಕೆ? ಎನ್ನುವಿರಾ, ಉಡೈಯ = ನಾನು ಹೊಂದಿದ್ದ, ನಮ್ ಮಾಮ್ಮೈಯುಮ್ = ನಮ್ಮದೆಂದು ತಿಳಿದಿದ್ದ ಬ್ರಹ್ಮವರ್ಚಸ್ಸನ್ನು, ಶಙ್ಗುಮ್ = ಭಕ್ತ್ಯಂಗಗಳನ್ನೂ, ನೆಞ್ಜುಮ್ = ಬಾಹ್ಯ ಲೀಲೋಪಕರಣಗಳು ಹೋದರೂ ಹೋಗಲಿ, ನೆನೆಯಲು ಅಂತಃಕರಣವಾದರೂ ಉಳಿದಿದೆಯೇ? ಚಿತ್ತವನ್ನೂ ಸಹ, ಹೀಗೆ ಒನ್ನುಮ್ ಒಳಿಯ = ಒಂದನ್ನೂ ಬಿಡದೆ, ಒಟ್ಟಾದು ಕೊಣ್ಡಾನ್ = ತಾನೇ ಅಪಹರಿಸಿ, ಮತ್ತೆ ನನ್ನ ಕೈಗೆ ಸಿಗದಂತೆ, ಯಾರೂ ಹೋಗಲಾರದ ಅಗಮ್ಯ ಸ್ಥಾನದಲ್ಲಿ ಇಟ್ಟುಕೊಂಡಿದ್ದಾನೆ! ಆ ವೈಕುಂಠ, ಆ ಕ್ಷೀರ ಸಾಗರ, "ಅಂಜನಗಿರಿಯೆಂಬ" ತಿಮ್ಮಪ್ಪನ ಅಚ್ಚ ಕರಿ ಹಸಿರು ಬಣ್ಣದ ಕಣ್ಣಿಗೆ ಆಪ್ಯಾಯನವಾದ ಕಾಡಿಗೆಯಂತಿರುವ ಮಹಾಪರ್ವತ ಶ್ರೇಣಿ ಇವುಗಳೆನ್ನುವಿರಾ! ಅಯ್ಯೋ, ಆ ವೇಂಕಟೇಶ ಬಲು ಮೋಸಗಾರ! ಅಡೈಯುಮ್ ವೈಹುನ್ದಮುಮ್ = ಮುಕ್ತಪ್ರಾಪ್ಯವಾದ ಆ ಅತ್ತಣ ಅಪ್ರಾಕೃತವಾದ ದೇಶವಿಶೇಷವೂ, ಪಾಲ್ ಕಡಲುಮ್ = ಸತ್ಯಲೋಕದ ವ್ಯೂಹಸ್ಥಾನವಾದ ಕ್ಷೀರಾಬ್ಧಿಯೂ, ಅಞ್ಜನ ವೆರ್‌ಪುಮ್ = ಶ್ರೀ ಅಂಜನಗಿರಿಯೂ, ಅವೈ ನಣೆಯ = ಇವುಗಳನ್ನು ಸನಿಯಿಸಲು ಈ ವೈಕುಂಠಾದಿಗಳಲ್ಲೂ "ನನಗಿವು ಫಲ" ಎಂಬ ನಶೆ! ನಚ್ಚು ಹೋಗಬೇಕೆನ್ನುವುದೇ ಲೋಕಶರಣ್ಯನ ಒಳಬಯಕೆ! ಮೋಕ್ಷದ ಬಗೆಗೆ ಮೋಹಕ್ಷಯ ವಾದಾಗಲೇ "ಮೋ+ಕ್ಷ!" - ವಿನೋಬಾ ವಿವರಣೆ ಹಾಗೂ ನಿರುಕ್ತಿ ಈ ಶಠಾರಿ ನಾಯಕೀ ಪ್ರಸಾದ! ಹೀಗೆಲ್ಲಾ ತಿಮ್ಮಪ್ಪ ಎಲ್ಲರ ಸ್ವಸಾಮರ್ಥ್ಯಗಳನ್ನೂ ಹುಸಿಮಾಡುತ್ತಿದ್ದಾನೆ. ನಮ್ಮ ಸಾಧನೆ, ಅಂಗೋಪಾಂಗಗಳೆನ್ನುವುವೆಲ್ಲಾ ಮಿಥ್ಯೆ! ಸ್ವಾರ್ಥ ಪುರುಷಾರ್ಥವೂ ಮಿಥ್ಯೆ! ಗುರು - ಶಿಷ್ಯಭಾವವೂ ಮಿಥ್ಯೆ! ಬಲು ಎತ್ತರದ ತನ್ನ ಶಿಖರದ ಕಲಶಾಗ್ರಕ್ಕೆ ಈ ಶರಣರನ್ನು ಕಲಿಯುಗೇಶ್ವರ ಏರಿಸಿದ್ದಾನೆ! ಶಂಕರ ಭಗವತ್‌ಪಾದರಭಾವವೂ ಇಂತೇ ಇದೆ.

ಕಡೈ ಅರ = ತಾನೋರ್ವನಲ್ಲದೆ, ಬೇರೆಡೆ ಸುತರಾಂ ಇಲ್ಲದೆ ನಾಶವಾಗುವ, ಅವವುಗಳ ಬಗೆಗೆ, ಸೂಕ್ಷ್ಮವಾಸನಾಲೇಶವೂ ಇಲ್ಲದಂತೆ, ಪಾಶಙ್ಗಳ್ = ಒಳ್ಳೊಳ್ಳೆಯ ಅಸಕ್ತಿ ಪಾಶಗಳೂ, ವಿಟ್ಟಪಿನ್ಮೈ ಅನ್ದಿ = ಅವನೇ ಬಿಡಿಸಲಿರುವಾಗ ನಾವು ಒಪ್ಪದಿದ್ದರೆ, ಅವೈ = ಅವವುಗಳನ್ನು, ಕಾಣ್ ಕೊಡಾನೇ = ತೋರಿಸನಮ್ಮಾ! ದಿವ್ಯ ಭೋಗಸ್ಥಾನಗಳಾದ ಅವವುಗಳಲ್ಲೂ, ಬಾಹ್ಯಾನ್ತರ ರುಚಿ ಹೋಗದೆ ತನ್ನ ಪೂರ್ಣಾನುಭವವನ್ನು ತೋರಗೊಡದಷ್ಟು ಕಠಿಣ ಅತ! ಪೂರ್ಣ ಬ್ರಹ್ಮಾನುಭವ ಸಾಮಾನ್ಯ ವಸ್ತುವಲ್ಲ. ಶುಭಾಶುಭಪರಿತ್ಯಾಗಿಗೇ ಅದು ಲಭ್ಯ. ಮೋಕ್ಷದ ಸ್ಪಷ್ಟಕರ್ತೃಕ ಅಸೆಯಾಗಲಿ, "ಬ್ರಹ್ಮಭಿನ್ನ ಅಯಾಯಾ ದಿವ್ಯದೇಶಗಳು" ಎಂಬ ಅತ್ಯನ್ತ ದೃಷ್ಟಿತ ದೃಷ್ಟಿಯಾಗಲಿ, ರಕ್ಷಕ, ಬೋಧಕ, ಅನುಭವೋಪಕರಣ ಯಚ್ಚಯಾವಚ್ಚ ಎಲ್ಲವನ್ನೂ ಪರಿಪೂರ್ಣ ಪರಂಬ್ರಹ್ಮನಲ್ಲಡಗಿ, ಅಡಗಿಸಿಯೇ "ಅಡಙ್ಗುಹವುಳ್ಳೇ" ಎಂದು ಸಿರಿಬಾಯ್ ನುಡಿಯ ೨ನೇ ದಶಕದಲ್ಲೇ ಇವರೇ ಹೇಳಿರುವಂತೆ ಎಚ್ಚರಿಕೆ ಬೇಕು. ಅವವುಗಳೇ ಸಮರ್ಥೆಕ ನಿಷ್ಠೆಯಿಂದಲೇ ಈ ಮಹಾಜೀವನ ಸ್ಥಿತಿಯ ದಿವ್ಯವರ್ಣನೆಯನ್ನು ಇಲ್ಲಿ ಈ ಆಳ್ವಾರ್ ನಾಯಕೀ ಶ್ರೀಮುಖದಿಂದ ಅವನೇ ಅಡಿದ್ದಾನೆ, ಇನ್‌ತಮಿಳ್, ಪಾಡಿಯ ಈಶನ್ "ತನ್ ಶೊಲ್ಲಾಲ್" "ತಾನ್ ತನ್ನೈಚ್ಚೊನ್ನ" "ಕವಿಶೊನ್ನ ಉದವು" "ಇನ್‌ಕವಿ ಪಾಡಿಯ ಅಪ್ಪನ್" "ಇಙ್ಗುಮಙ್ಗುಮ್ ತಿರುಮಾಲ್ ಅನ್ನಿ ಇನ್ನೈಕಣ್ಡು" - ೯ನೆ ಶತಕದ ೯ನೇ ದಶಕ! ೯ನೆಯ ಹಾಡು, ೬ನೆಯ ಹಾಡು, ೧೧ನೆಯ ಹಾಡುಗಳಲ್ಲಿ.

ತಮಿಳ್ ತಿರಳ್ ೯-೩-೮

ಇನ್ನಿ ಪ್ಪೋಹ ಇರುವಿನೈಯುಮ್ ಕೆಡುತ್ತು ಒನ್ನಿಯಾ ಕ್ಕೈ ಪುಹಾಮೈ ಯುಯ್ಯ ಕ್ಕೊಳ್ವಾನ್
ನಿನ್ನ ವೇಜ್ಗಡಮ್ ನೀಣಿಲತ್ತುಳ್ಳದು, ಶೆನ್ನು ತೇವರ್ ಹಳ್ ಕೈ ತೊಳುವಾರ್ ಹಳೇ

ಕನ್ನಡ ನೆರಳ್

ಇಂಗುತ ಪೋಗುವೊಲ್ ಈರ್ ದುರಿತಂಗಳ ಕೆಡಿಸಿ, ಸಂಗತನಾಗೊಡಲನು ಪೊಗದವೊಲ್ ಮೇಲ್ ಬಾಳ್ ಗೊಳ್ಪವನ್
ನಿಂದಿಹ ವೇಂಕಟಂ ಮೇಲ್ ನೆಲದಿರುವಂತದೈ ಸಂದಿದೋ ಕೈಯಿಂ ತೊಳಗುವವರ್ ದೇವರ್ಗಳಲಾ!

"ಸತ್ತಮೇಲಿನ ಆ ವೈಕುಂಠಾನುಭವ ನಿಮಗೆ ಬೇಕೆ?" ಪ್ರೇಮಾಂಧನಾದ ನನಗೆ ಆ ಪ್ರಶ್ನೆ ಹಾಕಬೇಡಿರಯ್ಯಾ! ಈ ಭೂ ವೈಕುಂಠವೋ, ಆ ವೈಕುಂಠವೋ? ತಿಮ್ಮಪ್ಪನಲ್ಲಿನ "ಸೌಶೀಲ್ಯ" ಅಂದರೆ, ಎಷ್ಟೊಂದು ಮಹಾನ್ ಆತ! ನಾವೋ ಅಷ್ಟೂ ಮಂದರು! ಆದರೂ ನಮ್ಮೊಡನೆ ಒಂದಾಗಿ ಬೆರೆಯುವ ಆ ಮಹಾಗುಣ, "ಮಹತಃ ಮಂದ್ಯೈಃ ಸಹ ನೀರಂಧ್ರೇಣ ಸಂಶ್ಲೇಷಃ" ಎಂಬುದನ್ನು ನೋಡಿದರೆ, ಎರಡರಲ್ಲೂ ನನಗೇನೇನೂ ತಾರತಮ್ಯ ಕಾಣದು ಎನ್ನುತ್ತಾರೆ ಈ ವಕುಳಾಭರಣರು.

ಇರು ವಿನೈಯುಮ್ = ಪುಣ್ಯ ಪಾಪರೂಪಿಗಳಾದ, ಎರಡೂ ಬಗೆಯ, ಪಾಪಗಳನ್ನೂ ಪಾಪವೇನೋ ಬೇಡ. ಪುಣ್ಯವೂ ಬೇಡವೆನ್ನುತ್ತೀರಾ? ಭಗವಂತನ ಯಥಾರ್ಥಾನುಭವಕ್ಕೆ ಪಾಪಕ್ಕಿಂತಲೂ, ಒಳ್ಳೆಯದಾಗಿಯೇ ಮೋಸಗೊಳಿಸುವ ಪುಣ್ಯವೂ ವಿಘ್ನಕಾರಿ. ಪಾಪವೆನ್ನುವುದು ತನ್ನನಗ್ನಸ್ವರೂಪದಿಂದಲೇ ಪ್ರಾಮಾಣಿಕವಾಗಿಯೇ, ವಿಷದಂತೆ, ವಿಘ್ನಕಾರಿ. ಪಾಪಕ್ಕಿಂತ ಈ ಸತ್ಕಾರ್ಯಗಳ ಸೋಗು. ವಿಷಮಿಶ್ರ ಭೋಜನದಂತೆ. ಪುಣ್ಯ ತೆರೆಮರೆಯಲ್ಲಿದ್ದು ಪ್ರಚ್ಛನ್ನ ವೇಷದಿಂದ, ಎಂತಹ ಒಳ್ಳೆಯವರಿಗೂ, ದಾರಿತಪ್ಪಿಸುವ ಮಹಾಮೋಹಕ ಶುಭಾऽऽಭಾಸ. ಪರಿಪೂರ್ಣಮೋಕ್ಷ ಪುಣ್ಯದಿಂದ ಸಿಗದು. ಇನ್ನೂ ಮೋಕ್ಷವನ್ನು ಮುಂದೆ ತಳ್ಳುತ್ತಲೇ, ನಮ್ಮನ್ನು ಹಳ್ಳಕ್ಕೇ ತಳ್ಳಿ ಬಿಡುತ್ತದೆ. "ಪುಣ್ಯಪಾಪೇವಿಧೂಯ" ಉಪನಿಷತ್ತೂ ಮೊಟ್ಟ ಮೊದಲಿಗೇ "ಪುಣ್ಯ"ವನ್ನೂ ಒದರಿಹಾಕಿ! ಕುದುರೆ ತನ್ನ ಕೂದಲನ್ನು, ಹಾವು ತನ್ನ ಪೊರೆಯನ್ನೂ ತಮ್ಮ ತಮ್ಮ ಕ್ಷೇಮಕ್ಕಾಗಿಯೇ ಹಾಗೆ ಗೈಯ್ಯುವಾಗ, "ಮನುಷ್ಯತ್ವಂ ಮುಮುಕ್ಷುತ್ವಂ" ಪ್ರಕೃತಿ ಪ್ರಾಕೃತ ಮಂಡಲದ ಜ್ಞಾತಾಜ್ಞಾತ ವಿಷಚಕ್ರಗಳಿಂದ ಮುಕ್ತರಾಗಿಬಿಡಿ. ಇದೇ ಮಾನವೀಯತೆ! ಸ್ವಾಮಿ ಈ ಉಭಯ ಪಾಪಗಳನ್ನು ಕೆಡಸಿಯೇ ತೀರುತ್ತಾನೆ. ಅವನ ದಾರಿಗೆ ಅಡ್ಡ ಬರಬೇಡಿ!

ಇನ್ನಿಪ್ಪೋಹ = ಮತ್ತೆ ಪುಣ್ಯಪಾಪೇಚ್ಛೆ ಏಳದಂತೆಯೇ ಇಂಗಿಯೇ ಹೋಗುವಂತೆ, ಒನ್ನಿ = ಪುನಃ ವಾಸನಾಶೇಷದಿಂದ ಒಟ್ಟಿಬರಬಹುದಾದ, ಆಕ್ಕೈ = ಪ್ರಕೃತಿ ಸಂಬಂಧವೆನ್ನುವ, ದೇಹಾದಿಗಳಲ್ಲಿ, ಪುಹಾಮೈ = ಈಜೀವಾತ್ಮನು ಹೊಗದಂತೆ, ಉಯ್ಯ = ಮೇಲ್ಗತಿಹೊಂದಿ, ಕೊಳ್ವಾನ್ = ಆಳ್ಗೊಳ್ಳಲೆಂದೇ, ನಮ್ಮಿಂದ ಕಾಯಕ ಕೈಂಕರ್ಯ ಸ್ವೀಕರಿಸಲೆಂದೇ, ನಿನ್ನ = ಬಂದು ನಿಂತೇ ಇರುವ ವೇಜ್ಗಡಮ್ = ಈ ವೆಂಕಟಾಚಲದ ನೀಳ್ ಭಗವದ್ ಭಾಗವತ ಋಷಿಮುನಿ, ನಾನಾ ಬಗೆ ಭಕ್ತರ ಸಂಬಂಧದಿಂದ ಶ್ಲಾಘ್ಯವಾದ, ನಿಲತ್ತು = ಈ ಭೂಮಿಯಲ್ಲೇ, ಉಳ್ಳದು = ಈ ದಾಸನಿರುವ ಭಾಗ್ಯಪೆತ್ತೆ!

ತೇವರ್ಹಳ್ = ಅಷ್ಟುದೂರ ಮೇಲೇರಿ ಹೋಗಲು ಸಮರ್ಥರಾದ ಅದೃಷ್ಟವಂತರು, ಶೆನ್ನು = ತಮ್ಮ ಪಾಲಿನಿಂದಲೇ ಸಂದು, ಕೈತೊಳುವಾರ್ಹಳ್ ಕೈಗಳಿಂದ ಅಂಜಲಿ, ಪುಷ್ಪಾರ್ಪಣಾದಿ ಸೇವೆಯೆಸಗುವರು. ಅಂತಹವರನ್ನು ನಾನು ಮನುಷ್ಯರೆಂದು ಭಾವಿಸೆನು, "ನತೇ ಮನುಷ್ಯಾ ದೇವಾಸ್ತೇ" ನನಗಂತೂ ಆ ಪರಮಪದ, ಈ ಪರಮಪದ ಒಂದೇ ಸಮ! ಕಾರಣ ತಿಮ್ಮಪ್ಪ ಎಂಥವರೊಡನೆಯೂ, ತನ್ನ ಪರತ್ವವಿದ್ದರೂ, ಆ ಗತ್ತನ್ನು ಭಾವಿಸದೆ ಒಂದೇ ತೆರ ಕಲೆಯುವ ಆ "ಸೌಶೀಲ್ಯ" ಮಹಾಗುಣವೊಂದನ್ನೇ ಕುರಿತು ನಿಮ್ಮ ಪ್ರಶ್ನೆ ಮುಂದುವರಿಸಿ! ಬೇರೆ ನನಗಾವುದನ್ನೂ ದಯವಿಟ್ಟು ಕೇಳಬೇಡಿ.

ತಮಿಳ್ ತಿರಳ್ ೧೦-೪-೪

ತಲೈ ಮೇಲ್ ಪುನೈನ್ದೇನ್ ಶರಣಂಗಳ್, ಆಲಿನ್ ಇಲೈಮೇಲ್ ತುಯಿನ್ನಾನ್ ಇಮ್ಮೈಯೋರ್ ಪಣಜ್ಗ
ಮಲೈ ಮೇಲ್ ತಾನ್ ನಿನ್ನು ಎನ್ಮನತ್ತುಳ್ ಇರುನ್ದಾನೈ ನಿಲೈ ಪೇರ್ಕ್ಕಲಾಹಾಮೈ ನಿಚ್ಚಿತ್ತಿರುನ್ದೇನೇ

ಕನ್ನಡ ನೆರಳ್

ತಲೆಮೇಲ್ ಸೂಡಿದೆ ಚರಣಗಳಂ! ಆಲದ ಎಲೆ ಮೇಲ್ ಮಲಗಿಹನಾ; ಅನಿಮಿಷರ್ ಬಾಗುವೊಲು
ಮಲೆಮೇಲ್ ತಾನೇ ನಿಂದೆನ್ ಮನದೊಳಗಿಹನಾ ನೆಲೆಬಿಡದವನಾ ನಿಚ್ಚಯಿಸಿಯೇ ಇರುವೆನಲಾ!

ನನ್ನೀ ಮನದಲ್ಲೇ ವಿಶೇಷ ಕೃಪೆಯಿಂದ ಸ್ಥಿರವಾಸ ಮಾಡುತ್ತಿರುವವನನ್ನು ಯಾರೂ ಕದಲಿಸಲಾರರು! ಹೀಗೆ ತಮ್ಮ ಕೃತಕೃತ್ಯತೆಯನ್ನು ಆಳ್ವಾರ್ ಈ ಪಾಶುರದಲ್ಲಿ ಅರುಹುತ್ತಾರೆ. ಶರಣಜ್ಗಳ್ = ಸ್ವಾಮಿಯ ಚರಣಗಳನ್ನು, ತಲೈ ಮೇಲೆ ಪುನೈನ್ದೇನ್ = ಇದೋ ನನ್ನತಲೆಗೊಡವೆಯಾಗಿಸಿದೆ! ಪರಮಾಚಾರ್ಯರೂ, **"ತ್ರಿವಿಕ್ರಮ ತ್ವಚ್ಚರಣಾಂಬುಜದ್ವಯಂ ಮದೀಯಮೂರ್ಧಾನಂ ಅಲಂಕರಿಷ್ಯತಿ"** ಈ ಆಳ್ವಾರರು ಹೊಂದಿದ ಈ ಪರಮ ಪ್ರಯೋಜನವನ್ನೇ ಪ್ರಾರ್ಥಿಸಿಪಡೆಯುತ್ತಾರೆ. ಶರಣರಿಗೆ ಎಲ್ಲಾ ಸತ್‌ಫಲಗಳೂ ಅಪ್ರಾರ್ಥಿತ.

ನೀರೇನೀರಾದ ಒಂದು ಪ್ರಳಯಕಾಲದಲ್ಲಿ, ಬಾಲಕೃಷ್ಣ,

"ಕರಾಽರವಿಂದೇನ ಪದಾಽರವಿನ್ದಂ ಮುಖಾಽರವಿಂದೇ ವಿನಿವೇಶಯನ್ತಮ್
ವಟಸ್ಯ ಪುತ್ರಸ್ಯ ಪುಟೇ ಶಯಾನಂ ಬಾಲಂ ಮುಕುನ್ದಂ ಮನಸಾ ಸ್ಮರಾಮಿ"

ಕಾಲಿನ ಹೆಬ್ಬೆರಳನ್ನು ಬಾಯಲ್ಲಿಟ್ಟು ಚೀಪುತ್ತಿದ್ದಾನೆ! ಮಲಗಿರುವುದು ಒಂದು ಎಳೆಯ ಆಲದೆಲೆಮೇಲೆ! ಪುಟಾಣಿ ಹೊಟ್ಟೆಯಲ್ಲೇ ಸಮಸ್ತ ಚೇತನ ಅಚೇತನಗಳ ಸೂಕ್ಷಾಂಶವನ್ನೂ ಇಟ್ಟು ರಕ್ಷಿಸುತ್ತಾ ಮುಂದೆ ಮೋಕ್ಷ ಪ್ರದನಾಗುತ್ತಾನೆ. ಈ ಹಾಡಿನಲ್ಲಿ ಈ ಸಂದರ್ಭಕ್ಕೆ ಔಚಿತ್ಯವೇನು?

ಆಳ್ವಾರರ ತಲೆ ಮೇಲೆ ಸ್ವಾಮಿಪಾದ ಸ್ವಾಲಂಕಾರ ಪಡೆದುದೂ ಅತನ ತಪಃಫಲ! ತನ್ನ ಪುರುಷಾರ್ಥಕ್ಕಾಗಿಯೇ, ಸಕಲ ಸೃಷ್ಟಿ ಸ್ಥಿತಿ ಪ್ರಳಯ ಮುಕ್ತಿ ಪ್ರದಾನಾದಿಗಳು. ಜೀವಾತ್ಮರ ತಪಸ್ಸೂ, ಪುರುಷಾರ್ಥಗಳೆನ್ನುವುವೆಲ್ಲಾ, ಏನೆಯ ಹಂತದ್ದು, ಮುಖ್ಯ ಪ್ರಧಾನವಿಚಾರ, ಎಲ್ಲಾ ದೇವರೇ ದೇವರಿಂದ ದೇವರಿಗಾಗಿಯೇ ಈ ಅದ್ವೈತದ ಮಧುರ ನಿಷ್ಠೆಯನ್ನು ಆಳ್ವಾರ್ ಇಲ್ಲಿ ನಮಗೆಲ್ಲಾ ತೋರುತ್ತಾರೆ. ಪ್ರಳಯಾರ್ಣವದಲ್ಲಿ ತಪಸ್ಸುಮಾಡಿದ್ದು ಶತಕೋಪ ಶರಣನ ಹೃದಯಪದ್ಮದಲ್ಲಿ ನೆಲೆಸುವ ಮಹಾಫಲಕ್ಕಾಗಿ! ಸ್ವಾಮಿಯ ಕೃಷಿಫಲ! ಮಲೈಮೇಲ್ = ಮಲೆ ಎಂದರೆ ತಿರುಮಲೆಯೇ ಎಂಬ ರಹಸ್ಯ! ಅದರ ಶಿಖಿರದಲ್ಲಿಯೇ. ಇಮ್ಮೈಯೋರ್ = ರೆಪ್ಪೆಮುಚ್ಚದ ನಿತ್ಯಸೂರಿಗಳೂ, ಅನಿಮಿಷರೂ ಸದಾಜಾಗರಣದಲ್ಲಿದ್ದೇ, ವಣಜ್ಗ = ಸೌಶೀಲ್ಯಾದಿ ಅಸದಳ ಗುಣ ಸಂಪನ್ನನಿಗೆ ನಮಸ್ಕರಿಸುವಂತೆ, ತಾನ್ = ತಾನೇ ಸ್ವತಃ ಬಯಸಿ, ನಿನ್ನು = ನಿಂತೇ ತಪೋನಿಷ್ಠನಾಗಿ, ಅದು ಸಾತ್ಮ್ಯಸ್ಥಿತಿಗೆ ಬಂದ ಮೇಲೆ, ಎನ್ ಮನತ್ತುಳ್ ಇರುನ್ದಾನೈ = ಈ ಭಗವದಭಿಮಾನ ಪಾತ್ರನಾದವನ ಚಿತ್ತದಲ್ಲಿ ತಂಗಿದ್ದಾನೆ. ಅಂತಹವನನ್ನು, ನಿಲೈ ಪೇರ್‌ಕ್ಕಲಾಹಾಮೈ = ಯಾರೂ ಪುನಃ ಕದಲಿಸಲಾರರೆಂಬುದನ್ನು, ನಿಚ್ಚಿತ್ತು ಇರುನ್ದೇನೇ = ನಿಶ್ಚಯಿಸಿಯೇ ಬಿಟ್ಟಿದ್ದೇನೆ!

ಈ ಪ್ರಸಂಗದಿಂದ ತಿಳಿಯಬೇಕಾದ ಅಂಶವೆಂದರೆ, ಸ್ವಾಮಿ ತಾನಾಗಿಯೇ ತನಗಾಗಿಯೇ ಗೈಯ್ಯುವ ಪ್ರಪ್ರಥಮ ಪ್ರಯತ್ನಗಳ ನಾನಾ ರೀತಿಗಳನ್ನು ನಾವರಿಯಬೇಕು. ಆಗಲೀಗ ನಮಗೆ ಯಾವೊಂದು ದುಃಖವೂ ತಾಗದು. "ಆನಂದಂ ಬ್ರಹ್ಮಣೋವಿದ್ವಾನ್ ನಬಿಭೇತಿ ಕುತಶ್ಚನ". "ತಪ ಆಹ್ಲಾದೇ" ಎಂಬುದರಿಂದ, ಆನಂದದಿಂದ ತಪಸ್ವಿಯಾದವನ ಕೃಷಿ ಪರಂಪರೆಗಳನ್ನೇ ನೆನೆಯುತ್ತಿದ್ದರೆ ಬುದ್ಧಿ ಪೂರ್ವಕವಾದ, ನಮ್ಮ ವತಿಯಿಂದ ಸಂಭವಿಸಬಹುದಾದ "ಪ್ರಾತಿಕೂಲ್ಯ"ಕ್ಕೂ ಹೆದರಬೇಕಿಲ್ಲ! ಮುಖ್ಯವಾದ ಅಂಶ

"ವಿಪದೋ ನೈವ ವಿಪದಃ ಸಂಪದೋ ನೈವ ಸಂಪದಃ ವಿಪದ್, ವಿಸ್ಮರಣಂ ವಿಷ್ಣೋಃ ಸಂಪನ್ನಾರಾಯಣಸ್ಮೃತಿಃ
ಯನ್ ಮುಹೂರ್ತಂ ಕ್ಷಣಂ ವಾಪಿ ವಾಸುದೇವೋ ನ ಚಿನ್ಮತೇ ಸಾ ಹಾನಿಃ! ತನ್‌ಮಹಚ್ಛಿದ್ರಂ! ಸಾಭ್ರಾನ್ತಿಃ! ಸಾ ಚ ವಿಕ್ರಿಯಾ!"

ಸರ್ವತ್ರವಾಸಮಾಡುತ್ತಾ, ಸರ್ವವನ್ನೂ ತನ್ನೊಳಗೇ ಇರಿಸಿರುವ ಈ ಉಭಯ ರಹಸ್ಯವನ್ನೂ ಮಾನವ ಮನನ ಮಾಡುತ್ತಿದ್ದರೆ, ಅದೇ ನಮ್ಮ ಸರ್ವ ಸಂಪತ್ತು. ಇಲ್ಲದಿದ್ದರೆ, ಅದೇ ಮಹಾವಿಪತ್ತು! ಅತ ವಸ್ತುತಃ ಎಲ್ಲರ ಮನೋಮಂದಿರದಲ್ಲಿ ಬಿಡದಿರುವಾಗ, ವಾಸ್ತವಿಕತೆಗೇ ತಲೆಬಾಗೋಣ.

ತಮಿಳ್ ತಿರಳ್ ೧೦-೫-೬

ಮೇಯಾನ್ ವೇಜ್ಗಡಮ್| ಕಾಯಾ ಮಲರ್ ವಣ್ಣನ್ ಪೇಯಾರ್ ಮುಲೈಯುಣ್ಡ| ವಾಯಾನ್ ಮಾದವನೇ

ಕನ್ನಡ ನೆರಳ್

ಬಂದಿಹನ್ ಎಂದೂ ವೇಂಕಟದಿ| ಚೆಂದಗಸೆಯ ಮಲರ್ ಬಣ್ಣನ್ ಪೇಯವಳ್ ಮೊಲೆಯುಂಡಾ| ಬಾಯವನ್ ಮಾಧವನ್ನೆ!

ನಮ್ಮಂಥವರಿಗಾಗಿಯೇ, ನಾವಿದೋ ಕಣ್ಣಿನಿಂದಲೂ ಕಂಡು ಆಶ್ರಯಿಸಲೆಂದೇ ತಿಮ್ಮಪ್ಪ ಈ ವೇಂಕಟಾದ್ರಿಯಲ್ಲಿ ನಿತ್ಯವಾಸ ಮಾಡಿರುವುದು. ಅಭಿರುಚಿಯುಳ್ಳವರೆಲ್ಲರೂ ಈ ಶ್ರಿಯಃಪತಿಯನ್ನು ಆಸರಿಸಿರಿ. ವಿಶ್ವಮಾನವರ ಮೆಲಿನ ಪರಮ ಕರುಣೆಯಿಂದ, ವಿಶ್ವದ ಎಲ್ಲರೂ ಒಪ್ಪುವ ಶೈಲಿಯಲ್ಲಿಯೇ ನಮ್ಮಾಳ್ವಾರ್ ಎಂದೇ ಸರ್ವಸಮಸ್ತರ ಪಾಲಿಗೆ ಶರಣಾಗ್ರಗಣಿಗಳಾದವರು ಪರೋಪದೇಶ ಗೈಯ್ಯುವುದೇ ಈ ಪುಟಾಣಿ ದಶಕ, ಚುಟುಕು ಸಾಹಿತ್ಯ, **"ಕಣ್ಣನ್ ಕಳಲಿಣೈ"** ೫೦೦೦ ವರ್ಷಗಳಲ್ಲೇ ತಮಿಳು ಜ್ಞಾನಪೀಠದಿಂದ "ಘನವಾದ ಸರಳ ಕೃತಿ"

ಎಂದು ಈ ದಶಕದ ತಿರುವಾಯ್‌ಮೊಳಿಗೆ ಮಹಾಮಾನ್ಯತೆ ದೊರತಿದೆ. ''ಶಂಗಪ್ಪಲಹೈ'' ದಕ್ಷಿಣ ಮಧುರೈಯ ಈ ಪರೀಕ್ಷೆಯಲ್ಲಿ ಶಠಕೋಪರು, ತಮಿಳ್, ಸಾಹಿತ್ಯದ ಶಿರೋಮಣಿಯಾಗಿಯೂ ಪರಿಗಣಿಸಲ್ಪಟ್ಟಿದ್ದಾರೆ, ಈ ತಿರುಮಾಲ್ ಕವಿ!

ಭಕ್ತಿ ಮಾಡಲು ಒಂದು ಆಲಂಬನವಾದ ಮಂತ್ರವನ್ನು ಈ ಸಿರಿಬಾಯ್‌ನುಡಿಯ ಆರಂಭದಲ್ಲಿಯೇ (೧-೨-೧೦) ''ವಣ್ ಪುಹಳ್ ನಾರಣನ್'' ''**ಧಾರಾಳದ ಪೊಗಳಿನ ನಾರಾಯಣ**'' ಎಂದೇ ಉಪಕ್ರಮಿಸಿದವರು, ಕೊನೆಗೆ ಇಲ್ಲಿ ಉಪಸಂಹರಿಸುತ್ತಾರೆ. 'ತಿಣ್ಣಮ್ ನಾರಣಮೇ' ''ನಾರಣನ್ ಎಮ್ಮಾನ್'' ಇಡೀ ಸರ್ವನರ ಸಮೂಹಗಳಿಗೇ ಅಧಾರನೂ, ಅವುಗಳೆಲ್ಲದರೊಳಗೆ ಇದ್ದು ನಿಯಮನ ಕರ್ತನೂ, ''**ವ್ಯಾಪಕನಾಮ ನಾರಾಯಣ**'' ಇದೊಂದು ಸಾಂಪ್ರದಾಯಿಕ ಸಂಜ್ಞಾ ಪರಿಭಾಷೆಯಲ್ಲ. ಪಾಂಥಿಕವಲ್ಲ! ಇದು ಶಿಕ್ಷಿತರಲ್ಲಿ ಮೂಡಬೇಕಾದ ತುರ್ತು. ಸಂಪೂರ್ಣ, ಸಮಗ್ರ ವಿಚಾರ ''ನಾರಾಯಣ'' ಈಚತುರಕ್ಷರದಲ್ಲಿದೆ.

''ತಿಣ್ಣಮ್ ನಾರಣಮೇ'' ''ನಾರಣನ್ ಎಮ್ಮಾನ್'' ಈ ರೀತಿ ಆರಂಭದ ಪ್ರತಿಜ್ಞೆಯ ನಿಗಮನ ಇಲ್ಲಿ ನಡೆದಿದೆ. ಈ ದಶಕದ ಮಹಿಮೆಯನ್ನು ಕೊನೆಯಲ್ಲಿ ಇವರೇ ''ಅಡಿಯಾರ್‌ಕ್ಕು ಅರುಳ್ ಪೇರೇ'' ನಾರಾಯಣನ ಪಾದ ಕಿಂಕರರ ಮೇಲೆ, ಆತನ ಕೃಪೆಯೇ ಫಲ! ಎನ್ನುತ್ತಾರೆ. ಮೊದಮೊದಲಿಗೆ ಉನ್ನತ ಶಬ್ದಗಳು ಬಾಯಲ್ಲಿ ಬರುತ್ತಿರಲಿ. ಕ್ರಮ ಕ್ರಮವಾಗಿ ನರಸಮೂಹ ವಿಕಾಸಗೊಳ್ಳುತ್ತದೆ. ಒಳಗಣ ಭಾವನೆಗೂ, ಹೊರಗಿನ ಮಾನವನ ಕ್ರಿಯಾಚಾರಕ್ಕೂ, ನಡುವಿನ ಬಾಗಿಲು ಬಾಯಿ! ಅಂದರೆ ಒಳ್ಳೆಯ ಮಾತು! ಈ ತಿರುವಾಯ್‌ಮೊಳಿ ಕಲ್ತವರಿಗೆ ಮನಃ ಪ್ರಸನ್ನತೆ ನಿಶ್ಚಿತ. ಸರ್ವೇಶ್ವರನೇ ತಮಗಿತ್ತ ಪರಮಾತ್ಮನ ಸಾಧರ್ಮ್ಯವನ್ನು ಆಳ್ವಾರ್ ತಮ್ಮ ಕೃಪಾಶ್ರೀ ಸೂಕ್ತಿ - ಅರುಳಿ ಚ್ಚೆಯಲ್ - ಗಳಿಂದ ನಮಗೀಯಲಾರರೇ? 'ಮಾರನ್‌ಶೊಲ್-ವೇರಾಹವೇ ವಿಳೈಯುಂ ವೀಡು' - ವರವರಮುಗಿ.

ವೇಙ್ಗಡಮ್ ಮೇಯಾನ್ = ತಿರುಮಲೆಯಲ್ಲಿ ಪರಮಶಾಂತಿಯಿಂದ ನಿಂತಿದ್ದಾನೆ. ಕಂಡರೇ ಸಾಕು. ಯಾರು ತಾನೆ ಅವನ ಸೇವೆ ಮಾಡದೆ ಹೋಗುವರು? ಕಾಯಾ ಮಲರ್ ವಣ್ಣನ್ = ಅತಸೀ ಪುಷ್ಪ ಸಂಕಾಶ! ಅಗಸೇ ಹೂವು ತ್ರಿವೇಣೀ ವರ್ಣ ಸಂಗಮ. ಹಳದಿ, ಬಿಳುಪು, ವಲ್‌ವೆಟ್ ಈ ಮೂರೂ ಸೌಮ್ಯವಾಗಿ ಹೊಂದಿಕೊಂಡಿವೆ. ''ಲೈಟ್ ಟ್ರಿಕಲರ್ಡ್ ಫ್ಲವರ್!'' ಕಣ್ಣಿಗೆ ಮನಸ್ಸಿಗೆ ಶರೀರಕ್ಕೆ ಇವುಗಳ ಮೂಲಕ ಆತ್ಮಕ್ಕೆ ತಂಪೆರೆದು, ತಾನೂ ತಂಪಡೆಯುವವನು! ನಮಗೆ ವಿರೋಧಿ ಸ್ವರೂಪಗಳು ಬೇಕಾದಷ್ಟಿವೆಯಲ್ಲಾ! ಇತ್ತ ಪ್ರೀತಿಯ ನಟನೆ! ಅತ್ತ ಕೊಲ್ಲುವ ಹವಣಿಕೆ. ಇದೇ ಪೂತನಿಯ ವ್ಯಕ್ತಿತ್ವದ ಸಂಗ್ರಹ ವ್ಯಾಖ್ಯೆ. ಹೊರಪೊರಗೆ ಒಳ್ಳೆಯವರೇ! ಒಳಗೊಳಗೆ? ಇದಕ್ಕೆಲ್ಲಾ ಸಂಕೋಚ ಪಡಬೇಡಿ. ಸ್ವಾಮಿ ಬಾಲಕೃಷ್ಣ ಅವಳ ಒಂದೇ ಗುಣಾಂಶಕ್ಕೆ ಮೆಚ್ಚಿದ. ಏನದು? ಬೇರೆ ಬಾಲಕರಿಗೆ ಅಕೆ ನೀಡದೆ ಕೃಷ್ಣನಿಗೇ ವಿಷಮಿಶ್ರ ಸ್ತನ್ಯ ಕೊಡಲು ''ಅನನ್ಯತೆ'' ತೋರಿದವಳು. ಇದರಿಂದ ವಿಷವೂ ಸ್ವಾಮಿಗೆ ರುಚಿ ನೀಡಿತೇ ಹೊರತು ಅತನ ಪ್ರಾಣ ಕಳೆಯಲಿಲ್ಲ! ಪೇಯಾರ್ ಮುಲೈಯುಂಡ = ಪಿಶಾಚಿಯ ಮೊಲೆ ಹಾಲು ಕುಡಿದ. ವಾಯಾನ್ = ಮಧುರಬಾಯಾಂತವನು ನಮ್ಮ ನಿಮ್ಮ ಪಾಪ ವಿಘ್ನಗಳನ್ನು = ತನ್ನ ನಾಮೋಚ್ಚಾರಣದ ನಲ್ಮೆಯೊಂದನ್ನೇ ನೆನೆದು ಪರಿಹರಿಸಿ ಬಿಡುವನು. ನಮ್ಮ ತಪ್ಪುಗಳೇ ಅತನಿಗೆ ಫಲಾಹಾರ. ಜಿಹ್ವೆಯಿಂದ ''ನಾರಾಯಣ'' ಹೊರಡುತ್ತಿರಲಿ! ಅವರವರೇ ಕಾಲಕ್ರಮದಲ್ಲಿ ಸರಿಹೋಗುವೆವು. ಈ ಮಹಾವಿಶ್ವಾಸವೇ ''ಪ್ರಜಾಧರ್ಮ''ವೂ ಹೌದಷ್ಟೇ! ನಮ್ಮ ಹಿಂದಿನ ಕೊಂಕುಡೊಂಕುಗಳನ್ನೆಲ್ಲಾ ನೋಡದಂತೆ ಶಿಫಾರಸು ಮಾಡುವ, ಮಾ = ಲಕ್ಷ್ಮಿಗೆ, ದವನ್ = ವಿಧೇಯನಾದ ಪತಿ ಶ್ರೀನಿವಾಸ! ಕರುಣಾ + ಕ್ಷಮಾ = ತಿಮ್ಮಪ್ಪ! ದಿವ್ಯದಂಪತಿಗಳಿರುವಾಗ ಏನೇನೂ ಕೊರೆ ಪಡಬೇಡಿ!

ತಮಿಳ್ ತಿರಳ್ ೧೦-೭-೮

ತಿರುಮಾಲ್ ಇರುಮ್ ಶೋಲೈ ಮಲೈಯೇ ತಿರುಪ್ಪಾರ್‌ಕ್ಕಡಲೇ ಎನ್ ತಲೈಯೇ
ತಿರುಮಾಲ್ ವೈಹುನ್ದಮೇ ತನ್ ತಿರುವೇಙ್ಗಡಮೇ ಎನದುಡಲೇ
ಅರುಮಾ ಮಾಯತ್ತೆನದುಯಿರೇ ಮನಮೇ ವಾಕ್ಕೇ ಕರುಮಮೇ
ಒರು ಮಾ ನೊಡಿಯುಮ್ ಪಿರಿಯಾನ್ ಎನ್ ಊಳಿ, ಮುದಲ್ವನ್ ಒರುವನೇ

ಕನ್ನಡ ನೆರಳ್

ತಿರುಮಾಲ್ ಇರುಮ್ ಶೋಲೆಯ ಮಲೆಯನ್ನೇ ಸಿರಿಸಿಕ್ಕಿದ ಹಾಲ್ಗಡಲನ್ನೇ ಎನ್ ತಲೆಯನ್ನೇ
ಸಿರಿಜತೆಗಿಹ ಮಿಥುನಾಯನ ವೈಕುಂಠವನೇ ತಣ್ಣನ ಸಿರವೇಂಕಟವನ್ನೇ ಎನ್ನಿದೋ ಒಡಲನ್ನೇ
ದುರಂತದ ಮಾ ಮಾಯೆಯೊಳ್ ತೊಡರಿಹ ಎನ್ ಆತ್ಮವನೇ ಮನವನೇ ಮಾತನೇ ಕರುಮವನೇ
ಪಿರಿಯನ್ನೆ ಓರ್ ಚಣ ಕಣದೊಳು ಕಾಲಾಧಿಪ ಕಾರಣನಾಗಿಯೂ ಎನ್ನೊಳ್ ಚಪಲನೆ ಓರ್ವನಿದೋ!

''ಜ್ಞಾನೀತು ಆತ್ಮೈವ ಮೇಮತಮ್'' ಎಂಬ ಗೀತಾಚಾರ್ಯನ ಅಭಿಪ್ರಾಯವನ್ನು, ''ಉಪದೇಕ್ಷ್ಯನ್ತಿ ತೇ ಜ್ಞಾನಮ್'' ಮುಂದೆ ಕಲಿಯುಗದಲ್ಲಿ, ಅರ್ಜುನಾ! ಸಂತರು ಉಪದೇಶಿಸುವರು. ಏಕೆಂದರೆ, ಅವರೇ ನನಗೆ ಅತ್ಯನ್ತ ಪ್ರಿಯರಾದ ''ತತ್ವದರ್ಶಿಗಳು'' ಯುಗ

ಪುರುಷರು! ನನ್ನಲ್ಲೇ ಅನನ್ಯ ಭಕ್ತರು. ನಿತ್ಯಯುಕ್ತರು, ನಿತ್ಯದಾಸರು. ನಾನೇ ಅವರಿಗೆ ಪರಮ ಗತಿ, ಜ್ಞಾನದ ಸಮಗ್ರ ಸಂಪೂರ್ಣ ಜಂಗಮ ನಿದರ್ಶನರು! ನಾನೂ ನಡೆಸಲಾಗದ ಅಹಿಂಸಕ ಸಮಾಜ ಕ್ರಾಂತಿಕಾರರು. ಅವರಿಗೆ ಋಷಿಗಳಂತೆ ಎಂದೂ ಕೋಪ ತಾಪ ಸುಳಿಯದು. ಶಾಪ ನೀಡರು! ಸತ್ಯಪ್ರೇಮ ಕರುಣಾಮೂರ್ತಿಗಳು. ಎಂದಿರುವುದಕ್ಕೆ, ಈ ಹಾಡು ಒಳ್ಳೆಯ ಸಾಕ್ಷಿ!

ನಮ್ಮಾಳ್ವಾರರ ಒಡಲು, ಅಂಗಾಗಂಗಳಲ್ಲೆಲ್ಲಾ ತಿಮ್ಮಪ್ಪನಿಗೆ ಅದೆಷ್ಟು ಪ್ರೀತಿ! ಕೃಷ್ಣಾವತಾರದಲ್ಲಿ ಬಾಯಿಂದ ಹೇಳಲಾಗದ ಅತ್ಯರ್ಥ ಪ್ರೀತಿಯನ್ನು, ಶರಣರಿಗೆ ಈ ಅರ್ಚಾರೂಪೇಣ ತೋರುತ್ತಿದ್ದಾನೆ! ಯಾತ್ರಾ ಸ್ಥಳಗಳಲ್ಲಿ ಅನವರತ ಬೀಡುಗೊಂಡವನು, ನನ್ನಲ್ಲೇ ಆ ಸ್ಥಳಾಭಿಮಾನಗಳನ್ನೆಲ್ಲಾ ಇಟ್ಟಿರುವುದಿದೋ ಸ್ಪಷ್ಟವಾಗಿ ಕಾಣುತ್ತಿದೆ! ತಿರುಮಾಲ್ ಇರುಮ್ ಶೋಲೈಮಲೈಯೇ = ಮಧುರೆಯ ಸಮೀಪದಲ್ಲಿನ ತರುಷಂಡವನವನ್ನೇ, ತಿರುಪ್ಪಾರ್‌ಕ್ಕಡಲೇ = ಅಲ್ಲಿಂದಲೇ ಎದ್ದು ಕೈ ಹಿಡಿದ ಶ್ರಿಯಃಪತಿ! ಶೇಷಶಾಯಿ ಪವಡಿಸಿರುವ ಹಾಲ್ಗಡಲನ್ನೇ, ತಿರುಮಾಲ್ = ಮಹದೇವೀ ರಮಾರಮಣನಿಗೇ ನಿತ್ಯಭೋಗ ಭೂಮಿಯಾದ, ವೈಹುನ್ದಮೇ = ಯಾವೊಂದೂ ಪ್ರಾಕೃತದೋಷವೆಂಬ 'ಕುಂಟುತನ' ಇಲ್ಲದ ವೈಕುಂಠವನ್ನೇ, ಇವೆಲ್ಲವುಗಳಂತೆಯೇ, ತಿರುವೇಙ್ಗಡಮೇ = ಈ ತಿರುಮಲೆಯನ್ನೂ, ಎನದು ಉಡಲೇ = ನನ್ನೀ ಒಡಲನ್ನೂ, ಅರುಮಾ ಮಾಯತ್ತು = ಅನಾದಿ ಅಚಿತ್ ಸಂಬಂಧದಲ್ಲೇ ಮುಳುಗಿರುವ, ಎನದು ಉಯಿರೇ = ಅವನಿಂದಲೇ ಪಾರುಗಾಣಬೇಕಿರುವ ಈ ಆತ್ಮವಸ್ತುವನ್ನೂ, ಮನಮೇ = ಆತ್ಮದ ಚೈತನ್ಯ ಪ್ರಕಾಶ ಹರಿಯಲು ಕಾಲುವೆಯಂತಿರುವ ನನ್ನೀ ಮನ ಇಂದ್ರಿಯವನ್ನೂ, ಕರುಮಮೇ = ವಾಕ್, ಪಾಣಿಪಾದ ಪಾಯು ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳಿಂದಾಗುವ ಸರ್ವಕರ್ಮಗಳನ್ನೂ, ಒಂದೇ ತೆರದ ಪ್ರೀತಿ ವಿಶ್ವಾಸಗಳಿಂದ, ಏನೊಂದೂ ತಾರತಮ್ಯವಿಲ್ಲದೆ ನೋಡುತ್ತಲೇ ಇದ್ದಾನೆ! ಒರು ಮಾ ನೊಡಿಯುಮ್ = ಒಂದು ಹಿರಿಯ ಕ್ಷಣದ ಅವಾಂತರ ವಿಭಾಗದಷ್ಟು ಸೂಕ್ಷ್ಮಾSತಿ ಸೂಕ್ಷ್ಮಕಾಲವೂ, ಪಿರಿಯಾನ್ = ಬಿಡದೆ, ಪರಿಪೂರ್ಣ ನಿತ್ಯಸಾನ್ನಿಧ್ಯ ಗೈದಿದ್ದಾನೆ.

ಯಾರವನು? ಎನ್ನುವಿರಾ, "ಎನ್ ಊಳಿಮುದಲ್ವನ್" ಈ ದಾಸನಲ್ಲಿ ಅತ್ಯರ್ಥ ಪ್ರೀತಿ ಮಾಡಲೆಂದೇ ಸೃಷ್ಟಿಗೈದವ! ಕಾಲದೊಡನೆಯೇ ಕೂಡಿರುವ ಸಕಲ ಪಡಿಪದಾರ್ಥಗಳಿಗೂ ಅದಿಕಾರಣ. ಅದರಲ್ಲೂ ತ್ರಿವಿಧ ಕಾರಣ. ಸಕಲ ಚೇತನ ಅಚೇತನಗಳೂ ಯಾವ ಮೂಲವಸ್ತು ಇಲ್ಲದೆ ಇರಲಾರವೋ ಅಂಥ ಉಪಾದಾನ ಕಾರಣ. ಪ್ರಳಯದಲ್ಲಿ ಸೂಕ್ಷ್ಮ ಜಡ ಜೀವರನ್ನುಳ್ಳವನೇ, ಸೃಷ್ಟಿಯಲ್ಲಿ ಸ್ಥೂಲ ಜಡ ಜೀವಿ ಶರೀರಿಯಾಗುತ್ತಾನೆ. ಸೃಷ್ಟಿಯ ಫಲವೂ ಯಾವನಿಗೋ ಅಂತಹ ಹಾಗೂ ಸಂಕಲ್ಪ ಕರ್ತಾ ಯಾರೋ ಅಂತಹ ನಿಮಿತ್ತ ಕಾರಣನೂ ಅವನೇ, ಕಾಲಾದಿ ಸಮಸ್ತ ಸಹಕಾರಿ ವಸ್ತುಗಳನ್ನೂ, ತನ್ನದೇ ಪ್ರಕಾರಗಳನ್ನಾಗುಳ್ಳವನಾದುದರಿಂದ ಸಹಕಾರಿ ಕಾರಣನೂ ಆದವ ಒಬ್ಬನೇ! 'ಒರುವನೇ!' ಇಲ್ಲಿನ 'ಏ' ಎಂಬುದು ಅನ್ಯಯೋಗವಿಲ್ಲವೆಂಬುದನ್ನು ತಿಳಿಸುವುದು. ಅಬ್ರಹ್ಮಾತ್ಮಕವಾದ ಕಾರಣವಾಗಲಿ, ಕಾರ್ಯವಾಗಲೀ ಇಲ್ಲ.

ಸೀಮಿತ ಮೌಲ್ಯವುಳ್ಳ ಲೋಕ ದೃಷ್ಟಾನ್ತದಲ್ಲಿನ ಕಾರಣಗಳು ಮೂರೂ ಬೇರೆ ಬೇರೆಯೆಂದು ಕಾಣುತ್ತದೆ. ಗಡಿಗೆಗೆ ಮಣ್ಣು ಉಪಾದಾನ, ಕುಂಬಾರನು ನಿಮಿತ್ತ ಕಾಲ ದೇಶ ಪರಿಸ್ಥಿತಿ ಸಹಕಾರಿ. ಈ ಏಕಮೇವ ಅದ್ವಿತೀಯು ಎಂಬುವನಲ್ಲಿ ಮೂರೂ ಕಾರಣತ್ವಗಳೂ ಸಮಾವೇಶಗೊಂಡಿವೆ. ಅಭಿನ್ನ ನಿಮಿತ್ತೋಪಾದಾನ ಸಹಕಾರಿಕಾರಣತ್ವವೇ ಪರಬ್ರಹ್ಮದ ಲಕ್ಷಣ. "ಊಳಿಮುದಲ್ವನ್ ಒರುವನೇ"ಈ ತಮಿಳ್ ಪದ, ಉಪನಿಷತ್ತಿನ ಜಗತ್ ಕಾರಣ ಪ್ರಕರಣದ ಸಮಸ್ತ ಅರ್ಥ ಭಾವಗಳನ್ನೂ ಲಲಿತವಾಗಿ ತಿಳಿಸಿದೆ. ಅಂತೆಯೇ ಈ ಕೃತಿ, **"ದ್ರಾವಿಡ ವೇದ ಸಾಗರ!"** ಈ ಶರೀರ - ಆತ್ಮಭಾವ ಈಗ ದೇವರ ದೃಷ್ಟಿಯಲ್ಲಿ, ಪರಸ್ಪರ ಪರಿವರ್ತನೆ ಹೊಂದಿಬಿಟ್ಟಂತಾಗಿದೆ! ಸರ್ವಶರೀರಿಯಾದ ಜಗತ್ಕಾರಣನಿಗೇ ಈ ಶರಣರು ಶರೀರಿಯೇ ಆಗಿಬಿಟ್ಟಿರುವಂತೆ! ದೇವರೆಂಬುದು ಈಗ ಆತ್ಮವಲ್ಲ. ಇವರೇ ಆತ್ಮ "ಜ್ಞಾನೀ ತು ಆತ್ಮೈವ - ಮೇ ಮತಮ್" ಎಂಬುದು ಕೃಷ್ಣಮತ!

"ಮಲೈಯೇ, ಕಡಲೇ, ತಲೈಯೇ, ವೈಹುನ್ದಮೇ, ವೇಙ್ಗಡಮೇ, ಎನದುಡಲೇ, ಎನದುಯಿರೇ, ಮನಮೇ, ವಾಕ್ಕೇ, ಕರುಮಮೇ" ಈ ಹತ್ತೂ ಎಡೆಗಳಲ್ಲಿ "ಏ" ವಕಾರವಿರುವುದು ಗಮನಾರ್ಹ.ಇವುಗಲ್ಲೆಲ್ಲಾ ಏಕಕಾಲದಲ್ಲಿಯೇ ದೇಶ, ಕಾಲ ಒಂದಷ್ಟೂ ಬಿಡದೆ, ಪರ್ಯಾಪ್ತಿ ಸಂಬಂಧಕ್ಕಿಂತ ಘನವಾಗಿ, ಅಪೃಥಕ್ ಸಿದ್ಧನಾಗಿ, ಸ್ವಾಮಿ ತುಂಬಿದ್ದಾನೆ. ಯಾವೊಂದು ಇವುಗಳಲ್ಲೂ ಅಸಮಾನತೆ ಅಪೂರ್ಣತೆ ಇಲ್ಲ. ಮೌಲ್ಯ ತಾರತಮ್ಯವಿಲ್ಲ! ಸೌಭರಿ ಎಂಬ ಋಷಿಗಿಂತಲೂ ಹೆಚ್ಚಾಗಿಯೇ ಎಲ್ಲೆಲ್ಲೂ ಇರುವ ಸಂವೇದನಾ ವೈಭವನನ್ನು ಸೂಚಿಸುವ ಒಂದಕ್ಷರ ಈ "ಏ!" ಅನ್ಯಯೋಗ ವ್ಯವಚ್ಛೇದವೂ ಅಯೋಗವ್ಯವಚ್ಛೇದವೂ ಉಭಯವೂ ಇಲ್ಲಿ ವಿವಕ್ಷಿತ ಎಂಬ ಭಾವ* ಪರಮಾತ್ಮನು ಸಂತರಲ್ಲಿಟ್ಟಿರುವ ಪ್ರೇಮಾತಿಶಯವನ್ನು ಸಂತರ ಭಾಷೆಯಲ್ಲೇ ಕೇಳಿ ಆಹ್ಲಾದಿಸಬೇಕು. **"ಅದೊಂದೇ ಸರ್ವಶರಣರ ಬಂಡವಾಳ! ತಮ್ಮದಾಗಿ ಎನೇನೂ ಇಲ್ಲವೆಂಬ ಶೂನ್ಯಭಾವ!"**

---

* ಸೌಭರಿ ಪ್ರಭೃತಿಗಳ ನಾನಾ ದೇಹ ಪ್ರವೇಶಗಳು. ಕೇವಲ ಧರ್ಮಭೂತಜ್ಞಾನದ ವ್ಯಾಪಕತೆಯಿಂದಷ್ಟೆ. ಜೀವಾತ್ಮರೆಲ್ಲರ ಸ್ವರೂಪ 'ಅಣುವೇ' ಆಗಿರುವುದರಿಂದ ಜೀವಾತ್ಮ ಸ್ವರೂಪವ್ಯಾಪ್ತಿ ಒಂದೇ ಶರೀರದಲ್ಲಿ ಮಾತ್ರ. ಪರಮಾತ್ಮನ ಸ್ವರೂಪವೂ ವಿಭುವಾದುದರಿಂದ ಸರ್ವತ್ರ ಆತನಿರುವುದು, ಸ್ವರೂಪ ಹಾಗೂ ಸ್ವಭಾವಾದಿಗಳೊಡನೆಯೇ ಉಭಯಥಾ ಪರಿಪೂರ್ಣವಾಗಿಯೇ ಎಂಬ ವಿಶೇಷ.

ಶ್ರೀ ಕುಲಶೇಖರಾಳ್ವಾರ್

ಕುಲಶೇಖರಾಳ್ವಾರ್ ''ಪೆರುಮಾಳ್ ತಿರುಮೊಳಿ'' ''ಪರಮಾತ್ಮನ ಸಿರಿನುಡಿ'' = ಶ್ರೀರಾಮಚಂದ್ರನ ಸಿರಿನುಡಿ ಎಂಬ ತಮ್ಮ ಈ ದಿವ್ಯ ಪ್ರಬಂಧವನ್ನು, ಆ ಕಾಲದ, ಜನ ಸಾಮಾನ್ಯರ ತಮಿಳ್ ಭಾಷೆಯಲ್ಲಿ, ಇನಿದಾಗಿ ಹಾಡಿದ್ದು. ಒಟ್ಟು ೧೦ ದಶಕಗಳು. ಒಂದನೆಯದೇ ಶ್ರೀರಂಗದ ಪೆರಿಯ ಪೆರುಮಾಳ್ ಎಂದೇ ಪ್ರಸಿದ್ಧವಾದ ಶ್ರೀರಂಗನಾಥನ ಬಗೆಗೆ ತಮಗಿರುವ ಅಪಾರ ಅಭಿನಿವೇಶವನ್ನೂ ಅಲ್ಲಿನ ಭಕ್ತ ಜನರ ಕೂಟದ ಸಂದರ್ಶನದಲ್ಲಿ ತಮಗಿರುವ ಭಕ್ತಿ ಪಕ್ಷಪಾತವನ್ನೂ ಸೊಗಸಾಗಿ ತೋಡಿಕೊಂಡದ್ದೇ!

ಈಗ ಈ ನಾಲ್ಕನೆಯ ಸಿರಿನುಡಿ ದಶಕ ಪೂರಾ ಶ್ರೀ ವೇಂಕಟಾಚಲದಲ್ಲಿ ತಮಗಿರುವ ಆದರಾತಿಶಯವನ್ನು ಪ್ರಕಟಪಡಿಸುತ್ತಾರೆ. ತಿಮ್ಮಪ್ಪನ ಬೆಟ್ಟದಲ್ಲಿ ಏನಾದರೂ ಒಂದು ಪ್ರಾಣಿ, ಅಲ್ಲಿನ ತೀರ್ಥಪುಷ್ಕರಿಣಿಗಳಲ್ಲಿ ಒಂದು ಕೊಕ್ಕರೆಯಾಗಿ, ಮೀನಾಗಿ, ಹುಟ್ಟಿಸುವಂತೆ ದಯೆ ತೋರಿಸಲು ಪ್ರಾರ್ಥಿಸುತ್ತಾರೆ! ಒಂದು ಸಂಪಿಗೆ ಮರವಾಗಿ, ಒಂದು ಹುಲ್ಲು ಗರಿಕೆ ಬೊಡ್ಡೆಯಾಗಿ, ಒಂದು ಕೋಡುಗಲ್ಲಾಗಿ, ಹರಿಯುವ ಝರಿಯಾಗಿ, ಭಕ್ತರು ನಡೆದಾಡುವ ತಿರುಪತಿಯ ಹಾದಿಯಾಗಿ, ದೇವಾಲಯದ ಬಾಗಿಲ ಹೊಸಲಾಗಿ, ಸ್ವಾಮಿ ಎಲೆಲಡಕೆ ಜಗಿದು ಉಗುಳುವ ಹೊನ್ಪಟ್ಟಲನ್ನು ಪಿಡಿಯುವ ದಾಸನಾಗಿ, ನಾನೇಕೆ ಹೀಗೆಲ್ಲಾ ನಿರ್ದೇಶಿಸಲಿ! ತಿಮಪ್ಪಾ! ನಿನ್ನ ಗಿರಿಯಲ್ಲಿ ''ಏದೇನುಂ ಅವೇನೇ'' ನಿನ್ನ ಚಿತ್ತ, ನೀನೇ ನಾನಾಗುವಂತೆ ಎಸಗು! ಭಕ್ತರ ಕುಲಕ್ಕೇ ಇವರು ಶಿಖಾಮಣಿ! ರಾಜಭೋಗವನ್ನೂ ತೃಣೀಕರಿಸಿದವರು. ಇವರ ಶೈಲಿಯಲ್ಲಿ ''ರತ್ನದ ದೀಪ್ತಿ'' ಕಾಣುತ್ತದೆ 'Gems of Kulashekharan' ಎಂದೇ ಆಂಗ್ಲರೂ ಈ ಸಂಪೂರ್ಣಕೃತಿಯನ್ನು ಅನುವಾದಿಸಿದ್ದಾರೆ.

ಇವರು ಶ್ರೇಷ್ಠವಾದ ಮಾನವ ಜನ್ಮವನ್ನೂ ಬಯಸದೆ ತಿರ್ಯಕ್ ಸ್ಥಾವರಾದಿ ಜನ್ಮಗಳನ್ನೇಕೆ ಆಸೆ ಪಡುವುದು? ಮನನ ಶೀಲನಾದ ಮಾನವ ವಿವೇಕ ಶೂನ್ಯನೂ ಆಗಿ ಬಿಡಬಹುದು. ಇವರಾಸೆ ಪಡುವ ಹುಟ್ಟುಗಳಲ್ಲಾದರೆ, ಆ ಪತನ ಭಯವಿಲ್ಲ! ಇಂದಿಗೆ ಬಲು ಪ್ರಗತಿ ಶೀಲವೆನಿಸಿರುವ ''ಮಾನವೀಯತೆ''ಯನ್ನೂ ಧಿಕ್ಕರಿಸಿ, ಅದೂ ಪೂರಾ ಬಿಡುಗಡೆಯ ಮುಕ್ತಿಗೆ ಆತಂಕಕಾರಿಯೇ! ನಿಜವಾದ **''ಜಾತ್ಯಾತೀತತೆಯ''** ಮಹಾಮೌಲ್ಯವನ್ನು ಹಿಗ್ಗಿಸಿರುವುದು ಇವರ ಅಂತರನುಭಾವಕ್ಕೇ ಒಳ್ಳೆಯ ಕನ್ನಡಿಯಂತಿದೆ!

ಪೆರುಮಾಳ್ ತಿರುಮೊಳಿ ೪-೧

ಊನೇರು ಶೆಲ್ವತ್ತುಡಲ್ ಪಿರವಿ ಯಾನ್ ವೆಣ್ಡೇನ್, ಆನೇರೇಳ್ ವೆನ್ನಾನ್ ಅಡಿಮೈ ತ್ತಿರಮಲ್ಲಾಲ್
ಕೂನೇರು ಶಙ್ಗಮಿಡತ್ತಾನ್ ತನ್ ವೇಙ್ಗಡತ್ತು ಕೋನೇರಿ ವಾಳುಮ್ ಕುರುಹಾಯ್ ಪಿರಪ್ಪೇನೇ!

ಕನ್ನಡ ನೆರಳ್

ಬಿಂಕದ ಮಾಂಸಳ ಬೊಜ್ಜೊಡಲ್ ಹುಟ್ಟನು ನಾ ಬೇಡೆ! ಆ ತಂಕದ ಏಳ್ ಗೂಳಿಗಳ್ ಗೆದ್ದವನ್ ಅಡಿಯಾಳಿಗದೆಡೆಗಲ್ಪೆ
ಭೂರಿಯೆ ಬಾಗಿಹ ಶಂಕೆಡಕಾಂತವನಾತನ ವೇಂಕಟದಿ, ತೀರ್ಥದೊಳ್ ಬಾಳುವ ಸಾರಸಮಾಗಿಯೆ ಹುಟ್ಟುವೆನೇ?

ಯಾನ್ = ಭಗವತ್ ಕೃಪೆಯೊಂದರಿಂದಲೇ, ನನಗೆ ದಾಸ್ಯದ ಅರಿವು ಮೂಡಿದ್ದು, ಅಂತಹ ಇದೋ ನಾನು, ಆನ್ ಏರು ಏಳ್ = ಪಶುಪಾಲಕರ ಮಗಳಾದ ''ನೀಳೆ''ಯನ್ನೇ ಮದುವೆಯಾಗಬೇಕೆಂಬ ಆಸೆಯಿಂದ, ಸಪ್ತವೃಷಭಗಳನ್ನೂ ಬಾಲಕೃಷ್ಣ ಗೆದ್ದ. ಆ ಹುಡುಗಿಗೆ ವೀರಪತಿಯೇ ಬೇಕಿತ್ತು. ಅವಳ ತಂದೆಯ ಮನೆ, ಬಿಹಾರ ಪ್ರಾಂತ್ಯ. ಅತ ಯಶೋದೆಯ ತಮ್ಮನಾದ ಕುಂಭನೆಂಬುವನು. ಇಂತಹ ಶ್ರೀಕೃಷ್ಣನ ಅಡಿಮೈ ತ್ತಿರಮ್ ಅಲ್ಲಾಲ್ = ಕೈಂಕರ್ಯದ ಬಗೆಗಲ್ಲದೆ, ಊನ್ ಏರು ಶೆಲ್ವತ್ತು = ಮಾಂಸದ ಬೊಜ್ಜು ಹೆಚ್ಚಿಸುವ ಬರಿ ಸಿರಿತನವೆಂದು ಹೇಳಿಕೊಳ್ಳುವ, ಈ ಲೋಕಾಽಭಿರಾಮ ಬಹುಸಂಖ್ಯಾರೂಢಿಯ, ಉಡಲ್ = ಕ್ಷತ್ರಿಯ ರಾಜ ಜನ್ಮದಲ್ಲಿ ಪಿರವಿ = ಜನಿಸುವುದನ್ನು, ವೆಣ್ಡೇನ್ = ನಾನಿದೋ ಬಯಸುವುದಿಲ್ಲ. ರಾಜ್ಯಭಾರದ ಕಾರುಬಾರು ನನಗೆ ಬೇಡಾ!

ಕೂನ್ ಏರು = ಸ್ವಾಮಿಯ ''ಶೇಷಿತ್ವ''ವನ್ನು ಗುರುತಿಸುವಂತೆ ತಾನು ಸ್ವಲ್ಪವಾಲಿರುವ, ಶಙ್ಗಮ್ = ಪಾಂಚಜನ್ಯವನ್ನು, ಇಡತ್ತಾನ್ ತನ್ = ಎಡಗೈಯ್ಯಲ್ಲಿ ಪಿಡಿದಿರುವ ಪ್ರಧಾನ ತಿರುಮಲೇಶನ, ವೇಙ್ಗಡತ್ತು = ಬೆಟ್ಟದಲ್ಲಿನ, ಕೋನೇರಿ = ಸ್ವಾಮಿಪುಷ್ಕರಿಣಿಯಲ್ಲಿ, ವಾಳುಮ್ = ಬಾಳುವಂತಹ, ಕುರುಹು ಆಯ್ = ಕೊಕ್ಕರೆಯಾಗಿ, ಪಿರಪ್ಪೇನೇ = ಹುಟ್ಟುವ ಭಾಗ್ಯ ಪಡೆದಿದ್ದೇನೆಯೇ?

ತಮಿಳ್ ತಿರಳ್ ೪-೨

ಆನಾದ ಶೆಲ್ವತ್ತರ ಮ್ಟ್ಟಾಯರ್‌ಹಳ್ ತರ್‌ಚ್ಚೂಳ ವಾನಾಳುಮ್ ಶೆಲ್ವಮುಮ್ ಮಣ್ಣರಶುಮ್ ಯಾನ್ ವೇಣ್ಡೇನ್
ತೇನಾರ್ ಪೂಮ್ ಶೋಲೈ ತಿರುವೇಙ್ಗಡ ಚ್ಚುನೈಯಿಲ್ ಮೀನಾಯ್ ಪಿರಕ್ಕುಮ್ ವಿದಿಯುಡೈಯೇನ್ ಆವೇನೇ!

ಕನ್ನಡ ನೆರಳ್

ಕುಂದದ ಹರಯದ ಸಿರಿ ರಂಭಾಪ್ಸರೆ ಹೆಂಗಳರ್ ಸುತ್ತಲಿಹ ಅಂತಹ ಆ ಬಾನ್ ಆಳುವ ಸೊಗವದುಂ, ಈ ಮಣ್ಣರಸೊತ್ತಿಗೆಯುಂ ನಾನೊಲ್ಲೆ
ಜೇನ್ ತುಂಬಿಹ ಹೂದೋಟದ ಸಿರಿವೇಂಕಟದಲ್ಲಿನ ದೊಣೆಗಳೊಳ್ ಮೀನ್ ಆಗುತ ಪುಟ್ಟುವ ಸುಕೃತವನುಳ್ಳವನ್ ಆಗುವೆನೇ?

ರಾಜ್ಯೈಶ್ವರ್ಯ ಅಸ್ಥಿರವಾದುದರಿಂದ ಇಹಲೋಕದಲ್ಲಿ ಅಧಿಕಾರದರ್ಪದಿಂದ ಮೆರೆಯಬಹುದಾದ ರಾಜಕೀಯ ಬೇಡವೆಂದಿರಿ. ಅದು ಸರಿ. ಸ್ವರ್ಗ ಭೋಗ ಚಿರಕಾಲ ಇರುವಂತಹದು. ಎಂಬ ಯುಕ್ತಿಗೆ ಉತ್ತರ ಈ ೨ನೆಯ ಹಾಡು. ಎರಡೂ ದದ್ದು ಹೊರಹಾಕು ಎಂಬ ಗಾದೆಯಂತೆ. ಕೊಕ್ಕರೆಯಾದರೆ ಹಾರುವ ರೆಕ್ಕೆಗಳಿರುವುದರಿಂದ, ತೀರ್ಥವಾಸವನ್ನು ಆಗಾಗ ತ್ಯಜಿಸಿಯೂ ಬಿಡಲವಕಾಶವುಂಟು. ತೀರ್ಥವನ್ನೇ ಪ್ರಾಣಾಧಾರವಾಗುಳ್ಳ ತೀರ್ಥ ಸಂಬಂಧವಿಲ್ಲದಿದ್ದರೆ ಒಂದು ಕ್ಷಣದಲ್ಲೇ ಸತ್ತೇ ಹೋಗುವ ಮತ್ಸ್ಯಜನ್ಮ, ಹಿಂದಿನದಕ್ಕಿಂತ ಶ್ರೇಷ್ಠತರ! ಸಂತರಿಗೂ 'ಪರುಹುನೀರುಮ್ ಕಣ್ಣನ್' ಎಂಬಂತೆ ಸ್ವಾಮಿಯೇ ನೀರು! ಪ್ರಾಣಾಧಾರ.

ಆನಾದ = ನಶಿಸಿ ಹೋಗುವ, ಶೆಲ್ವತ್ತು = ಯೌವನ, ಸೌಂದರ್ಯಾದಿ ಭಾಗ್ಯಾssಭಾಸಗಳುಳ್ಳ. ಅರಮ್ಟ್ಟಾಯರ್‌ಹಳ್ = ರಂಭೆ ಊರ್ವಶಿ ಮೊದಲಾದ ಅಪ್ಸರೆಯರು, ತನ್ = ಪ್ರಾಧಾನ್ಯದಿಂದ ಈ ನನ್ನನ್ನು, ಶೂಳ = ಸುತ್ತಲೂ ಸುತ್ತಿಕೊಂಡು ಸುಖಲೋಲೋಪ್ತಿ ನೀಡುವ, ವಾನ್ = ಆ ಸ್ವರ್ಗಲೋಕವನ್ನೂ, ಆಳುಮ್ = ಆಳುವ ದೇವೇಂದ್ರನ, ಶೆಲ್ವಮುಮ್ = ಪಟ್ಟದ ಸಿರಿಯನ್ನೂ, ಯಾನ್ ವೇಣ್ಡೇನ್ = ಖಂಡಿತವಾಗಿಯೂ ನಾನು ಬೇಡುವವನಲ್ಲ! ಹಾಗಾದರೆ ಇಲ್ಲಿ ನಮ್ಮನ್ನೆಲ್ಲಾ ಆಳುತ್ತಾ ಈ ಕೇರಳನಾಡಿಗೇ ಅರಸರಾಗಿರಿ. ನಿಮ್ಮಂತಹ ರಾಜ ಭಕ್ತರ್ಷಿಗಳು ನಮಗೆಲ್ಲಿ ಸಿಗುವರು? ದುಷ್ಟರಾಜರಿಗಿಂತಲೂ ಶಿಷ್ಟರಾಜರಿಂದಲೇ ಪ್ರಜಾಶಕ್ತಿ, ಕಡಿಮೆಯಾಗುವುದಪ್ಪಾ! Welfare state ಗಿಂತ ilfarestate ನಿಂದ, **''ಪ್ರಜಾಜಾಗೃತಿಯಾದರೂ''** ಉಂಟಾಗುತ್ತದೆ! ಕರಾರುವಾಕ್ಕಾಗಿ ಹೇಳುತ್ತೇನೆ. ನಾನೂ ಹಾಳಾಗದಿರಲು ಪ್ರಜೆಗಳಾದ ನೀವೂ 'ಉದ್ಧರೇತ್ ಆತ್ಮನಾssತ್ಮಾನಂ' ಎಂಬಂತೆ, ಸ್ವಾವಲಂಬಿಗಳಾಗಿಯೇ ನೈಜ ಸ್ವತಂತ್ರರಾಗಲು, ಮಣ್ ಅರಶುಮ್ = ಈ ಸರಕಾರಗಳ ಭೂಧಾನ್ಯಾದಿ ಸ್ವಾಮಿತ್ವವನ್ನೂ, ಯಾನ್ ವೇಣ್ಡೇನ್ ತೇನ್ ಆರ್ = ಮಕರಂದ ತುಂಬಿರುವ, ಪೂಮ್ ಶೋಲೈ = ಪುಷ್ಪ ಬೆಳೆಯುವ ನಂದನ ವನಗಳೇ ಹೆಚ್ಚಿರುವ, ತಿರುವೇಙ್ಗಡಮ್ = ಎಂಬೀ ''ಪುಷ್ಪಮಂಟಪ''ದ, ಶುನೈಯಿಲ್ = ದೊಣೆಗಳಲ್ಲಿ, ಮೀನ್ ಆಯ್ = ಮೀನಾಗಿ, ಪಿರಕ್ಕುಮ್ = ಹುಟ್ಟುವಂತೆ, ವಿದಿ = ಭಗವತ್ ಕೃಪೆಗೆ, ಉಡೈಯೇನ್ = ಪಾತ್ರನಾಗುತ್ತೇನೆಯೇ?

ತಮಿಳ್ ತಿರಳ್ ೪-೩

ಪಿನ್ನಿಟ್ಟ ಶಡೈಯಾನುಮ್ ಪಿರಮನುಮ್ ಇನ್ದಿರನುಮ್ ತುನ್ನಿಟ್ಟು ಪ್ಪುಹಲ್ ಅರಿಯ ವೈಹುನ್ದ ನೀಳ್ ವಾಶಲ್
ಮಿನ್ನಿಟ್ಟ ಚ್ಚುಡರಾಳಿ ವೇಙ್ಗಡಕ್ಕೋನ್ ತಾನ್ ಉಮಿಳುಮ್ ಪೊನ್ಪಟ್ಟಿಲ್ ಪಿಡಿತ್ತುಡನೇ ಪುಹ ಪ್ಪೆರುವೇನ್ ಆವೇನೇ?

ಕನ್ನಡ ನೆರಳ್

ಪಿನ್ ತೊಂಗುವ ಜಡೆಯಪ್ಪನೂ ಬೊಮ್ಮನೂ ಇಂದಿರನೂ
ನುನ್ನುಗ್ಗೊಳು ಸಿಲುಕಿ ಹೊಗಲಾಗದ ವೈಕುಂಠದ ಹಿರಿಬಾಗಿಲೊಳು
ಮಿನ್‌ಚಲೆ ಪರಿಧಿಯ ದುಂಡನ ಜ್ಯೋತಿಶ್ಚಕ್ರದ ಸಿರಿವೇಂಕಟ ದೊರೆ ತಾನುಗಿವ
ಪೊನ್ ಬಟ್ಟಲ ಪಿಡಿದೇ, ಕಿಂಕರರೊಡನೇ ಒಳಹೊಗುವವನ್ ಆಗುವೆನೇ!

'ತಿರುಮಲೆರಾಯನ' ಅನ್ತರಂಗ ಕೈಂಕರ್ಯ ಸಿಗುವುದಾದರೆ ಹಿಂದೆ ನಾನೇ ನಿಷೇಧಿಸಿದ ಮನುಷ್ಯ ಜನ್ಮ ಬರಲಿ, ಎನ್ನುತ್ತೇನೆ. ಎಂಬೀ ಭಾವದಲ್ಲಿ ಈ ಮೂರನೆಯ ಪಾಶುರ. ಪಿನ್ = ಹಿಂದುಗಡೆ. ಇಟ್ಟ = ತೊಂಗುವ, ಶಡೈಯಾನುಮ್ = ಜಡೆಯಪ್ಪನಾದ ಕೈಲಾಸಾಧಿಪ ಪಾರ್ವತೀ ರಮಣನೂ, ಪಿರಮನುಮ್ = ಸತ್ಯಲೋಕ ಪಾಲಕನಾದ ಸರಸ್ವತೀ ಪತಿಯೂ, ಇನ್ದಿರನುಮ್ = ಸ್ವರ್ಗಕ್ಕೇ

ಒಡೆಯನಾದ ಶಚೀ ವಲ್ಲಭನೂ ಪರಮಾತ್ಮನ ಸೇವೆಗಾಗಿ ನಾ ಮುಂದು ತಾ ಮುಂದು ಎಂದು, ತುನ್ನಿಟ್ಟು = ಪರಸ್ಪರ ನೂಕಿ ತಳ್ಳುತ್ತಾ, ಪುಹಲ್ = ದೇವಾಲಯದ ಒಳಹೊಗಲು, ಅರಿಯ = ಸಾಧ್ಯವಾಗದಂತಿರುವ, ವೈಹುನ್ದುಮ್ = ಯಾವೊಂದು ಕೊರೆಯೂ ಸುಳಿಯದೆ ಭೂ ವೈಕುಂಠವೆನಿಸಿರುವ, ಆ ದಿವ್ಯ ಸನ್ನಿಧಿಯ, ನೀಳ್ = ಮಹೋನ್ನತವಾದ, ವಾಶಲ್ = ಮಹಾದ್ವಾರದಲ್ಲಿ. ಮಾನವ ಜನ್ಮ ಧರಿಸಿ ನಾನೂ, ಮಿನ್ ವಟ್ಟಮ್ = ಮಿಂಚಿನಂತೆ ದುಂಡನ, ಶುಡರ್ = ಜ್ಯೋತಿರ್ಮಯ, ಆಳಿ = ಚಕ್ರಧಾರಿಯಾದ, ವೇಜ್ಗಡಮ್ = ಋಣರೂಪವಾಗಿದ್ದು ಅನುಭವಿಸಲೇ ಅಂದರೆ ತೀರಿಸಲೇಬೇಕಾದ ಪುಣ್ಯಪಾಪೋಭಯವನ್ನೂ ಸುಟ್ಟೇ ಹಾಕುವ ''ವೇಮ್ ಕಡ'' ಗಿರಿಗೆ, ಕೋನ್‌ತಾನ್ = ಪ್ರಪ್ರಧಾನ ನಾಯಕನಾದ ವೇಂಕಟೇಶನು, ಉಮಿಳುಮ್ = ತಾಂಬೂಲ ಜಗಿದುಗಿಯುವಾಗ ಆತುಕೊಳ್ಳುವ, ಪೊನ್ = ಚಿನ್ನದ, ವಟ್ಟಿಲ್ = 'ಕಾಳಾಂಜಿ' ಎಂಬ ದಿವ್ಯ ಪತದ್ಗ್ರಹ ಪಾತ್ರೆಯನ್ನು, ಪಿಡಿತ್ತು ಎರಡೂ ಹಸ್ತಗಳಿಂದ ಮೇಲೆತ್ತಿ ಹಿಡಿದು, ಉಡನೇ = ಅಪ್ಪನಿಗೆ ಅಂತರಂಗ ಕೈಂಕರ್ಯಗೈಯ್ಯುವರೊಡನೆ, ಪುಹ = ಜತೆಗಿದ್ದೇ ಸೇರುವಂತೆ, ಪೆರುವೇನ್ = ಆ ಮಹಾಭಾಗ್ಯವನ್ನು ಹೊಂದುವವನಾಗಿ, ಆವೇನೇ = ಆಗುವೆನೇ? **'ಯಾತ್ರಾಧಾಮಗಳಲ್ಲಿ ಸ್ವಾಮಿ ಸೇವಾ ಭಾಗ್ಯವೇ ಮಾನವನ ಆಸ್ತಿ!'**

ತಮಿಳ್ ತಿರಳ್ ೪-೪

ಒಣ್ ಪವಳ ವೇಲ್ಯೆ ಉಲವು ತಣ್ ಪಾರ್ಕ್ಕಡಲುಳ್
ಕಣ್ ತುಯಿಲುಮ್ ಮಾಯೋನ್ ಕಳಲ್ ಇಣೈಹಳ್ ಕಾಣಬದರ್ಕ್ಕೆ
ಪಣ್ ಪಹರುಮ್ ವಣ್ಡಿನಙ್ಗಳ್ ಪಣ್ ಪಾಡುಮ್ ವೇಜ್ಗಡತ್ತು
ಶೆಣ್‌ಬಹಮಾಯ್ ನಿರ್ಕ್ಕುಮ್ ತಿರುವುಡೈಯೇನ್ ಆವೇನೇ?

ಕನ್ನಡ ನೆರಳ್

ಪಿಳ್ಳೆಯ ಹವಳದ ಬಳ್ಳಿಗಳಂ ದಂಡೆಗೆ ತಳ್ಳುವ ಪಾಲ್ಗಡಲೊಳ್
ಸುಳ್ಳೇಕಣ್ ಬೆಳಸಿದ ಅಚ್ಚರಿಗನ ಅಡಿ ಜೋಡಿಯ ಕಾಣಲ್ಕೆ
ಒಳ್‌ದುಂಬಿಗಳಿಂಡು ಬಕುತರ ಗಾನಕೆ ಸರಿರಾಗವ ಪಾಡುವ ವೇಂಕಟದಿ
ಒಳ್ ಸಂಪಿಗೆ ಮರವಾಗಿರುವಾ ಸಂಪದವುಳ್ಳವನಾಗುವೆನೇ!

ಮಾನವ ಜನ್ಮ, ದೇವರ ಕೈಂಕರ್ಯದ ಜತೆಜತೆಗೇ ಐಹಿಕಭೋಗಕ್ಕೂ ಇಂಬುಗೊಡಬಹುದಾದುದರಿಂದ ತಿಮ್ಮಪ್ಪನ ಕಟಾಕ್ಷೆಕೆ ಪಾತ್ರವಾಗಿರುವ ಒಂದು ಚಂಪಕವೃಕ್ಷವಾಗಿಯಾದರೂ ಆ ಗಿರಿಧಾಮದಲ್ಲಿ ಆ ಸಿರಿಜನುಮ ಬರಲಿ! ಯಾತ್ರಾ ಸ್ಥಳಗಳ ಮರಗಳನ್ನು ಸಾಮಾನ್ಯ ತರುದೃಷ್ಟಿಯಿಂದ ನೋಡಬಾರದು. ಎಂತೆಂತಹ ಮಹಾನುಭಾವರು ದೇವ ದೇವನ ಸೇವೆಗಾಗಿ, ತಮ್ಮನ್ನು ಮರೆಸಿಕೊಂಡಿರುವ ಹಾಗಿಲ್ಲದಿದ್ದರೆ ಕ್ಷೇತ್ರಾಪರಾಧ ಸುಳಿಯಬಹುದು. ಅದು ಸಂಭವಿಸದಂತೆ, ಈ ರೂಪದಲ್ಲಿ ಬಂದಿರುವರು! ಇದನ್ನೆಲ್ಲಾ ಸಂಸ್ಕೃತಿ ರಕ್ಷಕರೆಂದು ಕೊಳ್ಳುವವರು, ಭಾವನಾತ್ಮಕವಾಗಿಯೂ ಗಮನಿಸಬೇಕು. ವಿಭೂತಿಯಲ್ಲಿ ಉಳಿದವುಗಳಿಗಿಂತ ಮಾನವನೇ ಸೇವೆಗೆ ಪ್ರತಿಕೂಲನೂ ಆಗಬಲ್ಲನೆಂಬುದು ಈ ಕುಲಶೇಖರ ರಾಜರ್ಷಿಯ ಇಂಗಿತ!

ಕ್ಷೀರಸಾಗರ ಶಯನನೇ ಈ ಬೆಟ್ಟಕ್ಕೆ ಬಂದು ನಿಂತಿರುವುದು. ಹವಳದ ಕೆಂಬಳ್ಳಿಗಳಿಂದ ಸುತ್ತುವರಿಯಲ್ಪಟ್ಟ ಆ ಹಾಲ್ ಗಡಲು, ಒಣ್ ಪವಳಮ್ = ಒಳ್ಳೆಯ ಪ್ರವಾಳಲತೆಗಳೇ, ವೇಲ್ಯೆ = ಶ್ವೇತಸಾಗರಕ್ಕೆ ಸೆರಗು ಕಟ್ಟಿದಂತೆ! ಉಲವು = ಹೆಣೆದು ಕೊಂಡಿರುವ, ತಣ್ = ಬಹಳ ತಂಪಾದ. ಪಾಲ್ = ಹಾಲೇ ಹಾಲಾಗಿರುವ, ಕಡಲುಳ್ = ಆ ಮಹಾಂಬುಧಿಯಲ್ಲಿ, ಕಣ್ ತುಯಿಲುಮ್ = ಚೇತನರ ರಕ್ಷಣೋಪಾಯ ಚಿನ್ತನವೆಂಬ ಯೋಗ ನಿದ್ರೆಯಲ್ಲಿ ಸಿರಿಗಣ್ ಬೆಳೆಸಿರುವ, ಮಾಯೋನ್ = ಅತ್ಯಾಶ್ಚರ್ಯಕರನಾದ, ಆ ಸತ್ಯ ಸಂಕಲ್ಪನ, ಕಳಲ್ = ಚರಣಗಳ, ಇಣೈಹಳ್ = ಜೋಡಿಯನ್ನು, ಕಾಣ್ ಬದರ್ಕ್ಕು = ವಸ್ತು ಸಾಮಾನ್ಯವೂ ಕಣ್ಣಿಗೆ ಬೀಳಲೆಂದೇ ಪ್ರತಿಯೊಂದು ಜಡದಲ್ಲೂ ಒಂದೊಂದು ಅಭಿಮಾನಿ ಜೀವಾತ್ಮನುಂಟು. ಇಲ್ಲದಿದ್ದರೆ, ಆ ಪದಾರ್ಥಕ್ಕೆ ಹೆಸರಾಗಲಿ ರೂಪವಾಗಲಿ ಇರದೆಂಬುದು, 'ಉಪನಿಷದ್ ರಹಸ್ಯ!' **''ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮ ರೂಪೇ ವ್ಯಾಕರವಾಣಿ''** ಇದೇ ಸೃಷ್ಟಿಕರ್ತನ ಸಂಕಲ್ಪ!

ವಿಣ್ = ರಾಗವನ್ನು ಪಹರುಮ್ = ಪಲುಕುತ್ತಲೇ ಇರುವ, ವಣ್ಡು = ಬಂಡುಗಳ, ಇನಙ್ಗಳ್ = ಹಿಂಡು ಹಿಂಡುಗಳುಳ್ಳ! ವೇಜ್ಗಡತ್ತು = ವೇಂಕಟಾಚಲದಲ್ಲಿ, ಶೆಣ್‌ಬಹಮ್ = ಅಲೆದಾಟದ ಪಾಪವಿಲ್ಲದೆ, ಸ್ಥಿರವಾಗಿಯೇ ಇರಬಹುದಾದ, ತಿರುವುಡೈಯೇನ್ = ದಿವ್ಯದೇಶದಲ್ಲೇ, ''ನಿತ್ಯ ಸ್ಥಳವಾಸ''ವೆಂಬ ಕೈಂಕರ್ಯ ಶ್ರೀಯನ್ನೇ ಆಸ್ತಿಯಾಗುಳ್ಳವನಾಗಿ, ಆವೇನೇ = ಅಂತಹ ಅದೃಷ್ಟಶಾಲಿಯಾದೇನೇ?

ತಮಿಳ್ ತಿರಳ್ ೪-೫

ಕಮ್ಬ ಮದಯಾನೈ ಕ್ಕಳುತ್ತ ಹತ್ತಿನ್ ಮೇಲ್ ಇರುನ್ದು ಇನ್ಬಮರುಂ ಶೆಲ್ವಮುಮ್ ಇವ್ವರಶುಮ್ ಯಾನ್ ವೇಣ್ಡೇನ್
ಎಮ್ಬೆರುಮಾನ್ ಈಶನ್ ಎಳಿಲ್ ವೇಙ್ಗಡ ಮಲೈ ಮೇಲ್ ತಮ್ಬಹಮಾಯ್ ನಿರ್ಕ್ಕುಮ್ ತವಮುಡೈಯೇನ್ ಆವೇನೇ?

ಕನ್ನಡ ನೆರಳ್

ಕಂಪಿಪ ಮದ್ದಾನೆಯ ಕುಂಭದ ತಳಮೇಲಣ ಅಂಬಾರಿಯೊಳ್ ಏರಿದ್ದು ಇಂಬನು ಭುಂಜಿಪ ಸುಳ್ ಸಿರಿಯುಂ ಈ ರಾಜ್ಯಮುಂ ನಾ ಬಯಸೆ!
ಎಮ್ಮರಸನ ಸರ್ವೇಶನ ಸುಂದರ ವೇಂಕಟಭೂಧರದೊಳ್ ಪುಲ್, ಸ್ತಂಬವದಾಗುತ ನಿಲ್ಲುವ ತಪಗೈಯ್ಯುವನ್ ಆಗುವೆನೇ?

ಸಂಪಿಗೆ ಮರವೂ ಸಹ ಅನನ್ಯ ಪ್ರಯೋಜನವೆಂಬ ಭಾಗ್ಯಕ್ಕೆ ಸಲ್ಲದೆಯೂ ಬರಬಹುದು. ಸಂಪಿಗೆ ಹೂಗಳನ್ನು ಮಾರುಕಟ್ಟೆಯ ಲಾಭದ ವಸ್ತುಗಳನ್ನಾಗಿ ಮಾರಿಕೊಳ್ಳುವ ಜಾಣತನಕ್ಕೇನೂ ಕಡಿಮೆಯಿಲ್ಲ! ಅದುದರಿಂದ ಆ ಮರದ ಜನ್ಮವೂ ಬೇಡ! ಕೆಲಸಕ್ಕೆ ಒದಗದಂತೆ ಕಾಡಿನ ಒಂದು ಪೊದರಾಗಿ ಹುಟ್ಟಿಸೋ ಸ್ವಾಮೀ! ನಿನ್ನ ಗಿರಿಯ ಸಂಪರ್ಕ ನನಗೆ ಮುಖ್ಯ. **"ತುಚ್ಛಾತಿತುಚ್ಛ ನಿರರ್ಥಕ ವಸ್ತುವಾಗಿರುವುದೇ ಭಕ್ತಿಯ ಉತ್ತಮ ಒರೆಗಲ್ಲು!"**

ಕಮ್ಬಮ್ = ಎಲ್ಲರನ್ನೂ ಭಯದಿಂದ ಕಂಪಿಸುವಂತೆ ಎಸಗುವ ಮದ = ಮದಸುರಿಸುತ್ತಲೇ ಇರುವ, ಯಾನೈ = ಪಟ್ಟದಾನೆಯ, ಕಳುತ್ತು ಅಹತ್ತಿನ್ ಮೇಲ್ = ಕುಂಭಸ್ಥಳದ ಮೇಲೆ ಚಿನ್ನದ ಅಂಬಾರಿಯಲ್ಲಿ, ಇರುನ್ದು = ತಾನೇ ರಾಜಾಧಿರಾಜನೆಂಬ, ಸುಳ್ಳು ಠೀವಿಯಿಂದ ಆಸೀನನಾಗಿ, ಇನ್ಬು = ಬಗೆಬಗೆಯ ಉಪಚಾರಗಳ ಆಭಾಸ ಸುಖಗಳನ್ನು, ಅಮರುಮ್ = ಹೊಂದಬಹುದಾದ, ರೂಢಿಗ್ರಸ್ತ ಲೋಕ ದೃಷ್ಟಿಯಿಂದಷ್ಟೇ, ಶೆಲ್ವಮುಮ್ = ಸಿರಿಸಂಪತ್ತೆಂದು ಕರೆಯಲ್ಪಡುವುದನ್ನೂ, ಇವ್ವರಶುಮ್ = ಇಲ್ಲಿನ ಆಡಳಿತದ ಯಜಮಾನಿಕೆಯನ್ನೂ ಯಾನ್, ಓ ತಿಮ್ಮಪ್ಪಾ! ನಿನ್ನ ಕೃಪಾಪಾತ್ರನಾಗಿ, ನೀನೋರ್ವನೇ ಜಗತ್ತಿಗೆಲ್ಲಾ ದೊರೆ, ಎಂಬರಿವು ಪಡೆದಿರುವ ಇದೋ ನಾನು, ವೇಣ್ಡೇನ್ ಆ "ರಾಜ್ಯಂ ನಾಮ ಮಹಾವ್ಯಾಧಿಃ" ಯಾವ ಚಿಕಿತ್ಸೆಗೂ ಮೀರಿದ ರಾಜಕೀಯದ ದೊಂಬರಾಟವನ್ನು ಬಯಸುವವನಲ್ಲಾ. ಈಶನ್ = "ಈಶಾ ವಾಸ್ಯಮ್ ಇದಂ ಸರ್ವಮ್" ಎಂಬಂತೆ ಸರ್ವಕ್ಕೂ, ಅದರಲ್ಲೂ ನನ್ನ ಪಾಲಿಗಂತೂ ಹಿರಿಯ ಸರ್ವೋಪಕಾರಿ ಪ್ರಭು, ಎಳಿಲ್ = ಪ್ರಕಾಶಿಸುತ್ತಲೇ ಇರುವ, ವೇಙ್ಗಡ ಮಲೈಮೇಲ್, ತಮ್ಬಹಮ್ ಆಯ್ = ಸ್ತಂಬಗುಲ್ಮವಾಗಿ, ನಿರ್ಕ್ಕುಮ್ = ಅನನ್ಯಪ್ರಯೋಜಕ ಹಾಗೂ ಸ್ಥಿರವಿರುವಂತೆ, ತವಮ್ = ತಪವೆಸಗುವ, ಉಡೈಯೇನ್ = ಭಾಗ್ಯವುಳ್ಳವನಾಗಿ, ಆವೇನೇ? ಆಗುವಂತೆ ಮಾಡುವಿಯೇನಯ್ಯಾ! ಮನುಷ್ಯನಾಗಿ ಹುಟ್ಟುವುದಾಗಲಿ ಅದರಲ್ಲೂ ದಂಭದರ್ಪ ಸೂಚಕವಾದ ಕಾರುಬಾರಿನ ದರಬಾರು ನಡೆಸುವುದಾಗಲಿ ಖಂಡಿತ ಮಾನವ ಜನ್ಮದ ಶ್ರೇಷ್ಠತೆಯಲ್ಲ! ತರೋರಪಿ ಸಹಿಷ್ಣುನಾ ಅಮಾನಿನಾ ಮಾನದೇನವರ್ತಿತವ್ಯಂ ಮನೀಷಿಭಿಃ || - ಚೈತನ್ಯಪ್ರಭು. "ತೃಣಾದಪಿ ಸುನೀಚೇನ" ಎಂಬಂತೆ ಹೆಜ್ಜೆಯಿಟ್ಟು ಎಲ್ಲರೂ ನಡೆಯುವ ಹುಲ್ಲಿಗೂ ಕೆಳಗಿರುವ, ಅದರ ಬೇರಿನ ಬೊಡ್ಡೆಯಾಗಿ ಇರುವುದೀಗ ಮಹಾಭಾಗ್ಯ! ರಾಜಕೀಯ ವ್ಯವಹಾರದಲ್ಲಿದ್ದೂ ಅದರ ಘೋರತನವನ್ನು ರಾಜರ್ಷಿಯೊಬ್ಬ ಹೀಗೆ ನಮಗೆಲ್ಲಾ ಇಂದಿಗೂ ತಿಳಿಸುತ್ತಿದ್ದಾನೆ. ಅನುಭವಸ್ಥರ ಮಾತು ಕೇಳುವುದು ಇಂದಿನ, ಗಂಡಾಂತರದ ಪ್ರಜಾಪ್ರಭುತ್ವಕ್ಕೂ ಒಳ್ಳೆಯದಲ್ಲವೇ?

ತಮಿಳ್ ತಿರಳ್ ೪-೬

ಮಿನ್ನನೈಯ ನುಣ್ಣಿಡೈಯಾರ್ ಉರುಪ್ಪಶಿಯುಮ್ ಮೇನಹೈಯುಮ್ ಅನ್ನವರ್‌ದಮ್ ಪಾಡಲೊಡುಮ್ ಆಡಲ್ ಅವೈ ಯಾದರಿಯೇನ್
ತೆನ್ನವೆನ ವಣ್ಡಿನಙ್ಗಳ್ ಪಣ್ ಪಾಡುಮ್ ವೇಙ್ಗಡತ್ತುಳ್ ಅನ್ನನೈಯ ಪೊರ್ ಕುವಡಾಮ್ ಅರುನ್ದವತ್ತನ್ ಆವೇನೇ!

ಕನ್ನಡ ನೆರಳ್

ಮಿಂಚಿನ ತೆರ ತೆಳು ಸೊಂಟದ ಊರ್ವಶಿಯೂ ಮೇನಕೆಯೂ ಮುಂತಹರವರ ಹಾಡಿನ ಜತೆ ನಾನಾ ಮಟ್ಟದ ನಾಟ್ಯವನ್ ಆದರಿಸೆ!
ತನನಾ! ಎಂದೇ ಷಟ್‌ಪದ ಭ್ರಮರಾವಳಿ ಗುಂಜುವ ವೇಂಕಟದೊಳ್ ಘನತೆನೆಗೆ ತಗು ಹೊನ್‌ಮಲೆ ಕೋಡಾಗಿರೆ
ದುರ್ಲಭ ತಾಪಸಿ ನಾನಾಗುವೆನೇ

ಹಿಂದಿನ ಹಾಡುಗಳಲ್ಲೆಲ್ಲಾ ಮರವಾಗಿಯೋ, ಪೊದರಾಗಿಯೋ ಹುಟ್ಟುವ ತಿರುಮಲೆಯ ಜನ್ಮ ಬಯಸಿದ್ದೂ ಸರಿಯಲ್ಲ! ಏಕೆಂದರೆ ಅವೆಲ್ಲವೂ ಹುಟ್ಟಿಹಾಳಾಗುವಂತಹವು. ಆಗ ಗಿರಿಯ ನಿತ್ಯಯೋಗವೇ ಇರದು, ಅದಕ್ಕಾಗಿ ಈ ೬ನೆಯ ಗಾಥೆಯಲ್ಲಿ ಕುಲಶೇಖರಾಳ್ವಾರರು ಆ ಕಲ್ಪಾಂತ ಸ್ಥಿರವಾಗಿರುವ ಇದೇ ಶ್ರೀಶೈಲದ ಒಂದು ಕೋಡುಗಲ್ಲಾಗಿರಲು ಆಸೆ ಪಡುತ್ತಾರೆ. ಪುರುಷೋತ್ತಮನ ಅಚಲೋತ್ತಮದಲ್ಲಿ ಶಿಖರೋತ್ತಮವಾಗಿರಲು ಈ ದಾಸೋತ್ತಮ ಅರಸರಿಗೆ ಹಂಬಲ!

ತಮಿಳ್ ತಿರಳ್ ೪-೧೦

ಉಮ್ಬರ್ ಉಲಹಾಣ್ಡ್ ಒರುಕುಡೈಕ್ಕೀೞ್ ಉರುಪ್ಪಶಿದನ್ ಅಮ್ಬೊರ್ಕ್ಕಲೈ ಯಲ್ಹುಲ್ ಪೆತ್ತಾಲುಮ್ ಆದರಿಯೇನ್
ಶೆಮ್ಬವಳ ವಾಯಾನ್ ತಿರುವೇಙ್ಗಡಮ್ ಎನ್ನುಮ್ ಎಮ್ಬೆರುಮಾನ್ ಪೊನ್ ಮಲೈ ಮೇಲ್ ಏದೇನುಮ್ ಆವೇನೇ!

ಕನ್ನಡ ನೆರಳ್

ಮೇಲಿಹ ಲೋಕಗಳಾಳ್ವೋರ್, ಕೊಡೆ ಕೆಳಗೂರ್ವಶಿಯ ಮೇಲಹ ಚೆಲು ಪೊನ್ ಒಡ್ಯಾಣದ ಕಟಿ ಕೈ ಸೇರಲೂ, ಅದ ನಾನೊಲ್ಲೆ,
ಕೆಂಬುವಳದ ತುಟಿ ಚೆಲುವನ ಸಿರವೇಂಕಟನೆಂಬಾ ಎಂಪರಮಾತ್ಮನ ಹೊನ್‌ಮಲೆಮೇಲ್ ಏನಾದರೂ ಆದೇನೇ!

ಹಿಂದಿನ ಪದ್ಯದಲ್ಲಿ ತಿಮ್ಮಪ್ಪನ ಸನ್ನಿಧಿ ಬಾಗಿಲ ಹೊಸಲಾಗಿದ್ದು ಸದಾ ಸ್ವಾಮಿ ದರ್ಶನ ಪಡೆಯುವ ಭಾಗ್ಯ! ಇದು ಅವನೇ ಇತ್ತಿರುವ ಚೈತನ್ಯಶಕ್ತಿಯ ಸದುಪಯೋಗ. ಜಡವತ್ ಪಾರತಂತ್ರ್ಯ ಭಾವನೆಯೂ ಜತೆಜತೆಗೇ ಇರಬೇಕಾದುದು! ಈ ಜೀವಾತ್ಮರ ಇಕ್ಕೆಲಗಳ ಸಮತೂಕವಾದ ನೆಲೆ! ಕಾಣ್‌ಬೇನೇ! ಹಾಗೂ ಪಡಿಯಾಯ್ ಈ ಎರಡೂ ಚೈತನ್ಯ-ಅಚೈತನ್ಯಗಳ ಸಮನ್ವಯ ದೃಷ್ಟಿ ಇಲ್ಲಿನ ಮಾನವ ರಹಸ್ಯ!

ಈ ಭಾವನೆ ತಲೆಯೆತ್ತಲು, ನಾನೇಕೆ, 'ಅದಾಗಿ ಇದಾಗಿ' ಎಂದು ನಿರ್ದೇಶಿಸಲಿ? ಸ್ವಾಮಿಯ ಅಂದಚೆಂದದ ನೋಟಕ್ಕೆ ತಕ್ಕುದೋ ಅಲ್ಲವೋ, ಬೆಟ್ಟದಲ್ಲಿ ಯಾವುದಾದರೊಂದಾಗಿರಲು, ಹಿಂದಿನ ಬಯಕೆಗಳನ್ನೆಲ್ಲಾ ಈ ಹಾಡಿನಲ್ಲಿ ತಿದ್ದುಪಡಿ ಮಾಡಿಬಿಡುತ್ತಾರೆ.

ಉಮ್ಬರ್ ಉಲಹು = ಮೇಲಿನ ಲೋಕವೆಲ್ಲವನ್ನೂ, ಒರು ಕುಡೈಕ್ಕೀೞ್ = ಏಕಛತ್ರಾಧಿಪತ್ಯದಲ್ಲಿ, ಆಣ್ಡು = ಆಳಿ, ಉರುಪ್ಪಶಿದನ್ = ಊರ್ವಶಿಯ, ಅಮ್‌ಪೊನ್ ಕಲೈ ಅಲ್ಗುಲ್ = ಸೊಗಸಾದ ಹೊನ್ನಿನ, ಒಡ್ಯಾಣ ಬಿಗಿದಿರುವ, ಸೀರೆಯ ಕಲೆಯಿಂದ, ಸಭ್ಯವಾದ, ನಿತಂಬ ಪ್ರದೇಶವನ್ನು, ಪೆತ್ತಾಲುಮ್ = ಭೋಗಿಸಲು ಅವರಿಂದಲೇ ನೀಡಲ್ಪಟ್ಟರೂ! ಆದರಿಯೇನ್ = ಕಾಮುಕ ದೃಷ್ಟಿತಾಳಲಾರೆ. ಮತ್ತೇನು ನಿನಗೆ ಬೇಕು! ಎನ್ನುವಿರಾ? ಶೆಮ್ ಪವಳವಾಯಾನ್ = ಕೆಂಪಾಗಿಯೂ ಸೊಂಪಾಗಿಯೂ ಇರುವ ಪ್ರವಾಳಾಧರನಾದ, ಎಮ್‌ಪೆರುಮಾನ್ = ನಮ್ಮ ಗಳಿಗಾಗಿ ಪರಾರ್ಥನಾಗಿಯೇ ಸ್ವಾಮಿಯಾದವನು, ಹಿರಿಹಿರಿಯನು, ತಿರುವೇಙ್ಗಡಮ್ ಎನ್ನುಮ್ = ಸಾನ್ನಿಧ್ಯಗ್ಕೆದಿರುವ, ಶ್ರೀ ವೇಂಕಟವೆಂಬ ಹೆಸರುಳ್ಳ, ಪೊನ್ ಮಲೈಮೇಲ್ = ಹೇಮಗಿರಿಯ ತುದಿಯಲ್ಲಿ, ಏದೇನುಮ್ = ಅವನೇ ಇಷ್ಟಪಡುವ ಏನಾದರೊಂದಾಗಿ, ಆವೇನೇ = ಆಗುವೆನೇ?

ಪುನರ್‌ಜನ್ಮವನ್ನು ಈ ಕುಲಶೇಖರರು ಆಸೆಪಡುವಂತೆ ಕಂಡರೂ, ತಿಮ್ಮಪ್ಪನ ಆ ದಿವ್ಯ ಅಪ್ರಾಕೃತ ಸೌಂದರ್ಯಾನುಭವಕ್ಕಾಗಷ್ಟೇ ಆ ಭಾವ. ಆತನ ಬೆಟ್ಟದ ಸಂಬಂಧ ಮುಖ್ಯ. ಅಲ್ಲಿರುವ ಯಾವೊಂದು, ಜಂತು ಹಾಗೂ ವಸ್ತುಗಳಲ್ಲೂ ಮೇಲುಕೀಳಿಲ್ಲ! ಅಲ್ಲಿನ ಬೀದಿನಾಯಿಯಾದರೂ ಸರಿ ಕ್ರಿಮಿಕೀಟ ಜನ್ಮವಾದರೂ ಸರಿ! ತಿರುಮಲೆಯ ಬೀದಿಗುಡಿಸುವ "ಝಾಡಮಾಲಿ"ಯಾಗಿ ಹುಟ್ಟಿದರೂ ಸರಿ, ಭಕ್ತರು ತಿಂದೆಸೆದ "ಹಾಳೆ"ಯಾದರೂ ಸರಿ, ಬ್ರಹ್ಮಸಾಮ್ಯಾಪನ್ನನಾಗಿಸಿಕೊಂಡರೂ ಸರಿ, ಹರಿಚಿತ್ತ! ಈ ನರಚಿತ್ತ ಬೇಡ!

ತಮಿಳ್ ತಿರಳ್ ೪-೧೧

ಮನ್ನಿಯ ತಣ್ ಶಾರಲ್ ವಡವೇಙ್ಗಡತ್ತಾನ್ ತನ್ ಪೊನ್ನಿಯಲುಮ್ ಶೇವಡಿಹಳ್ ಕಾಣ್‌ಬಾನ್ ಪುರಿನ್ದಿರೈಂಜಿ
ಕೊನ್ನವಿಲುಮ್ ಕೂರ್‌ವೇಲ್ ಕುಲಶೇಕರನ್ ಶೊನ್ನ ಪನ್ನಿಯ ನೂಲ್ ತಮಿಳ್ ವಲ್ಲಾರ್ ಪಾಙ್ಗ್ಯಾಯ ಪತ್ತರ್ ಹಳೇ.

ಕನ್ನಡ ನೆರಳ್

ಎಂದೂ ತಣ್ಣನ ಪ್ರಾಂತ್ಯದ ಬಡಗಲ ವೇಂಕಟನಾಥನ
ಸಂದೇ ಬರುವಂದದ ಹೊಂಗಳೆ ಕೆಂದಡಿ ಕಾಣಲ್ ಬಯಸೀ ನಮಿಸಿ |
ಕೊಲ್‌ಗೈಮೆಯೆ ಬಾರದೊಲ್ ಕೂರ್‌ವೇಲ್ ಕುಲಶೇಖರ ಪೇಳಿರುವ
ಪಲ್ ಲಕ್ಷಣ ಶಾಸ್ತ್ರಕೆ ಹೊಂದುವ ಈ ತಮಿಳ್ ಬಲ್ಲವರೇ ತಗುಬಕುತರ್ ||

ಈ ದಶಕವನ್ನು ಶಬ್ದತಃ ಅರ್ಥತಃ ಅಧ್ಯಯನ ಮಾಡುವವರಿಗೆ ಏನು ಫಲ? ಅದನ್ನೀಗ ಹೇಳುತ್ತಾರೆ. ಮೊದಲು ತಿಮ್ಮಪ್ಪನ ವರ್ಣನೆ. ಕೊಲ್‌ನವಿಲುಮ್ = ಶತ್ರುತ್ವ ಸಂಹಾರವನ್ನೇ ಸಹಜವಾಗುಳ್ಳ. ಉತ್ತಮ ರಾಜನೀತಿಯಲ್ಲಿ ಇವರು ಬಲು ತದ್ಜ್ಞರು. ಈತ ಶತ್ರುವೆಂದು, ಅಂತರಂಗ ಹಾಗೂ ಬಹಿರಂಗದಲ್ಲಿ ಹೇಳಲೂ ಬಾರದು, ಭಾವಿಸಲೂ ಬಾರದು. ಮಾನವೀಯ ರಾಜ್ಯ ಶಾಸ್ತ್ರವೂ, ಚಾಣಕ್ಯಾದಿಗಳೂ ಇದನ್ನೇ ಹೇಳುತ್ತಾರೆ. 'ನ ಅಶ್ಲೀಲಂ ಕೀರ್ತಯೇತ್'. ಹೀಗೆ ತಮ್ಮನ್ನು ಹೊಗಳಿಕೊಳ್ಳುವುದೂ,

'ನಮೇದ್ವೇಷ್ಯೋಸ್ತಿ' ಎಂದ ಸ್ವಾಮಿ ಸಂಬಂಧದಿಂದ. ಬಳಿಕ ತಮ್ಮ ಆಸೆಯೇನೆಂಬುದನ್ನು ವರ್ಣಿಸುತ್ತಾ ತಮ್ಮ ಈ ಪ್ರಬಂಧ ಮಹಾತ್ಮ್ಯವರ್ಣನೆ ಗೈಯ್ಯುತ್ತಾರೆ.

ಕೂರ್‌ವೇಲ್ =ಶಸ್ತ್ರಾಸ್ತ್ರ ಹರಿತವಾಗಿ ಕ್ಷತ್ರಿಯ ಧರ್ಮ ದೃಷ್ಟಿಯಿಂದ ಸಿದ್ಧವಾಗಿದ್ದರೂ, ಪ್ರಯೋಗಿಸುವ ಪ್ರಮೇಯವೇ ಬಾರದಂತಹದು ಇವರ ಅಚಾತಶತ್ರುತ್ವ! ಇದನ್ನು ತಿಳಿದೇ ಎಂತಹ ಪ್ರಬಲ ರಾಜಾಧಿರಾಜರೂ ಇವರೊಡನೆ ಯುದ್ಧ ಉಚಿತವಲ್ಲವೆಂಬ ನೈತಿಕ ಬಲಶಾಲಿಗಳಾಗಿ ಬಿಡುತ್ತಿದ್ದರು! ಇಂತಹ ಕುಲಶೇಖರನ್ = ಕ್ಷತ್ರಿಯ ಕುಲಕ್ಕೇ ತಲೆ ಮಣಿಯಂತೆ, ಹಾಗೂ ಪ್ರಪನ್ನ ಶರಣ ಕುಲಕ್ಕೇ ಶಿರೋಮಣಿಯಾದವನು! ಎಂಬೆರಡೂ ಅರ್ಥಮಾಡಲು ಬರುತ್ತದೆ. ಶೊನ್ನ = ಬಾಯಾರಾ ತಾನೇ ಹೇಳಿದ, ಹೀಗೆ ವಕ್ಕೃವೈಲಕ್ಷಣ್ಯ ವರ್ಣನೆಯಾದ ಮೆಲೆ, ತಮ್ಮ ಪ್ರಬಂಧದ ಹೆಚ್ಚಳ ಹೇಳುತ್ತಾರೆ, ತಮಿಳ್ ಸಾಹಿತ್ಯದ ಸಲ್ಲಕ್ಷಣಗಳಿಗೆಲ್ಲಾ ಲಕ್ಷ್ಯವಾಗಬಹುದಾದ, ಹೀಗಾಗಬೇಕಿದ್ದರೆ, ಪನ್ನಿಯ ನೂಲ್ ತಮಿಳ್ ವಲ್ಲಾರ್ = ಸತ್‌ಶಬ್ದವಾಚ್ಯನಾದವ ಇದಕ್ಕೆ ಪ್ರತಿಪಾದ್ಯನಾಗಿರುವುದೇ ಪ್ರಧಾನ ಕಾರಣ! ಇದನ್ನು ತಿಳಿದವರು.

ಮನ್ನಿಯ = ಸ್ಥಿರವಾಗಿ, ತಣ್‌ಶಾರಲ್ = ಸುಭಗ ಶೀತಳವಾದ ಗಿರಿ ಜಲಪಾತಗಳಿಂದ ಕೂಡಿದ, ವೇಙ್ಗಡತ್ತಾನ್ = ಈ ಹೆಸರಿನ ಈ ಬೆಟ್ಟದಲ್ಲೇ ನಿತ್ಯಸಾನ್ನಿಧ್ಯಗೈದಿರುವ, ತನ್ = ಮುಖ್ಯವಾಗಿ ಅವನದೇ ಆದ, ಪೊನ್ = ಸುವರ್ಣಕ್ಕಿಂತಲೂ ಸುಂದರ ಹಾಗೂ ಮೌಲ್ಯವುಳ್ಳ, ಇಯಲುಮ್ = ಅದೂ ಸ್ವಭಾವತಃ! ಶೇ ಅಡಿಹಳ್ = ಕೆಂಬಳದಿ ಸಂಮಿಶ್ರವಾದ ಪಾದಗಳನ್ನು, ಕಾಣ್‌ಬಾನ್ = ಈ ನಯನಗಳಿಂದಲೇ ಸಂದರ್ಶಿಸಲು, ಪುರಿನ್ದು = ಪುರಪುರಗುಟ್ಟುತ್ತಾ, ಇರೈಂಜಿ = ಅರ್ಥಿಸಿ, ಈ ಪ್ರಾರ್ಥನೆಯಿಂದ ಚಿಮ್ಮಿ ಬಂದ, ತಮಿಳ್‌ವಲ್ಲಾರ್ = ತಮಿಳ್ ಸಾಹಿತ್ಯದಲ್ಲಿ ಅಷ್ಟೊಂದು ಪ್ರಾಧ್ಯಾನ್ಯ ಪಡೆದಿರುವ ಈ ದಶಕವನ್ನು, ವಲ್ಲಾರ್ ಬಲ್ಲವರು, ಶ್ರೋತೃಗಳೂ ಸಹ! ಪಾಙ್ಗಾಯ = ಸರ್ವೇಶ್ವರನ ಸಿರಿಚಿತ್ತಕ್ಕೆ ತಕ್ಕವರಾದ, ಪತ್ತರ್‌ಹಳೇ = ಭಕ್ತರೇಸೈ.

ಕೇರಳದ "ಕೋಳಿಕೋಡ್" (ತಿರವಂಜಿಕ್ಕಳಮ್) ಎಂಬಲ್ಲಿ ಕ್ಷತ್ರಿಯವರ್ಣದಲ್ಲಿ ಜನಿಸಿದವರೇ ಈ ಕುಲಶೇಖರರು. ಮಾಶಿಮಾಸ ಪುನರ್‌ವಸು ನಕ್ಷತ್ರ. ಇವರು ದೇವರ ಎದೆಯಲ್ಲಿ ಧರಿಸಿರುವ 'ಕೌಸ್ತುಭ' ಮಣಿಯ ಅಂಶಾವತಾರ. ಸ್ವಾಮಿಯ ಅಹೇತುಕೀ ಕಟಾಕ್ಷದಿಂದಲೇ ಇವರು ಶ್ರೀರಾಮಾವತಾರ, ಶ್ರೀಕೃಷ್ಣಾವತಾರ, ಅರ್ಚಾವತಾರಗಳ ಮೂಲಕಂದ ಶ್ರೀರಂಗನಾಥ ಇಲ್ಲೆಲ್ಲಾ ವಿಶೇಷ ಪ್ರತಿಪತ್ತಿಯಿಂದ, 'ಪೆರುಮಾಳ್ ತಿರುಮೊಳಿ' ಎಂಬೀ ೧೦೫ ಹಾಡಿನ ೧೦ ದಶಕಗಳನ್ನು ಹತ್ತುಭಾವಗಳಲ್ಲಿ ಹಾಡಿರುವರು.

ತಿರುಪತಿ ಶ್ರೀನಿವಾಸನ ಮೆಲೆ ಪೂರಾ ೧ ದಶಕವನ್ನೇ ಇವರು ಮೀಸಲಾಗಿರಿಸಿರುವುದು, ದೈವದತ್ತವಾದ ಇವರ ಅರ್ಚಾಪ್ರಾವಣ್ಯಕ್ಕೆ ಸಾಕ್ಷಿಯಾಗಿದೆ. ಮೊಟ್ಟಮೊದಲ ಹಾಗೂ ಕೊಟ್ಟಕೊನೆಯ ಎರಡು ದಶಕಗಳೂ ಶ್ರೀರಂಗನಾಥನ ಹಾಗೂ ಚಿದಂಬರ - ತಿಲ್ಲೈ ತಿರುಚ್ಚಿತ್ತಿರಕೂಟ ದಿವ್ಯ - ದೇಶದ ಶ್ರೀರಾಮನಿಗೂ ಅರ್ಪಿತವೆಂದಾಗ ಆದ್ಯನ್ತಗಳಲ್ಲೂ ಇವರ ಅಂತರಂಗ ವ್ಯಕ್ತಪಡುತ್ತದೆ. ಬೇರೆ ಯಾರೋರ್ವ ಆಳ್ವಾರರೂ ಹಾಡದಿರುವ, ಮುಖ್ಯದಿವ್ಯ ದೇಶವಾದ ಶ್ರೀವಿತ್ತುವ ಕೋಟ್ಟು ಅಮ್ಮಾನ್ ಸ್ವಾಮಿಯ ಮೇಲೆ, "ತರುತುಯರಂ" ಎಂಬ ೫೫ನೇ ದಶಕ, ಅನ್ಯಾದೃಶ.

ಇವರು ಭಾಗವತ ಪಕ್ಷಪಾತಿಗಳು. ಭಗವದ್ ಭಕ್ತರು ಎಂದೂ ಕಳವು ಮಾಡುವವರೇ ಅಲ್ಲ ಎಂದು ಕೊಡದಲ್ಲಿ ಹಾಕಿದ ಘಟವಿಷಸರ್ಪಮುಟ್ಟಿ ಸವಾಲ್ ಎಸೆದವರು. ತಮ್ಮ ಕಡೆಯ ಅಧಿಕಾರಿಗಳ ಕುತಂತ್ರವನ್ನು ಭೇದಿಸಿದ ಚತುರರಾಜ! ಹುಟ್ಟಿದ ನಕ್ಷತ್ರ ಸಾಮ್ಯದಿಂದಲೂ ಏಕಾಂಗಿ ಶ್ರೀರಾಮನ ರಕ್ಷಣೆಗಾಗಿ ಇವರು ವಹಿಸಿದ ಕಾಳಜಿಯನ್ನು ಕಂಡ ಹಿರಿಯರು "ಪೆರುಮಾಳ್" ಎಂಬ ಆ ರಾಮನಾಮದಿಂದಲೇ ಇವರನ್ನು ಕರೆದರು! ರಾಮಾಯಣದ ಸಂದರ್ಭವೇನೆಂದರೆ ಖರದೂಷಣರೋ ೧೪ ಸಾವಿರ ಸೇನಾನಿಗಳನ್ನುಳ್ಳವರು. ಈತ ಧರ್ಮಾತ್ಮಾ "ಏಕಶ್ಚರಾಮೋ" ಪೌರಾಣಿಕರ ಈ ಶ್ಲೋಕಾಂಶವನ್ನು ಕೇಳಿದರೋ ಇಲ್ಲವೋ? ಮೈಮರೆತು, ಒಡನೆಯೇ "ನಮ್ಮ ಸೈನ್ಯ ಕಳಿಸಿ" ಎಂದೇ ಕಟ್ಟುನಿಟ್ಟಪ್ಪಣೆಗೈದೇ ಬಿಟ್ಟ ಅರಸು ಭಕ್ತಾಗ್ರಗಣಿ! ಪುರಾಣಪಾಠಕರು ಚಾತುರ್ಯ ಉಪಯೋಗಿಸಿ

"ತಂದೃಷ್ಟ್ವಾ ಶತ್ರುಹನ್ತಾರಂ ಮಹರ್ಷೀಣಾಂ ಸುಖಾವಹಮ್
ಬಭೂವ ಹೃಷ್ಟಾ ವೈದೇಹೀ ಭರ್ತಾರಂ ಪರಿಷಸ್ವಜೇ||"

ಎಂಬ ಶ್ಲೋಕವನ್ನು ಸೈನ್ಯದ ಹಿಂದೆ ನಡೆದು ಹೋಗುತ್ತಿದ್ದ ಇವರ ಮುಂದೆ ನಿಂತು ಘಟ್ಟಿಯಾಗಿ, ಒಳ್ಳೆಯ ವಿಜಯ ಧ್ವನಿಯಿಂದ ಕೇಳಿಸಿದಾಗಲೇ "ಓಹೋ! ಧರ್ಮಾತ್ಮಾ ಮಹಾವೀರ, ಶತ್ರುಸಂಹಾರ ಮಾಡಿದನೇ? ಮಹರ್ಷಿ ಶಿಶುಗಳಿಗೆಲ್ಲಾ ತಪೋವಿಘ್ನ ಪರಿಹಾರವಾಯಿತೇ? ಮಹಾಮಾತೆ ವಿದೇಹರಾಜಕುವರಿ ತನ್ನ ವೀರಪತಿಯನ್ನು ಅಲಂಗಿಸಿ ವ್ರಣಿತವಾದ ಅಂಗಾಂಗಗಳಿಗೆ ಶಾಖಿದ ಉಪಚಾರ ನೀಡಿದಳೇ! ಇನ್ನು ಸೇನೆ ಹಿಂದಿರುಗಲಿ ಎಂದು ಆದೇಶಿಸಿ ಸಮಾಧಾನಗೊಂಡರು. ಇವರಿಗೆ 'ಇಳ್ಳೈ' ಎಂಬ ಓರ್ವಕುವರಿ. ಅವಳನ್ನು ದೇವರಿಗೇ ಮೀಸಲಾಗಿಸಿಬಿಡುತ್ತಾರೆ. ಪಟ್ಟರ್ ಪಿರಾನರ 'ಗೋದೆ'ಯಂತೆಯೇ "ಇಳಾದೇವಿಯೂ"! ಪಾರಾರ್ಥ್ಯಸಂಪನ್ನೆ.

ಪೆರಿಯಾಳ್ವಾರ್

ಪಾಂಡ್ಯ ದೇಶದ "ಶ್ರೀ ವಿಲ್ಲಿಪುತ್ತೂರ್" ಎಂಬ ದಿವ್ಯದೇಶದಲ್ಲಿ ಶ್ರೀಮನ್ನಾರಾಯಣನ ಶ್ರೀ ಸುದರ್ಶನ ಚಕ್ರಾಂಶದಿಂದ ಈ ವಿಷ್ಣುಚಿತ್ತರು ಮಿಥುನ ಮಾಸ ಸ್ವಾತೀ ತಾರೆಯಲ್ಲಿ ಅವತರಿಸಿದರು. ತಾವಾಗಿಯೇ ಬಂದ ಕೃಷ್ಣ-ಬಲರಾಮರಿಗೆ ತನ್ನ ಮನೆಯ ಮುಂದೇ ಹೂ ಧರಿಸಿದ ಉತ್ತರ ಮಧುರೆಯ ಆ ಪರಮ ಭಾಗವತ "**ಮಾಲಾಕಾರರಂತೆ**" ಇವರೂ ವಟಪತ್ರಶಾಯಿಗೆ ಅತ್ಯಂತ ಪ್ರಿಯವಾದ ಪುಷ್ಪಕೈಂಕರ್ಯದಲ್ಲಿಯೇ ಬಾಲ್ಯದಿಂದಲೂ ನಿರತರಾಗಿ ಬಿಟ್ಟರು. ಗುರುಮುಖದಿಂದ ಏನೂ ಅಧ್ಯಯನವನ್ನೇ ಮಾಡದ, ಕೇವಲ ಕಾಯಕವೊಂದರಲ್ಲೇ ದುಡಿಯುತ್ತಿದ್ದ ಇವರಿಗೆ, ಭಗವಂತ ಬಲವಂತವಾಗಿ ಹೀಗೆ ನಿಯಮಿಸಿದ್ದು ಪಾಂಡ್ಯರಾಜನಾದ ವಲ್ಲಭದೇವನಿಗೆ ಪರತತ್ವ ಜಿಜ್ಞಾಸೆ ಉಂಟಾಗಿದೆ. ಇಹದಲ್ಲೇ ಆ ಪರಕ್ಕೆ ಬೇಕಾದುದನ್ನು ತಿಳಿಯಬೇಕೆಂಬ ಹಂಬಲವನ್ನು ಓರ್ವ ಬ್ರಾಹ್ಮಣ ಯಾತ್ರಿಕ, ಅವನ ಕಿವಿಗೆ ಹಾಕಿದ ಫಲ! "ಪರತ್ರ ಹೇತೋರಿಹಜನ್ಮನೈವ". ಅತನ ಆ ಸ್ಥಾನಕ್ಕೆ ನೀವು ತೆರಳಿ. ಪರಮ ಗುರುವಾದ ನನ್ನಿಂದಲೇ ನೀವು ನಿಶ್ಶೇಷವಾಗಿ ಶ್ರುತಿ ಸ್ಮೃತಿ ಸೂತ್ರ ಸಕಲ ಶಾಸ್ತ್ರಗಳ ಸಾರವನ್ನೂ ಅರಿತವರಾಗುವಿರಿ! ನಾನೇ ಪರಾತ್‌ಪರನೆಂಬುದನ್ನು ಅತ ಸೇರಿಸಿರುವ ವಿದ್ವದ್ ಗೋಷ್ಠಿಯಲ್ಲಿ, ಸಪ್ರಮಾಣವಾಗಿ ಸ್ಥಿರೀಕರಿಸಿ! ಜನರ ಮನದಲ್ಲಿಯೂ ಚೆನ್ನಾಗಿ ಬಿಂಬಿಸುವಂತೆ ನಿಮ್ಮ ಶೈಲಿ, ಹಿತ, ಮಿತ ಸರ್ವಮನೋಜ್ಞವಾಗಿರುತ್ತದೆ.

ತಥಾಸ್ತು, ಎಂದ ಇವರು, ಅಲ್ಲಿಗೆ ತೆರಳಿ ಎಲ್ಲರೂ ಮೆಚ್ಚುವಂತೆ ಸಕಲ ವೇದಗಳಿಗೂ, ಹೊಂದಾಣಿಕೆ ಆಗುವಂತೆ, ಶ್ರೀಮನ್ನಾರಾಯಣನೇ ಪರಮಾತ್ಮನೆಂಬುದನ್ನು ನಿರ್ಧರಿಸಿಕೊಟ್ಟರು. ರಾಜನೂ ಪರಿವಾರ ಸಮೇತ ಇವರಿಗೆ ವಿದ್ಯಾಶುಲ್ಕದ ಬಹುಮಾನ ನೀಡಿ, ತನ್ನ ಪಟ್ಟದಾನೆಯ ಮೇಲೆ ಮೆರವಣಿಗೆ ಏರ್ಪಡಿಸಿದನು. ಹೀಗೆ ತನ್ನ ಮೇಲ್ಮೆಯನ್ನು ಈ ಲೋಕದಲ್ಲಿ ತಿಳಿಸಿಕೊಟ್ಟ, ಈ ಭಟ್ಟನಾಥರನ್ನು ತಣಿಸಿ ಸಂತಸ ನೀಡಲು ಆ ಪರಂಧಾಮದಿಂದ ಶ್ರೀ ಭೂ ನೀಳಾ ಸಮೇತನಾಗಿ ಆಕಾಶದಲ್ಲೇ ದರ್ಶನ ನೀಡುತ್ತಾನೆ! ಆಗ ಇವರು ತಮ್ಮ ಸಹಜ ಭಕ್ತ್ಯುದ್ರೇಕದಿಂದ "ತಿರುಪ್ಪಲ್ಲಾಣ್ಡು" ಮಂಗಳಾSSಶಾಸನ ಗೈದುದು ಈ ಗ್ರಂಥಾದಿಯಲ್ಲೇ ಬಂದಿದೆಯಷ್ಟೆ.

ಇವರ ಈ ಮುಗ್ಧ ಸರಳ ಸಹಜ ಕೋಮಲ ಭಕ್ತಿ ಉತ್ಕಟವಾಗುತ್ತಾ ಬೆಳೆಯುತ್ತದೆ. ವಿಲ್ಲಿಪುತ್ತೂರಿಗೆ ಹಿಂದಿರುಗಿದ ಮೇಲೆ, ಯಶೋದೆಯ ಭಾವಾSSವೇಶದಿಂದ ಬಾಲಕೃಷ್ಣನ ಲೀಲೆಗಳನ್ನೆಲ್ಲಾ ಅನುಭಾವಿಸಿದ್ದೇ ಈ "ತಿರುಮೊಳಿ". ಪೂರಾ ೪೭೩ ಹಾಡುಗಳು. ಕೃಷ್ಣನ ಕೌಮಾರ ಹಾಗೂ ಯೌವನದ ದಿವ್ಯ ಚೇಷ್ಟಿತಗಳನ್ನು ಈ ದಿವ್ಯ ಪ್ರಬಂಧದಲ್ಲಿ, ಬಲು ಸುಗಮವಾಗಿ ಎಂತಹವರೂ ತಿಳಿಯಲು ಕ್ಲೇಶವಿಲ್ಲದಂತೆ ವಿನಂತಿಸಿದ್ದಾರೆ! ಮಂಗಳಾSSಶಾಸನದಿಂದ ಇವರಿಗೆ ಹಿರಿತನಬರಲಾಗಿ ಇವರು, "**ಪೆರಿಯಾಳ್ವಾರ್**" ಎನಿಸಿಕೊಂಡರು. ಈ ಅವರ ಕೃತಿಯೂ "ಹಿರಿ ಶರಣರ ಸಿರಿನುಡಿ" ಎನಿಸಿತು. ಈ ಕೃಷ್ಣಾವತಾರಕ್ಕೆ ಹಿಂದಿನದಾದ ರಾಮಾವತಾರದ ಗುಣಾನುಭವವೂ ಔಚಿತ್ಯದಿಂದ ಇಲ್ಲಿ ನಮಗೆ ಕಾಣಲು ಸಿಗುವುದು. ಅವೆರಡೂ ಗತಿಸಿಹೋದ ತ್ರೇತಾ, ದ್ವಾಪರಯುಗದವು. ಈ ಕಲಿಯುಗದವರಿಗೇನು ಬಂತು? ಎಲ್ಲಾ ಕಾಲಕ್ಕೂ, ಎಲ್ಲರಿಗೂ ಸುಲಭ ಸಹಜವಾಗಿ ಒದಗಿ ಮನಶ್ಶಾಂತಿ ನೀಡುವ, ಸುಂದರ ಪಾವನ ಪರಿಪೂರ್ಣ ಬೆಲೆಯುಳ್ಳ, ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿ ಗುಣ ಪ್ರಕಾಶಕವಾದ, ನೆನೆದವರ ಮನದಲ್ಲಿ ಅಂತಂತೆಯೇ ಆಗುವ ಅರ್ಚಾವತಾರಕ್ಕೆ ಕೊನೆ ಕೊನೆಗೆ ಬಂದು, ತಿರುಪತಿ ತಿಮ್ಮಪ್ಪನಲ್ಲಿ "ಶೆನ್ನಿಯೋಙ್ಗು" ಎಂಬ ಅಂತಿಮ ದಶಕದಲ್ಲಿ ಇವರ ಚಿತ್ತ ಲಯ ಗೊಳ್ಳುತ್ತದೆ. ಸ್ವಾಮಿಯೇ ಇವರ ಸಿರಿಚಿತ್ತದಲ್ಲಿ ತಂಗಿಯೇ ಬಿಡುತ್ತಾನೆ, ಅಂತೆಯೇ ಇವರು **'ವಿಷ್ಣುಚಿತ್ತರೂ'** ಆದರು.

ತನ್ನ ಮುದ್ದು ಮೊಗು ಅತಿ ಶೈಶವ ದಾಟಿದಾನೆ, ಬಾಲ್ಯದ ಹೊಸಲಿಗೆ ಸರಿದಿದ್ದಾನೆ. ಹೀಗೆ ಯಶೋದೆಯ ಭಾವನೆಯನ್ನೇ ಇವರೂ ತನ್ಮಯತೆಯಿಂದ ಹೊಂದಿ ಬಿಡುತ್ತಾರೆ. ನಂದಭವನದ ವಠಾರ! ತನ್ನ ಕಂದ ಕಿಶೋರ ಕೃಷ್ಣ ಆಡುತ್ತಾ ಇದ್ದಾನೆ. ಅತ್ತ ಆಗಸದಲ್ಲಿ ಶುಕ್ಲಪಕ್ಷದ ಚಂದ್ರ ಕಾಣಿಸಿಕೊಳ್ಳುತ್ತಾನೆ. ಈ ಬಾಲಕೃಷ್ಣ ಚಂದ್ರನನ್ನು ದಿಟ್ಟಿಸುತ್ತಾ ತನ್ನ ಪುಟಾಣಿ ಕೈಯಿಂದ "ಚಂದುಮಾವಾ! ಬಾ ಬಾ!" ಎಂದು ಕರೆಯುತ್ತಿದೆ. ಪೆರಿಯಾಳ್ವಾರ್ ತಾವೆಂಬುದನ್ನು ಮರೆತು, ತಾಯಿ ಭಾವದಲ್ಲಿ ಅನುಭವಿಸುವ ರಸ! ಅದನ್ನು ಬಾಯಾರ ಕೃಪೆಗೈದು ಹೀಗೆ ನಮಗೆಲ್ಲಾ ಈ ಮೊದಲ ಶತಕದ ಜನೆಯ ದಶಕದಲ್ಲಿ ಪಾನ ಮಾಡಿಸುತ್ತಾರೆ. ಇದರಲ್ಲಿ ತಿರುಪತಿ ತಿಮ್ಮಪ್ಪನ ಶಾಬ್ದಿಕ ಉಲ್ಲೇಖವಿರುವುದು ಮೂರನೆಯ ಹಾಡು.

ತಮಿಳ್ ತಿರಳ್ ೧-೫-೩

ಶುತ್ತುಮೊಳಿ ವಟ್ಟಂ ಶೂಳ್ಗ್ನ್ದು ಶೋದಿ ಪರನ್ದೆಜ್ಗುಂ, ಎತ್ತನೈ ಶೆಯ್ಯಿಲುಂ ಎನ್‌ಮಹನ್ ಮುಹಂ ನೇರ್‌ಒವ್ವಾಯ್
ವಿತ್ತಹನ್ ವೇಜ್ಗಡವಾಣನ್ ಉನ್ನೈ ವಿಳಿಕ್ಕಿನ್ನ, ಕೈತ್ತಲಂ ನೋವಾಮೇ ಅಮ್ಬುಲೀ! ಕವಿಡಿದೋಡಿ ವಾ

ಕನ್ನಡ ನೆರಳ್

ಸುತ್ತಲೂ ಮಂಡಲ ಕಳೆ ಹರಗಿ ಜ್ಯೋತಿಯ ನೆಲ್ಲೂ ಪಸರಿಸಲೂ ಎಷ್ಟೇ ಗೈದರೂ ನೀ ಎನ್ ಮಗನ್‌ಮೊಗ ಸರಿಗಟ್ಟಲು ಆರೆ
ಅಚ್ಚರಿಗನ್ ವೇಂಕಟವಾಸನ್ ನಿನ್ನಂ - ಕರೆಯುತಿಹನ್! ಸುಸ್ತಾಗದ ವೋಲ್ ಕೈತಳವಿವನಾ, ಓ ಚಂದಿರ! ಜವದಿಂ ಓಡಿದೋ ಬಾ!

ಒಳಿವಟ್ಟಮ್ = ಬೆಳುದಿಂಗಳ ಪ್ರಕಾಶ ನೀಡುವ ದುಂಡನ ಚಂದ್ರ, ಶುತ್ತುಮ್ = ನಾಲ್ಕೂ ಕಡೆ, ಶೂಳ್ನ್ದು = ಹಮ್ಮಿ ಹರಗಿ, ಎಜ್ಗುಮ್ = ಎಲ್ಲೆಲ್ಲೂ, ಶೋದಿಪರನ್ದು = ಜ್ಯೋತ್ಸ್ನಾಜ್ಯೋತಿ ವಿಶಾಲವಾಗಿ ವ್ಯಾಪಿಸಿ, ಎತ್ತನೈ ಶೆಯ್ಯಿಲುಮ್ = ಓ ಪೂರ್ಣಚಂದ್ರಾ! ನೀನೆಷ್ಟು ಕಲೆಯೇರಿಸಿಕೊಂಡರೂ, ಎನ್ ಮಹನ್ ಮುಹಮ್ = ನನ್ನೀ ಮಗ ಬಾಲಕೃಷ್ಣನ ಮುಖವನ್ನು, ನೇರು ಒವ್ವಾಯ್ = ಸರಿ ಹೋಲಲಾರೆ. ಇವನ ಮುಂದೆ ನೀನು ವಿಧೇಯನಾಗು. ಈ ಬಾಲಕನೇ, ವಿತ್ತಹನ್ = ಅತ್ಯಾಶ್ಚರ್ಯಕರವಾದ ರೀತಿಯಲ್ಲಿ, ಅರ್ಚಾವತಾರ ತಾಳಿ, ವೇಜ್ಗಡವಾಣನ್ = ಶ್ರೀ ವೇಂಕಟಾಚಲ ಪತಿಯಾಗಿರುವವನು. ಕೈತ್ತಲಮ್ = ನನ್ನ ಕಂದನ ಶ್ರೀ ಹಸ್ತ ಬಲು ಎಳಸು. ನೋವಾದೇ = ಅದು ಮೊಗುವಿಗೆ ನೋವಾಗದಂತೆ, ನೋವಿಗೇನು ಪ್ರಸಂಗ? ಎನ್ನುವಿಯಾ? ಉನ್ನೈ = ಚಂದೂಮಾಮಾ! ಬಾ ಬಾ! ಎಂದು. ವಿಳಿಕ್ಕಿನ್ನ = ಕರೆಯುತ್ತಿರುವನಲ್ಲಾ! ಎಷ್ಟೊಂದು ಸಲ ಕರೆದೂ ಕರೆದೂ ಮೊಗುವಿಗೆ ಸಾಕಾಗಿದೆ, ಅಂಬುಲೀ = ಓ ಇಂದೋ! ಕಡಿದ್ = ಬೇಗ ಕಡಕ್ಕನೆ, ಓಡಿ ವಾ = ಇವನ ಕೈಗೆ ಸಿಗುವಂತೆ ಧಾವಿಸಿ ಬಾ! ನಿಜ ನೀನು ಇವನ ಮನದಿಂದಲೇ ಹುಟ್ಟಿದವನಲ್ಲವೇ? "ಚಂದ್ರಮಾ ಮನಸೋ ಜಾತಃ" - ಪುರುಷ ಸೂಕ್ತ. ಎಂಬಂತೆ ಪರಮ ವಿರಾಟ್ ಬ್ರಹ್ಮ ಸ್ವರೂಪನಾದ, ಈ ನನ್ನ ವತ್ಸನ ಮನಸ್ಸಿನ ಅಂಶವಾಗಿಯೇ ನೀನು ಹುಟ್ಟಿ ಬಂದವ! ಕೃತಜ್ಞತೆಯಿಂದ ಇವನ ಸಿರಿಚಿತ್ತಕ್ಕೆ ಈಗ ಆಹ್ಲಾದ ನೀಡು. ನಿನ್ನ ಈ ಸರ್ವರನ್ನೂ ತಣಿಸುವ ಸ್ವಭಾವ ಯಾವನಿಂದ ಬಂತೋ ಅವನಿಗೇ ಈಗ ಅದನ್ನರ್ಪಿಸು. ಕೆರೆಯ ನೀರನ್ನು ಭಕ್ತಿ ಭಾವದಿಂದ ಕೆರೆಗೇ ಚೆಲ್ಲು!

ತಮಿಳ್ ತಿರಳ್ ೧-೮-೩

ಎನ್ನಿದು ಮಾಯಮ್? ಎನ್ನಪ್ಪನ್ ಅರಿನ್ದಿಲನ್ ಮುನ್ನಯ ವಣ್ಣಮೇ ಕೊಣ್ಡಳವಾಯ್ ಎನ್ನ
ಮನ್ನು ನಮುಚಿಯೈ ವಾನಿಲ್ ಶುಳತ್ತಿಯ ಮಿನ್ನು ಮುಡಿಯನೇ ಅಚ್ಚೋವಚ್ಚೋ ವೇಜ್ಗಡ ವಾಣನೇ! ಅಚ್ಚೋವಚ್ಚೋ!

ಕನ್ನಡ ನೆರಳ್

ಏನಿದು ಮಾಯೆ! ಎನ್ನಪ್ಪನಿಗರಿವಾಗಲೆ ಇಲ್ಲ ಮುನ್ನಾss ಕಾಲುಳ್ ಮೈಯನೇ ಕೊಂಡಳೆಯಲು ಬೇಕೆನ್ನುತ
ತಂಟೆಯ ನಮುಚಿಯ ಬಾನೊಳು ತಿರಗಿಸಿಯೆಸೆದಾ ಮಿಂಚುವ ಮುಡಿಯಾ! ಅಪ್ಪೋ ಅಪ್ಪೋ! ವೇಂಕಟನಿಲಯಾ ಅಪ್ಪೋ ಅಪ್ಪೋ!

ವೇಜ್ಗಡ ವಾಣನೇ ಅಚ್ಚೋ ಅಚ್ಚೋ. ಈ ಪೆರಿಯಾಳ್ವಾರ್ ಶ್ರೀ ಕೃಷ್ಣ ಜನಿಸಿದ ಅಂದಿನಿಂದ ಯಶೋದಾಭಾವಾವಿಷ್ಟರಾದಂತೆ, ಈ ಕೃತಿಯ ಆರಂಭದಿಂದಲೇ ಸೂಚನೆ ಸಿಗುತ್ತದೆ. ಶ್ರೀಜಯನ್ತಿಯ ಆ ದಿನ ಗೋಕುಲದವರೆಲ್ಲಾ ಆನಂದ ತುಂದಿಲರಾಗಿ ಹಾರಾಡಿದ್ದು, ಅಂದು ಮನೆಗೆ, ಮೊಗುವನ್ನು ನೋಡಲು ಬಂದವರಿಗೆಲ್ಲಾ ತನ್ನ ಎಳೆಗಂದನ ಒಂದಕ್ಕೊಂದೊಪ್ಪುವ ಆ ಎರಡೂ ಕಾಲುಗಳನ್ನು ತೋರಿಸುವುದರಿಂದ ಹಿಡಿದು, ಕಣಕಾಲು ಮಂಡಿ ತೊಡೆ ಬುಲ್ಲಿ ನಡು ಹೊಕ್ಕಳು ಹೊಟ್ಟೆ ಎದೆ ತೋಳು ಕರ ಕಂಠ ತುಟಿ ಮೂಗು ಕಣ್ಣು ಹುಬ್ಬು ಕಿವಿ ನೆತ್ತಿ ಮುಂಗುರುಳು ಹೀಗೆ ಅಪಾದಚೂಡ ಎಲ್ಲಾ ಅಂಗಾಗಗಳ ನಲವು ಚೆಲವುಗಳನ್ನು ಬಲು ಒಲವಿನಿಂದ ತೋರಿಸಿದ್ದು, ತೊಟ್ಟಿಲು ಕಟ್ಟಿ ಕೃಷ್ಣನಿಗೆ ಜೋಗುಳ ಹಾಡಿದ್ದು, ಚಂದಮಾಮನನ್ನು ಬೇಗ ಅವನ ಕೈಗೆ ಬರುವಂತೆ ಕರೆದದ್ದು, ನಂದಕಿಶೋರನೊಂದಿಗೆ ತಾನು "ಆಜೂಬು ಮಲ್ಲಿಗೆ" ತೋಳ್ ಆಟವಾಡಿದ್ದು, ಅವನ ಕೈಗಳಿಂದ ತಪ್ಪಳ ತಟ್ಟಿಸಿ, ಯಶೋದೆ ನಂದರೀರ್ವರೂ ಆನಂದಿಸಿದ್ದು, ಮೊಗು ತೆತ್ತಾಪೆತ್ತಾ ಹೆಜ್ಜೆಯಿಟ್ಟು ತಾನೇ ನಡೆದದ್ದು ಈ ನಾನಾ ಬಾಲಲೀಲೆಗಳ ರಸಾನುಭವಗಳನ್ನು ಇಲ್ಲಿಯವರೆಗೂ ತಾವು ಸವಿದೂ ನಮಗೆಲ್ಲಾ ಸವಿಸಿಯೂ ಆಯಿತು. ಈ ಆನೆಯ ದಶಕದಲ್ಲಿ ಎದುರಿಗೇ ಬಾಲಕೃಷ್ಣ ಓಡಿಬಂದು ತಾಯಿ ಯಶೋದೆಯನ್ನಪ್ಪುವ ಈ ಮಹಾಸುಖಾನುಭವ!

ಇದು = ಈ ಬಲಿರಾಯ ನನ್ನ ತಂದೆ ಬಲು ಉದಾರಿ. ಪೂರ್ವಾಽಪರ ಸರಿಯಾಗಿ ತಿಳಿಯದೆ, ದಾನ ನೀಡಿದ. ಎಲೈ ಕಳ್ಳ ಕುಳ್ಳ! ಮೊದಲ ಅಷ್ಟೇ ಪುಟಾಣಿ ಅಳತೆಯ ಕಾಲಿನಿಂದ ಅಳೆದುಕೋ. ತೋರಿದ್ದೊಂದು, ಅಳೆದದ್ದೊಂದು, ಇದು ಮೋಸ! ಈಗ ದೊಡ್ಡಪಾದದಿಂದ ಅಳೆದ ಈ ಕೆಲಸ, ಎನ್‌ಇದು ಮಾಯಮ್ = ಎಂತಹ ವಂಚನೆ! ಎನ್ ಅಪ್ಪನ್ ಅರಿನ್ದಿಲಮ್! ಮೊದಲೇ ನಿನ್ನ ಠಕ್ಕನ್ನು ನನ್ನಪ್ಪ ಅರಿತುಕೊಳ್ಳಲಿಲ್ಲ. ಮುನ್ನೈಯ ವಣ್ಣಮೇ = ಹಿಂದೆ ಭೂದಾನ ಬೇಡಿದಾಗ ಇದ್ದ ಆ ವಾಮನನ ಆಕಾರವನ್ನೇ, ಕೊಂಡು = ನ್ಯಾಯವಾಗಿ ಸ್ವೀಕರಿಸಿ, ಅಳವಾಯ್ = ನಿನ್ನ ಜಪ ತಪಸ್ ಸ್ವಾಧ್ಯಾಯಾದಿಗಳಿಗೆ ಮೂರಡಿ ಈಗಲೂ ಅಳೆದುಕೋ. ವಾರಸುದಾರನಾದ ನಾನೇನೂ ಬೇಡ ಎನ್ನುವುದಿಲ್ಲ. ಎನ್ನು = ಹೇಳಿದ್ದನ್ನೇ ಹೇಳುತ್ತಾ, ಮನ್ನು = ಪಟ್ಟು ಹಿಡಿದ, ನಮುಚಿಯೈ = ಬಲಿಯ ಮಗನಾದ ನಮುಚಿಯನ್ನು, ವಾನಿಲ್ = ಬಾನಲ್ಲಿ, ಶುಳತ್ತಿಯ = ಗಿರಗಿರನೆ ತಿರುಗಿಸಿ, ಎಸೆದ, ಮಿನ್ನು = ಮಿಂಚಿಗಿಂತಲೂ ಮಿಂಚುವ, ಮುಡಿಯನೇ = ತಲೆಮುಡಿಯುಳ್ಳವನೇ!

ಈ ಭಟ್ಟನಾಥರಿಗೆ ಆ ಕಾಲದ ವಾವನಾವತಾರದ ದರ್ಶನ ಈಗ ಹುಟ್ಟಿದಂತೆ ಬೆಳೆಯುತ್ತಿರುವ ಈ ಬಾಲ ಕೃಷ್ಣನಲ್ಲೇ ಆಗುತ್ತಿದೆ! ಅಚ್ಚೋ ಅಚ್ಚೋ = ಅಪ್ಪೋ ಅಪ್ಪೋ ಕೇವಲ ಜಡವಾದ ಜಾಡ್ಯದ, ನೈತಿಕ ನ್ಯಾಯವೊಂದರಲ್ಲೇ ಬಿದ್ದಿರುವ ಏಕಾಂಗಿ ಮನೋಭೂಮಿಕೆಯವರಿಗೆ, ನಿಜ, ಅರ್ಥವಾಗದ ಮಾತು. ಅದು ಅವರ ವ್ಯಕ್ತಿಗತ ಆತ್ಮೀಯ ದೋಷವಲ್ಲ. ಆತ್ಮ ವಿಮುಖ ಶಿಕ್ಷಣದ ಸಾಮಗ್ರಿಯ ಕೊರತೆಯಷ್ಟೆ! ಆತ್ಮಾಽಭಿಮುಖ ವಿಜ್ಞಾನ ಇನ್ನೂ ಬೆಳೆಯದಿರುವ ಕಾಲಘಟ್ಟವಿದಷ್ಟೆ. ಜಡಾಣುವಿನಂತೆ ಚೈತನ್ಯಾಣು, ಇವೆರಡನ್ನೂ ಮೀರಿರುವ, ವ್ಯಾಪಕವೂ ಹಾಗೂ ಅಣುವಿಗೂ ಅಣುವಾದ ಪರಮಚೈತನ್ಯಾಣು **"ಅಣೋರಣೀಯಾನ್ ಮಹತೋ ಮಹೀಯಾನ್"** ಅದರ ನಾನಾ ಬಗೆಯ, ಈ ಇಂದ್ರಿಯ, ಈ ಉಪಕರಣಗಳಿಗಿಂತಲೂ, ವಿಲಕ್ಷಣವಾದ ಗ್ರಾಹಕ ಶಕ್ತಿ, ಅವತಾರರಹಸ್ಯಜ್ಞಾನ ಈ ಸಂತರಿಗೆ ಆ ಪರಾಚೈತನ್ಯ ಶಕ್ತಿಯಿಂದಲೇ ಎಂಬುದನ್ನು ಮಾನವ ಮೊದಮೊದಲು "ಶ್ರದ್ಧೆ"ಯಿಂದ ನಂಬಿ, ಬಳಿಕ ತನ್ನ ವಿಜ್ಞಾನದ ಪ್ರಾಯೋಗಿಕ ಚೂಪು ಚಾಪುಗಳನ್ನು ಬಳಸುವುದೊಳ್ಳೆಯದು. ನಾನಿಂತಹವಳ ಮಗ! ಇಂತಹವನ ಮಗ! ಇದು ನಿನಗೆ ಹೇಗೆ ತಿಳಿದೀತು? ಕಂಡವರಾಡಿದ್ದೇ ಅಲ್ಲಿ "ಆಪ್ತವಾಕ್ಯ" ಹೇಗೆ ಪ್ರಮಾಣವೋ, ಹಾಗೆ ಇಲ್ಲೂ.

ಸಮಷ್ಟಿ ವಿಶ್ವಾತ್ಮನಿಗೇ ಎಲ್ಲದರ ಒಡೆತನ. ಸಮಾಜದ ರೂಢಿಯಲ್ಲಿ, ದೇವರಂತೆ ದೇವರು! ಯಾವನವ? ಅನ್ಯಾಯವಾಗಿಯೇ ಕಾಣುವುದು ಸಹಜವೆಂಬಂತಾಗಿಬಿಟ್ಟಿದೆ. "ರೂಢಿಭವ! ರೂಢಿಯನ್ನು ಝೂಡಿಸುವುದೇ ಭಾವ" ಇದು ನಮ್ಮ ಪು.ತಿ.ನ. ಅವರ ಸಾಕ್ಷಾತ್ಕಾರ! ಹಿಂದಿನ ಪೊಯ್ ಹೈಯಾಳ್ವಾರ್ ಸಹ, ತಮ್ಮ ಮೊದಲ "ಸಿರಿಯನ್ತ್ಯಾದಿ"ಯ ೭೯ನೆಯ ಹಾಡಿನಲ್ಲಿ "ಕೊಣ್ಡಾನೈ ಅಲ್ಲಾಲ್, ಕೊಡುತ್ತಾರೈ ಆರ್ ಪಳಿಪ್ಪಾರ್?" ಎಂದಿದ್ದಾರೆ. "ತಾನು ನಿರ್ಮಿಸದ ಭೂ, ಸ್ವರ್ಗಾದಿಗಳನ್ನು ಸುರರೂ ಮಾನವರೂ ತಮ್ಮದನ್ನಾಗಿ ತಿಳಿಯುತ್ತಾರೆ. ಅಂಥವರಲ್ಲಿ ಈ ಬಲಿಯೂ ಒಬ್ಬ. ಕೊಟ್ಟವನೇ ನಿಜವಾದ ಕಳ್ಳ". ಹೀಗೆಂದು ಯಾರೂ ಬೈಯುವುದಿಲ್ಲ. ವಸ್ತುನಿಷ್ಠ ಸತ್ಯ, ಆಧ್ಯಾತ್ಮಿಕ ಸತ್ಯ, ಸಮಾಜ ವಿಜ್ಞಾನಕ್ಕೂ ಕ್ರಮೇಣ ಸರಿಬರುವುದೇ, ಸುಳ್ಳಂತೆ?

ತಮಿಳ್ ತಿರಳ್ ೨-೬-೯

ತೆನ್ ಇಲಜ್ಗೈಮನ್ನನ್ ಶಿರನ್ದೋಳ್ ತುಣಿ ಶೆಯ್‌ದು ಮಿನ್ ಇಲಙ್ಗುಪೂಣ್ ವಿಭೀಷಣ ನಮ್ಮಿಕ್ಕು
ಎನ್ ಇಲಙ್ಗು ನಾಮತ್ತಳವುಮ್ ಅರಶೆನ್ನ ಮಿನ್ ಅಲಙ್ಗಾರರ್‌ಕ್ಕು ಓರ್ ಕೋಲ್ ಕೊಣ್ಡುವಾ
ವೇಙ್ಗಡವಾಣರ್‌ಕ್ಕು ಓರ್ ಕೋಲ್ ಕೊಣ್ಡು ವಾ

ಕನ್ನಡ ನೆರಳ್

ತೆಂಕಣ ಲಂಕೇಶ್ವರನಾ ಶಿರತೋಳ್ ತುಂಡರಿಸಿ ಕೊಂಕಿಲ್ಲದೆ ಎಂದೂ ಕಾಶಿಪ ಭೂಷಣಪೂರ್ಣ ವಿಭೀಷಣಗೆ
ಎನ್ ನಾಮವು ಬೆಳಗುವವರೆಗೂ ನೀನ್ "ಅರಸಾಳ್" ಎನು ಪೇಳ್ದ ಮಿನ್‌ಚೊಪ್ಪುವ ಹಾರನಿಗೋರ್ ಕೋಲ್ ಕೊಂಡದೊಬಾ
ವೇಂಕಟರಾಯಗೆ ಓರ್‌ಕೋಲ್ ಕೊಂಡದೊ ಬಾ!

ಸ್ವಲ್ಪ ವಯಸ್ಸೇರಿದೆ, ಪೌಗಂಡಾವಸ್ಥೆ! ತನ್ನ ಗೋಪಾಲ ಕೃಷ್ಣನನ್ನು ಮನೆತನದ ಉದ್ಯೋಗ ರೂಪಿ ಸ್ವಕುಲ ಧರ್ಮವಾದ ದನಕರುಗಳನ್ನು ಮೇಯಿಸಲು ತಾಯಿ ಕಳಿಸುತ್ತಿದ್ದಾಳೆ. ಈಗ ಕರುಗಳನ್ನು ಕಾಯುವ ಕೋಲನ್ನು ಅಮ್ಮನ ಹತ್ತಿರ ಕೇಳುತ್ತಾನೆ! ಈ ಕಿಶೋರ! ಇದಕ್ಕೆ ಹಿಂದೆ ಕುವರನಿಗೆ ತಲೆಬಾಚಿಯಾಗಿತ್ತು. ರಂಪವನ್ನು ತಡೆಯಲಾರದೆ ತಾಯಮ್ಮ ಒಂದು ಕಾಗೆಯ ಮೂಲಕ ಈತನಿಗೆ ಸಮಾಧನ ಪಡಿಸಿದ್ದಳು. ಆ ಕಾಗೆ ಇನ್ನೂ ಅಲ್ಲೇ ಇತ್ತು. ಈಗಲೂ "ಕಾಗೇ! ಕಾಗೇ!" ಎನ್ನೀ ದನಗಾಹಿಗೆ, "ಕೋಲ್ ಕೊಂಡುವಾ" ಎನ್ನುವ ರಸಾನುಭವ! ಹಿಂದಿನ ರಾಮನೇ, ಎಂದೂ ಇದ್ದವನೇ ಈಗ ತನ್ನ ಮನೆಗೆ ಬೇರೆ ರೂಪು ಹಾಗೂ ಧರ್ಮದಿಂದ ಬಂದಿದ್ದಾನೆ! ಈ ಧರ್ಮೈಕ್ಯ ಸಾಕ್ಷಾತ್ಕಾರ ಈ ಹಿರಶರಣರಿಗಾಗುತ್ತಿದೆ.

ತೆನ್ ಇಲಙ್ಕೈಮನ್ನನ್ = ಗಿರಿದುರ್ಗ ಜಲದುರ್ಗ ವನದುರ್ಗವೆಂಬ ತ್ರಿಕೂಟದಿಂದ ಸುತ್ತುವರಿದು, ಮಹಾಟ್ಟಹಾಸದಿಂದ ಪ್ರಕಾಶಿಸುವ ತೆಂಕಣ ಲಂಕಾನಗರಿಗೆ ಅಧಿಪತಿಯೆಂದು ಕೊಳ್ಳುತ್ತಿದ್ದ, ರಾವಣೇಶ್ವರನ, ಶಿರಮ್ = ಹತ್ತೂ ತಲೆಗಳನ್ನೂ, ತೋಳ್ = ಇಪ್ಪತ್ತು ತೋಳುಗಳನ್ನೂ, ತುಣಿಶೆಯ್‌ದು = ಛೇದಿಸಿ ಪುಡಿಪುಡಿಗೈದು, ಪೂಣ್ = ಮುಂದಿನ ಪಟ್ಟಾಭಿಷೇಕಾಲಂಕಾರಗಳನ್ನು ಈಗಲೇ ಸರ್ವಲೋಕನಾಥನಿಂದ ಹೊಂದಿರುವ, ವಿಭೀಷಣ ನಂಬಿಕ್ಕು = ಸಂಪೂರ್ಣ ವ್ಯಕ್ತಿತ್ವ ಸಂಪನ್ನನಾದ ವಿಭೀಷಣನಿಗೆ! ಭಾವವೇನೆಂದರೆ, ತ್ರಿಲೋಕ ಸುಂದರಿಯಾದ ಮಡದಿ ಮಂಡೋದರಿ, ತಮ್ಮ ಕುಂಭಕರ್ಣ, ಪ್ರಹಸ್ತಾದಿ ಮಂತ್ರಿಗಳು, ಲಂಕಾ ಪ್ರಜೆಗಳು ಎಲ್ಲರೂ ಯದ್ಯಪಿ, ರಾವಣನ ಕೆಲಸಕ್ಕೆ ಸಮ್ಮತಿ ನೀಡಿದವರಲ್ಲ. ಆದರೂ ಅದರಲ್ಲಿ ಕೆಚ್ಚಿನ ಕಿಚ್ಚಿರಲಿಲ್ಲ! ವಿಭೀಷಣ **"ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ..... ರಾಘವಂ ಶರಣಂ ಗತಃ"** ಸಂಪೂರ್ಣ ಕ್ರಾಂತಿಕಾರನಾದುದೇ ಇಲ್ಲಿನ "ನಂಬಿ" ಪದದ ಒಳಗುಟ್ಟು!

ದ್ವಾಪರಾಂತ್ಯದ ಮಧುರಕವಿಗಳು, ಕಲಿಯುಗಾದಿಯ ತಮ್ಮ ಗುರುದೇವ ಶಠಾರಿಯನ್ನು ಮೊಟ್ಟಮೊದಲಿಗೆ "ಕುರುಹೂರ್ ನಂಬಿ!" ಎಂದರು. **"ಶರಣರಿಗೂ ಆಚಾರ್ಯರಿಗೂ ಈ ಪೂರ್ಣತೆ, ದೇವರಿಗಿಂತಲೂ ಹೆಚ್ಚೆಂಬುದೇ ಶರಣರ ಜೀವಾಳ".** ಅಂತೆಯೇ ವಿಭೀಷಣಾಳ್ವಾರ್(ನ್) ಎಂದೇ ಈತನನ್ನೂ ಕರೆಯಲಾಗುವುದು, ಊರು, ಕೇರಿ, ಮಡದಿ, ಮಕ್ಕಳು, ಗೆಳೆಯರನ್ನೆಲ್ಲಾ ತೊರೆದು ರಾಮನಲ್ಲಿ ಶರಣು ಮಾಡಿದ್ದರಿಂದಲೇ, ಇಂತಹ ಪರಮಸಾತ್ವಿಕ ವಿಭೀಷಣನಿಗೆ.

ಇಲಙ್ಗು = ಎಂದೆಂದೂ ಸರ್ವ ಸರ್ವರನ್ನೂ ಪ್ರಕಾಶಗೊಳಿಸುವ, ಎನ್‌ನಾಮತ್ತು ಅಳವುಮ್ = ನನ್ನ ರಾಮ ನಾಮ ಇರುವವರೆಗೂ ಶಾಶ್ವತವಾಗಿ, ಅರಶು = ಚಿರಂಜೀವಿಯಾಗಿದ್ದು ರಾಜ್ಯವನ್ನಾಳು. ಎನ್ನ = ಎಂದು ತ್ರೇತಾಯುಗದಲ್ಲಿ ಹೇಳಿದ, ಅದೇ ರಾಮ ಈಗ ನನ್ನ ಮನೆಯಲ್ಲಿ, ಮಿನ್ ಅಲಙ್ಗಾರರ್‌ಕ್ಕು = ಒಡವೆಗೂ ಒಡವೆಯಂತೆ ಕಳೆಯೇರಿಸುತ್ತಿದ್ದಾನೆ. ಅಂಥ ನನ್ನೀ ಕಂದನಿಗೆ "ಓರ್ ಕೋಲ್" ಕೊಂಡುವಾ = ಅವನೇ ಈ ಪೆರಿಯಾಳ್ವಾರಿಗೆ ತಿಮ್ಮಪ್ಪನಾಗಿ ತೋರಿಕೊಳ್ಳುತ್ತಾನೆ. ವೇಙ್ಗಡವಾಣರ್ಕು ವೆಂಕಟೇಶನಿಗೆ = ಓ ಕಾಗೆಯೇ! ಹೀಗೆ, ಕಾಗೆ ತೋರಿಸಿದಾಗ ಹೂ ಮುಡಿಸಿಕೊಳ್ಳಲು ಗಲಾಟೆ ಮಾಡುವುದಿಲ್ಲ ತುಂಟ. ಮಕ್ಕಳ ಮನಸ್ಸು ಪೂರಾ ಅಚ್ಚ ಕಪ್ಪಾಗಿರುವ, ಕಾಗೆಯಲ್ಲಿ ಬಲು ಏಕಾಗ್ರವಾಗಿ ಬಿಡುವುದು. ನೀನೂ ಆ ವಿಭೀಷಣನಂತೆಯೇ ಇವನಿಗೆ ಅಲಂಕಾರಾಸನಕ್ಕೆ ಅನುಕೂಲನಾಗು. ಆ ರಾವಣನಂತೆ ಪ್ರತಿಕೂಲನಾಗಬೇಡ!

ತಮಿಳ್ ತಿರಳ್ ೨-೭-೩

ಮಚ್ಚೊಡು ಮಾಳಿಹೈಯೇರಿ ಮಾದರ್‌ಹಳ್ ತಮ್ ಇಡಮ್ ಪುಕ್ಕು
ಕಚ್ಚೊಡು ಪಟ್ಟ್ಯೆ ಕ್ಕಿಳಿತ್ತು ಕಾಮ್ಬು ತುಹಿಲ್ ಅವೈ ಕೀರಿ
ನಿಚ್ಚಲುಮ್ ತೀಮೈಹಳ್ ಶೆಯ್ ವಾಯ್! ನೀಳ್ ತಿರುವೇಙ್ಗಡತ್ತೆನ್ದಾಯ್
ಪಚ್ಚೈತ್ತಮನಹತ್ತೋಡು ಪಾದಿರಿಪ್ಪೂ ಚ್ಚೂಟ್ಟವಾರಾಯ್

ಕನ್ನಡ ನೆರಳ್

ನಡು ಮನೆಯೊಡು ಮಾಳಿಗೆಯೇರಿ! ಪೆಣ್ಗಳೆ ಇರುವೆಡೆ ಹೊಕ್ಕು ಎದೆ ಕುಪ್ಪಸದೊಡು ರೇಶಿಮೆ ಮೇಲಾಕನೂ ಹರಿದೇ ಜರಿಸೀರೆಗಳವ ಗೀರಿ
ನಿತ್ಯವೂ ತೀಟೆಯ ಗೈಯ್ಯುವ ಪೋರಾ! ಸಿರಿವೇಂಕಟದೆನ್ ಅರಸೇ! ಹಚ್ಚನ ದವನದ ಜತೆ ಪಾದರಿ ಪೂವಂ ಸೂಡುವೊಲ್ ಬಾರಾ!

ಈ ದಶಕವಂತೂ ಮಾಲಾಕಾರರಾದ ಈ ಸಂತರಿಗೆ ಯಶೋದಾ ಭಾವಾSSವೇಶ ಇಲ್ಲದೆಯೂ ಒಪ್ಪಿ ಬರಬಹುದು. ಆದರೂ ಕಾಲಾನ್ತರದ ವಿಭವಾವತಾರ ಶ್ರೀ ಕೃಷ್ಣನದು. ಅದಕ್ಕೆ ಉಚಿತವಾಗಿ ಯಶೋದಾಭಾವನೆಯಿಂದಲೇ ಬಾಲಕೃಷ್ಣನಿಗೆ ಹೂ ಮುಡಿಸಲು ಕರೆಯುತ್ತಾರೆ ಈ ಪೆರಿಯಾಳ್ವಾರ್. ಮಚ್ಚೊಡು = ಕೆಳಗಿನ ನಡುಮನೆಯಿಂದ ಹಿಡಿದು, ಅದೂ ಬೇರೆಯವರ ಗೃಹ ಮಾಳಿಗೆ ಏರಿ ಉಪ್ಪರಿಗೆಯ ಬಿಸಿಲು ಮಚ್ಚಿನ ಪರ್ಯಂತ ಅಷ್ಟೈತ್ತರವನ್ನೂ ದಡದಡನೆ ಏರಿ, ಮಾದರ್‌ಹಳ್‌ತಂ = ಹೆಂಗಸರಿಗೇ ಮೀಸಲಾದ, ಇಡಮ್ ಪುಕ್ಕು = ಎಡೆಗಳಲ್ಲೆಲ್ಲಾ ನುಗ್ಗಿ! ಕಚ್ಚೊಡು = ಅವರವರು ಒಣಗಿಸಲು ಹರವಿರುವ ರವಿಕೆಯೊಂದಿಗೆ, ಪಟ್ಟ್ಯೆ = ರೇಶಿಮೆ ಮೇಲಾಕಿನ ಪೋಷಾಕುಗಳನ್ನೂ, ಕಿಳಿತ್ತು = ಹಲ್ಲಿನಿಂದ ಹರಿದು!, ಕಾಮ್ಬುತುಹಿಲ್ ಅವೈ = ಅಮೂಲ್ಯವಾದ ಅವರುಟ್ಟಿರುವ ಜರಿಯಂಚಿನ ಅವನ್ನು, ಕೀರಿ = ಉಗುರು ಹಲ್ಲುಗಳಿಂದಲೇ, ಕೆಲಸಕ್ಕೆ ಬಾರದಂತೆ ಸೀಳಿ! ಹೀಗೆಯೇ, ನಿಚ್ಚಲುಮ್ = ನಿತ್ಯವೂ, ತೀಮೈಹಳ್ = ತೀಟೆಗಳನ್ನು, ಶೆಯ್‌ವಾಯ್ = ಮಾಡುವಿಯಂತೆ! ಹೆಂಗಸರಿಗೆ ಈ ಸ್ವಾಮಿಯಲ್ಲಿ "ಬೇರೆ ಬೇರೆ ಪರಪುರುಷರಂತಹ" ಸಂಕೋಚ ತೊಲಗಿ, ಪರಮಪುರುಷನೆಂಬ ನಿಸ್ಸಂಕೋಚವಾದ ದೇಹಾSತೀತ ಭಾವನೆಯನ್ನು ಕಲಿಸುತ್ತಿದ್ದಾನೆ! ನೀಳ್ ವೇಙ್ಗಡವಾಣತ್ತು ಎನ್ದಾಯ್ = ಮಹೋನ್ನತವಾದ ವೇಂಕಟಗಿರಿನಾಥಾ! ಪಚ್ಚೈತ್ತಮನಹತ್ತೋಡು = ಪಚ್ಚೈತೆನೆ, ಮರುಗ, ದವನ ಪತ್ರಾದಿಗಳೊಡನೆ, ಪಾದಿರಿಪ್ಪೂ = ಪಾದರಿ, ಹೀಗೆ ಹಸಿರು ನಸುಗೆಂಪು ಸೇರಿಸಿ ಕದಂಬವಾಗಿ ಕಟ್ಟಿರುವ ಹೂದಂಡೆಯನ್ನು ಶೂಟ್ಟ = ತಲೆಗೆ ಮುಡಿಸಿಕೊಳ್ಳಲು,

ಬೇಡವೆಂದು ಹಠಮಾಡದೆ, ಇದೋ ನೋಡು ನೀನು ಕೇಳಿದಂತೆ ದನಕಾಯುವ ಕೋಲ್ ಕೊಟ್ಟಿರುವೆನಲ್ಲಾ! ನನಗೆ ಹೂ ಮುಡಿಸಲು ನೀನು "ಸಂಮತಿ" ಕೊಡಪ್ಪಾ. ಚಂಡಿ ಹಿಡಿಯಬೇಡ, ವಾರಾಯ್ ಬಾರೋ ನನ್ನ ಕಂದಾ!

ತಮಿಳ್ ತಿರಳ್ ೨-೯-೬

ಪೋದರ್ ಕಣ್ಡಾಯ್ ಇಚ್ಗೇ ಪೋದರ್ ಕಂಡಾಯ್ ಪೋದರೇನ್ ಎನ್ನಾದೇ ಪೋದರ್ ಕಣ್ಡಾಯ್
ಏದೇನುಮ್ ಶೊಲ್ಲಿ ಅಶಲಹತ್ತಾರ್ ಏದೇನುಮ್ ಪೇಶ ನಾನ್ ಕೇಳ್ಕ್ಕಮಾಟ್ಟೇನ್
ಕೋದುಹಲಮ್ ಉಡೈ ಕ್ಕುಟ್ಟನೇ! ಓ! ಕುನ್ನೆಡುತ್ತಾಯ್! ಕುಡಮಾಡು ಕೂತ್ತಾ!
ವೇದಪ್ಪೊರುಳೇ ಎನ್ ವೇಙ್ಗಡವಾ! ವಿತ್ತಹನೇ! ಇಚ್ಗೇ ಪೋದರಾಯೇ

ಕನ್ನಡ ನೆರಳ್

ಬಾರೋ ಕಂಡ್ಯಾ ಇಲ್ಲಿಗೇ ಬಾರೋ ಕಂಡ್ಯಾ! ಬಾರೆನು ಎನ್ನದೆ ಬಾರೋ ಕಂಡ್ಯಾ
ನೆರೆಯೇನೇನೋ ತಮ್ಮೊಳಗಾಡುವುದುಂ ಏನೇನೋ ಪೇಳ್ವುದುಂ ನಾ ಕೇಳಲು ತಾಳೆ
ಕೌತುಕ ಕೆರಳಿಪ ಕುಟ್ಟೀ! ಓ ಗಿರಿಧಾರೀ! ಘನ ಗುಂಬದ ಲೀಲಾ ನಾಟ್ಯವಿಲಾಸೀ!
ವೇದಗಳ್ ಹುರುಳೇ! ಎನ್ನಯ ವೇಂಕಟಮರುಳೇ! ಮಾಯಾ ತಿರಳೇ! ಇತ್ತೆಡೆ ಬಾರಾ.

ಗ್ರಾಮ ಗೋಕುಲದ ಗೊಲ್ಲರೂ ಅವರ ಮಡದಿಯರೂ, ಯಶೋದೆಯ ಬಳಿ ಸಾರಿ ನಿನ್ನ ತುಡುಗಿನ ಹುಡುಗ ನಮ್ಮೆಲ್ಲರ ಮನೆನುಗ್ಗಿ ಬಲು ಅನರ್ಥಮಾಡುತ್ತಾನೆ. ಹೀಗೆ ನಾನಾ ಬಗೆ ಚಾಡಿ ಹೇಳಿದಾಗ ತಾಯಿ ಮಗನಿಗೆ ಹೇಳುವ ಮಾತು. ಕೋದುಕಲಮ್ ಉಡೈ = ಎಲ್ಲರ ಕುತೂಹಲಕ್ಕೂ ನೀನೇ ಪಾತ್ರನಾಗಬೇಕೆಂಬ "ಮಯ್ಯಾSSಸಕ್ತಮನಾಃ" ಎಂಬ ನಿನ್ನ ಗೀತೋಪದೇಶದಂತೆ, ಅವರೆಲ್ಲರಲ್ಲೂ ನೀನು ಮೇಲ್ ಬಿದ್ದು ಮೊದಲಿಗೇ ಕುತೂಹಲವನ್ನು ತೋರುವುದೂ ಪಾಪ! ಅವರಿಗೆ ತಿಳಿಯದು. ಓ ಕುಟ್ಟನೇ! ನನ್ನ ಮರಿಕುಟ್ಟೀ! ಗೋ ಗೋಪೀ ಗೋವುಗಳ ರಕ್ಷಣೆಗೆ ನೀನು ಹೊಣೆಯಾಗಿದ್ದು, ಕುನ್ನು ಎಡುತ್ತಾಯ್ = ಹಸಿವಿನ ಕೋಪದಿಂದ, ದೇವೇಂದ್ರ ಸುರಿಸಿದ, ಘೋರ ಮಳೆಯನ್ನು ಗೋವರ್ಧನ ಗಿರಿಯನ್ನೇ ಛತ್ರಿಯಾಗೆತ್ತಿ ಏಳುದಿನಗಳೂ ರಾತ್ರಿ ಹಗಲು ಅಖಂಡವಾಗಿ ಅನಾಯಾಸದಿಂದ ಹಿಡಿದಿದ್ದವನೇ! ಇಷ್ಟೊಂದು ಉಪಕಾರ ಪಡೆದವರು ನಿನ್ನ ಮೇಲೆ ಈಗ ಏನೇನೋ ಹೇಳುತ್ತಾರೆ. ಅಶಲ್ ಅಹತ್ತಾರ್ = ನಿನ್ನ ಆತ್ಮೀಯತೆಯ ರಹಸ್ಯ ತಿಳಿಯದ ಪರದೇಶಿಗಳವರು! ಏದೇನುಮ್ ಶೊಲ್ಲಿ = ಅವರವರ ಮಟ್ಟದಲ್ಲಿ ತಿಳಿದಂತೆ ನಿನ್ನ ಮೇಲೆ ಏನೇನೋ ಅಪವಾದ ಹೊರಸುತ್ತಾರೆ! ಏದೇನುಮ್ ಪೇಶನಾನ್ ಕೇಳ್ಕಮಾಟ್ಟೇನ್ = ಅದನ್ನು ನಾನು ಈ ನನ್ನ ಕಿವಿಯಲ್ಲಿ ಕೇಳುವುದು, ನನ್ನಿಂದಾಗದಪ್ಪಾ! ನಾನಿದೋ ನಿನ್ನ ಮಹಿಮೆಯ ಉಭಯಮುಖವನ್ನೂ ತಿಳಿದವಳು.

ಕುಡುಮ್ ಆಡು ಕೂತ್ತಾ = ಗೊಲ್ಲರ ಜಾತ್ಯುಚಿತವಾದ, ಕುಂಭ ನೃತ್ಯದ ಕರಗದ ಜಾತ್ರೆಯನ್ನು ಎಷ್ಟು ಚೆನ್ನಾಗಿ ನಿರ್ವಹಿಸಿಕೊಡುವಿ! ವೇದ ಪ್ಪೊರುಳೇ = ಜಗತ್ತಿನ ಸಕಲ ಭಾಷಾ ವೇದಗಳ, ಮೊಟ್ಟಮೊದಲ ನಡುವಿನ ಹಾಗೂ ಕೊಟ್ಟ ಕೊನೆಯ ಸಮಗ್ರ ಸಂಪೂರ್ಣಾರ್ಥ ಸ್ವರೂಪನೇ! ನಿನ್ನ ಅಂತರ್ಯ, ನೀನೆಸಗುವ ಸಕಲ ಕಾರ್ಯಗಳೂ ಅಯಾಯಾ ಚೇತನಾತ್ಮರ ಪ್ರಕೃತಿ ಶೋಧಕ್ಕಾಗಿ! ಅವರವರ ದ್ರವ್ಯ ಶುದ್ಧಿಗಾಗಿ! ಎಂಬ ಯಥಾರ್ಥ ವಾಙ್ಮಯದ ತಾತ್ಪರ್ಯಾರ್ಥವನ್ನು, ಮತ್ತೆ ಮತ್ತೆ ತಿಳಿಸಲೆಂದೇ, ವೇಙ್ಗಡವಾ = ಅರ್ಚಾವತಾರದಿಂದಲೂ, ಈ ಗಿರಿಸ್ಥಳವಾಸಿಯಾಗಿದ್ದೀಯೆ! ಕೃಷ್ಣನ ಆ ವಿಭವಾವತಾರದಲ್ಲೂ ತಿಳಿಯದಿದ್ದ ವೇದಾರ್ಥ ಹೆಣ್ಣು ಬೆಣ್ಣೆ ಎಲ್ಲರೂ ಎಲ್ಲವೂ ಸರ್ವೇಶ್ವರನದೇ ಅದುದರಿಂದ, "ಇವೆಲ್ಲಾ ನಮ್ಮ," ದೆಂಬ ಮಮಕಾರ ತೊಡೆದುಹಾಕಲು ಎಲ್ಲರನ್ನೂ ಬಿಡದೆ, ಬಗೆಬಗೆಯಾಗಿ ಸೆಳೆಯುತ್ತಿರುವ, ವಿತ್ತಹನೇ = ಓ ಆಶ್ಚರ್ಯಕಾರಿನ್! ಇಚ್ಗೇ ಪೋದರಾಯೇ = ಅವರ ಮನೆಗೆಲ್ಲಾ ಹೋಗದೆ ಇದೋ ನಮ್ಮ ಮನೆಗೇ ಬಾ! ಆದರೂ, ಪರಮ ವಾತ್ಸಲ್ಯಧಾಮನಾದ ದಯಾನಿಧಿ ಶ್ರೀಕೃಷ್ಣ ಪರಮಾತ್ಮ ತಟಸ್ಥರಾಗಿ ದೂರದಲ್ಲಿರುವ ಟೀಕಾಕಾರರನ್ನೂ ಇನ್ನೂ ಹೆಚ್ಚಾಗಿಯೇ ಪ್ರೀತಿಸಿ, "ಛೀ" ಎಂದೆನಿಸಿಕೊಂಡರೂ "ಛಲೆ" ಎಂದು ನಿರ್ಲಿಪ್ತನಾಗಿ ಅವರಿವರ ಮನೆಗೇ ಮತ್ತೆ ಮತ್ತೆ ಓಡಿಹೋಗುತ್ತಾನೆ! ಯಶೋದೆಯೂ ಮತ್ತೆ ಮತ್ತೆ, ಪೋದರ್ ಕಣ್ಡಾಯ್ ಇಚ್ಗೇ = ಇಲ್ಲೇ ಬಂದು ಬಿಡು. ನಿನಗೆ ಅನನ್ಯಭಕ್ತರಲ್ಲವೇ ಬೇಕಾದವರು! ಪೋದರ್ ಕಣ್ಡಾಯ್. ಬಂದೇ! ಬಂದೇ! ಎಂದು ಬಾಯಲ್ಲಿ ಮಾತ್ರ! ಬರಲೊಲ್ಲ! ಯಶೋದೆಯೂ ಮಗನೆಂಬ ಮೋಹದಿಂದ, ಕೃಷ್ಣನನ್ನು "ಪೋದರೇನ್" ಎನ್ನಾದೇಪೋದರ್ ಕಣ್ಡಾಯ್ = ಬಂದೇ ಬಿಡು ಕಂಡ್ಯಾ! ಎನ್ನುತ್ತಾ ತನ್ನೆಡೆಗೇ ಸೆಳೆದೆಳೆಯುತ್ತಾಳೆ. ನೀನೇ ಹೇಳಿದಂತೆ, ಬಂದುಬಿಡು ಇತ್ತ.

ತಮಿಳ್ ತಿರಳ್ ೩-೩-೪

ಕಡಿಯಾರ್ ಪೊಳಿಲ್ ಅಣಿ ವೇಙ್ಗಡವಾ ಕರುಮ್ ಪೋರ್‌ಏರೇ ನೀ ಯುಹಕ್ಕುಮ್
ಕುಡೈಯುಂ ಶೆರುಪ್ಪುಮ್ ಕುಳಲುಮ್ ತರುವಿಕ್ಕ ಕ್ಕೊಳ್ಳಾದೇ ಪೋನಾಯ್ ಮಾಲೇ
ಕಡಿಯ ವೆಜ್ಞಾನಿಡೈ ಕ್ಕನ್ನಿನ್ ಪಿನ್ ಪೋನ ಶಿರುಕ್ಕುಟ್ಟಚ್ಚಙ್ಗಮಲಮ್
ಅಡಿಯುಮ್ ವೆದುಮ್ಬಿ ಉನ್ ಕಣ್ಗಳ್ ಶಿವನ್ದಾಯ್ ಅಶೈನ್ದಿಟ್ಟಾಯ್ ನೀಯೆಂಬಿರ್ಹಾ

ಕನ್ನಡ ನೆರಳ್

ಕಡಿಮಿಗೆ ಹೂಬನಚೆಲುವೇರ್ ವೇಂಕಟನೇ! ಮೇಲ್ ಬೀಳ್ ಹೋರ್ ಕರಿಬಸವಾ! ನೀ ಬಯಸಿದ
ಕೊಡೆ ಪಾದುಕೆ ಕೊಳಲುಮ್ ತರಿಸಿದರೂ ಕೊಳ್ಳದೆ ಹೋದೆಯೆಲೋ ವ್ಯಾಮೋಹಿ!
ಕಡು ಬೇಯ್ ಕಾನನದೆಡೆ ಕರುಗಳ ಹಿಂದೆಯೇ ಹೋದೆಳೆಗಂದನ ಕೆಂದಾವರೆ
ಯಡಿಯೂ ಬಲು ಬಾಡಿ! ನಿನ್ ಕಣ್ ಕೆಂಪೇರಿವೆ! ಬಲು ಬಳಲಿಹೆ ಎನ್ ರಾಜಾ!

ಕಾಡಿಗೆ ದನಕರು ಮೇಯಿಸಲು ಹೋದ ಶ್ರೀ ಬಾಲಕೃಷ್ಣ ಸ್ವಧರ್ಮವಾದ ಗೋಪಾಲನೆ ನಿರ್ವಹಿಸಿ ಸಂಜೆಗೆ ಹಿಂದಿರುಗುವ ದೃಶ್ಯ! ಮನೆಬಾಗಿಲ ಹೊರಗೆ ನಿಂತು ತಾಯಿ ಯಶೋದೆ "ಅಯ್ಯೋ! ಕಂದನ ಸೌಕುಮಾರ್ಯ ನೋಡದೆ ಕಡು ಕಠಿಣವಾದ ಕಾಡಿಗೆ ಕಳಿಸಿದೆನಲ್ಲಾ!" ಎಂದಾಡುವ ಮುದ್ದಿನ ಮಾತಿದು.

ಕಡಿ ಆರ್ ಪೊಳಿಲ್ ಅಣಿ = ಸುಗಂಧದಿಂದಲೇ ತುಂಬಿರುವ ದಿವ್ಯೋದ್ಯಾನಗಳಿಂದಲೇ ಅಲಂಕೃತವಾದ, ವೇಙ್ಗಡವಾ = ಪುಷ್ಪಮಂಟಪವೆಂದೇ ಪ್ರಸಿದ್ಧವಾದ ತಿರುಪತಿಯ ತಿಮ್ಮಪ್ಪಾ! ಈ ಶರಣರಿಗೆ ಆ ಕೃಷ್ಣ ಬೇರೆಯಲ್ಲ, ಈ ವೆಂಕಟೇಶ ಬೇರೆಯಲ್ಲ. ಈ ಪರಬ್ರಹ್ಮೈಕ್ಯ ದರ್ಶನ ಎಷ್ಟರ ಮಟ್ಟಿಗೆ ಇದೆಯೆಂಬ ಸಹೃದಯತೆ ಇಲ್ಲೆಲ್ಲಾ ನಮಗೆ ಇರಬೇಕು. ಕರುಮ್ ಪೋರ್‌ಏರೇ = ಕಾಳಗದ ಕಾಳಜಿಯಲ್ಲೇ ಇರುವ ಓ ಕರಿಬಸವಾ! ನಿನ್ನ ಶಕ್ತಿ, ಸಾಮರ್ಥ್ಯಗಳ ಅರಿವಿದ್ದರೂ ನಿನ್ನ ಮೈನವುರು ನೋಡಿದಾಗ, ನೀ ಉಹಕ್ಕುಮ್ = ನೀನಾಸೆ ಪಡುವ, ಕುಡೈಯುಮ್ = ಮಳೆ ಬಿಸಿಲಿಗೆ ತಡೆಯಾಗಿ ನೆರಳಾಗುವಂತೆ ಆ ಛತ್ರಿಯನ್ನಾಗಲಿ, ಶೆರುಪ್ಪುಮ್ = ನಿನ್ನೀ ಮೃದು ಪಾದ ಸುಡದಂತೆ ಪಾದರಕ್ಷೆಯನ್ನಾಗಲಿ, ಕುಳಲುಮ್ = ನಿನಗೆ ಬಲು ಪಸಂದಾದ, ಊದುವ ಕೊಳಲನ್ನಾಗಲಿ ತರುವಿಕ್ಕ = ಹೊರಡುವಾಗ ನಾನು ತರಿಸಿಕೊಟ್ಟು ಬಲಾತ್ಕಾರಮಾಡಿದರೂ, ನಿನ್ನ ಸ್ವರೂಪ ಸಾಮರ್ಥ್ಯವನ್ನು ತೋರಲೋಸುಗ, ಕಡಿಯ = ಘೋರವಾದ, ವೆಮ್ ಕಾನ್ ಇಡೈ = ಬೆಂದ ಅರಣ್ಯ ಪ್ರದೇಶದೆಡೆಗೆ, ಕನ್ನಿನ್‌ಪಿನ್ = ಅತ್ಯಂತ ಅಜ್ಞಾನಿ ಅಶಕ್ತರ ರಕ್ಷಣೆಗಾಗಿಯೇ ಕೃಷ್ಣಾವತಾರ ಎನ್ನುವ ರಹಸ್ಯವನ್ನು ಕಲಿಯುಗದಲ್ಲಿ ಎಲ್ಲರೂ ಮನನ ಮಾಡುವಂತೆ, ಕರುಗಳ ಹಿಂದೆಯೇ, ಮಾಲೇ = ಓ ಅಂತ್ಯೋದಯ ಕಾಮಾ! ವತ್ಸಮೋಹನಾ! ಪೋನಾಯ್ = ಹೊರಟೇಬಿಟ್ಟೆಯಲ್ಲೋ! ಶಿರುಕ್ಕುಟ್ಟನ್ = ಎಳೆಪ್ರಾಯದ ಓ! ನನ್ನ ಕುಟ್ಟೀ! ನಿನ್ನೀ, ಶೆಮ್ ಕಮಲಂ = ಹಳಹಳನ ಕೆಂದಾವರೆಗಿಂತಲೂ ಸುಂದರ ಸುಕುಮಾರ ಪಾವನ ದೀರ್ಘವಾದ, ಅಡಿಯುಮ್ = ಶ್ರೀಪಾದಗಳೂ, ಅಡಿಯಿಂದ ಮುಡಿಯವರಿಗೆ ಕೋಮಲವಾದ ಸಿರಿಯೊಡಲೂ, ವೆದುಮ್ಬಿ = ಬಾಡಿಹೋಗಿ, ಉನ್‌ಕಣ್‌ಗಳ್ = ಮೊದಲೇ ಸಹಜ ಕೆಂಗಣ್ ಸ್ವಾಮಿಯಾಗಿದ್ದರೂ, ಉನ್‌ಕಣ್ಗಳ್ ಶಿವನ್ದಾಯ್ = ನಿನ್ನಾSSಕೆಂಗಮಲಾಕ್ಷಿಗಳು ಇನ್ನೂ ಬಲು ಕೆಂಪೇರಿಬಿಟ್ಟಿವೆಯಲ್ಲೋ! ಪೆರಿಯಾಳ್ವಾರರ ಪ್ರೇಮಭಾಷೆ ಇವೆಲ್ಲಾ. ಅಶೈನ್ದಿಟ್ಟಾಯ್ = ಬಲು ಸುಸ್ತಾಗಿಬಿಟ್ಟಿದ್ದೀಯೇ! ನಿಜ, ನೀನೇ ನಮ್ಮೆಲ್ಲರನ್ನೂ ಪಾಲಿಸುವ ದೊರೆ. ನಿನಗೇನೂ ಯಾವುದರಲ್ಲೂ ಶ್ರಮವಿಲ್ಲ. ಎಮ್ ಪಿರಾನ್ ನೀ = ಈ ಗೋಕುಲ ಗ್ರಾಮಕ್ಕೂ ಅಖಿಲ ವಿಶ್ವಕ್ಕೂ ಪ್ರಭು! ಇಲ್ಲಿ ಈ ಶರಣರದು "ಜ್ಞಾನಭಾಷೆ"! ಆದರೂ ಮೂರ್ತಿಯ ಚೆಲುವು ನವುರು ಕಂಡಾಗ, ಘಟ್ಟಿಯಾಗಿದ್ದ ಜ್ಞಾನಘನ ಕರಗಿ ಭಕ್ತಿಯ ಮಂಗಳಾಶಾಸನ ರೂಪವಾಗಿ, ದಿವ್ಯವಿದ್ಯುತೀಕರಣ ಪಡೆಯುತ್ತದೆ. ಭಕ್ತಿ ದ್ರವ! ಭಕ್ತಿರಸ! ಜ್ಞಾನ ಹಾಗೂ ಭಕ್ತಿ ಒಂದೇ ವಸ್ತುವಿನ ಅವಸ್ಥಾಭೇದವಷ್ಟೇ ಹೊರತು, ಪರಸ್ಪರ ವಿವಿಕ್ತ ಹಾಗೂ ವಿರುದ್ಧವಲ್ಲ. ವಿಮರ್ಶಕರೆನ್ನುವರಿಗಂತೂ ಇಲ್ಲೆಲ್ಲಾ ಗಮನ ಅತ್ಯವಶ್ಯ! **"ಜ್ಞಾನದಿಂದಲೇ ಹುಟ್ಟಿ ಬೆಳೆಯುವ ಒಳ್ಳೆಯ ಅಜ್ಞಾನ ಮೋಹವೇ ಶರಣರ ಪ್ರಾಣ"**. ಇದನ್ನು "ಜ್ಞಾನಜನ್ಯ ಅಜ್ಞಾನ" ಎಂಬ ಪರಿಭಾಷೆಯಿಂದ ಕರೆಯಲಾಗಿದೆ. ಕನ್ನಡ ಶಿವಶರಣರಲ್ಲೂ "ಮರುಳು" ಎಂದೇ ಪ್ರಸಿದ್ಧ. ಋಗ್ವೇದ ಋಷಿಗಳೂ "ಜಿತಂ! ತೇ ಪುಂಡರೀಕಾಕ್ಷ" ಎಂದೇ ಉದ್‌ಗರಿಸುತ್ತಾರೆ. ಗ್ರಾಮ ಜಯಕಾರದಿಂದ ಮೊದಲಿಟ್ಟು ಅಖಿಲ ವಿಶ್ವಜಯಕಾರದ ಮಟ್ಟಕ್ಕೇರುವ ಮಾನವನ ವಿಕಾಸದ ಗುಟ್ಟು ಇಲ್ಲಿ ನಮಗೆ ಸಿಗುತ್ತದೆ. ಇದು ವೈಜ್ಞಾನಿಕವೂ ಆಗಿದೆ. **"ವಿಶ್ವಂ ಪುಷ್ಟಂ ಗ್ರಾಮೇ ಅಸ್ಮಿನ್ ಅನಾತುರಮ್"** - ಋಗ್ವೇದ.

ತಮಿಳ್ ತಿರಳ್ ೫-೪-೧

ಶೆನ್ನಿಯೋಙ್ಗು ತಣ್ ತಿರುವೆಙ್ಗಡಮ್ ಉಡೈಯಾಯ್ ಉಲಹು ತನ್ನೈ ವಾಳ ನಿನ್ನ ನಮ್ಬೀ! ದಾಮೋದರಾ ಶದಿರಾ!
ಎನ್ನೈಯು ಮೆನ್ನುಡಮೈ ಯೈಯುಮ್ ಉನ್ ಶಕ್ಕರಪ್ಪೊರಿಯೊತ್ತಿಕ್ಕೊಣ್ಡು ನಿನ್ನರುಳೇ ಪುರಿನ್ದ್ ಇರುನ್ದೇನ್, ಇನಿಯೆನ್ ತಿರುಕ್ಕುರಿಪ್ಪೇ?

ಕನ್ನಡ ತಿರಳ್

ಶಿಖರೋನ್ನತ ಶೀತಳ ಶ್ರೀ ವೇಂಕಟಗಿರಿ ವಾಸಾ
ಜಗವುಜ್ಜೀವಿಸಲೆಂದೇ ನಿಂದಿಹನೇ! ಪೂರ್ಣಾ, ದಾಮೋದರಾ! ಚದುರಾ
ಎನ್ನನೂ ಎನ್ ಒಡವೆಯನೂ ನಿನ್ ಚಕ್ರದ ಮುದ್ರೆಯನೊತ್ತಿಸಿಕೊಂಡು
ನಿನ್ನರುಳನೇ ಕಾಯುತ ಭಾವಿಸಿ ಬಿದ್ದಿಹೆ ನಾ! ಇನ್ನೇನ್ ಇದೆ ನಿನ್ ಸಿರಿಚಿತ್ತಾ?

ನಮ್ಮಾಳ್ವಾರ್ ಮತ್ತು ಈ ಪೆರಿಯಾಳ್ವಾರ್ ತಿರುಪತಿ ತಿಮ್ಮಪ್ಪನಾದ ಅರ್ಚಾಮೂರ್ತಿಯಲ್ಲೇ ಶರಣು ಮಾಡಿರುವುದು. ಅದರೂ ಕೊಟ್ಟಕೊನೆಗೆ ಮೈ ತುಂಬಿಬಂದದ್ದೂ ಈ ವಿಷ್ಣುಚಿತ್ತರಿಗೆ ಈ ತಿಮ್ಮಪ್ಪನೇ. ಶಠಕೋಪರಿಗಿಂತ ಇವರದು ಇದೊಂದು ಶರಣವರಣ ಹಾಗೂ ಪ್ರಾಪ್ಯ ಈ ಉಭಯಥಾ ವಿಶೇಷ! ನಮ್ಮಾಳ್ವಾರರಿಗೆ ಅನ್ಯ ಕಾಲದಲ್ಲಿ ಸಕಲ ಜಗತ್ತನ್ನೂ ಅಂದರೆ ವಿಶಾಲವಾದ ಜಡಾಣು ಮೂಲ ಪ್ರಕೃತಿಯ ಪ್ರತ್ಯೇಕ ಹರವನ್ನೂ, ಜೀವಾತ್ಮರನ್ನೂ ಶರೀರವಾಗುಳ್ಳ ವಿಶ್ವಾತ್ಮನೇ ತಮ್ಮನ್ನು "ಬ್ರಹ್ಮಣಾ ವರ್ಮಣಾ ವರೀವೃತಃ" ಎಂಬ ಆರ್ಷಸಾಕ್ಷಾತ್ಕಾರದಂತೆ, ಅಪ್ಪಿಕೊಂಡ ಅನುಭವ!

ಓಙ್ಗು = ಎತ್ತರವಾದ ಶೆನ್ನಿ = ಶಿಖರಗಳಿಂದ ಶೋಭಿಸುವ, ತಣ್ = ತಂಪಾದ, ತಿರುವೇಙ್ಗಡಮ್ = ಪಾಪ ತಾಪ ಇವೆರಡನ್ನೂ ತೀರಿಸುವ ಶ್ರೀ ವೇಂಕಟಗಿರಿಗೆ, ಉಡೈಯಾಯ್ = ಸ್ವಾಮಿಯಾದವನೇ! ಉಲಹುತನ್ನೈ ವಾಳ = ಅರ್ಚಾವತಾರದ ಪ್ರಧಾನ ಉದ್ದೇಶ ಈ ಮಣ್ಣಿನ ಮಕ್ಕಳಿಗೆ ಆಶ್ರಯಿಸಲು, ಪರವ್ಯೂಹ ವಿಭವ ಅಂತರ್ಯಾಮಿ ರೂಪಗಳಿಗಿಂತ ಸುಖವೆಂಬುದೇ. ಇಹವನ್ನು ಉಜ್ಜೀವನಗೊಳಿಸಲ್ಕೆಂದೇ ನಿನ್ನ = ನಿಂತೇ ಇರುವ, ನಮ್ಬೀ = ಪರಿಪೂರ್ಣಾ! ದಾಮೋದರಾ ಶದಿರಾ! = ಯಶೋದೆಯ ಹಗ್ಗದಿಂದ ಕಟ್ಟಿಸಿಕೊಂಡ ಗುರುತಿನ ಹೊಟ್ಟೆಯವನೇ! ಎಷ್ಟು ಕಟ್ಟಿದರೂ ಹಗ್ಗ ಸಾಲದೆ ಬಂದಾಗ "ಕಟ್ಟುಉಣ್ಣಪ್ಪನ್ನೆಯ" ತಾಯಿಯ ಮೇಲಿನ ಕನಿಕರದಿಂದ, ಉದರವನ್ನು ತಾನೇ ಕುಗ್ಗಿಸಿಕೊಂಡು, ತಾಯಿಗೆ ಸಹಾಯ ಮಾಡಿದೆ. ಆ ಕಟ್ಟನ್ನೂ ನೀನು ಬೆಣ್ಣೆಯಂತೆ ಭೋಗ್ಯವಾಗಿ ಅನುಭವಿಸಿದೆ.

ಎನ್ನೈಯುಮ್ ಎನ್ ಉಡೈಮೈಯೈಯುಮ್ ಆತ್ಮ ಆತ್ಮೀಯಗಳಾದ ನನ್ನ ಸರ್ವಸ್ವವನ್ನೂ. ಉನ್ ಶಕ್ಕರ ಪ್ಪೊರಿ = ನಿನ್ನ ಸುದರ್ಶನ ಚಿಹ್ನದಿಂದ, ಒತ್ತಿಸಿಕೊಣ್ಡು = ತಪ್ತಚಕ್ರಾಂಕನ ಮಾಡಿಸಿಕೊಂಡು ಇವರ ಮೊಟ್ಟಮೊದಲಿನ ಪ್ರಬನ್ಧವಾದ ತಿರುಪ್ಪಲ್ಲಾಂಡಿನಲ್ಲೂ, "ತಿರುಚ್ಚಕ್ಕರತ್ತಿನ್ ಕೋಯಿಲ್ ಪೊರಿಯಾಲೇ ಒತ್ತುಣ್ಡು ನಿನ್ನು" ಎಂದುದೇ ಈಗ ಉಪಸಂಹಾರದಲ್ಲೂ ಬಂದಿರುವುದು ಗಮನಾರ್ಹ. ನಿನ್ = ಸರ್ವವಿಧದಿಂದಲೂ ಒಪ್ಪುವ-ಪ್ರಾಪ್ತನಾದ ನಿನ್ನ, ಅರುಳೇ = ದಯೆಯೊಂದನ್ನೇ, ಪುರಿನ್ದು = ಲಕ್ಷ್ಯದಲ್ಲಿರಿಸಿಕೊಂಡೇ ಇರುನ್ದೇನ್ = ಅಕಿಂಚನನಾಗಿ ಇದೋ ಖಾಲಿಯಾಗಿ ಬಿದ್ದಿದ್ದೇನೆ. ಇನಿ = ಇನ್ನು ಮೇಲೆ. ತಿರುಕ್ಕುರಿಪ್ಪು = ನಿನ್ನ ಇಂಗಿತ, ನಿನ್ನ ಸಿರಿ ಗುರಿ, ಎನ್ = ಏನೆನ್ನುವುದನ್ನು ದಯೆಯಿಟ್ಟು ತಿಳಿಸು. ನಿನ್ನ ಶ್ರೀ ಚಿತ್ತಕ್ಕೆ ತೋರಿದಂತೆ ಮಾಡು. ಈ ದಶಕದ ಕೊನೆಯಲ್ಲಿಯೂ, ಈ ಶರಣರ ಪೂರ್ಣ ಸಮರ್ಪಣಾಯೋಗಕ್ಕೆ ತಕ್ಕಂತೆ "ಶೋದಿನಂಬೀ" "ಜ್ಯೋತಿಃಪೂರ್ಣಾ", ಎಂದೇ ಬಂದಿದೆ. ಈ ವಿಷ್ಣುಚಿತ್ತರಲ್ಲೇ ಈ ತಿಮ್ಮಪ್ಪ ನೆಲೆ ನಿಂತು ತಾನೂ ತೇಜಸ್ಸಿನಿಂದ ಪೂರ್ಣತೆ ಪಡೆದನು! ಈ ಶೆನ್ನಿಯೋಙ್ಗು ದಶಕವನ್ನು ಪೂರಾ ತಿರುವೇಂಗಡನಿಗೇ ಅನ್ವಯಿಸಲೂ ಬಹುದು.

ಆಂಡಾಳ್ ಗೋದಾದೇವಿ

ಜನಕ ರಾಜರ್ಷಿ ಕಾಯಕದ ಕರ್ಮಯೋಗದಿಂದಲೇ ಸಿದ್ಧಿಪಡೆದವ. ಈ ಪೆರಿಯಾಳ್ವಾರ್ ಸಹ, ಹೂ ತುಳಸೀ ಕಾಯಕದಲ್ಲೇ, ತಮ್ಮನ್ನು ಪರಾತ್ ಪರನಾದ ಶ್ರೀ ವಿಲ್ಲಿ ಪುತ್ತೂರಿನ ವಟಪತ್ರಶಾಯಿಗೇ ಅರ್ಪಿಸಿಕೊಂಡವರು. ಜನಕನಿಗೆ ಜಾನಕಿಯಂತೆ, ಈ ವಿಷ್ಣುಚಿತ್ತರಿಗೆ ಗೋದಾದೇವಿ ನೆಲದಲ್ಲೇ ಸಿಕ್ಕಿದ ದಿವ್ಯಕುವರಿ. ಈಶ್ವರ ದೇಹಸೌಷ್ಠವ ಸರ್ವೇಶ್ವರನಿಗೆ ಮೋಹಕವೂ ಆದುದು. ಸೀತೆ ವಿಭವಾವತಾರಿಯಾದ ಶ್ರೀ ರಾಮಚಂದ್ರನಲ್ಲೇ ನೆಟ್ಟ ಮನದವಳು. ಆಂಡಾಳ್ ಅರ್ಚಾಮೂರ್ತಿಯಲ್ಲೇ ತನ್ಮಯಳು.

ವೈದೇಹಿ, ವನವಾಸದ ಸಮಯದಲ್ಲಿ, ಗೋದಾವರೀ ತೀರದಲ್ಲೇ ಗಂಡನೊಡನೆ ಉಲ್ಲಾಸದಿಂದಿರುವಾಗ, ಕಾಡುಮೊಲ್ಲೆಹೂ ಮಾಲೆ ಕಟ್ಟಿ ರಾಮನನ್ನು ಅದರಿಂದ ಬಿಗಿದು ಹಾಕುತ್ತಾಳೆ! ಈ ರಹಸ್ಯವಾದ ಗುರುತನ್ನು, ಮುಂದೆ ಅಶೋಕವನದಲ್ಲಿ ಸೀತೆಗೆ ರಾಮಭಂಟ ಜ್ಞಾಪಿಸುತ್ತಾನಷ್ಟೆ! ಅದೇ ರೀತಿ ಈ ಗೋದೆಯೂ ವಟಪತ್ರ ಶಾಯಿಯನ್ನು, ತಾನು ಸೂಡಿದ ಹೂಮಾಲೆಯಿಂದಲೇ ಕಟ್ಟಿಹಾಕುತ್ತಾಳೆ! ''ಮಲ್ಲಿಹ್ಯೆ ಮಾ ಮಾಲ್ಯೆಕೊಂಡು ಅಜ್ಜಾರ್ತದುಂ ಓರ್ ಅಡ್ಯೆಯಾಳಮ್'' ಇಂತಹ, ''ಶೂಡಿ ಕ್ಕೊಡುತ್ತ ನಾಯ್ಚ್ಚಿಯಾರ್'' ಎಲ್ಲರನ್ನೂ ಸೇರಿಸಿಕೊಂಡೇ ಮಾಡಿದ ಮಾರ್ಹಳಿ ವ್ರತ ''ತಿರುಪ್ಪಾವೈ'' ಜಗತ್ಪ್ರಸಿದ್ಧ.

ಅಲ್ಲೂ ಕೊನೆಗೆ ಕೈಂಕರ್ಯ ಆಸೆ ಪಟ್ಟಿದ್ದೇ ಹೊರತು ಸಿಗಲಿಲ್ಲ! ಆ ವೇದನೆಯಿಂದ ಕಡುನೊಂದು ಆಂಡಾಳ್, ತೈ ಮತ್ತು ಮಾಶಿ ಅಂದರೆ ಮಕರ ಮತ್ತು ಮೇಷಗಳಿಗೆ ಸಂಬಂಧಪಟ್ಟಂತೆ ಮತ್ತೊಂದು ವ್ರತಗೈಯ್ಯುತ್ತಾಳೆ. ಮನ್ಮಥನ ಕಾಲಿಗೆ ಬಿದ್ದು ಶ್ರೀ ಕೃಷ್ಣನನ್ನೇ ತನ್ನ ಪತಿಯನ್ನಾಗಿಸಿ ಕೊಡಬೇಕೆಂದು, ಗೌರೀಶಂಕರರ ವಿವಾಹಕ್ಕಾಗಿ ತನ್ನ ಅಂಗಗಳನ್ನೇ ಸುಡಿಸಿಕೊಂಡ ಆ ಅನಂಗ ದೇವನಲ್ಲೇ ಮೊರೆಯಿಡುವುದೇ ಈ ''ನಾಯ್ಚ್ಚಿಯಾರ್ ತಿರುಮೊಳಿ''. ತಿರುಪ್ಪಾವೈಯಲ್ಲಿ ಬಾಲಾ ಗೋದಾ. ಇಲ್ಲಿ ಪ್ರೌಢಾಗೋದೆಯಂತೆ!

ನಾಯ್ಚ್ಚಿಯಾರ್ ತಿರುಮೊಳಿ ನಾಯಕೀಗೀತ

ತಮಿಳ್ ತಿರಳ್ ೧-೧

ತೈ ಯೊರು ತಿಙ್ಗಳುಮ್ ತರೈ ವಿಳಕ್ಕಿ ತಣ್ ಮಣ್ಣಲಮಿಟ್ಟು ಮಾಶಿ ಮುನ್ನಾಳ್
ಐಯ್ಯ ನುಣ್ ಮಣಲ್ ಕೊಣ್ಡು ತೆರುವಣಿನ್ದು ಅಳಹಿನುಕ್ಕಲಙ್ಗರಿತ್ತನಙ್ಗ ದೇವಾ!
ಉಯ್ಯವು ಮಾಙ್ಗೊಲೋ! ಎನ್ನು ಶೊಲ್ಲಿ ಉನ್ನೈಯುಮ್ ಉಮ್ಬಿಯೈಯುಮ್ ತೊಳುದೇನ್
ವೆಯ್ಯದೋರ್ ತಳಲ್ ಉಮಿಳ್ ಶಕ್ಕರ ಕ್ಕೈ ವೇಙ್ಗಡವರ್ಕ್ಕೆನ್ನೈ ವಿದಿಕ್ಕಿತ್ತಿಯೇ!

ಕನ್ನಡ ತಿರಳ್

ತೈಯೋರ್ ತಿಂಗಳೂ ಧರೆ ಬೆಳಗಿ ತಣ್ ಮಂಡಲಮಿಟ್ಟು ಮಾಶಿಯ ಮುನ್ನಾಳ್
ಸುಯ್ನುಣ್ ಮರಳ್ ಕೊಂಡು ಬೀದಿಯ ಸಿಂಗರಿಸಿ ಅಳಹರಿಗಲಂಕರಿಸಿ ಓ ಅನಂಗದೇವಾ! ಕಡೆ
ಹಾಯುವರ್ ಆಗುವೆವೇ ಎಂದನ್ನುತ ನಿನ್ನನೂ ನಿನ್ ತಮ್ಮನನೂ ತೊಳಗಿದೆನ್ನೆ
ಬೇಯೋರ್ ತಣಲ್ ಉಗುಳ್ ಚಕ್ರದ ಕೈ ವೇಂಕಟವಾಸಿಗೆ ಎನ್ನಂ ವಿಧಿಸುವಿಯಾ

ಅನಙ್ಗದೇವಾ = ಪತಿಯೇ ಪರದೈವವೆಂದು ನಂಬಿದ ಆ ಪಾರ್ವತಿಗಾಗಿ ಶಿವನನ್ನು ಸೇರಿಸಿಕೊಟ್ಟು ಫಾಲನೇತ್ರದಿಂದ ಭಸ್ಮೀಭೂತನಾದ ಓ ವಿದೇಹ ಪ್ರೇಮದೇವಾ! ಪರದೈವವೇ ಪತಿಯೆಂದು ನಂಬಿರುವ ನನಗೂ ಶ್ರೀರಂಗಮನ್ನಾರ್ ಅನ್ನೇ ವಿವಾಹಮಾಡಿಸು! ಹಿಂದಿನ ಮಾರ್ಗಶೀರ್ಷಧನುರ್ ಮಾಸದ ಅವ್ರತದಲ್ಲಿ, ನಿನ್ನ ಪತಿಯಾದ ರತಿದೇವಿಯಲ್ಲಿ, ''ವಿಲ್ ಓರ್ ಎಮ್ ಪಾವಾಯ್'' ಎಂದು ೨೮ ಸಲ ಮಂತ್ರಜಪದಂತೆ ಮೊರೆಯಿಟ್ಟೆನಪ್ಪಾ! ಈಗ ಈ ''ತೈ ಒರುತಿಙ್ಗಳುಮ್ .... ಮಾಶಿಮುನ್ನಾಳ್'' ಸುಮಾರು ೪೮ ದಿನಗಳ ಒಂದು ಮಹಾಮಂಡಲ ಕಾಲ ೧೪ ಭಾವಲಹರಿಗಳಲ್ಲಿ, ತರೈ = ನನ್ನ ತಾಯಿಯಾದ ಈ ಧರಾದೇವಿಯನ್ನು ವಿಳಕ್ಕಿ = ಗುಡಿಸಿ ಸಾರಿಸಿ. ತಣ್

ಮಣ್ಡಲಮ್ ಇಟ್ಟು = ಮನ್ಮಥ ವ್ರತಾಂಗವಾಗಿ ಮಂಡಲಾಕಾರವಾಗಿ ಕಲ್ಪಶಾಸ್ತ್ರದ ಪ್ರಕಾರ ರಚಿಸಿ, ಐಯ್ ನುಣ್ ಮಣಲ್ ಕೊಣ್ಡು = ಇಡಿದು ಜರಡೆಯಾಡಿ ನುಣ್ಣನ ಬಿಳಿ ರಂಗೋಲೆ ಮರಳಿನಿಂದ ಕೈಯಿಂದಲೇ, ತೆರುವು = ಕಾಮದೇವನಾದ ನೀನೂ ನಿನ್ನ ಗೆಳೆಯ ವಸಂತ ಶ್ಯಾಮನೂ ಈರ್ವರೂ ದಯಮಾಡಿಸುವ ಬೀದಿಗಳನ್ನು, ಅಣಿನ್ದು = ಹೊಸ ಹೊಸ ಕಲಾವಂತಿಕೆಯನ್ನು ಉಪಯೋಗಿಸಿ, ಚೆನ್ನಾಗಿ ಸಿಂಗರಿಸುತ್ತೇವೆ. ಕೊನೆಗೆ ಸರ್ವ ಕಲಾರ್ಪಣೆಯೂ, "ಶ್ರೀಮನ್ನಾರಾಯಣಯೇತಿ", ಆದುದರಿಂದ, ಅಳಹನುಕ್ಕು = ನಾನೊಪ್ಪಿರುವ ಸೌಂದರ್ಯ ರಾಜಾಧಿರಾಜನಿಗೆ ಸಂತಸವಾಗಲೆಂದು. ಅಲಂಕರಿತ್ತು = ಹಿಂದಿನ ರಂಗವಲ್ಲೀ ಶೃಂಗಾರಕ್ಕೂ ಶೃಂಗಾರನೀಡಿ! ಸ್ವಾಮಿ ಠೀವಿಯಿಂದ ನಡೆದು ಬರುವ ತಿರುವೀಧಿಗಳನ್ನು ಒಪ್ಪವಾಗಿ ಅಲಂಕರಿಸಿ, ಸ್ವಾಗತಿಸುತ್ತೇನೆ.

ನಿನ್ನ ಈ ವ್ರತದ ಉದ್ದೇಶ್ಯವನ್ನು ಇನ್ನೂ ವಿವರಿಸು. ಕೇಳಲು ಕಿವಿಯಿಲ್ಲದೆಯೇ ನನಗೆ ಬಲು ಸಂತೋಷವಾಗುತ್ತದೆ ಎಂದು ಅನಂಗ ಉತ್ಸುಕನಾಗುತ್ತಾನೆ. ಉಯ್ಯುವುಮ್ ಆಚ್ಚೊಲೋ = ಇಲ್ಲೂ ಸರ್ವೇಶ್ವರನಿಗೆ ಮೀಸಲಾಗಿ ಸಂದು, ಅಲ್ಲೂ ಸಲ್ಲುವೆವೇ? "ಏಕಾ ಕ್ರಿಯಾ ದ್ವ್ಯರ್ಥ ಕರೀ" ಎಂಬಂತೆ, ಇಹಕ್ಕೇ ಬೇರೆ ಸಾಧನೆ, ಪರಕ್ಕೇ ಬೇರೆ ಸಾಧನೆಯಾಗಬಾರದೆಂಬುದೇ ನನ್ನ ವ್ರತೋದ್ದೇಶ್ಯ. ಏಕೆಂದರೆ ಅನೇಕ ಹಿರಿಯರೂ ಸಹ, ಐಹಿಕಕ್ಕೆ ವ್ಯಾವಹಾರಿಕವಾಗಿದ್ದರೆ ಸಾಕು, ಪಾರಮಾರ್ಥಿಕವನ್ನು ಬೆರಸಬಾರದೆಂದು ತಿಳಿದಂತಿದೆ! ಇಲ್ಲಿ "ಶಿಷ್ಟೋವಾ ದುಷ್ಟೋವಾ" ಹೇಗಿದ್ದರೂ ಸರಿ, ಪರಮಾರ್ಥ ಸಿದ್ಧಿಸಿ ಬಿಡುತ್ತದೆ ಹೀಗೆಂದು ಸಾಧನದ್ವಿತ್ವವನ್ನು ಒಪ್ಪುವಂತೆ ಕೆಲವರಲ್ಲಿ ಕಾಣುತ್ತದೆ. ನನಗೆ ಪಿತ್ರಾರ್ಜಿತವಾಗಿ ಬಂದಿರುವ "ಇಂಗುಂ ಅಂಗುಮ್" ವ್ಯಾವಹಾರಿಕ ಪಾರಮಾರ್ಥಿಕ ಭೇದದ ಈ ವಾಸನೆಯೇ ಸುಳಿಯದ ಸಾಧ್ಯ ಸಾಧನೈಕ್ಯ ಈ "ದ್ವಯ ಮಂತ್ರರತ್ನ" ಪಥವೇ ಈ ವ್ರತದ ಇಂಗಿತ. ಅದರಲ್ಲೂ ಈಗಲೇ ವಿಳಂಬವಿಲ್ಲದೆ, ಈ ಭೂಮಿಯ ಮೇಲೆಯೇ ನನ್ನ ಸ್ವಾಮಿಯನ್ನು ಕಂಡೇ ಬಿಡಬೇಕು. ಈ ಆತುರ ಪೂರೈಸಲು ನೀನೇ ನನ್ನೀ ವ್ರತಕ್ಕೆ ಸರಿಯಾದ ಘಟಕ! ಭಾಗವತೋತ್ತಮ!

ಉನ್ನೈಯುಮ್ ಉಮ್ಬಿಯೈಯುಮ್ ತೊಳುದೇನ್ = ಪ್ರೇಮದ ಶಾಖೆಗೆ ಮುಖ್ಯಸ್ಥನಾಗಿ ಸರ್ವೇಶನಿಂದಲೇ ನಿಯಮಿಸಲ್ಪಟ್ಟಿರುವವ ನೀನು! ಅಂತಹ ನಿನ್ನನ್ನೂ, ಪ್ರೇಮೋತ್ತುಂಭಕನಾದ ನಿನ್ನ ತಮ್ಮನಾದ ವಸಂತನನ್ನೂ ರುಕ್ಮಿಣೀ ಪುತ್ರನಾದ ಪ್ರದ್ಯುಮ್ನನನ್ನೂ ಜಾಂಬವತೀ ಪುತ್ರನಾದ ಶ್ಯಾಮನನ್ನೂ. ತೊಳುದೇನ್! ಸಿದ್ಧಸಾಧನನಾದ ನನ್ನಿನಿಯನಲ್ಲೇ ನೀವೆಲ್ಲ ಅಡಗಿದ್ದೀರಿ! ಆದುದರಿಂದ ನಿಮ್ಮನ್ನು ಈಗ ಸೇವಿಸಲು ಉಪಕ್ರಮಿಸಿದ್ದೇನಪ್ಪಾ" "ಶರಣರ ಕುಲವನ್ನೇ ಆಳುವ ಮಹಾಭಾಗ್ಯಶಾಲಿನಿ", ಓ! ಆಂಡಾಳ್! ಸ್ಪಷ್ಟವಾಗಿ ನಿನ್ನ ಚರಮೋದ್ದೇಶ್ಯವನ್ನು ಬಹಿರಂಗಪಡಿಸು, ಎಂದು ಮನ್ಮಥ ಕೇಳುವಂತೆ. ಒಡೆದು ಸ್ಪಷ್ಟತಮವಾಗಿ ಆಳ್ವಾರ್‌ಗಳ ಹಾದಿ ಹಿಡಿದೇ, ಕಲಿಯುಗದ ಅರ್ಚಾಮೂರ್ತಿಯಲ್ಲೇ ನನ್ನ ಒಲವಪ್ಪಾ! ಆತನ ವಿಳಾಸ? ವೈಯ್ಯದು ಓರ್ ತಳಲ್ ಉಮಿಳ್ ಶಕ್ಕರಕ್ಕೈ = ಸಹಸ್ರಾರ ಶಿಖಾತಿ ತೀವ್ರವಾದ ಚಕ್ರಪಾಣಿಯಾದ, "ವೇಙ್ಗಡವರ್‌ಕ್ಕು" ಎನ್ನೈ ವಿಧಿಕ್ಕಿತ್ತಿಯೇ! ವೇಂಕಟಾಚಲಪತಿಗೇ, ಆ ಅರ್ಚಾವತಾರಿಯ ನಿತ್ಯ ಮಂಗಳಾಶಾಸನದಾಸಿಯಾಗಿ, ನನ್ನನ್ನು ಮೀಸಲಾಗಿಸುವಿಯಾ? "ಮಹಿಳೆಯರ ಮೀಸಲಾತಿ ಕ್ಷೇತ್ರವೇನೆಂಬುದನ್ನು ಸಾಧ್ವೀ ಶರಣೆಯರಿಂದ ತಿಳಿಯಬೇಕು". ಈ ವಿಜ್ಞಾನ ಯುಗಕ್ಕಂತೂ "ಸ್ತ್ರೀ ಬ್ರಹ್ಮಚರ್ಯ ನಿಷ್ಠಾಜೀವನವೇ" ಸರ್ವತಾರಕ! ಸರ್ವೇಶ್ವರ ನನ್ನ ಮುಖ್ಯ ಉದ್ದೇಶ್ಯ, ಬ್ರಹ್ಮಚರ್ಯ - ಆತನ ನಿತ್ಯ ಕೈಂಕರ್ಯ ಜೀವನ! ಇದನ್ನು ನೀನು ಅನನ್ಯವಾಗಿಸು. ನೀನು ಅದಕ್ಕೆ ಬಾಗಿಲು ತೆರೆ! ನನಗೆ ಇಲ್ಲೂ ಅಲ್ಲೂ ಪರಮೇಶ್ವರನೋರ್ವನೇ ಪತಿ!

ತಮಿಳ್ ತಿರಳ್ ೧-೩

ಮತ್ತನಲ್ ನರು ಮಲರ್ ಮುರುಕ್ಕಮಲರ್ ಕೊಣ್ಡು ಮುಪ್ಪೊದುಮ್ ಉನ್ನಡಿ ವಣಙ್ಗಿ
ತತ್ತುವಮ್ ಇಲಿಯೆನ್ನು ನೆಞ್ಜಿರಿನ್ದು ವಾಶಹತ್ತಳಿತ್ತುನ್ನೈ ವೈದಿಡಾಮೇ
ಕೊತ್ತಲರ್ ಪೂಙ್ಗಣೈ ತೊಡುತ್ತುಕ್ಕೊಣ್ಡು ಗೋವಿನ್ದನ್ ಎನ್ಬದೋರ್ ಪೇರ್ ಎಳುದಿ
ವಿತ್ತಹನ್ ವೇಙ್ಗಡವಾಣನ್ ಎನ್ನುಮ್ ವಿಳಕ್ಕಿನಿಲ್ ಪುಹವೆನ್ನೈ ವಿದಿಕ್ಕಿತ್ತಿಯೇ!

ಕನ್ನಡ ನೆರಳ್

ಮತ್ತೇರಿಪ ನಲ್ ಗಂಪಿನ ಪೂವುಮ್ಮತ್ತಿಯ ಕೊಂಡು ಮೂರೂಹೊತ್ತೂ ನಿನ್ನಡಿಗೆರಗಿ
'ಸತ್ಯಕೆ ತಪ್ಪಿದನ್' ಎಂದೆದೆಯುರಿದು, ಬಾಯಿಂದಳಿಸಿ ನಿನ್ನನು ಬೈಯ್ಯದವೋಲ್
ಕೊತ್ತಾಗಲರ್ ಪೂಗಣೆಜತೆಗಿಟ್ಟೇ ಗೋವಿಂದಗೆ ಎಂಬೋರ್ ಪೆಸರ್ ಬರೆದು
ಅಚ್ಚರಿ ವೇಂಕಟಪತಿಯೆನು ಬೆಳಗುವ ದೀವಿಗೆಯೊಳೆ ಬೀಳುವೊಲ್ ಎನ್ನನು ವಿಧಿಸೋ!

ಮದನ ಹೇಗಿದ್ದರೂ ರಾಜಸ ದೇವತೆ. ಆತನನ್ನು ಪರಮಸಾತ್ವಿಕ ಉದ್ದೇಶ್ಯಕ್ಕಾಗಿ ದಯಾದೇವಿಯಾದ ಈ ಆಂಡಾಳ್ ಈಗ ಬಳಸಿಕೊಳ್ಳುತ್ತಿದ್ದಾಳೆ. ಆದರೂ ಆಯಾಯಾ ಸ್ವಭಾವದವರಿಗೆ ಸಂತೋಷಪಡಿಸಲು, ನಿಷಿದ್ಧವಾದರೂ ಉದ್ರೇಕಕರವಾದ ಉಮ್ಮತ್ತಿ

ಹಾಗೂ ನಿರ್ಗಂಧ, ರಕ್ತಾಶೋಕ, ಮುತ್ತುಗದ ಹೂಗಳಿಂದಲೇ ಅರ್ಚಿಸುತ್ತಾಳೆ! ಮುತ್ತ ನಲ್ ನರು ಮಲರ್ = ನಶೆಯನ್ನು ಹೆಚ್ಚಿಸುವುದರಲ್ಲಿ ಒಳ್ಳೆಯದಾದ, ನಿನಗಿಷ್ಟವಾದ ವಾಸನೆ ಸೂಸುವ, ನಿನ್ನ ಪ್ರೇಮ ಪ್ರೇರಣಾಕಾಹಳಿಯಂತಿರುವ, ಉದ್ದನ ನಾಳ ಹಾಗೂ ಬಿರಿದಿರುವ ಬಾಯ್ ಉಳ್ಳ ಉಮ್ಮತ್ತಿಯ ಹೂವನ್ನೂ, ವಾಸನೆಯಿಲ್ಲದಿದ್ದರೂ ಕೆಂಪೇರಿದ ನೋಡಲಂದವಾದ ಪಲಾಶಕುಸುಮವನ್ನೂ, ಕೊಣ್ಡು = ನಾನೇ ಆಯಾಯಾ ಗಿಡ ಮರಗಳಿರುವ ಪಾಳು, ಕಾನನಗಳಿಗೆಲ್ಲಾ, ಹೋಗಿತಂದು, ಮುಪ್ಪೊದುಮ್ = ಬೆಳಗ್ಗೆ ಮಧ್ಯಾಹ್ನ ಸಂಜೆ ತ್ರಿಕಾಲಗಳಲ್ಲೂ ಉನ್‌ಅಡಿ = ಶೀಘ್ರಫಲ ಸಿದ್ಧಿಸಲು, ದೇವತಾಂತರನೆನಿಸಿದ್ದರೂ ಇದೋ ನಿನ್ನಡಿಗಳಿಗೆ ಅರ್ಪಿಸಿ, ವಣಜ್ಗೆ = ಬಾಗಿ ನಮಸ್ಕರಿಸಿ ಈ ವ್ರತಾಚರಣೆಗೆ ಇಳಿದಿದ್ದೇನೆ.

ನನ್ನ ಈ ಭಕ್ತಿಗೆ ಸರಿಯಾದ ಫಲ ನೀಡು. ಹಾಗಿಲ್ಲದೆ, ನೀನು "ತತ್ತುವಮ್ ಇಲಿ" ಸತ್ಯವಂತನಲ್ಲ. ಎಂದು, ನೆಞ್ಜು = ನನ್ನೀ ಒಳ ಎದೆ ಎರಿನ್ದು = ಸುಟ್ಟು, ವಾಶಹತ್ತು = ಹೊರಮಾತಿನಿಂದಲೂ, ಉನ್ನೈಅಳಿತ್ತು = ನಿನ್ನನ್ನೂ ಅಳಿಸಿಹಾಕಿಕೊಂಡು, ವೈದು ಇಡಾಮೇ = ನಾನು ಬೈಗುಳ ಮಳೆ ಸುರಿಸದಂತೆ ನಮ್ಮಂತಹವರ ನಿಂದೆಯಲ್ಲಿ ಸತ್ಯಕ್ಕೆ ಲೋಪ ಬಾರದೆಂಬ ಕಾಳಜಿ ಇರುತ್ತದೆಯೇ ಹೊರತು ದ್ವೇಷವಿರದು. ರಾಗ ದ್ವೇಷದ ಹೊಗಳುತೆಗಳು ಭಟ್ಟಿಯಲ್ಲವಪ್ಪಾ ನಾನು! ನಿನ್ನ ಇಲಾಖೆಯಾದ ಪ್ರೇಮಕ್ಕೆ ಶಾಶ್ವತಪಾವನ ನಿತ್ಯಾನಂದದ ಸತ್‌ಪಾತ್ರವನ್ನೀಗ ನಾನು ತೋರಿಸುತ್ತಿರುವುದು. ಪ್ರೇಮದ 'ಪ್ರಾಪರ್ ಛಾನಲೈಸಿಂಗ್'! ಪ್ರೇಮವನ್ನು ಬೇಡವೆನ್ನೆ. ನಿನಗೂ ಈ ಸತ್ಯಾSSಗ್ರಹಪ್ರೇಮ ನಿರ್ವಹಿಸಿದ ಕೀರ್ತಿ ಸಲ್ಲಲಿ! ಎಂತಹ ಸತ್ ಸಾಮಾಜಿಕ ಪ್ರೇಮಳ ಅಹಿಂಸಾ ಸತ್ಯಸೂತ್ರ ಈ ಗೋದಾಮುಖದಿಂದ ಹೊರಟಿದೆ!

ಆಗಲಮ್ಮ ನಾನೇನು ಮಾಡಬೇಕೆನ್ನುವಿ. ಹಿಂದೆ ತಿರುಪ್ಪಾವೈಯ ಳನೆಯ ಹಾಡಿನಲ್ಲಿ "ಪರ್ಜನ್ಯದೇವ"ನಿಗೆ ಹದವಾಗಿ ಮಳೆ ಹುಯ್ಯಲು ಆಜ್ಞಾಪಿಸಿದ್ದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಕೊತ್ತು ಅಲರ್ ಪೂಮ್ ಕಣ್ಣೆ = ನಾನು ನಿನಗರ್ಪಿಸುವ ಕುಸುಮಗಳನ್ನೇ, ಗೊಂಚಲು ಗೊಂಚಲಾಗಿಯೇ ಅರಳಿರುವುವನ್ನೇ ಬಾಣವಾಗಿಸಿಕೋ. ನೀನು ಪುಷ್ಪಬಾಣನಲ್ಲವೇ! ತೊಡುತ್ತುಕ್ಕೊಣ್ಡು = ಆ ಕುಸುಮಾಂಬುಗಳನ್ನು ಎಲ್ಲೆಲ್ಲೋ ಪ್ರಯೋಗಿಸುವುದಲ್ಲ. ಕಬ್ಬಿನ ಜಲ್ಲೆಯ ನಿನ್ನ ಬಿಲ್ಲಿನಲ್ಲಿ "ಇಂದ-ಗೆ" ಇಬ್ಬರ ಪತ್ತೆಯನ್ನೂ ಸರಿಯಾಗಿ ಆ ಬಾಣಗಳಲ್ಲಿ ಬರೆಯಬೇಕಪ್ಪಾ! ಇನ್ನೂ ಸೂಕ್ಷ್ಮವೆಂದರೆ "ಗೋದೆಯೆಂಬುವಳು ನಿನಗಾಗಿ ಪರಿತಪಿಸುತ್ತಿದ್ದಾಳೆ" ಎಂದು ಒಕ್ಕಣಿಸು. ಗೋವಿನ್ದನ ಅಡ್ರೆಸ್ ಬರೆದಷ್ಟರಲ್ಲೇ ನಿಲ್ಲಬೇಡ, ಓ ಮನ್ಮಥಾ! ನನ್ನೀ ಉದ್ದೇಶವನ್ನೇ ನೀನೂ ನಿನ್ನ ಮನದಲ್ಲಿಟ್ಟು ಪ್ರಯೋಗಿಸು! 'ಮನಃಪೂತಂ ಸಮಾಚಾರ' ನಿಜಕ್ಕೂ ಕಾರ್ಯಕಾರಿಯಾಗುತ್ತದೆ. ನೀನೂ ದೇವತಾಂತರನೆಂಬ ಕ್ಷುದ್ರ ಕಾಮೋತ್ತೇಜಕನೆಂಬ ಅಪಕೀರ್ತಿಯಿಂದಲೂ ಮುಕ್ತನಾಗುವಿ! ರಜೋಗುಣ ಸಾತ್ವಿಕ ಕ್ರಿಯೆಗಳಿಗೆ ಪ್ರಚೋದಕವಾಗಲಿ, ನೀನೂ ಸಾತ್ವಿಕ ಪ್ರೇಮಳನಾಗುತ್ತ ಬಾ! ಆಯಾಯ ಗುಣಗಳಲ್ಲಿದ್ದೂ ಗುಣಾತೀತನಾಗು, ಜಾತಿಯಲ್ಲಿದ್ದೂ ಜಾತ್ಯಾತೀತನಾಗು. **"ಶುಭಾಂಶ ಸರ್ವತೋಗ್ರಾಹ್ಯ! ಅಶುಭಾಂಶ ಸರ್ವತೋವರ್ಜ್ಯ".** ಈ ವಿವೇಕ ನಿನಗೆ ಬರಲೆಂದೇ ನನ್ನೀ ವ್ರತವಪ್ಪಾ! ನನ್ನನ್ನೂ ಬಾಣದೊಂದಿಗೇ ಸೇರಿಸಿ ಪಾರ್ಸಲ್ ಮಾಡಿ ಬಿಡು. ಎಲ್ಲಿಗೆನ್ನುತ್ತೀಯಾ? ವಿತ್ತಹನ್ ವೇಜ್ಗಡವಾಣನ್ = ಅತ್ಯಾಶ್ಚರ್ಯಕರನಾದ ಎತ್ತರದಲ್ಲಿರುವ ಉನ್ನತ ಮಟ್ಟದ ಫಲಸ್ವರೂಪನಾದ ತಿರುಪತಿ ತಿಮ್ಮಪ್ಪನಿಗೆ, ಕತ್ತಲಲ್ಲಿ ನೀನು ತಡಮಾಡಬೇಕಿಲ್ಲ. ವಿಳಕ್ಕಿನಿಲ್ = ಆತ ಸ್ವಯಂ ಜ್ಯೋತಿ! ಪರಂಜ್ಯೋತಿ! ಅಲ್ಲೇ ದಾಸಿಯೂ ಹೊಕ್ಕಿ ಸೇರಿ ಕೊಳ್ಳುವಂತೆ, ಈ ಗೋದಾಸ್ಥುಲಿಂಗವನ್ನು, ಎನ್ನೈ; ವಿದಿಕ್ಕಿತ್ತಿಯೇ = ಎಲ್ಲಿಂದ ಚಿಮ್ಮಿ ಬಂದಿತ್ತೋ ಮತ್ತಲ್ಲಿಗೇ ಈ ಕಿಡಿಯನ್ನು ಮೂಲಸ್ಥಾನಕ್ಕೇ ಸೇರಿಸು. ಇದೇ ಎಲ್ಲರಿಗೂ ವಿಹಿತ. ನೀರಿನ ಬಿಂದು ಮಹಾಸಿಂಧುವನ್ನು ಸೇರಲಿ! ಈ ಗೋವಿಂದನ ದಾಸಿಯನ್ನು ಒಂಟಿಯಾಗಿರಿಸದೆ ಜಂಟಿಯಾಗಿಸಯ್ಯಾ!

ತಮಿಳ್ ತಿರಳ್ ೪-೨

ಕಾಟ್ಚಿಲ್ ವೇಜ್ಗಡಮ್ ಕಣ್ಣಪುರ ನಹರ್ ವಾಟ್ಚಮಿನ್ನಿ ಮಹಿಳ್‌ನ್ದುರೈ ವಾಮನನ್
ಓಟ್ಟರಾ ವನ್ದೆನ್ ಕೈ ಪ್ಪತ್ತಿ, ತನ್ನೊಡುಮ್ ಕೊಟ್ಟು ಮಾಹಿಲ್ ನೀ ಕೂಡಿಡು ಕೂಡಲೇ

ಕನ್ನಡ ನೆರಳ್

ಕಾಡೊಳಗಿರುವಾ ವೇಂಕಟದಲ್ಲೂ ಕಣ್ಣನಪುರದಲ್ಲೂ ಬಾಡದೆ ಮನ ಹಳಹಳನೆಂದಿಹ ವಾಮನನು
ಓಡುತ ಜವದಿಂ ಬಂದೆನ್ ಕೈಗಳ ಪಿಡಿದೆನ್ನೊಡು ಕೂಡುವನಾದರೆ ಎಲೆ ಕವಡೆಯೇ! ನೀ ಕೂಡ್ಯೆ

ಕಾಡುಮೇಡುಗಳಿಂದಲೇ ತುಂಬಿರುವ 'ತಿರುಮಲೆ'! ತೀರಾ ಬಯಲಿನಲ್ಲಿರುವ 'ತಿರುಕ್ಕಣ್ಣಪುರಮ್' ಇಲ್ಲೆಲ್ಲಾ ಸರ್ವೇಶ್ವರ ಈ ಆಂಡಾಳ್ ಆದ ದಾಸಿಯನ್ನು ಗಾಢಾSSಲಿಂಗನ ಮಾಡಿಕೊಳ್ಳಲೆಂದೇ ಸಾನ್ನಿಧ್ಯ ಗೈದಿರುವುದು. ಅದೂ ಸಂತೋಷದಿಂದ. ಕಲ್ಲುಮುಳ್ಳು

"ಪರೈಯನ್ ಪಾಪ್ಪಾನ್" ಭೇದವಿಲ್ಲದೆ ಎಲ್ಲರ ತಲೆಗಳ ಮೇಲೆಯೂ ಕೇಳದೆಯೇ ಪಾದ ಇಟ್ಟವ, ಈಗ ನನ್ನ ಪಾಣಿಗ್ರಹಣ ಗೈಯ್ಯುವನೇ? ಓ! ಕವಡೆ! ನೀನೂ ಸರಿ ಸಂಖ್ಯೆಯಲ್ಲಿ ಒಳ್ಳೆಯ ಶಕುನವಾಗಿ ಕೂಡಿ ಬಾ.

ಕೂಡಲೇ = ನದಿ ನದಿಗಳನ್ನು ಸೇರಿಸುವ ತಾಣಕ್ಕೂ "ಕೂಡಲು" ಎಂಬ ಹೆಸರು. ಜೀವ ಶಿವರನ್ನು ಕೂಡಿಸುವ ಕ್ಷೇತ್ರವೂ ಕೂಡಲಸಂಗಮ! ಹಾಗೆಯೇ ಈಗ ಗೋದೆ ತನ್ನನ್ನೂ ಶ್ರೀಹರಿಯನ್ನೂ ಸೇರಿಸುವ ಸಂಧಾನ ದೇವತೆಯ ಬಳಿ ಶಾಸ್ತ್ರ ಕೇಳುತ್ತಿದ್ದಾಳೆ. ಕಾಟ್ಟು ಇಲ್ = ಕಾಡೇ ಮಂದಿರವಾದ, ವೇಙ್ಕಡಮ್ = ವೇಂಕಟ ಭೂಧರ. ಕಣ್ಣಪುರ ನಹರ್ = ತಿರುಕ್ಕಣ್ಣಪುರಮ್ ಇಂತಹ ಅನೇಕ ಯಾತ್ರಾಸ್ಥಳಗಳಲ್ಲೂ, ವಾಟ್ಟಮ್ ಇನ್ನಿ = ಆ ಅಪ್ರಾಕೃತವಾದ ದಿವ್ಯ ವೈಂಕುಂಠ ಲೋಕ ಬಿಟ್ಟು, ಈ ಮಿಶ್ರಸಾತ್ವಿಕವೂ ರಾಜಸತಾಮಸವೂ ಆದ ಲೀಲಾವಿಭೂತಿಗೇ ಬಂದೆ! ಮನಸ್ಸಿನಲ್ಲಿ ಏನೊಂದೂ ಅಳುಕಿಲ್ಲದೆ, ಮಹಿಳ್ನುದ = ಸಂತಸಪಟ್ಟೇ! ತ್ರಿವಿಕ್ರಮನಾಗಿದ್ದು, ಉರೈ = ನಿತ್ಯವಾಸ ಗೈಯುತ್ತಲೇ, ಇರುವ ಆ ಚೆಂದುಳ್ಳಿ ಕುಳ್ಳ! ಓಟ್ಟರಾ ವನ್ದು = ಬೇಗೋಡಿ ಬಂದು, ಎನ್ ಕೈ ಪತ್ತಿ = ನನ್ನ ಕೈಯ್ಯನ್ನು ತನ್ನ ಕೈಯಿಂದ "ಹಸ್ತಮಗ್ರಭೀತ್" ಎಂಬಂತೆ ಹಿಡಿದು, ಪರಮಭೋಕ್ತ್ಯವೂ ಪರಮ ಭೋಗ್ಯವೂ ಆದ, ತನ್ನೊಡುಮ್ ಕೂಟ್ಟುಮ್ = ಅಪ್ಪುವುದು ಆಹಿಲ್ = ನಿಜವಾದಲ್ಲಿ, ಓ ಕೂಡಲೇ ನೀ ಕೂಡಿಕೋ! ಒಟ್ಟಿಗೇ ಸೇರಿ ಬಾ! ನನಗೊಂದು ಆಶ್ವಾಸನೆ ನೀಡು.

ತಮಿಳ್ ತಿರಳ್ ೫-೨

ವೆಳ್ಳೈ ವಿಳಿ ಶಙ್ಗು ಇಡಮ್ ಕೈಯಿಲ್ ಕೊಣ್ಡ ವಿಮಲನ್ ಎನಕ್ಕುರು ಕ್ಕಾಟ್ಚಾನ್
ಉಳ್ಳಮ್ ಪುಹುನ್ದೆನ್ನೈ ನೈವಿತ್ತು ನಾಳುಮ್ ಉಯಿರ್ ಪೆಯ್ದು ಕೂತ್ತಾಟ್ಟು ಕ್ಕಾಣುಮ್
ಕಳ್ಳವಿಳ್ ಶೆಣ್‌ಬಹ ಪೂ ಮಲರ್ ಕೋದಿ ಕ್ಕಳಿತ್ತಿಶೈ ಪಾಡುಮ್ ಕುಯಿಲೇ
ಮೆಳ್ಳವಿರುನ್ದು ಮಿಳತ್ತಿ ಮಿಳತ್ತಾದು ಎನ್ ವೇಙ್ಗಡವನ್ ವರ ಕ್ಕೂವಾಯ್

ಕನ್ನಡ ನೆರಳ್

ಬೆಳ್ಳನ ಕರೆ ಶಂಖವ ನೆಡಗೈಯ್ಯೊಳು ಕೊಂಡ ನಿರ್ಮಲನ್ ಎನಗಿದೋ ತನ್ ನಿಜರೂಪವ ತೋರನ್!
ಒಳಗನು ಹೊಕ್ಕೆನ್ನನು ನೋಯಿಸಿ ದಿನದಿನ ಪುಸಿರ್ ತುಂಬಿ, ತುಡಿಮಿಡಿಸುತ ಕುಣಿದಾಡುವನ್ ಕಾಣ
ಗಳಗಳ ಸುರಿಜೇನ್ ಅರಳ್ ಸಂಪಿಗೆ ಜಗಿದು ಮಿಗೆಮದವಾಂತಿಶೈ ಪಾಡುವ ಓ ಕೋಗಿಲೆಯೇ!
ಬಳಿಯೊಳೆ ಮೆಲ್ಲನೆ ಇದ್ದು ಬೆಡಗನು ತೋರದೆ ಎನ್ ವೇಂಕಟವಲ್ಲಭ ಬರುವೊಲ್ ಕೂಗೈ.

ಪೂರಾ ವಿರಹಿಣೀ ಅವಸ್ಥೆಯಲ್ಲಿ ಗೋದೆ ಕೋಗಿಲೆಗಳನ್ನೇ ತನ್ನ ವತಿಯಿಂದ ದೂತರನ್ನಾಗಿ ಕಳಿಸುವ ಸನ್ನಿವೇಶ. ಈ ಪಕ್ಷಿದೌತ್ಯದ ಅಂತರಾರ್ಥವನ್ನು ಮುಂದೆ ಇದೇ ವಿಷ್ಣುಚಿತ್ತರ ಮಗಳಾದವಳೇ, "ಆಚಾರ್ಯನ ಅಭಿಮಾನಕ್ಕಾಗಿ" ಚೇತನ ಪ್ರಾರ್ಥಿಸುವುದನ್ನು ೧೦ನೆಯ ಶತಕದಲ್ಲಿ ಸ್ಪಷ್ಟಪಡಿಸುತ್ತಾಳೆ. ಆಚಾರ್ಯನಿಗೆ ದೇವರು ವಿಧೇಯನಾದುದರಿಂದ, ಅವರು ಕರೆದು ನಮಗೆ ತೋರಿಸಿದರೆ ಇದೇ ಸರಿಹಾದಿ. **"ಆಚಾರ್ಯವಾನ್ ಪುರುಷೋವೇದ" "ಆಚಾರ್ಯದೇವೋ ಭವ"** ಜ್ಞಾನ ಮತ್ತು ಅನುಷ್ಠಾನಗಳೆಂಬ ಎರಡು ರೆಕ್ಕೆಗಳ ಸಾಮ್ಯದಿಂದ ಗುರುದೇವನನ್ನು ಸುಶ್ರಾವ್ಯ ಪ್ರವಚನ ಸಾಮರ್ಥ್ಯದಿಂದಲೂ ಕೋಗಿಲೆ ಮುಂತಾದ್ದಾಗಿ ಭಾವಿಸುವುದು ಸತ್ ಸಾಹಿತ್ಯದ ಒಂದು ಸಂಕೇತ. ಈಕೆಯೂ ಶರಣರೆಲ್ಲರಿಗೂ ಕುಲಕನ್ಯೆಯಷ್ಟೆ! ಅವರ ಮೇಲ್ ಪಂಕ್ತಿ, ಅವರ ವಾತ್ಸಲ್ಯದ ಅಭಿಮಾನವನ್ನೇ, ಭಗವತ್ ಪ್ರಪತ್ತಿಗಿಂತಲೂ ಚರಮೋಪಾಯವನ್ನಾಗಿ ಪಚನ ಮಾಡಿಕೊಂಡಿರುವ ಉತ್ತಮ ಶರಣೆ ಈಕೆ.

ಇಲ್ಲಿ ಮುಖ್ಯವಾಗಿ ವಿರಹಕ್ಕೆ ಕಾರಣ, ಹೊರಕರಣಗಳಿಗೆ ಸ್ವಾಮಿ ತನ್ನ ನೈಜಸ್ವರೂಪ ತೋರದಿರುವುದೇ. ವೆಳ್ಳೈ ವಿಳಿ ಶಙ್ಗು = ಬೆಳ್ಳಗಿರುವ, ಹಾಗೂ ಎಲ್ಲಕರುಗಳನ್ನೂ, ಬನ್ನಿ ಎಂದು ಕರೆಯುವ ಸಲುವಾಗಿ ಊದುವ ಶಂಖವನ್ನೂ, ಇಡಮ್ ಕೈಯ್ಯಿಲ್ ಕೊಣ್ಡವಿಮಲನ್ = ಎಡಗೈಯ್ಯಲ್ಲಿ ಎತ್ತಿಹಿಡಿದಿರುವ, ನಿರ್ಮಲ ಸ್ವಭಾವನಾದ ಸ್ವಾಮಿ, ಎನುಕ್ಕು = ಶ್ರೀ ಮೂರ್ತಿ ದರ್ಶನವಿಲ್ಲದಿದ್ದರೆ ಪ್ರಾಣವೇ ಹೋಗುವಷ್ಟು ಕಷ್ಟದಲ್ಲಿರುವ ನನಗೆ, ಉರು = ತನ್ನ ಮೌಲಿಕ ದಿವ್ಯ ಮಂಗಳ ವಿಗ್ರಹವನ್ನು, ಕಾಟ್ಚಾನ್ = ಈ ಹೊರಗಣ್ಣಿಗೆ ತೋರಿಸುತ್ತಿಲ್ಲ. ಒಳಗಿನ ಮಾನಸ ಸಾಕ್ಷಾತ್‌ಕಾರ ನಿನಗೆ ಸಾಲದೇ? ಅಯ್ಯೋ! ಉಳ್ಳಮ್ ಪುಹುನ್ದು = ಸರ್ವೇ ಸಾಮಾನ್ಯವಾಗಿ ಎಲ್ಲರ ಒಳಗೂ ಅಂತರ್ಯಾಮಿಯಾಗಿರುವ ನೆಲೆಮಾತ್ರ ನನಗೆ ತೃಪ್ತಿತರದು. ನನ್ನೊಳಗೆ ವಿಶಿಷ್ಟರೀತಿಯಲ್ಲಿ ಪ್ರವೇಶಿಸಿ, ಎನ್ನೈ ನೈವಿತ್ತು = ನನ್ನನ್ನು ಅನ್ಯಾದೃಶವಾಗಿಯೇ ಪ್ರೇಮಕಾರ್ಯವಾಗಿ ಬಾಧಿಸಿ! ಅದೂ ಪ್ರಾಣಾಂತಕವಾಗಿ, ನಾಳುಮ್ = ಪೂರಾ ಒಂದೇ ಸಲಕ್ಕೆ ಆ "ಚಿಂತೆಯಂತಿ"ಗೆ ಮಾಡಿದಂತೆ ಉಸಿರನ್ನಾದರೂ ನಿಲ್ಲಿಸಿಬಿಡುವವನೂ ಅಲ್ಲ! ಉಯಿರ್ ಪೆಯ್ದು = ಸಾಯದಂತೆಯೂ ಮಾಡಿ ಬಲು ಘಾಸಿಮಾಡುತ್ತಿದ್ದಾನೆ.

"ಚಿಂತಯನ್ತೀ" ಎಂದೇ ಪ್ರಸಿದ್ಧಿಗೆ ಬಂದ ಆಕೆ, ಗೋಕುಲಕ್ಕೆ ಸೇರಿದ ಒಬ್ಬ ಹೊಸ ಸೊಸೆ ಮಗಳು. ಆ ಶರತ್ ಕಾಲದ ಹುಣ್ಣಿಮೆ ಚಂದ್ರನದೇ ಅಂದು ಆಕಾಶದಲ್ಲಿ ದರ್ಬಾರ್! ನೆಲದಲ್ಲಿ ಎಲ್ಲಾ ಗೋಪಿಯರಿಗೂ ತಣ್ಪಿಕ್ಕುವ ಪೂರ್ಣ ಕೃಷ್ಣ ಚಂದ್ರ! ರಾಸಲೀಲೆಗೆ ಗೋಕುಲದ ಎಲ್ಲ ಹೆಂಗಸರೂ, **"ಬೃಂದಾವನಕೆ ತ್ವರೆ ತ್ವರೆ! ಪಕ್ಕದ ಗಂಡನ ತೊರೆ ತೊರೆ! ಮನೆಗೆಲಸ ಮಿಕ್ಕಾರೆ ಮಿಗಲಿ! ನೆರೆ ಹೊರೆ ನಕ್ಕಾರೆ ನಗಲಿ"** ಕನ್ನಡ ವರಕವಿ ಪು.ತಿ.ನ. ತಮ್ಮ ಗೋಕುಲ ನಿರ್ಗಮನ ಕಾವ್ಯದಲ್ಲಿ ಅಂಕಿಸಿರುವಂತೆ, ಮಕ್ಕಳಿಗೆ ಮೊಲೆಯೂಡಿಸುತ್ತಿದ್ದುದನ್ನೂ ಸಹ ತೊರೆದು ಯಮುನೆಯ ಮರಳು ದಿಣ್ಣೆಯತ್ತ ಧಾವಿಸುತ್ತಿದ್ದಾರೆ! ಈ ಹುಡುಗಿಗೂ ಆಸೆ! ಆದರೆ ಅತ್ತೆ ಮಾವಂದಿರು ಕಡ್ಡಾಯವಾಗಿ ಹೋಗಲೇ ಕೂಡದೆಂದು ತಡೆದೇ ಬಿಡುವುದೇ! ಆಗ ಆ 'ಚಿಂತಯನ್ತಿ', ಅಂತಹ ಭವ್ಯ ದಿವ್ಯ ಜೀವ ಹರಿ ಸಮಾಗಮದ ಸುಖಾನುಭವವನ್ನು ಮನಸಾರಾ ಭಾವಿಸಿ ತನ್ನ ಸಮಸ್ತ ಪೂರ್ವಾರ್ಜಿತ ಪುಣ್ಯಗಳನ್ನು ಕಳೆದೇ ಬಿಡುತ್ತಾಳೆ! ಅದೂ ಒಂದೇ ಕ್ಷಣಕ್ಕೆ! ಅಷ್ಟೊಂದು ಉತ್ಕಟ ಉತ್ತುಂಗ ಭಕ್ತಿ ಚಿಂತನೆ ಅವಳೊಳಗೆ ನಡೆದಿರುತ್ತದೆ. ಪುಣ್ಯಫಲ ಪಡೆದಂತಾಯಿತು. ಆದರೆ ಆ ಸಾಮೂಹಿಕ ಬ್ರಾಹ್ಮೀ ಅನುಭೂತಿಯಲ್ಲಿ ತಾನು ಪಾಲುಗೊಳ್ಳಲು ಆಗದಲ್ಲಾ! ಎಂದು ಅತ್ಯುತ್ಕಟ ದುಃಖವನ್ನು ಒಂದೇ ಕ್ಷಣ ಅನುಭವಿಸಿ, ಪಾಪಫಲವನ್ನೂ ತೀರಿಸಿಕೊಂಡಳು.

"ತಚ್ಚಿತ್ತ ವಿಮಲಾಹ್ಲಾದ ಕ್ಷೀಣಪುಣ್ಯಚಯಾಪಿ ಸಾ" ತದಲಾಭಕ್ಲೇಶಾತಿಯದಿಂದ ಪಾಪವನ್ನೂ ಕಳೆದ ಮೇಲೆ ಮೂರನೆಯ ಕ್ಷಣವೇ **"ಜಗತ್ ಸೂತಿಂ ಜಗಾಮ ಹಾ!"** ಅಖಿಲ ಜಗತ್ಕಾರಣನಲ್ಲಿ ಸೇರಿಹೋದಳು! **"ಪುಣ್ಯ ಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ"** ಎಂಬ ಉಪನಿಷದರ್ಥ ಈ ಚಿಂತಯಂತಿಯಲ್ಲಿ ತ್ವರಿತವಾಗಿ ಕೆಲಸ ಮಾಡಿಯೇ ಬಿಟ್ಟಿತ್ತು! ಆಕೆ ಅತ್ತಮ ವೈಕುಂಠದ ನಿತ್ಯರಾದ ಸೂರಿಗಳ ಪರಿಷತ್‌ತಿಗೆ ಖಾಯಂ ಸದಸ್ಯೆಯಾಗಿ ಬಿಟ್ಟಳು!

ಉಯಿರ್ ಪೆಯ್ದು = ಪ್ರಕೃತ, ಮನವನ್ನು ಬಿಟ್ಟಾದರೂ ತೊಲಗುತ್ತಾನೆಯೇ, ಕೂತ್ತಾಟ್ಟು ಕ್ಕಾಣುಮ್ = ಧಿಮಿ ಧಿಮಿ ಪಾದಸ್ಪರ್ಶದಿಂದ ಒಳಗೇ ನಾಟ್ಯವಾಡುತ್ತಿದ್ದಾನೆ, ನೋಡಿರೆಲ್ಲಾ! ಮಧುಸಾರವನ್ನು, ಚೆನ್ನಾಗಿ ಜಗಿದು ಕುಡಿದು, ಕಳಿತ್ತು = ಪ್ರಮತ್ತನಾಗಿ, ಇಶೈ ಪಾಡುಮ್ ಕುಯಿಲೇ = ಸಂಗೀತದಂತೆ "ಚಿಕ್ಕವ್ವೋ! ಚಿಕ್ಕವ್ವೋ!" ಎಂದು ಆಲಾಪಗೈಯ್ಯುವ ಎಲೈ ಕೋಗಿಲೆಯೇ! ಮೆಳ್ಳ ಇರುನ್ದು = ಒಮ್ಮೆ ಮೆಲ್ಲನೆ ಸುಮ್ಮನಿದ್ದು. ಬೇರೆ ಹಕ್ಕಿಗಳಂತೆ ಪಿಕ ಬರುವುದಾಗಲಿ ಇರುವುದಾಗಲಿ ಯಾವೊಂದು ಸ್ಥೂಲ ಸಡಗರವಿಲ್ಲದೆ ಮೌನ ಗಾಂಭೀರ್ಯದಿಂದಿರುವುದಷ್ಟೆ. ಅದನ್ನಿಲ್ಲಿ ಆಂಡಾಳ್, "ಮೆಳ್ಳಇರುನ್ದು" ಎಂದಿದ್ದಾಳೆ. ಮಿಳತ್ತಿ ಮಿಳತ್ತಾದು = ಕೂಗಿಯೂ, ಒಮ್ಮೆ ಕೂಗದೆಯೂ ಹೀಗೆಲ್ಲಾ ನನ್ನೀ ವಿರಹ ದುಃಖವನ್ನು ಕೆರಳಿಸದೆ, ಎನ್ ವೇಜ್ಗಡವನ್ ವರ ಕ್ಕೂವಾಯ್ = ವೇಗದಿಂದ, ತಿರುಮಲೆಗೆ ಹಾರಿ ಹೋಗಿ, ಎಲ್ಲಿಗೆ? ಎಂದದು ಕೇಳಿದ್ದಕ್ಕೆ ಹೀಗೆ ಉತ್ತರ ಹೇಳಿ ಅತನಿಗೂ ನಿನಗೂ ಏನೋ ಜಗಳವಾಗಿರಬೇಕು. ಇದಕ್ಕೆಲ್ಲಾ ನನ್ನನ್ನೇಕೆ ನಡುವೆ ಎಳೆಯುತ್ತೀಯೇ! ಹಾಗಿಲ್ಲವಪ್ಪಾ, ಎನ್ = ನನ್ನನ್ನೂ ಅತ ಬಿಡದವ, ಅಷ್ಟೊಂದು ನನ್ನಲ್ಲಿ ಪ್ರೇಮಳ! ನಾನೂ ಅವನಲ್ಲಿ ಅಂತೆಯೇ! ನಾನಷ್ಟು ದೂರ ನಡೆಯಲಾರೆ. ನೀನಾದರೆ ಆಕಾಶಯಾನದಲ್ಲಿ ಥಟ್ಟನೆ ಹಾರಿ ವಿನಂತಿಸಬಹುದು, ವರ = ನನ್ನ ಬಳಿಗೇ ಅತ ಬರುವಂತೆ, ಕ್ಕೂವಾಯ್ = ಉಭಯ ಪ್ರೇಮವನ್ನೂ ಹೇಳಿ ಕರೆದುಕೊಂಡೇ ಬಂದುಬಿಡು. ಈ ಬಾಹ್ಯೇಂದ್ರಿಯಗಳಿಂದಲೂ ನೋಡಿ ನಲಿದು ಅಪ್ಪಿ ಸಲ್ಲಾಪಿಸಬೇಕು ನಾವೀರ್ವರೂ. ಹಾಗೆ ಸಂಘಟಿಸು ಗುರುವೇ?

ತಮಿಳ್ ತಿರಳ್ ೮-೧

ವಿಣ್ಣೀಲ ಮೇಲಾಪ್ಪು ವಿರಿತ್ತಾಪ್ಪೋಲ್ ಮೇಹಜ್ಗಾಳ್
ತೆಣ್ಣೀರ್ ಪಾಯ್ ವೇಜ್ಗಡತ್ತೆನ್ ತಿರುಮಾಲುಮ್ ಪೋನ್ದಾನೇ
ಕಣ್ಣೀರ್‌ಹಳ್ ಮುಲೈ ಕ್ಕುವಟ್ಟಿಲ್ ತುಳಿ ಶೋರ ಚ್ಚೋರ್‌ವೇನೈ
ಪೆಣ್ಣೀರ್‌ಮೈ ಯೀಡಳಿಕ್ಕುಮ್ ಇದು ತಮಕ್ಕೋರ್ ಪೆರುಮೈಯೇ!

ಕನ್ನಡ ನೆರಳ್

ಬಾನೊಳು ನೀಲಿಯ ಮೇಲ್ಕಟ್ ಹರಗಿದವೋಲಿಹ ಮೇಘಗಳೇ! ತೆಳ್ನೀರ್ ಹರಿಯುವ ತಿರುಪತಿಯ ಎನ್ ಸಿರಿಮೋಹಿಯೂ ಬಂದಿಹನೇ? ಕಣ್ಣೀರ್‌ಗಳು ಮೊಲೆ ಕೋಡಿಂದಲಿ ಕೀಳ್ ದುಮುಕುತ ಹರಿಯಲ್! ಬಳಲಿಹಳ ಪೆಣ್‌ತನ ವಳಿಪುದು ತಮಗೊಂದಿದು ಹಿರಿಮೆಯೇ? ಕೇಳಿ

ಇದೇ ಗೋದಾದೇವಿ ಹಿಂದಿನ ಒನೆಯ ತಿರುಮೊಳಿಯಲ್ಲಿ ಶ್ರೀ ಪಾಂಚಜನ್ಯ ಶಂಖದೊಡನೆ ಸಲ್ಲಾಪ ನಡೆಸಿದ್ದಳು.

"ಕರುಪ್ಪೂರಮ್ ನಾರುಮೋ ಕಮಲ ಪೂ೦ನಾರುಮೋ?"

ಕೃಷ್ಣನ ಅಧರಾSಮೃತದ ಪರಿಚಯ ಶಂಖಕ್ಕೆ ಸಾಕಷ್ಟಿದೆ. ಎಡಗೈಲಿ ಹಿಡಿದು ಮಾಧವ ತನ್ನ ಮುಖಾರವಿಂದದಲ್ಲಿಟ್ಟು ಊದುವುದರಿಂದ, ಪಚ್ಚಕರ್ಪೂರಕ್ಕಿಂತಲೂ-ಕಮಲಪ್ಪೂವಿಗಿಂತಲೂ ಕೃಷ್ಣನ ತುಟಿ ಬಲು ಸಿಹಿಯಾಗಿರಬೇಕು! ಇತ್ಯಾದಿಯಾಗಿ ಸ್ವಲ್ಪಕಾಲ ಅನಂದದ

ನಿರೀಕ್ಷೆಯಲ್ಲಿ ಹಿಗ್ಗಿದಳು. ಆದರೆ ಶ್ರೀ ಪಾಂಚಜನ್ಯ ಉತ್ತರ ನೀಡಲಿಲ್ಲ. ಆದುದರಿಂದ ಅಂಡಾಳಿನ ಹೃದಯ ತುಡಿದು ಮಿಡಿದು ವಾಸುದೇವನ ಅಗಲಿಕೆಯ ಬೇಗುದಿ ತಡೆಯಲಾರದೆ ಬಲು ಕಷ್ಟ ಪಡುತ್ತಾಳೆ.

ಅದೇ ಕಾಲಕ್ಕೇ ಮಳೆಗಾಲ ಸೇರಿಬರುತ್ತದೆ. ಆಕಾಶದಲ್ಲಿ ಗುಡುಗು ಮಿಂಚುಗಳೊಡನೆ ಮೋಡಗಳು ಈಕೆಗೆ ಸಹಜವಾಗಿಯೆ ತೋರಿಕೊಳ್ಳುತ್ತವೆ. ಕೃಷ್ಣನೂ ಮೇಘದಂತೆಯೇ ನೀಲವರ್ಣನಾದುದರಿಂದ, ಇವಳ ವಿರಹಾಗ್ನಿಗೆ ತುಪ್ಪ ಸುರಿದಂತಾಗುತ್ತದೆ. ತನ್ನೀ ಅವಸ್ಥೆಯನ್ನು ವೇಂಕಟಾಽಚಲಪತಿಗೆ ತಿಳಿಸಿ ಉಳಿಸುವಂತೆ ವಿಶಾಲ ಗಗನಕ್ಕೇ ನೀಲಿಯ ವಿತಾನದಂತಿರುವ ಮುಗಿಲುಗಳಿಗೇ ಇವಳು ಮುಗಿಬೀಳುವುದೇ ಪೂರಾ ಈ ದಶಕ. **"ಗೋದಾ ಮೇಘದೂತ"**. ರಸಸ್ವರೂಪನಾದ ಭಗವಾನ್, ಆಚಾರ್ಯರಲ್ಲಿ ಒಳನೆಲೆಗೊಂಡವ. ಈ ಸುಂದರಾಭ್ರಗಳೂ, ಒಳಗೆ ಸಿಹಿನೀರನ್ನು ತುಂಬಿಕೊಂಡಿವೆ. ಗುರುವೋ ಅನ್ತರ್ ಬ್ರಹ್ಮ ತೆಜಸ್ಸಿನಿಂದ ಹೊಳಹುಗೊಂಡಿದ್ದಾರೆ. ಜನರಿಂದ ಏನೊಂದನ್ನೂ ನಿರೀಕ್ಷಿಸದೆ ಮೋಡ ಮಳೆಗರೆಯುವಂತೆ, ಬ್ರಹ್ಮಗರ್ಭನಾದವನು ಒಳಗಡಗಿರುವ ಬ್ರಹ್ಮಜ್ಞಾನಾನುಭವಗಳನ್ನು, "ಅಲೂಕ್ಷಾಃ ಧರ್ಮ ಕಾಮಾಃ" ಎಂಬಂತೆ, ಉದಾರ ಹೃದಯರಾಗಿ, ಶ್ರೋತೃಗಳಿಗೆ ತಂಪುಣಿಸುವನು. ಇತ್ಯಾದಿಸಾಮ್ಯದಿಂದ, ಮೆಘದೂತವೆಂದರೆ, **"ಸ್ವಾSSಚಾರ್ಯರನ್ನೇ ಈ ಶರಣೆ ತಿಮ್ಮಪ್ಪನಿಗೆ ನಿವೇದಿಸುವಂತೆ ಇಲ್ಲಿನ ಅಂತರಂಗ!"**

ವಿಣ್ = ಆಕಾಶಕ್ಕೆಲ್ಲಾ, ನೀಲಮ್ ಮೇಲಾಪ್ಪು = ನೀಲಿಬಣ್ಣದ ಮೇಲ್ಕಟ್ಟನ್ನು, ವಿರಿತ್ತಾಪ್ಪೋಲ್ = ಹರಗಿ ಕಟ್ಟಿರುವಂತೆ, ಇರುವ ಮೇಹಜ್ಞಾಳ್ = ಓ ಮೇಘಗಳೇ! ತೆಳ್ ನೀರ್ ಪಾಯ್ = ತಿಳಿನೀರಿನ ತೀರ್ಥಗಳು ಹರಿಯುತ್ತಲೇ ಇರುವ, ವೇಙ್ಗಡತ್ತು = ತೀರ್ಥಪಾವನವೆಂದೇ ಪ್ರಸಿದ್ಧವಾಗಿರುವ ವೇಂಕಟಾದ್ರಿಯಲ್ಲಿ ಬಿಜಯ ಮಾಡಿಸಿರುವ, ಎನ್ ತಿರುಮಾಲುಮ್ = ನನ್ನ ಶ್ರಿಯಃಪತಿ ಶ್ರೀನಿವಾಸನೂ, ಪೋನ್ದಾನೋ = ಬಂದಿದ್ದಾನೆಯೋ? ನನ್ನನ್ನು ತಣಿಸಲು ನಿಮ್ಮೊಡನೆ ಇದ್ದಾನೆಯೋ! ನೀವೂ ಅತನೂ ಸಮಾನ ಗುಣಧರ್ಮರಾದುದರಿಂದ ಜೊತೆಗಾರರಷ್ಟೇ! ಮುಲೈ ಕ್ಕುವಟ್ಟಿಲ್ = ನನ್ನಿದೋ ಎದೆ ಕೋಡಿನ ಮೇಲೆ, ಕಣ್ಣೀರ್‌ಹಳ್ = ಧಾರಾಕಾರವಾಗಿ ಕಣ್ಣೀರು, ತುಳಿಶೋರ = ನಿಲ್ಲದೇ ತಾಗಿತಾಗಿ ಜಲಪಾತದಂತೆ ಧುಮುಕುತ್ತಿರುವಾಗ, ಶೋರ್ವೇನ್ಯೆ = ಅದರ ವೇಗಕ್ಕೆ ಸೊರಗಿಯೇ ಹೋಗುತ್ತಿರುವ ನನ್ನನ್ನೂ, ಪೆಣ್‌ನೀರ್‌ಮ್ಯೆ = ನನ್ನ ಪಾರಾರ್ಥ್ಯರೂಪವಾದ ಸ್ತ್ರೀಧರ್ಮವನ್ನೂ, ಅತ್ಯಂತಿಕ ಕೃಷ್ಣಾರ್ಪಣ ರೂಪವೇ ಆದ, ಈಡು ಏಳಿಕ್ಕುಮ್ ಇದು = ಹದವಾಗಿರುವುದನ್ನೆಲ್ಲಾ ಉಪಯೋಗಿಸಿಕೊಳ್ಳದೆ ನಾಶಪಡಿಸುವ ಈ ಗೈಮೆ, ತಮಕ್ಕೋರ್ ಪೆರುಮ್ಯೆಯೋ = ಪಾರಮಾರ್ಥಿಕವಾದ ಹೆಣ್ತನವನ್ನು ನಿರುದ್ಯೋಗಗೊಳಿಸುವುದೇ ಒಂದು ಪೌರುಷದ ದೊಡ್ಡಸ್ತಿಕೆಯೋ! ಹೀಗೆ ಈ ದಾಸಿ ವಿನಂತಿಸಿದುದಾಗಿ ಅವನಿಗೇ ಛೀಮಾರಿ ಹಾಕಿ!

ತಮಿಳ್ ತಿರಳ್ ೮-೩

ಒಳಿವಣ್ಣಮ್ ವಳ್ಳೈ ಶಿನ್ನೈ ಉರಕ್ಕತ್ತೋಡಿವ್ಯೆ ಯೆಲ್ಲಾಮ್ ಎಳಿಮ್ಯೆಯಾಲ್ ಇಟ್ಟೆನ್ನೈ ಈಡಳಿಯ ಪ್ಪೋಯಿನ, ವಾಲ್!
ಕುಳಿರ್ ಅರುವಿ ವೇಙ್ಗಡತ್ತೆನ್ ಗೋವಿನ್ದನ್ ಗುಣಮ್‌ಪಾಡಿ ಅಳಿಯುತ್ತ ಮೇಹಜ್ಞಾಳ್! ಆವಿ ಕಾತ್ತಿರುಪ್ಪೇನೇ!

ಕನ್ನಡ ನೆರಳ್

ಒಡಲಿನ ಕಳೆ ಬಣ್ಣಂ ಬಳೆ ಚಿಂತೆ, ನಿದ್ದೆಯ ಜತೆಗಿವು ಎಲ್ಲಾ ಬಿಡಿಯಿರುವುದರಿಂ ಬಿಟ್ಟೆನ್ನಂ, ಬಲವಳಿಸುತ ಹೋದವಲಾ
ಕುಳಿರ್ ಝರಿ ಗಿರಿ ವೇಂಕಟದಿಹ ಎನ್ ಗೋವಿನ್ದನ ಗುಣಪಾಡಿ ಕರುಣಾಘನ ಮೇಘಗಳೇ! ಪ್ರಾಣವ ಕಾಯ್ದಿರಲಾಗುವೆನೇ!

ಅಂಡಾಳಿನ ಅಂತರಂಗದ ತೀವ್ರತೆ ಯಾವುದರ ಬಗೆಗೆ? ಎಂಬುದು ಇಲ್ಲಿ ಚೆನ್ನಾಗಿ ಗೋಚರವಾಗುತ್ತದೆ. "ಬ್ರಹ್ಮ ಸ್ವರೂಪ ಸತ್ಯ ಜ್ಞಾನ ಅನನ್ತ ಆನಂದ ನಿರ್‌ಮಲ ಎಂಬಿಷ್ಟನ್ನೇ ಆಗಲಿ, ತತ್ ಸ್ವರೂಪಗತ ಸತ್ಯತ್ವ, ಜ್ಞಾನತ್ವ ಅನನ್ತತ್ವ ನಿರ್ಮಲತ್ವಾದಿ ಧರ್ಮಗಳನ್ನಾಗಲಿ ಧ್ಯಾನಿಸುತ್ತಾ ಆನಂದ ಪಡಬಹುದಲ್ಲಾ!" ಇವಳಿಗೆ ಅವಷ್ಟೇ ಸಾಲದು! "ಜ್ಞಾನ ಶಕ್ತಿ ಬಲೈಶ್ವರ್ಯ ವಿರ್ಯತೇಜಸ್ ಸೌಶೀಲ್ಯ ವಾತ್ಸಲ್ಯ ಮಾರ್ದವ ಆರ್ಜವ ಸೌಹಾರ್ದ ಸಾಮ್ಯ ಕಾರುಣ್ಯ ಮಾಧುರ್ಯ ಗಾಂಭೀರ್ಯ ಔದಾರ್ಯ ಚಾತುರ್ಯ ಸ್ಥೈರ್ಯ ಧೈರ್ಯ ಶೌರ್ಯ ಪರಾಕ್ರಮ ಸತ್ಯಕಾಮ ಸತ್ಯಸಂಕಲ್ಪ ಕೃತಿತ್ವ ಕೃತಜ್ಞತಾದಿ ಅಸಂಖ್ಯೇಯ ಕಲ್ಯಾಣಗುಣಗಳ ಅನುಸನ್ಧಾನ ಮಾತ್ರದಿಂದಲೂ ಈಕೆ ತೃಪ್ತಳಲ್ಲ". ತಾನಿರುವೆಡೆಯ ಪರಿಸರದ ವಿಭೂತಿ ಜಡ ಚೇತನ ವಸ್ತುಗಳಿಂದಲೂ ಈಕೆಯ ಭಕ್ತಿದಾಹ ಇಂಗದು! "ಕಣ್ಣಬರವು ಹಿಂಗಬೇಕು! ಪೂರ್ಣಂ ಸಹೋಮ್" ಅಗಿರುವ, "ಮಾ ಅಸಿ ವಿಮಾ ಅಸಿ ಪ್ರಮಾ ಅಸಿ ಸಂಮಾಅಸಿ ಪ್ರತಿಮಾ ಅಸಿ" ಈ ವೇದ ಮಂತ್ರದ ಕೊಟ್ಟಕೊನೆಯದೇ ಈ ಗೋದಾದೇವಿಯೆಂಬ ಪೂರ್ಣಶರಣೆಗೆ ಇಷ್ಟತಮ. ಯದ್ಯಪಿ ಹಿಂದಿನವೆಲ್ಲಾ ಬೇರೆ ಬೇರೆ ಉಪಾಸನಾಭೂಮಿಕೆಗಳಲ್ಲಷ್ಟೇ ನಿಷ್ಠರಾಗಿರುವ ಭಕ್ತರಿಗೆ ಒದಗಿ ಬರುವಂಥವೇ! "ಈ ತಾಯಿ ಸರ್ವಶರಣ ಸಂತ ಆಳ್ವಾರರ ಸಾರ. ಅವರಿಗೆಲ್ಲಾ ವಿಕೈಕ ಸ್ತ್ರೀ ಸಂತಾನ".

"ಅಣ್ಣು ಕುಡಿಕ್ಕಿ ಒರುಶನ್ತತಿಯಾಯ್!"

ಈ ಶೋಪನಿಷತ್ತಿನ ಋಷಿ "ತೋಜೋ ಯತ್ತೇರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ" ಎಂದೇ ಪ್ರಾರ್ಥಿಸಿದಂತೆ ಇವಳದೂ! ಪರಬ್ರಹ್ಮನ ಕಲ್ಯಾಣತಮ ರೂಪ ದರ್ಶನಾಕಾಂಕ್ಷಿಣಿ ಈ ಬ್ರಹ್ಮಕನ್ಯಾಮಣಿ! "ಕನ್ಯಾವರಯತೇ ರೂಪಮ್"! ಅದರಲ್ಲೂ ತಿರುವೇಂಕಟದ ಗೋವಿನ್ದನ

ದರ್ಶನವೇ ಹೊರಗಣ್ಣಿಗೂ ಆಗಿಬಿಡಬೇಕೆಂಬುದೇ ಇವಳ ಪೇರಾಸೆ! ಅಂತೆಯೇ ಇಂದಿಗೂ ತಿರುಪತಿ ಯಾತ್ರಿಕರ ಬಾಯಲ್ಲಿ "ಗೋವಿನ್ದಾ ಗೋವಿನ್ದಾ" ಇದೇ ನುಸುಳುವುದು. ರೂಪಮೇವ ಅಸ್ಯಮಹಿಮಾನಂ ವ್ಯಾಚಷ್ಟೇ ಎಂಬ ಉಪನಿಷತ್ತಿನಂತೆ, ರೂಪವೇ ಸ್ವರೂಪವನ್ನೂ, ಬ್ರಹ್ಮಧರ್ಮಗಳನ್ನೂ, ಪರಬ್ರಹ್ಮನ ದಿವ್ಯಲೋಕೋತ್ತರ ಗುಣಗಳನ್ನೂ, ಚಿತ್ ಅಚಿದ್ ವಿಭೂತಿಗಳನ್ನೂ, ಚೆನ್ನಾಗಿಯೇ ಪ್ರಕಾಶ ಪಡಿಸುವುದರಿಂದ, ಅರ್ಚಾರೂಪದಲ್ಲೇ ಸರ್ವರಿಗೂ ಸರ್ವಪೂರ್ಣತೆ ಸಿದ್ಧಿಸುವುದು.

"ಅನನ್ಯಾಃ ಚಿನ್ತಯನ್ತೋಮಾಂ ಯೇ ಜನಾಃ ಪರ್ಯುಪಾಸತೇ"

ಅನನ್ಯ ಶರಣರಿಗೆ, ರೂಪೋಪಾಸನೆ, ಅದರ ತೃಷಾರ್ತಿಯೇ, ಪೂರ್ಣವಿಚಾರ ಪರಿಪೂರ್ಣೋಪಾಸನೆ.

ಅಳಿ ಅತ್ತ ಮೇಹಙ್ಗಳ್ = ದಯಾಘನರಾದ ಓ ಮೇಘಗಳೇ! ಒಳಿ = ನನ್ನ ಒಡಲ ಕಾನ್ತಿ, ವಣ್ಣಮ್ = ಛವಿ. ವಳೈ = ಶರಣ್ಯ ಪಾಣಿಗ್ರಹಣ ಮಾಡಲು ವಲಯಾಲಂಕಾರವಾದ ಗಾಜಿನ ಬಳೆಗಳು. ಶಿನ್ನೈ = ಚಿಂತನಾಸಾಧನವಾದ ಚಿತ್ತ, ಉರಕ್ಕತ್ತೋಡು = ಪ್ರಾಜ್ಞೇನಾSSತ್ಮನಾ ಸಂಪರಿಷ್ವಂಗ - ಗಾಢಾSSಲಿಂಗನಕ್ಕೆ ಇಂಬಾದ ಸುಷುಪ್ತಿಯೆಂಬ ಗಾಢ ನಿದ್ರೆಯೂ ಜತೆಜತೆಗೇ, ಇವೈಯೆಲ್ಲಾಮ್ = ಇವೆಲ್ಲಾ, ಎಳಿಮೈಯಾಲ್ = ಶ್ರೀಮೂರ್ತಿ ದರ್ಶನವಿಲ್ಲದ ಸಂದರ್ಭದಿಂದ ಎನ್ನೈವಿಟ್ಟು = ನಿರ್ಭಾಗ್ಯಳಾದ ನನ್ನನ್ನು ತೋರೆದೇ ಬಿಟ್ಟು, ಈಡು ಅಳಿಯ = ನನ್ನ ಹದವಾದ ಪ್ರಾವಣ್ಯ ನಿರುಪಯೋಗಿಯಾಗುವಂತೆ, ಪೋಯಿನ = ಹೋದವಪ್ಪಾ! ಅಲ್ = ಅಲಲಾ! ಸಹಿಸಲಾರೆ! ಕುಳಿರು ಅರುವಿ = ಶೀತಳವಾದ ಗಿರಿಝರಿಗಳಿರುವ, ವೇಙ್ಗಡತ್ತು = ವೇಂಕಟಧಾಮದಲ್ಲಿನ, ಎನ್‌ಗೋವಿನ್ದನ್ = ದನಕರುಗಳಿಗಿಂತಲೂ ಹಿಂದುಳಿದ ಈ ನನ್ನ ಗೋವಿನ್ದನ, ಗುಣಂಪಾಡಿ = ಗುಣಮಾತ್ರಗಾನದಿಂದ ಅವಿಕಾತ್ತು, ಇರುಪ್ಪೇನೇ = ಪ್ರಾಣ ರಕ್ಷಿಸಿಕೊಂಡಿರಲು ಸಮರ್ಥಳಾಗುವೆನೇ? ಕೇವಲ ಗುಣಾನುಭವದಿಂದಲೇ ಬದುಕುವ ಹಲವು ಶರಣರಂತೆಯೂ ನಾನಲ್ಲ! ಮೇಘಗಳೇ! ನೀವು ಶ್ರೀವಿಲ್ಲಿ ಪುತ್ತೂರಿನಿಂದ ತಿರುಮಲೆಗೂ, ಅಲ್ಲಿಂದ ಇಲ್ಲಿಗೂ ಗಗನವಿಹಾರಿಗಳು. ನಿಮ್ಮಂತಹ ಸಮರ್ಥ ಘಟಕರಿಂದಲೇ ನನ್ನ ಅಸು ಉಳಿಯಬೇಕಿದ್ದರೆ! ನಿಮ್ಮಲ್ಲಿ, ಧರ್ಮದ ಮೂಲವಾದ ದಯೆಗೆ ಏನೇನೂ ಕೊರತೆಯಿಲ್ಲ. ಲೋಕಕ್ಕೆ ಮಳೆ! ನನಗೆ ತಿಮ್ಮಪ್ಪನ ದಿವ್ಯದರ್ಶನ ವರ್ಷಣ!

ತಮಿಳ್ ತಿರಳ್ ೮-೪

ಮಿನ್ನಾಹತ್ತೆಳುಹಿನ್ನ ಮೇಹಙ್ಗಳ್ ವೇಙ್ಗಡತ್ತು ತನ್ನಾಹ ತ್ತಿರುಮಚ್ಚೈ ತಜ್ಗಿಯ ಶೀರ್ ಮಾರ್ವರ್‌ಕ್ಕು
ಎನ್ನಾಹತ್ತಿಳಚ್ಚೊಚ್ಚೈ ವಿರುಮ್ಬಿ ತ್ತಾಮ್ ನಾಡೋರುಮ್ ಪೊನ್ನಾಹಮ್ ಪುಲ್‌ಹುದರ್ಕು ಎನ್ ಪುರಿವುಡೈಮೈ ಶೆಪ್ಪುಮಿನೇ

ಕನ್ನಡ ನೆರಳ್

ಮಿನ್‌ಚಿದೋ ತನ್ನೊಡಲಾಗಸದೇಳುವೊಲಿಹ ಮೇಘಗಳೇ ವೇಂಕಟದಲ್ಲಿ
ತನ್ ಒಡಲೊಳು ಸಿರಿಮಹಿಳೆಯು ತಂಗಿಹ ಭವ್ಯವೂ ಆದೆದೆಯನಿಗೆ
ಎನ್ ಉರದಲ್ಲಿಹ ಎಳೆಮೊಲೆಮೊಗರ್ ಆತನನಾಶಿಸಿ ದಿನದಿನವೂ
ಪೊನ್ ಎದೆಯಪ್ಪಲು ಎನಗಿಹ ಕುತುಕವ ಬಿನ್ನೈಸುತ ಹೇಳಿರೆಲೈ

ವಿದ್ಯುಲ್ಲತಾಂಚಿತರಾದ ಓ ಮೇಘಗಳೇ! ಮಿನ್ ಆಹತ್ತು; ಆಹತ್ತು = ಆಕಾಶವೆಂಬ ಶರೀರದಲ್ಲಿ, ಮಿನ್ = ಮಿಂಚೆಂಬುದು ಎಳುಹಿನ್ನ = ಜ್ವಾಲಾರೇಖೆಯಾಗಿ ಮೇಲ್ಮೇಲೆ ಏಳುತ್ತಲೇ ಇರುವ ಮೇಹಙ್ಗಳ್. ನೀವು ಮಾತ್ರ ನಿಮ್ಮಾಸರೆಯಾದ ಆಗಸದಲ್ಲಿ ವಿದ್ಯುತ್ ಪ್ರಸರಗಳನ್ನು ಒಂದು ಕ್ಷಣವೂ ಬಿಡದಿರುವವರು! ನನ್ನನ್ನೂ ನಿಮ್ಮಂತೆಯೇ ಮಾಡಿಕೊಳ್ಳಬಾರದೇ? ದೇವರ ಜತೆಗೇ ನಿತ್ಯಯುಕ್ತರಾಗಿರುವ ಸ್ವಾಚಾರ್ಯರಲ್ಲಿ ಈ ಭಗವತಿ ಪ್ರಾರ್ಥಿಸುತ್ತಿದ್ದಾಳೆ. ಅಲ್ಲಿ ಆ ಮಳೆ! ಇವಳಿಗಿಲ್ಲಿ ಶ್ರೀನಿವಾಸನ ಕರುಣೆಯ ಮಳೆ! ಈ ಗುರುಮುಗಿಲ್ ಮೂಲಕ ಬೇಕಿದೆ. ವೇಙ್ಗಡತ್ತು = ಬೇರೆಡೆಯ ಮೋಡಗಳಾಗಿದ್ದರೆ ಆ ಮಾತು ಬೇರೆ. ತಿಮ್ಮಪ್ಪನ ಬೆಟ್ಟದಲ್ಲಿದ್ದೂ ವಿದ್ಯುತ್ತಿನ ಜತೆಗೇ ಸೇರಿದ್ದೂ ನನ್ನನ್ನು ಪತಿಯಿಂದ ವಂಚಿತಳನ್ನಾಗಿ ಮಾಡಬಹುದೇ?

ಅಹಲಕಿಲ್ಲೇನ್ ಇರೈಯುಮ್ = ಕ್ಷಣದ ಲವಲೇಶವೂ ಭಗವಂತನ ಅಗಲಿಕೆಯನ್ನು ಸಹಿಸಲಾರೆ ಎಂದೇ ಶಪಥಮಾಡಿರುವ, ತಿರುಮಚ್ಚೈ = ತುಂಬಿದ ಗರತಿಯಾದ ಶ್ರೀ ಮಹಾಲಕ್ಷ್ಮೀದೇವಿ, ತನ್ ಆಹತ್ತು = ತನ್ನ ಶ್ರೀಮೂರ್ತಿಯಲ್ಲಿ, ತಂಗಿಯ = ಎಂದೂ ಬಿಡದೆ ತಂಗಿಯೇ ಇರುವ, ಶೀರ್ = ಅವಿನಾಭಾವ ಸಂಪತ್ತಿನ, ಮಾರ್ವರ್‌ಕ್ಕು = ವಕ್ಷಃ ಸ್ಥಳವುಳ್ಳವನಿಗೆ, ಎನ್ನುವುದರಿಂದ ಆಚಾರ್ಯನಿಗೆ ಮತ್ತು ದಿವ್ಯಮಹಿಷಿಗೆ ಸಂಶ್ಲೇಷವಿತ್ತು ಈ ವಿರಹಿಣಿ ಗೋದಾ ನಾಯಕಿಯನ್ನು ಮಾತ್ರ ಹೀಗೆ ಪತಿಸಂಯೋಗವಿಲ್ಲದಂತೆ ಬಾಧಿಸಬಹುದೇ? ಎಂಬ ಸವಾಲಿನ ಭಾವ.

ಶ್ರೀದೇವಿಯಾದ ಅವಳನ್ನು ಬಿಡದಿರುವಂತೆಯೇ, ತಾಮ್ = ಸ್ವಾಮಿಯೇ, ನಾಳ್‌ದೋರುಮ್ = ಅಗಲದೆ ಸದಾ ಜತೆಗೇ ಇದ್ದು; ನಾನೂ ಭೂ ದೇವಿಯ ಅಂಶಳಲ್ಲವೇ? ಎನ್ ಅಹತ್ತು = ನನ್ನ ಉರದಿಂದ, ಇಳಮ್ ಕೊಙ್ಗೈ = ಎಳಸಾಗಿ ಇದೋ ಉದ್ಭವವಾಗಿರುವ, ಕುಚ ಕುಟ್ಮಲಗಳನ್ನು, ವಿರುಮ್ಬಿ = ಅನನ್ಯಾರ್ಹವಾಗಿ ತಾಮ್ = ತಾನೋರ್ವನೇ ಆಸೆ ಪಟ್ಟು, ಪೊನ್ ಅಹಮ್ = ಅತನಿಗೆ ಸ್ಪೃಹಣೀಯವಾಗುವಂತೆ ಅತನ ಸಂತಸಕ್ಕಾಗಿಯೇ, ನನ್ನೀ ವನಿತಾಶರೀರವನ್ನು. ಪುಲ್‌ಹುದರ್‌ಕ್ಕು ಗಾಢಾಲಿಂಗನ ಗೈಯಲ್ಕೆ ತನ್ನದೇ ಅದ ಅಸ್ತಿಯ ಅನುಭವದಿಂದ, ಸ್ವಾಮಿ ಸಂಪೂರ್ಣ ಸಂತುಷ್ಟನಾಗುವಂತೆ, ಎನ್‌ಪುರಿ ಉಡೈಮೈ = ತದಭಿಮತ ಹಾಗೂ ತದನುರೂಪವಾದ, ನನ್ನ ಪುರುಪುರಿಸುವ ಬಯಕೆಯ ಹಕ್ಕನ್ನು, ಶೆಪ್ಪುಮಿನೇ = ಅತನಿಗೆ ತಿಳಿಸಿಕೊಡಿ.

ತಮಿಳ್ ತಿರಳ್ ೮ - ೫

ವಾನ್ ಕೊಣ್ಡು ಕಿಳರ್‌ನ್ನೆಳುನ್ದ ಮಾಮುಹಿಲ್ ಹಾಳ್, ವೇಙ್ಗಡತ್ತು ತೇನ್ ಕೊಣ್ಡ ಮಲರ್ ಶಿದರ ತ್ತಿರಣ್ಡೇರಿ ಪೊಳಿವೀರ್‌ಹಾಳ್
ಊನ್ ಕೊಣ್ಡ ವಳ್ಳುಹಿರಾಲ್ ಇರಣಿಯನ್ನೈ ಉಡಲಿಡನ್ದಾನ್ ತಾನ್ ಕೊಣ್ಡ ಶರಿವಳ್ಳೆಹಳ್ ತರುಮಾಹಿಲ್ ಶಾತ್ತುಮಿನೇ

ಕನ್ನಡ ನೆರಳ್

ಬಾನ್ ಎಲ್ಲವ ಕೊಂಡೇ ಬೆಳೆದೇಳ್ ಮಾಮುಗಿಲ್‌ಗಳಿರಾ! ವೇಂಕಟದಿ
ಜೇನ್ ತುಂಬ್ ಮಲರ್ ಚೆದುರುವೊಲ್ ಒಗ್ಗೂಡೇರಿ ಹುಯ್ ಮಳೆಗಳಿರಾ!
ಮೈಗೊಳ್ ಕೂರ್ ಉಗುರಿಂ ಹಿರಣಿಯನೊಡಲ್ ಸೀಳ್ದೆಡೆದವನು
ತಾನ್‌ಕೊಂಡಾSSಚಾರ್ ಬಳೆಗಳ ತರುವವನಾದರೆ ತಾವ್ ಪೇಳಿರೆಲಾ

ಓರ್ವ ಆಚಾರ್ಯನಿಗೆ ಮಾತ್ರವಲ್ಲ. ಅಂಡಾಳ್ ಗುರುಸಮೂಹಕ್ಕೇ ವಿಜ್ಞಾಪಿಸಿಕೊಳ್ಳುತ್ತಿದ್ದಾಳೆ. ವಾನ್ = ಬಾನನ್ನೆಲ್ಲಾ ಕಬಳಿಸಿ! ಅಲ್ಲಿ ಮೋಡವಿಲ್ಲದ ಎಳ್ಳಷ್ಟೂ ಸ್ಥಳವಿಲ್ಲವೆಂಬ ಭಾವ. ಆಚಾರ್ಯರಾದವರು, "ಪರ್ಯುಪಾಸತೇ" ಎಂಬಂತೆ ಅನ್ಯೂನ ಪೂರ್ಣ ಬ್ರಹ್ಮಾನುಭವ ಸಂಪನ್ನರಲ್ಲವೋ! ಈ ದಾಸಿಯನ್ನು ತಿಮ್ಮಪ್ಪ ಬಿಟ್ಟಿರುವಾಗ ಅವರ ಪರಿಪೂರ್ಣ ಜ್ಞಾನಾನುಷ್ಠಾನ ಹೇಗಾದೀತು? ವಿಶ್ವಪತಿಯ ವಿಭೂತಿಯಲ್ಲಿ ನಾನೂ ಓರ್ವಳಷ್ಟೆ! ಕಿಳರ್‌ನ್ದು = ಕೆರಳಿ, ಎಳುನ್ದ = ಮೇಲೆದ್ದು ಚಿಮ್ಮುತ್ತಿರುವ ದಟ್ಟನ ಮುಗಿಲ್‌ಗಣಗಳೇ!

ಊನ್ ಕೊಣ್ಡ ಪರಿಪುಷ್ಟ, ಸುದೃಢ, ವಳ್‌ಉಹಿರಾಲ್ = ತೀಕ್ಷ್ಣವಾದ ಕೈ ಉಗುರುಗಳಿಂದಲೇ, ಇರಣಿಯನ್ನೈ = ಹಿರಣ್ಮಯ ಮಾಯಾ ಪ್ರತಿನಿಧಿಯಾದ ಹರಿನಾಮವನ್ನು ಕಿವಿಯಿಂದ ಕೇಳದಷ್ಟು - ಧನದೌಲತ್ ದರ್ಪಗಳಿಂದ ಕೊಬ್ಬಿದ್ದ ಹಿರಣ್ಯಕಶಿಪುವಿನ, ಉಡಲ್ = ದುರ್‌ಮಾಂಸಳವಾಗಿದ್ದ ಒಡಲನ್ನು ಮಾತ್ರ. ಇಡನ್ದಾನ್ = ಅತ್ಮನಿಂದ ಸುಲಿದು ಎಡೆದೇ ಹಾಕಿದ ಉಗ್ರನೃಸಿಂಹನು. ತಾನ್ ಕೊಂಡ ಶರಿವಳ್ಳೆಹಳ್ = ತಾನೇ ಅಪಹರಿಸಿರುವ, ಶರಿವಳ್ಳೆಹಳ್ = ನನ್ನ ಮುಂಗೈಯಲ್ಲಿ ನಿಲ್ಲದೆ ಸರಿದೇ ಹೋಗುತ್ತಿರುವ ಬಳೆಗಳನ್ನು ಅಷ್ಟೊಂದು ಕೃಶಳಾಗುತ್ತಿರುವ ನನ್ನನ್ನು ಅತನು ಬಂದಪ್ಪಿದರೆ, ನನ್ನ ಮೈ ಕೈ ಹೃಷ್ಟ ಪುಷ್ಟವಾಗಿ ಬಳೆ ಮುಂತಾದ ಅತನ ಭೋಗೋಪಕರಣಗಳು ನಷ್ಟವಾಗದಂತೆ ಹೀಗೆ, ತರುಮ್ ಆಹಿಲ್ = ಕಂಕಣತೊಡಿಸುವ ಇಚ್ಛೆ ಅತನಿಗೆ ಇದ್ದಲ್ಲಿ, ತರಲೇಬೇಕೆಂದು ನನ್ನ ಆಗ್ರಹವಿಲ್ಲ. ಇಲ್ಲೆಲ್ಲಾ, **"ದ್ವಯಮಂತ್ರದ, ಸಿದ್ಧೋಪಾಯನಿಷ್ಠೆ" ಹಾಗೂ ತನ್ನನ್ನು ಆತ ತನ್ನ "ಮುಖೋಲ್ಲಾಸಕ್ಕಾಗಿಯೇ ಸ್ವೀಕರಿಸಬೇಕೆಂಬ ಪರಾರ್ಥ ಕೈಂಕರ್ಯದ ಪ್ರಾರ್ಥನೆ"**ಯೂ ಸಮರಸಗೊಂಡಿರುವದನ್ನು ನಾವು ಗಮನಿಸಬಹುದು. ಶಾತ್ತುಮಿನೇ = ನೀವು ಹೋಗಿ ಆ ತಿಮ್ಮಪ್ಪನಿಗೆ ಮನಗಾಣಿಸಿ ಕೊಡಿ. ಒಂದು ತೀರ್ಮಾನ ಗೈದೇ ಬಿಡಿ! ಸಕಲ ಲೋಕೋಜ್ಜೀವನವೇ ಗುರು-ದೇವರ ಛಂದ ಹಾಗೂ ಅನುಕಲ್ಪಗಳಾಗಿರುವುದರಿಂದ, ಓ ಸದಾಚಾರ್ಯ ಮಾಲಾ ಸಂಪನ್ನರೇ ನೀವು ಮುನ್‌ಚೂಣಿಯಲ್ಲಿ ಮುಖ್ಯಸ್ಥರಾದರೆ, ಅತ ನಿಮ್ಮನ್ನೇ ಅನುಸರಿಸಿ "ಅನುಕಲ್ಪ"ನಾಗುವನು.

ತಮಿಳ್ ತಿರಳ್ ೮-೬

ಶಲಜ್ಜೊಣ್ಡು ಕಿಳರ್‌ನ್ದೆಳುನ್ದ ತಣ್ ಮುಹಿಲ್‌ಹಾಳ್! ಮಾ ವಲಿಯೈ ನಿಲಜ್ಗೊಣ್ಡಾನ್ ವೇಙ್ಗಡತ್ತೇ ನಿರನ್ದೇರಿ ಪ್ಪೊಳಿವೀರ್‌ಹಾಳ್
ಉಲಜ್ಗುಣ್ಡ ವಿಳಙ್ಗನಿ ಪೋಲ್ ಉಳ್ ಮೆಲಿಯ ಪ್ಪುಹುನ್ದೆನ್ನೈ ನಲಜ್ಕೊಣ್ಡ ನಾರಣರ್‌ಕ್ಕು ಎನ್ ಅಡಲೈ ನೋಯ್ ಶೆಪ್ಪುಮಿನೇ

ಕನ್ನಡ ನೆರಳ್

ಜಲವನು ಕೊಂಡೇ, ಕಳೆಗೊಂಡೆದ್ದಿಹ ಮಾಮುಗಿಲ್‌ಗಳಿರಾ ವೇಂಕಟದಿ
ನಲವನು ದೋಚಿದ ವೇಂಕಟದೊಳೆ ತುಂಬುತಲೇರಿ ಮಳೆಸುರಿಸುವರೇ
ಘನಕೇಟಗಳ್ ಒಳಗಡಗುಂಡು (ನಿಸ್ಸಾರದ) ಬೇಲದತೆರ ಒಳಗನು ಕುಂದಿಸಿ ಒಳಹೊಕ್ಕೆನ್ನ
ಪೆಣ್‌ತನವಳಿಸಿದ ನಾರಣರ್‌ಗೆನ್ ದುಗುಡದ ನೋವನು ಒರೆಯಿರೆಲಾ

ಶಲಮ್ = ಸಮುದ್ರದಿಂದ ಉಪ್ಪುನೀರನ್ನು, ಕೊಣ್ಡು = ಮೊಗೆದುಕೊಂಡು, ಕಿಳರ್ನ್ದು = ಬಾಷ್ಪ ಜ್ಯೋತಿ ಸ್ಸಲಿಲ ಮರುತ್ತುಗಳ ಸಂಯೋಜನೆ ಹಾಗೂ ವಿಲಕ್ಷಣ ಸಂಘರ್ಷದಿಂದ ಪ್ರಕಾಶಮಾನವಾಗಿ, ಉಪ್ಪಿನಭಾಗ ಕಳೆದು. ಎಳುನ್ದ = ಸಿಹಿನೀರಿಂದ ಹಗುರವಾಗಲು ಮೇಲಕ್ಕೆದ್ದ, ತಣ್ ಮುಗಿಲ್ ಹಾಳ್ = ತಂಪಿನ ವಾತಾವರಣವನ್ನು ಆಕಾಶಕ್ಕೆಲ್ಲಾ ಕಲ್ಪಿಸುವ, ತಣ್ಣೀರ್ ಸುರಿಸುವ ಮುಗಿಲುಗಳ ಮಹಾ ಮಹಾ ಮಂಡಲಗಳೇ! ಮಾವಲಿಯೈ = ಔದಾರ್ಯಗುಣದಿಂದ ಮಹಾನ್ ಅದ ಬಲಿ ಚಕ್ರವರ್ತಿಯನ್ನೂ ಕೇಳಿ. ನಿಲಮ್ ಕೊಣ್ಡಾನ್ = ದಾನರೂಪದಲ್ಲಿಯೇ ಅವನ ಗುಣವೂ ಲೋಕಕ್ಕೆಲ್ಲಾ ಪ್ರಕಾಶವಾಗುವಂತೆಯೇ, ಪೂರಾಲೋಕವನ್ನೇ ಹರಗಿ ತನ್ನದನ್ನಾಗಿದ್ದುದನ್ನೇ ಮತ್ತೆ ತನ್ನದಾಗಿಸಿಕೊಂಡ ಸರ್ವಲೋಕೇಶ್ವರನಿಗೇ ಸೇರಿದ, ವೇಙ್ಗಡತ್ತೇ = ದೇವರ ಒಡೆತನಕ್ಕೇ ವ್ಯಾವಹಾರಿಕವಾಗಿಯೂ ಭೂಮಿ ಸಂದುದರಿಂದ ಪಾಪಾಪಹಾರಿಯಾದ ಶ್ರೀ ವೇಂಕಟಾSಚಲದಲ್ಲೇ, ನಿರನ್ದು = ಅಗಲವಾಗಿ ಹರಗಿ, ಏರಿ = ಎತ್ತರಕ್ಕೇರಿ, ಪೊಳಿವೀರ್ ಹಾಳ್ = ಒಳ್ಳೆಯ ಸ್ವಚ್ಛ ಸಿಹಿನೀರನ್ನು ಧಾರಾಕಾರವಾಗಿ ಹುಯ್ಯುವುವರೇ! ನೀವಿಷ್ಟೆಲ್ಲಾ ಪರಾರ್ಥವಾಗಿಯೇ ಸಾಹಸ ಪಟ್ಟು ಉಪ್ಪಿನ ಭಾಗವನ್ನು ನುಂಗಿ ಮಧುರ ತೀರ್ಥವನ್ನೇ ಸುರಿಸುವಾಗ. ಉಲಙ್ಗು = ದಪ್ಪ ಸೊಳ್ಳೆಗಳು, ಉಂಡ = ಒಳಗೇ ಉತ್ಪತ್ತಿಯಾಗಿ ತಿನ್ನುವ, ವಿಳಙ್ಗಿನಿ ಪೋಲ್ = ಬೇಲದ ಹಣ್ಣಿನಂತೆ, ಉಳ್ ಮೆಲಿಯ = ಯಾರಿಗೂ ಹೊರನೋಟಕ್ಕೆ ಕಾಣದಂತೆ ಒಳಗುದಿ ಹಿಂಸೆ ನೀಡುತ್ತಾ.

ಎನ್ನೈಪುಹುನ್ದು = ನನ್ನ ಮನಸ್ಸಿನೊಳಗೂ ಹೊಕ್ಕು, ನಲಮ್ ಕೊಣ್ಡ = ನನ್ನ ವಿವೇಕವನ್ನೇ ಅಪಹರಿಸಿದ, ನಾರಣರ್ಕ್ಕು = ಒಳಗಿನಿಂದ ಸರ್ವಾಂತರ್ಯಾಮಿಯೂ ಹೊರಗಿನಿಂದ ಸರ್ವಾSSಧಾರನೂ ಹಾಗೂ ಸಕಲ ಕಲ್ಯಾಣಗುಣ ಪೂರ್ಣನೂ ಅದ ಪಾವನ ಸುಂದರ ದಿವ್ಯ ಮಂಗಳ ವಿಗ್ರಹವಾಂತ, ಸರ್ವಕಾರಣನೂ, ಸರ್ವರಕ್ಷಕನೂ ಅದವನಿಗೆ, ಎನ್ನಡಲೈನೋಯ್ = ಎನ್ನೀ ಕಟಪಟೆ ಪಡಿಸುತ್ತಿರುವ ಭಗವದ್ ವಿಶ್ಲೇಷಜನ್ಯ ವಿರಹವ್ಯಾಧಿಯನ್ನು, ಶೆಪ್ಪುಮಿನ್ = "ವಾಚಾ ಧರ್ಮಮವಾಪ್ನುಹಿ" ಎಂಬಂತೆ, ಸ್ವಾಮಿ ಅಲಿಸಿ ಕೇಳುವಂತೆ, ನಿಮಗೂ ನನಗೂ ಅತನಿಗೂ ಸ್ವಸ್ವರೂಪಲಾಭವಾಗುವಂತೆ ಹೇಳಿ. ಅತನಿಗೂ ಒಂದು ಸೇವಕಿ, ನನಗೂ ಪ್ರಾಣ, ನಿಮ್ಮ ಸ್ವಭಾವಕ್ಕೂ ಸಾರ್ಥಕ್ಯ! ಹೀಗೆ ಸರ್ವೋದಯವೇ ಆಗುತ್ತದೆ.

ತಮಿಳ್ ತಿರಳ್ ೮-೭

ಶಙ್ಗಮಾ ಕಡಲ್ ಕಡೈನ್ದಾನ್ ತಣ್‌ಮುಹಿಲ್ ಹಾಳ್ ವೇಙ್ಗಡತ್ತು ಶೆಙ್ಗಣ್ ಮಾಲ್ ಶೇವಡಿಕ್ಕೀಳ್, ಅಡಿವೀಳ್ಚಿ ವಿಣ್ಣಪ್ಪಮ್
ಕೊಙ್ಗೈ ಮೇಲ್ ಕುಙ್ಕುಮತ್ತಿನ್ ಕ್ಕುಳಮ್ಬಳಿಯ ಪ್ಪುಹುನ್ದೊರುನಾಳ್ ತಙ್ಗು ಮೇಲ್ ಎನ್ನಾವಿ ತಙ್ಗುಮೆನ್ನುರೈಯೀರೇ

ಕನ್ನಡ ನೆರಳ್

ಶಂಕಗಳಾSSಕರ ಮಾಗಡಲ್ ಕಡೆದವನಾ ತಣ್ ಮುಗಿಲ್‌ಗಳೇ ಶ್ರೀ ವೇಂಕಟದಿ
ಕೆಂಗಣ್ ಸ್ವಾಮಿಯ ಕೆಂದಡಿ ಕೀಳ್ ಅಡಿಬೀಳ್ ದಾಸಿಯ ಬಿನ್ನಪವೈ
ಕೊಂಗೆಗಳೆರಡರ ಮೇಲಿಹ ಕೇಸರಿ ಕರ್ದಮ ವಳಿಯುವೊಲ್ ಓರ್ ದಿನ ಮಾದರೂ
ತಂಗುವುದಾದರೆ, ಎನ್ ಪ್ರಾಣವೂ ತಂಗುವುದೆಂದಿಪ್ಪನೆ ಹೇಳಿರೆಲಾ!

ಶಙ್ಗಮ್ = ನಾನಾ ಜಾತಿಯ ನಾನಾ ಆಕಾರದ ಶಂಖಗಳು ಬೆಳ್ಳಂ ಬೆಳಗುತ್ತಾ ತುಂಬಿರುವ, ಮಾ ಕಡಲ್ = ವಿಶಾಲವಾದ ಹಾಲ್ಗಡಲನ್ನೇ. ಕಡೈನ್ದಾನ್ = ಕಡೆದು, ಅತ್ತ ದೇವತೆಗಳಿಗೆ ಮರಣವನ್ನು ದೂರ ತಳ್ಳಿ, ಅವರನ್ನು ಚಿರಂಜೀವಿಗಳನ್ನಾಗಿಸಿ, ಇತ್ತ ತಾನು ಅನುರೂಪಳಾದ ದಿವ್ಯ ಮಹಿಷಿ ಮಹಾಲಕ್ಷ್ಮಿಯನ್ನು, ಪಡೆದವನ, ಅಳ್ವಿಕೆಗೆ ಸೇರಿದ. ವೇಙ್ಗಡತ್ತು = ದಿವ್ಯ ನವ್ಯ ದಂಪತಿಗಳಿಗೆ ಭವ್ಯಸ್ಥಾನವಾದ ತಿರುಮಲೆಯಲ್ಲಿ ಸಾನ್ನಿಧ್ಯ ಭಾಗ್ಯವಿತ್ತಿರುವ, ಓ ಮುಹಿಲ್ ಹಾಳ್! ಇಷ್ಟೇ ನನ್ನ ಬಿನ್ನಪ. ನಾನೆಂಥವಳು? ಶೆಮ್ ಕಣ್ ಮಾಲ್ = ತನ್ನ ವಾತ್ಸಲ್ಯಾSSರಕ್ತ ನಯನಗಳಿಂದ ನನ್ನನ್ನೂ ಮುಗ್ಧಗೊಳಿಸಿರುವ ಪುಂಡರೀಕಾಕ್ಷನ, ಶೇ ಅಡಿಕ್ಕೀಳ್ = ಕೆಂದಾವರೆ ಪಾದಗಳ ಕೆಳಗೆ, ಅಡಿವೀಳ್ಚ್ಚಿ = ಅಡ್ಡಬಿದ್ದಿರುವ ದಾಸಿ! ಅಂತಹವಳು ನಿಮ್ಮ ಮೂಲಕವೇ ಈ ಮೇಘದೌತ್ಯದಿಂದಲೇ ಅಂದರೆ ಆಚಾರ್ಯರ ಮೂಲಕವೇ ಗೈಯ್ಯುತ್ತಿರುವ ವಿನಮ್ರ ವಿಜ್ಞಾಪನೆಯಿದು.

ನಿತ್ಯವೂ ಆಗಲೇಬೇಕೆಂಬ ಸ್ವಾSSಗ್ರಹವನ್ನೂ ನಾ ನಿಟ್ಟಿಲ್ಲ, ಒರುನಾಳ್ = ಒಂದೇ ದಿನದ ಮಟ್ಟಿಗಾದರೂ, ಕೊಙ್ಗೈಮೇಲ್ = ಅವನಿಗಾಗಿಯೇ ಈ ನನ್ನ ಎದೆಗಳ ಮೇಲೆಲ್ಲಾ, ಕುಙ್ಕುಮತ್ತಿನ್ ಕುಳಮ್ಬು = ಕಾಶ್ಮೀರದ ಶುದ್ಧ ಕೇಸರಿಯರೆದು ಲೇಪಹಾಕಿಕೊಂಡು, ಶೃಂಗರಿಸಿರುವ ಈ ಸುಗಂಧ ಕರ್ದಮವನ್ನು, ಅಳಿಯ = ಸ್ವಾಮಿ ತನ್ನ ಸಂತೋಷಕ್ಕಾಗಿ ಭೋಗಿಸಿ ಹೊರಳಾಡಿ, ಮರ್ದಿಸಿ ಎಲ್ಲವೂ

ಅಳಿಯುವಂತೆ, ಪುಹುನ್ದು = ನನ್ನ ಬಳಿ ಹೊಕ್ಕಿದ್ದು, ತಜ್ಗುಮ್ ಏಲ್ = ನನ್ನೆದೆ ಮೇಲೆ ತಂಗಿದ್ದೇ ಆದರೆ, ಎನ್ ಆವಿ ತಜ್ಗುಮ್ = ನನ್ನ ಪ್ರಾಣ, ಈ ಆತ್ಮ ನಿಲ್ಲುವುದು! ಇಲ್ಲದಿದ್ದರಿಲ್ಲ. ಎನ್ನು = ಇಷ್ಟನ್ನು ಮಾತ್ರ, ಉರೈ ಯೀರೇ = ತಾವು ಬಾಯ್‌ಬಿಟ್ಟು ತಿಮ್ಮಪ್ಪನಿಗೆ ಹೇಳಿರಿ. ಮೇಘಗಳಿಗೂ ಚೈತನ್ಯ ಶಕ್ತಿಯನ್ನು ಅಂಡಾಳ್ ತುಂಬಿ ಕೊಡುತ್ತಾಳೆ. ಅಚೇತನವೂ ಈಕೆಯ ಹಾಗೂ ವೇಂಕಟೇಶನ ವತಿಯಿಂದ ಕೆಲಸಮಾಡಿ ಕೊಡುವಂತೆ ಬೇಡಿಕೊಳ್ಳುವಷ್ಟು ದಯನೀಯ ಸ್ಥಿತಿ! ಸೀತಾ ರಾಮರ ಕೆಲಸಕ್ಕೆ ವಾನರೋತ್ತಮ ದೂತನಾಗಿದ್ದ. ಕೌರವ ಪಾಂಡವರ ಕೆಲಸಕ್ಕೆ ಪರಮಾತ್ಮನೇ ದೂತನಾಗಿದ್ದ. **"ಶ್ರೀ ರಾಮಾಯಣ ವಾನರ ಜಾತಿಗೇ ಗೌರವ ತಂದಿತು. ಜಡ ಮೋಡಗಳಿಗೆ ಈಗೋದಾದೇವಿಯಿಂದ ಗೌರವ ಸಂದಿತು!"**

ತಮಿಳ್ ತಿರಳ್ ೮-೮

ಕಾರ್‌ಕಾಲತ್ತೆಳು ಹಿನ್ನ ಕಾರ್ ಮುಹಿಲ್‌ಹಾಳ್ ವೇಜ್ಗಡತ್ತು ಪೋರ್ ಕಾಲತ್ತೆಳುನ್ದರುಳಿ ಪೊರುದವನಾರ್ ಪೇರ್ ಶೊಲ್ಲಿ
ನೀರ್ ಕಾಲತ್ತೆರುಕ್ಕಿನಮ್ ಪಳ ವಿಲೈ ಪೋಲ್ ವೀಳ್‌ವೇನೈ ವಾರ್‌ಕಾಲತ್ತೊರು ನಾಳ್ ತಮ್ ವಾಶಹಮ್ ತಂದರುಳಾರೇ!

ಕನ್ನಡ ನೆರಳ್

ಕಾರ್‌ಗಾಲದಿ ಕಾಣಿಪ ಕಾರ್‌ಮುಗಿಲುಗಳೇ! ವೇಂಕಟದಿ ಹೋರ್‌ಗಾಲದಿ ಎದ್ದರುಳ್‌ಗೈದು ರಿಪುಗಳ ನಳಿಸಿದನ್ ನಾಮವ ಹೇಳಿ
ನೀರ್‌ಗಾಲದೊಳ್ ಉದುರುವ ಎಕ್ಕದ ಹಳೆಯೆಲೆಗಳ್ ತೆರ ಬೀಳುವ ಎನಗೆ ನೀಳ್ ಗಾಲದವೊಂದಿನ ಅವರಾ ಮಾತನು ತಂದರುಳದೆ ಹೋಗುವಿರಾ?

ಈ ಅಷ್ಟಮ ಗಾಥೆಯಲ್ಲಿ ಗೋದೆಯ ಬೇಡಿಕೆ, ಪ್ರಶ್ನೆಯ ರೂಪಕ್ಕೆ ತಿರುಗುತ್ತದೆ. ಯಾರನ್ನೂ ಬಲಾತ್ಕಾರ ಮಾಡಬಾರದೆಂಬ ನಿರಾಗ್ರಹ ವೃತ್ತಿ ಶರಣರ ಪರಮ ಅಹಿಂಸಾಗುಣ. ಪಾರತಂತ್ರ್ಯವೇ ಅವರ ಮುಖ್ಯ ಸ್ವರೂಪ! ಮೋಡಗಳ ಇಚ್ಛೆಗೇ ಬಿಡುವಷ್ಟು ಶೂನ್ಯ ನಿರಹಂಭಾವ!

ವೇಜ್ಗಡತ್ತು = ತಿಮ್ಮಪ್ಪನ ಕ್ಷೇತ್ರ ಸಂಬಂಧವಿಲ್ಲದ ಕೇವಲ ಮೇಘಗಳಲ್ಲ ಈಕೆಯ ರಾಯಭಾರಿಗಳು. ಭಗವತ್ ಸಂಬಂಧಿಗಳಾಗಿಯೇ ಆಚಾರ್ಯರೂ ಘಟಕರು, ಸಾಪೇಕ್ಷ ಸಿದ್ಧಾನ್ತವೇ ವೈಜ್ಞಾನಿಕ. ಯಾವೊಂದನ್ನೂ ಯಾರೋರ್ವರನ್ನೂ ಬಿಟ್ಟು ಪಕ್ಷನೀತಿ ಶರಣರದಲ್ಲ. ಬಹುಮತವೂ ಶರಣ ಪಂಥವಲ್ಲ. ಸರ್ವಸಂಮತಿ ಸರ್ವರ ಸಹಭಾಗಿತ್ವ ಶರಣರ ಸ್ಥಾಯೀಭಾವ! ತಿರುಪತಿ ಕ್ಷೇತ್ರವಾಸದಿಂದ ಭಾಗ್ಯಶಾಲಿಗಳಾದ, ಕಾರ್‌ಕಾಲತ್ತು = ಮಳೆಗಾಲದಲ್ಲಿ, ಎಳುಹಿನ್ನ = ಆಕಾಶದಲ್ಲಿ ಸ್ವಾಭಾವಿಕವಾಗಿಯೇ ಮೇಲೆದ್ದು ತೋರಿಕೊಳ್ಳುವ, ಕಾರ್ ಮುಹಿಲ್‌ಹಾಳ್ = ಕಾರ್ ಮೋಡಗಳೇ!

ರಾಮನಾಮ ಹೇಳುತ್ತಾ ನಾನು ಸಾಯುವುದಕ್ಕಿಂತ ಮುಂಚೆ ತಿಮ್ಮಪ್ಪನ ಕಡೆಯಿಂದ "ಉಂಟು, ಇಲ್ಲ" ಏನಾದರೊಂದು ಖಚಿತವಾದುದನ್ನು ತಾವುಗಳು ತರಬಾರದೇ! ಇನ್ನು ತಮ್ಮ ಚಿತ್ತ. ಪೋರ್ ಕಾಲತ್ತು = ಲಂಕಾಯುದ್ಧ ಸಮಯದಲ್ಲಿ, ಎಳುನ್ದರುಳಿ = ಎದ್ದು ಯುದ್ಧೋನ್ಮುಖವಾಗಿ ಕೃಪೆಗೈದು. ಪರಮಾತ್ಮನ ಸಂಕಲ್ಪಕ್ಕೆ ಬರುವ ಹಿಂಸೆ ಚೇತನರ ಒಳಿತಿಗಾಗಿಯೇ! ರಾಗದ್ವೇಷಗಳಿಂದ ಪ್ರೇರಿತರಾದ ನಮ್ಮ ಕದನಗಳು, ಇನ್ನೂ ವಿನಾಶಕ! ಮಾನವನಿಗೆ ಯುದ್ಧದ ಅಧಿಕಾರವೇ ಇಲ್ಲ. ಇದೇಯಥಾರ್ಥವೇದವೇದಾನ್ತ ಶರಣ ವಿಜ್ಞಾನ, ರಾಮರಾವಣ ಹಾಗೂ ಕೌರವ ಪಾಂಡವರ ಯುದ್ಧಗಳ ಉದಾಹರಣೆ ಈ ಕಲಿಯುಗಕ್ಕಂತೂ ಧರ್ಮಸಂತಮವಲ್ಲ. ಯುದ್ಧ ಬೇಡವೆಂಬುದೇ ಅವುಗಳ ಫಲಿತಾರ್ಥ.

ಪೊರುದವನಾರ್ = ವಿಜಯಿ ಕೋದಂಡರಾಮನ, ಪೇರ್ ಶೊಲ್ಲಿ = ಹೆಸರು ಹೇಳಿ. ಆಂಜನೇಯನಿಗೆ, ಸೀತಾರಾಮರ ಮಿಥುನ ಸೇವೆ ಸಿಕ್ಕಿದಂತೆ ಈ ದಾಸಿಗೂ ಆದೀತೋ! ನೀರ್ ಕಾಲತ್ತು = ವರ್ಷಾಕಾಲದ, ಎರುಕ್ಕಿನಮ್ = ಎಕ್ಕದ ಗಿಡದ, ಪಳ ವಿಲೈ ಪೋಲ್ = ಕಳಿತೆಲೆ, ಗಿಡದಿಂದ ಬೀಳುವಂತೆ, ವೀಳ್ ವೇನೈ = ಇದೋ ಉದುರುವ ಸನ್ನಿವೇಶದ ಈಕೆ ನಿಷ್ಪ್ರಾಣಳಾಗುವ ತಾಕೀತು, ಈ ದಾರುಣಸ್ಥಿತಿ ಮುಟ್ಟಿರುವ ನನ್ನನ್ನು ಕುರಿತು ಸ್ವಾಮಿ ಬರುವುದುಂಟೇ ಇಲ್ಲವೇ? ಅವನನ್ನು ಸಂಧಿಸಿ ನೀವಾದರೂ ಒಂದು ಖಚಿತವಾದ ಮಾತನ್ನು ಅವನಿಂದ ತರುವಿರೋ ಇಲ್ಲವೋ! ನಾನರಿಯೆ. ವಾರ್ ಕಾಲತ್ತು = ಈ ಜೀವ ಇರುವಾಗಲೇ, ಒರುನಾಳ್ = ಒಂದೇ ಸಲ ಸಾಕು! ತಮ್ ವಾಶಹಮ್ = ಪ್ರಧಾನನಾದ ಆತನ ಸಂದೇಶವನ್ನು, ತಂದರುಳಾರೇ = ನೀವು ನನ್ನೆಡೆ ತಂದೊಯ್ದು ಕೃಪೆ ಗೈಯ್ಯುವುದಿಲ್ಲವೇ?

ತಮಿಳ್ ತಿರಳ್ ೮-೯

ಮದಯಾನೈ ಪೋಲ್ ಎಳುನ್ದ ಮಾಮುಹಿಲ್‌ಹಾಳ್! ವೇಙ್ಗಡತ್ತು ಪದಿಯಾಹ ವಾಳ್‌ವೀರ್‌ಹಾಳ್! ಪಾಮ್ಬಣೈಯಾನ್ ವಾರ್ತೈಯೆನ್ನೇ ಕದಿಯೆನ್ನುಮ್ ತಾನಾವಾನ್ ಕರುದಾದು ಓರ್ ಪೆಣ್ ಕೊಡಿಯೈ ವದೈ ಶೆಯ್‌ದಾನ್ ಎನ್ನುಮ್ ಶೊಲ್ ವೈಯ್ಯ ಹತ್ತಾರ್ ಮದಿಯಾರೇ

ಕನ್ನಡ ನೆರಳ್

ಮದ್ದಾನೆಯ ತೆರವೆದ್ದಿಹ ಓ! ಮಾಮುಗಿಲ್‌ಗಳೇ! ವೇಂಕಟವ ಗದ್ದಿಗೆಯಾಗಿಸಿ ಬಾಳುವರೇ! ಹಾವ್‌ಹಾಸಿಗೆಯನ ವಾರ್ತೆಯು ಏನಾಯ್ತೈ? ಗತಿಯೆಂದೆಂದೇ ತಾನ್ ಎಂಬುದ ನೆನೆಯದೆ ಓರ್ ಪೆಣ್ ಬಳ್ಳಿಯ ವಧೆಗೈದನು ಎಂಬುವ ಪಳಿಯಂ ಜಗಜಂಗುಳಿ ನೆನೆದಾಡದೆ ಇಹುದೇ?

ವೇಙ್ಗಡತ್ತೈ = ವೇಂಕಟಾದ್ರಿಯನ್ನು ಪದಿಯಾಹ = ಕೊನೆಗೆ ಸೇರಿ ನಿಲ್ಲುವ ಪ್ರಾಪ್ಯವೆಂದೂ ಸೇರಿಸಿಕೊಡುವ ಪ್ರಾಪಕಸ್ಥಾನವೆಂದೂ ತಿಳಿದಿರುವ ಮಹಾನ್ ಮೇಘಗಳೇ! ಸಿದ್ಧೋಪಾಯನಾದ ತಿಮ್ಮಪ್ಪನಿಗೂ ಆಶ್ರಯ ನೀಡಿ, ಆತ ಉಹನ್ದು ಅರುಳಿನ ನಿಲಂ ಈ ತಿರುಮಲೆ! ಶರಣರು ಭೌಗೋಳಿಕ ಸಂಬಂಧವನ್ನೂ "ಅಧ್ಯಾತ್ಮೀಕರಣ" ಮಾಡುತ್ತಾರೆ. ವಾಳ್‌ವೀರ್‌ಹಾಳ್ = ಇಹ ಪರಉಭಯ ಜೀವನ ಉಜ್ಜೀವನ ಮಾಡಿಕೊಳ್ಳುತ್ತಿರುವ, ಮಾಮುಹಿಲ್‌ಹಾಳ್ = ನೀವೇ ಮಹಾ ಧನ್ಯ ಜೀವಿಗಳು. ನೀವು ಮತ್ತೂ ಎಂತಹವರು? ಮದಯಾನೈ ಪೋಲ್ ಎಳುನ್ದ = ಮುಮ್ಮದವೇರಿರುವ ಆನೆಯಂತೆ, ಎರಡು ಕಪೋಲಸ್ಥಳಗಳಲ್ಲೂ ಮತ್ತು ಜನನೇಂದ್ರಿಯದಲ್ಲೂ ಮದ ಸ್ರವಿಸುವುದು ಋತುಧರ್ಮದಂತೆ ಗಜ ಸ್ವಭಾವ. ಅಂತಹ ಹತೋಟಿಯಿಲ್ಲದ ಸಮಯದಲ್ಲೂ "ಚರಮ ಆಧ್ಯಾತ್ಮಿಕದ ಅರಿವು" ತಿಳಿಯಾಗಿರುವುದೇ ಈ ಕ್ಷೇತ್ರ ಮಹಿಮೆಗೆ ಸಾಕ್ಷಿ. ಅಹಂ ಮಮ ಮತ್ತನಾದ ಮಾನವನೂ ಒಂದು ದಿನಕ್ಕೆ ಇದೇ ಜನ್ಮದಲ್ಲಿ "ಅಧ್ಯಾತ್ಮದ ಶಿಖರ" ಮುಟ್ಟಿಯೇ ಮುಟ್ಟುತ್ತಾನೆ! "ಕಲೌ ವೇಂಕಟನಾಯಕಃ" ಸತ್ಯವಾಗದಿರದು!

"ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ!"

ಇಂತಹ ಮದ್ದಾನೆಯಂತೆ, ಮೇಲ್ ಎಳುನ್ದ = ಮೇಲೆದ್ದು ಮಳೆಯ ರಂಪಮಾಡುವವರು ನೀವು ಹೇಗೋ ಆ ಕ್ಷೇತ್ರಪತಿಯಾದವನೂ ನನ್ನ ಮೇಲೆ ದಯಾವರ್ಷ ವರ್ಷಿಸದೆ ರಂಪ ಮಾಡುತ್ತಿದ್ದಾನಲ್ಲಾ! ಆತನೋ ಸರ್ವರ ರಕ್ಷಣೆಗಾಗಿಯೇ, ಪಾಮ್ಬು ಅಣೈಯಾನ್ = ಈ ಗಿರಿರೂಪಿ ಶೇಷ ಶಾಯಿಯಾಗಿಯೂ ಆ ಕ್ಷೀರ ಸಮುದ್ರದಲ್ಲೂ ಇದ್ದು ಜಗದ್ ರಕ್ಷಾ ಚಿಂತನೋಪಾಯಗಳನ್ನು ತನ್ನ ಸತಿ ಲಕ್ಷ್ಮಿಯೊಂದಿಗೆ ಮತ್ತು ಅವಳನ್ನು ಬಿಟ್ಟು ಏಕಾಂತವಾಗಿಯೂ ಸಂಶೋಧಿಸುವವ. ಸರ್ವೇಶ್ವರನ ರಕ್ಷಣಾ ಮಾಧ್ಯಮಗಳೂ ಪರಿಸ್ಥಿತಿಗೆ ಅನುಸಾರವಾಗಿ ಭಿನ್ನ ಭಿನ್ನಗಳಾಗಿರುತ್ತವೆ. ಉಪಾಸಕರಿದನ್ನು ಗಮನಿಸಿ, ಸ್ವಾSSಗ್ರಹಗಳನ್ನು ಸಂಯಮಿಸಿಕೊಳ್ಳಬೇಕು. ಆಗ ವೇದಮಾರ್ಗವು ಟೀಕೆಗೆ ನಿಂದೆಗೆ ಗುರಿಯಾಗದು. **ಸ್ವಸ್ವೋಪಾಸನಾನಿಷ್ಠೆ ಬೇಕೇಬೇಕು. ಅಷ್ಟೇ ಎಂಬ ಹಠ ಇತರರ ಬಗ್ಗೆ ಬೇಡವೆಂಬುದೇ ಇಲ್ಲಿನ ತಾರಕಾಂಶ.**

ಈ ಉಪಾಯಚಿಂತನೆಗೆ "ಯೋಗನಿದ್ರೆ" ಎಂಬ ಪರಿಭಾಷೆ. ಅಂತಹವನು ಕೃಷ್ಣಾವತಾರದಲ್ಲಿ ಜಗದ್‌ಗುರುವಾಗಿ, ಆಡಿದ ವಾರ್ತೈ = ಅರ್ಜುನನ ನಿಮಿತ್ತದಿಂದ ಏನೊಂದು ಚರಮ ಸಾಧನ ವಚನ ನೀಡಿದನೋ "ಮಾಶುಚಃ" ಎಂಬ ಆ ವಚನವೂ, ಎನ್ನೇ = ಈಗ ನನ್ನೆಡೆ ಹುಸಿಯಾಯಿತಲ್ಲಾ! ಹೀಗಾಗಬಹುದೇ? ಕ್ಷೇತ್ರಕ್ಕಾಗಲಿ ಕ್ಷೇತ್ರವಾಸಿಗಳಾದ ನಿಮಗಾಗಲಿ, ರಕ್ಷಣೆಯ ವಾಗ್ದಾನ ನೀಡಿರುವ ಶೇಷಶಾಯಿ, ಶೇಷಾ ಚಲವಾಸಿ ತಿಮ್ಮಪ್ಪನಿಗಾಗಲಿ ಇದು ಶೋಭೆ ತಂದೀತೇ! ಮಾತು ಕೊಟ್ಟಿದ್ದೇನು? "ಕದಿ ಎನ್ನುಮ್ ತಾನ್ ಆವಾನ್" ಎಂದೆಂದಿಗೂ ಅನಿಷ್ಟನಿವಾರಿಸಿ ಇಷ್ಟ ತರುವ ಪರಮ ಇಷ್ಟದೇವತೆ ನಾನೇ! ನಾನೇ ಪರಮಧರ್ಮ!

"ಅಹಂ ತ್ವಾ ಸರ್ವಪಾಪೇಭ್ಯಃ ಮೋಕ್ಷಯಿಷ್ಯಾಮಿ"

ಅದಕ್ಕೂ ಮೇಲೆ "ಮಾಮೇವ ಏಷ್ಯಸಿ", ಈ ಸ್ವವಚನಭ್ರಷ್ಟತೆಯನ್ನೂ, ಕರುದಾದು = ನೆನೆಯದೆ, ಮರೆತು ಮತ್ತನಾಗಿರುವುದರಿಂದ ನನಗಾಗುವ ಸ್ವರೂಪನಾಶವಿರಲಿ, ವೈಯ್ಯಹತ್ತಾರ್ = ಜಗದ್‌ವಾಸಿಗಳಾದವರೆಲ್ಲಾ, ಓರ್‌ಪೆಣ್ ಕೊಡಿಯೈ = ಒಂದು ದುರ್ಬಲ ಬಳ್ಳಿಯನ್ನು - ಶ್ರೀಗೋದಾವಲ್ಲಿ- ಯನ್ನು, ವದೈ ಶೆಯ್‌ದಾನ್ = ವಧೆಗೈದನು ನರಹತ್ಯೆ, ಬ್ರಹ್ಮಜ್ಞಾನಿಯಾದವನ ಹತ್ಯೆಗಿಂತ "ಸ್ತ್ರೀ ಹತ್ಯೆ" ಬಲು ಘೋರ ತಮವಲ್ಲವೇ? ಎನ್ನುಮ್ = ಹೀಗೆಲ್ಲಾ ನ್ಯಾಯವಾಗಿಯೇ, ಮದಿಯಾರೇ = ತಿಳಿದೇ ಮಾತಾಡಿಕೊಳ್ಳದಿರುವರೇ? ಯಾವುದಕ್ಕೆ ಹೆದರದಿದ್ದರೂ ಲೋಕಾಪವಾದಕ್ಕೆ ಎಂತಹವರೂ ತಲೆಬಾಗಬೇಕಲ್ಲವೇ? ನಿಜ, ಹಾವಿಗೆ ಎರಡು ನಾಲಿಗೆ! ಅದರ ಮೇಲೆ ಮಲಗಿ ಮಲಗಿ ಈ ಶೇಷಗಿರಿಸ್ವಾಮಿಗೂ ಎರಡು ನಾಲಿಗೆ ಸಂಕ್ರಮಿಸಿತೇನೋ! ಪಾಮ್‌ಬಣೈಯಾನ್ ವಾರ್ತೈ!

ತಮಿಳ್ ತಿರಳ್ ೮-೧೦

നാഹത്തിന് അണ്യൈയാന്യൈ നല്നുദലാള് നയന്നുരൈ ശെയ് മേഹത്തൈ വേങ്കടക്കോന് വിടുതൂദില് വിണ്ണപ്പമ്
പോഹത്തില് വളുവാദ പുദുവൈയര് കോന് കോദൈ തമിള് ആഹത്തു വൈത്തുരൈപ്പാര് അവരടിയാര് ആഹുവരേ

ಕನ್ನಡ ನೆರಳ್

ನಾಗನ ಹಾಸಿಗೆ ಮೇಲಿಹನಂ ನಲ್ ನೊಸಲಿ ಬವಣಿಸಿ ಪೇಳಿರುವ
ಮೇಘುವ ವೇಂಕಟಪತಿಗೇ ಬಿಡುದೌತ್ಯದಿ ಬಿನ್ನಪವಾಗಿಹುದ
ಭೋಗವ ತುಸವೂ ಬಿಡದಿಹ ಪುದುವೈಯರ್ ನಾಥರ ಗೋದೆಯ ತಮಿಳಂ
ಓಘುದಿವೊಳಗಿಟ್ಟೇ ಪೇಳುವರವರ್ ಸರ್ವರ ಅಡಿದಾಸರೇ ಆಗುವರಲಲಾ!

ಈ ದಶಕದ ಸರಿಯಾದ ವಿಮರ್ಶೆಯನ್ನು ಗೋದಾದೇವಿ ತಾನೇ ಇಲ್ಲಿ ಮಾಡುತ್ತಿರುವಳು. ''ವಿಡು ತೂದಿಲ್ ವಿಣ್ಣಪ್ಪಮ್'' ಈ ತಿರುಮೊಳಿಯ ಶೀರ್ಷಕ ಇದೇ! ವೇಙ್ಗಡಕ್ಕೋನ್ = ತಿರುಮಲೇಶನಿಗೆ, ಮೇಹತ್ತೈ = ಮೇಘದ ಓಘುಗಳನ್ನೇ ದೂತರನ್ನಾಗಿ ಕಳಿಸಿದ ಬಿನ್ನಪ. ಇದೊಂದು **''ಲೋಕ ವಿಲಕ್ಷಣವಾದ ಪರಮ ಪಾವನ ದಿವ್ಯಮೇಘು ಸಂದೇಶ!''** ಇದನ್ನು ಈ ದಿವ್ಯಪ್ರಬನ್ಧ ಸಾಹಿತ್ಯ ರೂಪದಲ್ಲಿ ಹಾಡಿಕೊಟ್ಟವಳೋ? ಪೋಹತ್ತಿಲ್ = ಆನಂದಮಯನೂ ರಸಸ್ವರೂಪನೂ ಆನಂದಪೂರ್ಣನೂ ಆನಂದವರ್ಧಕನೂ ಆದ ಸರ್ವೇಶ್ವರ. ಶ್ರೀನಿವಾಸನ ದಿವ್ಯಾSSನಂದ ಭೋಗದಲ್ಲಿ, ವಳುವಾದ = ಸ್ವಲ್ಪವೂ ವಿಚ್ಛೇದವಾಗಲಿ, ಕೊರತೆಯಾಗಲಿ ಬರಬಾರದೆಂದು ತಳಮಳಪಡುವ, ಕೋದೈ = ಸ್ವಾಮಿಯೂ ಇಷ್ಟಪಡುವ ಮನೋಜ್ಞ ಕೇಶ ಸೌಗಂಧ್ಯವತಿಯಾದ ಗೋದಾವರಿ. ಗಾಂ ದದಾತೀತಿಗೋದಾ **''ಒಳ್ಳೆಯ ದಿವ್ಯವಾಙ್ಮಯ ದಾತ್ರೀ! ಗೋ ಸಂರಕ್ಷಿಣೀ! ಎಲ್ಲ ಸಂತರಿಗೂ ಹೆಚ್ಚಿನ ಪ್ರಕಾಶವತೀ! ನಮ್ಮೆಲ್ಲರಿಗೂ ಭಕ್ತಿ ಪ್ರಪತ್ತಿ ಆಚಾರ್ಯಾಭಿಮಾನ ಪ್ರಕಾಶಿನೀ!''**

ಇವಳು ಪರಮ ಆರ್ತಳು! ಯಥಾರ್ಥದರ್ಶನದಿಂದಲೇ ಈ ತಮಿಳ್ ''ನಾಯ್ಚ್ಚಿಯಾರ್ ತಿರುಮೊಳಿ'' ಹೊಮ್ಮಿ ಬಂದಿರುವುದು. ಅಪ್ರತಮರಾದ ''ಮೆಯ್ಮೈ ಅಳನ್'' ಎಂದು ತಾವೇ ಸ್ವ ಮಿಮರ್ಶೆಗೈದಿರುವ, ಪುದುವೈಯರ್ ಕೋನ್ = ವಿಲ್ಲಿ ಎಂಬ ರಾಜನಿಂದ ನವೀಕರಿಸಲ್ಪಟ್ಟ ''ಶ್ರೀವಿಲ್ಲಿ ಪುದು ಊರ್'' ಪುತ್ತೂರಿಗೆ, ಅಲ್ಲಿನ ಭಗವನ್ ಮಂಗಳಾಶಾಸನಪರರಿಗೆ ತದಭಿಮಾನಿಗಳಾದ ಎಲ್ಲರಿಗೂ ಮಂಗಳಾಶಾಸನದಲ್ಲಿ ದಾರಿತೋರುವ ನಾಯಕರಾದ ಪೆರಿಯಾಳ್ವಾರರ ಅಭಿಮಾನ ಪುತ್ರಿ, ಕೋದೈ = ಗೋದೆ. ಹೂಮಾಲೆ ಹಾಗೂ ಪಾಮಾಲೆ ಎರಡನ್ನೂ ವದನೋಚ್ಛಿಷ್ಟ, ಕೇಶೋಚ್ಛಿಷ್ಟವಾದರೂ ಪ್ರಣಯಿನಾಯಕನಿಗೆ ಇಷ್ಟತಮಳಾದವಳ ಮುಖಾರವಿಂದದಿಂದ ಉತ್ಸ್ಫೂರ್ತವಾದ, ತಮಿಳ್ ತಿರಳನ್ನು, ಅಹತ್ತು = ತಮ್ಮ ಅಂತರಂಗದಲ್ಲಿ, ವೈತ್ತು = ಪ್ರತಿಷ್ಠಿಸಿ, ಶ್ರದ್ಧಾ ಭಕ್ತಿ ಹಾಗೂ ಪ್ರಯೋಗಗಳಿಂದ ನೆಲೆನಿಲ್ಲಿಸಿ, ಉರೈಪ್ಪಾರ್ = ಹಾರ್ದ ಮನನ ಪೂರ್ವಕ ನಿಧಿ ಧ್ಯಾಸನಗೈದು, ಅದು ಒಳಗಡಗದೆ ಹೊರ ಚಿಮ್ಮುವಂತೆ ಬಾಯಿಂದಲೂ ಪಾರಾಯಣ ''ಸೇವಾಕಾಲ'' ಮಾಡುವವರು, ಅವರ್ ಅಡಿಯಾರ್ ಆಹುವರೇ = ಆ ತಿಮ್ಮಪ್ಪನ ಕೈಂಕರ್ಯ ಪರರಾಗಿಯೇ ತೀರುವರು. ನನಗೊದಗಿದ ಬಾಹ್ಯವಿಶ್ಲೇಷ ವ್ಯಸನವಾಗಲಿ, ದೂತ ಪ್ರೇಷಣಗೈಯ್ಯಬೇಕಾದ ಪ್ರಮೇಯವಾಗಲಿ ಅಂತಹವರಿಗಿಲ್ಲ.

ತನಗೂ ತಂದೆ ಹಾಗೂ ಆಚಾರ್ಯರಾದ ಪೆರಿಯಾಳ್ವಾರರಲ್ಲಿ ನಿತ್ಯ ಕೈಂಕರ್ಯವೆಸಗುವ ಚರಮ ಪುರುಷಾರ್ಥ ಸಿಗುವುದೆಂಬುದೂ ಇಲ್ಲಿನ ನಿಗೂಢ ರಹಸ್ಯ! ''ಅವರ್ ಅಡಿಯಾರ್'' ಎಂಬ ಸರ್ವನಾಮ ಪದದಿಂದ ಅಂಡಾಳಾದ ತನಗೂ ಮುಖೋಲ್ಲಾಸಕಾರಿಯಾದುದು ಈ ದಶಕ ಪಠನವೆಂಬುದೂ, ಪಠಿಸುವ ಭಾಗವತರ ಕೈಂಕರ್ಯವೂ ಅಂದರೆ ಇಂದಿನ ಭಾಷೆಯಲ್ಲಿ ಸಮಾಜ ಸೇವೆಯೂ ಸಿದ್ಧಿಸುವುದೆಂಬುದೂ ಹೀಗೆ ಪುಂಖಾನುಪುಂಖವಾಗಿ ಭಾವಲಹರಿಗಳು ಅನುರಣಿತವಾಗುತ್ತಲೇ ಇರುವುವು. ''ಏ'' ಆಹುವರ್ ಮೇಲಿನ ಈ ''ಏ'' ಏಕಾರ ಇಲ್ಲಿನ ಜೀವಾಳ. ನಿಶ್ಚಿತ ಫಲ! ಸಂಶಯ ಬೇಡ. ನಿರ್ವಿಘ್ನವಾಗಿ ಇವೆಲ್ಲ ಕೈಗೂಡುವುವಂಥವೇ ಹೊರತು ಕೇವಲ ಪ್ರರೋಚನೆಗಾಗಿ ಹೇಳಿದ್ದಲ್ಲ. ಇದರಲ್ಲಿ ಏನೊಂದೂ ಅರ್ಥವಾದವಿಲ್ಲ. ಸಂತ ಶರಣರ ವಚನಗಳು ದಿವ್ಯದುಃಖಪರಿಹಾರಿ! ಶಾಶ್ವತ ಸರ್ವಸೇವಾಭಾಗ್ಯಪರಂಪರೆಯನ್ನು ಕರುಣಿಸುತ್ತಲೇ ಇರುವಂಥವು.

ಈ ದಶಕ, ನಲ್ ನುದಲಾಳ್ = ಥಳಥಳಿಸುವ ನೊಸಲಿನವಳ ಬಾಯಿಂದ ಹರಿದುದು. ನಯನ್ನು = ದೇವರ ಆನಂದಕ್ಕಾಗಿಯೇ ಅಸೆ ಪಟ್ಟು, ಎಂಬ ಈ ಪದದಿಂದ ಈಕೆಯ ''ಪಾರಾರ್ಥ್ಯ'' ಚೆನ್ನಾಗಿ ಎದ್ದು ಕಾಣುವುದು. ಆಂಡಾಳಿನ ಶೃಂಗಾರರಸದ ಸ್ಖಾವಿಷ್ಕಾರ, ಆಕ್ರಂದನ, ಸ್ವಾರ್ಥಿಗಳದಲ್ಲ. ಇಂತಹ ನಿಸ್ವಾರ್ಥ ಶರಣೆಯೋರ್ವಳಿಂದ, ಉರೈಶೆಯ್ = ಮಾತಿನ ಕೃತಿ ರೂಪದಲ್ಲಿ ಅರ್ಪಿತವಾದ ಈ ''ಮೇಘುದೂತ'' ದಿವ್ಯಕಾವ್ಯಕ್ಕೆ ಉದ್ದೇಶ್ಯ ವಸ್ತು, ನಾಹತ್ತಿನ್ ಅಣೈಯಾನ್ಯೈ = ನಾಗಶಯನ. ಅಂತಹವನನ್ನು ಕುರಿತುದು. ಕ್ಷುದ್ರ ನಾಯಕನ, ನಾಯಕಿಯ ಸಂಪರ್ಕವಿಲ್ಲ. ಮಹಾಕವಿಗಳ ಅಂತರಂಗವೂ ಇಂತೆಯೇ ಪ್ರಾಯಃ ಇರುವುದು.

ಶಾಕುಂತಳ ನಾಟಕ ಯದ್ಯಪಿ ಮಾನುಷ ಸಾಮಾನ್ಯ ಶೃಂಗಾರ ರಸ ಪ್ರಧಾನದಂತೆ ಕಂಡರೂ ಕಾಳಿದಾಸನ ನಾಟಕಾಂತ್ಯದ ಭರತವಾಕ್ಯ ''ಮಮಾऽಪಿ ಚ ಕ್ಷಪಯತುನೀಲಲೋಹಿತಃ ಪುನರ್‌ಭವಂ'' ಇದನ್ನು ಗಮನಿಸಿದಾಗ ನಾಯಕೀ ನಾಯಕರ ಭೂಮಿಕೆಯೂ ಉದಾತ್ತವಾಗಿ ಬಿಡುವುದು. ಯಕ್ಷಯಕ್ಷಿಯರ ಒಳಭಾವಗಳನ್ನು, ಪಾರ್ವತೀ ಪರಮೇಶ್ವರರಲ್ಲೇ ಸಮನ್ವಯಿಸಿಕೊಳ್ಳುವಂತಹ ಸಹೃದಯೋತ್ತಮರು, ಕಾವ್ಯಮೌಲ್ಯವನ್ನು ಹೆಚ್ಚಿಸಬಲ್ಲರು. ಕವಿಯೋರ್ವನಿಂದಲೇ ಸಾಹಿತ್ಯ ಚರಿತಾರ್ಥವಾಗದು. ಶುಭೈಕ ಗುಣೈಕ ದೃಷ್ಟಿಯ ವಿಶ್ವಾऽऽತ್ಮಭಾವದ, ಸಜ್ಜನ ಸನ್ಮಿಳೆ ಸಹೃದಯರಿಂದಲೇ ಸರ್ವಂ ಶುಭಂ ಮಂಗಳಮ್! ಆಗ ವಿಮರ್ಶೆಯು ನಿಂದಾರೂಪವಾಗಿರದು.

ಪ್ರಕೃತ ಕಾಳಮೇಘಾಚಾರ್ಯರ ಮೂಲಕ ತಿರುಪತಿ ತಿಮ್ಮಪ್ಪನಿಗೆ, ತನ್ನಸಂದೇಶ ಕಳಿಸಿದವಳೂ ''ನಾರೀಣಾಂ ಉತ್ತಮಾ!'' ಎಂಬಂತಿರುವ ನಲ್‌ನುದಲಾಳ್. ನಾಯಕನೂ ''ವೇಙ್ಗಡಕ್ಕೋನ್!'' = ಸರ್ವೇಶ್ವರನಾದ ವೇಂಕಟೇಶ್ವರ!''. ಸಂದೇಶವಾಹಕರೂ :-

ವಿಣ್‌ನೀಲ ಮೇಲಾಪ್ಪು ವಿರಿತ್ತಾಪ್ಪೋಲ್ ಮೇಹಙ್ಗಳ್ ಮಾಮುತ್ತ ನಿದಿ ಶೋರಿಯುಂ ಮಾಮುಹಿಲ್ ಹಳ್
ಅಳಿಯತ್ತ ಮೇಹಙ್ಗಳ್ ಮಿನ್‌ಅಹತ್ತು ಎಳುಹಿನ್ನ ಮೇಹಙ್ಗಳ್ ವಾನ್‌ಕೊಣ್ಡು ಕಿಳರ್‌ನ್ದೆಳುನ್ದ ಮಾಮುಹಿಲ್‌ಹಳ್
ಶಲಂ ಕೊಣ್ಡು ಕಿಳರ್‌ನ್ದೆಳುನ್ದ ತಣ್ ಮುಹಿಲ್‌ಹಳ್ ವೇಙ್ಗಡತ್ತು ತಣ್ ಮುಹಿಲ್‌ಹಳ್
ಕಾರ್ ಕಾಲತ್ತೆಳು ಹಿನ್ನ ಕಾರ್ ಮುಹಿಲ್‌ಹಳ್ ಮದಯಾನೈ ಪೋಲ್ ಎಳುನ್ದ ಮಾಮುಹಿಲ್‌ಹಳ್

ಎಂಬಂತೆ ಕಾವ್ಯ ಕರ್ತ್ರಿಯ ಗುರು ತಂದೆ ''ಪುದುವೈಯರ್ ಕೋನ್'' = ಶ್ರೀವಿಲ್ಲಿಪುತ್ತೂರಿನ ಸ್ವಾಮಿ; ಇದನ್ನು ಅನುಸಂಧಾನ ಮಾಡುವವರು ''ಅವರಡಿಯಾರ್'' = ಈ ಎಲ್ಲರ ದಾಸರು; ಹೀಗೆ ಯಾವೊಂದೂ ನ್ಯೂನತೆಯಿಲ್ಲದ ಪರಿಪೂರ್ಣ ಆನಂದ ನಿಲಯ ಸಾಹಿತ್ಯ!

ತಮಿಳ್ ತಿರಳ್ ೧೦-೫

ಪಾಡುಮ್ ಕುಯಿಲ್‌ಹಾಳ್! ಈದೆನ್ನ ಪಾಡಲ್? ನಲ್ ವೇಙ್ಗಡ ನಾಡರ್ ನಮಕ್ಕೊರು ವಾಳ್‌ವು ತನ್ದಾಲ್ ವನ್ದು ಪಾಡುಮಿನ್
ಆಡುಮ್ ಕರುಳ ಕ್ಕೊಡಿಯುಡೈಯಾರ್ ವನ್ದರುಳ್ ಶೆಯ್‌ದು ಕೂಡುವರಾಯ್ ಇಡಿಲ್ ಕೂವಿ ನುಮ್ ಪಾಟ್ಟುಕ್ಕಳ್ ಕೇಟ್ಟುಮೇ

ಕನ್ನಡ ನೆರಳ್

ಹಾಡುವ ಕೋಗಿಲೆಗಳಿರಾ ಇದು ಏನ್ ಹಾಡು? ನಲ್ ವೇಂಕಟ ನಾಡರು ನಮಗೋರ್ ಬಾಳುವೆ ತಂದಲ್ಲಿ ನೀವ್ ಬಂದ್ ಹಾಡಿರೆಲಾ
ಆಡುವ ಗರುಡನ ಬಾವುಟವುಳ್ಳವರ್ ಬಂದರುಳನು ಗೈದು, ಕೂಡುವರಾದರೆ ನಾವೇ ಕೂಗಿ ನಿಮ್ ಹಾಡುಗಳದೋ ಕೇಳುವೆವ್ಯೆ!

ಪರಮಪಾವನಿ ನಾಯಕಿಯಾದ ಈ ನಾಚ್ಚಿಯಾರ್ ಪರಮ ವಿರಹಾರ್ತಳಾಗಿ ಬಿಟ್ಟಿದಾಳೆ! ಕಣ್ ಬಿಟ್ಟು ಎಲ್ಲಿ ನೋಡಿದರೂ ಅರಳಿದ ಹೂಗಳೇ! ಈಕೆ ಮಾತ್ರ ಮುದುಡಿಕೊಂಡು ಬಿದ್ದಿರುವುದು! ಭಗವಂತನ ಅಗಲಿಕೆಯಲ್ಲಿ ಅವುಗಳ ಬಾಧೆ ತಡೆಯದೆ ತನ್ನ ಕಣ್ಣುಗಳನ್ನೇ ಮುಚ್ಚಿಕೊಳ್ಳುವಳು. ಅದರೂ ಹಾಳಾದ ಕೋಗಿಲೆಗಳೂ ಚೂತಾಂಕುರಾऽऽಸ್ವಾದದಿಂದ ಕಂಠಬಲವನ್ನು ಹೆಚ್ಚಿಸಿಕೊಂಡಿವೆ! ಮಾವಿನ ಚಿಗುರುಗಳ ಕಾಲವದು. ನನಗೀಗ ಪತಿ ವಿರಹ! ನಿಮ್ಮ ಹಾಡುಗಳು ಪಾಡುಪಡಿಸುತ್ತವೆ! ಪತಿದೇವ ನನ್ನೊಡನೆ ಕೂಡಿದ ಮೇಲೆ ಹಾಡಿರಯ್ಯಾ. ನಾನೇ ಆಗ ಸುಸ್ವಾಗತದ ಕರೆ ನೀಡುವೆನು.

ಪಾಡುಮ್ ಕುಯಿಲ್ ಹಾಳ್ = ಹಿಂಡುಹಿಂಡಾಗಿ ಬೃಂದಗಾನ ಗೈಯ್ಯುತ್ತಿರುವ ಓ ಪಿಕಗಳೇ! ಈದು ಎನ್ನ ಪಾಡಲ್? = ಸಂಗೀತ ರುಚಿಸಬೇಕಾದರೆ ಶ್ರೋತೃಗಳಿಗೂ ತಕ್ಕ ಮನಸ್ಥಿತಿ ಇರಬೇಕಷ್ಟೆ! ಹಾಡುವವರೋರ್ವರ ಪ್ರೇರಣೆಇದ್ದರೆ ಸ್ವಾಂತಸ್ಸುಖಮಾತ್ರವಾದೀತು. ಅದು ಪರಾರ್ಥವಾಗದು! ಮಾನವನ ಯಾವೊಂದು ಕೆಲಸವೂ ವಿಕಪಕ್ಷೀಯವಷ್ಟೇ ಆದರೆ ಸಾಲದು. ''ಅಂಡಾಳ್! ನಿನಗೇನು ಕೊರತೆ?'' ''ನಾನೇ ಈಗ ಜೀವಿಸಿಲ್ಲ! ನಲ್ ವೇಙ್ಗಡನಾಡರ್ = ಒಳ್ಳೆ ಅರಣ್ಯ ತೀರ್ಥ, ಋಷಿ ಮುನಿ ಆಳ್ವಾರ್ ಆಚಾರ್ಯ ಭಕ್ತ ಭಾಗವತರಿಗೆಲ್ಲಾ ನಲ್ ದಾಣವಾದ ಈ ಪೂರಾ ನಾಡಿಗೇ ಚಕ್ರವರ್ತಿ ತಿಮ್ಮಪ್ಪ. ನಮಕ್ಕು = ಈ ನನ್ನಂತಹ ವಿಯೋಗಿನಿ ಶರಣೆಯರಿಗೆ, ಒರು ವಾಳ್‌ವು ತನ್ದಾಲ್ = ಬಳ್ಳಿಗಳಿಗೆ ಒಂದು ಚಪ್ಪರದಂತೆ ಈ ನಿರಾಶ್ರಿತಳಾದ ವನಿತಾಲತೆಗೆ ತಾನಾಶ್ರಯದಾತನಾದರೆ ಆಗ, ವನ್ದು ಪಾಡುಮಿನ್ = ನನ್ನ ಬಳಿಸಾರಿ ಹಾಡುವಿರಂತೆ.

ಈಗ ಈ ದಾಸಿಗೆ ಪ್ರಾಣವೇ ಇಲ್ಲದಿದ್ದಾಗ, ಆತ ಕಣ್ಣಿಗೆ ತೋರದೆ ಈ ನನ್ನ ಒಡಲನ್ನು ತನ್ನ ಭೋಗಕ್ಕೆ ಉಪಯೋಗಿಸಿಕೊಳ್ಳದಿರುವಾಗ ನಾನೆಲ್ಲಿ? ಯಾವೊಂದು ವಸ್ತುವಿನ ಇರುವಿಕೆಯೆಂದರೆ ಸಮಷ್ಟಿ ವಿರಾಟ್ ಸಮಾಜದ ಪರಾದೇವತೆಯ ಭೋಗಕ್ಕೆ ಒದಗುವಿಕೆಯೇ ಹೊರತು, ಕ್ಲಪ್ತಪ್ರಯೋಜನಕ್ಕೆ ಒದಗಿ ಬಾರದಿದ್ದರೆ, ಇದ್ದೂ ಅಸತ್‌ಕಲ್ಪ! ಅಡಿನ ಕುತ್ತಿಗೆಯ ಮೊಲೆಯಂತೆ! ನನಗೀಗ ಅಂತಹ ಪ್ರಾಣವೇ ಇಲ್ಲದಿರುವಾಗ ಹೆಣ ಏನು ಕೇಳೀತು? ಈಗ ನನ್ನನ್ನು ಒಂಟಿಯಾಗಿಟ್ಟು ಪ್ರಾಣಾಪಹಾರಿಯಾಗಿರುವವನೇ, ಆಡುಮ್ ಕರುಳಕ್ಕೊಡಿ ಉಡೈಯಾರ್ = ತನ್ನ ವಿರಹದಿಂದ ಸತ್ತಿರುವ ಈ ಗೋದೆಯೆಡೆಗೇ ಓ ಅಮೃತಾऽऽಹರಣ ಗರುಡಾ! ನನ್ನನ್ನೀಗ ಆಕೆಯಿರುವೆಡೆಗೇ ನಡೆಸೋ ಎಂದಪ್ಪಣೆಗೈದು, ಆಡುತ್ತಾ ನನ್ನೆಡೆ ಧಾವಿಸಿ ಬರುವಾಗ ದೂರದಿಂದಲೇ ವಿರಹಾರ್ತರನ್ನು ಸಾಂತ್ವನಗೊಳಿಸುವ

ಗಗನವಿಲಾಸಿ ಗರುಡ ಧ್ವಜ, ವನ್ದು ಅರುಳ್ ಶೆಯ್ದು = ತನ್ನ ಸ್ವಂತ ಭೋಗಕ್ಕೆಂದೇ ಬಿಜಯಂಗೈದರೆ, ಕೂಡುವರಾಯ್ ಇಡಿಲ್! = ನನ್ನನ್ನೂ ಆಲಿಂಗಿಸಿಕೊಂಡರೆ, ಕೂವಿ = ನಾನೇ ನಿಮ್ಮನ್ನು ಕೂಗಿ, ನುಮ್ ಪಾಟ್ಟುಕ್ಕಳ್ ಕೇಟ್ಟುಮೇ = ನಿಮ್ಮ ಹಸನಾದ ಹಾಡುಗಳನ್ನು ನಾವೀರ್ವರೂ ಸಂತಸದಿಂದ ಕಿವಿಗೊಟ್ಟು ಮನವಿಟ್ಟು ಆಲಿಸುವೆವು! ಈಗ "ಏಕಃಸ್ಯಾದು ನಭುಂಜೀತ! ಇಷ್ಟಜನೈಸ್ಸಹ ಭುಕ್ತಂ ಭುಕ್ತಮ್" ಆ ಮಂಗಳ ಮುಹೂರ್ತವನ್ನು ಗುರುಗಳಾದ ನೀವೇ ಕಲ್ಪಿಸಿ ಕೊಡಿರೆಂದು ಹಿಂದೆಲ್ಲಾ ಗೋಗರೆದೆ! ನಿಮಗೆ ನನ್ನ ಮೇಲೆ ದಯೆ ಬರಲಿಲ್ಲ. ಸ್ವಾನಂದೈಕ ಭೋಗಿಗಳಾಗಿ ಪರಾಽನರ್ಘ ಚಿಂತೆಯನ್ನೇ ತಲೆಗೇರಿಸಿ ಕೊಳ್ಳದ, ಹಳೆಯ ಕೆಲ ಆಚಾರ್ಯರಂತಾದಿರಿ! ದಯೈಕ ಸಿಂಧುಗಳಾದ, ಕೃಪಾಮಾತ್ರ ಪ್ರಸನ್ನರಾದ ರಾಮಾನುಜ ರಂತಹವರು ಇನ್ನೂ ಅವತರಿಸಲಿಲ್ಲವೇ? ಇಲ್ಲೆಲ್ಲಾ ಮುಂದೆ ಬರುವ ಆಚಾರ್ಯ, ಈತ ಈಕೆ ನನ್ನವನಪ್ಪಾ! ನನ್ನ ವಳಪ್ಪಾ! ಎಂದು ಕನಿಕರಿಸುವ ಆಚಾರ್ಯಾಭಿಮಾನವೆಂಬ ಚರಮೋಪಾಯದ ಸೂಚ್ಯಾರ್ಥ ಸೂಚನೆ ಇದೆಯೆಂಬುದನ್ನು ನಾವು ಗಮನಿಸಬೇಕು. ಗುರುಮುಟ್ಟಿಯೇ ದೇವರ ಗುಡ್ಡನಾಗಬೇಕಷ್ಟೆ! ಯಾತ್ರಾ ಸ್ಥಳಗಳಲ್ಲಿ ಗರುಡವಾಹನದ ಉತ್ಸವಗಳ ಮೌಲಿಕ ತತ್ವವೂ ನಮಗೆಲ್ಲಾ ಅರಿವಾಗುವುದು.

ತಮಿಳ್ ತಿರಳ್ ೧೦-೮

ಮಳ್ಳೆಯೇ ಮಳ್ಳೆಯೇ ಮಣ್ ಪುರಮ್ ಪೂಶಿ ಉಳ್ಳಾಯ್ ನಿನ್ನು ಮೆಳು ಹೂತ್ತಿನಾಪ್ಪೋಲ್ ಊತ್ತು ನಲ್ ವೇಙ್ಗಡತ್ತುಳ್ ನಿನ್ನ
ಅಳಹಪ್ಪಿರಾನಾರ್ ತಮ್ಮ್ಯೆಯೆನ್ನೆಞ್ಞತ್ತಹ ಪ್ಪಡ ತ್ತಳುವಿ ನಿನ್ನು ಎನ್ನ್ಯೆ ತ್ತದೈತ್ತು ಕ್ಕೊಣ್ಡೂತ್ತವುಮ್ ವಲ್ಲ್ಯೆಯೇ

ಕನ್ನಡ ನೆರಳ್

ಮಳೆಯೇ! ಮಳೆಯೇ! ಮಣ್ ಪೊರಪೂಸಿ ಒಳನಿಂತು ಮೇಣದ ತೆರ ಪುರುಗಿಸಿ ನಲ್ ವೇಂಕಟದೊಳು ನಿಂತು
ಉಪಕಾರಕ ಪ್ರಭುಸುಂದರನಂ ಎನ್ ಚಿತ್ತದೊಳ್‌ದಕ್ಕುವ ತೆರ ಅಪ್ಪುತ ನಿಂತೆನ್ನನು ಉಜ್ಜಿಕೊಂಡು ಹುಯ್ಯಲು ಬಲ್ಲ್ಯೆಯಲ್ಲವೇ!

ಕೆಳನೆಲದಲ್ಲಿ ಹೂಗಳೂ ಕೋಗಿಲೆ ಮುಂತಾದವೂ ಬಾಧಕಗಳೇ ಆದಾಗ ಗೋದೆಯ ಬೃಷ್ಟಿ ಆಗಸದೆಡೆ ಮೇಲ್ ಮೊಗವಾಗುತ್ತದೆ. ಅಲ್ಲಿ ಹರಗಿರುವ ಆ ಕಾರ್‌ಮುಗಿಲುಗಳೂ ಇವಳ ಪಾಲಿಗೆ ಮೇಘಶ್ಯಾಮನ ವಿರಹ ವೇದನೆಯನ್ನೇ ಇನ್ನೂ ಹೆಚ್ಚಿಸುತ್ತವೆ. ಪುನಃ ಅವುಗಳ ಕಾಲಿಗೇ ಈ ಅಂಡಾಳ್ ಬೀಳುತ್ತಾಳೆ. ಬಲು ದೂರಕ್ಕೂ ಮಹಾ ಮೇಘಗಳು ಕವಿದಿರುವುದರಿಂದ ಅಷ್ಟು ದೂರಕ್ಕೂ ತನ್ನ ದನಿ ಮುಟ್ಟಲೆಂದು ಒಂದೇ ಬಾರಿ ಅವುಗಳನ್ನು ಕೂಗಿ ನಿಲ್ಲುವುದಿಲ್ಲ. ಮಳ್ಳೆಯೇ! ಮಳ್ಳೆಯೇ! ಈ ದ್ವಿರುಕ್ತಿಗೆ ಹೀಗೆ ಭಾವ. ಮಳೆಗೆ ಮೋಡ ಕಾರಣವಾದುದರಿಂದ "ಕಾರಣಂ ತು ಧ್ಯೇಯಃ" ಎಂಬಂತೆ ಮೂಲವನ್ನೇ ಅಂಡಾಳ್ ಹಿಡಿಯುತ್ತಾಳೆ. ಬಲ್ಲವರು ಆಗುತ್ತಿರುವ ನಾನಾ ಕಾರ್ಯಗಳ ಬಗೆಗೆ ಚಿಂತೆ ಮಾಡರು. "ಅಮ್ಮಾ! ನನಗೂ ಕಾರಣಭೂತ ಆ ತಿಮ್ಮಪ್ಪ". ಹೌದು! ನಾನೂ ಅಂತೆಯೇ ಹೇಳುತ್ತಿರುವುದು. ಮಣ್‌ಪುರಮ್ ಪೂಶಿ ಓ ಮೇಘರಾಜಾ! ನೀನೂ ಆತನ ಹೊರಪೂಸಲಷ್ಟೆ. ಈ ಹೊರಮ್ಯೆಯ್ಯಿಗೂ, ಉಳ್ಳಾಯ್ ನಿನ್ನ್ ಈ ಶರೀರದ ಒಳಗಿರುವ ಮೆಳುಹು = ಜೀವಾತ್ಮನೆಂಬ ಮೇಣವನ್ನು, ಊತ್ತಿನಾಲ್‌ಪೋಲ್ = ಕರಗಿಸಿಯೇ ಬಿಡುವಂತೆ, ಅಂಡಾಳಿನ ಒಡಲ ಸಡಿಲ! ದೇವನ ವಿರಹದಲ್ಲಿ, ಅಚ್ಛೇದ್ಯ ಅದಾಹ್ಯವಾದ ಆತ್ಮನಿಗೂ ತಾಗಿರುವ ಅಳವಾದ ನೋವಿನ ಅನುಭವ, ಎಷ್ಟಿದೆಯೆಂಬುದನ್ನು ತಿಳಿಸುತ್ತದೆ. ಜ್ಞಾನಘನ, ಪ್ರೇಮವಾಗಿ ಹರಿಯುವ ದ್ರವ ದ್ರವ್ಯವೇ ಈಗ ನೀವಾಗಿದ್ದೀರಿ ಓ ಮೇಘಗಳೇ.

ಊತ್ತುನಲ್ ವೇಙ್ಗಡತ್ತುಳ್ ನಿನ್ನ = ನೀರ್ ಬುಗ್ಗೆಗಳಿಂದಲೇ ನಲವಾಂತಿರುವ ಶ್ರೀ ಕ್ಷೇತ್ರದಲ್ಲಿ ನಿಂತಿರುವ ಆ ಚೆಲುವು! ತುಂಬಿರುವ ಆ ಪೂರ್ಣತೆ! ಇದಕ್ಕೆಲ್ಲಾ ಪ್ರಾಣನಾಥನಾದವನೇ, ತನ್ಯೆ = ತಾನಾಗಿಯೇ, ತನ್ನನ್ನು ಎನ್ = ಅವನಿಂದಲೇ ಎಲ್ಲ ಹಂತದಲ್ಲೂ ಕೆಲಸವಾಗಬೇಕೆಂಬ ನನ್ನ, ನೆಞ್ಚತ್ತು = ಈ ಅನನ್ಯಳಾದ ದಾಸಿಯ ಮನಸ್ಸಿನಲ್ಲೇ ಸಿಕ್ಕಿಸಿಕೊಂಡಿರುವಂತೆ! ಅಶ್ರಿತರಲ್ಲಿ ಅತ್ಯರ್ಥ ಮೋಹಿಯಾಗಿ, ಅಹಪ್ಪಡ, "ವಿವೃಣುತೇ ತನೂಂಸ್ವಾಮ್" ಎಂಬಂತೆ ಅನೇಕ ಭಕ್ತರಿಗೆ ನೀಡುವಂತೆಯೂ. ತಳುವಿ ನಿನ್ನು = ತಾನೇ ಅಪ್ಪಿಕೊಂಡು, ಎನ್ನ್ಯೆ ತದೈತ್ತುಕ್ಕೊಣ್ಡು = ಗಾಢಾಽಲಿಂಗನ ಸ್ವೀಕರಿಸಿದ ಮೇಲೆಯೇ, ಊತ್ತವುಮ್ ವಲ್ಲ್ಯೆ = ಮಳೆಸುರಿಸಲು ಮನಮಾಡು. ಅದೀಗ ನಿನ್ನ ಜಾಣತನ, ಸಾಮರ್ಥ್ಯ. ಈ ಪ್ರಿಯನ ವಿರಹಕಾಲದಲ್ಲಿ, ಮೇಘ ತೋರಿಕೊಳ್ಳುವುದರಿಂದ, ನನಗಾಗಲಿ ನಿಮಗಾಗಲಿ, ಆ ಗಿರಿಯಪ್ಪನಿಗಾಗಲಿ ಏನೇನೂ ಲಾಭವಿಲ್ಲ. **"ಮಾ ಕಶ್ಚಿತ್ ದುಃಖಿಭಾಗ್ ಭವೇತ್"** ಒರ್ವರೂ ದುಃಖಿಗಳಿಲ್ಲದಂತಾಗಲೇ ನಿಜಕ್ಕೂ ಸದಾಚಾರ್ಯರು ಧನ್ಯರಾಗುವುದು! ಪ್ರಪಂಚದಲ್ಲಿ ಆಚಾರ್ಯರ ಸಾಮೂಹಿಕ ಜವಾಬುದಾರಿ ಹಾಗೂ ಸಮಾಜದಲ್ಲಿ ಬೆರೆತು ಗೈಯ್ಯಬೇಕಾದುದು ಬಹಳಷ್ಟು ಉಳಿದಿದೆ! ಅವರ ಮೂಲಕ ಸೃಷ್ಟಿ ಸ್ಥಿತಿಕರ್ತನಿಗೂ ಮುಗಿಯದ ಕೆಲಸ ಇದ್ದೇ ಇರುತ್ತದೆ!

ತಿರುಪ್ಪಾಣಿಯಾಳ್ವಾರ್

ತಮಿಳು ನಾಡಿನ ತಿರುಚ್ಚಿರಾಪಳ್ಳಿ ಎಂಬ ನಗರಕ್ಕೆ ಹತ್ತಿರದಲ್ಲಿರುವುದು 'ತಿರುಉರೈಯೂರ್' ಎಂಬ ಗ್ರಾಮ. ಕಲಿಯುಗ ಸಂದ ೩೮೨೬ನೆಯ ವರ್ಷ ದುರ್ಮತಿ ನಾಮ ಸಂವತ್ಸರ ಕಾರ್ತೀಕ ಮಾಸ ಕೃಷ್ಣಪಕ್ಷ ದ್ವಿತೀಯಾ ಬುಧವಾರ ಕೂಡಿದ ರೋಹಿಣೀ ನಕ್ಷತ್ರದಂದು ದೇವರ ಶ್ರೀವತ್ಸವೆಂಬ ಚಿಹ್ನಾಂಶವಾಗಿ ಅಯೋನಿಜರಾಗಿ ಅವತರಿಸಿದವರೇ ತಿರುಪ್ಪಾಣಿ. ಜಗತ್ತಿಗೆ ಈ ಬಾಲಕ ಕಾಣಿಸಿಕೊಂಡಾಗಲೇ ''ಕೋಟಿಸೂರ್ಯ ಪ್ರಕಾಶ'' ಸೂಸುತ್ತಿದೆ! ಓರ್ವ ಹರಿದಾಸರು ಶಿಶುವನ್ನು ಎತ್ತಿಕೊಂಡು ತಮ್ಮ ಮನೆಯಲ್ಲೇ ಬೆಳಸಿದರು.

ಶ್ರೀಪಾಣ್‌ಆಳ್ವಾರರು ಭಗವಂತನ ಅಹೇತುಕೀ ಜಾಯಮಾನ ಕಾಲ ಕಟಾಕ್ಷವಿಶೇಷದಿಂದಲೇ ಸತ್ಸ್ವೀಕಗುಣಪ್ರಚುರರೇ ಆದರು. ಅಂತೆಯೇ ಇವರು ಜನ್ಮದಿಂದಲೇ ಮುಮುಕ್ಷುಗಳು. ಅಂತ್ಯಕುಲದಲ್ಲಿ ಬೆಳೆದು ಬಂದುದರಿಂದ ಆ ಕುಲಕ್ಕೆ ತಕ್ಕ ನೈಚ್ಯಾನುಸನ್ಧಾನ ಹಾಗೂ ವಿನಯದಿಂದಲೇ ಕಾವೇರಿ ಕೊಲ್ಲಡಮ್ ಎರಡರ ಮಧ್ಯೆ ಇರುವ ಆ ಪ್ರದೇಶಕ್ಕೆ ದೂರದಲ್ಲೇ ಯಾವಾಗಲೂ ನಿಂತೇ ಶ್ರೀರಂಗನಾಥ ಪವಡಿಸಿರುವ ಕಡೆಗೇ ಮೊಗಮಾಡಿ ನಾರದರಂತೆ ಸತತ ವೀಣಾಪಾಣಿಯಾಗಿ ಗಾನ ಮಾಡುತ್ತಾ ಮೈ ಮರೆತೇ ಬಿಡುತ್ತಿದ್ದರು.

ಇವರು ಹಾಡಿರುವ ''ಅಮಲನ್ ಆದಿಪಿರಾನ್'' ಎಂದೇ ಆರಂಭವಾಗುವ ದಿವ್ಯಪ್ರಬಂಧ ಶ್ರೀವೇಂಕಟಾಚಲಪತಿಯನ್ನೂ ಶ್ರೀರಂಗನಾಥನನ್ನೂ ಏಕೋ ಭಾವದಿಂದ ಹಾಡಿದ್ದು. ರಂಗನಾಥನ ಅಡಿಯಿಂದ ಮುಡಿಯವರೆಗೆ, ಶಯನಿಸಿರುವ ಆ ದಿವ್ಯ ಮಂಗಳ ಮೂಲಮೂರ್ತಿಯ ಯಥಾರ್ಥ ದರ್ಶನವನ್ನು ಆತ್ಯಾಶ್ಚರ್ಯಕರವಾಗಿ, ದೇವರೆದುರೇ ನಿಂತು ಆ ಪಾದಚೂಡ ಕ್ರಮವಾಗಿ ದಿವ್ಯಯೋಗ ಶೈಲಿಯಲ್ಲಿ ವರ್ಣಿಸಿದ್ದಾರೆ! ಇದರಲ್ಲಿ ಮೊದಲ ಮತ್ತು ಮೂರನೆಯ ಹಾಡು 'ತಿರುಪತಿ ತಿಮ್ಮಪ್ಪನ ಮೇಲಿನವು'.

ಅಮಲನಾದಿಪಿರಾನ್

ತಮಿಳ್ ತಿರಳ್ ೧

ಅಮಲನ್ ಆದಿ ಪಿರಾನ್ ಅಡಿಯಾರ್‌ಕ್ಕೆನ್ನೈ ಆಳ್ ಪಡುತ್ತ ವಿಮಲನ್,
ವಿಣ್ಣವರ್ ಕೋನ್ ವಿರೈಯಾರ್ ಪೊಳಿಲ್ ವೇಜ್ಗಡವನ್
ನಿಮಲನ್ ನಿನ್ ಮಲನ್ ನೀದಿವಾನವನ್ ನೀಳ್‌ಮದಿಳ್ ಅರಜ್ಗತ್ತಮ್ಮಾನ್ –
ತಿರು ಕ್ಕಮಲ ಪಾದಮ್ ವನ್ದು ಎನ್ ಕಣ್ಣಿನುಳ್ಳನ ವೊಕ್ಕಿನ್ನದೇ!

ಕನ್ನಡ ನೆರಳ್

ಅಮಲನಾದ್ಯನ ಹಿರಿಯನಾ ದಾಸರ್ಗೆನ್ನನು ದಾಸನಾಗಿಸಿದಾ ವಿಮಲನ್, ಬಾನವರ್ ಸ್ವಾಮಿ, ಕಂಪು ತುಂಬಿದ ವನದಾ ವೇಂಕಟ
ನಿಮಲ, ನಿರ್ಮಲ, ನೀತಿವಂತ; ಅವನ ನೀಳ್ಗೋಟೆಯ ರಂಗದ ಸ್ವಾಮಿಯ-ಸಿರಿ ಕಮಲದಂತಹ ಪಾದಗಳ್ ಬಂದೆನ್‌ಕಣ್ಣಿನೊಳಗೇ ಒಪ್ಪಿಹವೈ.

ತಮ್ಮವತಿಯಿಂದ ಸ್ವಾಮಿಯ ಶ್ರೀಪಾದ ದರ್ಶನವಲ್ಲ. ಆ ತಿರುಕ್ಕಮಲಪಾದವೇ ತಮ್ಮ ಬಳಿಗೇ ಬಂದು ಇವರ ಕಣ್ಣೊಳಗೆ ಹೊಕ್ಕಿದೆ! ಎನ್ನುವ ಪರಗತಸ್ವೀಕಾರ ರಹಸ್ಯವನ್ನು ಈ ಪ್ರಥಮ ಗಾಥೆಯಿಂದ ಪ್ರಕಾಶಪಡಿಸುತ್ತಾರೆ. ಪರಮ ನೀಚನಾದ ತನಗೆ, ದೇವಾಲಯದೊಳಗೇ ೪ ಸಾವಿರ ವರ್ಷಗಳಿಗೂ ಹಿಂದೆಯೇ ಪ್ರವೇಶವಿತ್ತುದೂ! ತಾನೂ ಲೋಕಸಾರಂಗಭಟ್ಟರ ಭುಜವೇರಿ ಒಳಗೆ ಬಂದುದೂ ಏನಪಚಾರವಾಯಿತೋ! ಎಂಬ ಸಾಮಾಜಿಕ ಸಂಕೋಚ! ''ಏಕೆ ಹೀಗೆಲ್ಲಾ ನೀವೇ ಹಿಂಜರಿಯುತ್ತೀರಿ! ಯಾವೊಂದು ಬಗ್ಗೆ ಅಸ್ಪಶ್ಯತೆ ಅಶುಚಿತ್ವವೂ ನನಗೆ ಸ್ಪರ್ಶಿಸುವುದೇ ಇಲ್ಲ! ಎಲ್ಲಾ ಬಗೆಯ ಅಸ್ಪೃಶ್ಯತೆಯನ್ನೂ ಹೋಗಲಾಡಿಸುವುದೇ ನನ್ನ ಸಹಜ ಸ್ವರೂಪ! ಅಖಿಲ ಹೇಯ ಪ್ರತ್ಯನೀಕತಾ! ಇದೋ ನೋಡಿ'', ಎಂದು ಶ್ರೀರಂಗನಾಥ ಪೆರಿಯಪೆರುಮಾಳ್ ಅಶ್ವಾಸನೆ ನೀಡಲಾಗಿ, ''ಸ್ವಾಮಿನ್, ನೀನಂತೆಯೇ ಸರಿ!'' ಎಂಬುದೇ ಈ ಮೊಟ್ಟಮೊದಲ ''ಅಮಲನ್'' ಪದದ ಭಾವ!

ಆದಿಪಿರಾನ್ = ಸರ್ವಜಗತ್ ಕಾರಣನಾದ ಆದಿನಾಥ! ಲೋಕಸಾರಂಗ ಮುನಿಗಳ ಬಲಾತ್ಕಾರಕ್ಕೆ ಒಪ್ಪಿದುದರಿಂದ ಅಡಿಯಾರ್‌ಕ್ಕು ಆಳ್ ಪಡುತ್ತ ವಿಮಲನ್ = ನನಗೇ ನಾನೇ ಒಡೆಯನೆಂಬ ಸ್ವಶೇಷತ್ವವನ್ನೂ, ಸ್ವಶ್ರೇಷ್ಠತೆಯೆಂಬ ನಾನೇನು ಬೇರೆಯವರಿಗೆ ಕಡಿಮೆಯೇ?

ಅನ್ಯಾsನು ಕರಣೆಯನ್ನೂ ತೊಲಗಿಸಿದ ವಿಮಲನ್! ಅಂದರೆ ಮಾನವ ತನಗಿಂತ ಬೇರೆಯವರಾದ ಎಲ್ಲರಿಗೂ ಸರ್ವಾಂತ್ಯಸೇವಕನೆಂಬ ಸ್ವೇತರಭಾಗವತ್ಯೆಕಶೇಷತ್ವ. ತತ್‌ಪಾರತಂತ್ರ್ಯಜ್ಞಾನವನ್ನೇ ಕರುಣಿಸಿದುದುದೇ ಅಡಿಯಾರ್ಕು ಆಳ್ ಪಡುತ್ತ ವಿಮಲನ್, ಪದದ ಭಾವ.

ವಿಣ್ಣವರ್ ಕೋನ್ = "ಅಯರ್ವರುಮ್ ಅಮರರ್‌ಹಳದಿಪತಿ" "ದೇವರ ಮರೆವಿಲ್ಲದ ಸೂರಿಗಳ್ಗಧಿಪತಿ" ವೈಕುಂಠದ ನಿತ್ಯಸೂರಿಗಳೆಂಬ ಧೇನುಗಳ ಮಂದೆಗೆ ಗೂಳಿಯಂತಿರುವವನು. ದಿವ್ಯಪರಿಷತ್ ಸಾರ್ವಭೌಮ! ಅಷ್ಟುದೂರದಲ್ಲಿದ್ದರೆ ನಿಮಗೇನು ಲಾಭ? ವಿರೈ ಆರ್ = ಸೌಗಂಧ್ಯವೇ ತುಂಬಿದ, ಪೊಳಿಲ್ ವೇಙ್ಗಡ ವನ್ = ಪುಷ್ಪ ಮಂಟಪವೆಂದೇ ಪ್ರಸಿದ್ಧವಾದ ಈ ವೆಂಕಟಾಚಲಕ್ಕೇ ಬಂದಿಳಿದವ! ಶ್ರೀರಂಗವನ್ನು 'ಭೋಗಮಂಟಪ'ವೆಂದೂ, ಕಾಂಚೀಪುರವನ್ನು 'ತ್ಯಾಗಮಂಟಪ'ವೆಂದೂ, ತಿರುನಾರಾಯಣಪುರ - ಮೇಲುಕೋಟೆಯನ್ನು "ಜ್ಞಾನಮಂಟಪ"ವೆಂದೂ, ಋಷಿಮುನಿಗಳ ಕಾಲದಿಂದ ಶಿಷ್ಟರು ಇಂದಿನವರಿವಿಗೂ ಕರೆಯುತ್ತಾರೆ. ವಿನೋದವಾಗಿ ಅಮ್ಮ್ಯಾಯಾರ್‌ಗಳು ಹೇಳುವ ವಾಸ್ತವಿಕ ಅನುಭವದ ಜಾನಪದ, ನಾಣ್ಣುಡಿ "ನಡ್ಯೆ-ವಡ್ಯೆ-ಕೊಡ್ಯೆ-ಮುಡಿ!" ಕ್ರಮವಾಗಿ ರಾಮಾನುಜರು ಅನುಸಂಧಿಸಿರುವಂತೆ, ಉತ್ಸವವೈಖರಿ, ಹಿರಿದಾದ ಕೆಡದವಡೆ ಪ್ರಸಾದ, ವೈಶಾಖ ಗರುಡೋತ್ಸವದಲ್ಲಿ ಹಿರಿದಾದ ಶ್ವೇತಚ್ಛತ್ರಿ, ವೈರಮುಡಿ.

[1]ಶ್ರೀರಂಗ ಮಂಗಳ ಮಣಿಂ, ಕರುಣಾನಿವಾಸಂ, [2]ಶ್ರೀವೇಂಕಟಾದ್ರಿ ಶಿಖಿರಾಲಯ ಕಾಳಮೇಘಮ್|
[3]ಶ್ರೀ ಹಸ್ತಿಶೈಲ ಶಿಖಿರೋಜ್ವಲ ಪಾರಿಜಾತಂ, [4]ಶ್ರೀಶಂ ನಮಾಮಿ ಶಿರಸಾ, ಯದುಶೈಲ ದೀಪಮ್||

ಎಂಬುದಕ್ಕೂ ಸರಿಹೊಂದಿದೆ.

ಇರಲಿ, ಈ ತಿಮ್ಮಪ್ಪನ ಸೌಲಭ್ಯ ಗುಣಾವಿಷ್ಕಾರ ಮಾಡಲು ತಕ್ಕ ಕಾರಣಗಳನ್ನು ತಿಳಿಸುವುದೇ "ನಿಮಲನ್"! = ನೀಚರೂ ಮಂದರೂ ಆದ ನಮ್ಮೊಡನೆ ತನ್ನ ಗರ್ವ ಬಿಟ್ಟು ಕಲೆತಾಡುವ, ಸೌಶೀಲ್ಯ ಗುಣನಿಧಿ, ನಿನ್‌ಮಲನ್ = ಆ ವೈಕುಂಠದ ಸರ್ವಸ್ವವನ್ನೂ ಇಲ್ಲೇ ಭಕ್ತರಾದವರಿಗೆಲ್ಲಾ ತೋರಿಸುತ್ತಿರುವ ನೈರ್‌ಮಲ್ಯ ಶಾಲಿ! ನೀತಿ ವಾನವನ್ = ಕ್ರಮತಪ್ಪದ ನೈತಿಕ ಸ್ಥಿರ ಮೌಲ್ಯಧಾರಿಗಳಿಂದ ತುಂಬಿದ ಆ ವೈಕುಂಠಾಧಿಪನಾಗಿದ್ದೂ, ಹೀಗೆ ತನ್ನ ಸ್ವರೂಪ ರೂಪಾದಿಗಳನ್ನೂ ಬಿಡದೆಯೇ ತಿಮ್ಮಪ್ಪನಾಗಿರುವುದು. ಅಲ್ಲಿ ನಿಂತಪಾದ! ಶ್ರೀರಂಗದಲ್ಲಿ - ಆ ತಿರುಮಲಪ್ಪನ ಪಾದವೇ ನಡೆದು ಬಂದು ಶ್ರೀರಂಗಧಾಮಯಾತ್ರೆಗೈದು ಶ್ರೀರಂಗಮಂದಿರದ ಉತ್ತರದ ದ್ವಾರದಿಂದ ಇಲ್ಲಿಗೆ ಸೇರಿತು! ಎಂಬ ಶ್ರೀ ಪರಾಶರಭಟ್ಟರ ಭಾವ, ಅನ್ಯಾದೃಶ!

ನೀಳ್ ಮದಿಳ್ ಅರಙ್ಗತ್ತಮ್ಮಾನ್ = ಘನ ಸಪ್ತಪ್ರಾಕಾರಾsವೃತ ಈ ತಿರುವರಂಗಂ! ಇಲ್ಲಿ ಶೇಷಶಯನಾಸನದಲ್ಲಿ ನೀಳ್ ನೀಡಿರುವ ಪಾದಪದ್ಮಗಳು! "ಶೇಷಿತ್ವಂ ಸ್ಫುಟಮೀಕ್ಷ್ಯತೇ" ಪಿಳ್ಳೈ ತಿರುನರೈಯೂರ್ ಅರೈಯರೂ ಮಧುರೆಯಲ್ಲಿ ಹುಟ್ಟಿ ಗೋಕುಲ ಸೇರಿದಂತೆ ವೈಕುಂಠದಿಂದ ಹಾಲ್ಗಡಲಿನ ಮೂಲಕ ಬಂದವನು ಕೊಂಚ ಕಾಲ ತಿರುಮಲೈಯಲ್ಲಿ ನಿಂತನಷ್ಟೇ! ಎಲ್ಲರಿಗೂ ಅಂತರಂಗ ಕೈಂಕರ್ಯ ನೀಡಲು ಶ್ರೀರಂಗದಲ್ಲೇ ಪವಡಿಸಿದ! ಎನ್ನುತ್ತಿದ್ದರು! ಅಂತಹ ಭೋಗಮಂಟಪದ ದೈವವೇ ಈಗ ನಡೆದೈತಂದು! ತಿರುಕ್ಕಮಲ ಪಾದಂ ವನ್ದು ಎನ್ ಕಣ್ಣಿನುಳ್ಳನ = ಈ ದಾಸನ ಅಕ್ಷಿಪುರುಷನಾಗಿಯೇ, ಒಕ್ಕಿನ್ನದೇ = ಶೇಷ - ಶೇಷಿ ಉಭಯಥಾ ಅವರವರ ಪ್ರಯೋಜನ ದಕ್ಕಿದಂತಾಯಿತಲ್ಲಾ!

ವೈಕುಂಠದಲ್ಲೇ ಇದ್ದಿದ್ದರೂ, ಹಾಲ್ಗಡಲಿನಲ್ಲಿ ಯೋಗನಿದ್ದೆ ಗೈದು ಮಧುರೆಗೂ ಅಲ್ಲಿಂದ ಶ್ರೀರಂಗಧಾಮಕ್ಕೆ ಬಿಜಯಮಾಡಿಸಿ ಅಷ್ಟಕ್ಕೇ ನಿಲ್ಲದೆ ಈ ದಾಸಾನುದಾಸನನ್ನು ಭಾಗವತ ಕಟಾಕ್ಷದಿಂದ ಪಾವನನನ್ನಾಗಿಸಿ ಆತನ ತಿರುವಡಿಗಳೇ ಸ್ವಯಂ ನನ್ನ ನಯನದೊಳಗೇ ಸಾನ್ನಿಧ್ಯ ಗೈಯ್ಯುತ್ತಿವೆಯಲ್ಲಾ! ಏನಾಶ್ಚರ್ಯ! "ಪುರುಷೋತ್ತಮ ಕ್ಷೇತ್ರ"ವೆಂದೇ ಪ್ರಸಿದ್ಧವಾದ, "ಪ್ರಸಾದಪಾವನಕ್ಷೇತ್ರ"ವೂ ಆದ ಪೂರಿಜಗನ್ನಾಥದಲ್ಲಿ ಕಣ್ಣಿಲ್ಲದ ಅಂಧನೋರ್ವ, ದರ್ಶನ ಮಾಡುತ್ತಿದ್ದವರನ್ನೆಲ್ಲಾ ತಳ್ಳಿಕೊಂಡು, ಕೃಷ್ಣಸುಭದ್ರಾ ಬಲರಾಮರ ಬಳಿಗೇ ಧಾವಿಸುತ್ತಿದ್ದ! ಕಣ್ಣೇಕಾಣದ ನೀನೇಕೆ ಹೀಗೆ ನುಗ್ಗುವಿ? ಎಂದು ಜನರು ಕೇಳಿದಾಗ "ದೇವರಿಗೆ ಕಣ್ಣಿದೆಯಲ್ಲಾ ಸ್ವಾಮಿ ಅತನೇ ನನ್ನನ್ನು ನೋಡಲೆಂದು ನಿಮಗೆಲ್ಲಾ ತೊಂದರೆ ನೀಡಿದೆನಷ್ಟೆ! ದಯವಿಟ್ಟು ಸ್ಥಳಕೊಡಿ!" ಎಂದನೆಂಬ ಐತಿಹ್ಯವುಂಟು.

ತಮಿಳ್ ತಿರಳ್ ೩

ಮನ್ದಿಪಾಯ್ ವಡವೇಙ್ಗಡಮಾಮಲೈ ವಾನವರ್‌ಹಳ್ ಶೆನ್ನಿ ಶೈಯ್ಯನಿನ್ರಾನ್ ಅರಂಗತ್ತರವಿನ್ ಅಣೈಯಾನ್
ಅನ್ದಿಪೋಲ್ ನಿರತ್ತಾಡೈಯುಮ್ ಅದನ್‌ಮೇಲ್ ಅಯನೈ ಪಡೈತ್ತದೋರೆಳಿಲ್ ಉನ್ದಿಮೇಲ್ ಅದನ್ನೋ ಅಡಿಯೇನ್ ಉಳ್ಳತ್ತಿನ್ ಉಯಿರೇ

ಕನ್ನಡ ನೆರಳ್

ಗಂಡ್ ಕಪಿಹಾರ್ ಉತ್ತರ ವೇಂಕಟ ಮಾಮಲೆಯೊಳ್ ಬಾನವರ್ ಸಂಜೆಯ ಪೂಜೆಯ ಗೈಯ್ಯಲು ನಿಂತಾ ಶ್ರೀರಂಗದಫಣಿಶಾಯಿಯ
ಸಂಧ್ಯಾಛವಿ ಪೀತಾಂಬರ ಮೇಲ್ ಅಜಸಂ ಪಡೆದೋರ್ ಚೆಲು 'ಉಂದೀ' ಯೆನ್ನುವ ನಾಭಿಯ ಮೇಲಲ್ಲವೇ ಅಡಿಯೇನ್ ಮನದಿನಿದುಸಿರು!

"ಪೀತಾಂಬರಧರಃ ಸ್ರಗ್ವೀ ಸಾಕ್ಷಾನ್ ಮನ್ಮಥ ಮನ್ಮಥಃ" ಎಂಬಂತೆ ಶ್ರೀರಂಗನಾಥನ ನಾಭಿಯನ್ನು ವ್ಯಾಪಿಸಿರುವ ಈ ಪೀತಾಂಬರದ ಸೌಂದರ್ಯ ನನ್ನನ್ನು ಮುಗ್ಧಗೊಳಿಸುತ್ತಿದೆ! ಮಂದಿ = ಕೋತಿಗಳು, ಪಾಯ್ = ಒಂದು ಮರದಿಂದ ಇನ್ನೊಂದು ಮರಕ್ಕೆ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೂ ಹಾರುವ ಸುಂದರ ದೃಶ್ಯವುಳ್ಳ, ವಡಮ್ ವೇಙ್ಗಡಮ್ ಮಾಮಲೈ = ತಮಿಳುನಾಡಿಗೆ ಉತ್ತರ ದಿಕ್ಕಿನಲ್ಲಿರುವ ಮಹಾ ವೇಂಕಟಗಿರಿಯಲ್ಲಿ, ವಾನವರ್‌ಹಳ್ = ನಿತ್ಯಸೂರಿಗಳಾದ ಅನಂತ ಗರುಡ ವಿಷ್ವಕ್‌ಸೇನಾದಿಗಳು. ಶನ್ದಿ ಶೆಯ್ಯ = ಸಂಧ್ಯಾಕಾಲದ ತಿರುವಾರಾಧನೆಗೈಯ್ಯಲು, ನಿನ್ರಾನ್ = ಅದನ್ನು ಸ್ವೀಕರಿಸಲು ನಿಂತ ತಿಮ್ಮಪ್ಪನೇ, ಅರಙ್ಗತ್ತು = ಶ್ರೀರಂಗದಲ್ಲಿ, ಅರವಿನ್ ಅಣೈಯ್ರ್ = ಶೇಷಶಾಯಿಯಾಗಿ ಮಲಗಿದ್ದಾನೆ! ಇಂತಹ ನಿದ್ರಾಸನದಲ್ಲಿರುವವನು ಕಟಿ ಪ್ರದೇಶದಲ್ಲಿ ಧರಿಸಿಕೊಂಡಿರುವ, ಅಂದಿಪೋಲ್ = ಪೂರ್ವ ಹಾಗೂ ಸಾಯಂಸಂಧ್ಯೆಯ, ನಿರತ್ತು = ಕೇಸರಿ ಕೆಂಬಣ್ಣದಂತೆ ಕಂಗೊಳಿಸುವ, ಆಡೈಯುಮ್ = ಶ್ರೀ ಪೀತಾಂಬರವೂ, ಅದನ್ ಮೇಲ್ = ಅದಕ್ಕೂ ಮೇಲೆ, ಅಯನೈ ಪಡೈತ್ತದು = ನಾಲ್ಮೊಗನನ್ನು ಹಡೆದ, ಓರ್ ಎಳಿಲ್ = ಬೇರ್ ಒಂದು ಸಮನಿಲ್ಲದ, ಚೆಲುವಾದ, ಉಂದಿಮೇಲ್ = ನಾಭೀ ಪದ್ಮದ ಮೇಲೆಯೇ ಇರುವ, ಅದನ್ನೋ = ಆ ಪೀತಾಂಬರವಲ್ಲವೋ ಆಸೆ ಹೆಚ್ಚಿರುವ, ಅಡಿಯೇನ್ = ಈ ತಿರುಪ್ಪಾಣಿ ದಾಸಾನುದಾಸನ, ಉಳ್ಳತ್ತು = ಮನಸ್ಸಿನೊಳಗಿರುವ ಅಥವಾ ಮನಸ್ಸಿನ ಬಳಿಯಿರುವ ಇನ್ ಉಯಿರೇ = ಸಿಹಿಯಾದ ಈ ಜೀವಾತ್ಮನು ಪ್ರಾಣದೊಂದಿಗಿರುವುದು. ಪೀತಾಂಬರದ ದರ್ಶನದಿಂದಲೇ ಇವರ ಇರುವಿಕೆ!

"ಯಮೇವ ಏಷ ವೃಣುತೇ ತೇನಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್"

ನಿರ್ಹೇತುಕವಾಗಿ ಯಾವ ಜೀವಾತ್ಮನನ್ನು ದೇವರೇ ವರಿಸುವನೋ ಅಂತಹ ಜ್ಞಾನಿ ಭಕ್ತನಿಗೆ ಆ ದೇವರೇ ತನ್ನ ಶ್ರೀಮೂರ್ತಿಯನ್ನು ಅಳಿ ಅಳಿ ತೋರಿಸುವನು!

ಈ ತಿರುಪ್ಪಾಣಿಗಳಿಗೆ ಅರ್ಚಾವತಾರದಲ್ಲೇ ಇಂತಹ ಪರಮ ಪುರುಷಾರ್ಥ ಸಿದ್ಧಿಸಿದ್ದೇ ವಿಶೇಷ! ಗುಹದೇವರಿಗೆ, ಮಾರುತಿಗೆ, ಭರತನಿಗೆ, ರಾಮಾವತಾರದಲ್ಲೂ, ಶ್ರೀ ಗೋಪಿಯರಿಗೆ ಅಕ್ರೂರ, ಮಾಲಾಕಾರರಿಗೆ, ಕೃಷ್ಣಾವತಾರದಲ್ಲೂ ತನ್ನ ತಿರುಮೇನಿಯನ್ನೇ ದಾನ ಮಾಡಿದ್ದು ಇಲ್ಲಿ ಅನುಸಂಧೇಯ. ಅನ್ದಿಪೋಲ್ = ಪೀತಾಂಬರದ ಛವಿ ಜನರ ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ಪ್ರಾತಸ್ಸಂಧ್ಯಾ ರಾಗದಂತೆಯೂ ದಿನದ ಕೆಲಸವೆಲ್ಲಾ ಮುಗಿದ ಮೇಲೆ ಜನರ **"ಆಧ್ಯಾತ್ಮಿಕ-ಆದಿಭೌತಿಕ ಆದಿದೈವಿಕ"**ಗಳೆಂಬ ತಾಪತ್ರಯವನ್ನೂ ಹೋಗಲಾಡಿಸುವ ಸಾಯಂ ಸಂಧ್ಯಾರಾಗದಂತೆಯೂ ಕಂಗೊಳಿಸುವುದು.

ತಿರುಮಜ್ಜೈಯಾಳ್ವಾರ್

ಈ ತಿರುಮಂಗೈಯಾಳ್ವಾರ್ ಆತ್ಮವನ್ನು ಬಿಸಲಿನಲ್ಲಿ ಒಣಗಿಸಿ ಒಡಲನ್ನು ನೆರಳಲ್ಲಿಟ್ಟ ಒಬ್ಬರಾಗಿದ್ದವರೇ! ಆತ್ಮನನ್ನು ಬಿಸಿಲಲ್ಲಿಡುವುದೆಂದರೇನು? ಈ ಜೀವಾತ್ಮನಿಗೂ ನೆರಳಾದ ವಾಸುದೇವ ತರುಚ್ಛಾಯೆಯಲ್ಲಿ, ತನ್ನನ್ನು ತಾನಿಡದಿರುವುದೇ. ಈ ಒಡಲೇ ನಾನಲ್ಲ. ಇದು ನನ್ನ ಮೈಯಷ್ಟೇ! ನಾನೀ ಶವವಲ್ಲ! ಆ "ಶಿವಶ್ಚ ನಾರಾಯಣಃ" ಎಂಬ "ಶಿವೋಹಮ್". ಈ ಜ್ಞಾನವಿಲ್ಲದವರೆಂಬುದೇ ಅದರ ಅರ್ಥ. ಒಡಲನ್ನು ನೆರಳಲ್ಲಿಡುವುದೆಂದರೆ, ಅನಾದಿ ಕಾಲದಿಂದಲೂ ಶಬ್ದ-ಸ್ಪರ್ಶ-ರೂಪ-ರಸ ಗಂಧಾದಿನಶ್ವರ ವಿಷಯಗಳಲ್ಲೇ ಅತಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಂಡು, ಅವನ್ನೇ ಪ್ರಧಾನ ಜೀವನವನ್ನಾಗಿ ಮೌಲ್ಯಮಾಪನ ಗೈದು ಅಮೂಲ್ಯವಾದ ಕಾಲ ಕಳೆದುದು. **"ಬ್ರಹ್ಮವನಮ್, ಸ ಉ ವೃಕ್ಷ ಆಸೀತ್"** ಈ ಪರಮಾತ್ಮನೆಂಬ ಹೆಮ್ಮರದ ನೆರಳೇ ನೆರಳು. ದಾರಿಗೆಡಿಸಬಹುದಾದ ವಿಷಯಾSನುಭಗಳೇ ನರಕಾಗ್ನಿ! ಬೆಂಬಿಸಿಲು!

ಹೀಗೆ ಕಣ್ಣಿಂದ ಕಾಣುವಷ್ಟೇ ವಸ್ತುಗಳಲ್ಲಿ, ಇವರು ತನ್ಮಯರಾಗಿದ್ದುದನ್ನು ಕಂಡು, ಅವುಗಳಂತೆಯೇ ತನ್ನ ರೂಪವನ್ನೂ ಇವರ ಇಂದ್ರಿಯಗಳಿಗೆ ಸಾಕ್ಷಾತ್ ತೋರಿದರೆ ಅದಕ್ಕೇ ಮಾರುಹೋಗುತ್ತಾರೆ ಎಂದು ಸರ್ವೇಶ್ವರ ತಾನಾಗಿಯೇ ಇಷ್ಟಪಟ್ಟು "ಉಹನ್ದು ಅರುಳಿನ ನಿಲಮ್" ಎಂಬಂತೆ ಸಾನ್ನಿಧ್ಯ ಗೈದಿರುವ ದಿವ್ಯಮೂರ್ತಿಗಳನ್ನೇ ತೋರಿಸುತ್ತಾ ಬಂದ. ಇದರಿಂದ ಇಹಲೋಕದಲ್ಲೇ ಇದ್ದರೂ ಈ ಆಳ್ವಾರ್ ಶರಣರು ಅರ್ಚಾವತಾರಗಳಲ್ಲೇ ಬಹಳಷ್ಟು ಪ್ರವಣರಾಗಿ ಬಿಟ್ಟರು. ಇವರು ಹಾಡಿರುವ ದಿವ್ಯದೇಶ ಹಾಗೂ ಶ್ರೀಮೂರ್ತಿಗಳಷ್ಟು ಉಳಿದ ಆಳ್ವಾರ್ ಯಾರೂ ಹಾಡಿಲ್ಲ. ಇವರ ವಿಷಯಾSSಸಕ್ತಿಯನ್ನು ಭಗವಂತ "ಮಯಿಆಸಕ್ತಮನಾಃ" ಎಂಬಂತೆ ಭಗವದ್ ವಿಷಯಾSSಸಕ್ತಿಗೆ ತಿರುಗಿಸಿಯೇ ಬಿಟ್ಟ. **"ಎಂತಹ ಕೆಟ್ಟವರನ್ನೂ ಅವರಲ್ಲಿರುವ ಒಳ್ಳೆಯ ಅಂಶದಿಂದಲೇ ಪರಿವರ್ತಿಸುವುದೇ ನಿಜವಾದ ಅಹಿಂಸಕ ಕ್ರಾಂತಿ"** ನಿಂದೆ ಪಕ್ಷಭಾವನೆ, ಕಾನೂನು, ಕೊಲೆ ಯುದ್ಧಗಳಿಂದ ಯಾವೊಬ್ಬರೂ ತಾವು ತಾವೇ ಬಯಸುವ ಆಯಾಯಾ ಒಳ್ಳೆಯ ಆದರ್ಶ ದೂರ ದೂರ ವಿರುದ್ಧ ನಿಟ್ಟಿನಲ್ಲೇ ಸರಿದೀತೇ ಹೊರತು ಬೇರೇನೂ ಸಾಧಿಸಿದಂತಾಗುವುದಿಲ್ಲ. "ಆತ್ಮೈವ ರಿಪುರಾತ್ಮನಃ" - ಭಗವದ್ಗೀತೆ.

ಹಾಗೂ ತನ್ನ ಬಗೆಗೆ ಕರುಣಾಳು ನಾರಾಯಣ ಮಂತ್ರೋಪದೇಶವನ್ನು ಇವರ ಬಲಗಿವಿಯಲ್ಲಿ ಮಾಡಿದ! ಆಗ ಇವರು ಮೊಟ್ಟಮೊದಲಿಗೇ ಪರಮ ಜ್ಞಾನಿಗಳಾಗಿ ಪಶ್ಚಾತ್ತಾಪಪಡುತ್ತಾ ಹೀಗೆ ಆರಂಭಿಸಿದರು.

ಬಾಡಿದೆನು ಬಾಡಿ ಬಳಲಿದೆನು ಮನದಿಂ ಕಡುಕಷ್ಟ ಕಾರ್ಪಣ್ಯ ಭವದೊಳಗೆ ಪುಟ್ಟಿ,
ಕೂಡಿದೆನು, ಕೂಡಿ ಎಳೆ ಹೆಂಗಳರೊಡನೆ ಅವರೀವ ಭೋಗವನೆ ಗೆಂಜುತ್ತ ಬಯಸಿ|
ಓಡಿದೆನು, ಓಡಿ ಕಡೆಹಾಯ್ಪ ವೋರ್ ಪೊರುಳಿಂ ಅರಿವೆಂಬ ಹಿರಿಪದವನರಿತು, ಹುಡು
ಕಾಡಿದೆನು, ಹುಡುಕಿ ಕಂಡು ಕೊಂಡೆನು ನಾನು ನಾರಾಯಣಾ ಎಂಬ ನಾಮಮ್||

ಇದೇ ಇವರ ಚೊಚ್ಚಲ ಕೃತಿ "ಹಿರಿಯಸಿರಿನುಡಿ", ಪೆರಿಯ ತಿರುಮೊಳಿ.

ಸರ್ವೇಶ್ವರ ಶ್ರಿಯಃಪತಿ ಇವರ ಮೇಲೆ ನಿರ್‌ಹೇತುಕ ಕೃಪೆ ಮಾಡೋಣ, ತನ್ನ ಸ್ವರೂಪ ರೂಪ ಗುಣ ವಿಭೂತಿಗಳನ್ನು ಆತುಕೊಳ್ಳುವಷ್ಟು ಭಗವದಿತರ ಸ್ವರೂಪ ರೂಪ ಗುಣವಿಭೂತಿಗಳಲ್ಲಿ ಇವರು ಹಿಂದೆಲ್ಲಾ ಆಸಕ್ತಿ ಬೆಳಸಿಕೊಂಡಿದ್ದುದು ಒಳ್ಳೆಯದಕ್ಕೇ ಆಯಿತು! ಜಗತ್ತನ್ನು ಪ್ರೀತಿಸದವನು ಜಗದೀಶನನ್ನು ಹೇಗೆ ಪ್ರೀತಿಸಬಲ್ಲ? "ಅಲಲಾ! ನಾನು ಹೇಯ ವಿಷಯಗಳ ಬಲೆಗೇ ಬಿದ್ದಿದ್ದವನು! ಅದೇ ಕಾರಣದಿಂದ ಸ್ವಾಮಿ ಎಷ್ಟೊಂದು ಚತುರತೆಯಿಂದ ಕರುಣೆ ತೋರಿ ತನ್ನ ಬಲೆಗೇ ಹಾಕಿಕೊಂಡ! ಈ ಕೃತಜ್ಞತೆ ಹಿಂದಿನದಕ್ಕಿ ಪಶ್ಚಾತ್ತಾಪ, ಅರ್ಚಾಮೂರ್ತಿಗಳ ವಿಶ್ಲೇಷವನ್ನು ಕೊಂಚವೂ ಸಹಿಸದಿರುವಿಕೆ, ದಿವ್ಯಧಾಮಗಳ ಪರಿಸರ ಪ್ರೇಮ ಮುಂತಾದವುಗಳನ್ನೆಲ್ಲಾ ವಿಸ್ತಾರವಾಗಿ, ಮಧುರವಾಗಿ ವಿಚಿತ್ರ ಶೈಲಿಗಳಲ್ಲಿ, ಆಶುಕವಿತೆಯಿಂದ ಸ್ವಚ್ಛ, ಸಕಲಲಕ್ಷಣೋಪೇತವಾದ ತಮಿಳು ಸಾಹಿತ್ಯ ಕ್ಷೇತ್ರಕ್ಕೆ ಅದರ ವಾಙ್ಮಯ ಶ್ರೀಯನ್ನು ತಮಿಳರೆಲ್ಲರೂ ಮೆಚ್ಚುವಂತೆ ತಂದುಕೊಟ್ಟರು. ಅಂತೆಯೇ ಇವರಿಗೆ "ಚತುಷ್ಕವಿ ಶಿಖಾಮಣಿ" ಎಂಬ ಬಿರುದು ಸಂದಿತು.

ತಮಿಳುನಾಡಿನ ತಿರುವಾಲಿನಾಡಿಗೆ ಸೇರಿದ "ತಿರುನಗರಿ" ಅಥವಾ "ತಿರುಕ್ಕುರೈಯಲೂರ್" ಎಂಬಲ್ಲಿ 'ಕಳರ್' ಎಂಬ ಕಳ್ಳ ಶಬರ ಪಂಗಡದವರಿಗೆ ಮಗನಾಗಿ ಹುಟ್ಟಿದವರಿವರು. ಒಳ್ಳೆ ಎತ್ತರದ ಮೈ ಕಟ್ಟು! ಸ್ನಿಗ್ಧ ನೀಲಮೂರ್ತಿಯೇ ಆಗಿದ್ದುದರಿಂದ "ನೀಲಪ್ಪ -

ಬೇಡರನೀಲಪ್ಪ'' ಎಂದೇ ಇವರ ಮೊದಲ ಹೆಸರು. ಕಾರ್ತೀಕಮಾಸ ಕೃತಿಕಾ ನಕ್ಷತ್ರ ಇವರ ಜನ್ಮ. ಒಂದು ಹೆಣ್ಣಿನ ಚೆಂದಕ್ಕೆ ಮರುಳಾಗಿ ಅವಳು ಹೇಳಿದಂತೆ ಕುಣಿದು, ಪಾಳಯಗಾರನಾಗಿದ್ದ ಈತ ಒಂದು ವರ್ಷಕ್ಕೆ ಒಂದು ದಿನ ಕಡಿಮೆಯಾಗಿ ನಿತ್ಯ ಸತ್‌ಪಾತ್ರದಲ್ಲಿ ಅನ್ನದಾನ ನಡೆಸಿದ. ಸ್ವಾಮಿಯ ಪರೀಕ್ಷೆ! ನಾಳೆ ಪೂರ್ಣಸಂತರ್ಪಣೆ ಆಗಬೇಕು. ಆ ದೇವಕನ್ಯೆ ಒಲಿದೇ ಬಿಡುತ್ತಾಳೆ! ಆದರೆ, ಏನೂ ಕಾಳು ಕಡ್ಡಿ ಇಲ್ಲ, ಹಣವಿಲ್ಲ! ಅಂದು ರಾತ್ರಿ ''ತಿರುಮಣಂಕೊಲ್ಲೈ'' ಎಂಬ ಬೋರೆಯಲ್ಲಿ ಹೊಂಚುಹಾಕುತ್ತಿರುವಾಗಲೇ ಒಂದು ಮದುವೆ ದಿಬ್ಬಣ ಕಾಣಿಸುತ್ತದೆ! ಆ ನವ ವಧೂವರರ ಮೇಲಿನದನ್ನು ಕೊಳ್ಳೆ ಹೊಡೆದರೆ, ಇನ್ನೂ ೧ ವರ್ಷ ಬೇಕಾದರೂ ೧೦೦೦ ಜನಕ್ಕೆ ಪ್ರತಿದಿನ ಊಟ ಹಾಕಬಹುದು! ಹೆದರಿದ ಗಂಡು, ಹೆಣ್ಣು, ತಮ್ಮದೆಲ್ಲವನ್ನೂ ನೀಲಪ್ಪನಿಗೆ ಸದ್ದಿಲ್ಲದೆ ಅರ್ಪಿಸಿಯೇ ಬಿಟ್ಟರು. ಏನು ಚಮತ್ಕಾರ! ಆ ಒಡವೆ, ರತ್ನ ಪಡಿ, ಧನ ಕನಕ ವಸ್ತ್ರಾದಿಗಳ ಗಂಟನ್ನು ಎತ್ತಲಿಕ್ಕೇ ಆಗಲಿಲ್ಲ.

ಆಗ ದರೋಡೆಕೋರ ನೀಲಪ್ಪ, ಕತ್ತಿಯನ್ನೆತ್ತಿ ''ಏನು ಮಂತ್ರ ಹಾಕಿದ್ದೀಯೋ ಹೊಸ ಅಳಿಯಪ್ಪಾ? ಎತ್ತಲಾಗದಂತೆ ಏನು ತಡೆ ಯಕ್ಷಿಣಿ ಮಾಡಿದ್ದೀ?'' ''ಬಾ! ನನ್ನ ವತ್ಸಾ! ನೀಲಾ! ಆ ಯಕ್ಷಿಣಿ ಮಂತ್ರ ಇದೋ, **''ಓಮ್ ನಮೋ ನಾರಾಯಣಾಯ''** ನೀಲಪ್ಪನಲ್ಲಿ ಅಪೂರ್ವ ವಿದ್ಯುತ್ ಸಂಚಾರದ ಝಳುಕು ತಾಗಿದ್ದೇ ತಡ ಹೊಸ ಮಾನವವಾಗಿಯೇ ಬಿಟ್ಟ. ಆಸೆ ಪಟ್ಟ ಆ ಪ್ರೇಯಸಿಯ ಹೆಸರು **''ತಿರುಮಂಗೈ''**. ಅವಳ ನಿಮಿತ್ತದಿಂದ ಪೋಲಿ ನೀಲಪ್ಪ ''ತಿರುಮಂಗೈ ಆಳ್ವಾರ್'' ಆಗಿಯೇ ಬಿಟ್ಟರು. ಪ್ರಪನ್ನ ಜನಕೂಟಸ್ಥರಾದ ಶಠಕೋಪ ನಮ್ಮಾಳ್ವಾರರ ನಾಲ್ಕು ವೇದಸಾರಗಳಿಗೆ, ಇವರು ಆರು ಅಂಗಗಳ ರೂಪದಲ್ಲಿ, ಕಾಣಿಕೆಯಿತ್ತರು.

೧. ಪೆರಿಯ ತಿರುಮೊಳಿ	ಪಾಶುರ (ಹಾಡು)	೧೦೮೪
೨. ತಿರುಕ್ಕುರುನ್ದಾಣ್ಡಹಮ್	ಪಾಶುರ	೨೦
೩. ತಿರುವೆಳು ಕ್ಕೂತ್ತಿರುಕ್ಕೈ	ಸರಳ ರಗಳೆ	೧
೪. ಶಿರಿಯ ತಿರುಮಡಲ್	ದ್ವಿಪದಿ	೭೭೧/೨
೫. ಪೆರಿಯ ತಿರುಮಡಲ್	ದ್ವಿಪದಿ	೧೪೭೧/೨
೬. ತಿರುನೆಡುನ್ದಾಣ್ಡಹಮ್	ಗಾಧಾಪಾಶುರ	೩೦

''ದ್ವಾಪರಾಂತ್ಯ''ದಲ್ಲಿ ಪೊಯ್‌ಗೈಯಾಳ್ವಾರಿಂದ ಆರಂಭವಾಗಿ, ಕಲಿಯುಗದ ಆದಿ ಈ ಐನೂರು ವರ್ಷಗಳ ಈ ಅಂತರದಲ್ಲಿ ಕಾಣಿಸಿಕೊಂಡ ಒಂದು ಹೆಣ್ಣೂ ಸೇರಿ ಹನ್ನೆರಡು ಮಂದಿ, ಆಳ್ವಾರ್‌ರುಗಳಲ್ಲಿ ಇವರೇ ಕಡೆ ಕುಟ್ಟಿ!

ಇವರು ಅನುಭಾವಿಗಳೂ ಆಗಿದ್ದುದರ ಜತೆಗೇ ಟಿಬೆಟ್, ಲಕ್ಷದ್ವೀಪ ಅಲ್ಲೆಲ್ಲಾ ಸಂಚರಿಸಿ ಅನೇಕ ದಿವ್ಯದೇಶ ಯಾತ್ರೆಗೈದು, ಜೀರ್ಣೋದ್ಧಾರ ಹಾಗೂ ಅನೇಕ ವ್ಯವಸ್ಥೆಗಳನ್ನೂ ಗೈದುದು ಅನುಪಮ ಅಸಾಧಾರಣ ವಿಶಿಷ್ಟತೆಯಿಂದ ಕೂಡಿದೆ. ಕಲಿಕಾಲದಲ್ಲಿ ಭಕ್ತಿಯ ಗ್ರಾಮೀಕರಣ, ಅತ್ತ ವೈಶ್ವೀಕರಣಕ್ಕೆ ಒದಗುವಂತೆಸಗಿ ತನ್ಮೂಲಕ ಭ್ರಷ್ಟಧನಿಕರಿಗೂ ಶಿಷ್ಟತೆಯನ್ನು ತಂದುಕೊಟ್ಟ ಮಹಾಕಾರುಣ್ಯದ ಮೂಲಕ ಶಾಂತಿಮಯ ಆರ್ಥಿಕ ಕ್ರಾಂತಿಕಾರರಾದರು! ಪ್ರಕೃತ ಅವರು ತಿರುಪತಿ ತಿಮ್ಮಪ್ಪನ ಮೇಲೆ ಕಟ್ಟಿರುವ ಪಾಶುರಗಳನ್ನು ಅನುಭವ ಮಾಡೋಣ.

ಪೆರಿಯ ತಿರುಮೊಳಿ

ತಮಿಳ್ ತಿರಳ್ ೧-೮-೧

ಕೊಙ್ಗಲರ್‌ನ್ದ ಮಲರ್ ಕುರುನ್ದಮೊಶಿತ್ತ ಕೋವಲನ್ ಎಂಬಿರಾನ್
ಶಙ್ಗುತಙ್ಗು ತಡಙ್ಕಡಲ್ ತುಯಿಲ್ ಕೊಣ್ಡ ತಾಮರೈ ಕ್ಕಣ್ಣಿನನ್
ಪೊಙ್ಗು ಪುಳ್ಳಿನೈ ವಾಯ್ ಪಿಳನ್ದ ಪುರಾಣರ್ ತಮ್ ಇಡಮ್ ಪೊಙ್ಗುನೀರ್
ಶೆಙ್ಗಯಲ್ ತಿಳೈಕ್ಕುಮ್ ಶುನೈ ತ್ತಿರುವೇಙ್ಗಡಮ್ ಅಡೈನೆಞ್ಜಮೇ

ಕನ್ನಡ ನೆರಳ್

ಕಂಪಲರಿಪ ಮಲರ್ ಯಮಳಾರ್ಜುನ ಸೀಳ್ ಗೋವಳನ್ ಎನ್ ಉಪಕಾರಿ
ಶಂಕುಗಳ್ ತಂಗಿಹ ಹಿರಿಗಡಲೊಳು ಯೋಗದನಿದ್ದೆಯಕೊಂಡಾ ತಾವರೆಗಣ್ಣನ್
ಹೊಂಗುತ ಮೇಲ್ ಬಿದ್ದಾSS ಬಕನ್ ಬಾಯ್ ಪಳೆದಾ ಹಳೆ ಹೊಸಬನ ಉಕ್ಕುವ ನೀರ್‌ದಾಣಂ
ಚೆಂಗೆಂಪಿನ ಮೀನ್‌ಗಳು ಜಿಗಿದಾಡುವ ದೊಣೆ ತಿರುವೇಂಕಟಗಿರಿಯಡೆ ಮನವೇ

ಈ ೧೯ನೇ ಶತಕದ ಎಂಟನೇ ದಶಕದ ಮೊದಲ ಹಾಡಿನಿಂದ ಆರಂಭವಾಗಿರುವುದಕ್ಕೆ ಹಿಂದಿನ ದಶಕ, ಆಂಧ್ರಪ್ರದೇಶದ ಅಹೋಬಿಲ ಕ್ಷೇತ್ರದ ನೃಸಿಂಹರ ಬಗೆಗೆ, ಆ ಹರಿ, ಹರಿನಾಮ ಹೇಳಿದ ಒಬ್ಬ ಪ್ರಹ್ಲಾದ ಬಾಲಕನನ್ನು ಕಾಪಾಡಿದ. ಯಾರೇ ಹರಿನಾಮ ಹೇಳಲಿ! ಅಂಥವರೆಲ್ಲರನ್ನೂ ಎಂದಿಂದಿಗೂ ಅತುಕೊಳ್ಳುವುದಕ್ಕಾಗಿಯೇ, ಆತನೇ ಈ ತಿರುಮಲೆಯಲ್ಲಿ ತಿಮ್ಮಪ್ಪನಾಗಿ ನಿಂತಿರುವುದು. ನಾವು ಅಲ್ಲೇ ಹೋಗಿ ಸ್ವಾಮಿಗೆ ಮಂಗಳಾSSಶಾಸನ ಮಾಡೋಣ. ಓ ಮನವೇ! ತಯಾರಾಗು.

ಕೊಜ್ಗು = ಪರಿಮಳವನ್ನೇ, ಅಲರ್ನ್ದ = ಸುತ್ತಲೂ ಹರಿಸುತ್ತಿದ್ದ, ಮಲರ್ = ಹೂ ತುಂಬಿದ ತಾಳಿನಿಂದ ತುದಿಯವರೆಗೂ ಹೂವೇ ಹೂವಾಗಿದ್ದ ಮತ್ತಿಮರದ ಪುಷ್ಪ ಕುಯ್ಯಲೋ ಎಂಬಂತೆ, ಅದರಲ್ಲೇ ಆವೇಶ ತಾಳಿದ್ದ ಯಮಳಾರ್ಜುನರನ್ನು ಮುಕ್ತಿಗೇರಿಸಿದ, ಕುರುನ್ದಮ್ = ಬೂರಗದ ಮರಗಳ ಹೆಣೆದ ಜೋಡಿಯನ್ನು, ಒಶಿತ್ತ = ಪಳೆದು ಮುರಿದು ಹಾಕಿದ, ಕೋವಲನ್ ಎಮ್ ಪಿರಾನ್ = ಗೋಪಾಲನಾಗಿ ಬಂದೆಮ್ ಉಪಕಾರಿ. ದುಷ್ಟವೃಕ್ಷಗಳನ್ನು ಮಾತ್ರ ಸಂಹರಿಸಲಿಲ್ಲ. ನೀಲಪ್ಪನಾಗಿದ್ದ ನನ್ನ ಭಗವದ್ ವಿಷಯಕ್ಕೆ ವಿರೋಧ ಗೈಯ್ಯುತ್ತಿದ್ದ ಎಲ್ಲಾ ಮಾಯಾಪಾಶಗಳನ್ನೂ ಹೋಗಲಾಡಿಸಿದ ಪರಮೋಪಕಾರಿ. ಈ "ಎಂಪಿರಾನ್" "ಎಂಪೆರುಮಾನ್" ಶಬ್ದ ಆಳ್ವಾರುಗಳ ದಿವ್ಯ ಪ್ರಬಂಧಗಳಲ್ಲಿ ಬಹಳೆಡೆ ಬರಲು ಕಾರಣವೆಂದರೆ, ಪೌರಾಣಿಕ ಭಗವತ್ ಕಥೆಯ ಸಂದರ್ಭಗಳನ್ನು ತಮ್ಮಗಳ ಜೀವನಕ್ಕೆ ಅನ್ವಯಿಸಿ ತಿದ್ದಿಕೊಳ್ಳುವ ಕಾಳಜಿ ಈ ಶರಣರಲ್ಲಿರುವುದೇ ಆಗಿದೆ. ಕಥಾಶ್ರವಣಕ್ಕೆ ಹೆಚ್ಚು ಒತ್ತು ಕೊಟ್ಟು, ನಮ್ಮ ನಮ್ಮ ಜೀವನ ಪರಿವರ್ತನೆಗೆ ಯೋಚಿಸದೆಯೇ ಇರುವ ತಮ್ಮ ಅನುಯಾಯಿಗಳೆಂದುಕೊಳ್ಳುವವರಿಗೆ ಇದು ಒಳ್ಳೆಯ ಪಾಠ ಕಲಿಸುವುದು.

ಕೃಷ್ಣಾವತಾರಕ್ಕೂ ಮೂಲ ಕಂದಸ್ಥಾನ ಕ್ಷೀರಸಮುದ್ರ. ಅದೆಂಥದು? ಶಙ್ಗು = ಶಂಖಗಳ ನಾನಾ ಜಾತಿಗಳು. ತಙ್ಗು = ಹೇರಳವಾಗಿ ಜಮಾಯಿಸಿರುವ, ತಡಮ್ ಕಡಲ್ = ವಿಸ್ತಾರವಾಗಿರುವುದರಿಂದ ತೋಳ್ ಪಾದ ಬೆಳೆಸಿ ನಿದ್ದೆ ಮಾಡಲು ಅನುಕೂಲವಾದುದು, ಕ್ಷೀರಸಮುದ್ರ. ಅಲ್ಲಿ, ತುಯಿಲ್ ಕೊಣ್ಡ = ಯೋಗ ನಿದ್ರೆ ಸ್ವೀಕರಿಸಿ ಕಣ್ ಬೆಳಸಿರುವ, ತಾಮರೈ ಕಣ್ಣಿನನ್ = ಆ ಸುಪ್ತ ಭಂಗಿಯ ನಯನ ಸೌಂದರ್ಯ! ಮುಚ್ಚಿದ ತಾವರೆಗಿಂತಲೂ ಮೇಲ್ಮಟ್ಟದ್ದು, ಈ ಭಾಗವನ್ನೇ ರಾಮಾನುಜರು, **"ಗಂಭೀರ ಅಂಭಸ್ ಸಮುದ್ಭೂತ ಸುಮೃಷ್ಟನಾಳ ರವಿಕರ ವಿಕಸಿತ"**, ಇಲ್ಲಿಗೆ ಚಂದ್ರಕರಮುಕುಳಿತ! ಎಂಬಂತೆ **"ಪುಂಡರೀಕದಳ ಅಮಲಾಯತೇಕ್ಷಣಃ"** ಇತ್ಯಾದಿಯಾಗಿ ದ್ರಾವಿಡ ಭಾಷಾ ಸೌಂದರ್ಯ ಸೌಭಗವನ್ನು ಆರ್ಯ ಭಾಷೆಗೆ ತಂದುಪಕರಿಸಿದ್ದಾರೆ!

ಬಕಾSಸುರ ವಧ. ಪೊಙ್ಗು = ಬಲು ತಿಮಿರಿನಿಂದ ಮೇಲ್ ಬಿದ್ದ, ಪುಳ್ಳಿನ್ಮೆ = ಕೊಕ್ಕಿನ ಬಾಯ್ ತೆರೆದ ಹಕ್ಕಿಯ, ವಾಯ್ ಪಿಳನ್ದ = ಆ ಕೊಕ್ಕಿನ ಮೇಲ್ ಭಾಗವನ್ನು ಮೇಲಕ್ಕೂ ಕೀಳ್ಭಾಗವನ್ನು ಕೆಳಕ್ಕೂ, ಪಳೆದೇ ಹಾಕಿದ ಹೀಗೆ ವಿರೋಧಿ ನಿರಸನ ಪರಂಪರೆಗಳನ್ನು, ಭಕ್ತರೂ ಆಶ್ವಾಸನ ಪಡೆದು ನಿರಾಸೆ ತಾಳದೆ ಇರುವುದಕ್ಕಾಗಿ, ಒಕ್ಕಣಿಸುತ್ತಾರೆ. ಎಲ್ಲರಲ್ಲೂ ಶುಭ ಮುಹೂರ್ತವೇ ಕಾದಿದೆ! ಅತುರಬೇಡ! ಮಹಾವಿಶ್ವಾಸ ಶಕ್ತಿ ಬೆಳಸಿಕೊಳ್ಳಿ ಎಂಬ ಸಂಕೇತ! ಇಲ್ಲಿದೆ. ಆ ಪುರಾಣ ಪುರುಷ ಇಂದಿಗೂ ಮುಂದಿಗೂ ನವ್ಯನೂ ಹೌದು!

"ಪುರಾSಪಿ ನವಃ" "ಪುರಾಣೋSಪಿ ನವೋ ನವಃ"

ದೇವರ ಸರ್ವತೋಮುಖಿ ಅರಿವಿಲ್ಲದೆಯೇ ನಾವಾರೂ ಟೀಕಿಸಬಾರದೆಂಬ ಪಾಠ ಇಲ್ಲಿ! ಪುರಾಣರ್ ತಮ್ ಇಡಮ್ = ಅದರಲ್ಲೂ ಪ್ರಧಾನವಾದ ಕಲಿಹರಕ್ಷೇತ್ರ! ಪೊಙ್ಗು ನೀರ್ = ಅಶೋಷ್ಯವಾಗಿ ಉಕ್ಕುತ್ತಲೇ ಇರುವ ನಿತ್ಯ ಚಿಲುಮೆ ನೀರ್ ಬುಗ್ಗೆಗಳೇ ಹೇರಳವಾಗಿರುವ, ತಿರುವೇಙ್ಗಡಮ್. ಅಲ್ಲಿ ಜಲ ಸಮೃದ್ಧಿ ಅಷ್ಟೊಂದಿಲ್ಲದೆ ಇದ್ದಿದ್ದರೆ ಮೀನುಗಳಿಗೆ ಸಂತೋಷವಿರುತ್ತಿರಲಿಲ್ಲ! ತೀರ್ಥಸಮೃದ್ಧಿ! ಶೆಮ್ ಕಯಲ್ = ಕೆಂಪು ಜಾತಿಯ, ಮತ್ಸ್ಯವಿಶೇಷಗಳು. ಪಿಳೈಕ್ಕುಮ್ = ಜಿಗಿದಾಡುವ, ಶುನೈ = ನೀರ್ ದೊಣೆಗಳುಳ್ಳದ್ದು. ಅಂತಹ ಶ್ರೀಗಿರಿ ಕ್ಷೇತ್ರವನ್ನು ಸೇರೋ, ನೀ ಎನ್ ನೆಞ್ಜಮೇ = ಪೂರ್ವಾಶ್ರಮದಲ್ಲಿದ್ದ ಹಾರಾಟಗಳನ್ನೆಲ್ಲಾ ಭಗವತೀಕರಣ ಮಾಡಿಸಿಕೊಂಡು ಸುಸಂಸ್ಕಾರ ಪಡೆದಿರುವ ಓ! ನವ್ಯ ಮನವೇ! ದಿವ್ಯದೇಶಗಳತ್ತ ಧಾವಿಸು.

ತಮಿಳ್ ತಿರಳ್ ೧-೮-೨

ಪಳ್ಳಿಯಾವದು ಪಾರ್ಕ್ಕಡಲ್ ಅರಙ್ಗಮ್ ಇರಙ್ಗವನ್ ಪೇಯ್ ಮುಲೈ
ಪಿಳ್ಳೈಯಾಯ್ ಉಯಿರುಣ್ಡ ಎನ್ನೈ ಪಿರಾನವನ್ ಪೆರುಹುಮಿಡಮ್
ವೆಳ್ಳಿಯಾನ್ ಕರಿಯಾನ್ ಮಣಿ ನಿರವಣ್ಣನ್ ಎನ್ನೆಣ್ಣಿ ನಾಳ್ ದೊರುಮ್
ತೆಳ್ಳಿಯಾರ್ ವಣಙ್ಗುಮ್ ಮಲೈ ತಿರುವೇಙ್ಗಡಮ್ ಅಡೈ ನೆಞ್ಗಮೇ

ಕನ್ನಡ ನೆರಳ್

ಹಾಸಿಗೆಯಾದುದು ಹಾಲ್ಗಡಲ್ ಸಿರಿರಂಗಂ, ಅರಚುವೊಲ್ ಕಡುಸೇಯ್ಮೊಲೆಯಂ
ಹಸುಳೆಯೆ ಆಗಿ ಉಸಿರ್ ಉಂಡೆನ್ ಕುಲನಾಥನ್ ಉಪಕಾರಿಯವನ್ ಬೆಳೆಯಿಡೆಯಂ
ಬೆಳ್ಳಿಯ ಬಣ್ಣನ್ ಕರಿಬಣ್ಣನ್ ಪಚ್ಚೆಯ ಕಳೆ ಬಣ್ಣನ್ ಎಂಬಿವ ಸಹಜಂ ಚಿಂತಿಸುತೆಂದೂ
ತೆಳಿವುಳ್ಳವರ್ ಬಾಗುವ ಮಲೆ "ತಿರುವೇಂಕಟಂ" ಅದನಡೆಮನವೇ!

ಈ ದಶಕ ಪೂರಾ ತಿಮ್ಮಪ್ಪನದೇ! ಪಳ್ಳಿಯಾವದು = ಹಾಸಿಗೆಯಾಗುವುದು ಶಯನಾSಗಾರ, ದಿವ್ಯಾಂತಃ ಪುರ, ಪಾರ್ ಕಡಲ್ = ಹಾಲ್ಗಡಲು. ಚತುರ್‌ಮುಖ ಸನಕಾದಿ ಯೋಗಿಗಳಿಗೆ ಮಾತ್ರ ಸ್ವಾಮಿಯನ್ನು ಅದೂ ದೂರದಿಂದಲೇ ಆಶ್ರಯಿಸಿ ಮೊರೆಯಿಡಬಹುದಾದ ವ್ಯೂಹಸ್ಥಾನ, ಸತ್ಯಲೋಕದ ಒಂದೆಡೆಯಲ್ಲಿರುವ ಕಾರ್ಯವೈಕುಂಠ. ಅಂತಹ = ಅದೃಶ್ಯ, ಅಪ್ರವೇಶ್ಯವಾದ ಎಡೆಗೆ ಹೋಗಲಾರದ ಸಂಸಾರಿ, ಮುಮುಕ್ಷುಗಳಾಗಿರುವವರಿಗೆ, ಅರಙ್ಗಮ್ = ಶ್ರೀ ರಂಗಧಾಮ. ಇರಙ್ಗ = ಕನಿಕರಿಸುತ್ತಾ ಪಾಲ್ ಸೊರೆಯುವ, ಅಥವಾ ನೋವಿನಿಂದ ಅರಚಿಕೊಳ್ಳುವಂತೆ, ವನ್‌ಪೇಯ್ = ಕ್ರೂರ ಸ್ವಭಾವದ ಹುಚ್ಚು ರಾಕ್ಷಸಿಯಾದ ಪೂತನಿಯ ಮುಲೈ = ಸ್ತನ್ಯವನ್ನು, ಪಿಳ್ಳೈಯಾಯ್ = ಎನೊಂದೂ ಅರಿಯದ ಮುಗ್ಧಸ್ವಭಾವದ ಶಿಶುವಾಗಿಯೇ! ಉಯಿರ್ = ಪ್ರಾಣವನ್ನೂ, ಉಣ್ಡ = ಹೀರಿದ,

"ಸ್ತನ್ಯಂ ತದ್ ವಿಷ ಸಂಮಿಶ್ರಂ ರಸ್ಯಮಾಸೀತ್ ಜಗದ್‌ಗುರೋಃ"

ತಿರುಮಂಗೈಗಳ ಅನುಭವಕ್ಕೆ ಉಪಕಾರಕನಾದಂತೆಯೇ ಹರಿದು ಬಂದಿದೆ ಇಲ್ಲಿನ ಭಾವ. ವಿಷವಾಗಿದ್ದರೂ ರುಚಿಸಲು ಕಾರಣವೇನು? ಎನ್ನೈ = ಈ ದಾಸನ ಕುಲನಾಥನಾದವನೇ ಪೂತನೆಯ ಕುಲಕ್ಕೂ ನಾಥನಷ್ಟೆ! ದೇವರು ತನ್ನನ್ನು ಉಳಿಸಿಕೊಂಡು, ಆಳ್ವಾರರ ಅನುಭವಕ್ಕೆ ಉಪಕರಿಸಿದಂತೆಯೇ ಪೂತನಿಗೂ ಪುನರ್‌ಜನ್ಮವಿಲ್ಲದಂತೆ ಮುಕ್ತಿ ಕರುಣಿಸಿದ ಮಹೋಪಕಾರಿ!

ಅವನ್ = ಇಂತಹ ಸರ್ವವಿಧ, ಸರ್ವರ ಉಪಕಾರಿಯೇ ಆದ ಶ್ರೀಕೃಷ್ಣನೇ, ಪೆರುಹುಮ್ = ವಿಭವಾವತಾರ, ಆ ಕಾಲದಲ್ಲಿದ್ದ ವರಿಗಷ್ಟೇ ಒದಗಬಹುದಾದುದು. ಮುಂದೆ ಮುಂದೆಯೂ, ವೃದ್ಧಿಹೊಂದಿ ಅಶೋಷ್ಯವಾಗಿ ಹರಿಯುತ್ತಲೇ ಇರುವ, ಬೆಳೆಯುತ್ತಲೇ ಇರುವ ಅರ್ಚಾವತಾರದ ವಿಕಾಸಕ್ಕೆ ಕೊನೆಯೇ ಇಲ್ಲ. ಇದಕ್ಕೆ ತಾಣ ನೀಡುವ, ಇಡಮ್ ಎಡೆ = ಧಾಮವೆಂದರೆ ತಿರುಪತಿಯೇ! ಶ್ರೀಕ್ಷೇತ್ರ! ಇವೆಲ್ಲ ಯೋಗರೂಢ ಉಭಯಮುಖಿ ಪದಗಳು. ಯಾರೂ ಗೊಂದಲವೆಬ್ಬಿಸಬಾರದು. ಎಬ್ಬಿಸಿದರೂ ಗೊಂದಲ ಮಾಡಿಕೊಳ್ಳಲೂ ಬಾರದು! **ಶಬ್ದಶಕ್ತಿಯನ್ನು ಕಳೆದುಕೊಳ್ಳುವ ನಾಡು ಬಲು ಪಾಡು ಪಡಬೇಕಾದುದೇ!**

ಮತ್ತೂ ಅದೆಂಥದು! ತೆಳ್ಳಿಯಾರ್ = ತಿಳಿಯಾದ ಅನನ್ಯಮನಸ್ಕರು, ವಣಙ್ಗುಮ್ ಮಲೈ = ಭಕ್ತಿ ನಮ್ರರಾಗಿಬಾಗುವ ಮಲೆ! ಅಂತಹವರು ಹೇಗೆ ತಿಮ್ಮಪ್ಪನನ್ನು ಚಿಂತಿಸುತ್ತಾರೆ? ವೆಳ್ಳಿಯಾನ್ ಕರಿಯಾನ್ ಮಣಿನಿರವಣ್ಣನ್ = ಬಿಳಿಯ ಕರಿಯ, ಪಚ್ಚೆಮಣಿಬಣ್ಣ. ಕೃತಯುಗದಲ್ಲಿ ಶುಭ್ರಶ್ವೇತವರ್ಣ! ಅವನೇ ತ್ರೇತೆಯಲ್ಲಿ ದೂರ್ವಾಶ್ಯಾಮ ದಾಶರಥಿರಾಮ. ಅವನೇ ಕಲಿಯುಗಕ್ಕೆ ಹಿಂದೆ ದ್ವಾಪರಾಂತ್ಯದಲ್ಲಿ ಕೃಷ್ಣ ಕರಿಯಪ್ಪ! ಎನ್ನು ಎಂದು ಅಯಾಯಾ 'ಸತ್ಯಂ ಶಿವಂ ಸುಂದರಂ' ಪಾವನ ಅಚಿಂತ್ಯ ಅದ್‌ಭುತ ದಿವ್ಯರೂಪುಗಳನ್ನು, ಎಣ್ಣೆ = ಮಾನಸಿಕ ಹಾಗೂ ಸಾಕ್ಷಾತ್ ಅನುಭವಿಸುತ್ತಾ ಅದೂ, ನಾಳ್‌ದೋರುಮ್ = ಸರ್ವಕಾಲವೂ, ಕಣ್ಣುಮುಚ್ಚಿದರೂ ತಿಮ್ಮಪ್ಪನೇ ತೆರೆದರೂ ಅವನೇ! ಯೋಗದೆಶೆ ವ್ಯುತ್ಥಾನ ದೆಸೆಗಳಿಗೆ ಭೇದವಿಲ್ಲದಷ್ಟು ಸಹಜಾವಸ್ಥೆ! ತಮಿಳಿನಲ್ಲಿ "ಇಯಲ್‌ಕ್ಕೆ" ಎಂತೆಯೇ ಈ ಶರಣಾಳ್ವಾರ್‌ಗಳ ಅನುಯಾಯಿಗಳನ್ನು ದೇವಾಲಯದಲ್ಲಿ "ಇಯಲ್ ಶ್ರೀ ವೈಷ್ಣವಾಳ್" ಎಂದೇ ಅರ್ಚಕಮುಖೇನ ಅರ್ಚಾವತಾರಿಯೂ ಕರೆಯುವುದು! "ಸದಾ ಪಶ್ಯನ್ತಿ ಸೂರಯಃ" ಸರ್ವದಾ ಸರ್ವಥಾ ಸರ್ವರಿಗೂ ಪರಿಪೂರ್ಣ ಸನಾತನ ಬ್ರಹ್ಮಾSನುಭವ! ಹೊಸ ಹೊಸದಾಗಿಯೇ ಇರುತ್ತದೆ. ನಿತ್ಯಾSಪೂರ್ವ ಸುಂದರ ಮೂರ್ತಿ! ಅಂತಹ "ತಿರು"ವಿನ ವೇಙ್ಗಡಮ್! ತಿರುವೇಙ್ಗಡಮ್ = ಸರ್ವಸಂಪತ್ ಖನಿ! ಅಯಾಯಾ ಮಟ್ಟದ ವಿವಿಧ ಜನರ ಭಗವದನುಭವಕ್ಕೆ ಅಡ್ಡಿ ಆತಂಕವೊಡ್ಡುವ ಸರ್ವ ಪುಣ್ಯ ಪಾಪಗಳೆಂಬ ಉಭಯ ಋಣಗಳನ್ನೂ, ವೇಮ್ = ದಹಿಸಿ ಭಸ್ಮಮಾಡುವ ಇಂತಹ ವಿವಿಧ ಅನನ್ತ ಸಿರಿಯಾಂತ ವೆಂಕಟಾಚಲವನ್ನು, ನೆಞ್ಜಮೇ = ಓ ಮನವೇ! ಅಡೈ = ಈಗಲೇ ಸೇರಿಯೇ ಬಿಡು.

ತಮಿಳ್ ತಿರಳ್ ೧-೮-೩

ನಿನ್ನ ಮಾ ಮರುದಿತ್ತು ವೀಳ ನಡನ್ದ ನಿನ್‌ಮಲನ್ ನೇಮಿಯಾನ್
ಎನ್ನುಮ್ ವಾನವರ್ ಕೈ ತೊಳುಮ್ ಇನ್ನೈ ತ್ತಾಮರೈಯಡಿ ಯೆಂಪಿರಾನ್
ಕನ್ನಿಮಾರಿ ಪೊಳಿನ್ದಿಡ ಕ್ಕಡಿದಾನಿರೈ ಕ್ಕಿಡರ್ ನೀಕ್ಕುವಾನ್
ಶೆನ್ನು ಕುನ್ನಮೆಡುತ್ತವನ್ ತಿರುವೇಙ್ಗಡಮ್ ಅಡೈನೆಞ್ಜಮೇ

ಕನ್ನಡ ನೆರಳ್

ನಿಲ್ ಮಾ ಮತ್ತೀ ಮುರಿದತ್ತಣ ಬೀಳುವೊಲ್ ನಡೆದಾ ನಿರ್‌ಮಲ ನೇಮಿನಾಥ
ತೊಳಗುತ ಬಾನವರ್ ಎಂದೂ ಜೋಡಿಯ ತಾವರೆಯಡಿಯವನ್ ಎನ್ನುಪಕಾರಿ
ಕ್ರೋಧದಿ ಇಂದ್ರನು ಮಳೆಯೆಡಬಿಡದೇ ಸುರಿಸಲ್ ಕೊಡನೇ ಗೋವಿಂಡೆಡರಂ ನೀಗಲ್ಕೇ
ಓಡುತ ಬಂದೇ ಗೋವರ್ಧನ ವೆತ್ತಿದನಾ ತಿರುವೇಂಕಟಗಿರಿ ಯಡೆ ಮನವೇ

ಅಸುರಾವೇಶದಿಂದ ಯಮಳಾರ್ಜುನ ಅಂದರೆ ಜೋಡಿ, ಮಾ = ಬಲುದೊಡ್ಡದಾದ, ಮರುದು ಆ ಮತ್ತಿಯ ಮರಗಳು, ಇತ್ತು = ಕೃಷ್ಣನಿದ್ದ ಈ ಕಡೆಗಲ್ಲದೆ ಆ ಕಡೆಗೆ ಮುರಿದುಬಿದ್ದವಲ್ಲಾ! ಮಂಗಳಾSSಶಾಸನಪರರಾದ ಆಳ್ವಾರರ ಅಂಜಿಕೆ ತೀರಿತು! ಅಕ್ಕೆಲ ಬೀಳಲು ಕೃಷ್ಣನ ಶುದ್ಧಿಯೋಗವೇ ಕಾರಣ. ನಿನ್‌ಮಲನ್ = ಜಂಟಿ ರಾಕ್ಷಸರನ್ನು ಕೊಲ್ಲಬೇಕೆಂಬ ಉದ್ದೇಶ್ಯವಿಲ್ಲದೆಯೇ, ಕಟ್ಟಿದ ಒರಳೊಂದಿಗೇ ಮಂಡಿಯಿಟ್ಟು ನಗುನಗುತ್ತಾ ಲೀಲಾಜಾಲವಾಗಿ ಬಂದ ನಿರವದ್ಯ ನಿರಂಜನ ನಿರ್ಮಲ! ಸಂಹರಿಸಬೇಕೆಂದರೂ ತಾನೇ ಶತ್ರುವಿನ ಶರೀರ ಮುಟ್ಟಬೇಕಿಲ್ಲ. ನೇಮಿಯಾನ್ = ಸುರದ್ವಿಷಾಂ ಪ್ರಾಣವಿನಾಶಕಾರಿಯಾದ ಶ್ರೀ ಸುದರ್ಶನ ಚಕ್ರವೇ ಸಾಕು.

ಎನ್ನುಮ್ ವಾನವರ್ ಕೈ ತೊಳುಮ್ = ಸದಾ ನಿತ್ಯಸೂರಿಗಳು ಇಡೀ ವೈಕುಂಠವೇ ಒಟ್ಟಾಗಿ ಮಂಗಳಾSSಶಾಸನ ಮಾಡುತ್ತಿರುವ ಅಂಜಲಿ ಮುದ್ರೆಯುಳ್ಳವರಾಗಿದ್ದೂ, ಇಣ್ಣೆ ತ್ತಾಮರೈ ಅಡಿ, ಜೋಡಿ ತಾವರೆಯಂತೆ ಅಂಬೆಗಾಲು ಹಾಕುತ್ತಾ ಮಂಗಳಾಶಾಸನ ಪರರ ಹೊಟ್ಟೆ ಉರಿಸದಂತೆಸಗಿದ ಮಹೋಪಕಾರಿ ಎಮ್‌ಪಿರಾನ್. ನರರ ಇಲ್ಲಿನ ಲೆಕ್ಕದಲ್ಲಿ ವರ್ಷೇ ವರ್ಷೇ ನೀಡುತ್ತಿದ್ದ ಗೋಕುಲಗ್ರಾಮಸ್ತರ ಪೊರ ಆ ದೇವತೆಗಳ ನಿತ್ಯದ ಹವಿಸ್ಸು ನಿಂತು ಹಸಿವಿನ ಕೋಪಕ್ಕೆ ಮಳೆರಾಯನಾದ ದೇವೇಂದ್ರ ಏಳುದಿನ ಜೋರುಮಳೆ ಸುರಿಸಿದರೂ, ಕನ್ನಿ ಮಾರಿ ಪೊಳಿನ್ದಿಡ. ಕಡಿದು = ಒಡನೆಯೇ! ಅನಿರೈಕ್ಕು = ಗೋಮಂದೆಗಳಷ್ಟಕ್ಕೂ ಇಡರ್ = ಜಿಡಿ ಕಲ್ ಮಳೆಯಿಂದ ಬಲು ಎಡರ್‌ಗೊಂಡಿದ್ದವುಗಳ ಎಲ್ಲ ಆಪತ್ತನ್ನೂ ನೀಕ್ಕುವಾನ್ = ನೀಗಿ ರಕ್ಷಿಸುವ ಸಲುವಾಗಿ. ಗೋವುಗಳಿಗೆ ಸ್ವರಕ್ಷಣೆಯ ಜ್ಞಾನ ಅಷ್ಟೊಂದು ಸಾಲದು. ಗೋಪ ಗೋಪಿಯರಿಗೆ ಜ್ಞಾನವಿದ್ದೂ ಶಕ್ತಿಯಿಲ್ಲ! "ಇದಂ ಶರಣಂ ಅಜ್ಞಾನಾಂ - ಜ್ಞಾನಿನಾಮಪಿ" ಎಂಬಂತೆ ಪ್ರಪನ್ನಶರಣನ ಜ್ಞಾನ, ಶಕ್ತಿ ಅತನಿಗೆ ರಕ್ಷಣೆಗೆ ಒದಗದೆಂಬ ರಹಸ್ಯ ಅಂತೆಯೇ ಸರ್ವೇಶ್ವರನೇ ಜ್ಞಾನಿ-ಅಜ್ಞಾನಿ-ಅಶಕ್ತರೆಲ್ಲರಿಗೂ ರಕ್ಷಕ.

ಶೆನ್ನು = ಬೆಟ್ಟದ ಬಳಿಸಾರಿ, ಕುನ್ನಮ್ ಎಡುತ್ತವನ್ = ಕೊಡೆಯಂತೆ ಗೋವರ್ಧನ ಪರ್ವತವನ್ನೇ ಕಿರಿಬೆರಳಿನಿಂದಲೇ ಉಗುರೂ ಬಾಡದಂತೆ ಅನಾಯಾಸವಾಗಿ ಏಳುದಿನಗಳೂ ಅಖಂಡ ಇಂದ್ರನಿಗೆ ಸೌಮ್ಯ ಅಹಿಂಸಕ ಪ್ರತೀಕಾರವಾಗಿ ಎತ್ತಿ ಹಿಡಿದ ಆ ಗಿರಿಧರನದೇ ವೇಙ್ಗಡಮ್ = ಈ ತಿರುಮಲೆ. ಅಂತಹುದನ್ನು. ನೆಞ್ಜಮೇನಿರ್ ಹೇತುಕವಾಗಿ ಪರಮ ಕರುಣಾಮೂರ್ತಿಯಿಂದಲೇ ಸುಸಂಸ್ಕೃತವಾದ, ನಿರ್ಮಲವಾದ ಮನವೇ! ನಿರ್ಮಲನ ಗಿರಿಯೇರು.

ತಮಿಳ್ ತಿರಳ್ ೧-೮-೪

ಪಾರ್‌ತರ್‌ಕ್ಕಾಯ್ ಅನ್ನು ಪಾರದಮ್ ಕೈ ಶೆಯ್ದಿಟ್ಟು ವೆನ್ನ ಪರಞ್ಜುಡರ್
ಕೋತ್ತಜ್ಞಾಯರ್ ದಮ್ ಪಾಡಿಯಿಲ್ ಕುರವೈ ಪಿಣೈನ್ದ ಪೆಜ್ಗೋವಲನ್
ಏತ್ತುವಾರ್ ತಮ್ ಮನತ್ತುಳ್ಳಾನ್ ಇಡವೆನ್ಬ್ರೈ ಮೇವಿಯ ಎಂಬಿರಾನ್
ತೀರ್‌ತ್ತನೀರ್ ತಡಞ್ಜೊಲ್ಗೆ ಶೂಳ್ ತಿರುವೇಙ್ಗಡಮ್ ಅಡ್ಯೆನೆಞ್ಜಮೇ

ಕನ್ನಡ ನೆರಳ್

ಪಾರ್‌ಥನ ಸಲು ಅಂದದೋ ಭಾರತ ಹೋರದ ಕೈಗೈದು ಜಯಗೊಳಿಸಿದ ಪರಂಜ್ಯೋತಿ
ಸೇರ್ ಕರದಿಂ ಕರಗಳ ಹೆಣೆದಂದು ಗೋಕುಲದೊಳ್ ರಾಸವನಾಡಿದ ವೆಮ್ ಗೋಪಾಲನ್
ಪ್ರಾರ್ಥಿಸುವವರಾ ಚಿತ್ತಾSSವಾಸನ್, 'ಇಡವೆನ್ಬ್ರೈ'ಯೊಳ್ ನಿತ್ಯಾವಾಸನ್ ಎಮ್ಮುಪಕಾರಿಯ
ನೀರ್ ತುಂಬಿದ ಕೆರೆ ತೋಟಗಳ್ ಸುತ್ತಿಹ ತಿರುವೇಂಕಟಮಡೆ ಮನವೇ

ಪಾರ್‌ತರ್‌ಕ್ಕಾಯ್ = ಪಕ್ಷಾತೀತನೆಂದು ಹೇಳಿಕೊಳ್ಳುತ್ತಾ ಪಾಂಡವರಲ್ಲೆಲ್ಲಾ ವಿಭೂತಿ ಪುರುಷನಾದ ಧನಂಜಯನಿಗಾಗಿಯೇ ಅನ್ನು = ದುರ್ಯೋಧನನ ಛಲದ ಪರಿಣಾಮವಾಗಿ ಯುದ್ಧ ಅನಿವಾರ್ಯವಾದಾಗ ಆ ದ್ವಾಪರಾಂತ್ಯದ ಸಮಯದಲ್ಲಿ, ಪಾರದಮ್ = ಮಹಾಭಾರತ ಸಂಗ್ರಾಮವನ್ನು, ಕೈ ಶೆಯ್‌ದಿಟ್ಟು = ಕೈಯಿಂದಲೇ ಕುದುರೆ ಚಾವಟಿಯಾಡಿಸಿ! ನಾನಾ ಚಳಕಗಳಿಂದ ತೇರ್‌ನಡೆಸಿ! ಸಮಯಾ ಸಮಯದಲ್ಲಿ ಚೆಪ್ಪಾಳೆ ತಟ್ಟಿ! ಹುರಿದುಂಬಿಸಿ, ಶರಣಾಗತೆಯಾದ ದ್ರೌಪದಿಯ ಮಂಗಳಸೂತ್ರ ಭಾಗ್ಯಕ್ಕಾಗಿ, ತನ್ನ ಆಯುಧವೆತ್ತೆನೆಂಬ ಪ್ರತಿಜ್ಞಾಭಂಗಕ್ಕೂ ಹೆದರದೆ, ಭೀಷ್ಮರಿಗಾಗಿ ಚಕ್ರಧಾರಿಯಾಗಿ, ಜಗತ್ತಿನ ಎಲ್ಲಾ ದುಷ್ಟ ಸೇನೆಗಳನ್ನೂ ಇಲ್ಲಿನ ಐಹಿಕ ದೃಷ್ಟಿಯಿಂದಳಿಸಿ, ಅಲ್ಲಿ ಮೋಕ್ಷವನ್ನೇ ನೀಡಿದ. ಹೀಗೆ, ವೆನ್ನ = ಪಾಂಡವರಿಗೆ ಜಯಮೊರಕಿಸಿ ದುರ್ಯೋಧನನ ತಲೆಗೇ ಸೋಲಿನ ಪಟ್ಟ ಕಟ್ಟಿದ. ಪರಂ ಶುಡರ್ = ಪರಂಜ್ಯೋತಿ ಸ್ವರೂಪನಾದ ಶ್ರೀ ಭಗವಾನ್, ಧರ್ಮರಾಜನ ಪಟ್ಟಾಭಿಷೇಕ, ದ್ರೌಪದಿಯು ಬಿಚ್ಚಿದ್ದ ಜಡೆಯನ್ನು ಕಟ್ಟಿಸಿ, ವೇಣಿ ಸಂಹಾರವಾದ ಮೇಲೆಯೇ ಕಳೆಯೇರಿದ! ಮೊದಲೆಲ್ಲಾ ಕೃಷ್ಣ ಮಂಕಾಗಿದ್ದ! ಅಂತಹವನು ಈಗ ತಿರುಪತಿಗೇ ಏಕೆ ಬಂದ? ಈ ಪ್ರಶ್ನೆಗೆ ಉತ್ತರವಾಗಿಯೇ, ಮುಂದೆ ರಾಸಕ್ರೀಡೆಯ ಪ್ರಸಕ್ತಿ ಕಾದಿದೆ!

"ಶರಣರು ಐತಿಹಾಸಿಕ ಚಾರಿತ್ರಕ ಪೂರ್ವಾಪರಗಳನ್ನು ಗಮನಿಸದ ಕಾಲಾತೀತ ಹೃದಯರು!" ಅವರು ಎಲ್ಲದರಲ್ಲೂ ಒಳ ಆಳಕ್ಕೇ ಇಳಿದು ತಮ್ಮ ತಮ್ಮವರ ಪ್ರಕೃತಿಶೋಧಕರು, ಅನುಭಾವಿಗಳು, ಈ ಗೋಕುಲದ ಆ ಯಮುನಾತೀರದ ಮರಳು ದಿಣ್ಣೆ, ಆ ಶರಚ್ಚಂದ್ರ ಯಾಮಿನಿ! ಅಪ್ಪು = ಅಂತಹ, ಅಯರ್ ತಮ್ ಪಾಡಿಯಿಲ್ = ಹಿಂದುಳಿದ ಗೊಲ್ಲರ ಹಟ್ಟಿಗಳೇ ಇರುವ ತಾಂಡ್ಯದಲ್ಲಿ, ಕೋತ್ತು = ಕೈಗಳಿಗೆ ಕೈ ಸೇರಿಸಿ ಒಬ್ಬೊಬ್ಬ ಗೊಲ್ಲತಿಗೂ ಒಬ್ಬೊಬ್ಬ ಕೃಷ್ಣಮೂರ್ತಿ! **"ಅಂಗನಾಮಂಗನಾಂ ಅನ್ತರೇಮಾಧವಃ"** ಎಂಬಂತೆ, ಎಲ್ಲರಿಗೂ ಹಿಗ್ಗಿನ ಸುಗ್ಗಿಯೋ ಸುಗ್ಗಿ! ತನ್ನನ್ನೂ ಅವರವರ ನಡುವೆ ಒಬ್ಬನನ್ನಾಗಿ ಪೋಣಿಸಿಕೊಂಡು, ಇದೀಗ ಸೌಲಭ್ಯ ಮಾತ್ರವಲ್ಲ, ಸೌಶೀಲ್ಯ ಗುಣ! ಕುರವೈ ಪಿಣ್ಯೆನ್ವ = ಗಿರಗಿರನೆ ರಾಸಲೀಲೆ ತೋರಿದ, ಎಮ್‌ಕೋವಲನ್ = ಅವರಮಟ್ಟಿಗಲ್ಲ ಆ ಪೂರ್ಣ ಬ್ರಹ್ಮರಸಾನುಭವ. ಸಕಲ ಭಕ್ತರಿಗೂ ಆ ಸಂದರ್ಭವನ್ನು ಹೆಣೆದು ಮನಸ್ಸಿಗೇರಿಸುವುದೇ ಇದರ ಅಂತರಾರ್ಥ! ಎಮ್ ಕೋವಲನ್ = ಕೇಚಿದೀಶ್ವರನಾಗಿ ಸಾಂದರ್ಭಿಕವಾಗಿ ಕಥೆಯಂತೆ ಕಂಡರೂ ಅದರ ಹರವು ಎಲ್ಲೆಲ್ಲೂ ಅತುಕೊಳ್ಳುವ ಎಲ್ಲರಿಗಾಗಿ! ಈ ವ್ಯಾಪಕ ದೃಷ್ಟಿ ಇಲ್ಲಿ ಗಮನಾರ್ಹ!

ವಿತ್ತುವಾರ್ ತಮ್‌ಮನತ್ತುಳ್ಳಾನ್ = ಸ್ವಚ್ಛಮನವೇ ಅಚ್ಚಚಂದ್ರಿಕೆ! ಭಕ್ತರ ಹೃದಯವೇ ಯಮುನಾ ಸೈಕತ! ಎಲ್ಲೆಲ್ಲೂ ಹರಿಯುವ ಪ್ರೇಮರಸಧಾರೆಯೇ ರಾಸ! ಹರಿಲೀಲೆಯೇ ರಾಸವಿನೋದಕ್ಕೆ ಫಲ! ಅಪ್ರವಾಹ ಸರ್ವತೋವಾಹಿನಿ! ದಕ್ಷಿಣದ "ಇಡವೆನ್ಪ್ಪ" ಕ್ಷೇತ್ರಕ್ಕೂ ಹಾಯಿತು! ಮಹಾಲಕ್ಷ್ಮೀಮಾತೆಗಾಗಿ, ಮೇವಿಯ = ಅಲ್ಲಿಯೇ ಕೃಷ್ಣ ನಿತ್ಯವಾಸಿ! ಎಮ್‌ಪಿರಾನ್ = ರಾಸಕ್ರೀಡೆಗೆ ತಪ್ಪಿದ್ದ ಆ ಹಿಂದಿನ ಮುಂದಿನ ಇಂದಿನ ಇನ್ನೂ ಮುಂದಿನ ಎಲ್ಲರೂ ಯಾತ್ರಾಕ್ಷೇತ್ರಗಳಲ್ಲಿ ಆ ರಸಾನುಭವ ಮಾಡಬಹುದು. ಎಲ್ಲಾ ಸಮೃದ್ಧಿಗೂ ಮೂಲ ಜನ ಸಮೃದ್ಧಿ. ತೀರ್ತನೀರ್ ತಡಮ್ ಶೋಲೈ ಶೂಳ್ = ಅಂತಹ ತೀರ್ಥ ಒಂದಲ್ಲ ಎರಡಲ್ಲ. ಮೂವತ್ತಮೂರು ಕೋಟಿ ತೀರ್ಥಗಳಿಂದ ಪಾವನವಾದ ತಿರುವೇಙ್ಗಡಮ್ ತಡಮ್ = ಕೆರೆಗಳು, ಶೋಲೈ = ವನಷಂಡ! ಪುಷ್ಪೋದ್ಯಾನಗಳಿಂದ ತುಂಬಿ, ಶೂಳ್ = ಸುತ್ತುವರಿದ, ಪುಷ್ಪಮಂಟಪ! ಇಂತಹ ಶ್ರೀಶೈಲವನ್ನೇ, ನೆಞ್ಜಮೇ = ಹಿಂದೆಲ್ಲಾ ಅಲ್ಪವೂ ಅಸಭ್ಯವೂ ಆದ ವಿಷಯಾಂತರಗಳಲ್ಲೇ ಮುಳುಗಿದ್ದ ಓ ನನ್ನ ಚಿತ್ತಾ! ಅಡೈ = ಸೇರಿಯೇ ಬಿಡು. **"ತಾಪ ಪಾಪ ಎಲ್ಲಾ ಬೆಂದ ಹೃದಯಗಳನ್ನೂ ತಣ್‌ಪು ಗೊಳಿಸುವುದು".**

ತಮಿಳ್ ತಿರಳ್ ೧-೮-೫

ವಣ್‌ಕೈಯಾನ್ ಅವುಣರ್‌ಕ್ಕು ನಾಯಹನ್ ವೇಳ್ವಿಯಿಲ್ ಶೆನ್ನು ಮಾಣಿಯಾನ್
ಮಣ್ ಕೈಯಾಲ್ ಇರನ್ದಾನ್ ಮರಾಮರಮ್ ಏಳುಮೆಯ್‌ದ ವಲತ್ತಿನಾನ್
ಎಣ್ ಕೈಯಾನ್ ಇಮಯತ್ತುಳ್ಳಾನ್ ಇರುಞ್ಞೋಲೈ ಮೇವಿಯ ವೆಂಪಿರಾನ್
ತಿಣ್ ಕೈ ಮಾ ತುಯರ್ ತೀರ್‌ತ್ತವನ್ ತಿರುವೇಙ್ಗಡಮಡೈ ನೆಞ್ಞಮೇ

ಕನ್ನಡ ನೆರಳ್

ಕೊಡುಗೈಯ್ಯನಂ ಅಸುರರ್ಗಧಿಪತಿ ಬಲಿಯಂ ಯಾಗದಿ ಸಂದೇ ಮಾಣಿಯಾಗಿ
ನಿಡುಗೈ ನೀಡುತ ಮಣ್ ಬೇಡಿದನಾ, ತರುಸಾಲಗಳೇಳುಂ ಸೀಳಿದ ಮಹವೀರನ |
ಎಣ್‌ತೋಳವನಾ ಹಿಮಗಿರಿವಾಸನ, ಮಾಲಿರುಂಶೋಲೈನಿತ್ಯಾವಾಸನ ಉಪಕಾರಕನಾ
ತಿಣ್ ಕರಿರಾಜನ ಹಿರಿನೋವ್‌ತೀರ್ಸಿದನಾ ತಿರುವೇಂಕಟಗಿರಿ ಯಡೆ ಮನವೇ ||

ವಣ್‌ಕೈ = ಕೈಬಿಗಿಹಿಡಿಯದೆ ಧಾರಾಳವಾಗಿ ದಾನ ನೀಡುವ, ಅವುಣರ್‌ಕ್ಕು ನಾಯಹನ್ = ಅಸುರರಿಗೆಲ್ಲಾ ಚಕ್ರವರ್ತಿಯಾದ ಬಲಿಯನ್ನು, ವೇಳ್ವಿಯಿಲ್ = ಆತ ಯಾಗಮಾಡುತ್ತಿರುವ ಸಮಯದಲ್ಲಿ. ಶೆನ್ನು = ಬಳಿಸಾರಿ, ಅಸುರೀ ಪ್ರಕೃತಿಯಿದ್ದರೂ ಔದಾರ್ಯವೆಂಬ ಗುಣವಿದ್ದುದರಿಂದ, ಯುದ್ಧದಲ್ಲಿ ಕೊಲ್ಲದೆ, ಆತನ ಗುಣ ಪ್ರಕಾಶನವೂ - ಭೂದಾನವೂ ಉಭಯವೂ ಸಿದ್ಧಿಸುವಂತೆ! ಮಾಣಿಯಾಯ್ = ಕೇಳಿದ್ದನ್ನು ಕೊಡಲು ನಿರಾಕರಿಸುವಂತಾಗದ **"ಸುಂದರ ತೇಜಸ್ವಿ ವಾಮನ ಬಹ್ಮಚಾರಿ"** ವಟುವಾಗಿ, ಕೈಯಾಲ್ = ಯಾಚಿಸಲು ಸಂಕೋಚವಿಲ್ಲದ ತನ್ನ ಕೈನೀಡಿ, ಆ ಪುಟಾಣಿ ಹಸ್ತದಿಂದ, ಮಣ್ ಇರನ್ದಾನ್ = ಬಲಿಯಿಂದ ಭೂಭಿಕ್ಷೆ ಅರ್ಥಿಸಿ ಕೇಳಿದ. ಅವನೇ ಮುಂದೆ ರಾಮಾವತಾರದಲ್ಲಿ, ಏಳುಮ್ ಮರಾಮರಮ್ = ಸಪ್ತಸಾಲ ವೃಕ್ಷಗಳನ್ನೂ, ತನ್ನ ಪರಾಕ್ರಮದ ಬಗೆಗೆ ಶಂಕಿಸಿದ್ದ ವಾಲಿಯ ತಮ್ಮ ಸುಗ್ರೀವನ ನಂಬಿಕೆಗಾಗಿ, ಎಯ್‌ದ = "ಒಕಮಾಟ ಒಕಭಾರ್ಯ ಒಕಬಾಣಂ" ಎಂಬ ತೆಲಗು ನಾಣ್ಣುಡಿಯಂತೆ! ಒಂದೇ ಬಾಣದಿಂದ, ಮೊದಲೇ ರಂಧ್ರವಿರುವ ತರುಗಳಿಗೆ ಸುಲಭವಾಗಿ ಹೊಡೆಯುವಂತೆ ಪೊದರು ಪೊದರಾಗಿ ಹೆಣೆದಿದ್ದ, ಗುರಿಗೇ ಸಿಕ್ಕದ, ಅವಷ್ಟನ್ನೂ ಏಕ ಕ್ಷಣದಲ್ಲಿ ಬೀಳಿಸಿದ ಮಹಾಬಲಶಾಲಿ!

ಇಂತಹವನೇ ಎಣ್ ಕೈಯಾನ್ = ಅಷ್ಟಭುಜಭೂಷಿತನಾಗಿ ಆಶ್ರಿತರ ಕಷ್ಟಪರಿಹಾರವನ್ನೂ ಅರ್ಚಾವತಾರದಲ್ಲೂ, ಅನುಭವಿಸಬಹುದಾದ, ಹಿಮಾಲಯಕ್ಕೆ ಉತ್ತರದ ಮಾನಸ ಸರೋವರದ ದಂಡೆಯಲ್ಲಿರುವ "ತಿರುಪ್ಪಿರಿದಿ" ಎಂಬ ಪ್ರೇಮಕ್ಷೇತ್ರದಲ್ಲಿ ಇಷ್ಟಪಟ್ಟು ನಿತ್ಯವಾಸಿಯಾಗಿದ್ದಾನೆ. **"ಈಗ ಆ ದಿವ್ಯದೇಶ ಖಿಲವಾಗಿರುವಂತೆ ಕಂಡರೂ ಹಿಮಾಲಯದ ಬದರೀ ಮುಂತಾದ ಕ್ಷೇತ್ರಪುರಾಣಗಳಲ್ಲಿ ಶಿವ ಪಾರ್ವತೀ ವಿವಾಹವಾಗಲು, ಈಶ್ವರಿಗೂ ಶ್ರೀಮಹಾವಿಷ್ಣು ಪ್ರೀತಿ ಹುಟ್ಟಿಸಿದ ಧಾಮವೆಂಬುದು ತಿಳಿದು ಬರುತ್ತದೆ."** ಆ ಉತ್ತರ ದಿಶೆಯಿಂದ ನೇರಾ ದಕ್ಷಿಣಕ್ಕೆ ತಿರುಮಂಗೈ ಆಟ್ವಾರರ ಮನ ಧಾವಿಸಿ ಬಿಡುತ್ತದೆ. ಅಲ್ಲಿಗೆಲ್ಲಾ ಇವರು ಕುದುರೆ ಮೇಲೆ ಪಯಣ ಮಾಡಿದ್ದೂ ಉಂಟು, ನಾಲ್ಕು ಜನ ಶಿಷ್ಯರೊಂದಿಗೆ, ಹಾಗೂ ತಿರುಮಂಗಾ ಪ್ರೇಯಸಿಯೊಂದಿಗೆ.

ಇರುಮ್ಶೋಲ್ಯೆ = ತಿರುಮಾಲಿರುಂಶೋಲ್ಯೆಯೆಂಬ ಕಳ್ಳಳಹರ್ ಇರುವ ಕಾಡಿನ ತೆಂಕಣ ತಿರುಮಲೆ ಎಂದೇ ಪ್ರಸಿದ್ಧವಾದ ದಿವ್ಯದೇಶ. ದಕ್ಷಿಣ ಮಧುರೆಗೆ ಸಮೀಪದಲ್ಲಿದೆ, ಮೇವಿಯ = ಅಲ್ಲಿನ ನಿತ್ಯವಾಸಿ. ಅದರಿಂದಲೇ ಎಮ್ಪಿರಾನ್ = ನಮ್ಮಂತಹ ಮುಂದೆ ಮುಂದೆ ಬರುವವರಿಗೆಲ್ಲಾ, "ಪಿನ್ನಾನಾರ್ ವಣಙ್ಗುಮ್ ಶೋದಿ" ಎಂಬಂತೆ ಕಣ್ ಬೆಳಕಾಗಿ, ಮಹೋಪಕಾರಿಯಾಗಿರುವವನು! ತಿಣ್ಕೈ = ಬಲು ದೃಢವಾದ ಸೊಂಡಲಿದ್ದರೂ, ಮಾತುಯರ್ = ಮೇಲ್ಮೇಲಿನ ಆಪತ್ತು, ಮಾತುಯರ್ ಹಿರಿದಾದ ಒಳದುಗುಡ! ಮೊದಲನೆಯದು ಯಃಕಶ್ಚಿತ್ ಜಲಶಕ್ತವಾದ ಮೊಸಳೆಯಿಂದ ಕಚ್ಚಲ್ಪಟ್ಟಿರುವ ಕಾಲಿನದು. ಅನೆಗೆ ನೆಲದಲ್ಲಿ ಮಾತ್ರ ಬಲ. ಇದಕ್ಕಿಂತಲೂ "ಪರಮಾಪದಮಾಪನ್ನಃ" ಹೆಚ್ಚಿನ ದುಃಖವೆಂದರೆ

"ಕರಸ್ಥ ಕಮಲಾನ್ಯೇವ"

ಸ್ವಾಮಿಗಾಗಿಯೇ, ಕಮಲ ಕುಯ್ಯಲು ಗಜೇಂದ್ರ ಇಳಿದಿದ್ದು. ಕಿತ್ತು ಸೊಂಡಲಲ್ಲಿ ಎತ್ತಿ, ಹೂ ಸ್ವೀಕರಿಸಪ್ಪಾ! ಎಂದೇ ಅದರ ಅಂತರಂಗ! ತನ್ನ ಪ್ರಾಣವೇನೂ ಅಷ್ಟು ಮುಖ್ಯವಲ್ಲ. ಇದನ್ನೂ ತೀರಿಸಲೆಂದೇ, ಆತುರಾತುರವಾಗಿ ಕೆರೆಯ ಬಳಿ ಧಾವಿಸುತ್ತಾನೆ ಅಲಂಕಾರ ಪ್ರಿಯ. ಅಸ್ತವ್ಯಸ್ತವಾದ ಅಲಂಕಾರದಿಂದಲೇ ಗರುಡನ ಮೇಲೆ ಇದೇ ಮಾ ತುಯರ್ ತೀರ್ತವನ್ = ಮಹಾದುಃಖವನ್ನು ತೀರಿಸಿದವನು. ಹೀಗೆ ಸಕಲ ಯುಗಗಳಲ್ಲೂ ಸಮಯ ಸಮಯದಲ್ಲಿ, ಆಶ್ರಿತರ ಅನಿಷ್ಟ ನಿವಾರಣ ಹಾಗೂ ಇಷ್ಟಪ್ರಾಪಣ ಮಾಡುತ್ತಿರುವವನೇ, ತಿರುವೇಙ್ಗಡಮ್ = ಇಲ್ಲೂ ಇದ್ದಾನೆ. "ಈಶಾವಾಸ್ಯಂ ಇದಂ ಸರ್ವಮ್" ಯಾವ ತಾಣ ಅವನದಲ್ಲ, ಇಂತಹ ತಿರುಮಲೆಯನ್ನು. ನೆಞ್ಜಮೇ! ಅಡೈ = ಸೇರಿಯೇ ಬಿಡು.

ತಮಿಳ್ ತಿರಳ್ ೧-೮-೬

ಎಣ್ದಿಶೈಹಳುಮ್ ವಿಳ್ ಉಲಹಮುಂ ವಾಙ್ಗಿ ಪೊನ್ ವಯಿತ್ತಿಲ್ ಪೆಯ್ದು
ಪಣ್ಣೋರ್ ಆಲಿಲೈ ಪ್ಪಳ್ಳಿ ಕೊಣ್ಡವನ್ ಪಾನ್ ಮದಿಕ್ಕಿಡರ್ ತೀರ್ತವನ್ |
ಒಣ್ಣಿರಲ್ ಅವುಣನ್ ಉರುತ್ತುಹಿರ್ ವೈತ್ತವನ್, ಒಳ್ ಎಯ್ತ್ತೋಡು
ತಿಣ್ಡಿರಲ್ ಅರಿಯಾಯ್ ಅವನ್ ತಿರುವೇಙ್ಗಡಮ್ ಅಡೈ ನೆಞ್ಜಮೇ ||

ಕನ್ನಡ ನೆರಳ್

ಎಣ್ ದೆಸೆಗಳುಂ ಲೋಕಗಳೇಳುಂ ಕೊಂಡೇ ಸಿರಿಯುದರದೊಳಿಟ್ಟು
ಪಿನ್ಓರ್ ಆಲೆಲೆ ಪವಡಂ ಕೊಂಡವನಾ, ಹಾಲ್ ಚಂದಿರನೆಡರ್ ತೀರ್ದವನಾ
ತಿಣ್ತಿರಳ್ ಕಶಿಪುವಿನೆದೆಯೊಳ್ ಉಗುರಿಟ್ಟವನಾ ಚೆಲು ಕೋರೆಯೊಡು
ತಣ್ ಘನತರ ತಿರಳ್ ಸಿಂಹವೆ ಆದವನಾ ಸಿರಿವೇಂಕಟಮಡೆ ಮನವೇ

ಎಣ್ ದಿಶೈಹಳುಮ್ = ಪೂರ್ವ ಪಶ್ಚಿಮ ದಕ್ಷಿಣೋತ್ತರ ಹಾಗೂ ಆಗ್ನೇಯ ನೈಋತ್ಯ ವಾಯವ್ಯೇಶಾನ್ಯಗಳೆಂಬ ಅಷ್ಟದಿಕ್ಕುಗಳನ್ನೂ ಅಂದರೆ ಅವು ಮಾತ್ರವಲ್ಲ ಅಲ್ಲೆಲ್ಲಾ ಇರುವ ವಿಳ್ ಉಲಹಮುಮ್ ಭೂಲೋಕ ಭುವರ್ಲೋಕ ಸುವರ್ಲೋಕ ಮಹರ್ಲೋಕ ಜನೋಲೋಕ ತಪೋಲೋಕ ಸತ್ಯಲೋಕಗಳೆಂಬ ಮೇಲಿನವನ್ನೂ, ಅತಲ ವಿತಲಸುತಲ ಮಹಾತಲ ತಲಾತಲ ರಸಾತಲ ಪಾತಾಳಗಳೆಂಬ ಕೆಳಗಿನ ಸಪ್ತಲೋಕಗಳನ್ನೂ ಒಟ್ಟು ೧೪ ಅಂತಸ್ತುಗಳುಳ್ಳ ಒಂದೊಂದು ಬ್ರಹ್ಮಾಂಡವನ್ನೂ ಅಂತಹ ಅಖಿಲಾಂಡ ಕೋಟಿ ಅನಂತ ಅಸಂಖ್ಯಾತ ಬ್ರಹ್ಮಾಂಡಗಳನ್ನೂ

ವಾಙ್ಗಿ = ತನ್ನ ಮಹಾಸಂಕಲ್ಪದಿಂದ ತಾನೇ ನೇರಾ ಸ್ವೀಕರಿಸಿ, ತಾಯಿ ಪ್ರೀತಿಯಿಂದ ಮೊಗುವನ್ನೆತ್ತಿ ಕವಿಚಿಕೊಳ್ಳುವಂತೆ. ಕೊಣ್ಡು = ಪೊನ್ ವಯಿತ್ತಿಲ್ ಪೆಯ್ದು = ಸಂಹಾರಾऽऽವತಾರಕ್ಕೇ ಮೀಸಲಾದ ಹಿರಣ್ಮಯ ಮಹಾವಿರಾಟ್ ಪುರುಷೋತ್ತಮಾऽऽವತಾರಿಯಾದ

ತನ್ನ ಸಿರಿಯುದರದಲ್ಲಿ ಸೂಕ್ಷ್ಮರೂಪಕ್ಕಿಳಿಸಿ ಜಡಚೇತನಗಳನ್ನೆಲ್ಲಾ ಭದ್ರಪಡಿಸಿ, ಪಣ್ಡು = ಹಿಂದಿನ ಒಂದು ಪ್ರಳಯಕಾಲದಲ್ಲಿ, ಓರ್ = ಅದರಂತೆ ಬೇರೊಂದಿಲ್ಲದ, ಆಲ್ ಇಲೈ = ಎಸಳಾದ ಆಲದೆಲೆಯ ಮೇಲೆ, ಪಳ್ಳಿಕೊಣ್ಡವನ್ = ಮುಂದಿನ ಜಗತ್ ಸೃಷ್ಟಿ, ಪಾಲ ನೋಪಾಯಗಳನ್ನು ಚಿಂತನ ಗೈಯುತ್ತಾ ಶಯನಾಽಽಸನದಲ್ಲಿ ಯೋಗನಿದ್ರೆಯನ್ನು, ಸ್ವೀಕರಿಸಿದವನೇ ತಿರುವೇಂಕಟದಲ್ಲಿರುವುದು. ಮೂರ್ತಿಭೇದ ಕ್ರಿಯಾಭೇದಗಳಿದ್ದರೂ "ಧರ್ಮ ಒಂದೇ".

ರಕ್ಷಣಾಸಂಕಲ್ಪವನ್ನು ಕೃತಿಗಿಳಿಸಿದ ಒಂದು ಉದಾಹರಣೆಯನ್ನು ಇಲ್ಲಿ ತಿರುಮಂಗೈಯಾಳ್ವಾರ್ ತೋರುತ್ತಾರೆ. ಪಾಲ್ ಮದಿಕ್ಕು = ಗುರುಪತ್ನಿ ತಾರೆಯಲ್ಲಿ, ಸಂಗಮಿಸಿದ ತಪ್ಪಿಗೆ ಸಿಕ್ಕಿಕೊಂಡು ಬರಿ ಬೆತ್ತಲೆ ಬೆಳ್ಳಂಬಿಳಚಿನ ಚಂದ್ರನ ಮಾನ ಮುಚ್ಚಲು ತನ್ನ ಪೀತಾಂಬರವನ್ನಿತ್ತು ಇಡರ್ = ಆ ಅವಮಾನವನ್ನು. ತೀರ್ತವನ್ = ಹೋಗಲಾಡಿಸಿದವನೇ ಮುಂದೆ, ಒಣ್ ತಿರಲ್ = ಬ್ರಹ್ಮನ ವರಬಲದಿಂದ ಬಂದ ಮಹಾಶಕ್ತ, ಅವುಣನ್ = ಅಸುರಾಧಿಪತಿ ಹಿರಣ್ಯಕಶಿಪುವಿನ, ಉರತ್ತು = ಒರಟಾದ ಆ ಅಗಲವಾದ ಎದೆಗೆ, ಉಹಿರ್ ವೈತ್ತವನ್ = ತನ್ನ ಕರನಖಾಗ್ರಗಳನ್ನೇ ಇಟ್ಟವ. ಇಲ್ಲಿನ ಭಾವವೇನೆಂದರೆ, ಹಿಂದೆ ಹೇಳಿದ ಆ ಸಂಹಾರ ಆ ವಟಪತ್ರ ಶಯನ ಚಂದ್ರವಿಪನ್ನಿವಾರಣಗಳಲ್ಲಿ ಏನು ಪ್ರೀತಿಯಿತ್ತೋ ಅಷ್ಟೇ ವಾತ್ಸಲ್ಯದಿಂದ, ತನ್ನ ಶ್ರೀ ಹಸ್ತ ಸ್ಪರ್ಶದಿಂದಾದರೂ ಸದ್ ಬುದ್ಧಿ ಬಂದೀತೋ? ಎಂದು. ಒಳ್ ಎಯ್ತ್ತೋಡು = ಒಳ್ಳೆ ಹೊಳೆಯುವ ಕೋರೆಹಲ್ಲುಗಳೊಂದಿಗೆ ತಿಣ್ ತಿರಲ್ = ಹಿರಣ್ಯನ ತಿಣ್ಮೆಗೆ ತಕ್ಕಂತೆಯೇ ದೃಢ ಬಲ ಪರಾಕ್ರಮವುಳ್ಳ ಅರಿಯಾಯ್ = ನರಹರಿಯಾಗಿ, ಸ್ತಂಭೋದ್ಭವನಾಗಿ ಬಂದ, ಅವನ್ = ಅದ್ಭುತ ಅಟ್ಟಹಾಸ ಸಂಭ್ರಮಾಽಽಡಂಬರ ಮೂರ್ತಿಯಾದವನ ದಿವ್ಯಧಾಮವಾದ ತಿರುವೇಙ್ಗಡಮ್ ಅಡೈ ನೆಞ್ಜಮೇ!

ತಮಿಳ್ ತಿರಳ್ ೧-೮-೭

ಪಾರುಮ್ ನೀರ್ ಎರಿ ಕಾತ್ತಿನೋಡು ಆಹಾಶಮುಮ್ ಇವ್ವೈಯಾಯಿನಾನ್
ಪೇರುಮಾಯಿರಮ್ ಪೇಶ ನಿನ್ನ ಪಿರಪ್ಪಿಲಿ ಪೆರುಹು ಮಿಡಮ್
ಕಾರುಮ್ ವಾರ್ ಪನಿ ನೀಳ್ ವಿಶುಮ್ಬಿಡೈ ಶೋರು ಮಾ ಮುಹಿಲ್ ತೋಯ್ದರ
ಶೇರುಮ್ ವಾರ್ ಪೊಳಿಲ್ ಶೂಳ್, ಎಳಿಲ್ ತಿರುವೇಙ್ಗಡಮಡೈ ನೆಞ್ಜಮೇ

ಕನ್ನಡ ನೆರಳ್

ಇಳೆ ನೀರ್ ಉರಿ ಗಾಳಿಯೊಡಾಕಾಶವೂ ಆದವನು
ಉಲಿತಗುವೋಲ್ ನಿಂತಾ ಸಾಸಿರ ನಾಮನು *ಹುಟ್ಟಲಿ ಕಾಶಿಪ ವೆಡೆ
ಕಾರ್‌ಘನ ವರ್ಷವು ನೀಳಾಗಸದೆಡೆ ಸೋರ್ ಮಾ ಮುಗಿಲ್ ಮುಟ್ಟುವ
ಸೇರ್ ನೀರ್ ತೋಟಗಳ್ ಸುತ್ತಿಹ ಪೊಳೆ ತಿರುವೇಂಕಟಮಡೆ ಮನವೇ

ಪಾರುಮ್ = ಧಾರುಣಿಯೂ, ನೀರ್ = ನೀರೂ ಎರಿ = ಉರಿಯೂ ಕಾತ್ತಿನೋಡು = ಗಾಳಿಯೂ ಸೇರಿ ಆಹಾಶಮುಮ್ = ಆಕಾಶವೂ ಆಯಿನಾನ್ = ಈ ಪಂಚಭೂತಗಳನ್ನೂ ತನ್ನ ಶರೀರವಾಗಿಉಳ್ಳವನ, "ಆಕಾಶ ಶರೀರಂ ಬ್ರಹ್ಮ" ಎಂಬ ವೇದ ರಹಸ್ಯವನ್ನೇ ಈ ಕಲಿಯನ್ ದ್ರಾವಿಡ ವೇದಾಂಗಕ್ಕೂ ತಂದು ತೋರಿಸಿದ್ದಾರೆ. ಉಪನಿಷತ್ತುಗಳಲ್ಲಿ ಸೃಷ್ಟಿಗೆ ಪೂರ್ವ ಸಂಕಲ್ಪ "ಬಹುಸ್ಯಾಮ್" ಎಂದೇ ಬಂದಿದೆ. ಸ್, ಯ್, ಅ, ಮ್, ಇದರ ನಡುವಿನ ೨ ವರ್ಣಗಳನ್ನು ಹಿಂದುಮುಂದಾಗಿಸಿದರೆ "ಅಯ್" ಎಂಬುದನ್ನೇ "ಆಕಾಶಮುಮ್ ಆಯ್" ಎಂದು ಇಲ್ಲಿ ಆಳ್ವಾರ್ ಪ್ರಯೋಗಿಸಿದ್ದಾರೆ. ನಾನು ಹಿಂದೆಲ್ಲಾ ಸಿಂಹವಾಗಿ ಬಲು ಪ್ರಾಣಿಗಳನ್ನು ಕೊಂದೆ. ಎಂಬರ್ಥದಲ್ಲಿ "ಸಿಂಹೇನ ಭೂತ್ವಾ ಬಹವೋ ಮಯಾಽತ್ತಾಃ" ಎಂಬ ವಾಕ್ಯಕ್ಕೆ "ಸಿಂಹಶರೀರವುಳ್ಳವನಾಗಿ" ಎಂಬರ್ಥ ಹೇಗೋ, ಇಲ್ಲೂ ಪಾರುಮ್ ಆಯ್, ನೀರುಮಾಯ್, ಎರಿಯಾಯ್ ಕಾತ್ತಾಯ್ ಎಂದರೆ ವಸ್ತುಗಳಿಗೂ ಪರಬ್ರಹ್ಮಕ್ಕೂ ತಾದಾತ್ಮ್ಯ, ಅಭೇದ ಎಂಥದೆಂಬುದು ದಾರ್ಶನಿಕ ಸಮೀಕ್ಷೆ, ವಸ್ತುಗಳಿಗೆಲ್ಲಾ, "ಆತ್ಮವಾಗಿರೋಣ"ವೇ ಎಂಬುದೂ ನಿರ್ಹೇತುಕ ಕೃಪಾಪಾತ್ರರಾದ ಶರಣರಿಗೆ ಗೋಚರವಾಗಿದೆ. ಅನು ಪೂರ್ವಿಯನ್ನು ಹಾಗೇಹೇಳಲು, ವೇದವಿಧಿ ಈ ಆಳ್ವಾರಿಗೆ ಅವಕಾಶ ನೀಡದಿದ್ದರೂ, ಅರ್ಥ ಅರಿಯಲೂ, ಹೇಳಲೂ ಯಾರೂ ಅನಧಿಕಾರಿಗಳಲ್ಲ. ಎಲ್ಲರಿಗೂ ಫಲ ಒಂದೇ. ಈ ಸೂಕ್ಷ್ಮ ತಿಳಿದಾಗ ಸಮಾಜದಲ್ಲಿ ತಿಳಿಮೆ ಏರ್ಪಡುತ್ತದೆ.

ಅವುಗಳಿಗೆಲ್ಲಾ ಒಳಗಿನಿಂದ, ಹೊರಗಿನಿಂದ ಧಾರಕವಾಗಿ ತಾನು ಮಾತ್ರ ನಿರಾಧಾರನಾಗಿರುವವನ, ಅಯಿರಮ್ ಪೇರುಮ್ = ಸಹಸ್ರನಾಮಗಳನ್ನೂ ಪೇಶ = ಪಠನ ಮಾಡುವುದನ್ನು ಆಲಿಸಿ ಕೇಳುತ್ತಾ, ನಿನ್ನ = ಸ್ಥಿರನಾಗಿ ನಿಂತೇ ಇರುವ, ಪಿರಪ್ಪು

* ಕರ್ಮಾಧೀನವಾಗಿ ಹುಟ್ಟಿಲ್ಲದವ, ಭಕ್ತರಿಗಾಗಿ ತೋರಿ ಕಳೆಯೇರುತ್ತಾನೆ.

ಇಲಿ = 'ಅಜಾಯಮಾನಃ' ಎಂಬಂತೆ ಹುಟ್ಟಿಲ್ಲದವನು, ''ಬಹುಧಾ ವಿಜಾಯತೇ'' ಅಸೆಪಡುವ ಪ್ರೇಮಳ ಭಕ್ತರಿಗೆ ತಕ್ಕಂತೆ "ಏ" = ವೈಜ್ಞಾನಿಕವಾಗಿಯೇ ತನ್ನ ಮೌಲಿಕ ಬೆಲೆಗಳಲ್ಲಿ ಏನೊಂದೂ ಕೊರೆಯಿಲ್ಲದಂತೆ, ಇನ್ನೂ ಪೆರುಹುಮ್ = ಕಳೆಯೇರುತ್ತಾ, ಮೇಲ್ಮೇಲೆ ವಿಕಸಿತನಾಗಿಯೇ ಬೆಳೆ ಬೆಳೆಯುತ್ತಾ, ಎಲ್ಲನ್ನೂ ಸಂತೈಸುತ್ತಾ, ಬೆಳೆಸುತ್ತಾ ಇರುವವನ ಇಡಮ್ = ಅಭಿಮಾನ ಕ್ಷೇತ್ರ ತಿರುವೇಙ್ಗಡಮ್. **'ಸ ಉ ಶ್ರೇಯಾನ್ ಭವತಿ ಜಾಯಮಾನಃ'** ಎಂಬಂತೆ ಅರ್ಚಾವತಾರದಲ್ಲೂ ಶ್ರೇಯೋವಂತನಾಗಿ ಎಲ್ಲರಿಗೂ ಶ್ರೇಯಸ್ಸನ್ನು ಕೊಡುವ ಅವನಿರುವ ಎಡೆ ಇದು.

ಮತ್ತೂ ಈ ಸ್ವಯಂವ್ಯಕ್ತ ಶ್ರೀಕ್ಷೇತ್ರ ಎಂಥದು? ಕಾರುಮ್ ಮೇಲ್ಮೇಲೆ ಸುರಿಸುತ್ತಲೇ ಇರುವ, ವಾರ್ = ಜೊರಾದ ನೀರಿನ, ಪನಿ = ಧಾರಾಕಾರವಾದ ಮಳೆಯನ್ನು, ನೀಳ್ ವಿಶುಮ್ಬು ಇಡೈ = ಅಗಲಕ್ಕೂ ಎತ್ತರಕ್ಕೂ ಹರಗಿರುವ ಆಕಾಶದೆಡೆಯಿಂದ, ಶೋರುಮ್ = ಸುರಿಸುವ, ಮಾಮುಹಿಲ್ = ಘನ, ಮೇಘಗಳನ್ನು, ತೋಯ್ದರ = ಮುಟ್ಟುವಂತೆ ಶೇರುಮ್‌ವಾರ್ = ವಾರಿ ಸಮೃದ್ಧ, ಪೊಳಿಲ್ = ಪುಷ್ಪೋದ್ಯಾನಗಳಿಂದಲೂ ನಾನಾ ಬಗೆಯ ಗಿಡಮರ ಬಳ್ಳಿಗಳಿಂದಲೂ ತೋಪುಗಳಿಂದಲೂ, ಶೂಳ್ = ಸುತ್ತು ವರಿದಿರುವುದರಿಂದ ಎಳಿಲ್ = ಬಲು ಕಳೆಯೇರುತ್ತಲೇ ಇರುವ; ಎಲ್ಲಾ ಯಾತ್ರಾ ಸ್ಥಳಗಳಿಗೂ, ಊರೂರಿಗೂ ಜೀವಕಳೆ ಎಂದರೆ ಇವುಗಳೇ! ಕೃತಕ ಭಾರಿ ಭಾರಿ ಹೊಸ ಹೊಸ ಕಾಂಕ್ರೀಟ್ ಕಟ್ಟಡಗಳಿಗೆ ಬದಲಾಗಿ ಹೂ ತುಳಸೀ ತೋಟ ಉಪಯುಕ್ತವಾದ ಮರದ ತೋಪುಗಳನ್ನು ಬೆಳೆಸುವ ಕಡೆಗೇ ಅಳ್ವಾರ್ ಶರಣರ ಆಚಾರ್ಯರ ಒಲವೆಂಬುದನ್ನು ನಾವು ಅರಿತುಕೊಳ್ಳಬೇಕು. ಭಕ್ತಜನ ಜಾಗೃತಿಯೂ ಆಗಬೇಕು. ಅಂಥ ತಿರು-ವೇಙ್ಗಡಮ್ ನೆಞ್ಜಮೇ! ಅಡೆ. ನನ್ನ ಮನಸ್ಸಿಗೆ ಇಂಪಣವಾದವರೇ! ಎಂದೂ ಅರ್ಥ.

ತಮಿಳ್ ತಿರಳ್ ೧-೮-೮

ಅಮ್ಬರಮನಲ್ ಕಾಲ್ ನಿಲಮ್ ಶಲಮಾಹಿ ನಿನ್ನ ವಮರರ್ ಕೋನ್
ವಮ್ಬುಲಾ ಮಲರ್ ಮೇಲ್ ಮಲಿಮಡ ಮಙ್ಗೈತನ್ ಕೊಳುನನವನ್
ಕೊಮ್ಬಿನನ್ನ ವಿಡೈ ಮಡ ಕ್ಕುರಮಾದರ್ ನೀಳ್ ಇದಣನ್ಬೋರುಮ್
ಶೆಮ್ಬುನಮವೈ ಕಾವಲ್ ಕೊಳ್ ತಿರುವೇಙ್ಗಡಮಡೈ ನೆಞ್ಜಮೇ

ಕನ್ನಡ ನೆರಳ್

ಅಂಬರಮನಲಂ ಎಲರ್ ಇಳೆಜಲಮಾಗುತ ನಿಂದವನಾ ಅಮರರ್ಗಧಿಪತಿಯಾ
ಕಂಪುಗಿ ಪೂಮೇಲ್ ಸಮೃದ್ಧ ಭವ್ಯೆ ಗತ್ತಿನ ಸಿರಿಗೇ ವಲ್ಲಭನಾಗಿಹನಾ, ನೀರ್
ವಂಜಿಯನೊಪ್ಪುವ ಸೊಂಟದ ಬಲ, ಗುಣವತಿ ಕೊರವರ ಪೆಣ್‌ಗಳ್ ಅಟ್ಟಣೆಮೇಲ್
ಕೆಂಗಾಳ್ ಕಾಚಕ್ಕಿಯನವ ಕಾವಲ್ ಕಾಯುವ ತಿರುವೇಂಕಟಮಡೆ ಮನವೇ

ಪರಬ್ರಹ್ಮ ತತ್ವಕ್ಕೇ ಅಸಾಧಾರಣವಾದ ಕಾಣದ ದಿವ್ಯ ರೂಪಿನಂತೆ ಜಗತ್ತೂ ಆತನ ಕಾಣುವ ರೂಪವೇ. ಹೀಗೆ ದಿವ್ಯ ಅದೃಶ್ಯಾssಕಾರನಾಗಿಯೂ ದೃಶ್ಯ ಜಗದಾಕಾರನಾಗಿಯೂ ಇರುವುದನ್ನು ತಿರುಮಂಗೈಯಾಳ್ವಾರ್ ಈ ಪಾಶುರದಲ್ಲಿ ಅನುಭವಿಸುವರು. ಅಮ್ಬರಮ್ = ಆಕಾಶವನ್ನೂ, ಅನಲ್ = ಅಗ್ನಿಯನ್ನೂ, ಕಾಲ್ = ಗಾಳಿಯನ್ನೂ, ನಿಲಮ್ = ನೆಲವನ್ನೂ, ಶಲಮ್ ಆಹಿ = ಜಲವನ್ನೂ ಶರೀರವಾಗಿಯುಳ್ಳವನಾಗಿ ಅವುಗಳಿಗೆ ಆತ್ಮನಾಗಿ, ನಿನ್ನ = ಎಂದೂ ನಿಂತೇ ಸ್ಥಿರವಾಗಿರುವ, ಜಗದ್ ರೂಪಿಗೆ ಅತೀತವಾದ ಅಸಾಧಾರಣವಾದ ಮೂಲರೂಪವೊಂದುಂಟು. ಅದೇ, ಅಮರರ್ ಕೋನ್ = ನಿತ್ಯಮುಕ್ತರಿಂದ ದೇಶ ವಿಶೇಷದಲ್ಲಿ ನಿತ್ಯಾssನುಭಾವ್ಯವಾದುದೂ ಪರತ್ವ ಸೂಚಕವಾದುದೂ ಪರವಾಸು ದೇವ ಮೂರ್ತಿ. ಅಂತಹ ಸದಾದರ್ಶನಾssಮೃತ ಪುತ್ರರಿಗೆ ಆನಂದ ನೀಡಬೇಕಾದರೆ ಆ ಪ್ರದೇಶ ಅಮೃತವಾಗಿರುವಂತೆ, ಆ ಪರಬ್ರಹ್ಮ ಮೂರ್ತಿಯೂ ದಿವ್ಯ ಮಹಿಷೀ ಮೂರ್ತಿ ಸಮೇತನಾಗಿಯೇ ಇರಬೇಕಷ್ಟೆ!

ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ ಅಹೋರಾತ್ರೇ ಪಾರ್ಶ್ವೇ — ಪುರುಷ ಬ್ರಹ್ಮ ಸೂಕ್ತ

ವೈಕುಂಠೇ ತು ಪರೇ ಲೋಕೇ ಶ್ರಿಯಾ ಸಾರ್ಧಂ ಜಗತ್ಪತಿಃ| ಆಸ್ತೇ ವಿಷ್ಣುರಚಿಂತ್ಯಾತ್ಮಾ ಭಕ್ತೈರ್ ಭಾಗವತೈಸ್ಸಹ||

ಈ ಶ್ರೌತ ಆರ್ಷಪ್ರಮಾಣದಂತೆಯೂ, ವಮ್ಬು = ಸೌಗಂಧ್ಯಾದಿ ಗುಣಗಳನ್ನು. ಉಲಾ = ಅಶೋಷ್ಯವಾಗಿ ಉಕ್ಕಿಸುತ್ತಲೇ ಇರುವ, ಮಲರ್ ಮೇಲ್ = ಸರ್ವಶೋಭಾ ಪ್ರತಿನಿಧಿಯಾದ ತಾವರೆ ಹೂ ಮೇಲೆ, ಮಲಿ = ಬಿಡದೆ ನಿತ್ಯವಾಸ ಮಾಡುವ, ಮಡಮ್ = ಸಕಲವಿಧ ಗಾಂಭೀರ್ಯಕ್ಕೂ ತವರಾದ, ಮಙ್ಗೈ = ನಮ್ಮಂತಹ ಜೀವಾತ್ಮರಿಗೆ ಮೇಲ್‌ಪಂಕ್ತಿ ತೋರಿ ತಾನೂ ತುಂಬಿದ ಗರತಿಯಾಗಿರುವ, ತನ್ = ಅಂತಹ ಪ್ರಧಾನ ಮಹಿಷಿಯಾದ, ಕೊಳುನನ್ ಅವನ್ = ವಲ್ಲಭನಾದ ಶ್ರಿಯಃಪತಿ ಶ್ರೀನಿವಾಸನಿಗೇ ಸೇರಿದ, ತಿರುವೇಙ್ಗಡಮ್,

ಆ ಸತ್ಯಕಾಮ ಪರಬ್ರಹ್ಮ ದಿವ್ಯಪತ್ನೀ ಪರಿಜನಾದಿ ಪರಿವಾರ ಸಮೇತನಾಗಿಯೇ ತಿಮ್ಮಪ್ಪನಾಗಿರುವುದು. ಈ ಲೋಕದ ಗಿರಿಜನರ ಗರತಿಯರೂ ಅನ್ನಾಹಾರ ಬೆಳೆದುಕೊಳ್ಳಲೂ ಅನುವಾದ ಪ್ರದೇಶ ತಿರುವೇಙ್ಗಡಮ್. ಈ ಆದಿವಾಸಿನಿಯರ ಆತ್ಮಗುಣ, ರೂಪಗುಣ ವರ್ಣನೆ ಮಾಡದೆ ಈ ಪರಕಾಲ ಕವಿ ಇರುವವರಲ್ಲ. ಉಭಯ ವಿಭೂತಿಯ ಪ್ರತಿಯೊಂದು ವಸ್ತುವೂ ಇತರ ಆಳ್ವಾರ್ ಶರಣರಿಗಿಂತ ಇವರ ವಾಙ್ಮಯದಲ್ಲಿ ಹೇರಳವಾಗಿ ಪ್ರಸ್ತುತವಾಗಿದೆ! ಕೊಮ್ಬಿನ್ ಅನ್ನ = ನೀರ್‌ವಂಜಿ (ವೇತಸ)ಯನ್ನೇ ಹೋಲುವ ವಿನಯಮೂರ್ತಿಗಳು ಈ ನಾರಿಯರು. ನದೀ ತೀರಗಳಲ್ಲೇ ಪ್ರಾಯಃ ಬೆಳೆಯುವ ಈ ಗಿಡ, ಹೆಚ್ಚು ಹುಚ್ಚು ಪ್ರವಾಹ ಏರಿದಾಗಲೂ ಬೇರೆ ಮರಗಳಂತೆ "ಶಠಂ" ಎಂದಿರದೆ ಬಾಗಿ ಬಳುಕಿ ವಾಹಿನಿಗೆ ಅನುಸಾರಿಯಾಗಿಯೇ ಇದ್ದುಳಿದುಕೊಳ್ಳುವಂತೆ, ಜನನೀ ಜನ್ಮಭೂಮಿಯಾದ ತಿರುಮಲೆಯನ್ನು ಎಂದೂ ಬಿಡದೇ ಇರುವ ಜಾಣೆಯರು! ಹುಟ್ಟಿದ್ದೂ ತಿರುಪತಿ ಬೆಟ್ಟದಲ್ಲೇ, ಸೇರಿದ್ದೂ ಅಲ್ಲಿಗೇ. ದಿವ್ಯದೇಶದ ನಿತ್ಯ ಸ್ಥಳವಾಸವೇ ಒಂದು ಮಹಾಪುರುಷಾರ್ಥ.

ಕೊರಮರ ಈ ಮಡದಿಯರು, ಸೊಂಟವನ್ನು ತೆಳುವಾಗಿಟ್ಟುಕೊಂಡಿರುವುದರಿಂದ ಬಗ್ಗಿ ಕೆಲಸ ಮಾಡಲು ಸೌಕರ್ಯ. ಅಂತಹ ಇಡೈ = ನಡುವುಳ್ಳ ಮಡಮ್ = ಮಹಾಲಕ್ಷ್ಮಿಯಂತೆಯೇ ಸ್ತ್ರೀಸಹಜವಾದ ಗಂಭೀರ ನಡತೆಯಿಂದ ತುಂಬಿದ ಕುರಮಾದರ್! ನೀಳ್ = ಎತ್ತರವಾಗಿ ಕಟ್ಟಿರುವ, ಇದಣಂ ತೊರುಮ್ = ಪ್ರತಿಯೊಂದು ಅಟ್ಟಣೆಗಳಲ್ಲೂ ಇದ್ದು, ಶೆಮ್ ಪುನಮ್ = ಕಾಚಕ್ಕಿಯ ಸ್ಥಿತಿಗೇರಿ ಕಾಳುಗಳು ಕೆಂಪಾಗಿರುವುದು ಸಹಜ. ತಿರುಪತಿ ಗಿರಿಭೂಮಿಯೂ ಪ್ರಾಯಃ ಕೆಂಪು ಧಾನ್ಯಗಳೂ ಅಂತೆಯೇ! ಹಕ್ಕಿಪಕ್ಕಿಗಳಿಂದ ಅವ್ಗೈ ಕಾವಲ್‌ಕೊಳ್ = ಅವುಗಳನ್ನು ಕಾವಲು ಕಾಯುತ್ತಿರುವ ಬೇಸಾಯದ ದೃಶ್ಯದಿಂದಲೂ ಕೂಡಿದ, ತಿರುವೇಙ್ಗಡಮ್ ಅಡೈ ನೆಞ್ಜಮೇ. ಇಲ್ಲಿ ಭೂವೈಕುಂಠವೆನಿಸಿದ ಕ್ಷೇತ್ರದಲ್ಲೇ ಹಾರ್ದವಾಗಿ ಅಡಗುವ ಜೀವನಪಾಕ ತಾಗಿದರೆ ಅಲ್ಲೂ ಅದೇ ವೈಕುಂಠ ಸಿದ್ಧಿಸುವುದು. ಇಲ್ಲಿ ಸಲುವವರೇ ಅಲ್ಲಿಯೂ ಸಲುವರಯ್ಯಾ!

ತಮಿಳ್ ತಿರಳ್ ೧-೮-೯

ಪೇಶುಮಿನ್ ತಿರುನಾಮಮ್ ಎಟ್ಟೆಳುತ್ತುಮ್ ಶೊಲ್ಲಿ ನಿನ್ನು ಪಿನ್ನರುಮ್
ಪೇಶುವಾರ್ ತಮ್ಮೈಯುಯ್ಯ ವಾಙ್ಗೆ ಪಿರಪ್ಪರುಕ್ಕುಮ್ ಪಿರಾನಿಡಮ್
ವಾಶ ಮಾ ಮಲರ್ ನಾರುವಾರ್ ಪೊಳಿಲ್ ಶೂಳ್ ತರುಮುಲಹುಕ್ಕೆಲ್ಲಾಮ್
ತೇಶಮಾಯ್ ತಿಹಳುಮ್ ಮಲೈ ತಿರುವೇಙ್ಗಡಮ್ ಅಡೈ ನೆಞ್ಜಮೇ

ಕನ್ನಡ ನೆರಳ್

ಪೇಳಿರಿ ಸಿರಿನಾಮಂ! ಅಷ್ಟಾಕ್ಷರಮಂತ್ರಂ! ಪೇಳುತ ಧೃತಿಯಿಂ ಮತ್ತೆ ಮತ್ತೇ
ಪೇಳುವವವರಂ ಉಜ್ಜೀವಿಪ ತೆರ ಮೇಲೆತ್ತಿ ಜನಿ ಕಡಿಯುವ ಕರ್ತನ ಎಡೆ
ಹಿರಿವಾಸನೆ ಹೂಗಳ್ ಘಮಘಮ ಗುಟ್ಟುವ ತೋಟದಿಂ ಸುತ್ತಿಹ ಲೋಕಕೆ ಎಲ್ಲಾ
ಬಿರಿ ತೇಜವದಾಗಿ ಪೊಳೆ ಮಲೆ ತಿರುವೇಂಕಟಮಡೆ ಮನವೇ.

ಪೇಶುಮಿನ್ ಹೇಳಿರಿ ಎಂದು ಈ ಹಾಡಿನಲ್ಲಿ ಬಂದಿರುವುದರಿಂದ ಹಿಂದಿನ ೮ ಪದ್ಯಗಳೂ ಸ್ವಾನುಭವದಂತೆ ಕಾಣುತ್ತವೆ. ಈ ಪರೋಪದೇಶ ಏತಕ್ಕೆ? ಪೇಶುವಾರ್ ತಮ್ಮೈ = ಹೇಳುವವರನ್ನು ಮುಖ್ಯವಾಗಿ ದೇವರು ವಿಶೇಷವಾಗಿ ಗಮನಿಸಿ, ಅಂತಹವರಿಗೂ ತನಗೂ, ನಾಮದ ತಂತಿಯಾಗಲಿ, ವೈರ್‌ಲೆಸ್ ರಶ್ಮಿಯಾಗಲಿ ನಿರಾsಬಾಧವಾದುದರಿಂದ, ನಾನು ಮಾಡುತ್ತಲೇ ಇರುವ ರಕ್ಷಣೆಗೆ ಈಗಿವರು ಅಡ್ಡಿತರುತ್ತಿಲ್ಲವೆಂದು ಬಗೆದು, ಉಯ್ಯವಾಙ್ಗೆ = ಈ ಭವ ಸಾಗರದಿಂದ ಮೇಲೆತ್ತಿ, ಪಿರಪ್ಪು = ಪುನರ್ ಜನ್ಮವನ್ನು, ಅರುಕ್ಕುಮ್ = ಕತ್ತರಿಸಲು ಸಮರ್ಥನಾದ, ಪಿರಾನ್ = ಮಾಯಾ ಪ್ರಭುವಿನ ಇಡಮ್ = ಸೌಶೀಲ್ಯ, ಸೌಲಭ್ಯ ಕಾರುಣ್ಯಾದಿ ಗುಣಗಳನ್ನು ಜನಸಾಮಾನ್ಯರಿಗೂ ಪ್ರಕಾಶಪಡಿಸುವ ವಿದ್ಯಾಧಾಮ ತಿರುವೇಙ್ಗಡಮ್, ವರ್ಣಿಸಿ ಆಳ್ವಾರಿಗೆ ಇನ್ನೂ ತೃಪ್ತಿಯಿಲ್ಲ. ತೃಪ್ತಿತಾರದ ಕ್ಷೇತ್ರವೇ ತಿರುಪತಿ!

ವಾಶಮ್ = ವಾಸನೆಯಿಂದಲೇ ಘಮಘಮಿಸುವುದೂ, ಮಾಮಲರ್ = ಮಹತ್ವದಿಂದ ಕೂಡಿರುವ ಕೇವಲ ಬಣ್ಣದ ಹೂಗಳಂತಲ್ಲದೆ ಸರ್ವಸದ್‌ಗಂಧನಿಗೇ ಮೀಸಲಾದ ಕುಸುಮಗಳಿಗೆ, ನಾರುಮ್‌ವಾರ್ = ಗಂಧಧಾರಾ ವರ್ಧಕವಾದ, ಪೊಳಿಲ್ = ಹೊಳಲುಗಳಿಂದಲೇ ಶೂಳ್‌ತರುಮ್ = ನಾಲ್ಕೂ ಕಡೆ ಸುತ್ತುವರಿಯಲ್ಪಟ್ಟಿರುವ, ಮಲೈ = ಉನ್ನತವಾದ ಪರ್ವತಪ್ರಾಂತ್ಯ. ಅಂತಹ ತಿರುವೇಙ್ಗಡಮ್ ಅಡೈ ನೆಞ್ಜಮೇ! ಹೊರಗಿನ ಸೌಗಂಧ್ಯ ಒಳಗಿನ ಬ್ರಹ್ಮಗಂಧವನ್ನು ಉದ್ದೀಪನ ಗೊಳಿಸುವ ಅಂತರ ಕಲಾಕ್ಷೇತ್ರದಲ್ಲಿ ಪ್ರಬುದ್ಧಮಾನಸರಾದ ಮಾನವರೆಲ್ಲಾ ಮನವಿಟ್ಟು ನಿಮ್ಮ ಮಾನವೀಯತೆಯನ್ನು ಇನ್ನೂ ಹೆಚ್ಚಿಸಿಕೊಳ್ಳಿರಯ್ಯಾ!

ಹೀಗೆ ನಮ್ಮೆಲ್ಲರನ್ನೂ ಉಜ್ಜೀವನ ಗೈಯ್ಯುವ ಸ್ವಾಮಿಗೂ ಬಲು ಪಸಂದಾದ ಇಂತಹ ದಿವ್ಯಗಂಧವತೀ ಭೂಮಿಯಲ್ಲಿ, ಪಿನ್‌ನರುಮ್ = ನೆರುಗಿನೆರುಗಿ ಪಿನ್‌ತೊಡರಿ, ಮತ್ತೆ ಮತ್ತೆ ಬಿಡದೆ ಅಖಂಡವಾಗಿ ಅನ್ನಿರಿ! ಶೊಲ್ಲಿ. ನಿನ್ನು = ಸ್ಥಿರಧೃತಿಯಿಂದ ಹೇಳಿರಿ! ಏನನ್ನು! ತಿರುನಾಮಮ್ ಎಟ್ಟು ಎಳುತ್ತುಮ್ = **ಓಮ್ ನಮಃ ನಾರಾಯಣಾಯ** ಎಂಬ ಶ್ರೀಮದಷ್ಟಾಕ್ಷರಿ ಮಂತ್ರವನ್ನು.

ಮೊಟ್ಟಮೊದಲಿಗೇ ದರೋಡೆಕೋರರಾಗಿದ್ದ ಇವರು ಶ್ರಿಯಃಪತಿಯ ಸಾಕ್ಷಾತ್ ಶ್ರೀಮುಖದಿಂದಲೇ ಇದನ್ನು ಪಡೆದವರು. ತಮ್ಮ ಸ್ವಂತ ಅನುಭವವನ್ನೇ ಜನರಿಗೆ ಇವರು ಕರುಣಾಪ್ರೇರಿತರಾಗಿ ಹೇಳಲು ಪ್ರೋತ್ಸಾಹಿಸುತ್ತಾರೆ.

ಈ ಪೆರಿಯ ತಿರುಮೊಳಿ ಪೂರಾ **ನಾರಾಯಣ** ಈ ಚತುರಕ್ಷರ ನಾಮವನ್ನೇ ವಿಸ್ತಾರಪಡಿಸುವುದು. ೧೨ ಆಳ್ವಾರ್ ಶರಣರ ಒಟ್ಟು ೪೦೦೦ ತಮಿಳ್ ತಿರಳ್ ಹಾಡುಗಳಲ್ಲಿ, ಮೊದಲ ಸಾವಿರ "ಓಮ್" ಎಂಬುದರ ವಿವರಣೆ. ಅದರ ಕೊನೆಯಲ್ಲಿನ "ದೇವರಿಗಿಂತ ಗುರುನಾಮವೇ ಮಧುರತಮ"ವೆಂಬ ೧೧ ಹಾಡಿನ "ಕಣ್ಣಿನುಣ್ ಶಿರುತ್ತಾಮ್ಬು" ಎಂಬುದು "ನ-ಮಃ" ಎಂಬುದರ ವಿವರಣೆ, ನಾರಾಯಣ ಪದದ ಮೇಲಿರುವ "ಆಯ" ಎಂಬ ಚತುರ್ಥೀವಿಭಕ್ತಿಯ ಅರ್ಥವನ್ನು ಬಿತ್ತರಿಸುವುದೇ ನಮ್ಮಾಳ್ವಾರರ "ತಿರುವಾಯ್‌ಮೊಳಿ" ಮತ್ತು ಉಪಾಂಗಗಳಾದ "ಇಯಲ್‌ಪಾ";

ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಆತ್ಮಾಪಹಾರಿಗಳೇ! ನೀಲಪ್ಪ ಮಾತ್ರ ಮಹಾಚೋರನಾಗಿರಲಿಲ್ಲ! "ಅ" ಉ ಮ್ ಮಾನವರಾದ ನಾವೂ, ಸಕಲಾತ್ಮಚೇತನರೂ ಅ ಜಗದಾದಿಪುರುಷನಿಗೇ, ಸೇವಕರು. "ಮಃ" ನನಗಾಗಿ "ನ" ನಾನಲ್ಲ. "ಅ" ಎಂದರಾರು? ನಾರಾಯಣ. "ಆಯ" ಅವನಿಂದ ಬಂದಿರುವ ನಾವೆಲ್ಲಾ ಅವನಿಗಾಗಿಯೇ ಹೊರತು, ಕೇವಲ ಸ್ವಾರ್ಥ ದೊಡ್ಡ ದರೋಡೆ! ನನಗೇ ಎಲ್ಲರೂ ಸೇವೆ ಮಾಡಲಿ ಎಂಬ ಈ ಅಜ್ಞಾತ ಸಾಮಾಜಿಕ ಕಳ್ಳತನಗಳನ್ನೆಲ್ಲಾ ಮಾಡಿದ ಮಹಾಕಳ್ಳ, ಪೋಲಿಯಾಗಿದ್ದ ಈ ತಿರುಮಂಗೈ ಆಳ್ವಾರ್ ಈ ಅನನ್ಯಸೇವೆ, ಅನನ್ಯ ಸಾಧನ, ಅನನ್ಯ ಫಲಗಳ ಬಗ್ಗೆ ಯಥಾರ್ಥ ಶಿಕ್ಷಣ ನೀಡುತ್ತಾ ಜಗತ್ತನ್ನೇ ಸುತ್ತುತ್ತಿದ್ದಾನೆ!. ವಸ್ತುನಿಷ್ಠವಾಗಿಯೇ ನಮ್ಮ ಸ್ವಸ್ವರೂಪ, ಸೇವೆ. ನಮ್ಮ ಸಾಧನೆಯೂ ಸೇವ್ಯವಾದ ಆ ವಸ್ತುವೇ. ವ್ಯಾಪಕ ಸಮಾಜದ ಸಂತೋಷವೇ ನಮ್ಮ ಜೀವನದ ಫಲ.

ಓಮ್ ನಮಃ ನಾರಾಯಣಾಯ

ಈ ಮೂರು ಪದಗಳಿಂದ, ಈ ಮೂರರ್ಥ ಫಲಿತವಾಗುವುದು. ಇದರಲ್ಲೇ ಸಕಲ ಜ್ಞಾನವಿಜ್ಞಾನಗಳೂ ಅಡಗಿವೆ. "ಸರ್ವಂ ಅಷ್ಟಾಕ್ಷರಾನ್ತಸ್ಥಮ್"

ಪೇಶುಮಿನ್ = ಹೇಳುತ್ತಲೇ ಇರಿ. ಇದಕ್ಕೇನೂ ಇತರ ಮಂತ್ರಗಳಂತೆ, ಅಧಿಕಾರ ಅನಧಿಕಾರದ ಪ್ರಶ್ನೆಯೇ ಇಲ್ಲ. ಇದು ಜಾತ್ಯತೀತ ಮಂತ್ರ! ಸರ್ವಾರ್ಹಮಂತ್ರ. ಶ್ರದ್ಧೆಯೊಂದಿದ್ದರೆ ಸಾಕು

ಶ್ರದ್ಧೈವ ಕಾರಣಂ ಪುಂಸಾಂ ಅಷ್ಟಾಕ್ಷರ ಪರಿಗ್ರಹೇ

ತಾಯಿಯ ಹೆಸರು ಹೇಳಲು ಎಲ್ಲಾ ಮಕ್ಕಳಿಗೂ ಸಮಾನ ಅಧಿಕಾರವುಂಟು. ಅಂತೆಯೇ ಇದು "ಶ್ರೀ" ಮದಷ್ಟಾಕ್ಷರಿ. "ಉ" ಎಂದರೆ "ಶ್ರೀ" ಮಾತೆಗೂ ನಾವೆಲ್ಲರೂ ಆಳು. ಅವಳ ಮೂಲಕ ನಾರಾಯಣನಿಗೇ ಸರ್ವಸಮಾನರಾಗಿ ನಾವೆಲ್ಲರೂ ಮೀಸಲಾಳುಗಳು. ಅದರೊಳಗೆ ನಮ್ಮ ನಮ್ಮ ಮೀಸಲಾತಿಗಳೆಲ್ಲಾ ಸಂಗತವಾಗಿಬಿಡುವುವು. ಇಲ್ಲಿನ ಜೀವನಕ್ಕೂ ಈ ಮಂತ್ರ ಸರಿನಿಟ್ಟಿನ ಸಾಮೂಹಿಕ ಪಥ ತೋರಿಸಿ ಕೊನೆಗೆ ಎಲ್ಲರ ಲೇಸೂ ಆಗುವುದೆಂದು ಘೋಷಿಸುತ್ತದೆ.

ತಮಿಳ್ ತಿರಳ್ ೧-೮-೧೦

ಶಬ್ಗಯಲ್ ತಿಳೈಕ್ಕುಮ್ ಶುನೈ ತಿರುವೇಙ್ಗಡತ್ತುರೈ ಶೆಲ್ವನೈ
ಮಜ್ಜೈಯರ್ ತಲೈವನ್ ಕಲಿಹನ್ನಿ ವಣ್ಡಮಿಳ್ ಚ್ಟೆಞ್ಞೊಲ್ ಮಾಲೈ ಹಳ್
ಶಜ್ಜೈಯಿನ್ನಿ ತ್ತರಿತ್ತುರೈಕ್ಕವಲ್ಲಾರ್‌ಹಳ್ ತಞ್ಜಮದಾಹವೇ
ವಙ್ಗಮಾ ಕಡಲ್ ವೈಯ್ಯಮ್ ಕಾವಲರಾಗಿ ವಾನುಲಹಾಳ್ವರೇ

ಕನ್ನಡ ನೆರಳ್

ಕೆಂಮೀನ್ ಜಿಗಿದಾಡುವ ತೀರ್ಥದ ವೇಂಕಟಗಿರಿ ವಾಸನ ಕುರಿತೀ
ಮಂಗೈಯರ್ ನಾಯಕ ಕಲಿಹರನ್ ಚೆಂದಮಿಳ್ ಸರಳಹ ಸೊಲ್‌ಮಾಲೆಗಳಂ ಏನೊಂದೂ
ಶಂಕೆಯ ತೊರೆದೇ ಚಿತ್ತದೊಳ್ ಧರಿಸಿ ನಿಚ್ಚಳ ರಕ್ಷೆಯು ಇದು ವೆಂದೇ ಒರೆಯಲ್ ಶಕ್ತರು
ಸಂಕುಲ ನೌಕಾ ಸಾಗರ ಪರಿವೃತ ಭೂಪರೇ ಆಗಿ ಆ ಪರಮದ ಬಾನ್ ಲೋಕವನಾಳುವರೈ

ವೈಕುಂಠದಲ್ಲಿರುವವರು ಯಾವಾಗಲೂ ೨೫ ವರ್ಷ ವಯಸ್ಸಿನ ಯೌವನದಿಂದಲೇ ಕೂಡಿ ಸದಾನಂದರಾಗಿರುವರು! ಅಂತಹ ಭಾಗ್ಯವೇ ಈ ತಿರುಪತಿಯ ತೀರ್ಥಗಳ ದೊಣೆಗಳಲ್ಲಿರುವ ಮೀನುಗಳಿಗೂ. ಅವು ಪರಸ್ಪರ ಸಂಮರ್ದದಿಂದ ಫಳ್ ಫಳ್ ಎಂದು ಜಿಗಿದಾಡುವ ನೋಟ! ಶೆಮ್ ಕಯಲ್ = ಪರಸ್ಪರಾನುರಕ್ತಗಳಾದ, ಅನುರಾಗವನ್ನು ಹೊರಗೂ ಸೂಸುವಂತೆ ಕೆಂಪುಮತ್ಸ್ಯಗಳ ಅನೇಕ ಜಾತಿಗಳು. ತಿಳೈಕ್ಕುಮ್ = ತುಳ್ಳಿ ಓಡಾಡುವ ಗತಿವಿಲಾಸ ಕಾಣಬಹುದಾದ ಶುನ್ಯೆ = ನೀರ್ ದೊಣೆಗಳೇ ಬಹುಳವಾಗಿರುವ ತಿರುವೇಙ್ಗಡತ್ತು = ವೇಂಕಟಾಚಲದಲ್ಲಿಯೇ ಉರೈ = ಸಂತಸದಿಂದ ನಿತ್ಯವಾಸ ರಸಿಕನಾದ ಶೆಲ್ವನೈ = ಸುಂದರಾಂಗನಾದ ಸರ್ವಸಂಪತ್ ಕುಮಾರನನ್ನು, ಶ್ರಿಯಃಪತಿ ಶ್ರೀನಿವಾಸನನ್ನು ಕುರಿತು

ಮಙ್ಗೈಯರ್ ತಲೈವನ್ = ತಿರುಮಂಗೈ ನಗರವಾಸಿಗಳ ನಿರ್ವಾಹಕನಾದ, ಕಲಿಹನ್ನಿ = ಕಲಿಘ್ನ ಕಲಿದೋಷಹರ - ನೆಂದೇ ಪ್ರಸಿದ್ಧನಾದವನು. ಶೊಲ್ = ದೈವದತ್ತ ಕೃಪೆಯೊಂದರಿಂದಲೇ ಹೇಳಿರುವ, ವಣ್ ತಮಿಳ್ = ಎಲ್ಲೋ ಕೆಲವಾರು ವಿಶಿಷ್ಟ ಜನರ ಸಲುವಾಗಷ್ಟೇ ಅಲ್ಲದೆ, ಮುಗ್ಧ ಜನಪದದ ಸರ್ವಜನರಿಗೂ ಉದಾರವಾಗಿ ತನ್ನ ಶಬ್ದಾರ್ಥ ನೀಡುವ ತಮಿಳ್ ದ್ರಾವಿಡಭಾಷೆಯ ಮಾಲೈಹಳ್ = ಹಾಡುಗಳ ಮಾಲಾರೂಪವಾಗಿರುವ, ಈ ಸರಳ ಸುಲಭ ವಾಙ್ಮಯವನ್ನು, ಶಙ್ಗೈ ಇನ್ನಿ = ಯಾವೊಂದೂ ಸಂಶಯ ಪಡದಂತೆ, ತರಿತ್ತು = ಕಂಠದಲ್ಲಿ ಧಾರಣ ಮಾಡಿ, ಮನದಲ್ಲಿ ಅರ್ಥೈಸಿ, ಹೃದಯದಲ್ಲಿ ಭಾವಿಸಿ, ತಿಮ್ಮನ ಮಲೆಯಲ್ಲೇ, ಅವನಲ್ಲೇ ಅಂತರ್ ಬಾಹ್ಯ ಮನೋನಯನಾದಿಗಳನ್ನು, ಕೇಂದ್ರೀಕರಿಸಿ ಬೇರಾವುದರ ಆಕ್ರಮಣಕ್ಕೆ ಅಸ್ಪದ ನೀಡದೆ "ಧಾರಣೆ"ಗೈದು, ಉರೈಕ್ಕ ವಲ್ಲಾರ್ ಹಳ್ = ಈ ಪೆರಿಯ ತಿರುಮೊಳಿಯ ಬಾಯ್‌ಪಾರಾಯಣದಲ್ಲಿ ಸಮರ್ಥರಾದವರಿಗೆ, ತಞ್ಜಮ್ ಅದು ಅಹವೇ = ಈ ಉಚ್ಚಾರಣಾ ಮಾತ್ರವೇ ರಕ್ಷಕವೂ ಫಲರೂಪ ಕೈಂಕರ್ಯವೂ ಆಗಿಯೇ ಬಿಡುವುದು.

ತಮಿಳ್ ತಿರಳ್ ೧-೯-೧

ತಾಯೇ ತನ್ನೈಯೆನ್ನುಮ್ ತಾರಮೇ ಕಿಳೈ ಮಕ್ಕಳ್ ಎನ್ನುಮ್ ನೋಯೇ ಪಟ್ಪೊಳಿನ್ದೇನ್ ಉನ್ನೈ ಕಾಣ್‌ಬದೋರ್ ಆಶೈಯಿನಾಲ್
ವೇಯೇಯ್ ಪೂಮ್ ಪೊಳಿಲ್ ಶೂಳ್ ವಿರೈಯಾರ್ ತಿರುವೇಙ್ಗಡವಾ! ನಾಯೇನ್ ವನ್ದಡೈನ್ದೇನ್ ನಲ್‌ಹಿ ಆಳ್ ಎನ್ನೈ ಕೊಣ್ಡರುಳೇ

ಕನ್ನಡ ನೆರಳ್

ತಾಯೇ ತಂದೆಯೆಂದೂ, ಹೆಂಡತಿಗೆನೆ ಮಕ್ಕಳೆಂದೂ
ನೋವೇ ಹೊಂದೇ ಬಿಟ್ಟಿನಲಾ ನಿನ್ನನು ಕಾಣುವೋರ್ ಆಸೆಯಿಂದ
'ವೇಯೇ' ಎನು ಬಿದಿರ್ ಮೆಳೆಯೇರ್ದು ಸುತ್ತಲೂ ಹೂದೋಟಗಳೆಲ್ಲೂ ನಿನ್‌ಗಂಧವೆ ತುಂಬಿಹ ತಿರುವೇಂಕಟದವನೇ!
ನಾಯೇ ನಾನಿದೋ ಬಂದಡೆದೆನೈ ನೇಹಿಸಿ ಯೆನ್ನಂ ಆಳ್‌ಕೊಂಡರುಳೈ.

ಹಿಂದಿನ ದಶಕದಲ್ಲಿ ಒಂದು ಬಾರಿಯಲ್ಲ, ೯ ಸಲ "ತಿರವೇಂಕಟಸೇರ್ ಮನವೇ" ಎಂದು ತಿರುಮಂಗೈಮನ್ನನ್ ತಮ್ಮ ಮನಸ್ಸಿಗೂ ಅದಕ್ಕೇ ಸಹೃದಯವಾಗಿ ಹೊಂದಿಕೊಂಡಿರುವ ಸಜ್ಜನರಿಗೂ ಸ್ವಾನುಭವ ಹಾಗೂ ಪರೋಪದೇಶ ಈ ಉಭಯ ರೂಪದಿಂದಲೂ ತಿರುಪತಿಯನ್ನೇ ಮನಸಾರಾ ಅನುಭಾವಿಸುತ್ತಾ ಬಂದರಷ್ಟೆ. ಇವರ ಚಿತ್ತವೂ ಇವರಂತೆಯೇ ತಿಮ್ಮಪ್ಪನ ಬೆಟ್ಟದಲ್ಲೇ ಥಟ್ಟನೆ ನೆಲೆ ನಿಂತಿತು. ಈ ಅನುಕೂಲ ಪರಿಸ್ಥಿತಿಯನ್ನು ಬಳಸಿಕೊಂಡು ತಿರುಮಂಗೈ ಆಳ್ವಾರ್ ಗಿರಿಗೇ ಬಂದು ಬಿಟ್ಟರು.

ತಿಮ್ಮಪ್ಪ ಸರ್ವಸ್ವಾಮಿ. ಕರ್ಮಾಧೀನ ಸಂಬಂಧದಿಂದಲ್ಲ. ಆತನ ಸ್ವಾಮಿತ್ವ ನಿರುಪಾಧಿಕ. ಸಹಜ ಸ್ವಾಭಾವಿಕ. ಆತನೇ ಸರ್ವವಿಧ ಬಂಧು "ಸಮುದ್ರೋಬನ್ಧುಃ". ಇಂತಹವನು ಸರ್ವಸುಲಭನಾಗಿ ಹತ್ತಿರದಲ್ಲೇ ಕಾಣುವಂತೆ ಸ್ವಯಂ ಸಾನ್ನಿಧ್ಯ ಗೈದಿದ್ದಾನೆ. ಇನ್ನು ತಮ್ಮ ಬಯಕೆಗಳೆಲ್ಲಾ ಖಂಡಿತ ಈಡೇರುವುವು ಎಂಬ ಪ್ರತ್ಯಾಶೆಯಿಂದ ಇವರು ತುಂಬಿ ತುಳುಕುತ್ತಿದ್ದಾರೆ. ಕೃಷ್ಣ ಬಲರಾಮರೀರ್ವರನ್ನೂ ಮಧುರೆಗೆ ರಥದಲ್ಲಿ ತರುವಂತೆ ಕಂಸನಿಂದ ಆಜ್ಞಪ್ತನಾದ ಪರಮ ಭಾಗವತ ಅಕ್ರೂರನೂ ಹೀಗೆಯೇ ದಾರಿಯುದ್ದಕ್ಕೂ ಭಾವಿಸುತ್ತ ಬಂದನಂತೆ!

ಮಾಂ ಅಕ್ರೂರೇತಿ ವಕ್ಷ್ಯತಿ

ಎನ್ನ ಹೆಸರು ಹಿಡಿದು ಪ್ರೀತಿಯಿಂದ ಕರೆಯುತ್ತಾನೆ. ಅರಳಿರುವ ಕಮಲ ನಯನಗಳಿಂದ ನನ್ನನ್ನು ನೋಡುತ್ತಾನೆ! ಶ್ರೀ ಪುಂಡರೀಕನೆಂಬ ಭಕ್ತಾಗ್ರೇಸರನ ಭಾವನೆಯೂ ಹೀಗೆಯೇ! ಸ್ವಾಮಿ ಬಾಲಕೃಷ್ಣ ನನ್ನನ್ನು ತಬ್ಬಿಕೊಳ್ಳುವನು. ಪ್ರೀತಿಯಿಂದ ಸ್ವಾಗತಿಸಿ ಮಧುರವಾಗಿ ಹುಸಿನಗೆ ಸೂಸುತ್ತಾ ಮಾತನಾಡುವನು. ಅಂತೆಯೇ ನನ್ನಿಂದಲೂ ಈ ಸೇವೆ ಮಾಡು, "ಕ್ರಿಯತಾಂ" ಎಂದು ನನ್ನ ಅಲ್ಪಸೇವೆಯನ್ನೂ ನೂರ್ ಮಡಿಯಾಗಿ ಸ್ವೀಕರಿಸುವನು! ಹೀಗೆಲ್ಲಾ ಈ ಕಲಿಯನ್ ಶರಣರಿಗೂ ತಿರುಪತಿ ಯಾತ್ರೆಯ ಕಾಲದಲ್ಲಿ ಬವಣೆಯೇರಿದೆ.

ಆದರೆ ಕಿಲಾಡಿ ತಿಮ್ಮಪ್ಪ ಈ ಆಳ್ವಾರನ್ನು ನಿರಾಸೆಗೊಳಿಸುತ್ತಾನೆ. ನಿತ್ಯ ಸಾನಿಧ್ಯವಿದ್ದೂ ಭಕ್ತ ನೆನೆದುದನ್ನು ನೆರವೇರಿಸಿಕೊಡುವ ಶಕ್ತಿಯಿದ್ದೂ, ಈತ ಕೈಂಕರ್ಯಕ್ಕೆ ಸಿದ್ಧನಿದ್ದೂ ಆತ ಸ್ವೀಕರಿಸುವ ದಾಯಿತ್ವದ ಪ್ರಾಪ್ತಿಯಿದ್ದೂ ಸುಮ್ಮನಿದ್ದಾನಲ್ಲಾ! ನಿಜ! ನನ್ನ ಕಡೆಯಿಂದ ಏನೋ ಅಡ್ಡಿ ಆತಂಕವಿರಬೇಕು ಎಂದು ತಮ್ಮ ನಿಲುವನ್ನು ಹಿಂತೆಗೆದುಕೊಳ್ಳುತ್ತಾರೆ. ಆದರೂ ತಿಮ್ಮಪ್ಪನ ಸರ್ವ ವಿಧ ಕೈಂಕರ್ಯಗಳ ಬಗ್ಗೆ ಚಾಪಲ್ಯ ಮಾತ್ರ ಇವರಿಗೆ ಇಂಗದು! "ಓ ತಿರುವೇಂಕಟಪ್ಪಾ!" ನನ್ನ ಪಾಪ ನಂಬರ್ ೧ ನೆಂಟರಲ್ಲದವರನ್ನೆಲ್ಲಾ ನೆಟರನ್ನಾಗಿ ನೆಚ್ಚಿದ್ದು, ನಂ ೨ ಭೋಗಪಡಲು ಏನೂ ಹುರುಳಿಲ್ಲದವುಗಳಲ್ಲೆಲ್ಲಾ ಭೋಗ್ಯಬುದ್ಧಿತಾಳಿದ್ದು, ನಂ ೩ ಸದಾ ಪರಹಿಂಸೆಯೊಂದರಲ್ಲೇ ನಿರತನಾಗಿದ್ದುದು. ನಂ. ೪ ಬೇಡಿದವರಿಗೆ ನೀಡದಿರುವುದಿರಲಿ, ಒಂದು ಒಳ್ಳೆಯ ಸಮಾಧಾನದ ಮಾತನ್ನೂ ಆಡದೆ, ಅಷ್ಟಕ್ಕೇ ಬಿಟ್ಟೆನೇ! ಕಠಿಣವಾಗಿ ಅವರಲ್ಲಿ ವರ್ತಿಸಿದ್ದು ನಂ ೫ ನಿನ್ನನ್ನು ಹೊರತುಪಡಿಸಿಯೇ ಬೇರೆ ಬೇರೆ ಹವ್ಯಾಸಗಳಿಂದಲೇ ಕಾಲ ಕಳೆದದ್ದು, ಹೀಗೆಲ್ಲಾ ಹಿಂದಾದುದು ನಿಜ.

ಆದರೆ ಈಗ ನಿನ್ನನ್ನು ಬಿಟ್ಟಿರಲಾಗದಂತಹ ನಿಲುವಿಗೆ ಬಂದು ನಿಂತಿದ್ದೇನೆ. ಸೇವ್ಯ-ಸೇವಕತ್ವವೆಂಬ ಈ ನಿನ್ನ ನನ್ನ ಅಭೇದ್ಯ ಸಂಬಂಧ ನಿತ್ಯವಾದುದರಿಂದಲೂ, ನನ್ನ ಅಪರಾಧಗಳನ್ನು ಮನ್ನಿಸಿಕೊಳ್ಳುವಂತೆ ನಿನಗೂ ನನ್ನ ಪರವಾಗಿ ಶಿಫಾರಸ್ಸು ಹೇಳಿ "ಪುರುಷಕಾರ ಕೃತ್ಯ" ಮಾಡುವ ಮಹಾಲಕ್ಷ್ಮಿ ಇರುವುದರಿಂದಲೂ ನಿನ್ನ ನನ್ನ ಮೌಲಿಕ ಸ್ವರೂಪಕ್ಕೆ "ಅನುಗುಣವಾಗಿ ಸರ್ವಸೇವೆಗಳನ್ನೂ ದಯಮಾಡಿ ಸ್ವೀಕರಿಸು" ಎಂಬುದಾಗಿ ಮಹಾಮಾತೆಯನ್ನು ಮುಂದಿಟ್ಟೇ ತಿಮ್ಮಪ್ಪನ ತಿರುವಡಿಗಳಲ್ಲಿ ಬೀಳುತ್ತಾ ಶರಣಾಗತಿ ಗೈಯುವುದೇ ಈ ಅದ್ಭುತವಾದ ದಶಕ! ಇದೇ ಪೆರಿಯತಿರುಮೊಳಿ ಹಿರಿಸಿರಿನುಡಿಯಲ್ಲಿ ಹಿಂದೆ (೧-೬-೧) ಇವರೇ ನೈಮಿಶಾರಣ್ಯದಲ್ಲಿ ಸರ್ವೇಶ್ವರನ ಅಡಿದಾವರೆಗಳಲ್ಲಿ

ನಾಣೆನೇನ್ ವನ್ದುನ್ ತಿರುವಡಿ ಅಡೈನ್ದೇನ್ ನೈಮಿಶಾರಣಿಯತ್ತುಳ್ ಎನ್ದಾಯ್

ಉರು ನಾಚಿದೆ! ಬಂದಿದೋ ನಿನ್ ಸಿರಿಯಡಿಯಡೆದೆನ್ಯೆ

ನಿಮಿಶಾಽರಣ್ಯದೊಳ್ ಇರುವೆನ್ ತಂದೇ!

ಒಂಭತ್ತೂ ಪಾಶುರಗಳಿಂದ ಹಿಂದಿನದಕ್ಕೆಲ್ಲಾ ಬಲು ನಾಚಿಕೆಪಟ್ಟು, ಜೂಜು ಕಳವು, ವ್ಯಭಿಚಾರ ಗೈದಿರುವ ಈ ಪಾಪಿ ಎಂದು, ಕೈಬಿಡದೆ ನಿನ್ನ ಮಡದಿ, ಜಗನ್ಮಾತೆಯನ್ನು ನೋಡಿ, "ತೇನ್ ಉಡೈ ಕಮಲ ತ್ತಿರುವಿನುಕ್ಕರಶೇ...." ನೀಚನ ತಪ್ಪುಗಳನ್ನು ಮನ್ನಿಸೆಂದು ಪ್ರಪತ್ತಿ ಮಾಡಿದ್ದಾರಲ್ಲಾ, ಮತ್ತೆ ಶರಣಾಗತಿಯೇಕೆ?

ಅತ್ಯಂತ ಸುಕುಮಾರರಾದ ರಾಜಕುಮಾರರು ದಾಹ ಪಟ್ಟಾಗಲೆಲ್ಲಾ ಬಾಯಿಗೆ ಸಿಹಿನೀರ್ ಹುಯ್ದುಕೊಳ್ಳಲೇ ಬೇಕಷ್ಟೆ! ಹಾಗೆಯೇ ಇವರೂ ಸ್ತ್ರೀ ಸೌಂದರ್ಯಾssಸಕ್ತರಾಗಿದ್ದುದೇ ಈಗ ಶ್ರೀಮನ್ನಾರಾಯಣನ ಪಾವನ ಅಂದಚೆಂದದ ಸೆರೆಗೆ ಸಿಕ್ಕಿ, ಭಕ್ತಿಸುಕುಮಾರರಾಗಿ ಬಿಟ್ಟಿದ್ದಾರೆ. ಮನ್ಮಥನ ಮನಸ್ಸನ್ನೂ ಕದಡಿ ಬಿಡುವ ಈ ಚೆಲುವರಾಜನ ಸೇವೆ ಸಿಗದಿದ್ದಾಗ ಪ್ರಾಣಧರಿಸಿರುವ ಸಾಮರ್ಥ್ಯ ಸ್ವಲ್ಪವೂ ಈಗಿಲ್ಲವಾಗಿದೆ. ಹೀಗೆ ಭಗವದ್ ವಿಷಯದಲ್ಲೇ ಪರಮರಸಿಕರೂ, ಮಾರ್ದವ ಸಂಪನ್ನರೂ ಆದ ಇವರು ಒಂದು ಬಾರಿ ಮಾಡಿದ ಪ್ರಪತ್ತಿಯಿಂದ ಸಾಕೆಂದು ಹಿಂದಿರುಗುವ ಸ್ವಭಾವದವರಲ್ಲ. ಅಯಾಯಾ ದಿವ್ಯದೇಶಗಳಲ್ಲಿ ಕಂಡಾಗಲೆಲ್ಲಾ, ಶರಣ್ಯನ ಪಾದಕ್ಕೆ ಬಿದ್ದು ಬಿದ್ದು ಶರಣು ಮಾಡುವವರೇ ಈ ತಿರುಮಂಗೈ ಆಳ್ವಾರ್. ದೇಹಾಸಕ್ತಿಯೇ ಭಗವದಾಸಕ್ತಿ ದೂರವಾಗಲು ಮುಖ್ಯ ಕಾರಣ. ನೆಂಟರಿಷ್ಟರ ಬಗೆಗೆ ಸಾಂದ್ರವಾಸನೆ ಈ ದೇಹಾಸಕ್ತಿಯನ್ನೇ ಪೋಷಿಸುವಂಥದು.

ಇವರ ಈ ಪೂರ್ವಾಶ್ರಮದ ಅನುಭವದ ಬಿನ್ನಪದಿಂದಲೇ, ತಿಮ್ಮಪ್ಪನಲ್ಲಿನ ಶರಣಾಗತಿಯ ಪುನರ್‌ಮಂಗಳಾರಂಭವಾಗುತ್ತದೆ. "ತಾಯೀತನ್ನೈ ಎನ್ನುಮ್". ಈ ತಾಯಿ ತಂದೆ ಹೆಂಡತಿ ಗೆಣೆ ಮಕ್ಕಳಾದರೆ ಒಬ್ಬೊಬ್ಬರು ಒಂದೊಂದು ಫಲ ನೀಡಬಹುದು. ಆದರೆ "ಸರ್ವಲಾಭಾಯ ಕೇಶವಃ"; ಹೋಗಲಿ ಎಂದರೂ ಅವರೆಲ್ಲಾ "ತಂದರೆ ಚೆನ್ನರಸಾ! ತರದಿದ್ದರೆ ಮುರುವಾ!" ಹೀಗೆ ತಮ್ಮ ಮೂಗುನೇರಕ್ಕೆ ಕುಣಿಯದಿದ್ದರೆ ಕೈ ಬಿಟ್ಟೇ ಬಿಡುವವರು. ಮೇಲೆಯೂ ಉಪಕಾರ ಗೈಯ್ಯದಿದ್ದರೂ ಅಪಕಾರವನ್ನೇ ಮಾಡಬಹುದಾದ ನೆಂಟಸ್ತನ ಅವೆಲ್ಲಾ. ಈಗೆಲ್ಲಾ ಇದರ ಸ್ಪಷ್ಟವಾದ ಅನುಭವ ಇವರ ಮನಸ್ಸಿಗೆ ನಾಟಿದೆ. ತಾಯೇ ಎನ್ನುಮ್, ತನ್ದೈಯೇ ಎನ್ನುಮ್, ದಾರಮೇ ಎನ್ನುಮ್, ಕಿಳ್ಯೆಯೇ ಎನ್ನುಮ್, ಮಕ್ಕಳೇ ಎನ್ನುಮ್, ಅವರವರಲ್ಲಿ, ಇವರಿಷ್ಟೇ ನನ್ನ ತಾಯಿ, ತಂದೆ, ಗೆಳೆಯರು, ಮಕ್ಕಳೆಂಬ ಸಂಕುಚಿತ ಪ್ರೇಮಾssಭಾಸವಿತ್ತು. ಈಗ ನಾರಾಯಣ ಮಂತ್ರ ಸಂಬಂಧದಿಂದ, ಜಗತ್ತಿನಲ್ಲಿ ಯಾರು ನನಗೆ ಬಂಧು ಬಾಂಧವರಿಲ್ಲ! ನಾನೂ ಆ ಪರಮಾತ್ಮನಿಗೇ ಪಶಿವ್ರತೆಯಾದ ಸರಿಸತಿಯೇ ಆಗಿರುವಾಗ ನನ್ನ ಗಂಡಸುತನ ಯಾವ ಲೆಕ್ಕಕ್ಕೆ? ಸಮಾಜದ ಮಕ್ಕಳೆಲ್ಲರನ್ನೂ ನಿರ್‌ಮೋಹ ವ್ಯಾಪಕ ಪ್ರೀತಿಯಿಂದ ಈಗ ನೋಡುವಂತಾಗಿದೆ, ಹಿಂದಿನವರಲ್ಲೂ ರಾಗ ದ್ವೇಷಗಳಿಲ್ಲ. ಭಗವಂತನಿಗೇ ಸೇರಿದವರೆಂಬ ಭಾಗವತ ಸಮದೃಷ್ಟಿ! ಹಿಂದೆ ಅವರವರು ಅನರ್ಥ ಪರಂಪರೆಯನ್ನು ತಂದುದೂ ನನ್ನ ಮೋಹದಿಂದಲೇ ಹೊರತು ಅವರ ಆತ್ಮದ ತಪ್ಪಲ್ಲ! ನೋಯೇ ಪಟ್ಟು ಒಳಿನ್ದೇನ್ = ನನ್ನಿಂದಲೇ ಸ್ವಯಾರ್ಜಿತವಾದ ನೋವುಗಳವು.

ಆ ಸ್ಥಾನುಭವದಿಂದಲೇ, ಅವರ ಆಗಿನ ಭೂಮಿಕೆಯ ಬಲೆಯಿಂದ ಬಿಡುಗಡೆ ಮಾಡಿಕೊಂಡೆ. ನನ್ನಿಂದಲೇ ನಾನು ಸುಸ್ತಾಗಿದ್ದೆ. ಗಸ್ತು ತಿಂದುದನ್ನು ಅವರ ಮೇಲೆ ಆರೋಪಿಸಿದ್ದೆ!

ಭಗವಂತನ ಜ್ಞಾನ ಶಕ್ತಿ ಬಲ ಐಶ್ವರ್ಯ ವೀರ್ಯ ತೇಜಸ್ಸು ಈ ಷಾಡ್‌ಗುಣ್ಯಗಳನ್ನು ಹೊರತುಪಡಿಸಿ ಸೌಶೀಲ್ಯ ವಾತ್ಸಲ್ಯ ಮಾರ್ದವಾದಿ ಕಲ್ಯಾಣಗುಣಗಳ ಅಂಶವನ್ನು ನಾವು ನಮ್ಮ ಜೀವನಾದರ್ಶವಾಗಿ ಇರಿಸಿಕೊಂಡರೆ, ಕಡೆ ಹಾಯಲು ಸಂದು ಸಿಗುತ್ತದೆ. ಇದಕ್ಕೆಲ್ಲಾ ಆಚಾರ್ಯೋಪದೇಶ, ಶಾಸ್ತ್ರ, ಸಮಾಜವಿಜ್ಞಾನ ಎಲ್ಲ ಬೇಕಾಗುತ್ತವೆ. ಈ ಸಾಮಾನ್ಯ ಯಥಾಸ್ಥಿತ ರೂಢಿಗ್ರಸ್ತ, ವಿಚಾರಾಸಹನೆಯ ವಿಷಚಕ್ರಕ್ಕೆ, ಅದರ ಅರಿವಿಗೆ ಅವೇನೂ ಬೇಕಿಲ್ಲ. ಶಿಕ್ಷಣವಿಲ್ಲದೆಯೇ ಅವುಗಳಲ್ಲೆಲ್ಲಾ ಜಾಣರಾಗಿ ಬಿಡುತ್ತೇವೆ! ಈ ಪ್ರತ್ಯಕ್ಷ ಒಂದೇ ಸಾಕು. ಒಂದು ರೀತಿಯಲ್ಲಿ ದೇವಾ! ಅವುಗಳನ್ನು ವಂದಿಸುತ್ತೇನೆ. ಏಕೆಂದರೆ ಅವೇ ನನಗೆ ನಿನ್ನನ್ನಾಶ್ರಯಿಸಲು ಗುರುಗಳಾದವು! ಅಂತೆಯೇ, ಉನ್ಮೈ ಕಾಣಬದು ಓರ್ ಅಶೈಯಿನಾಲ್ = ತಿಮ್ಮಪ್ಪಾ! ನಿನ್ನೋರ್ವ ಸರ್ವಸಮಷ್ಟಿ ವಿಶ್ವಮಹಾನಿಧಿಯನ್ನೇ, ಎಲ್ಲವನ್ನೂ ನಿನ್ನೊಳಗೆ ಅಡಗಿಸಿ ಕೊಂಡಿರುವ ಆ ನಿನ್ನ ದರ್ಶನ ಮಾಡುವ ಉತ್ಕಂಠೆಯಿಂದ ಇದೋ ಬಂದಿದ್ದೇನೆ. ಮೊದಲೆಲ್ಲಾ ನಿನ್ನ ಸಂಬಂಧದ ಅರಿವಿಲ್ಲದೆ ಅವುಗಳಲ್ಲೆಲ್ಲಾ ಅಪೂರ್ಣ, ಅಸಭ್ಯ ವ್ಯವಹಾರ ಮಾಡಿದೆ! ಈಗ ನಿನ್ನ ಕಾಲು ಹಿಡಿಯುತ್ತಿದ್ದೇನೆ.

ನಿನ್ನೀಧಾಮದ ಸನ್ನಿವೇಶವೇ ಸಾಕು. ಯಾರೊಬ್ಬರೂ ನಿನ್ನನ್ನು ಬಿಟ್ಟಿರಲಾರರು. ವೇಯ್ = ಬಿದಿರ್ ಮೆಳೆಗಳು. ಏಯ್ = ಎತ್ತರಕ್ಕೆ ಹಾಯ್ದು, ನಿನ್ನ ಈ ಗಿರಿ ಅದೆಷ್ಟು ಸುಂದರ! ಆ ಕೀಚಕಗಳು ಅಕ್ಕಪಕ್ಕಕ್ಕೆ ಡೊಂಕುಡೊಂಕಾಗಿಯಾಗಲಿ ಕೆಳಮೊಗವಾಗಿಯಾಗಲಿ ಇರದೆ, ಅವನ್ನು ನಂಬಿ ಬಂದ, ದರ್ಶನಾರ್ಥಿಗಳಿಗೆ ಊರ್ಧ್ವಗತಿ ಚಿಂತನೆಗೆ ಪ್ರೇರಣೆ ನೀಡುವ ನಿಜವಾದ, ಬಂಧುಗಳಾಗಿಯೇ ಕಾಣುತ್ತಿವೆ. ಜಡವಿಭೂತಿಗಳಲ್ಲೂ ಆಳ್ವಾರ್ ಸಂತರಿಗೆ ದಿವ್ಯತೆಯೇ ಕಾಣುತ್ತಿದೆ. "ಊರ್ಧ್ವಗಃ ಸತ್‌ಪಥಾಚಾರಃ" ಈ ವಿಷ್ಣು ಸಹಸ್ರನಾಮ, ಇವರಿಗೆ ವಿಶ್ವಸಹಸ್ರನಾಮವೇ ಆಗಿಬಿಟ್ಟಿತೇನೋ! ಇನ್ನು ಆಹಾ! ಈ ಹೂದೋಟಗಳೋ! ಪೂಮ್ = ನಮ್ಮ ದೇನೇನೂ ಈ ಪರಿಮಳವಲ್ಲ. ವಿವಿಧ ಪುಷ್ಪರೂಪಗಳಾಗಿರುವ ನಮ್ಮೊಳಗಿರುವ, ಈ ಸರ್ವಗಂಧನ ವಾಸನೆಯಷ್ಟೇ! ಆ ಪ್ರಸಾದವನ್ನು ನಮ್ಮ ಮೂಲಕ ನಿಮ್ಮೆಲ್ಲರಿಗೂ ಭಟವಾಡಿ ಮಾಡಲು ನಮ್ಮನ್ನು ಆ "ಜನರಲ್-ಕಿಂಗ್" ಅಂಚೆಜವಾನರನ್ನಾಗಿ ನಿಯಮಿಸಿದಾನಷ್ಟೆ! ಈ ಸಂದೇಶ ಹೂಗಳಿಂದ ಹಾಗೇ ತಿರುಪತಿಯ ಗಿರಿಪ್ರದೇಶಗಳಲ್ಲಿ ಸುತ್ತಿದರೆ ನಮಗೆ ಸಿಗುತ್ತದೆ. ಇಂತಹ ಕುಸುಮಭರಿತವಾದ ಪೊಳಿಲ್ = ಉದ್ಯಾನಗಳಿಂದಲೇ. ಶೂಳ್, ಸುತ್ತುವರಿದು, ವಿರೈ ಆರ್ = ಎಲ್ಲೆಲ್ಲೂ ವಾಸನೆ ತುಂಬಿ ಹರಡಿರುವ, ತಿರುವೇಂಗಡವಾ = ಶ್ರೀ ವೇಂಕಟಗಿರಿನಿಲಯಾ! ನಿಜಕ್ಕೂ ನೀನೆಂಥ **"ಸಮುದ್ರೋ ಬನ್ಧುಃ"!** ಸಂ = ಚನ್ನಾಗಿ, ಉತ್ = ಮೇಲ್ ಮೇಲೆ, ರಿಚ್ಯತೇ = ಹೊಂಗುತ್ತಿರುವ ಕಡಲಂತಹ ಬಂಧು ಇವನು.

ನಿನಗದೇನು ಭಕ್ತರ ಮೇಲಿನ ನೇಹ! ವಾತ್ಸಲ್ಯ! ಇವೆಲ್ಲಾ ನಿನ್ನೀ ಕ್ಷೇತ್ರಪರಿಸರದಲ್ಲೇ ಪ್ರತ್ಯಕ್ಷ ನಗದು ರೂಪದಲ್ಲೇ ಕಾಣುತ್ತಿವೆಯಲ್ಲಾ! ನೀನು ಆ ಉಚ್ಚತಮ ಪರಮವ್ಯೋಮ ತೊರೆದು ಈ ನೀಚತಮನಾನಿದೋ ಅಸೆ ಪಡುವವನಿಗಾಗಿ ಇಳಿದು ಬಂದೆಯಲ್ಲೋ! ಶಿಶುವೊಂದು ಕಟಕಟೆ ಇಲ್ಲದ ಭಾವಿಗೆ ಬಿದ್ದಾಗ ಈಜು ಬಾರದ ಅಶಕ್ತೆ ಹೆತ್ತ ತಾಯಿ ದಿಢೀರನೆ ತಾನೂ ದುಮುಕಿ ಬಂದೆಯಲ್ಲೋ! ಶಿಶುವೊಂದು ಕಟಕಟೆ ಇಲ್ಲದ ಭಾವಿಗೆ ಬಿದ್ದಾಗ ಈಜು ಬಾರದ ಅಶಕ್ತೆ ಹೆತ್ತ ತಾಯಿ ದಿಢೀರನೆ ತಾನೂ ದುಮುಕಿ ಎತ್ತುವಂತೆ ಅದೆಂತದಯ್ಯಾ ನಿನ್ನ ಅಪದ್ ಬಂಧುತ್ವ! ನಿನ್ನ ಈ ಮಹಾಕರುಣೆ! ನಾಯೊಂದು ಮನೆಗೆ ನುಗ್ಗಲು ಓಡಿ ಬರುವಾಗ ಹೊರ ಪಡಸಾಲೆಗೂ ಸೇರಿಸದ ಜನ ಕಲ್ಲಿನಿಂದ ಅದನ್ನು ಹೊಡೆದೋಡಿಸುವರು. ಒಳ ನುಗ್ಗಿದರಂತೂ ಸಂಪ್ರೋಕ್ಷಣೆ, ಪ್ರಾಯಶ್ಚಿತ್ತ! ನಾಯಿ ನೋಡಿದ್ದು, ಮುಟ್ಟಿದ್ದು ಎಲ್ಲವನ್ನೂ ಹೊರಕ್ಕೆ ಬಿಸಾಡಬೇಕಷ್ಟೆ! ಆ ಶ್ವಾನಕ್ಕಿಂತ ನೀಚತಮನಾದ, ನಾಯೇನ್ ವನ್ದು ಅಡೈನ್ದೇನ್ = ರಕ್ಷಕರು ಬೇರಾರೂ ಇಲ್ಲದುದರಿಂದ ಅನನ್ಯ ಗತಿಕನಾಗಿ, ಈ ರಕ್ಷಣೆಗೆ ಉತ್ತಮೋತ್ತಮ ಪಾತ್ರನಾಗಿ ನಿನ್ನ ದೇಗುಲದ ಬಾಗಿಲಿಗೆ ಬಂದು ನಿಂತಿದ್ದೇನೆ.

ಇಷ್ಟನ್ನೂ ನೀವೇನೀವಾಗಿ ಸಂಪಾದಿಸಿಕೊಂಡಿರುವಾಗ ಮಧ್ಯೆ ನನ್ನದೇನು? ಎನ್ನುವಿಯಾ! ನಲ್‌ಹಿ = ರಾಜಪುತ್ರನೋರ್ವ, ನೀಚಜಾತಿ, ನೀಚರೂಪು ನೀಚ ಸಂಬಂಧ ನೀಚ ಸ್ವಭಾವ ಒಂದನ್ನೂ ನೋಡದೆ ಕ್ಷುದ್ರ ದಾಸಿಯರಲ್ಲಿ ಮೇಲ್ ಬಿದ್ದು, ಅಪಕೀರ್ತಿಗೂ ಹೆದರದೆ ತಾನು ಮಾಡುತ್ತಿರುವುದೇ ಸರಿಯೆಂದು ಬೀಗುವಾಗ ನಿನಗೆ ನನ್ನಂತಹ ಕ್ಷುದ್ರಾತಿ ಕ್ಷುದ್ರನಲ್ಲಿ ಸ್ನೇಹವಿಲ್ಲವೇ? ನನ್ನಲ್ಲಿ ವಿಶಿಷ್ಟ ವಾತ್ಸಲ್ಯ ತೋರಿ, ಆಳ್ ಎನ್ನೈ ಕೊಂಡು ಅರುಳೇ = ನೀನೇ ಸರ್ವವಿಧ ನೆಂಟನಾದ ಮೇಲೆ "ಅಹಂ ಸರ್ವಂ ಕರಿಷ್ಯಾಮಿ" ಎಂದ ಲಕ್ಷ್ಮಣನಿಂದ ಆ ಸೀತಾರಾಮ ಕೈಂಕರ್ಯ ಸ್ವೀಕರಿಸಿದಂತೆ. ಆ ನಿತ್ಯಸೂರಿಗಳಿಂದ ಕೈಗೊಳ್ಳುತ್ತಿರುವ ಸರ್ವಸೇವೆಗಳನ್ನೂ ನನ್ನಿಂದಲೂ ಸ್ವೀಕರಿಸು. ಅದಕ್ಕೆ ತಕ್ಕ ಒಳಕೈಪೆ ಸಿದ್ಧವೇ ಆಗಿರುವುದನ್ನು ಹೊರಸೂಸು. ಅವರೆಲ್ಲರ ಸೇವಾಶ್ರೀ ನಾನೇ ಆಗುವಂತೆ ಕನಿಕರಿಸು. ಆಳ್ ಬೇರೆಯಲ್ಲ. ಆಳ್‌ತನ ಬೇರೆಯಲ್ಲ. ನನ್ನನ್ನೇ ಶೇಷನನ್ನಾಗಿ ಸ್ವೀಕರಿಸು. ದಿವ್ಯ ದೇಶಗಳ ಮನೆತನದ ಹೆಸರೂ "ಕೈಂಕರ್ಯಂ" ಎಂದೇ ಇರುವುದು ಇಲ್ಲಿ ಗಮನಕ್ಕೆ ಬರುತ್ತದೆ.

ತಮಿಳ್ ತಿರಳ್ ೧-೯-೨

ಮಾನೇಯ್ ಕಣ್* ಮಡವಾರ್ ಮಯಕ್ಕಿಲ್ ಪಟ್ಟು ಮಾನಿಲತ್ತು ನಾನೇ ನಾನಾವಿದ ನರಹಂ ಪುಹುಮ್ ಪಾವಮ್ ಶೆಯ್‌ದೇನ್
ತೇನೇಯ್! ಪೂಮ್ ಪೊಳಿಲ್ ಶೊಳ್ ತಿರುವೇಙ್ಗಡ ಮಾಮಲೈ ಎಙ್ ಆನಾಯ್ ವನ್ದಡೈನ್ದೇನ್ ಅಡಿಯೇನ್ಯೈ ಆಳ್ ಕೊಣ್ಡರುಳೇ

ಕನ್ನಡ ನೆರಳ್

ಮಾನೇ ಪೋಲ್ ಕಣ್‌ಗತ್ತಿನ ಗರತಿಯರಾ ಮಾಯೆಯೊಳ್ ಬಿದ್ದೇ ಮಾನೆಲದೊಳ್
ನಾನೇ ನಾನಾ ವಿಧ ನರಕವ ಹೊಗುವಾ ಪಾಪಗಳ್ ಗೈದೆನಲಾ
ಜೇನೇ ಜೇನಿಂ ಪುಷ್ಕಳ ಪುಷ್ಪಗಳ್ ವನವೃತ ಶ್ರೀವೇಂಕಟ ಭೂಧರದೆನ್
ಆನೇ! ಓ ಬಂದಡೆದೆನ್ನೈ ಅಡಿದಾಸನಂ ಆಳ್ ಕೊಂಡರುಳೋ

ಮಾಡಿದ ಮಾಡುತ್ತಿರುವ ಮುಂದೆ ಮಾಡಬಹುದಾದ, "ಕೃತಾನ್ ಕ್ರಿಯಮಾಣಾನ್ ಕರಿಷ್ಯ ಮಾಣಾಂಶ್ಚ" ತ್ರೈಕಾಲಿಕ ಪಾಪಗಳನ್ನೂ ಕ್ಷಮಿಸಬೇಕೆಂದು ಶರಣಾಗತಿ ವಿಜ್ಞಾನ ಅನುಭವದಿಂದಲೇ ಹೇಳುತ್ತಿದೆ. ಹಿಂದಿನ ೧ನೇ ಪಾಶುರದಲ್ಲಿ ಕರ್ಮಾಧೀನವಾದ ನೆಂಟರಂತಿರುವ, ಸಹಜ ಬಂಧುಗಳಲ್ಲದ ದೃಷ್ಟಿಯಿಂದ ನೆಂಟಸ್ತನ ಮೇರೆ ಮೀರಿದ ಕೊಂಡಾಟದ ಅನೌಚಿತ್ಯವೆಂಬ, ಭಗವನ್ನಿ ಗ್ರಹದಲ್ಲಿ ಪರ್ಯವಸಾನವಾಗುವ ಪಾಪಗಳನ್ನು ಮನ್ನಿಸಲು ಬೇಡಿದವರು ಈ ೨ನೆಯ ಪಾಶುರದಲ್ಲಿ ವಾಸ್ತವ ಆತ್ಮಸುಖಾನಂದ ವಿಲ್ಲದವುಗಳಲ್ಲಿ ಸುಖಬುದ್ಧಿ ಗೈದುದಕ್ಕಾಗಿ ಕ್ಷಮಾಪಣೆ ಕೋರುತ್ತಾರೆ. ಮಾನ್ = ಹರಿಣಿಯ ಕಣ್ಣನ್ನು ಏಯ್ = ಹೋಲುವ, ಹೃದಯದೊಳಗೆ ವಿಷ ತುಂಬಿದ್ದರೂ ಮೇಲ್‌ಗಣ್ ತೇಲ್‌ಗಣ್ ನೋಟದಿಂದ ಮಾತ್ರ ಬೆಡಗು ಬೀರುವರು. ನಲ್ಲನಾದ ತನ್ನಿಂದ ಅವರ ಸ್ವಾರ್ಥ ಫಲಿಸಲೇಬೇಕೆಂಬ ಇಂಗಿತ! ತಿಳಿದೋ ತಿಳಿಯದೆಯೋ ಆ ಕೃತ್ರಿಮ ಕಣ್ ಬೇಟೆಯ ಬಲೆಗೆ ನಾನೇ ನನ್ನನ್ನು ಸಿಕ್ಕಿಸಿಕೊಂಡಿದ್ದೆ! ಮಡವಾರ್ = ಲಜ್ಜೆ ಗಾಂಭೀರ್ಯ ಭೀರುತೆಗಳಲ್ಲಿ ಮೊದಲನೆಯದೂ ಕೊನೆಯದೂ ಇಲ್ಲದಿದ್ದರೂ, ಮಡದಿಯರು ಗಾಂಭೀರ್ಯದ ಗತ್ತನ್ನು ಮಾತ್ರ ಬಿಟ್ಟು ಕೊಟ್ಟವರಲ್ಲ.

ತಿರುಮಂಗೈಗಳು ಇಷ್ಟೆಲ್ಲಾ ಹೇಳುವುದರ ಭಾವವೆಂದರೆ, ಹೆಂಗಸರಿಗೆ ದೇವರಲ್ಲಿರುವ ಸಕಲ ಕಲ್ಯಾಣಗುಣಗಳೂ ತಮ್ಮಲ್ಲೇ ಬೀಡುಮಾಡಿವೆ! ಎನ್ನುವಷ್ಟು ಸ್ವಾಭಿಮಾನವಿದೆ ಎಂಬುದೇ. ಅಂತಹ ಮಡವಾರ್ ಮಯಕ್ಕಿಲ್ = ಅವರ ಮೋಹಿನೀ ಜಾಲದಲ್ಲಿ ಪಟ್ಟು = ಭ್ರಮಿಸಿ ನಾನಾಗಿಯೇ ಸಿಕ್ಕೊಂಡು, ಇದಕ್ಕೆ ಕಾರಣ ಸ್ವಗತವೆಂದು ತಮ್ಮ ಮಹಾಪರಾಧವನ್ನು ಬಚ್ಚಿಡದೆ ಬಿಚ್ಚಿ ಬಹಿರಂಗ ಪಡಿಸುತ್ತಾರೆ! ಇಲ್ಲಿನ ಮತ್ತೊಂದು ಸೂಕ್ಷ್ಮಾಂಶವನ್ನೂ ಒಡೆದು ಹೇಳುತ್ತಾರೆ. ಮಾ ನಿಲತ್ತಿಲ್ ನಾನಾ ವಿದ ನರಹಂ ನಾನೇ ಪುಹುಮ್ ಪಾವಂ ಶೆಯ್‌ದೇನ್ ಜಗತ್ತೋ ಮುಗಿಯದಷ್ಟು ದೊಡ್ಡದು. ಅಲ್ಲಲ್ಲಿರುವ ಚೇತನಾತ್ಮರೂ ಲೆಕ್ಕಕ್ಕೇ ಸಿಗದಷ್ಟು. ಅವರೆಲ್ಲರ ನಿಂದಿತ ಅನಾಚಾರ, ಅದಕ್ಕೆ ಮೂಲವಾದ ಅವಿಚಾರ ದುರ್ ವಿಚಾರ ಪದ್ಧತಿಗಳೂ ನಾನಾ ಬಗೆ! ಅವುಗಳಿಂದ ಆಗುವ ಪರಿಣಾಮ ನರಕಯಾತನೆಗಳೆಲ್ಲವನ್ನೂ ಈಗ ಎಲ್ಲರೂ ಅನುಭವಿಸಬೇಕಾಗುವಷ್ಟು ಪಾಪ ನಾನೊರ್ವನೇ ಗೈದಿದ್ದೇನೆ. ವ್ಯಕ್ತಿ ವ್ಯಕ್ತಿಯ, ಅಸಾಮಾಜಿಕ, ಅನೈತಿಕ ಕ್ಷುದ್ರಚಿಂತೆ ಹಾಗೂ ಒಂದೊಂದು ಮನಃಪ್ರಿಯವಾದ ಚಟುವಟಿಕೆಯೂ, ತಜ್ಯನ್ಯ ಸೂಕ್ಷ್ಮ ವಿದ್ಯುದ್ ರಶ್ಮಿಯ ಮೂಲಕ, ವಿಶ್ವದಾದ್ಯಂತ ಸುತ್ತಿ, ವಾತಾವರಣವನ್ನೆಲ್ಲಾ ಕಲುಷಗೊಳಿಸಿ, ಅದು ಹೊರಟ ಮೂಲ ಸ್ಥಾನಕ್ಕೇ ಪ್ರತಿಹತವಾಗುವುದಷ್ಟೆ. ನಾನೀಗ ಸರ್ವಾಪರಾಧ ಚಕ್ರವರ್ತಿ! ರಾಮಾನುಜರ ಪರಮಾಚಾರ್ಯರು, ಈ ಆಳ್ವಾರ್ ಭಾವವನ್ನೇ ತಮ್ಮ ಸ್ತೋತ್ರ ರತ್ನದಲ್ಲಿ **"ನ ನಿನ್ದಿತಂ ಕರ್ಮ ತದಸ್ತಿ ಲೋಕೇ ಸಹಸ್ರಶಃ ಯನ್ನ ಮಯಾ ವ್ಯಧಾಯಿ"** ಎಂದಿರುವುದು.

ಸಮಾಜವಾದ ಸಾಮ್ಯವಾದಗಳೆನ್ನುವುವೆಲ್ಲಾ ಎಡವಿರುವ ಗುಟ್ಟನ್ನು ಈ ಶರಣದಿಂದ ನಾನೆಲ್ಲರೂ ತಿಳಿಯಬಹುದು. ಬಡತನ ಅಸಮಾನತೆ, ನಿರುದ್ಯೋಗ, ಜೀವನಾತಂಕ, ಭಯೋತ್ಪಾದನೆ, ವ್ಯವಸ್ಥಿತ ಗೂಂಡಾಗಿರಿ, ಭೂಗರ್ಭವಾಸ, ಕಳ್ಳಹಣ, ಬಹುಸಂಖ್ಯಾವಾದ, ಅಧ್ಯಾತ್ಮವಿಮುಖ ಶಿಕ್ಷಣ, ಮತಾಂಧತೆ, ಪಕ್ಷಾಂತರ, ಪರರದೇ ತಪ್ಪೆನ್ನುವ ಟೀಕೆ, ನಿಂದೆಗಳ ಸುರಿಮಳೆ, ಆಗುತ್ತಿರುವ ಒಳ್ಳೊಳ್ಳೆಯದನ್ನು ಎತ್ತಿ ಪ್ರಕಟಿಸದೆ, ಕೆಟ್ಟುದಕ್ಕೇ ಹೆಚ್ಚು ಪ್ರಾಶಸ್ತ್ಯ, ಕದನ ಕೆರಳಿಸುವುದು, ಕದನ ಕುತೂಹಲ ಇವೇ ಮುಂತಾದ ಸಹಸ್ರಾರು ಅಲ್ಲ, ಅಸಂಖ್ಯಾತ ವಿಸಂವಾದ, ಕುದೃಶ್ಯ ಪ್ರದರ್ಶನ, ಅಶ್ಲೀಲ ಕಥೆ ಕಾದಂಬರಿ! ಇವೆಲ್ಲದರ ಮೊತ್ತ ಇಡೀ ವಿಶ್ವಕೇಂದ್ರ ಸ್ಥಾನ, ಅಲ್ಲಿನ ವಿಶ್ವಪತಿಯ ಪರದಾಟ, ಪೇಚಾಟ, ಇವುಗಳನ್ನೇ ಹಳೆಯ ಭಾಷೆಯಲ್ಲಿ "ಪಾಪ" ಎನ್ನುವುದು. ಇದರಲ್ಲೇ "ಪುಣ್ಯ"ವೆಂಬ ಮುಸುಕಿನೊಳಗಿನ ಗುದ್ದೂ ಸೇರಿದೆ.

ವಾಣಿಜ್ಯ ಆರ್ಥಿಕ ಕ್ಷೇತ್ರಗಳಲ್ಲಂತೂ ಇತ್ತೀಚೆಗೆ ಬೆಳೆದು ಬೆಳೆದು ದೈತ್ಯಾಕಾರರವಾಗಿ ಹರಡಿಕೊಂಡಿರುವ ಸಮಸ್ತ ಸಮಸ್ಯೆಗಳೂ ಅನಿವಾರ್ಯವೇ ಎಂಬ ಶುಭನಾಗರಿಕತೆ, ಸಭ್ಯತೆಯ ಸೋಗಿನಲ್ಲಿಯೇ ತಾಂಡವವಾಡುತ್ತಿರುವುದು ಪ್ರತ್ಯಕ್ಷ! ಅನೇ ಶತಮಾನದ ಶಂಕರಾಚಾರ್ಯರು

ಅರ್ಥಂ ಅನರ್ಥಂ ಭಾವಯ ನಿತ್ಯಂ

**ಮಾನ್ = ಹೆಣ್ಣು ಜಿಂಕೆಯ, ಕಣ್ = ಕಣ್ಣನ್ನು, ಏಯ್ = ಹೋಲುವ, ಮಡವಾರ್ = ಹೆಂಗಸರ ಎಂದರ್ಥ.*

ಎಂದದ್ದು ಈಗೆಲ್ಲರಿಗೂ **"ಅರ್ಥಂ ಅನರ್ಥಂ ಪಶ್ಯತ ನಿತ್ಯಂ"** ಆಗಿದೆಯಷ್ಟೆ. ವಿಶ್ವದಲ್ಲೇ ಹರಡಿರುವ ಈ ಪುಣ್ಯಪಾಪಕ್ಕೆ ವಿಶ್ವಸಂಸ್ಥೆಯ ರಾಷ್ಟ್ರಾಧಿಪತಿಯ ಆಡಳಿತದಂತೆ ವಿಶ್ವಪತಿಯ ಜವಾಬುದಾರಿಗೇ ಬಿಡುವುದೊಳಿತು. ಈ ನೆಲೆ ಇಲ್ಲಿ ಗಮನಾರ್ಹ. ಆತ ಕ್ಷಮಿಸಲೂಬಹುದು. ಶಿಕ್ಷಿಸಲೂ ಬಹುದು. ಸಂತರಿಗೆ ಜಗತ್ತಿಗೆ ಶಿಕ್ಷೆ ಹಿಂಸೆ, ಕಾನೂನು ರೂಪಗಳದು ಒಗ್ಗದು. ಅಂತೆಯೇ ತಿಮ್ಮಪ್ಪನಲ್ಲಿ ತಮ್ಮ ತಪ್ಪುಗಳೆಲ್ಲವುಗಳನ್ನೂ ಮನ್ನಿಸಲು ಬೇಡಿಕೆ.

ತೇನ್ = ಜೇನು ಹಾಗೂ ದುಂಬಿ ಎರಡೂ ಅರ್ಥ. ಏಯ್ = ಅವುಗಳಿಂದ ತುಂಬಿರುವ ಪೂಮ್ ಪೊಳಿಲ್ ಶೂಳ್. ತಿರುವೇಙ್ಗಡಮ್ ಮಾಮಲೈ = ಸ್ಥಿರ ಗುಣಸೌಗಂಧ್ಯ ಮೌಲ್ಯವನ್ನು ಕಾಪಾಡಿಕೊಂಡು ಬರುತ್ತಿರುವ ಈ ಪುಷ್ಪವನಾವೃತ ಮಹಾಪರ್ವತದಲ್ಲಿರುವ ಎನ್ ಅನಾಯ್ = ನನ್ನ ಭಾಗದ ಅನೆಯೇ! ಬೆಟ್ಟದಾನೆ ತಿಮ್ಮಪ್ಪ. ಅನೆಗಳು ಸೇರಲು ತಕ್ಕ ಗಿರಿಯಷ್ಟೆ ಇದು. ಸ್ಥಳೀಯವಾದ ಹೋಲಿಕೆ ಎಲ್ಲರಿಗೂ ಒಪ್ಪುವುದು. ಪರಿಪೂರ್ಣಾಧಿಕಾರದ ವಿಶ್ವೇಶ್ವರ ನಮ್ಮೆಲ್ಲರ ಅಶುಚಿ ಕೊಳಕುಗಳನ್ನೆಲ್ಲಾ ತೊಳೆಯುವ, ತೊಡೆದೇಹಾಕುವ ವೈಶ್ವಿಕ ಮಡಿವಾಳ. ಅವನಿಗಾವ ಮೈಲಿಗೆಯೂ ಅಂಟುವುದಿಲ್ಲ. ಹೇಯ ಪ್ರತಿಭಟ. ಹೇಯ ಪ್ರತ್ಯನೀಕ. ಜತೆಜತೆಗೇ ಪರಮ ಕಲ್ಯಾಣಕಾರಿ ರಚನಾತ್ಮಕ ವಿಶ್ವಸೇವಕನೂ ಹೌದು. ಈ ಗುಟ್ಟನ್ನೇ, ಇತ್ತೀಚೆಗೆ ಮಹಾತ್ಮಗಾಂಧಿ, ವಿನೋಬಾ, ಜಯಪ್ರಕಾಶ್‌ರಂತಹ ನಿರ್ಲಿಪ್ತ ಪರಮಕೃಪಾಳು ಅಧುನಿಕ ವೈಜ್ಞಾನಿಕ ಸಂತ ಸಹೃದಯರು, Constractive workಗಳಿಂದಲೇ ಗ್ರಾಮಶಾಂತಿಯಿಂದ ಹಿಡಿದು, ವಿಶ್ವ ನೆಮ್ಮದಿ ಕಾಣಬೇಕಾದರೆ! ಎಂಬ ಈ ಸಂತ ಆಳ್ವಾರರ ರಹಸ್ಯವನ್ನೇ ವ್ಯವಹಾರಕ್ಕೂ ತರಲು ತಮ್ಮ ಜೀವನವನ್ನೇ ಕೊನೆಯವರಿಗೂ ಮುಡುಪಿಟ್ಟು ಸರ್ವೋದಯ, ಸತ್ಯ ಅಹಿಂಸೆ, ಪ್ರೇಮ ಕರುಣೆ, ಸಂಪೂರ್ಣ ನಮ್ಮೆಲ್ಲರ ಒಳಗಿನಿಂದಲೇ ಪರಿವರ್ತನೆ ಇವನ್ನೆಲ್ಲಾ ಯುಗ ಧರ್ಮವಾಗಿಸಿದರು.

ಇಂತಹ ವಿಶ್ವಪತಿಯಲ್ಲಿ ವನ್ದು = ಈಗ ಕಲಿಯನ್ ಬಂದು, ತಮ್ಮ ತಪ್ಪೊಪ್ಪಿಗೆ, ಹಾಗೂ ನೀನೇ ಸರ್ವಚಟುವಟಿಕೆಗಳ ಮಾಧ್ಯಮನಾಗಬೇಕಪ್ಪಾ! ಶುದ್ಧ ಸಾಧನೆಯಲ್ಲೇ ವ್ಯಾಪಕ ಮಂಗಳಮಯ ಧ್ಯೇಯ ಸಿದ್ಧಿಸುವುದೆಂಬ ದ್ವಯಮಂತ್ರಾರ್ಥವನ್ನೇ ಬಿನ್ನೈಸಿಕೊಳ್ಳುತ್ತಿದ್ದಾರೆ. ಅಡಿಯೇನ್ಗೆ ಆಳ್‌ಕೊಂಡು ಅರುಳಾಯೇ = ವ್ಯಾಪಕ ಸರ್ವಸೇವಕನನ್ನಾಗಿಸು.

ತಮಿಳ್ ತಿರಳ್ ೧-೯-೩

ಕೊನ್ನೇನ್ ಪಲ್ ಉಯಿರೈ ಕುರಿಕ್ಕೋಳ್ ಒನ್ನಿಲಾಮೈಯಿನಾಲ್ ಎನ್ನೇನುಮ್ ಇರನ್ದಾರ್‌ಕ್ಕು ಇನಿದಾಹ ಉರೈತ್ತರಿಯೇನ್
ಕುನ್ನೇಯ್ ಮೇಹಮದಿರ್ ಕುಳಿರ್ ಮಾಮಲೈ ವೇಙ್ಗಡವಾ! ಅನ್ನೇ ವನ್ದಡೈನ್ದೇನ್ ಅಡಿಯೇನೈ ಆಳ್‌ಕೊಣ್ಡರುಳೇ

ಕನ್ನಡ ನೆರಳ್

ಕೊಂದೇ ಬಿಟ್ಟೆನಲಾ ಹಲವಾರ್ ಉಸಿರುಗಳುಂ ಗೊತ್ತೂ ಗುರಿಯೊಂದಿಲ್ಲದರಿಂ
ಒಂದೇ ದಿನಮಾದರೂ ಬೇಡಿದರ್ಗಿನಿವಾತನೂ ಆಡಿದುದರಿಯೆನಲಾ
ಸಂದೇ ಬರು ಗಿರಿಮೇಘವೂ ಗುಡುಗೂ ಅದುರ್ ಕುಳಿರ್ ಮಾ ಮಲೆ ತಿರುವೇಂಕಟದವನೇ
ಅಂದೇ ಬಂದಡೆದೆನ್ನೆ ಅಡಿದಾಸನಂ ಕೈಂಕರ್ಯವೇ ಆಗಿಸಿಕೊಳ್ಳಲು ದಯೆತೋರಾ

ಹಿಂದಿನ ಎರಡೂ ಹಾಡುಗಳಿಂದ, "ಅಬನ್ಧುಷು ಬಂಧುತ್ವ ಪ್ರತಿಪತ್ತಿ" ಸರ್ವಸಹಜ ಬಂಧುವಾದ ಭಗವಂತನಿಗಿಂತ, ಅಂತಹವನಲ್ಲೇ ನಿಷ್ಠೆಯಿಂದಿರುವ ಭಾಗವತೋತ್ತಮರೇ ನಿಜಬಾಂಧವರೆನ್ನದೆ, ದೇಹಾssಭಾಸದ ನೆಂಟರಿಷ್ಟರನ್ನೇ ಆ ದೃಷ್ಟಿಯಿಂದಲೇ ಮಿತಿಮೀರಿ ಗೌರವಿಸುವುದು. ಅವರಿಗಾಗಿ ಪಡಬಾರದ ಖರ್ಚು ವೆಚ್ಚದ ಸಾಲ ಮಾಡುವುದು. ಅಭೋಗ್ಯೇ, ಭೋಗ್ಯತ್ವ ಪ್ರತಿಪತ್ತಿ - ಹೆಣ್ಣು ಹೊನ್ನು ಮಣ್ಣು, ಹೊಟ್ಟೆ, ಬಟ್ಟೆ, ಹಟ್ಟಿಗಳನ್ನು ಹಿತಮಿತವಾಗಿ ಉಪಯೋಗಿಸಿಕೊಳ್ಳದೆ ಐಷ್ ಆರಾಮಕ್ಕಾಗಿ ದುರ್ಬಳಕೆ ಮಾಡುವುದು. ನಾನಾ ರೋಗ, ರುಜಿನ, ಮನೋವ್ಯಾಧಿ ತಂದು ಕೊಳ್ಳುವುದು. ಜಗತ್ತಿನ ಬಡತನಕ್ಕೆ ನಿಮಿತ್ತರಾಗುವುದು, ನೌಕರಿಗಳ ಬಗೆಗೇ ವಾಲಿ ಸ್ವಾತಂತ್ರ್ಯ ಕಳೆದುಕೊಳ್ಳುವುದು. ಇವೆರಡೇ ತಪ್ಪುಗಳಲ್ಲ. ಮೂರನೆಯದೂ ಇದೆ. ಅದೇನೆಂದರೆ ದೇವಾ! ನಿನ್ನ ಪಾವನ ಸಿರಿಚಿತ್ತಕ್ಕೂ ಅಸಹ್ಯವಾಗುವಂತೆ ನಿರ್ನಿಮಿತ್ತವಾಗಿ ಪರಹಿಂಸೆಯ ಸರಣಿಯನ್ನೇ ಬೆಳಸಿಬಿಟ್ಟೆನಲ್ಲಾ! ಇದಕ್ಕೆಲ್ಲಾ ನಿನ್ನ ಮಹಾಕ್ಷಮೆಯೊಂದೇ ಮದ್ದು. ಅದೇ ಪ್ರಾಯಶ್ಚಿತ್ತ. ಈ ನೀಲಪ್ಪ ಮೊದಲಿಗೆ ಮಹಾ ದರೋಡೆಕೋರನಷ್ಟೆ. ಕೊನ್ನೇನ್ = ಎದುರಿಗೆ ಯಾರು ಕಾಣಿಸಿಕೊಂಡರೂ ಪ್ರಾಣ ಹೊಯ್ಯುವುದೇ ನನ್ನ ದಂಧೆ! "ನನ್ನಲ್ಲೇನೂ ಇಲ್ಲವಪ್ಪಾ! ನೀನೇ ನೋಡು" ಎಂದು ಹೇಳಿದಾಗಲೂ ಅವರ ಅಂಗಾಂಗಗಳೆಲ್ಲವನ್ನೂ ಶೋಧಿಸಿ, ಏನೊಂದು ದುಡ್ಡುಕಾಸು ಪದಾರ್ಥ ಇಲ್ಲದಿದ್ದರೂ ಅವರನ್ನು ಬಿಡುತ್ತಿರಲಿಲ್ಲ. ಇರುವುದೇನಾದರೂ ಸುಳಿವು ಕಂಡರೆ ಓಡಿಸಿಕೊಂಡು ಚಿತ್ರಹಿಂಸೆಯಿಂದ ಸಂತಸಗೊಂಡು ಕೊನೆಗೆ ಕೊಂದು ಅವರ ಸರ್ವಸ್ವಾಪಹಾರಿಯಾಗಿದ್ದವ. ನಾನೆಲ್ಲಿ ಸುಲಿಗೆಮಾಡಿ ಬಿಡುವೆನೋ ಎಂದು ಉಸಿರುಳಿಸಿಕೊಳ್ಳಲು ಬರಿಗೈಯ್ಯಲ್ಲಿ ಬಂದಿದ್ದೀಯೆ. ನಿಲ್ಲು ನಿನ್ನನ್ನು ಕೊಲ್ಲುವೆನು. ಹೀಗೆಲ್ಲಾ ಪಲ್‌ಉಯಿರೈ = ಒಂದಲ್ಲ ಎರಡಲ್ಲ, ಅನೇಕ ನಿರಪರಾಧಿ

ಜನಗಳನ್ನು ಕೊಲ್ಲುತ್ತಿದ್ದೆ. ಪಶ್ಚಾತ್ತಾಪವೂ ಇಲ್ಲ. ಅದಿದ್ದಿದ್ದರೆ, ಒಂದೆರಡು ಕೊಲೆಗೈದ ಮೇಲಾದರೂ ಸುಮ್ಮನಾಗುತ್ತಿದ್ದೆ. ''ಇವೆಲ್ಲಾ ಈಗ ತಪ್ಪೆನ್ನುವುದು ಆಗ ತಿಳಿದಿರಲಿಲ್ಲವೋ?''.

ಅಂದಿನ ತಮ್ಮ ಮಾನಸಿಕ ಕೀಳ್‌ಮಟ್ಟವನ್ನು ಹೇಳಿಕೊಳ್ಳುತ್ತಾರೆ. ಕುರಿಕ್ಕೋಳ್ ಒನ್ನುಮ್ ಇಲಾಮೈಯಿನಾಲ್ = ಮಾನವನಿಗೆ ಒಂದು ಗುರಿಯಿದ್ದರೂ ಎಷ್ಟೋ ಸಾಕು. ಅದನ್ನು ಗಮನಿಸಿಯಾದರೂ ಹಿಂಸೆಯಿಂದ ಹಿಂಜರಿಯಬಹುದು. ೧. ಈ ಒಡಲಿಗಿಂತ ಬೇರೇನೋ ಒಂದು ಅಂದರೆ ಪ್ರಾಣವಿಲ್ಲದ ಜ್ಞಾನವಿಲ್ಲದ ಈ ಜಡವಸ್ತುವಿಗಿಂತ ''ಅರಿವು'' ಎಂಬ ಚೈತನ್ಯವೊಂದುಂಟು. ಈ ದೇಹದಲ್ಲಿ. ನನ್ನನ್ನು ಇನ್ನೊಬ್ಬ ಕೊಂದರೆ ಹೇಗೋ ಹಾಗೆ ನಾನೂ ಮತ್ತೊಬ್ಬರನ್ನು ಹಿಂಸಿಸಬಾರದು ಎಂಬೀ ದೃಷ್ಟಿಯಿಂದ ''ಅಹಿಂಸೆ'' ಗುರಿಯಾಗಿ ಅದರ ಸಿದ್ಧಿಗಾಗಿ, ನನ್ನಂತೆಯೇ ಇತರರನ್ನೂ ಪ್ರೇಮಿಸಬಹುದು. ಈ ಅನೇಕ ಚೈತನ್ಯಗಳಲ್ಲಿ ಒಂದೇ ಪರಮಾತ್ಮನುಂಟು. ಅತ ಸರ್ವಭೂತ ಸುಹೃತ್. ನಾನು ಹಿಂಸಿಸುವುದರಿಂದ ನನ್ನೊಳಗಿರುವ ಆ ಗೆಳೆಯನಿಗೇ ಆತ್ಮದ್ರೋಹವೆಸಗಿದಂತೆ! ಹೀಗೆ ಮಿತ್ರದ್ರೋಹ ನಡೆಯಲು ಕಾರಣ, ದೇವರೆಲ್ಲಿದ್ದಾನೆ? ಎಂಬುದೇ ಆಗಿತ್ತು!

ಮೇಲೆ ಹೇಳಿದ ೨ ಗುರಿಗಳಲ್ಲಿ ಒಂದರದಾದರೂ ಪರಿವೆ ನನಗಾಗ ಪರಿಚಿತವೇ ಆಗಿರಲಿಲ್ಲ. ಹೀಗೆ ಗೊತ್ತುಗುರಿ ಒಂದೂ ಇಲ್ಲದೆ ಅವಿಚಾರಿಯಾಗಿದ್ದು ದರಿಂದ ಕೊನ್ನೇನ್. ನೀವು ಹೀಗೆಲ್ಲಾ ಜನರನ್ನು ಕೊಲೆಗೈದು ಆಮೇಲಾದರೂ ಆ ಕೊಳ್ಳೆಹೊಡೆದ ಹಣಕಾಸುಗಳಿಂದ ಮದುವೆ ಮಾಡಿಕೊಂಡು ಸುಖವಾಗಿದ್ದಿರಾ? ಒಳ್ಳೆ ಹೆಂಡತಿ ಮಕ್ಕಳು ಐಶ್ವರ್ಯಸುಖಲೋಲೋಪ್ತಿಯಲ್ಲಿದ್ದೆ. ಎನ್ನೇನುಮ್ = ವಿಶೇಷ ಹಬ್ಬ ಹರಿದಿನಗಳಲ್ಲಾದರೂ ಒಮ್ಮೆಯಾದರೂ ಆ ಭೋಗ ಜೀವನದಲ್ಲಿ ಇರನ್ದಾರ್‌ಕ್ಕು = ಮನೆಬಾಗಿಲಿಗೇ ಬಂದು ಬೇಡಿದವರಿಗೆ ಕೊಡದೆ ಕಳಿಸಿದ್ದರೂ ಪರವಾಗಿಲ್ಲ. ಇನಿದಾಹ = ಅಪ್ಪಾ! ನಿನಗೆ ಆಗುವಷ್ಟು ಕೊಡಲು ಈಗ ಶಕ್ತನಲ್ಲ. ಉರೈತ್ತು ಅರಿಯೇನ್ = ಇಟ್ಟರಿಯೇನ್, ಕೊಟ್ಟು ಅನುಭವವಿಲ್ಲ. ಎನ್ನುವುದಷ್ಟೇ ಅಲ್ಲ. ಬಂದವರಿಗೆ ಸರಿಯಾಗಿ ಒಂದು ಸದುತ್ತರದ ಮಾತಾದರೂ ನನ್ನ ಬಾಯಿಂದ ಹೊರಡುತ್ತಿರಲಿಲ್ಲ. ಅಭ್ಯಾಸವಿದ್ದರೆ ತಾನೇ? ಸಕಾರಣವಾಗಿ ಕೇಳಿದವರ ಮನಸ್ಸಿಗೆ ಹಿಡಿಯುವಂತೆ ಮಾತಿನ ಕೌಶಲವಾದರೂ ಇದ್ದಿದ್ದರೆ ಆ ಭಿಕ್ಷುಕ ನೆಮ್ಮದಿಯಾಗಿ ಬರಿಗೈಯಲ್ಲಿಯೇ ಸಮಾಧಾನವಾಗಿಯೇ ಹೋಗುತ್ತಿದ್ದ. ''ಪಾಪ! ಅವರಲ್ಲಿಲ್ಲವಂತೆ. ನಾನು ಕೇಳಿದ್ದೇ ತಪ್ಪಾಯಿತು. ಮನ್ನಿಸಿ ಸ್ವಾಮಿ'' ಎಂಬ ಅವಕಾಶಕ್ಕೂ ನಾನು ಇಂಬು ಗೊಡಲಿಲ್ಲ. ''ಬೈದೂ, ಕೊಡದೆಯೂ ಮೊದಲೇ ದರಿದ್ರನಾದ ನನ್ನನ್ನು ಹೀಗೆ ಎರಡೂ ಕಡೆಯಿಂದ ಥಳಿಸಿದನಲ್ಲಾ! ಎಂದು ನೊಂದುಕೊಳ್ಳುತ್ತಾನೆ'' ಎಂಬೀ ಅರಿವೂ ಆಗ ನನಗಿರಲಿಲ್ಲ.

ಕುನ್ನುವಿಯ್ = 'ಬೆಟ್ಟದಲ್ಲಿರುವ' 'ಬೆಟ್ಟವನ್ನು ಹೋಲುವ' ಎರಡೂ ಅರ್ಥ. ಮೇಹಮ್ = ಮೇಘವಾದುದು, ಅದಿರ್ = ಗುಡುಗುತ್ತಿರುವ ಈ ಸಂದರ್ಭದ ಪ್ರಸ್ತಾಪದಿಂದ ಒಂದೆಡೆ ಆಕಾಶದಲ್ಲಿ ನಿಂತೇ ಮೋಡ ಮಳೆ ಸುರಿಸಬೇಕಷ್ಟೆ. ಪರ್ವತ ತಡೆದಾಗಲೀ ಎತ್ತರವಾದ ದಟ್ಟವಾದ ಕಾಡು ಮರಗಳು ತಡೆದಾಗಲೀ ಮಳೆ ಸುರಿಯುವುದು ಸ್ವಾಭಾವಿಕ. ಹಾಗೆ ಮಳೆ ಬೀಳದಿದ್ದರೂ ಗಂಭೀರವಾದ ಗುಡುಗಿನ ಮೊಳಗನ್ನು ಕೇಳಿಯೂ ರಸಿಕರಿಗೆ ಪ್ರಾಣಿಗಳಿಗೆ ಅಪ್ಯಾಯನವಾದೀತು. ಇಂತಹ ಸ್ವಭಾವವೂ ಹಿಂದೆ ಇದೇ ಬೇಡರ ಕಳ್ಳ ನೀಲಪ್ಪನಲ್ಲಿ ಇರಲಿಲ್ಲ ಎಂಬ ತನ್ನ ತಪ್ಪುಗಳ ಸರಣಿಯನ್ನು ಧರ್ಮಪ್ರಭುವಿನ ಮುಂದೆ ವಿಜ್ಞಾಪಿಸಲು ಉಪೋದ್‌ಬಲಕವಾಗಿ ಬಳಸುತ್ತಿದ್ದಾರೆ ಈಗಿನ ಅಳ್ವಾರ್! ಅಂದರೆ ತಿಮಪ್ಪಾ! ನಾನೀಗ ನಿನ್ನೆಡೆ ಧಾವಿಸಿ ಯೋಚಿಸುತ್ತಿದ್ದೇನೆ. ಹಿಂದಿನ ಆ ನನ್ನಂತೆ ನೀನಲ್ಲ. ಜ್ಞಾಪಕವಿರಲಿ! ಕುಳಿರ್ ಮಾಮಲೈ ವೇಙ್ಗಡವಾ! = ತಂಪೂ, ಮಹತ್ವವೂ ನಿನ್ನೀ ಗಿರಿಯಲ್ಲಿ ತಾಂಡವವಾಡುತ್ತಿವೆ. ಓ ವೇಂಕಟನಿಕೇತನಾ! ಅನ್ನೇ = ಹಿಂದೆ ಇದ್ದ ಹಾಗೆಯೇ ರಕ್ತದ ಕೈಗಳನ್ನೂ ತೊಳೆಯದೆ ಪಶ್ಚಾತ್ತಾಪ, ಪ್ರಾಯಶ್ಚಿತ್ತದ ಭಾವನೆ ಏನೊಂದೂ ಇಲ್ಲದೆ ವನ್ದು ಅಡೈನ್ದೇನ್ = ನನ್ನ ಗೊತ್ತುಗುರಿ ಒಂದಿಲ್ಲದ ದುರ್ವಿಚಾರ ದುರಾಚಾರ, ನೋಡಬೇಡಾ! ನನ್ನ ಜೀವಾತ್ಮ ಸ್ವರೂಪವೊಂದನ್ನೇ ನೋಡಿ ''ಶೇಷತ್ವಮೇ ಆತ್ಮಾವುಕ್ಕು ಸ್ವರೂಪಂ''. ಅಡಿಯೇನೈ ಆಳ್‌ಕೊಂಡರುಳ್.

ತಮಿಳ್ ತಿರಳ್ ೧-೯-೪

ಕುಲನ್ದಾನ್ ಎತ್ತನೈಯುಮ್ ಪಿರನ್ದೇ ಇರನ್ದೆಯ್ ತ್ತೊಳಿನ್ದೇನ್
ನಲನ್ದಾನ್ ಒನ್ನು ಮಿಲೇನ್ ನಲ್ಲದೋರ್ ಅರಮ್ ಶೇಯ್‌ದು ಮಿಲೇನ್
ನಿಲನ್ದೋಯ್ ನೀಳ್ ಮುಹಿಲ್ ಶೇರ್ ನೆರಿಯಾರ್ ತಿರುವೇಙ್ಗಡವಾ!
ಅಲನ್ದೇನ್ ವನ್ದಡೈನ್ದೇನ್ ಅಡಿಯೇನೈ ಆಳ್‌ಕೊಣ್ಡರುಳೇ

ಕನ್ನಡ ನೆರಳ್ ೧-೯-೪

ಕುಲವೆಷ್ಟೋ! ಸಲವೆಷ್ಟೋ! ಹುಟ್ಟೇ ಸತ್ತಳಿಯುತ ಸಾಕಾದೆ. ನಲವೊಂದಿಲ್ಲದವನ್ ಒಳ್ಳೆಯ ಸೇರ್ಪಡೆ ದರುಮಂಗೈಯ್ಯದವನ್
ನೆಲ ತೋಯ್ ನೀಳ್ ಮುಗಿಲ್ ಸೇರ್ದಾ ಗುರುತಿನ ಪಥ ಶ್ರೀ ಗಿರಿಯವನೇ! ಅಲೆದಾಡಿದೆನ್ನೆ! ಬಂದಡೆದೆನಿದೋ ಅಡಿದಾಸನಂ ಆಳ್‌ಗೊಂಡರುಳ್ಳೆ

ಕುಲಮ್ ತಾನ್ = ಉದ್ಯೋಗಕ್ಕಾಗಿ ಕರ್ತೃತ್ವ ವಿಭಾಜನವನ್ನು, ಆಯಾಯಾ ಗುಣ ಕರ್ಮ ಸಂಸ್ಕಾರಗಳ ಸೂಕ್ಷ್ಮ ಪರಿಶೀಲನೆಯಿಂದಲೇ, ಒಂದು ಸಾಮಾಜಿಕ ಶಾಂತಿಗಾಗಿ ಸ್ಪರ್ಧೆ ಮೇಲಾಟವಿಲ್ಲದ ಸ್ವಸ್ಥತೆಯ ದೃಷ್ಟಿಯಿಂದ ಏರ್ಪಡಿಸಿಕೊಂಡಿರುವ ಮಾನವರ ಅಪ್ಪಪ್ಪು ಘಟಕಗಳೇ. ಕುಲಧರ್ಮ, ಜಾತಿಧರ್ಮ. ಆರ್ಥಿಕವಾಗಿಯಾಗಲೀ, ಮೆಲು ಕೀಳಿನ ಭಾವನೆಯಾಗಲಿ ಅವೆಲ್ಲಾ ಅವುಗಳ ಮೌಲಿಕಾಂಶಗಳಲ್ಲ. ಈ ವಿವೇಕ ಸಮಾಜದ ಸರ್ವರಲ್ಲೂ ಕುದುರಬೇಕಾದುದು ಅಗತ್ಯ. ಹಾಗಿಲ್ಲದೆ ಇದ್ದಾಗ ಅಶಾಂತಿ, ಅವ್ಯವಸ್ಥೆ, ಅತೃಪ್ತಿ ಅಶಿಸ್ತು, ಅಪರಾಧಗಳು ಹೆಚ್ಚುತ್ತಲೇ ಹೋಗುತ್ತವೆ. ಕುಲೋದ್ಯೋಗಗಳಿಂದ ಅವರವರ ಬುದ್ಧಿ ಹಾಗೂ ಹಸ್ತ ಕೌಶಲವೂ ಬೆಳೆಯುತ್ತದೆ. ಪದಾರ್ಥ ತುಟ್ಟಿಯಾಗಬೇಕಾದ ಅಗತ್ಯವೇ ಬಾರದು. ಗ್ರಾಮಗಳಲ್ಲಿ ಪರಸ್ಪರ ಜನರ ಸಹಜ ಆಲಂಬನೆ, ಜನರಿಂದಲೇ ಆಗಿಹೋಗುವುದು. That is the best government which rules least. ರಾಜ್ಯ ಕೇಂದ್ರ ಸರಕಾರಗಳಿಗೂ ಗೌರವ!

ಈಗ ಈ ತಿರುಮಂಗೈಯಾಳ್ವಾರ್ರಿಗೆ, ಹಿಂದಿನ ತಮ್ಮ ಜೀವನದ ಸ್ಮರಣೆ ತಾನಾಗಿಬಂದಿದೆ. ಅವುಗಳಲ್ಲಿ ವಿಹಿತ ಧರ್ಮ ತಿಳಿದೂ ಭ್ರಷ್ಟರಾದುದರ ಚಿತ್ರಗಳೂ ಇವರ ಚಿತ್ತ ಪಟಲದಲ್ಲಿ ಹಾಯುತ್ತಿದೆ. ಅದನ್ನೇ ತಿಮ್ಮಪ್ಪನಲ್ಲಿ ನಿರ್ವಂಚನೆಯಾಗಿ ವಿನಂತಿಸಿಕೊಳ್ಳುತ್ತಿದ್ದಾರೆ. ಕುಲಂತಾನ್ಎತ್ತನ್ಯೆಯುಮ್ = ಎಷ್ಟೆಷ್ಟೋ ಜನ್ಮ, ವರ್ಣ, ಜಾತಿ, ಕುಲಗಳಲ್ಲಿ ಅದನ್ನು ಸಮಾಜ ವಿಜ್ಞಾನಿಗಳಾದ ಋಷಿಗಳು, ಮನ್ವಾದಿ ರಾಜರ್ಷಿಗಳೂ, **೧. ಸಜಾತೀಯ ೨. ವಿಜಾತೀಯ ೩. ಅನುಲೋಮ ೪. ಪ್ರತಿಲೋಮ** ವೆನ್ನುವ ಹಾಗೂ ಶುದ್ಧ ಮತ್ತು ಸಂಕರ ಜಾತಿಗಳೆಂದು ರಕ್ತದ ಸೂಕ್ಷ್ಮಾಂಶ, ಗಂಡು ಹೆಣ್ಣು ತಳಿಗಳ ಸೂಕ್ಷ್ಮ ದೃಷ್ಟಿ ಅದೃಷ್ಟ ಪರಿಜ್ಞಾನವಿದ್ದೇ, ಕ್ರಿಯಾವಂತಿಕೆಯ ಸೌಕರ್ಯಕ್ಕಾಗಿ ವಿಂಗಡಿಸಿದ್ದಾರೆ. ಇಂತಹ ಅನೇಕ ಮಾನವ್ಯ ಧರ್ಮಗಳಲ್ಲಿ ಹುಟ್ಟಿ, ಆಯಾಯಾ ಧರ್ಮಗಳನ್ನು ಸರಿಯಾಗಿ ಆಚರಿಸದೆ, ತಾನೇ ಬಹು ಜನ್ಮಗಳಲ್ಲಿ, ಪಿರನ್ದೇ ಇರನ್ದು = ಹುಟ್ಟಿ, ಸತ್ತು, ಎಯ್ತ್ತು = ಸುಸ್ತಾಗಿ, ಒಳಿನ್ದೇನ್ = ಇನ್ನು ಪುನರ್ ಜನ್ಮ ತಾಳಲಾರದೆ ಬಳಲಿದೆನಯ್ಯಾ! ಈ ಜನ್ಮ ಮರಣಗಳ ಚಕ್ರದ ನಡುವೆ ನೀವೇನಾದರೂ ಸುಕೃತ ಅಪ್ಪಷ್ಟಾದರೂ ಗೈದಿರಾ?

ಅಯ್ಯೋ! ನಲಮ್ ತಾನ್ = ಒಳಿತೆಂಬುದರ ಲವಲೇಶಾಂಶವನ್ನೂ ಒನ್ನುಮ್ ಇಲೇನ್ = ಉಳ್ಳವನಲ್ಲಾ! "ಗತಂನ ಶೋಚಯೇತ್!" ಹಿಂದಿನ ಕಣಿಯನ್ನೆಲ್ಲಾ ಒದರುತ್ತಾ ಹೋಗ ಬೇಡಿ. ಈಗಲಾದರೂ ಮುಂದಿನ ನಿಮ್ಮ ನಲ್ಮೆಗಾಗಿ ಏನಾದರೂ ಸಾಧನೆ, ಧರ್ಮಕಾರ್ಯಗಳಿಗೆ ಕಚ್ಚೆ ಕಟ್ಟಿದ್ದೀರಾ? 'ಧಾರಣಾತ್ ಧರ್ಮಮಿತ್ಯಾಹುಃ'. ಅಯ್ಯಯ್ಯೋ, ನಲ್ಲದೋರ್ ಅರಮ್ ಶೆಯ್ದುಂ ಇಲೇನ್ = ಸ್ವಾರ್ಥ ಪರಾರ್ಥ ಎರಡು ನಲ್ಮೆಗಳಿಗೂ ಬೇಕಾದ ಒಂದು ಬಗೆಯ, ಪರಸ್ಪರ ಜೋಡಿಸುವ ಸೇವಾಕಾರ್ಯವನ್ನೂ ಗೈದಿಲ್ಲ.

ನನ್ನ ಭಾಗದ ವ್ಯವಸ್ಥಿತ ಇರುವಿಕೆ, ವಿಕಾಸಕ್ಕಾಗಿ ನಾನಾಗಿ ಗೇಯ್ದು ಸಂಪಾದಿಸಿಕೊಳ್ಳುವ ಜೀವಪ್ರಯತ್ನದಿಂದ ಸಾಧ್ಯವಾಗುವ ಸಾಧ್ಯಧರ್ಮ ಏನೇನೂ ಇಲ್ಲ. ಸಿದ್ಧ ಧರ್ಮ ಸ್ವರೂಪನಾದ ನೀನೇ! ಓ ತಿಮ್ಮಪ್ಪಾ! ನನ್ನ ಭಾಗದ ಸಿದ್ಧ ಸಾಧನ. ಅಂಥವ ಈ ವೇಂಕಟಗಿರಿಯಲ್ಲೇ ವಾಸಗೈಯ್ಯುತ್ತಿದ್ದೀ. ನಿನಗೆ ನಾನಿದೋ ಅಡಿಯೇನ್ = ಈ ದಾಸನ ಸ್ವರೂಪವು ಜಡವತ್ ಅತ್ಯನ್ತ ಪಾರತಂತ್ರ್ಯ. ಆತ್ಮರ ಜವಾಬ್ದಾರಿಯೆಲ್ಲಾ ಮೊಟ್ಟಮೊದಲಿನದಲ್ಲವೇ ಅಲ್ಲ. ನಾವಾರೂ ಸರ್ವಜಗತ್ ಕಾರಣರಲ್ಲ. ಕೈಂಕರ್ಯ ಕಾಯಕದ ಉದ್ಯೋಗದಿಂದಲೇ ನೀನು ನನಗೆ ಈಗ ಸರಿಶಿಕ್ಷಣ ನೀಡು. ಈ ಕ್ಷೇತ್ರವಾಸದ ಮಹಿಮೆ, ಕಾಳಮೇಘದಂತೆ, ಕೇಳದೆಯೇ ಮಳೆ ಸುರಿಸುವಂತಹ ಕರುಣೆ ನಿನ್ನಲ್ಲೂ ತುಂಬಿದೆ. ಉನ್ನತ ಗಿರಿನೆಲವನ್ನೇ ಮುಟ್ಟುತ್ತಿರುವ ಮುಗಿಲು. ನಿಲಮ್ ತೋಯ್ ನೀಳ್ ಮುಹಿಲ್, ಶೇರ್ ನೆರಿ ಆರ್ = ಸೇರಿರುವ ನೀರಿನ ಭಾರದಿಂದ ಮಂದಗತಿಯಿಂದ ಸಂಚರಿಸುವ ಮೇಘಪಥ ಎಲ್ಲೆಲ್ಲೋ ಪಥಃ ಸ್ಖಲಿತನಾಗಿದ್ದ ನನಗೆ, ಈಗ ಕಂಡಿತು. ಬಂದೆ.

ತಮಿಳ್ ತಿರಳ್ ೧-೬-೫

ಎಪ್ಪಾವಂ ಪಲವುಮ್ ಇವ್ವೆಯೇ ಶೆಯದಿಳ್ಳೆತ್ತೊಳಿನ್ದೇನ್ ತುಪ್ಪಾ ನಿನ್ನಡಿಯೇ ತೊಡರ್ನ್ದು ವಿತ್ತವುಮ್ ಕಿರ್ಕ್ಕಿನ್ರಿಲೇನ್
ಶೆಪ್ಪಾರ್ ತಿಣ್ವರೈ ಶೂಳ್ ತಿರುವೇಙ್ಗಡ ಮಾ ಮಲೈಯೆವನ್ ಅಪ್ಪಾ! ವನ್ದಡೈನ್ದೇನ್ ಅಡಿಯೇನೈ ಆಳ್ ಕೊಂಡರುಳೇ

ಕನ್ನಡ ನೆರಳ್

ಪಾಪಗಳೆಂತೆಂತಹ ವಿವನೇ ಗೆಯ್ಯುತ ಬಳಲಿಯೆ ಬಿಟ್ಟೆನಲಾ
ಕಾಪಿಡಲ್ ಶೂರಾ! ನಿನ್ ಅಡಿಯನೆ ತೊಡರ್ದು ನುತಿಸಲ್ ಶಕ್ತನೆ ನಾನಲ್ಲಾ
ಅಪ್ಪಿಹ ಭರಣಿಯ ತೆರ ತಿಣ್ಣಿನ ಕೋಟೆಯ ಮಲೆ ಗಿಡಮರ ಸುತ್ತಿಹ ತಿರುವೇಂಕಟಮಾಮಲೆಯೆನ್
ಅಪ್ಪಾ! ಬಂದಿದೋ ಪಡೆದಿಹೆನ್ನೆ, ಅಡಿದಾಸನಂ ಆಳ್ ಕೊಂಡರುಳೋ.

ಎಪ್ಪಾವಮ್ = ಅತಿಪಾತಕ ಮಹಾಪಾತಕಗಳೆಂದು ಸಮಾಜ ವಿಜ್ಞಾನದ ಧರ್ಮಶಾಸ್ತ್ರ ತಟಸ್ಥವಾಗಿ ಹೇಳುವಂತೆ, ಅಂದರೆ ಪಾಪಕ್ಕೆ ಮೂಲ, ಲೋಭ! ಬೇಕು ಬೇಕು! "ಸಾಕು ಸಾಕು. ಕಂಡದ್ದೇ ಇಲ್ಲ". ಇದರಿಂದ ಅತ್ಯಾಚಾರ! ಸಮಾಜದ ಶುಭವನ್ನು ಅತಿಕ್ರಮಿಸಿ, ಕೇವಲ

ಅತಿ ಸ್ವಾರ್ಥಜನ್ಯ, ಇದೇ ಅತಿ ಪಾತಕ. ಉಪಪಾತಕವೆಂದರೆ, ಈ ಸಮಾಜ ಘಾತುಕ ಸ್ವಾರ್ಥಕ್ಕೆ ಬೇಕಾದ ಅಜೂಬಾಜಿನ ಪ್ರಚ್ಛನ್ನ ಏರ್ಪಾಟುಗಳು. ಇವೆರಡನ್ನೂ ಪರಿಶ್ರಮದಿಂದ ಒಂದು ಹದ್ದಿನಲ್ಲಿರಿಸಲು ಪ್ರಯತ್ನಿಸಬಹುದು. ಅದರೆ ಮಹಾಪಾತಕ, ಸ್ವರ್ಣಸ್ತೇಯ, ಈಗೀಗ ಬಹಳ ರಾದ್ಧಾಂತ ಮಾಡ ಹತ್ತಿರುವ ಕರೆನ್ಸಿ ಡಾಲರ್ ಪದ್ಧತಿ. ಹೆಚ್ಚು ನೋಟುಗಳದೇ ವಂಚನಾವಿಲಾಸ ಅದಕ್ಕೆ ಸರಿಸಮನಾದ ಚಿನ್ನ, ಬೆಳ್ಳಿ ರಿಸರ್ವಿ ನಲ್ಲಿ ಇಲ್ಲದಿರುವುದು. Inflation ಹಣದುಬ್ಬರ ಮಹಾಪಾತಕಗಳಲ್ಲಿ ನಂ. ಒಂದನೆಯದು! ನಂ ೨ ಅಂದರೆ, ಸುರಾಪಾನ, ಮಾದಕ ವಸ್ತುಗಳಿಗೇ ಹೆಚ್ಚು ಹಣದ ಆದಾಯದ ಕೀರ್ತಿ! ಅದರಿಂದ ಪ್ರಜಾಕ್ಷೇಮದ ಯೋಜನೆ! ೩ನೆಯದು ವ್ಯಭಿಚಾರ, ೪ನೆಯ ಮಹಾಪಾತಕ ಜೂಜು, ಲಾಟರಿ, ನಾನಾ ಬಹುಮಾನಗಳ ಆಮಿಷ. ೫ನೆಯ ಮಹಾಪಾತಕ ಈ ನಾಲ್ಕಕ್ಕೂ ಪ್ರತ್ಯಕ್ಷ ಪರೋಕ್ಷ ಸಹಕರಿಸುವುದು. ಅಸಹಾಯಕತೆಯ ನಿರಾಶೆ! ರಚನಾತ್ಮಕವಲ್ಲದ ಪರನಿಂದ್ಯೆಕ ಪ್ರಿಯತೆ!

ಈ ಪಂಚ ಮಹಾಪಾತಕಗಳನ್ನು ಎಷ್ಟೆಷ್ಟು ಚಾಣ್ಮೆಯಿಂದ ನಡೆಸಿಯೂ ಬಚಾವ್ ಮಾಡಿಕೊಳ್ಳುವ ಮಹಾಚಾತುರ್ಯದ ಅಟ್ಟಹಾಸ! ಇವೈಯೇ = ಎಲ್ಲರೂ ತಿಳಿದಿದ್ದರೂ, ಶೆಯ್‌ದು = ಗೆಯ್‌ದೇ ಮುಗಿಸುವ ಕುಶೌರ್ಯ. ಎಷ್ಟು ತಿಪ್ಪರಲಾಗ ಹಾಕಿದರೂ ಕೊನೆಗೆ? ಇಳ್ಳೈತ್ತು = ಬಹಳಷ್ಟು ತ್ರಾಸಾಯಿತು. ಒಳಿನ್ದೇನ್ = ಪಾಪದಿಂದ ಉಂಟಾದ ದುಷ್ಪರಿಣಾಮಗಳಾದ, ದಿನೇ ದಿನೇ ಏರುತ್ತಲೇ ಹೋಗುವ ಕಷ್ಟ ಪರಂಪರೆಗಳಿಗೆ ನಾನೂ ಸಿಲುಕಿ, ಸಮಾಜವನ್ನೂ ತಲ್ಲಣಗೊಳಿಸುತ್ತಲೇ ಬಂದೆನಪ್ಪಾ! ನೋಡಿ ನೋಡಿ, ಓದಿ ಓದಿ, ಕೇಳಿ ಕೇಳಿ ಮನಃಕ್ಷೇಶ, ಕಾಯಕ್ಲೇಶ, ಪರಿಸರಕ್ಲೇಶ ಪರಂಪರೆಗಳನ್ನೇ ಅನುಭವಿಸಿದೆನು. **"ಸ್ವಯಂ ನಷ್ಟಃ ಪರಾನ್ ನಾಶಯತಿ"** ಇವುಗಳ ಫಲ ತಾನೂ ಕೆಟ್ಟು ಇತರರನ್ನೂ ಕೆಡಿಸುವುದೇ.

ನೀವು ಏನೇ ಹೇಳಿ ಅಳ್ವಾರ್ರೇ; ಎಂತಹ ಪಾಪಿಯೇ ಆದರೂ ಗೀತೆಯಲ್ಲಿ ನಾನಂದಿರುವಂತೆ, ನನ್ನ ಅವತಾರ ರಹಸ್ಯ ಜ್ಞಾನದಿಂದಾಗಲೀ, ಪುರುಷೋತ್ತಮ ವಿದ್ಯೆಯಿಂದಾಗಲೀ ಆ ಮಹಾಪರಾಧಗಳ ಪರಿಣಾಮಗಳಿಂದ ಮುಕ್ತರಾಗಬಹುದಲ್ಲಾ. ನಡೆಯುವ ಇವುಗಳೆಲ್ಲಾ "ಮಿಥ್ಯೆ"ಯೆಂಬುದು ಮನದಟ್ಟಾದರೆ, ಏನೇನೂ ಜಂಜಾಟವಿಲ್ಲ. ಏಕೆಂದರೆ, ಬ್ರಹ್ಮೈಕಮೇವ ಸತ್ಯಂ ಅನ್ಯತ್ ಸರ್ವಂ ಮಿಥ್ಯಾ! ಇದೇ ಪರಮಾತ್ಮನ ಬಗೆಗೆ ಯಥಾರ್ಥ ಎಂದರೂ, ನಿಮಗೇನೂ ಕಷ್ಟವಿಲ್ಲ ನಷ್ಟವಿಲ್ಲ. ಈ ದರ್ಶನ ಜನಸಾಮಾನ್ಯರಿಗೆ ಅಸಾಧ್ಯ ಎಂದಾದರೆ, ಎಲ್ಲಾ ಸರ್ವೇಶ್ವರ ಶ್ರೀಯಃಪತಿಯಾದ ನನ್ನ ಲೀಲೆ. ಜಗತ್ತೇನೂ ಮಿಥ್ಯೆಯಲ್ಲ. ಆದರೂ ಇವೆಲ್ಲಾ ಏರುಬೀಳುಗಳಿಂದ ನನ್ನ ಲಕ್ಷ್ಮೀ ನಸುನಗುತ್ತಾ ಅಂತಹವರ ಮೇಲೆ ಕನಿಕರಿಸಿಯೇ ಬಿಡುತ್ತಾಳೆ. "ನಮೇ ಭಕ್ತಃ ಪ್ರಣಶ್ಯತಿ."

ಹೀಗೆ ತಿಮ್ಮಪ್ಪ ಈ ಪೂರ್ವಾಶ್ರಮದ ನೀಲಪ್ಪನಿಗೆ ತನ್ನ ಪಾಪಾಪಹಾರಿ ಸಾಮರ್ಥ್ಯವನ್ನು ತೋರುತ್ತಾನೆ. ಅದನ್ನು ಕಂಡ ಇವರು ತುಪ್ಪಾ! = ಅಲಲಾ! ಸರ್ವಶಕ್ತಾ! ನಿನ್ನ ಶಕ್ತಿಯೋಗದ ಸಾಕ್ಷಾತ್ಕಾರ ನೀಡಿದೆಯಲ್ಲೋ! ನೀನೆಷ್ಟು ಶಕ್ತನೋ ನಾನಷ್ಟೂ ಅಶಕ್ತ. ನಿನ್ ಅಡಿಯೇ ತೊಡರ್‌ನ್ದು = ನಿನ್ನ ಶ್ರೀಪಾದ ಬಿಡದೆ ಅದೂ ಅವಿಚ್ಛಿನ್ನ ಸ್ಮೃತಿರೂಪವಾಗಿ ಅಖಂಡ ಭಕ್ತಿಯೋಗ ಮಾಡಲಾರೆನಪ್ಪಾ! ಇಲ್ಲಿನ ಅಳ್ವಾರ್ ಅಶಕ್ತಿ ಎನ್ನುವುದು. ಆ ಮಾರ್ಗವೆಲ್ಲಾ ನನಗಲ್ಲ. ನಾನು ಕೇವಲ ನಿನ್ನ ದಯೈಕ ಪಾತ್ರ ಶರಣ. ಆ ಸಾಧನೆಗಳ ಪರಿಪಾಕರೂಪಿ ನೀನೇ! ನಿನ್ನ ಈ ಚರಣಾಗಳೇ. ಹಲವಾರು ಸಾಧಕರಂತೆ ಅನುಷ್ಠಿಸಿ, ಅಮೇಲೆ, ಅವೆಲ್ಲಾ ನೀನು ವಿಶ್ವರೂಪ ತೋರಿಸಿದ ಮೇಲೆ, ನನ್ನದೇನೇನೂ ನಿನ್ನ ಮುಂದೆ ನಡೆಯದು, ಈ ನೀಚತ್ವ, ಹಾಗೂ ಪಾರತಂತ್ರ್ಯ ಸ್ವರೂಪಜ್ಞಾನ ಉಂಟಾಗುವವರ, ಕೊನೆಯನೆಲೆ, "ಮಾಮೇಕಂಶರಣಂವ್ರಜ" ನನಗೆ ಈ ಶರಣಾಗತಿ ನಿಷ್ಠೆಗೆ ನೀನೇ ಮೊಟ್ಟ ಮೊದಲಿಗೇ ಏರಿಸಿದವ, ನೀನೇ ಕೊನೆಗಾಲಕ್ಕೂ ರಕ್ಷಕ! ಹೀಗೆ ಅವರ ಕರ್ಮಾದಿಸಾಧನ ಬುದ್ಧಿ ತ್ಯಾಗಕ್ಕೂ, ನನ್ನ ಅಕಿಂಚನ್ಯಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸ! ಸೂಕ್ಷ್ಮದಲ್ಲೇ ಮೋಕ್ಷ. ಏತ್ತವುಮ್ ಕಿರ್‌ಕಿನ್ನಿಲೇನ್ = ಈ ಸ್ವಸ್ವರೂಪ ಯಾಥಾತ್ಮ್ಯದಿಂದ ಅಖಂಡ ಸಾಧನಾರೂಪ ಸ್ತುತಿಯೂ ನನ್ನ ಕೈಲಾಗದಯ್ಯಾ! ಅವವೇ ನಿನ್ನನ್ನು ನೋಡಿ ಹಿಂಸರಿಯುತ್ತಿವೆ!

ಶೆಪ್ಪು = ಭರಣಿಯಂತೆ ರಕ್ಷಕವಾಗಿ ಕೋಟಿಕೊತ್ತಲುಗಳಂತೆ ಆರ್ = ಎಲ್ಲೆಲ್ಲೂ ತುಂಬಿರುವ ತಿಣ್ = ಗಟ್ಟಿಚೇಗಾದ, ಗಿಡಮರಗಳೆಂಬ ವರೈಶೂಳ್ = ರಕ್ಷಿಸುವ ಬೇಲಿಗಳಿಂದಲೇ ಸುತ್ತುವರಿದ, ತಿರುವೇಜ್ಗಡಮ್ ಮಾ ಮಲೈ = ಶ್ರೀ ವೆಂಕಟ ಮಹಾಽಚಲವಾಸಾ ಎನ್‌ಅಪ್ಪಾ = ಸಮುದ್ರೋ ಬನ್ಧುಃ = ಎಂಬ ಕೃಷ್ಣಯಜುರ್ ಮಹಾಮಂಗಳ ಮಂತ್ರದಂತೆ, ಎಲ್ಲರಿಗೂ ಎಲ್ಲಕ್ಕೂ ಅವಿರೋಧೇನ ಒದಗುವ ಮಹಾಬಂಧೋ ಸಮುದ್ರ ಎಲ್ಲವನ್ನೂ ಅತುಕೊಳ್ಳುತ್ತಾ, ತನ್ನೊಳಗಿಟ್ಟು ರಕ್ಷಿಸಿ ಬೆಳೆಸುವಂತೆ,

ದೇವಾನಾಂ ದಾನವಾನಾಂ ಚ ಸಾಮಾನ್ಯಮಧಿದೈವತಮ್

ತಿಮ್ಮಪ್ಪಾ! ಓ ನನ್ನಪ್ಪಾ! ಈ ಪಿತೃತ್ವಕ್ಕೆ ಹೊಂದುವಂತೆ ನನ್ನನ್ನು ಪರಿಪಕ್ವ ಪಡಿಸಿರುವ "ಸ್ವರೂಪ ಪಾರತಂತ್ರ್ಯಕ್ಕೆ" ಅನುಗುಣವಾಗಿಯೇ ಈ ನಿರುಪಾಧಿಕ ಕಿಂಕರನನ್ನು. ನಿರುಪಾಧಿಕ ಸರ್ವಸೇವೆಗೆ ಈಗಲೇ ಕೃಪೆಗೈದುಬಿಡಪ್ಪಾ. ಅಡಿಯೇನ್ಗೆ ಅಳ್ ಕೊಂಡರುಳೇ ಸುಮ್ಮನೆ ಮಾತುಬೆಳೆಸಬಾರದು. ಖಾಸಾ ಕೈಂಕರ್ಯ ಕಾಯಕವನ್ನು ತೆಗೆದುಕೋ! "ಶ್ರೀಮತೇ ನಾರಾಯಣಾಯ ನಮಃ" ದ್ವಯಮಂತ್ರದ ಉತ್ತರಖಂಡಾರ್ಥದ ತಾಕೀತು ಶರಣರ ಕಡೆಯಿಂದ ಬಲು ರಮ್ಯವಾಗಿ ಸಾಗಿದೆ.

ತಮಿಳ್ ತಿರಳ್ ೧-೯-೭

மண்ணாய் நீர் எரி கால் மஞ்சுலாவுமாம் ஆகாசமுமாம் புண்ணார் ஆக்கை தன்னுள் புலம்பி தளர்ந்தே யாத்தொளிந்தேன்
விண்ணார் நீள் சிகர விரையார் திருவேங்கடவா! அண்ணா! வந்தடைந்தேன் அடியேனை ஆள் கொண்டருளே

ಕನ್ನಡ ನೆರಳ್

ಮಣ್ ಆಗಿ ನೀರ್ ಉರಿ ಗಾಳೀ ಆಗಿ, ಮಂಜೂ ಬೀಳಾssಕಾಶಮು ಮಾಗುವ
ಹುಣ್ ತುಂಬಿದ ಒಡಲಿದರೊಳ್ ಸಿಕ್ಕೊಂಡು ಕೂಗಾಡುತ ಬೆಂದು ತಳರ್ದೇ ಬಿಟ್ಟೆನಲಾ
ವಿಣ್ ಪೂರ್ಣವೆ ಹರಡಿಹ ಉನ್ನತ ಶಿಖರದ ಕಂಪನೇ ಪೆಂಪುವ ತಿರುವೇಂಕಟದವನೇ
ಅಣ್ಣಾ! ಬಂದಡೆದೆ ನಿದೋ! ಅಡಿದಾಸನಂ ಆಳ್‌ಗೊಂಡರುಳೋ

ಅಣ್ಣಾ = ಹಿಂದಿನ ೫ನೆಯ ಹಾಡಿನಲ್ಲಿ ತಿಮ್ಮಪ್ಪನನ್ನು ಅಪ್ಪಾ ಎಂದು ಕರೆದವರು ಈ ೬ನೆಯ ಪಾಶುರದಲ್ಲಿ "ಅಣ್ಣಾ" ಎನ್ನುತ್ತಾರೆ. ತಾಯೀ ತನ್ದೆ ಎನ್ನುಮ್ ಎಂದು ತಾವು ಪರಿತ್ಯಾಗ ಮಾಡಿದ ಆ ಅಸಹಜವಾದ ಸಂಬಂಧಗಳಿಗೆಲ್ಲಾ ಎದಿರಾದ ಎಲ್ಲ ಬಗೆ ಸ್ವಾಭಾವಿಕ ಸಂಬಂಧಗಳು ಭಗವಂತನಲ್ಲೇ ನಿಯತವಾಗಿ ಹೊಂದಿ ಬರುವುದರಿಂದ ಭ್ರಾತಾ ಎಂದರೆ ನಿಜಕ್ಕೂ ತಿಮ್ಮಪ್ಪನೇ! 'ಭ್ರಾತಾ ನಿವಾಸಃ ಶರಣಂ ಸುಹೃತ್ ಗತಿಃ ನಾರಾಯಣಃ'.

"ಪಿತರಂ ಮಾತರಂ ದಾರಾನ್ ಪುತ್ರಾನ್ ಬನ್ಧೂನ್ ಸಖೀನ್ ಗುರೂನ್
..... ಸನ್ತ್ಯಜ್ಯ..... ಲೋಕವಿಕ್ರಾನ್ತ ಚರಣೌ ಶರಣಂ ತೇಽವ್ರಜಂ ವಿಭೋ"
"ತ್ವಮೇವ ಮಾತಾ ಚ ಪಿತಾ ತ್ವಮೇವ ತ್ವಮೇವ ಬನ್ಧುಶ್ಚ ಗುರುಸ್ತ್ವಮೇವ"

ಲೌಕಿಕ ಬಂಧುಗಳನ್ನು ಭಾವನಾತ್ಮಕವಾಗಿ ತ್ಯಜಿಸಿ ಅಲೌಕಿಕ ಬಂಧುವಾದ ನಿನ್ನನೇ ಗತಿಯಾಗಿ ತಿಳಿದಿದ್ದೇನೆಯಣ್ಣಾ!

ಹುಣ್ಣಿನಂತೆ ವಿಷಮಯವೂ ಅಶುಚಿಯೂ ಆದ, ಪಂಚಭೂತಗಳ ಒಂದು ಸಂಘಾತವಾಗಿರುವ ಈ ಶರೀರದಲ್ಲಿ ಶುದ್ಧವಾದ ಜೀವಾತ್ಮ ಸೇರಿಕೊಂಡು ಬಂಧನದಲ್ಲಿದೆಯಲ್ಲವೆ!

ಮಣ್ಣಾಯ್ ಅಹಾಶಮುಮಾಮ್. ಮೊದಲ ನಾಲ್ಕೂ ಭೂತಗಳಿಗೆ ಏನೊಂದೂ ವಿಶೇಷಣ ಸೇರಿಸದೆ, ಕೊನೆಯ ಆಕಾಶಭೂತಕ್ಕೆ ಮಾತ್ರ ಮಞ್ಜು ಉಲಾವುಮ್, ಮೋಡ ಸಂಚರಿಸಲು ಅವಕಾಶವೀಯುವ ಎಂಬ ಗುಣವಾಚಕ ತೊಡಿಸಿರುವುದರ ಭಾವವೇನೆಂದರೆ, ಆಕಾಶವೆಲ್ಲದರೊಡನೆಯೂ ಹೊಂದಿಕೊಂಡು ಅವುಗಳಿಗೆಲ್ಲಾ ತನ್ನಲ್ಲಿ ಅವಕಾಶ ನೀಡುವುದೆಂಬ ಆತ್ಮನಿಗೆ ಹತ್ತಿರವಾದ "ಅವಿಘಾತ, ಅಪ್ರತಿಘಾತ" ಗುಣ ಸಂಪನ್ನತೆ. ಉಳಿದವು ಹಾಗಲ್ಲ. ತಾವಿರುವ ತಾಣದಲ್ಲಿ ಇನ್ನೊಂದಕ್ಕೆ ಅದೇ ಕಾಲದಲ್ಲಿ ಸ್ಥೂಲಾಕಾರದಲ್ಲಿರಲು ಬಿಡವೆ ಅಡ್ಡಿ ಆತಂಕಮಾಡುವಂಥವು.

ಆತ್ಮನಃ ಆಕಾಶಃ ಸಂಭೂತಃ

ಇಂತಹ ಆಕಾಶವನ್ನೂ ಶರೀರವಾಗಿ ಉಳ್ಳವನೇ! "ಆಕಾಶ ಶರೀರಂ ಬ್ರಹ್ಮ". ತೈ.ಉ.

ಈ ಜಡವಾದ ಒಡಲನ್ನು ಬಲ್ಲವರು "ಶರೀರಂ ವ್ರಣವತ್ ಪಶ್ಯೇತ್" ಎನ್ನುವಂತೆ, ಪುಣ್ ಆರ್ = ಒಳಗೆಲ್ಲಾ ನಾನಾ ಬಗೆಯ ಹುಣ್ಣುಗಳಿಂದಲೇ ತುಂಬಿ, ಮೇಲೆ ತ್ವಕ್ ಚರ್ಮಗಳ ಹೊದ್ದಿಕೆಯಿಂದ ರಮ್ಯವಾಗಿ ಕಾಣುವ, ಆಕ್ಕೈದನ್ನುಳ್ = ಶರೀರದ್ದೇನೂ ತಪ್ಪಿಲ್ಲ. ನಾವು ನಾವೇ ನಮ್ಮ ನಮ್ಮ ಕರ್ಮಗಳಿಂದ ಮುಖ್ಯವಾಗಿ ಕೊಳಕನ್ನು ಸಂಪಾದಿಸಿ ಕೊಂಡಿದ್ದೇವಷ್ಟೆ. ಸಂಯಮವಿಲ್ಲದ ಭೋಗ ಜೀವನ, ಸಾಕಷ್ಟು ದೇಹಶ್ರಮಪಡದಿರುವುದು. ಹಿಂದಿನ ಜನ್ಮದ ವಾಸನಾಶೇಷ ಇವೇ ದೇಹ, ವ್ರಣಿತವಾಗಲು ಕಾರಣ. ಈ ವ್ರಣದುಃಖದಿಂದ, ಈಗ. ಪುಲಮ್ಬಿ = ಹಲುಬುತ್ತಾ. ತಳರ್‌ನ್ದು = ತಳರ್ದು, ಎಯ್‌ತ್ತು = ಸುಸ್ತಾಗಿ. ಒಳಿನ್ದೇನ್ = ನಾಶಹೊಂದಿದೆನಲ್ಲಾ

ಬುದ್ಧಿನಾಶಾತ್ ಪ್ರಣಶ್ಯತಿ!

ನಿತ್ಯವಾದ ಜೀವಾತ್ಮಕ್ಕೆ ನಾಶವೆಂತು? ನಿಜ, ಜಡವಸ್ತು ಜ್ಞಾನವಲ್ಲ. ಅದಕ್ಕೆ ಜ್ಞಾನವಿಲ್ಲ. ಆತ್ಮ ಎನ್ನುವುದು ಜ್ಞಾನಸ್ವರೂಪ. ಅದರಿಂದ ಹೊಮ್ಮುವ ಜ್ಞಾನ ಪ್ರಕಾಶವುಳ್ಳದ್ದು. ಈ ಬುದ್ಧಿಯೆನ್ನುವುದೇ ಆತ್ಮಧರ್ಮ. ಮನಸ್ಸಿನ ಮೂಲಕ ಜ್ಞಾನಧಾರೆ ಹರಿದು ಮೆದುಳಿಗೆ ಸೇರಿ ಅಲ್ಲಿಂದ ಪ್ರತಿಫಲಿತವಾಗಿ ಆಯಾಯಾ ವಸ್ತುಗಳನ್ನು ಗ್ರಹಿಸುವುದು. ಆತ್ಮನ ಮತ್ತೊಂದು ಮುಖ್ಯಲಕ್ಷಣವೆಂದರೆ, ಆನಂದ ಸ್ವರೂಪ. ಆನಂದಕ್ಕೆ ಆಸರೆ. ಅಜ್ಞಾನಾದಿಗಳಾಗಲಿ, ದುಃಖಾದಿಗಳಾಗಲಿ ಜೀವಾತ್ಮ ವಸ್ತುವಿಗೆ ಸ್ವತಃ ಇಲ್ಲ. ಈ ಜ್ಞಾನ, ಆನಂದ ಎರಡು ಗುರುತುಗಳಲ್ಲದೆ

ಪ್ರತಿಯೊಂದು ಜೀವಾತ್ಮವೂ ಸದಾ ಏಕ ಅಣುರೂಪದಲ್ಲೇ ಇರುವುದು. ಈ ಮೂಲಕ್ಕಿಂತ ಮುಖ್ಯವಾಗಿ, ಈ ದೇಹಸ್ಥ ಮಾತ್ರ ಜ್ಞಾನಾತ್ಮನಿಗೂ, ಆತ್ಮನಾದ ವ್ಯಾಪಕ ಪರಮಾತ್ಮನಿಗೇ ಶರೀರವಾಗಿರುವುದರಿಂದ, ಅವನಿಗೇ ಮೀಸಲಾಳಾಗಿರುವುದೇ, ಅತ್ಯಂತ ಮುಖ್ಯವಾದ ಲಕ್ಷಣ. 'ಯಸ್ಯ ಆತ್ಮಾ ಶರೀರಮ್'. ಇಂತಹ ತನ್ನ ಸಂಪತ್ತನ್ನೇ ಭಾವಿಸಿ ಭಾವಿಸಿ, ಜೀವಾತ್ಮ ಇಲ್ಲಿ ಅಲ್ಲಿ ಸುಖವಾಗಿರಬಹುದು. ಒಬ್ಬ ರಾಜಪುತ್ರ ಓರ್ವ ಬೇಡನಿಗೆ ಸಿಕ್ಕಿ ಅಲ್ಲೇ ಬದಕು ನಡೆಸುತ್ತಾ ತನ್ನನ್ನು ಬೇಡನನ್ನಾಗಿಯೇ ಭ್ರಮಿಸುವಂತೆ ನಾನೂ ಈ ಭ್ರಾಮಕವಾದ ಹಿಗ್ಗಿ ಕುಗ್ಗುವ, ದೇಹ, ಶರೀರವೆನ್ನುವ ವ್ರಣಾಗಾರದಲ್ಲಿ ನನ್ನ ಪೂರ್ವಾರ್ಜಿತ, ಅಧುನಾssರ್ಜಿತ ಅಪಥ್ಯ ಕರ್ಮಗಳಿಂದಲೇ ಕಟ್ಟಲ್ಪಟ್ಟವನಯ್ಯಾ!

ನಿನ್ನ ವಾಸಸ್ಥಳ, "ಈಶಾವಾಸ್ಯಂ ಇದಂ ಸರ್ವಮ್" ಆದರೂ, ಹಸುವಿನ ಕೆಚ್ಚಲಲ್ಲೇ ಹಾಲಮೃತ ಸಾನ್ನಿಧ್ಯ ಮಾಡಿರುವಂತೆ, ಇಂತಹ ಪ್ರದೇಶಗಳಲ್ಲಿ ವಿಶೇಷ ಪ್ರೀತಿಯಿಂದ ತುಂಬಿ, ಶ್ರೀಸಾಮಾನ್ಯರಿಗೂ ಇಂದ್ರಿಯ ಗೋಚರನಾಗಿದ್ದೀಯೆ. ತಿರುವೇಙ್ಗಡಮ್ = ನಮ್ಮೆಲ್ಲರ, ಆ ಪಾಪಗಳನ್ನೆಲ್ಲಾ, ನಿನ್ನ ಕಟಾಕ್ಷರಶ್ಮಿ ದಹಿಸಿಯೇ ಬಿಡುವುದು. ನಾವೂ ಋಣಮುಕ್ತರಾಗುವೆವು. ಕಟಂ = ಪುಣ್ಯಪಾಪಗಳೆಂಬ ಕಡವನ್ನು ತೀರಿಸಲೇಬೇಕಾದ ಸಾಲವನ್ನು, ವೇಮ್ = ಸುಟ್ಟೇಬಿಡುವ ಶಕ್ತಿ, ನಿನಗಿದೆ ಅಂತೆ ನೀನು ವೇಂಕಟ. "ಸರ್ವೇ ಪಾಪ್ಮಾನಃ ಪ್ರದೂಯನ್ತೇ"

ಈ ನಿನ್ನ ಸೌಲಭ್ಯವನ್ನು ಸಂದರ್ಶಿಸಲು, ವಿಣ್ ಆರ್ ನೀಳ್ ಶಿಕರಂ = ಆ ತುಂಬಿದ ವೈಕುಂಠದವರಿಂದಲೇ ತುಂಬಿ ಹೋಗಿರುವ, ಇದೋ ನಿನ್ನ ಉದ್ದನ ಗಿರಿಯ ಉನ್ನತ ಶಿಖರಗಳು! ವಾತ್ಸಲ್ಯ, ಸೌಶೀಲ್ಯ ದಯಾದಿಗುಣಗಳಿಗೆ, ಆ ಪರಮಪದದಲ್ಲಿರುವವರು ನಿರ್ದೋಷಿಗಳೇ ಆಗಿರುವುದರಿಂದ, ಮಂದಾಧಿಕಾರಿಗಳೇ ಇಲ್ಲದಿರುವುದರಿಂದ, ದುಃಖಿಗಳೇ ಇಲ್ಲದಿರುವುದರಿಂದ, ಉಪಯೋಗವಿಲ್ಲ. ಅವೆಲ್ಲಾ ಈ ಲೀಲಾವಿಭೂತಿಯಲ್ಲಿಯೇ. ಈ ಗುಣಾನುಭವಕ್ಕಾಗಿ ನಿತ್ಯಮುಕ್ತರೂ ನಿನ್ನೀ ಗಿರಿಗೇ ಬಂದು ಜಮಾಯಿಸಿದ್ದಾರೆ! ಮತ್ತೂ ನಿನ್ನ ಈ ಧಾಮ ಎಂಥದು? ವಿರೈ ಆರ್ = ದಿವ್ಯ ಗಂಧದಿಂದಲೂ ತುಂಬಿದೆ. ಈ ಗುಣಪೂರ್ತಿ ಬ್ರಹ್ಮಗಂಧಪೂರ್ತಿ ಎಂಬೀ ಸಿರಿಯಾಂತ ಈ ಭೂವೈಕುಂಠವನ್ನೇ ನೀನೇ ಆರಿಸಿಕೊಂಡಿದ್ದೀಯೆ. ಅಂತಹ ಓ ಶ್ರೀವೇಂಕಟವಾಸಾ! ಅಣ್ಣಾ! ಅಡಿಯೇನೈ ಆಳ್ ಕೊಂಡರುಳೇ. ನಿನ್ನನ್ನೇ ಉಪಾಯ ಅಂದರೆ ಸಿದ್ಧ ಶುದ್ಧ ಸಾಧನನನ್ನಾಗಿ ಸ್ವೀಕರಿಸಿರುವ ಅಡಿಯೇನೈ = ನಿನಗೇನೇನು ಸೇವೆ ಮಾಡಲಿ? ಅಪ್ಪಣೆ ನೀಡು. ಕಿಂಕರೋಮಿ? ಕಿಂಕರೋಮಿ? ಅಂತಹ ಈ ಕಿಂಕರನ ಊಳಿಗದ ಕಾಯಕವನ್ನು - "ಕಿಂಕರ ಸ್ವಭಾವಃ, ಕಿಂಕರಸ್ಯ ವೃತ್ತಿಃ ಕೈಂಕರ್ಯಮ್" ಋಗ್ವೇದದ ಖಿಲಶ್ರುತಿಯ "ಜಿತಂತೇ" ಎಂಬ ಆರ್ಷಮಂಗಳಾಶಾಸನ ಮಂತ್ರದಲ್ಲಿ "ಕಿಂಕರೋsಸ್ಮಿ ಹೃಷಿಕೇಶ ಭೂಯೋಭೂಯೋಸ್ಮಿ ಕಿಂಕರಃ" ಈ ಶಬ್ದ ಶುದ್ಧ ವೈದಿಕವಾದುದಷ್ಟೆ. ಈ ಅಳಿಯದ ಸರ್ವಸೇವೆಯೆಂಬ ಆಸ್ತಿಗೆ ಹಕ್ಕುದಾರನಾದ ನನ್ನನ್ನು ಆಳ್‌ಕೊಂಡು = ಕಿಂಕರನನ್ನಾಗಿಸಿಕೊಂಡು, ಅರುಳ್ = ನಿನ್ನ ಸಂತಸಕ್ಕಾಗಿ ನನ್ನಲ್ಲಿ ದಯೆಗೈ. "ಕರ್ತವ್ಯವೇ ಹಕ್ಕು" ಈ ರಹಸ್ಯ. ಮಾನವ ಜಾತಿಗೇ ಹತ್ತಬೇಕು. ಹಕ್ಕು ಬಾಧ್ಯತೆಗಳಿಗಾಗಿ, ರಾಷ್ಟ್ರ ರಾಜ್ಯಾಂಗ ರಚನೆ, ಮಾನವ ಹಕ್ಕುಗಳ ರಕ್ಷಣೆಗಾಗಿ ನಾನಾ ಸಜ್ಜನರ ಸಂಘಟನೆಗಳು, "ಹಕ್ಕು" ಎಂಬ ಸ್ಥಾನದಲ್ಲಿ, ಸ್ಪಷ್ಟವಾಗಿಯೇ "ಕರ್ತವ್ಯ" ಎಂಬುದನ್ನೇ ಪ್ರಯೋಗಿಸಿದರೇನೇ ಮಹಾತ್ಮ ಗಾಂಧಿ ಒಪ್ಪುತ್ತಿದ್ದರು. ಹಕ್ಕು ಚ್ಯುತವಾಗುವುದು, ಬೇರೆಯವರಿಂದ ಎಂಬ ಅವಿಚಾರ ಕುವಿಚಾರವನ್ನು ಅವರು ಗಮನಿಸಿದ್ದರು. ನನ್ನ ಹಕ್ಕು ನನ್ನ ಕರ್ತವ್ಯ ಸೇವೆಯೇ! ಅದನ್ನು ಆ ತಿರುಳನ್ನು ಹಿಡಿದರೆ ಅದರ ನೆರಳಾಗಿ, Human Rights ತಾವಾಗಿಯೇ ಸೇರಿ ಬರುತ್ತವೆ. ಈ ಶಿಷ್ಟಜನ ವಿವೇಕವೇ ಈ ಆಳ್ವಾರ್ ಶರಣರ ರಹಸ್ಯ.

ತಮಿಳ್ ತಿರಳ್ ೧-೯-೭

ತೆರಿಯೇನ್ ಪಾಲಹನಾಯ್ ಪಲ ತೀಮೈಹಳ್ ಶೆಯ್‌ದು ಮಿಟ್ಟೇನ್ ಪೆರಿಯೇನ್ ಆಯಿನ ಪಿನ್ ಪಿರರ್‌ಕ್ಕೇ ಉಳ್ಳೈತ್ತ್ರೇಳ್ಳೈ ಯಾನೇನ್ ಕರಿ ಶೇರ್ ಪೂಮ್ ಪೊಳಿಲ್ ಶೂಳ್ ಕನ ಮಾ ಮಲೈ ವೇಙ್ಗಡವಾ! ಅರಿಯೇ! ವನ್ದಡೈನ್ದೇನ್ ಅಡಿಯೇನೈ ಆಳ್ ಕೊಂಡರುಳೇ

ಕನ್ನಡ ನೆರಳ್

ಅರಿಯದ ಬಾಲಕನಾಗಿ ಪಲವಾರ್ ತೀಟೆಗಳ್ ಗೈದೇ ಬಿಟ್ಟೆನಲಾ! ಹಿರಿಹರಯವು ಸಾರಿದ ಮೇಲ್ ಪರರಿಗೆ ತೊತ್ತಾಗುತ ಮತಿಗೆಟ್ಟೆನಲಾ! ಕರಿಗಳೆ ಸೇರಿಹ, ಪೂ ಬನಸೂಳ್ದಿಹ ಘನತರ ವೇಂಕಟ ಮಾ ಮಲೆನಾಡಾ! ಓ ಹರಿಯೇ! ಬಂದಡೆದೆನಿದೋ ಅಡಿದಾಸನಂ ಆಳ್ ಕೊಂಡರುಳೋ

ಈ ಒಡಲಿಗೆ ಸೇರಿದ ಮೇಲೆ ಸ್ವಲ್ಪ ದಿನ ಈ ಶರೀರ ಶಿಶುರೂಪ ತಾಳಿತ್ತಲ್ಲವೇ! ಆಗ ಜೀವಾತ್ಮನ ಜ್ಞಾನವನ್ನು ಆ ಶೈಶವ ರೂಪು ಆವರಿಸಿಯೇ ಬಿಟ್ಟಿತ್ತು. ಅತಿಎಳೆ ಮಕ್ಕಳಿಗೇನು ತಾನೇ ಯುಕ್ತಾsಯುಕ್ತ ವಿವೇಚನೆ ಇರುವುದು? ಪಾಲಹನಾಯ್ ತೆರಿಯೇನ್ = ಬಾಲಕನಾಗಿರುವಾಗ ಅರಿವಿಲ್ಲದವನಾಗಿದ್ದೆ. ಕೊಂಚ ಜ್ಞಾಪಕ ಶಕ್ತಿ ಉಂಟಾದ ಮೇಲೆ ಕೌಮಾರಾವಸ್ಥೆಯಲ್ಲಿ, ಹಿರಿಯರ ಮಿತ್ರರ ಮುದ್ದಿನ ಹಾಗೂ ಸಂಸರ್ಗ ದೋಷದಿಂದ, ಪಲ ತೀಮೈಹಳ್ ಶೆಯ್‌ದುಂ ಇಟ್ಟೇನ್ = ಒಂದಲ್ಲ ಎರಡಲ್ಲ ಹಲವಾರು ಬಗೆಯ

ಕೆಟ್ಟ ಕೆಲಸಗಳನ್ನು ಮಾಡಿಯೇ ಬಿಟ್ಟೆ. ಅಂದರೆ ಆತ್ಮ ಸ್ವರೂಪ ಲಕ್ಷಣವಾದ ಸ್ವಯಂ ಸೇವಕತ್ವದ ನನ್ನ ಹಕ್ಕು ಬಾಧ್ಯತೆಯನ್ನೇ ಮರೆತು, ಗಮನಿಸದೆಯೇ ಇರುವಷ್ಟು ಅಶುಭ ಕಾರ್ಯಗಳನ್ನೂ ಗೈದೇ ಬಿಟ್ಟೆನಪ್ಪಾ. ಆ ಬಾಲ್ಯದಲ್ಲಿ ಅಜ್ಞಾನ ಅವಿವೇಕವಿದ್ದರೂ ನಡೆ ನುಡಿಗಳಲ್ಲಾದರೂ ಶಿಸ್ತು ಎಚ್ಚರಿಕೆ ವಹಿಸುವಂತೆ ಹಿತೈಷಿಗಳಾದವರೂ ಸಹ ಒಳ್ಳೆಯ ಸಂಸ್ಕಾರವನ್ನು ರೂಢಿಸದೆ ಹೋದರು. ಅಂಥ ಹಿತೈಷಿ ಪ್ರವರ್ತನ ಇಲ್ಲದುದರಿಂದ, ಇದ್ದರೂ ಆ ವಯಸ್ಸಿನಲ್ಲಿ ತುಂಟನಾಗಿ ಹಿರಿಯರಿಂದ ನುಣಿಚಿಕೊಂಡೆ! ಹೀಗಾಗಿ ದುಷ್ಟ ಸಂಸ್ಕಾರಗಳೇ ಬೆಳೆದವು.

ಈ ದೇಹ, ಇಂದ್ರಿಯ, ಭೋಗ್ಯವಸ್ತುಗಳೆಂಬ ಸ್ಥೂಲ ಪ್ರಕೃತಿ ಸಂಸರ್ಗದಿಂದ, ಆತ್ಮನಿಗೆ "ಅವಿದ್ಯಾ" ರೂಪವಾದ ಅಜ್ಞಾನದ ಮೋಡ ಮುಚ್ಚಿಕೊಂಡರೂ, ತದನುಗುಣವಾಗಿ ಅಯಾಯಾ ಕೆಲಸಗಳನ್ನು ಅಷ್ಟಷ್ಟು, ಮಟ್ಟಿಗಾದರೂ ಮಾಡದಿದ್ದರೆ, ಆಗುವ ದೊಡ್ಡ ಲಾಭ ಎಂದರೆ ವಾಸನೆ, ಸಂಸ್ಕಾರ ದುಷ್ಪವಾಗದು. ಒಂದು ಸಲ ಒಂದು ಕೆಟ್ಟ ಕ್ರಿಯೆ ನಡೆದರೆ ಸಾಕು. ಅದರದೇ ಚಟ ಬೆಳೆಯುತ್ತದೆ. ಆ ಮೊಟ್ಟ ಮೊದಲ ಕೆಲಸದಲ್ಲೇ ಹಿರಿಯರು ಗಮನ ಹರಿಸಿ, ತಾವೂ ಆ ಚಟಗಳಿಗೆ ಬಲಿಯಾಗದಿರುವ ದೃಢ ಸಂಯಮವನ್ನು ಸಾಧಿಸಿದರೆ ಅದೇ ಮಾನವೀ ಪುರುಷಾರ್ಥ. ಏನು ತಿಂದರೇನು? ಏನು ನೋಡಿದರೇನು? ಹೊತ್ತಿಗೆ ಮುಂಚೆಯೇ ಏಳಬೇಕೇನು? ಇತ್ಯಾದಿ ಇತ್ಯಾದಿ ಉಡಾಫೆಗಳ ಸರಮಾಲಿಕೆಯ ಹರವು ಮೊದಲ ಕ್ರಿಯೆಯಿಂದಲೇ ಎಂಬ ಸೂಕ್ಷ್ಮ ಶಿಕ್ಷಣ ವಿಚಾರ, ಸಮಾಜದಲ್ಲಿ ಬರಬರುತ್ತಾ ಲುಪ್ತವಾಗುತ್ತಿರುವುದೇ ಮಕ್ಕಳು ಕೆಡಲು ಮುಖ್ಯ ಕಾರಣ.

ಸ್ವಂತ ಜವಾಬುದಾರಿಯ ವಯಸ್ಸು ೧೪ರ ಮೇಲೆ. ಆ ಪೌಗಂಡಾವಸ್ಥೆಯಲ್ಲಿ, ಅಂದರೆ ಯೌವ್ವನದ ಅಂಕುರದಲ್ಲಿ ಆ ಹರಯ ಬೆಳೆದಂತೆ, ಪೆರಿಯೇನ್ ಆಯಿನ ಪಿನ್ = ನನ್ನ ಅಭಿಪ್ರಾಯಕ್ಕೂ ಸಮಾಜ ಬೆಲೆ ಕೊಡುವ ಆ ದಿನಗಳಲ್ಲೆಲ್ಲಾ, ಪಿರರ್‌ಕ್ಕೇ = ಅತ್ಮಬಂಧುಗಳಲ್ಲದ, ಕೇವಲ ಅಭಾಸಿ ದೇಹ ಬಂಧುಗಳಿಗಾಗಿ, ಒಳ್ಳೆ ವಸ್ತು ಕಂಡರೆ ಮನೆ ಗೊಯ್ಯುವ. ಪ್ರಿಯನಿಗೆ, ಪ್ರಿಯತಮೆಗೇ ಸಮರ್ಪಿಸುವ! ಈ ಸಂಕುಚಿತ ಸ್ವಾರ್ಥ ತಲೆಯೆತ್ತುವುದು. ಹೀಗೆ ಅಪ್ರಾಪ್ತರೂ, ಕ್ಷುದ್ರರೂ ಆದ ಸ್ವಕೀಯರಾದ ಪರರಿಗೇ, ಅವರ ಖುಷಿಗಾಗಿಯೇ, ಉಳ್ಳೆತ್ತು = ಅಲೆದಾಡಿ, ಪರದಾಡಿ! ಏಳ್ಕೆ ಯಾನೇನ್ = 'ಬಾಲಸ್ತಾವತ್ ಕ್ರೀಡಾಸಕ್ತಃ ತರುಣಸ್ತಾವತ್ ತರುಣೀಸಕ್ತಃ' ಎಷ್ಟೇ ಸಂಪಾದಿಸಿ ತಂದು ಹಾಕಿದರೂ ನನಗಂತೂ ಅರಿವಿನೊಂದಿಗೇ ಸುಖ ಆರೋಗ್ಯ ಎಲ್ಲಾ ನಷ್ಟವಾಗುತ್ತಾ ಬಂತು. ಜ್ಞಾನತನ ನೀಗಿಕೊಂಡು ಕೋಣತನದ ರೂಢಿಗೇ ಹೆಚ್ಚು ವಾಲುವಂತಾಯಿತು. ಓ ಹೃಷೀಕೇಶಾ! ಇಂದ್ರಿಯಾಧಿಪ! ಈ ಜೀವಾತ್ಮನ ಮಾತನ್ನು ಅವು ಕೇಳವು. ನೀನೇ ನಿನ್ನ ವಿಶೇಷಾಧಿಕಾರ ಸಾಮರ್ಥ್ಯವನ್ನು, ಇಂದ್ರಿಯಗಳ ಮೇಲೆ ತೋರಪ್ಪಾ!

ಯುಕ್ತ ಆಸೀತ ಮತ್‌ಪರಃ

ಅರಿಯೇ = ಜೀವಾತ್ಮನೂ ಪ್ರಕೃತಿ ಮಾಯೆಯ ಹೊಡೆತವನ್ನು ತಡೆದುಕೊಳ್ಳಲಾರದಾಗ, ಯಾವುದಕ್ಕೂ ಯಾವಾಗಲೂ, ಅಪ್ರತಿಹತ ಪರಾಭಿ ಭವನ ಸಾಮರ್ಥ್ಯವುಳ್ಳ, ಕೆಟ್ಟವುಗಳನ್ನೆಲ್ಲಾ ಹರಿಸುವ ಓ ಹರಿಯೇ! ಬಂದಿದೋ ಸೇರಿದೇನೆ. ವನ್ದು ಅಡ್ಯೆನ್ದೇನ್. ದೂರದಲ್ಲಿದ್ದವನು, ನಿನ್ನ "ಸಾಲೋಕ್ಯ, ಸಾಮೀಪ್ಯ" ಮುಕ್ತಿ ಹೊಂದಿದರೂ ನಿನ್ನಲ್ಲೇ ಶರಣುಗೈದರೂ ನೀನು ಮಾತ್ರ ನಿನ್ನ ಸಾಯುಜ್ಯ ಗುಣಾನುಭವ ಹಾಗೂ ದಾಸನ ಸ್ವರೂಪಾನುಗುಣವಾದ ಕೈಂಕರ್ಯ ಫಲ ನೀಡದೆ ಮಹಾ ಪುರುಷಾರ್ಥದಿಂದ ವಂಚಿತನನ್ನಾಗಿಸುವುದು ತರವಲ್ಲ. ಎಲ್ಲಿಗೆ ನೀವೀಗ ಬಂದಿದ್ದೀರಿ?

ಕರಿಶೇರ್ = ಮಹಾಮಹಾ ದಿಗ್ಗಜಗಳೆಲ್ಲಾ ತಮ್ಮ ತಮ್ಮ ಹೆಣ್ಣಾನೆ, ಮರಿಗಳೊಡನೆ ಆಟವಾಡಲು ತಕ್ಕ ತಾಣವೆಂದು ಜಮಾಯಿಸಿವೆ. ಅವುಗಳು ಅಷ್ಟೊಂದು ಬೃಹದ್ ದೇಹಗಳನ್ನೂ ಮರೆತು ನಿನ್ನ ಕಾಯಕಕ್ಕೇ ಒದಗುವಂತೆ ಲೀಲಾ ಪ್ರಸಂಗಗಳನ್ನು ನಡೆಸುತ್ತಿರುವಾಗ ಆ ಮದಗಜಗಳಿಗಿಂತಲೂ ಗರ್ವಿತನಾದ ನನ್ನನ್ನು ಕೈ ಬಿಡುವೆಯಾ? ಅಷ್ಟೇ ಅಲ್ಲ. ಈ ತಿರುಮಲೆ, ಪೂಮ್ ಪೊಳಿಲ್ ಶೂಳ್ = ಘನವಾಗಿ ಪುಷ್ಪಿತವಾಗಿರುವ ತೋಟಗಳಿಂದ ಸುತ್ತುವರಿಯಲ್ಪಟ್ಟಿರುವುದು. ಹೇಗೆ ತಿರ್ಯಕ್ಕುಗಳಿಗೂ ಅಚೇತನಗಳಿಗೂ ಕೈಂಕರ್ಯ ಭಾಗ್ಯ ಕೈಂಕರ್ಯೋಪಕರಣ ಭಾಗ್ಯ ನೀಡುತ್ತಿರುವೆಯೋ ಅಂತಹ ನೀನು ಮಾನವನಾದ ನನ್ನನ್ನು ಉಪೇಕ್ಷಿಸಬಹುದೇ? ವಾರಣಗಳಿಂದಲೂ ಕುಸುಮಗಳಿಂದಲೂ ಕನಮ್ = ಅತಿ ಘನತೆಯಾಂತಿರುವ, ಮಾ ಮಲೈ = ಎಂತಹವುಗಳಿಗೂ ಸೇವಾವಕಾಶ ನೀಡಿ ಹಿರಿದಾದ ಮಹತ್ತೆಯನ್ನು ಪಡೆದುಕೊಂಡಿರುವ ಬರಿ ಭೌಗೌಳಿಕ ಎತ್ತರ ಅಗಲ ಉದ್ದ ಮಾತ್ರವಲ್ಲ. ಅತ್ಯೋನ್ನತಿಕಾರಿಯೂ ಆದ ಉಭಯ ಕುಶಲವನ್ನೂ ತರುವ ಗಿರಿಗೇ ನಾಥನಾದವನೇ! ವೇಙ್ಗಡವಾ! ನಿನ್ನೀ ದೊಡ್ಡ ಬೆಟ್ಟಕ್ಕೆ ಸಂದಿದ್ದೇನೆ. ಅಡಿಯೇನ್ಗೆ = ಸೇವೆಯೇ ಆತ್ಮನ ಜೀವಾಳ ಎಂಬೀ ಸ್ವಸ್ವರೂಪದ ಅರಿವು ನೀಡಿ, ಅದಕ್ಕೂ ನಿನಗೂ ಇರುವ ಶೇಷ ಶೇಷಿಭಾವವನ್ನು ತೋರಿಸಿ, ಸೇವೆಯ ಕಾಯಕವೊಂದರಲ್ಲೇ ರಸವನ್ನು ಉಕ್ಕಿಸಿ "ಸರ್ವದಾಸ್ಯ ಸ್ವರಾಜ್ಯದ ಪಟ್ಟಕ್ಕೇ" ಹಕ್ಕುದಾರನನ್ನಾಗಿಸಿರುವ ನನ್ನನ್ನು ಅಳ್‌ಕೊಂಡು ಅರುಳೇ = ನಿನ್ನ ಕೆಲಸಗಳಿಗೇ ಉಪಯೋಗಿಸಿಕೊಂಡುಬಿಡು. ಕೈಂಕರ್ಯ ಸ್ವರೂಪಯೋಗ್ಯತೆಯಷ್ಟೇ ಸಾಲದು. ಅದು ಫಲ ನೀಡುವಂಥಹ ಫಲೋಪಧಾನ ರೂಪು ತಾಳಿಯೇ ಬಿಡಲಿ. ಉದಾಹರಣೆಗೆ ಹೇಳುವುದಾದರೆ, ಒರ್ವ ಕುಂಬಾರ, ಕಾಡಿಗೆ ಹಾಗೇ ಹೋಗಿದ್ದ. ಅಲ್ಲೊಂದು ಹದವಾದ ಮರ ತನ್ನ ಚಕ್ರಕ್ಕೆ ದಂಡಕ್ಕೆ ಒದಗುವಂಥದು! ಅದನ್ನು ನೋಡಿ ಬಂದುದಷ್ಟೆ. ಯದ್ಯಪಿ ಅದು ಮುಂದೆ ಗಡಿಗೆ ಶ್ರಾವೆ ಹೆಂಚು ಮುಂತಾದವುಗಳಿಗೆ, ಸಲಕರಣೆಯಾಗಬಹುದು. ಆಗಲೇ ಅದಕ್ಕೆ ಆ

ಭಾಗ್ಯವಿಲ್ಲವೋ! ಕಾರಣ ಎರಡೂ ಬಗೆಯಿರಬಹುದು, 'ಸ್ವರೂಪ ಯೋಗ್ಯತಾರೂಪ' ಒಂದು 'ಫಲೋಪಧಾಯಕತ್ವ' ರೂಪ ಮತ್ತೊಂದು ಉಪ್ಪಿನಕಾಯಿ ಎಲ್ಲೋ ಇಟ್ಟಿದ್ದರೇನು ಬಂತು. ಊಟಕ್ಕೆ ಥಟ್ಟನೆ ಒದಗಬೇಕಲ್ಲವೆ?

ತಮಿಳ್ ತಿರಳ್ ೧-೯-೮

ನೋತ್ತೇನ್ ಪಲ್ ಪಿರವಿ ಉನ್ನೈ ಕಾಣ್‌ಬದೋರ್ ಆಶೈಯಿನಾಲ್ ಏತ್ತೇನ್ ಇಪ್ಪಿರಪ್ಪೇ ಇಡರ್ ಉತ್ತನನ್ ಎಮ್ಬೆರುಮಾನ್
ಕೋಲ್ತೇನ್ ಪಾಯ್‌ನ್ದೊಳುಹುಮ್ ಕುಳಿರ್ ಶೋಲೈ ಶೂಳ್ ವೇಙ್ಗಡವಾ! ಆತ್ತೇನ್ ವನ್ದಡೈನ್ದೇನ್ ಅಡಿಯೇನೈ ಆಳ್ ಕೊಣ್ಡರುಳೇ

ಕನ್ನಡ ನೆರಳ್

ವ್ರತಮಂ ನೈದೆನು ಪಲಾವರ್ ಪುಟ್ಟಗಳ್ ಸಲಮೆ! ನಿನ್ನನು ಕಾಣುವೊಂದಾಸೆಯಿಂದ
ಇದೋ ತಕ್ಕವನಾದೆ! ಈ ಜನುಮದೊಳೇ ಎಡರ್ ಅರಿವಾಯ್ತೆನ್ ಉಪಕಾರಿನ್!
ಸುರಿಕೋಲ್ ಜೇನ್ ಹಾಯುವ ಕುಳಿರ್ ಬನಗಳೆ ಬಳಸಿಹ ವೇಂಕಟದವನೇ
ತ್ವರೆಯೇರಿದೆ, ಸೈಸೆನಲಾ! ಬಂದಡೆದೆನಿದೋ! ಅಡಿದಾಸನಂ ಆಳ್ ಕೊಂಡರುಳೋ

ಪಲ್ ಪಿರವಿ ನೋತ್ತೇನ್ = ಒಂದಲ್ಲ ಹಲವಾರು ಅಸಂಖ್ಯ ಜನ್ಮ ಪಡೆಯಲೆಂದೇ ನಾನು ವ್ರತ ಮಾಡಿದ್ದು! ನಾನೇ ನನ್ನ ಮರು ಹುಟ್ಟಿಗೆ ಹೀಗೆ ಸಾಧನಾನುಷ್ಠಾನ ಗೈಯ್ಯುತ್ತಿರುವಾಗ ನಡುವೆ ಅದೇನೋ ದಿಢೀರನೆ, ಅಕಸ್ಮಾತ್ ಯಾದೃಚ್ಛಿಕ ಸುಕೃತವೊಂದು ನಿನ್ನ ಲೆಕ್ಕಕ್ಕೆ ಸೇರಿಕೊಂಡಿತು! ನನ್ನದೊಂದು ಪೋಲಿ ದನವನ್ನು ಅಟ್ಟಿಸಿಕೊಂಡು ಹಿಡಿಯಲು ಹೋದಾಗ ಅದು ದೇವಾಲಯದ ಪ್ರದಕ್ಷಿಣೆಯೇ ಆಯಿತೆಂದು ನಾನು ಭಾವಿಸದೆ ಇದ್ದಾಗಲೂ ನೀನು ಹಾಗೆ ಭಾವಿಸಿದೆ! ಇಂಥವುಗಳನ್ನೇ 'ಯಾದೃಚ್ಛಿಕ ಸುಕೃತ' ಎನ್ನುವುದು. ಇದರ ಫಲವಾಗಿ ಉನ್ನೈ ಕಾಣ್‌ಬದು = ನಿನಗೇ ಮೀಸಲೂ, ಬಲು ಪಸಂದಾಗಿ ಸರಿಹೊಂದುವುದೂ ಸದೈಕರೂಪವೂ ಅಚಿಂತ್ಯವೂ ದಿವ್ಯವೂ ಅದ್‌ಭುತವೂ ನಿತ್ಯವೂ ದೋಷ ದೂರವೂ ನಿರತಿಶಯ ಸುಗಂಧ ಪೂರ್ಣವೂ ನಿರತಿಶಯ ಉಜ್ವಲವೂ, ಅತ್ಯಧಿಕ ಸುಂದರವೂ ಸಕಲ ಸುಕುಮಾರವೂ ಅಸದಳ ಲಾವಣ್ಯ ಪೂರ್ಣವೂ ನಿರತಿಶಯ ಯೌವನ ಶೋಭಿತವೂ ಅದ ನಿನ್ನ ಆ ಅತ್ತಣ ದಿವ್ಯರೂಪವನ್ನೇ ನಾನಿದೋ ಇಲ್ಲೇ ಕಾಣಬೇಕೆಂಬ, ಓರ್ ಆಶೈಯಿನಾಲ್ = ಏಕ ಮಾತ್ರ ಉತ್ಕಟ ಆಕಾಂಕ್ಷೆಯಿಂದ, ಕೂಡಿದವನು. ಅನ್ತರ್‌ಜ್ಞಾನಿಗಳಿಗೆ ರೂಪು ಬೇಕಿಲ್ಲ ಎಂದು ನಿರ್ಬಂಧಿಸಬಾರದು. ಜ್ಞಾನವೇ ಪ್ರೇಮದ ರೂಪಕ್ಕೆ ಅವನಿಂದಲೇ ನೇರಾ ಏರಿಸಲ್ಪಟ್ಟಿರುವ ಈ ನನಗೆ, ನಿರಾಕಾರವಾದ ನಿನ್ನ ಸ್ವರೂಪ ಮಾತ್ರದಿಂದಾಗಲಿ, ಜಗದ್ ರೂಪಿನಿಂದಾಗಲಿ ಎಂತೈಯ್ಯಾ ತೃಪ್ತಿಯಾದೀತು? ಒಂದು ವೇಳೆ ಪರಬ್ರಹ್ಮನಾದ ನೀನು ಸತ್ಯಕಾಮ ಸತ್ಯ ಸಂಕಲ್ಪನಲ್ಲದಿದ್ದರೆ ಅಂತಹ ದಿವ್ಯಾಽಽಕಾರ ಸ್ಪೃಹೆಯನ್ನು ಬಿಡಬಹುದಾಗಿತ್ತು. ಅಜ್ಞಾನಿಗಳಿಗೇ ಮೂರ್ತಿಯ ಸೊಗಸು ಕಾಣುವಾಗ ಇನ್ನು ಜ್ಞಾನಿಗಳಿಗೆ ಏನು ಹೇಳಬೇಕು!

ಪ್ರತಿಮಾಸು ಅಪ್ರಬುದ್ಧಾನಾಂ

ಜ್ಞಾನದ ಝಳಕು ತಟ್ಟದ ಶ್ರೀ ಸಾಮಾನ್ಯರಿಗೇ "ಮೂರ್ತಿಗಳಲ್ಲಿ" ಕುತೂಹಲ ಏರುವಾಗ ಜ್ಞಾನಿಗಳಿಗೆ ಕೇಳಬೇಕಾಗಿಯೇ ಇಲ್ಲ! ಎಂಬ ಭಾವವನ್ನು ರಾಮಾನುಜರ ಪರಮಾಚಾರ್ಯರಾದ ಯಾಮುನ ಮುನಿಗಳಿಗೂ ನೀನೇ ಕರುಣಿಸಿದೆಯಲ್ಲವೇ?

ಸರ್ವತ್ರ ಸಮದರ್ಶಿನಾಮ್

ಎಲ್ಲಿಲ್ಲ ನೀನು? ಎಲ್ಲದರಿಂದಲೂ ತುಂಬಿಯೇ ನೀನಿರುವಾಗ, ರೂಪಗುಣಗಳು ಹೇಗೆ ಬಿಟ್ಟಾವು? ಅವರವರ ಉಪಾಸನಾದೃಷ್ಟಿಯಲ್ಲಿ "ಸ್ವರೂಪಮಾತ್ರ" ಅವರಿಗೆ ವಿಷಯವಾಗಲು ಅಡ್ಡಿಯಿಲ್ಲ. ಆದರೆ, ದಿವ್ಯರೂಪ, ದಿವ್ಯಮಂಗಳ ವಿಗ್ರಹವಿಲ್ಲವೇ ಇಲ್ಲ ಎಂಬ ನಿಷೇಧವೂ ಬೇಡ. ಕೇವಲ ಸ್ವರೂಪೋಪಾಸನೆಯ ಖಂಡನವೂ ಬೇಡ. ಆದರೆ ನನಗೀಗ ಬೇಕಿರುವುದು ಸ್ವರೂಪ ಗರ್ಭ ಪಾವನನೂ ದಿವ್ಯಸುಂದರನೂ ಆದ ನಿನ್ನ ಸಂಪೂರ್ಣ ಸಮಗ್ರ ಸೇವೆ. ಅದೂ ಈ ಕಣ್ಣಾರ! ಈ ದೇಹದಿಂದಲೇ!

ಏತ್ತೇನ್ = ನಿನ್ನ ಸಿರಿಚಿತ್ತಕ್ಕೆ ಅನುಕೂಲವಾಗುವಂತೆ ನಾನೂ ನಿನ್ನಾಽಽರೂಪದಂತೆಯೇ ಅರ್ಹನಾದೆ. ನನ್ನಿಂದ ನಾನು ಅರ್ಹತೆ ಪಡೆದಿದ್ದರೆ ಈ ರಂಪವನ್ನೆಲ್ಲಾ ಹಚ್ಚಿಕೊಳ್ಳಬೇಕಾಗಿಯೇ ಇರಲಿಲ್ಲ. ನೀನೇ ಕುಣಿಸುತ್ತಿರುವ ಸೂತ್ರದ ಗೊಂಬೆ ಇದೋ ನಾನು? ಆದರೂ ನೀನು ಚೈತನ್ಯ ಶಕ್ತಿಯನ್ನೂ ನೀಡಿರುವುದರಿಂದ, ಅದರ ಕಾರ್ಯವಾಗಿ ಈ ಆಶೆ! ಬೇರೆಯವರಂತೆ ಸಾಧನವಲ್ಲ. ಇಂತಹ ಶರಣರ ಬಾಯ್ ಮೂಲಕವೇ ಶರಣಾಗತಿಯ ಜೀವಾಳಗಳನ್ನು ಕೇಳಬೇಕೆಂಬ ಬಯಕೆಯಿಂದಲೇ ಗೀತಾ ಕೃಷ್ಣನೇ ತಿಮ್ಮಪ್ಪನಾಗಿ ಈ ಕಲಿಯುಗಕ್ಕೆ ಬಂದಿರುವುದು

ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಃ ತತ್ತ್ವದರ್ಶಿನಃ

ಮುಂದೆ ಕಲಿಯುಗದಲ್ಲಿ, ತತ್ವತಃ ನನ್ನಿಂದಲೇ ಸಂದೃಷ್ಟರಾದ, ನನಗೆ ಸಂದರ್ಶನ ನೀಡುವವರು ಹುಟ್ಟಿಕೊಳ್ಳುತ್ತಾರೆ. ಅಂಥ ಶರಣ ಸಂತರಿಂದಲೇ ನಾನೂ ಹೇಳದಿರುವ ಅನೇಕ, ವೇದವೇದಾಂತ ವಿಜ್ಞಾನ ಭಾವ ಕ್ರಿಯಾ ರಹಸ್ಯಗಳು ಮಾನವ ಕುಲಕ್ಕೇ, ಅರ್ಜುನಾ! ಸಿಗುವುವೈಯ್ಯ. ಎಂದಲ್ಲವೋ ನೀನು ಆ ದ್ವಾಪರಾಂತ್ಯದಲ್ಲಿ ಹೇಳಿದ್ದು.

ಈ ಅರ್ಹತೆ ನಿಮಗುಂಟೆಂದು ಹೇಗೆ ತಿಳಿದುಕೊಂಡಿರಿ? ಇದು ತಿಮ್ಮಪ್ಪನ ಪ್ರಶ್ನೆ. ಇಪ್ಪಿರಪ್ಪೇ ಇಡರ್ ಉತ್ತನನ್ = ಈ ಜನ್ಮದಲ್ಲೇ ನನ್ನ ಜೀವಾತ್ಮ ಸ್ವರೂಪ ವಿಕಾಸಕ್ಕೆ ವಿರೋಧಿಗಳೇನೆಂಬುದನ್ನೂ, ಅಭಿರುಚಿಯೇ ಬಾರದಿರುವಂತೆ ತಡೆಯಬಹುದಾದವುಗಳನ್ನೂ, ಆಶ್ರಯಣ ವಿರೋಧಿಯನ್ನೂ ಉಪಾಯ ವಿರೋಧಿಯನ್ನೂ ಪ್ರಾಪ್ಯ ಕೈಂಕರ್ಯವಿರೋಧಿಗಳೇನೆಂಬುದನ್ನೂ ಶಾಸ್ತ್ರ ಓದದೆಯೇ ನಿನ್ನ ನಿಷ್ಕಾರಣ ಕರುಣೆಯೊಂದರಿಂದಲೇ ಅರಿತುಕೊಂಡೆ. ತನಗಿರುವ ಸಮಸ್ಯೆಗಳನ್ನೇ ತಿಳಿದುಕೊಳ್ಳದವ ಖಂಡಿತ ಮೇಲೇರಲಾರ. ಎಮ್ ಪೆರುಮಾನ್ = ಇವೆಲ್ಲಾ ನಿನ್ನ ಪರಮೋಚ್ಚ ಕೇಂದ್ರದಿಂದ ನೀನೇ ರವಾನಿಸಿದ ಪ್ರೇಮಳ ಕೃಪಾರಶ್ಮಿಯಿಂದಲೇ! ನೀನೇ ಪರಮ ಆತ್ಮ. ನೀನೇ ಮಹೋಪಕಾರಕ ಈ ದಾಸನ ಬಗೆಗೆ!

ಈ ಸ್ಥಳವೇ ನಿಮಗೇಕೆ ರುಚಿಸಿತು? ಕೋಲ್‌ತೇನ್ ಕಲ್‌ತೇನ್! ಈ ಹಾಡಿನಲ್ಲೂ ಮುಂದಿನ ಹಾಡಿನಲ್ಲೂ ಇವೆರಡರ ಪರಿಚಯ ಮಾಡಿಸುತ್ತಾರೆ, ಪರಿಸರ ಪ್ರಿಯರಾದ ಈ ಆಳ್ವಾರ್ ಶರಣರು. ಇಲ್ಲಿನ ವನಶ್ರೀ! ಇಲ್ಲಿನ ಶಿಲಾಶ್ರೀ! ನನ್ನ ಮನವನ್ನು ಸೂರೆಗೊಂಡಿತಯ್ಯ! ಗಿಡಮರಗಳ ಕೊಂಬೆಗಳಿಗೇ ಕಿರಿಜೇನು ಗೂಡುಕಟ್ಟಿ ಅರಣ್ಯದ ನಾನಾ ಕುಸುಮಗಳ ರಸಕುಡಿದು ಕಕ್ಕುವುದೇ ಮಧು. ಗೂಡುಗಳಲ್ಲಿ ತುಂಬಿ ಹೊರಕ್ಕೆ ಹರಿದು = ಪಾಯ್‌ನ್ದು ಒಳುಹುಮ್ ಪ್ರವಾಹವಾಗಿದೋ ಹರಿಯುತ್ತಿರುವ ದೃಶ್ಯ! ಇದು ಕೋಲ್ ತೇನ್. ದೊಡ್ಡ ದೊಡ್ಡ ಎತ್ತರದ ಬಂಡೆ - ಕಲ್‌ಮಂಟಿ - ಗಳಲ್ಲಿ ಕಟ್ಟುವ ಗೂಡೇ ಭಾರಿ ಹೆಚ್ಚೇನಿನದು. ಇಷ್ಟೆಲ್ಲಾ ತಿಳಿದಾಡುವ ನಿಮಗೆ ನನ್ನಿಂದೇನು? ಎನ್ನ ಬೇಡಾ! ಅತ್ತೇನ್ = ಪುನರ್‌ಜನ್ಮ ಸಹಿಸಲಾರೆ! ವನ್ದು = ನೀನೇ ಇಲ್ಲಿಗೆ ಸೇರಿಸಲಾಗಿ ಬಂದೆ. ಅಡೈನ್ದೇನ್ = ನಿನಗೇ ಶರಣಾದೆ. ಅಡಿಯೇನೈ ಆಳ್ ಕೊಣ್ಡರುಳೇ !

ತಮಿಳ್ ತಿರಳ್ ೧-೯-೯

ಪತ್ತೇಲ್ ಒನ್ನುಮಿಲೇನ್, ಪಾವಮೇ ಶೆಯ್‌ದು ಪಾವಿಯಾನೇನ್ ಮತ್ತೇಲ್ ಒನ್ನರಿಯೇನ್ ಮಾಯನೇ ಎಜ್ಗಳ್ ಮಾದವನೇ
ಕಲ್ ತೇನ್ ಪಾಯ್‌ನ್ದೊಳುಹುಮ್ ಕಮಲ ಚ್ಚುನೈ ವೇಜ್ಗಡವಾ ಅತ್ತೆನ್ ವನ್ದಡೈನ್ದೇನ್ ಅಡಿಯೇನೈ ಆಳ್ ಕೊಣ್ಡರುಳೇ

ಕನ್ನಡ ನೆರಳ್

ಏನೂ ಸುಕೃತವು ಅಲಲಾ! ಒಂದೂ ಇಲ್ಲವನ್ ಪಾಪಮೇ ಗೈದು ಪಾಪಿಯೆ ಆದೆನುನಾನ್
ಏನೂ ಸಾಧನ ಮತ್ತೊಂದರಿಯದವನ್ ಮಾಯಿಗನೇ! ಎನ್ ಮಾಧವನೇ!
ಜೇನ್‌ಕಲ್ ಮಂಟಿಯಿಂ ಸುರಿದೂ ಹರಿದೂ ತಂಗಿಹ ಪದ್ಮಾssಕರ ತುಂಬಿಹ ವೇಂಕಟದವನೇ!
ನಿನ್ ಒಳೆ ದೃಢಚಿತ್ತನು ಬಂದಡೆದೆನಿದೋ ಅಡಿದಾಸನಂ ಆಳ್‌ಕೊಂಡರುಳೋ

ನಮಗೆಲ್ಲರಿಗೂ ಚೈತನ್ಯ ಶಕ್ತಿ ದೈವದತ್ತ. ಅಂತಹ ಜ್ಞಾನಕ್ಕೇನು ಪ್ರಯೋಜನ? ಯಾವ ದೈವದಿಂದ ನಾವು ಅಗಿದ್ದೇವೆಯೋ ಅಂತಹ ಸರ್ವಜ್ಞ ಸರ್ವ ಶಕ್ತ ಸರ್ವಬಲಿಷ್ಠ ಸರ್ವೈಶ್ವರ್ಯ ಸಂಪನ್ನ ಸರ್ವವೀರ ಸರ್ವತೇಜಸ್ವಿ ಭಗವಂತನಿಗೂ ನಮಗೂ ಇರುವ ಸಂಬಂಧ ಜ್ಞಾನವೇ ಚೈತನ್ಯಫಲ. ಜಡವಸ್ತುಗಳೂ ದೈವಸೃಷ್ಟವಾದರೂ ಅವುಗಳಿಗೆ ಈ ನೆಂಟಸ್ತನ ಭಾವಿಸುವ ಪೂರ್ಣಜ್ಞಾನ ಭಾಗ್ಯವಿಲ್ಲ. ಇಂತಹ ಯೋಗ್ಯತಾ ಸಂಪನ್ನನಾಗಿದ್ದೂ ನಾನಾಗಿಯೇ ಆ ಸಂಬಂಧ ಜ್ಞಪ್ತಿಯನ್ನು ಬೇಡವೆಂದು ತುಂಡರಿಸಿಕೊಂಡರೆ ದೇವರನ್ನು ಹೊಂದುವ ಬಗೆಯಾದರೂ ಹೇಗೆ? ಜೀವ ದೇವ ಇವೆರಡೂ ಭಾವಾತ್ಮಕ ವಸ್ತುಗಳು. ಸರ್ವದಾ ಸರ್ವತ್ರ ಸರ್ವಧಾ ಸರ್ವೇಶ್ವರ ಭಾವದಿಂದಲೂ "ಸತ್ತೆ"ಯಿಂದಲೂ ಯದ್ಯಪಿ ಕೂಡಿಯೇ ಇದ್ದಾನೆ. ಅದರ ಸಂವೇದನೆ Response ನಮಗಿಲ್ಲದಿದ್ದರೆ ಅದನ್ನೇ ಇಲ್ಲಿ ಆಳ್ವಾರ್ ಪ್ರಸ್ತಾಪಿಸಿರುವುದು. ನಮ್ಮ ಎರಡನೆಯ ವತಿಯಿಂದ ಅವನಿಗೆ ಒಪ್ಪಿ ಮಣಿದರೇನೇ ನಮ್ಮೀರ್ವರಿಗೂ ಭಾವಾತ್ಮಕ ಸಂಬಂಧ ಕೆಲಸಮಾಡುವುದು. Ring ಆದರೂ ನಾವು ದೂರವಾಣಿಯನ್ನು ಎತ್ತದಿದ್ದರೆ ಮಾತಾಡುವವರಿಗೂ ನಮಗೂ ಏನು ಬಂತು? ವ್ಯರ್ಥವಷ್ಟೆ. ಬ್ರಹ್ಮಜ್ಞಾನ ಸಂಬಂಧವೇ ಮಾನವಾತ್ಮರಿಗಾದರೂ ಮುಖ್ಯ. ದೇವರು ಎಲ್ಲೆಲ್ಲೂ ಎಂದೂ ಇರುವಾಗ ಈ ಶರಣರದೆಲ್ಲಾ ಅಪ್ರಸ್ತುತ ಎಂಬ ಬಹುತೇಕರ ಅದರಲ್ಲೂ, ದಾರ್ಶನಿಕ ಶಿಕ್ಷಿತರ ನಿಲುವೂ ಆಗಿದೆ. ಜಡ ವಿಶ್ಲೇಷಣೆ ಯದ್ಯಪಿ ಬೆಳೆದಿರುವುದೂ ಬೆಳೆಯುತ್ತಿರುವುದೂ ಸಂತೋಷವೇ! ಅಂತೆಯೇ ಚೈತನ್ಯ, ಭಾವ, ಪ್ರೇಮ, ಸಂಪೂರ್ಣ ಶರಣಾಗತಿಯ ವಿಜ್ಞಾನವೂ ಈ ಸಮಾನತೆಯ ಯುಗದಲ್ಲಿ ಅನಿವಾರ್ಯ. ಈ ಕ್ಷೇತ್ರಕ್ಕೆ ನಿಮ್ಮದೇವರೇನೂ ಬೇಕಿಲ್ಲ. ಎನ್ನುವುದು ಸಮಗ್ರ ಜ್ಞಾನವಲ್ಲ. ಯಾವೊಂದರಲ್ಲೂ ಪಕ್ಷಭಾವನೆ ಸಲ್ಲ.

"ಪತ್ತು ಇಲೇನ್, ಪತ್ತು ಒನ್ನಿಲೇನ್, ಪತ್ತು ಒನ್ನುಮ್ ಇಲೇನ್". ನನ್ನ ಬಳಿ ಸುಕೃತವಿಲ್ಲ. ಒಂದು ಸುಕೃತವಿಲ್ಲ. ಒಂದಾದರೂ ಸುಕೃತವಿಲ್ಲ. ವಾಸ್ತವಿಕವಾದ ವಿನಮ್ರ ಭಾಷೆಯ ಸುಂದರಧಾಟಿಯಿದು. ಶರಣ ವಾಙ್ಮಯದಲ್ಲಿ ಶೂನ್ಯ ಸಂಪಾದನೆ ಎನ್ನುವುದನ್ನು ವಿಶ್ವದ ಎಲ್ಲಾ ಶರಣರೂ ಏಕೋ ಸ್ಥಾಯಿಭಾವದಿಂದ ದಿವ್ಯವ್ಯಥೆಯಿಂದಾಡುವ ಶೈಲಿ. ಇದೇ ಆ ಕಿಂಚನ್ಯವೆಂಬುದು.

ನ ಧರ್ಮನಿಷ್ಠೋಽಸ್ಮಿ, ನಚಾऽऽತ್ಮವೇದೀ ನ ಭಕ್ತಿಮಾನ್ ತ್ವಚ್ಚರಣಾರವಿಂದೇ

ಈ ಮೂರೂ "ಇಲ್ಲ"ವೆಂಬ ಸ್ತರಗಳನ್ನು ಯಾಮುನಮುನಿಗಳು, ಕರ್ಮ, ಜ್ಞಾನ, ಭಕ್ತಿ, ನನಗೆ ಸ್ವತಃ ಇಲ್ಲವೆಂದು ಈ ದ್ರಾವಿಡವನ್ನು ಸಂಸ್ಕೃತೀಕರಿಸಿದ್ದಾರೆ. ಇದೆಲ್ಲದರ ಸಾರವೇ **"ಅಕಿಂಚನಃ"**.

ಏಲ್ = ಅಲಲಾ ನೀನೂ ಕೈ ಬಿಡುವಂತೆ ನಾನೇ ಮಾಡಿಕೊಂಡಿರುವಾಗ ನಿನ್ನ ಕಟಾಕ್ಷರಶ್ಮಿ ಎಲ್ಲೆಲ್ಲೂ ಹರಿಯುತ್ತಿದ್ದರೂ ನೀನೇನೂ ಯಾವ ಚೇತನರನ್ನೂ ಇಷ್ಟವಿಲ್ಲದವರನ್ನೂ ಸರ್ವಾಧಿಕಾರಿಯಾಗಿದ್ದೂ ಸರ್ವಾಧಿಕಾರಿ "ಷಾಹಿ"ಯನ್ನು ತಡೆಯುವ "ಸಂಯಮಿ"ಯೂ ಆಗಿದ್ದೀಯೆ. ಅವಿನಯ ನಿನ್ನಲ್ಲಿ ಸ್ವಲ್ಪವೂ ಇಲ್ಲ. ನೀನೇ ಸರ್ವಶಕ್ತನಾಗಿದ್ದೂ ವಿನಯ ಸಮ್ರಾಟ್! ಪೂರಾ ಪ್ರಜಾಪ್ರಭುತ್ವಕಾರಿ ಈತನೇ. ನಾವೆಲ್ಲಾ "ಜನತಂತ್ರ". "ಗಣತಂತ್ರ"ವಾದಿಗಳಷ್ಟೇ! ಸಮಾನತೆಯ, ಜಾತ್ಯತೀತತೆ ಮುಂತಾದವುಗಳ ರಮ್ಯ-ಮುತ್ತುಗಳನ್ನು ಬಾಯಿಂದುದಿರಿಸುವ ನಾಯಕಶಿಖಾಮಣಿಗಳು! "ಏಲ್" ಎಂಬುದರ ಭಾವಲಹರಿಯಿದು.

ನನ್ನಿಂದಾದುದಿಷ್ಟೆ. ಪಾವಮೇ ಶೆಯ್‌ದು ಪಾವಿಯಾನೇನ್ = ಕೇವಲ ಪಾಪಗಳನ್ನೇ ಗೈದು ಗೈದು! ನಡು ನಡುವೆ ಒಂದಾದರೂ ಸತ್ಯವಾದ ಸಂವೇದನಾತ್ಮಕವಾದ ಪ್ರಾಮಾಣಿಕ ಸತ್ಕಾರ್ಯವಿಲ್ಲ. ಪರಾರ್ಥ, ಪರಮಾರ್ಥ ಎಲ್ಲವೂ ನನ್ನ ಸ್ವಾರ್ಥದ ನೆರವಿಗಿದ್ದರಷ್ಟೇ! ಹೀಗೆ ನಿನ್ನ-ನನ್ನ ಸಂಬಂಧವನ್ನು ನಾನೇ ಕಡಿದುಕೊಂಡಾಗ ನಿಷಿದ್ಧ ವಿಚಾರ ಆಚಾರಗಳೇ ನನ್ನನ್ನು ಮುತ್ತಿಗೆ ಹಾಕಿದವಪ್ಪಾ! ನಾನು, ವಿಶ್ವದ ಇವರೆಲ್ಲಾ, ಇವೆಲ್ಲಾ ಜ್ಞಾನ, ಆನಂದ ಲಕ್ಷಣ ಸಂಪನ್ನಗಳೆಂಬುದನ್ನೇ ಮರೆಸಿಬಿಟ್ಟವು. ಈ ಆಕ್ರಮಣವನ್ನು ನಾನು ಪರಿಣಾಮ ಕಾಲದಲ್ಲಿ ತಡೆಯಲಾರದೆ ಹೋದೆನು. ಶುಭ ಫಲಮಾತ್ರ ನನಗೆ ಬೇಕು. ಆದರೆ ಮಾಡುವುದೆಲ್ಲಾ, ಅಕೃತ್ಯ.

ಪುಣ್ಯಸ್ಯ ಫಲಮಿಚ್ಛನ್ತಿ, ಪಾಪಂ ಕುರ್ವನ್ತಿ ಮಾನವಾಃ| ನ ಪಾಪಫಲಮಿಚ್ಛನ್ತಿ, ನ ತ್ಯಜನ್ತಿ ಚ ಪಾತಕಮ್‌||

ಮತ್ತು ಏಲ್ ಒನ್ನು ಅರಿಯೇನ್ = ನನ್ನ ಅಡ್ರೆಸ್ ನನಗೇ ಮರೆತು ಹೋದಾಗ "ಪಾಪಿ" ಎಂಬ ವಿಳಾಸಕ್ಕೇ ಪಾತ್ರನಾಗಿ ಬಿಟ್ಟೆ! ಹೋಗಲಿ ನಿನ್ನನ್ನೂ ಸೇರುವ ಹಾದಿಯಾದರೂ ಗೊತ್ತೇ? ಇಲ್ಲಿನ "ಒನ್ನು ಅರಿಯೇನ್" ಎಂದರೆ, ನಿನ್ನನ್ನು ಸೇರುವ ಸಾಧನದ ಬಗ್ಗೆ ಅರಿವಿಲ್ಲ ಎಂಬುದೇ. ಹಿಂದಿನದು "ಸ್ವಜ್ಞಾನವಿಲ್ಲ" ಎಂಬುದಾದರೆ ಇಲ್ಲಿನದು "ಉಪಾಯಜ್ಞಾನವೂ" ಇಲ್ಲ, ಎಂದೇ ಅರ್ಥ. ಬರಿ ಪಾಪಗಳ ಮೂಟೆಯೇ ನಾನು ನನ್ನಿಂದ ಜಗತ್ತಿನೆಲ್ಲರೂ ಪಾಪದ ಚಿಂದಿ ಬಟ್ಟೆಗಳನ್ನು ಹೇರಳವಾಗಿ ಪಡೆದುಕೊಳ್ಳಬಹುದು. "ಅಹಮಸ್ಮಿ ಅಪರಾಧಾನಾಂ ಆಲಯಃ" ಇದು ಶರಣರ ಆರ್ಷಭಾಷೆ. ಆಚಾರ್ಯ ರಾಮಾನುಜರ ಪ್ರಯೋಗದಲ್ಲಿ

ಅಜ್ಞಾನ ಜನ್ಮಗೃಹಂ ಆತ್ಮಗುಣೈರ್ ವಿಮುಕ್ತಂ ಆಜ್ಞಾತಿಲಂಘನಪರಂ ಯದುಶೈಲ ನಾಥ!
ಮಿಥ್ಯಾಪ್ರಪನ್ನಮಪಿ ಮಾಂ ಅವಲೋಕಯ ತ್ವಂ ಲಕ್ಷ್ಮೀಂ ಕ್ಷಮಾಮಪಿ, ಗುರೂನ್ ಅವಲೋಕ್ಯ ಪೂರ್ವಾನ್

ಇಂತಹವರನ್ನು ಹಾಗೆ ಅವರಿಲ್ಲದಿದ್ದೂ ಹಾಗೆಂದುಕೊಳ್ಳುವವರನ್ನು ರಕ್ಷಿಸಲು ಬೇಕಿರುವ ಮಾಯನೇ = ಆಶ್ಚರ್ಯಕಾರಿ ಶಕ್ತಿಯುಕ್ತನೇ! ತಪ್ಪಿರುವುದು ಸ್ಪಷ್ಟವಾಗಿ ಕಾಣುತ್ತಿರುವಾಗ ಹೇಗೆ ಸರ್ವಸಾಕ್ಷೀ ಸರ್ವಜ್ಞ ಸರ್ವವಿತ್ ರಕ್ಷಿಸುವನು?

ಎಙ್ಗಳ್ ಮಾಧವನೇ = ನಮ್ಮ ಭಾಗಕ್ಕೆ ಮನ್ನಿಸುವಂತೆ ಶಿಫಾರಸ್ಸು ಮಾಡುವ ನಿನಗೂ "ಮಾ" ನಿಗ್ರಹಬೇಡವೆಂದು, ನಾನಾ ಚಾತುರ್ಯಗಳಿಂದ ನಿನ್ನ ಹಿತೈಷಿಮನಃ ಕಾಲುಷ್ಯವನ್ನು ತೀರಿಸುವ "ಮಾ" ರಮಾ ಮಂಗಳದೇವತೆ, ನಮ್ಮೆಲ್ಲರ ಜಗಜ್ಜನನೀ! ಅವಳಿಗೆ "ಧವ" ವಲ್ಲಭನಾದವನೇ! ಅವಳ ಮೂಲಕ ತಪ್ಪಿತಸ್ಥರಾಗಿದ್ದ ನಮ್ಮಲ್ಲಿಯೂ ವಲ್ಲಭನಾಗುವವನೇ! "ಕೋಲಮಲರ್ ಪಾವೈಕ್ಕು ಎನ್ ಬಾಹಿಯ ಎನ್ ಅನ್ಬೇ ಓ" ಈ ಪ್ರಧಾನ ಆಳ್ವಾರ್ ಪ್ರಪನ್ನಜನಕೂಟಸ್ಥರಾದ ಶಠಕೋಪರ, ಈ ವಾಙ್ಮಯಕ್ಕೆ ಈ ಕಲಿಯನ್ "ಅಂಗ" ರೂಪವಾಗಿ ಕೊಡುವ ವಿವರಣೆ ಇಲ್ಲಿ ಸ್ಪಷ್ಟ. ನೀನೂ ಶ್ರಿಯಃ ಪತಿಯಾಗಿಯೇ ಸರ್ವೇಶ್ವರನಾಗುವುದೂ ಸಹ. ಆಕೆ ದಯೆ! ನೀನು ಧರ್ಮ! ದಯೆಯಿಲ್ಲದ ಧರ್ಮ ಯಾವುದಯ್ಯಾ? "ಶ್ರದ್ಧಯಾ ದೇವಃ ದೇವತ್ವಮಶ್ನುತೇ" ಅವಳಿಲ್ಲದೆ ಇದ್ದರೆ ನಾವೂ ಅನಾಥರೇ! ನೀನೂ ಅನಾಥನೇ! ಜೀವ - ಈಶ್ವರರ ನಡುವಿನ ವಾತ್ಸಲ್ಯದ ಸ್ನೇಹತಂತು "ಶ್ರೀ". ಭರತಖಂಡದ ಎಲ್ಲಾ ಪ್ರಜೆಗಳಿಗೂ ಈ "ಶ್ರೀ" ಸೇರಿಯೇ ಇದೆ. ಅಖಿಲ ಜಗನ್ಮಾತೆಯೂ "ಶ್ರೀ".

ಕಲ್ ತೇನ್ = ಬೆಟ್ಟದ ಎತ್ತರವಾದ ಕಲ್ಲು ಬಂಡೆಗಳಲ್ಲಿ ಹೆಜ್ಜೇನುಗಳು ಕಟ್ಟುವ ಭಾರಿ ಭಾರಿ ಜೇನುಗೂಡುಗಳು! "ಜೇನ್ ಕಲ್‌ಮಂಟಿ" ಎಂದೇ ಜಾನಪದ ಭಾಷೆ! ಪಾಯ್‌ನ್ದು = ಯಾರೂ ಅವನ್ನು ತೆಗೆಯಲಾರದೆ, ಗೂಡು ಒಡೆದು ಜೇನೆಲ್ಲಾ ಹೇರಳವಾಗಿ ಪ್ರವಹಿಸಿ, ಒಳುಹುಮ್ = ಆ ಮಧುವೇಣೆಯೆ, ಕಮಲಮ್ ಶುನೈ = ತಾವರೆಗೆರೆಗಳೇ, ವೇಙ್ಗಡವಾ = ತುಂಬಿ, ನಿನ್ನ ಗಿರಿಯಲ್ಲೇ ಹರಿಯುತ್ತಿರುವುವು = ಜೇನ್ ಕೋಡಿಗಳೇ ಎಲ್ಲೆಲ್ಲೂ. "ಸರ್ವಗನ್ಧಃ ಸರ್ವರಸಃ" ತಿಮ್ಮಪ್ಪನಿಗೆ ಅನ್ವಯಿಸುವಂತೆ, ಅವನ ಗಿರಿಗೂ ಅನ್ವಯಿಸುವುವು. ಸಿಹಿಯಾದ ಮಧು ಮಿಶ್ರ ನೀರಿನಿಂದಲೂ ಬೆಳೆದ ಕಮಲಗಳಂತೆ, ಅಪರಾಧಿ ಜನಗಳ ಪಾಪದ ಕಹಿಯೆಲ್ಲವನ್ನೂ, ಸಿಹಿಗೈದ ಮೇಲೆ, ವಾತ್ಸಲ್ಯ ಗುಣದ ಭಾವವಿದು! ಅಶ್ರಿತರ ಕೊಳಕೂ ಓ ಶ್ರೀನಿವಾಸಾ! ನಿನಗೆ ಭೋಗ್ಯವೇ ಆಯಿತಲ್ಲವೆ! "ಕುನ್ನನ್ಯೆಯಕುತ್ತಂ ಶೆಯ್ಯಿನುಂ ಗುಣಂ ಕೊಳ್ಳುಮ್" ಪ್ರಕೃತಾರ್ಥವಾದ ಶರಣಾಗತರ ರಕ್ಷಣೆಗೆ ತಕ್ಕ ಗಿರಿನಿಲಯನೂ, ಆನಂದ ನಿಲಯ ವಿಮಾನ ಮಧ್ಯಸ್ಥನೂ ಆಗಿದ್ದೀಯೆ! ಶರಣರ ಸಾಹಿತ್ಯದಲ್ಲಿ ಎಷ್ಟೊಂದು, ಹೇಳದ ಧ್ವನಿ ಭಾವಗಳು ಅನುರಣಿಸುತ್ತಲೇ ಇರುತ್ತವೆ. ಇದು ಅಂತೆಯೇ "ದಿವ್ಯ ಪ್ರಬನ್ಧ!"

ದಾಸನನ್ನೂ ಈಗ ಕೈಂಕರ್ಯ ರಸ ಮಧುಕರನನ್ನಾಗಿಸು. ಈ ವ್ಯವಸಾಯಾತ್ಮಿಕಾ ಬುದ್ಧಿಯೂ ನಿನ್ನಿಂದಲೇ ಬಂದುದು. ನಿನ್ನ ಸೇವೆಯೊಂದರಲ್ಲೇ ಪುರುಷಾರ್ಥ ಬುದ್ಧಿಯಿಂದ ಸ್ಥಿರನಾಗಿರುವ ನನ್ನನ್ನು ಅತ್ತೇನ್ = ಒಂದು ತೀರ್ಮಾನಕ್ಕೆ ನಿಲ್ಲಿಸಿ ಶರಣಾಗತನನ್ನಾಗಿಸಿದೆ. ತತ್‌ಫಲವಾಗಿ ದಾಸನೂ ಆಶ್ರಯಿಸುವಂತಾಯಿತು. ಇಂತಹ ಅಡಿಯೇನೈ = ದಾಸ್ಯರಸವನ್ನೂ ವೃದ್ಧಿ ಪಡಿಸಿರುವ ಈ ತ್ವದೇಕ ಪರತಂತ್ರನಾದ ಅಡಿಯಾಳನ್ನು, ಅಳ್ ಕೊಂಡು ಅರುಳೇ = ಆಳಾಗಿ ಸ್ವೀಕರಿಸಲೂ ಪರಿಪೂರ್ಣಕೃಪೆಗೈ! ಶ್ರೀಪುರುಷಕಾರವಾದ ಮೇಲೆ ಈಗ ಹಿಂದಿನಂತೆ, ನಾನೂ ತಪ್ಪಿಸಿಕೊಳ್ಳಲಾರೆ. ನೀನೂ ತಪ್ಪುವಂತಿಲ್ಲ. ಮನೆಮಕ್ಕಳ ಹಾಗೂ ಗಂಡನ ಉಭಯ ಕ್ಷೇಮ, ಮನೆಯ ಗೃಹಿಣಿಯಿಂದಲೇ. ಶರಣಾಗತಿ ಮಂತ್ರ ರತ್ನವೆನಿಸಿದ, ದ್ವಯೋಪನಿಷತ್ತಿನ **ಶ್ರೀಮನ್ ನಾರಾಯಣ ಚರಣೌ ಶರಣಂ ಪ್ರಪದ್ಯೇ, ಶ್ರೀಮತೇ ನಾರಾಯಣಾಯ ನಮಃ**ಈ ದ್ವಯಾರ್ಥವೇ, ಸುಂದರ ಸರಳ ಭಾಷೆಯಲ್ಲಿ ಪೂರ್ಣವಾಗಿ ಬಂದಿದೆ.

ತಮಿಳ್ ತಿರಳ್ ೧-೯-೧೦

ಕಣ್ಣಾಯ್ ಏಳ್ ಉಲಹುಕ್ಕು ಉಯಿರ್ ಆಯ ಎಜ್ಜಾರ್ ವಣ್ಣನೈ ವಿಣ್ಣೋರ್ ತಾಮ್ ಪರವುಮ್ ಪೊಳಿಲ್ ವೇಙ್ಗಡ - ವೇದಿಯನೈ
ತಿಣ್ಣಾರ್ ಮಾಡಙ್ಗಳ್ ಶೂಳ್ ತಿರುಮಜ್ಪೈಯರ್ ಕೋನ್ ಕಲಿಯನ್ ಪಣ್ಣಾರ್ ಪಾಡಲ್ ಪತ್ತುಮ್ ಪಯಿಲ್‌ವಾರ್ಕಿಲ್ಲೈ ಪಾವಙ್ಗಳೇ

ಕನ್ನಡ ನೆರಳ್

ಕಣ್ಣಾಗೇಳ್ ಲೋಕಕೂ ಉಸಿರಾಗೆನ್ ಸಲುವೊದಗಿದ ಕಾರ್‌ಬಣ್ಣನಂ
ವಿಣ್ಣವರ್ ತಾವೇ ಸೇರ್ ಉಪವನವೃತ ವೇಂಕಟದೊಳ್ ವೇದಸುವೇದ್ಯನಂ ಕುರಿತೀ
ತಿಣ್ಕೈಯೆ ತುಂಬಿದ, ಮಾಡಗಳ್ ಸುತ್ತಿಹ ಶ್ರೀಮಂಗಾಪುರಿಗರಸನ ಕಲಿಹರನಾ
"ಪಣ್" ತುಂಬಿದ ಹಾಡೀ ಹತ್ತುಂ ಕಲಿತವರ್ಗಿಲ್ಲವು ಪಾಪಗಳೇ

ಏಳು ಉಲಹುಕ್ಕುಮ್ = ಏಳು ಎಂಬಷ್ಟೇ ಸಂಖ್ಯೆಯಲ್ಲಿ ತಾತ್ಪರ್ಯವಿಲ್ಲ. ಆ ಶಬ್ದ ಎಲ್ಲಾ ಲೋಕಗಳನ್ನೂ ಹೇಳಿದಂತೆ, ಉಪಲಕ್ಷಣ, ವಿಧಯಾ ಸರ್ವ ಲೋಕಗಳಿಗೂ. ಕಣ್ಣಾಯ್ = ಕಣ್ಣಿಗೂ ಕಣ್ಣಾಗಿರುವ. ಕಣ್ಣುಗಳಲ್ಲಿ ಪ್ರತ್ಯಕ್ಷವಾಗಿ ಕಾಣುವ ಲಕ್ಷ್ಮಿಪುರಷನಿಲ್ಲದಿದ್ದರೆ ಬರೀ ಕಣ್ಣು ನೋಡದು. **"ದೇವಾನಾಂ ಚಕ್ಷುರುತ ಮಾನುಷಾಣಾಮ್" ತಚ್ಚಕ್ಷುರ್ ದೇವಹಿತಮ್** ಆತ್ಮದ ಇರುವಿಕೆಗೆ ಬೇಕಾದ, ಉಯಿರ್ ಅಯ್ = ಪ್ರಾಣಕ್ಕೂ ಪ್ರಾಣನಾಗಿರುವ, ಎಮ್ = ನಮ್ಮಂತಹವರ ಜತೆ ಸೇರಿ ತಾನೂ ಅನುಭವಿಸಿ! ನಮ್ಮನ್ನೂ ಬಳಿಕ ಅನುಭವಿಸುವಂತೆಸಗಲು ಬೇಕಾದ, ಕಾರ್‌ವಣ್ಣನೈ = ಸಿಹಿನೀರ್ ತುಂಬಿದ ಕಾರ್‌ಮೋಡದ ಸ್ವಭಾವ ಬಣ್ಣ ಎಲ್ಲ ಉಳ್ಳವನಾದ, ಧ್ಯಾನ ಮಾಡುವವರ ಸರ್ವವಿಧ ಕ್ಲೇಶಶಾಂತಿಗಾಗಿ ಸ್ವಾಮಿ ಒಳಗೆ ಮಧುರನಾಗಿಯೂ ಹೊರಗೆ ನೀಲಮೇಘ ಶ್ಯಾಮನಾಗಿಯೂ ಇರುವುದು! ಅಂತಹವನನ್ನು

ಸರ್ವಲೋಕ ಚಕ್ಷು, ನೀಲಮೇಘವರ್ಣ, ಎಂದು ಆ ಸಾಮಾನ್ಯ ಆಕಾರದಿಂದ ಹೇಳಿದರೆ ನಮಗೇನೂ ಸ್ಪಷ್ಟ ಚಿತ್ರ ಕಾಣಿಸದು. ವಿಶೇಷಾssಕಾರೇಣ ಅತ ಯಾರು? ನಿರ್ಧರಿಸಿಕೊಡಿ. ವಿಣ್ಣೋರ್‌ತಾಮ್ = ಸಕಲಲೋಕದ ಭಕ್ತರಂತೆಯೇ ಪರಮಪದದ ನಿತ್ಯ, ಮುಕ್ತರೂ, ಒಂದೆಡೆಗೇ, ಪರವುಮ್ = ಹರಡಿ ಸೇರಿರುವ, ವೇಙ್ಗಡ ವೇದಿಯನೈ = "ಕುಚರೋಗಿರಿಷ್ಠಾಃ" ಎಂಬ ವಿಷ್ಣುಸೂಕ್ತದಂತೆಯೂ ಋಗ್ವೇದದ

ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛ ಸದಾನ್ವೇ ಶಿರಿಂಬಿಠಸ್ಯ ಸತ್ವಭಿಃ ತೇಭಿಸ್ತ್ವಾ ಚಾತಯಾಮಸಿ
– ಮಂಡಲ ೭, ಸೂಕ್ತ ೧೫೫, ಮಂತ್ರ ೮

ಹೇ ಅರಾಯಿ = ಹಣಕ್ಕೆ ಹುಚ್ಚರಾಗುವವರೇ! ಕಾಣೇ = ಅಂಗವಿಕಲರೇ ದೀನರೇ! ವಿಕಟೇ ಗಿರಿಂ = ವೇಂಕಟಗಿರಿಗೆ, ಗಚ್ಛ = ನಡೆಯಿರಲ್ಲಾ ಸದಾಽನ್ಯೇ = ಅಲ್ಲಿ ಅಖಂಡವಾಗಿ ಧ್ಯಾನಿಸಿರಿ, ಶಿರಿಂಬಿಠಸ್ಯ = ಶ್ರೀ ಮಹಾಲಕ್ಷ್ಮಿಗೆ ಪೀಠಸ್ಥಾನೀಯವಾಗಿರುವ, ಅಲ್ಲಿನ, ಸತ್ವಭಿಃ = ಪರಮ ಸಾತ್ವಿಕ ಕಲ್ಯಾಣಮಯವಾದ, ತೇಭಿಃ = ಎಣೆಸಲಸಾಧ್ಯವಾದ ಅಂತಂತಹ ಅನಿರ್ವಚನೀಯವಾದ, ದಯಾ ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿ ಗುಣಗಳಿಂದ, ತ್ವಾ ಚಾತಯಾಮಸಿ = ನಿಮ್ಮ ಪಾಪಗಳನ್ನು ಝಾಡಿಸಿ ಸುಟ್ಟು, ನಿಮಗೆ ಪರಮಗತಿ ಈಯುವುದು ವೆಂಕಟಾಚಲ.

ಗಿರಿಯೂ ವೇದ ಪ್ರತಿಪಾದ್ಯ. ಗಿರಿಷ್ಠನೂ ವೇದವೇದ್ಯ. ಇಂತಹವನನ್ನೇ ಕುರಿತ ದಶಕವಿದು. ಇಲ್ಲಿ ತಿಮ್ಮಪ್ಪನನ್ನೇ ಶರಣಾಗತಿಗೆ ತಕ್ಕ ಶರಣ್ಯನೆಂದು ತಿರುಮಂಗಾಪುರದ ಶರಣ ಕಲಿಯನ್ ಪಣ್ = ಸ್ವರ, ಸಂಗೀತ ಲಕ್ಷಣಗಳಿಂದಲೂ ಪಂಚ ಕಾವ್ಯ ಲಕ್ಷಣಗಳಿಂದಲೂ ಹಾಡಿದ್ದು. **ಎಳುತ್ತು, ಶೊಲ್, ಪೊರುಳ್, ಯಾಪ್ಪು, ಅಲಙ್ಕಾರಮ್** ಎಂಬ "ಅಞ್ಜುಕ್ಕು ಇಲಕ್ಕಿಯಮ್" ತಮಿಳ್ ವಾಙ್ಮಯ ಸಲ್ಲಕ್ಷಣಗಳಿಗೆಲ್ಲಾ ಇವರು ಹಾಡಿರುವ ೬ ಕೃತಿಗಳು ಒಳ್ಳೆ ಲಕ್ಷ್ಯವೆಂಬುದು ತಮಿಳರ ಸಂತೋಷ. ದ್ರಾವಿಡ ಭಾಷಾ ಪ್ರಭೇದವಾದುದಕ್ಕೆಲ್ಲಾ ಸಂದಕೀರ್ತಿ, ಕನ್ನಡ, ತೆಲಗು, ತುಳು, ಮಲೆಯಾಳಂ ಎಲ್ಲಕ್ಕೂ ಉಪಲಕ್ಷಕ.

ವಿಣ್ಣೋರ್‌ತಾಮ್ = ಸಕಲ ಲೋಕದ ಶರಣರಂತೆಯೇ ಪರಮಪದದ ನಿತ್ಯಸೂರಿಗಳೂ ಮುಕ್ತರೂ, ಪರವುಮ್ = ಒಂದೆಡೆ ಸೇರುವಂತಹ ತಿರುವೇಙ್ಗಡಮ್. ಈ ಆಳ್ವಾರ್ ಎಂಥವರು? ಅವರ ಊರು, ಸಾಹಿತ್ಯವೆಂಥದು? ತಿಣ್ = ದಾರ್ಢ್ಯ ಎಂದರೆ ಗಟ್ಟಿಮುಟ್ಟಾದ ರಚನೆಯುಳ್ಳದ್ದು. ಬದಲಾಯಿಸಬೇಕಾದ ಪ್ರಮೇಯಗಳೇನೂ ಇಲ್ಲ. ಸಾರ್ವಕಾಲಿಕ ಹಾಗೂ ಸಾರ್ವಜನಿಕವಾದ ಸಾಹಿತ್ಯ ನಿರ್ಮಾಪಕರು. ಇದನ್ನು, ಪಯಿಲ್‌ವಾರ್‌ಕ್ಕು = ಪಲುಕುವ ಭಕ್ತರಿಗೆ. ಪಾವಙ್ಗಳೇ ಇಲ್ಲೈ = ತಮಗೆ ಇದ್ದ ಪೂರ್ವಪಾಪ ಅಮೇಲೆ ಸ್ವಾಮಿ ಹೋಗಲಾಡಿಸಿದಂತಹ ಪ್ರಧ್ವಂಸಾಭಾವವಲ್ಲ. ಮೊಟ್ಟಮೊದಲಿಗೇ ಪಾಪಗಳೇ ಇದರ ಪಾಠಕರಿಗೆ ತಾಗವು. "ಪಾಪಪ್ರಾಗಭಾವ". ತಪ್ಪೊಪ್ಪಿಗೆ ನಿವೇದಿಸಿ ಕೊಂಡಷ್ಟೂ ದೇವರಿಗೆ, ಈ ಸಂತರ ಸಂಬಂಧಿ ಸಂಬಂಧಿಗಳಲ್ಲಿಯೂ ಕನಿಕರ ಏರುತ್ತದೆ. ಕಲಿಧರ್ಮವೇ ನಾಶವಾಗಿ ಬಿಡುತ್ತದೆ.

ತಮಿಳ್ ತಿರಳ್ ೧-೧೦-೧

ಕಣ್ಣಾರ್ ಕಡಲ್ ಶೂಳ್ ಇಲಙ್ಕೈಕ್ಕಿರೈವನ್ ತನ್ ತಿಣ್ಣಾಹಮ್ ಪಿಳಕ್ಕ ಶರಮ್ ಶಲವುಯ್‌ತ್ತಾಯ್
ವಿಣ್ಣೋರ್ ತೊಳುಮ್ ವೇಙ್ಗಡಮಾ ಮಲೈ ಮೇಯ ಅಣ್ಣಾ! ಅಡಿಯೇನಿಡರೈ ಕ್ಕಳೈಯಾಯೇ

ಕನ್ನಡ ನೆರಳ್

ಎಡೆ ತುಂಬಿಹ ಕಡಲೇಸುತ್ತಿಹ ಲಂಕಾ ನಾಯಕನವನಾ ದೃಢವೊಡಲ್ ಪಳೆ ಶರ ಹೊಗುವೊಲ್ ಏರ್ಸಿದೆ ನೀ
ವಿಣ್ಣವರ್ ತೊಳಗೇಳುವ ವೇಂಕಟ ಮಾಮಲೆನಿತ್ಯಾssವಾಸಾ! ಅಣ್ಣಾ! ಅಡಿದಾಸನನೆಡರಂ ಕಳೆದೇ ಕಡೆಹಾಯ್ಸೋ

ಈಗ ಈ ಹತ್ತನೆಯ ತಿರುಮೊಳಿಯಲ್ಲಿ ತಿಮ್ಮಪ್ಪಾ! ನೀನು ಶರಣರ ನಾನಾ ಬಗೆಯ ವಿರೋಧಿಪಾಪಗಳನ್ನು ನಿರಸನಗೈಯ್ಯುವುದನ್ನೇ ಸಹಜ ಸ್ವಭಾವವಾಗಿಯೆ ಉಳ್ಳವನು. ನಿನಗೇನೂ ಕಷ್ಟವಿಲ್ಲ. ನೀನೇ ಸರ್ವ ರಕ್ಷಕ. ಆಶ್ರಿತರಾದ ಭಕ್ತರು ಕೈ ಮುಟ್ಟಿ ಕೊಟ್ಟ ವಸ್ತುಗಳನ್ನು ಅಲ್ಲದೆ ಬೇರೊಂದರಿಂದ ಆತ್ಮಧಾರಣೆಯಿಲ್ಲದಂತೆ ಅವರ ಸೇರ್ವಡೆಯೊಂದನ್ನೇ ಬಯಸುವವನು. ಸರ್ವಸುಲಭ. "ನನ್ನ ಅಡ್ಡಿ ಆತಂಕಗಳೆಲ್ಲವನ್ನೂ ನಿವಾರಿಸು" "ಇದೇನು ಅಳ್‌ವಾರ್ರೇ! ನಿಮ್ಮ ಅಶೋತ್ತರಗಳನ್ನೆಲ್ಲಾ ಪೂರೈಸುವುದಕ್ಕಾಗಿಯೇ ಈ ಬೆಟ್ಟಕ್ಕೆ ಬಂದು ನಾನಿದೋ ನಿಂತಿರುವುದು" ಎಂದು ಸಂತೈಸುತ್ತಾ ಆ ನಿಂತಿರುವ ನಿಲುವಿನ ಭಂಗಿಯನ್ನು ವಿಶದವಾಗಿ ಮನಸ್ಸಿನಲ್ಲೂ ಸ್ಥಿರವಾಸವಿದ್ದು ತೋರುತ್ತಾನೆ.

ಕಣ್ ಅರ್ = ವಿಶಾಲವಾದ ಸಾನು ಪ್ರದೇಶದಿಂದ ತುಂಬಿರುವ. ತಿರುಪತಿಯ ಪಕ್ಷಕ್ಕೂ ಇದು ಅನ್ವಯಿಸುತ್ತದೆ. ಭೂಮಿಯ ಒಂದಕ್ಕೆ ಮೂರರಷ್ಟು ಅಗಲವಾಗಿರುವ, ಕಡಲ್ ಶೂಳ್ = ಸಾಗರದಿಂದ ಆವೃತವಾದ, ಇಲಙ್ಕೈಕ್ಕು = ಇರೈವನ್ = ಲಂಕೇಶನ. ಮತ್ತೊಂದು ಭಾವ, ಕಣ್ ಅರ್ ಕಡಲ್ = ಭೂಮಿಯ ಮೇಲೆ ಸಿಗುವ ವಸ್ತುಗಳಿಗಿಂತಲೂ, ಸಮುದ್ರದಲ್ಲಿ ಮುತ್ತು ಮೀನು ಹವಳ, ಅನಿಲ ಮುಂತಾದವು ಹೇರಳವಷ್ಟೆ. ರತ್ನಾssಕರ ಹಾಗೂ ಸಮುದ್ರವನ್ನು ತೀರದಲ್ಲಿ ಕುಳಿತು ನೋಡುತ್ತಿದ್ದರೆ, ಅಖಂಡ ತರಂಗವಿಲಾಸ, ಈಜುಗಾರರ ಕೌಶಲ. ಆ ಅನಂತತೆ, ತಣ್ಪು ನೀಡುವ ದೃಶ್ಯ! ಪ್ರಕೃತ ಲಂಕಾನಗರಿಗೆ, ಈ ಕಡಲೇ ಅಗಳು.

ತಿಣ್ = ಬ್ರಹ್ಮಾಸ್ತ್ರವನ್ನೂ ಮೊಂಡು ಮಾಡಿ ಬಿಡುವಂತಹ, ದೃಢವಾದ ಮೈಕಟ್ಟು ರಾವಣನದು, ಅಹಮ್ = ಅಂತಹ ಬಲಾಢ್ಯ ರಾವಣನ ಶರೀರವನ್ನು, ಪಿಳಕ್ಕ = ಪಳೆದೇ ಹೋಗುವಂತೆ, ಶರಮ್ = ಬಾಣಗಳನ್ನು, ಶೆಲ = ಆತನ ಬೃಹತ್ ಕಾಯಕ್ಕೆ ಸೇರುವಂತೆ

ಉಯ್ತ್ತಾಯ್ = ಪ್ರಯೋಗಿಸಿದೆ. ರಾವಣ ವಧವಾದ ಮೇಲೆ ಬ್ರಹ್ಮಾದಿಗಳಿಗೆಲ್ಲಾ ಆಶ್ರಯಣೀಯನಾಗಿರುವುದು ಇದೇ ತಿರುಮಲೆಯಲ್ಲಿ! ಹಾಗೂ ವಿಣ್ಣೋರ್ ತೊಳುಮ್ = ವೈಕುಂಠವಾಸಿಗಳಿಗೂ, ಇಲ್ಲಿನ ಸಕಲ ಭಕ್ತರಿಗೂ-ದೈವೀಸಂಪನ್ನರಾದವರಿಗೂ, ಆಸುರೀ ಸಂಪನ್ನರಾದವರಿಗೂ ದರ್ಶನ ನೀಡುತ್ತಿದ್ದೀಯೆ! ಅಣ್ಣಾ = ನಿರುಪಾಧಿಕನಾದ ಓ ದೊಡ್ಡಣ್ಣಾ! ಅಡಿಯೇನ್ = ಈ ದಾಸಭೂತನಾದವನ. ಇಡರೈ = ತ್ರಿಗುಣಾತ್ಮಕವಾದ, ನಿನ್ನಿಂದಲೇ ನಿರ್ಮಿಸಲ್ಪಟ್ಟಿರುವ ಮಾಯೆಯನ್ನು, ಕಳೆಯಾಯ್ = ನಿವೃತ್ತಿಮಾಡಿ ದಾಟಿಸಿಯೇ ಬಿಡು.

ಶ್ರೀಭಾಷ್ಯಕಾರರೂ ಇದೇ ರೀತಿ ಶರಣಾಗತಿ ಗದ್ಯದಲ್ಲಿ ಪ್ರಾರ್ಥಿಸಿರುವುದು ಈ ಕಲಿಯನ್ ಪ್ರಸಾದ.

"ದೈವೀಂ ಗುಣಮಯೀಂ ಮಾಯಾಂ - [೧]ದಾಸಭೂತಂ, "[೨][1]ಶರಣಾಗತಃ ಅಸ್ಮಿ; [2]ತವಾಸ್ಮಿ ದಾಸಃ;' ಇತಿ ವಕ್ತಾರಂ, [೩]ಮಾಂ ತಾರಯ."

"ನಿತ್ಯಕಿಙ್ಕರೋಭವಾನಿ"

ತಮಿಳ್ ತಿರಳ್ ೧-೧೦-೨

ಇಲಙ್ಕೈ ಪ್ಪದಿಕ್ಕನ್ನಿರೈಯಾಯ ಅರಕ್ಕರ್ ಕುಲಙ್ಕೆಟ್ಟವರ್ ಮಾಳ ಕೊಡಿಪ್ಪುಳ್ ತಿರಿತ್ತಾಯ್
ವಿಲಙ್ಗಲ್ ಕುಡುಮಿ ತಿರುವೇಙ್ಗಡಮ್ ಮೇಯ ಅಲಙ್ಗಲ್ ತುಳಬ ಮುಡಿಯಾಯ್ ಅರುಳಾಯೇ

ಕನ್ನಡ ನೆರಳ್

ಆ ಲಂಕಾಜನಪದಕೆಂದೂ ಅರಸರೇ ಆದಾ ರಕ್ಕಸರು ಕುಲಗೆಟ್ಟವರ್ ಮಾಣುವೊಲ್ ಗುಡಿಗರುಡನ ತಿರುಗಾಡಿಸಿದೆ!
ವೆಲಗುತ ಸರಿಯಲೆ ಬೇಕಿಹ ತುದಿ ಶಿವೆ ಶ್ರೀ ಗಿರಿಯಪ್ಪಾ! ತೊಳಸೀ ದಂಡೆಯ ಮುಡಿಯಾ! ದಯೆ ನೀಡಯ್ಯಾ!

ಹಿಂದಿನ ೧ ಹಾಗೂ ಈ ೨ ನೆಯ ಪಾಶುರದಿಂದ ತಿಮ್ಮಪ್ಪನಲ್ಲಿನ, ನಮ್ಮ ನಾನಾ ಬಗೆಯ ವಿರೋಧವನ್ನು ಪರಿಹರಿಸುವ ಸ್ವಭಾವವನ್ನು ಹೇಳಿ, ನನ್ನ ದುಃಖ ದೂರಮಾಡೆನ್ನುತ್ತಾರೆ, ಅಳ್ವಾರ್. ಅನ್ನು ಇರೈಯಾಯ್ = ಹಿಂದಿನಿಂದಲೂ ದುಷ್ಪ್ರಸರ್ಪಗಳು ಒಂದಾದ ಮೇಲೊಂದು ಬಿಡದ ಹುತ್ತದಂತಿರುವ ಲಂಕಾ ಜನಪದಕ್ಕೆ ಅವರೆಲ್ಲ ನಿರಂಕುಶ ರಾಜರಾಗಿ ಮಾಲಿ ಸುಮಾಲಿ ಮುಂತಾದವರು ಆಳಿದವರಷ್ಟೆ. ಅಂತಹ ಅರಕ್ಕರ್ ಕುಲಮ್ = ರಾಕ್ಷಸರ ಕುಳಗಳೆಲ್ಲಾ, ಕೆಟ್ಟು = ನಿರ್ಮೂಲಗೊಂಡು, ಅಂದರೆ ಪಾತಾಳಕ್ಕೆ ಹೋದರೂ ಬಿಡದೆ, ಅವರ್ ಮಾಳ = ಅಲ್ಲಿ ಅವಿತಿದ್ದ ಅವರೆಲ್ಲಾ ಸಾಯುವಂತೆ, ಕೊಡಿಪ್ಪುಳ್ = ಧ್ವಜ ಸ್ವರೂಪನಾದ ಗರುಡನನ್ನು ತಿರಿತ್ತಾಯ್ = ತಿರುತಿರುಗಿಸಿ ಓಡಾಡಿಸಿದೆ! ಹಾರಾಡಿಸಿದೆ!

'ಕೀರ್ತಿಭೂತಾಂ ಪತಾಕಾಂ ಯಃ ಲೋಕೇ ಭ್ರಾಮಯತಿ ಪ್ರಭುಃ' ಧ್ವಜವಾಗಿರುವ ತಾರ್ಕ್ಷ್ಯನಿಂದಲೇ ದೇವರಿಗೆ ಯಶಸ್ಸು. ಗರುಡನ ಹಿಂದೆ ಪ್ರಭುವಿನ ಚತುರ ಕೈವಾಡವೂ ಇದೆ. ಭೃತ್ಯ, ಭಟರ ಜಯವೇ, ರಾಜ ರಾಷ್ಟ್ರಗಳ ಜಯವಷ್ಟೆ. 'ಯಸ್ಯೈತೇ ತಸ್ಯ ತದ್‌ಧನಮ್' ಪ್ರಾಣವನ್ನೂ ಲೆಕ್ಕಿಸದೆ ಹೋರಾಡಿ ಜಯಗಳಿಸುವವರು ಯಾರಿಗೆ ಸೇರಿದ್ದಾರೋ ಅಂಥ ಅರಸರಿಗೆ ರಾಷ್ಟ್ರಕ್ಕೇ ಸೇರಿದ ಜಯ ದೊರಕಿಸಿ ಕೊಡುವರು. ವ್ಯಕ್ತಿಗಳಿಂದ ಆಗುವ ಅವರವರ ಭಾಗದ ಸಕಲ ಕರ್ತವ್ಯಗಳೂ ಸಮಾಜಕ್ಕೂ, ಸಮಾಜ ಅಂತಹ ಕರ್ತವ್ಯ ಪರಾಯಣರಾದವರಿಗೆ ಒತ್ತಾಸೆಯಾಗಿರಬೇಕೆಂಬ 'ವ್ಯಕ್ತಿ-ಸಮೂಹ' ದ್ವಂದ್ವದ ಪರಿಹಾರ ಸೂತ್ರ ಇಲ್ಲಿದೆ. ರಾಜ್ಯ-ಕೇಂದ್ರಗಳ ಸಂಬಂಧಗಳ ಅರಿವೂ ಇಲ್ಲಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿಯೂ ಈ ಸೂತ್ರವನ್ನು ನಾವು ಅರಿಯಬಹುದು. ಸಾಮಾಜಿಕ ಕ್ರಾಂತಿಕಾರಿ ಗುರುಗಳನ್ನು ಅವರವರ ಯಥಾಸ್ಥಿತಿವಾದಿಗಳಾದ ಅನುಯಾಯಿಗಳೇ ವಿಷಪ್ರಯೋಗಾದಿ ಸಂಚಿನಿಂದ ಮುಗಿಸುವ ಶನಿಕಾಟ ಉಂಟಷ್ಟೆ! ರಾಮಾನುಜರು ಸನ್ಯಾಸಿಗಳಾದುದರಿಂದ ಏಳು ಮನೆ ಭಿಕ್ಷಾಽಶನವನ್ನು ನೀರಿನಲ್ಲಿ ತೊಳೆದು, ಅದಕ್ಕೆ ಸರಿಪ್ರಮಾಣದಲ್ಲಿ ತುಳಸಿಯನ್ನು ಸೇರಿಸಿ **ಅಷ್ಟೌ ಗ್ರಾಸಾಃ ಮುನೇಃ ಭಕ್ಷ್ಯಾಃ** ಎಂಬೇ ತುತ್ತಿನಿಂದ ಆಹಾರವನ್ನು ದಿನಕ್ಕೊಮ್ಮೆ ಸೇವಿಸುತ್ತಿದ್ದರು. (೯೦ ವರ್ಷಗಳಲ್ಲಿ ರಾಮಾನುಜರ ಗರಡಿಯಲ್ಲಿ ಪಳಗಿದ, ಅವರ ಅಡಿಗೆ ಭಟ್ಟರು 'ಕಿಡಾಂಬಿಯಾಚ್ಚಾನ್' ಎನ್ನುವರು). ಭಿಕ್ಷೆಗೆ ಪರ್ಯಾಯವಾಗಿ ಮಠದಲ್ಲೇ ಅಡಿಗೆಮಾಡಿ ಭಿಕ್ಷೆ ನೀಡುತ್ತಿದ್ದರು. ಇದೇ ಪದ್ಧತಿ ಪ್ರಾಯಃ ಮುಂದುವರಿದಿದೆ.

ಅವರ ಸಮಗ್ರ ಸಂಪೂರ್ಣ ವ್ಯಕ್ತಿತ್ವದ ತುರ್ತು ಅಂದಿನ, ಅತ್ಯಂತಿಕ ನೈಷ್ಕರ್ಮ್ಯವಾದ ಹಾಗೂ ಕೇವಲ ಜ್ಞಾನವಾದದ ಕಾಲಕ್ಕೆ ಬೇಕಾಗಿದ್ದುದರಿಂದ ಮಠಗಳಲ್ಲಿ ಅಡಿಗೆ ಪದ್ಧತಿ ತಲೆ ಹಾಕಿತು. ಅಂತಹ ಕಿಡಾಂಬಿಯಾಚ್ಚಾನ್ ರಾಮಾನುಜರನ್ನು ಮನಸಾರ ನೆನೆಯುತ್ತಾ, ಕಾಶ್ಮೀರದ ಘಟಾನುಘಟಿ ಪಂಡಿತರೊಡನೆ ಚರ್ಚೆ ನಡೆಸಿ, ಪ್ರತಿವಾದಿಗಳಾದರೂ ಅವರವರ ದರ್ಶನಾಂಶಗಳಿಗೆ ವಿರೋಧವಿಲ್ಲದಂತೆಯೇ, ಪ್ರಾಮಾಣಿಕವಾಗಿಯೇ, ಸಮನ್ವಯ ಪದ್ಧತಿಯಿಂದ ಅವರನ್ನು ಒಪ್ಪಿಸಿದರು. ಅವರೂ ಸಂತುಷ್ಟರಾಗಿ **ಶಾರದಾಪೀಠದಲ್ಲಿ** ರಾಮಾನುಜರ ಬ್ರಹ್ಮಸೂತ್ರ ಭಾಷ್ಯವಾದ ಶ್ರೀಭಾಷ್ಯವನ್ನು ಇಡಲಾಗಿ, ಶ್ರೀ ಶಾರದಾದೇವಿ ಹಸನ್‌ಮುಖಿಳಾಗಿ

'ಶ್ರೀಭಾಷ್ಯಕಾರ' ಎಂಬ ಕೊಟ್ಟ ಬಿರುದನ್ನು ಈ ಶಿಷ್ಯ, ತನ್ನ ಗುರುಗಳಿಗೇ ಅರ್ಪಿಸಿದ. ಪ್ರಕೃತ ಗರುಡನ ಜಯ ಹರಿಯ ಜಯ, ಹನುಮಜಯ ರಾಮಜಯ. ಶಿಷ್ಯನಿಗಾದ ಜಯ ಗುರುವಿಗಾದ ಜಯ.

ವಿಲಜ್ಗಲ್ ಕುಡುಮಿ = ಚಂದ್ರ ಆದಿತ್ಯ ನಕ್ಷತ್ರಗ್ರಹ ತಾರಾದಿಗಳೂ ಪಕ್ಕಕ್ಕೆ ಸರಿದೇ ಹೋಗಬೇಕಾದ ಶಿಖರದ ಶಿಲೆಯುಳ್ಳದ್ದು ತಿರುವೇಂಗಡಮ್. ಆ ಶಿಖರಗಳ ಮೇಲೆ ಯಾರೂ ಹಾರಬಾರದೆಂಬ ಕ್ಷೇತ್ರವಿನಯ. ಅಷ್ಟೊಂದು ಎತ್ತರ ಎಂಬುದೂ ಸೂಚ್ಯ. ತಿರುಮಲೆಯ ಶಿಖರಕ್ಕಿಂತಲೂ ಕೆಳಗಡೆಯೇ ಅವುಗಳೆಲ್ಲದರ ಸಂಚಾರ! ಅಲ್ಲೇ ನಿತ್ಯವಾಸಿಯಾಗಿರುವವನೂ ಸರ್ವೋಚ್ಚತಮನೇ! ಅಂತಹ ಪುರುಷೋತ್ತಮ ರಕ್ಷಿಸಿಯೇ ತೀರುವನೆಂಬುದಕ್ಕೆ ಚಿಹ್ನೆ ತುಳಸೀಮಾಲಾಧಾರಣೆ. ಎಲ್ಲಿ ಮುಡಿದರೆ ಪಾಲನ ಸಾಮರ್ಥ್ಯ ಕಾಣುವುದು? ಅಲಜ್ಗಲ್ ತುಳಬಮ್ ಮುಡಿಯಾಯ್ = ಅಲಂಕಾರ ಪ್ರಿಯೋವಿಷ್ಣುಃ ಎಂಬುವನಿಗೆ ಉತ್ತಮವಾದ ಅಲಂಕಾರ ತುಳಸೀದಂಡೆ! ಅದೂ ತಲೆಗೆ ಕಿರೀಟದಂತೆ, ಮುಖದ ಮೇಲಿನ ಕೋರಂಬವಾಗಿ ಶೋಭಿಸಿದಾಗಲೇ ಶ್ರೀನಿವಾಸ ಪರಬ್ರಹ್ಮನಿಗೆ ರಕ್ಷಾದೀಕ್ಷಾಽಲಂಕಾರ! "ವಿವಿಧ ವಿನತ ಭೂತವ್ರಾತರಕ್ಷೈಕದೀಕ್ಷೇ" - ಶ್ರೀ ಭಾಷ್ಯದ ಮಂಗಳಶ್ಲೋಕಾಂಶ ಹೀಗಿರುವಾಗ ನನ್ನ ವಿರೋಧಾಂಶಗಳ ನಿರಸನಕ್ಕೆ ಏನೂ ಕೊರತೆ ಇಲ್ಲವಲ್ಲಾ. ತಿಮ್ಮಪ್ಪಾ! ಅರುಳಾಯ್ = ದಯೆ ತೋರೋ! ಇಲ್ಲ ಭವಿಷ್ಯದಾಚಾರ್ಯರ ಸುಳಿವು ಆಳ್ವಾರಿಗುಂಟು.

ತಮಿಳ್ ತಿರಳ್ ೧-೧೦-೩

ನೀರಾರ್ ಕಡಲುಮ್ ನಿಲನುಮ್ ಮುಳುದುಣ್ಡು ಏರಾಲಮ್ ಇಳಮ್ ತಳಿರ್ ಮೇಲ್ ತುಯಿಲೆನ್ದಾಯ್
ಶೀರಾರ್ ತಿರುವೇಜ್ಗಡ ಮಾ ಮಲೈ ಮೇಯ ಆರಾವಮುದೇ! ಅಡಿಯೇಕ್ಕರುಳಾಯೇ

ಕನ್ನಡ ನೆರಳ್

ನೀರ್ ತುಂ ಗಡಲುಂ ನೆಲಮುಂ ಮೊತ್ತವನುಂಡು
ಏರ್ ಆಲದ ಎಳೆ ದಳಿರ್ ಮೇಲ್ ಪವಡಿಹವೆನ್ ತಂದೇ
ಶೀರ್ ಎನು ಮಿಗೆ ಗುಣ ತೋರಿಪ ಭಾಳವೆ ಸಿರಿತರು ವೇಂಕಟಗಿರವಾಸಾ
ಆರ್ ಎಡೆ ಹೋಗದ ಎನಗಿದೋ ಆರದ ಸಿದ್ಧಾಮೃತನೇ! ಕೊನೆಗೂ ನಿಲ್ ಅಡಿದಾಸನಿಗರುಳೋ

ಮಹಾ ಪ್ರಳಯ ಕಾಲದಲ್ಲಿ ಭೂಮಿಯ ರಕ್ಷಣೆಯನ್ನು ಅಘಟಿತ ಘಟನಾ ಸಮರ್ಥ ಹೊಟ್ಟೆಯೊಳಗಿಟ್ಟು ಮಾಡಿದುದನ್ನು ತಿರುಮಜ್ಶೈ ಆಳ್ವಾರಿಗೆ ತೋರುತ್ತಾನೆ. ಯೋಗೇಶ್ವರನಿಗೆ, ಕಾಲಚಕ್ರ ಚಕ್ರವರ್ತಿಗೆ ಏನು ತಾನೆ ಆಗದು? ಏನು ಬೇಕಾದರೂ ಆಗುವುದಕ್ಕೇ 'ಅತ್' ಧಾತು ಮೂಲ ಸಂಸ್ಕೃತದಲ್ಲಿದೆ. ಅದರ ಮೇಲೆ 'ಮನಿನ್' ಪ್ರತ್ಯಯ ಹಚ್ಚಿದರೆ 'ಅತ್ಮನ್' ನಿಷ್ಪನ್ನವಾದ ರೂಪ. ಪಾಣಿನಿ ಮಹರ್ಷಿ ಭೂಮಾದಿ ಗಣಪಾಠದಲ್ಲಿ "ಅತ್ಮನ್" ಶಬ್ದವನ್ನೂ ಸಮಾವೇಶಗೊಳಿಸಿರುವುದು ದ್ರಾವಿಡ ಭಾಷೆಯ "ಅತ" ಇತ್ಯಾದಿಗಳ ಪರಿಚಯವಿಲ್ಲದುದರಿಂದಷ್ಟೇ ಆಗಿರುವುದು. ಮರಾಠಿ ಭಾಷೆಯಲ್ಲಿಯೂ "ಅತಲಾ" ಮುಂತಾದ ಪ್ರಯೋಗಗಳಿವೆ. ಸಂಸ್ಕೃತವೂ ಸೇರಿ ವಿಶ್ವದ ಎಲ್ಲಾ ಭಾಷೆಗಳೂ ತತ್ತಜ್ಞಾನಪದ, ಭಾಷೆಗಳಿಂದಲೂ ಉಪಕೃತಗಳಾಗಿಯೇ ಇವೆ. ಯಾವುದೇ ಕೇವಲ ತಾನೇ ತನ್ನಿಂದ ನಿಲ್ಲಲಾರದು. ಏಕೆಂದರೆ, ಸರ್ವವೂ ಔಚಿತ್ಯದಿಂದ ಇತರ ಸಾಪೇಕ್ಷವೇ ಹೊರತು ಅತ್ಯನ್ತ ಏಕಾಂಗಿ ಅದ್ವೈತವೂ ಇಲ್ಲ, ದ್ವೈತವೂ ಸಲ್ಲ. ದೇವರಿಗೂ ಶ್ರೀದೇವಿ, ನಿತ್ಯ, ಮುಕ್ತ, ಮುಮುಕ್ಷು, ಬದ್ಧ ಚೇತನರಾಗಲಿ, ಜಡೋಪ ಕರಣಾದಿಗಳಾಗಲಿ ಬೇಡವೆನ್ನಲಾದೀತೇ? ಅಂತೆಯೇ, "ಒಂದು, ಎರಡು" ಈ ಲೆಕ್ಕಾಚಾರದ ಪದ್ಧತಿಗಿಂತಲೂ "ಉಭಯ" ಎಂಬ ಉಪಪತ್ತಿಯೇ ಲೇಸು. ಅಂತೆಯೇ ಆಳ್ವಾರ್ ಆಚಾರ್ಯರುಗಳನ್ನು ಉಭಯ ವೇದಾನ್ತ ಪ್ರವರ್ತಕರೆನ್ನುವುದು. ಅತ ಪರಮಾತ್ಮಾ, ನಾವೆಲ್ಲಾ "ಅವರಾತ್ಮಾ".

ಆಲದೆಲೆಯ ಮೇಲೆ ಪವಡಿಸಿರುವ ಬಾಲ ಶಿಶುವನ್ನಾಗಿಯೇ ಈ ಶರಣರು, ತಿಮ್ಮಪ್ಪನನ್ನು ಈಗ ಸಂದರ್ಶಿಸುತ್ತಿದ್ದಾರೆ. ಅದರದೇ ವರದಿ ಅವರ ಹಿರಿಸಿರಿ ನುಡಿ ನಾವೆಲ್ಲಾ ಕೇಳುತ್ತಿದ್ದೇವೆ. ಇವರ ಪ್ರಾರ್ಥನೆ ಅವನಲ್ಲಿ ಹೀಗೆ ಮುಂದುವರಿಯುತ್ತಿದೆ. ನೀರ್ ಆರ್ = ಎಲ್ಲೆಲ್ಲೂ ನೀರಿನಿಂದಲೇ ಆವೃತವಾದ, ಕಡಲುಮ್ = ಪ್ರಳಯಾರ್ಣವವನ್ನೂ ನಿಲನುಮ್ = ಅದರೊಳಗೇ ಮುಳುಗಿ ಅಡಗಿಹೋಗಿದ್ದ ನೆಲವನ್ನೂ, ಮುಳುದುಮ್ = ಮೊತ್ತವಾಗಿ ಹೊರಗಿನಿಂದಲೂ ಒಳಗಿನಿಂದಲೂ ಧರಿಸಿ ಉಣ್ಡು. ನಮಗೆ ಸಮುದ್ರ ಹೊರಗಿನಂತೆ ಕಂಡರೂ, ಸಂಹಾರ ಕರ್ತನ ದೃಷ್ಟಿಯಿಂದ ಅದೂ ಆತನ ಒಳಗೇ ಅಡಗಿಹೋಗುತ್ತದೆ. "ಅನ್ತರ್ ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" "ಅಣೋರಣೀಯಾನ್ ಮಹತೋಮಹೀಯಾನ್" ಸಾಮಾನ್ಯ ಯುಕ್ತಿಗಳಿಗೆ ಮೀರಿದ ಬುದ್ಧ್ಯತೀತ ಕ್ಷೇತ್ರಜ್ಞರು ಶರಣರು. ಅವನ್ನೆಲ್ಲಾ ಶ್ರದ್ಧೆಯಿಂದಲೇ ಸ್ವೀಕರಿಸಿ ನಾವೂ ಆ ಭೂಮಿಕೆಗೆ ಏರಬೇಕಾದುದೇ ಮಾನವ ಜನ್ಮದ ಸಾರ್ಥಕತೆ. ಈ ಜೀವನದ ಸಾಹಸಮಯ ಪ್ರಯೋಗಕ್ಕೆ, ವಿಜ್ಞಾನವೂ ಸೇರಿ, "ವೇದಾನ್ತ ವಿಜ್ಞಾನ" ಈ ಉಭಯ ಸಮ್-ಅನ್ವಯದ, ಮಹಾಸಂಸ್ಕೃತಿಯ ಪರ್ವ

ಒದಗಿಬಂದಿರುವುದೂ, ಆ ಕಾಲ ಪುರುಷನ ದಯೆಯೇ ಆಗಿದೆ. ಇದೇ "ಆಧ್ಯಾತ್ಮಿಕ ವಿಜ್ಞಾನ" ಹಾಗೂ "ವೈಜ್ಞಾನಿಕ ಅಧ್ಯಾತ್ಮ" ಎನ್ನಬಹುದು. ರಾಗದ್ವೇಷರಹಿತರ ಸಂಯುಕ್ತ ವ್ಯವಸ್ಥೆಗಳಿಂದಲೇ ಅನೇಕ "ಅವ್ಯವಸ್ಥೆಗಳ ಸರಮಾಲೆ" ಮಾಯವಾದೀತು. ಇದರ ಅರಿವೂ ಮಾನವರಿಗೆ ಅನುಭವದಿಂದ ಆಗುತ್ತಿದೆ. ನಿಷ್ಪಕ್ಷ, ನಿರ್ವೈರ, ನಿರ್ಭಯರಾದವರ ಗುರುಕುಲ, ಆಚಾರ್ಯಕುಲ ಇಂದಿನ ತುರ್ತು.

ನಾವೇ ಮಾಲೀಕರೆಂದುಕೊಳ್ಳುವ ಭೂ ತಾಯಿಯ ಶತ್ರುಗಳಿಗಾರಿಗೂ "ಭೂಮಿ ಎಲ್ಲಿದೆ? ನೋಡಿ" ಎಂದು ಸವಾಲ್ ಎಸೆಯುವಂತೆ, ಮಣ್ಣಿನ ಸೂಕ್ಷ್ಮ ಕಣಗಳೆಂಬ ಬೀಜಗಳನ್ನು ಮುಂದಿನ ಸೃಷ್ಟಿಯೆಂಬ ಬಿತ್ತನೆಗೆ ಜೋಪಾನವಾಗಿಡುವ ರೈತ ಈ ಬಾಲ ಸಂಹಾರಾವತಾರಿ! ಎಷ್ಟೊಂದು ಸುಂದರ?

ಕರಾರವಿಂದೇನ ಪದಾರವಿಂದಂ ಮುಖಾಽರವಿಂದೇ ವಿನಿವೇಶಯನ್ತಮ್
ವಟಸ್ಯ ಪತ್ರಸ್ಯ ಪುಟೇ ಶಯಾನಂ ಬಾಲಂ ಮುಕುಂದಂ ಮನಸಾ ಸ್ಮರಾಮಿ

ಸಮುದ್ರಕ್ಕೇ ಚೆಂದ ತಂದಿರುವ ಶಯನ ಭಂಗಿ! ಬಾಯಲ್ಲಿ ಕಾಲಿನ ಹೆಬ್ಬೆರಳಿಟ್ಟು ಚೀಪುವ ....! ಕೈ ಕಮಲ! ಕಾಲ್ ಕಮಲ! ಮುಖ ಕಮಲ! ಎಳಸಾದ ಆಲದೆಲೆ! ಈ ಬಾಲಕನದು ಇದೇನು ಕೆಲಸ? ಮುಕುಂದ! ಅವಿದ್ಯೆಯಿಂದ, ಕೆಟ್ಟಕೆಲಸಗಳಿಂದ, ದುಷ್ಪವಾಸನೆಗಳಿಂದ, ಅವಿವೇಕದ ಅಭಿರುಚಿಗಳಿಂದ, ಹೀಗೆ ಈ ಪ್ರಕೃತಿದೋಷಾಂಶಗಳಿಂದ ನಮಗೆಲ್ಲಾ ಬಿಡುಗಡೆ ಕೊಡಿಸಿ, ಸದ್‌ವಿದ್ಯೆ, ಸತ್‌ಕರ್ಮ, ಸುವಾಸನೆ, ಅಂದರೆ ಸುಸಂಸ್ಕಾರ, ವಿವೇಕಯುಕ್ತ ಅಭಿರುಚಿ ಹುಟ್ಟಿಸಿ, ಎಲ್ಲ ಬಗೆಯ, ದುಷ್ಪ ಗುಲಾಮಗಿರಿಗಳಿಂದ ಮುಕ್ತರನ್ನಾಗಿಸುವ ಉದ್ದೇಶ. ಮತ್ತೆ ನಾವು ಈ ಪಂಚವಿಷ ಚಕ್ರಕ್ಕೆ ತಲೆಗೊಟ್ಟು, ಪರಾಧೀನರಾಗಬಾರದು. ಆತ್ಮ ಪರಮಾತ್ಮ ಉಭಯ "ಸ್ವರಾಜ್ಯ" ಕೊಡಿಸುವುದೇ ಕರುಣಾಳುವಿನ ನಾನಾ ಯೋಜನೆ, ಇದೆಲ್ಲಾ!

ಇಂತಿಂತಹ, ಏರ್ = ಹೆಚ್ಚುತ್ತಲೇ ಇರುವ ಹೆಗ್ಗಳಿಕೆಗಳುಳ್ಳ ಮತ್ತು ಅಲಮ್ ಇಳಮ್ ತಳಿರ್ ಮೇಲ್ = ಆಲದೆಲೆಯ ಎಲೆಚಿಗುರಿನ ಮೇಲೆ, ತುಯಿಲ್ = ಅಂಗಾತನಾಗಿ ನಿದ್ರಿಸುತ್ತಿರುವುದು ಅದೆಷ್ಟು ಚೆಂದ! ಆ ಕಾಲದ ಸುಂದರ ವಿಚಾರ ವೈವಿಧ್ಯ ಪೂರ್ಣ ಪಾವನ ದರ್ಶನವನ್ನು ಇಂದಿಗೂ ನೀಡುತ್ತಿರುವ, ಎನ್‌ದಾಯ್ = ಮಹೋಪಕಾರಕನಾದ ಎನ್ ತಂದೆಯೇ! ಈ ತಿರುಕ್ಕೋಲಕ್ಕೆ - ಸಿರಿಚೆಲುವಿನ ಭಂಗಿಗೆ - ನಾನಿದೋ ಸೋತು ನಿನಗೇ ಅನನ್ಯ ಅಡಿಯಾಳ್. ಶೀರ್ ಆರ್ = ಅವೈಕುಂಠಕ್ಕಿಂತಲೂ ವಿಶ್ವೈಶ್ವರ್ಯದ ಸಮಗ್ರತೆ ಈ ಮಲೆಯಲ್ಲೇ ಎದ್ದು ಕಾಣುವುದು. ಇಂತಹ ತಿರು = ಸೌಲಭ್ಯ ಕರುಣಾ ವಾತ್ಸಲ್ಯ ಸೌಶೀಲ್ಯಗಳೆಂಬ ಮಹದೈಶ್ವರ್ಯದಿಂದ, ತುಂಬಿದ ವೇಙ್ಕಡಂ ಮಾ ಮಲೈ ಮೇಯ = ವೇಂಕಟ ಮಹಾಭೂಧರ ನಿತ್ಯಾssವಾಸಾ! ಆರಾ ಅಮುದೇ = ಎಷ್ಟೆಷ್ಟು ನೋಡುತ್ತಿದ್ದರೂ "ನವೋನವೋಭವಸಿ!" ಹೊಸಹೊಸಬನಾಗಿಯೇ ತೃಪ್ತಿತರದ ಓ ಸಿದ್ಧಾಮೃತಾ! ಬೇರೊಂದು ಫಲಕ್ಕಾಗಿ ಅಲ್ಲದೆ ಸ್ವಯಮೇವ ಪರಮಮಧುರ ಭೋಗ್ಯನೇ! ಮಥನಿಸಲು ಮಂದರ ಪರ್ವತ ನೆಟ್ಟು, ಅದು ಮುಳುಗದಂತೆ ಅದನ್ನು ಬೆನ್ನ ಮೇಲೆ ಅತುಕೊಳ್ಳಲು ತಕ್ಕಗಟ್ಟಿಯಾದ ಚಿಪ್ಪುಳ್ಳ ಅಮೆಯಾಗಬೇಕಾದ, ನಾಲ್ಕೂ ತೋಳುಗಳಿಂದ, ತೋಳ್ಬಳೆ ಕೈ ಬಳೆಗಳು ಕಂಠಿಸರಗಳು ಇತ್ತಿಂದತ್ತ ನಲುಗುವ ಶ್ರಮ ಇವೇನೂ ಇಲ್ಲದ, ಆ ಅಮೃತಕ್ಕೂ ಪರಮಾಽಮೃತ ಸ್ವರೂಪಾ! ಫಲ ಪಡೆದು ನಿನ್ನನ್ನು ಬಿಡುವವರಂತಲ್ಲ ನಾನು! ಆತ್ಯಂತಿಕ, ನಿನ್ನಿಂದಲ್ಲದೆ ನಿನ್ನನ್ನು ಬೇರೆಯವರಿಂದ ಪಡೆಯುವ ವ್ಯಭಿಚಾರಿ ಭಕ್ತನೂ ಅಲ್ಲ. ಏಕಾನ್ತಿ ಪರಮೈಕಾನ್ತಿ! ಅಡಿಯೇನುಕ್ಕು = ಅಂಥವನಿಗೆ, ಅರುಳಾಯ್. ನಿತ್ಯಾನುಭವ ನಿತ್ಯ ಕೈಂಕರ್ಯ ನೀಡಲು ದಯೆ ತೋರಾ.

ತಮಿಳ್ ತಿರಳ್ ೧-೧೦-೪

ಉನ್ದಾಯ್ ಉರಿಮೇಲ್ ನರುನೆಯ್ಯಮುದಾಹ ಕೊಣ್ದಾಯ್ ಕುರಳಾಯ್ ನಿಲಮ್ ಈರ್ ಅಡಿಯಾಲೇ
ವಿಣ್ದೋಯ್ ಶಿಕರ ತ್ತಿರುವೇಙ್ಗಡಮ್ ಮೇಯ ಅಣ್ದಾ! ಅಡಿಯೇನುಕ್ಕರುಳ್ ಪುರಿಯಾಯೇ

ಕನ್ನಡ ನೆರಳ್

ಉಂಡ್ಯೆಯಲಾ ಉರಿ ಮೇಲಣ ಪೊಸನರುಗಂಪಿನ ನೆಯ್ ಅಮೃತಂ ಕೊಂಡೆಯಲಾ ಕುಳ್ಳನೆ ಆಗಿ ಈ ನೆಲ ಆ ಸಗ್ಗಂ ಈರ್ ಅಡಿಯಿಂ ವಿಣ್ಮುಟ್ಟುವ ಕೀರುತಿ ಶಿಖರದ ಸಿರಿವೇಂಕಟ ನಿರುತಾಽವಾಸಾ ಅಂಡಾ! ಅಂಡಗಳ್ಗೊಡೆಯಾ ಈ ಅಡಿದಾಸಗೇ ಮೀಸಲು ಅರುಳ್ ಸುರಿಯೋ

ಆಶ್ರಿತರಾದವರು ಗೋಪ ಗೋಪಿಯರು. ಕೃಷ್ಣನೇ ಆಶ್ರಯದಾತಾ. ಆ ತನ್ನ ಸಾನ್ನಿಧ್ಯದಿಂದಲೇ ಹೇರಳವಾಗಿ ಹೆಚ್ಚಿದ ಹಾಲು ಮೊಸರು ಬೆಣ್ಣೆ ತುಪ್ಪ ಮುಂತಾದ ಹೈನುಗಳನ್ನು ಆಶ್ರಿತರು ಕೈಮುಟ್ಟಿದ್ದೆಂಬ ವಿಶೇಷ ಪ್ರೀತಿಯಿಂದ ಉಣ್ಣುವ ವಿಶಿಷ್ಟ ಭಗವದ್ ಗುಣದ ಅನುಭವ ಈ ನಾಲ್ಕನೆಯ ಪಾಶುರದಲ್ಲಿ. ಪರಾಶರರೂ ತಮ್ಮ ವಿಷ್ಣುಪುರಾಣ ರತ್ನದಲ್ಲಿ

ಅನಾರ್ದ್ರ ಮಾರ್ದ್ರಂ ವಿರಸಂ ರಸಾssಢ್ಯಂ ಅಪಲ್ಲವಂ ಪಲ್ಲವಿತಂ ತದಾssಸೀತ್
ಗಾವೋ ಬಹು ಕ್ಷೀರಾದುಘಾ ಬಭೂವುಃ ನಾರಾಯಣೇ ನನ್ದ ಕುಲಂ ಪ್ರವಿಷ್ಟೇ

ಎಂದೂ, ಶ್ರೀಕೃಷ್ಣ ಗೀತೆಯಲ್ಲಿ ತನಗೆ ತನ್ನವರಿಗೆ ಕೊಡದೆ ಬಚ್ಚಿಡುವುದನ್ನು ಕಳ್ಳತನವೆಂದೂ, ವ್ಯತಿರೇಕವಿಧಯಾ ಹೇಳಿದ್ದಾನೆ

ತೈರ್ದತ್ತಾನ್ ಅಪ್ರದಾಯೈಭ್ಯಃ ಯೋ ಭುಙ್ಕ್ತೇ ಸ್ತೇನ ಏವ ಸಃ

ಕಂಸನಿಗೆ ಗ್ರಾಮದ ಪೂಗದಿಯಾಗಿ ವರ್ಷೇ ವರ್ಷೇ ಕಪ್ಪ ಕಾಣಿಕೆಯನ್ನು ಧನದ ರೂಪದಲ್ಲಿ ಕೊಡಬೇಕಾಗಿತ್ತು. ಅದಕ್ಕಾಗಿ ಗೋಪರು ಗೋಪಿಯರನ್ನು ಹಾಲುಮೊಸರು ಬೆಣ್ಣೆ ತುಪ್ಪಗಳನ್ನು ಮಧುರಾನಗರಕ್ಕೆ ಒಯ್ದು ಮಾರಿ ಹಣ ತರುವಂತೆ ತಗಾದೆ ಮಾಡುತ್ತಿದ್ದರು. ಅವರ ಈ ಕಳ್ಳತನವನ್ನು ತಾನು ಹೊತ್ತುಕೊಂಡು ಅವುಗಳನ್ನೆಲ್ಲಾ ಅಮೃತವಾಗಿಸಲು ಲಪಟಾಯಿಸಿ ಆ ವಸ್ತುಗತ ದೋಷಾಂಶಗಳನ್ನು ಕಳೆಯುವ ಮಹಾಗುಣ ಶಾಲಿ ಮಕ್ಕಳಿಗೆಲ್ಲಾ ಹಂಚಿಬಿಡುತ್ತಿದ್ದ!

ಉರಿಮೇಲ್ ಕಳ್ಳಕೃಷ್ಣನಿಗೆ ಸಿಗಬಾರದೆಂದು, ಹಗ್ಗದ ಉರಿ ಅಂದರೆ ನಿಲುವನ್ನು "ಶಿಕ್ಯ" ಎತ್ತರಕ್ಕೆ ಕಟ್ಟಿ, ಅದರೊಳಗೆ ಸುರಕ್ಷಿತವಾಗಿರಲೆಂದು ಘೃತಾದಿಪೂರ್ಣ ಸುವರ್ಣಪಾತ್ರೆಗಳಿಂದ, ನರುನೆಯ್ = ಗಮಗಮಿಸುವ ಸದ್ಯೋಘೃತ ನರುಗಂಪಿನ ಹೊಸದಾಗಿ ಕಾಯಿಸಿಟ್ಟ ತುಪ್ಪವನ್ನು, ಅಮುದಾಹ = ಅಮೃತವಾಗಿ, ಉಣ್ಡಾಯ್ = ನಾನು ದೇವತೆಗಳಿಗೆ ಅಪ್ಪು ಕಪ್ಪಪಟ್ಟು ಕಡೆದುಕೊಟ್ಟದ್ದು ಅವರಿಗಷ್ಟೇ ಅಮೃತ. ತನ್ನ ಭಾಗದ ಅಮೃತ, ಇದೋ ಗೊಲ್ಲಿತಿಯರು ಶ್ರಮವಹಿಸಿ ಕೈಮಂತಿನಿಂದಲೇ ಕಡೆದ, ಹೊಸಬೆಣ್ಣೆ ಕಾಯಿಸಿದ ಇಂಪು ಕಂಪಿನ ಈ ತುಪ್ಪ!

ಸರ್ವವ್ಯಾಪಿ ಸರ್ವೋಪರಿಯಾಗಿದ್ದೂ, ಕುರಳಾಯ್ = ಗೇಣುದ್ದ ಮೈ ತಾಳಿ ಕುಳ್ಳ ವಾಮನ ಬ್ರಹ್ಮಚಾರಿಯಾಗಿ, ಈರ್ ಅಡಿಯಾಲೇ = ಹೇಗೋ ಸರ್ವ ಭೂ ಭಾಗಕ್ಕೂ ಎಲ್ಲರಿಗೂ ಈತನೇ ಮಹತೋಮಹೀಯಾನ್ ಎಂದು ಗುರುತು ಸಿಗುವಂತೆ ಎರಡೂ ದೊಡ್ಡ ಪಾದಗಳಿಂದ, ಈ ನೆಲ ಆ ಸ್ವರ್ಗ ಉಭಯವನ್ನೂ ಅಳೆದು, ನಿಲಮ್ ಕೊಣ್ಡಾಯ್ = ಪೂರಾ ಎಲ್ಲವನ್ನೂ ಎಂದಿಗೂ ತನ್ನದೇ ಆಗಿರುವುದನ್ನೇ ಬಲಿ ಚಕ್ರವರ್ತಿಯಂತಹ ರಾಜಸರಾಗಿದ್ದೂ ಸಾತ್ವಿಕ ಉದಾರಿಗಳು ದಾನ ನೀಡಿದಂತೆಯೂ, ತಾನು ಬೇಡಿ ಪಡೆದುಕೊಂಡಂತೆಯೂ ಪ್ರಭುವಿಗೆ ಸಂತೋಷ! ಇಲ್ಲೆಲ್ಲಾ ಸ್ವಾಮಿಯ ನಾನಾ ಅವತಾರಗಳ ರಹಸ್ಯ ಅಡಗಿ ಅತನ ನಾನಾ ಕಲ್ಯಾಣ ಗುಣಗಳನ್ನು ಶ್ರೀ ಸಾಮಾನ್ಯರಿಗೂ ತೋರಿಸುವ ಕೌಶಲವಿದೆ. ತನ್ನ ಗುಣ ಪ್ರಕಾಶನದಿಂದ ಜನ ಸ್ವಲ್ಪವಾದರೂ ಗುಣಾಂಶವನ್ನೂ ಕಲಿಯಲಿ. ಈ ಗುಣಮೌಲ್ಯವರ್ಧನ ಚಾತುರ್ಯವನ್ನು ಮಾನವ ಇತ್ತೀಚಿನ ದಿನಗಳಲ್ಲಿ ಕಳೆದುಕೊಂಡು ಮುಂದಿನ ಸತ್‌ಪ್ರಜೆಗಳನ್ನು ದುಷ್ ಪ್ರಜೆಗಳನ್ನಾಗಿಸುವ ಯಾವೊಂದು ಯೋಜನೆಗೂ ಪ್ರಜಾ ಪ್ರಭುಗಳು ಸಹಕರಿಸಬಾರದು.

ವಿಣ್ ತೋಯ್ ಶಿಕರಮ್ = ಆ ವೈಕುಂಠವನ್ನೂ ಮುಟ್ಟುವ ಶಿಖರಗಳುಳ್ಳ, ತಿರುವೇಙ್ಗಡಮ್ ಮೇಯ = "ದೂರಾದ್ ಗಂಧೋವಾತಿ" ಎಂಬಂತೆ, ಈ ಆನಂದ ನಿಲಯನ, ಸರ್ವಸ್ವಾಮಿತ್ವದೊಂದಿಗೇ, ಸೌಲಭ್ಯಾದಿ ಕಲ್ಯಾಣ ಗುಣಕೀರ್ತಿ ಅಲ್ಲಿಗೆ ಥಟ್ಟನೆ ರವಾನೆಯಾಗಲು ಸಂದೇಹವೇನು? ಕಾವ್ಯ ವಾಙ್ಮಯದ ಹೊರಮೈ ವರ್ಣನೆಗಳಿಗೆ ಒಂದು ಒಳಮೈ ಮರ್ಮವಿದ್ದೇ ಇರುತ್ತದೆ. ಅದನ್ನು ಶುದ್ಧ ಹಾರ್ದಭಕ್ತಿಯಿಂದಲೇ ಕಾಣಬೇಕು. ಇದೇ ಸಾಹಿತ್ಯ ಕಲೆಯ ಜೀವಾಳ! ಕೇವಲ ಬುದ್ಧಿ ಚಾತುರ್ಯ, ಕತೆಗೆ ನಾನಾ ಬಗೆಯ ಕೈ ಕಾಲುಕಟ್ಟುವಿಕೆ, ಜನರಿಗೆ ಒಂದು ಸಾಮಯಿಕ ಜೀವನ ಪಥದರ್ಶಿಯಾದ ಧ್ಯೇಯ ಹಾಗೂ ಧ್ಯೇಯ ಸಾಧನೆಯ ಶಾಂತಿಮಯ ಪಥ ತೋರಿಸದೆ, ಕೇವಲ ರಂಜನೆಯ ಸಾಹಿತ್ಯಗಳು ಇನ್ನು ಸಾಕು. ಚಿತ್ರಣ ಸಾಹಿತ್ಯಕ್ಕಿಂತ ಪ್ರಜಾಧರ್ಮ ನಿರ್ಮಾಪಕ ಸಾಹಿತ್ಯ ಇಂದಿಗೆ ಬೇಕು.

ಇಂತಹ ಅಂದರೆ ಆ ವೈಕುಂಠಕ್ಕೂ ಮೇಲ್ ಪಂಕ್ತಿಯಾಗಬಹುದಾದ ಈ ತಿರುಪತಿಯಲ್ಲೇ ನಿತ್ಯವಾಸೋಲ್ಲಾಸಿಯಾದ, ಓ ಅಣ್ಣಾ! ಗೊಲ್ಲನೇ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕಾ! ಅಡಿಯೇನುಕ್ಕು = ಈ ದಾಸನಿಗೆ, ಅರುಳ್ ಪುರಿಯಾಯ್ = ದಯಾಭಿಕ್ಷೆಯನ್ನು ಅಳ್ಳಿ ಅಳ್ಳಿ ನೀಡಯ್ಯಾ! ಯಶೋದೆ ತಾಯಿಯೂ, ಇಂದ್ರನೂ ಪಡೆದುಕೊಂಡ ಆ ಸೀಮಿತ ಫಲ ನನಗೆ ಬೇಡ. ಅವಳು ನಿನ್ನ ಲೀಲಾರಸವೊಂದನ್ನೇ, ಇಂದ್ರ ತನ್ನ ರಾಜ್ಯಲಾಭ ಒಂದನ್ನೇ ಕೇಳಿ ಪಡೆದವರು. ನಾನಿದೋ ತದ್‌ವಿಲಕ್ಷಣ. ನಾನು ಬೇಡುತ್ತಿರುವುದು ನಿನ್ನ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತವಾದ ಸರ್ವ ಕೈಂಕರ್ಯ.

ತಮಿಳ್ ತಿರಳ್ ೧-೧೦-೫

ತೂಣ್‌ಆಯ್ ಆದನ್ ಊಡು ಅರಿಯಾಯ್ ವನ್ದು ತೋನ್ನಿ ಪೇಣಾ ವುವುಣನ್ ಉಡಲಮ್ ಪಿಳನ್ದಿಟ್ಟಾಯ್
ಶೇಣ್ ಆರ್ ತಿರು ವೇಙ್ಗಡಮ್ ಮಾ ಮಲೈ ಮೇಯ ಕೋಣಾಹನ್ಯೈಯಾಯ್ ಕುರಿಕ್ಕೊಳ್ ಎನ್ಯೆ ನೀಯೇ

ಕನ್ನಡ ನೆರಳ್

ಕಂಬವೆ ಆದದರೊಳ್ ಹರಿಯಾಗಿಯೆ ತೋರ್ದು ಅನ್ಬನೆ ತೋರದ ಅಸುರನ ಕಸದೊಡಲಂ ಪಳಿದೇ ಬಿಟ್ಟೇ!
ಬಲು ಉತ್ತುಂಗದ ಸಿರಿಪೂರ್ತಿಯ ವೇಂಕಟಮಾಮಲೆ ನಿತ್ಯಾವಾಸಾ! ಬಲು ಬಲಬಾಹುಳ ನಾಗನ ಶಯನಾ! ಚಿತ್ತಕೆ ತಕ್ಕೊಂಡವ ಧರಿಸೆನ್ನಂ

ಈ ೫ನೆಯ ಮತ್ತು ಮುಂದಿನ ೬ನೆಯ ಹಾಡಿನಲ್ಲಿ ಕ್ರಮವಾಗಿ ದೇವರು ಆಳ್ವಾರ್ ಆದ ತಮಗೆ ಮಾಡಿದ ಉಪಕಾರ, ತಿರುಮಲೆಯಲ್ಲಿ ಬಂದು ನಿಂತುದು, ಇದೊಂದು, ಎರಡನೆಯದೆಂದರೆ ತಮ್ಮ ಸಿರಿಚಿತ್ತದಲ್ಲಿ ಸಿಹಿಯಾಗಿ ಹೊಕ್ಕು ಸ್ಥಿರವಾಗಿರುವುದು. ಈ ಬೆಟ್ಟಕ್ಕೆ ಬರಲು ಮೊದಲು ಮಾಡಿದ ಪ್ರಥಮ ಸನ್ನಾಹವೆಂದರೆ;

ತೂಣ್ ಆಯ್ = ಹಿರಣ್ಯ ಕಶ್ಯಪುವೇ ಖಿದ್ದಾಗಿ ನಿಂತು ಕಟ್ಟಿಸಿದ್ದ ಅರಮನೆಯ ಆ ಕಂಬ. ಬೇರೆಯವರ ಮೂಲಕವಾಗಿ ಅದನ್ನು ನಿಲ್ಲಿಸಿದ್ದರೆ ಮೊದಲೇ ನರಸಿಂಹವೊಂದನ್ನು ಆ ಕಂಬದೊಳಗೆ ಮೋಸದಿಂದ ಅಡಗಿಸಿ ಇಟ್ಟಿರಬಹುದು! ಹಾಗಲ್ಲದೆ ಶುದ್ಧ ಕಂಬವಾಗಿಯೇ ಇದ್ದ ಅದರಲ್ಲಿಯೇ, ಊಡು = ಅದರ ಮಧ್ಯದ ಒಳಭಾಗದಿಂದಲೇ, ಅರಿಯಾಯ್ ಶ್ರೀ ನರಹರಿಯಾಗಿ ವನ್ದು ತೋನ್ನಿ = ಭಕ್ತ ಪ್ರಹ್ಲಾದನು ಪಡುತ್ತಿದ್ದ ಪಿತೃಹಿಂಸೆ ಸಹಿಸಲಾರದೆ ತಾನೇ ತನ್ನ ಸಂಕಲ್ಪ ಯೋಗಶಕ್ತಿಯಿಂದ, ಮಹಾಟ್ಟಹಾಸದಿಂದ ಬಂದು, ತೋರಿಕೊಂಡನು, ಎಲ್ಲದರಲ್ಲೂ ಎಲ್ಲವೂ ಸೂಕ್ಷ್ಮರೂಪದಲ್ಲಿ ಸದಾ ಅಡಗಿರುವುದೇ, ಅವುಗಳ ಬಹಿಸ್ ಸ್ಫೂಲಾಭಿವ್ಯಕ್ತಿಯಾಗಿ ಪ್ರಸ್ಫುಟಿಸುವುದು.

ಸರ್ವಂ ಸರ್ವತ್ರ ವರ್ತತೇ

ಇಲ್ಲದ್ದು ಹೊಸದಾಗಿ ಏನೊಂದೂ ಹೊರಕ್ಕೆ ಬಾರದು. ಬೇರೆ ಬೇರೆ ಸೂಕ್ಷ್ಮಾವಸ್ಥೆಯಲ್ಲಿರುವುದೇ ಅಲ್ಲಲ್ಲಿ ಒಂದು ವಿಲಕ್ಷಣ ಚೈತನ್ಯ ಶಕ್ತಿಯೋಗದಿಂದ ಅವಸ್ಥಾಂತರ ತಾಳುತ್ತದೆ. ಇಂದ್ರಿಯಗಳಿಗೆ ಕಾಣುವಂತಹುವು. ಮಣ್ಣಿನ ಮುದ್ದೆ.... ಅಲ್ಲೇ ಸೂಕ್ಷ್ಮವಾದ ಘಟಾದಿಗಳು ಕುಂಬಾರನ ಕೈ ಶಿಲ್ಪಶಕ್ತಿಯಿಂದ, ಹೊಂದಿದ ಮಣ್ಣಿನ ಸ್ಥೂಲ ಅವಸ್ಥಾಂತರವೇ! ಹತ್ತಿಯಲ್ಲಿದ್ದ ನೂಲು, ನೂಲಿನಲ್ಲಿದ್ದ ಬಟ್ಟೆಯೇ, ನೂಲುವವರಿಂದಲೂ, ನೇಯ್ಗಿಯವರಿಂದಲೂ ಆ ರೂಪಾಂತರ ತಾಳುತ್ತದೆ. ಕರ್ತ್ಯವ್ಯಾಪಾರ ಎಂದರೆ ಪ್ರಯತ್ನ ಕ್ರಿಯೆಗಳಿಲ್ಲದಾಗ, ಕೇವಲ ಮೂಲ ಕಚ್ಚಾವಸ್ತುವಾಗಿ ಬಿದ್ದಿರುತ್ತದೆ. ಅಂತೆಯೇ ಪೂರ್ವದಲ್ಲೇ ಕಂಬದೊಳಗಿದ್ದ ನೃಸಿಂಹನ ಸೂಕ್ಷ್ಮಾಂಶ ಭಗವತ್ ಸಂಕಲ್ಪದಿಂದ ಸ್ಥೂಲಾವಸ್ಥೆಗೆ ಬರಲು ಅಡ್ಡಿಯೇನಿಲ್ಲ. ಹಲವಾರು ಯೋಗಿಗಳದೂ ತರ್ಕಾತೀತವಾಗಿ ಯೋಗಶಕ್ತಿಯ ಮಹಿಮೆಯಿಂದ, ಇರುವ ತತ್ತದ್ ಭೂತಸೂಕ್ಷ್ಮ, ಸ್ಥೂಲವಾಗಿಯೂ, ಸ್ಥೂಲಭೌತಿಕ ಸೂಕ್ಷ್ಮವಾಗಿಯೂ ಆಗಬಹುದು. ಇವೆಲ್ಲಾ ಅನುಭವ ವಿಜ್ಞಾನ. ಮಾತಿಗೆ, ಸೀಮಿತ ಬುದ್ಧಿಶಕ್ತಿಗೆ, ಚರ್ಚೆಗೆ ಮೀರಿದವು. ಇವುಗಳೆಲ್ಲಾ ಒಂದು ಹಂತದವರಿಗೆ ಯದ್ಯಪಿ ಉಪಕಾರಕಗಳೇ ಹೌದು. ಪೂರ್ಣಸಮಸ್ಯಾಪರಿಹಾರ, ಅದೇ ಅಧ್ಯಾತ್ಮಕ್ಷೇತ್ರದಿಂದಲೇ.

ತರ್ಕಾऽಪ್ರತಿಷ್ಠಾನಾತ್ - ಬ್ರಹ್ಮಸೂತ್ರ.

ಇಲ್ಲಿಯವರಿಗೂ ಹೇಳಿದ್ದನ್ನು "ಸತ್‌ಕಾರ್ಯ"ವಾದವೆಂದು ದಾರ್ಶನಿಕರು ಕರೆಯುತ್ತಾರೆ. ತರ್ಕಶಾಸ್ತ್ರ ಇದನ್ನು ಒಪ್ಪದೆ "ಅಸತ್ ಕಾರ್ಯವಾದ"ವನ್ನು ಮಂಡಿಸುತ್ತದೆ. ಅಂತರ್ ಯಾಮಿತ್ವವನ್ನು ನಿರಾಕಾರ ಬ್ರಹ್ಮ ಸ್ವರೂಪವಾಗಿಯೂ, ಮತ್ತು ವಿಶಿಷ್ಟ ಸಾಕಾರವಾಗಿಯೂ, ನಿರ್ಗುಣವಾಗಿಯೂ ಸಗುಣವಾಗಿಯೂ ಅಧ್ಯಾತ್ಮ ಬಣ್ಣಿಸುತ್ತದೆ. ಅಂತೆಯೇ ಸರ್ವೇಶ್ವರನ ಬಹಿರ್ ವ್ಯಾಪ್ತಿ ಜನರ ಅನುಭವಕ್ಕೂ ಬರುವಂತೆ ತ್ರಿವಿಕ್ರಮ, ನೃಸಿಂಹ ಮುಂತಾದ ಸುಲಭಸಾಕಾರವಾಗಿಯೂ, ವಿಶಿಷ್ಟಗುಣ ಪ್ರಕಾಶಕವಾಗಿಯೂ ತನ್ನನ್ನು ತೋರಿಸಿಕೊಳ್ಳುತ್ತಾನೆ. ಇಲ್ಲಿನ ರಹಸ್ಯ ಆತ್ಮ ಪರಮಾತ್ಮನನ್ನೇ ಕೇಂದ್ರೀಕರಿಸಿದ ವಿಜ್ಞಾನ ವಿಶೇಷದಿಂದ ಅರ್ಥವಾಗುವುದೇ ಹೊರತು, ಇಂದಿನ ಆತ್ಮ ವಿಮುಖ ವೈಜ್ಞಾನಿಕ ಸಾಮಗ್ರಿಗಳಷ್ಟರಿಂದಲೇ ಸಾಧ್ಯವಿಲ್ಲ. ಜಡ, ಅಂದರೆ ಅಚೇತನಗಳನ್ನೇ ಲಕ್ಷ್ಯದಲ್ಲಿಟ್ಟು ಇಂದಿನ ವಿಜ್ಞಾನ ಮುಂದುವರಿಯುತ್ತಿರುವುದು ಬಲು ಶ್ಲಾಘ್ಯವಾದುದೇ ಸರಿ. ಸಾಮಗ್ರೀ ಪೌಷ್ಕಳ್ಯ, ಸಾಲದೆ ಕೇವಲ ವಾದವಿವಾದಗಳಲ್ಲಿ ಸಾರವಿಲ್ಲ. ತತ್ತದ್‌ದರ್ಶನಗಳ ಸ್ಥಾನಮಾನದ ಪವಾಡಗಳ ಸೀಮಾಭೂಮಿಯ ಅರಿವೂ, ಅಧ್ಯಾತ್ಮ ಜ್ಞಾನ ಸಾಮಗ್ರೀ ಸಂಪಾದನವೂ ಸರ್ವರಿಗೂ ಅನಿವಾರ್ಯ. ಅಂತಹ ವ್ಯಾಪಕ ಸಮಗ್ರ ಶಿಕ್ಷಣ ಪದ್ಧತಿಯತ್ತ ಪ್ರಜಾಪ್ರಭುತ್ವ ರಾಷ್ಟ್ರಗಳಾದರೂ, ಈ ಪಕ್ಷಭೇದ, ಜಾತಿಭೇದ, ರಾಜ್ಯ-ಕೇಂದ್ರ ಭೇದ, ರಾಷ್ಟ್ರ-ವಿಶ್ವಭೇದಗಳನ್ನು ಇನ್ನೂ ಹೆಚ್ಚು ವಿವೇಕ ಸಂಯಮಗಳಿಂದ ತೊಡೆದುಹಾಕಲು, ರಚನಾತ್ಮಕವಾದ, ಬುದ್ಧಿ, ದೇಹ, ಇಂದ್ರಿಯ, ಅತೀಂದ್ರಿಯ ಸರ್ವಶಕ್ತಿಗಳೂ ಪ್ರತಿಪ್ರಜೆಯಲ್ಲಿಯೂ ಹುದುಗಿರುವುದನ್ನು ಸೂಕ್ಷ್ಮವಾಗಿ ಈಕ್ಷಿಸಿ, ಸಮಗ್ರ ಮಂಗಳಮಯ ಶಿಕ್ಷಣಕ್ಕೇ ಹೆಚ್ಚು ಒತ್ತು ಕೊಟ್ಟರೆ, ಉದ್ದೇಶ್ಯಗಳೆಲ್ಲಾ ಸಫಲವಾಗುವುವು. ನಿಂದೆ ಪ್ರತಿನಿಂದೆ ನಿಲ್ಲುವುವು.

ಪೇಣಾ ಅವುಣನ್ ಉಡಲೈ ಪಿಳಂದಿಟ್ಟಾಯ್ = ಪ್ರೀತಿಯನ್ನೇ ತೋರದ ದೈತ್ಯನ ದುಷ್ಟ ಮೈಯ್ಯನ್ನು ಸೀಳೆಯೇ ಬಿಟ್ಟೆ! ಶೇಣ್ ಅರ್ = ಔನ್ನತ್ಯವೇ ಹೆಚ್ಚಾಗಿರುವ, ತಿರುವೇಙ್ಗಡಮ್ ಮಾಮಲೈ ಮೇಯ = ರಾಮಕೃಷ್ಣಾದಿ ವಿಭವಾವತಾರಗಳೂ ಆಯಾಯಾ ಕಾಲದಲ್ಲಿದ್ದವರಿಗೆ ಮಾತ್ರ. ತಿಮ್ಮಪ್ಪನ ಈ ಅರ್ಚಾವತಾರ ಸಾರ್ವಕಾಲಿಕ, ಸರ್ವಸುಲಭ. ಇದೇ ಈ ಬೆಟ್ಟದ ಮಹತ್ವ. ಕೋಳ್ ನಾಹ ಅಣೈಯಾಯ್ = ಪ್ರಕೃಷ್ಟ, ಸೇವಾ ವಿಜ್ಞಾನ ಪೂರ್ವಕ ಕೈಂಕರ್ಯವೆಸಗಲು ತಕ್ಕ ಮನೋಬಲ, ನಾನಾ ಶಾರೀರಕ ವಸ್ತುನಿಷ್ಠ ಬಲ ಇವುಗಳಿಗೆ ಗಣೆಮಣೆಯಾದವನು ಮಹಾಶೇಷ! ಅವನೇ ಇದೋ ಗಿರಿರೂಪದಲ್ಲಿ ನಿನ್ನ ಸೇವೆಗಾಗಿ ಬಂದಿದ್ದಾನೆ. ಶೇಷಾऽಚಲ ವಾಸಿನ್! ಎನ್ನೈ = ನನ್ನನ್ನು ಕುರಿಕ್ಕೊಳ್ = ನಿನ್ನ ಗಮನದಲ್ಲಿಟ್ಟು ಸ್ವೀಕರಿಸಯ್ಯಾ! ಅವನಿಗಿತ್ತ ಕೈಂಕರ್ಯಭಾಗ್ಯ ನನಗೂ ಕರುಣಿಸೋ.

ತಮಿಳ್ ತಿರಳ್ ೧-೧೦-೬

മന്നാ ഇമ്മനിശ പ്പിരവിയൈ നീക്കി തന്നാക്കി ത്തന്നില് അരുള് ശെയ്യുമ് തലൈവന്
മിന്നാഹി മുഹില് ശേര് തിരുവേങ്കടമ് മേയ എന്നാനൈ എന്നപ്പന് എന് നെഞ്ഞില് ഉളാനേ

ಕನ್ನಡ ನೆರಳ್

ಈ ನಶ್ವರ ಕ್ಷಣಿಕಕೂ ಮೀರಿದ ಮಾನವ ಮಾನದ ಒಡಲಿನ ಮಾನವಜನ್ಮವ ನೀಗಿಸಿಯೇ
ತಾನವನೇ ತನ್ನನ್ನಾಗಿಸಿ ತನಗಾಗಿಸಿ ತನ್ ಸಿಹಿ ಸಿರಿಯರುಳ್‌ಗೈ ಮುಂದಾಳು
ಮಿನ್‌ಚಿನ ದುಂಡನ ಶ್ರೀಲೇಖೆಯ ನಡು ಕರಿಮುಗಿಲ್ ಸೇರಿಹ ತಿರುವೇಂಕಟ ಬಿಡದಿಹ
ಎನ್ ಗಜರಾಜಾ ಎನ್ನಪ್ಪನು ಮಹೋಪಕಾರಿ ಎನ್ ಎದೆಯಂತರ ತಮದೊಳ್ ತಾನ್ ಇಹನ್ಯೆ!

ಸರ್ವೇಶ್ವರ ಸ್ವತಂತ್ರನಾದರೂ ಜೀವಾತ್ಮರ ಏನೆಯ ಹಂತದ ಅನುಮತಿಯಿಲ್ಲದೆ ಮನಸ್ಸಿಗೂ ಪ್ರವೇಶಿಸನು. ಆಳ್ವಾರ್ರೇ ನಾನು ನಿಮ್ಮ ಸಂಮತಿಗಾಗಿ ಬಲುದಿನದಿಂದ ಕಾಯುತ್ತಿದ್ದೆ. ನೀವೀಗ ನೆನೆಯುತ್ತಿರುವ ಹಾಗೆ ನಿಮ್ಮನ್ನು ಬಿಡುವವನಲ್ಲ. ನಾನೇ ಇತ್ತಿರುವ ಈ ಒಪ್ಪಿಕೊಳ್ಳುವ ವಿವೇಕ ಶಕ್ತಿಯನ್ನು ನೀವು ಸರಿಯಾಗಿ ಉಪಯೋಗಿಸಿಕೊಂಡಿರಿ. ಇದೇ ನನ್ನ ಸಂತೋಷ! ನಾನಿತ್ತಿರುವ ಕ್ಷೇಮಂಕರ ಶಕ್ತಿಗಳನ್ನು ಸರಿಯಾಗಿ ಬಳಸಿಕೊಳ್ಳದೆ ಇದ್ದಾಗಲೂ ದುರುಪಯೋಗಪಡಿಸಿ ಕೊಂಡಾಗಲೂ ನಾನು ದೂರನೇ ಹೊರತು ಇದೋ ನಿಮ್ಮ ಮನೋಭವ್ಯ ಮಂದಿರಕ್ಕೆ ಪ್ರವೇಶಿಸುತ್ತಿದ್ದೇನೆ. "ತದ್ ದೂರೇ ತದು ಅನ್ತಿಕೆ" - ಈ ಶೋಪನಿಷತ್.

ಮನ್ನಾ = ಮಿಂಚಿಗಿಂತಲೂ ಅಲ್ಪಕಾಲಿಕ ಹಾಗೂ ಕ್ಷಣಿಕಕ್ಕೂ ಕಡಿಮೆಯಾಗಿರಬಹುದಾದ, ಇಮ್ ಮನಿಶಪ್ಪಿರವಿಯೈ ನೀಕ್ಕಿ = ಈ ಮನುಷ್ಯಜನ್ಮವನ್ನು ನೀಗಿಸಿ, ಎಂದರೆ ಈಗಂತೂ ವಿಮಾನಗಳ ಪಾತ, ಹಕ್ಕಿಗೆ ಡಿಕ್ಕಿ ಹೊಡೆಯುವುದು, ಉರಿ ಹತ್ತಿಕೊಳ್ಳುವುದು, ರೈಲುಗಳ ಮಹಾದುರಂತ, ಬಸ್ಸುಗಳು ಉರುಳಿ ಕಮರಿಗೆ ಬೀಳುವುದು, ಟ್ಯಾಕ್ಸಿರಿಕ್ಷಾ ಲಾರಿ ಅಘಾತಗಳು ಯಾರ ಕಣ್ಣಿಗೆ ಬೀಳುತ್ತಿಲ್ಲ? ಗರ್ಭ ಕಚ್ಚಲಿಕ್ಕೇ ಅಸ್ಪದ ನೀಡದ ಅನೀತಿವರ್ಧಕ ಸಂತಾನೋತ್ಪತ್ತಿ ನಿರೋಧದ, ವೀರ್ಯಹತ್ಯೆ, ಭ್ರೂಣಹತ್ಯೆಗಳೂ, ದಂಪತಿಗಳ ಅಸಂಯಮದಿಂದ ಬಸಿರಿನಲ್ಲೇ ಶಿಶುಮರಣ, ಹೊರಕ್ಕೆ ಬಂದರೂ ಸತ್ತುಹೋಗುವ ಮಕ್ಕಳು, ಅಂಗವೈಕಲ್ಯ, ಪೋಲಿಯೋ, ಏಯ್ಡ್ಸ್ ಇವೆಲ್ಲಾ 'ಮನ್ನಾ ಮನಿಶರ್‌ಪ್ಪಿರವಿ'ಯ ಭಾವಲಹರಿಗಳು ನಿತ್ಯವೂ ಸರ್ವರ ಪ್ರತ್ಯಕ್ಷಕ್ಕೇ ಬರುತ್ತಿರುವ ಅಂಶಗಳು

ಬ್ರಹ್ಮಾವಲೋಕಧಿಷಣಾಂ ಮುದಮಾಪ ದೇವಃ – *ಶುಕ ಭಾಗವತ*

೮೬ ಲಕ್ಷ ವರ್ಗೀಕೃತ ಜೀವಗಳಲ್ಲೆಲ್ಲಾ ಕೊಟ್ಟ ಕೊನೆಯ ಈ ವಿಶ್ವಮಾನುಷ ಜನ್ಮವೇ ವ್ಯರ್ಥವಾಗದಂತೆ ಮನುಷ್ಯ ಎಚ್ಚರವಿರಬೇಕೆಂಬುದೇ ಇಲ್ಲಿನ ರಹಸ್ಯ. ಮಾನವ ಮಾನಸ ಭೂಮಿಕಾತೀತನಾಗಬೇಕಾದುದೇ ಆತನ ಏನೇ ದಾಯಿತ್ವ. ದಿವ್ಯನ ಮೊದಲ ರಕ್ಷಣೆಗೆ ಅಕ್ಷೇಪದ ಸುರಿಮಳೇ ಸುರಿಸದಿದ್ದರೆ ಸಾಕು. ತಮೋಗುಣ, ರಜೋಗುಣಗಳಿಗೆ, ಅಗತ್ಯ ಯುಕ್ತ ಸ್ಥಾನ ಉಂಟು. ಆದರೆ ಅವುಗಳ ಅಧಿಕ ಪ್ರಸಂಗ ಸತ್ವಗುಣವನ್ನು ಹಂಗಿಸಬಾರದು, ಹಿಂಗಿಸಬಾರದು. ಎಲ್ಲಾ ಸತ್ವಗುಣವಿಕಾಸಕ್ಕೆ ಮಾತ್ರ ಒಂದೆಲ್ಲೆಯಿಲ್ಲ. ಮಾನವನ ಮಾಸ್ಟರ್ ಪ್ಲಾನಿಂಗುಗಳೂ ಇಂಥ ಮಾನವೀಯವಾಗಿರಬೇಕು. ಗುಣಗಳ ಯಥೋಚಿತ ಲಾಭ ಪಡೆದೇ ತದನಂತರ ಗುಣಾತೀತರಾಗುವಂತೆಯೇ ವರ್ಣ, ಜಾತಿ, ಮುಂತಾದ ಇಂದಿಗೆ ಶಾಪಗ್ರಸ್ತವಾಗಿರುವುವಲ್ಲಿ ಸದಂಶಗಳನ್ನು ನಿರಾಕರಿಸದೆ, ಅವುಗಳ ಅಸ್ಮಿತೆ ISM ಗಳನ್ನು ಮಾತ್ರ ತೊರೆಯುವಂತಹ ವಾತಾವರಣ ನಿರ್ಮಾಣವೇ ವರ್ಣಾತೀತ ಜಾತ್ಯಾತೀತಗಳ ಸದರ್ಥ. ಪಕ್ಷಾತೀತ, ರಾಷ್ಟ್ರಾತೀತಗಳೂ ಇಂಥವೇ! ಸಂಪೂರ್ಣ ಶಾಂತಿಮಯ ಕ್ರಾಂತಿಬೀಜಗಳ ಬಿತ್ತನೆಗೆ ತಿಮ್ಮಪ್ಪ ತಯಾರ್ ಆಗಿದ್ದಾನೆ. ಮಾನವ ತನ್ನ ಪಾಲಿನ ಅನುಯತ್ನವನ್ನು ಸಂಯಮದ ವಿವೇಕದಿಂದ ಮುಂದುವರಿಸಬೇಕಷ್ಟೆ.

ತನ್ನಾಕ್ಕಿ = ತನಗೆ ಪ್ರಾಯಃ ಸಮಾನರನ್ನಾಗಿಯೇ ನಮ್ಮನ್ನೆಲ್ಲಾ ಆಗಿಸಿಕೊಳ್ಳುವ ಪರಮ ಸಾಮ್ಯದಾತಾ ತಿಮ್ಮಪ್ಪ! ಅಷ್ಟೇ ಅಲ್ಲ. ತನ್ ಇನ್ ಅರುಳ್ ಶೆಯ್ಯುಮ್ = ಆಳ್ವಾರ್ ಅಂತಹವರಿಗೇ ಗೈಯ್ಯುವ ಅವ್ಯಾಜ ವಿಶೇಷ ಕೃಪೆ! ಹೀಗೆ ದಯೆ ತೋರುವವ ತಿಮ್ಮಪ್ಪ! ಅರುಳ್ = ಸೃಷ್ಟಿಕಾಲಕ್ಕೆ ಗೈಯ್ಯುವ ಸಾಮಾನ್ಯ ಕೃಪೆ. ಇನ್ ಅರುಳ್ = ಸಿಹಿಯಾದ ವಿಚಾರಾತ್ಮಕ ಆಚಾರಾತ್ಮಕ ಶಾಸ್ತ್ರಪ್ರದಾನ. ತನ್ ಇನ್ ಅರುಳ್ = ಶರಣರಮೇಲಿನ, ಅವನಿಗೂ ವಾಚಾಮ ಗೋಚರವಾದ ಸಿರಿಕೃಪೆ! ಮಿನ್ ಆರ್ ಮುಹಿಲ್ ಶೇರ್ = ಮಿಂಚೂ ಮೋಡವೂ ತುಂಬಿಯೇ ಸೇರಿರುವ, ತಿರುವೇಙ್ಗಡಮ್ = ವರ್ಷ ಸಮೃದ್ಧವಾದ ಗಿರಿಪ್ರದೇಶ. ಅಲ್ಲಿಯೇ ಅನವರತವಾಸಿ! ಶ್ರೀ ಸಮೇತ ವಾಸಿ! ತಿಮ್ಮಪ್ಪ ಅವಳ ನಡುವೆ ಸಿಕ್ಕೊಂಡಿರುವ ನೀಲ ತೋಯದ, ವಿದ್ಯುಲ್ಲೇಖೆಯ ಶ್ರೀ ಅದರ ಪರಿಧಿ! ಚಿನ್ನದ ಪ್ರಭಾವಳಿಯ ನಟ್ಟನಡುವೆ ವಿರಾಜಮಾನ ನೀಲಮೇಘಶ್ಯಾಮ! ಎನ್ ಅನ್ಯೆ = ಸದಾ ನೋಡುತ್ತಲೇ ಇರಬೇಕೆಂಬ ಕಾತುರವನ್ನು ಹುಟ್ಟಿಸುವ ಅರಣ್ಯದ ಗಜರಾಜ! ಎನ್ ಅಪ್ಪನ್ = ನನಗಾಗಿಯೇ ಇಷ್ಟೆಲ್ಲಾ ಆತನ ಮಹೋಪಕಾರ! ಇದೋ ನನ್ನೆದೆಯ ಸಿಂಹಾಸನವೇರಿ ತಾನು ಈಗ ಉಳ್ಳವನಾದಂತೆ ಸೇವೆ ನೀಡುತ್ತಿದ್ದಾನೆ. ಶರಣರು, ದೇವರನ್ನು ತಮಗಾಗಿ ಎಂದೂ, ತನ್ನ ಸ್ವಂತ ಸತ್ತೆ ಹಾಗೂ ಸಂತೋಷಕ್ಕೆಂದೂ ಉಭಯಧಾ ತಿಳಿದು

ಅನುಸಂಧಿಸುತ್ತಾರೆ. ಎನ್ ನೆಞ್ಜಿಲ್ ಉಳಾನೇ = ಸ್ವಾಮಿಯಿಂದ ಇವರ ಉಸಿರು. ಅತನಿಗೆ ಇವರಿಂದ ಉಸಿರು. ಈ ಪರಸ್ಪರ, ಜೀವ ದೇವರ ಅನ್ಯೋನ್ಯತೆ! ಸಮಗ್ರ ಸಂಪೂರ್ಣ, ಪಕ್ಷ-ವಿಪಕ್ಷ ಮರೆತೇ ಉಭಯಮುಖಿ, ಸಮಾಧಾನ ಸಂಧಾನ ಯೋಜನೆಗಳೇ ಸರಿದಾರಿ, ಅದರಿಂದಲೇ ಹಿರಿಗುರಿ! ಕೇವಲ ಅರ್ಚಾವತಾರ, ಅನ್ತರ್ಯಾಮಿತ್ವವನ್ನು ಮರೆಸುವಂತಹ ಅತಿರೇಕಕ್ಕೆ ಎಡೆಗೊಡಬಾರದೆಂಬ ಎಚ್ಚರಿಕೆಯ ಸೂಚನೆಯೂ ಇಲ್ಲಿದೆ. ಮೂರ್ತಿಪೂಜೆಯನ್ನು ನಿಷೇಧಿಸುವುದಾಗಲಿ, ಆಗ್ರಹಿಸುವುದಾಗಲಿ ಯಾರಿಗೂ ಕ್ಷೇಮಕಾರಿಯಲ್ಲ.

ತಮಿಳ್ ತಿರಳ್ ೧-೧೦-೭

ಮಾನ್ ಏಯ್ ಮಡನೋಕ್ಕಿ ತಿರತ್ತೆದಿರ್ ವನ್ದ ಆನ್ ಏಳ್, ವಿಡೈ ಶೆತ್ತವಣೆ ವರೈ ತ್ತೋಳಾ
ತೇನೇ ತಿರುವೇಙ್ಗಡ ಮಾ ಮಲೈ ಮೇಯ ಕೋನೇ! ಎನ್ ಮನಮ್ ಕುಡಿಕೊಣ್ಡಿರುನ್ದಾಯೇ

ಕನ್ನಡ ನೆರಳ್

ಹರಿಣಿಯ ಕಣ್‌ಪೋಲ್ ಗಂಭೀರದ ತರಳಾಕ್ಷಿ ನೀಳೆಯ ಸಲು! - ಎದಿರ್ ಹಾಯ್ದು
ಅರಿ ಹೋರಿಗಳೇಳರ ಹಿರಳ್ ಹಿಸುಕಿ! ಅಣಿಯಲು ನೀಳೆಗೆ ತಕ್ಕಾ ಗಿರಿ ದೃಢ ನೀಳ್ ದೋಳಾ!
ಓ ಮಧುವೇ! ಮಧುಕರ ಗೂಡಿಂ ಭಾಳವೇ ತುಂಬಿದ ಸಿರಿವೇಂಕಟ ಹಿರಿಮಲೆ ನಿತ್ಯಾಲಯನೇ
ಸ್ವಾಮಿಯೇ ಓ! ಎನ್ನೀ ಅನನ್ಯ ಮನಮಂ ಅನನ್ಯ ನೇಹದಿಂ ಗುಡಿಗೊಂಡಿಹೆ ಅಲಲಾ!

ಯಶೋದೆಯ ತಮ್ಮ ಕುಂಭನೆಂಬುವನು. ಅವನ ಮಗಳು ನೀಳೆ. ಆಕೆ ಬಾಲ್ಯದಿಂದಲೇ ವೀರವನಿತೆ. ಅವರ ಮನೆಯಲ್ಲಿ ರಾಕ್ಷಸಾಂಶದ ಏಳು ಗೂಳಿಗಳಿದ್ದವು. ಅವುಗಳನ್ನು ಮರ್ದನ ಮಾಡುವವನೇ ತನಗೆ ಗಂಡನಾಗತಕ್ಕುದು! ಈಪಣ! ಒಮ್ಮೆ ಗೆಳೆಯರ ಜತೆ ವ್ರಜ ಭೂಮಿಯಿಂದ ಕೃಷ್ಣ ಮಿಥಿಲೆಯ ಕುಂಭ ಮಾವನ ಮನೆಗೆ ಹೋಗುತ್ತಾನೆ. ಅನಾಯಾಸದಿಂದಲೇ ಸಪ್ತ ವೃಷಭಗಳನ್ನೂ ಆ ಕಡೆ ಈ ಕಡೆ ತನ್ನ ಕಂಕುಳಲ್ಲಿರಿಸಿ ನೆರುಗಿ ಅವುಗಳ ಹಿರಳು ಕೊಂಬುಗಳನ್ನೆಲ್ಲಾ ಮುರಿದೇ ಬಿಡುತ್ತಾನೆ. ಈ ನೀಳಾದೇವಿಯನ್ನು ಆಳ್ವಾರ್ ವರ್ಣಿಸುತ್ತಾರೆ ಈ ಹಾಡಿನಲ್ಲಿ.

ಮಾನ್‌ಏಯ್ = ಹರಿಣಾಕ್ಷಿಗಳನ್ನೇ ಹೋಲುವ ಕಣ್‌ಚೆಂದವುಳ್ಳ. ಮಡಮ್ ನೋಕ್ಕಿ = ಗಂಭೀರ, ತರಳ ನೋಟದ ನಪ್ಪಿನ್ನಾದೇವಿ ತಿರತ್ತು = ಅವಳ ಮೇಲಿನ ಆಸೆಗಾಗಿ, ಎದಿರ್‌ವನ್ದ = ಎದಿರೇಹಾಯ್ದು, ಅನ್ ಏಳ್ = ಸಪ್ತವೃಷಭಗಳನ್ನೂ, ವಿಡೈಶೆತ್ತ = ಹಿರಳು ಹಿಸುಕಿ ಕೊಂದ! ಅಣೆ = ಅಂತಯೇ, ಅಲಿಂಗನಕ್ಕೆ ಅಚ್ಚುಗಟ್ಟಾದ, ವಿರೈತ್ತೋಳಾ = ಪರ್ವತ ಬಾಹೋ! ಈ ಸಾಮರ್ಥ್ಯ ಹಾಗೂ ರಸಿಕತೆಯನ್ನು ಚೆಪ್ಪರಿಸಿ ಇವರೂ, ತೇನೇ = ಓ ಮಧುರನೇ! ಎನ್ನುತ್ತಾರೆ. ಚೇನು ಗೂಡು ಕಟ್ಟಬೇಕಾದರೆ ಸರಿಯಾದ ಸ್ಥಳ, ತಿರುವೇಙ್ಗಡಮ್ ಮಾ ಮಲೈ, ಅಲ್ಲಿ ಮೇಯ = ನಿತ್ಯಸ್ಥಳವಾಸಿ. ಈ ತಿಮ್ಮಪ್ಪನ ಗಿರಿಧಾಮದ ಮೇಲಿನ ಪ್ರೀತಿ ನಮಗೂ ದೇಶದ ಬೆಟ್ಟಗಳ ಬಗೆಗೆ ಪ್ರೇಮಾದರ ಹುಟ್ಟಿಸಲಿ. ಅಲ್ಲಿನ ಮರ ಕಡಿಯದಿರೋಣ. ಬಂಡೆ ಒಡೆಯದಿರೋಣ. ವಿರೂಪ ಪಡಿಸದಿರೋಣ. ತಿಮ್ಮಪ್ಪನ ಮನಕ್ಕೆ ಇಂಪಣವಾಗಿರೋಣ.

ನನ್ನಂತಹ ಆಸೆ ಪಟ್ಟವರಿಗೆ ಊಳಿಗ ನೀಡಿ, ಸೇವೆ ಮಾಡಿಸಿಕೊಳ್ಳುವ ಸಂದರ್ಭ ಒದಗಿಸಿದ. ಕೋನೇ = ಓ ಬೆಟ್ಟದರಸಾ ಜೇನಿಗಿಂತಲೂ ಮಧುರತರವಾದ ನಿನ್ನ ಭೋಗ್ಯತಾ ರಸವನ್ನು ತೋರದಿದ್ದರೆ ನಾನೆಲ್ಲಿ ನಿನ್ನ ಕೈಂಕರ್ಯ ಮಾಡುತ್ತಿದ್ದೆ! ಅಂತೂ ನಿನೇ ನಿನಗಾಗಿಯೇ ನನ್ನನ್ನು ಆ ನೀಳೆಯಂತೇ ಮೀಸಲಾಗಿಸಿಕೊಂಡೆ. ಈ ಅನನ್ಯನಿಂದಲೇ ಅನನ್ಯನಾದ ಈ ನನ್ನ ಮನವನ್ನು ಏನ್‌ಮನಮ್. ಕುಡಿಕೊಣ್ಡು = ನಿತ್ಯಧಾಮವನ್ನಾಗಿಸಿಕೊಂಡು, ಇರುನ್ದಾಯೇ = ಅದೆಷ್ಟು ಪ್ರೇಮರಸದಿಂದ ಕೂಡಿದ್ದೀಯೆ! ಜ್ಞಾನಮಾರ್ಗದಲ್ಲಿ, ಮಾನವನಿಗೆ ದೇಹ ಇಂದ್ರಿಯಾದಿಗಳ ನಿಗ್ರಹಕ್ಕೇ ಹೆಚ್ಚು ಒತ್ತು. ಅದು ಕೆಲವರಿಗೆ ಸಾಧ್ಯ. ಪ್ರೇಮಮಾರ್ಗದಲ್ಲಿ ದೇಹೇಂದ್ರಿಯಾದಿಗಳನ್ನು ಪಾವನ ಸ್ವರೂಪನೂ ಸುಂದರಾಂಗನೂ ಆದವನಿಗೆ ಅರ್ಪಿಸಿಕೊಳ್ಳುವ ರಾಜಯೋಗ. ಇದರಲ್ಲಿ ಇಂದ್ರಿಯಾದಿಗಳನ್ನು ಸತ್ ಪಾತ್ರದಲ್ಲಿ ಉಪಯೋಗಿಸುವ ಜೀವನ ಕಲೆಯಿದೆ. ಜ್ಞಾನದ ಎಚ್ಚರಿಕೆಗಳನ್ನು ಭಾರವಾಗದಂತೆ ನಿರ್ವಹಿಸುವ ಕೌಶಲವಿದೆ.

ತಮಿಳ್ ತಿರಳ್ ೧-೧೦-೮

ಶೇಯನ್ ಅಣಿಯನ್ ಎನ ಶಿನ್ನ್ಯೆಯುಳ್ ನಿನ್ನ ಮಾಯನ್ ಮಣಿವಾಳ್ ಒಳಿ ವೆಣ್ ತರಳಙ್ಗಳ್
ವೇಯ್ ವಿಣ್ದುದಿರ್ ವೇಙ್ಗಡ ಮಾ ಮಲೈ ಮೇಯ ಆಯನ್ ಅಡಿಯಲ್ಲದು ಮತ್ತರಿಯೇನೇ

ಕನ್ನಡ ನೆರಳ್

ಸನಿಯನು ದೂರನು ಎನ್ ಇದೋ ಚಿತ್ತದೊಳ್ ನಿಂತ ಚ್ಚರಿಗ! ಮಿನುಗುವ ರನ್ನದ ಮೆರುಗುವ ಬೆಳ್ ಮುತ್ತುಗಳ
'ವೇಯ್' ಎನು ಬಿದಿರ್ ಮೆಳೆ ಸಿಡಿಸುದುರಿಪ ವೇಂಕಟ ಬೆತ್ತರ ಬೆಟ್ಟದಿ ನಿಂದಿಹ
'ಆಯ್' ಗೋವಳನಡಿಯಲ್ಲದೆ ಮಗುದೊಂದರಿಯೆನಲಾ!

'ಬ್ರಹ್ಮಣ್ಯೋ ದೇವಕೀಪುತ್ರಃ' ಆದರೂ ಸಾಲದೆ 'ನೀಳಾಕುಲೇನ' ತಾನೂ ಅವಳಂತೆಯೇ ಆಗಲು, ಮಧುರೆಯಿಂದ ಗೊಲ್ಲರ ತಾಂಡ್ಯ ಸೇರಿದ್ದು! ಶ್ರೀ ಭೂ ದೇವಿಗಳಿಗಿಂತಲೂ ಗುಣವತ್ತಮೆ ಈ ನೀಳಾದೇವಿ. ತಪ್ಪು ಮಾಡಿದ ಚೇತನರ ಮೇಲೆ ಕೇಸ್ ಹಾಕಿದಾಗ ವಕಾಲತ್ತು ವಹಿಸಿ, ಜಗಜ್ಜಾಹೀರಾದ, ಬಳಿಕ ನಿರಪರಾಧಿಯೆಂಬುದನ್ನು ಸಾಬೀತು ಪಡಿಸುವಂತೆ ಮಹಾಲಕ್ಷ್ಮಿಯ ಪುರುಷಕಾರ. ಭೂತಾಯಿಯ ಕ್ಷಮೆ ಇಲಾಖೊಳಗೇ ನಡೆದು ಅಷ್ಟೊಂದು ಹಗರಣ ಹೊರಕ್ಕೆ ಸೋರದಂತಹ ಸಂವಿಧಾನ! ನೀಳೆಯದು, ಸ್ವಾಮಿ ಹೊರಗಿನಿಂದ ಮನೆಗೆ ಬಂದರೆ ಆಹಾ! ನನ್ನ ಮಕ್ಕಳು ಎಷ್ಟೊಂದು ಸ್ವಯಂ ವಿಧೇಯರಾಗಿ ಬಿಟ್ಟಿದ್ದಾರೆ! ಎನ್ನುವಂತೆ ಗಂಡನ ಮನಸ್ಸಿಗೆ ಸಂತೋಷವಾಗುವಂತೆ ವಿಶ್ವಸಂರಕ್ಷಣೆ ನಡೆಸುವ ಮಹಾ ರಚನಾತ್ಮಕ ಪುರುಷಕಾರ!

ಇಂತಹ ನೀಳಾವಲ್ಲಭನೇ ಈಗ ಈ ತಿರುಪತಿಯ ಶ್ರೀನಿವಾಸ. ಈ ಕಾನೂನು ನಿರಪೇಕ್ಷವಾದ ಸ್ವಯಂ ಅನುಶಾಸಿತ ಸತ್ ಪ್ರಜೆಗಳುಳ್ಳ ವಿಶ್ವ ಕುಟುಂಬಿ ದಿವ್ಯ ದಂಪತಿಗಳ ಪೂಜಾ ಭಾಗ್ಯ ನನಗೀಗ ಸಿಕ್ಕಿತಲ್ಲಾ!

ತದ್ ದೂರೇ ತದ್ ಉ ಅನ್ತಿಕೇ - ಈಶೋಪನಿಷತ್

ಮಂತ್ರ ದ್ರಷ್ಟಾ ದಧ್ಯಙ್ ಮಹರ್ಷಿಯ ಅನುಭವದಂತೆಯೇ ಈ ದ್ರಾವಿಡೋಪನಿಷದಂಗ ದ್ರಷ್ಟಾರರಾದ ಈ ಅಳ್ವಾರರೂ! ಶೇಯನ್ = ಬೇಡದವರಿಗೆ ದೂರಸ್ಥ. ಬೇಕೆನುವವರಿಗೆ. ಅಣೆಯನ್ = ಸನಿಹನ್! ಒಬ್ಬನೇ ಶ್ರೀ ಕೃಷ್ಣ ಕೌರವರಿಗೆ ದೂರನಾಗಿಯೂ, ಪಾಂಡವರಿಗೆ ಸಮೀಪಸ್ಥನಾಗಿಯೂ ಇದ್ದನಷ್ಟೆ.

ಬೇಕೆನ್ನುವವರಿಗೆ ನಾನು ಸರ್ವಸೇವಕನೆಂಬುದನ್ನು ನೀವು ಅದೆಂತು ಅರಿತಿರಿ? ಎನ್ ಶಿನ್ವೆಯುಳ್ ನಿನ್ನ ಮಾಯನ್ = ಎಲ್ಲದರೊಳಗೂ ಎಲ್ಲರೊಳಗೂ ನೀನಿರುವುದು ಸಾಮಾನ್ಯ. ನಾನೂ ಆ ಗೋಷ್ಠಿಗೇ ಮೊದಲು ಸೇರಿದವನಾಗಿದ್ದೆನು. ನಿನ್ನ ಬಗೆಗೆ ಬಯಕೆಯೇ ಆಗ ಇರಲಿಲ್ಲ. ಅಂತಹ ನನ್ನ ಒರಟು ಹೃದಯವನ್ನು ನೀನಾಗಿ ವಾತ್ಸಲ್ಯದಿಂದ ವಿಶೇಷವಾಗಿ ಹೊಕ್ಕು, ಮತ್ತೆಲ್ಲೂ ಹೋಗದಂತೆ ನಿಂತೇ ಇರುವ ಅತ್ಯಾಶ್ಚರ್ಯಕರನೇ! ಇದೇ ನಿನ್ನ ಮಾಯಾ ಚಾತುರ್ಯ! ದೇವರಿಂದಲೇ "ಮಾಯಾ" ಶಬ್ದಾರ್ಥ ಪಡೆದವರೇ ನಿಜ ಶರಣರು. ದಾರ್ಶನಿಕರು ನಡೆಸುವ ಮಾಯಾ ಶಬ್ದಾರ್ಥದ ಗೋಜಲು ಇವರಿಗಿಲ್ಲ!

ನೀನೀಗ ಚಲೋ ತಾಣವನ್ನೇ ಅರಿಸಿಕೊಂಡಿದ್ದೀಯೆ! ವಾಳ್ ಒಳಿ = ಥಳ ಥಳಿಸುವ ಕತ್ತಿಯಂತೆ ಹರಿತವಾದ ಕಾಂತಿಯುಳ್ಳ. ಮಣಿ ನವರತ್ನಗಳೂ, ವೆಳ್ ತರಳಙ್ಗಳ್ = ಬೆಳ್ಳನ ಮುತ್ತಿನ ಬಿದಿರು ಅಕ್ಕಿಗಳನ್ನು. ವೇಯ್ = ಬಿದಿರು ಮೆಳೆಗಳು, ವಿಣ್ಡು = ಸಿಡಿಸಿ, ಉದಿರ್ = ಉದಿರಿಸುತ್ತಲೇ ಇರುವ, ಹೊರುವಾಗಿ ಬೆಳೆದಿರುವ ತಿರುಪತಿಯ ಕೀಚಕವನಗಳಲ್ಲಿ ಎಲ್ಲೆಲ್ಲೂ ಚೆಲ್ಲಾಡಿರುವ ಬಿದಿರಕ್ಕಿಗಳ ರಾಶಿ! ಅವೆಷ್ಟು ಸಹಜ ಸುಂದರ ರುಚಿ ಶುಚಿಕರವಾದ ಅನ್ನ ಈ ಗಿರಿಜನರಿಗೆ! ಇಂತಹ ಗಿರಿಜನಾನ್ನದಾನಿ. ವೇಙ್ಗಡಂ ಮಾ ಮಲೈ ಮೇಯ = ದಿವ್ಯಾನ್ನ ಭವ್ಯಾನ್ನ ಈ ಉಭಯಾನ್ನ ನೀಡುತ್ತಲೇ ಇರುವ ಓ ಮಾಮಲೆವಾಸೀ! ನಿನ್ನ, ಆಯನ್ ಅಡಿ = ಗೊಲ್ಲರ ಹುಡುಗಿಯಾದ ನೀಳೆಯ್ಚಳನ್ನೂ ಚೆನ್ನಪ್ಪಿ ನೀನೂ ಗೋವಳನಾದೆ! ಅಂಥವನ ಶ್ರೀಮತ್ ಪಾದ ಸೇವೆಯಲ್ಲದೆ, ಅಲ್ಲದು ಮತ್ತು ಅರಿಯೇನ್ = ಬೇರೆ ಒಂಟಿ ದೆವನ ಸೇವಾ ಪೂಜೆಯನ್ನು, ಮನಸ್ಸಿನಿಂದಲೂ ನಾನು ಹೇಗೆ ತಾನೇ ನೆನೆದೇನು! ಕಾರಣ ನೀಳಾಕೃಷ್ಣರ ಜೋಡಿ ಈ ದಾಸನ ಹೃದಯಾಂತಃಪುರದಲ್ಲಿ ದಿವ್ಯ ಲೋಕ ಹಿತೈಷಿ ಪ್ರಿಯೈಷಿ, ದಾಂಪತ್ಯ ನಡೆಸುತ್ತಿದ್ದಾರೆ! ಯಾವೊಂದೂ ಅಪೇಕ್ಷೆಯಿಲ್ಲದ ಅವಾಪ್ತ ಸಮಸ್ತ ಕಾಮನೇ! ನನ್ನೀ ಮನಸ್ಸನ್ನು ನೀನೇ ಅಸೆ ಪಟ್ಟಿರುವಾಗ ಸಾಪೇಕ್ಷನಾದ ನಾನು ಆ ಗೊಲ್ಲನನ್ನು ಬಿಟ್ಟೇನೇ? ಹೀಗೆ ಯೋಚಿಸಲು ತಾನೇ ಸಾಧ್ಯವೇ? ಅತ ಅನ್ಯಚಿಂತೆಗೇ ಅವಕಾಶ ಕೊಡದಷ್ಟು ಪ್ರೀತಿಯಿಂದ ಇದೋ ಅನನ್ಯನಾಗಿಯೇ ನನ್ನಲ್ಲಿ ತುಂಬಿದ್ದಾನೆ!

ತಮಿಳ್ ತಿರಳ್ ೧೦-೧೦-೯

ವನ್ದಾಯ್ ಎನ್ ಮನಮ್ ಪುಹುನ್ದಾಯ್ ಮನ್ನಿ, ನಿನ್ದಾಯ್ ನನ್ದಾದ ಕೊಳುಮ್ ಶುಡರೇ! ಎಙ್ಗಳ್ ನಮ್ಬೀ!
ಶಿನ್ದಾ ಮಣಿಯೇ! ತಿರುವೇಙ್ಗಡಮ್ ಮೇಯ ಎನ್ದಾಯ್! ಇನಿ ಯಾನ್ ಉನ್ನೈ ಎನ್ನುಮ್ ವಿಡೇನೇ

ಕನ್ನಡ ನೆರಳ್

ಬಂದೇ ಎನ್‌ಮನ ಹೊಕ್ಕೆ ಸ್ಥಿರ ನಿಂತೆ ನಂದಾ ದೀಪದೋಲ್ ಬೆಳು ಸೊಡರೇ ಎಮ್ ಪೂರ್ಣಾ
ಚಿಂತಾಮಣಿಯೇ ಸಿರಿವೇಂಕಟ ಸತತಾssವಾಸಾ ಎನ್‌ತಂದೇ ಇನ್ ನಾನೆಂದೂ ನಿನ್ನನು ಬಿಡೆನಯ್ಯಾ

ವನ್ದಾಯ್ = ನಾನಾಗಿ ನಾನೇನೂ ಬಯಸಲಿಲ್ಲ. ಶ್ರೀ ವೈಂಕುಂಠದ "ದೇವಾನಾಂ ಪೂರಯೋಧ್ಯಾ" - ಯಜುರಾರಣ್ಯಕ ಎಂಬ ವೇದ ವಚನದಂತೆ ಆ ದಿವ್ಯ ರಾಜಧಾನಿಯಿಂದ ನಾನಿರುವೆಡೆಗೇ ಬಂದೆಯಲ್ಲೋ ಹರಿ ಹರೀ! ಮನಮ್ ಪುಹುನ್ದಾಯ್ = ನನ್ನ ಮನಸ್ಸನ್ನು ವಿಲಕ್ಷಣವಾಗಿ ಹೊಕ್ಕು ನಿತ್ಯನಿಂತಿದ್ದೀ! ಇದನ್ನು ನಾನು ಅಪೇಕ್ಷಿಸಿರಲಿಲ್ಲ! ಆದರೆ "ನೀನು ಬರಲೇ ಬೇಡ" ಎಂದು ನಿಷೇಧಿಸಲಿಲ್ಲ! ಈ

ಅಪ್ರತಿಷೇಧವೇ, ಮುಮುಕ್ಷು ಅಂದರೆ ಸ್ವತಂತ್ರ ಮಾನವನ ರಹಸ್ಯ! ಯಾವುದನ್ನೂ "ಅಪೋಸ್ ಮಾಡುವುದು", ಸ್ವಾತಂತ್ರ್ಯಕ್ಕೆ ಹೊಂದಿ ಬರುವ ವಿಚಾರವಲ್ಲ. "ಅಡಳಿತ ಪಕ್ಷ-ಪ್ರತಿಪಕ್ಷ" ಇವೆಲ್ಲಾ ಸನ್ಮಾನವೀಯತೆಯಲ್ಲ! ಎಲ್ಲ ಬಗೆಯ ಸಾಧಕ ಬಾಧಕ ವಿಚಾರ ನಡೆಯಲಿ, ಒಂದೇ ಹೆಪ್ಪಾಗಿರೋಣ. ಈಗಿನ ಅಸುರೀ ಪದ್ಧತಿಯ ಅಂಧಾನುಕರಣೆಯ ಕಷ್ಟ ನಷ್ಟ ನಮ್ಮ ಅನುಭವಕ್ಕೇ ಸಾಕಷ್ಟು ಬಂದಾಗಿದೆ. ಮಹಾತ್ಮರಾದ ಶರಣರ ಸೂತ್ರ ಪಾಲನೆ ಮಾಡೋಣ.

ಈ ನನ್ನ "ಅಪೋಸಿಷನ್" ಇಲ್ಲದಿದ್ದುದನ್ನೇ, ನೀನು ನಿಷ್ಕಪಟನಾಗಿ ಉಪಯೋಗಿಸಿಕೊಂಡೆಯಲ್ಲೋ ಜಾಣ! ಈ ಇತರರಲ್ಲಿ ತಪ್ಪನ್ನೇ ಎಣಿಸದೆ ಋಜು ಚಾತುರ್ಯ ಗುಣದಿಂದ ತಿಮ್ಮಪ್ಪನ ಕಳೆಯೇರಿರುವುದನ್ನೇ ಈಗ ಈ ಅಳ್ವಾರ್, ಅನುಭವಿಸುತ್ತಿದ್ದಾರೆ! ನನ್ನಾದ ಕೊಳುಮ್ ಶುಡರೇ = ನಂದದ ಉಜ್ವಲ ತೇಜೋಮಯ - ದಹಿಸದೆ - ಪ್ರಕಾಶ ಮಾತ್ರ ನೀಡುವ ಓ ಅಖಂಡ ದೀಪ ಸ್ವರೂಪಾ! ಎಮ್ಗಳ್ ನಮ್ಬೀ = ನಮ್ಮಲ್ಲಿ ಏನೊಂದು ಗುಣಾಂಶ ಲೇಶವಾದರೂ ಇಲ್ಲ. ಇದ್ದಂತೆ ಕಂಡರೂ ಅದು ಸಮಸ್ಯಾ ಪರಿಹಾರಕವಾಗದೆ ಇನ್ನೂ ದಿನೇ ದಿನೇ ಕಗ್ಗಂಟುಗಳನ್ನೇ ಸೀಗೆಬೆಲಿಯಂತೆ ಹೆಚ್ಚಿಸಲೇ ಅವು ಒದಗಿ ಬಂದಂತಾದವು. ಭಾರಿ ಖಾಲಿಯಾದ ಅಪಾಯದ ಕಮರಿಯಂತಾಗಿದ್ದೆವು. ನಿನ್ನ ನಾನಾ ಬಗೆಯ, ಉನ್ನತಮಟ್ಟದ ಪೂರ್ಣತೆ, ನಮ್ಮೀ ಅಪೂರ್ಣತೆಯ ಹಳ್ಳವನ್ನು ತುಂಬಿ ಸಮತೆಯನ್ನು ತರುವಂಥದು. ನಾವು ಸುಮ್ಮನೆ ಸೋಗಿಗಾಗಿ, ಮೋಜಿಗಾಗಿ

ಸಮಾನತೆ, ಬಂಧುಭಾವ, ಸ್ವಾತಂತ್ರ್ಯದ

ಒಳ್ಳೊಳ್ಳೆ ಮಾತನಾಡುತ್ತಾ, ಜನರನ್ನೂ ತಪ್ಪುದಾರಿಗೇ ಎಳೆದೆವಯ್ಯಾ. ಹೇಳುವವರು ಹೆಡ್ಡರಾದರೆ ಕೇಳುವವರೂ ದಡ್ಡರಾಗಿರಬೇಕೆ? ಈಗ ತಿಮ್ಮಪ್ಪಾ! ನಿನ್ನಿಂದ ವಿಚಾರ ಶಕ್ತಿ ಕುದುರಿತು. ನಿನ್ನ ಪ್ರೇಮಳ ಅಹಿಂಸಾಪಥವೇ ಸರಿ! ನಾವಿನ್ನು ಪಥಃ ಸ್ಖಲಿತರಾಗದಂತೆ ಅಖಂಡ ತುಪ್ಪದ ನಂದಾದೀಪನಾಗಿಯೇ ರಸಾಲನಾಗಿ ಅರ್ಪ್ಪನಾಗಿ ತೇಜಸ್ವಿಯಾಗಿ ದರ್ಶನ ಭಾಗ್ಯ ನೀಡುತ್ತಿದ್ದೀಯೆ!

ಶಿನ್ನಾಮಣಿಯೇ = ಸ್ವರ್ಗದ ಚಿಂತಾಮಣಿಯನ್ನು ಫಲ ದೊರೆತ ಮೇಲೆ ಬಿಟ್ಟುಬಿಡಬಹುದು. ಅದು ಸಮಯ ಸಾಧಕತೆಯನ್ನು ಸಹಿಸುತ್ತದೆ. ನೀನಂತಹ ಕ್ಷುದ್ರ ಚಿಂತಾಮಣಿರತ್ನದಂತಲ್ಲ. ಸಾಧನಾ ಕಾಲದಲ್ಲೂ ಫಲಕಾಲದಲ್ಲೂ ಬಿಡಲ್ಪಡದಂತಹ ರನ್ನಾ! ಚಿನ್ನಾ! ಶರಣರ ಪ್ರೇಮ, ಅಹಿಂಸೆ, ಸತ್ಯದ ಆಗ್ರಹ, ಸಖ್ಯದ ಆಗ್ರಹ, ನಿತ್ಯಧರ್ಮ, ದೇವನೇನು ದೈವೀಗುಣಗಳೇನು ಮಿಶ್ರಣವಿಲ್ಲದ ಶುದ್ಧ ಸಾತ್ವಿಕ ವ್ಯವಹಾರದಲ್ಲಿ ನಿನ್ನ ಥಾಕತ್ತೆಲ್ಲಾ ಅಡಗಿದೆ! ಅಹಿಂಸೆ ಹೇಡಿತನವಲ್ಲ! ಕಷ್ಟ ಸಹನಾ ತಿತಿಕ್ಷೆಯ ಮಹಾಶಕ್ತಿ, ಎದುರಾಳಿಯಂತೆ ಹೊರಕ್ಕಿ ಕಾಣುವವನಿಗೆ ಅತನ ದೌಷ್ಟ್ಯಕ್ಕೆ ನಾವು ಪ್ರತಿದೌಷ್ಟ್ಯವನ್ನಲ್ಲ, ತೋರುವುದು. ನಿಜವಾದ ಪ್ರತೀಕಾರ, ನಿಜವಾದ ಸ್ವಾತಂತ್ರ್ಯದ ಅರ್ಥ ಈಗಾಯಿತಪ್ಪಾ! ತಿರುವೇಙ್ಗಡಮ್ ಮೇಯ ಎನ್ದಾಯ್ = ಓ ಬಾಪುಜಿ ವೇಂಕಟೇಶ ಭಗವನ್! ಇನಿ = ಇನ್ನುಮೇಲೆ, ಯಾನ್ ಉನ್ನೈ = ನಿನ್ನ ವಿಶೇಷ ಕೃಪೆಗೆ ಪಾತ್ರನಾದ ನಾನಿದೋ, ನಿನ್ನನ್ನು ಯಾವೊಂದವಸ್ಥೆಯಲ್ಲೂ, ಸಂಕಟಬಂದಾಗ ವೇಂಕಟರಮಣನಲ್ಲ! ಸರ್ವಾವಸ್ಥೆ, ಸರ್ವಕಾಲ, ಸರ್ವದೇಶಗಳಲ್ಲೂ ನಿನ್ನ ಹೃದಯ ಅರಳುವಂತೆ ನಾನಿದೋ, ಎಂದೆಂದೂ ನಿನ್ನನ್ನು ನಿನ್ನ ದಾರಿಯನ್ನು ಬಿಡೆನು! ಎನ್ನುಂವಿಡೇನೇ! ಇದರಿಂದ ಪರಭಕ್ತಿ ಪರ್ಯಂತವಾಗಿ ತಿರುಮಂಗೈಗಳಿಗೆ, ತಿಮ್ಮಪ್ಪ ಪಕ್ವ ಪಡಿಸಿಬಿಟ್ಟನೆಂಬುದು ತಿಳಿಯುತ್ತದೆ. ಅರೆಕ್ಷಣವೂ ದೇವರನ್ನು ಮರೆತು ಬಿಡುವ ಸ್ಥಿತಿಯನ್ನು ಇವರು ದಾಟಿಯಾಯಿತು. ಇದನ್ನೇ ಪರಭಕ್ತಿ ಎನ್ನುವುದು. ಬಿಟ್ಟರೆ ಇವರು ಜೀವಿಸಲಾರದ ಆ ಉತ್ತರೋತ್ತಮ ಭೂಮಿಕೆಗೆ ಏರುತ್ತಿರುವುದು ಇಲ್ಲೆಲ್ಲಾ ವ್ಯಕ್ತವಾಗಿ ಸೂಚಿಸಲ್ಪಡುತ್ತದೆ.

ತಮಿಳ್ ತಿರಳ್ ೧-೧೦-೧೦

ವಿಲ್ಲಾರ್‌ಮಲಿ ವೇಙ್ಗಡ ಮಾಮಲೈ ಮೇಯ ಮಲ್ಲಾರ್ ತಿರಡೋಳ್ ಮಣಿವಣ್ಣ ನಮ್ಮಾನೈ
ಕಲ್ಲಾರ್ ತಿರಡೋಳ್ ಕಲಿಯನ್ ಶೊನ್ನ ಮಾಲೈ ವಲ್ಲಾರ್ ಅವರ್ ವಾನವರ್ ಆಹುವರ್ ತಾಮೇ

ಕನ್ನಡ ನೆರಳ್

ಬಿಲ್ ಬೇಡರಿಂ ತುಂಬಿಹ ವೇಂಕಟ ಘನಗಿರಿ ಧಾಮನ ಬಲ್ ಮಿಗೆ ತಿಣ್ ತೋಳ್ ಮಣಿಮೀರ್ ಬಣ್ಣನ ಮೀಶನಂಕುರಿತೀ
ಕಲ್‌ಗುರುತರಬಲದೃಢಬಾಹು ಕಲಿಹರನ್ ಸೊಲ್ ಮಾಲೆಯನು ಬಲ್ಲವರವರ್ ಅಲ್ಲಿನ ಬಾನ್ ಸೂರಿಗಳ್ಗಾಗುವರ್ ಇಲ್ಲಿಂದಲೆ ತಾವೇ!

ಆ ನಿತ್ಯ ವಿಭೂತಿ ನಿಜಕ್ಕೂ ಶುದ್ಧಸತ್ವಮಯ. ಅಲ್ಲಿ ಏನೂ ಭಯಕ್ಕೆ ಅವಕಾಶವೇ ಇಲ್ಲ. ಆದರೂ ಆ ದಿವ್ಯ ಲೋಕೋತ್ತರ ಪರಂಧಾಮದಲ್ಲಿ ಪ್ರೇಮಾತಿಶಯದಿಂದ ಅಸ್ಥಾನೇ ಭಯಶಂಕೆ! ವೈಕುಂಠನಾಥನ ಸೌಂದರ್ಯ ಸೌಕುಮಾರ್ಯಾದಿಗಳಿಗೆ ಏನು ಅವದ್ಯ ಸಂಭವಿಸಿ ಬಿಡುವುದೋ! ಇದು ಅನನ್ತ ಗರುಡ ವಿಷ್ವಕ್ ಸೇನಾದಿಗಳ ಸ್ನೇಹಾತ್ ಅಸ್ಥಾನ ರಕ್ಷಾ ವ್ಯಸನ! ಅದಕ್ಕಾಗಿ "ವಿಜಯೀಭವ! ವಿಜಯೀಭವ"

ಪರಾಕು ಎಚ್ಚರಿಕೆ! ಸ್ವಾಮಿ ಎಚ್ಚರಿಕೆ ಇದೇ ಮಂಗಳಾಶಾಸನ. ಸಿರಿಪತಿ ಗೆಲ್ಗೆ! ಪಲ್ಲಾಂಡು ಪಲ್ಲಾಂಡು! ಪೋತ್ತಿ! ಪೋತ್ತಿ! ವಾಳ್ಹ! ವಾಳಿಯೇ! ಜಯ್ ಹೋ!

ಅಲ್ಲೇ ಹೀಗಿರುವಾಗ ಈ ಲೀಲಾ ವಿಭೂತಿ ಮಿಶ್ರಸತ್ವ! ರಜೋಗುಣ ತಮೋಗುಣಗಳೇ ಅತಿ. ಸತ್ವ ಬಲು ಕಡಿಮೆ! ರಾಗ ದ್ವೇಷಗಳ ತಾಂಡವ! ಅತಿ ನಿದ್ರೆ, ಸೋಮಾರಿತನ ಪ್ರಮಾದ, ಈ ರಜಸ್ತಮೋ ಗುಣಗಳದೇ ಬಹುಮತ ರಾಜ್ಯ! ನ್ಯಾಯವಾಗಿ ಇಲ್ಲೀಗ ಮಂಗಳಾssಶಾಸನ ಅಗತ್ಯ! ಅಮಂಗಳಗಳಿಗೆ ಮೂಲ ಕಾರಣವನ್ನು ಹುಡುಕುವುದರಿಂದ ಮೊದಲ್‌ಗೊಂಡು, ಸೇವಕನಾದ ನನ್ನ ಜೀವನದಲ್ಲಿ ಅಂತಹ ಅನಿಷ್ಟಗಳು ಸುಳಿಯದಂತೆ ಎಚ್ಚರಿಕೆ ಮುಖ್ಯ. ದೇವರೆಂದರೆ, ಸತ್ಯ ಪ್ರೇಮ ಕರುಣಾಮೂರ್ತಿ, ಅವುಗಳ ರಕ್ಷಣೆಗಾಗಿ ಸಾಕಷ್ಟು ಪ್ರಯತ್ನ ಪಡುವುದೇ ಅದೂ ಸವಿನಯ! ನಿರಹಂ! ನಿರ್‌ಮಮ! ಇಷ್ಟಾದರೂ ಅಳಿಯದ ಮಹಾವಿಶ್ವಾಸ ಶಕ್ತಿ. ಎಲ್ಲರ ಬಗೆಗೂ ನಿರಾಗ್ರಹ! ತನ್ನ ಬಗೆಗೆ ಆಗ್ರಹ! ಕೊನೆಗೆ ಅಸತ್ಯ, ದ್ವೇಷ, ನಿರ್ದಯೆಗಳಿಗೆ ಎಂದೂ ಮಣಿಯದೆ, ಸಕಲ ತ್ಯಾಗಕ್ಕೂ ಸಿದ್ಧತೆ! ದ್ವೇಷಿಗಳಲ್ಲೂ ಪ್ರೇಮ! ಅವರಿಗೆ ಸಹಾಯವನ್ನೇ ಅತಿವಾತ್ಸಲ್ಯದಿಂದ ನೀಡಬೇಕು. ಅವರ ಕೆಟ್ಟದ್ದಕ್ಕೆ ಮಾತ್ರ ನಾವು ಬಗ್ಗಬಾರದು. ಸಹಕರಿಸಬಾರದು. ಸತ್ಯಕ್ಕೆ ತತ್ವವಿಚಾರ ಶಕ್ತಿಯೇ ಗುರುತು! ಪ್ರೇಮಕ್ಕೆ ಚಿತ್ತ ಶುದ್ಧಿಯೇ ನಿಶಾನೆ! ಕರುಣೆಗೆ, ಯಾರಿವರು ಎಂತಹವರು ಈ ಜಿಜ್ಞಾಸೆ ಹತ್ತಿಸಿ ಕೊಳ್ಳದೆ, ಒಡನೆಯೇ ಎಲ್ಲರ ಸೇವೆಗೆ ಟೊಂಕ ಕಟ್ಟುವುದೇ ಲಕ್ಷಣ!

ತಿರುಮಲೆ ಜಂಗಲ್ ಮೂಲ ನಿವಾಸಿಗಳು ಅವರ ಆ ಸ್ವಧರ್ಮದಂತೆ ಬೇಡರ ವೃತ್ತಿಗೆ ತಕ್ಕಂತೆ ಯಾವಾಗಲೂ ಧನುರ್‌ಧಾರಿಗಳಾಗಿ ಸ್ವಾಮಿಯ ಯಾತ್ರಿಕರ ರಕ್ಷಣೆಯ ಬಗ್ಗೆ ಕಾಳಜಿ ವಹಿಸುತ್ತಿರುವುದನ್ನು ಈ ಹಾಡಿನಲ್ಲಿ ತಿರುಮಂಗೈಯಾಳ್ವಾರ್ ಪ್ರಸ್ತಾಪಿಸಿದ್ದಾರೆ. ವಿಲ್ ಆರ್ = ಸದಾ ಬಿಲ್‌ಬಾಗಿಸಿ ಪೂರ್ಣ ಸನ್ನದ್ಧರಾಗಿದ್ದು. ಮಲಿ = ತಿಮ್ಮಪ್ಪನ ಅಮಂಗಳಕಾರಿ ಶಕ್ತಿಗಳನ್ನು ಬಲಿ ಹಾಕಲು ತಕ್ಕ ಸಾಮರ್ಥ್ಯ ಉಳ್ಳವರು. ೫೦೦೦ ವರ್ಷಗಳ ಹಿಂದಿನ ಮಂಗಳಾssಶಾಸನದ ಒಂದು ಇಣುಕು ನೋಟ ನಮಗಿಲ್ಲಿ ಆಗುತ್ತದೆ. ಬಿಲ್ಲು ಬಾಣ ಅಂದಿನ ರಕ್ಷಣಾಧರ್ಮದ ಬಾಹ್ಯ ಸಂಕೇತ. ಅದು ನಿಜಕ್ಕೂ ಅನ್ಯಾಯದ ಹಿಂಸೆಯಲ್ಲ. ದುಷ್ಟ ಜನಗಳ ದಮನ, ಸಜ್ಜನರ ರಕ್ಷಣೆ ಅಲ್ಲಿನ ಮೌಲಿಕ ಸತ್ಯ. ಇಂದಿನ ಯುದ್ಧಗಳೋ ನಿರಪರಾಧಿ, ಆಸ್ಪತ್ರೆ, ಗ್ರಂಥಾಲಯ, ಸ್ತ್ರೀಯರು ಮಕ್ಕಳು ಎಲ್ಲರ ಮೇಲೂ, ಅತಿ ಘೋರತಮ ಹಾಗೂ ನೀತಿಗೆಟ್ಟ ಬಾಂಬ್ ಪ್ರಯೋಗ ಇತ್ಯಾದಿಗಳ ತುಲನೆಯಲ್ಲಿ ಬೇಡರ ಅಲ್ಪಹಿಂಸೆಯನ್ನು ನಾವಿಲ್ಲಿ ಹಿಂಸೆಯೆಂದು ಪರಿಗಣಿಸುವಂತಿಲ್ಲ.

ವೇಙ್ಗಡಮ್ ಮಾಮಲೈ ಮೇಯ = ವೇಂಕಟಾಚಲ ನಿತ್ಯವಾಸಿ! ಪರಮಾತ್ಮನ ನಿತ್ಯತೆಯ ಪರಿಚಯ ತಾಗಿದರೇ ಸಾಕು! ಎಷ್ಟೋ ಜನಗಳ ಅಶುಭ ಪರಿಹಾರಕ್ಕೆ ನಾಂದಿಯಾಗುವುದು. ಆತ ನಮ್ಮ ಬಗ್ಗೆ ಮಂಗಳಾಸನಪರನೂ ಹೌದು! ನಮ್ಮಿಂದ ಮಂಗಳಾssಶಾಸನ ಪಡೆಯುವ ನಿಸ್ಸಂಕೋಚ ಸ್ವಭಾವದವನೂ ಹೌದು. ನಮ್ಮ ಭಾಗದ ಪ್ರೇಮ ಕಾರ್ಯಗಳನ್ನು ಅವನು ತಡೆಯುವ ಅರಸಿಕನಲ್ಲ! ಮಲ್ ಆರ್ ತಿರಳ್ ತೋಳ್ = ಬಲ ತುಂಬಿರುವ ಚೇಗಾದ ಚತುರ್ ಭುಜಧಾರೀ! ಮೊದಲ ಭಾಗ ಈತನಿಗೆ ಅಶುಭ ಅಶಕ್ತಿ ಇಲ್ಲ ಎಂಬುದನ್ನು ತಿಳಿಸುತ್ತದೆ. ಮಣಿವಣ್ಣನ್ ಅಮ್ಮಾನೈ = ಇಂದ್ರನೀಲ ರತ್ನಕ್ಕಿಂತಲೂ ಸುಂದರ ವರ್ಣ ಎನ್ನುವ ಈ ಎರಡನೆಯ ಭಾಗ ನಾವು ಅತನಿಗೆ ಶುಭ ಕೋರಲೇ ಬೇಕೆಂಬುದನ್ನು ತಿಳಿಸುವುದು. ಶರಣಾರಾಡುವ ಒಂದೊಂದು ಪದ ಅಕ್ಷರದಲ್ಲೂ ಒಳ ಅನುಭಾವ ತುಂಬಿದೆ! ಇಂಥ ತಿಮ್ಮಪ್ಪನನ್ನು ಕುರಿತುದು ಈ ದಶಕ. ಯಾರಾಡಿದ್ದು?

ಕಲ್ ಆರ್ = ಕಲ್ಲಿಗಿಂತಲೂ, ಮನೋಬಲ ಭಾವ ಬಲ ದೈವದತ್ತವಾಗಿ ಬಂದಿರುವ, ಹೊಂದಿರುವ, ತುಂಬಿರುವ ತಿರಳ್ ತೋಳ್ = ತಿರುಮಂಗೈ ಆಳ್ವಾರಾದಿ ತಮ್ಮ ಉಭಯ ಭುಜಬಲ, ನಾಲ್ಕು ಅವಿಚ್ಛಿನ್ನ ಶಿಷ್ಯರ ನಾನಾ ಬಗೆಯ ಶಕ್ತಿ ಚಾತುರ್ಯ, ನಾಲ್ಕು ಕಾಲಿನ "ಆಡಲ್‌ಮಾ" ಎಂಬ ಸವಾರಿ ಕುದುರೆ, ಜತೆಗೆ ಸಂಯಮದ ಭಕ್ತಿಮೂರ್ತಿ ತಿರುಮಂಗಾನಾಯಕೀ! ಚತುರ್ಭುಜನಿಗಿಂತ ೪ ಪಟ್ಟು ೧೬ ಬಗೆಯ ಕೈ ಕಾಲುಗಳ ಬಲವುಳ್ಳ! ಕಲಿಯನ್! ಆತ, ಶೊನ್ನ ಮಾಲೈ = ಕಲಿದೋಷವೇ ಸುಳಿಯದಂತಹ ವಾತಾವರಣವನ್ನೇ ನಿರ್ಮಿಸುವ ನಿದಾನಜ್ಞ, ಬಂದರೂ ಸಾತ್ವಿಕ ಧೃತಿಯಿಂದಲೂ ಎದುರಿಸುವ ಕಲಿತನದಿಂದ ಹೊಮ್ಮಿದ ಈ ವಾಙ್ಮಯಮಾಲೆಯನ್ನು, ವಲ್ಲಾರ್ ಅವರ್ = ಸದಾಚಾರ್ಯರ ಮುಖಪಾಠವಾಗಿಯೇ ಕಲಿತು, ಆಚಾರ್ಯರನ್ನು ನೆನೆದವರು. ಕಲಿತು ಪಾರಂಗತರಾದವರು. ತಾಮೇ = ತಮಗೆ ತಾವೇ ಅಂದರೆ ಬೇರೆ ಹವ್ಯಾಸಗಳನ್ನೆಲ್ಲಾ, ಈ ಪೆರಿಯ ತಿರುಮೊಳಿಯಲ್ಲೇ ಅಡಗಿಸುವಂತೆ ಜಿಜ್ಞಾಸೆ ಪರಿಶೋಧನೆ, ಸೇವಾಕಾಲ, ಶ್ರವಣ ಕ್ರಿಯಾ ಸಂಪನ್ನರು ಪಾನವರ್ ಆಹುವರ್ ಆ ನಿತ್ಯವಿಭೂತಿಯ ಪರಮ ಸತ್ವವನ್ನು ಇಲ್ಲೇ ಸ್ಥಾಪಿಸಿ, ಉಭಯ ವೇದಾನ್ತ-ವಿಜ್ಞಾನ ಪ್ರವರ್ತಕರಾಗಿ ಇಲ್ಲೂ ಆದರ್ಶ ಕೈಂಕರ್ಯನಡೆಸುತ್ತಾ ಅಲ್ಲೂ ನಿತ್ಯ ಕೈಂಕರ್ಯ ಭಾಗಿಗಳಾಗಿಯೇ ತೀರುವರು! ಆಳ್ವಾರ್ ಶರಣ ಸಂತರ ಸಿರಿ ವಚನಗಳೇ ಮೋಕ್ಷಪ್ರದ "…….ಶೊಲ್ ವೇರಾಹವೇ ವಿಳೈಯುಮ್ ವೀಡು". - ಮಣವಾಳಮಾಮುನಿಗಳ ತಿರುವಾಯ್ಮೊಳಿ ನೂತ್ತಂದಾದಿ ೧.

ತಮಿಳ್ ತಿರಳ್ ೨-೧-೧

ವಾನವರ್ ತಜ್ಗಳ್ ಶಿನ್ನೈ ಪೋಲ ಎನ್ ನೆಞ್ಜಮೇ ಇನಿದು ವನ್ದು ಮಾನವರ್ ತಜ್ಗಳ್ ಶಿನ್ನೈ ಅಮರ್ನ್ದುರೈ ಹಿನ್ನ ವೆನ್ನೈ
ತಾನವರ್ ಇಡು ಕಾರಹಿಲ್ ಪುಹೈ ಓಜ್ಗು ವೇಜ್ಗಡಮ್ ಮೇವಿ, ಮಾಣ್ ಕುರ ಳಾನ ಅನ್ದಣರ್ಕ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ!

ಕನ್ನಡ ನೆರಳ್

ಬಾನವರ್ ಅಂತಹರ್ ಮನವೊಲ್ ಎನ್ ಮನಕೇ ಕುರಿತು ಇನಿಮೆಯಿಂ ಬಂದು ಮಾ ತಾಪಸರ್
ಮಾನವರವರ್ ಚಿತ್ತ ದಿ ಏನುಂ ಬಯಸದೆ ನಿತ್ಯವೂ ಮುತ್ತಿಹ ಸ್ವಾಮಿಗೆ
ಕಾನನ ಬೇಡರು ಕಡಿದಿಡು ಕರಿಜಾಲಿಯ, ಹೊಗೆವಾಸಿಕ ಪ್ರೋನ್ನತ ಗಿರಿಯಪ್ಪನಿಗೆ
ಮಾಣೆಯೆ ಆದ ವಿಪ್ರರ್ಗಡಿಯೂಳಿಗದೊಡವೆಯ ತೊಟ್ಟೆಯೈ ಕಿರಿವಾಮನರಿಗೆ!

ವಾನವರ್ ತಜ್ಗಳ್ = ಶ್ರಿಯಃಪತಿಯ ನಿತ್ಯೇಚ್ಛೆಯಿಂದಲೇ ಸದಾ ಕೈಂಕರ್ಯ ಗೈಯುತ್ತಾ ಜಾಗೃವಾಗ್ಂಸಸ್ ಸಮ್ ಇನ್ದತೇ = ಎಚ್ಚರಿಕೆಯಿಂದ ಕಳೆಯೇರಿದವರಾಗಿರುವವರೇ "ಆ ಬಾನವರು" ಪರಮೇವ್ಯೋಮನ್ನಿನಲ್ಲಿರುವವರು. ಶ್ರಿಯಃ ಪತಿತ್ವ ಸಕಲ ಜಗದ್ವ್ಯಾಪಾರ ಅಂದರೆ ಅಖಿಲಾಂಡ ಕೋಟಿ ಬ್ರಹ್ಮಾಂಡಗಳ ಸೃಷ್ಟಿ ಸ್ಥಿತಿ ಲಯ ಕಾರ್ಯಗಳೆಂಬ ಇವೆರಡನ್ನು ಹೊರತು ಪಡಿಸಿ, ಉಳಿದ ಎಲ್ಲ ಬಗೆಯ "ಪರಮ ಸಾಮ್ಯ"ವನ್ನೇ ಹೊಂದಿರುವವರು. ವೈಕುಂಠನಾಥನನ್ನೇ "ಶ್ರಿಯಾ ಸಾರ್ಧಂ" ಸದಾ ಸಂದರ್ಶಿಸುತ್ತಾ, ದಂಪತಿಗಳ ಆನಂದವನ್ನೇ ಹಿಂಬಾಲಿಸಿ ತಾವೂ ಆನಂದಿಸುತ್ತಾ ಇರುವರು.

ಮುಖ್ಯವಾಗಿ ಅವರ ಹೃದಯದಲ್ಲಿ ಹೇಗೋ ಶಿನ್ನೈ ಪೋಲ = ಹಾಗೆಯೇ, ಮಾ ತವಮ್ ಮಹಾ ತಪಸ್ವಿಗಳಾದ, ಮಾನವರ್ ತಜ್ಗಳ್ ಶಿನ್ನೈ = ಮಾನವರ ಚಿತ್ತದಲ್ಲಿ ಹೇಗೋ ಹಾಗೆಯೇ ಎನ್ ನೆಞ್ಜಮೇ = ನನ್ನ ಮಾನಸವನ್ನೇ ಇನಿದು = ದೇವರಿಗೂ ಬೇರೊಂದು ಪ್ರಯೋಜನ ಬೇಕಿಲ್ಲದಂತೆ ಸ್ವಯಂ ಸಂತೋಷದಿಂದ, ವನ್ದು = ನನ್ನ ಬಳಿಗೇ ಸಾರ್ದು, ಅಮರ್ನ್ದು = ಸರಿಹೊಂದಿಸಿಕೊಂಡು ಅಚ್ಚುಗಟ್ಟಾಗಿ ಉರೈಹಿನ್ನ ಎನ್ವೈ = ನಿತ್ಯ ಸಾನಿಧ್ಯ ಗೈದಿರುವ, ಮಹಾಸ್ವಾಮಿಯಾದ; - ಕಾನವರ್ = ಕಾನನ ವಾಸಿಗಳಾದ ಶ್ರೀ ಪೂಜ್ಯ ಶಾಬರರು. ಇಡು = ತಮ್ಮ ಜಮೀನುಗಳಲ್ಲಿ ಒಣಗಿದ ಕೆಲಸಕ್ಕ ಬಾರದ ಮರ, ಸೆತ್ತೆಗಳನ್ನು ಮುಂದಿನ ಬೇಸಾಯಕ್ಕಾಗಿ, ಕಳೆಗಳು ನಿರ್ಮೂಲವಾಗುವಂತೆ, ಕತ್ತರಿಸಿ ಪೂರಾ ಹರಡಿ ಬೆಂಕಿ ಹಚ್ಚುವರು. ಅವುಗಳಲ್ಲಿ ಜಾಲಿ ಧೂಪದ ಮರದ ಅಂಶಗಳೂ ಇರುವುದರಿಂದ ತಿಮ್ಮಪ್ಪನಿಗೆ ಧೂಪ ಸಮರ್ಪಿಸುವಂತೆ ಈ ಆಳ್ವಾರರ ಭಾವ! ಅಂತಹ, ಕಾರ್ ಲಿಹಿಲ್ ಪುಹೈ = ಕಪ್ಪು ಅಗರು ಹೊಗೆ, ಆಕಾಶವನ್ನೆಲ್ಲಾ ಸುಗಂಧದಿಂದ ತುಂಬಿದಂತಾಗಿದೆ. ಎಲ್ಲಿಯವರಿಗೆಂದರೆ, ಓಜ್ಗು = ಉನ್ನತ ಶಿಖರಗಳನ್ನೆಲ್ಲಾ ವ್ಯಾಪಿಸಿದೆ. ಅಂತಹ, ವೇಜ್ಗಡಮ್ ಮೇವಿ = ವೇಂಕಟ ಮಹೀಧ್ರವನ್ನೇ ಆಸೆಪಟ್ಟು, ಬಿಡದಿರುವವನೂ ಆದ

ಮಾಣ್ = ಬ್ರಹ್ಮಚಾರಿ ಮಾಣಿಯ ರೂಪ ವಾಂತು, ಕುರಳ್ ಅನ = ಕುಬ್ಜನಾದ, ಅನ್ದಣರ್ಕ್ಕು = ಭೂ ಭಿಕ್ಷು ಬ್ರಾಹ್ಮಣ ಬ್ರಹ್ಮಚಾರಿಗೆ, ಆ ವೇಷ ವಿನಯ, ಸೌಂದರ್ಯ, ನಡೆ, ಭೂ ದಾನ ನೀಡಿಯೇ ಬಿಡಬೇಕೆಂದು ಬಲಿಯ ಪತ್ನಿಗೂ ಅನ್ನಿಸಿಬಿಟ್ಟಿತು! ನೋಡಿ ಸರ್ವಜ್ಞರಾದ ಶುಕ್ರಾಚಾರ್ಯರು ಬೇಡವೆಂದರೂ ಕೇಳದಷ್ಟು ಬ್ರಹ್ಮಚಾರಿಯ ಬಗ್ಗೆ ದಂಪತಿಗಳು ಆಕರ್ಷಿತರಾಗಿಬಿಟ್ಟಿದ್ದರು! ಇಂತಹವನಿಗೆ, ಓ ನನ್ನ ಮನವೇ! ಅಡಿಮೈ ತೊಳಿಲ್ = ಸೇವಾ ಕಾಯಕದಲ್ಲಿ ಇನ್ ಪೂಣ್ಡಾಯೇ = ಸಂತೋಷದ ಇನಿಮೆಯಿಂದ, ಚಾಕರಿಯನ್ನು ಒಂದು ಅಲಂಕಾರದ ಒಡವೆಯಂತೆ, ಶಿರಸಾವಹಿಸಿದೆಯಲ್ಲಾ! ನಿಜಕ್ಕೂ ನಿನ್ನನ್ನು ಎಷ್ಟು ಹೊಗಳಿದರೂ ಸಾಲದು. ನೀನು ಈ ಜೀವಾತ್ಮ ಆ ಪರಮಾತ್ಮರ ಮಧ್ಯದ ಬಾಗಿಲಂತೆ! ನೀನು ಒಪ್ಪದೆ ಇದ್ದಿದ್ದರೆ ನನಗೆ ತಿಮ್ಮಪ್ಪನ ಕೈಂಕರ್ಯ ಭಾಗ್ಯ ಎಲ್ಲಯ್ಯಾ ಸಿಗುತ್ತಿತ್ತು!

ತಮಿಳ್ ತಿರಳ್ ೨-೧-೨

ಉರವು ಶುತ್ತಮ್ ಎನ್ ಒನ್ನಿಲ್ಲಾ ಒರುವನ್ ಉಹನ್ದವರ್ ತಮ್ಮೈ, ಮಣ್ ಮಿಶೈ
ಪಿರವಿಯೇ ಕೆಡುಪ್ಪಾನ್ ಅದುಕಣ್ಡು ಎನ್ ನೆಞ್ಜಮ್ ಎನ್ ಬಾಯ್
ಕುರವರ್ ಮಾದರ್ ಹಳೋಡು ವಣ್ಡು ಕುರಿಞ್ಜಿ ಮರುಳ್ ಇಶೈಪಾಡುಮ್ ವೇಜ್ಗಡ
ತ್ತರವ ನಾಯಹರ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ!

ಕನ್ನಡ ನೆರಳ್

ನಂಟೂ ಇಷ್ಟರೂ ಎನ್ನುವುದೊಂದೂ ಬಂಧನ ವಿಲ್ಲೊರ್ವ್ ನೇಹಿಗಳವರಿಂ ಈ ಮಣ್ಮೇಲ್
ಹುಟ್ಟನೆ ಮಟ್ಟಿಂ ತಟ್ಟುವನ್ ಎನ್ನುವುದದ ಕಂಡೆನ್ ಮನವೇ! ಏನ್ ಪೇಳಲಿ ನಾ?
ಕೊರವರ್ ಮಹಿಳೆಯರೊಡು ಬಂಡುಗಳ್ "ಕುರಿಂಜೇ ಇನ್ದಳ" ವೆನು ಮೋಹನರಾಗವಂ ಪಾಡುವ ವೇಂಕಟದ
ದರುಮದ ನಾಯಕರ್ಗಿಂದು ಅಡಿಯೂಳಿಗ ದೊಡವೆಯ ತೊಟ್ಟೆಯಲಾ!

ಉರವು = ಭಿನ್ನ ಗೋತ್ರದ ನೆಂಟರಿಷ್ಟರು. ಶುತ್ತಮ್ = ಸಗೋತ್ರರಾದ ಬಂಧುಗಳು. ಎನ್ನು = ಎಂಬುವ, ದೇಹ ಕರ್ಮಾಧೀನವಾದ ಒನ್ನು ಇಲ್ಲಾ = ಒಂದೂ ಉಪಾಧಿಯಿಲ್ಲದ, ಒರುವನ್ = ತನಗೆ ಸರಿಸಮಾನರಿಲ್ಲದ ಅದ್ವಿತೀಯ ವೇಂಕಟೇಶ. ಉಹನ್ನವರ್ ತಮ್ಮೈ = ಕಿಲವರ ಮೇಲಿನ ಪ್ರೀತಿಯಿಂದ ಹಿಗ್ಗಿ ಅವರ ಪಾಪ ಕಳೆಯುವುದಾಗಲೀ ಫಲ ಕೊಡುವುದಾಗಲೀ ಹೀಗಿರದೆ, ಮಣ್ ಮಿಶೈ = ಈ ಮಿಶ್ರಸತ್ವದ ಲೀಲಾವಿಭೂತಿಯ ಮೇಲೆ, ಪಿರವಿ = ಕರ್ಮಾಧೀನವಾದ ಪುನರ್ ಜನ್ಮವನ್ನು, ಕೆಡುಪ್ಪಾನ್ = ನಾಶ ಮಾಡುವುದೇ ದೇವರ ಸ್ವಭಾವ. ಅದು ಕಣ್ಣು = ಆ ವಿಚಾರಗಳೆಲ್ಲವನ್ನೂ ಪರಾಮರ್ಶಿಸಿ! ಇಲ್ಲಿನ ವಿಚಾರ ಎಂದರೆ ಆ ಪುನರಾವೃತ್ತಿ ರೂಪ ಮೋಕ್ಷಪ್ರದತ್ವ ಪರಬ್ರಹ್ಮನ ಸ್ವರೂಪನಿರೂಪಕವಾದ ಸಹಜ ಲಕ್ಷಣ. ಅಂತೆಯೇ, ಜನ್ಮಾದಿ ಅಸ್ಯಯತಃ (ಬ್ರಹ್ಮ ಸೂತ್ರ ೧-೧-೨) ಎನ್ ನೆಞ್ಜಮ್ = ಇವಕ್ಕೆಲ್ಲಾ ದೇವರೋ = ಮನವೇ, ನೀನೋ? ಏನೆಂದು ಹೇಳಲಿ? ಸೃಷ್ಟಿ ಸ್ಥಿತಿ ಸಂಹಾರ, ಮೋಕ್ಷಗಳಿಗೆ ಮುಖ್ಯ ಕಾರಣ ಕರ್ತನಾದವನ ನೈಜ ಸ್ವಭಾವಕ್ಕೆ ಮನ ಓಗೊಡದಿದ್ದರೆ, ಇವೆಲ್ಲಾ ಬರಿ ಗಾಳಿ ಗೋಪುರಗಳಾಗುತ್ತಿದ್ದವು! ಮಾನವನ ಚಿತ್ತ ಸಾಮರ್ಥ್ಯವನ್ನು ಕಲಿಯನ್ ಶರಣ ಇಲ್ಲಿ ಪ್ರಶಂಸಿಸುತ್ತಿದ್ದಾರೆ. ಮನವಿದ್ದರೆ ಮಹದೇವ! "ಮನ ಏವ ಮನುಷ್ಯಾಣಾಂ ಕಾರಣಂ ಬನ್ಧಮೋಕ್ಷಯೋಃ"

ಕುರವರ್ ಮಾದರ್‌ಹಳ್ ಓಡು = ಅದಿವಾಸಿ ತಾಯಂದಿರ ಜತೆಗೂಡಿ, ವಣ್ಡು = ಬಂಡುಗಳು. ಕುರಿಞ್ಜಿ ಮರುಳ್ = ಮೋಹಕವಾದ "ಕುರಿಂಜಿ ಇನ್ನಿಳಮ್" ಎಂಬ ಝೀಂಕಾರದ, ಒಂದೇ ಉಸಿರಿನಲ್ಲಿ ಅಖಂಡ ಹಾಡುತ್ತಲೇ ಇರುವ ಜಾನಪದ ರಾಗವನ್ನು, ಇಶೈ ಪಾಡುಮ್ = ಏಕಕಂಠವಾಗಿ ಹಾಡುವ ಸಂಸ್ಕಾರ ದುಂಬಿಗಳಿಗೂ ಕ್ಷೇತ್ರ ಮಹಿಮೆಯಿಂದ ಕೊರಮರ ಪರಿಸರ ಪ್ರೇಮದಿಂದ ಸಂಕ್ರಮಿಸಿದೆ! ಸ್ಥಳೀಯ ಗೀತಗಳ ಸ್ಥಾನ ಮಾನವನ್ನು ತಿರುಮಂಗೈ ಆಳ್ವಾರ್ ಎಷ್ಟೊಂದು ಗೌರವಿಸಿದ್ದಾರೆ! ಇಂತಹ ಸಂಗೀತ ಮೊಳಗುವ, ವೇಙ್ಗಡತ್ತು! ವೇಂಕಟ ಭೂ ಧರದಲ್ಲಿಯೇ ಸ್ಥಳೀಯನಾಗಿಯೇ ಕಲ್ಪಾಂತದವರೆಗೂ ವಾಸಮಾಡುತ್ತಿರುವ, ಅರವಮ್ ನಾಯಹರಕ್ಕು = ಪರಮಧಾರ್ಮಿಕನಿಗೆ, ತನ್ನನ್ನೇ ನಮಗೆಲ್ಲಾ ಸರ್ವಸ್ವದಾನ ಮಾಡಿಕೊಂಡು, ಕುಡಿನೀರ್ ಚಪ್ಪರದಲ್ಲಿ ತೀರ್ಥದಾನ ಮಾಡುವವನಂತೆ ನಮ್ಮಿಂದ ಇಲ್ಲೂ ಸೇವೆಗೊಳ್ಳುವ ಅಭ್ಯಾಸ ಮಾಡಿಸಿ ಅಲ್ಲೂ ನಿತ್ಯ ಅವಿಚ್ಛಿನ್ನ ಕೈಂಕರ್ಯ ಕೊಡಲೆಂದೇ ಸ್ವಾರ್ಥ ಲವಲೇಶವಿಲ್ಲದೆ, ಪರಾರ್ಥ ಪರಮಾರ್ಥವಾಗಿಯೇ ತಿರುಪತಿ ತಿಮ್ಮಪ್ಪನಾಗಿ ನಿಂತೇ ಇರುವನಿಗೆ, ಅಡಿಮೈ ತ್ತೊಳಿಲ್ ಪೂಣ್ಡಾಯೇ = ಕೈಂಕರ್ಯ ಕಾಯಕದಲ್ಲಿ ಸಹಕರಿಸಿದೆಯಲ್ಲಾ! ಓ ಮನವೇ! ತಿಮ್ಮಪ್ಪನೂ ಯಾವ ಲೋಕೋಜ್ಜೀವನದ ಉದ್‌ದೇಶ್ಯಕ್ಕಾಗಿ ಈ ಗಿರಿಗೆ ಬಂದಿರುವನೋ ಅದನ್ನು ನೀನೂ ಒಂದು ರೀತಿಯಲ್ಲಿ ಸಫಲಗೊಳಿಸಿದೆ! ನಿನ್ನ ಮಧ್ಯವರ್ತಿತ್ವದ ಪರಮೋಪಕಾರವನ್ನು ಎಷ್ಟೆಂದು ಈ ಬಾಯಿಂದ ಹೇಳಲಿ?

ತಮಿಳ್ ತಿರಳ್ ೨-೧-೩

ಇಂಡ್ರೈಯಾಯಿನ ಕೊಣ್ಡು ತೊಣ್ಡರ್ ಹಳ್ ಏತ್ತುವಾರ್ ಉರವೋಡುಮ್ ವಾನಿಡೈ
ಕೊಣ್ಡು ಪೋಯಿಡವುಮ್ ಅದು ಕಣ್ಡು ಎನ್ನೆಞ್ಜುಮ್ ಎನ್ ವಾಯ್
ವಣ್ಡುವಾಳ್ ವಡ ವೇಙ್ಗಡ ಮಲೈ ಕೋಯಿಲ್ ಕೊಣ್ಡದನೋಡುಮ್ ಮೀಮಿಶೈ
ಅಣ್ಡಮ್ ಆಣ್ಡಿರುಪ್ಪಾರ್ಕ್ಕು ಅಡಿಮೈ ತ್ತೊಳಿಲ್ ಪೂಣ್ಡಾಯೇ

ಕನ್ನಡ ನೆರಳ್

ದಂಡೆಯನೆಂಬುದ ಕೊಂಡು ತೊಂಡರ್ ಪಾಡುವರವರುಂ ಒಡನಾಡಿಗರುಂ ಪರಮಾಕಾಶಕೆ
ಕೊಂಡೇ ಪೋಗಿಡುವದನಂ ಕಂಡೆನ್ ಮನವೇ ಏನೆಂಬೆನೋ! ನಾನ್
ಬಂಡುಗಳ್ ಬಾಳುವ ಬಡಗಲ ವೇಂಕಟಮಲೆ ದೇಗುಲ ಕೊಂಡದರೊಡು, ಪರ
ಮಾಂಡವನಾಳುವರ್ಗೆ ಅಡಿಯೂಳಿಗ ಕಾಯಕದೊಡೆವೆಯು ತೊಟ್ಟೆಯಲಾ!

ಇಣ್ಡ್ರೈ ಅಯಿನ = ದಂಡೆಯ ಆಕಾರದಲ್ಲಿ ಒತ್ತಾಗಿ ದಪ್ಪನಾಗಿ ಕಟ್ಟರುವುದನ್ನು. ಅಹೂ ಈಹೂ ಎಂಬ ಭೇದವಿಲ್ಲದೆ. ಎಣ್ ದಿಶೈಯುಮ್ ಉಳ್ಳ ಪೂ ಕೊಣ್ಡು = ಹೂ ಎಂದು ಕರೆಯಲ್ ಪಡುವ ಎಲ್ಲಾ ಬಗೆಯ ಹೂಗಳನ್ನೂ ಸೇರಿಸಿ ಕದಂಬವಾಗಿ ಕಟ್ಟಿರುವುದನ್ನು ಕೊಣ್ಡು = ತಟ್ಟೆಗಳಲ್ಲೇ ಮೇಲೆತ್ತಿಕೊಂಡು. ಸುಖವಾಗಿದೆ ಎಂದು ಕೆಳಗೆ ಜೋಲಾಡುವಂತೆ ಬ್ಯಾಗುಗಳಲ್ಲಿ, ಪ್ಲಾಸ್ಟಿಕ್ ಚೀಲಗಳಲ್ಲಿ ಅಲ್ಲವೆಂಬ ಭಾವ. ಏಕೆಂದರೆ "ಉಪರಿ ಹಿ ದೇವೇಭ್ಯಃ ಧರತಿ" ಹಿರಿಯರಿಗೆ ದೇವರಿಗೆ ಸಮರ್ಪಿಸಬೇಕಾದುದನ್ನು ಸೊಂಟಕ್ಕೆ ಮೇಲೆಯೇ ಎತ್ತಿಹಿಡಿದೇ ಹೋಗಬೇಕೆಂದು ಭಕ್ತಿ ಶಾಸನ! ಸೊಂಟಕ್ಕೆ ಕೆಳಗಿನ ನಮ್ಮ ಅಂಗಾಂಗಗಳು ಸೂಕ್ಷ್ಮಾರ್ಥದಲ್ಲಿಯೂ ನೀಚಾಂಗಗಳು. ಭಕ್ತಿ ಸಂಪನ್ನರಾದವರು ಶ್ರದ್ಧೆಯಿಂದ ನಮ್ರಭಾವದಿಂದ ಸೇವಾಕೈಂಕರ್ಯ ಎಸಗುವ ಸಂದರ್ಭದಲ್ಲಿ ಬಾಯಿಂದಲೂ, ಏತ್ತುವಾರ್ ಎತ್ತಿಸ್ತುತಿಸುವವರು. "ಹಾಥ್‌ಸೇ ಕಾಮ್! ಮುಹ್‌ಸೇ ನಾಮ್" ಉರವೋಡುಮ್ = ಇಂತಹವರನ್ನು ಮಾತ್ರವಲ್ಲ. ಅವರಿಗೆ ಸೇರಿದವರೆಲ್ಲರನ್ನೂ

ತಾರತಮ್ಯವಿಲ್ಲದೆ, ವಾನ್‌ಇಡೈ = ಆ ದೇಶವಿಶೇಷಕ್ಕೇ ಕೊಣ್ಡು ಪೋಯ್ ಇಡವುಮ್ = ಸ್ವಾಮಿಯೇ ಖಿದ್ಧಾಗಿ, ಆವರ ಅನ್ತ್ಯ ಕಾಲದಲ್ಲಿ ನಡೆಸಿ ಸೇರಿಸಿಯೇ ಬಿಡುವನು. ಅದು ಕಣ್ಡು = ಈ ಕಾರುಣ್ಯ ಸೌಲಭ್ಯಗಳನ್ನು ಕಣ್ಡು, ಎನ್‌ನೆಞ್ಜಂ ಎನ್ ಬಾಯ್ = ಎನ್ ಮನವೇ! ಇದೆಲ್ಲಾ ನಿಜವೇ? ಎಂಬ ಅವಿಶ್ವಾಸದ ಶಂಕೆ ಬೇಡ. ಒಳ್ಳೆಯ ಅತೀಂದ್ರಿಯ ವಿಷಯಗಳಲ್ಲಿ ಶ್ರದ್ಧೆಯೇ ಮುಖ್ಯ. ವ್ಯವಹಾರದಲ್ಲೂ ಅಶ್ರದ್ಧೆ ಅಪನಂಬಿಕೆಗಳಿಗಿಂತ ಹೆಚ್ಚು ನಿರಪಾಯ! **"ಶ್ರದ್ಧಾಮಯೋ೪ಯಂ ಪುರುಷಃ"** ಎನ್ ಬಾಯ್ = ಸ್ವಾಮಿ ಕೈಂಕರ್ಯ ಗೈ ಬೇಕೆಂಬ ಆಸೆಗೆ ನೆರವಾಗಿರುವ ಇಂತಹ ಸಚ್ಚಿತ್ತದ ಬಗ್ಗೆ ಏನು ಹೇಳಲಿ? ವಾಗತೀತಕ್ಕೆ ಸೇರಿಸುವ ನೀನೂ ವಾಗತೀತನೇ? ಶರಣರ ಮನ, ಚೈತನ್ಯ ಸಮಾಧಿ ಪಡೆಯುವುದು. ಆವರ ನಡೆನುಡಿ ಎಲ್ಲಾ ಅತಿಭೌತಿಕ ಮೆಟಾಫಿಸಿಕ್ (*Metaphysic*).

ವಣ್ಡುವಾಳ್ = ಮಧುಕರಗಳು ನಿತ್ಯ ವಸತಿ ಗೈಯ್ಯುತ್ತಿರುವ. ವಡಂ ವೇಙ್ಗಡ ಮಲೈ ಕೋ ಇಲ್ ಕೊಣ್ಡು = ತಮಿಳ್‌ನಾಡಿಗೆ ಉತ್ತರಾಂಚಲದ, ಪಾಪಾಪಹಾರಿ ಗಿರಿಯನ್ನೇ ಸ್ವಾಮಿ ತನ್ನ ಮನೆಯಾಗಿಸಿಕೊಂಡಿರುವನು. ಅದನೋಡುಮ್ ಮೀಮಿಶೈ = ಜತೆ ಜತೆಗೇ ಸ್ವರ್ಗಕ್ಕಿಂತ ಮೇಲಿರುವ, ಉಣ್ಡುಮ್ = ಪ್ರಾಕೃತಾಂಡಗಳನ್ನೆಲ್ಲಾ ಮೀರಿದ ಆ ನಿತ್ಯ ಪರಬ್ರಹ್ಮಾಂಡವನ್ನು ಆ ನಿತ್ಯ ವಿಭೂತಿಯನ್ನು. ಉಣ್ಡು ಇರುಪ್ಪಾರ್ಕು = ಈ ಆಕಾಶ ಆ ಪರಮಾಕಾಶ ಎಂಬಂತೆ ಉಭಯ ವಿಭೂತಿಗಳನ್ನೂ ಆಳುತ್ತಿರುವ ಈ ತಿಮ್ಮಪ್ಪನಿಗೆ ಅಡಿಮೈ ತ್ತೊಳಿಲ್ ಪೂಣ್ಡಾಯೇ = ಕೈಂಕರ್ಯ ಸ್ವೀಕರಿಸುವ ಅವನ ಇಷ್ಟಕ್ಕೇ ಹೊಂದಿಕೊಂಡು ನನಗೂ ಬಲು ಉಜ್ಜೀವಕನಾಗಿಯೇ ಬಿಟ್ಟೆಯಲ್ಲಾ!

ತಮಿಳ್ ತಿರಳ್ ೨-೧-೪

പാവിയാದು ശെയ്ദായ് എന് നെഞ്ചമേ പണ്ടുതൊണ്ടു ശെയ്ദാരൈ മണ്മിശൈ
മേവിയാള് കൊണ്ടു പോയ് വിശുമ്പോര വൈക്കുമെന്നൈ
കോവിനായകന് കൊണ്ടലുന്തുയര് വേങ്കട മലൈയാണ്ടു വാനവര്
ആവിയായ് ഇരുപ്പാര്കു അടിമൈ തൊഴിൽ പൂണ്ടായേ

ಕನ್ನಡ ನೆರಳ್

ಭಾವಿಸದದನಿದ ಗೈದೆಯಲಾ ಎನ್ ಮನಮೇ! - ಮುನ್ ಊಳಿಗಗೊಂಡವರಂ ಇದೊ ಮಣ್ ಮೇಲ್
ಭಾವಿಸಿ ಸೈರಣೆಯಿಂ ಕೊಂಡದೊ ಪೋಗಿ ಪರಂಧಾಮದೊಳ್ ಇಡುವೆನ್ ತಂದೆಯ
ಗೋವಳತಿಯರ್ ನಾಯಕನಾ ಮೇಘವತಾಡಿಪವುತ್ತುಂಗದ ವೇಂಕಟಮಲೆಯಾಳುತ, ಅತ್ತಣ ಸೂರಿಗಳ್ಗೂ
ಆವಿಯ ಉಸಿರಾಗುತ, ತಾನೂ ಅವರೊಳೆ ಉಸಿರಿಟ್ಟಿಹಗೆ ಅಡಿಯೂಳಿಗದೊಡವೆಯ ಎನಗೂ ತೊಡಿಸಿದೆ ನೀ!-

ಪಾವಿಯಾದು = ಹಾಗೆ ಮಾಡಲೇ? ಹೀಗೆ ಮಾಡಲೇ? ಅದನ್ನು ಮಾಡಲೇ? ಇದನ್ನು ಮಾಡಲೇ? ಎಂಬೀ **"ಈರ್‌ನಶೈ"** ಇಬ್ಬಂದಿತನ ತೊರೆದು ನಿರ್‌ವಿಚಾರವಾಗಿ ಒಂದೇ ತೀರ್ಮಾನದ ನಿಷ್ಠೆಯಿಂದ. ಇದನ್ನೇ ಗೀತೆ ಸ್ಥಿರಚಿತ್ತ ಸ್ಥಿತಪ್ರಜ್ಞತೆ ಎನ್ನುವುದು. ನಿಶ್ಚಿತ ಬುದ್ಧಿ ಕಂಪ ವಕ್ರತೆ ಇಲ್ಲದ ಬುದ್ಧಿ! True. ಈ ಆತ್ಮಸ್ಥವಾದ ಬುದ್ಧಿನಿರ್ಣಯ ಮಾನವನ ಮಹಾನಿಧಿ! ಮೇಲೆ ಹೇಳಿದಂತಹ ದ್ವಂದ್ವಗಳನ್ನೇ ಹೆಚ್ಚಿಸುವ ಈ ಸಂಸಾರದಲ್ಲಿದ್ದೂ ಎಲೆ ಮನವೇ! ಶಬ್ದಾದಿ ವಿಷಯಾನುಭವದಲ್ಲೇ ಇರೋಣವೇ! ಸದಾ ರೇಡಿಯೋ ಸದಾ ಟಿ.ವಿ. ಕೇಳುತ್ತಾ ನೋಡುತ್ತಲೇ ಇರೋಣವೇ? ಸ್ವಭೂಷಣ ಪರದೂಷಣದಲ್ಲೇ ಬಿದ್ದಿರೋಣವೇ? ಸ್ವಾರ್ಥವನ್ನು ನಾವಾಗಿ ಬಯಸದೆ ಪರಾರ್ಥ ಸೇವೆಗಾಗಿಯೇ ಎಂಬ ಒಂದೇ ಭಾವನೆಯಿಂದ, ಮೇಲಿನ ಅವುಗಳನ್ನೆಲ್ಲಾ ನಮ್ಮ ಪ್ರಾಮಾಣಿಕ ಹೃದಯ ಸಂವೇದನೆಗೆ ಏರಿಸಿಕೊಳ್ಳಬಲ್ಲೆವೇ? ನನ್ನ ವ್ಯಕ್ತಿಗತ ಆಶೋತ್ತರ ಮನೆಯವರ ಹಿತಕ್ಕೆ ಅವಿರೋಧಿಯಾಗಿದೆ ತಾನೇ? ನಮ್ಮ ಮನೆ ವ್ಯವಹಾರ ಗ್ರಾಮಕ್ಕೆ, ಈ ಮೊಹಲ್ಲಾಗೆ ಏನೂ ಭಾಧಕವಲ್ಲ ತಾನೇ?

ಇಡೀ ಗ್ರಾಮದ ಮಟ್ಟದಲ್ಲಿ, ಮೊಹಲ್ಲಾ ಮಟ್ಟದಲ್ಲಿ ಎಲ್ಲರ ಒಂದು ಸಮಾನಾಭಿಪ್ರಾಯವನ್ನು ಮೂಡಿಸಲು ನಾನು ಶ್ರಮಿಸಲೇ? ಅಂತಹ ಗ್ರಾಮ, ಮೊಹಲ್ಲಾಗಳ ಸರ್ವ ಸಂಮತ ನಿರ್ಣಯ, ದೇಶಕ್ಕೆ ಅವಿರೋಧಿ ತಾನೇ? ರಾಷ್ಟ್ರ ನಿರ್ಣಯ ವಿಶ್ವ ಹಿತಕ್ಕೇನೂ ಧಕ್ಕೆ ತಾರದು ತಾನೇ? ಈ ಭೂಮಿಕೆಗಳಿಂದ ಎಲೋ ಮನವೇ! ಸ್ಪಷ್ಟವಾಗಿ ಇಡೀ ವಿಶ್ವ ಪತಿ ಸರ್ವೇಶ್ವರನ ಸೇವೆಯನ್ನು ಚಿಂತಿಸುವಂತೆ ಬಲ ನೀಡಿದೆಯಲ್ಲಾ! ಇದೀಗ "ವೇದಾನ್ತ ವಿಜ್ಞಾನ ಸುನಿಶ್ಚಿತಾರ್ಥ". ಸರಿಯಾದ ತತ್ವಹಿತ ಪುರುಷಾರ್ಥ! "ಪಾವಿಯಾದು ಶೆಯ್‌ದಾಯ್ ಎನ್ ನೆಞ್ಜಮೇ" ಎಂಬುದರ ವಿಶದ ವ್ಯಾಖ್ಯಾನವಾಯಿತು. ಆಳ್ವಾರರುಗಳಿಗೆ ಈ ವಿಶ್ವಹಿತಕಾರಿ ಗ್ರಾಮ ಸಂಮತ ಜೀವನವೇ ಇಲ್ಲೆಲ್ಲಾ "ಅಡಿಮೈ ತ್ತೊಳಿಲ್" ಎಂದು ಬರುವುದರ ಅಂತರಂಗ. ಆರ್ಷೇಯವಾದ ಮಂತ್ರವೂ "ವಿಶ್ವಂ ಪುಷ್ಪಂ ಗ್ರಾಮೇ ಅಸ್ಮಿನ್" ದೇವಾಲಯಗಳಲ್ಲೂ ಮೊಟ್ಟಮೊದಲಿಗೇ ಪ್ರತಿನಿತ್ಯವೂ ವಿಶ್ವ ರೂಪ ಸೇವೆ! ಅದರೊಳಗೆ ಅಡಗುವಂತೆ ಸಮಗ್ರ ಗ್ರಾಮ ಸೇವಾ ಸಮರ್ಥ

ಶಾಂತಿಮಯ ಘಟಕ, ಮಂದಿರ ಚರ್ಚು ಮಸೀದಿ! ಇತ್ಯಾದಿ. ಸ್ಮೃತಿ ಇತಿಹಾಸ, ಧರ್ಮಶಾಸ್ತ್ರ ಪುರಾಣಾದಿಗಳಲ್ಲೂ ಬೈಬಲ್ ಖುರಾನ್ ಆದಿ ಸರ್ವಧರ್ಮ ಗ್ರಂಥಗಳಲ್ಲೂ ವಿಶ್ವದ ಒಂದು ವ್ಯಾಪಕ ಚಿತ್ರವೇ ಮೊಟ್ಟ ಮೊದಲ ಭಾಗವಾಗಿರುತ್ತದೆ.

ಮಣ್‌ಮಿಶೈ ಮೇವಿ = ಪರಸ್ಪರ ವಿರೋಧಿ ವ್ಯಕ್ತಿತ್ವವನ್ನೇ ರೂಪಿಸಿ, ಹೆಚ್ಚು ಮಾಡುವ "ನಿನ್ನ ಕ್ಷೇಮ ಮೊದಲು ನೋಡಿಕೋ" ನಿನ್ನ ಇರುವಿಕೆಗೆ ಹೋರಾಡು. "ಸ್ವಗಲ್ ಫಾರ್ ಎಕ್ಸಿಸ್ಟೆನ್ಸ್" "ನೀನು ಬದುಕಿ, ಅಮೇಲೆ ಇತರರನ್ನು ಬದುಕಿಸು" "ಲಿವ್ ಅಂಡ್ ಲೆಟ್ ಲಿವ್" ಈ ಅಸಮಾಜಿಕ ಮೌಲ್ಯಗಳಲ್ಲಿನ, ಅಸಾಧು ವಿಚಾರ ತಲೆಗೇಕೆ ಬಹುತೇಕ ಶಿಕ್ಷಿತರಿಗೇ ಹತ್ತಿಲ್ಲ? "ಸ್ವಾರ್ಥ" ಎಂಬಲ್ಲಿನ "ಸ್ವ" ಶಬ್ದದ ಅರ್ಥ ಈ ಕಾಣುವ ತನ್ನ ಶರೀರವಷ್ಟೆ! ಈ ಜಡವಾದದ ಪೊರೆ "ಕ್ಯಾಟ್‌ರಾಟ್"! ಇದೇ ಪ್ರಾಯಃ ಇರುವುದೇ ಕಾರಣ. ದೇಹಜ್ಞಾನ ನಮ್ಮ ಚಿಂತನೆಯ ಪರಿಧಿಯನ್ನು ಸೀಮಿತಗೊಳಿಸುತ್ತದೆ. ಒಂದು ಆತ್ಮ ಪರಮಾತ್ಮ ಉಂಟೆಂಬುವ ತಥ್ಯವನ್ನೇ ೨೦೦ ವರ್ಷಗಳಿಂದ ಶಿಕ್ಷಣದ ಪದ್ಧತಿಯಲ್ಲೇ ಹತ್ಯೆ ಮಾಡಲಾಗಿದೆ ಈ ಭರತ ಖಂಡದಲ್ಲಿ!

ಮಣ್‌ಮಿಶೈ ಮೇವಿ = ಈ ಭೂಮಿಗೇಕೆ ಕೃಷ್ಣ ಇಳಿದು ಬರಬೇಕಿತ್ತು? ಅರ್ಜುನ, ಇದೋ ನನ್ನ ಸಖಾ! ಈತ ನನ್ನ ಮೈದುನ ಎಂದು ಹೇಳುವಂತೆಲ್ಲಾ ಪಾಂಡವರೊಡನೆ ಸಲಿಗೆಯಿಂದ ಸೇರಿಯೇ ಇದ್ದ. ಅವರಿಗೆಲ್ಲಾ ತನ್ನ ಕೈಂಕರ್ಯದಲ್ಲಿ "ವಾಲಂಟಿಯರ್ ಸರ್ವಿಸ್" ಮೆಲ್ಲ ಮೆಲ್ಲನೆ ಅಭಿರುಚಿ ಹುಟ್ಟಿಸಿ, ಕೊನೆಗೆ ಅಳ್ ಕೊಣ್ಡು = ಇಲ್ಲೇ ಸೇವೆ ಸ್ವೀಕರಿಸಿಯೂ ಇಹಲೋಕದ ಯಾತ್ರೆ ಮುಗಿದ ಮೇಲೆಯೂ, ಪೋಯ್ = ಈ ಮೃತಿ ಹೊಂದಿದ ಶರೀರಕ್ಕೆ ಬದಲಾಗಿ, ತನ್ನದೇ ಆದ ದಿವ್ಯ ಅಮಾನವ ಸಾರೂಪ್ಯ ದಿವ್ಯ ಸಾಲೋಕ್ಯ ದಿವ್ಯ ಸಾಮೀಪ್ಯದ ಆ ಹಂತಗಳಲ್ಲೆಲ್ಲಾ ಇವನ ಜತೆಗೇ ತಾನೂ ಇದ್ದು ಇವನನ್ನು ನಡೆಸಿ, ವಿಶುಮ್ಬು = ಪರಮ ಸಾಯುಜ್ಯ ಸ್ಥಾನವಾದ ಆ ಪರಮ ಪದದಲ್ಲಿ, ಅವಿಚ್ಛಿನ್ನ ಸರ್ವಸೇವೆಗೆ ಅನುವಾಗುವಂತೆ, ಏರ್ = ಈ ಮುಕ್ತಾತ್ಮ ಏರುವಂತೆ, ವೈಕ್ಕುಮ್ = ಅತ್ಯನ್ತ ಜಡವತ್ ಪರತಂತ್ರ ಸ್ವಭಾವನಾದ, ನಿರಹಂ ನಿರ್‌ಮಮ, ನಿಸ್ಪೃಹನಾದ ಇವನನ್ನಿಡುವ, ಎನ್ನೈ = ಪರಮ ಬಂಧುವಾದ ಸ್ವಾಮಿ ತಂದೆ!

ಕೋವಿ ನಾಯಕನ್ = ಗೋಪೀಜನ ವಲ್ಲಭ. ಅವರ ಜತೆ ಸೇರಿದಂತೆ ನಮ್ಮೆಲ್ಲರೊಡನೆಯೂ ಕಲೆಯುವ ಪರಮ ಸಖಾ! ಕೊಣ್ಡಲುಮ್ ತುಯರ್ = ಮೇಘಮಂಡಲವನ್ನೂ ಅತ್ತ ತಳ್ಳಿ ಹಿಂಸಿಸುವಷ್ಟೊಂದು ಎತ್ತರವಾದ, ವೇಙ್ಗಡ ಮಲ್ಯೆ ಅಣ್ಡ = ವೇಂಕಟಗಿರಿಯರಸಾ! ಹೀಗೆ ಈ ಲೀಲಾ ವಿಭೂತಿಗೇ ಒಂದು ತಿಲಕ ಪ್ರಾಯವಾದ ತಿರುಪತಿಯಲ್ಲೂ ಅಳುತ್ತಾ! ವಾನವರ್ ಅವಿಯಾಯ್ = ಜ್ಞಾನಿಗಳನ್ನೇ ತನ್ನ ಪ್ರಾಣಾಧಾರರನ್ನಾಗಿ ಹಾಗೂ ಜ್ಞಾನಿಗಳಿಗೆ ತಾನೇ ಪ್ರಾಣನಾಗಿಯೂ, ಇರುಪ್ಪಾರ್ಕು = ಭಾವಿಸುತ್ತಿರುವ ಈತ "ಭೂತಭಾವನಃ". ಮತ್ತೊಂದೆಡೆ ಮಲಗಿ ಇಲ್ಲೇ ಮುಂದೆ ಮುಂದೆಯೂ ಜ್ಞಾನಿ ಶರಣರನ್ನು ನಿರೀಕ್ಷಿಸುತ್ತಾ ತಪಸ್ಸು ಮಾಡುತ್ತಿರುವನು ಅದೂ ನಿಂತೇ! ಬೇರೆಡೆ ಯುಗ ಯುಗದಿಂದ ಕುಂತೇ! ಈ ಕಠಿಣ ತಪಸ್ಸೂ ಅತನಿಗೆ "ತಪ ಆಹ್ಲಾದೇ" ಮಹಾನಂದವೇ ಆಗಿದೆ! ಅಂತೆಯೇ "ಅನಂದ ನಿಲಯ!"ನಿಗೆ, ಓ ಮನವೇ ನೀನೂ ಬೇಕಾದವನೇ ಆದೆಯಲ್ಲಾ! ನನಗೇನೇನೂ ನೀನೀಗ ಬಂಧಕನಾಗಿಲ್ಲ. ಅಡಿಮೈ ತ್ತೊಳಿಲ್ ಪೂಣ್ಡಾಯೇ = ನನ್ನನ್ನೂ ವ್ಯಾಪಕ ಕೈಂಕರ್ಯ ಶ್ರೀ ಸಂಪನ್ನಾಲಂಕಾರ ಭೂಷಿತನನ್ನಾಗಿಸಿದೆಯಲ್ಲಾ!

ತಮಿಳ್ ತಿರಳ್ ೨-೧-೫

ಪೊಙ್ಗು ಪೋದಿಯುಮ್ ಪಿಣ್ಡಿಯುಮುಡೈ ಪ್ಪುತ್ತ್ರ್ ನೋನ್ಬಿಯರ್ ಪಳ್ಳಿಯುಳ್ ಉರೈ
ತಙ್ಗಳ್ ತೇವರುಮ್ ತಾಙ್ಗಳುಮೇ ಯಾಹ ಎನ್ ನೆಞ್ಜಮ್ ಎನ್ ವಾಯ್
ಎಙ್ಗುಮ್ ವಾನವರ್ ತಾನವರ್ ನಿರೈನ್ದೇತ್ತುಮ್ ವೇಙ್ಗಡಮ್ ಮೇವಿ ನಿನ್ನರುಳ್
ಅಙ್ಗಣಾಯಕರ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ

ಕನ್ನಡ ನೆರಳ್

ಹೊಂಗುವ "ಬೋಧಿ" ಅಶೋಕಂ ಭಾವಿಪ ಬೌದ್ಧರೂ ವ್ರತಿಗಳೂ ತಮ್‌ಗಳ ಶ್ರೀ ದೇಗುಲದಿಹ
ತಂ ದೆವರೂ ತಾವೇ ಆಗುವೊಲ್ ಇರಲೂ ಎನ್ ಚಿತ್ತವೆ ನಾನ್ ಏನ್ ಎಂಬೆ!
ತಂಗುತ ಬಾನವರ್ ಎಲ್ಲೂ ಸ್ಥಾನಿಕವಾಗಿ ಕಿಕ್ಕಿರಿಸುತಿಪಾ ವೇಂಕಟದೆಂದೂ ನಿಂತೇ ದಯೆ ಗೈ
ಪಂಕಜನಯನದ ನಾಯಕರ್‌ಗಿಂದು ಅಡಿಯೂಳಿಗ ದೊಡವೆಯು ಎನಗಿದೂ ತೊಡಿಸಿದೆ ನೀ!

ನೀವು ಹೀಗೆ ಅತ್ಮೀಯರಾಗಿ ನನ್ನನ್ನು ಕೊಂಡಾಡಲು ಕಾರಣವೇನು? ಪೊಙ್ಗು ಬೋದಿಯುಮ್ = ಬೆಳೆಯುತ್ತಲೇ ಇರುವ ಅರಳಿ ಬೋಧಿವೃಕ್ಷ, ಪಿಣ್ಡಿಯುಮ್ = ಅಶೋಕ ತರು, ಇವೆರಡನ್ನೇ, ಉಡೈ = ತಮ್ಮ ಸರ್ವಸ್ವವಾಗಿ - ಸಿದ್ಧಾನ್ತ ಪ್ರತೀಕವನ್ನಾಗಿ - ಉಳ್ಳವರು.

ಪುತ್ತರ್ = ಬುದ್ಧೈಕ ಪ್ರಧಾನವಾದಿಗಳಾಗಿರುವುದರಿಂದ ಜಗತ್ತಿನಲ್ಲಿ ಬುದ್ಧದರ್ಶನ ಹೆಚ್ಚಾಗಿ ಎಲ್ಲಿಗೆ ಅವಶ್ಯವಿತ್ತೋ ಅಲ್ಲಿಗೆ ಹೋಯಿತು. ವೇದಧರ್ಮದಲ್ಲೇ ಆ ಅನೇಕ ವಿಚಾರಗಳು ಅಡಗಿರುವುವು. ಉದಾಹರಣೆಗೆ "ಯತ್ ಪೂರ್ಣಂ ತಚ್ಛೂನ್ಯಂ". ಪರಬ್ರಹ್ಮ ಇದ್ದರೂ ಇಲ್ಲದಿದ್ದಂತೆಯೂ ಹೌದು. ಶೂನ್ಯ ಬ್ರಹ್ಮವಾದವೇನೂ ತಪ್ಪಲ್ಲ. ೫೦೦೦ ವರ್ಷದ ಶಠಕೋಪರೂ, ಇಂತೆಯೇ ಅನುಭವಿಸಿದ್ದಾರೆ.

ಉಳನೆನ ಇಲನೆನ ಇವ್ವೆ ಗುಣಮ್ ಉಡೈಮೈಯಿಲ್ ಉಳನಿರು ತಹಮೈಯೋಡು ಒಳಿವಿಲನ್ ಪರನ್ದೇ

ಅಸ್ತಿಕ್ಯ, ನಾಸ್ತಿಕ್ಯ ಉಭಯವೂ ಪರಮಾತ್ಮನ ವಸ್ತು ನಿಷ್ಠಧರ್ಮಗಳೇ. ಮಹಾತ್ಮಗಾಂಧಿಯವರೂ ಇದನ್ನೇ ಹೇಳುತ್ತಿದ್ದರು. ಎರಡನೆಯದೆಂದರೆ ಶರಣಾಗತಿ. ಉಪನಿಷತ್ತಿನಲ್ಲಿ **"ಮುಮುಕ್ಷುರ್ ವೈ ಶರಣಮಹಂ ಪ್ರಪದ್ಯೇ"** ಇತ್ಯಾದಿ ಹೇರಳವಾಗಿವೆಯಷ್ಟೇ. ಅದರಲ್ಲೂ, ತತ್ತದ್ ಗುರುಶರಣಾಗತಿ **"ಬುದ್ಧಂ ಶರಣಂ ಗಚ್ಛಾಮಿ"** ಎಂಬುದೂ, **"ಆಚಾರ್ಯ ದೇವೋ ಭವ" "ಸ ಉ ದೇವಮಾ ವಾಃ"** ಎಂದೆಲ್ಲಾ ವೇದ ವಿಹಿತವೇ ಆಗಿವೆ. ವೈದಿಕಾನುಯಾಯಿಗಳ ಹಲವಾರು ಪ್ರಾಕೃತ ದೋಷಗಳನ್ನೂ ಹೋಗಲಾಡಿಸಿ ವೇದಾರ್ಥ ಹಾಗೂ ವೈದಿಕಾಚಾರವನ್ನು "ಪರಮಧರ್ಮವಾದ ಅಹಿಂಸೆಯ" ಆಧಾರಕ್ಕೇ ಲೌಕಿಕವಾಗಿಯೂ ಉಪಪತ್ತಿಗೊಳಿಸಲೇ ಬೌದ್ಧಾವತಾರ, ಅದೂ ಪರಬ್ರಹ್ಮಾವತಾರವೇ. ಈಗ, ೨೫೦೦ ವರ್ಷದ ಬೌದ್ಧಾವತಾರ ೯ನೆಯದು. ಬೌದ್ಧಿಕ ಹಂತದಲ್ಲೇ ಚುರುಕಾಗಿರುವವರಿಗೆ ಬೌದ್ಧದರ್ಶನಾಂಶಗಳು ಬಲು ಸಾಂತ್ವನ ನೀಡುತ್ತವೆ. ಬುದ್ಧಿಗೂ ಮೀರಿದ ಒಂದು ಅಧ್ಯಾತ್ಮ ಕ್ಷೇತ್ರದಲ್ಲಿ ವೇದಮಾರ್ಗವು, "ಬುದ್ಧೌ ಶರಣಂ ಅನ್ವಿಚ್ಛ" ಎಂದು ಸಹಮತವೇ. ಅದರೂ ಕೊಟ್ಟ ಕೊನೆಗೆ, ಹೃದ್ದೇಶಸ್ಥನ ಶರಣಾಗತಿ! ಅದಕ್ಕೂ ಸ್ಪಷ್ಟೀಕರಣ. ಸರ್ವೋಪನಿಷತ್ ಸಾರವಾದ ಗೀತೆಯ

ಮಾಂ ಏಕಂ ಶರಣಂ ವ್ರಜ.

ಹಲವಾರು ಇದರ ಅನುಯಾಯಿಗಳೆಂದು ಕೊಳ್ಳುವವರು ಈ ಬಗ್ಗೆ ಕೈಯಾಡಿಸುವುದು ತಪ್ಪೇನಲ್ಲ. ಲೋಕಾಚಾರ್ಯರು ೧೩ನೆಯ ಶತಮಾನದವರು. ಯಜ್ಞಯಾಗಾದಿಗಳನ್ನು ಬಿಟ್ಟು ಪ್ರಾಯಃ ನೀವೂ ಏಕೆ ಅಳ್ವಾರ್ ಶರಣಾಗತಿ ಮಾರ್ಗಕ್ಕೇ ಸಂದಿರಿ? ಎಂಬೀ ಜಿಜ್ಞಾಸೆಗೆ "ಪರಹಿಂಸೈಯೈ ನಿವರ್ತಿಪ್ಪಿಕ್ಕೈ ಕ್ಕಾಹ" ಎಂದಿದ್ದಾರೆ! ಎಲ್ಲರೂ ಎಲ್ಲರಿಂದಲೂ ಕಲಿಯಲೂ ಬೇಕು! ಕಲಿಸಲೂ ಬೇಕು! ಇದೇ ವಿಕಾಸ ರಹಸ್ಯ! ಅನಾದಿ ಬೌದ್ಧದರ್ಶನದ "ನಿರ್ವಾಣ, ಪರಿನಿರ್ವಾಣ" ಇದೂ, ಗೀತೆಯಲ್ಲಿ "ಬ್ರಹ್ಮನಿರ್ವಾಣ"ವಾಗಿ, ಅನ್ವಯಮುಖೇನ Passitive ಪರಿಷ್ಕಾರಗೊಂಡೇ ಇದೆ. ಬೌದ್ಧ ದಾರ್ಶನಿಕರಿಗೆ, ದೀಪ ಆರಿ ಹೋಗಲಿ, ಕ್ಷಣಿಕದಲ್ಲೇಕೆ "ಅಸ್ತಿತ್ವ" ಬುದ್ಧಿ? ಅವೆಲ್ಲಾ ಬೇಡ ಬೇಡ! "ನೇತಿ, ನೇತಿ"! ಬೌದ್ಧದರ್ಶನವೇ ಆಗಲಿ ವಿಶ್ವದ ಎಲ್ಲಾ ಧರ್ಮಗಳೂ, ಅನಾದಿ ಮೂಲ ಒಂದೇ ವೇದ ವೃಕ್ಷದ ಶಾಖೋಪಶಾಖೆಗಳಷ್ಟೇ! ೧೬೦೦ ವರ್ಷದ ಇಸ್ಲಾಮ್ ಶಾಂತಿ ಧರ್ಮವೂ ಅಷ್ಟೇ! ಮತ್ಸ್ಯ ಪುರಾಣದಲ್ಲಿ, ಭರತಖಂಡದ ಹಲವಾರು ವೇದಾsನುಯಾಯಿಗಳು ಅನೈತಿಕ ಅಸಾಮಾಜಿಕ ದುಷ್ಪಾಚಾರಿಗಳಾದರು. ಬ್ರಹ್ಮಹತ್ಯೆ ಏನಾದರೂ ಕೂಡದು. ಅವರ ತಲೆಮಾತ್ರ ಬೋಳು ಮಾಡಿ. ಜನನೇಂದ್ರಿಯದ ತುದಿಯನ್ನು ಸ್ವಲ್ಪ ಛೇದಿಸಿ! "ಹೋಗಿ ಸಮುದ್ರದಾಚೆ ಮರಳುಗಾಡಿನ ಬಿಸಿಲಲ್ಲಿ ವಾಸಮಾಡಿ. ನಿಮ್ಮಂತಹವರಿಗೆ ಇಲ್ಲಿ ಸ್ಥಾನವಿಲ್ಲ. ಖರ್ಜೂರ ತಿಂದು, ನೀರಿಗೂ ಪರದಾಡಿ!" ಹೀಗೆ ಗಡೀಪಾರಾದ ವೈದಿಕರೇ ಮುಂದೆ ಮುಂದೆ ಅತಿದ್ವೈತ ವಾದಿಗಳಾಗಿ ೩೦೦ ದೇವತೆಗಳನ್ನು ಇದು ಬೇರೆ ಅದು ಬೇರೆ ಎಂದು ಪೂಜಿಸುತ್ತಾ ಬಂದಾಗ, ಪರಮಾತ್ಮನಿಂದಲೇ ಸಂದರ್ಶಿಸಲ್ಪಟ್ಟ ನಿರಕ್ಷರ ಕುಕ್ಷಿ ಮಹಾತ್ಮ ಪೈಗಂಬರ್

"ಬ್ರಹ್ಮೈ ಕಮೇವ" ಅಲ್ಲಾಹ್ ಅಕ್‌ಬರ್ "ಪರಮಂ"

ತತ್ವವನ್ನು, ಯುದ್ಧಕ್ಕೂ ಹಿಂದೆಗೆಯದೆ ಸ್ಥಾಪಿಸಿದ! ಈಗ ಯುದ್ಧ ಕಾಲಬಾಹಿರ, ಯುದ್ಧದ ಅಗ್ರಹಿಗಳು "ವಿಜ್ಞಾನ"ವನ್ನು ಬಿಸಾಡಬೇಕಾಗುತ್ತದೆ. ಅದೆಲ್ಲಿ ಸಾಧ್ಯ? "ವಿಶ್ವಮಾನುಷಃ" ಎಂಬ ಋಗ್ವೇದದ ನಾವೆಲ್ಲಾ ಕಾಲಕಾಲಕ್ಕೆ ಸೌಮ್ಯವಾಗಿಯೇ ಪರಿವರ್ತಿತರಾಗಲೇ ಬೇಕಿದೆ.

ಇನ್ನು, ನೊನ್ಪಿಯರ್ = ಮಹಾವ್ರತ ಅಣುವ್ರತ ನಿಷ್ಠರು. ಋಗ್ವೇದದಲ್ಲಿ ವೃಷಭ ದೇವಾದಿ ತೀರ್ಥಂಕರರ ಹೆಸರು ಬರುತ್ತದೆ. ಯೋಗ ಸೂತ್ರಕಾರರೂ, ವೇದವಿಹಿತವಾದ ಮಾನವ ಜಾತಿಗೇ ನಿರಪವಾದವಾದ ಸಾರ್ವಭೌಮವ್ರತಗಳನ್ನೇ ಸತ್ಯ, ಅಹಿಂಸಾ, ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹವೆಂಬುದನ್ನು ಪಟ್ಟಾಗಿ ಹಿಡಿದವರು. ಜೈನಾಗಮಿಕರು ಅವರು ಯಾವೊಂದನ್ನೂ ಏಳು ಬಗೆಯಿಂದ ಅವಿರೋಧಿಗೊಳಿಸುವ ಸ್ಯಾದ್‌ವಾದಿಗಳು. ಅವರ ನಯ ಮಧ್ಯಮಮಾರ್ಗದ್ದು. ಬಲುನಿರಾಗ್ರಹಿಗಳು, ದೇವರನ್ನು ಒಪ್ಪುವಂತೆ ಕಾಣದಿದ್ದರೂ, "ಪುದ್‌ಗಲ"ವೆಂಬ ಜೀವಾತ್ಮನೇ ಸಕಲ ದೈವೀ ಸಂಪತ್ತಿಗೇರುತ್ತ ಹೋಗಬಹುದೆನ್ನುತ್ತಾರೆ. ದಾರ್ಶನಿಕ ವಾದ ವಿವಾದಗಳಲ್ಲಿ ಹೆಚ್ಚು ಬೀಳದೆ, ಜೀವನ ಸಂಬಂಧಿ ವಿಕಾಸಕ್ಕೇ ಅದರಲ್ಲೂ ಐಹಿಕದಲ್ಲಿ ನಾವು ಒಳ್ಳೆಯವರಾಗಿದ್ದರೆ ಸಾಕು. ಅದೇ ಅದರ ಮುಂದಿನದನ್ನು ತೋರಿಸುತ್ತದೆ. "ದೇವರನ್ನು ನಂಬುವುದರಿಂದ, ನಮ್ಮ ಧೀರಪ್ರಯತ್ನಗಳೆಲ್ಲಾ ದುರ್ಬಲಗೊಳ್ಳುವುವು" ಈ ಸ್ವರ ಜೈನ ಧರ್ಮದಲ್ಲಿದೆ. ಇಲ್ಲಿ ಈ ಅಳ್ವಾರ್ ಟೀಕಿಸುವಂತೆ ಕಾಣುವುದೆಲ್ಲಾ ಆ ಕಾಲದ ತದನುಯಾಯಿಗಳ, ಪಳ್ಳಿಯುಳ್ = ಅವರವರ ನಂಬಿಕೆಯಂತೆ, ತಬ್ಗಳ್ ತಿರುಕ್ಕೋಯಿಲ್ = ಅಳ್ವಾರ್ ಜೈನಮಂದಿರಗಳನ್ನು ನಿಂದಿಸರು. ಅವನ್ನೂ "ತಿರುಕ್ಕೋಯಿಲ್" ಶ್ರೀಮಂದಿರ ಎನ್ನುತ್ತಾರೆ. ತಬ್ಗಳ್ ತೇವರುಮ್ = ತಮ್ಮ ತಮ್ಮ ಪವಿತ್ರ ಸ್ಥಾನಗಳಲ್ಲಿರುವ ಶ್ರೇಷ್ಠತಮ ಅರ್ಹರಾದ ಅರ್ಹಂತರನ್ನು ತಾಬ್ಗಳುಮೇ ಅಹ = ಅವರಂತೆಯೇ

ತಮ್ಮನ್ನೂ ಸಿದ್ಧ ತೀರ್ಥಂಕರರನ್ನಾಗಿಯೇ ಸ್ವರೂಪಾಽಭೇದದಿಂದ ಉಪಾಸಿಸುತ್ತಾ ಇರುವ, ತಾಜ್ಗಳುಮೇ ಅಹ = ಲೋಕವನ್ನೇ ಜಯಿಸಿದ ವೈರಾಗ್ಯ ಶಾಲಿಗಳಿಗೂ ಒರ್ವ ಪುರುಷೋತ್ತಮ ಉಂಟೆಂದರೆ ವೈರಾಗ್ಯದ ಜತೆಗೆ ವಿನಯವೂ ಏರುವುದೆಂಬ ರಹಸ್ಯಕ್ಕೆ ಒತ್ತು ಕೊಡದೆ ಇರುವುದರಿಂದ, ಎನ್ನೆಞ್ಞಮೇ = ನನ್ನ ಮನಸ್ಸೇ! ಆ ನಿಟ್ಟಿನಲ್ಲಿನ ಗುಣಾಂಶ ಸ್ವೀಕರಿಸಿಯೂ, ನಮಗಿಂತಲೂ ಒಂದು ಪ್ರಿಯ ವಸ್ತುವುಂಟು ಎಂಬ ಪಟ್ಟನ್ನು ನೀನು ಬಿಡಗೊಡದೆ ಇದ್ದೀಯಲ್ಲಾ! ಅಲಲಾ ಮನಸ್ಸೇ ನೀನು ಸಮಗ್ರವಾಗಿ ಹುಷಾರಾಗಿರುವಿ!

ಎಜ್ಗುಮ್ ವಾನವರ್ ದಾನವರ್ = ತಿರುಮಲೆಯ ಎಲ್ಲೆಡೆಯಲ್ಲೂ ದೈವೀ ಸಂಪನ್ನರೂ ಆಸುರೀ ಸಂಪನ್ನರೂ, ಒಟ್ಟಿನಲ್ಲಿ ಎಲ್ಲಾ ಸ್ವಭಾವದ ವಿಶ್ವಮಾನವರೂ. ನಿರೈನ್ದು = ತುಂಬಿ, ಏತ್ತುಮ್ = ಯಥಾಭಿರುಚಿ ಸ್ತೋತ್ರ ಮಾಡುತ್ತಿರುವ ವೇಜ್ಗಡಮ್ ಮೇವಿ = ವಿಚಾರ ಆಚಾರ ದೋಷಗಳೆಂಬ ಪಾಪ ಕಳೆಯುವ, ಅಮ್ ಕಣ್ = ಸುಂದರ ನಯನದ, ನಾಯಕರ್ಕು = ಸರ್ವೇಶ್ವರನಿಗೆ

ದೇವಾನಾಂ ದಾನವಾನಾಂಚ ಸಾಮಾನ್ಯಂ ಅಧಿದೈವತಮ್

ಬೌದ್ಧಿಕ, ನೈತಿಕ ಸ್ತರದಲ್ಲೇ ಸಜ್ಜನರಾಗಿದ್ದರೂ ಶಿಷ್ಟರೋ ದುಷ್ಟರೋ! ನಾರಾಯಣಾರ್ಪಣವೇ ಸರ್ವರ ಅಂತಿಮಾऽಮೃತ! ಈ ಭೂಮಿಕೆ ಈ ಆಳ್ವಾರರ ಒಲವು ಪಡೆದಿದೆ. ನಾವಾರೂ ಧರ್ಮಗಳ ಬಗ್ಗೆ ತೀರ್ಮಾನಿಸಲಾರೆವು. "ಧರ್ಮಸ್ಯ ಪ್ರಭುರಚ್ಯುತಃ!" **ಮಾತುಬೆಳ್ಳಿಯಾದರೆ ಮೌನ ಭಂಗಾರವಯ್ಯಾ!** ತಿಮ್ಮಪ್ಪನೆಂದರೆ ಒಂದು ಸರ್ವಾ ವಿರೋಧದ ಸಮನ್ವಯದ ಆದರ್ಶ ಪವಿತ್ರ ಮೂರ್ತಿ.

ಭಿನ್ನ ಭಿನ್ನ ಸಂಸ್ಕಾರವಿದ್ದೂ ಸ್ವಾಮಿಯ ಪಾವನ ಸೌಂದರ್ಯ ಸಂದರ್ಶಿಸಲು ಎಲ್ಲರೂ ಐಕಮತ್ಯ ತಾಳಿರುವವರೇ. ಇಂತಹ ಭಗವಾ ಮತ್ತು ಭಾಗವತರೆಂಬ ಉಭಯರಿಗೂ, ಇನ್ ಅಡಿಮೈ = ಪ್ರೀತಿಕಾರಿಕ ಕಾಯಕ ಕೈಂಕರ್ಯವೆಂಬ, ತೊಳಿಲ್ = ಸಕಲೇಂದ್ರಿಯ ವ್ಯಾಪಾರಗಳನ್ನೂ ಪುರುಷೋತ್ತಮನಾದ ಒರ್ವನ ಸೇವೆಯಲ್ಲೇ ಸಂತಸದಿಂದ, ಪೂಣ್ಡಾಯೇ = ಬುದ್ಧಿಯ ಪರಿಪೂರ್ಣತೆಯನ್ನಾಗಲೀ, ಸತ್ಯ ಅಹಿಂಸಾದಿ ವ್ರತಗಳ ಸಮಗ್ರತೆಯನ್ನಾಗಲಿ ತಿಮ್ಮಪ್ಪನಲ್ಲೇ ನಾವೆಲ್ಲಾ ಸಮರ್ಪಿಸಿಕೊಂಡಾಗ, ಅಂತೆಯೇ ಎಲ್ಲರೂ ನಿರಾಳವಾಗಿ, ಜೆರೂಸೆಲಂ, ಅಜಮೀರ್, ಬುದ್ಧಗಯಾ, ಮಕ್ಕಾ, ಕಾಳಿ ಕತ್ತಾ ಮಧುರೆ ಅಯೋಧ್ಯೆಗಳಾದ ಪವಿತ್ರ ಸ್ಥಳಗಳಲ್ಲಿಯೂ ಏಕಹೃದಯರಾಗಿ ಮಿಳಿತರಾಗುತ್ತಾ ಬಂದರೆ, ಇದಕ್ಕಿಂತ ಆ ಪರಮಾತ್ಮನ ಸಂತೋಷ ವೇನುಂಟು? ವಿಶ್ವದ ಸಕಲರ ಅನ್ಯೋನ್ಯ ಸಹೃದಯತೆಯೇ ಸರ್ವೇಶ್ವರನಿಗೆ ಮುಖೋಲ್ಲಾಸ ತರುವುದು.

ತಮಿಳ್ ತಿರಳ್ ೨-೧-೬

ತುವರಿಯಾಡೈಯರ್ ಮಟ್ಟೈಯರ್ ಶಮಣ್ ತೊಣ್ಡರ್‌ಹಳ್ ಮಣ್ಡೈಯುಣ್ಡು ಪಿನ್ನರುಮ್
ತಮರುಮ್ ತಾಜ್ಗಳುಮೇ ತಡಿಕ್ಕ ಎನ್ನೆಞ್ಞಮೆನ್ಬಾಯ್
ಕವರಿ ಮಾ ಕ್ಕಣಮ್ ಶೇರುಮ್ ವೇಜ್ಗಡಮ್ ಕೋಯಿಲ್ ಕೊಂಡ ಕಣ್ಣಾರ್ ವಿಶುಮ್ಬಿಡೈ
ಅಮರ ನಾಯಹರ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ

ಕನ್ನಡ ನೆರಳ್

ಕಾವಿಯು ಬಟ್ಟೆಯು ಮೊಟ್ಟೆಯು ತಲೆಯಾ ಸವಣರ್ ಭಕ್ತರು ಮೇಲ್ ಉಂಡೂ, ಮೇಣ್
ತಾವೇ ತಮ್ಮವರೊಡು ಬಡಿದಾಡಲು! ಎನ್ ಮನವೇ! ನಾನ್ ಏನೆಂಬೆ!
ಚವರೀ ಮೃಗಗಣ ಸೇರ್ ವೇಂಕಟಗಿರಿಯನೆ ಮನೆಗೊಂಡೀ ಹಿರಿದಾಣದಿ ನಿ -
ರವದ್ಯಾಮರರ್‌ಗೆರೆಯರ್ಗಿಂದೇ ಅಡಿಯೂಳಿಗದೊಡವೆಯು ತೊಡಿಸಿದೆ ನೀನೆನಗೇ!

ಜೀವಾತ್ಮರಾದವರು ಎಷ್ಟೇ ಮೇಲೇರಿದರೂ, ಬ್ರಹ್ಮ ನಿರಪೇಕ್ಷವಾಗಿಯೇ ವಿಚಾರ ಮಾಡುವ ದರ್ಶನಗಳಲ್ಲಿ ಜೀವಾತ್ಮ-ಜೀವಾತ್ಮರಲ್ಲೇ ಒಂದು ಮಹಾವಲಂಬನವಿಲ್ಲದೆ ಒಳ ಜಗಳಗಳು ನುಸುಳುವುದು ಅನಿವಾರ್ಯ. ಸರ್ವವನ್ನೂ ಸರ್ವರನ್ನೂ ಉತ್ತಮ ನೈತಿಕ, ಭೌತಿಕ, ಸಾಮಾಜಿಕ ಮಟ್ಟಕ್ಕೆ ಏರಿಸಬಹುದಾದರೂ ಅಧ್ಯಾತ್ಮದ ಪೂರಾ ಸಮಸ್ತ ಶಾಶ್ವತ ಸಮಾಧಾನಕ್ಕೆ ವೈದಿಕ ಧರ್ಮದ ಕಟ್ಟಿರ್ ಪಂಥಗಳೂ ಸೇರಿಯೇ ಇಹಪರ ಉಭಯ ನಿತ್ಯನಿರ್ದುಷ್ಟ ನಮೂನೆಯನ್ನು ತೋರಿಸಬೇಕಾಗಿದೆ. ವಿಶ್ವದಲ್ಲಿ ಸಮಾಜವಿಜ್ಞಾನ, ಅಧ್ಯಾತ್ಮ ಉಭಯವೂ ಇನ್ನೂ ಬಾಲ್ಯಾವಸ್ಥೆಯಲ್ಲಿವೆ. ಹೊಸ ಹೊಸ ಸಮಸ್ಯೆಗಳನ್ನು ಏಳಗೊಡಿಸದಂತೆ, ಸಮಸ್ಯಾ ಪರಿಹಾರದ ಮಾರ್ಗಗಳನ್ನು ಎಲ್ಲಾ ದರ್ಶನದ ಒಳ್ಳೊಳ್ಳೆಯ ಅಂಶಗಳನ್ನು ಮಾತ್ರ ಒಗ್ಗೂಡಿಸಿ ಸಾಮಾನ್ಯ ಕಾರ್ಯತಂತ್ರದ ಮಂತ್ರವನ್ನು ಎಲ್ಲರೂ ಅರಗಿಸಿಕೊಳ್ಳಬೇಕಾಗಿದೆ. ವಿಜ್ಞಾನ, ತಂತ್ರಜ್ಞಾನಗಳಂತೂ, ಇದನ್ನೇ ತುರ್ತು ತಗಾದೆ ಪಡಿಸುತ್ತಿವೆ.

ಈ ಪಾಶುರದ ಅರ್ಥವನ್ನು ಸರ್ವಧರ್ಮಗಳೆಂದುಕೊಳ್ಳುವ ಅವಮಗಳಿಗೂ ಹಚ್ಚಿದಾಗ ಈಗಿನ ಯಾವೊಂದೂ, ಆಳ್ವಾರರ ಇಲ್ಲಿನ ಹೇಳಿಕೆಗೆ ಹೊರತಾಗಿಲ್ಲ. ಅಂತೆಯೇ ಧರ್ಮಗಳ ಸಂಪ್ರದಾಯಗಳ ಒಳ್ಳೊಳ್ಳೆ ಹೆಸರಿನಲ್ಲೇ ಒಡಂಬಡಿಕೆಗಳು ಮಾಯವಾಗುತ್ತಿವೆ. ಎಲ್ಲರೂ

ಪಕ್ಷಾತೀತರಾಗಿ ಆತ್ಮನಿರೀಕ್ಷಣೆಯನ್ನೇ ಮಾಡಿಕೊಳ್ಳಬೇಕಾಗಿದೆ. ತೋರ್‌ಬೆರಳೊಂದರಿಂದ ತೋರಿಸುವ ಅಂಶಕ್ಕೆ ಮೂರುಪಟ್ಟು ಹಿಂದಕ್ಕೆ ಮಡಿಚಿರುವ ಮೂರುಬೆರಳುಗಳು ನಮ್ಮ ನಮ್ಮ ದೋಷಗಳೇ ಹೆಚ್ಚೆಂಬುದನ್ನು ಸೂಚಿಸುವುದಲ್ಲವೇ?

ತುವರಿ ಆಡೈಯರ್ = ಕಾವಿ ಬಣ್ಣದಲ್ಲಿ ಅದ್ದಿದ ಬಟ್ಟೆಯವರು. ಅಂತರಾರ್ಥವೇನು? ಸರ್ವಜನಾನುರಕ್ತಿ! ಸರ್ವೇಶ್ವರಾಸಕ್ತಿ! ಬಾಹ್ಯ ಮಾತ್ರವೇಷದ, ಮಟ್ಟೈಯರ್ = ತಲೆಯೊಳಗಿನ ಅನಗತ್ಯ ವಿಚಾರರೂಪಿ ಕೇಶರಾಶಿಗಳನ್ನು ಬೋಳು ಮಾಡಲು ಪ್ರಯತ್ನಿಸದೆ, ಬರಿ ಹೊರ ತಲೆಗೂದಲನ್ನು ಮಾತ್ರ ತಿಮ್ಮಪ್ಪನ ತೊಂಬೆಗೆ ತುಂಬುತ್ತ ತದ್‌ವಿಪರೀತವಾಗಿ ಜೀವನ ನಡೆಸುತ್ತಲೇ ಇದ್ದರೆ, ಅತನಿಗೆ ಸಂತಸವೇ? ಮಟ್ಟೈಯರ್ ಶಮಣ್ ತೊಣ್ಡರ್ ಹಳ್ = ಕೇವಲ ದೈಹಿಕ ಶ್ರಮ ಮಾತ್ರದಲ್ಲೇ ಧರ್ಮಪೂರ್ತಿ ಕಾಣುವ ಎಲ್ಲರೂ, ಮನನ ನಿದಿಧ್ಯಾಸನ ದರ್ಶನ ಸಾಕ್ಷಾತ್ಕಾರ ಇಲ್ಲದವರು. ಮಣ್ಡಿ = ಅಲ್ಪಾಹಾರದ ವ್ರತ ಪರಿಪಾಲನೆ ಮಾಡದೆ, ಅತಿಯಾಗಿಯೇ ಉಂಡು = ತಿಂದುತೇಗಿ! ಸಮಾಜವನ್ನು ತಿದ್ದಲು ದಾಯಿತ್ವ ಹೊತ್ತಿರುವ, ಪಿನ್ನರುಮ್ ತಮರುಂ ತಾಮ್ಗಳುಂವಿ = ಭಕ್ತ-ಭಕ್ತರೆಂದು ಕೊಳ್ಳುವ ತಮ್ಮ ತಮ್ಮಲ್ಲೇ, ತಡಿಕ್ಕ ಹೊಡೆದು ಬಡಿದಾಡುವ ದ್ವಂದ್ವ ದೃಶ್ಯ ಕಂಡು, ಯಾವೊಂದು ಬಾಹ್ಯ ಸಂಕೇತಗಳಿಗಾಗಷ್ಟೇ ತಲೆಬಾಗದೆ ಅವುಗಳ ಒಳಮರ್ಮದವರೆಗೂ ಹೆಣಗುವ ಜೀವಾತ್ಮನ ೨ನೇ ಹಂತದ ಅನುಪ್ರಯತ್ನದಲ್ಲಿ, ಎನ್ ನೆಞ್ಜಮ್ = ಓ ನನ್ನ ಮನವೇ! ಗುಣಾತೀತವಾದ ಚಿತ್ತವೇ! ಎನ್ ಎನ್ ಬಾಯ್? = ಇದ್ದೂ ಇಲ್ಲದಂತಿರುವ, ಮಾಡಿಯೂ ಮಾಡದಂತಿರುವ ನಿರ್ಲಿಪ್ತ ಸರ್ವತೋ ಗುಣೈಕಗ್ರಾಹಿ, ಸರ್ವತೋ ದೋಷ ತಿರಸ್ಕಾರಿ, ಮಧ್ಯಮವಾದ ನಿನ್ನ ನಿಲುಮೆಯನ್ನು ಏನೆಂದು ಹೇಳಬಲ್ಲೆನಪ್ಪಾ! Supramental Stage ಅತಿಮಾನಸ ಭೂಮಿಕೆಗೆ ಏರಿದ್ದೀಯಲ್ಲೋ! ವಿಚಾರ ಮುಕ್ತನಾಗಿ ಅಧ್ಯಾತ್ಮ ವಿಶಾರದನಾಗಿ ಅದರಿಂದಲೇ ಪ್ರಸನ್ನನಾಗಿ ಪೂರ್ಣ ಪರಮಾ ಮುಕ್ತಿಗೇ ಒಯ್ಯಲು ಈ ನನ್ನನ್ನೂ ಮುಮುಕ್ಷು ಪರಭಕ್ತಿಗೆ ಏರಿಸಿದೆಯಲ್ಲೋ! **ನಿರ್ವಿಚಾರವೈಶಾರದ್ಯೇಽಧ್ಯಾತ್ಮಪ್ರಸಾದಃ** - ಪಾತಂಜಲಯೋಗ ಸೂತ್ರ.

ಇನ್ನು ಆ ಮುಕ್ತಿ ಪ್ರದನ ದಿವ್ಯಪರಸಂಗವನ್ನು ಕೇಳು. ಎಷ್ಟೇ ವಿಕಾಸ ಸಾಧಿಸಿದರೂ ಈ ಲೀಲಾವಿಭೂತಿಯಲ್ಲಿ ಅದು ಎಷ್ಟು ಕಾಲಕ್ಕೂ ಮುಗಿಯದು. ಇಹಕ್ಕೂ ಪರಕ್ಕೂ ಮಧ್ಯವರ್ತಿಯಾಗಿರುವುದೆಂದರೆ ಯಾತ್ರಾ ಸ್ಥಳಗಳೇ. ಏಕೆಂದರೆ ಆ ವೈಕುಂಠದವರೂ ಇಲ್ಲಿಗೇ ಇಳಿದು ಬಂದು ಅಲ್ಲೂ ದೇವರಲ್ಲಿ ಕಾಣಲು ಸಿಗದಿದ್ದ ಸೌಲಭ್ಯ ಸೌಶೀಲ್ಯ ವಾತ್ಸಲ್ಯ ದಯಾದಿಗುಣಗಳನ್ನು ಈ ತಿಮ್ಮಪ್ಪನಲ್ಲೇ ಕಾಣುತ್ತಾರೆ. ತಿರುಪತಿ ಎರಡಕ್ಕೂ ಕೊಂಡಿಯಾಯಿತು. ಇಂತಹ ದೇವಭೂಮಿಗಳಲ್ಲೇ ವಾಸಮಾಡುವ ಚಮರೀ ಮೃಗಗಳು! ಪ್ರಾಣಿಗಳಿಗೂ ಜ್ಞಾತಾಜ್ಞಾತವಾಗಿ ತಮ್ಮದನ್ನು ವೇಂಕಟೇಶಾರ್ಪಣ ಮಾಡುವ ಸಂದರ್ಭ! ತಿಳಿದ ನಾವು ಪೂರ್ಣಮುಕ್ತರಾಗಲು ಏನಿದೆ ಕೊರತೆ?

ಕವರಿ = ದೇವ ದೇವನ ಚಾಮರಗಳಿಗೆ ತನ್ನ ಸಾತ್ವಿಕವಾದ ಬೆಳ್ಳನ ತೆಳ್ಳನ ಮೆದು ಗೂದಲನ್ನು ಕಾಣಿಕೆಯನ್ನಾಗಿ ನೀಡುವವು! ಒಂದಲ್ಲ ಎರಡಲ್ಲ. ಮಾಕ್ಕಣಂ = ಹಿರಿ ಹಿಂಡು! ಶೇರುಂ = ಅವವೇ ಸೇರಿರುವ, ಸೇರುತ್ತಲೇ ಇರುವಂಥದು ಈ ಕ್ಷೇತ್ರ. ಏನು ತಿಮ್ಮಪ್ಪನ ಆಕರ್ಷಣ ಶಕ್ತಿ? ವೇಙ್ಗಡಮ್ ಕೋಯಿಲ್ ಕೊಣ್ಡ = ಸ್ವಯಂ ವ್ಯಕ್ತ ಓ ವೇಂಕಟಾಽಚಲ ಮಂದಿರಾ! ಕಣ್ ಅರ್ = 'ತ್ರಿಪಾತ್ ಅಸ್ಯ ಅಮೃತಂ ದಿವಿ' ಇಲ್ಲಿನ ವಿಭೂತಿಗೆ ಬಹಳಷ್ಟು ಮೇಲೆಲ್ಲೆಯೇ ಇಲ್ಲದ ಕೈಂಕರ್ಯ ಭೋಗ ಸ್ಥಾನಗಳಿಂದ ತುಂಬಿದ, ವಿಶುಮ್ಬು = ಪರಮವ್ಯೋಮ! ಅದಕ್ಕಿಂತಲೂ ಹೆಚ್ಚು ವಿಸ್ತಾರವಾಗಿಲ್ಲದಿದ್ದರೆ, ವೈಕುಂಠವಾಸಿಗಳು ಇಲ್ಲಿಗೆ ಹೇಗೆ ಬರಲು ಸಾಧ್ಯ? ಅಂದರೆ ಯಾತ್ರಾಧಾಮಗಳಲ್ಲಿ, ಅಲ್ಲಿನ ಮೂಲ ಉದ್ದೇಶಕ್ಕೆ ಅನುಕೂಲವಾಗಿ ಖಾಲಿ ಪ್ರದೆಶಗಳು ಸರ್ವಮುಕ್ತವಾಗಿ ಬಹಳಷ್ಟಿರುವ ಯೋಜನೆ ಆಳ್ವಾರ್ ಶರಣರ ಒಳಗಿನ ಭಾವ! ಇಂತಹ ಭೂ ವೈಕುಂಠದಲ್ಲಿ "ಇಡ್ಯೆ" ಅಮರನಾಯಕರ್ಕು = ಅಯರ್‌ವರುಂ ಅಮರರ್‌ಹಳದಿಪತಿ! ನಿತ್ಯಸೂರಿ ಮುಕ್ತ ಸಂಸೇವ್ಯನಿಗೆ, ಇನ್ ಅಡಿಮೈ ತ್ತೊಳಿಲ್ = ಭೌತಿಕ ನೈತಿಕ ಸಾಮಾಜಿಕ ಅತಿಭೌತಿಕ ಸರ್ವ ವಿಕಾಸಗಳೂ ಅಡಗುವಂತೆ ಸಮಗ್ರ ಪ್ರಶಾಂತ ಸೇವಾಜೀವನಕ್ಕೇ ಪೂರ್ಣಾಯೇ = ಒತ್ತಾಸೆಯಾದೆಯಲ್ಲಾ, ಓ ಮನವೇ!

ತಮಿಳ್ ತಿರಳ್ ೨-೧-೭

ತರುಕ್ಕಿನಾಲ್ ಶಮಣ್ ಶೆಯ್‌ದು ಶೋರು ತಣ್ ತಯಿರಿನಾಲ್ ತಿರಳ್ಗೈ, ಮಿಡತ್ತಿಡ್ಗೈ
ನೆರುಕ್ಕುವಾರಲಕ್ಕಣ್ ಅದು ಕಣ್ಡು ಎನ್ ನೆಞ್ಜಮ್ ಎನ್ ಬಾಯ್!
ಮರುಕ್ಕಳ್ ವಣ್ಡುಹಳ್ ಪಾಡುಮ್ ವೇಙ್ಗಡಮ್ ಕೋಯಿಲ್ ಕೊಣ್ಡ ನೋಡುಂ, ವಾನಿಡ್ಗೈ
ಅರುಕ್ಕನ್ ಮೇವಿ ನಿರ್ ಪಾರ್ಕ್ಕು ಅಡಿಮೈ ತ್ತೊಳಿಲ್ ಪೂಣ್ಡಾಯೇ!

ಕನ್ನಡ ನೆರಳ್

ತರ್ಕದಿಂ ಬರಿದೇ ಶಮನಂ ಗೈದು, ಬಿಸಿಯನ್ನದ ತಣ್ ಮೊಸರ್ ಕಲೆಸಿದ ಹಿರಿ ತೆರಳೆಯಂ ಗಂಟಲೆಡೆ
ತುರ್‌ಕುವರ್ ಅಲಲಾ! ಕಣ್ ಗುಡ್ಡೆಯೆ ಹಾರುವೊಲ್ ಅದ ಕಂಡೆನ್ ಮನವೇ! ನಾನ್ ಏನೆಂಬೆ!
ಮರುಳ್ ರಾಗಂ ಬಂಡ್ ಪಾಡುವ ವೇಂಕಟ ದೇಗುಲಕೊಂಡದರೊಡು ಬಾನೆಡೆ ಅರ್‌ಕನೂ ಆಗುತ ಎಂದೂ ನಿಂದಿಹಗೆ
ಅಡಿಯೂಳಿಗದೊಡವೆಯ ತೊಟ್ಟೆಯಲಾ!

ತಮ್ಮನ್ನೂ ಸಿದ್ಧ ತೀರ್ಥಂಕರರನ್ನಾಗಿಯೇ ಸ್ವರೂಪಾಭೇದದಿಂದ ಉಪಾಸಿಸುತ್ತಾ ಇರುವ, ತಾಜ್ಗಳುಮೇ ಅಹ = ಲೋಕವನ್ನೇ ಜಯಿಸಿದ ವೈರಾಗ್ಯ ಶಾಲಿಗಳಿಗೂ ಒರ್ವ ಪುರುಷೋತ್ತಮ ಉಂಟೆಂದರೆ ವೈರಾಗ್ಯದ ಜತೆಗೆ ವಿನಯವೂ ಏರುವುದೆಂಬ ರಹಸ್ಯಕ್ಕೆ ಒತ್ತು ಕೊಡದೆ ಇರುವುದರಿಂದ, ಎನ್ನೆಞ್ಞಮೇ = ನನ್ನ ಮನಸ್ಸೇ! ಆ ನಿಟ್ಟಿನಲ್ಲಿನ ಗುಣಾಂಶ ಸ್ವೀಕರಿಸಿಯೂ, ನಮಗಿಂತಲೂ ಒಂದು ಪ್ರಿಯ ವಸ್ತುವುಂಟು ಎಂಬ ಪಟ್ಟನ್ನು ನೀನು ಬಿಡಗೊಡದೆ ಇದ್ದೀಯಲ್ಲಾ! ಅಲಲಾ ಮನಸ್ಸೇ ನೀನು ಸಮಗ್ರವಾಗಿ ಹುಷಾರಾಗಿರುವಿ!

ಎಜ್ಗುಮ್ ವಾನವರ್ ದಾನವರ್ = ತಿರುಮಲೆಯ ಎಲ್ಲೆಡೆಯಲ್ಲೂ ದೈವೀ ಸಂಪನ್ನರೂ ಆಸುರೀ ಸಂಪನ್ನರೂ, ಒಟ್ಟಿನಲ್ಲಿ ಎಲ್ಲಾ ಸ್ವಭಾವದ ವಿಶ್ವಮಾನವರೂ. ನಿರೈನ್ದು = ತುಂಬಿ, ಏತ್ತುಮ್ = ಯಥಾಭಿರುಚಿ ಸ್ತೋತ್ರ ಮಾಡುತ್ತಿರುವ ವೇಜ್ಗಡಮ್ ಮೇವಿ = ವಿಚಾರ ಆಚಾರ ದೋಷಗಳೆಂಬ ಪಾಪ ಕಳೆಯುವ, ಅಮ್ ಕಣ್ = ಸುಂದರ ನಯನದ, ನಾಯಕರ್ಕು = ಸರ್ವೇಶ್ವರನಿಗೆ

ದೇವಾನಾಂ ದಾನವಾನಾಂಚ ಸಾಮಾನ್ಯಂ ಅಧಿದೈವತಮ್

ಬೌದ್ಧಿಕ, ನೈತಿಕ ಸ್ತರದಲ್ಲೇ ಸಜ್ಜನರಾಗಿದ್ದರೂ ಶಿಷ್ಟರೋ ದುಷ್ಟರೋ! ನಾರಾಯಣಾರ್ಪಣವೇ ಸರ್ವರ ಅಂತಿಮಾऽಮೃತ! ಈ ಭೂಮಿಕೆ ಈ ಆಳ್ವಾರರ ಒಲವು ಪಡೆದಿದೆ. ನಾವಾರೂ ಧರ್ಮಗಳ ಬಗ್ಗೆ ತೀರ್ಮಾನಿಸಲಾರೆವು. ''ಧರ್ಮಸ್ಯ ಪ್ರಭುರಚ್ಯುತಃ!'' **ಮಾತುಬೆಳ್ಳಿಯಾದರೆ ಮೌನ ಭಂಗಾರವಯ್ಯಾ!** ತಿಮ್ಮಪ್ಪನೆಂದರೆ ಒಂದು ಸರ್ವಾ ವಿರೋಧದ ಸಮನ್ವಯದ ಆದರ್ಶ ಪವಿತ್ರ ಮೂರ್ತಿ.

ಭಿನ್ನ ಭಿನ್ನ ಸಂಸ್ಕಾರವಿದ್ದೂ ಸ್ವಾಮಿಯ ಪಾವನ ಸೌಂದರ್ಯ ಸಂದರ್ಶಿಸಲು ಎಲ್ಲರೂ ಐಕಮತ್ಯ ತಾಳಿರುವವರೇ. ಇಂತಹ ಭಗವ್ಮಾ ಮತ್ತು ಭಾಗವತರೆಂಬ ಉಭಯರಿಗೂ, ಇನ್ ಅಡಿಮೈ = ಪ್ರೀತಿಕಾರಿಕ ಕಾಯಕ ಕೈಂಕರ್ಯವೆಂಬ, ತೊಳಿಲ್ = ಸಕಲೇಂದ್ರಿಯ ವ್ಯಾಪಾರಗಳನ್ನೂ ಪುರುಷೋತ್ತಮನಾದ ಓರ್ವನ ಸೇವೆಯಲ್ಲೇ ಸಂತಸದಿಂದ, ಪೂಣ್ಡಾಯೇ = ಬುದ್ಧಿಯ ಪರಿಪೂರ್ಣತೆಯನ್ನಾಗಲೀ, ಸತ್ಯ ಅಹಿಂಸಾದಿ ವ್ರತಗಳ ಸಮಗ್ರತೆಯನ್ನಾಗಲಿ ತಿಮ್ಮಪ್ಪನಲ್ಲೇ ನಾವೆಲ್ಲಾ ಸಮರ್ಪಿಸಿಕೊಂಡಾಗ, ಅಂತೆಯೇ ಎಲ್ಲರೂ ನಿರಾಳವಾಗಿ, ಜೆರೂಸೆಲಂ, ಅಜಮೀರ್, ಬುದ್ಧಗಯಾ, ಮಕ್ಕಾ, ಕಾಳಿ ಕತ್ತಾ ಮಧುರೆ ಅಯೋಧ್ಯೆಗಳಾದ ಪವಿತ್ರ ಸ್ಥಳಗಳಲ್ಲಿಯೂ ಏಕಹೃದಯರಾಗಿ ಮಿಳಿತರಾಗುತ್ತಾ ಬಂದರೆ, ಇದಕ್ಕಿಂತ ಆ ಪರಮಾತ್ಮನ ಸಂತೋಷ ವೇನುಂಟು? ವಿಶ್ವದ ಸಕಲರ ಅನ್ಯೋನ್ಯ ಸಹೃದಯತೆಯೇ ಸರ್ವೇಶ್ವರನಿಗೆ ಮುಖೋಲ್ಲಾಸ ತರುವುದು.

ತಮಿಳ್ ತಿರಳ್ ೨-೧-೬

ತುವರಿಯಾಡೈಯರ್ ಮಟ್ಟ್ರಿಯರ್ ಶಮಣ್ ತೊಣ್ಡರ್‌ಹಳ್ ಮಣ್ಡ್ರಿಯುಣ್ಡು ಪಿನ್ನರುಮ್
ತಮರುಮ್ ತಾಜ್ಗಳುಮೇ ತಡಿಕ್ಕ ಎನ್ನೆಞ್ಞಮೆನ್ಬಾಯ್
ಕವರಿ ಮಾ ಕ್ಕಣಮ್ ಶೇರುಮ್ ವೇಜ್ಗಡಮ್ ಕೋಯಿಲ್ ಕೊಂಡ ಕಣ್ಣಾರ್ ವಿಶುಮ್ಬಿಡೈ
ಅಮರ ನಾಯಹರ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ

ಕನ್ನಡ ನೆರಳ್

ಕಾವಿಯ ಬಟ್ಟೆಯ ಮೊಟ್ಟೆಯ ತಲೆಯಾ ಸವಣರ್ ಭಕ್ತರು ಮೇಲ್ ಉಂಡೂ, ಮೇಣ್
ತಾವೇ ತಮ್ಮವರೊಡು ಬಡಿದಾಡಲು! ಎನ್ ಮನವೇ! ನಾನ್ ಏನೆಂಬೆ!
ಚವರೀ ಮೃಗಗಣ ಸೇರ್ ವೇಂಕಟಗಿರಿಯನೆ ಮನೆಗೊಂಡೀ ಹಿರಿದಾಣದಿ ನಿ -
ರವದ್ಯಾಮರರ್‌ಗೆರೆಯರ್ಗಿಂದೇ ಅಡಿಯೂಳಿಗದೊಡವೆಯ ತೊಡಿಸಿದೆ ನೀನೆನಗೇ!

ಜೀವಾತ್ಮರಾದವರು ಎಷ್ಟೇ ಮೇಲೇರಿದರೂ, ಬ್ರಹ್ಮ ನಿರಪೇಕ್ಷವಾಗಿಯೇ ವಿಚಾರ ಮಾಡುವ ದರ್ಶನಗಳಲ್ಲಿ ಜೀವಾತ್ಮ-ಜೀವಾತ್ಮರಲ್ಲೇ ಒಂದು ಮಹಾವಲಂಬನವಿಲ್ಲದೆ ಒಳ ಜಗಳಗಳು ನುಸುಳುವುದು ಅನಿವಾರ್ಯ. ಸರ್ವವನ್ನೂ ಸರ್ವರನ್ನೂ ಉತ್ತಮ ನೈತಿಕ, ಭೌತಿಕ, ಸಾಮಾಜಿಕ ಮಟ್ಟಕ್ಕೆ ಏರಿಸಬಹುದಾದರೂ ಅಧ್ಯಾತ್ಮದ ಪೂರಾ ಸಮಸ್ತ ಶಾಶ್ವತ ಸಮಾಧಾನಕ್ಕೆ ವೈದಿಕ ಧರ್ಮದ ಕಟ್ಟಿರ್ ಪಂಥಗಳೂ ಸೇರಿಯೇ ಇಹಪರ ಉಭಯ ನಿತ್ಯನಿರ್ದುಷ್ಟ ನಮೂನೆಯನ್ನು ತೋರಿಸಬೇಕಾಗಿದೆ. ವಿಶ್ವದಲ್ಲಿ ಸಮಾಜವಿಜ್ಞಾನ, ಅಧ್ಯಾತ್ಮ ಉಭಯವೂ ಇನ್ನೂ ಬಾಲ್ಯಾವಸ್ಥೆಯಲ್ಲಿವೆ. ಹೊಸ ಹೊಸ ಸಮಸ್ಯೆಗಳನ್ನು ಏಳಗೊಡಿಸದಂತೆ, ಸಮಸ್ಯಾ ಪರಿಹಾರದ ಮಾರ್ಗಗಳನ್ನು ಎಲ್ಲಾ ದರ್ಶನದ ಒಳ್ಳೊಳ್ಳೆಯ ಅಂಶಗಳನ್ನು ಮಾತ್ರ ಒಗ್ಗೂಡಿಸಿ ಸಾಮಾನ್ಯ ಕಾರ್ಯತಂತ್ರದ ಮಂತ್ರವನ್ನು ಎಲ್ಲರೂ ಅರಗಿಸಿಕೊಳ್ಳಬೇಕಾಗಿದೆ. ವಿಜ್ಞಾನ, ತಂತ್ರಜ್ಞಾನಗಳಂತೂ, ಇದನ್ನೇ ತುರ್ತು ತಗಾದೆ ಪಡಿಸುತ್ತಿವೆ.

ಈ ಪಾಶುರದ ಅರ್ಥವನ್ನು ಸರ್ವಧರ್ಮಗಳೆಂದುಕೊಳ್ಳುವ ಅವವುಗಳಿಗೂ ಹಚ್ಚಿದಾಗ ಈಗಿನ ಯಾವೊಂದೂ, ಆಳ್ವಾರರ ಇಲ್ಲಿನ ಹೇಳಿಕೆಗೆ ಹೊರತಾಗಿಲ್ಲ. ಅಂತೆಯೇ ಧರ್ಮಗಳ ಸಂಪ್ರದಾಯಗಳ ಒಳ್ಳೊಳ್ಳೆ ಹೆಸರಿನಲ್ಲೇ ಒಡಂಬಡಿಕೆಗಳು ಮಾಯವಾಗುತ್ತಿವೆ. ಎಲ್ಲರೂ

ಪಕ್ಷಾತೀತರಾಗಿ ಆತ್ಮನಿರೀಕ್ಷಣೆಯನ್ನೇ ಮಾಡಿಕೊಳ್ಳಬೇಕಾಗಿದೆ. ತೋರ್‌ಬೆರಳೊಂದರಿಂದ ತೋರಿಸುವ ಅಂಶಕ್ಕೆ ಮೂರುಪಟ್ಟು ಹಿಂದಕ್ಕೆ ಮಡಿಚಿರುವ ಮೂರುಬೆರಳುಗಳು ನಮ್ಮ ನಮ್ಮ ದೋಷಗಳೇ ಹೆಚ್ಚೆಂಬುದನ್ನು ಸೂಚಿಸುವುದಲ್ಲವೇ?

ತುವರಿ ಅಡ್ಯೆಯರ್ = ಕಾವಿ ಬಣ್ಣದಲ್ಲಿ ಅದ್ದಿದ ಬಟ್ಟೆಯವರು. ಅಂತರಾರ್ಥವೇನು? ಸರ್ವಜನಾನುರಕ್ತಿ! ಸರ್ವೇಶ್ವರಾಸಕ್ತಿ! ಬಾಹ್ಯ ಮಾತ್ರವೇಷದ, ಮಟ್ಟೈಯರ್ = ತಲೆಯೊಳಗಿನ ಅನಗತ್ಯ ವಿಚಾರರೂಪಿ ಕೇಶರಾಶಿಗಳನ್ನು ಬೋಳು ಮಾಡಲು ಪ್ರಯತ್ನಿಸದೆ, ಬರಿ ಹೊರ ತಲೆಗೂದಲನ್ನು ಮಾತ್ರ ತಿಮ್ಮಪ್ಪನ ತೊಂಬೆಗೆ ತುಂಬುತ್ತ ತದ್‌ವಿಪರೀತವಾಗಿ ಜೀವನ ನಡೆಸುತ್ತಲೇ ಇದ್ದರೆ, ಆತನಿಗೆ ಸಂತಸವೇ? ಮಟ್ಟೈಯರ್ ಶಮಣ್ ತೊಣ್ಡರ್ ಹಳ್ = ಕೇವಲ ದೈಹಿಕ ಶ್ರಮ ಮಾತ್ರದಲ್ಲೇ ಧರ್ಮಪೂರ್ತಿ ಕಾಣುವ ಎಲ್ಲರೂ, ಮನನ ನಿದಿಧ್ಯಾಸನ ದರ್ಶನ ಸಾಕ್ಷಾತ್ಕಾರ ಇಲ್ಲದವರು. ಮಣ್ಡಿ = ಅಲ್ಪಾಹಾರದ ವ್ರತ ಪರಿಪಾಲನೆ ಮಾಡದೆ, ಅತಿಯಾಗಿಯೇ ಉಂಡು = ತಿಂದುತೇಗಿ! ಸಮಾಜವನ್ನು ತಿದ್ದಲು ದಾಯಿತ್ವ ಹೊತ್ತಿರುವ, ಪಿನ್ನರುಮ್ ತಮರುಂ ತಾಮ್ಗಳುಂಏ = ಭಕ್ತ-ಭಕ್ತರೆಂದು ಕೊಳ್ಳುವ ತಮ್ಮ ತಮ್ಮಲ್ಲೇ, ತಡಿಕ್ಕ ಹೊಡೆದು ಬಡಿದಾಡುವ ದ್ವಂದ್ವ ದೃಶ್ಯ ಕಂಡು, ಯಾವೊಂದು ಬಾಹ್ಯ ಸಂಕೇತಗಳಿಗಾಗಷ್ಟೇ ತಲೆಬಾಗದೆ ಅವುಗಳ ಒಳಮರ್ಮದವರೆಗೂ ಹೆಣಗುವ ಜೀವಾತ್ಮನ ೨ನೇ ಹಂತದ ಅನುಪ್ರಯತ್ನದಲ್ಲಿ, ಎನ್ ನೆಞ್ಜಮ್ = ಓ ನನ್ನ ಮನವೇ! ಗುಣಾತೀತವಾದ ಚಿತ್ತವೇ! ಎನ್ ಎನ್ ಬಾಯ್? = ಇದ್ದೂ ಇಲ್ಲದಂತಿರುವ, ಮಾಡಿಯೂ ಮಾಡದಂತಿರುವ ನಿರ್ಲಿಪ್ತ ಸರ್ವತೋ ಗುಣೈಕಗ್ರಾಹಿ, ಸರ್ವತೋ ದೋಷ ತಿರಸ್ಕಾರಿ, ಮಧ್ಯಮವಾದ ನಿನ್ನ ನಿಲುಮೆಯನ್ನು ಏನೆಂದು ಹೇಳಬಲ್ಲೆನಪ್ಪಾ! Supramental Stage ಅತಿಮಾನಸ ಭೂಮಿಕೆಗೆ ಏರಿದ್ದೀಯಲ್ಲೋ! ವಿಚಾರ ಮುಕ್ತನಾಗಿ ಅಧ್ಯಾತ್ಮ ವಿಶಾರದನಾಗಿ ಅದರಿಂದಲೇ ಪ್ರಸನ್ನನಾಗಿ ಪೂರ್ಣ ಪರಮಾ ಮುಕ್ತಿಗೇ ಒಯ್ಯಲು ಈ ನನ್ನನ್ನೂ ಮುಮುಕ್ಷು ಪರಭಕ್ತಿಗೆ ಏರಿಸಿದೆಯಲ್ಲೋ! **ನಿರ್ವಿಚಾರವೈಶಾರದ್ಯೇಽಧ್ಯಾತ್ಮಪ್ರಸಾದಃ** - ಪಾತಂಜಲಯೋಗ ಸೂತ್ರ.

ಇನ್ನು ಆ ಮುಕ್ತಿ ಪ್ರದನ ದಿವ್ಯಪರಸಂಗವನ್ನು ಕೇಳು. ಎಷ್ಟೇ ವಿಕಾಸ ಸಾಧಿಸಿದರೂ ಈ ಲೀಲಾವಿಭೂತಿಯಲ್ಲಿ ಅದು ಎಷ್ಟು ಕಾಲಕ್ಕೂ ಮುಗಿಯದು. ಇಹಕ್ಕೂ ಪರಕ್ಕೂ ಮಧ್ಯವರ್ತಿಯಾಗಿರುವುದೆಂದರೆ ಯಾತ್ರಾ ಸ್ಥಳಗಳೇ. ಏಕೆಂದರೆ ಆ ವೈಕುಂಠದವರೂ ಇಲ್ಲಿಗೇ ಇಳಿದು ಬಂದು ಅಲ್ಲೂ ದೇವರಲ್ಲಿ ಕಾಣಲು ಸಿಗದಿದ್ದ ಸೌಲಭ್ಯ ಸೌಶೀಲ್ಯ ವಾತ್ಸಲ್ಯ ದಯಾದಿಗುಣಗಳನ್ನು ಈ ತಿಮ್ಮಪ್ಪನಲ್ಲೇ ಕಾಣುತ್ತಾರೆ. ತಿರುಪತಿ ಎರಡಕ್ಕೂ ಕೊಂಡಿಯಾಯಿತು. ಇಂತಹ ದೇವಭೂಮಿಗಳಲ್ಲೇ ವಾಸಮಾಡುವ ಚಮರೀ ಮೃಗಗಳು! ಪ್ರಾಣಿಗಳಿಗೂ ಜ್ಞಾತಾಜ್ಞಾತವಾಗಿ ತಮ್ಮದನ್ನು ವೇಂಕಟೇಶಾರ್ಪಣ ಮಾಡುವ ಸಂದರ್ಭ! ತಿಳಿದ ನಾವು ಪೂರ್ಣಮುಕ್ತರಾಗಲು ಏನಿದೆ ಕೊರತೆ?

ಕವರಿ = ದೇವ ದೇವನ ಚಾಮರಗಳಿಗೆ ತನ್ನ ಸಾತ್ವಿಕವಾದ ಬೆಳ್ಳನ ತೆಳ್ಳನ ಮೆದು ಗೂದಲನ್ನು ಕಾಣಿಕೆಯನ್ನಾಗಿ ನೀಡುವುವು! ಒಂದಲ್ಲ ಎರಡಲ್ಲ. ಮಾಕ್ಕಣಂ = ಹಿರಿ ಹಿಂಡು! ಶೇರುಂ = ಅವವೇ ಸೇರಿರುವ, ಸೇರುತ್ತಲೇ ಇರುವಂಥದು ಈ ಕ್ಷೇತ್ರ. ಏನು ತಿಮ್ಮಪ್ಪನ ಆಕರ್ಷಣ ಶಕ್ತಿ? ವೇಙ್ಗಡಮ್ ಕೋಯಿಲ್ ಕೊಣ್ಡ = ಸ್ವಯಂ ವ್ಯಕ್ತ ಓ ವೇಂಕಟಾಽಚಲ ಮಂದಿರಾ! ಕಣ್ ಆರ್ = 'ತ್ರಿಪಾತ್ ಅಸ್ಯ ಅಮೃತಂ ದಿವಿ' ಇಲ್ಲಿನ ವಿಭೂತಿಗೆ ಬಹಳಷ್ಟು ಮೇಲೆಲ್ಲೆಯೇ ಇಲ್ಲದ ಕೈಂಕರ್ಯ ಭೋಗ ಸ್ಥಾನಗಳಿಂದ ತುಂಬಿದ, ವಿಶುಮ್ಬು = ಪರಮವ್ಯೋಮ! ಅದಕ್ಕಿಂತಲೂ ಹೆಚ್ಚು ವಿಸ್ತಾರವಾಗಿಲ್ಲದಿದ್ದರೆ, ವೈಕುಂಠವಾಸಿಗಳು ಇಲ್ಲಿಗೆ ಹೇಗೆ ಬರಲು ಸಾಧ್ಯ? ಅಂದರೆ ಯಾತ್ರಾಧಾಮಗಳಲ್ಲಿ, ಅಲ್ಲಿನ ಮೂಲ ಉದ್ದೇಶ್ಯಕ್ಕೆ ಅನುಕೂಲವಾಗಿ ಖಾಲಿ ಪ್ರದೇಶಗಳು ಸರ್ವಮುಕ್ತವಾಗಿ ಬಹಳಷ್ಟಿರುವ ಯೋಜನೆ ಆಳ್ವಾರ್ ಶರಣರ ಒಳಗಿನ ಭಾವ! ಇಂತಹ ಭೂ ವೈಕುಂಠದಲ್ಲಿ "ಇಡೈ" ಅಮರನಾಯಕರ್ಕು = ಅಯರ್‌ವರುಂ ಅಮರರ್‌ಹಳದಿಪತಿ! ನಿತ್ಯಸೂರಿ ಮುಕ್ತ ಸಂಸೇವ್ಯನಿಗೆ, ಇನ್ ಅಡಿಮೈ ತ್ತೊಳಿಲ್ = ಭೌತಿಕ ನೈತಿಕ ಸಾಮಾಜಿಕ ಅತಿಭೌತಿಕ ಸರ್ವ ವಿಕಾಸಗಳೂ ಅಡಗುವಂತೆ ಸಮಗ್ರ ಪ್ರಶಾಂತ ಸೇವಾಜೀವನಕ್ಕೇ ಪೂಣ್ಡಾಯೇ = ಒತ್ತಾಸೆಯಾದೆಯಲ್ಲಾ, ಓ ಮನವೇ!

ತಮಿಳ್ ತಿರಳ್ ೨-೧-೭

ತರುಕ್ಕಿನಾಲ್ ಶಮಣ್ ಶೆಯ್‌ದು ಶೋರು ತಣ್ ತಯಿರಿನಾಲ್ ತಿರಳ್ಕೈ, ಮಿಡತ್ತಿಡೈ
ನೆರುಕ್ಕುವಾರಲಕ್ಕಣ್ ಅದು ಕಣ್ಡು ಎನ್ ನೆಞ್ಜಮ್ ಎನ್ ಬಾಯ್!
ಮರುಕ್ಕಳ್ ವಣ್ಡುಹಳ್ ಪಾಡುಮ್ ವೇಙ್ಗಡಮ್ ಕೋಯಿಲ್ ಕೊಣ್ಡ ನೋಡುಂ, ವಾನಿಡೈ
ಅರುಕ್ಕನ್ ಮೇವಿ ನಿರ್ ಪಾರ್ಕ್ಕು ಅಡಿಮೈ ತ್ತೊಳಿಲ್ ಪೂಣ್ಡಾಯೇ!

ಕನ್ನಡ ನೆರಳ್

ತರ್ಕದಿಂ ಬರಿದೇ ಶಮನಂ ಗೈದು, ಬಿಸಿಯನ್ನದ ತಣ್ ಮೊಸರ್ ಕಲೆಸಿದ ಹಿರಿ ತೆರಳೆಯಂ ಗಂಟಲೆಡೆ
ತುರ್‌ಕುವರ್ ಅಲಲಾ! ಕಣ್ ಗುಡ್ಡೆಯೆ ಹಾರುವೊಲ್ ಅದ ಕಂಡೆನ್ ಮನವೇ! ನಾನ್ ಏನೆಂಬೆ!
ಮರುಳ್ ರಾಗಂ ಬಂಡ್ ಪಾಡುವ ವೇಂಕಟ ದೇಗುಲಕೊಂಡದರೊಡು ಬಾನೆಡೆ ಅರ್‌ಕನೂ ಆಗುತ ಎಂದೂ ನಿಂದಿಹಗೆ
ಅಡಿಯೂಳಿಗದೊಡವೆಯ ತೊಟ್ಟೆಯಲಾ!

ಕೋಟಿ ಸೂರ್ಯ ಪ್ರಕಾಶಮಾನನಾಗಿ ತಿರುಮಂಗೈ ಯಾಳ್ವಾರರಿಗೆ ತಿಮ್ಮಪ್ಪ ದರ್ಶನ ನೀಡುತ್ತಿದ್ದಾನೆ! ಈ ಸಮಗ್ರ ಆನಂದವಿದ್ದರೂ ಲೋಕದವರ ಪ್ರಕೃತಿ ಸಂಸರ್ಗದಿಂದ ಅಂಟಿಕೊಳ್ಳುವ ವಿಚಾರ, ಆಚಾರ ದೋಷಗಳನ್ನು ಕರುಣೆಯಿಂದ ರಾಗ ದ್ವೇಷವಿಲ್ಲದೆ ಮಧ್ಯಸ್ಥರಾಗಿ ಹೇಳುವರು. ಎಲ್ಲರ ಆತ್ಮ ಹಾಗೂ ಅದರ ಆವಾಸ, ಇಂದಿಗೂ ವಿಜ್ಞಾನಿಗಳಿಗೆ ಗೋಚರವಾಗಿಲ್ಲದ ಹೃದಯಾಂತರತಮ! ಎಂದೂ ನಿರ್ದುಷ್ಟವೇ ಹೌದು. ಶುಭಾಕಾಂಕ್ಷೆಯೇ ಎಲ್ಲಾ ಪ್ರಜೆಗಳ ಮೂಲ ಜಾತ್ಯಾತೀತ ಸ್ವರೂಪ! ಇದೇ ಪ್ರಜಾತಂತ್ರದ ಬುನಾದಿ. ನಿಜವಾದ ಡೆಮಾಕ್ರಸಿ, ಡೆಮೆನಾಕ್ರಸಿ ಆಗಲು ಸಾಧ್ಯವೇ ಇಲ್ಲ. ಆದರೂ ಏಕಾಗುತ್ತಿದೆ? ಈ ಪ್ರಶ್ನೆಗೆ ಉತ್ತರ ಇಲ್ಲಿದೆ. ಅದೇ ನಿರ್ವೈರ, ನಿಷ್ಪಕ್ಷ, ನಿರ್ಭಯಗಳೆಂಬ "ದೃಢವಾದ ಸ್ವಯಂ ಪ್ರಜಾಧರ್ಮೈಕಜಾಗರಣ".

೫೦೦೦ ವರ್ಷದ ಅಂದಿನ ಸಮಾಜದ ಯಥಾಸ್ಥಿತಿಗಳನ್ನು ತೋರುತ್ತಾರೆ ಈ ಶರಣರು. ತರುಕ್ಕಿನಾಲ್ = ಹಿಂದಿನವರ ಒಳ್ಳೊಳ್ಳೆಯ ರಚನಾತ್ಮಕ ವೈದಿಕ ಸ್ವಾನುಭವಗಳನ್ನು ಗಮನಕ್ಕೆ ತೆಗೆದುಕೊಳ್ಳದಿರುವುದು. ಕೇವಲ ತೋಚಿ ತೋಚಿದ ತರ್ಕ ಯುಕ್ತಿಗಳಿಂದಷ್ಟೇ ಶಮಣ್ ಕೆಯ್ದ್ = ಪೂರ್ವಪಕ್ಷಗಳನ್ನು, ಶಮನಮಾಡಿ, ಹೀಗೆ ಬೌದ್ಧಿಕ, ನೈತಿಕ ನಯಚಾರಿತ್ರ್ಯ, ಸಮ್ಯಗ್ ಜ್ಞಾನಗಳಿಂದಷ್ಟೇ ತಮ್ಮ ಅನಿಸಿಕೆಗಳನ್ನು ಸ್ಥಾಪಿಸಬಹುದಷ್ಟೆ. ಭೌತಿಕ ನೈತಿಕ ಸಾಮಾಜಿಕ ಶಿಷ್ಟ ನಡವಳಿಕೆಗಳೂ ಪರಿವರ್ತನಾ ಶೀಲಗಳೇ ಆದುದರಿಂದ ಆ ತೇಪೆ ಸಮಾಧಾನಗಳು ಶಾಶ್ವತವಾಗಿ ನಿಲ್ಲವು. ಅಪ್ರತಿಹತವಾದ ಶಾಶ್ವತ ಸರ್ವಮಂಗಳ ಕೇಂದ್ರವೆಂಬ "ಪರಬ್ರಹ್ಮ"ವನ್ನು ಅಳತೆ ಗೋಲಾಗಿ ಬಳಸಿದರೇ ಮತ್ತೆ ಮತ್ತೆ ಕಾನ್‌ಸ್ಟಿಟ್ಯೂಷನ್ನಿಗೆ ತಿದ್ದುಪಡಿ ತರಬೇಕಿಲ್ಲ. ಶಾಶ್ವತ ನೆಮ್ಮದಿ ಎಲ್ಲಾ ಕ್ಷೇತ್ರಗಳಿಗೂ ಹಬ್ಬ ಬೇಕಿದ್ದರೆ ಶಾಶ್ವತ ಸತ್ಯ ಪ್ರೇಮ ಕರುಣೆಗಳೇ ನಮ್ಮ ಸಮಸ್ತಕ್ಕೂ ಮಾಧ್ಯಮವಾಗಬೇಕಾಗುತ್ತದೆ. ಪ್ರಜಾ ಪ್ರಭುತ್ವ ಬಂದಿರುವುದು ಆ ಪರಮಾತ್ಮನ ಪರಮ ಕಲ್ಯಾಣಗುಣಗಳ ಆಶ್ರಯ ಪಡೆಯಲೆಂದೇ! ಈ ಅಂತರಿಂಗಿತವನ್ನು ಶುದ್ಧ ವಿಜ್ಞಾನವೂ ವೇಗದಿಂದ ತೋರಿಸುತ್ತಿದೆ. ಕಾಲ ಪಕ್ವವಾಗಿದೆ. ಮಾನವ ಮನ ಈ ಶರಣರ ಮನಸ್ಸಿನಂತೆ ಪರಿಪಕ್ವವಾಗಬೇಕಷ್ಟೆ! ತಂತ್ರಜ್ಞಾನಗಳ ಕ್ಷೇತ್ರವೂ ನಿಷ್ಕಾಮ ಕರ್ಮಕ್ಷೇತ್ರವಾಗದೆ ಇದು ಸಾಧ್ಯವಿಲ್ಲ. ತಂತ್ರಜ್ಞರು ತಮ್ಮ ಬುದ್ಧಿಚಾತುರ್ಯದ ಬಾಜಾರಿನೀತಿಗೆ ಬಲಿಯಾಗಬಾರದು. ನೇರಾ ಪ್ರಜಾಶ್ರಿತರಾಗಬೇಕು. ಇನ್ನೂ ಅನೇಕರು ನಡೆಸುತ್ತಿರುವ ಆಚಾರದೋಷಗಳ ಬಗ್ಗೆ ಈ ಶರಣರ ವರದಿ ಮುಂದೆ ಸಾಗುತ್ತದೆ. ಶೋರು = ಬಿಸಿಯಾದ ಕೆಂದನ್ನ, ತಣ್ ತಯಿರಿನಾಲ್ = ತಂಪಾದ ಸಿಹಿಮೊಸರು ಕಲೆಸಿ ಇಷ್ಟೇ ತುತ್ತು ಎಂಬವ್ರತ! ಅದು ಸಾಲದೆಂದು ಅನೇಕರು ತುತ್ತಿನ ಪ್ರಮಾಣವನ್ನೇ ಹೆಚ್ಚಿಸಿ ನುಂಗುತ್ತಾರೆ. ಇಡತ್ತು ಇಡೈ = ಒಳ ಗೋಮಾಳೆಯ ಸಂದಿಗೆ ನೆರುಕ್ಕುವಾರ್ = ತುರುಕಿಕೊಳ್ಳುವಾಗ, ಅಲಕ್ಕಣ್ = ಕಣ್ಣುಗುಡ್ಡೆ ಹಾರಿಹೋದಂತಾಗಿ = ಮೇಲಕ್ಕೆ ಸಿಕ್ಕಿಕೊಳ್ಳುವ, ಅದು ಕಣ್ಡು = ಆ ದಯನೀಯ ದೃಶ್ಯ ಕಂಡು, ಎನ್‌ನೆಞ್ಜಮ್ = ಅಂಥದಕ್ಕೆಲ್ಲಾ ನನ್ನನ್ನು ಸಿಕ್ಕಿಸದ ಓ ಚಿತ್ತವೇ! ನಿನ್ನ ಯಥಾರ್ಥ ದರ್ಶನ, ಯಥಾರ್ಥ ಸತ್ಯ ಸೂಚನೆಯನ್ನು ಏನೆಂದು ಹೇಳಲಿ?

ಮೂಲ ವೈದಿಕ ಪ್ರಕ್ರಿಯೆಯ ಅಂತರಂಗ ಪರಿಚಯವಿಲ್ಲದೆ ವಾದ ವಿವಾದಗಳಷ್ಟೇ! ಸರ್ವ ಸಂಪ್ರತಿಪನ್ನನಾದ, ಈ ಸೂರ್ಯ ದೇವನಿಗೂ ಅಂತರ್‌ಯಾಮಿ ಧಾರಕ ಪರಮಾತ್ಮನಾಗಿರುವವ ಈ ತಿಮ್ಮಪ್ಪ! ವತ್ಸನೆಂಬ, ಆರ್ಷ ವಿಜ್ಞಾನಿಯ ಶೋಧನೆಯಿದು. "ವಿಷ್ಣುನಾ ವಿಧೃತೇ ಭೂಮೀ! ಇತಿ ವತ್ಸಸ್ಯ ವೇದನಾ!" "ಪ್ಲೂಟೋ" ಮುಂತಾದ ಇಲ್ಲಿನ ಗ್ರಹಗಳ ಮುಂದೆ ಈ ಸೂರ್ಯನ ಬೇಳೆಯೂ ಬೇಯದೆಂಬುದನ್ನು ಇತ್ತೀಚೆಗೆ ವಿಜ್ಞಾನಿಗಳು ಕಂಡಿದ್ದಾರಷ್ಟೆ! ವಿಜ್ಞಾನಿಗಳ ಶೋಧನೆಗೆ ಬಲು ವಿನಯವೂ ಅಗತ್ಯ. ಸೂರ್ಯನ ಆಕರ್ಷಣ ಶಕ್ತಿಗೂ ಮೂಲ, ಆ ಗೋಳದ ಮಧ್ಯಸ್ಥ ವಿಷ್ಣು ಮೂರ್ತಿಯ ಪ್ರಾಕರ್ಷಣ ಶಕ್ತಿಯೇ! "ವಿಷ್‌ಲೃ ವ್ಯಾಪ್ತೌ". ಯಾವುದಕ್ಕಿಂತ ಪರಮ ವ್ಯಾಪ್ತಿ ಬೇರೊಂದಿಲ್ಲವೋ ಅಂಥದರ ಪರಮಾಶಕ್ತಿ! ಅದರ ಸಾಕಾರಿ ಪರ ಬ್ರಹ್ಮಮೂರ್ತಿಯೇ ಶ್ರೀನಿವಾಸ! ಸಕಲ "ಗೆಲಾಕ್ಸಿ"ಗಳನ್ನೂ ಆಳುವ ಪರಮ ಚೈತನ್ಯ ಶಕ್ತಿ!

ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ ನಾರಾಯಣಃ ಸರಸಿಜಾಸನ ಸಂನಿವಿಷ್ಟಃ
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯ ವಪುಃ ಧೃತಶಂಖಚಕ್ರಃ

ಈ ಸೂರ್ಯಮಂಡಲ, ಸ್ವಾಮಿ ನಿಂತಿರುವ ಪಾದ ಪದ್ಮಪೀಠ, ಕೈ ಬಳೆ, ಹತ್ತ ಕಡಕು, ನೀಳನ ಶಿರಃ ಕಿರೀಟ, ಚಿನ್ನದ ಮೆರಗು! ಶಂಖ, ಚಕ್ರ ಇವೆಲ್ಲಾ ಪರಬ್ರಹ್ಮದ ನಾನಾ ನಿಯಾಮ್ಯ ವಿಭೂತಿಗಳು. ಅವುಗಳೊಡನೆ ಸೇರಿಯೇ ಸಂಪೂರ್ಣ ಸಮಗ್ರ ಸಮಾನ ಮೌಲ್ಯ ದರ್ಶನ! ತಿಮ್ಮಪ್ಪನಿಂದಲೇ!

ಜೈನ ಬೌದ್ಧಾದಿಗಳಲ್ಲೂ ಈ ಸಮಗ್ರತೆಯ ಒಳ ಹರವುಗಳ ಝಳಕಿದೆ. ತಮಿಳುನಾಡಿನ ಜೈನ ಬೌದ್ಧರೂ ಈ ದ್ರಾವಿಡ ಶರಣರ ಸಿರಿವಚನಗಳನ್ನು ಮಂತ್ರವಾಗಿ ಜಪಿಸುವರು. ಬುದ್ಧಗಯೆ ಮುಂತಾದ ಎಡೆಗಳಲ್ಲಿ ಭಿಕ್ಷುಗಳ ಆ ಉಸಿರು ನಿಲ್ಲಿಸದಾಅಖಂಡ ಸಂಹಿತೋಚ್ಚಾರಣೆ, ಕೃಷ್ಣಯಜುರ್ ವೇದದ ಅಖಂಡ ಪಾರಾಯಣವನ್ನೂ, ದ್ರಾವಿಡದ ಪಾಶುರ ಸೇವಾ ಕಾಲಗಳನ್ನೇ ಜ್ಞಾಪಿಸುತ್ತವೆ. ತಲೆಯ ಟೋಪಿಗಳೂ, ಇಲ್ಲಿನ ಅರೈಯರ್ ಕೈಂಕರ್ಯ ಪರರದಂತೆಯೇ ಇವೆ!

ವಣ್ಡುಹಳ್ ಮರುಕ್ಕಳ್ ಪಾಡುಮ್ = ಬಂಡುಗಳು "ಇನ್ವಳರಾಗ" ಹಾಡುವ, ವೇಙ್ಗಡಮ್ = ಶ್ರೀಗಿರಿಯನ್ನು, ಕೋಯಿಲ್ ಕೊಣ್ಡು = ಆ ಪರಬ್ರಹ್ಮ ಸರ್ವೇಶ್ವರ ಸ್ವಂತ ಇಷ್ಟದಂತೆಯೇ ಸಾನ್ನಿಧ್ಯಗೊಂಡಿರುವ, ಅದನೋಡುಮ್ = ಹಾಗೂ ಎಲ್ಲರ ಕಣ್ಣಿಗೂ ಸುಲಭವಾಗಿ ಕಾಣಲೆಂದು - ಚಲಾವಣೆಗೆ ಸಲ್ಲಲೆಂದು - ಬ್ರಹ್ಮವಿಚಾರ ಆಚಾರ ಸಮಾಜಿಕವಾಗಲೆಂದು, ಮೂರ್ತಿ! ಸರ್ವಚೇತನ ಅಚೇತನಗಳಿಗೆಲ್ಲಾ ಒಂದೇ ಆತ್ಮನಾದವನು ಪರಮ ಸ್ವಾಮಿ.

ಈಶಾ ವಾಸ್ಯಮಿದಂ ಸರ್ವಮ್

ಎಂಬೀ ಸಮಗ್ರ ಪೂರ್ಣ ಅನುಭವದಿಂದ, ಅಬ್ರಹ್ಮಾತ್ಮಕವಾದ ಯಾವೊಂದು ವಸ್ತುವೂ ಇಲ್ಲ. "ಏಕಮೇವ ಅದ್ವಿತೀಯಮ್" ಎಂಬುದು ಅನುಭವಕ್ಕೆ ಬಂದಾಗ "ಸರ್ವತ್ರ ಸಮದರ್ಶಿನಾಮ್" ಬೊಂಬೆಯಂತೆ ನಿರ್ಜೀವದಂತೆ, ಅಶಕ್ತವಾಗಿ ಅಸ್ವತಂತ್ರವಾಗಿ ಕಾಣುವ ಮೂರ್ತಿಗಳಲ್ಲೂ ಬ್ರಹ್ಮದ ಪರಿಪೂರ್ಣ ಸಾನ್ನಿಧ್ಯಕ್ಕೆ ಅಡ್ಡಿಯೇನಿಲ್ಲ. ಜತೆಗೆ ಭಕ್ತರ ಭಾವನೆ, ಪರಿಪೂರ್ಣತೆಯೂ ಸೇರಿದಾಗ ಉಭಯ ಕ್ಷೇಮವೇ! ಬರಿ ತರ್ಕ ಮಾಡುವುದಾದರೆ ಈಗಿನ ಕಾಗದದ ಡಾಲರ್, ನೋಟು ಕರೆನ್ಸಿಗಳಿಗೇನು ಬೆಲೆ? ಅದೇನು ಚಿನ್ನವೇ ಬೆಳ್ಳಿಯೆ? ಎಂದರೆ ಅಪರಾಧವಾಗುತ್ತದೆಯಷ್ಟೆ! ಆಯಾಯ ರಾಷ್ಟ್ರಧ್ವಜಗಳು, ಬರಿಬಣ್ಣದ ಬಟ್ಟೆಗಳಷ್ಟೇ! ಎನ್ನಲಾದಿತೇ!

"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಂ ಉದಚ್ಯತೇ|
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವ ಅವಶಿಷ್ಯತೇ||"

ಪೂರ್ಣವದು ಪೂರ್ಣವಿದು ಪೂರ್ಣದಿಂದಲೇ ಪೂರ್ಣ ಉದಿಸುವುದು
ಪೂರ್ಣದಾ ಪೂರ್ಣವನೆ ಪಡೆದು ಪೂರ್ಣವೇ ಉಳಿಯುವುದು

ಆ ಪರಮ ಪದದ ವೈಕುಂಠನಾಥ ಹೇಗೆ ಪೂರ್ಣನೋ, ಈ ಬ್ರಹ್ಮಾಂಡದೊಳಗಿನ ಕ್ಷೀರ ಸಮುದ್ರಶಾಯಿ ಮೂರ್ತಿಯೂ ಅಜಹತ್ ಸ್ವಸ್ವಭಾವನಾಗಿಯೇ ಪೂರ್ಣ. ಇದರಿಂದಲೇ ಪೂರ್ಣವಾದ ಅವತಾರಗಳೆಲ್ಲಾ ಆಗುವುವೂ ಸಹ, ಪೂರ್ಣ. ಎಲ್ಲರ ಹೃದಯದಲ್ಲೂ ಈ ಪೂರ್ಣನೇ ನೆಲೆಸಿರುವುದು. ಈ ಪರ, ವ್ಯೂಹ, ವಿಭವ ಅನ್ತರ್‌ಯಾಮಿ ಪರಿಪೂರ್ಣವಾಗಿ ಅರ್ಚಾಮೂರ್ತಿಗಳಲ್ಲಿ ಉಳಿದೇ ಇರುತ್ತದೆ.

ವೇಙ್ಗಡತ್ತು = ತಿರುಮಲೆಯಲ್ಲಿ, ಅರುಕ್ಕನ್ ಮೇವಿ ನಿರ್‌ಪ್ಪಾರ್‌ಕ್ಕು = ಅರ್ಕಮಂಡಲಾನ್ತರ್ ವರ್ತಿಯಾದ ಪುರುಷೋತ್ತಮನಿಗೇ, ಅಡಿಮೈತ್ತೊಳಿಲ್ = ಶರೀರ ಇಂದ್ರಿಯಗಳಿಂದಲೇ ಸೇವೆ ಮಾಡುವಂತೆ. ಯಾಂತ್ರಿಕ, ಕ್ಯಾಸೆಟ್ ಮುಂತಾದವುಗಳಿಂದ ಭಾವನಾಶಕ್ತಿ ಕ್ಷಯಿಸುವ ಸಂಭವವುಂಟೆಂಬ ಎಚ್ಚರಿಕೆ. ಪೂಣ್ಡಾಯೇ = ಯಂತ್ರಗಾರಿಕೆಗೆ ಬದಲಾಗಿ, ಕೈಗಾರಿಕೆಯಿಂದಲೇ ಪ್ರೇರಕ ನೀನಾದೆ! ಓ ನನ್ನ ಮನವೇ

ತಮಿಳ್ ತಿರಳ್ ೨-೧-೮

ಶೇಯನ್ ಅಣೆಯನ್ ಶಿರಿಯನ್ ಪೆರಿಯನ್ ಎನ್ಪದುಮ್ ಶಿಲರ್ ಪೇಶ ಕ್ಕೇಟ್ಟಿರು
ನ್ನೇ ಯೆನ್ ನೆಞ್ಜಮ್ ಎನ್‌ಬಾಯ್! ಎನಕ್ಕೊನ್ನು ಶೊಲ್ಲಾದೇ
ವೇಯ್‌ಹಳ್ ನಿನ್ನು ವೆಣ್ ಮುತ್ತಮೇ ಶೂರಿ ವೇಙ್ಗಡ ಮಲೈ ಕೋಯಿಲ್ ಮೇವಿಯ
ಆಯರ್ ನಾಯಹರ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ!

ಕನ್ನಡ ನೆರಳ್

ದೂರನು ಸನಿಯನು ಕಿರಿಯನು ಹಿರಿಯನು ಎಂದು ಆಡುವ ಹಲವರ ಬೇರ್ ಬೇರ್ ಹೇಳಿಕೆ, ಕೇ
ಳಿರುತಲೇ ಎನ್ ಮನವೇ! ನಾನ್ ಏನೆಂಬೆ? - ಎನಗೊಂದನು ಪೇಳದೆಯೇ
'ವೇಯ್' ಬಿದಿರ್‌ಮೆಳೆ ಬೆಳೆದು ಬಿಳಿ ಮುತ್ತನೆ ಉದುರಿಸಿ ಸಿಡಿಸುವ ವೇಂಕಟಮಲೆ ನಿಂದಿಹರ್‌ಗೆ
ಆಯರ್‌ಗೊಲ್ಲರ ಆ ನಾಯಕರ್ ಗಿಂದು ಅಡಿಯೂಳಿಗದೊಡವೆಯ ತೊಟ್ಟೆಯಲಾ! -

ಎನ್‌ನೆಞ್ಜಮೇ ಎನ್‌ಬಾಯ್ = ನನ್ನ ಮನವೇ! ಏನು ಹೇಳಲಿ? ಅಡಿಮೈ ತೊಳಿಲ್ ಪೂಣ್ಡಾಯೇ = ದಾಸ್ಯದಲ್ಲಿ ರಸವೇರಿ ಕಾಯಕಕ್ಕೇ ಸಂದೇ ಸಂದೆಯಲ್ಲೋ! ಎನು ಹೇಳಲಿ ಈ ಆಶ್ಚರ್ಯವನ್ನು? ಬೇರಾವುದನ್ನೂ ಲೆಕ್ಕಿಸದೆ, ಕೊನೆಗೆ ಜಡಾನ್ತಃಕರಣವಾದ ನಿನಗೆ ಒಂದಳತೆಯಲ್ಲಿ ಕರ್ತನಾದ ಈ ಜೀವಾತ್ಮನಾದ ನನ್ನನ್ನೂ ಕೇಳದೆ ಪರಮಾತ್ಮನ ಸೇವೆಯಲ್ಲಿ ಸ್ಫೂರ್ತ್ಯುತ್ಸಾಹದಿಂದ ಉದ್ಯುಕ್ತನಾದೆಯಲ್ಲೋ! ಜನ ದೇವರ ಬಗೆಗೆ ನಾನಾ ರೀತಿಯಲ್ಲಿ ಆಡಿಕೊಳ್ಳುವರು ಕೆಲವರು. ಶೇಯನ್ ಅವನೆಲ್ಲಿ ನಮಗೆ ಸಿಗುವನು? ಅದೆಲ್ಲಾ ಆಗುಹೋಗದ ಮಾತು. ಅತ ನಮ್ಮಿಂದ ಬಲುದೂರ, ಎನ್ನುವವರು ಕೆಲವರು. ಅಣೆಯನ್ = ಹತ್ತಿರದಲ್ಲೇ ಇದ್ದಾನೆ. ಯಾವಾಗಲೂ ಇದ್ದೇ ಇದ್ದಾನೆ ಎಲ್ಲಿ ಹೋಗುತ್ತದೆ? ಇಷ್ಟೊಂದು ಆತುರವೇಕೆ? ಹೀಗೆ ಮುಂದೂಡುವವರು ಮತ್ತೆ ಹಲವರು. ಪೂರಾ ಉಪೇಕ್ಷಿಸುವವರಂತೂ

ಹೆಚ್ಚುಮಂದಿಯೇ ಇದಾರೆ. ಮತ್ತೊಂದು ಬಗೆಯವರು ಅಯ್ಯೋ! ಅರ್ಚಕರು, ವ್ಯವಸ್ಥಾಪಕರು ಈ ಮಧ್ಯವರ್ತಿ ದಳ್ಳಾಳಿಗಳ ಕೈಲಿ ಸಿಕ್ಕಿ "ಶಿರಿಯನ್" = ಅಷ್ಟೊಂದು ದೊಡ್ಡವನು ಸಮರ್ಥನಾದವನು ಬಲು ಅಳ್ಳಕವಾಗಿಬಿಟ್ಟ! ನಾವು ಪೂಜೆ ಮಾಡಿದರುಂಟು. ಇಲ್ಲದಿದ್ದರಿಲ್ಲ! ಈ ಅಶಕ್ತ ಬೊಂಬೆ ನಮ್ಮನ್ನೇನು ಮಾಡೀತು? ಎಂಬ ಸ್ವಾಮಿಯ ಸೌಲಭ್ಯವನ್ನೇ ಅಲ್ಪತ್ವಕ್ಕೆ ಇಳಿಸಿಬಿಡುತ್ತಾರೆ. ಇನ್ನು ಹಲವರು, ನಿಮ್ಮ ದೇವರು ಬಲು ಜಬರ್ ದಸ್ತು! ಎಂದಾತನ ದುರ್ಲಭತೆಯನ್ನೇ ಕುರಿತು ಟೀಕಿಸುತ್ತಲೇ ಇರುತ್ತಾರೆ. "ಪೆರಿಯನ್ ಎನ್‌ಬದುಮ್".

ಹೀಗೆ ಜ ತೆರದ ಜನ ಸಿಕ್ಕಾಪಟ್ಟೆ ಹೇಳಿಕೊಳ್ಳುತ್ತಿರುವುದನ್ನು. ಕೇಟ್ಟು ಇರುನ್ದೇ = ಓ ಅನ್ತಃಕರಣವೇ, ನೀನು ಕವಿಯಾರ ಕೇಳುತ್ತಲೇ ಇದ್ದೂ ಕೂಡ. ಈಗ ಈ ತಿರುಮಂಗೈಯಾಳ್ವಾರರ ಜಿತ್ತ ಜಡವಲ್ಲ. ಚಿನ್ಮಯ ಚಿತ್ತ! ತಿಮ್ಮಪ್ಪನ ವಿಶೇಷ ದಯಾರಶ್ಮಿಯ ನೇರಾ ಪ್ರಭೆ ಅವರ ಚಿತ್ತಕ್ಕೆ ಸೋಂಕಿ ಅವನ ಸರ್ವಮಹಿಮೆಯಿಂದಲೇ ಅನ್ತಃಕರಣವೇ ಜೀವ ಚೇತನ ನಿರಪೇಕ್ಷವಾಗಿ ಸೇವಾ ಕರ್ತನಾಗಿ ಬಿಟ್ಟಿದೆ. ಶ್ರೀ ಭಗವಚ್ಛಂಕರಪಾದರು ಜಡ ಜೀವ ಎರಡನ್ನೂ ಒಪ್ಪದವರು, ವ್ಯಾವಹಾರಿಕವಾಗಿ ಅನ್ತಃಕರಣಕ್ಕೇ ಒತ್ತು ಕೊಟ್ಟಿರುವುದು ಈ ಆಳ್ವಾರ್ ಶರಣರ ವಿಶಿಷ್ಟ ಅನುಭಾವದ ಪ್ರಸಾದವೆನ್ನಬಹುದು! ವಿಷ್ಣುಪಾದಾದಿ ಕೇಶಾನ್ತಸ್ತವದಲ್ಲಿ ಅವರ ಅನುಭವ ಇಲ್ಲಿ ಗಮನಾರ್ಹ.

ಯೇಭ್ಯೋ ವರ್ಣಶ್ಚತುರ್ಥಃ ಚರಮತ ಉದಭೂತ್ ಆದಿಸರ್ಗೇ ಪ್ರಜಾನಾಂ
ಸಾಹಸ್ರೀ ಚಾಪಿ ಸಂಖ್ಯಾ ಪ್ರಕಟಮಭಿಹಿತಾ ಸರ್ವವೇದೇಷು ಯೇಷಾಮ್|
ವ್ಯಾಪ್ತಾ ವಿಶ್ವಮ್ಭರಾ ಯೈಃ ಅತಿವಿತತತನೋಃ ವಿಶ್ವಮೂರ್ತೇಃ ವಿರಾಜಃ
ವಿಷ್ಣೋಸ್ತೇಭ್ಯೋ ಮಹದ್ಭ್ಯಃ ಸತತಮಪಿ ನಮೋಽಸ್ತ್ವಂಘ್ರಿಪಙ್ಕೇರುಹೇಭ್ಯಃ||

ಮನಸ್ಸು ಜೀವಾತ್ಮನ ಅಧೀನ. ಅಂತಹ ನೀನು. ಎನಕ್ಕು ಒನ್ನು ಶೊಲ್ಲಾದೇ = ಅಂತಹದರಲ್ಲಿ ಒಂದು ಮಾತನ್ನೂ ಹೇಳದೆ. ಕೇಳದೆ. ಹೇಳಿದರೆ ನಾನೆಲ್ಲಿ ಬೇಡವೆಂದು ಬಿಡುತ್ತೇನೋ! ಗುಲಾಮನಾಗಬೇಕಾಗಿದ್ದ ಮನಸ್ಸೇ ಸ್ವಾತಂತ್ರ್ಯ ವಹಿಸಿತು! ಜೀವದ್ವಾರಾ ಅಲ್ಲದೆಯೇ ತಿಮ್ಮಪ್ಪನ ಕಡೆಗೇ ಕೈಂಕರ್ಯ ಪ್ರವಣವಾಯಿತು. ಅದಕ್ಕೆ ಅವನ ದಾರಿ ಹೇಗೆ ಗೊತ್ತಾಯಿತು?

ವೇಯ್‌ಹಳ್ = ಕಿರುಬಿದಿರು ಹೆಬ್ಬಿದುರಗಳ ಭಾರಿ ಭಾರಿ ಮೆಳೆಗಳು, ನಿನ್ನು = ಎಡಬಿಡದೆ, ಉದುರಿಸುವ ವೆಣ್ = ಬೆಳ್ಳಗೆ ಹೊಳೆಯುವ, ಮುತ್ತಮೇ ಮುತ್ತಿನಂತಿಹ ಬಿದಿರಕ್ಕಿ ಕಾಳುಗಳನ್ನೇ, ಶೊರಿ = ಸಿಡಿಸಿ ಎಸೆಯುವ, ವೇಙ್ಗಡ ಮಲೈ = ಈ ಪ್ರಕಾಶದ ದಾರಿ ಹಿಡಿದು, ವೇಂಕಟ ಭೂಧರವನ್ನೇ ತನ್ನ ಮನೆಯನ್ನಾಗಿಸಿಕೊಂಡಿರುವ ಕೋ = ಸ್ವಾಮಿ. ಅತನ ಇಲ್ = ವಾಸ ಭೂಮಿ ತಿರುಪತಿ. ಅದೂ ಮೇವಿಯ = ಸಂತೋಷದಿಂದ ಎಂದೂ ಬಿಡದಿರುವ ಗಿರಿ! ಈ ತಿಮ್ಮಪ್ಪ ಯಾರು? ಅಯರ್ ನಾಯಕರ್‌ಕ್ಕು = ಗೋಪಾಲ ಬಾಲರ ಅಂದಿನ ತಂಡಕ್ಕೆಲ್ಲಾ ಮುಂದಾಳಾಗಿದ್ದ ಲೋಕನಾಯಕನಿಗೆ ಇನ್ನು = ಈಗಲೇ, ಅಡಿಮೈ ತ್ತೊಳಿಲ್ ಪೂಣ್ಡಾಯೇ = ಗೋವಳರ ಅಂದಿನ ಅಪತ್ತು ನೀಗಿದವನೇ ಇಂದೂ ಮುಂದೂ ನಮ್ಮೆಲ್ಲರ ಸಂಕಟಪರಿಹಾರಕ್ಕಾಗಿ ಇಲ್ಲಿ ಅರ್ಚಾವತಾರ ತಾಳಿರುವುದು! ಏನು ಸಂಕಟ? ಕೈಂಕರ್ಯಗೈಯ್ಯದ ಸಂಕಟ! ಈಗ ಯಾರೂ ತಿಮ್ಮಪ್ಪನ ಸೇವೆಗೆ ಸಂಕಟ ಪಡಬೇಕಿಲ್ಲ. ಶರಣರ ಶುದ್ಧ ಚಿತ್ತ ಎಲ್ಲರಿಗೂ ಕೈಂಕರ್ಯ ಪ್ರೇರಕ.

ತಮಿಳ್ ತಿರಳ್ ೨-೧-೯

ಕೂಡಿಯಾಡಿ ಉರೈತ್ತದೇ ಉರೈತ್ತಾಯ್ ಎನ್ ನೆಞ್ಜಮ್ ಎನ್ ಬಾಯ್! ತುಣಿನ್ದು ಕೇಳ್
ಪಾಡಿಯಾಡಿ ಪ್ಪಲರುಮ್ ಪಣಿನ್ದೇತ್ತಿ ಕ್ಕಾಣ್ ಗಿಲಾರ್
ಆಡು ತಾಮರೈಯೋನುಮ್ ಈಶನುಮಮರರ್ ಕೋನುಮ್ ನಿನ್ನೇತ್ತುಮ್, ವೇಙ್ಗಡ
ತ್ತಾಡು ಕೂತ್ತನುಕ್ಕು ಇನ್ ಅಡಿಮೈ ತ್ತೊಳಿಲ್ ಪೂಣ್ಡಾಯೇ

ಕನ್ನಡ ನೆರಳ್

ಕೂಡಾಡುತ ಹೇಳಿದುದನೇ ಹೇಳಿದೆ ಎನ್ ಮನವೇ! ನಾನ್ ಏನೆಂಬೆ! ನಿಚ್ಚಳ ಕೇಳ್
ಹಾಡಾಡುತ ಹಲವರ್ ನುತಿಸುತಲೂ ಕಾಣಲ್ಕಾಗದ ತೆರವಿಹಗೆ
ಆಡಾಡುವ ಪದ್ಮಜ ನೀಶ್ವರನೂ ಅಮರೇಂದ್ರನೂ ನಿಂತೇ ನುತಿಸುವ ವೇಂಕಟದೊಳ್
ಆಡಾಡುವ ಲೀಲಾ ನಟಗಡಿಯೂಳಿಗ ದೊಡವೆಯ ದಾಸಗೆ ತೊಡಿಸಿದೆಯಲ್ಲೋ!

ಎನ್ ನೆಞ್ಜಮ್ = ಹಿಂದೆಲ್ಲಾ ಓ ನನ್ನ ಮನಸ್ಸೇ! ಕೂಡಿ = ಅಷ್ಟಷ್ಟೇ ಅಲ್ಪ ವಿಷಯಗಳಾದ ಆ ಮಾತು ಈ ಮಾತು, ಆ ಗೀತ ಈ ಗೀತ ಹೇಳಿ ಕೇಳುವುದರಲ್ಲೇ ಕೂಡಾವಳಿ ಮಾಡಿಕೊಂಡು, ನಿಜಕ್ಕೂ ಯಾರಿಂದ ನಾಲಿಗೆ ಕವಿ ಸೃಷ್ಟಿಯಾಗಿದೆಯೋ ಆ ಕರ್ತನಿಗೇ ಈ

ಶಬ್ದಾದಿ ವಿಷಯಗಳನ್ನು ಬಳಸದೆ ಶಬ್ದ ವ್ಯಭಿಚಾರಿಗಳೊಡನೆಯೇ ನೀನೂ ಕೂಡಿದ್ದೆಯಷ್ಟೆ. ಹೀಗೆಯೇ ಸ್ಪರ್ಶ ರೂಪು ರಸ ಗಂಧಗಳದೂ ಹಾದರ ನಡೆಸುತ್ತಿರುವವರ ಜತೆಗೇ, ಸೇರಿ ಆಡಿ = ಚೆಲ್ಲಾಟವಾಡುತ್ತಾ, ಉರೈತ್ತದೇ ಉರೈತ್ತಾಯ್ = ಹೇಳಿದ್ದೇ ಹೇಳುತ್ತಾ ಓಬೀರಾಯನಾಗಿದ್ದೆ. ಪವಿತ್ರವಾದ ಹೊಸಮಾತಾಗಲಿ, ಶುದ್ಧರೂಪಾಗಲಿ ಇವುಗಳ ವಾಸನೆಯೇ ಇಲ್ಲದಂತಹ ವಾತಾವರಣದಲ್ಲೇ ಬೆಳೆದೆ. ಮುಟ್ಟಿದ್ದನ್ನೇ ಮುಟ್ಟುತ್ತಾ, ರುಚಿ ನೋಡಿದ್ದನ್ನೇ ಮತ್ತೆ ರುಚಿ ನೋಡುತ್ತಾ ಮೂಸಿದ್ದನ್ನೇ ಮೂಸುತ್ತಾ ಇದ್ದೆಯಲ್ಲೋ ಪೆದ್ದ! ಎನ್ ಬಾಯ್ = ಮನಸ್ಸೇ! ಈಗ ನಿನಗೊಂದು ನಲ್‌ಮಾತು ಹೇಳುತ್ತೇನೆ. ತುಣಿನ್ದು ಕೇಳ್ = ಸಲ್ಲದ ಚಾಪಲ್ಯಗಳನ್ನು ಬಿಟ್ಟು ಗಮನವಿಟ್ಟು ಕೇಳು, **"ನಮೋ ಬ್ರಹ್ಮಣೇ ಧಾರಣಂ ಮೇ ಅಸ್ತು ಅನಿರಾಕರಣಂ ಧಾರಯಿತಾ ಭೂಯಾಸಂ ಕರ್ಣಯೋಃ ಶ್ರುತಮ್ ಮಾಚ್ಯೋಢ್ವಮ್ ಮಮ ಅಮುಷ್ಯ ಓಮ್"** (ತೈ. ಉ. ೪-೧೭-೭)

ಅರಿವಿತ್ತೆನ್ ಆಳ್ ಪೊರುಳೈ ಶಿನ್ದಾಮಲ್ ಕೊಳ್ಮಿನೀರ್ ತೇರ್‌ನ್ದು — ತಿರುಮಳಿಶೈ - ೪ ನೇತಿ. ಅಂ. ೧

ಈ ಕಿವಿಯಲ್ಲಿ ಕೇಳಿದ್ದು ಆ ಕಿವಿಯಿಂದ ಹೊರಹೋಗಬಾರದು. ಒಳಗೇ ಹೊಕ್ಕು ದೃಢವಾಗಬೇಕು. ಶ್ರುತಾರ್ಥ ಮನನದಿಂದ ಮಥಿತವಾಗಿ ಅದೇ ಜೀವನವ್ಯಾಪಿಯಾಗಿ ಸದಾ ಕಣ್ಣಿಗೆ ಕಟ್ಟಿದಂತೆಯೇ ಸಾಕ್ಷಾತ್‌ಕಾರವಾಗುತ್ತಿರಬೇಕು.

"ಶ್ರೋತವ್ಯಃ ಮನ್ತವ್ಯಃ ನಿದಿಧ್ಯಾಸಿತವ್ಯಃ — ದ್ರಷ್ಟವ್ಯಃ"

ಪಲರುಮ್ = ಎಷ್ಟೋ ಜನ ತಿರುಪತಿಗೆ ಹೋಗುತ್ತೇವೆ. ಪಾಡಿ ಆಡಿ = ಗೋವಿನ್ದಾ ಗೋವಿನ್ದಾ! ವೇಂಕಟೇಶ ಭಗವಾನ್ ಕೀ ಜೈ ನಾಮೋಚ್ಚಾರಣ, ಸಾಮಗಾನ, ಸುಪ್ರಭಾತಗೀತ, ಸ್ತೋತ್ರಪಾರಾಯಣ ಕುಣಿತ, ನೃತ್ಯ, ಉರುಳು ಸೇವೆ ಎಲ್ಲಾ ಮಾಡಬಹುದು. ಪಣಿನ್ದು = ಹೆಜ್ಜೆ ನಮಸ್ಕಾರ, ಭೂಯೋಭೂಯಃ, ಸಕೃದೇವವಾ ಪ್ರಣಾಮಾದಿಗಳನ್ನೂ ಸಲ್ಲಿಸಬಹುದು. ವೇದ ಪಾರಾಯಣ ದಿವ್ಯ ಪ್ರಬನ್ಧ ಸೇವಾ ಕಾಲ, ಶಾತ್ತುಮೊರೈ, ವಾದ್ಯಘೋಷಾದಿಗಳೇ ವಿಜೃಂಭಿಸಬಹುದು.

ಆದರೂ ಕಾಣ್ಗಿಲಾರ್ = ತಿಮ್ಮಪ್ಪನನ್ನು ಪೂರ್ಣ ಸಮಗ್ರವಾಗಿ ಯಥಾರ್ಥ ದರ್ಶನ ಮಾಡಲಾರೆವು. ಅನೇಕರಿಗೆ ಒಳಗೊಳಗೇ ತಮ್ಮ ತಮ್ಮ ಸ್ಥಾನಮಾನಗಳ ಅಳಿವಿಲ್ಲದ ಉಳಿವಿಗಾಗಿ ಹೊರದರ್ಶನವಾಗುತ್ತದೆಯಷ್ಟೆ! "ಕಾಣ್‌ಗಿಲಾ" ಎಂಬ ಪಾಠದಲ್ಲಿ ಕಾಣಲು ಸಾಧ್ಯವಾಗದ ತಿಮ್ಮಪ್ಪ ಎಂದರ್ಥ. ಹಿಂದೆ ಹೇಳಿದವೇನೂ ತಪ್ಪೆಂದಲ್ಲ. ಅಷ್ಟಷ್ಟಕ್ಕೇ ತಿಮ್ಮಪ್ಪ ಸಿಗನೆಂಬ ಭಾವ. ಅಂತಹವರು ಯಾರು? ಆಡು ತಾಮರೈಯೋನುಮ್ ಈಶನುಮ್ = ಇಲ್ಲಿನ "ಉಮ್" ಸಮುಚ್ಚಯದಿಂದ ಉಮಾಪತಿ ಶಚೀಪತಿ ಮುಂತಾದವರು ಎಂಬ ಭಾವ, ನಿನ್ನು = ತಿರುಪತಿಯಲ್ಲಿ ಮೊಕ್ಕಾಂ ಮಾಡುತ್ತಾರೆ. ಅಂತಹ ಹೊಸ ಐಶ್ವರ್ಯಾರ್ಥಿಗಳಿಂದಲೂ, ಭ್ರಷ್ಟೈಶ್ವರ್ಯ ಕಾಮರಿಂದಲೂ ಹರಕೆ, ಕಾಣಿಕೆ ಸ್ವೀಕರಿಸಿ, ಅವರ ಎಲ್ಲ ಬಗೆಯ ಸೇವೆಗಳನ್ನೂ ಏತ್ತುಮ್ = ಸ್ವೀಕರಿಸುತ್ತಾ ಇದ್ದಾನೆ.

ಇಂತಹ ವೇಙ್ಗಡತ್ತು = "ವೇಮ್ ಕಡಮ್" ಎಂಬ ನಮ್ಮಾಳ್ವಾರ್ ಹಾಗೂ "ಸರ್ವಪಾಪಾನಿ "ವೇಂ" ಪ್ರಾಹುಃ ಕಟಃ ತದ್‌ದಾಹ ಉಚ್ಯತೇ" ವರಾಹ ಪುರಾಣದ ಈ ನಿರುಕ್ತಿಯಂತೆಯೂ, ಪುಣ್ಯ ಪಾಪೋಭಯಾಲಿಪ್ತ ಈ ವೇಂಕಟಗಿರಿ. ಉಭಯಾಽಪಹಾರಿಯೂ ಹೌದು. ಇವೆರಡನ್ನೂ ಮೀರಿದ ಮೋಕ್ಷ ಫಲಪ್ರದವೂ ಹೌದು. ಇಂತಹ ತಿರುಪತಿಯಲ್ಲಿ ವೇಙ್ಗಡತ್ತು, ಆಡು ಕೂತ್ತನುಕ್ಕು = ಕೃಷ್ಣಾವತಾರದಲ್ಲಿ ಕುಂಭನೃತ್ಯ, ರಾಸನೃತ್ಯ ನವನೀತ ಗಿಟ್ಟಿಸಿಕೊಳ್ಳಲು ಗೋಪಿಯರ ಮನೆ ಮನೆ ಹೊಕ್ಕು ಕುಣಿದ ಕುಣಿತ! ಕಾಳಿಂಗ ನೃತ್ಯ, ಭ್ರೂ ನೃತ್ಯ! ನೇತ್ರ ನೃತ್ಯ ಒಂದೇ ಎರಡೇ ಅನನ್ತ ನಾಟ್ಯ ವಿಲಾಸಗಳು, ಆಗ ಆಡಿದ ಆ ಗುರುತುಗಳೆಲ್ಲವೂ ತಿಮ್ಮಪ್ಪನ ದಿವ್ಯಮಂಗಳ ವಿಗ್ರಹದಲ್ಲಿ ಇವೊತ್ತಿಗೂ ಕಾಣುತ್ತಿವೆ!

ಇಂತಹವನ ಅಡಿಮೈ ತ್ತೊಳಿಲ್ = ನಾಟ್ಯವಾಡಿದ ಶ್ರಮ ಪರಿಹಾರವಾಗಿ ಅವನ ಉಪಚಾರ ಕೈಂಕರ್ಯಕ್ಕೆ, ನಾನಿಲ್ಲಿ ನಿಲ್ಲುವ ಹಾಗೆ ಮಾಡಿದೆಯಲ್ಲಾ ಓ ನನ್ನ ಮನವೇ! ನನ್ನೀ ಶರೀರ ಇಂದ್ರಿಯ ಪ್ರಾಣಾದಿಗಳಿಂದ ಕೈ ಕಾಲು ಉಪಯೋಗಿಸಿಯೇ ಮಾಡುವ ಕಾಯಕಕ್ಕೆ ನನ್ನನ್ನು ನೂಕಿದೆಯಲ್ಲಾ! **೫೦೦೦ ವರ್ಷಗಳಲ್ಲಿ ಇಂದಿನ ನಾನಾ ಯಂತ್ರ ಸೌಕರ್ಯ ಇಲ್ಲದಿದ್ದಾಗ ಶರೀರ ಶ್ರಮ ಅನಿವಾರ್ಯವಿತ್ತು. ಇಂದು ಯಂತ್ರಾತಿರೇಕ ಹದ್ದು ಮೀರಿ ಬೆಳೆದಿದೆ.** ಅದರ ವಿವೇಕಯುಕ್ತ ನಿಯಂತ್ರಣವೇ ಸರಿಯೆಂಬ ಆಳ್ವಾರರ ಸೂಚ್ಯಾರ್ಥ ಇಲ್ಲಿ ಸಿಗುತ್ತದೆ. ಈಗಲೂ ಹಿಂದಿನಂತೆ ನಾವೆಲ್ಲಾ ಶರೀರ ಧಾರಿಗಳೇ. ಊಟ ನಿದ್ದೆಗಳನ್ನು ಇನ್ನೂ ಯಂತ್ರಗಳಿಂದ ಮಾಡುತ್ತಿಲ್ಲ. ಅವೂ ಸಾಧ್ಯವಾಗಬಹುದಾದರೂ ಎಲ್ಲಿಗೆ ನಾವು ಮುಟ್ಟಬಹುದು? ಜನ ಸಂಖ್ಯಾ ಸ್ಫೋಟದ ಭೀತಿ ಮಾತ್ರ ಇದೆ. ಹುಟ್ಟಿದವರ ಸಮಗ್ರ ಸಂಪೂರ್ಣ ದೇಹಶಕ್ತಿಯ ಉಪಯೋಗಿ ವಿಜ್ಞಾನದ ಹತ್ಯೆಯನ್ನೇ ನಾವೆಲ್ಲಾ ನಡೆಸುತ್ತಿದ್ದೇವೆ. ಈ ಶರಣ ವಿಜ್ಞಾನ, ಯಂತ್ರಯುಗದ ಮಹಾತ್ಮರಿಗೆ ತಿಳಿದಿತ್ತು. ಈ ದೇಹ ಯಂತ್ರವಲ್ಲವೇನು? ಈ ಯಂತ್ರಕ್ಕೂ ಕೆಲಸ ಕಡಿತಗೊಳಿಸಬಾರದು. ಎಲ್ಲಾ ದೃಷ್ಟಿಯೂ ಸಮಾನತೆಯಿಂದಿರಲಿ. ಕೈಲಾಗುವವರು ಕಾಲಿನಿಂದ ತಿರುಪತಿ ಮೆಟ್ಟಲುಗಳನ್ನಾದರೂ ಹತ್ತಬಹುದು. ಜೀವ ಗಂಡಗಳೂ ಕಡಿಮೆಯಾದಾವು. ಈಗಿನ ಅನೇಕ ಅನಾಹುತಗಳಿಗೆಲ್ಲಾ ಯಂತ್ರದ ಹುಚ್ಚು ಕಾರಣವಾಗದೇನು?

ಅನೇಕರು ತಿಮ್ಮಪ್ಪನನ್ನು ಆಶ್ರಯಿಸಿಯೂ, ಪುರುಷೋತ್ತಮನಿಂದ ಫಲೋತ್ತಮವನ್ನು ಕೇಳದೆ, ಭಾವಿಸದೆ, ಬ್ರಹ್ಮರುದ್ರೇಂದ್ರಾದಿಗಳೂ ಸೇರಿ ತಮ್ಮ ತಮ್ಮ ಪಟ್ಟವೊಂದಕ್ಕೇ ಪಟ್ಟು ಹಿಡಿದು ಕೂರುವವರು. ಈ ಗುಂಪಿಗೆ ಓ ಮನವೇ ನೀನು ಸೇರದೆ ಸ್ವಾಮಿಯ ಸಂತೋಷವೊಂದಕ್ಕೇ ನಿಸ್ವಾರ್ಥ ನಿರ್ಮಮ ನಿರಹಂಕಾರಿ ಶುದ್ಧ ಸೇವಾ ಕೈಂಕರ್ಯ ಗೈಯ್ಯುವಂತೆಸಗಿದೆಯಲ್ಲಾ! ನಿನ್ನಿಂದ ನಾನು ಧನ್ಯನಾದೆ. 'ಉನಕ್ಕೇ ನಾಮ್ ಅಳ್ ಶೈವೋಮ್' - ತಿರುಪ್ಪಾವೈ ೨೯.

ತಮಿಳ್ ತಿರಳ್ ೨-೧-೧೦

ಮಿನ್ನು ಮಾ ಮುಹಿಲ್ ಮೇವು ತಣ್ ತಿರುವೇಙ್ಗಡಮಲೈ ಕೋಯಿಲ್ ಮೇವಿಯ
ಅನ್ನಮಾಯ್ ನಿಹಳ್ನ್ದ ಅಮರರ್ ಪೆರುಮಾನೈ
ಕನ್ನಿಮಾಮದಿಳ್ ಮಙ್ಙೈಯರ್ ಕಲಿಹನ್ನಿ ಇನ್ ತಮಿಳಾಲ್ ಉರೈತ್ತ ಇಮ್
ಮನ್ನು ಪಾಡಲ್ ವಲ್ಲಾರ್ಕ್ಕು ಇಡಮಾಹುಮ್ ವಾನುಲಹೇ

ಕನ್ನಡ ನೆರಳ್

ಮಿಂಚೂ ಮಾ ಮುಗಿಲ್ ಸೇರ್ದೇ ಇಹ ತಣ್ ಸಿರಿವೇಂಕಟ ಮಲೆದೇಗುಲ ವಾಸಿಯನೇ
ಹಂಸನೂ ಆಗಿ ಶ್ರುತಿ ಬೆಳಗಿದ ಸುರಸುಲಭನಂ ಸರ್ವೇಶ್ವರನನೇ ಕುರಿತನುಭಾವದಿಂ
ಕೊಂಕದ ಘನ ಕೋಟೆಯ ಕೊತ್ತಲ ಮಂಗಾಪುರಿ ಜಾತನು ಕಲಿಹರನ್ ಚೆಂದಮಿಳಿಂ ಪೇಳ್ದೀ
ಸೋಂಕದ ಸಾವಿನ, ಹಾಡನು ಬಲ್ಲವರ್ಗೆ ಎಡೆಯಾಗುಗೆ ವೈಂಕುಂಠದ ಲೋಕವದೋ

ಮೋಡವು ಸೂರ್ಯರಶ್ಮಿಗಳ ಮೂಲಕ ಕಪ್ಪು ಉಪ್ಪು ಸಮುದ್ರದ ನೀರನ್ನು ಕಂಠಪೂರ್ತಿಯಾಗಿ ಹೀರಿ ಉಂಟಾಗುವುದು. ಅದರಲ್ಲಿ ನೀರು, ಹವೆ ಗಾಳಿ, ಅಗ್ನಿಗಳ ಸಂಘರ್ಷ ವಿಶೇಷದಿಂದ ಗುಡುಗು, ಸಿಡಿಲು, ಮಿಂಚೂ ಸೇರಿ, ಸಿಹಿ ನೀರಾಗಿ ಮಳೆಹುಯ್ಯುವುದು. ನೀರುಂಡ ಮೇಘ ಕಪ್ಪನೆ ಇರುತ್ತದೆ. ಇದೇ ತಿಮ್ಮಪ್ಪನ ಮೂರ್ತಿ! ಸುತ್ತಲೂ ಸ್ವರ್ಣ ಪ್ರಭಾವಳಿ ವಿದ್ಯುಲ್ಲೇಖೆ! ದಾಸನಂತಹವರ ಪುಣ್ಯ ಪಾಪಗಳೇ ಉಪ್ಪಿನ ಅಂಶ. ದಿವ್ಯ ಮಹಿಷೀ ಸಮೇತನಾದ ಶ್ರೀನಿವಾಸ ಅವರವರ ಕೊಳ್ ಕೊಡುವಿಕೆಯಿಂದ ಶರಣಾಗತರಾದ ತಪ್ಪಿತಸ್ಥರ ಅಪರಾಧಗಳನ್ನು ಮನ್ನಿಸಿ ದಯಾ ವರ್ಷವನ್ನು ಸಿಹಿಯಾಗಿ ಅಖಂಡವಾಗಿಯೇ ಸುರಿಸುತ್ತಿರುವನು. ಈ ಅಂತರಾರ್ಥವನ್ನು ತಿರುಮಂಗೈ ಚತುಷ್ಕವಿ, ಸಹಜವಾದ ಸ್ವಭಾವಾಲಂಕಾರವೂ ಸೇರುವಂತೆ ಈ ದಶಕದ ಅಂತಿಮ ಪದ್ಯದಲ್ಲಿಟ್ಟು ಸಮರ್ಪಿಸುತ್ತಿದ್ದಾರೆ. ಇದೇ ಹಿಂದಿನ ೩ ದಶಕವೂ ಸೇರಿ ಒಟ್ಟು ೪೦ ಹಾಡುಗಳಿಂದ ತಿಮ್ಮಪ್ಪನೋರ್ವನಲ್ಲೇ ಇವರ ಸತ್‌ಸಂಗ! ನಮಗೂ ದೊರಕಿತು.

ಮಿನ್ನು = ಇರುಳಿನಂತಿರುವ ಮೋಡದ ಒಡಲಿಗೆ ತಾನೇ ದೀವಟಿ ಹಿಡಿಯುವಂತೆ ಮಿಂಚಿನೊಂದಿಗೆ ಕೂಡಿದ, ಮಿಂಚನ್ನು ಕಾರುವ, ಮಾ ಮುಹಿಲ್ = ಮಹಾ ಮೇಘ ಮಂಡಲಗಳು, ಮೇವು = ಪ್ರಾಯಃ ಎಲ್ಲಾ ಋತುಗಳಲ್ಲೂ ನಿತ್ಯವಾಸವಿದ್ದು, ಅದರಿಂದ, ತಣ್ = ಕುಣಿದಾಡಿ, ಬೆವರಿದವನಿಗೆ ತಂಪಾದ ಸೇವೆ ಮಾಡಲು ತಕ್ಕ ಕ್ಷೇತ್ರವಾದ, ತಿರುವೇಙ್ಗಡಮಲೈ ಕೋಯಿಲ್ ಮೇವಿಯ = ಶ್ರೀ ವೇಂಕಟಾದ್ರಿ ನಿಲಯದಲ್ಲಿ ಹಾಯಾಗಿರುವ "ಆನಂದ ನಿಲಯ ವಿಮಾನ" ಮಧ್ಯಸ್ಥ ವಿರಾಜಿತನಾದ ಈ ತಿಮ್ಮಪ್ಪನೇ ಹಿಂದೆ, ಅನ್ನಮಾಯ್ = ಹಂಸಾವತಾರತಾಳಿದವನು. ನಿಹಳ್ನ್ದ = ಚತುರ್ ಮುಖಾದಿಗಳಿಗೆ ಕಣ್ಣಾದ ವೇದವನ್ನು ಹಂಸಕ್ಷೀರ ನ್ಯಾಯದಿಂದ ವಿವೇಚಿಸಿ, ವೇದಕ್ಕೆ ಅಪಾರ್ಥ, ದುರುಪಯೋಗ ಎರಡೂ ಬಾರದಂತೆ ಯಥಾಧಿಕಾರ ಶ್ರುತಿಗಳನ್ನು ಪ್ರಕಾಶ ಪಡಿಸಿದ. ಅಮರರ್ ಪೆರುಮಾನೈ = ಈ ಮೂಲಕ, ಅಂಡಾಂತರ್ಗತ ದೇವತೆ ಹಾಗೂ ಅತ್ತಣ ವೈಕುಂಠದ ನಿತ್ಯ ಸೂರಿಗಳಿಗೂ ಹಿರಿಯ ಆಶ್ರಯದಾತನನ್ನು ಕುರಿತು

ಕನ್ನಿಮಾಮದಿಳ್ = ಭದ್ರವಾದ ಹಾಗೂ ಹಿರಿದಾದ ಕೋಟೆ ಕೊತ್ತಲುಗಳಿಂದಲೂ ಪ್ರಾಕಾರಗಳಿಂದಲೂ ಕಂಗೊಳಿಸುವ ಮಙ್ಙೈ = ಶ್ರೀಮಂಗಾಪುರಿಯಲ್ಲಿ ಹುಟ್ಟಿರುವ, ಅರ್ = ಅಲ್ಲಿನ ಭಕ್ತರಿಗೆಲ್ಲಾ ನಿರ್ವಾಹಕರಾದ, ಕಲಿಹನ್ನಿ = ಕಲಿಧ್ವಂಸಿ, ಕಲಿಯನ್ ಇನ್ ತಮಿಳಾಲ್ = ಇನ್ ಅಡಿಮೈ ಇನ್ ಅಡಿಮೈ ಎಂದು ಒಂಭತ್ತು ಬಾರಿ ಕೈಂಕರ್ಯದ ಇನಿಮೆಯನ್ನು, ಇನ್ನು ಇನ್ನು = ಈಗಲೇ, ಈಗಲೇ ಎಂದು, ಈ ತಮಿಳ್ ತಿರುಳಾದ ಹಾಡುಗಳಿಂದ, ಉರೈತ್ತ = ವೇದಕ್ಕೆ ಸಮಾನವಾಗಿಯೇ ಹೇಳಿರುವ, ಅಂದರೆ ವೇದಗಳ ಅನನ್ತ ಸರ್ವಶಾಖಾ ಹಾಗೂ ಖಿಲವೇದಗಳ ಭಾವಗಳೆಲ್ಲವೂ ಪರಿಪೂರ್ಣವಾಗುವಂತೆ, ಇಮ್ ಮನ್ನು ಪಾಡಲ್ = ಜಾನಪದ ಗೀತಗಳೂ ಅನಾದಿ ಹಾಗೂ ನಾಶವಿಲ್ಲವೆಂಬ ಭಾವ. ಆ ವೇದಕ್ಕೆ ಇರುವ ಸ್ವರಾದಿಗಳಂತೆ ಇವಕ್ಕೂ ರಾಗಗಳುಂಟು. ಇವನ್ನು, ವಲ್ಲಾರ್‌ಕ್ಕು = ವೇದಾಧಿಕಾರಿ ಅನಧಿಕಾರಿಗಳೆಂಬ ಭೇದವಿಲ್ಲದೆ, ಶ್ರದ್ಧೆಯಿಂದ ಗುರುಮುಖಿಯಾಗಿ ಕಲಿತು ತಿಳಿದವರಿಗೆ. ಇಡಮ್ ಅಹುಮ್ ವಾನ್ ಉಲಹೇ = ವೈಕುಂಠವೇ ಕೊನೆಯ ಫಲ! "ಅರಣಾಶಾರಮ್" ಎಂಬ ಬಿರುದು ಈ ಆಳ್ವಾರ್ ವಾಙ್ಮಯಕ್ಕೆ ಸಂದಿದೆಯಷ್ಟೆ. ಸಮಾಜ ಮಾಧ್ಯಮ, ದಿವ್ಯದೇಶ, ದೇವಾಲಯಾದಿಗಳನ್ನೇ, ಅರಣ್ಯಕ್ಕೆ ಬದಲು, ಗುರುತಿಸಿದವರೇ ಶರಣ ಆಳ್ವಾರರು.

ತಮಿಳ್ ತಿರಳ್ ೪-೩-೮

ಅನ್ನಿಯ ವಾಣನ್ ಆಯಿರಮ್ ತೋಳುಮ್ ತುಣೆಯ ಅನ್ನಾಳಿ, ತೊಟ್ಟಾನೈ
ಮಿನ್‌ತಿಹಳ್ ಕುಡುಮಿ ವೇಙ್ಗಡ ಮಲೈ ಮೇಲ್ ಮೇವಿಯ ವೇದನಲ್ ವಿಳಕ್ಕೈ
ತೆನ್ ತಿಶೈ ತ್ತಿಲದಮನೈಯವರ್ ನಾಙ್ಗೈ ಶೆಮ್ ಪೊನ್ ಶೆಯ್ ಕೋಯಿಲಿನುಳ್ಳೇ
ಮನ್ನದು ಪೊಲಿಯ ಮಹಿಳ್ನ್ದು ನಿನ್ನಾನೈ ವಣಙ್ಗೆ ನಾನ್ ವಾಳ್ ನ್ದೊಳಿನ್ದೇನೇ

ಕನ್ನಡ ನೆರಳ್

ಸೀರಿದ ಬಾಣನ ಸಾಸಿರ ತೋಳ್ಗಳೂ ಬೀಳುವೊಲ್ ಅಂದು ಚಕ್ರವ ತೊಟ್ಟವನಂ
ಭೂರಿಯ ವಿದ್ಯುಚ್ಛಿಖಿರದ ವೇಂಕಟಗಿರಿಮೇಲ್ ನಿತ್ಯವೂ ನಿಂದಿಹನಂ ವೇದಕೂ ನಲ್ ಬೆಳಕಾಗಿಹನಂ
ದಕ್ಷಿಣದಿಕ್ ತಿಲಕವದಾಗಿಹರ್ ಅವರಿಂ ಕಳೆಯೇರ್ ತಿರುನಾಂಗೂರ್ ಕೆಂಬೊನ್ ಕಳೆ ಕೋಯಿಲಿನೊಳಗೇ
ಆ ಕ್ಷೇತ್ರವ ಬೆಳಗುವೊಲ್ ಮುದವಾಂತೇ ನಿಂತವನಂ ಬಾಗುತ ದಾಸನು ಇಹಪರ ಬಾಳ್ದೇ ಬಿಟ್ಟೆನಲಾ!

ಮೇಲೆಲ್ಲಾ ತಿರುಮಂಗೈ ಶರಣರು ಬೇರೆ ಬೇರೆ ದಿವ್ಯ ದೇಶಗಳಲ್ಲಿಯೂ ತಿರುಪತಿ ತಿಮ್ಮಪ್ಪನನ್ನು ಕಂಡನುಭಾವಿಸುವ ಸನ್ನಿವೇಶಗಳು. ತಿರುನಾಂಗೂರ್ ಎಂಬುದು ಇವರ ಅಚ್ಚುಮೆಚ್ಚಿನ ಸ್ಥಳ. ಅಲ್ಲಿನ "ಶೆಮ್‌ಬೊನ್ ಶೆಯ್ ಕೋಯಿಲ್" ಸ್ವರ್ಣಮಂದಿರಲ್ಲಿ. ಪರಮಾತ್ಮ ಸ್ವರೂಪವೆಂಥದು? ಅಜ್ಞಾನಾಂಶ ಲವಲೇಶವೂ ಇಲ್ಲದ, ಎಂದೂ ಸೇರದ, ಇತರರ ಅಜ್ಞಾನವನ್ನು ಹೊಡೆದೋಡಿಸುವಂಥದು. ಇದನ್ನೇ "ಜ್ಞಾನಘನ" ಎನ್ನುವುದು. ಅದೇ ಪರಬ್ರಹ್ಮ. ಆನಂದಮಯನೂ ಹೌದು. ಆನಂದಕ್ಕೆ ಆಧಾರನೂ ಹೌದು. ಸಮಸ್ತರಿಗೂ ಆನಂದವನ್ನು ನೀಡುವವನೂ ಹೌದು. ಇತರರ ಆನಂದವನ್ನೆಲ್ಲಾ ತಾನೇ ಸ್ವೀಕರಿಸುವವನೂ ಹೌದು. ದುಃಖದ ಲವಲೇಶವೂ ಇಲ್ಲ ಎಂದೂ ಸ್ವರೂಪಕ್ಕೆ ಸೋಂಕದು. ಇತರರ ದುಗುಡಗಳನ್ನೆಲ್ಲಾ ಹೋಗಲಾಡಿಸುವವನು. ಅದರೆ ಪರರ ದುಃಖ ಕಂಡು ದುಃಖ ಪಡುವುದುಂಟು. ಅದು ಈ ಸುಖ ಸ್ವರೂಪಕ್ಕೆ ವಿರೋಧಿಯಲ್ಲ. ಅಂತಹ ಪರದುಃಖ ದುಃಖಿತ್ವ ಅತನ ದಯಾಗುಣವಾಗಿಯೇ ಬಿಡುವುದು.

ಈ ಪರಬ್ರಹ್ಮಸ್ವರೂಪ ನಿರಾಕಾರ ನಿರಂಜನವೇ ಹೌದು. ಅದು ಸತ್ಯ ಸ್ವರೂಪವೂ ಆಗಿದೆ. ಅದು ಅನನ್ತ! ಪ್ರದೇಶ, ಕಾಲ, ವಸ್ತುಗಳ ಒಂದು ಪರಿಮಿತಿಗೆ ಒಳಪಡುವುದಿಲ್ಲ. ತ್ರಿವಿಧ ಪರಿಚ್ಛೇದ ರಹಿತ ಸ್ವರೂಪ.

ಆದರೆ ಈ ನಿರಾಕಾರ ಬ್ರಹ್ಮ ಸ್ವರೂಪವನ್ನು ತೋರಿಸುವುದು, ಅವನ ದಿವ್ಯರೂಪ. ಅದು ಅತನ ಸ್ವರೂಪಕ್ಕೆ ಅಭಿಮತವಾದುದೇ. ಅನುರೂಪವಾದುದೇ. ನಿರಾಕಾರ ಸಾಕಾರಗಳಿಗೆ ಅತನಲ್ಲಿ ಏನೊಂದೂ ವಿರೋಧವಿಲ್ಲ. ಆ ರೂಪ ನಿತ್ಯ, ನಿರವದ್ಯ, ನಿರತಿಶಯ ಉಜ್ವಲ, ನಮ್ಮ ಚಿಂತನೆಗೆ ಮೀರಿದ್ದು, ಅದ್‌ಭುತ, ಅತಿ ಸುಂದರ, ಅತಿಸುಕುಮಾರ, ಲಾವಣ್ಯ ಪೂರ್ಣ ಸದಾ ಯೌವ್ವನದಲ್ಲೇ ಇರುವಂತಹದು. ಈ ರೂಪಿನ ಗುಣಗಳು ಅತನನ್ನು ಪ್ರೇಮಿಸುವವರಿಗೆ ಇನ್ನೂ ಲೆಕ್ಕವಿಲ್ಲದಷ್ಟು ಗುಣಗಳನ್ನು ಮುಗಿಯದೆ ತೋರುತ್ತಲೇ ಇರುತ್ತವೆ. ಈ ರೂಪು ಯಾರಿಗೂ ಕೇಡೆಣಿಸದು. ಕಲ್ಯಾಣಕಾರಿ! ಒಳ್ಳೆಯ ಸೌಗಂಧ್ಯದಿಂದಲೇ ಕೂಡಿರುತ್ತದೆ. ಮುಟ್ಟಲು ಬಲು ಸುಖದಾಯಕ. ಆ ರೂಪನ್ನು ನೋಡಿದೊಡನೇ ಪರಮ ಸತ್ವಗುಣ ನಮಗೆಲ್ಲಾ ಸಂಕ್ರಮಿಸಿಯೇ ಬಿಡುತ್ತದೆ. ಕಣ್ಣಿಗೆ ಬಲು ಅಸೇಚನಕವಾಗಿರುತ್ತದೆ. ಕೆಟ್ಟಮನ ಶಿಷ್ಟವಾಗಿ ಬಿಡುತ್ತದೆ.

ಈ ಮೌಲಿಕ ಸ್ವರೂಪವನ್ನೂ, ರೂಪವನ್ನೂ, ಇತರ ಸ್ವಭಾವಧರ್ಮಗಳನ್ನೂ ಬಿಡದೆಯೇ ಅರ್ಚಾಪ್ರತಿಮೆಗಳಲ್ಲೂ ಸ್ವಯಂ ಸಂತೋಷದಿಂದ, ಜ್ಞಾನಿ ಅಜ್ಞಾನಿ ಭಕ್ತರಿಗಾಗಿ ಪೂರ್ಣ ಸಾನ್ನಿಧ್ಯ ಗೈದಿದ್ದಾನೆ.

ಮಾ ಅಸಿ ಸಂಮಾ ಅ ಸಿ ವಿಮಾ ಅಸಿ ಪ್ರಮಾ ಅಸಿ ಪ್ರತಿಮಾ ಅಸಿ

ನೆನೆದವರ ಮನದಂತೆ ಅತ ಒಲಿಯುವವನು. ಯಾರ ಮೇಲೂ ಬಲಾತ್ಕಾರವನ್ನೂ ಮಾಡನು.

ಯೇ ಯಥಾ ಮಾಂ ಪ್ರಪದ್ಯನ್ತೇ ತಾನ್ ತಥೈವ ಭಜಾಮ್ಯಹಮ್
ಮಮವರ್ತ್ಮ ಅನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ — *ಗೀತೆ*

ಪ್ರತಿಮೆ ಇಲ್ಲ ಎನ್ನುವುದೂ ಕೆಲವರಿಗೆ ಸರಿ. ವಿಗ್ರಹವುಂಟು ಎನ್ನುವುದೂ ಸರಿ!

ನ ತಸ್ಯ ಪ್ರತಿಮಾ ಮೂರ್ತಿಃ! ನತಸ್ಯ (ವಿನಯ ಭಕ್ತಿಯಿಂದ ಬಾಗಿದವರಿಗೆ)

ಪ್ರತಿಮಾ ಮೂರ್ತಿ: ಆ ದಿವ್ಯ ಮೂರ್ತಿಯೇ ಆಗಿಬಿಡುವುದು. ಬ್ರಹ್ಮಸ್ವರೂಪ ರೂಪ ಗುಣಾದಿಗಳಿಗೆಲ್ಲಾ ಬೇರೊಂದು ಉದಾಹರಣೆಯಿಂದ, ಉಪಪತ್ತಿ ಮಾಡಲಾಗದು. ಏಕೆಂದರೆ, ಅದು ಅದ್ವಿತೀಯ. ಸರಿಸಾಟಿಯೊಂದೂ ಇಲ್ಲದುದಕ್ಕೆ ಬೇರೊಂದು ನಿದರ್ಶನ ನೀಡುವುದು ತಾನೇ ಹೇಗೆ? ಸ್ವೇತರ ಸಮಸ್ತ ವಸ್ತು ವಿಲಕ್ಷಣ! ದೇವರ ಬಗೆಗೆ ಬೌದ್ಧಿಕ ಚರ್ಚೆಗಳೆಲ್ಲಾ ನಮ್ಮ ನಮ್ಮ ಪರಿಮಿತ ಜ್ಞಾನದ ಪರಿಚಾಯಕಗಳೇ ಹೊರತು, ಅವು ವಸ್ತು ನಿಷ್ಠವಲ್ಲ. ಇದನ್ನು ಶಾಸ್ತ್ರಕಾರರು ನಿಷ್ಕರ್ಷಕ ಪದ್ಧತಿ, ಎನ್ನುತ್ತಾರೆ. ಇಂತಹ ಶರಣರಿಗೇ ಅದೇ ಸರ್ವೇಶ್ವರ,

ಮಯರ್ವು ಅರ ಮತಿ ನಲಮ್

ಅಜ್ಞಾನ ಅನ್ಯಥಾಜ್ಞಾನ, ವಿಪರೀತ ಜ್ಞಾನ, ಸಂಶಯಾದಿಗಳಿಲ್ಲದೆ, "ಮತಿ" ಸ್ವರೂಪ ಜ್ಞಾನ, ರೂಪಜ್ಞಾನ, ಗುಣಜ್ಞಾನ, ವಿಭೂತಿ ಜ್ಞಾನ, ಬ್ರಹ್ಮದ **ಲೀಲಾ** ವ್ಯಾಪಾರಾದಿಗಳ ಅರಿವು, ಅಷ್ಟರಲ್ಲೇ ನಿಲ್ಲದೆ, ಆ ಜ್ಞಾನ ಪ್ರೇಮ ರೂಪಕ್ಕೆ, ಆನಂದದ ಮಟ್ಟಕ್ಕೇರಿರುವ "ನಲಮ್" ಎಂಬ ಜ್ಞಾನ **ವಿಶೇಷ**ವನ್ನು ತಾನೇ ಮೇಲ್ಪಿದ್ದು ಬಯಸಿ, ರವಾನಿಸಿದ್ದಾನೆ. ಇದನ್ನೇ ಅಹೇತುಕೀ ಕೃಪೆ ಎನ್ನುವುದು.

ಮೆಲೆ ಹೇಳಿದಂತಹ ಶ್ರೀಮೂರ್ತಿ ವಿಶೇಷಗಳನ್ನು ಕಾಣುವ, ಕಂಡ ಭಾಗ್ಯ ಈ ತಿರುಮೊಳಿ ನಾಲ್ಕನೆಯ ಶತಕದ ಮೂರನೆಯ ದಶಕದಲ್ಲಿ ನಮಗೆ ಸಿಗುತ್ತಿದೆ. ಆಳ್ವಾರ್‌ಗಳ ಅನುಭವ ಈ ಅರ್ಚಾಮೂರ್ತಿಗಳಲ್ಲಿ ಸಂಪೂರ್ಣ ಸಮಗ್ರವೆಂಬುದು ಇಲ್ಲೆಲ್ಲಾ ಗಮನಕ್ಕೆ ವಿಶೇಷವಾಗಿ ಬರುವಂಥದೇ. **ಪ್ರಕೃತ** ಬಾಣಾsಸುರನ ೨ ಕಡಿಮೆ ಸಹಸ್ರ ಭುಜ ಭಂಜಕ ಆ ಶ್ರೀಕೃಷ್ಣನೇ ಈಗಲೂ ಮುಂದಕ್ಕೂ, ಭಗವದ್ ಭಾಗವತರಿಗೆ ಕೇಡಿಗರು ಹುಟ್ಟಿಕೊಂಡರೆ, ಅವರ ಕೇಡಿನ ಪ್ರಕೃತಿಯನ್ನು ಮಾತ್ರ ತರಿದು ಹಾಕುವವನು. ಯಾವೊಂದು ಆತ್ಮ ವ್ಯಕ್ತಿಯನ್ನೂ ಸರ್ವಶಕ್ತನೂ ಕೊಲ್ಲಲಾರ. ವೈದ್ಯರ ಶಸ್ತ್ರಚಿಕಿತ್ಸೆಯಂತೆ ಅದಕ್ಕೂ ಹೆಚ್ಚಿನ ಕರುಣೆಯಿಂದ ಪರಮಾತ್ಮ ದೌಷ್ಟ್ಯವನ್ನು ಮಾತ್ರ ಸಂಹರಿಸುತ್ತಾನೆ. "ಮಾತ್ತಾರೈ ಮಾತ್ತು ಅಳಿ ಕ್ಕವಲ್ಲಾನ್" — ತಿ.ಪಾ. Hate the sin. Not the Sinner - ಬೈಬಲ್.

ಇಂತಹ ಸ್ವಾಮಿ ಶ್ರೀವೇಂಕಟಾದ್ರಿಯಲ್ಲಿ ಸ್ಫುರದ್‌ವಿದ್ಯುತ್ ಶಿಖಾಮಣಿಯಾಗಿ ನಿಂತಿದ್ದಾನೆ. ಆಯಾಯಾ ಸ್ಥಾನ, ನಾಮಾದಿಗಳಿಂದ ಬೇರೆ ಬೇರೆಯಾಗಿ ಸ್ಥೂಲವಾಗಿ ಕಂಡರೂ ದೇವನೊಬ್ಬನೇ! ಈ ಎಚ್ಚರಿಕೆಯನ್ನು ಕೇವಲ ಭಕ್ತಿಮುಗ್ಧರಿಗೂ, ಜ್ಞಾನೈಕ ವಿದಗ್ಧರಿಗೂ ಅತ್ಯಗತ್ಯವಾಗಿ ನಮ್ರತೆಯಿಂದ ನೀಡುತ್ತಲೇ ಇರಬೇಕು. ಇಲ್ಲದಿದ್ದರೆ ಮೂರ್ತಿಪೂಜೆಯ ಅತಿರೇಕ ಹಾಗೂ ಅನಾದರಗಳಿಂದ ಅನಾಹುತವಾದೀತು. ಈ ಸರ್ವಾsವಿರೋಧಿ ಸಮನ್ವಯವೇ ಆಳ್ವಾರುಗಳ ಜೀವನ ರಹಸ್ಯ.

ಅನ್ನಿಯ = ಕೃಷ್ಣನ ಮೊಮ್ಮಗ ಅನಿರುದ್ಧ. ಉಷೆ ಎಂಬುವಳು ಬಾಣಾಸುರನ ಮಗಳು. ಚಿತ್ರಲೇಖೆಯೆಂಬ ಆಕಾಶಗಮನ ಶಕ್ತಿಯುಳ್ಳ ತನ್ನ ಸಖಿಯ ಮೂಲಕ ಬಾಣನ ಮಗಳೇ ಅನಿರುದ್ಧನ ಸೌಂದರ್ಯಕ್ಕೆ ಮೆಚ್ಚಿ, ಅವನನ್ನು ಹಿರಿಯರಿಗೆ ತಿಳಿಯದಂತೆ ತರಿಸಿ ಇರಿಸಿಕೊಂಡೇ ಬಿಡುತ್ತಾಳೆ. ಕೊಂಚ ದಿನವಾದ ಮೇಲೆ ಬಾಣನಿಗೆ ಸಮಾಚಾರ ತಿಳಿದು, ತನ್ನ ಮಗಳಿಗೆ ಬುದ್ಧಿ ಹೇಳದೆ ಅನಿರುದ್ಧನ ತಾತನಾದ ಕೃಷ್ಣನ ಜತೆಗೆ ಯುದ್ಧಕ್ಕೆ ನಿಲ್ಲುತ್ತಾನೆ. ಆದರೆ ಕೃಷ್ಣ ಸಂಬಂಧಿಯನ್ನು ಕೊಲ್ಲಬಾರದೆಂದು, ೧೦೦೦ ತೋಳುಗಳಿಂದ ಕೊಬ್ಬಿ ಗರ್ವಿತನಾಗಿದ್ದ ಬಾಣನ, ೨ ತೋಳುಗಳನ್ನು ಮಾತ್ರ ಉಳಿಸಿ, ವಾಣನ್ ಆಯಿರಂ ತೋಳುಮ್ ತುಣಿಯ ಅನ್ನು = ಛೇದಿಸಲು ಆ ದ್ವಾಪರಾಂತ್ಯದಲ್ಲಿ ಅಳಿ = ಚಕ್ರವನ್ನು ಶ್ರೀ ಹಸ್ತದಲ್ಲಿ ಧರಿಸಿದ್ದವನೇ.

ಮಿನ್ ತಿಹಳ್ ಕುಡಿಮಿ = ಮಿಂಚಿನಿಂದ ಯಾವಾಗಲೂ ಕಂಗೊಳಿಸುತ್ತಿರುವ ಮಹಾ ಮಹಾ ಶಿಖರಗಳುಳ್ಳ, ವೇಙ್ಗಡಮಲೈ ಮೇಲ್ = ಪಾಪಾsಪಹಾರಿಯಾದ ತಿರುಪತಿ ಬೆಟ್ಟದ ಮೇಲೆ, ಮೇವಿಯ = ಹಿಂದೂ, ಇಂದೂ ಮುಂದೂ ನಿತ್ಯ ಸಾನಿಧ್ಯ ನೀಡುತ್ತಲೇ ಇರುವ, ಸ್ವರೂಪವನ್ನೊಳಗೊಂಡೇ ರೂಪಧಾರಿಯಾಗಿ ಇರುತ್ತಲೇ ಇರುವ, ವಿಳಕ್ಕಿ, ವೇದ ವಿಳಕ್ಕಿ, ನಲ್ ವೇದ ವಿಳಕ್ಕೆ = ಸಾಮಾನ್ಯ ದೀಪದಂತಿದ್ದೂ, ವೇದ ಪ್ರತಿಪಾದ್ಯನಾಗಿದ್ದೂ, ಸಂಸ್ಕೃತ ದ್ರಾವಿಡೋಭಯೋಪನಿಷತ್ ಪ್ರಸಿದ್ಧನಾದ ತಿಮ್ಮಪ್ಪನನ್ನು, ಈಗ ಈ ಆಳ್ವಾರ್ ಎಲ್ಲಿ ನೋಡುತ್ತಿದ್ದಾರೆ?

ತೆನ್ ತಿಶೈ = ಇಂದಿನ ಇಡೀ ದೃಶ್ಯ ಭೂಗೋಳವೆಂಬ ಭಾರತ ವರ್ಷಕ್ಕೆ ಒಳಗಡಗಿರುವ ಈ ಭರತಖಂಡದ ದಕ್ಷಿಣ ದಿಕ್ಕಿಗೇ, ತಿಲದಮ್ ಅನ್ನೈಯ = ತಿಲಕಪ್ರಾಯವಾಗಿರುವ "ತಿರುನಾಂಗೂರ್" ಎಂಬಲ್ಲಿ, ಮನ್ನು = ನಿತ್ಯವಾಸ ಗೈಯ್ಯುತ್ತಿರುವ, ಭಾಗವತೋತ್ತಮರಿಂದ, ಅದು ಪೊಲಿಯ = ಕಂಗೊಳಿಸುವಂತೆ, ಮಹಿಳ್ಂದು ಆನಂದಪಡುತ್ತಾ ನಿನ್ರಾನೈ = ನಿಂತಿರುವವನನ್ನು, ನಾಙ್ಗೈ = ಆ ತಿರುನಾಂಗೂರಿನ, ಶೆಮ್ ಪೊನ್ ಶೆಯ್ ಕೋಯಿಲಿನುಳ್ಳೇ = ಹಿರಣ್ಮಯ ದಿವ್ಯಾಸ್ಥಾನದಲ್ಲಿ, ವಣಙ್ಗಿ = ಭಕ್ತಿನಮ್ರನಾಗಿ, ವಾಳ್ಂದು = ಸಮಗ್ರ ಇಹಪರ ಬಾಳುವೆಯನ್ನು ನಡೆಸಿ, ಒಳಿನ್ದೇನೇ = ಎಲ್ಲಾ ಬಗೆಯ ಅಜ್ಞಾನ ಅನ್ಯಥಾಜ್ಞಾನ ವಿಪರೀತ ಜ್ಞಾನ ಸಂಶಯಾದಿಗಳಿಲ್ಲದಂತೆ ಜೀವನ ಉಜ್ಜೀವನ ಉಭಯವೂ ನಿರ್ ವಿಘ್ನವಾಗಿ ಸಾಗುತ್ತಿದೆಯಲ್ಲಾ! ಏನು ಕೊರೆ? ನೀವು ನಾಂಗೂರಿಗೂ ಬನ್ನಿ, ಇಲ್ಲಿ ತಿಮ್ಮಪ್ಪನನ್ನೂ ದರ್ಶನ ಮಾಡಿ.

ತಮಿಳ್ ತಿರಳ್ ೪-೭-೫

ವೇಡಾರ್ ತಿರುವೇಜ್ಗಡಮ್ ಮೇಯ ವಿಳಕ್ಕೇ ನಾಡಾರ್ ಪುಹಳ್ ವೇದಿಯರ್ ಮನ್ನಿಯ ನಾಜ್ಗೂರ್
ಶೇಡಾರ್ ಪೊಳಿಲ್ ಶೂಳ್ ತಿರುವೆಳ್ಳಕ್ಕುಳತ್ತಾಯ್ ಪಾಡಾವರುವೇನ್ ಎನ್ನೈಯಾಯಿನ ಪಾತ್ತೇ

ಕನ್ನಡ ನೆರಳ್

ಬೇಡರೆ ತುಂಬಿಹ ಸಿರಿವೇಂಕಟ ಬೀಡಂ ಗೊಂಡಿಹ ಬೆಳಕೇ!
ನಾಡಿಗರೆಲ್ಲೂ ಎಡೆ ಸಾಲದ ತುಂಪೊಗಳ್ ವೈದಿಕರ್ ಕಿಕ್ಕಿರಿ ತಿರುನಾಂಗೂರ್
ಕೂಡುತ ನಿಬಿಡಂ ತಳಿರೇ ತುಂಬಿಹ ಬನಸೂಳ್ ತಿರುವೆಳ್ಳಕ್ಕೊಳ ದೋಳಿರುವವನೇ!
ಹಾಡುತ ನಾನಿದೋ ಬರುತಿಹೆ ಎನ್ ದುರಿತಗಳೆಂಬವು ಚೆದುರುವೊಲ್ ಗೈಯ್ಯಯ್ಯೋ!

ಇದಕ್ಕೆ ಹಿಂದಿನ ೬ನೆಯ ದಶಕದಲ್ಲಿ "ಕಾವಳಂಪಾಡಿ" ದಿವ್ಯದೇಶದ ಮಂಗಳಾಂಗನಲ್ಲಿ ಶರಣು ಮಾಡಿದರು ತಿರುಮಜ್ಶೈಯಾಳ್ವಾರ್. ಹಾರಾಟ ತೂರಾಟದ ಈ ಸಂಸಾರ ಸಾಂರಾಜ್ಯ ಕಂಡು ತಾವೂ ಅದರ ಸದಸ್ಯರಾಗಿರುವುದನ್ನು ಈಗ "ತಿರುನಾಂಗೂರ್" ದಿವ್ಯದೇಶದ ಸ್ವಾಮಿಯಲ್ಲಿ ಈ ಪ್ರಕೃತಿ ಸಂಬಂಧ ಕಂಡ ಭಯದಿಂದ ಗೋಳಾಡಿ, ಇದರಿಂದ ಬಿಡುಗಡೆ ಮಾಡೆಂದು **ಬೇಡುತ್ತಾರೆ**. ಸೀತೆ ಅಶೋಕವನದಲ್ಲಿ ರಾಮಭಕ್ತಿಗೆ ಅನುಕೂಲರಾದ ಪ್ರಿಯಜನರನ್ನು ಕಾಣದೆ, ಬೇಟೆನಾಯಿಗಳಿಂದಲೇ ಸುತ್ತುವರಿಯಲ್ಪಟ್ಟ **ಹೆಣ್ಣು** ಜಿಂಕೆಯಂತೆ ಇದ್ದಳೆಂದು ಶ್ರೀವಾಲ್ಮೀಕಿ ವರ್ಣಿಸಿದ್ದಾರೆ. ಅದೇ ಸ್ಥಿತಿ ಈ ಪರಕಾಲರಿಗೆ!

ಪ್ರಿಯಂ ಜನಮಪಶ್ಯನ್ತೀ ರಾಕ್ಷಸೀ ಗಣಮ್| ಸ್ವಗಣೇನ ಮೃಗೀಂ ಹೀನಾಂ ಶ್ವಗಣಾಭಿವೃತಾಮಿವ||

ದೇವರು "ನಿಮಗೀಗ ಏನಾಗಬೇಕು?" ಎಂದು ಕೇಳಿದ್ದಕ್ಕೆ ಉತ್ತರವೇ ಈ ೭ನೆಯ ದಶಕ. ತಿರುಮಲೆಯ ಗಿರಿಜನರು **ಬೇಡರು** ತಿಮ್ಮಪ್ಪನ ಮೇಲಿನ ಭಕ್ತಿಯಿಂದ ಗಿರಿಬಿಟ್ಟು ಎಂದೂ ಕೆಳಗಿಳಿದವರೇ ಅಲ್ಲ! ಆದಿಕಾಲದಿಂದ ವಂಶಪಾರಂಪರ್ಯವಾಗಿ ಬೆಟ್ಟದ ಮಂಗಳಾಶಾಸನ ಮಾಡುತ್ತಾ ಬೆಟ್ಟದಲ್ಲೇ ವೃದ್ಧಿ ಹೊಂದುತ್ತಿರುವವರು. ಅಂತಹ, ವೇಡು = ಸ್ಥಳೀಯ ಶಾಬರ ಸಮಾಜದಿಂದ, ಆರ್ = ನಿಬಿಡವಾಗಿ ತುಂಬಿಯೇ ಇರುವವರಿಂದಲೇ ತಿರು = ಮಂಗಳ ಸಂಪನ್ನವಾದ, ವೇಜ್ಕಟಂ = ವೇಂಕಟಗಿರಿಯಲ್ಲಿ, ಮೇಯ ವಿಳಕ್ಕೇ = ನಿತ್ಯವಾಗಿದ್ದು ತನ್ನ ಸ್ವರೂಪರೂಪ ಗುಣ ವಿಭೂತಿ ಲೀಲೆಗಳನ್ನೆಲ್ಲಾ ವ್ಯಕ್ತವಾಗಿ ಪ್ರಕಟಪಡಿಸುವ, ಅಖಂಡನಂದಾದೀಪಕ್ಕೂ ಪ್ರದೀಪವಾಗಿರುವವನೇ! ಓ ಜ್ಯೋತಿಷಾಂ ಜ್ಯೋತಿಯೇ! ನನಗೇಕೋ ಈ ಮರುಹುಟ್ಟು, ಮರು ಸಾವಿನ ಯಥಾಸ್ಥಿತ ಜೀವನ ಚಕ್ರದ ಕಾರ್‌ಗತ್ತಲೆಯನ್ನು ಹೋಗಲಾಡಿಸದೆ ಇರುವಿ?

ತಿರುನಾಂಗೂರಿಗೇ ಸೇರಿದ "ತಿರುವೆಳ್ಳಕ್ಕುಳಂ" ದಿವ್ಯದೇಶಕ್ಕೆ ಯಾವ ಉದ್ದೇಶ್ಯದಿಂದ ಬಂದೆಯಪ್ಪಾ! ಇಲ್ಲಿನ **ಜಾನಪದ ಪ್ರಜೆಗಳೂ** ನಾಗರಿಕರೂ ಅನ್ಯೋನ್ಯವಾಗಿರುವ ಈ ಸಾಮಾಜಿಕ ಕಲ್ಯಾಣಗುಣಾನುಭವಕ್ಕಾಗಿ ಅಲ್ಲವೇ? ಈ ಸಾಹಸಿ ಪರಕಾಲರು ತಮ್ಮ ನಾಲ್ಕೂ ಶಿಷ್ಯರೊಡನೆ "ಆಡಲ್ ಮಾ" ಅಂದರೆ ಎಂತಹ ಕ್ಷಿಷ್ಟ ಹಾದಿಯನ್ನೂ ಆಟದಂತೆ ದಾಟಿಸುವ ಜಾಣಕುದರೆಯನ್ನೇರಿ ಆಳ್ವಾರ್ ಇಲ್ಲಿಗೆ ಸೇರಿಸಿದ್ದಾರೆ. ಆಹಾ! ನಾಡಾರ್ ಪುಹಳ್ = ಹಳ್ಳಿಗಾಡಿನವರೆಲ್ಲಾ ಒಟ್ಟಾಗಿ ಸೇರಿ ಏನೊಂದು ಭಕ್ತಿ ವಿನಯಗಳಿಂದ ಕೂಡಿದ್ದಾರೆ ಉತ್ಸವಗಳಿಗೇನು ಕೊರತೆ? ವೇದಿಯರ್ ಪರಮವೈದಿಕರಾದವರ ಸರಳ ರಂಜಕ ಹಾಗೂ ಬೋಧಕವಾದ ಕಾಲಕ್ಷೇಪಗೋಷ್ಠಿ. ಜಾನಪದ ದೇವರ ಹಾಡುಗಳು. ಎತ್ತಿದ ಕಂಠ, ವೇದಪಾರಾಯಣ! ದಿವ್ಯಪ್ರಬಂಧ ಪಾರಾಯಣ. ಕೊಂಬು ಕಹಳೆ. ನಾಗಸ್ವರ! ಬೀದಿಗಳಲ್ಲಿ ಕಲಾವತಿಯರ ಬಣ್ಣಬಣ್ಣದ ರಂಗವಲ್ಲಿ! ಮನ್ನಿಯ = ನಿತ್ಯವಾಸ ರಸಿಕರಾಗಿರಲು ತಕ್ಕ "ನಾಜ್ಗೂರ್". ಶೇಡು ಆರ್ ಪೊಳಿಲ್ ಶೂಳ್ = ಘನ ಸಾಂದ್ರ, ಪಲ್ಲವೋಲ್ಲಸಿತ ಹೂಗಿಡ. ಫಲ ಭರಿತ ವೃಕ್ಷಗಳ ತೋಪು! ತೋಟಗಳೇ ಸುತ್ತಲೂ! ಇಲ್ಲಿನ ಪರಮ ವೈದಿಕರಂತೆಯೇ ಪರಾರ್ಥ ಪರಮಾರ್ಥವನ್ನೇ ಭಾವಿಸಿ ತಮ್ಮ ನಲ್ ಸ್ವಾರ್ಥವನ್ನೂ ತೀರಿಸಿಕೊಳ್ಳುವ ಸರ್ವಾSವಿರೋಧಿ ಪ್ರಶಾಂತ ಜೀವನರು!

ಯಾತ್ರಾಸ್ಥಳಗಳಲ್ಲಿ ವೈದಿಕರಿಗೆ ತಾವೇ ಸ್ವತಃ ಅಗಸ್ತ್ಯರಂತೆ ಅಗೆದು "ಋಷಿಖನೆತಿ" ಪದ್ಧತಿಯಿಂದ ದೇಹಶ್ರಮಗೈಯ್ಯಲು ತೋಟಗಳು. ಈ ಆಳ್ವಾರ್ ಶರಣರ ಗ್ರಾಮ ಯೋಜನೆ. ಆಚಾರ್ಯ ರಾಮಾನುಜರೂ "ಸ್ವಕ್ಷೇತ್ರತ್ತಿಲ್ ಸ್ವಶರೀರ ಶ್ರಮತ್ತಾಲೇ" ಎಂದೇ ಪ್ರಪನ್ನರ ದೇಹ ಯಾತ್ರೆಯೇ ಉತ್ತಮವೆನ್ನುತ್ತಾರೆ. ತಿರುವೆಳ್ಳಕ್ಕುಳತ್ತಾಯ್ = ಶ್ರೀ ಶ್ವೇತ ಸರಸ್ತೀರ ವಾಸಿನ್! ಅನ್ಯೋನ್ಯ ಸಹೃದಯರಾಗಿ, ನಾಡಿಗರೂ ನಾಗರರೂ ಪಾವನ ಪರಮ ವೈದಿಕರಿದ್ದೂ, ಇಂತಹ ತಂಪಾದ ಘನ ತೋಟ ತುಡಿಕೆಗಳಿದ್ದೂ ನಾನೇಕೆ ಹೀಗೆ ಅಂಧಂತಮಸ್ಸಿನಲ್ಲಿರಬೇಕಯ್ಯಾ? ಪಾಡಾ ವರುವೇನ್ = ಒಂದಾದ ಮೇಲೊಂದು ದಿವ್ಯದೇಶದಿಂದ ದಿವ್ಯ ದೇಶಕ್ಕೆ, ನಿನ್ನ ಕಲ್ಯಾಣ ಗುಣ ಸಂಕೀರ್ತನ ಪೂರ್ವಕ, ಈ ದ್ರಾವಿಡ

ದಿವ್ಯ ಜಾನಪದ ಪ್ರಬನ್ಧಗಳನ್ನು ಹಾಡುತ್ತಾ ಬಂದಿರುವವನನ್ನು ಬಿಡದೇ ಅಂಟಿಕೊಂಡಿರುವ, ವಿನೈ ಅಯಿನ = ಸಾಂಸಾರಿಕಪಾಪವೆಂಬುದನ್ನು, ಪಾತ್ತೇ = ಅವುಗಳ ದುಷ್ಟ ಕರಾಳಾಕಾರವೇ ತಿಳಿಯದಂತೆ ಚದುರಿಸಿಬಿಡೋ ಚತುರಾ!

ಅಥವಾ "ದೇವಾ! ಒಂದಲ್ಲ ಒಂದು ಬೀಡು ಬಿಟ್ಟಿರುವ ಧಾಮಗಳಲ್ಲಾದರೂ ಜನ ಸಿಗುವರೇ! ಎಂದು, ಹಾಗೆಯೇ ನನಗೂ ಎದುರಾಗಿಯೇ ಧಾವಿಸಿ ಬರುವವ ನೀನು! ಪರಮ ಕರುಣಾಳು. ಪಾಡಾ ವರುವೇನ್ = ಹಿಂದಿನಂತೆ ನುಣುಚಿಕೊಳ್ಳದೆ ಖಂಡಿತ ಈಗಿದೋ ಬಂದಿದ್ದೇನೆ. ಹಿಂದೆಲ್ಲಾ ನಿನ್ನ ಆ ದಯೆಯನ್ನು ಅತುಕೊಳ್ಳದೆ ಹೋದೆನಪ್ಪಾ! ನನ್ನದೇ ತಪ್ಪು! ಈಗ ನೀನು ನನ್ನ ಪ್ರಕೃತಿ ಪರಿವರ್ತನೆಗೆ ಏಕೆ ವಿಳಂಬಿಸುವೆ?

ತಮಿಳ್ ತಿರಳ್ ೫-೩-೪

ವಾಮ್ಬರಿಯುಹ ಮನ್ನರ್ ದಮ್ ಉಯಿರ್ ಶಹ ಐವರ್‌ಹಳ್ಕರಶಳಿತ್ತ
ಕಾಮ್ಬಿನಾರ್ ತಿರುವೇಙ್ಗಡ ಪ್ಪೊರುಪ್ಪ! ನಿನ್ ಕಾದಲ್ಯೆ ಅರುಳ್ ಎನಕ್ಕು
ಮಾಮ್ಬೊಳಿಲ್ ತಳಿರ್ ಕೋದಿಯ ಮಡಕ್ಕುಯಿಲ್ ವಾಯ್ ಅದು ತುವರ್‌ಪ್ಪ್ಯದ
ತೀಮ್ಬಲಙ್ಗನಿ ತೇನದು ನುಹರ್ ತಿರುವೆಳ್ಳರೈ ನಿನ್ನಾನೇ

ಕನ್ನಡ ನೆರಳ್

ಧಾವಿಪ ಹಯಗಳು ಮುಗ್ಗರಿಸಲ್, ಅರಸರ ಉಸಿರ್ ಮಾಣಲ್, ಐವರಿಗರಸೊತ್ತಿಗೆ ಕರುಣಿಸಿದಾ
ವೇವೆನು ಬಿದಿರ್ ಮೆಳೆ ತುಂಬಿದ ಸಿರಿವೇಂಕಟನಿಲಯಾ! ನಿನ್‌ಬಗೆ ಪರಮಾಭಕ್ತಿಯನ್ ಅರುಳೆನಗೆ
ಮಾವಿನ ತೋಪೊಳುತಳಿರ್ ಕಡಿದಿಹ ಪೆಣ್‌ಕೋಗಿಲೆಬಾಯ್ ಒಗಚಾಗಲು ಬೇರ್‌ಬಗೆರುಚಿಯನು ಸವಿಯಲ್ಕೆ
ಸೀಹಲಸಿನ ಹಣ್ಣಿನ ಬಳಿ ಸಾರ್ದು ಜೇನದನುಂಗುವ ತಿರುವೆಳ್ಳರೆಯೊಳು ನಿಂದವನೇ!

ದೇವರೇ, ಏನೊಂದೂ ಕಾರಣ ಹೇಳಲು ಬಾರದಂತೆ ತಾನಾಗಿಯೇ ಈ ತಿರಮಂಗೈಗಳ ಹೃದಯ ಹೊಕ್ಕು, ಅದನ್ನೇ ತನ್ನ ಯಾತ್ರಾಸ್ಥಳವಾಗಿಸಿದ ಉಪಕಾರ ನೆನೆದು ಹಿಗ್ಗಿದ್ದುಂಟು, ಹಿಂದಿನ ದಶಕದಲ್ಲಿ. ಅಡಿಯೇನ್ ಉಳ್ಳಮ್ ಉರುಹ ಪ್ಪುಹುನ್ನ ಒರುವರ್ ಊರ್ ಪೋಲ್ (೫-೨-೯) ಕೇವಲ ಹೃದಯ ಗುಹಾ ಪ್ರವೇಶ ಮಾಡಿದರೆ, ಈ ಅರ್ಚಾಕೈಂಕರ್ಯವೊಂದನ್ನೇ ಉಸಿರಾಗುಳ್ಳ ಈ ಆಳ್ವಾರರಿಗೆ ಅದೇನೂ ಒಂದು ಪುರುಷಾರ್ಥವೆನಿಸಲಿಲ್ಲ! ಉಳಿದ ಋಷಿಗಳಿಗೂ ಈ ಜಾನಪದ ದ್ರಾವಿಡ ಪರಮರ್ಷಿಗಳಿಗೂ ಇರುವ ವೈಲಕ್ಷಣ್ಯ ಇಲ್ಲಿ ಅವರ ಮಾತಿನಿಂದಲೇ ವ್ಯಕ್ತವಾಗುವುದು. ಸ್ವಸ್ವರೂಪ, ಬರೀ ಜ್ಞಾನ ಆನಂದವಷ್ಟೇ ಎನ್ನುವವರಲ್ಲ ಇವರು. "ಅಡಿಯೇನ್ ಉಳ್ಳಾನ್" ಎಂದು ಜೀವಾನ್ತರ್ ಯಾಮಿತ್ವವನ್ನೂ, ಕಾಯಕ ಸೇವಾ ಕೈಂಕರ್ಯ ಪರ್ಯನ್ತ ಸ್ವಾಮಿ ತೆಗೆದುಕೊಳ್ಳದೇ ಇದ್ದರೆ ಅಂತರಂಗ ಜೀವಾತ್ಮಲಕ್ಷಣವಾದ ಶೇಷತ್ವ! ಅದರಲ್ಲೂ ಪರಾರ್ಥೈಕ ಮುಖೋಲ್ಲಾಸಾತಿಶಯಕ್ಕೇ ಥಟ್ಟನೆ ವಿನಿಯೋಗಿಸಿಕೊಳ್ಳುವ ಕ್ರಿಯಾವಂತಿಕೆಗೆ ಅಪ್ಪಣೆ ಸಿಗದಿದ್ದರೆ

ಅರುಳ್‌ಪ್ಪಾಡು ಕಲಿಯನ್

ಎಂದು ಸ್ವಾಮಿ ಬಾಯ್ ತೆರೆಯದಿದ್ದರೆ, ಇವರ ಸ್ವರೂಪನಾಶವೇ ಆದಂತೆ!

ವಾಮ್ = ಭಾರತ ಯುದ್ಧ ಸಮಯದಲ್ಲಿ ಕೌರವರ ಅಶ್ವಗಳು ಮೇಲ್ ಹಾಯುತ್ತಿದ್ದವು. ಪರಿಉಹ = ಅಂತಹ ಆ ಕುದರೆಗಳೆಲ್ಲಾ ಸಂಹಾರವಾಗುವಂತೆಯೂ, ಮನ್ನರ್ ದಮ್ = ಮುಖ್ಯವಾಗಿ ಕೌರವರ ಸಹಾಯಾರ್ಥ ಬಂದ ವಿಶ್ವದ ನಾನಾ ಕಡೆಯ ರಾಜರುಗಳ ಹಾಗೂ ಧಾರ್ತ ರಾಷ್ಟ್ರರ ಉಯಿರ್ = ಪ್ರಾಣಗಳೂ ಶಹ = ವಿಯೋಗ ಹೊಂದುವಂತೆಯೂ ಐವರ್ ಹಳಕ್ಕು = ೧೦೧ ಬಹು ಸಂಖ್ಯಾತರನ್ನು ಗಮನಿಸದೆ, ತನ್ನ ಪ್ರಾಣದಂತಿರುವ ಇದ್ದದ್ದರಲ್ಲಿ ದೈವೀಗುಣಗಳಿಗೆ ಹತ್ತಿರಬರುವ ಪಂಚಪಾಂಡವರು, ಅವರಿಗೇ ಅರಶು ಸಾಮ್ರಾಜ್ಯದ ಅರಸೊತ್ತಿಗೆಯನ್ನು ಅಳಿತ್ತ ಕರುಣಿಸಿದವನೇ

ಕಾಮ್ಬಿನಾರ್ = ಬಿದಿರು ಮೆಳೆಗಳಿಂದ ತುಂಬಿರುವ, ತಿರುವೇಙ್ಗಡ ಪ್ಪೊರುಪ್ಪ = ಶ್ರೀ ವೇಂಕಟ ಪರ್ವತಾವಾಸಾ! ನಿನ್ = ನಿತ್ಯ ಕೈಂಕರ್ಯಕ್ಕೆ ಪೂರ್ವಭಾವಿಯಾದ ಕಾದಲ್ಯೆ = ಪರಮಭಕ್ತಿಯನ್ನು ಎನಕ್ಕು ಅರುಳ್ = ನನಗೆ ಕರುಣಿಸು. ಆ ಕೃಷ್ಣನೇನು ಈ ತಿಮ್ಮಪ್ಪನೇನು, ಇವರಿಗೆ ಈಗ ಈ "ತಿರುವೆಳ್ಳರೈ" ಎಂಬಲ್ಲೇ ನಿಂತು ಸೇವೆ ನೀಡುತ್ತಿರುವನು. ದೇವನೊಬ್ಬ ರೂಪು ಹಲವು. ಆ ಕ್ಷೇತ್ರ ಮಹಿಮೆಯೊಂದನ್ನು, ತಮಗೆ ಪರಮಭಕ್ತಿದಾನಕ್ಕೆ ಅನ್ವಯಿಸಿ ಹೇಳುತ್ತಾರೆ. ಅಲ್ಲಿನ ಹೆಣ್ಣು ಕೋಗಿಲೆ ಮಾವಿನ ಚಿಗುರನ್ನು ಜಗಿದು ತಿಂದಿದೆ. ಅದು ಒಗಚಷ್ಟೆ, ಆಗ ಗಂಡು ಕೋಗಿಲೆ ತನ್ನ ಪ್ರೇಯಸಿಗೆ ಹಲಸಿನ ಹಣ್ಣಿನಲ್ಲಿ ಸುರಿಯುವ ಜೇನನ್ನು ನೀಡುತ್ತಿದೆ. ಈ ಸ್ವಭಾವ ವರ್ಣನೆಯ ಅಂತರಾರ್ಥ ಪ್ರಕೃತಾರ್ಥಕ್ಕೆ ಬಲು ಸಮಂಜಸವಾಗಿ ಹೊಂದಿ ಬರುತ್ತದೆ.

ಶರಣರು ಬರಿ ಧ್ಯಾನ ಪರಭಕ್ತಿ ಪರಜ್ಞಾನದಿಂದಲೂ ತೃಪ್ತರಾಗರು. ಪುಂಸ್ಕೋಕಿಲ ತನ್ನ ಪ್ರೇಯಸಿಗೆ ಸಿಹಿಯೂಡಿಸಿ ತಣಿಸಿರುವಾಗ ಕೇವಲ ಜ್ಞಾನ ಕರ್ಮಾದಿಯೋಗಗಳ ಸೀಮಿತ ಒಗಟು ಸೇರಿರುವ ಅಲ್ಪಾಸ್ಥಿರ ಸಾಂತಕ್ಷುದ್ರ ಸ್ವರ್ಗಾದಿ ಫಲ ನೀಡುವ ಸಂದರ್ಭ ನನಗೆ ಬೇಡ. ನೀನು ರಸಘನ! ಆ ಮಧುರ ಅನಂತಫಲ ರೂಪಿ ಕೈಂಕರ್ಯಕ್ಕೆ ಅವನ್ನೆಲ್ಲಾ ಹಿನ್ನೆಲೆಯಾಗಿಸಪ್ಪೆ! ಪುತ್ರ, ಪಶು, ಅನ್ನಾದಿಗಳೂ, ಕೈಂಕರ್ಯೋಪಯಾಗಿ ಹೊಂದಿಬಂದರೆ, ಇದ್ದುಕೊಳ್ಳಲಿ ಪರಮಾನಂದವನ್ನು ಕಡೆಗಣಿಸಿ ಅಷ್ಪಷ್ಪರಲ್ಲೇ ನಿಲ್ಲುವುದು ನನಗೆ ರುಚಿಸದು. ನನಗೆ ನಿನ್ನ ಅತಿ ಮಧುರ ಸೇವಾ ಭಾಗ್ಯವೇ ಬೇಕು! ರಾಮಾನುಜರೂ **"ಶ್ರೀ-ನಿವಾಸೇ ಪರಸ್ಮಿನ್ ಬ್ರಹ್ಮಣಿ ಮಮ ಭಕ್ತಿರೂಪಾ ಶೇಮುಷೀ ಭವತು"** ಎಂದು ಇದನ್ನೇ ಅಪಿಸಿದ್ದಾರೆ.

ತಮಿಳ್ ತಿರಳ್ ೫-೫-೧

ವೆರುವಾದಾಳ್ ವಾಯ್ ವೆರುವಿ ವೇಜ್ಗಡಮೇ ವೇಜ್ಗಡಮೇ ಎನ್ಗಿನ್ನಾಳಾಲ್!
ಮರುವಾಳಾಲ್ ಎನ್ ಕುಡಜ್ಗಾಲ್ ವಾಳ್ ನೆಡುಜ್ಗಣ್ ತುಯಿಲ್ ಮರನ್ದಾಳ್, ವಣ್ದಾರ್ ಕೊಣ್ಡಲ್
ಉರುವಾಳನ್ ವಾನವರ್ದಮ್ ಉಯಿರಾಳನ್ ಒಲಿತಿರೈ ನೀರ್ ಪೌವ್ವಂ ಕೊಣ್ಡ
ತಿರುವಾಳನ್ ಎನ್ ಮಹಳೈ ಚ್ಚೆದನಹಳ್ ಎಜ್ಗನಮ್ ನಾನ್ ಶಿನ್ದಿಕ್ಕೇನೇ

ಕನ್ನಡ ನೆರಳ್

ಬೆದರಿಹಳಲ್ಲಾ ಬಾಯ್ ಕನವರಿಸಿ ಓ ವೇಂಕಟವೇ! ವೇಂಕಟವೇ! ಎನುತಿಹಳ್ ಐಯ್ಯೋ!
ಮಡಿಮೇಲ್ ಎನ್ನಯ, ಸಹಿಸಳೈ ಅಲಲಾ! ಪೊಳೆ ಬಿರಿಗಣ್ಣೆ! ನಿದ್ದೆಯ ಮರೆತಳು! ದುಂಬಿಗಳ್ ತುಂಬಿಹ
ಮೋಡದ ರೂಹಿ ಬಾನವರ್ಗವರ್ಗುಸಿರಾಳನ್ ಉಲಿಯುವ ತೆರೆಹಾಲ್ ಗಡಲೊಳ್ ಪವಡನು ಕೊಂಡಾSS
ಬೀಡೊಳು ಸಿರಿಯಾಳುವವನ್ ಎನ್ನಿದೋ ಕಂದಳಂ ಗೈದಿಹವಂ ಎಂತದೋ ನಾ ಚಿಂತಿಪೆನ್ಯೆ!

ಇದಕ್ಕೆ ಪೂರ್ವಭಾವಿಯಾದ ಉನ್ವಿಮೇಲ್ ದಶಕದಲ್ಲಿ ಓ ಅಳ್ವಾರರೇ! ನಿಮ್ಮಂತಹವರ ಉಪಕಾರಕ್ಕಾಗಿಯೇ "ಕೋಯಿಲ್" ಎಂದೇ ಪ್ರಶಸ್ತವಾದ ಶ್ರೀರಂಗದಲ್ಲಿ ನಾನು ಪವಡಿಸಿರುವುದು, ಮೂಲಮೂರ್ತಿಯಾಗಿ. ಅಳಹಿಯಮಣವಾಳನ್ "ಸುಂದರ ಅಳಿಯ"ನಾಗಿ ಉತ್ಸವಮೂರ್ತಿಯಾಗಿಯೂ ನಿಂದಿರುವುದೂ ಎನ್ನಲು ಇವರೇನೋ ಸಂತಸಗೊಂಡುದುಂಟು. ಆದರೆ ತಿರುಮಂಗೈ ಶರಣರಿಗೆ ಶ್ರೀರಂಗನಾಥನ ಖಾಸಾ ಕೈಂಕರ್ಯ ಸಿಗಲಿಲ್ಲ. ತನ್ನನ್ನೂ ಮರೆತು ಭಕ್ತ್ಯೇಕಪರಾಧೀನನಾಗಿ ಅರ್ಚಾವತಾರದಿಂದ ದೇವರು ರಕ್ಷಾಕಂಕಣಬದ್ಧನಾಗಿದ್ದರೂ ಬಲು ಸಮೀಪದಲ್ಲೇ ಇದ್ದರೂ. ಇವರಿಗೆ ಬಯಕೆ ಉನ್ಮಸ್ತಕವಾಗಿರಲೂ ಈ ಕಾಯಕ್ಕೆ ಅದಿವ್ಯ ಕಾಯಕ ಸಿಗದೆ ಇದ್ದಾಗ ಅದೇನು ವಿಷಾದವಾಗಿದ್ದರಬಹುದು?

ಅಳ್ವಾರರ ಅತಿಮಾತ್ರವಾದ ಈ ಶೈಥಿಲ್ಯ ಅವರನ್ನು ಬಲು ಕುಗ್ಗಿಸಿಬಿಟ್ಟಿತು. ಈ ಶರಣರ ಅವಸ್ಥೆ ಅತನನ್ನು ಗಂಡಾಗಿರಿಸಲು ಶಕ್ತಿ ಕಳೆದು ಕೊಳ್ಳುತ್ತದೆ. ಸೇವೆ ಸಿಗದಿದ್ದಾಗ ನಿಜ ಗರತಿಯರಿಗೆ ಆಗುವ ದುಃಖ ಅಳ್ವಾರ್ರಿಗೆ ಸಂಕ್ರಾಂತವಾಗಿ ಸ್ತ್ರೀ ಭಾವಾವೇಶ ತಾಳಿಸಿಯೇ ಬಿಡುತ್ತದೆ. ಸ್ವಾಮಿಯ ವಿಪ್ರಲಂಭ ಶೃಂಗಾರಕ್ಕೆ "ಸ್ತ್ರಿಯಃ ಸಾಧುಃ" ಎಂಬ ವ್ಯಾಸ ವಾಕ್ಯದಂತೆ ಹೆಣ್ಣಾಗಿ ಹುಟ್ಟುವುದೇ ಸೊಗಸು. ಹೆಣ್ಣು ಸಂತತಿಯಾದರೇ ಹೆಮ್ಮೆ! ಇದನ್ನೇ "ನಾಯಕೀದೆಶೆ" ಎನ್ನುವುದು. ಮಗಳಾಗಿದ್ದೂ ನೇರಾ ಮಾತಾಡದಷ್ಟು ಅವಸಾದ ಮಜಲೇರಿದೆ. ಆಗ ತಾಯ್ತನಕ್ಕೆ ಅದು ತಿರುಗಿಸುತ್ತದೆ. ಓ ಚೆಂದಳಿಯಾ! ನನ್ನೀ ಮಗಳ ವಿಚಾರದಲ್ಲಿ ಏನಾಗಿದೆ? ಎಂದು ಏನು ತಾನೇ ಹೇಳಲಪ್ಪಾ! ಇವಳೋ ನಿನ್ನ ಪ್ರೇಮ ಸಾಗರದಲ್ಲಿ ಮುಳುಗಿಯೇ ಬಿಟ್ಟಿದ್ದಾಳೆ! ನಾನು ತಾನೇ ಜೀವ-ಈಶ್ವರ ಉಭಯಕ್ಕೂ ತಟಸ್ಥಳಾಗಿರುವವಳು. ನೀನೇ ಸಾಧನವೆಂಬ ಏಕೈಕ ದೃಢಾಧ್ಯವಸಾಯ ಶೀಲೆ! ಉಪಾಯವರಣರೂಪವಾದ ಜ್ಞಾನ ಪ್ರಧಾನ ಮಾರ್ಗಕ್ಕೆ ಒಂದು ಸಂಕೇತ ನಾನು. ದ್ವಯಮಂತ್ರದ

ಶ್ರೀಮನ್ ನಾರಾಯಣಚರಣೌ ಶರಣಂ ಪ್ರಪದ್ಯೇ

ನನಗೆ ಈ ಪೂರ್ವಖಂಡಾರ್ಧದಲ್ಲೇ ಹೆಚ್ಚು ಒಲವು.

ನನ್ನಿಂದಲೇ ಹುಟ್ಟಿರುವವಳು ಕೈಂಕರ್ಯತ್ವರಾನಿಷ್ಠೆಯ ಸೂಚಕಳಾಗಿ ಈ ನನ್ನ ಮಗಳು. ನನ್ನ ಭೂಮಿಕೆ ಜೀವ ಸ್ವರೂಪವಾದ ಪಾರತಂತ್ರ್ಯಕ್ಕೆ ಒಪ್ಪಿ ಬರುವಂಥದು. ಈ ನನ್ನ ಮಗಳದು ಪಾರತಂತ್ರ್ಯವನ್ನೂ ಅದುಮಿ ನಿನ್ನ ಸೌಂದರ್ಯಾಸಕ್ತ ಮನ. ಇವಳು ನನ್ನಿಂದ ಜನ್ಯೆಯಾಗಿದ್ದರೂ ಈ ಜನನಿಗೇ ಇವಳ ನೆಲೆ ತಿಳಿಯುತ್ತಿಲ್ಲ! ಈಕೆಯು ಕಲ್ಯಾಣರೂಪಿಯೂ ಕಲ್ಯಾಣ ಗುಣಾಕರನೂ ಆದ ನಿನ್ನ ಕಲ್ಯಾಣಮಯ ಕಾಯಕ ಸೇವೆಗೇ - ತಗುವಸಾಕಾರ ಕೈಂಕರ್ಯಕ್ಕೆ ಛಲಗಾತಿಯಾಗಿದ್ದಾಳೆ!

ನನಗಾದರೋ ನಿಮ್ಮೀರ್ವರಿಗೂ ಏನು ಹೇಳಬೇಕೆಂಬುದೇ ತಿಳಿಯುತ್ತಿಲ್ಲ! ಹೋಗಲಿ ಶಕ್ತಿಯಿದೆಯೇ? ಹಾಗಿದ್ದಿದ್ದರೆ ನನ್ನೀ ಮಗಳೊಂದಿಗೆ ನಿನ್ನನ್ನು ಹೀಗೆ ಉಭಯರನ್ನೂ ಸೇರಿಸಿಯೇ ಬಿಡುತ್ತಿದ್ದೆ. ಮಗಳಾದರೂ ಬಾಧೆ ಪಡದ ಹಾಗೆ ಮಾಡಲೂ ನನಗೆ ಸಾಧ್ಯವಿಲ್ಲ. ಸಿದ್ಧೋಪಾಯನಾದ ಸರ್ವೇಶ ಸರ್ವ ಸ್ವತಂತ್ರ. ಅವನಲ್ಲಿ ನೀನೇ ನನ್ನ ಭಾಗಕ್ಕೆ

ತ್ವಮೇವ ಉಪಾಯಭೂತೋ ಮೇ ಭವ

ಎಂದು, ಉಪಾಯನಿಶ್ಚಯ ಗೈದರೂ ಸ್ವೀಕರಿಸುವುದು ನಿನ್ನ ಸಿರಿಚಿತ್ತವೇ! ರಾವಣನನ್ನು ಸೀತೆಯೇ ಭಸ್ಮಸಾತ್ ಮಾಡಿ ಬಿಡಬಹುದಿತ್ತು. ಅವಳೂ "ತತ್ ತಸ್ಯ ಸದೃಶಂ" ಗಂಡನ ಸ್ಥಾನಾ ಕ್ರಮಣಕ್ಕೆ ಹೋಗದೆ, ೧೦ ತಿಂಗಳೂ, ರಾಮ ವಿರಹವನ್ನು ಸ್ವಾಗತಿಸಿದ್ದಳು.

ನನ್ನ ಮಗಳಾದ ಈಕೆಯೋ ಸ್ವಲ್ಪ ತಡೆದುಕೊಳ್ಳಲೂ ಆಗದಷ್ಟು ಸೇವಾ ಕೈಂಕರ್ಯದಲ್ಲಿ ಅತ್ಯಾತುರವುಳ್ಳವಳು. ಅಳಿಯಂದಿರ ಸ್ವಭಾವವನ್ನಾಗಲೀ ಮಗಳ ಸ್ವಭಾವವನ್ನಾಗಲೀ ಬದಲಾಯಿಸಲು ಈಗ ತಾಯಿ ಅತ್ಯಂತ ಅಸಮರ್ಥಳಾಗಿ ಜಾಮಾತೃ ದೇವರಲ್ಲೇ ಮೊರೆಯಿಟ್ಟು ಮಗಳ ಮತಿಯಿಂದ ಹೇಳುವ ಅನ್ಯಾದೃಶ ದಶಕವಿದು. ವೆರುವಾದಾಳ್ = ನನ್ನೀ ಕನ್ಯೆ ಭಯ ಕಂಡವಳೇ ಅಲ್ಲ. ಎಳೆ ಮನಸ್ಸು. ಕಪಟವರಿಯದು. ಮನದೊಳಗೆ ಪತಿದೇವನ ಬಗೆಗೆ ಏನೇನು ಭಾವ ಓಡುವುದೋ ಅದನ್ನು ಸಮಾಜಕ್ಕೆ ಸಂಕೋಚದಿಂದಲೂ ಭೀತಿಯಿಂದಲೂ ಮರೆಸಿಡುವುದೂ ಇಲ್ಲ. ಸ್ಪಷ್ಟವಾಗಿ ಈಕೆಯ ಒಳ ಪ್ರವಾಹವನ್ನು ತಿಳಿಸೋಣವೆಂದರೂ ಶಕ್ತಿ ಸಾಲದ ಬಾಲ್ಯ. ಅಂಜಿಕೆಯೆಂಬುದೇ ಗೊತ್ತಿಲ್ಲದ ಪುಟಾಣಿ ವಯಸ್ಸು.

ಮತ್ತೊಂದರ್ಥವೇನೆಂದರೆ, ಮರೆಸಿಡಬೇಕೆಂಬುದನ್ನೆಲ್ಲಾ ಮಾತೆಗೂ ಸಖಿಯರಿಗೂ ಮರೆಮಾಚಿದಳು. ಆದರೂ ಅದು ಆಕೆಗೆ ಸಾಧ್ಯವಾಗದ ಸ್ಥಿತಿ. ಮರೆಸಿಟ್ಟರೂ ಪರಿಣಾಮ ತಡೆದುಕೊಳ್ಳಲಾರದೆ ಕಷ್ಟ ಪಡುತ್ತಿದ್ದಾಳೆ. ಅಂತೆಯೇ ವಾಯ್‌ವೆರುವಿ = ಬಾಯಲ್ಲಿ ಕನವರಿಸುತ್ತಾ ಗಾಢತಮ ಭಾವದಿಂದ ಬಂಧಿಸಲ್ಪಟ್ಟಿದ್ದಾಳೆ. ಇಷ್ಟೇ ಅಲ್ಲ. ಸ್ವಾಮಿಯ ಪರತ್ವದಲ್ಲಾಗಲೀ ವ್ಯೂಹ ವಿಭವಗಳಲ್ಲಾಗಲೀ ಈಕೆ ಬಾಯಿಗೆ ಬಂದಂತೆ ಒದರಬಹುದಿತ್ತು. ಏಕೆಂದರೆ ಅವು ಅಗೋಚರ. ಬಲುದೂರ. ಸ್ವಾಮಿಯೇ ಸಂತಸದಿಂದ ಇಷ್ಟಪಟ್ಟು "ಉಹಂದು ಅರುಳಿನ ನಿಲಮ್" ಎಂಬಂತೆ ಸಮೀಪದಲ್ಲೇ ಸರ್ವಸುಲಭವಾದ ಶ್ರೀರಂಗ ಕ್ಷೇತ್ರದಲ್ಲೇ ಹಿಂದೆ ಹೇಳಿದ ಅವ್ಯಗಳನ್ನೆಲ್ಲಾ ತೊರೆದೋ ಎಂಬಂತೆ ಪವಡಿಸಿದ್ದಾನೆ. ಅಂತಹ ಆ ಧಾಮದ ಹೆಸರನ್ನೇ ಸದಾ ಕನವರಿಸಬೇಕಾದರೆ ಈಕೆಗೆ ಅದೆಂತಹ ಪರಿಸ್ಥಿತಿ! ಹೇಗೆ ತಾನೆ ಸಹಿಸಿಯಾಳು? ಒಂದು ಬಾರಿ ಹೇಳಿ. ಅಷ್ಟಕ್ಕಾದರೂ ನಿಲ್ಲಿಸುತ್ತಾಳೆಯೇ? ಒಂದಲ್ಲ ಒಂದು ಬಿಡಾರದಲ್ಲಿ ತನ್ನ ನಾಯಕರನ್ನು ಸಂದರ್ಶಿಸುವಂತೆ ಶ್ರೀರಂಗದ ಆಸೆ ಬಿಟ್ಟು ತಿರುಪತಿಯನ್ನು ನೆನೆಯುತ್ತಾಳೆ.

ವೇಜ್ಗಡಮೇ ವೇಜ್ಗಡಮೇ ಎನ್ಗಿನ್ನಾಳಾಲ್! ಆಲ್ = ಅಯ್ಯೋ ನನ್ನೀ ಕಿರುಕಂದಳು ಬೇರೆ ಶ್ರೀಧಾಮಗಳ ನಾಮ ಹೇಳುವುದೇ ಇಲ್ಲ. ವೆಂಕಟಾ ವೇಂಕಟಾ ಎಂದೆಂದೇ ಪಲುಕುತ್ತಿರುತ್ತಾಳೆ. ಮಗಳ ಮುದ್ದು ಬಾಯಲ್ಲಿ ಬರುವ ಈ ಶ್ರೀ ಕ್ಷೇತ್ರ ನಾಮ ರೋದನವೂ ಜನನಿಗೆ ರೋಚಕವೇ ಆದಂತಿದೆ. ಶ್ರೀ ರಾಮಾಯಣದಲ್ಲಿ, ಪಂಚವಟಿಯಲ್ಲಿದ್ದಾಗ ಸೀತಾ ವಿರಹ ಏರ್ಪಟ್ಟಿತಷ್ಟೆ. ಆ ಸಂದರ್ಭದಲ್ಲಿ ರಾಮ ಹೇಗಿದ್ದಾನೆ? ಮುಂದೆ ಮುಂದೆ ಹುಡುಕುತ್ತಾ ನಡೆದಾಗ? ಅದು ಗಂಡ ಹೆಂಡತಿಗಾಗಿ ಅತ್ತದ್ದು, ಈ ಪರಕಾಲನಾಯಕಿಯದು ಅದಕ್ಕೆ ತಿರಗುಮುರುಗು. ಅಶೋಕವನದ ಸೀತೆಗೆ ರಾಮಭಂಟ ತಿಳಿಸಿದ. "ಸೀತೇ! ನಿನ್ನ ವಲ್ಲಭ ಸದಾ ಒರಲುವುದೇನು? ಎನ್ನುವಿಯಾ? "ಸೀತೇತಿ ಮಧುರಾಂ ವಾಚಮ್" ಆತ ನಿನ್ನ ವಿರಹತಪ್ತನಾಗಿರುವುದು ನನಗೇನೂ "ಮಧುರ"ವೇ! ಹಾಗೆಯೇ ಪ್ರಕೃತ ಈ ನನ್ನ ಕುವರಿ ಸಂಕಟದಿಂದ ಹೇಳುವ "ವೆಂಗಡಮೇ ವೇಂಗಡಮೇ" ಎಂಬೀ ರಾಮನಾಮ ನನಗೆ ಇಂಪಣವಾಗಿದೆಯಪ್ಪಾ! ಇದೀಗ ಆಶ್ಚರ್ಯ, ಎಂಬಿಷ್ಟೆಲ್ಲಾ ಭಾವ ಇಲ್ಲಿನ "ಆಲ್!" ಎಂಬ ಒಂದು ಅವ್ಯಯಯದ್ದು.

ಅತ್ತೆಯವರೇ! ಸಮಯ ಸಮಯದಲ್ಲಿ ನಿಮ್ಮ ಮಡಿಲಲ್ಲಾದರೂ ನಿಮ್ಮ ಮಗಳನ್ನು ಮಲಗಿಸಿಕೊಳ್ಳಿ. "ತಾಯ್ ಮಡಿಲೋ ಹೊಂಗೇ ನೆಳಲೋ!" ಎಂಬಂತೆ ಸ್ವಲ್ಪ ತಡೆದು ಕೊಂಡಾಳು. "ಅದೆಲ್ಲಾ ಹಿಂದಿನ ಮಾತಪ್ಪಾ. ಈಗಿವಳು ಮರುವಾಳಾಲ್ ಎನ್ ಕುಡಪ್ಪಾಲ್ ನನ್ನ ತೊಡೆಯ ಮೇಲೂ ನಿಲ್ಲಳು. ಈಗಂತೂ ನಿಲ್ಲಳೇ ಆರಳು. ಕ್ಷಣೇ ಕ್ಷಣೇ ಅಪೂರ್ವಾವಸ್ಥೆಗೆ ಏರುತ್ತಿದ್ದಾಳೆ! ಏನು ಮಾಡಿದರೂ ಇವಳು ಒಪ್ಪುತ್ತಿಲ್ಲ. ನನ್ನಂತೆ ಉಪಾಯಾಧ್ಯವಸಾಯ ಭೂಮಿಕೆಗೂ ಇವಳು ಹಿಂದಿರುಗುವಳಲ್ಲ. ಈಗಲೇ "ಶ್ರೀಮತೇ ವೇಙ್ಕಟೇಶಾಯ ನಮಃ" ಸಿದ್ಧಿಸಿಯೇ ಬಿಡಬೇಕಿವಳಿಗೆ!

ತಾಯ್ ಮಡಿಲೂ ಉರಿ ಬೆಂಕಿ ಎಂಬ ದುಶ್ಶಿಕ್ಷೆಯನ್ನು ನಿಮ್ಮೀ ಮಗಳಿಗೆ ಯಾರು ನೀಡಿದರು? ನನಗದು ಗೊತ್ತಿಲ್ಲ. ಪ್ರೇಮದ ಪರಮ ಸೇವಾ ಭೂಮಿಕೆಗೆ ಏರಿರುವಾಗ ಜ್ಞಾನ ಭೂಮಿಕೆ ಸಹಿಸೀತೇ ಇವಳಿಗೆ? ನೀನು ಚೆಲುವ ರಾಯನಲ್ಲದೆ ಇದ್ದಿದ್ದರೆ, ದುಷ್ಟಗುಣವಂತನಾಗಿದ್ದರೆ. ಅಪರಿಪೂರ್ಣನಾಗಿದ್ದರೆ, ಅಸೇವ್ಯನಾಗಿದ್ದರೆ, ಅಪ್ರಾಪ್ತನಾಗಿದ್ದಿದ್ದರೆ, ಇವಳೂ ನಿನ್ನ ಬಗ್ಗೆ ಇಷ್ಟೊಂದು

ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ನಿನ್ನನ್ನು ನೋಡಿಯೇ, ಈಕೆ ತನ್ನ ಸ್ವಸ್ವರೂಪವಾದ ಅತ್ಯನ್ತಪಾರತಂತ್ರ್ಯದ ಗೊಡ್ಡುತನವನ್ನು ಮರೆತಿದ್ದಾಳೆ. ಈಕೆ ಪಾವನ ಸೌಂದರ್ಯ ಕಲಾಽಽಸಕ್ತೆ! ಮೀನ ಮೇಷವಿಲ್ಲದೆ ಥಟ್ಟನೆ ಸೇವಾ ಛಲದವಳು!

ಎಲ್ಲ ವೇದಾನ್ತವೂ ಅಲ್ಲಿ ಮರೆತೇ ಹೋಗುತ್ತದೆ. ಮಡಿಲಲ್ಲಿ ಮಲಗದಿದ್ದರೆ ಬೇಡ, ಒಳ್ಳೆಯ ಹಾಸಿಗೆಯಲ್ಲಿ ಮಲಗಿಸಿ. ವಾಳ್ ನೆಡುಮ್ ಕಣ್ ತುಯಿಲ್ ಮರನ್ದಾಳ್ = ನಿದ್ದೆಯೆನ್ನುವುದನ್ನು ಮರೆತೇ ಬಿಟ್ಟಿರುವವಳಿಗೆ ಸುಖ ಸುಪ್ಪತ್ತಿಗೆ ಹಾಸಿದರೆ ತಾನೇ ನಿದ್ದೆ ಬಂದೀತೇ? ನಿದ್ರಾ ಶಬ್ದದ ವ್ಯುತ್ಪತ್ತಿ ಜ್ಞಾನವೇ ಈಕೆಗಿಲ್ಲ. ಕೇವಲ ಕೈಂಕರ್ಯದ ಕಾಯಕಕ್ಕಾಗಿ ಪರದಾಟ! ಸತಿಯಿಂದ ಪತಿ ಉಪಚಾರ ಸ್ವೀಕರಿಸದಿದ್ದರೆ ಹೇಗೆ ತಾನೇ ನೆಮ್ಮದಿ? ಇಲ್ಲೆಲ್ಲಾ ಯಥಾರ್ಥ ಸೇವಾ ವಿಜ್ಞಾನದ ಮೀಮಾಂಸೆಯೇ ನಡೆದಿದೆ. ನಿಷ್ಕಾಮ, ಪ್ರೇಮೈಕ ಪ್ರೇರಿತವಾದ ಸೇವೆಯನ್ನು ಇಂದು ವಿಶ್ವದಾದ್ಯಂತ ಹುಡುಕಿದರೂ, ವ್ಯಾಪಾರ, ಲಾಭ ಸ್ಪರ್ಧೆಯ ಜೂಜಾಟದಲ್ಲಿ ಎಲ್ಲಿ ಅದು ಸಿಗಬೇಕು? ನೆಮ್ಮದಿಯಿಂದ ನನ್ನೀ ಮಗಳು ಸೇವೆಗೈಯ್ಯದೆ ಕೊರಗಿ ಕೊರಗಿ, ಸುಷುಪ್ತಿಯನ್ನೇ ಕಾಣಳು.

ವಾಳ್ = ಅತಿ ಹರಿತವಾದ ಸಾಣೆ ಹಿಡಿದ ಕತ್ತಿಯ ಥಾಳಥಳ್ಳ. ಇವಳ ನೋಟಕ್ಕೆ ನಿಮ್ಮನ್ನು ಬಿಟ್ಟ ಎರಡನೆಯ ಎಡೆಯಿಲ್ಲ ಅಳಿಯಂದಿರೇ! ಸೂಕ್ಷ್ಮವಾದ ಏಕಾಗ್ರವಾದ ಒಂದೇ ಅಲಗು. ಆ ಕಣ್ ಚೆಂದ ಅನುಭವಿಸುವ ನೀವೂ ಎಷ್ಟೊಂದು ಭೋಗಪಟ್ಟರೂ ಸಾಲದ ದೃಷ್ಟಿಯ ಹರವು ಈ ನನ್ನ ಸುಕುಮಾರಿಯದು! ಒಡೆಯನ ಸ್ವಾರ್ಥವೇ ಈಕೆಗೆ ಸ್ವಾರ್ಥ. ಅತನ ಭೋಗವೊಂದೇ ಈಕೆಯ ಭೋಗ! ಏನೊಂದೂ ಅನ್ಯವಿಷಯಗಳ ತ್ಯಾಗದಲ್ಲೇ ಪರಮ ಸಂತೋಷ! "ತ್ಯಕ್ತೇನ ಭುಂಜೀಥಾಃ" ಈ ನನ್ನ ಕಂದಳನ್ನೇ ಕಂಡು ಋಷಿ ಅಡಿದರೇನೋ! ನನ್ನೀ ಮಗಳ ಕೈಂಕರ್ಯ ಸಾಕ್ಷಾತ್ಕಾರೇಚ್ಛೆ ಸೇವೆಗೊಳ್ಳುವವನನ್ನೂ ಆಪೋಶನ ತೆಗೆದುಕೊಳ್ಳುವಂತದು. ಅಷ್ಟೊಂದು ಅನಂತ ವಿಸ್ತಾರವಾದ ಪ್ರೇಮ ಚಕ್ಷುಷ್ಮತಿ! ಆಯಾಯಾ ಉಪನಿಷತ್ತುಗಳ ಜ್ಞಾನಕ್ಕಾದರೂ ಕೊನೆಯುಂಟೇನೋ! ಈ ಸಂತರ ಸೇವಾಭಿಲಾಷೆಗೆ ಅಂತವಿಲ್ಲ. ನೆಡುಮ್ ಕಣ್ = **"ಭೋಕ್ತಾ ಚ ಪ್ರಭುರೇವಚ"** ಎಂಬಂತಿರುವ ಸರ್ವ ಶಕ್ತನೂ ಈಕೆಯ ಈಗಿನ ಈ ಸೇವಾ ದೃಷ್ಟಿಯನ್ನು ಅರಗಿಸಿಕೊಳ್ಳಲಾರ. ಅಳ್ವಾರರು ಅತಿಭೌತಿಕರೂ, ಅತಿಬೌದ್ಧರೂ ಮಾತ್ರರಲ್ಲ. ಅತಿದೈವಿಕರೂ ಹೌದು! ಇವರ ಸೇವೋತ್ಕಟೇಚ್ಛೆಯ ಮುಂದೆ ಆ ವಿಶ್ವಪತಿ ಸಮರ್ಥನೂ ಸೋಲಬೇಕು! **"ಭೋಗೋಪೋದ್ಘಾತ ಕೇಳೀ ಚುಳಕಿತ ಭಗವದ್ ವೈಶ್ವರೂಪ್ಯಾನುಭಾವಾ"** ಪರಾಶರಭಟ್ಟರಿಗೆ ಈ ಭಾಗ ಪ್ರೇರಣೆ ನೀಡಿದೆ. ವೇದ ಉಪನಿಷತ್, ಸ್ಮೃತಿ, ಇತಿಹಾಸ, ಸಾತ್ವಿಕಪುರಾಣ, ದಿವ್ಯ ಪ್ರಬನ್ಧಾದಿಗಳೆಲ್ಲವೂ, ಶ್ರೀದೇವಿಯ ಗುಣಗಳಿಗೇ ಹೆಚ್ಚಿನ ಸ್ಥಾನ ನೀಡಿ ಆ "ಸೇವಾ" ರತ್ನವನ್ನು, ಜೋಪಾನವಾಗಿಟ್ಟು ಕಾಪಾಡುವ "ಶ್ರೀಗುಣರತ್ನಕೋಶಗಳೇ!"

ಸ್ವಯಂವರ ಮಾಡಿಕೊಂಡು ನನ್ನ ಮಗಳನ್ನು ಏನು ಸುಖವಾಗಿಟ್ಟಿರುವನೋ! ಹೀಗೆ ರಮಾರಮಣನಾದ ಅತ, ಎನ್ ಮಹಳ್ಳೆ ಶೆಯ್‌ದನಹಳ್ = ಕೈಂಕರ್ಯವೆಂಬ ಪ್ರಾಪ್ಯತ್ವರಾಜನ್ಯ ನೋಯಾಳಿ ಮಗಳನ್ನು ಕುರಿತು ಮಾಡಿದುವೆಲ್ಲಾ ಯದ್ಯಪಿ ಸ್ವಾಮಿ ತನ್ನ ಸರ್ವಸ್ವವನ್ನೂ ಅಂದರೆ, ಆದಿ ಕೂರ್ಮನಾಗಿ, ಮಂದರ ಮಂತಾಗಿ, ದೇವತೆಗಳಿಗೆ ಅಮೃತ ನೀಡಿ, ಒಲಿತಿರೈನೀರ್ ಪೌವ್ವಂ ಕೊಣ್ಡ ತಿರುವಾಳನ್. ಇವನ್ನೆಲ್ಲಾ ತಾಯಿ ತೆಗಳುತ್ತಾಳೆ. ಹೀಗೆಲ್ಲಾ ಅಣಿ ಮಾಡಿದರೂ ತಾಯಿಯಾದ ನಾನು ಎಜ್ಗನಮ್ ಶಿನ್ದಿಕ್ಕೇನೇ? = ನನ್ನ ಚಿಂತನೆಗೂ ಮೀರಿದ ಪ್ರೇಮಸ್ತರ ಇವಳದು. ಕೇವಲ ಜ್ಞಾನಕ್ಕೆ ಪ್ರೇಮದ ಉತ್ಕಟತೆ ಗೋಚರಿಸಿತು ಹೇಗೆ? ಅವನು ಈಕೆಯನ್ನು ಸಿಕ್ಕಿಸಿಕೊಂಡ, ದಕ್ಕಿಸಿಕೊಳ್ಳಲಾಗಿಲ್ಲ! ಈಕೆ ಅತ್ಯುತ್ ಕಂಠಿತ ಪ್ರೇಮಮಯ ಸೇವಾ ಕುತೂಹಲ ತರಂಗಿತ ಮಹಾಸಾಗರನಲ್ಲಿ ಮುಳುಗಿಬಿಟ್ಟಿದ್ದಾಳೆ. ನಾನೋ ಪಿಳಿ ಪಿಳಿ ನೋಡುತ್ತಿರುವುದೊಂದೇ! ವಾಚಾಂ ಅಗೋಚರ ಮಾತ್ರವಲ್ಲ. ಜ್ಞಾನಕ್ಕೂ ಅಗಮ್ಯ ಪರಕಾಲ ನಾಯಕಿಯ ಈ ನಿಲುವು!

ತಿರುಪ್ಪಾಣಿ ಆಳ್ವಾರ್ ಶ್ರೀರಂಗನಾಥನನ್ನು "ಅನ್ನು ನೇರ್‌ನ್ದ ನಿಶಾಶರಠೈ" ಖಂಡಿತಾಖಿಲ ದೈತ್ಯಾ! ಓ ಶ್ರೀ ಮಹಾವೀರ ಶ್ರೀರಾಮಾ! ಎಂದೇ ಭಾವ ಬಂಧದಿಂದ ಅನುಭವಿಸುತ್ತಿದ್ದರು. ರಾವಣನ್ನು ಕೊಂದಾತ, ಶ್ರೀರಂಗದ ದಕ್ಷಿಣದ ಬಾಗಿಲಿನಿಂದ ಒಳಹೊಕ್ಕ! ಅತ್ತ ಮುನ್ವಿಪಾಯ್ ವಡವೇಜ್ಗಡ ಮಾಮಲೈ ವಾನವರ್ ಹಳ್ ಶನ್ದಿಶೆಯ್ ನಿನ್ಱಾರ್! ಮೇಲಿನ ವೈಕುಂಠದಿಂದ ಆನಂದನಿಲಯ ವಿಮಾನದಲ್ಲಿಳಿದ "ಏರೋಡ್ರೋಮ್" (Aerodrome) ತಿರುಮಲಗಿರಿ! ನೋಡಿದರೆ ನಿಂತೇ ಇದ್ದಾನೆ! ಎಲ್ಲಿಗೋ ಹೊರಡುವ ಸಿದ್ಧತೆಯಲ್ಲಿರುವುದನ್ನು ವೈಕುಂಠವಾಸಿಗಳು ಕಂಡರು. ಶ್ರೀ ರಂಗಧಾಮದ ಉತ್ತರದ ಬಾಗಿಲಿನಿಂದ ಆ ತಿಮ್ಮಪ್ಪನೇ ಒಳಹೊಕ್ಕ ಈ ಪ್ರಣವಾಕಾರದ ಓಮ್‌ಕಾರ ವಿಮಾನಕ್ಕೆ! ನಾನೆಲ್ಲೂ ಹೋಗುವುದಿಲ್ಲ ಎಂದು ಮಲಗಿ ಈ ತಿರುಪ್ಪಾಣಿಗಳನ್ನೂ ಸಂತೈಸಿದ! ಅದೇ ಶೇಷಶಾಯಿ ಶ್ರೀರಂಗನಾಥ! ಪೆರಿಯಪೆರುಮಾಳ್! ಅಂತೆ ನನ್ನೀಕುವರಿಗೆ ಕೈಂಕರ್ಯ ಕೊಡದೆ ಸತಾಯಿಸುತ್ತಿದ್ದಾನೆ! **"ಅಳಹಿಯ ಮಣವಾಳಾ"** ಎನ್ನುವಾಗ ಶ್ರೀ ಪರಾಶರ ಭಟ್ಟರ ಹೃದಯ ತುಂಬಿ ಬರುತ್ತಿತ್ತು! ತಿರುವೇಂಜ್ಗಡಮುಡೈಯಾನ್ ಎಂಬ ಉದ್ಗಾರದಲ್ಲಿ ಅನಂದಾಣ್ ಪಿಳ್ಳೈಗಳು ಮೈಮರೆಯುತ್ತಿದ್ದರು! ಇವರನ್ನೆಲ್ಲಾ ತಯಾರ್ ಮಾಡಿದ ಶ್ರೀ ಯತಿರಾಜ ರಾಮಾನುಜರು, ತಿರುನಾರಾಯಣಪುರ ಮೇಲ್‌ಕೋಟ್ಟೈ ಶೆಲ್ವಪಿಳ್ಳೈ ಸಂಪತ್ ಕುಮಾರಾ! ಎಂದೇ ಸರ್ವಕ್ಷೇತ್ರ ಸರ್ವಮೂರ್ತಿಮಯ ಭಾವಾವಿಷ್ಟರಾಗಿ ಬಿಡುತ್ತಿದ್ದರು. ಮಧುರಕವಿ "ಶಠಕೋಪನಂಬೀ!" ಎನ್ನುವಾಗ ಇದ್ದುದೂ

ಬಲು ಮಧುರತಮ! ಆಂಧ್ರ ಪೂರ್ಣರೆಂಬ ಮಿರಲೆ ಸಾಲಿಗ್ರಾಮದ (ಈಗಿನ ಮೈಸೂರು ಜಿಲ್ಲೆ) ಅಂದಿನ ಶ್ರೀ ವಡುಹನಂಬಿಗಳಿಗೆ "ಎಂಬೆರುಮಾನಾರ್" ಎನ್ನುವಾಗಲೂ ಅದ್‌ಭುತ ಭಾವಲಹರಿ ಉಕ್ಕಿ ಬರುತ್ತಿತ್ತು! ಹೀಗೆಲ್ಲಾ ರಸಿಕರಾದ ಹಿರಿಯರು ಈ ತಿರುಮಂಗೈ ಆಳ್ವಾರ್ ನಾಯಕೀ ಅವಸ್ಥೆಯಲ್ಲಿ ಹಾಡಿದ ಈ ಭಾಗವನ್ನು ಹಾರ್ದವಾಗಿ ಅನುಭವಿಸುತ್ತಾ ಬಂದಿದ್ದಾರೆ. ಇಂದಿಗೂ "ಎಂದರೋ ಮಹಾನುಭಾವುಲು" ಸಂದೇ ಬರುತ್ತಾರೆ!

ತಮಿಳ್ ತಿರಳ್ ೫-೬-೭

ಶಿನ್ದನೈಯೈ ತ್ತವನೆರಿಯೈ ತ್ತಿರುಮಾಲೈ ಪಿರಿಯಾದು ವನ್ದೆನದು ಮನತ್ತಿರುನ್ದ ವಡಮಲೈಯೈ ವರಿವರ್ನ್ದಾರ್
ಕೊನ್ದನೈನ್ದ ಪೊಳಿಲ್ ಕೋವಲ್ ಉಲಹಳಪ್ಪಾನ್ ಅಡಿ ನಿಮಿರ್ತ್ತ ಅನ್ದಣನೈ, ಯಾನ್ ಕಣ್ದದು ಅಣೆನೀರ್ ತೆನ್ ಅರಙ್ಗತ್ತೇ

ಕನ್ನಡ ನೆರಳ್

ಎಮ್ ಚಿನ್ತನಂ, ಸಾಧನನಂ, ಶ್ರೀಮುಗ್ದನಂ ಪಿರಿವಿಲ್ದೇ ಬಂದೆನ್ ಮನದಿಹ ಬಡಗಲ ಮಲೆಯನಂ, ಚೆರಿಬಂಡ್ ತುಂಪೂ
ಗೊಂಚಲ್ ಘನಬನ "ಕೋವಲ್" ಒಳ್ ಇಳೆಯಳೆಯಲ್ಕಡಿ ನಿಮಿರ್ ಬೊಮ್ಮನಂ ನಾ ಕಂಡುದು ಚೆನ್‌ನೀರ್ ತೆಂಕಣ ಸಿರಿರಂಗದೊಳೇ

ಹೊಕ್ಕಷ್ಟೇ ಮಗಳ ಪುಣ್ಯ! ಈ ಅನುಭವದ ನಾಣ್ಣುಡಿಯಂತೆ ಈ ದಶಕಕ್ಕೆ ಹಿಂದೆ ಶ್ರೀ ಹರಿನಾಮ ಸಂಕೀರ್ತನದಿಂದಲೇ ಪರಕಾಲ ನಾಯಕಿ ಸ್ವಲ್ಪ ಧಾರಣೆ ಪಡೆಯುತ್ತಾಳೆ. ಮೋಹ ತಿಳಿಮೆಯಾಂತು ಹಿಂದಿನ ಆಳ್ವಾರ್ ಸ್ಥಿತಿಗೆ ಬಂದು ನಿಂತಿರುವಂತೆ! ಏಕೈಕ ಪುತ್ರನಿಗೆ ಜನ್ಮನೀಡಿದ ಕೌಸಲ್ಯೆ, ಶ್ರೀರಾಮ ವನವಾಸಕ್ಕೆ ಹೊರಡುವಾಗ ರಾಮನ ಕೋಪಕ್ಕೆ ಪಾತ್ರಳಾಗುತ್ತಾಳೆ. ತಾನೂ ಕಾಡಿಗೆ ಬರುವುದಾಗಿ ಆಗ್ರಹಪಟ್ಟುದೇ ಈ ಕೋಪಕ್ಕೆ ಕಾರಣ. "ಅಮ್ಮಾ! ತಂದೆ ದಶರಥ ಇರುವಾಗ ನನ್ನೊಡನೆ ನೀನೀಗ ಬರುವುದು, ನಿನ್ನ ಪಾತಿವ್ರತ್ಯ ಹಾನಿಯಲ್ಲವೇ?" ಇಲ್ಲಿ ತಿರುಮಂಗೈಗಳಿಗೆ ಶ್ರೀರಂಗನಾಥ, "ನಾನಿಟ್ಟಂತಿರದೆ ಈ ನಿಮ್ಮ ವತಿಯಿಂದ ಅತ್ಯಾತುರ ಸಲ್ಲ!" ಎಂದು ಸಮಾಧಾನ ಹೇಳೋಣ, ರಾಮನ ಹುಸಿನಗೆಯಿಂದ ಕೌಸಲ್ಯೆ "ಹಾಗಾದರೆ ಸರಿ" ಎಂಬಂತೆಯೇ ಇವರೂ "ಸರಿ ನಿನ್ನ ಚಿತ್ತ". "ಆದರೆ ಕೌಸಲ್ಯೆಗೂ ಇಲ್ಲದ ಭಾಗ್ಯ ನನಗೆ ನಿತ್ಯದರ್ಶನ ನೀಡುತ್ತಿದ್ದೀಯಲ್ಲಾ! ಇಷ್ಟೇ ಸಾಕು."

ಮನ್ತ್ರರತ್ನದ ಪೂರ್ವೋತ್ತರ ಖಂಡಗಳ, ಉಪಾಯನಿಷ್ಠೆ-ಕೈಂಕರ್ಯತ್ವರೆ-ಇವೆರಡೂ ಆಳ್ವಾರುಗಳಲ್ಲಿ ಚಕ್ರಾಕಾರವಾಗಿ ಸುತ್ತುತ್ತಿರುತ್ತವೆ! ಒಂದೊಂದು ಪ್ರಜ್ಞಾಲಹರಿ ಮೇಲೆದ್ದಾಗ ಅವವುಗಳೇ ಹೆಚ್ಚು ಪ್ರಕಾಶಿಸುತ್ತವೆ. ಎಲ್ಲಾ ಭಗವಂತನ ವಿಶೇಷ ಕಟಾಕ್ಷದ ಕೈವಾಡ, ನಮ್ಮಂತಹವರ ಶಿಕ್ಷಣಕ್ಕಾಗಿ ಈ ಏರು ಬೀಳುಗಳು ನಡೆಯುತ್ತಿರುವುದೇ ಮುಖ್ಯ ರಹಸ್ಯ. ಸಾಧನ ಶುದ್ಧಿಯಿಲ್ಲದೆ ವ್ಯಾಪಕ ಸತ್‌ಫಲ ಸಿದ್ಧಿಸದು. ಸತ್ ಫಲದ ಗುರಿಯಿಲ್ಲದ ಕೇವಲ ಸಾಧನಶುದ್ಧಿಯೂ ಶಿಥಿಲವಾಗಿ ಬಿಡಬಹುದು. ನಮ್ಮಲ್ಲಿ ಅನೇಕರಿಗೆ, ಹೇಗಾದರೇನಂತೆ, ಸದ್ಯಕ್ಕೆ ಸುಳ್ಳು ಹೇಳಿಯಾದರೂ ಹಿಂಸೆಗೈದಾದರೂ ಒಳ್ಳೆಯದನ್ನು ತರೋಣ. ಈ ಉದ್ದೇಶ್ಯ ಶುದ್ಧಿ ಸಿದ್ಧಿಸಿದರೂ ಮತ್ತೆ ಮತ್ತೆ ತಲೆಯೆತ್ತಿ ರಂಪ ಮಾಡುತ್ತಲೇ ಇರುತ್ತವೆ. ಕಾರಣದಲ್ಲೇ ಕಾರ್ಯ ಅಡಗಿರುತ್ತದೆ. ಬೇವಿನ ಬೀಜ ಬಿತ್ತಿ ಮಾವಿನ ಹಣ್ಣು ಪಡೆಯಲಾದೀತೇ? ಸತ್ಯ **"ಪ್ರೇಮ ಕರುಣೆಗಳು ನಿತ್ಯಧರ್ಮಗಳಾದಾಗಲೇ ಸರ್ವರ ಲೇಸು. ಅವು ಅವಕಾಶವಾದಿಗಳಾದಾಗ ಸರ್ವನಾಶ!"** ಈ ಎಚ್ಚರಿಕೆಯೇ ಈ ದ್ವಯಮಂತ್ರಾರ್ಥದ ಉಭಯಾಂಶಗಳು. ಶರಣರಿಗಾದರೆ, ಉಭಯಾವಸ್ಥೆಗಳೆಲ್ಲಾ ಭಗವಂತನ ಕಲ್ಯಾಣ ಗುಣಗಳದೇ, ಸ್ಥಾಯೀ ಭಾವವಿರುವುದರಿಂದ, ಅವರ ಈ ಅನುಭಾವಗಳ ಮಧುರ ಸಂಮರ್ದದಿಂದ ಅಮೃತವೇ! ೧೦ ತಿಂಗಳು ರಾಮನಿಗಾಗಿಯೇ ಸೀತೆ ತಾಳಿಕೊಂಡಳು. ಅವಳಿಗೇನು ಸ್ವಶಕ್ತಿ ಇರಲಿಲ್ಲವೇ? ಇದು ಸಿದ್ಧೋಪಾಯನಿಷ್ಠೆ. ಅದೇ ಗೋದಾ, ಆಂಡಾಳ್ ಕೃಷ್ಣಪ್ರಾಪ್ತಿಗಾಗಿ, ದೇವತಾಂತರನಾದ ಮನ್ಮಥನನ್ನೂ ಅಶ್ರಯಿಸಿಬಿಟ್ಟಳು. ಸಿದ್ಧೋಪಾಯನಾದ ಕೃಷ್ಣನನ್ನೂ ಭಿಮಾರಿಗೆ ಗುರಿಪಡಿಸುತ್ತಾಳೆ. ರಾಜ್ಯಪ್ರಾಪ್ತಿಗೆ ಪೂರ್ವ ೨೦ ವರ್ಷಕಾಲ ಮಹಾತ್ಮನನ್ನು ಭರತಖಂಡ, ಗತಿಕೆಟ್ಟು ಅನುಸರಿಸಿದ್ದು, ತದನಂತರ, ಅರ್ಥನೀತಿ, ರಕ್ಷಣಾನೀತಿ, ಶಿಕ್ಷಣ, ಮುಂತಾದವುಗಳಲ್ಲಿ ಮಹಾತ್ಮರ ಪ್ರಥಮ ಸತ್ಯಾಗ್ರಹಿ, ಭೂದಾನ ಗ್ರಾಮದಾನದ ದಾರಿತೋರಿದರೂ ನಾವಿನ್ನೂ ದೈವೀಗುಣಕ್ಕೆ ಬದಲು ಆಸುರೀಸಂಪತ್ತಿಗೇ, ಉದ್ದೇಶ್ಯವಿಲ್ಲದಿದ್ದರೂ, ವಾಲುತ್ತಿದ್ದೇವಷ್ಟೆ! ವಿಜ್ಞಾನವೂ ಅಹಿಂಸೆಯೇ ಯುಗಧರ್ಮವೆಂದು ಸಾರುತ್ತಿದ್ದರೂ, ನಮ್ಮೆಲ್ಲರ ಮನಸ್ಸೂ ಅವೈಜ್ಞಾನಿಕ!

ಶಿನ್ದನೈಯೈ = ಬಿಡದೇ ಕಾಯಕ ಗೈಯ್ಯಲು ಬೇಕ್ಕೆ. ವಳುವು ಇಲಾ ಅಡಿಮೈ ಶೆಯ್ಯವೇಣ್ಡುಮ್ = ಎಂದೇ ಸದಾ ಸೇವೆ ಕೈಂಕರ್ಯವೊಂದನ್ನೇ ಬಯಕೆಯಾಗುಳ್ಳ ನನ್ನ ಚಿಂತನೆಗೆ ವಿಷಯನಾದವನನ್ನು, ತವನೆರಿಯೈ = ಆ ದಿವ್ಯ ಊಳಿಗ ಸಿಗಬೇಕಿದ್ದರೆ ಸಾಧನೋಪಾಯದ ಹಾದಿಯೂ ಆಗಿರುವವನು ಸಕಲ ಕಲ್ಯಾಣಗುಣಾಕರನೇ. ಶರಣರಿಗೆ ತಪ ಬೇರೆಯಲ್ಲ. ಫಲ ಬೇರೆಯಲ್ಲ. ಸಾಧ್ಯ ಸಾಧನಗಳ ಅತ್ಯಂತ ಭೇದ ದೃಷ್ಟಿಯಿರುವವರಿಗೆ ತಪ ತಾಪದಾಯಕ! ಆದರೂ ಏಕೆ ಸಹಿಸುತ್ತಾರೆ? ಮುಂದೆ, ಫಲಕಾಲದಲ್ಲಿ "ಆಹ್ಲಾದ" ಕಾದಿದೆ! ಈ ಲೆಕ್ಕಾಚಾರ. ಆದರೆ ಆಳ್ವಾರುಗಳಿಗೆ, ತಪಸ್ಸೂ ಆಹ್ಲಾದ ನೀಡುವುದು. ಫಲ ಕೈಂಕರ್ಯವೂ ಆಹ್ಲಾದಕಾರಿಯೇ ಆಗಿರುವುದು.

ಕಾರಣವೆಂದರೆ, ಉಭಯಥಾ ಪರಮಾತ್ಮನ ಸಂಬಂಧಕಾರಿಯೇ ಆಗಿರುವುದು. ಏಕೆಂದರೆ, ಉಭಯಥಾ ಪರಮಾತ್ಮನ ಸಂಬಂಧ ಜ್ಞಾನ ದೃಢವಾಗಿದೆ. ಅನನ್ಯ ಹಾಗೂ ಅತ್ಯಂತಿಕ, ಯೆನಕೇನಪ್ರಕಾರೇಣ ಕೈಂಕರ್ಯವಾದಿಗಳಿಗೆ ಸಾಧನ ಸ್ವಗತ! ಅಹಂಮಮ ಗ್ರಸ್ತ! ಸಾಮಾನ್ಯವಾಗಿ ಯೋಗ ಸಾಧಕರು, ತಪಸ್ವಿಗಳು. ಸಾಧನೆಗಾಗಿ ಕಾಮ್ಯಭಕ್ತರು ಸರ್ವೇಶ್ವರನನ್ನೇ ಆಶ್ರಯಿಸಿದರೂ, ಫಲ ಕ್ಷುದ್ರ ಅಲ್ಪ! ಇವೆರಡನ್ನೂ ಮೀರಿದವರೇ ''ಜ್ಞಾನೀ-ಶರಣರು''. ಮುಳುಗಿಸಿದರೂ ದೇವರೇ! ತೇಲಿಸಿದರೂ ದೇವರೇ ಅವನದೇ ಸಾಧನ! ಅವನದೇ ಫಲ! ನಾವಿದೋ ಶೂನ್ಯರು!

ತಿರುಮಾಲೈ = ರಮಾರಮಣನನ್ನು ಈ ಮಹಾದೇವಿ ಇಲ್ಲದಿದ್ದರೆ ನಮ್ಮಂತಹ ಪಾಪಿಗಳಿಗೆ ಬೇರೆ ಯಾರು ತಾನೇ ವಹಿಸಿಕೊಂಡು ಪುರುಷಕಾರರಾಗುತ್ತಿದ್ದರು? ದೇವರು ಸಾಧನನಾಗುವಾಗ, ಅಸಾಧಾರಣವಾದ ತನ್ನ ಶಿಫಾರಸು ಮಾಡುವ, ''ಪುರುಷಕಾರ'' ಭಾವದಿಂದಲೂ, ದೇವರು ಪ್ರಾಪ್ಯನಾಗುವಾಗ, ಅವನಲ್ಲೇ ಅಡಗಿಯೂ ಕಂಗೊಳಿಸುತ್ತಿರುವುದು. ಶ್ರೀದೇವಿಗೆ ಮರುಳಾಗುವವನನ್ನು, ಪಿರಿಯಾದು = ಬೇರ್ಪಡದೆ ನನ್ನಲ್ಲಿ ಬಂದು, ಎನದು = ಅವನ ಕೃಪೆಯೊಂದಕ್ಕೇ ಪಾತ್ರನಾದ ನನ್ನ ಆ ಪಾತ್ರತೆಯೂ ಅತನಿಂದಲೇ! ದಯಯೈವ ದಯಾಯಾ ಏವ ಪಾತ್ರಭೂತೋಸ್ಮಿ. ಮನತ್ತು = ಮನಸ್ಸಿನಲ್ಲಿ, ಇರುನ್ದ = ಇದ್ದೇ ಇರುವ. ವಡಮಲೈಯೈ = ಬಡಗಲ ಮಲೆಯಪ್ಪನನ್ನು. ವರಿ = ಒಳ್ಳೆಯ ಚಿತ್ರ ವಿಚಿತ್ರ ರೇಖಾ ಸೌಂದರ್ಯವುಳ್ಳ, ವಣ್ಡು = ಭೃಂಗಗಳಿಂದ, ಆರ್ = ತುಂಬಿಯೇ ಇರುವ, ಕೊನ್ದು ಅಣೈನ್ದ = ಹೂಗೊಂಚಲುಗಳಿಂದ ಕಂಗೊಳಿಸುವ, ಪೊಳಿಲ್ ಕೋವಲ್ = ಘನವಾದ ಪುಷ್ಪೋದ್ಯಾನಗಳಿಂದ ''ಕುಸುಮ ಮಂದಿರ'' ಎಂದೇ ಪ್ರಸಿದ್ಧವಾದ, ತಿರುಕ್ಕೋವಲೂರ್ ದಿವ್ಯ ದೇಶದಲ್ಲಿ, ಉಲಹು = ಹಿಂದೆ ತ್ರಿವಿಕ್ರಮನಾಗಿ ಅಳೆದುದು ಜನಗಳಿಗೆ ಮರೆತು ಹೋಗಬಹುದೆಂದು ಈಗಲೂ ವಿಶ್ವವನ್ನೆಲ್ಲಾ, ಅಳಪ್ಪಾನ್ = ಅಳೆದು ಭೂಮಿಯೆಲ್ಲಾ ದೇವರದೇ! ಎಂಬ ಜನಜಾಗೃತಿಗಾಗಿ, ಶ್ರೀಪಾದ ಮೆಲಕ್ಕೆ ಕೆಳಕ್ಕೆ ಅಡಿ ನಿಮಿರ್ತ್ತ = ನಿಮಿರಿಸಿಕೊಂಡಿರುವನು, ಸರಕಾರ, ರಾಜರಿಂದಾಗದ ಕೆಲಸವಿದು ಎಂದು ಅನ್ದಣನೈ = ದಾನ ಬೇಡಲೂ, ಸ್ವೀಕರಿಸಲೂ ಸಂಕೋಚವಿಲ್ಲದ ಬ್ರಾಹ್ಮಣ ಬ್ರಹ್ಮಚಾರಿಯಾಗಿರುವ ವಾಮನನನ್ನು, ನಾನ್ = ಅವನೇ ಯಾಚಕನಾಗಿರುವಷ್ಟು ನಮ್ಮ ಕೆಲಸಗಳನ್ನು ಮಾಡಿಕೊಡಲು ಬದ್ಧನೆಂಬ ಉಪಾಯ ನಿಷ್ಠೆ ತಲೆಯೆತ್ತಿರುವ ಇದೋ ನಾನು. ಕಣ್ಡದು = ದೇಶತಃ ಈಗಲೇ ನಮ್ಮಿಂದ ಅಸಾಧ್ಯವಾದ ಆ ಪರವ್ಯೆಕುಂಠದಲ್ಲಾಗಲಿ, ಹಾಲ್ಗಡಲಿನ ವ್ಯೂಹಸ್ಥಾನದಲ್ಲಾಗಲಿ, - ಓರ್ವನೇ ವಾಸುದೇವ, ಜ್ಞಾನ ಶಕ್ತಿ, ಬಲ ಐಶ್ವರ್ಯ, ವೀರ್ಯ ತೇಜಸ್ಸು ಈ ಷಡ್‌ಗುಣಗಳನ್ನು ಹಂಚಿಕೊಂಡು, ಶಾಸ್ತ್ರಪ್ರದಾನ, ಲೋಕರಕ್ಷಣೆ, ಸಂಹಾರಗಳಿಗಾಗಿ, ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಮೂರ್ತಿಗಳಾಗಿ ''ವಿ'' ಹೀಗೆ ವಿಶೇಷಾssಕಾರೇಣ, ''ಊಹ'' ತಕ್ಕ ರೂಪಗುಣಾದಿಗಳನ್ನು ಬಿಡಿಬಿಡಿಯಾಗಿರಿಸಿಕೊಂಡಿರುವ ಸ್ಥಾನ ವಿಶೇಷ. ಸತ್ಯಲೋಕದ ಒಂದೆಡೆ, ವ್ಯೂಹ ಇನ್ನೊಂದೆಡೆ ಈ ಎರಡೆಡೆಗಳಲ್ಲೂ ಕಾಣಲಾಗದವನನ್ನು ಕಂಡದ್ದು, ಅಣೆ = ಶ್ರೀ ಕ್ಷೇತ್ರಕ್ಕೆ ಸುತ್ತಲೂ ಆಭರಣದಂತಿರುವ, ನೀರ್ = ಕಾವೇರಿ ನೀರಿನ ತೆನ್ ಅರಙ್ಗತ್ತೇ = ತೆಂಕಣ ಶ್ರೀರಂಗದಲ್ಲೇ! ಇಲ್ಲೇ ಆ ಪರವ್ಯೂಹ ವಿಭವ ಅಂತರ್‌ಯಾಮಿ, ಸಕಲ ಸಂಪೂರ್ಣತೆಯೊಡನೆ, ಕಾತರಿಸಿದ ಈ ದಾಸನಿಗೆ ಸೇವೆ ನೀಡುತ್ತಿದ್ದಾನೆ. ಸರಿ ಸ್ವಲ್ಪ ತಾಳಿಕೊಳ್ಳುತ್ತೇನೆ.

ತಮಿಳ್ ತಿರಳ್ ೬-೮-೧

ಮಾನ್ ಕೊಣ್ಡ ತೋಲ್ ಮಾರ್ವಿಲ್ ಮಾಣಿಯಾಯ್ ಮಾವಲಿಮಣ್ ತಾನ್ ಕೊಣ್ಡು ತಾಳಾಲ್ ಅಳನ್ದ ಪೆರುಮಾನೈ
ತೇನ್ ಕೊಣ್ಡ ಶಾರಲ್ ತಿರುವೇಙ್ಗಡತ್ತಾನೈ ನಾನ್ ಶೆನ್ನು ನಾಡಿ ನರೈಯೂರಿಲ್ ಕಣ್ಡೇನೇ

ಕನ್ನಡ ನೆರಳ್

ಬಿಂಕೆಯ ತೊಗಲಂ ಉರದೊಳು ಹೊದ್ದಾ ವಟುವಾಗಿ ಮಾಬಲಿ ಮಣ್ಣಂ
ತಾನ್ ಕೊಂಡಡಿಯಿಂದಳೆದಾ ಹಿರಿಯವನಂ
ಜೇನ್ ಕೊಂಡಡಿವಾರದ ಸಿರಿ ವೇಂಕಟದವನಂ ಅಂದದೊ ತಪ್ಪಿದ
ನಾನ್ ಇಂದು ಹುಡುಹುಡುಕತ ವಲೆದಾಡಿ ತಿರುನರೈಯೂರ್ ಒಳು ಕಂಡೆನಲಾ!

ಅವಿರೋಧಿ ಸರ್ವ ಸಮನ್ವಯವೇ ಮಾನವನ ದಾರಿ ಮತ್ತು ಗುರಿ. ಎಲ್ಲಾ ಶಾಸ್ತ್ರಕಾರರೂ ನಾನಾ ವಿರುದ್ಧ ದಿಕ್ಕುಗಳಲ್ಲಿ ಚೆಲ್ಲಾಪಿಲ್ಲಿಯಾಗಿ ತಾವೂ ಒಡೆದು ಹೋಗಿ ಇತರರನ್ನೂ ಸಿಡಿಮಿಡಿಸುವ ಕೆಲಸ ಆಯಾಯಾ ಶಾಸ್ತ್ರಗಳ ತಥ್ಯಾಂಶವಲ್ಲ. ಈ ಜೋಡಿಸುವ ಮಹಾಕಾರ್ಯಕ್ಕೆ ಅಧಿಷ್ಠಾನ ಅದಾವುದು? ''ಶಮಾಯ ಸರ್ವಶಾಸ್ತ್ರಾಣಿ ವಿಹಿತಾನಿ ಮುನೀಷಿಭಿ;'' ಶಾಂತಿಯೇ ಸರ್ವಶಾಸ್ತ್ರಗಳ ಒಳತಿರಳು. ಈ ಶಾಂತಿ ನೆಮ್ಮದಿಯು ಎಲ್ಲಿ ಸಿಗುವುದು? ಇಲ್ಲೇ ಬ್ರಹ್ಮವಿದ್ಯೆಯ ಅಧ್ಯಾತ್ಮದ ಆವಶ್ಯಕತೆ. ಆಳ್ವಾರರ ಬ್ರಹ್ಮವಿದ್ಯೆ ಬ್ರಹ್ಮದಿಂದಲೇ ಬ್ರಹ್ಮಕ್ಕಾಗಿಯೇ ನಿರ್‌ಹೇತುಕವಾಗಿ ಹರಿದು ಬಂದಿದೆ. ಇದರಿಂದಾಗಿ ಪರಿಪೂರ್ಣ ನಿರ್ಮಲ ಅಳ ಮತ್ತು ಅಗಲದ ಸರ್ವಸಮನ್ವಯದ ಸೊಬಗು ಈ ಪಾಶುರದ್ದು.

ಗೃಹಸ್ಥ ಭಿಕ್ಷೆ ಬೇಡುವಂತಿಲ್ಲ. ಬ್ರಹ್ಮಚಾರಿ ಸನ್ಯಾಸಿಗಳಿಗೇ ಅದರ ಅಧಿಕಾರ. ಮಹಾಬಲಿಯನ್ನು ಮರುಳುಗೊಳಿಸಬೇಕಾದರೆ ಅತನ ಆ ದರ್ಪದ "ಇಂದ್ರನನ್ನೂ ಸೋಲಿಸಿ ಇಲ್ಲಿನ ಅಲ್ಲಿನ ಉಭಯ ಸಾಂರಾಜ್ಯಕ್ಕೆಲ್ಲಾ ತಾನೇ ಚಕ್ರವರ್ತಿ" ಎಂಬ ಮಹಾತ್ವಾಕಾಂಕ್ಷೆಗೆ ಭಿಕ್ಷಾಚಕ್ರವರ್ತಿ ವಾಮನನೇ ಸರಿಯಾದ ಎದುರಾಳಿ! ಅದಕ್ಕಾಗಿ ಶ್ರೀ ಹರಿವಕ್ಷಸ್ಥಳ ನಿತ್ಯವಾಸ ರಸಿಕಳಾದವಳನ್ನು ಮುಚ್ಚಿಡಲು, ಮಾನ್ ಕೊಣ್ಣ ತೋಲ್ = ಜಿಂಕೆ ತನ್ನ ಹೊದ್ದಿಕೆಯಾಗಿಸಿಕೊಂಡಿದ್ದ ಆ ಚರ್ಮದಿಂದ ಅಂದರೆ - ಕೃಷ್ಣಾಜಿನದಿಂದ - ಲಕ್ಷ್ಮಿಯನ್ನು ಮರೆಸಿಕೊಂಡ ಮಾರ್ವಿಲ್ = ಎದೆಯುಳ್ಳ, ಮಾಣಿಯಾಯ್ = ಮಾಣಿ ಬ್ರಹ್ಮಚಾರಿವಟುವಾಗಿ! ಮಾರ್ವಿಲ್ = ತನ್ನ ವಕ್ಷ ಸ್ಥಳದಲ್ಲಿ, ಮಾನ್ ಕೊಣ್ಣತೋಲ್ ಮಾಣಿಯಾಯ್ ಹೀಗೆ ಅನ್ವಯ ಸುಕರ. ಈ ಬ್ರಹ್ಮಚರ್ಯಾಶ್ರಮದಲ್ಲಿ ಬರದಿದ್ದರೆ, ಅದೂ ಎಳೆ ಬ್ರಹ್ಮಚಾರಿ! ಗಟ್ಟಿನಾಗಿದ್ದರೂ, ಸನ್ಯಾಸಿಯಾಗಿ ಬಂದಿದ್ದರೂ ಇಷ್ಟೊಂದು ಆಕರ್ಷಣೆ ಬಲಿಗೆ ಬರುತ್ತಿರಲಿಲ್ಲ! ಭೂದಾನ, ಸ್ವರ್ಗದಾನವನ್ನೂ ನೀಡುತ್ತಿರಲಿಲ್ಲ. ಮಾವಲಿ = ಮಹತ್ವವುಳ್ಳ ಬಲಿರಾಯ. ಏನು ಮಹತ್ವ? ದಾನ ಶೀಲತೆ ಎಂಬ ಗುಣದಿಂದ ಹಿರಿತನ ಅತನಿಗಿತ್ತು. ಆ ಮಹಾಬಲಿ ಉಭಯ ಲೋಕ ಚಕ್ರವರ್ತಿ ಸಾರ್ವಭೌಮನಿಂದ, ಮಣ್ ತಾನ್ ಕೊಣ್ಣು = ಮುಖ್ಯವಾಗಿ ಲೋಕದ ಒಡೆತನವನ್ನೇ ಇಚ್ಛಾಪೂರ್ವಕ ಏನೂ ಬಲಾತ್ಕಾರ ಹಿಂಸೆ ಯುದ್ಧ ಕಾನೂನಿಲ್ಲದೆ ತಾನು ಖುದ್ದಾಗಿ ಸ್ವೀಕರಿಸಿ. ದೇವರೊಬ್ಬನೇ - ವ್ಯಾವಹಾರಿಕವಾಗಿಯೂ ಸಮಷ್ಟಿ ಸಮಾಜವೊಂದೇ - ಒಡೆತನವುಳ್ಳ ಘಟಕ. ಅದು ಸರ್ವಸಮ್ಮತಿ ಸಹಿತ! ಬಹ್ವಲ್ಪಮತದ ಪದ್ಧತಿ ಅನಧ್ಯಾತ್ಮ ವಿಚಾರ. ಭಗವಂತ, ಹಾಗೂ ಸರ್ವ ಸಂಮತ ಒಕ್ಕೂಟವಲ್ಲದ ಯಾವುದೇ ಉಳಿದವು ತಮ್ಮ ಕಾಲಿನಿಂದ, ಸರಪಣಿಗಳಿಂದ ಭೂಮಿಯನ್ನಳೆಯಲಾಗುವುದಿಲ್ಲ. ನಕ್ಷೆಗಳೆಲ್ಲಾ ಒಂದಂದಾಜಷ್ಟೆ! ಅಂತೆಯೇ ವ್ಯಕ್ತಿ ಸಂಘ ಸಂಸ್ಥೆ, ಸರಕಾರ ಭೂಮಿಗೆ ಒಡೆಯರಾಗದು. ದಿವ್ಯದೇಶ ಗ್ರಾಮ ಸಂಸ್ಥೆಯೊಂದೇ ಸರ್ವಸಂಮತಿ ಪಡೆದೇ, ರಾಗದ್ವೇಷವಿಮುಕ್ತವಾಗಿ ಭೂಮಿಗೆ ವ್ಯವಸ್ಥಾಪಕ, ರಾಜ್ಯ, ದೇಶಗಳೂ ಒಡೆತನವನ್ನು ಹೊಂದಬಾರದು. ಗ್ರಾಮ ಗ್ರಾಮಗಳು ದೇವಸ್ಥಂ ಸೇವೆಗೆ ಕ್ಷೇತ್ರ. ಚಿಂತನೆಗೆ ಸರ್ವಾವಿರೋಧಿ ಜಗತ್ತೇ ಕ್ಷೇತ್ರ. ಕಲಿಯುಗದಲ್ಲಿ "ಯುದ್ಧ" ಕಾಲಬಾಹಿರ. ವಿಜ್ಞಾನ ತಂತ್ರಜ್ಞಾನಗಳು ಮಾನವನ ಸರ್ವಭೂತಗಳ ಉಳಿವಿಗಾಗಿಯೇ ಹೊರತು ಅಳಿವಿಗಾಗಿಲ್ಲ. ಎಲ್ಲರ ಎಲ್ಲಾ ಧನ, ಶ್ರಮ, ಬುದ್ಧಿಶಕ್ತಿಗಳೂ ಇತರರ ಕ್ಷೇಮಕ್ಕಾಗಿಯೇ. "ಮಣ್ಣನ್ನು ತಾನೇ ಕೊಂಡದ್ದು" ಎಂಬುದರಿಂದ ಸೂಚ್ಯವಾಗಿ ಈ ಅರ್ಥವಿಶೇಷ ಇಲ್ಲಿ ಗಮನಾರ್ಹ.

ತಾಳಾಲ್ = ಭೂ ಸೇವಕರು ಯಾವ ಪಾದಗಳಿಂದ ಸೃಷ್ಟರಾದೆವೋ ಅಂತಹ ಪಾದಗಳು. ಅಳನ್ದ = ಅಳೆದವಷ್ಟೆ. ದೇವರ ಬಹಿರ್‌ವ್ಯಾಪ್ತಿ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಆದುದರಿಂದಲೇ, ಪೆರುಮಾನ್ಯೆ = ಮಹತೋಮಹೀಯನನ್ನು ಸರ್ವಲೋಕಾಧಿಪತಿಯನ್ನು ತಿರುಮಂಗೈಯಾಳ್ವಾರ್ ಕಂಡದ್ದೆಲ್ಲಿ? ಆ ಕಾಲದಲ್ಲಿ ಮಾತ್ರ ಅಭಿವ್ಯಕ್ತನಾದ ಕುಳ್ಳಮಾಣಿ. ತ್ರಿವಿಕ್ರಮನಾಗಿ! ತೇನ್ ಕೊಣ್ಣು = ಸಿಹಿ ನೀರುಳ್ಳ, ಶಾರಲ್ = ಗಿರಿಝರಿಗಳು ಹೇರಾಳವಾಗಿ ಹರಿಯುವ ತಿರುವೇಙ್ಗಡತ್ತಾನ್ಯೆ = ಶ್ರೀ ವೇಂಕಟಪರ್ವತ ಪ್ರದೇಶದಲ್ಲಿ ತಂಪಾದ ಗಿರಿಪರಿಸರದಲ್ಲಿ, ಆಯಾಸ ಪರಿಹಾರಕ್ಕಾಗಿ ಮಧುಪರ್ಕ ಸೇವಿಸಲೋ ಎಂಬಂತೆ ಬಂದು ನಿಂತಿರುವವನನ್ನೇ. ನಾನ್ ಶೆನ್ನು ನಾಡಿ, ನಾನ್‌ನಾಡಿಶೆನ್ನು = ಮೊದಲಿಂದಲೂ ಬ್ರಹ್ಮಸಂಶೋಧನಾ ವೃತ್ತಿಯಾದ **ವಾಡಿನೇನ್ ವಾಡಿ ನಾಡಿನೇನ್ ನಾಡಿ ನಾನ್ ಕಣ್ಣುಕ್ಕೋಣ್ಡೀನ್ "ನಾರಾಯಣಾ ಎನ್ನುಮ್‌ನಾಮಮ್"** ಈ ಅಳ್ವಾರರದಷ್ಟೆ! ಆಗ ಸರ್ವಾರ್ಥಾಂತರ್ಗತವಾಗಿಸಿಕೊಂಡ ಶ್ರೀ ಮದಷ್ಟಾಕ್ಷರೀ ಮಂತ್ರಮಯ ಸರ್ವಶಬ್ದ ಸಮನ್ವಯ! ಈಗ ಮಂತ್ರದ ಸುಲಭಾರ್ಥ ಅರ್ಚಾಬ್ರಹ್ಮ ಸಮನ್ವಯ. ವಾಮನನ ದರ್ಶನವಾಗಲಿ ತ್ರಿವಿಕ್ರಮನ ದರ್ಶನವಾಗಲಿ ತಿಮ್ಮಪ್ಪನ ದರ್ಶನವಾಗಲಿ, ನನಗೀಗ, ನರ್ಯೆಯೂರಿಲ್ = ತಿರುನರ್ಯೆಯೂರ್ ದಿವ್ಯದೇಶದಲ್ಲಿ! ಏನು ಕಡಿಮೆ? ಬ್ರಹ್ಮ ಸ್ವರೂಪದಂತೆಯೇ ಅಯಾಯಾ ಸ್ವೇಚ್ಛಾಸ್ವೀಕೃತ ರೂಪಗಳೂ ದಿವ್ಯ, ಸಾರ್ವಕಾಲಿಕ, ಸಾರ್ವದೈಶಿಕ, ದೇಶ, ಕಾಲ, ವ್ಯಕ್ತಿಶಃ ಏನೊಂದೂ ವಿರೋಧವಿಲ್ಲದೆ ಇರುವುದೇ ಸರ್ವಸಮನ್ವಯಾಽಧಿಷ್ಠಾತೃ ಪರದೇವತೆ. ಅದನ್ನು ಹಿಡಿದೂ ನಾವೇಕೆ, ಅತ್ಯನ್ತಿಕ ದ್ವೈತಭೇದರೂಪಿ ವಿರೋಧಗಳನ್ನು ಭಾವಿಸಿ, ಅಪೃಥಕ್ ಸಿದ್ಧಿಯನ್ನು ಮರೆತು, ಸ್ವರೂಪ ಭಂಗ, ಮೂರ್ತಿ ಭಂಗವಾಗುವಂತೆಸಗಬೇಕು? "ಸರ್ವಯೋಗ ವಿನಿಃ ಸೃತ ಅತ" ಉಪಾಸಕರ ಉಪಾಸನೆ ಅವರಿವರಿಗಷ್ಟೆ. ಅದನ್ನು ದೇವರು ಬೇಡವೆನ್ನನು. ಅದು ಅವರವರ ಜ್ಞಾನದ ಬೆಳಕು. ಅವೆಲ್ಲವನ್ನೂ ಮೀರಿದವನೇ ಸ್ವಾಮಿ. **"ಪೆರ ಮುಯನ್ನಾರ್ ಇಲ್ಲೆಯಾಲ್ ಎಮ್ಬಿರಾನ್ ಪೆರುಮೈಯಿಯೇ"** ತಿ ವಿ. ಳಳ.

ಶೋಭೆಯಿಂ ಬೆಳೆದೇ ಇಹ ಚಿಲುವೂ ನಾಮವು ರೂಪೂ ಇವುಯಿವು ಎನು
ಸ್ತೋಪಾಸಕರ್ ಧ್ಯಾನದಸಲು ಪೇಳಿದರೂ. ಅಲ್ಲೆಡೆಯೆಲ್ಲಾ
ಬೆಳೆಮಿಗೆ ಮಾನಸದರಿವಿನ ಬೆಳಕಾಗುತ ನಿಲ್ಲುವುದಲ್ಲೇ ಒಂದನೂ
ಅಳೆಯಲು ಪೂರಾ ಯತ್ನಿಪರಿಲ್ಲಾ ಎನಿಗಿದವಂತುಪಕರಿಸದನ್ ಪೆರ್ಮೆ!

ಇದೋ ಕಣ್ಣೆನೇ = **"ಪೂರ್ಣಂ ಬ್ರಹ್ಮ ಸನಾತನಮ್"** ಇಂತಹವನೇ ತನ್ನ ಅರ್ಚಾಮೂರ್ತಿಯಾಗಿ ಸೇವೆ ಕೊಡುತ್ತಿರುವಾಗ ನಾನದನ್ನು ಅಮೇಲೆ ಚೈತನ್ಯ ಶಕ್ತಿಯಿಂದ ಅತುಕೊಂಡು "ಅನುದರ್ಶನ" ಮಾಡುತ್ತಿದ್ದೇನೆ. ಜೀವಾತ್ಮರದೆಲ್ಲಾ "ಅನುಪಶ್ಯತಿ" "ಅನುಭವ"ಗಳೇ ಹೊರತು, ಸ್ವತಂತ್ರ ಪ್ರಪ್ರಥಮ ಸಾರ್ವಭೌಮ ದರ್ಶನ, ಜ್ಞಾನ ಇತ್ಯಾದಿ ಎಲ್ಲಾ ಸರ್ವೇಶ್ವರನದೇ! ಸೃಷ್ಟಿ ಕಾಲಿಕ

ಕ್ರಿಯಾವಸ್ಥೆಯಲ್ಲಿ ಜೀವಾತ್ಮ ದ್ವಾರಾ ಆದುದು, ಜ್ಞಾನ ದರ್ಶನ ಕಾಲದಲ್ಲಿ ಪರಮಾತ್ಮ ದ್ವಾರಾ ಆಗುವ ಉಭಯ ಸಮನ್ವಯದ ಸೊಬಗೂ ಇಲ್ಲಿ ಎದ್ದು ಕಾಣುತ್ತದೆ. ಆಗ ಕಾರಣಬ್ರಹ್ಮಕ್ಕೇ ಅನುಪ್ರವೇಶ. **'ಅನೇನ ಜೀವೇನ ಆತ್ಮನಾ ಅನುಪ್ಪವಿಶ್ಯ ನಾಮರೂಪೇ ವ್ಯಾಕರವಾಣಿ'** ಒಂದು ವಸ್ತುವಿಗೆ ಹೆಸರು, ಆಕಾರ ಕೊಡಬೇಕಾದರೆ, ಸ್ಪಷ್ಟಾ ಅದವನು ಒಂದು ಜೀವಾತ್ಮನನ್ನು ಮುಂದಿಟ್ಟೇ ನಾಮರೂಪಗಳನ್ನು, ವಿಶೇಷವಾಗಿ ಸಮಗ್ರವಾಗಿ ನೀಡುವನು. ಆ ಜಗಚ್ಚಿಲ್ಪಿಯ ಸೃಷ್ಟಿಯಲ್ಲಿ ಪ್ರತಿಯೊಂದೂ, ಭೌತಿಕ, ಆತ್ಮಿಕ ಪರಬ್ರಹ್ಮಾತ್ಮಕವೇ. ಇದು ಮಾನವನಿಗೆ ಮನದಟ್ಟಾಗಬೇಕು. ಇದಿಲ್ಲದ ಯಾವೊಂದು ಮೇಲು ಮೇಲಿನ ವ್ಯವಹಾರಗಳೂ ಅವ್ಯವಹಾರಗಳಷ್ಟೇ ಅಲ್ಲ! ಮಹಾನರ್ಥಕಾರಿಗಳು. ಜಡದಲ್ಲೂ ಚೈತನ್ಯವಿರುವುದನ್ನು ವಿಜ್ಞಾನವೂ ಒಪ್ಪಿದೆ. ಬ್ರಹ್ಮವೂ ಉಂಟೆಂಬುದನ್ನು ಮುಂದೆ ಮುಂದೆ ವಿಕಾಸವಾಗುತ್ತಾ ಒಪ್ಪಿಯೇ ತೀರಬೇಕಾಗುತ್ತದೆ. ಇದರ ಸೂಚನೆ, ಮಹಾವಿಜ್ಞಾನಿ ಐನ್‌ಸ್ಟೀನನಿಂದಲೇ ಆರಂಭವಾಗಿದೆ. ಚಿತ್ ಅಚಿತ್ ಈಶ್ವರ ಈ ತ್ರಿವೇಣಿಯೇ ಕೂಡಲಸಂಗಮವೇ ಜಗತ್ತು. ಋಷಿಗಳ ದರ್ಶನ ಕಾಲದಲ್ಲಿಯೂ ಇದನ್ನೇ ನಾವು ಕಾಣುವುದು. ಈಶಾವಾಸ್ಯೋಪನಿಷತ್ತಿನಲ್ಲಿ ದೇವರು ನಮ್ಮ ಮೇಲೆ, ಔಚಿತ್ಯದಿಂದ ತನ್ನದೇ ಅದ ಕಟಾಕ್ಷರಶ್ಮಿ ಬೀಳಿಸಿದ ಮೇಲೆಯೇ, ಆ ದಿವ್ಯ ರೂಪವನ್ನು ನೋಡುವುದು.

ಪೂಷನ್! ಏಕಋಷೇ! ಯಮ! ಸೂರ್ಯ! ಪ್ರಾಜಾಪತ್ಯ! ವ್ಯೂಹ ರಶ್ಮೀನ್! ಸಮ್‌ಊಹ ತೇಜಃ ಯತ್ ತೇ,
ರೂಪಂ ಕಲ್ಯಾಣತಮಂ ತತ್ ತೇ ಪಶ್ಯಾಮಿ; ಯಃ ಅಸಾವಸೌ ಪುರುಷಃ, ಸೋಽಹಮಸ್ಮಿ!

ಕನ್ನಡ ನೆರಳ್

ಏ ಪೂರ್ಷ! ಏಕಋಷೀ! ಯಮ! ಸೂರ್ಯ! ಪ್ರಜೆಯೊಡೆಯರವನೇ!
ಅಣಿಗೊಳಿಸಿಡು ಕಿರಣಗಳಂ, ಒಗ್ಗೂಡಿಸು ತೇಜವನೂ; ಅವುದು ನಿನ
ನಲ್ ರೂಪವೋ, ಅದ ಕಾಣುವೆನ್ ನಿನದೈ!;
ಆವೀವೀ ಪುರುಷನೊ, ಅವನಾನಾಗಿಯೆ ಇಹೆನೈ.

ತಮಿಳ್ ತಿರಳ್ ೭-೧-೩

ತಾರೇನ್ ಪಿರಕ್ಕುನ್ನರುಳ್ ಎನ್ನಿಡೈ ವೈತ್ತಾಯ್ ಆರೇನ್ ಅದುವೇ ಪರುಹಿ ಕ್ಕಳಿಕ್ಕಿನ್ನೇನ್
ಕಾರೇಯ್ ಕಡಲೇ ಮಲೈಯೇ ತಿರುಕ್ಕೋಟ್ಟಿಯೂರೇ ಉಹನ್ದಾಯೈ ಉಹನ್ದಿಯೇನೇ

ಕನ್ನಡ ನೆರಳ್

ತಾರೆನು ಪರರಿಗೆ, ನಿನ್ನ ಅಮೋಘ ಕರುಣಾ ವಾಹಿನಿಯಂ ಎನ್ಮೇಲ್ ಹರಿಸಿಟ್ಟೆ ಆರೆನು ತೃಪ್ತಿಯನೆಂದೂ, ಅದನೇ ಕುಡಿಯುತಲಾನಂದಿಪೆನ್ನೆ
ಕಾರ್‌ಪೋಲುವ ಕಡಲೊಳೆ ಮಲೆಯೊಳೆ ತಿರುಕ್ಕೋಟ್ಟಿ ಊರ್‌ಒಳೇ ಸಂತಸದಿಂದಿಹ ನಿನ್ನಂ ಆಸೆಯ ಪಡು ದಾಸನಿದೋ

ಅರ್ಚಾಪರಿಪೂರ್ಣ ಮೂರ್ತಿಗಳಲ್ಲೂ, ಅವನನ್ನು ಕಾಪಾಡಿಕೊಂಡು ಅತನಿಗೂ ಆಶ್ರಯ ನೀಡಿರುವ ವಿಶ್ವದ ಭೂ ಭಾಗಗಳಾದ ಅಯಾಯಾ ಯಾತ್ರಾಸ್ಥಳಗಳಲ್ಲೂ, ಅತಿಪ್ರವಣರಾದವರು ಈ ತಿರುಮಂಗೈ. ಜೀವ ಈಶ್ವರರ ಶೇಷ ಶೇಷಿ ಭಾವಜ್ಞಾನ ಹೊಂದಿದ್ದರೂ, ಕಾಯಕ ಕೈಂಕರ್ಯ ಲಾಭಕ್ಕಾಗಿ ಹಿಂದೆಲ್ಲಾ ಅಕ್ರಂದಿಸಿದ್ದು. **"ಸೌಭರಿ ಎಂಬ ಋಷಿಯೇ ಅನೇಕ ಶರೀರ ಪ್ರವೇಶ ಮಾಡಿ ಐವತ್ತು ಮದದಿಯರಿಗೂ ವಿಕಕಾಲದಲ್ಲಿ ತೋರಿಕೊಂಡಿರುವಾಗ, ನಿಮ್ಮಂತಹವರಿಗಾಗಿಯೇ ಸರ್ವಶಕ್ತ ಸರ್ವಸುಲಭನಾಗಿ ಅದೆಷ್ಟು ದಿವ್ಯಧಾಮಗಳಲ್ಲಿ ಇದ್ದೇನೆ"** ಎಂದು ಕೈಂಕರ್ಯ ಸ್ವೀಕರಿಸುವ ಪ್ರಭು ಆಶ್ವಾಸನೆ ನೀಡಿದ. ಅದರಿಂದಲೇ ಈ ಶರಣರು ಸರ್ವಲಾಭವನ್ನೂ ಹೊಂದಿದಂತೆ ತಮ್ಮನ್ನು ಭಾವಿಸಿ ಆ ಸೇವಾನುಸ್ಯೂತಿಯ ನಡುನಡುವೆ ಎಡರು ತೊಡರಿಲ್ಲದೆ ಅನವರತ ಅಖಂಡ ಬೆಳೆಬೆಳೆಯುತ್ತಿರುವಂತೆ ಆಗಲು ಬೇಡುತ್ತಾರೆ. ಹಾಗಾಗದಿರಲು ಈ ಸಂಸಾರದ ಜನ್ಮ ಪರಂಪರೆಯೇ ಮುಖ್ಯ ಕಾರಣ. **"ಪುನರಪಿ ಜನನಂ ಪುನರಪಿ ಮರಣಮ್"** ಆಗುತ್ತಿರುವವರೆಗೂ ಕೈಂಕರ್ಯಕ್ಕೆ ವಿಘ್ನುಪರಂಪರೆಯೂ ತಪ್ಪಿದ್ದಲ್ಲ. ಆದುದರಿಂದ ಮತ್ತೆ ಹುಟ್ಟದಂತೆ ಕರುಣಿಸಬೇಕೆಂದು ದೇವನ ಪರಿಪೂರ್ಣ ಕೃಪೆಯನ್ನು ಈ ದಶಕದಲ್ಲಿ ಬೇಡುತ್ತಾರೆ.

ಹಿಂದಿನ ೨ ಹಾಡುಗಳಿಂದಲೂ "ನೀನೇ ಸ್ವಾಮಿ, ನಿನ್ನ ಸ್ವತ್ತಾದ ಈ ಪರತಂತ್ರ ದಾಸನನ್ನು, ಕೈಂಕರ್ಯ ಪ್ರತಿಬಂಧಕಗಳಿಂದ ಬಿಡಿಸದೆ ಇದ್ದರೆ, ಸ್ವಾಮಿಯಲ್ಲದವರು ಹೋಗಲಾಡಿಸುವರೇ? ನಾನೇನೂ ನಿನಗೆ ಎದುರು ಹಾಯ್ದು ಹೋದವನಲ್ಲ" ಎಂದವರು ಈ ಮೂರನೆಯ ಪಾಶುರದಲ್ಲಿ ತಮಗೆ ಒಡೆಯ ಗೈದ ವಿಶೇಷ ಕೃಪೆಯನ್ನು ಮತ್ತಾರಿಗೂ ಹಂಚಿಕೊಡಲಾರೆ! ಎನ್ನುತ್ತಾರೆ. ಭಾವವೇನೆಂದರೆ, ಕೆಟ್ಟು ಅತಿ ಭ್ರಷ್ಟರಾಗಿದ್ದ ತಮ್ಮ ಮೇಲೆ ಇದೇ ಜನ್ಮದಲ್ಲಿ ಆ ಪರಮ ಕೃಪಾಸಿಂಧುಗೈದ, ವೈದಿಕ ಲೌಕಿಕ ಉಭಯ ವಿಲಕ್ಷಣವಾದ ದಯೆಯನ್ನು

ಸ್ತುತಿಸುವುದೇ ಆಗಿದೆ. ತನ್ನಂತಹ ಭ್ರಷ್ಟಾತಿಭ್ರಷ್ಟ ಯಾರೊಬ್ಬರೂ ಇಲ್ಲ! ಎಂಬ ವಿನಯವೂ ಇಲ್ಲಿನ ರಹಸ್ಯ. ಇದನ್ನೇ ವೇದಾಂತ ದೇಶಿಕರು "ಅಪರಾಧ ಚಕ್ರವರ್ತಿ ತಾನೆಂದು" ದಯಾಶತಕದಲ್ಲಿ ಅನುಸಂಧಿಸಿದ್ದಾರೆ. ಪ್ರಾಯಃ ಆಚಾರ್ಯರ ಗ್ರಂಥ ಭಾವಗಳೆಲ್ಲಾ ಆಳ್ವಾರರ ಮಹಾಪ್ರಸಾದಗಳೇ! ಆಳ್ವಾರ್‌ಗಳಲ್ಲೆಲ್ಲಾ ಕಡೆಕುಟ್ಟಿ ಈ ತಿರುಮಂಗೈಗಳು. ಈ ಸಂತರಂತೆ ಮತ್ತಾವ ಆಳ್ವಾರ್ ಶರಣರೂ ಇಲ್ಲವೆನ್ನಬಹುದು. ಪೊಯ್ ಹೈಯಾರ್ ಪೂದತ್ತಾರ್ ಪೇಯಾರ್ ತಿರುಮಳಿಶೈ, ಕುಲಶೇಖರ, ಪೆರಿಯಾಳ್ವಾರ್, ಗೋದೆ, ತಿರುಪ್ಪಾಣಿ, ಮಧುರ ಕವಿ ಈ ೯ ಮಂದಿಯೂ ಸಹ ನಿತ್ಯ ಶಿಷ್ಟರಾದವರೇ. ನಮ್ಮಾಳ್ವಾರ್ ಪೂರ್ವಜನ್ಮಗಳಲ್ಲೆಲ್ಲಾ ಭ್ರಷ್ಟರಾಗಿದ್ದು ಇಹಜನ್ಮದಲ್ಲಿ ಶಿಷ್ಟರಾದವರು. ತೊಂಡರಡಿಪ್ಪೊಡಿ, ಶಿಷ್ಟ ಭ್ರಷ್ಟ ಶಿಷ್ಟರು ಈ ೧೧ ಆಳ್ವಾರುಗಳಿಗಿಂತ ವಿಲಕ್ಷಣರೆಂದರೆ, ಇಹಜನ್ಮ ಭ್ರಷ್ಟರಾಗಿದ್ದು ಇಹಜನ್ಮದಲ್ಲೇ ಬಹು ಶಿಷ್ಟರಾದವರು ಇವರೋರ್ವರೇ! ಆದುದರಿಂದ ಪರಮ ಪರಮ ದಯಾಳು ಶ್ರಿಯಃಪತಿಯ ಕೃಪೆಯನ್ನು ಮತ್ತಾರಿಗೆ ತಾನೇ ಇವರು ನೀಡಲು ಸಾಧ್ಯ? **"ಎನಗಿಂತ ಕಿರಿಯರಿಲ್ಲ. ಶರಣರಿಗಿಂತ ಹಿರಿಯರಿಲ್ಲ. ನಾನೋರ್ವನೇ ಅಂತ್ಯಾಂತ್ಯ!" "ಎನ್ ಇಡ್ಯೆ ಪೈತ್ತಾಯ್ ಉನ್ ಅರುಳ್ ಪಿರರ್‌ಕ್ಕು ತಾರೇ"** ಪರಮ ನೀಚಾತಿ ನೀಚನಾದ ನನ್ನಲ್ಲಿ ನೀನಾಗಿಯೇ ನೀನೇ ಇಟ್ಟ ಪರಮ-ಕರುಣೆಯನ್ನು ದಾಸನಿಗಿಂತ ಶ್ರೇಷ್ಠತಮರಾದವರಿಗೆ ಹೇಗೆ ಹಂಚಲಿ? ಆರೇನ್ = ನಿನ್ನೀ ವಿಶಿಷ್ಟತಮ ಕೃಪೆಯನ್ನು ಅತುಕೊಂಡು ಎಷ್ಟು ಕುಡಿಯುತ್ತಿದ್ದರೂ ನನಗೆ ತೃಪ್ತಿ ತಾರದು, ಪರುಹಿ = ಮೇಲ್ ಮೇಲೆ ನಿನ್ನ ದಯಾಮೃತವನ್ನು ಕುಡಿದೂ ಕುಡಿದೂ, ಕಳಿಕ್ಕಿನ್ನೇನ್ = ಇನ್ನೂ ಪರಮಸಾತ್ವಿಕ ಮದವೇರುತ್ತಿದೆ ಎನಗೆ! ಅಪುನರ್ ಜನ್ಮಕರವಾದ ನಿನ್ನ ದಯೆಗೆಪಾತ್ರ ನಾನು. ಆ ಪಾಶಹಸ್ತರಾದ ಯಮಾದಿಗಳ ತಲೆಮೇಲೆ ಇದೋ ಹಾಯುವೆನು **"ಇನ್ನು ಜನ್ಮ ಮರಣ ಚಕ್ರ ಎನಗಿಲ್ಲ."** ಎಂದು ತೊಂಡರಡಿಪ್ಪೊಡಿ ಆಳ್ವಾರರೂ ಉದ್ಗಾರ ಮಾಡಿದ್ದಾರೆ.

ನನಗಾಗಿ ನೀನು ಎಷ್ಟೊಂದೆಡೆಗಳಲ್ಲಿ ಬೀಡು ಮಾಡಿದ್ದೀಯೆ! ಕಾರೇಯ್ ಕಡಲೇ = ಮೋಡಗಳಿಗೆ ಕಾರಣವಾದ ಕಡಲೇನು, ಮಲೈಯೇ = ಬಾಲಾಜಿಯ ತಿರುಮಲೆಯೇನು, ತಿರುಕ್ಕೋಟ್ಟಿಯೂರೇ = ಎಂಬ ದಿವ್ಯದೇಶವೇನು. ಇಲ್ಲೆಲ್ಲಾ ನಿತ್ಯಾವಾಸಿಯಾದವನೇ! ಉಹನ್ದಾಯ್ = ಇಲ್ಲೆಲ್ಲಾ ಗೈದ ಪ್ರೇಮಾತಿಶಯವನ್ನೆಲ್ಲಾ ನನ್ನ ಮೇಲೆಯೇ ಮಾಡುತ್ತಿರುವ ನಿನ್ನನ್ನು, ಉಹನ್ದು = ಅನುಸರಿಸಿಯೇ ಪ್ರೀತಿ ಮಾಡಿರುವ, ಅಡಿಯೇನೇ = ಈ ದಾಸನೋರ್ವನೇ ನೀ ಮಾಡಿದ ಇತರ ವಿಲಕ್ಷಣ ಮಹೋಪಕಾರವನ್ನು ನಾನೆಂತು ಮರೆಯಲು ಸಾಧ್ಯ? "ಅಭಯಂ ಸರ್ವಭೂತೇಭ್ಯಃ" ಎಂದ ಶ್ರೀರಾಮನಂತೆಯೂ, "ಮಾ ಶುಚಃ" ಎಂದು ಸಂತೈಸಿದ ಕೃಷ್ಣ ಭಗವಾನಂತೆಯೂ ಸಂತೈಸಪ್ಪಾ ನನ್ನನ್ನೂ. ನನಗಾಗಿಯೇ ಪೋಷಕ ರಶ್ಮಿ ಏಕೈಕ ದರ್ಶನ ರಶ್ಮಿ, ನಿಯಮನ ರಶ್ಮಿ ಪ್ರೇರಕ ರಶ್ಮಿ ಪ್ರಾಚಾಪತ್ಯ ರಶ್ಮಿಗಳಿಂದ ಆ ಮಹರ್ಷಿಗಳಿಗೆ ದರ್ಶನ ನೀಡಿದ ಕಲ್ಯಾಣತಮ ರೂಪಧಾರಿಯಾದ ನಿನ್ನನ್ನು ಇದೋ ಅನುದರ್ಶಿಸುತ್ತಿದ್ದೇನೆ. **"ನ ಚ ಪುನರಾವರ್ತತೇ"** ಪುನರ್‌ಜನ್ಮ ನಿವೃತ್ತಿಗೆ ಇನ್ನೇನು ನನಗೆ ಕೊರತೆ? **"ಅನಾವೃತ್ತಿಃ ಶಬ್ದಾತ್"** ವೇದದ ಪ್ರಾಮಾಣ್ಯದಿಂದ ಅಲ್ಲಿ ಅಪುನರ್‌ಜನ್ಮದ ಜ್ಞಾನವಷ್ಟೆ. ಈಗ ಈ ದಾಸನಿಗೆ ನಿನ್ನ ಪ್ರತ್ಯಕ್ಷ ಅರ್ಚಾಮೂರ್ತಿ ಕಟಾಕ್ಷದಿಂದಲೇ, ಪುನರ್‌ಜನ್ಮ ನಿವೃತ್ತಿ

ತಮಿಳ್ ತಿರಳ್ ೭-೩-೫

ಆಜ್ಞು ವೆನ್ ನರಹತ್ತಳುನ್ದುಮ್ ಪೋದು ಅಞ್ಜೀಲ್ ಎನ್ನು ಅಡಿಯೇನ್ನೈ ಅಜ್ಞೇ ವನ್ದು
ತಾಜ್ಞು ತಾಮರೈಯನ್ನ ಪೊನ್ನಾರ್ ಅಡಿ ಎಮ್ಬಿರಾನ್ನೈ ಉಮ್ಬರ್ ಕ್ಕಣಿಯಾಯ್ ನಿನ್ನ
ವೇಜ್ಞಡತ್ತರಿಯೈ ಪರಿಕೀರಿಯೈ ವೆಣ್ಣೈಯುಂಡುರಲಿನಿಡೈ ಆಪ್ಪುಣ್ಡ
ತೀಜ್ಞಿರುಮ್ಬಿನ್ನೈ ತೇನೈ ನನ್‌ಪಾಲಿನ್ನೈಯನ್ನಿ ಎನ್ ಮನಮ್ ಶಿನ್ನೈ ಶೆಯ್ಯಾದೇ

ಕನ್ನಡ ನೆರಳ್

ಅಂತಹ ವುರಿ ನರಕದಿ ಯಾತನೆ ಪಡುವಂದು ಅಂಜಲು ಬೇಡೆಂದಡಿ ದಾಸನ ಬಳಿಗಿಲ್ಲೇ ಧಾವಿಸಿನಿಂದು
ಅಂತೆಯೇ ಆತೇ ಕೊಳ್ಳುವ ಸುಂದರ ಪಾವನ ತಾವರೆ ಹೋಲುವ ಹೊನ್ನಡಿಯನಂ
ಎನ್ ಸಹಜ ಸಹಾಯನಂ ಸೂರಿಗಳ್ ಭೂಷಣಮಾಗಿಯೇ ನಿಂದಿಹನಂ ವೇಂಕಟದುನ್ನತಗಿರಿಹರಿಯಂ
ಕೇಶೀ ಕುದರೆಯ ಬಾಯ್ ಸೀಳಿದನಂ ಬೆಣ್ಣೆಯನುಂಡೊರಳಲಿ ಕಟ್ಟಿಸಿಕೊಂಡಾ ಸುಶೀಲ ಸುಭಗನಂ
ಜೇನ್ಕಬ್ಬಿನ ರಸನಂ ಮಧು, ನಲ್‌ಪಾಲ್ ಅಹನಂ ಅಲ್ಲದೆ ಬೇರೊಂದುಂ ಎನ್ ಮನ ಚಿಂತನೆ ಗೈಯ್ಯದಲಾ!

ನಮ್ಮಿಂದ ಭಯ, ದೇವರಿಂದ ಅಭಯ. ಆಸುರೀ ಸಂಪತ್ತಿಗೆ ಬಿದ್ದೆವೋ, ನಾನಾ ಬಗೆಯ ಭೀತಿಗಳು ನಮ್ಮಿಂದಲೇ ಅರ್ಜಿತಗಳು. ಉದಾಹರಣೆ ನಮ್ಮ ಕಣ್ಣುಮುಂದೆಯೇ ಬೇಕಾದಷ್ಟಿವೆ! ಪರರ ಆಪತ್ತಿನಿಂದಲೇ ನಮ್ಮ ಸಿರಿ ಸಂಪತ್ತು ಹೆಚ್ಚಿದಷ್ಟೂ ಭಯವೂ ಹೆಚ್ಚುವುದು. ಅನ್ಯಾಯಾರ್ಜಿತ ವಿತ್ತದಿಂದ ಅಂಜಿಕೆ ಪಡಲೇ ಬೇಕಾಗುತ್ತದೆ. ಅಹನ್ಯಹನಿ ಕಾಲಕ್ಷೇಪಕ್ಕೆಷ್ಟೋ ಅಷ್ಟೇ ನಮ್ಮ ಸ್ವಧರ್ಮದ ಹಾದಿಯಿಂದಲೇ

ಸಂಪಾದನೆ, ಅಂದಿನ ಖರ್ಚು ವೆಚ್ಚ ಎಂದಾದರೆ, ರಾತ್ರಿದಿಂರಂಗ ಎಂದು ನಿದ್ರಿಸಬಹುದು. ಕಳ್ಳರ ಭಯವೇನಿದೆ? ಸಮಾಜದಲ್ಲಿ ಮೂರರಲ್ಲಿ ಎರಡು ಪಾಲಿನವರಿಗೆ ಆಹಾರದ ಕೊರತೆ, ಉದ್ಯೋಗದ ಕೊರತೆ, ಬಟ್ಟೆ ಹಟ್ಟಿಯ ಕೊರತೆ ಸಚ್ಛಿಕ್ಷಣದ ಕೊರತೆ! ಇವುಗಳಿಗೆಲ್ಲಾ ನನ್ನ ಲೋಭವೇ ಕಾರಣ, ಎನ್ನುವುದೇ, ಧನಮದ, ವಿದ್ಯಾಮದ, ಕುಲಮದ, ಅಧಿಕಾರಮದ, ಭೂ ಮಾಲೀಕತ್ವದ ಮದ, ಹತ್ತಾರು ಕಂಪೆನಿ, ಹತ್ತಾರು ಮನೆ ಬಾಡಿಗೆ, ಲಂಚ ರುಷುವತ್ತು, ಒಂದೇ ಎರಡೇ ನಮ್ಮ ಸಾಮಾಜಿಕ ಸಮತೆಗೆ ಬದಲಾಗಿ ಅಸಮಾನತೆಯ ಮೌಲ್ಯಮಾಪನಗಳೆಂಬ ಪಾಪದಿಂದ ಭಯ ಕಟ್ಟಿಟ್ಟ ಬುತ್ತಿ. ಅದೇ ದೈವೀ ಸಂಪತ್ತಿ ಹೆಚ್ಚಿಸಿಕೊಂಡರೆ ಅಭಯ. ಭೂಮಿ, ಶ್ರಮ, ಹಣ, ವಿದ್ಯೆಗಳನ್ನು ಇಲ್ಲದವರಿಗೆ ನಾವಾಗಿಯೇ, ಸತ್ಕರಿಸಿ ಸತ್ ಪಾತ್ರದಲ್ಲಿದಾನ ನೀಡಿದರೆ, **"ದಾನೇನ ದ್ವಿಷನ್ತಃ ಮಿತ್ರಾ ಭವನ್ತಿ"** ವೇದವಾಕ್ಯ ಸುಳ್ಳಾಗುವುದೇ? ನಾನಾಗಿ ಉಮೇದುವಾರನಾಗಲಾರೆ, ಕ್ಷೇತ್ರದವರೇ ಸರ್ವಸಮ್ಮತಿಯಿಂದ ನನ್ನನ್ನು ಆಶೀರ್ವದಿಸಲಿ! ನಾನೂ ಐಚ್ಛಿಕವಾಗಿ ದಾರಿದ್ರ್ಯವನ್ನೇ ಆರಿಸಿಕೊಂಡು, ಇನ್ನೊಬ್ಬರಿಗಿಲ್ಲದ್ದು ನನಗೂ ಬೇಡ! ನಮ್ಮದು ಸಮಾಜನಿಷ್ಠಾ ಜೀವನ ಪದ್ಧತಿ, ದಾನ, ದಯಾಧರ್ಮ ಸತ್ಯ ಪ್ರೇಮಮಾರ್ಗದಲ್ಲೇ ಇದ್ದರೆ ಅಭಯ.

ಅಬ್ಗು = ಇಲ್ಲಿ ನಾನೇ ಪಾಪಚಿಂತನೆ, ಪಾಪವಾರ್ತಾಲಾಪ, ಪಾಪ ಕೆಲಸಗಳನ್ನೇ ಮಾಡಿ ಮಾಡಿ ಅದರ ಫಲ ಅನುಭವಿಸುವ ಯಮಲೋಕ. ವೆಮ್ = ಬಲು ಕ್ರೂರವಾದ, ನರಹತ್ತು = ನರಕಯಾತನೆಗಳಲ್ಲಿ, ಅಳುನ್ದುಮ್ = ಬಿದ್ದು ತೊಳಲಾಡುವ ಆ ದುರ್ಭರ ಸಮಯದಲ್ಲಿ. ಅಡಿಯೇನ್ಗೆ = ನಿನಗೆ ಸ್ವರೂಪತಃ ಶೇಷ ಭೂತನಾಗಿರುವ ನನ್ನನ್ನು, ಅಞ್ಜೀಲ್ = ಭಯಪಡಬೇಡಾ, ಎನ್ನು = ಎಂದು ಶ್ರೀಮುಖ ತೆರೆದು ಸಂತೈಸುವ ಭಾಷೆಯಲ್ಲಿ, ಅಬ್ಗೇ = ಆ ಯಮಯಾತನಾ ಸ್ಥಳಕ್ಕೇ, ವನ್ದು = ಧಾವಿಸಿ. ತಾಙ್ಗು = ಅತುಕೊಳ್ಳುವ, ತಾಮರೈ ಅನ್ನ = ತಾವರೆಯಂತಿರುವ, ಅಡಿ = ಸುಂದರ ಸುಕುಮಾರ ಪಾವನ ಭೋಗ್ಯತಮ ಇನ್ನೂ ಎಂಥದು? ಪೊನ್ ಆರ್ = ಸ್ವರ್ಣಮಯ ರಮಣೀಯ ವರೇಣ್ಯಘನ ಅಂತಹ ಶ್ರೀಪಾದಗಳುಳ್ಳ, ಪಿರಾನೈ = ಪರಮೋಪಕಾರಿಯಾದ ಸ್ವಾಮಿಯನ್ನು, ಉಮ್ಬರ್ಕ್ಕು = ಮೇಲ್ ಲೋಕದ ನಿತ್ಯಸೂರಿಗಳಿಗೆ, ಅಣಿಯಾಯ್ ನಿನ್ನ ಹಾಗೂ ಭಕ್ತರಿಗೆ ಅಲಂಕಾರದಂತೆ ನಿಂತಿರುವ, ವೇಙ್ಗಡತ್ತು ಅರಿಯೈ = ವೇಂಕಟಾಚಲದ ಪಂಚಾನನನನ್ನು, ಪರಿಕೀರಿಯೈ = ದುಷ್ಪಕೇಶಿ ಎಂಬ ಮಹಾವಾಜಿಯನ್ನು, ವೆಣ್ಣೈ ಉಣ್ಡು = ತನ್ನ ಸಾನ್ನಿಧ್ಯದಿಂದಲೇ ಹೆಚ್ಚುವರಿಯಾದ ಗೋ ನವನೀತವನ್ನು ಭಕ್ಷಿಸಿ. ಕೃಷ್ಣ ಪಾದಾರ್ಪಣಕ್ಕೆ ಮೊದಲು ಗೋಕುಲ ಬೃಂದಾವನಗಳ ಹಸುಗಳು ಬಡಕಲಾಗಿದ್ದವು **"ನಾರಾಯಣೇ ನಂದಕುಲಂ ಪ್ರವಿಷ್ಟೇ. ಗಾವಃ ಬಹುಕ್ಷೀರದುಘಾ ಬಭೂವುಃ"**. ಅದನ್ನೆಲ್ಲಾ ಮರೆತ ಗೋಪ ಗೋಪಿಯರ ಕೈಗೆ, ಅಪ್ಪುಣ್ಡ = ಸಿಕ್ಕಿಬಿದ್ದ ! ಆದರೂ ಆ ಸಂದರ್ಭ ಈ ಶರಣರಿಗೆ ಅದೂ ಸಿಹಿಚೆಲುವಾಗಿಯೇ ಕಾಣುತ್ತದೆ! ಎಲ್ಲಿ ಸಿಕ್ಕಿಬಿದ್ದ ! ಉರಿಲಿನ್ ಇಡೈ = ಒರಳಿನೆಡೆ. ಹಗ್ಗದಿಂದ ಯಶೋದಮ್ಮ, ಮನೆಯಲ್ಲಿ ಉಪಯೋಗವಿಲ್ಲದೆ ಬಿದ್ದಿದ್ದ ದದ್ದು. ಒರಳಿಗೂ ಇವನ ಹೊಟ್ಟೆಗೂ ಕಟ್ಟಿ ಬಿಗಿದಿದ್ದಳಷ್ಟೆ! ಇಲ್ಲಿನ ಉಲೂಖಿಲಬದ್ಧನಾದ ಬೆಣ್ಣೆಕಳ್ಳನ ಮಾಧುರ್ಯ ಎಂಥದು! ತೀಮ್ ಕರುಮ್ಬಿನೈ = ಬಲಿತು ಹದವಾದ ಕಬ್ಬಿನ ಸಿಹಿರಸ ಎನ್ನಬಹುದಾದವನನ್ನು, ತೇನೈ = ಜೇನೇ ಎನ್ನುವಂತಿರುವವನನ್ನು, ನಲ್ ಪಾಲಿನೈ = ಮಧುರ ಕ್ಷೀರನೆನ್ನಬಹುದಾದ ಸರ್ವರಸ ಸ್ವರೂಪನನ್ನು, ಅನ್ನಿ = ಬಿಟ್ಟು ಮತ್ತೊಂದನ್ನು ಎನ್‌ಮನಮ್ = ಅವನಿಂದಲೇ ಸಂಸ್ಕರಿಸಲ್ಪಟ್ಟ ನನ್ನೀ ಮನ, ಶಿನ್ನೈ ಶೆಯ್ಯಾದೇ ಚಿಂತಿಸುವುದೇ ಇಲ್ಲ.

ದೈವೀಸಂಪತ್ ಪ್ರದನಾದ ನರಕಾಂತಕನನ್ನು ತೊರೆದು, ಸಂಕಾಟವಹವಾದವುಗಳನ್ನು ನಮ್ಮ ಪಾಪದಿಂದಲೇ ಅರ್ಜಿತವಾಗ ಬಹುದಾದವನ್ನು ಸುಮ್ಮನೆ ಯೋಚಿಸುತ್ತಾ ಕುಳಿತರೆ ದುಃಖ ದೂರವಾಗುವುದೇ? ದುಗುಡಗಳನ್ನೇ ಹೆಚ್ಚು ಪಡಿಸುವುವು. ಭಗವದಿತರ ವಿಷಯಗಳು. ಕಲ್ಯಾಣರೂಪ ಹಾಗೂ ಗುಣನಿಧಿಯಾದ ಸ್ವಯಂ ಸುಕೃತ ಸ್ವರೂಪನಾದ, ಷಾಡ್‌ಗುಣ್ಯಪರಿಪೂರ್ಣ ಭಗವದ್ ವಿಷಯ ಚಿಂತನೆ, ಮನನ, ತದನುಗುಣ ಜೀವನ ಸತ್ಸಂಗ, ಸದ್‌ವಿಚಾರ ಸದಾಲಾಪ ಸಚ್ಚಾರಿತ್ರ್ಯಗಳೇ, ಸತ್ಯಪ್ರೇಮ ಕರುಣೆಗಳೇ ಎಂತೆಂತಹ ಇಹಪರ ಯಾತನಾ ಸಂದರ್ಭಗಳನ್ನೇ ಕುಟ್ಟಿ ಹಾಕುವುವು. ಅದೂ ಸೌಮ್ಯವಾಗಿಯೇ! ದೇವರ ಹಸ್ತವೇ ಅಭಯ ಹಸ್ತ! ಎಲ್ಲಿದ್ದರೂ ನಮ್ಮ ಆಪತ್ತಿಗೆ ಧಾವಿಸುವ ಆ ಶ್ರೀ ಪಾದ! ನನ್ನ ಅವನ ಸ್ವ ಸ್ವಾಮಿಭಾವ, ಅದೇ ಭಕ್ತಾಲಂಕಾರ ಭೂತವಾದ ತಿರುಪತಿ ಕ್ಷೇತ್ರ! ಆಪದಾಂ ಅಪಹರ್ತಾ! ಭಕ್ತ ಪರಾಧೀನ! ಪರಮಭೋಗ್ಯ! ಇವುಗಳೇ ನಿಜಕ್ಕೂ,

"ಕತ್ತಲೆಗೆ ದೀಪದಂತೆ, ಸುಳ್ಳಿಗೆ ಸತ್ಯದಂತೆ, ಸಾವಿಗೆ ಅಮೃತದಂತೆ, ದ್ವೇಷಕ್ಕೆ ಪ್ರೇಮದಂತೆ,
ರೋಗಕ್ಕೆ ಸ್ವಾಸ್ಥ್ಯದಂತೆ, ಭಯನಾಶಕಗಳು".

ನಮ್ಮ ಕಷ್ಟ ಕೋಟಲೆಗಳೆಲ್ಲಾ ಬರುವುದು ದೇವರ ದೈವೀ ಗುಣಗಳನ್ನು ಉಪೇಕ್ಷೆ ಮಾಡುವುದರಿಂದ ಮತ್ತೆ ತೊಂದರೆಗಳು ಹೆಚ್ಚುತ್ತವೆಯೇ ಹೊರತು, ಆಪತ್ತುಗಳೇನೂ ಸ್ವತಃ ಬರುವಂಥವಲ್ಲ. ಜಡ ಯಾವಾಗಲೂ ತಟಸ್ಥ. ವ್ಯವಹಾರಗಳನ್ನು

ಬೇಡ ಎನ್ನುವುದಿಲ್ಲ. ಅದು ಪರರ ವಿಪತ್ತಿಗೆ, ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಸಹಕಾರಿಯಾಗದಿರುವಂತೆ ಎಚ್ಚರಿಕೆಯಿಂದ, ನಮ್ಮ ಲಾಭದಲ್ಲಿ ಪರರ ಶುಭವೂ ಒದಗುವಂತಿರಲಿ. ಶುದ್ಧ ವ್ಯವಹಾರವಿರಲಿ. ಆಳ್ವಾರರ ಮನಸ್ಸಂಸ್ಕಾರ ಭಯಸ್ಥಾನವನ್ನೇ ತೋರದು. ದುಷ್‌ಪ್ರಕೃತಿಯ ನಮ್ಮ ಸಂಕುಚಿತ ಸ್ವಾರ್ಥಕ್ಕೇ ಪ್ರಕೃತಿಯನ್ನು ಶೋಷಿಸಿ ಬಳಸಿಕೊಂಡಾಗ ಅಂತಹ ಜೀವನ ಪದ್ಧತಿಗಳ ಮೊತ್ತವೇ "ಭಯ" ಎನ್ನುವುದು. ಇಂದು ಪ್ರಬಲ, ದುರ್ಬಲ ಎರಡೂ ರಾಷ್ಟ್ರಗಳೂ ಭಯಭೀತಗಳಾಗಿರುವುದು, ಅಧ್ಯಾತ್ಮವಿಮುಖ ಶಿಕ್ಷಣದಿಂದಲೇ. ರಾಜಕೀಯವೊಂದಕ್ಕೆ, ಹೆಚ್ಚಿನ ಅನಗತ್ಯ ಪ್ರಾಧಾನ್ಯವೇ ಬಹುತೇಕ ಭಯಸ್ಥಾನ. ದಂಡನೀತಿ, ಕಾನೂನಿನ ಕಾನನ, ಮಿಲಿಟರಿಗೇ ವರಮಾನದ ಅರ್ಧಕ್ಕಿಂತ ಹೆಚ್ಚು ಭಾಗದ ನಿರಂಕುಶ ಖರ್ಚು ಇತ್ಯಾದಿ ಇತ್ಯಾದಿಗಳೆಲ್ಲಾ, "ನಿರ್ಭಯತೆಯ ಅವಶ್ಯಕತೆಯೇ ಯುಗಧರ್ಮ ಮೌಲ್ಯ"ವೆನ್ನುವುದನ್ನು ದೃಢ ಪಡಿಸುತ್ತಿವೆ. ಪರಮಾತ್ಮನ ಸ್ವರೂಪ ರೂಪಗುಣಗಳನ್ನೇ ವೈಜ್ಞಾನಿಕವಾಗಿಯೇ, ಅವನ ವಿಭೂತಿ ಎನಿಸಿದ ನಾವು ಸದಾ ನಿಷ್ಠೆಯಿಂದ ನೆನೆಯುವ ರೂಢಿಯನ್ನೇ ರೂಢಿಸುತ್ತಾ ಬಂದರೆ ಅದೇ ಆಳ್ವಾರ್ ಆಚಾರ್ಯರ ಭಾಷೆಯಲ್ಲಿ ಭಗವದ್ವಿಷಯ. ಇಂದಿನ ಭಾಷೆಯಲ್ಲಿ ಸಮಾನತೆ, ಬಂಧುಭಾವ, ಪ್ರಜಾಸ್ವಾತಂತ್ರ್ಯ! ಎರಡೂ ಭಾಷೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳುವ ಪ್ರಜಾಶಕ್ತಿ ನಿರ್ಮಾಣವೇ "ಅಭಯ"! ಉಮ್ಬರ್ = ಊರ್ಧ್ವತಮ ವೈಕುಂಠ. "ಈ ತಿಮ್ಮಪ್ಪನ ಬೆಟ್ಟ ವೈಕುಂಠಕ್ಕೇ ಕಲಶದಂತೆ ಅಲಂಕಾರ" ಎಂದರೆ ಎಷ್ಟೊಂದು ಎತ್ತರಕ್ಕೆ ಯಾತ್ರಾಸ್ಥಳಗಳ ಪುನರ್ ನವೀಕರಣ, ಹಳೆಯ ಬೇರನ್ನು ನಿರ್ಮೂಲಗೊಳಿಸದೆ ಹೊಸ ಹೊಸ ಚಿಗುರು, ಹೂ, ಹಣ್ಣುಗಳನ್ನು ಜಗತ್ತಿಗೇ ನೀಡಬಹುದು. ಯಾವೊಂದು ಅಭಯವೂ, ಪಕ್ಷಪಾರ್ಟಿ, ಕ್ಯಾಪಿಟಲಿಸಂ, ಕಮ್ಯೂನಿಸಂ, ಕಾನ್‌ಸ್ಟಿಟ್ಯೂಷನಿಸಮ್, ಟ್ರೇಡಿಸಂ, ಕಮ್ಯೂಲಿಸಮ್, ರೆಡ್ ಟೇಪಿಸಂ, ಇನ್‌ಸ್ಟಿಟ್ಯೂಷನಿನಿಸಂಗಳಿಂದ ಖಂಡಿತ ಸಿದ್ಧಿಸದು. "ವೇದಾನ್ತ-ವಿಜ್ಞಾನ" ಉಭಯಗಳ ಒರೆಗಲ್ಲಿನಲ್ಲಿ ಹಚ್ಚಿದಾಗಲೇ ಜಗತ್ತಿನ ಶಾಶ್ವತ ಶಾಂತಿಗೆ ಪೂರಕವಾದಾಗಲೇ, ಎಲ್ಲವೂ, ಭಗವದ್ ವಿಷಯಗಳೇ ಆಗಿಬಿಡುವುವು.

ತಮಿಳ್ ತಿರಳ್ ೭-೧೦-೩.

ಏಜ್ಗಳುಕ್ಕರುಳ್ ಶೆಯ್‌ಹಿನ್ನ ಈಶನೈ ವಾಶವಾರ್, ಕುಳಲಾಳ್ ಮಲೈ ಮಜ್ಗೈತನ್
ಪಜ್ಗನೈ, ಪಜ್ಗೆಲ್ ವೈತ್ತುಹನ್ದಾನ್ ತನ್ನೈ ಪಾನ್ಮೈಯೈ ಪನಿಮಾ ಮದಿಯಂ ತವಳ್
ಮಜ್ಗುಲೈ ಚ್ಚುಡರೈ ವಡಮಾ ಮಲೈಉಚ್ಚಿಯೈ ನಚ್ಚಿ ನಾಮ್ ವಣಜ್ಗುಪ್ಪಡುಮ್
ಕಜ್ಗುಲೈ, ಪಹಲೈ ಚ್ಚೆನ್ನು ನಾಡಿ ಕಣ್ಣಮಜ್ಗೈಯುಳ್ ಕಣ್ಡು ಕೊಣ್ಡೇನೇ

ಕನ್ನಡ ನೆರಳ್

ಎಮಗಿದೋ ತಾನೇ ಅರುಳ್ ಗೈಯ್ಯುವ ಅನನ್ಯನ್ ವಿಕೇಶ್ವರನಂ, ವಾಸನೆವಾಸಿಪ ಕೇಶಿನಿ ಗಿರಿಜಾ ನಾರಿಯಂ
ತನ್ನೋರ್ ಪಾಲೊಳಗಿಟ್ಟೇ ಸಂತಸಗೊಳ್ಳುವ ಶೀಲದ ಸಹಜನಂ ತಣ್‌ಪೀಯುವ ಪೂರಣ ಚಂದ್ರನು ತೆವಳುವ
ಸಮದಾಗಸನಂ, ಬೆಚ್ಚನ ಭಾಸ್ಕರನಂ ಬಡಗಲ ತಿರುಮಾಮಲೆಕೋಡನಂ!
ನೇಹದಿನಾವ್ ನಮಿಸುತ ಸುಲಭದೊಳನುಭಾವಿಸಲ್ ತಗುವಾ
ಸಮಯದ ರಾತ್ರಿಯ ಕಾಲನಂ, ಕೈಂಕರ್ಯದ ಕಾಯಕಗೈ ಹಗಲನಂ ಹುಡುಕುತ ಹೋಗಿ
ಇದೋ ಇಲ್ಲೇ "ತಿರುಕ್ಕಣಮಂಗೈ" ದಿವ್ಯದೇಶದಿ ಕಂಡೇ ಕೊಂಡೆನಲಾ

ಬ್ರಹ್ಮಸಂಶೋಧನಾ ತಜ್ಞರಾದ ಈ ತಿರುಮಂಗೈಯಾಳ್ವಾರರು ಹಾಗೇ ಹುಡುಕಿಕೊಂಡು ಬರುವಾಗ ಅವರಿಗೆ ಎಲ್ಲಾ ಹಂತದಲ್ಲೂ ಕಣ್ಣಿಗೆ ಕಟ್ಟಿದ್ದದಾವುದು? ಈ ಪ್ರಶ್ನೆಗೆ ತಮ್ಮ ಅನುಭವದ ಉತ್ತರ ಇಲ್ಲಿ ಸಿಗುತ್ತದೆ. ಎಜ್ಗಳುಕ್ಕು = ಶರಣರ ವಿಶ್ವಕುಲಕ್ಕೇ, ಅರುಳ್‌ಶೆಯ್ ಹಿನ್ನ = ದಯೆಯನ್ನೇ ಗೈಯ್ಯುವ ಸಾಕ್ಷಾತ್ಕಾರ ನಂ. ೧ ಯಾವೋರ್ವ ಒಡೆಯನೂ ತನ್ನ ಜವಾಬುದಾರಿಗೆ ಒಳಪಟ್ಟಿರುವವರನ್ನಾಗಲಿ, ವಸ್ತುವನ್ನಾಗಲಿ ಕರುಣೆಯಿಂದ ಕಾಣದೆ ಹೋದರೆ ಆತನ ದಾಯಿತ್ವ-ಪ್ರಾಪ್ತತೆಯೇ ಹಾರಿಹೋಗುವುದಷ್ಟೆ. ನಮ್ಮ ನಿಮ್ಮ ಜವಾಬುದಾರಿ-ಹೊಣೆಗಾರಿಕೆ - ನಿಮ್ಮ ಅವರ ಕರ್ಮಾಧೀನ. ಆದರೆ, ಈಶನೈ = ನಿರುಪಾಧಿಕ, ಹಿಂದೆ ಹೇಳಿದ ನಾನಾಬಗೆಯ ಇಸಮ್‌ಗಳ ಅಸ್ಮಿತೆಯ ವಿಷವಿಲ್ಲದ, ಸಹಜ ಸಮರ್ಥ ಒಡೆಯನನ್ನು, ಸರ್ವೇಶ್ವರನನ್ನಾಗಿ ಸಾಕ್ಷಾತ್‌ಕರಿಸಿದ್ದು, ಬ್ರಹ್ಮಶೋಧನೆಯ ೨ನೆಯ ಹಂತ.

ಮೂರನೆಯ ಸಾಕ್ಷಾತ್ಕಾರವೆಂದರೆ ವಾಶಮ್ ಆರ್ = ಉಭಯ ವಿಭೂತಿಯ ಒಳ್ಳೊಳ್ಳೆ ಸ್ವಾಸ್ಥ್ಯಕಾರಿ ಸುಗಂಧಗಳೆಲ್ಲಾ ತುಂಬಿರುವ, ಕುಳಲಾಳ್ ಕೇಶಪಾವನ ಸುಂದರಿ, ಮಲೈಮಜ್ಗೈ = ಗಿರಿಜಾದೇವಿಗೆ ತನ್ನ ಅರ್ಧಭಾಗದಲ್ಲಿ ಪಾಲುನೀಡಿರುವ ಅರ್ಧನಾರೀಶ್ವರನಿಗೂ, ಪಜ್ಗೆಲ್ ವೈತ್ತು = ತನ್ನ ಪಕ್ಕದಲ್ಲೇ ಪ್ರೀತಿಯಿಂದ ತಾಣನೀಡಿ, ಉಹನ್ದಾನ್ ತನ್ನೈ = ಉಲ್ಲಾಸಗೊಳ್ಳುತ್ತಿರುವ ಸಾಕ್ಷಾತ್ಕಾರ, ಪಾನ್ಮೈಯೈ

= ಮೂರ್ತಿವೆತ್ತ ಸೌಶೀಲ್ಯಗುಣನನ್ನು. ಅಂದರೆ ಎಂತಹ ದಡ್ಡರೊಡನೆಯೂ ಕೂಡಾಡಿ ತಾನೊಬ್ಬ ದೊಡ್ಡವನೆಂಬ ಭಾವನೆಯನ್ನೇ ಅರಿಯದವನನ್ನು. ಸಹಜ ಸುಶೀಲನನ್ನು "ಮಹತಃ ಮಂದೈಸ್ಸಹ ನೀರಂಧ್ರೇಣ ಸಂಶ್ಲೇಷಃ ಸೌಶೀಲ್ಯಮ್" ಇಂತಹ ನಿಗರ್ವಿಯನ್ನು ಕಂಡದ್ದು ನಾಲ್ಕನೆಯ ಸಂಶೋಧನಾ ಶ್ರೇಣಿ. ಐದನೆಯದೆಂದರೆ ಪನಿಮಾ ಮದಿ = ಶೀತಳ ಪೂರ್ಣಚಂದ್ರ. ಅಮ್ = ಸೊಗಸಾಗಿ, ತೆವಳುತ್ತಾ ಬರಲು, ಸರಿಹೊಂದುವ ಆಕಾಶವನ್ನೇ ತನ್ನ ಶರೀರವನ್ನಾಗಿ ಉಳ್ಳವನ ಸಾಕ್ಷಾತ್ಕಾರ! ಆಕಾಶ ಸರ್ವಾವಿರೋಧಿ ತತ್ವ, ಅಂದರೆ ನೇರಾ ಪರಮಾತ್ಮನ ಶರೀರವದು. "ಆಕಾಶ ಶರೀರಂ ಬ್ರಹ್ಮ" (ತೈ.ಉ.) ಶುಡರೈ = ತೇಜೋರೂಪವಾದ ಸೂರ್ಯನಾಗಿ ತೋರಿದ್ದೇ ಆರನೆಯ ದರ್ಶನ. ರಥಸಪ್ತಮಿಯಂದು ಸೂರ್ಯಮಂಡಲ ವಾಹನ. ಆಗಾಗ ಬ್ರಹ್ಮೋತ್ಸವಾದಿಗಳಲ್ಲಿ ಚಂದ್ರಮಂಡಲವಾಹನದ, ಒಳ ಅರ್ಥ ಈಗ ನಮಗೆ ತಿಳಿದಂತಾಗುತ್ತದೆ. ಇವಿಷ್ಟನ್ನೂ ಗರ್ಭೀಕರಿಸಿಕೊಂಡೇ. ವಡಮಾಮಲೈ ಉಚ್ಚಿಯೈ = ತಮಿಳುನಾಡಿನ ತೀರಾ ಬಡಗಲ ಮಾಮಲೆಯ ಒಂದು ಕೋಡಾಗಿ ದರ್ಶನ! ಏಳ್‌ಮಲೈಯಪ್ಪನ್, ಏಡು ಕೊಂಡವಾಸಾ! ಆಳ್ವಾರರ ಕಾಲದಲ್ಲಿ ಈಗಿನಂತೆ ರಚನೆಯಿರಲಾರದೆಂದು ತೋರುತ್ತದೆ. ಬೆಟ್ಟದ ಕೋಡು ತಿಮ್ಮಪ್ಪನಾಗಿ ಇವರಿಗೆ ಸಂದರ್ಶನ ನೀಡಿದ್ದೇ ಅಷ್ಟಮ ಸಾಕ್ಷಾತ್ಕಾರ! ನಮ್ಮಂತಹವರ ಭಾಗಕ್ಕೆ ಕಣ್ಣಿಗೆ ಅತ್ಯನ್ತ ಸಾನ್ತ್ವನ ನೀಡುವ, ವಣಙ್ಗಪ್ಪಡುಮ್ ಕಙ್ಗುಲೈ = ವಂದಿಸಲ್ಪಡಲೇ ಬೇಕಾದ ಇರುಳೇ ಇರುಳು! ಸಂಧ್ಯಾಸಮಯ ತೀರಿದಮೇಲೆ, ಮಂದದೀಪ! ಕತ್ತಲೆಯನ್ನೇ ಕಣ್ಣುಬಿಟ್ಟು ನೋಡುವುದು ಬಲು ಒಳಿತೆಂದು ಆಯುರ್‌ವೇದಶಾಸ್ತ್ರದಲ್ಲೂ ಹೇಳಿದೆ. ಕಾರ್‌ಗತ್ತಲೆಯಲ್ಲಿ ಪರಮಾತ್ಮನ ತಂಪು ನೀಡುವ ಸ್ವಾಸ್ಥ್ಯವರ್ಧಕ ಪ್ರಶಾಂತ ಸ್ವಭಾವವಿದೆ. ವಿಶ್ರಾಂತಿ ಸ್ಥಾನ ನಿಜಕ್ಕೂ ದೇವರೇ! ಅಂತೆಯೇ ಕಲಿಯುಗದಲ್ಲಿ ಮೂಲ ಮೂರ್ತಿಗಳೆಲ್ಲಾ ನೀಲಶೀಲಾ ಸಾಲಿಗ್ರಾಮಗಳೇ ಪ್ರಾಯಃ ಆಗಿವೆ. ಸಕಾಲದಲ್ಲಿ ನಾವೆದ್ದಾಗ, ಆತ ನಮಗೆ, ಪಹಲೈ = ಹಗಲಾಗಿ ದರ್ಶನನೀಡುತ್ತಾನೆ. ಹೀಗೆ ನವನವ ಸಂಶೋಧನೆಗೆ ಈ ಶರಣರನ್ನು ಆ ಲೋಕಶರಣ್ಯನಾದವನೇ ಹಚ್ಚಲಾಗಿ, ನಾಡಿ = ಯಾತ್ರೆಗೈದು ಸಂಧಿಸಿದ್ದು, ಕಣ್ಣಮುಙ್ಗೈಯುಳ್ = ಆದಿವ್ಯದೇಶದಲ್ಲಿ ಕಂಡು ಕೊಂಡೇನೇ = ಇದೋ ಕಲಿಯನ್ ಕಂಡ ಅಭಿನವ ದಶಾವತಾರ!

ತಮಿಳ್ ತಿರಳ್ ೮-೨-೩

ಅರುವಿ ಶೋರ್ ವೇಙ್ಗಡಮ್ ನೀರ್ ಮಲೈಯೆನ್ನು ವಾಯ್ ವೆರುವಿನಾಳ್ ಮೆಯ್ಯಮ್ ವಿನವಿ ಇರುಕ್ಕಿನ್ನಾಳ್
ಪೆರುಹು ಶೀರ್ ಕಣ್ಣಪುರಮೆನ್ನು ಪೇಶಿನಾಳ್ ಉರುಹಿನಾಳ್ ಉಳ್‌ಮೆಲಿನ್ದಾಳ್ ಇದುವೆನ್ಗೊಲೋ!

ಕನ್ನಡ ನೆರಳ್

ಝುರಿ ಹರಿ ವೆಂಕಟ ತಿರುನೀರ್‌ಮಲೆ ಎಂದಿದೊ ಬಾಯ್ ಒ
ದರಿದಳ್ ತಿರುಮೆಯ್ಯಂ ತಾಣವು ಎಲ್ಲೆನೆ ಉತ್ತರ ಪಡೆಯದೆ
ಸಿರಿಗುಣವುಕ್ಕುವ ತಿರುಕ್ಕಣಪುರಂ ಎಂದೇಕ ಕಾಲದೊಳ್ ಪೇಳುತ
ಉರುಗುತ ಕರಗುತಲೊಡಲಂ ಒಳಗುಂ ಬಾಡಿಸಿ ಕೊಂಡಳೈ ಏನಿದು ವೆನ್ ಪಾಪಂ!

ಆಳವಾರ್‌ಗಳಿಗೆ ದೇವರಲ್ಲಿ ಭಕ್ತಿ ಏರಿದಾಗ, ಭಗವತ್ ಸ್ವರೂಪ ಮಾತ್ರದಿಂದ, ಜ್ಞಾನ ಪ್ರಧಾನರಾದ ಋಷಿಮುನಿಗಳಿಗಾದಂತೆ ಸಮಾಧಾನವಾಗದು, ಸತ್ಯಜ್ಞಾನ ಆನಂದ ಅನನ್ತ ನಿರಂಜನ ಪರಬ್ರಹ್ಮಸ್ವರೂಪವನ್ನೂ ತೋರುವ ರೂಪವೂ ಈಶರಣರಿಗೆ ಬೇಕು. ಬ್ರಹ್ಮರ್ಷಿಗಳ ಸಂಶೋಧನಾ ಕ್ಷೇತ್ರ ಅರಣ್ಯಗಳು. ಸಂತರ ಸೇವಾ ಕ್ಷೇತ್ರ ಸಮಾಜದ ಆಯಾಯಾ ಪ್ರದೇಶ ಹಾಗೂ ಜನಸಮೂಹ. ಶ್ರೀ ಸಾಮಾನ್ಯಕ್ಕೆ ಒಂದು ಮೂರ್ತಿ Image, ಆದರ್ಶದ ಹೊರಗಿನ ಮಾಧ್ಯಮದಿಂದ, ಸ್ವರೂಪದ ಅಂತರ್‌ದರ್ಶನ ಸುಕರ. "ಋಷಿಗಳು ಅಗೋಚರ ಬ್ರಹ್ಮಸ್ವರೂಪದಿಂದ ಕಾಣುವ ಸೃಷ್ಟಿಯತ್ತ ಧಾವಿಸುವರು. ಶರಣರು ಸೃಷ್ಟಿಯಿಂದ, ಸಗುಣ ಸಾಕಾರ ಮೂರ್ತಿಯಾದ ಸೃಷ್ಟಿಕರ್ತನೆಡೆಗೆ, ಸಮಾಜದ ಓರೋರ್ವರನ್ನೂ ಬಿಡದೆ, ಸೇರಿಸಿಕೊಳ್ಳುವರು.

ಹೀಗೆ ಸ್ವರೂಪ ಪ್ರಕಾಶಕವೂ ಪರಮ ದಿವ್ಯವೂ ಅತಿಸುಂದರ ಪಾವನ ಭೋಗ್ಯವೂ ಆದ ದೇವರ ಆ ಅಸಾಧಾರಣ ರೂಪ ಮೀಸಲಾಗಿರುವುದನ್ನೇ ಈ ಕಣ್ಣಾರ, ಇಂದ್ರಿಯ ದ್ವಾರಾ ಇಲ್ಲೇ ಈಗಲೇ ಅನುಭವಿಸಿಯೇ ಬಿಡಬೇಕೆಂಬ ತೀವ್ರ ಸಂವೇಗ ಈ ಕಲಿಯನ್ ಸಂತರಿಗೆ ತಲೆಯೆತ್ತಿದೆ. ಈ ನೆಲೆಗಳನ್ನೆಲ್ಲಾ ಹಂತಹಂತವಾಗಿ ಆಳ್ವಾರ್‌ಗಳಿಗೆ ಸ್ವಾಮಿಯೇ ನಾನಾ ಪ್ರಜ್ಞಾವಸ್ಥೆಗಳ ರೂಪದಲ್ಲಿ ಬೆಳಸುತ್ತಾನೆ. ಅದರಿಂದಾಗಿ ತಾವು ಗಂಡಸೆಂಬುದನ್ನೂ ಮರೆತು ನಿಜವಾದ ಜೀವಾತ್ಮನ ಸತೀಧರ್ಮವನ್ನು ನೆನೆಯುತ್ತಾರೆ. ಆತ ವಿಶ್ವಪತಿಯಾದರೆ, ವಿಶ್ವದಲ್ಲಿ ಅಡಗಿರುವ ಜೀವಾತ್ಮ ಪತ್ನೀ ತಾನೇ? "ಪತಿಂ ವಿಶ್ವಸ್ಯ" "ಸ್ತ್ರೀಪ್ರಾಯ ಮಖಿಲಂ ಜಗತ್" "ಲಿಂಗಪತಿ ಶರಣ ಸತಿ" ಆಗ ಸಂತರಿಗೆ, ಪುರುಷೋತ್ತಮನ ಮುಂದೆ ತಾನೋರ್ವ ಉತ್ತಮ ಸ್ತ್ರೀ, ಆತನಿಗೆ ತಕ್ಕವಳು. ಉತ್ತಮ ನಾಯಕಿ ಎಂಬ ಭಾವ

ಉಮ್ಮಳಿಸುತ್ತದೆ. ಈ ಪ್ರಜ್ಞಾವಸ್ಥೆಗೆ "ನಾಯಕೀಭಾವ" ಎನ್ನುತ್ತಾರೆ. ಪತಿವ್ರತೆ ಮೌನವಾಗಿದ್ದು, ಆಕೆಯ ತಾಯಿ ತನ್ನ ಮಗಳ ಬಗೆಗೆ ಅಳಿಯಂದಿರಿಗೆ ಹೇಳುವ **"ತಾಯ್‌ಚ್ಯೊಲ್"** ಎಂಬ ಶೈಲಿಯಲ್ಲಿ ಪೆರಿಯತಿರುಮೊಳಿಯ ಈ ಅನೇ ಶತಕದ ೨ನೇಯ ದಶಕ ಅಳವಟ್ಟಿದೆ.

ಈಕೆ ಸದಾ ಬಾಯಿಂದ ಕನವರಿಸುವುದಾದರೂ ಏನು? "ಅರುವಿ ಶೋರ್ ವೇಙ್ಗಡಮ್" "ನೀರ್ ಮಲೈ ಎನ್ನುವಾಯ್ ವೆರುವಿನಾಳ್" ಈ ಯಾತ್ರಾಸ್ಥಳಗಳ ಹೆಸರುಗಳನ್ನೇ ಒದರುವುದು. ಅದರಲ್ಲೂ ಮೊದಲ ಸ್ಥಾನ ಗಿರಿಝರಿಗಳು ಯಾವಾಗಲೂ ಅಶೋಷ್ಯವಾಗಿ ನೀರನ್ನು ಉಕ್ಕಿಸುತ್ತಲೇ ಇರುವ ವೇಂಕಟಪರ್ವತವನ್ನೇ! ಅಲ್ಲಿ ತೀರ್ಥಗಳ ಅಖಂಡ ಜಲಧಾರೆ. ನನ್ನ ಈ ವಿರಹಿಣಿ ಕುಮಾರಿಯಲ್ಲಿ "ತ್ವರಾಪ್ರೇಮ"ದ ಅಖಂಡಧಾರೆ! ತಿಮ್ಮಪ್ಪ ಅಗಲೇ ತನ್ನ ಅತ್ತಣ ಅಪ್ರಾಕೃತವಾದ ನಿಜರೂಪು ತೋರಿಸಿಬಿಟ್ಟಿದ್ದರೆ, ಇವಳು ಹೀಗೆ ಕನವರಿಸುವುದನ್ನು ಮುಂದುವರಿಸುತ್ತಿರಲಿಲ್ಲ. ನಮ್ಮಂತಹ ಮಂದಪ್ರೇಮಿಗಳಿಗೂ ಭಕ್ತಿಯ ಉತ್ತರೋತ್ತರ ತೀವ್ರ ಸ್ತರಗಳು ಬೆಳೆದು ಬರಲೆಂದು ಇಂತಹ ತೀವ್ರ ಸಂವೇಗಿ ಶರಣರನ್ನು-ಶರಣಸತಿ-ಗಳನ್ನು ಉಪಯೋಗಿಸಿ ಕೊಳ್ಳುತ್ತಿದ್ದಾನೆ. ತಿರುಪತಿ ತಿರುಮಲೆ! ಇಲ್ಲದಿದ್ದರೆ, ತಿರುನೀರ್‌ಮಲೆ ಒಂದೇ ದಿವ್ಯ ದೇಶವೇ ಸ್ವಾಮಿಗೆ? ಎಲ್ಲೆಲ್ಲೂ ಅವನೇ ಬೇರೆ ಬೇರೆ ಚೆಲುವು. ಗುಣ ತೋರಲು ಇಷ್ಟಪಟ್ಟೇ ನಿಂತಿದ್ದಾನೆ! ಕುಂತಿದ್ದಾನೆ! ಮಲಗಿದ್ದಾನೆ! ವ್ಯಕ್ತಿ ಒಬ್ಬನೇ, ಪೋಸ್‌ಗಳು ಬೇರೆಯಷ್ಟೆ! ಎಲ್ಲಾದರೊಂದೆಡೆ ತಮ್ಮ, ಸುಂದರ ಪಾವನ ಗಂಡನ ರೂಪಿನ ಬವಣೆ ಇಂಗಬಹುದೆಂಬ ನಿರೀಕ್ಷೆ! ಅತಿ ಚಾಪಲ್ಯ! ಅತಿ ಪ್ರಾವಣ್ಯ! ಈ ನನ್ನ ಕಂದಳಿಗೆ. "ಮೆಯ್ಯಮ್" "ವಿನವಿ ಇರುಕ್ಕಿನ್ನಾಳ್" "ತಿರುಮೆಯ್ಯಂ" ಶ್ರೀ ಸತ್ಯಕ್ಷೇತ್ರ! ಅಮ್ಮಾ, ಈ ಎರಡೂ ಧಾಮಗಳ ಆಯಾಯಾ ಶ್ರೀ ಮೂರ್ತಿಗಳು ನನ್ನ ಭಾಗಕ್ಕೆ ನನ್ನ ದೌರ್ಭಾಗ್ಯದಿಂದ ಮಿಥ್ಯೆಯಾದವು! ಆ ಸತ್ಯಕ್ಷೇತ್ರ "ತಿರುಮೆಯ್ಯಮ್"ನಲ್ಲಿರುವವನೂ ಸುಳ್ಳುಗಾರನೇ! ವಿಶ್ವಭೋಕ್ತಾ ವಿಶ್ವವನ್ನು ಅನುಭವಿಸದಿದ್ದರೆ, ಇದ್ದೂ ಇಲ್ಲದಂತೆಯೇ! ತನ್ನದಿವ್ಯಾssಕಾರ ತೋರಿಸುತ್ತಾನೆಯೇ? ಎಂದು ತಾಯಿಯನ್ನೇ ಈ ಪರಕಾಲನಾಯಕಿ ಪ್ರಶ್ನಿಸುತ್ತಲೇ ಇರುತ್ತಾಳೆ.

ನಾನೇನು ಸ್ವತಂತ್ರಳೇ ಇವಳ ಆತುರಕ್ಕೆ ಉತ್ತರನೀಡಲು? ಸ್ವಾಮಿಯೇ ಸಿದ್ಧ ಶುದ್ಧಸಾಧನ. ಸಿದ್ಧೋಪಾಯ, ಎಂಬೀ ನಿಷ್ಠೆಯೇ ತಾಯಿ! ನಾನೇನೋ ಸಹಿಸಿಕೊಳ್ಳುತ್ತೇನೆ. "ವಿವೃಣುತೇ ತನೂಂಸ್ವಾಮ್". ತನ್ನ ಮೂರ್ತಿದಾನ ಮಾಡದೆ ಇವಳನ್ನು ಅತನೂ ಏಕೆ ತಾನೇ ಸತಾಯಿಸುತ್ತಿದ್ದಾನೆಯೋ! ನನಗೊಂದೂ ಗೊತ್ತಾಗುತ್ತಿಲ್ಲ. ನಾನೂ ಸುಮ್ಮನಿರಲಾಗಿ ಈಕೆಯೂ ಸದ್ಯಕ್ಕೆ ಮೌನ ತಾಳಿದಳು. ಅದರೂ ಒಳಗಿನಿಂದ ಗುದ್ದುತ್ತಿದೆ ಭಕ್ತಿಯ ಆವೇಶ! "ಪೆರುಹು ಶೀರ್ ಕಣ್ಣಪುರಮ್" ಆ ವೈಕುಂಠದಲ್ಲೂ ಕಾಣದ ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿ ಕಲ್ಯಾಣ ಗುಣಗಳು, ಹೊಂಗಿ ಹೊಂಗಿ ಮೇಲ್ ಮೇಲ್ ಉಕ್ಕುವುದು ಇಲ್ಲಿನ ದಿವ್ಯದೇಶಗಳಲ್ಲೇ! ಏಕೆಂದರೆ ಇದು ಮಿಶ್ರವಿಭೂತಿ. ಕಣ್ಣಿಗೆ ಕಾಣದಿರುವ ನನ್ನಂತಹವರಿಗೆ "ಕಣ್ಡು ಪತ್ತುಹ್ಮೈಕ್ಕು ಸೌಲಭ್ಯಂ" ಎಂಬ ಪಿಳ್ಳೈಲೋಕಾಚಾರ್ಯರ ಸಿರಿವಚನದಂತೆ, ದರ್ಶನ ನೀಡಬಹುದಿತ್ತು! ನಾನು ತಪ್ಪಿತಸ್ಥಳಾಗಿರಬಹುದು. ಮನ್ನಿಸಿ ಅದನ್ನೇ ಕಾಣಿಕೆಯಾಗಿ ಸ್ವೀಕರಿಸುವ, ದೋಷಾದರ್ಶನಂ, ಕ್ಷಮೆ, ಕಂಡರೂ ದೋಷಗಳನ್ನೇ ಚೆಪ್ಪರಿಸುವ, ವಾತ್ಸಲ್ಯವನ್ನೂ ತೋರನೇ? ನನ್ನ ಜತೆ ಸುಶೀಲನಾದವನು ಬೆರೆತು ಚೆನ್ನಾಟ ಆಡನೇ?

ಪುನಃ ಬಡಬಡ ಒದರುವುದು ಆರಂಭವಾಯಿತು. ಪೇಶಿನಾಳ್. ಹಿಂದೆಲ್ಲಾ ಸ್ವಲ್ಪ ಮೈಯನ್ನು ಹೇಗೋ ಸಾವರಿಸಿ ಕೊಳ್ಳುತ್ತಿದ್ದಳು. ಚಿತ್ತಧರಿಸುತ್ತಿದ್ದಂತೆ ನನಗೆ ಕಾಣುತ್ತಿತ್ತು. ಕಲ್ಯಾಣಗುಣ ಪ್ರವಾಹ ಹರಿಸುವ ಆ ಸತ್ಯಮೂರ್ತಿಯೂ, ಶ್ರೀಕೃಷ್ಣನೂ ಕೈ ಕೊಟ್ಟ ಮೇಲೆ, ಅಂದರೆ, ಕಲ್ಯಾಣತಮ ಅಂತರತಮ ಪಂಚೋಪನಿಷಣ್ಮಯ, ಅತಿಭೌತಿಕ ರೂಪು ತೋರದಿದ್ದರೆ, ಈ ನನ್ನ ಮಗಳ ಸ್ಥಿತಿಯೇನು ಗೊತ್ತೇ! ಉರುಹಿನಾಳ್ = ಮೂರ್ತವಾಗಿ ಘನವಾಗಿ ಉಂಡೆಯಾಗಿದ್ದ ಇವಳ ದೇಹ, ಉರುಗಿ ಶಾಖಿದ ದ್ರವರೂಪ ತಾಳಿ ಬಿಟ್ಟಿದೆ! ಒಂದು ಘಟಕವಾಗಿ ಈಕೆ ಈಗ ಉಳಿದಿಲ್ಲ. ಆಕೆಗೂ ಆಕೆ ಸಿಗದಂತಾಯಿತು ನನ್ನ ಭಾಗಕ್ಕೂ ಕನ್ಯಾಪಾದರಸ ಹರಿದು ಹೋದಂತಾಯಿತು!

ಓ ದೇವಾ! ಇಂತಹ ಪರಭಕ್ತಿ ಪರಜ್ಞಾನ ಬೆಳೆದವಳೋರ್ವಳು ಶರಣಸತೀ ನಿನ್ನ ಪಾಲಿಗೂ ಸೊನ್ನೆಯಾದಳಲ್ಲೋ! ಉಳ್ ಮೆಲಿನ್ದಾಳ್ = ಈಕೆಯ ಹೊರಪೊಡಲು ಮಾತ್ರವಲ್ಲ, ಒಳ ಮನವೂ ಸಡಿಲಗೊಂಡು ಉರುಗಿ ಹೋಗುತ್ತಿದೆ! ಋಷಿಗಳಂತೆ ಮನನದಿಂದಲಾದರೂ ಒಂದು ಸ್ಥಿತಿ ಪಡೆಯಲು ಇವಳಿಗೆ ಆಗುತ್ತಿಲ್ಲ. ಸಂಸಾರಿಗಳಿಗಿಂತಲೂ ವಿಲಕ್ಷಣೆ. ಅಷ್ಟೇ ಅಲ್ಲ. ಕೇವಲ ಭಗವದೇಕೋಪಾಯ ನಿಷ್ಠಾರೂಪಿಣಿಯಾದ "ತಾಯಿ" ಎಂಬ ನನಗಿಂತಲೂ ವಿಲಕ್ಷಣೆ ಈಕೆ. ಹೀಗೆ ಸರ್ವೋತ್ತರಳಾಗಿ ಕಂದಿ ಕುಂದುತ್ತಿರುವ ಈಕೆಗೆ ಓ ಸರ್ವೋತ್ತಮಾ! ನಿನ್ನಾರೂಪು ತೋರಯ್ಯಾ!

ತಮಿಳ್ ತಿರಳ್ ೮-೨-೬

வடவரை நின்னுமம் வந்நின்னு கணபுரமம் இடவஹை கொள்வது யாமம் என்னு பேசினாள்
மடவரல் மாதர் என்பேதை இவர்க்கிவள் கடவதென் கண் துயில் இன்னிவர் கொள்ளுமே

ಕನ್ನಡ ನೆರಳ್

ಬಡಗಲ ಗಿರಿಯಿಂ ಬಂದಿಂದಿದೋ ತಿರುಕ್ಕಣ್ಣನ ಪುರವನ್ನೇ
ಎಡೆಯಾಗೆಂದೂ ಕೊಂಡವರ್ ನಾವ್ ಎನುಶೌರಿಯು ಪೇಳಿದುದುಂ ಅನುಕರಿಸುತಿಹಳ್
ಸರಿಯಾಗೆನಗಡಗಿಹ ಈ ಪೆಣ್ ಎನ್ನೆಳೆಕಂದ! ಇವಳಿಗೆ ಇವರೆಂತೋ
ಸರಿಯಾಗಿಯೆ ತನ್ ಒಳಕಟ್ಟಿಗೆ ಒಳಪಟ್ಟಿಹಳ್ ಕಣ್ಮುಚ್ಚದ ತೆರ ಇವರ್ ಕೊಳ್ಳೆಯ ಹೊಡೆದರೂ ಕೂಡ

ಮಗಳ ಅನುಕಾರವನ್ನು ತಾಯಿ ಅನುಭವಿಸಿ ಹೇಳುವ ಹಾಡಿದು. ತಿರುಪತಿ ತಿಮ್ಮಪ್ಪನಲ್ಲಿ ಸೌಶೀಲ್ಯ ಗುಣ ಹೆಚ್ಚು. ಅತ್ತಣ ವೈಕುಂಠಾಧಿಪತಿಯಲ್ಲಿ ಈ ಮಗಳು ಮನಸೋತಿಲ್ಲ. ವಡವರೈ = ಪರಮಪದದಿಂದ ವೇಂಕಟೇಶ ಉತ್ತರ ದಿಕ್ಕಿನ ತಿರುಮಲೆಗೇ ಮೊಟ್ಟಮೊದಲು ಬಂದದ್ದು. **"ತಿರುಮಾಲ್ ವೈಹುನ್ದಮೇ ತನ್ ತಿರುವೇಙ್ಗಡಮೇ"** (೧೦-೭-೮ ತಿ.ವಾ.ಮೊ) ಎಂದು ಶಠಕೋಪರು ಅನುಭವಿಸಿರುವ ಅರ್ಚಾವತಾರಕ್ಕೆ ಪ್ರಪತ್ತಿ ಮಾರ್ಗದಲ್ಲಿ ಈ ವೈಶಿಷ್ಟ್ಯ ಗಮನಾರ್ಹ. ಈ ಪರಕಾಲನಾಯಕಿಗಾದರೋ ಉಳಿದ ದೇವಾಽಽವಾಸಗಳಿಗಿಂತ ಈ ತಿರುಮಲೆಯಲ್ಲಿ ಬೇಡರೂ ವಾನರರೂ ಅದ ಮಂದಾಧಿಕಾರಿಗಳೊಡನೆ ಒಂದಾಗಿ ಬೆರೆಯುವ ಸುಶೀಲತೆ! ತಿಮ್ಮಪ್ಪನ ವಿಶೇಷ. ಕೋತಿಗಳಿಗೂ "ಕೋತಿ ತಿಮ್ಮಣ್ಣ" ಎಂಬ ನಾಮಧೇಯ ಸಮಾಜದಲ್ಲಿ ಬಳಕೆಗೆ ಬಂದಿರುವುದೂ ಇದನ್ನೇ ಪುಷ್ಟೀಕರಿಸುವುದಾಗಿದೆ. ಜೋಪಾನ! ದೇವರು ಆ ಗುಣದ ಆಳಕ್ಕೆ ಇಳಿದು ಬಹಳ ಸದರಕೊಟ್ಟು ಮುಳುಗಿಸಿ ಬಿಟ್ಟಾನು! ಎಚ್ಚರಿಕೆ, ಎಂದು "ಕೊಂಡ್ಯೆಕ್ಕೋಲ್". ಅಪಾಯದ ತಾಣವೆಂದು ಚಿಹ್ನೆ ತೋರುವ ಧಾಮ ಈ ಭೂ ವೈಕುಂಠ ತಿರುಪತಿ.

ಅಲ್ಲಿಂದ ಇನ್ನು ಕಣ್ಣಪುರಮ್ = ಈ ತಿರುಕ್ಕಣ್ಣಪುರದಲ್ಲಿ ಶೌರಿ ಪೆರುಮಾಳ್ ಅಗಿರುವವನು. ಇಡವಹೈ ಕೊಳ್ಳದು = ಇರುವೆಡೆಯಾಗಿ ಆ ದಿವ್ಯದೇಶವನ್ನು ಮನಸಾರಾ ಸ್ವೀಕರಿರುವವನು. ಇದೋ ನಾನೇ. ಸೋಹಮಸ್ಮಿ. ತನ್ನನ್ನು ಆ ಕೃಷ್ಣನನ್ನಾಗಿಯೇ ಭಾವಿಸಿ ಗೋಪೀಜನ ಪ್ರಾಣಧಾರಣೆ ಮಾಡಿಕೊಂಡರಷ್ಟೆ. ರಾಸಕ್ರೀಡೆಯ ಸಂದರ್ಭದಲ್ಲಿ ಗೋಪಿಯರ ಗರ್ವಭಂಗಕ್ಕಾಗಿ ಮರೆಸಿಕೊಂಡಿದ್ದಾಗ! ಅನುಕಾರದಿಂದ ಪರಸ್ಪರ ಒತ್ತಾಸೆಯಾದರು. ಕೃಷ್ಣನದೆಲ್ಲಾ ವ್ಯಕ್ತಿಗತ ವೇದಾನ್ತಕ್ಕಿಂತಲೂ ಸಾಮೂಹಿಕ ಅಧ್ಯಾತ್ಮ ಪ್ರಿಯತೆ ದ್ವಾಪರಾನ್ತ್ಯದ ಅತನ ಬೀಜಾವಾಪ, ಕಲಿಯುಗಕ್ಕೂ ಯಾವೊಂದು ಕ್ಷೇತ್ರವೂ ಸಾಮೂಹಿಕ ಏಕಾಭಿಪ್ರಾಯದ "ಗಣ ತಂತ್ರ" ತತ್ವದಲ್ಲೇ ಸಾಗಬೇಕೆಂಬ ಇಂಗಿತ. ಅಂತೆಯೇ "ಜನಗಣಮನ ಅಧಿನಾಯಕ ಕೃಷ್ಣ". ಅಂತೆಯೇ ಈ ತಿರುಮಂಗೈ ಪ್ರೇಯಸಿ, ಯಾಮ್ = ನಾನೇ ಇದೋ ತಿರುಕ್ಕಣ್ಣಪುರವಾಸಿ! ಎನ್ನು ಪೇಶಿನಾಳ್ = ಹೀಗೆ ನನ್ನೀ ಮಗಳು ಹೇಳುತ್ತಾಳೆ. ಕೃಷ್ಣೋಽಹಂ ಇತಿ ಚಾಪರಾ ಇತ್ಯಾದಿ ಬ್ರಹ್ಮಾನುಕಾರಭಾವದವಳು.

ಅಭಾಸ ಬಂಧುಗಳನ್ನೇನೋ ಬೃಂದಾವನದ ಗೋಪಿಯರು ತೊರೆದು ಬಂದಿದ್ದಿರಲಿ. ನನ್ನೀ ಮಗಳು ಅಂತಹ ವಿದಗ್ಧಳಲ್ಲ. ತಂದೆ, ಗಂಡನಿಗೂ ವ್ಯತ್ಯಾಸವೇ ತಿಳಿಯದಷ್ಟು ಕಿರಿವಯಸ್ಸು, ಮಾತೃವಿಧೇಯಿನಿ! ಮಡವರಲ್ ಮಾದರ್ ಎನ್ ಪೇದೈ = ಪ್ರಾಪ್ತ ಯೌವ್ವನಳಲ್ಲ. ರಾಸಲೀಲಾ ವಿನೋದಿಯಾದರೋ ಯುವತಿ ಪ್ರೌಢೆಯರ ಜತೆಗೂಡಿದ ವಿದಗ್ಧ ಚಕ್ರವರ್ತಿ! ಅಂತಹ, ಇವರ್ಕ್ಕು = ಶವರಿರಾಜನಿಗೆ. ಇವಳ್ ಕಡವದೆನ್? = ಇವಳೇನು ಹಂಗುಳ್ಳವಳು? ಅತ ಈಕೆಯ ಬಾಲ್ಯದ ಮುಗ್ಧ ಭಕ್ತಿಗೆ ಸಾಲ ತೀರಿಸದ ಕಡಗಾರ! ಇವಳಿಗೆ ಕೊಡಬೇಕಾದ ಸಕಲೇತರ ವಿಲಕ್ಷಣವಾದ ತನ್ನ ಸಂಶ್ಲೇಷವನ್ನು ಸಲ್ಲಿಸದೆ ಇವಳ, ಕಣ್ ತುಯಿಲ್ = ಕಣ್ಣಿನ ನಿದ್ದೆಯನ್ನೂ, ಇವರ್ ಕೊಳ್ಳವೇ = ಆ ತಿಮ್ಮಪ್ಪನನ್ನೂ ಬಿಟ್ಟು "ನನ್ನೂರು ಕಣ್ಣಪುರವೇ" ಎಂದು ಬಂದವಳನ್ನೂ ಹೀಗೆ ನಂಬಿಸಿ ದ್ರೋಹ ಮಾಡಬಹುದೇ? ನನ್ನ ಮಾತು ಕೇಳದ ಪ್ರೌಢೆಯಾಗಿದ್ದಿದ್ದರೆ ನಾನೇನೂ ಹೀಗೆ ವಹಿಸಿಕೊಳ್ಳುತ್ತಿರಲಿಲ್ಲ.

ಈ ದಶಕದಲ್ಲಿ ತಿರುಮಂಗೈ ನಾಯಕಿ ಸಖಿಗಳು ಕೇಳಿದ ಮೂರು ಪ್ರಶ್ನೆಗಳಿಗೆ ದೇವರ ಉತ್ತರ ನೀಡುತ್ತಿರುವ ಸಂದರ್ಭವೂ ಇದೆ.

೧. ಸಖಿ! ನೀನೆಲ್ಲಿಂದ ಬಂದೆ? — ಬಡಗಲ ತಿರುಮಲೆಯಿಂದ ಬಂದೆ.

೨. ಬಂದ ಕೆಲಸವೇನು? — ಸ್ವಾಮಿ ಕೈಂಕರ್ಯ.

೩. ನೀನಾರು? — ನಾನೇ ಈಗ ಶೌರಿ ರಾಜ!

ಇವನ್ನೆಲ್ಲಾ ತಾಯಿಯಾದವಳು, ದೇವರನ್ನೇ ಅನುಕಾರ ಮಾಡುತ್ತಿರುವ ಮಗಳ ತನ್ಮಯ ಭಾವವನ್ನು ತಾನೂ ಅನುಭವಿಸಿ, ತಿರುಕ್ಕಣ್ಣಪುರದ ಸ್ವಾಮಿಯಲ್ಲಿ ಹೇಳಿಕೊಳ್ಳುತ್ತಿದ್ದಾಳೆ. ಈಕೆ ಆ ರಾಸಕ್ರೀಡೆಯ ಗೋಪಿಯರಂತೆ ಹಿರಿಯರಿಗೆ ಅವಿಧೇಯಳಲ್ಲ. ಈ ಪರಕಾಲ ನಾಯಕಿ ಎಲ್ಲರಲ್ಲೂ ಎಲ್ಲೆಲ್ಲೂ ಬಲು ಮೆದು ಸ್ವಭಾವದವಳು!

ತಮಿಳ್ ತಿರಳ್ ೯-೭-೪

ಪಣ್ಣುಲಾ ಮೆನ್‌ಮೊಳಿ ಪಾವೈಮಾರ್ ಪಣ್ಮೈಮುಲೈ ಅಣೈದುಮ್ ನಾಮ್ ಎನ್ನು
ಎಣ್ಣುವಾರ್ ಎಣ್ಣಮ್ ಅದೊಳಿತ್ತು ಉಯ್ಯುಕ್ಕರುದಿನಾಯೇಲ್
ವಿಣ್ಣುಳಾರ್ ವಿಣ್ಣಿನ್ ಮೀದಿಯನ್ನ ವೇಙ್ಗಡತ್ತುಳಾರ್ ವಳಜ್ಗೊಳ್ ಮುನ್ನೀರ್
ವಣ್ಣನಾರ್ ವಲ್ಲವಾಳ್ ಶೊಲ್ಲುಮಾ ವಲ್ಲ್ಯಾಯಾಯ್ ಮರುವು, ನೆಞ್ಜೀ

ಕನ್ನಡ ನೆರಳ್

ರಾಗದಾ, ಮೆಲ್‌ನುಡಿ, ಹೆಂಗಳರ್, ಎದೆಯನು, ಒತ್ತಿಹಾ ಮೊಲೆಗಳನ್, ಅಪ್ಪಲೇ ಬೇಕೇ
ಬಾಗುತಾ, ಬಗೆಯುವರ್, ಬಯಕೆಯಂ, ಬಿಟ್ಟೆ ನೀ, ಮೇಲ್ ಅಹಾ, ಜೀವನಂ, ಬಯಸುವೇ, ಯಾದರೇ
ಗಗನದಾ, ಸೂರಿಗಳ್, ಸಲುವೆ, ಯಾ ಪರಮದೊಳ್, ದರುಶನಂ, ಈಯುವರ್, ವೇಂಕಟಂ, ಮೇಲಿಹರ್, ಚೆಲುವಗೊಳ್, ಕಡಲಿನಾ
ಬಗೆಗಳನ್, ಉಳ್ಳವರ್, ವಲ್ಲವಾಳ್, ನಾಮಮಂ, ಪೇಳುವಾ, ಬಲವ, ಚೆನ್‌ಆಂತಿರೆ, ನೆನೆಯೋ ನೀ ಮನವೆಲೇ

ಮಾನಸಿಕ ಸ್ವಸ್ಥತೆಯ ಭೂಮಿಕೆಗೆ ಕಲಿಯನ್ ಹಿಂದಿರುಗಿ ಬಂದಾಗ ತಮ್ಮ ಮನಸ್ಸನ್ನೇ ಕುರಿತು "ನೀನು ಕೆಳಕ್ಕೆ ಅಂದರೆ ಕ್ಷುದ್ರ ಚಿಂತೆಯ ಪಾತಾಳಕ್ಕೆ ಬೀಳದೆ ಉತ್ತಮ ಚಿಂತನೆಯ ಆ ಮೇಲ್ ಜಗತ್ತಿಗೆ ಏರಬೇಕಿದ್ದರೆ ಕೇಳು". ತಿರುಪತಿ ತಿಮ್ಮಪ್ಪನ, "ತಿರುವಲ್ಲವಾಳ್," ದಿವ್ಯದೇಶದ ಸ್ವಾಮಿಯ ಹೆಸರು ಹೇಳುವ ಬಲತೋರು. ನಿನ್ನ ಚಿತ್ತ ಶಕ್ತಿಯನ್ನು ಎಲ್ಲೆಲ್ಲೋ ಚೆಲ್ಲಾಪಿಲ್ಲಿ ಹರಿಸಬೇಡ." ಎಂದುಪದೇಶಿಸುತ್ತಾರೆ. ಅಂದರೆ ಈ ದಶಕ ಸ್ವಗತ ಶೈಲಿ. "ನನನನಾ ನನನನ ನನನನಾ ನನನನ" ಹೀಗೆ ನಾಲ್ಕು ನಾಲ್ಕು ಮಾತ್ರಾಕಾಲಕ್ಕೆ ನಿಲ್ಲಿಸಿ-ನಿಲ್ಲಿಸಿ-ತಾಳ ಬದ್ಧವಾಗಿ ಹಾಡುವಂತೆ ಅಳವಟ್ಟಿದೆ. ಚತುಷ್ಕವಿಶಿಖಾಮಣಿಗಳಲ್ಲವೆ? ಆಶು ಕಾವ್ಯ ಮಧುರಕಾವ್ಯ ಬಿತ್ತರ ಕಾವ್ಯಗಳಂತೆ, ಈ ದಶಕ "ಚಿತ್ರ ಕಾವ್ಯ"ದ ಕಂಪಿನಿಂದ ಕೂಡಿದೆ. ಸ್ವಾನುಭವದಂತೆಯೇ ಅದರೂ, ಇವರ ಸಚ್ಚಿತ್ತವನ್ನು ಅನುಸರಿಸುವ ಸದ್‌ಭಕ್ತರಿಗೆ ಪರೋಪದೇಶವೂ ಆಗುತ್ತದೆ.

ಮುಖ್ಯವಾಗಿ ಮಾನವನನ್ನು ಕಾಡುವುದು ಕಾಮ! ಅದು ನಾನಾರೂಪಗಳಲ್ಲಿದೆ. ಗಂಡು ದೇಹಕ್ಕೆ ಒಂದು ಹೆಣ್ಣು. ಹೆಣ್ಣು ದೇಹಕ್ಕೆ ಒಂದು ಗಂಡು! ಇದು ಯದ್ಯಪಿ ಪ್ರಕೃತಿ ಸಹಜವೆಂಬುದೇ ಬಹುಮತ! ಸಾಮಾಜಿಕ ವಿಜ್ಞಾನಿಗಳಾದ ಪ್ರತ್ಯಕ್ಷ ಪರೋಕ್ಷ ಉಭಯ ಸಾಕ್ಷಾತ್ಕಾರಿಗಳಾದ ಋಷಿ ಮುನಿಗಳು ಸಾಮಾಜಿಕ ಶಿಷ್ಟ ಭೂಮಿಕೆಗೆ ಈ "ಲೈಂಗಿಕಬೆದೆಯನ್ನು" ಶುಭವಿವಾಹದ ರೂಪದಲ್ಲಿ, ಸಾಮಾಜಿಕ ಭೂಮಿಕೆಗೆ ಏರಿಸಿ ತಣಿಸಿದ್ದಾರೆ! ಗಂಡು ಹೆಣ್ಣಿನ ಈ ಯಥೇಚ್ಛ ಹುಚ್ಚು ಕಾಮ ಎರಡೂ ದಂಡೆಗಳನ್ನೂ ಕೊಚ್ಚಿಕೊಂಡು ಹೋಗುವ ಹುಚ್ಚು ಹೊಳೆಯಾಗದಂತೆ, ಕಾಮಕ್ಕೆ ನಲ್ ಪ್ರೇಮದ ಸ್ಥಾನಬದ್ಧತೆಯನ್ನು ಬಹಳ ಅನುಭವದಿಂದ, ಸಮಗ್ರ ದೃಷ್ಟಿಯಿಂದ ಗೃಹಸ್ಥಾಶ್ರಮದ ರೂಪದಲ್ಲಿ ತೋರಿದ್ದಾರೆ. ಯದ್ಯಪಿ ಬ್ರಹ್ಮಚರ್ಯೆಯೇ ಮಾನವನಿಗೆ ಪರಮಮಾನ್ಯ. ಅದೇ ಶುದ್ಧ ಅಧ್ಯಾತ್ಮ! ಆದರೂ ಕೆಲವರಿಗೇ ಸಾಧ್ಯವಾಗುವುದನ್ನೂ ಎಲ್ಲರ ಮೇಲೆಯೂ ಹೇರಬಾರದೆಂಬ ಕರುಣೆಯಿಂದಲೂ ಪಾವೈಮಾರ್ ಎಂದು ಬಹುಪತ್ನೀತ್ವ ಹಾಗೂ ಬಹುಪತಿತ್ವ ಖಂಡಿತ ಬೇಡವೆಂಬುದು ಸಮಾಜ ಮನೀಷಿಗಳ ಉಪದೇಶಸಾರ. ವಿವಾಹ ಒಂದು ಮಾನವನ ಸಂಸ್ಕಾರ! ಶಂಕರಾಚಾರ್ಯರೂ ಕಾಮದ ನಾನಾ ಬಗೆಗಳನ್ನು

"ಬಾಲಸ್ತಾವತ್ ಕ್ರೀಡಾಸಕ್ತಃ ತರುಣಸ್ತಾವತ್ ತರುಣೀಸಕ್ತಃ |
ವೃದ್ಧಸ್ತಾವತ್ ಚಿಂತಾಸಕ್ತಃ ಪರೇ ಬ್ರಹ್ಮಣಿ ಕೋಪಿ ನಸಕ್ತಃ ||"

ಎಂದು ವರ್ಣಿಸಿರುವುದೂ, ಈ ತಿರುಮಂಗೈಯಾಳ್ವಾರರ ಪ್ರಸಾದವೆನ್ನಬಹುದು. ಪಂಚದ್ರಾವಿಡದಲ್ಲಿ ಒಂದಾದ ಕೇರಳದ ಅವರು, ಅಳ್ವಾರುಗಳ ಸಿರಿವಚನ ಸಾಕ್ಷಾತ್ಕಾರ ಸಂಪನ್ನರೇ ಆಗಿದ್ದರು.

ಪಣ್‌ಉಲಾ = ರಾಗೋಲ್ಲಾಸದಿಂದ ಹೊರಗೆ ಇಂಪಾಗುವಂತೆ ತೋರುತ್ತಾ, ಒಳಗೆ ವಿಷವಿಟ್ಟ, ಮೆಲ್‌ಮೊಳಿ = ಮೆಲ್‌ನುಡಿಯಾಡುವ, ಪಾವೈಮಾರ್ = ಕಾಮಿನಿಯರ, ಪಣ್ಮೈ = ದಪ್ಪನಾಗಿ ಒಂದಕ್ಕೊಂದು ಹೆಣೆದ, ಮುಲೈ = ಕುಚ ಕುಂಭಗಳನ್ನು ನಾಮ್ ಅಣೈದುಮ್ = ನಾವು ಅಪ್ಪಿ ಕಟ್ಟಿಕೊಳ್ಳುವುದೇ ಪುರುಷಾರ್ಥ, ಎನ್ನು ಎಣ್ಣುವಾರ್ ಎಣ್ಣಮ್ = ಎಂದೇ ಸದಾ ಚಿಂತಿಸುವವರ ಆ

ಯೋಷಿತ್ ಸ್ಪೃಹೆಯನ್ನು, ಒಳಿತ್ತು = ಅಳಿಸಿ, ನೀ ಪಿಳ್ಳೆತ್ತು ನೀನು ಇಹದಲ್ಲೂ ಆರೋಗ್ಯವಾಗಿ ಜೀವಿಸಿದ್ದು, ಉಯ್ಯ = ಪರದಲ್ಲಿಯೂ ಮೇಲ್ ಏರಬೇಕೆಂದು, ಕರುದಿನಾಯೇಲ್ = ಮನನ ಮಾಡಿ ಬಯಸಿದ್ದೇ ಆದರೆ - ಮುಮುಕ್ಷು ಮನುಷ್ಯನಾದ ಪಕ್ಷದಲ್ಲಿ, ನೆಞ್ಜೀ = ಓ ಮನವೇ! ಮನಸ್ಸೆಂಬ ಅಂತಃಕರಣವೇ ಶುಭ ಅಶುಭ ಉಭಯಕ್ಕೂ ನಡುವಿನ ಬಾಗಿಲಷ್ಟೆ. ಇತ್ತ ಭೋಗ್ಯವಾದ ಶಬ್ದಾದಿ ವಿಷಯಗಳು ಈ ಶಬ್ದ ಸ್ಪರ್ಶರೂಪ ರಸಗಂಧಗಳಿಗೆ ಆಸರೆಯಾದ (ದೇಹ) ಶ್ರೋತ್ರ ತ್ವಕ್ ಚಕ್ಷುರ್ ಜಿಹ್ವಾ ಘ್ರಾಣಗಳೆಂಬ ಪಂಚಜ್ಞಾನೇಂದ್ರಿಯಗಳು. ಅತ್ತ "ಪ್ರತ್ಯಗಾನಂದಂ ಬ್ರಹ್ಮ ಪುರುಷಂ" ಎಂದು ಅಂತರ್ ಮಂಗಳಾನಂದಮಯನೂ, ಜ್ಯೋತಿಸ್ವರೂಪನೂ, ಆದ ಪರಮಾತ್ಮ ಮತ್ತು ಬ್ರಹ್ಮೈಕ ದಾಸಭೂತನೂ ಆದ ಪರಿಶುದ್ಧ ಜೀವಾತ್ಮ ಕೌಸ್ತುಭ ಮಣಿಯಾದ ಚೇತನ ಪುರುಷ! ಓ ಮನಸ್ಸೇ! ನೀನು ಯಾವ ಕಡೆಗೆ ವಾಲುತ್ತಿ! ಕ್ಷುದ್ರ ಸಾಪಾಯ ಐಹಿಕ ಪಾರಮಾರ್ಥಿಕ ಸತ್‌ಪುರುಷಾರ್ಥ ಭಂಜಕವಾದ ಈ ಒಡಲು ಹಾಗೂ ವಿಷಯಾಂತರಗಳ ಕಡೆಗೋ? ಜೀವಾತ್ಮನಿಗೂ ಸ್ವರೂಪೋಚಿತನಾದ ಭಗವಂತನ ಕಡೆಗೋ? ವಿವೇಚಿಸು.

"ಮನ ಏವ ಮನುಷ್ಯಾಣಾಂ ಕಾರಣಂ ಬನ್ಧಮೋಕ್ಷಯೋಃ |
ಬನ್ಧಾಯ ವಿಷಯಾಸಂಗಿ ಮುಕ್ತ್ಯೈ ನಿರ್ ವಿಷಯಂ ಮನಃ ||"

ನಿಜ, ನಿನ್ನ ವಿವೇಕ ಶಕ್ತಿಯೂ ಸಾಲದಾಗಬಹುದು. ಆಗ ನಿನಗೆ ನೇರಾ ಕರಣಾಧಿಪನಾದ ಜೀವಾತ್ಮನ ಕಡೆಗಿದ್ದು, ಆತ ಕರುಣಾಧಿಪನಾದ ಭಗವಂತನಲ್ಲಿ ಇಂದ್ರಿಯಾದಿಗಳ ಸಂಯಮಕ್ಕೆ ಮೊರೆಯಿಡು.

"ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ"

ಮುಂದೆ ಸೂಕ್ಷ್ಮ ವಿಷಯ ವಾಸನೆಗಳ ಹತೋಟಿಗೆ ಸ್ವಾಮಿ ತಿಮ್ಮಪ್ಪನಿದ್ದಾನೆ.

ಪ್ರಕೃತಿ ಪ್ರಾಕೃತಗಳಾದುವೆಲ್ಲಾ ಹೇಗೆ ದೈವ ಸೃಷ್ಟವೋ ಜೀವಾತ್ಮನ ಚೈತನ್ಯ ಶಕ್ತಿಯೂ ಅದೇ ಭಗವಂತನ ನಿತ್ಯೇಚ್ಛೆಯಿಂದಲೇ ಇದೆಯಷ್ಟೆ. ಕೈಲಾದಷ್ಟೂ ಕಷ್ಟಸಹನೆಯ ತಿತಿಕ್ಷಾಶಕ್ತಿ ಹಾಗೂ ನಿಗ್ರಹದಿಂದ ವಿಷಯಾssಹಾರಗಳು ದೂರ ಓಡುವುವು. ಆದರೆ ಮನಸ್ಸಿನೊಳಗಿನ ಸೂಕ್ಷ್ಮ ರಸ-ಭೋಗೇಚ್ಛೆ ಹೃಷೀಕೇಶನ ಕೃಪೆಯಿಂದ ನಿಶ್ಶೇಷ ಕ್ಷಯವಾಗುವುದು. ಈಶ್ವರ ದತ್ತ ಪ್ರವೃತ್ತಿ ನಿವೃತ್ತಿ ಶಕ್ತಿಗಳನ್ನು ನಿರಹಂಕಾರದ ಚಿತ್ತವೃತ್ತಿಯಿಂದ ನಾವು ಸದುಪಯೋಗ ಪಡಿಸಿಕೊಂಡರೆ, ಸ್ವಾಮಿಗೆ ಇನ್ನಷ್ಟು ಪ್ರೀತಿ ಹೆಚ್ಚುತ್ತದೆ. ಯದ್ಯಪಿ ನಿಸರ್ಗ ಸುಹೃತ್ ಆದವನದೇ ಪ್ರಪ್ರಥಮ ಪ್ರವೃತ್ತಿ. ಅದನ್ನು ಮನನಗೈಯಲು ಕರಣವಾದ ಮನಸ್ಸಿನ ಮೂಲಕ ಮಥಿಸಿ, ಈಶ್ವರದತ್ತ ವಿವೇಕದಿಂದಲೇ ಅರಿತು, ಶರಣಾಗತಿ ಮಾಡಿದಾಗ ಎರಡನೇ ಹಂತದಲ್ಲಿ ಶ್ರೀಮನ್ನಾರಾಯಣನಿಗೆ ಪ್ರೀತಿ ಉಂಟಾಗಿ, ನಮ್ಮ ಸಾಧನಾಹಂಕಾರ, ಫಲ, ಮಮಕಾರಗಳೂ ಇಲ್ಲದಂತಾಗಿ, ಹಿತಮಿತ ವಿಹಿತ ಭೋಗಗಳೂ ಕೈಂಕರ್ಯರೂಪವೇ ಆಗಿ ಬಿಡುವುವು. ಅಧಿಕಾರಿ ವಿಶೇಷಗಳಿಗೆ, ಸ್ತ್ರೀ ಸಂಗ - ವಿವಾಹಿತರೂಪದ್ದೂ ತ್ಯಾಜ್ಯವಾಗಬಹುದು. ಪ್ರಜಾಪ್ರಭುತ್ವದ ಈ ಕಾಲಕ್ಕಂತೂ, "ಧರ್ಮ ಪ್ರಜಾರ್ಥಂ ವ್ಯಣೇಮಹೇ". ಮನೆ, ಗ್ರಾಮ, ಮೊಹಲ್ಲಾ, ರಾಜ್ಯ, ರಾಷ್ಟ್ರ ವಿಶ್ವಗಳನ್ನೆಲ್ಲಾ ಅನ್ಯೋನ್ಯ ಸಹೃದಯವಾಗಿ ಜೋಡಿಸುವ "ಪ್ರಕೃಷ್ಟ ಸಂತಾನವೇ" ಅನಿವಾರ್ಯ. "ಪ್ರಜಾ" "ಕುಜಾ" ಆಗಬಾರದಷ್ಟೇ!

"ಧಾರಣಾತ್ ಧರ್ಮ ಇತ್ಯಾಹುಃ"

ಇಷ್ಟೊಂದು ಸಮಗ್ರ ಸಂಪೂರ್ಣ ವಿಚಾರವನ್ನೇ "ವಿಣ್ ಉಳಾರ್ ಎನ್ನಿನ್ ಮೀದು ಇಯನ್ನ ವೇಙ್ಗಡತ್ತುಳಾರ್" ಎಂದು ತಿರುಮಂಗೈಯಾಳ್ವಾರ್ ಇಲ್ಲಿ ಹೇಳುವುದು. "ಮನವಿದ್ದರೆ ಮಹದೇವ" ನಾವು ನಮ್ಮ ನಮ್ಮ ಮನೋಬಲದ ಶಕ್ತಿಯನ್ನು Will Power ದುರುಪಯೋಗ ಹಾಗೂ ಅನುಪಯೋಗ ಮಾಡಿಕೊಳ್ಳುವ ಹಮ್ಮು ಬಿಡೋಣ. ಈಶ್ವರಾಯ ನಿವೇದಿತುಮ್ ಈ ದೇಹೇಂದ್ರಿಯಾದಿಗಳು. ಸದುಪಯುಕ್ತವಾಗಲಿ, ಆತ್ಯಂತಿಕವಾಗಿ ವಿಷಯತ್ಯಾಗ ಸ್ವರೂಪತಃ ಬೇಡ. ದಿವ್ಯದೇಶಗಳಿಗೆ ತೆರಳುತ್ತಾ, ಸತ್‌ಸಂಗದಲ್ಲೇ ಇರೋಣ. ಆ ಪರಮವ್ಯೋಮದಲ್ಲಿ ನಿತ್ಯಸೂರಿ ಸಂಸೇವ್ಯನಾಗಿರುವವನೇ ಅಲ್ಲಿಂದಿಳಿದು ಈ ಬೆಟ್ಟಕ್ಕೂ, "ತಿರುವಲ್ಲವಾಳ್" ದಿವ್ಯದೇಶಕ್ಕೂ, ನಮ್ಮ ಸಹಾಯಾರ್ಥವೇ ಸ್ವಸಂತೋಷದಿಂದ ಬಂದಡಗಿರುವುದು. ಅತ ಕೇವಲ ಬ್ರಹ್ಮಸ್ವರೂಪ ಮಾತ್ರನಲ್ಲ. ತತ್‌ಪ್ರಕಾಶಕ ರೂಪ ಗುಣಾದಿಗಳಿಂದ ಕೂಡಿರುವವನೂ ಆಗಿದ್ದಾನೆ. ಎಲ್ಲೆ ಮನವೇ! ನಿನ್ನ ಭಾಗಕ್ಕೂ ಮುಮುಕ್ಷುಗಳ ಭಾಗಕ್ಕೂ ಬದ್ಧರಾಗಿರುವವರ ಭಾಗಕ್ಕೂ ಆನಂದ, ರಂಜನೆ ನೀಡುತ್ತಿರುವ ಪವಿತ್ರ ಪ್ರದೇಶಗಳಿವು. ದೇಶ ಭಕ್ತಿಯನ್ನು ಅಧ್ಯಾತ್ಮೀಕರಣಗೊಳಿಸುವ ಚಾತುರ್ಯ ಭಗವಂತನದು.

ಅಲ್ಲಲ್ಲಿನ ಮೂರ್ತಿಗಳು ಕೇವಲ ಪ್ರತೀಕ, ಬೊಂಬೆಗಳಷ್ಟೇ, ಎಂದು ತಿಳಿಯಬಾರದು. ಚಿದಾನಂದ ಮೂರ್ತಿಗಳು. ಜೀವನ-ಉಜ್ಜೀವನ-ಉಭಯ ಶಕ್ತಿದಾಯಕಗಳು. ಸ್ವರೂಪವನ್ನೂ ಗರ್ಭೀಕರಿಸಿಕೊಂಡೇ ಇರುವುವು. ಆ ನಿರಾಕಾರ ನಿರ್ಗುಣ ಸ್ವರೂಪವನ್ನು ಎಲ್ಲರಿಗೂ ಸ್ಪಷ್ಟವಾಗಿ ಪ್ರಕಾಶ ಪಡಿಸುವಂಥವು. ಸರ್ವಶಕ್ತಿಗುಣ ಸ್ವಭಾವಾನ್ಯೂನಗಳು! ಈ ಮೂರ್ತಿ, ವಿಳಮ್ ಕೊಳ್ ಮುನ್ನೀರ್ = ಸೌಂದರ್ಯ ಗಾಂಭೀರ್ಯಾದಿಗಳನ್ನೊಳಗೊಂಡ "ಆತ್ತು ನೀರ್-ಊತ್ತುನೀರ್-ಮುಹಿಲ್-ನೀರ್" ನದಿ ಬುಗ್ಗೆ ಮಳೆ ಈ ಮೂರು ಬಗೆಯ ಜಲಕ್ಕೆಲ್ಲಾ ಕೊಟ್ಟಿ ಕೊನೆ ಆಧಾರವಾದ ಮಹಾಜಲನಿಧಿ ಸಮುದ್ರವನ್ನೂ ಮೀರಿರುವ, ವಣ್ಣನಾರ್ = ಪರತ್ವ ಮತ್ತು ಸೌಲಭ್ಯ

ಉಭಯ ಸ್ವಭಾವ ಹಾಗೂ ಬಣ್ಣಗಳುಳ್ಳ ಆ ಪರಮಕರುಣಾಳುವಿನ, "ವಲ್ಲವಾಳ್" ಅಭಿಮಾನ ಸ್ಥಳವಾದ ತಿರುವಲ್ಲವಾಳ್ ದಿವ್ಯದೇಶದ ಹೆಸರನ್ನು ನಿನ್ನ ವಶದಲ್ಲಿರುವ ನಾಲಿಗೆಯಿಂದ ಹೇಳುತ್ತಾ ಬಾ! ಅಷ್ಟು ವಾಕ್‌ಶಕ್ತಿ ದೈವದತ್ತವಾಗಿದ್ದೇ ಇದೆ. ಶೊಲ್ಲು ಮಾ ವಲ್ಲೈ ಯಾಯ್ = ಉಕ್ತಿ ಮಾತ್ರ ಸಾಕು. "ನಮ ಉಕ್ತಿಂ ವಿಧೇಮ" "ವಚನ ಮವಲಂಬ್ಯಾಽಪಿ", ನೆಞ್ಜೀ ಮರುವು = ಇಹದ ನಿರಪಾಯ ಜೀವನವನ್ನೂ ಇಲ್ಲಿ ಸಲ್ಲುವ ಆ ಪಾವನ ಜೀವನ ಮಾರ್ಗದಿಂದಲೇ, ಅಲ್ಲಿಯೂ ಸಲ್ಲಬಹುದಾದ ಉಜ್ಜೀವನ ಉಭಯವನ್ನೂ ಹೊಂದೋ ಮನವೇ!

ತಮಿಳ್ ತಿರಳ್ ೯-೯-೯

ವಲಮ್‌ಬುರಿ ಆಳಿಯನೈ ವರೈಯಾರ್ ತಿರಳ್ ತೋಳನ್ ತನ್ನೈ ಪುಲಮ್‌ಬುರಿ ನೂಲವನೈ ಪೊಳಿಲ್ ವೇಙ್ಗಡ ವೇದಿಯನೈ ಶಿಲಮ್ ಬಿಯಲ್ ಆರ್ ಉಡೈಯ ತಿರುಮಾಲ್ ಇರುಞ್ಜೋಲೈ ನಿನ್ನ ನಲನ್‌ತಿಹಳ್ ನಾರಣನೈ ನಣುಹುಙ್ಗೊಲ್? ಎನ್ ನಲ್, ನುದಲೇ

ಕನ್ನಡ ನೆರಳ್

ಬಲಮುರಿಯಂತೇ ರಥಾಂಗ ಪಿಡಿದಿಹನಂ ಗಿರಿತೆರ ಸುಂದರಘನ ಬಾಹುಗಳುಳ್ಳವನಂ
ಸೆಳೆಯುವ ಮನನಂ ಸಿರಿಜನಿವಾರಿಯನಂ ಹೂಬನ ವೇಂಕಟಗಿರಿಯನಂ ವೇದೈಕವೇದ್ಯನಂ
ನೂಪುರ ಗಂಗೆಯು ಜುಳು ಜುಳು ಹರಿಯುವ "ತಿರುಮಾಲ್ ಇರುಂ ಶೋಲೆ" ಯೊಳ್ ನಿಂತವನಂ
ಆ ಪೂರ್ಣದನಲದಿಂ ಬೆಳಗುವ ನಾರಣನಂ ಬಳಿಸಾರಲ್ಕಾಗುವಳೇ ಎನ್ ಈ ಚೆನ್ ನೊಸಲೀ?

ಇಲ್ಲಿಯೂ ವಿರಹಿಣೀ ಪರಕಾಲ ನಾಯಕಿ ಕಾಣಿಸಿಕೊಳ್ಳುತ್ತಾಳೆ. ಅಷ್ಟು ಪ್ರಾಪ್ಯತ್ವರೆ ಹುಟ್ಟಿಸಿದ, ಉಪಾಯಾಽಧ್ಯವಸಾಯ ನಿಷ್ಠೆಯೆಂಬ ಮಾತೆ ಹೇಳುವ ಮಾತು! ಈ ದಶಕ. ಸ್ವಾಮಿಯ ಅಂದಚೆಂದಕ್ಕೆ ಅನುರೂಪವಾದುದು ಈ ನನ್ನ ಕುವರಿಯ ಹೊಳೆಯುವ ನಲ್‌ನೊಸಲು. ಇಂಥವಳಿಗೆ ನಾರಾಯಣನ ಸಾಮೀಪ್ಯ ಭಾಗ್ಯವಾದರೂ ದಕ್ಕುವುದೇ?

ಈ "ಅಳಹರ್" ಸ್ವಾಮಿಯ ಬಗೆಗೆ ನನ್ನೀ ಮಗಳು ಸೆಳೆಯಲ್ ಪಟ್ಟಿರಬೇಕಾದರೆ ಮೊದಲನೆಯ ಕಾರಣ, ವಲಮ್ ಪುರಿ ಆಳಿಯನೈ = ಬಲಮುರಿ ಶಂಖವನ್ನು ಎಡಗೈಲಿ ಹಿಡಿದಿರುವ ಆ ಸೌಂದರ್ಯ. ಮತ್ತೂ ಶ್ರೀ ಸುದರ್ಶನ ಚಕ್ರವನ್ನು ಬಲಗೈಲಿ ಅಂತಿರುವ ಚೆಲುವು. "ಕನ್ಯಾವರಯತೇ ರೂಪಮ್" ಈ ನಾಯಿಕಾಽಽವೇಶಕ್ಕೇರಿರುವ ಶರಣರಿಗೆ, ಪುರುಷೋತ್ತಮತ್ವಸೂಚಕವಾದ "ಶಂಖೀ ಚಕ್ರೀ ಚ" ತಿರಕ್ಕೋಲದಲ್ಲೇ ಸೆಳೆತ! ಈ ಕರದ್ವಂದ್ವಕ್ಕೇ ಈಕೆ ಸಿಕ್ಕಿ ಸೋತಿದ್ದಾಳೆ! ಉಳಿದ ಇನ್ನೆರಡು ಬಾಹುಗಳು ಸ್ವಾಮಿಯದು ತಾನೇ ಸಾಮಾನ್ಯವೇ? ವರೈ ಆರ್ ತಿರಳ್ ತೋಳನ್ = ಗಿರಿ ಸದೃಶ ದಾರ್ಢ್ಯವಾಂತವು. ಪುಲಂಪುರಿ ನೂಲ್ ಅವನೈ = ಮನೋಜ್ಞವಾದ ಯಜ್ಞೋಪವೀತಧಾರಿ! ಭುಜದಿಂದ ಹೊಕ್ಕಳವರೆಗೂ ಒಂದಕ್ಕೊಂದು ಒಪ್ಪಿ ಮುಮ್ಮಡಿಸುತ್ತಿರುವ ಸೌಂದರ್ಯ ತ್ರಿವೇಣಿಯಿಂದ ನನ್ನೀ ಕಂದಳು ಆ ಕಮನೀಯನ ಬಗ್ಗೆ ಕಾಮಿನಿಯಾಗಿದ್ದಾಳೆ! ಬಳಲುಗೆ ಸೋಲುಗೆ ತಾಗಿದೆ! ಆತ ಎಲ್ಲಿರುವುದು? ಪೊಳಿಲ್ ವೇಙ್ಗಡಮ್ = ಪುಷ್ಪ ಮಂಟಪವೆನಿಸಿದ ವೇಂಕಟಾಚಲದಲ್ಲಿ, ಭರತಖಂಡದ ತೆಂಕಣ ದ್ರಾವಿಡ ಪಂಚರಾಜ್ಯ ವಲಯಗಳ Satharan zone - ಅರ್ಚಾಮೂರ್ತಿಗಳಿಗೆ ರಕ್ಷಣೆಯಿತ್ತಿರುವುವು. ಉತ್ತರಕ್ಕೆ ಈ ಪುಷ್ಪ ಮಂಟಪ ವಡಕ್ಕೋಟ್ಟೆ. ದಕ್ಷಿಣಕ್ಕೆ ಶ್ರೀರಂಗ ಭೋಗಮಂಟಪ! ತೆರ್‌ಕ್ಕೋಟ್ಟೈ. ಪೂರ್ವಕ್ಕೆ ಕಂಚಿ ತ್ಯಾಗ ಮಂಟಪ ಚತುರ್ ಮುಖ ಯಾಗಮಾಡಲಾಗಿ ಅಗ್ನಿಯಿಂದೆದ್ದು ತನ್ನನ್ನೇ ಆತನಿಗೆ ತ್ಯಾಗಮಾಡಿಕೊಂಡದ್ದು ಕೀಳ್ ಕೋಟ್ಟೈ. ತಿರುಮಾಲಿಯಂ ಶೋಲೈ ತೆನ್ ಮೇಲ್ ಕೋಟ್ಟೈ. - ಪಶ್ಚಿಮಕ್ಕೆ ಜ್ಞಾನಮಂಟಪವೆಂಬ ಮೇಲ್ ಕೋಟ್ಟೈ ತಿರುನಾರಾಯಣಪುರ. ಆಂಧ್ರಕ್ಕೆ ಒಂದು, ತೊಂಡೈಗೆ ಒಂದು, ಚೋಳಕ್ಕೆ ಒಂದು, ಪಾಂಡ್ಯಕ್ಕೆ ಒಂದು, ಕನ್ನಡಕ್ಕೆ ಒಂದು ಹೀಗೆ ಐದು ಕೋಟೆಗಳು ಭಗವಂತನಿಗೆ.

ಪರಮಾತ್ಮನಿಗೆ ಪರಮಪ್ರಮಾಣ ಯಾವುದು? ಸದ್ ವಿದ್ಯೆಯನ್ನು ಪ್ರಕಾಶಪಡಿಸುವ ಭ್ರಮ ಪ್ರಮಾದ ಅಜ್ಞಾನ ವಂಚನೆಗಳಿಲ್ಲದ ಹಿತ ಮನೋಜ್ಞ ಅತೀಂದ್ರಿಯ ಸಾಕ್ಷಾತ್‌ಕಾರಕ್ಕೂ ಅಣಿಗೊಳಿಸುವ ನಾನಾ ಭಾಷೆಗಳ, ನಾನಾ ದೇಶಗಳ ಸರ್ವವೇದಗಳು. **"ಎವ್ವುಲ ಹತ್ತೆವ್ವೆವೈಯುಮ್ ಶಾದುವಾಯ್ ನಿನ್ ಪುಹಳಿನ್ ತಹೈಯಲ್ಲಾಲ್ ಪಿರಿದಿಲ್ಲೈ!"** ಪ್ರಪನ್ನ ಜನ ಕೂಟಸ್ಥರಾದ ಶಠಕೋಪರ ಈ ಶ್ರೀ ಸೂಕ್ತಿಯಂತೆ. **"ಸರ್ವೇ ವೇದಾಃ ಯತ್ ಪದಂ ಆ ಮನನ್ತಿ ಸರ್ವ ಅಮ್ನಾಯಗಳು. ವೆದೈಶ್ಚ ಸರ್ವೈ ರಹಮೇವ ವೇದ್ಯಃ. ವೇದಾಃ ಪ್ರಮಾಣಮ್. ಅನನ್ತಾ ವೈ ವೇದಾಃ"** ಯಾಚ ಉದಿತಾ ಯಾಚ ಅನುದಿತಾ ನಮೋವಾಚೇ. ವೇದಿಯನೈ = ಶ್ರುತಿ ಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ ಸೀಮಿತನಾಗಿ ಒಂದೇ ಕ್ಷೇತ್ರಕ್ಕೆ ಕಚ್ಚಿಕೊಂಡಿದಾನೋ? ಅವನೇ "ತಿರುಮಾಲ್ ಇರುಮ್ ಶೋಲೈ"ಯಲ್ಲೂ, ವೇಂಕಟವನ, ತರುಷಂಡ ವನಸ್ಥ. ವೈಕುಂಠಕ್ಕೆ ವಿರಜಾನದಿ ಇರುವಂತೆ, ತಿರುಪತಿಗೆ ೩೩ ಕೋಟಿ ತೀರ್ಥಗಳಿರುವಂತೆ, ತಾಯೀ ನೀವೀಗ ಹೇಳಿದ ಸುಂದರ ಬಾಹುವಿನ ಊರಿಗೆ ಯಾವ ಆರ್ ಇದೆ? ಶಿಲಮ್ಬು ಇಯಲ್ ಆರು = ದೇವರ ಪಾದಾಭರಣದ ಘಲುಘಲು ಉಲಿಯಂತೆ

ಜುಳುಜುಳು ಹರಿಯುವ ನೂಪುರಗಂಗೆ! ತ್ರಿವಿಕ್ರಮ ಮೇಲಕ್ಕೊಂದು ಪಾದ ಬೆಳಸಿದಾಗ ಸತ್ಯಲೋಕದ ಚತುರ್‌ಮುಖ ಬ್ರಹ್ಮಾ ತನ್ನ ಕಮಂಡಲುವಿನ ತೀರ್ಥದಿಂದ ಸ್ವಾಮಿಯ ಪಾದ ಕಟಕಗಳನ್ನು-ಕಾಲ್‌ಗೆಜ್ಜೆಗಳನ್ನು ತೊಳೆದು "ಶ್ರೀಪಾದ ತೀರ್ಥ" ಸ್ವೀಕರಿಸಿದನಷ್ಟೆ. ಆಗ ಕೆಳಕ್ಕೆ ಬಿದ್ದ ನೀರಿನ ಕೊಂಚ ಭಾಗ ಇಲ್ಲಿ ಬಿತ್ತು. ಊರು, ಪೇರು, ಆರು ಮೂರು ಪುಷ್‌ಕಳವಾದ ದಿವ್ಯದೇಶ! ಇಲ್ಲೆಲ್ಲಾ ನಲಮ್ = ಕಲ್ಯಾಣ ಗುಣಗಳಿಂದ ತಿಹಳ್ = ಪ್ರಕಾಶಿಸುವವ. ಯಾರ್ ಅತ? ನಾರಣನೈ = ಸರ್ವ ಮೂರ್ತಧಿಷ್ಠಿತನೂ ಸರ್ವಾಧಾರ ಸರ್ವಾನ್ತರ್‌ಯಾಮಿಯಾದವನೂ "ನಾರ - ಅಯನ" "ನಾರಾಣಾಂ ಅಯನಮ್, ನಾರಾಃ ಅಯನಮ್ ಯಸ್ಯಸಃ". ಹೀಗೆ ವ್ಯಾಪಕವಾದ "ನಾರಾಯಣ" ನಾಮವುಳ್ಳ, ವ್ಯಾಪಕ ಅಷ್ಟಾಕ್ಷರಿ ಮಂತ್ರಪ್ರತಿಪಾದ್ಯನಾದವನನ್ನೇ, ದ್ರಾವಿಡ ವೇದ ತದ್‌ಭವೀಕರಿಸಿ "ನಾರಣನ್" ಎಂದು ಹೇಳಿದೆ. ಎನ್‌ನಲ್‌ನುದಲ್ = ಇಂಥ ತಿರುನಾರಾಯಣನನ್ನು, ಈ ನನ್ನ ನಲ್‌ನೊಸಲಿನ ಚೆಲುವಿ! ನಣುಹುಮ್‌ಕೊಲ್ = ಸನಿಯಿಸುವ ಸೌಭಾಗ್ಯವತಿಯೇ? ಹೇಳಪ್ಪಾ ಸ್ವಾಮಿ.

ತಮಿಳ್ ತಿರಳ್ ೧೦-೧-೨

ಪೊನ್ನೈ ಮಾಮಣಿಯೈ ಅಣಿಯಾರ್‌ನ್ದ ದೋರ್ ಮಿನ್ನೈ ವೇಙ್ಗಡತ್ತುಚ್ಚಿಯಿಲ್ ಕಣ್ಣು ಪೋಯ್
ಎನ್ನೈ ಯಾಳುಡೈ ಈಶನೈ ಎಮ್ ಬಿರಾನ್ ತನ್ನೈ ಯಾಮ್ ಶೆನ್ನು ಕಾಣ್ಡುಮ್ ತಣ್ ಕಾವಿಲೇ

ಕನ್ನಡ ನೆರಳ್

ಹೊನ್ನಂ! ಬೆಲೆಬಾಳ್ ತಣ್‌ರನ್ನದೊಲ್ ಭೋಗ್ಯನಂ ಚೆಂದವೆ ತುಂಬಿಹ ಸ್ಥಿರ ನಿಸ್ಸಮ
ಮಿನ್‌ಪೋಲ್ ಉಜ್ವಲ ವೇಂಕಟಗಿರಿ ಶಿಖರದೊಳ್ ನಿನ್ನೆಯೇ ಕಂಡೇ ಪೋಗುತ, ಮೇಲೂ
ಎನ್ ಆಳ್‌ಗೊಂಡೀಶನಂ ಶೇಷಿಯನಂ ಎಮಗದನುಪಕರಿಸುತ ನಿಯಮನ ಶೀಲನಂ
ನಾನ್ ನಾಳೆಯೇ ಸೇರುತ ಕಾಣುವೆ ತಿರುತ್ತಣ್‌ಕಾವಿನ ಧಾಮದೊಳೇ

ತಮ್ಮ ಆಳ್ವಾರ್ ಸ್ಥಿತಿಗೇ ಇಳಿದ ತಿರುಮಂಗೈ ಸಂತರ ಮಾತು. ದಿವ್ಯದೇಶಗಳು ಅನೇಕವಿರಬಹುದು. ಆದರೆ ಎಲ್ಲೆಲ್ಲೂ ಒಬ್ಬನೇ! ಸರ್ವಕಾಲ, ಸರ್ವದೇಶ ಸರ್ವವಸ್ತುಗಳಿಂದ ಅತ ಬೇರೆ ಬೇರೆಯೆಂದು ಅಳೆಯಲ್ ಪಡಲಾರ. ಅವನ ಸ್ವರೂಪವೇ ತ್ರಿವಿಧ ಪರಿಚ್ಛೇದಕ್ಕೊಳಗಾಗದ ಅನನ್ತತ್ವ! ಸ್ವರೂಪಕ್ಕೆ ಅವಿರೋಧಿಯಾಗಿಯೇ ಅವನ ರೂಪಾದಿಗಳನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ವೇದಧರ್ಮದ ಮರ್ಮ, ಜಗತ್ತಿನಲ್ಲಿ ಇನ್ನೂ ಸರ್ವಾsವಿರೋಧಿಯಾಗಿಯೇ, ಸರ್ವ ಸಂಗ್ರಾಹಕವಾಗಿಯೇ ಬಹಳಷ್ಟು ವಿಕಸಿತವಾಗಬೇಕಿದೆ. ಅತಿ ದೈತದ ಪಕ್ಷಪಾರ್ಟಿ ಕೋಮುಭಾವನೆಗಳು ಎಲ್ಲೆಲ್ಲೂ ವಿಜೃಂಭಿಸುತ್ತಿರುವುದರ ಕಾರಣಗಳನ್ನು ನಾವೆಲ್ಲರೂ, ತಾಳ್ಮೆಯಿಂದ ಚಿಂತಿಸುವ ಶಿಕ್ಷಣ ಪದ್ಧತಿಗೇ, ಮಿಲಿಟರಿಗಿಂತ ಹೆಚ್ಚು ಬಡ್ಜೆಟ್ ಇಡಬೇಕು. ಹೊಸಮನದವರಾಗಬೇಕು.

ಪೊನ್ನೈ = "ಅಪ್ರಣಖಾತ್ ಸುವರ್ಣಮ್" "ಹಿರಣ್ಮಯವಪುಃ" ಶಾಶ್ವತ ಸ್ಥಿರ ಮೌಲ್ಯವುಳ್ಳವನಾದ. ಹಿರಣ್ಯವರ್ಣೆಯಾದ ಶ್ರೀದೇವಿಯ ಕಾನ್ತಿಯಿಂದ ಸ್ವರ್ಣಮಯನಾದ, "ಅತೀವರಾಮಃ ಶುಶುಭೇ" ವಿವಾಹಾನಂತರ ರಾಮ ಸೀತೆಯಿಂದ ಅತಿಶೋಭಾವಂತನಾದಂತೆ! ಭಕ್ತರ ಚಲಾವಣೆಗೆ ಬರುವ ಸ್ವರ್ಣಾಭರಣಾದಿಗಳಂತೆ, ತಿಮ್ಮಪ್ಪನ ಗುಣಗಳ ಉಪಯೋಗ ಇಲ್ಲೇ. ಪರಮಪದದ ಆ ರೂಪು "ಕಟ್ಟಿಪ್ಪೊನ್" ಚಿನ್ನದ ಘಟ್ಟಿಯಾದರೆ, ಈಗ "ಪಣಿಪ್ಪೊನ್" ಹೀಗೆ ವರೇಣ್ಯ - ಎಲ್ಲರಿಂದಲೂ ಆಸೆ ಪಡುವಂತಿರುವ. ಮಾಮಣಿಯೈ = ಮಹಾಮಹಾ ನವರತ್ನಗಳಿಗಿಂತಲೂ ಹೆಚ್ಚಾಗಿ ಹೊಳೆಯುವವನು. ಅವನ ತಿರುಮೇನಿ ಸಂಬಂಧದಿಂದ, ರತ್ನಾಂಗಿ ಸ್ವರ್ಣಾಂಗಿ ವಜ್ರಕಿರೀಟಾದಿಗಳು ಕಂಗೊಳಿಸುವುವು. ಆಭರಣಗಳಿಗೂ ಆಭರಣ ಸ್ವಾಮಿ! ಸರ್ವರತ್ನಭೂಷಣ ಭೂಷಾರ್ಹ! ಅಣಿ ಆರ್‌ನ್ದದು = ಸೌಂದರ್ಯ ಸೌಭಾಗ್ಯದಿಂದ ತುಂಬಿದ. ಓರ್ ಮಿನ್ನೈ = ಸಾಮಾನ್ಯ ವಿದ್ಯುತ್ತಿನಂತಲ್ಲ. ಸುಪ್ರಾ ಎಲೆಕ್ಟ್ರಿಕಲ್ ಪರ್ಸನಾಲಿಟಿ! ಅತಿ ವಿದ್ಯುತ್‌ಪುರುಷ! ನನ್ನು, ವೇಙ್ಗಡತ್ತು ಉಚ್ಚಿಯಿಲ್ = ಶ್ರೀ ವೇಂಕಟಾದ್ರಿಯ ಶಿಖರಾಗ್ರದಲ್ಲಿ, ಕಣ್ಣು = ಚೆನ್ನಾಗಿ ಸಂದರ್ಶಿಸಿ. ಅತನ ಸರ್ವೇಶ್ವರತ್ವ, ಪರಮೋಪಕಾರಕತ್ವ ಗುಣಗಳನ್ನು ನಾನೆಲ್ಲಿ ಕಾಣುತ್ತಿರುವುದು, ಹೇಳಲೇ? ಎನ್ನೈ ಆಳ್ ಉಡೈ ಈಶನೈ = ನೀಚಾತಿನೀಚ ಪರಮಭ್ರಷ್ಟನಾದ ನನ್ನಿಂದಲೂ ಸರ್ವಕೈಂಕರ್ಯ ಸ್ವೀಕರಿಸಿ, ಸರ್ವರಿಗೂ ಸರ್ವೇಶ್ವರನಾದುದು. ನನಗಿಂತ ಕೀಳಾದವರು ಯಾರೂ ಇಲ್ಲ. ತಿರುಮಂಗೈಗಳಿಗೆ ಸ್ವೇತರ ಸಮಸ್ತರೂ, ತಿಮ್ಮಪ್ಪನಷ್ಟೇ ಪೂಜ್ಯರೆಂಬ ಭಾಗವತ ಚರಮಾವಧಿದಾಸ್ಯ ಇಲ್ಲಿ ಸೂಚಿತವಾಗುವುದು. ಇದೇ ಚರಮ ಪರ್ವ ಎನಿಸಿಕೊಳ್ಳುತ್ತದೆ. ಅತ್ಯಾಧುನಿಕ ವೇದಾನ್ತ ವಿಜ್ಞಾನ ಸಂಪನ್ನ ಆಚಾರ್ಯವಿನೋಬಾ ಸೂತ್ರವೊಂದು ಇಲ್ಲಿಗೆ ಹೊಂದಿ ಬರುತ್ತದೆ. "ಅತ್ರೈತಮ್" ನಾನೋರ್ವನೇ ಅಂತ್ಯಾಂತ್ಯ ಉಳಿದವರೆಲ್ಲಾದೇವರೂ ಸೇರಿ ನನಗಿದೋ ಸಮಾನವಾಗಿಯೇ ಪೂಜ್ಯರು. ಆದುದರಿಂದ, ಸರ್ವೇಶ್ವರ ಮತ್ತು ಸರ್ವರೂ ಒಂದು ಗುಂಪಾದರೆ, ಅರಾಧ್ಯರಾದರೆ, ನಾನೋರ್ವನೇ ಸರ್ವಾರಾಧಕ, ಜಡವಸ್ತುಗಳೆಲ್ಲಾ ತುಳಸೀ ತೀರ್ಥ ಇತ್ಯಾದಿಗಳು, ತ್ರೈತಂ ಸೇವಾರ್ಥಮ್ ಅರಾಧನೋಪಕರಣಗಳು!

ಎಮ್ ಪಿರಾನ್ ತನ್ನೈ = ನನ್ನ ಉಪಕಾರಕ್ಕಾಗಿಯೇ, ಉಜ್ಜೀವನಕ್ಕಾಗಿಯೇ ತಿಮ್ಮಪ್ಪ ಹಾಗೂ ಭಕ್ತಜನಗೋಷ್ಠೀ! ಇಂತಹ ಮಹತೋ ಮಹಾನ್ತನನ್ನು, ತೆನ್ನು = ಇವೊತ್ತು ಸಂಧಿಸಿ, ಕಾಣ್ಡುಮ್ = ಸಂದರ್ಶಿಸುತ್ತಿದ್ದೇನೆ. ಎಲ್ಲಿ? ತಣ್‌ಕಾವಿಲೇ = ತಂಪಾದ "ತಿರುತ್ತಣ್ ಕಾವಿಲ್" ಎಂಬ ದಿವ್ಯ ದೇಶದಲ್ಲಿ ಇದಕ್ಕೆ ಮೊದಲ ಹಾಡಿನಲ್ಲಿ

ನೆರುನಲ್ ಕಣ್ಡದು "ನೀರ್ ಮಲೈ" ಇನ್ನು ಪೋಯ್ ಕರುನೆಲ್ ಶೂಳ್ "ಕಣ್ಣಮಚ್ಚ್ಯೆಯುಳ್" ಕಾಣ್ಡುಮೇ

ಎಂಬ ಪ್ರಸಂಗ ಇರುವುದರಿಂದ, ಈ ಎರಡನೆಯ ಗಾಥೆಯಲ್ಲೂ ಆ ಎರಡು ಕಾಲವಾಚಕಗಳಾದ, "ನೆನ್ನೆ" ಮತ್ತು "ಇಂದು" ಎಂಬೆರಡು ಪದಗಳನ್ನೂ ಅನುಷಂಗ ಮಾಡಿ ಅರ್ಥೈಸಬೇಕು. ನೆನ್ನೆ ಕಂಡುದು ತಿರುಪತಿಯಲ್ಲಿ, ಇವೊತ್ತು ಕಂಡುದು "ತಿರುತ್ತಣ್ ಕಾವಿಲ್'ನಲ್ಲಿ.

ತಮಿಳ್ ತಿರಳ್ ೧೦-೧೦-೫

ಶೊಲ್ಲಾಯ್ ಪೈಜ್ಞಿಳಿಯೇ! ಶುಡರ್ ಆಳಿವಲನ್ ಉಯರ್‌ತ್ತ
ಮಲ್ಲಾರ್ ತೋಳ್ ವಡವೇಜ್ಞಡವನ್ನೆ ವರ ಶೊಲ್ಲಾಯ್ ಪೈಜ್ಞೆಳಿಯೇ

ಕನ್ನಡ ನೆರಳ್

ಪೇಳಾ ನಲ್ಮೆಯಂ ಹಚ್ಚನ ಕೆಂಬಾಯ್ ಗಿಳಿಯೇ!
ಸೊಡರ್ ಉರಿ ಸುದರ್ಶನಂ ಬಲಗ್ಯೆ ಪಿಡಿದಿಹನಂ
ಪಡೆ ಬೇಡದ ತಿಣ್‌ಮೆಯೇ ತುಮ್‌ತೋಳನಂ ಬಡಗಲ ವೇಂಕಟಗಿರಿಯನಂ ಬರುವೊಲ್
ಅಡೆಯಾಳದ ಶಕುನವ ಪೇಳಾ ಮೈ ಪಚ್ಚೆಯ ಕೆಂದುಟಿ ಗಿಳಿಯೇ!

ಇದು ಪರಕಾಲ ನಾಯಕಿಯ ಶುಕದೂತ. ದಿವ್ಯಪ್ರಬನ್ಧಾssಚಾರ್ಯರ ಹೃದಯವನ್ನು, ೧೩ನೆಯ ಶತಮಾನದ ಪಿಳ್ಳೈ ಲೋಕಾಚಾರ್ಯರ ತಮ್ಮನಾಗಿ - ಸಾಕ್ಷಾತ್ "ಅಳಹಿಯಮಣವಾಳನ್" ಪೆರಿಯಾಳ್ವಾರರ ಮಗಳಾದ ಆಂಡಾಳ್ ದೇವಿಯನ್ನು ವರಿಸಿದ "ಚೆಂದದ ಅಳಿಯ" "ಸೌಮ್ಯಜಾಮಾತಾ" ಎಂಬ ಶ್ರೀರಂಗನಾಥನ ಅಂಶದಿಂದ ಹುಟ್ಟಿದ, "ಅಳಹಿಯ ಮಣವಾಳಪ್ಪೆರುಮಾಳ್ ನಾಯನಾರ್" ಎಂಬುವರು. ತಮ್ಮ **ಆಚಾರ್ಯ ಹೃದಯ** ಎಂಬ ಹಿತಮಿತಮನೋಜ್ಞ ಸೂತ್ರ ಶೈಲಿಯ ಘನ ಕೃತಿರತ್ನದ ೧೫೩ನೆಯ ಸೂತ್ರದ ಕೊನೆಯಲ್ಲಿ **"ಉಡೈಯವರ್ ಉಡೈಯಾರ್ ಪೋಲ್‌ವಾರೈ ಕಿಳಿ ಪೂವೈ ಕುಯಿಲ್ ಮಯಿಲ್ ಎನ್ನುಮ್"** ಎಂದು ಅಪ್ಪಣೆ ಕೊಸಿಸಿದ್ದಾರಷ್ಟೆ. ಶ್ರೀ ಮದ್ರಾಮಾನುಜಾಚಾರ್ಯರನ್ನೇ ತಮಗೂ ನಿರೂಪಕರೆನ್ನುವರು "ಉಡೈಯವರುಡೈಯಾರ್" ಕೂರೇಶ, ದಾಶರಥಿ, ಎಂಬಾರ್, ಅರುಳಾಳ ಪೈರುಮಾಳ್, ಕಿಡಾಮ್ಬಿ ಅಚ್ಚಾನ್ ವಡುಹ ನಂಬಿ ಮುಂತಾದ, ಆಚಾರ್ಯರನ್ನೇ ಸರ್ವಸ್ವ ಆಸ್ತಿಯನ್ನಾಗಿ ಉಳ್ಳ, ಅಚಾರ್ಯೈಕ ಪರತಂತ್ರರು!

ಗಿಳಿಯಲ್ಲಿರುವ, ಸಾಕುವವರು ಹೇಳಿದ್ದನ್ನೇ ಹೇಳುವ ಅಗುಣ, ರಾಮಾನುಜರ ದರ್ಶನಾರ್ಥಗಳನ್ನೂ ಅನುಷ್ಠೇಯಾssಚಾರಗಳನ್ನೂ ಚಾಚೂ ತಪ್ಪದೆ, ಅವಿರೋಧೇನ ಅವರನ್ನೇ ಅನುಸರಿಸಿ ರಾಮಾನುಜರಿಗಿಂತಲೂ, ಶ್ರೋತೃಗಳಿಗೆ ಇಂಪಾಗಿರುವಂತೆ ಪ್ರವಚನ ನೀಡಿ ಆಚಾರ ಸಂಪನ್ನರಾಗಿದ್ದ ಸಾಮರ್ಥ್ಯ, ಇವರಿಗೆಲ್ಲಾ ಆಚಾರ್ಯ ಕೃಪೆಯಿಂದ ಹಸ್ತಗತವಾಗಿತ್ತು. "ಶಿಷ್ಯಾತ್ ಇಚ್ಛೇತ್ ಪರಾಜಯಮ್" ಗುರುವನ್ನೂ ಸೋಲಿಸುವ ಶಿಷ್ಯರನ್ನೇ ಸದ್‌ಗುರುಗಳು ಹಾಗೆ ತಯಾರ್ ಮಾಡುತ್ತಾರೆ. ನಿರಹಂಕಾರಿ ಸದ್ ಗುರುಗಳೇ ರಾಮಾನುಜರಾದುದರಿಂದ, ಇವರೆಲ್ಲಾ "ಪಿತುಃ ಶತಗುಣಃ ಪುತ್ರಃ" ಎಂಬ ನ್ಯಾಯದಂತೆ ಗುರುಗಳನ್ನೂ ಮೀರಿಸಿದವರೇ. ಆದರೂ ರಾಮಾನುಜರಿಗೇ ಆ ಮಹಿಮೆ ಸಲ್ಲುವುದಷ್ಟೆ. **"ರಾಮಾನುಜ" ಕೇವಲ ಒಂದು ವ್ಯಕ್ತಿ ಯಷ್ಟೇ ಆಗಿರಲಿಲ್ಲ. ಎಲ್ಲರನ್ನೂ ತಮ್ಮ ಅವತಾರಮಹಾಕಾರ್ಯಗಳಿಗೆ, ಒತ್ತಾಸೆಯಾಗುವಂತೆ ಸೇರಿಸಿಕೊಂಡೇ ಒಂದು "ಆಚಾರ್ಯಕುಲ"ವಾಗಿ ಕೆಲಸ ಮಾಡಿದರು. ಅವರದು ಸಮೂಹ ಜೀವನ. ಗಣ ಸೇವಕತ್ವ.**

ರಾಮಾನುಜರ ಭವಿಷ್ಯದವತಾರದ ಬಗೆಗೆ ೫೧೦೨ ವರ್ಷದ ಹಿಂದಣ ನಮ್ಮಾಳ್ವಾರ್ ತಮ್ಮ ಗೌರವವನ್ನು ಹೀಗೆ ತಮ್ಮ ಪ್ರಬಂಧದಲ್ಲಿ ಸೂಚಿಸಿದ್ದಾರೆ. "ಕಲಿಯುಮ್ ಕೆಡುಮ್, ಕಂಡುಕೊಳ್ ಮಿನ್" ಕಲಿ ಕೆಡುವುದು ಕಂಡೀರಾ! ಎಂದು ಅಪ್ಪಣೆ ಕೊಡಿಸಿರುವುದರಿಂದ ತಚ್ಛಿಷ್ಯರಲ್ಲೂ, ಶಠಕೋಪರ ವಾಙ್ಮಯಕ್ಕೆ ಅಂಗ ಸ್ಥಾನೀಯವಾಗಿರುವ ಷಟ್‌ಪ್ರಬಂಧಕರ್ತರಾದ ಈ ಕಲಿಯನ್ ಸಹ, ಗಿಳಿಯ ಗುಣ ಸಾಮ್ಯದಿಂದ ಶುಕದೌತ್ಯ ಕಳಿಸುವುದು ಉಚಿತವೇ ಆಗಿದೆ.

"ಪುರಾಣಮಿತ್ಯೇವ ನ ಸಾಧು ಸರ್ವಂ"

ಹಳೆಯದೆಂಬ ಹೆಗ್ಗಳಿಕೆಯೊಂದೇ ಸಾಧುವಲ್ಲ. ಇಂದಿನ ಮುಂದಿನ ಕಾಲಕ್ಕೂ ಬೆಲೆ ಕೊಡುವುದೇ ಒಂದು ಸಾಮಾಜಿಕ ಸಂಶೋಧನೆ. ಸೀನಿಯರ್ ಜ್ಯೂನಿಯರ್ ಅಷ್ಟೇ ಮುಖ್ಯವಲ್ಲ. ಯೋಗ್ಯತೆ, ಸಾಮರ್ಥ್ಯ, ವಿನಯಾದಿಗಳು ಹಳಬರಲ್ಲೇ ಇರಲಿ, ಹೊಸಬರಲ್ಲೇ ಇರಲಿ, ಅವರೇನೂ ನಮಗಿಂತ ಕಡಿಮೆ ದರ್ಜೆಯವರಲ್ಲ. ಕಾಲ ಜಡವಸ್ತು. ತನ್ನಿರ್ಮಾಪಕರು ಸತ್‌ಪ್ರಜೆಗಳಾದವರೇ! ಹಳೇ ಚರಿತ್ರೆಗಳಷ್ಟೇ ಮುಖ್ಯವಲ್ಲ. **ಹೊಸ ಚರಿತ್ರೆಯನ್ನೂ ತಮ್ಮ ಚಾರಿತ್ರ್ಯದಿಂದ ಶೋಭನಗೊಳಿಸುವ ಗಣಸೇವಕರೇ ನಾಡಿನ ಉಸಿರು.**

ಇಲ್ಲಿ ಈ ಪರಕಾಲ ನಾಯಕಿಗೆ ಸ್ತ್ರೀ ಭಾವ ಮುತ್ತಿದೆ. ಸದಾಚಾರ್ಯ ಸಂತತಿಯವರಲ್ಲಿ ಬೇಡುತ್ತಾಳೆ. ತಿಮ್ಮಪ್ಪನಿಗೆ ತಮ್ಮ ಅಳಲನ್ನು ಬಿನ್ನೈಸಲು ಹಳಬರನ್ನೂ ಹೊಸಬರನ್ನೂ ಆಯಾಯಾ ಗುಣ ಸಂಪನ್ನರೆಂದು ತನ್ನ ಕಾರ್ಯಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾಳೆ.

ಪೈಮ್ = ಹಚ್ಚನ ತಂಪನ್ನು ಕಣ್ಣಿಗೆ ನೀಡುವ. ಮನಸ್ಸಿಗೂ ಇಂಪನ್ನು ನೀಡುವ, ಕಿಳಿಯೇ ಓ ಸುಂದರ ಶುಕವೇ. ಶೊಲ್ಲಾಯ್ = ನಾಯಕಿಯ ಅತುರ. ಖಂಡಿತ ಈಗಲೇ ನಿನ್ನ ಪ್ರಿಯನಿಗೆ ಹೇಳಪ್ಪಾ ಎಂಬ ಪೀಠಿಕಾರಚನೆ! ಕೊನೆಯಲ್ಲೂ ಒಂದೇ ಹಾಡಿನಲ್ಲಿ "ಶೊಲ್ಲಾಯ್" ಮತ್ತೊಮ್ಮೆ ಬಂದಿದೆ. ಪರಮಾತ್ಮನ ಮೈ-ಅಧರ ಪಚ್ಚೆ ಹಾಗೂ ಕೆಂಪು ಗಿಣಿಗೂ ಇರುವುದರಿಂದ, ಸಾರೂಪ್ಯ ಬಲದಿಂದ ಸ್ವಾಮಿ, ಈ ತೇಜಸ್ವಿಯೂ ಮಂಜುಳ ಹಿತಭಾಷಿಯೂ ಆದ ಆಚಾರ್ಯರ ಮಾತನ್ನು ಅಗತ್ಯ ಕೇಳಿಯೇ ಕೇಳುತ್ತಾನೆ ಈ ಭರವಸೆ! ಈಶ್ವರಲ್ಲೂ ಶರಣಾದ ಪರಕಾಲರಿಗೆ ಇರುವ "ಆದರ" ಈ ದ್ವಿರುಕ್ತಿಯಿಂದ ಸೂಚಿತವಾಗುತ್ತದೆ. ಆದರಾತ್ ದ್ವಿರುಕ್ತಿಃ! ನಿಮ್ಮೀರ್ವರಿಗೂ ಸಹಾಽಭಿಧ್ಯಾನ ಇರುವುದರಿಂದ, ನನಗೆ ನೀನೊಂದು ನಲ್‌ಶಕುನ ಹೇಳಿಬಿಡು! ಇಲ್ಲಿನ ಅಂತರಂಗವೇ ಇದು.

ಶುಡರ್ ಆಳಿ ವಲನ್ = ಪ್ರಜ್ವಲಿಸುವ, ಸಹಸ್ರಾರ ಶಿಖಾತಿ ತೀವ್ರ ಹಾಗೂ ವೃತ್ತಾssಕಾರದ ಚಕ್ರವನ್ನು ದಕ್ಷಿಣ ಹಸ್ತದಲ್ಲಾಂತವ. ಭಗವಂತನ ಸಂಕಲ್ಪ ಚಕ್ರದಲ್ಲೇ ಇಡೀ ವಿಭೂತಿದ್ವಯವೂ ತಿರುಗುತ್ತಿದೆ. "ಭ್ರಾಮಯನ್ ಸರ್ವಭೂತಾನಿ ಯಂತ್ರಾssರೂಢಾನಿಮಯಯಾ" - (ಭಗವದ್ಗೀತೆ) ಉಯರ್‌ತ್ತ = ಅಂತೆಯೇ ಸುದರ್ಶನ ಸ್ವಾಮಿಯು ಎತ್ತಿದ ಬಲಹಸ್ತದಲ್ಲಿ ಮೇಲಿರುವುದು. ಉಯರ್‌ತ್ತ ಶುಡರ್ ಆಳಿವಲನ್ = ಹಿಂದು ಮುಂದಾಗಿ ಅನ್ವಯಿಸಿಕೊಳ್ಳಬೇಕು. ಮಲ್ಲು ಆರ್ ತೋಳ್ = ಚಾಣೂರ ಮುಷ್ಟಿಕ, ತೋಸಲರೇ ಮೊದಲಾದ ಹೆಸರಿನ, ಕಂಸ ನಿಯುಕ್ತರಾದ ಮಹಾ ಮಹಾ ಜಗಜಟ್ಟಿಗಳನ್ನೂ ಕುಟ್ಟಿ ಹಾಕಿದಂತಹ ಬಲಿಷ್ಠವಾದ "ಚತುರ್‌ಭುಜೇಶ!" ಅಂತಹ ಈ ವಡಂವೇಜ್ಗಡ ವನೈ = ಬಡಗಲ ತಿರುಮಲ ವಾಸಿಯನ್ನು ಕುರಿತು, ಏನು ಹೇಳಬೇಕೆನ್ನುವಿಯಾ! ವರ = ಪರಕಾಲ ನಾಯಕಿಯ ಬಳಿಗೆ ಬರುವಂತೆ. ಶೊಲ್ಲಾಯ್ **"ಸಹ ನೌ ಅವತು, ಸಹ ನೌ ಭುನಕ್ತು"** ನಾವೀರ್ವರೂ ಗುರು - ಶಿಷ್ಯಾ- ಪರಸ್ಪರ ಪವಿತ್ರ ಭಾವನೆಯಿಂದ ನಾವು ಮಾಡುವ ಓದು ನಮ್ಮಿಬ್ಬರನ್ನೂ ಜೊತೆ ಜೊತೆಯಾಗಿ ರಕ್ಷಿಸಲಿ. ಜೊತೆ ಜೊತೆಯಾಗಿ ಪಾಲಿಸಲಿ. ಮುದ್ದಿಸುವ ಶುಕವೇ! ಸಹ ವೀರ್ಯಂ ಕರವಾವಹೈ. ಗುರು - ದೇವರ ಉಭಯ ಮಿಲನವಾಗಿ, ಅವರೀರ್ವರ ಬಲದಿಂದ ಈ ದುರ್ಬಲೆಗೂ ವೀರ್ಯ ಉಮ್ಮಳಿಸಲಿ. ನಿನ್ನ ಸಂದೇಶ ಕೇಳಿ ತಿಮ್ಮಪ್ಪ ವಾತ್ಸಲ್ಯನಿಲಯ ನಿಶ್ಚಿತವಾಗಿಯೂ ಬಂದೇ ತೀರುವನು. "ವಿಧೇಯಾತ್ಮಾ" ಸ್ವಾಮಿ ಆಚಾರ್ಯರಿಗೆ ತಗ್ಗಿ ಬಗ್ಗಿ ನಡೆಯುವವನು. ನಿಮ್ಮೀರ್ವರಲ್ಲೂ ಸಾರೂಪ್ಯ, ಸೌಗುಣ್ಯಗಳಿವೆ.

ತಮಿಳ್ ತಿರಳ್ ೧೧-೩-೭

ಕಣ್ಣನ್ ಮನತ್ತುಳ್ಳೇ ನಿರ್‌ಕ್ಕವುಮ್ ಕೈವಳ್ಳೆಹಳ್ ಎನ್ನೋ ಕಳನ್ನ ಇವ್ವೆ ಯೆನ್ನ ಮಾಯಙ್ಗಳ್?
ಪೆಣ್ಣಾನೋಮ್ ಪೆಣ್ಮೈಯೋಮ್ ನಿರ್‌ಕ್ಕ ಅವನ್‌ಮೇಯ ಅಣ್ಣಲ್ ಮಲೈಯುಮ್ ಅರಙ್ಗಮುಮ್ ಪಾಡೋಮೇ

ಕನ್ನಡ ನೆರಳ್

ಕಣ್ಣನು ಮನದೊಳೆ ಇರುತಿರ್ದರೂ ಎನ್ ಕೈಬಳೆಗಳ್
ಎಣ್ಣಲ್ಕಾರೆನೈ ಎಂತಿವು ಕಳಚಿಯೆ ಹೋದವು ಏನ್ ಅವನ್ ಮಾಯೆಗಳು?
ಹೆಣ್ಣಾಗಿಯೆ ಹುಟ್ಟಿದ ನಾವ್ ಪೆಣ್‌ತನದೊಳೇ ಇರುವವರ್. ಇರಲಿ, ಅವ ನಿತ್ಯಾssವಾಸಿಪ
ಸಣ್ಣದು ಅಲ್ಲದ ಹಿರಿತಿರುಮಲೆಯುಂ ಸಿರಿರಂಗಮುಂ ಪಾಡಲ್ಕಾದರೂ ಬಲ್ಲವರ್ ಆದೇವೇ!

ತಿರುಮಲೈ ವೇಂಕಟೇಶ ಶ್ರೀರಂಗನಾಥ ಉಭಯ ಮೂರ್ತಿಯನ್ನೂ ನೇರಾ ಕುರಿತ ಪರಕಾಲ ನಾಯಕೀ ಗೀತವಿದು. ಈ ಆಳ್ವಾರ್ ಪರಮ ಪಾವನ ರಸಿಕರಾಗಿ ಬಿಟ್ಟಿರುವುದರಿಂದ ಭಗವಂತನ ದಿವ್ಯಮಂಗಳ ಕೋಮಲಾಂಗನ ಅನುಭವಕ್ಕೆ ತಾವಿಂಬಾಗದೆ ಕ್ಷಣ ಕಾಲವೂ ಇರಲಾಗದ ಪ್ರಕೃತಿ! ಈ ಪೆರಿಯತಿರುಮೊಳಿ ೧೧ನೇ ಶತಕದ, ಈ ಮೂರನೇ ದಶಕದ ಆರಂಭದಲ್ಲಿ, ತಾವೀಗ ಯಾರಿಗೆ ಸೋತಿರುವುದು ಗೊತ್ತೇ? ಬಲಕ್ಷಯ, ಈ ಸೋಲುಗೆ ಬಳಲುಗೆ ಯಾರಿಗಾಗಿ? ಮಹಾಭಾರತದ ಮಹಾಂತ್ಯಯುದ್ಧ ಸಾರಥಿಗಾಗಿ! ಬಲಿರಾಯನನ್ನು ಅವನ ದಾನೌದಾರ್ಯಕ್ಕೂ ಅವಕಾಶಕೊಟ್ಟು ಪಾದದಿಂದ ಮೆಟ್ಟಿದವನಿಗಾಗಿ! ಮಾಯಾ ನಗರಿ ಲಂಕೆಯಳಿಸಿದ ದೇವರಿಗಾಗಿ! ಈಗ ಈಕೆಗೆ

ಮಾನಸಿಕವಾಗಿ ಸ್ವಾಮಿಯ ಸಾಕಾರ ಸಗುಣ ಮೂರಿಯ ಧ್ಯಾನವೃತ್ತಿ ರೂಪವಾದ ಅಂತರ್ ಭಗವದ್ ವಿಷಯಾನುಭವ ಸಾಲದು. ಈ ಭೌತಿಕ ಶರೀರಕ್ಕೂ ಆ ದಿವ್ಯಾಂಗ ಸಂಗದ ಹೆಗ್ಗಾಮ! ಕಲ್ಯಾಣಮಯ ಪರಮಪಾವನಕಾಮ ಈ ಕಾಮಿನೀ ಪರಕಾಲಶರಣೆಯದು. ಈ ಶರೀರವನ್ನು ಶುಷ್ಕ ವೈರಾಗ್ಯದಿಂದ ಮರೆಯುವವಳಲ್ಲ ಈ ಶರಣೆ! ಇಹದಲ್ಲೇ ದಿವ್ಯದಾಂಪತ್ಯದ ದಿವ್ಯಾಭಿರುಚಿ! "ಶರಣರೆಲ್ಲಾ ರಾಜಯೋಗಿಗಳು. ಹಠಯೋಗಿಗಳಲ್ಲ" ಸಂಯಮಯೋಗಿಗಳು. ಸಂಯಮ ಯೋಗವೆಂದರೆ ಭಗವತ್ ಕೈಂಕರ್ಯ.

ಕಣ್ಣನ್ ಮನತ್ತುಳ್ಳೇ ನಿರ್ಕ್ಕವುಮ್ = ಶ್ರೀಕೃಷ್ಣ ನನ್ನೀ ಒಳಮನದಲ್ಲೇ ತುಂಬಿದ್ದರೂ ವಿರಹಾತಿಶಯದ ಸಂವೇದನೆ, ಆಳ್ವಾರ್ ಶರಣ ಸಂತರ ವಿಶೇಷ! ಅಂತರ್ ಬಾಹ್ಯೇಂದ್ರಿಯಗಳ ಸಮರಸ, ಸಮತೂಕದ ಸಮಗ್ರ ಸಾಕ್ಷಾತ್ಕಾರ ದಿವ್ಯ ದೇಹ - ದೇಹವಂದ್ಯವಾದ,

"ಧರ್ಮಾsವಿರೋದ್ಧೋ ಭೂತೇಷು ಕಾಮೋsಸ್ಮಿ"

ಏಕೈಕ ಸಿದ್ಧ ಶುದ್ಧ ಧರ್ಮದ ಪರಮ ಪ್ರೇಮಳ ಸಾಧರ್ಮ್ಯ. ಸ್ವ-ಸ್ವಾಮಿಭಾವಕ್ಕೆ ಅನುರೂಪವಾದ, ಪರಮ ಪುರುಷಾರ್ಥ. ಸ್ವರೂಪ ಭೇದವಿದ್ದರೂ, "**ಅಭೇದೇನ ನಿದಿಧ್ಯಾಸನದ ಭಾವ, ಆತ್ಮೇತಿ ತು ಉಪಗಚ್ಛನ್ತಿ**" - ಬ್ರಹ್ಮಸೂತ್ರ" ಇಲ್ಲಿನ ನಿದಿಧ್ಯಾಸನ, ಭಗವಂತನದೇ! ಏಕೆಂದರೆ, ಅತನೇ ಜ್ಞಾತಾ, ಅತನೇ ಕರ್ತಾ ಅದಮೇಲೆ ಅತನೇ ಭೋಕ್ತಾ ಸಹ ಆಗಬೇಕಷ್ಟೆ? ಈ ಜೀವಾತ್ಮನ ಕಡೆಯಿಂದ "ಹೂಂ", ಎಂಬಷ್ಟೇ, ಅಪೇಕ್ಷೆ ಇರಬೇಕು. ಈ ಸಂಮತಿಯೂ ಸಾಧನವಲ್ಲ. ಪರಮಾತ್ಮನ ಜೀವಲಾಭವೆಂಬ ಪುರುಷಾರ್ಥಕ್ಕೆ ಪರಮಾತ್ಮನೇ ಸಾಧನ. ಫಲವೂ, ಫಲಾನಂದವೂ ಅವನದೇ. ಪ್ರಧಾನ ಫಲಿ ಅವನು ಅಪ್ರಧಾನ ಫಲಿ ಜೀವ.

ಸಾಮಾನ್ಯ ಸಾಧಕ ಭಕ್ತರಿಗಾದರೆ ಮಾನಸಿಕ ತೃಪ್ತಿ ಸಾಕು. ಇದನ್ನೇ ಈಗಿವರು ತಮ್ಮ ಅನುಭವದಿಂದ ಹೇಳುತ್ತಿದ್ದಾರೆ. ಕೈವಳೈಹಳ್ = ಕೈ ಬಳೆಗಳು. ಎನ್ನೋ ಕಳನ್ನ = ಹೇಗೆ ಕಳಚಿ ಬೀಳುತ್ತಿವೆ! ಅವನ ಅಂತರ ಬಾಹ್ಯ ಉಭಯ ಸಾಕ್ಷಾತ್ಕಾರ ಇದ್ದಿದ್ದರೆ, ಅಷ್ಟೇ ಉಭಯ, ಭೌತ ಹಾಗೂ ದಿವ್ಯ ಸಂಶ್ಲೇಷವಿದ್ದಿದ್ದರೆ ನಾನು ಹೀಗೆ ಕೃಶಾಂಗಳಾಗಿ ಸೊರಗಿ ಹೋಗುತ್ತಿರಲಿಲ್ಲ. "ವೇದಾನ್ತ ಪ್ರವರ್ತನ"ದಲ್ಲಿ ಮಾತ್ರ "ಉಭಯ"ವೆಂಬುದಲ್ಲ. "ಸಂಶ್ಲೇಷದಲ್ಲೂ ಜೀವ-ದೇವ ಬೆಸುಗೆಯ ಸೇರ್ಪಡೆಯಲ್ಲೂ ಅನ್ತರ್ ಬಾಹ್ಯೋಭಯ ದೇಹಕ್ಕೂ ಮನಸ್ಸಿಗೂ ಇಷ್ಟೊಂದು ಸ್ಥಾನ ನೀಡಿರುವ ಈ ಸಂತರ ಭಕ್ತಿಯೇ ವ್ಯಕ್ತಿಗತ ಹಾಗೂ ಸಾಮಾಜಿಕ ಪೂರ್ಣಭಕ್ತಿ". ದ್ವಂದ್ವಗಳಲ್ಲೇ ಬಿದ್ದಿರುವವರನ್ನೂ ಉಪೇಕ್ಷೆ ಮಾಡದೆ ಬ್ರಹ್ಮವಿದ್ಯೆಗೆ ಏರಿಸಬೇಕಾದುದೇ ಯುಗಧರ್ಮ. ಸಂತರಂತೆಯೇ ಯುಗಪುರುಷರು. ಶಕಪುರುಷರು. ಮಹಿಳಾ ಶರಣೆಯರೂ ಅಷ್ಟೇ. ಕೆಲವರು ಸಮಾಜವಿಮುಖ ಬ್ರಹ್ಮವಾದಿಗಳು. ಮತ್ತೆ ಕೆಲವರು ಬ್ರಹ್ಮ ವಿಮುಖ ಸಮಾಜವಾದಿಗಳು. ಈ ಪ್ರತ್ಯೇಕತೆಯನ್ನು ಸಹಿಸದ ಆರ್ದ್ರ ಕರುಣಾ ಕ್ರಾಂತಿಮೂರ್ತಿಗಳೇ ಇಲ್ಲಿ ಉಭಯ ಪರಿವರ್ತನೆ ತರಬಲ್ಲವರು.

ದೇಹಕ್ಕೂ ಮನಸ್ಸಿಗೂ ಇಷ್ಟೊಂದು ಪ್ರಾಧಾನ್ಯ ಕೊಟ್ಟ ಈ ಸಂತರ ಭಕ್ತಿಯೇ ಪೂರ್ಣಭಕ್ತಿ. ನಾವೆಲ್ಲಾ ಬಹುತೇಕ ಹೊರಮೂರ್ತಿಯನ್ನು ಮಾತ್ರ ನೋಡುವವರಾದರೆ, ಕೆಲ ಮನನಶೀಲರು ಒಳಮೂರ್ತಿಯನ್ನು ಮಾತ್ರ ನೋಡುವವರಾದರೆ, ಮತ್ತೆ ಕೆಲ ಮನನ ಶೀಲರು ಒಳಮೂರ್ತಿಯನ್ನು ಮಾತ್ರ ಸಂದರ್ಶಿಸುತ್ತಾ ಇದ್ದಲ್ಲಿಯೇ ತೃಪ್ತಿ ಪಡುತ್ತಾರೆ. ಆಳ್ವಾರ್ರಿಗೆ ಉಭಯ ಮೂರ್ತಿಯೇ ಬೇಕು. ಆಳ ಅಗಲ ಎರಡನ್ನೂ ಏಕಕಾಲಕ್ಕೇ ಬಯಸುವವರು ಈ ಕಲಿಯನ್. "ಇವೈ ಎನ್ನ ಮಾಯಜ್ಗಳ್" ತಮ್ಮ ಈ ಸ್ಥಿತಿಯ ಬಗೆಗೆ ತಾವೇ ಆಶ್ಚರ್ಯ ಪಡುತ್ತಾರೆ! ಮಾಯಾವಿಯ ಕೈ ಗೊಂಬೆಗಳು ಅಚ್ಚರಿ ಪಡುತ್ತಿವೆ, ಮಾಯಾವಿಯ ಕಮಾಲುಗಳನ್ನು ನೋಡಿ! ಪೆಣ್ ಅನೋಮ್ = ಸ್ವರೂಪತಃ ಹೆಂಗಸಾಗಿ ಸ್ವತಃ, ಪೆಣ್ ಮೈಯೋಮ್ = ಜೀವಾತ್ಮರಾದ ನಾವು ಭಗವತ್ ಪಾರತಂತ್ರ್ಯ ಉಳ್ಳವರೇ.

ಹೀಗೆಲ್ಲಾ ಅತಿಯಾಗಿ ತಲೆಗೇರಿಸಿಕೊಂಡು ಮೈ ಕೆಡಸಿಕೊಳ್ಳಬಹುದೇ? ತಾಳ್ಮೆ ಬೇಡವೇ? ನಿರ್ಕ = ಆ ವೇದಾನ್ತವನ್ನೆಲ್ಲ ಆ ಕಡೆ ಕಟ್ಟಿಡಿ. ಅವನ್ ಮೇಯ ಅಣ್ಣಲ್ ಮಲೈಯುಮ್ = ಸ್ವಾಮಿ ನಿತ್ಯವಾಸ ಮಾಡುವ ತಿರುಮಲೆಯನ್ನೂ, ಅರಙ್ಗಮುಮ್ = ಶ್ರೀರಂಗಧಾಮವನ್ನೂ, ಪಾಡೋಮೇ = ಹಾಡಲೂ ಆಗದಿರುವಂತೆ ನಿಶ್ಯಕ್ತಿಯಾಗಬೇಕೆ? "ವಚನೇ ಕಾ ದರಿದ್ರತಾ?" ಮಾತಾಡಲೂ ಗತಿಯಿಲ್ಲವೇ? ಪರಕಾಲನಾಯಕಿಯ ಈ ದಯನೀಯ ಪರಿಸ್ಥಿತಿಯನ್ನು ನೇರಾ ತಾನೇ ಬಿನ್ನೈಸುತ್ತಿರುವ ಸಾಕ್ಷಾಚ್ಛೈಲಿ. ಭಕ್ತಿ ಸಾಹಿತ್ಯಕ್ಕೇ ಪರಮ ಭೂಷಣ. ಹೆಂಗಸಿಗೇನು ಅಳಲೂ ಸ್ವಾತಂತ್ರ್ಯವಿಲ್ಲವೇ? ವಾಕ್ ಸ್ವಾತಂತ್ರ್ಯಕ್ಕೆ ಅಷ್ಟೊಂದು ದಿಗ್ ಬಂಧನವೇ! ಏನೋ ತಿಮ್ಮಪ್ಪಾ, ರಂಗಾ! ಹರಿನಾಮ ಹೇಳಲೂ ಆಗದಷ್ಟು ಈ ನನ್ನ ಶ್ಲೇಷ್ಮಬಾಧೆಯನ್ನು ಕೆಳಗೆ ಅತಿಸಾರವಾಗಿ ಜಾರಿ ಹೋಗುವಂತೆ ಎಸಗಿರಪ್ಪಾ! ಗಂಟಲಾದರೂ ನಾಮೋಚ್ಚಾರಣೆಗೆ ಒದಗಲಿ. ಶರಣರೆಲ್ಲರೂ ಇಂದ್ರಿಯಗಳಿಂದಲೇ ಬ್ರಹ್ಮಾನುಭವ ಪ್ರಿಯರು. ಇಂದ್ರಿಯಾದಿಗಳ "ಬಂದ್" ಇವರಿಗೆ ಸೇರದು. ಶರಣಸ್ವಭಾವದ ನಾನಾರಾವ್‌ಪೇಷ್ವೆಯವರ ಅಂತ್ಯಕಾಲದಲ್ಲೂ ಇದೇ ಅನುಭವವನ್ನು ನಾವು ಕಾಣುತ್ತೇವೆ.

ತಮಿಳ್ ತಿರಳ್ ೧೧-೫-೧೦

ಕಳ್ಳತ್ತಾಲ್ ಮಾವಲಿಯ್ಯೆ ಮೂವಡಿ ಮಣ್ ಕೊಣ್ಡಳನ್ದಾನ್ ವೆಳ್ಳತ್ತಾನ್ ವೆಬ್ಗಡತ್ತಾನ್ಎನ್ಬರಾಲ್ ಕಾಣೇಡೀ
ವೆಳ್ಳತ್ತಾನ್ ವೇಬ್ಗಡತ್ತಾನೇಲುಮ್ ಕಲಿಹನ್ನಿ ಉಳ್ಳತ್ತಿನುಳ್ಳೇ ಉಳನ್ ಕಣ್ಣಾಯ್ ಶಾಳಲೇ

ಕನ್ನಡ ನೆರಳ್

ವಂಚಕ ವೇಷದಿಂ ಅಂತಹ ಮಹನೀಯನ್ ಬಲಿರಾಯನಿಂ ಮೂರಡಿ ಮಣ್ ಬೇಡಿಯೇ ಕೊಂಡೆಲ್ಲ ವನಳೆದವನೇ
ಅಂಚಿತ ಕ್ಷೀರೋದಧಿಯೊಳು ಅಂತೆಯೇ ವೇಂಕಟಗಿರಿಧಾಮಮುಂ ಕೊಂಡವನ್ ಎನ್ನುವರ್ ಕಾಣ್ ಎಲೆಲೇ
ಸಂಚಿತ ಕ್ಷೀರೋದಧಿಯೊಳು ಅಂತೆಯೇ ವೇಂಕಟ ಗಿರಿಧಾಮಮುಂ ಕೊಂಡವನಾದರೂ ಈ ಕಲಿಯನ
ಮಂಚದ ಮನದೊಳಗೊಳಗೇ ಸೊಗದಿಂದಲೇ ತಳ್ಳಲೂ ಪೋಗದೊಲ್ ಇಹನ್ ಕಂಡ್ಯಾ ಓ ಸಖಿಯೇ!

ತಿಮ್ಮಪ್ಪನಲ್ಲಿ ತಿರುಮಂಗೈ ಯಾಳ್ವಾರರಿಗೆ ಉಂಟಾಗಿರುವ ಅತಿ ಪ್ರಾವಣ್ಯವನ್ನು ಒಂದು ಮಿತಿಗೆ ತರಲು ಈ ಪರಕಾಲನಾಯಕಿಯ ಸಖಿ ಪ್ರಯತ್ನಿಸುತ್ತಾಳೆ. "ಜೀವ ಹಾಗೂ ಈಶ್ವರನಿಗೆ ಇರುವ ಸಂಬಂಧ ಸ್ವ-ಸ್ವಾಮಿಭಾವ. ನಾವೆಲ್ಲಾ ಅತನ ಸೊತ್ತು. ಅತನೇ ನಮ್ಮೆಲ್ಲರ ಒಡೆಯ. ಅತ ಸ್ವತಂತ್ರ. ನಾವೆಲ್ಲಾ ಅತನಿಗೆ ಪರತಂತ್ರರು. ಈ ಪರಸ್ಪರ ಸಂಬಂಧದ ಅರಿವಿಗೇ "ಗೆಳತಿ" ಎಂಬ ಪಾರಭಾಷಿಕ ಸಂಜ್ಞೆ. ಶರಣ ಸಾಹಿತ್ಯದಲ್ಲಿ. ನಾವು ಸುಮ್ಮನಿರಬೇಕಮ್ಮಾ. ಅತ ನಮ್ಮ ತಂದೆಯಂತೆ ಪಿತಾಚ. ಅತ ರಕ್ಷಿಸಿಯೇ ತೀರುತ್ತಾನೆ. "ರಕ್ಷಕಃ". ಅತ ನಮ್ಮ ಸೇವೆಗೆ ಅರ್ಹನಾದ ಶೇಷಿ. ನಾವು ಶೇಷಭೂತರು. ನಮ್ಮನ್ನು ಹಿಡಿದು ಭರಿಸುತ್ತಿರುವವನೂ ಅತನೇ! "ಭರ್ತಾ". ನಮ್ಮ ತಿಳುವಳಿಕೆಯಿಂಬ ಜ್ಞಾನವೆಲ್ಲ ಕೊನೆಗೆ ಅತನಿಗೇ ಸಂದು ಅಲ್ಲೇ ನಿಲ್ಲುತ್ತದೆ. ಜ್ಞೇಯ ಅತನೇ. "ಸ್ವಾಮಿ"ಯೂ ಅತನೇ, ನಾವೆಲ್ಲಾ ಅವನ ಸ್ವತ್ತು. ಅತನೇ ಹೊರಗಿಂದಲೂ "ಆಧಾರ", ನಾವು "ಆಧೇಯರು". ನಾವೆಲ್ಲಾ ಅತನ "ಶರೀರ", ಅವನೇ "ಆತ್ಮಾ". ಅತ ನಮ್ಮನ್ನು ಉಣ್ಣುವವನೇ. -ಭೋಕ್ತಾ". ಹೀಗೆ ನವವಿಧ ಸಂಬಂಧಜ್ಞಾನಗಳು ಈ ನಾಯಕಿಯೊಂದಿಗೆ ವಿಚಾರ ವಿನಿಮಯ ಮಾಡುತ್ತಿರುವ ಸಂದರ್ಭ. ಇದೇ ಸಖೀವಾರ್ತೆ. ಆಗುವುದು ಆಗಿಯೇ ತೀರುತ್ತದೆ. ನೀನು ಅತಿ ಆಸೆ ಪಡುವಿ. ಅತ ನಯವಾದ ಮಹಾವಂಚಕ! ಎಲ್ಲೋ ಅದೃಶ್ಯ ಭೂಮಿ! ಸತ್ಯಲೋಕ ಯಾರು ಕಂಡವರು! ಅಲ್ಲೆಲ್ಲೋ ಒಂದೆಡೆ, ಹಾಲ್ಗಡಲಂತೆ ಹಾಲ್ ಗಡಲು! ಅದರ ಮೇಲೆ ಕಣ್ ಮುಚ್ಚಿ ಮಲಗಿದ್ದಾನೆ! ಇಲ್ಲಿಗೆ ಬಂದು ನಿಂತಿರುವ ಬೆಟ್ಟವೋ! ಮಹಾಗೊಂಡಾರಣ್ಯ! ಹೀಗೆಲ್ಲಾ ಹೇಳುವಿರಲ್ಲೇ ಓ! ನನ್ನ ಸಖಿಯರೇ? ಎನ್ನುತ್ತೀಯಾ ಹೀಗೆ ಈ ನಾಯಿಕೆ ಗೆಳತಿಯರಿಗೆ ಉತ್ತರ ನೀಡುವ ಸಂದರ್ಭ ಈ ಹಾಡಿನ ಪೂರ್ವಾರ್ಧ ಮತ್ತು ಉತ್ತರಾರ್ಧಗಳಿಂದ, ತಮ್ಮ ದೃಢ ನಿಲುವನ್ನು ಬಿಡದ ಛಲ! ಎಲ್ಲಕ್ಕಿಂತ, "ಭೋಕ್ತೃ-ಭೋಗ್ಯ" ಸಂಬಂಧವೇ ಉಲ್ಬಣಿಸಿರುವುದೇ ನಾಯಕೀಭಾವ, ಬೇರೆ ಬೇರೆ ಸಂಬಂಧಗಳನ್ನು ತೋರಿ ಹದಕ್ಕೆ ತರುವ ಪ್ರಯತ್ನವೇ ಸಖೀಭಾವ!

ಏಡೀ = ಎಲೆ ಗೆಳತಿ. ಕಳ್ಳತ್ತಾಲ್ = ಕಪಟ ಬ್ರಹ್ಮಚಾರಿ ಮೋಹಕ ವಟು ವೇಷದಿಂದ, "ಚತ್ತಿರಮ್ ಏನ್ನಿ ತನಿ ಒರುಮಾಣಿಯಾಯ್... ಪತ್ತಿರಾssಕಾರನ್...." ಎಂದು ಪೆರಿಯಾಳ್ವಾರ್ ಹೇಳಿರುವಂತೆ ಕಮನೀಯಾಕಾರವನ್ನು ವಾಮನ ಬಲಿಗೆ ತೋರಿದ. ಛತ್ರಿ ಹಿಡಿದ ಬ್ರಹ್ಮಚಾರಿಯಾಗಿರಬೇಕು. ಬೇರೆ ಬ್ರಹ್ಮಚಾರಿಗಳಿಗಿಂತ ತೇಜಸ್ವಿ. ಸ್ಫುರದ್ ರೂಪಿ! ಬಲಿರಾಯನನ್ನು ಮೋಸಗೊಳಿಸಿದವ. ಪುರೋಹಿತರಾದ ಶುಕ್ರಾಚಾರ್ಯರು ಬೇಡವೆಂದರೂ, ನಾನು ಮಾತಿಗೆ ತಪ್ಪಲಾರೆ ಎಂದೇ ಬಿಡುವಂತೆ ಮೋಡಿ ಹಾಕಿದವ! ಬಲಿಯಮಗ 'ನಮುಚಿ' ಎನ್ನುವವನ ವಾದವನ್ನು ಸಖಿ, ನಾಯಕಿಯ ಮುಂದಿಡುತ್ತಾಳೆ. ಮಾವಲಿಯ್ಯೆ = ನನ್ನ ತಂದೆ ಅತ್ಯುದಾರಿ. ಅದನ್ನೇ ನೀನು ದುರುಪಯೋಗಪಡಿಸಿಕೊಂಡೆ. ನೀನು ಕೇಳಿದಾಗ ಯಾವ ಚಿಕ್ಕ ಆಕಾರವಿತ್ತು. ಆ ಪುಟಾಣಿ ಕಾಲಿಂದ ಈಗಲೂ ಮೂರು ಹೆಜ್ಜೆ ಅಳೆದುಕೋ. ನಾ ಬೇಡವೆನ್ನೆನು.

ಎರಡನೆಯದೆಂದರೆ, ಅತ, ವೆಳ್ಳತ್ತಾನ್ = ಎಲ್ಲರಂತೆ ನೆಲದ ಮೇಲೆ ಸಹಜವಾಗಿದ್ದು, ಮಲಗದೆ ಎಲ್ಲೋ ಹಾಲ್ ಹೊನಲಿನಲ್ಲಿ, ಅದೂ ಕಣ್ಮುಚ್ಚಿ ಬಿದ್ದಿರುವವನು. ಅವನ ಬಗೆಗೆ ನೀನಿಷ್ಟು ಕಾತರ, ಪಡುವುದು ಯುಕ್ತವಲ್ಲ. ಕಣ್ಣಿಗೇ ಕಾಣುವಂತೆ ಅತನೇ ಈಗ ಬಂದಿರುವುದಾದರೂ ಎಲ್ಲಿ? ದುರ್ಗಮವಾದ 'ತಿರುಪತಿ ಬೆಟ್ಟ' ಪರಕಾಲ ನಾಯಕಿಯನ್ನು ಹೀಗೆ ಹಿಂದಿರುಗಿಸಲು ಪ್ರಯತ್ನ ಮಾಡಿದರೂ ಸಖಿಗೆ ಈಗ ಮರು ಉತ್ತರ ಕೊಟ್ಟಿದ್ದೇನು? "ಇವೆಲ್ಲಾ ಓ ಸಖಿ!" ಅತನ ಪೂರ್ವ ಸಂವಿಧಾನಗಳಷ್ಟೇ. ಮುಖ್ಯವಾಗಿ ಅವನು ಅಂತರತಮನಾಗಿ ನನ್ನ ದೇಹದ, ಚಿತ್ತದ, ಪ್ರಾಣದ, ಆತ್ಮನ ಒಳಗೊಳಗೂ ನಿತ್ಯವಾಸ ಮಾಡುವವನಮ್ಮಾ. ಈ ಪ್ರಧಾನ ಕಾರ್ಯಕ್ಕಾಗಿ ಅವುಗಳೆಲ್ಲಾ ಮೊದಲ ನಿಲ್ವಾಣಗಳು ಮಾತ್ರ. ಎಲ್ಲೆಲ್ಲೂ ಹೊರಕ್ಕೂ ಹೊರಗಾಗಿರುವ ಬಹಿರ್ ವ್ಯಾಪ್ತಿಯನ್ನು ಜನ ಸಾಮಾನ್ಯರೂ ತಿಳಿದು ಅನುಭವಿಸಲೆಂದೇ, ತ್ರಿವಿಕ್ರಮನಾಗಿ ಲೋಕ ಅಳೆದುದು. ಬಹಿಸ್ಸರ್ವತ್ರ ದೇವರಿರುವುದನ್ನು ಗುರುತಿಸುವ ಸಲುವಾಗಿ ಅದು. ಬಹಿರ್ವ್ಯಾಪ್ತಿ ಪ್ರತ್ಯಭಿಜ್ಞಾ, ಜ್ಞಾಪಕಾವತಾರ. ಇಂದ್ರನ ರಾಜ್ಯವನ್ನು ಮತ್ತೆ ಅವನಿಗೇ ಕೊಡಿಸಬೇಕಾದುದೂ ನ್ಯಾಯ ತಾನೆ. ಈ ಭೂಮಿಯನ್ನು ಬಲಿ ಸೃಷ್ಟಿಸಿದನೇ?

'ಕೊಣ್ಡಾನ್ಯೆ ಅಲ್ಲಾಲ್ ಕೊಡುತ್ತಾರ್ಯೆ ಆರ್ ಪಳಿಪ್ಪಾರ್'

ಭೂದಾನ ಕೇಳಿದವನನ್ನೇ ಬೈಯ್ಯುತ್ತೀರಲ್ಲೇ. ಅತ ಸರ್ವಜ್ಞ ಸರ್ವಶಕ್ತ ಸರ್ವಸ್ರಷ್ಟಾ "ಓಮ್ ಭೂರ್ ಭುವಸ್ಸುವಃ" ಮೂರು ಲೋಕಗಳೂ ಅವನದೇ! ಅದನ್ನೇ ಬಲಿ ತನ್ನದೆಂದಾಗಿಸಿಕೊಂಡದ್ದು ವಂಚನೆಯೋ? ತನ್ನದೇ ಆಗಿದ್ದ ಬಲಿಯನ್ನು, ಸದ್ಯಕ್ಕೆ ಯುದ್ಧಗೈಯ್ಯದೆ ಮತ್ತೆ ತನ್ನ ಅನುಭವಕ್ಕೆ ತೆಗೆದುಕೊಂಡದ್ದು ವಂಚನೆಯೋ! ಕೊಲ್ಲದೆ ಬಿಟ್ಟನಲ್ಲಾ! ಎಂತಹ ಪ್ರಕೃತಿಯಿಂದ ಕೆಟ್ಟವರಲ್ಲೂ ಒಂದೊಂದು ಒಳ್ಳೆಯ ಗುಣ ಆತ್ಮಗತವಾಗಿ ಇರುತ್ತದೆ. ಈ ಬಲಿ "ಕೇಳಿದವರಿಗೆ ಇಲ್ಲ" ಎಂದವನಲ್ಲ. ದಾನದಲ್ಲಿ ಉದಾರಿ! ಆ ಔದಾರ್ಯದ ಸಮದುಪಯೋಗವನ್ನೇ ಮಾಡಿ, ಅವನಿಗೂ ಕೀರ್ತಿ ತಂದ. ಮೂರನೆಯ ಹೆಜ್ಜೆ ಎಲ್ಲಿಡಲಿ? ಎಂದಾಗ, ಭೂಮಿ ಸ್ವರ್ಗದ ಒಡೆತನದ ಮಹಾಪಾಪದಿಂದ, ಮುಕ್ತನಾದ ಬಲಿಗೆ, ಸತ್ವಗುಣವೇರಿ, "ಇದೋ! ತನ್ನ ತಲೆಯ ಮೇಲಿಡು" ಎಂದ ಪರಮ ಪ್ರಪನ್ನ. ಇಂದಿಗೂ ಕೆಳಗಿನ ಲೋಕದಲ್ಲಿ ಅಸುರಾಧಿಪನಾಗಿ ಬಲಿ ಮೆರೆಯುತ್ತಲೇ ಇದ್ದಾನೆ. ಸ್ವಾಮಿ ಅತನ ಬಾಗಿಲು ಕಾಯುವ "ಗದಾಧರ" ಸೇವಕನಾಗಿದ್ದಾನೆ. ಇದು ಮೋಸವೋ? ಮಹಾ ಅನುಗ್ರಹವೋ?

ನನ್ನೆದೆಗೂ, ಅನಿರ್ವಚನೀಯ ಶಿಖಾಮಧ್ಯದವರೆಗೂ, ಪರಮಾತ್ಮ ವ್ಯವಸ್ಥಿತನಾಗಬೇಕಾದರೆ, "ಉಳ್ಳತ್ತಿನುಳ್ಳೇ" "ಉಳನ್ ಕಣ್ಡಾಯ್" ಇಷ್ಟೊಂದು ದೃಢವಾಗಿ ಪಕ್ಕಾ ಅಂತರ್ಯಾಮಿ ಸಾಕ್ಷಾತ್ಕಾರವನ್ನು ಗೆಳತಿಗೆ ಹೇಳುತ್ತಿದ್ದಾಳೆ, ಕಲಿಯನ್ ನಾಯಕಿ! ನವ ವಿಧ ಸಂಬಂಧಜ್ಞಾನ ನಿನ್ನ ಭೂಮಿಕೆ. ಅದು ಪರೋಕ್ಷ. ನನ್ನದಿದೋ ಪ್ರತ್ಯಕ್ಷ ಅನುಭೂತಿ! ಅತನೇ ಎಷ್ಟೊಂದು ಪ್ರೇಮ ಪರವಶನಾಗಿ, "ಸರ್ವಸ್ಯ ಜಿತ್ಕೆ" ತಾನಲ್ಲದ ಎಲ್ಲರಿಗೂ ಸೋಲುವುದೇ ಅವನ ಮೊದಲ ಹುನ್ನಾರ. ನನ್ನ ಆತುರ, ಅತಿ ಆಸೆಯನ್ನು ಪೂರೈಸಿದನಮ್ಮಾ! ನಿನ್ನ ಹೇಳಿಕೆಯಂತೆ 'ಅತಿ ಆಸೆ ಗತಿ ಕೆಡಸಲಿಲ್ಲ'. ಈ ಗಾದೆ ಭಗವದಿತರ ವಿಷಯಗಳಿಗೆ ಸಂಬಂದಪಟ್ಟದ್ದು. ಭಗವದ್ ವಿಷಯ, ಇತರರಿಗೆ ಮೊದಲು ಗೆಲವು ಕೊಟ್ಟು, ಕೊನೆಗೆ ತಾನು "ಸರ್ವಂ ಜಯತಿ" ಎಲ್ಲವನ್ನೂ ಜಯಿಸಿ ವಿರಾಜಿಸುತ್ತದೆ.

ಶಾಳಲೇ = ನೀನು ನನ್ನ ಸುಖ ದುಃಖಿಗಳಲ್ಲಿ ಸಮಭಾಗಿನಿಯಾಗದೆ ನನ್ನನ್ನು ಹೀಗೆಲ್ಲಾ ಪರೀಕ್ಷಿಸುವಿಯಾ? ಅತ ವಂಚಕನಲ್ಲ. ಅತ ಎಲ್ಲೆಲ್ಲೂ ಇರುವುದು ಮಾತ್ರವಲ್ಲ. ಸಾಚಾ ಸರಳವಾಗಿ ಎಲ್ಲರೊಳಗೂ ಪೂರ್ಣ ತುಂಬಿದ್ದಾನೆ. ಹಾಗೆಲ್ಲಾ ಹೇಳಿದ ಶುಕ್ರಾಚಾರ್ಯ ನಮುಚಿಯಂತಹವರು ಯಾವ ಸಮಯಕ್ಕೂ ಕೇವಲ ಟೀಕಾಕಾರರೇ, ಅವರೇ ಮೋಸಗಾರರು. ಪಾಪ! ಅವರದೂ ತಪ್ಪಿಲ್ಲ. ಅವರ ಜ್ಞಾನ ಸಾಮಗ್ರೀ ಬುದ್ಧಿಗತ ವೈಚಾರಿಕ ದೋಷಗಳೇ ಹೊರತು, ಅವರನ್ನೂ ನಿಂದಿಸದೆ, ವಂದಿಸುತ್ತೇನೆ. ಏಕೆಂದರೆ, ನನ್ನ ಹೃದಯದ ಅಂತರತಮೇಶನನ್ನು, ಅವನ ಕೃಪೆಯೊಂದರಿಂದಲೇ ಕಂಡ ಬಗೆಗಳನ್ನೆಲ್ಲಾ ನನ್ನ ಬಾಯಿಂದ ನೀನೂ ಕೇಳಿ ಆಸೆ ಪಡುವವರಿಗೆಲ್ಲಾ ಕೇಳಿಸಿದಂತೆಯೂ ಆಯಿತು. ಥ್ಯಾಂಕ್ ಯು! ನಿನ್ನ ಶಂಕೆಯೂ ಈಗ ತೀರಿತಲ್ಲವೇ? ನಾನೂ ಹಾಯಾಗಿದ್ದೇನಮ್ಮಾ. ಎಷ್ಟೊಂದು ಚತುರತಮ ಅವಿರೋಧಿ ಸಂಘಟಕ ಆ ವೇಂಕಟೇಶ! ಅಪೂರ್ಣ ಅಸಮಗ್ರ ವಿಚಾರದೋಷದಿಂದಲೇ ಮಾನವ ದೇವರ ಬಗೆಗಾಡುವ ಟೀಕೆ! ಯಥಾರ್ಥ, ತದೇಕದತ್ತ ಚಿಂತನೆಯೇ ಪೂರ್ಣಯೋಗ! ಏಳುತ್ತಲೇ ಇರುವ ಸಮಸ್ಯೆ. **"ಪ್ರಶ್ನೆಗಳ ಸರಮಾಲೆಗಳೆಲ್ಲಾ ಭೌತಿಕ, ನೈತಿಕ, ಸಾಮಾಜಿಕ ಯಥಾಸ್ಥಿತಿಯ ಮಟ್ಟದ್ದು, ಉತ್ತರ ಮಾತ್ರ ಶುದ್ಧ ಆಧ್ಯಾತ್ಮಿಕ!"**

ತಿರುಮಂಗೈ ಆಳ್ವಾರ್

ತಿರುಕ್ಕುರುನ್ತಾಣ್ಡಕಮ್ *ಸಿರಿ ಕಿರಿದಂಡಕ*

ತಮಿಳ್ ತಿರಳ್ ೭

ಇಮ್ಮೈಯೈ ಮರುಮೈ ದನ್ನೈ ಎಮಕ್ಕು ವೀಡಾಹಿ ನಿನ್ನ ಮೆಯ್ಮೈಯೈ ವಿರಿನ್ದ ಶೋಲೈ ವಿಯನ್ ತಿರುವರಙ್ಗಮ್ ಮೇಯ
ಶೆಮ್ಮೈಯೈ ಕರುಮೈ ದನ್ನೈ ತಿರುಮಲೈ ಒರುಮೈಯಾನೈ ತನ್ನೈಯೈ ನಿನ್ನೈವಾರ್ ಎನ್ತನ್ ತಲೈ ಮಿಶೈ ಮನ್ನುವಾರೇ

ಕನ್ನಡ ನೆರಳ್

ಇಹಸೊಗನಂ ಪರಸೊಗನಂ ಎಮ್ ಬೀಡಾಗಿರುತ ಅಹಹಾ ಸತ್ಯನಂ ಬಿರಿ ತೋಟದ ಶ್ರೀರಂಗದಿ ನಿಂತ
ಕೆಂಪನಂ, ತಿರುಮಲೆ ಕರಿಯನಂ ಸರ್ವಸಮಾನಂ ಪೆಂಪನಂ ನೆನೆವವರ್ ಎನ್ ತಲೆಮೇಲ್ ಇರಲೆಂದೂ

"ಪೆರಿಯ ತಿರುಮೊಳಿ" ತಿರುಮಂಗೈಗಳ ಮೊದಲ ಕೃತಿ. ಈ "ಸಿರಿ-ಕಿರಿದಂಡಕ" ೨ನೆಯದು. ೧೦೪೪ ಹಾಡುಗಳ ಆ ಪ್ರಥಮ ಪ್ರಬನ್ಧದ ಕೊನೆಯಲ್ಲಿ "ಮಾತ್ತಮ್ ಉಳ" ಎಂಬ ದಶಕದಲ್ಲಿ, ಈ ಸಂಸಾರದ ಬಗ್ಗೆ ತಮ್ಮ ಜಿಹಾಸೆಯನ್ನು ಶ್ರೀರಂಗನಾಥನಲ್ಲಿ ಬಲು ಆರ್ತಿಯಿಂದ ತೋಡಿಕೊಂಡರು. ದೊಡ್ಡ ಪ್ರವಾಹ ಬಂದಾಗ ನದೀ ತೀರದ ಮರಗಳಂತೆಯೂ ಚಂಡಮಾರುತದ ಹೊಡೆತಕ್ಕೆ ಸಿಕ್ಕಿದ ನಾವಿಕರ ಮನದಂತೆಯೂ ಹಾವಿನ ಜತೆಗೆ ಒಂದೇಎಡೆ ವಾಸಮಾಡುವವರಂತೆಯೂ, ಎರಡೂ ಕಡೆ ಉರಿ ಗೊಳ್ಳಿಯ ನಡುವೆ ಸಿಕ್ಕಿಕೊಂಡ ಇರುವೆಯಂತೆಯೂ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗುತ್ತಿರುವ ನರಿಯಂತೆಯೂ, ಅಡು ಕುರಿ ಕಾಯುವವರು ಮಚ್ಚಿನಿಂದ ನಿತ್ಯ ಸ್ವಲ್ಪ ಸ್ವಲ್ಪ ಕೊಚ್ಚಿ ಕೊಚ್ಚಿ ಕೊನೆಗೆ ಆ ಮರ ಅವಸಾನದ ಅಂಚಿಗೆ ಬಂದಿರುವಂತೆಯೂ ಆಕ್ರಂದಿಸಿದರು.

ಹೀಗೆ ವೈಕುಂಠದ ಕಡೆ ಪ್ರಾಪ್ಯತ್ವರೆ ಹೆಚ್ಚಲು, ನಾನಾ ದಿವ್ಯದೇಶಗಳ ಯಾತ್ರಾನುಭವಗಳೇ ಕಾರಣ. ಇವರು ಹಾಡಿರುವಷ್ಟು ಯಾತ್ರಾ ಸ್ಥಳಗಳನ್ನು ಮತ್ತಾವ ಆಳ್ವಾರರೂ ಹಾಡಿಲ್ಲ. ಇವರದು ವಿಪುಲ ವಾಙ್ಮಯ. ದೇಶದ ನಾನಾ ಯಾತ್ರಾ ಸ್ಥಳಗಳಲ್ಲಿ ಮನಃಪೂರ್ವಕವಾಗಿ, ಅರ್ಥವತ್ತಾಗಿ ಯಾತ್ರೆ ಮಾಡಿದವರು ಏನು ಭಾಗ್ಯಾಧಿಕರೋ! ಎಂದು ಈ ಸಿರಿ-ಕಿರಿ ದಂಡಕದ ೨೦ ಪಾಶುರಗಳಿಂದ ಹಾಡಿ ಮುಗಿಸಿದ್ದಾರೆ. ಈ ಮೊದಲ ಹಾಡು ಕಲಿಯನ್‌ರವರ ಭಾಗವತ ನಿಷ್ಠೆಯನ್ನು ತೋರುತ್ತದೆ. ಶಠಕೋಪರು ಆಳ್ವಾರ್‌ಗಳಲ್ಲೆಲ್ಲಾ ಪ್ರಧಾನ ಭೂತರಷ್ಟೆ. ಈ ತಿರುಮಂಗೈಯಾಳ್ವಾರರ ವಾಙ್ಮಯಗಳಾರೂ ಕೂಡ, ಶಠಕೋಪರ ತಮಿಳ್ ವೇದಗಳಿಗೆ ಷಡಂಗವಿದ್ವಂತೆ. ನಮ್ಮಾಳ್ವಾರರ ಅಂತರಂಗ ಕೇವಲ ಈಶ್ವರನಲ್ಲೇ ಅಲ್ಲ. ಆತನ ಭಕ್ತರಲ್ಲೂ ಅವರ ಒಲವು. ಆ ಭಾವವನ್ನೇ ಇಲ್ಲಿ ಇವರೂ ಅನುಸಂಧಿಸುತ್ತಾರೆ.

ಇದಕ್ಕೆ ಹಿಂದಿನ ೬ನೆಯ ಪಾಶುರದಲ್ಲಿ, "ಶೆನ್ನಿಪ್ಪೂವಿನೈ" ಎಂದರೆ ಸರ್ವೇಶ್ವರನನ್ನು, ಅವನ ಪಾದಗಳನ್ನು ನಿತ್ಯಸೂರಿಗಳೂ ಕೂಡ ತಮ್ಮ ತಲೆಗೆ ಧರಿಸುವ ಹೂ ಎಂದಿದ್ದಾರೆ. ಇವರ ತಲೆಗೂ ಪರಮಾತ್ಮ "ಎಲ್ಲಿ ನೀವೂ ನಿಮ್ಮ ತಲೆ ತೋರಿ. ನನ್ನ ಪಾದ ಇಡುವೆನು" ಅಂದಂತೆ ಭಾವಿಸಿ "ಅಷ್ಟೇ ಸಾಲದಯ್ಯಾ, ನಿನ್ನ ಭಕ್ತರ ತಿರುವಡಿಗಳೂ ನನಗೆ ಶಿರೋಭೂಷಣವಾಗಬೇಕು!" ಎಂದುತ್ತರಿಸುತ್ತಾರೆ.

ಇಮ್ಮೈಯೈ = ಐಹಲೌಕಿಕ, ಮರುಮೈತನ್ನೈ = ಪಾರಮಾರ್ಥಿಕ ಆನಂದ ದಾತಾ! ಎಮಕ್ಕು ವೀಡಾಹಿ ನಿನ್ನ = ನಮ್ಮೆಲ್ಲರ ಭಾಗಕ್ಕೆ ಮುಕ್ತಿಯ ಬಿಡುಗಡೆಯೇ ಆಗಿ ನಿಂತಿರುವ ಆ, ಮೆಯ್‌ಮ್ಮೈಯೈ = ಸತ್ಯಸ್ವರೂಪವನ್ನು, ವಿರಿನ್ದ ಶೋಲೈ = ಸತ್ಯವೇ ವಿಕಸಿತವಾಗಿ, ತೋಟ ತುಡಿಕೆಗಳ ರಂಗಭೂಮಿಯಾಗಿರುವ, ತಿರುವರಙ್ಗಮ್ ಮೇಯ ಶೆಮ್ಮೈಯೈ = ಶ್ರೀರಂಗ ನಿತ್ಯವಾಸಿಯಾದ ಸರ್ವಾನುರಕ್ತರೂಪದಿಂದ ಸುಲಭನಾಗಿರುವವನನ್ನು, ಇದೇ ಕಲಿಯುಗದಲ್ಲಿ, ಕರುಮೈದನ್ನೈ = ನೀಲಾssಕಾರಧರಿಸಿ, ತಿರುಮಲೈ ಒರುಮೈಯಾನೈ = ತಿರುಮಲೆಯ ಆನಂದ ನಿಲಯ ವಿಮಾನ ಮಧ್ಯಸ್ಥನಾಗಿರುವ ತಿಮ್ಮಪ್ಪನನ್ನು, ನಿನ್ನೈವಾರ್ = ನೆನೆಯುವ ಭಾಗವತೋತ್ತಮರೇ, ಎನ್ತನ್ ತಲೈಮಿಶೈ = ನನ್ನ ತಲೆಮೇಲೆ. ಮನ್ನುವಾರ್ ಏ = ಒಡವೆಯಂತೆ ನಿತ್ಯವಿರಾಜಿಸಲಿ. ದೇವರ ಬಗೆಗೆ ಭಕ್ತಿ ಸಿಂಧುವಾಗಬೇಕಾದರೆ, ಸಮಾಜದ ಸರ್ವಸಜ್ಜನರಲ್ಲೂ ಸನ್‌ಮಹಿಳೆಯರಲ್ಲೂ, ಉತ್ಕಟ ಪ್ರೇಮವೇ ನಿಕಷ! ಒರೆಗಲ್ಲು.

ತಿರುನೆಡುನ್ತಾಣ್ಡಹಮ್ ಸಿರಿ ಹಿರಿದಂಡಕ

ತಮಿಳ್ ತಿರಳ್ ೮

ನೀರಹತ್ತಾಯ್ ನೆಡುವರೈಯಿನ್ ಉಚ್ಚಿ ಮೇಲಾಯ್ ನಿಲಾತ್ತಿಙ್ಗಳ್ ತುಣ್ಡತ್ತಾಯ್ ನಿರೈನ್ದ ಕಚ್ಚಿ
ಊರಹತ್ತಾಯ್ ಒಣ್ ತುರೈ ನೀರ್ ವೆ:ಕಾ ವುಳ್ಳಾಯ್ ಉಳ್ಳುವಾರುಳ್ಳತ್ತಾಯ್ ಉಲಹಮ್ ಏತ್ತುಮ್
ಕಾರಹತ್ತಾಯ್ ಕಾರ್ವಾನತ್ತುಳ್ಳಾಯ್ ಕಳ್ವಾ ಕಾಮರು ಪೂಂ ಕಾವಿರಿಯಿನ್ ತೆನ್ ಪಾಲ್ ಮನ್ನು
ಪೇರಹತ್ತಾಯ್ ಪೇರಾದೆನ್ ನೆಂಜಿನುಳ್ಳಾಯ್ ಪೆರುಮಾನ್ ಉನ್ ತಿರುವಡಿಯೇ ಪೇಣಿನೇನೇ

ಕನ್ನಡ ನೆರಳ್

ತಿರುನೀರ್ ಅಹನೇ! ನೆಡುಮಲೆ ತುದಿಮೇಲಾ! ನಿಲಾತ್ತಿಂಗಳ್ ತುಂಡಾ! ತುಂಬಿದ ಕಾಂಚೀ
ಊರಹನೇ! ಒಳ್‌ಹೊಳೆ ದಂಡೆಯ "ವೆ:ಕಾ" ವಾಸೀ! ನೆನೆಯುವರ್ ಮನಮನೆಯಾ! ಲೋಕವೆ ನುತಿಪಾ
ಕಾರಹನೇ! "ಕಾರ್‌ವಾನಂ" ಒಳಗಿಹ ಕಳ್ವಾ! ಕಾಮಿಪ ಚೆಲು ಕಾವಿರಿ ತೆನ್ ತೀರವ ಬಿಡದಾ
ಪೇರಹನೇ! ಬಿಡದೆನ್ ಮಾನಸಮಂದಿರನೇ! ಹಿರಿಯಾ! ನಿನ್ ತಿರುವಡಿಯನೇ ನಾ ನೇಹಿಸಿದೆ!

ಪರಕಾಲ ಕವಿಯ ೬ನೆಯ ದಿವ್ಯಪ್ರಬನ್ಧವಿದು. "ನಾಥನುಕ್ಕು ನಾಲಾಯಿರಂ ಉರೈತ್ತಾನ್" ನಮ್ಮಾಳ್ವಾರ್, ನಾಥಮುನಿಗಳಿಗೆ, ಆಳ್ವಾರ್ ತಿರುನಹರಿಯಲ್ಲಿ ಯೋಗಸಾಕ್ಷಾತ್ಕಾರ ನೀಡಿ, ನಾಲ್ಕು ಸಾವಿರ ದಿವ್ಯ ಪ್ರಬಂಧಪಾಶುರಗಳನ್ನೂ ೧೦೦೦ ವರ್ಷದ ಹಿಂದೆ ಉಪದೇಶಿಸಿದ ಕ್ರಮದಲ್ಲೇ, ಪಾರಾಯಣ ನಡೆಯುವುದು. ಆ ಕ್ರಮದಲ್ಲಿ, ಈಗ ತಿರುನೆಡುನ್ತಾಂಡಹಂ ಇಲ್ಲಿಗೆ ಸೇರಿಸಲಾಗಿದೆ. ತಿರುಮಂಗೈಗಳ ಕೃತಿ ಮೂರನೆಯದು, "ತಿರುವೆಳುಕ್ಕೂತ್ತಿರುಕ್ಕ್ಯೆ" ಕುಂಭಕೋಣದ ಆರಾವಮುದ ಸ್ವಾಮಿಯಲ್ಲಿ ಪ್ರಪತ್ತಿ ಮಾಡಿದ್ದು. ಅದರಲ್ಲಿ ತಿರುಮಲೆಯ ಶಾಬ್ದಿಕ ಉಲ್ಲೇಖವಿಲ್ಲ. ೪ನೆಯದೇ, "ಶಿರಿಯ ತಿರುಮಡಲ್", ೫ನೆಯದು "ಪೆರಿಯ ತಿರುಮಡಲ್". ಕೊಟ್ಟಕೊನೆಯದೇ ಈ ತಿರುನೆಡುನ್ತಾಣ್ಡಹಮ್ ಹಿರಿಸಿರಿದಂಡಕ.

ನೀರ್ ಅಹತ್ತಾಯ್ = ಓ ದೇವಾ "ನೀರಹಮ್" ಎಂಬಲ್ಲಿ ಮನೆ ಮಾಡಿರುವವನೇ! ಈ "ತಿರುನೀರಹಂ" ದಿವ್ಯದೇಶ ಕಾಂಚೀಪುರದ "ತಿರುವೂರಹಂ" ಎಂದು ಪ್ರಸಿದ್ಧವಾದ "ಉಲಹಳನ್ದ ಪೆರುಮಾಳ್" ಸನ್ನಿಧಿಯಲ್ಲಿದೆ. ಸ್ಥಳ ಭೇದಗಳಿಂದ ದೇವರ ಗುಣಭೇದಗಳು ಪ್ರಕಾಶ ಪಡುತ್ತವೆಯೇ ಹೊರತು ಬ್ರಹ್ಮವಸ್ತು ಎರಡಿಲ್ಲ. ನೆಡುವರೈಯಿನ್ ಉಚ್ಚಿ ಮೇಲಾಯ್ = ಪರಮ ವಿಲಕ್ಷಣವಾದ ಶ್ರೀವೇಂಕಟಾಚಲ ಶಿಖರ ವಾಸಿನ್! ನಿಲಾತ್ತಿಙ್ಗಳ್ ತುಣ್ಡತ್ತಾಯ್ = ಈ ಹೆಸರಿನ ಪುಣ್ಯಕ್ಷೇತ್ರ ವಾಸಿನ್! ಇದು ದೊಡ್ಡಕಂಚಿಯ ವಿಕಾಂಬರೇಶ್ವರನ ಆಲಯದೊಳಗೆ ಸೇರಿದೆ. ನಿರೈನ್ದ ಕಚ್ಚಿ ಊರ್ ಅಹತ್ತಾಯ್ = ಸಂಪತ್, ಕಲಾಸಮೃದ್ಧ "ನಗರೇಷು ಕಾಂಚೀ" ಎಂಬ ಪ್ರಸಿದ್ಧಿಯಂತೆ, ಕಾಂಚೀಪುರದ "ತಿರುವೂರ್ ಅಹಂ" ದಿವ್ಯದೇಶ ಭವನಾ! ನಾಗಪರ್ಯ್ಯಙ್ಕಶಾಯೀ! ಒಣ್ ತುರೈ ನೀರ್ ವೆ:ಕಾ ಉಳ್ಳಾಯ್, ವೇಗವತೀ ನದಿಯ ತೀರದ "ತಿರು ವೆ:ಕಾ" ವಾಸಿ!

ಉಳ್ಳುವಾರ್ ಉಳ್ಳತ್ತಾಯ್ = ನೆನೆವವರ ಮನದಲ್ಲಿರುವವನೇ! ಇದೂ ದಿವ್ಯಮಂಗಳ ವಿಗ್ರಹ ವ್ಯಾಪ್ತಿಯಿಂದ ದಿವ್ಯದೇಶವೂ ಹೌದು. ನೆನೆಯುವವರೆಲ್ಲಾ ಒಂದೊಂದು ಯಾತ್ರಾಸ್ಥಳವೇ! ಎಷ್ಟೊಂದು ಔಚಿತ್ಯದಿಂದ ಕೂಡಿದೆ! ಉಲಹಮೇತ್ತುಮ್ ಕಾರಹತ್ತಾಯ್ = ಸರ್ವಲೋಕಸ್ತುತ್ಯನಾದ "ಕಾರ್‌ಅಹಂ" ದಿವ್ಯದೇಶಸ್ಥಾ! ಇದೂ ಉಲಹಳನ್ದಾನ್ ಪೆರುಮಾಳ್ ಸನ್ನಿಧಿಯಲ್ಲೇ ಅಡಗಿದೆ. ಕಾರ್‌ವಾನತ್ತುಳ್ಳಾಯ್ ನೀಲಮೇಘ ಸ್ವಭಾವದ ಮೂರ್ತಿ! ಇದೂ ಅಂತೆಯೇ. ಕಳ್ವಾ = ನವನೀತ ಚೋರಾ! "ತಿರುಕ್ಕಳ್ವನೂರ್" ದಿವ್ಯ ದೇಶಸ್ಥನೇ! ಎಲ್ಲರೊಳಗಿದ್ದೂ ಹೊರಕ್ಕೆ ಕಾಣಿಸಿಕೊಳ್ಳದಿರುವ ಕಳ್ವಾ! ಹ್ಯಾದಯಾನ್ತರ್ಯಾಮಿ! ಕಂಡರೆ, ಅತ ಮಾಡುವ ರಕ್ಷಣೆಯನ್ನು ಸ್ವಸ್ವಾತಂತ್ರ್ಯದಿಂದ ನಮ್ಮಂತಹವರು ನಿಷೇಧಿಸಿ ಬಿಡುತ್ತೇವೆ! ಕಾಮರು ಪೂಮ್ ಕಾವಿರಿಯಿನ್ = ಎಲ್ಲರೂ ಆಸೆ ಪಡತಕ್ಕ ಅಂದವಾದ ಕಾವೇರಿಗೆ ತೆನ್ ಪಾಲ್ ತೆಂಕಣ ದಂಡೆಯಲ್ಲಿ, ಮನ್ನು = ನಿತ್ಯ ಸಾನ್ನಿಧ್ಯ ಗೈದಿರುವ, ಪೇರ್ ಅಹತ್ತಾಯ್ = "ತಿರುಪ್ಪೇರಹಂ" ವಾಸಾ! ಪುಕ್ಕುಡುತ್ತಾನ್ ಸನ್ನಿಧಿ. ಇವಿಷ್ಟರಲ್ಲೂ ಇರುವವ ಇದೋ ನನ್ನೆದೆಯನ್ನು ಯಾವಾಗಲೂ ಬಿಡದೆ ಸಾನ್ನಿಧ್ಯ ಗೈದಿರುವನು! ಪೇರಾದು ಎನ್ ನೆಂಜಿನುಳ್ಳಾಯ್ ತಿರುಮಂಗೈಗಳ ಹೃದಯ ಯಾವಯಾತ್ರಾ ಸ್ಥಳಗಳಿಗೆ ಕಡಿಮೆ? ಅವುಗಳಾದರೆ ಬೇರೆ ಬೇರೆ ಕಡೆ. ಶರಣರ ಮನವೆಂಬ ದೇಗುಲ ದಾಣ ಒಂದೇ ಎಡೆ, ನಮಗೆಷ್ಟು ಪರಮ ಸುಲಭ! ಪೆರುಮಾನ್ = ಓ ಹಿರಿಯಾ! ಏನೇನು ಮಹಿಮೆ ತೋರಿದೆಯಯ್ಯಾ! ಶರಣರ ಪಾಲಿಗೆ ಇವೆಲ್ಲಾ ಯಾತ್ರಾಧಾಮ ಮೂರ್ತಿಗಳು ಅಷ್ಟಕ್ಕೇ ಸ್ಥಾನ ಬದ್ಧ ಮೂರ್ತಿಗಳಲ್ಲ. ಸ್ಥಾನಿಕವೂ ಆಗಿ ಸ್ಥಾನಾತೀತಗಳೂ ಆಗಿವೆ! ಉನ್ ತಿರುವಡಿಯೇ = ನಿನ್ನಶ್ರೀ ಮಚ್ಚರಣಾಗಳನ್ನೇ, ಪೇಣಿನೇನೇ = ನೀನಿತ್ತ ಭಕ್ತಿಯಿಂದ ನಿನ್ನನ್ನು ಇದೋ ಆದರಿಸುತ್ತಿದ್ದೇನೆ. ನಿನ್ನ ಮಹೋಪಕಾರಗಳು ಅವರ್ಣನೀಯ.

ತಮಿಳ್ ತಿರಳ್ ೯

ವಙ್ಗತ್ತಾಲ್ ಮಾಮಣಿ ವನ್ದುನ್ದು ಮುನ್ನೀರ್ ಮಲ್ಲೈಯಾಯ್, ಮದಿಳ್‌ಕಚ್ಚಿ ಊರಾಯ್ ಪೇರಾಯ್
ಕೊಙ್ಗುತ್ತಾರ್ ವಳಮ್ ಕೊನ್ನೈಯಲಙ್ಗಲ್ ಮಾರ್ವನ್ ಕುಲವರೈಯನ್ ಮಡಪ್ಪಾವೈ ಇಡಪ್ಪಾಲ್ ಕೊಣ್ಡಾನ್
ಪಙ್ಗತ್ತಾಯ್ ಪಾರ್ ಕಡಲಾಯ್ ಪಾರಿನ್ ಮೇಲಾಯ್ ಪನಿವರೈಯಿನ್ ಉಚ್ಚಿಯಾಯ್ ಪವಳ ವಣ್ಣಾ
ಎಙ್ಗುತ್ತಾಯ್ ಎಮ್ ಬೆರುಮಾನ್ ಉನ್ನೈನಾಡಿ ಏಳೈಯೇನ್ ಇಙ್ಗನಮೇ ಉಳಿತರುಹೇನೇ

ಕನ್ನಡ ನೆರಳ್

ದೋಣಿಯಿಂ ಮಾಮಣಿ ಮುತ್ತುಂ ತಂದೂ ತಳ್ಳುವ ಕಡಲ್‌ಮಲ್ಲೆಯನೇ! ಕೋಟೆಯ ಕಂಚೀಊರವನೇ ತಿರುಪ್ಪೇರ್ ಅವನೇ!
ಜೇನಂದದ ಕೊನ್ನೇ ಹೂ ಸರದೆದೆಯಗೆ ಕುಲಗಿರಿಜೆಯ ನೆಡಗಡೆ ಕೊಂಡವಗೆ
ಪಾಲ್ ನೀಡಿಹನೇ! ಹಾಲ್‌ಗಡಲ್ ಪವಡಿಹನೇ! ಇಳೆಮೇಲ್ ಬಂದವನೇ! ಹನಿಮಲೆ ಕೋಡಾ! ಪ್ರವಾಳವರ್ಣಾ!
ಎಲ್ಲಿಹೆ ಎನ್ ಉಪಕಾರೀ? ನಿನ್ನನು ಅರಸಿ ಚಪಲನು ಇಂತೆಯೇ ಕಲಗುತ ಹೊರಳಾಡಿಹೆನೈ!

ಈ ೯ನೆಯ ಹಾಡು ತಿರುಮಂಗೈ ಸಂತರ "ಮಹಾವಿಷಾದಯೋಗ!" ಈಗ ತಾವಿರುವ ಈ ತಾಣ "ತಿರುಕ್ಕೋವಲೂರ್" ಆಗಲಿಲ್ಲವಲ್ಲಾ! ಅಥವಾ ಅಲ್ಲಿನ ಸ್ವಾಮಿಯಾದರೂ ತಾವಿರುವೆಡೆಗೇ ಬರಲಿಲ್ಲವಲ್ಲಾ! ಮುಖ ತೋರುವ ಸ್ವಭಾವದವನು, ತೋರದಿರಲು ಕಾರಣವೇನು? ಎಂದು ಹಿಂದೆಲ್ಲಾ ಆಕ್ರಂದಿಸಿದರು. ಲೋಕತ್ರಯವನ್ನೂ ಅತ್ತಣ ಲೋಕಗಳನ್ನೆಲ್ಲಾ ಅಳೆದಾಗ ಅದೇನು 'ಶ್ರೀಕಾಂತಿ' ಸ್ವಾಮಿಯದು! ಆ ಹಳಹಳನ ಹೊಳಪನ್ನು ಅನುಭವಿಸಬೇಕಲ್ಲಾ! "ಓ ಶರಣರೇ! ನಿಜ, ಅದಕ್ಕೆಂದೇ ನಾನು ತಿರುಕ್ಕೋವಲೂರಲ್ಲಿ ನಿಂತಿರುವುದು. ಬಯಕೆಯಿದ್ದರೆ ಅಲ್ಲಿಗೆ ಬರಬಹುದಲ್ಲಾ" ಎಂದು ಭಗವಂತ ನೆನೆದಂತಿದೆ. ಅಂದರೆ ನಾನು ಅವನ ಆಸ್ಯಲಾಸ್ಯವನ್ನು ದರ್ಶಿಸಲು ಅಯೋಗ್ಯನೆಂದಿರಬಹುದೇನೋ! ಹೀಗೆಲ್ಲಾ ಇವರ ಚಿತ್ತಝರಿಯಲ್ಲಿ ಶಂಕಾಲಹರಿ ಏಳುತ್ತದೆ. ಆಶಾಲೇಶವಿರುವ ಎಂಥವರಿಗೂ ಮೊಗದೋರುವವನು, ಯೋಗ್ಯತಾಯೋಗ್ಯತೆ ನೋಡದೆ ಸಮನಾದವನು ಸ್ವಾಮಿ. ಹೀಗಿರುವಾಗ ನನ್ನದೇ ಏನೋ ಪಾಪವಿರಬೇಕು! ಪಾಪಫಲವನ್ನು ಯಾತನಾ ಶರೀರದಿಂದಲೇ ಅನುಭವಿಸಬೇಕಷ್ಟೆ! ಆ ಶರೀರಕ್ಕೆ ಎಷ್ಟು ನೋವು ಕೊಟ್ಟರೂ ಇತ್ತ ಸಾಯುವುದೂ ಇಲ್ಲ. ಅತ್ತ ಬದುಕುವುದೂ ಇಲ್ಲ. ಚಿತ್ರವಧ ಗೈಯ್ಯಿಸಿಕೊಳ್ಳುವ ವಿಲಕ್ಷಣ ಕಾಯವದು. ಇದೇ ಇವರ ಅತಿವಿಷಾದ.

ವಙ್ಗತ್ತಾಲ್ = ತೇಲುವ ದೋಣಿಗಳಿಂದ, ಮಾ ಮಣಿ = ಅಮೂಲ್ಯರತ್ನ ಹವಳ ಮುತ್ತುಗಳನ್ನು, ವನ್ದು ಉನ್ದುಮ್ = ಸಮುದ್ರ ಮುಳುಗುವ ಚತುರರು ತೆಗೆದುಕೊಂಡು ಬರುವ, ಮುನ್ನೀರ್ ಮಲ್ಲೆಯಾಯ್ = ಕಡಲ ದಂಡೆಯ ತಿರುಕ್ಕಡಲ್ ಮಲೈಯಲ್ಲಿರುವವನೇ! ವೈಕುಂಠನಿಲಯನಾಗಿದ್ದ ಆ ಕರಿಮಾಣಿಕ್ಯನನ್ನು ಇಲ್ಲಿ ತಂದಿರಿಸಿರುವುದು ಈ ವಾಹಕ ದೋಣಿಗಳೋ! ಅದರಲ್ಲೋ ಶ್ರೀದೇವಿಯನ್ನು ಬಿಟ್ಟು ಓರ್ವಭಕ್ತನಿಗಾಗಿ ಓರ್ವನೇ ಬಂದಿರುವ ನೆಲೆ! ಅವನಿಗೆ ತೋರಿದ ವಾತ್ಸಲ್ಯ ನನ್ನ ಬಗೆಗೆ ಇಲ್ಲದೆ ಹೋಯಿತೇ? ಕಾಂಚೀಪುರ ಭಗವದ್‌ಗುಣವರದತ್ವಕ್ಕೆ ಅನುರೂಪವಾಗಿ ಅನೆಕ ಧಾರ್ಮಿಕರು, ಕೋಟೆ ಕೊತ್ತಲು ಕಟ್ಟಿಸಿ ಮಂಗಳಾಶಾಸನ ತತ್ಪರರಾಗಿರುವ ನಗರ. ಇಲ್ಲೂ ಇವರು ಭಯಪಡುತ್ತಾರೆ. ಅಸ್ಥಾನೇ ಭಯಶಂಕೆಯೇ ಜೀವಾತ್ಮರ ಪ್ರೇಮಾತಿಶಯಕ್ಕೆ ಜೀವಾಳವಾದುದು. ತೇವಪ್ಪೆರುಮಾಳಿನ ಅಂದ, ಆತನ ಶ್ರೀಮೂರ್ತಿಮಾರ್ದವ, "ಕಾಣ್ಡಹು ತೋಳ್ ಅಣ್ಣಲ್" ಎಂಬಂತೆ, ದರ್ಶನೀಯ ಭುಜಗಳಿಗೆ ಏನೊಂದೂ ಅವದ್ಯ ಬರಬಾರದೆಂಬ ಶುಭಾಶಂಸೆ. ಸರಕುಗಳು ಬಂದಿಳಿಸಿಕೊಳ್ಳುವುದು ಬಂದರುಗಳಲ್ಲೇ ಆದರೂ ಅವುಗಳಿಗೆ ಬೆಲೆ ಸಿಗುವುದು ನಗರದಲ್ಲೇ! "ಮಲ್ಲೈಯಾಯ್" ಆದೊಡನೆ "ಮದಿಳ್ ಕಚ್ಚಿಊರಾಯ್" ಈ ಪೂರ್ವಾಪರ್ಯಕ್ಕೆ ಭಾವವಿದು.

ತಿರುಪ್ಪೇರ್ = ವಿಮುಖರಾದವರನ್ನೂ ನೀನೇ ಭಾವಿಸಿ ವಿಷಯೀಕರಿಸುತ್ತಾ ಇರುವ ತಿರುಪ್ಪೇರ್ ಶ್ರೀದಿವ್ಯದೇಶವಾಸಿಯೇ! ಪೇರಾಯ್. ಕೊಙ್ಗುತ್ತಾರ್ = ಅಖಂಡ ಮಧುಸ್ಯಂದಿಗಳಾದ ಪುಷ್ಪಗಳಿಂದ, ವಳಮ್ = ಸುಂದರವಾದ, ಕೊನ್ನೈ ಅಲಙ್ಗಲ್ ಮಾರ್ವನ್ = ಕೊನ್ನೇ ಹೂಮಾಲೆಯನ್ನು ಎದೆಯಲ್ಲುಳ್ಳ ರುದ್ರನನ್ನೂ ಹಾಗೂ, ಕುಲವರೈಯಿನ್ ಮಡಮ್‌ಪಾವೈ = ಕುಲಪರ್ವತವಾದ ಹಿಮಗಿರಿಯ ಮರ್ಯಾದಸ್ತ ಮಗಳಾದ ಗಿರಿಜಾದೇವಿಯನ್ನೂ, ಇಪ್ಪಾಲ್ ಕೊಣ್ಡಾನ್ = ತನ್ನ ವಾಮಾರ್ಧಳನ್ನಾಗಿಸಿ ಕೊಂಡಿರುವ ಅದೇ ಅರ್ಧನಾರೀಶ್ವರನನ್ನು, ತನ್ನ ಭಾಗೀದಾರನನ್ನಾಗಿ ಮಾಡಿಕೊಂಡಿರುವ ಮಹೋದಾರಿ, ಪಾಲ್ ಕಡಲಾಯ್ = ಬ್ರಹ್ಮ ಇಂದ್ರಾದಿಗಳಿಗೂ ಕೇಳದೆಯೇ ಭೇಟಿ ಕೊಡಲು, ಸಮುದ್ರಶಾಯಿಯಾಗಿರುವವನೇ! ನಾನಿಷ್ಟು ಗೋಗರೆದರೂ ನನ್ನ ಭಾಗಕ್ಕೆ ಶೂನ್ಯ! ಪಾರಿಲ್ ಮೇಲ್ ಆಯ್ = ರಾವಣನ ಹಾವಳಿ ತಪ್ಪಿಸಲು ದೇವತೆಗಳಿಗಾಗಿ ಈ ಭೂಮಿಯ ಮೇಲೆ ಅವತರಿಸಿದವನೇ! ಪ್ರಯೋಜನಾಂತರ ಪರರಿಗೆಲ್ಲಾ, ಕೆಲಸ ಮಾಡಿಕೊಟ್ಟು, ಅದರಿಂದ ಪಾಡು ಪಡುವ ನೀನು, ರಾಜ್ಯಭ್ರಂಶ ವನವಾಸ ಸೀತಾವಿಯೋಗ! ನಿನಗೆ ಯಾವೊಂದು ತೊಂದರೆಯೂ ಬರಬಾರದೆಂದು ನಿನ್ನ ಮಂಗಳವೊಂದನ್ನೇ ಕೋರುವ ನನ್ನ ಭಾಗಕ್ಕೆ ಮಾತ್ರ ಏನೂ ಇಲ್ಲವೇ?

ಪನಿವರೈಯಿನ್ ಉಚ್ಚಿಯಾಯ್ = ತಂಪೇತಂಪಾದ ವೇಂಕಟಗಿರಿ ಶಿಖಿರಾಲಯಾ! ಪವಳವಣ್ಣಾ = ನಿನ್ನ ರೂಪವನ್ನು ಕಾಮಿಸುವ ನಮ್ಮಂತಹವರಿಗಾಗಿಯೇ ಹವಳವರ್ಣನಾಗಿ! ನೀನು ಮೈ ದೋರದಿರುವಿ. ಎಙ್ಗುತ್ತಾಯ್ = ಎಲ್ಲಿದ್ದೀಯಪ್ಪಾ? ಎಂದು ಕೈ ಚಾಚುತ್ತಾರೆ. ಚಪ್ಪರವೇ ಸಿಗದ ಬಳ್ಳಿಯಂತೆ ತಡಮಾಡಿ ತಳರಿಹೋಗಿದ್ದಾರೆ! ಈ ಆಳ್ವಾರ್. ಲತೆಯಂತೆ ವಿಶಾಲವಾಗಿ, ಜ್ಞಾನ ಪ್ರಭೆಯಿಂದ ಪ್ರೇಮಪ್ರೇರಿತ ಕೈಂಕರ್ಯದ ಬಯಕೆಯಿಂದ ಹರಗುವ ಸ್ವಭಾವವೇ ಈ ಜೀವಾತ್ಮರ ನಿಜಲಿಂಗ! ಉಳಿದ ಗಿಡಮರಗಳು ಹಾಗಲ್ಲ, ಎಮ್ ಪೆರುಮಾನ್ ಎಙ್ಗುತ್ತಾಯ್ = ನಿನ್ನ ಈ ಆಸ್ತಿ ನೋವುಪಡುತ್ತಿರುವಾಗ ಯಜಮಾನನಲ್ಲವೋ ಹತ್ತಿರ ಬಂದು ಕಾಳಜಿ ವಹಿಸಬೇಕು! ಉನ್ನೈನಾಡಿ = ನೀನು ಹಿಂದೆಲ್ಲಾ ಜನ್ಮ ಜನ್ಮಾಂತರಗಳಿಂದ ಕಾಯ್ದು ಕಾಯ್ದು ನನ್ನನ್ನು ಹಿಡಿಯಲು ಹವಣಿಸಿದೆ, ಈಗ ನಾನು ನಿನ್ನನ್ನು! ಉನ್ನೈ ನಾಡಿ = ಅರಸಿ ಬಂದಿದ್ದೇನೆ, ಏಳ್ಕೆಯೇನ್ = ನಾನಿದೋ ಚಪಲಚಿತ್ತನಾಗಲು ಬಿಡುತ್ತೀಯಾ? "ತಳಿರ್ ಪುರೈಯುಮ್ ತಿರುವಡಿಯೆನ್ ತಲ್ಮೇಲನವೇ" ಎಂದು ಮೊದಲೇ ಹೇಳಿದ್ದೇನಲ್ಲಾ! ಅಂದರೆ ತಿರುಮಂಗೈ ಶರಣರ ಶ್ರೀಶಿರಸ್ಸಂಬಂಧದಿಂದ - ತಿರುಮುಡಿ ಸಂಬಂಧದಿಂದ - ದೇವರ ಪಾದ ತಳಿರಂತೆ ಶೋಭಿಸಿತು! ಎಂಬ ಭಾವ. ಶರಣರ ಲಾಭವೇ ಶರಣ್ಯನಿಗೆ ಎಳೆತನದ ಕಾಂತಿ ತರುವುದು.

ಹಿಂದೆ ನೀನೇ ಆರಂಭಿಸಿರುವ ನಿನ್ನ ಕೆಲಸವನ್ನು ಖಂಡಿತ ಮುಂದುವರಿಸಿಯೇ ತೀರುತ್ತೀಯೆ, ಎಂಬೀ ನನ್ನ ಮಹಾವಿಶ್ವಾಸವನ್ನು ಶಿಥಿಲ ಗೊಳಿಸಬೇಡಾ! ಈಗಿಷ್ಟು ನೀನು ಸತಾಯಿಸುತ್ತಿರುವುದರಿಂದ ನನಗೆ ಕಲಗುಗೆ ವಕ್ಕಿಸುವ ಸಂಭವವುಂಟು. ಅದಕ್ಕೆಡೆ ನೀಡಬೇಡಾ! ಇಙ್ಗನಮೇ = ಇದೋ! ನೀನೇ ನೋಡಪ್ಪಾ. ರಾಮನ ವನವಾಸ ಸಮಯದಲ್ಲಿ, ದಂಡಕಾರಣ್ಯದ ಋಷಿಗಳು ತಮ್ಮ ಪೂರ್ವ ತಪಸ್ಸಿಗಳನ್ನು ರಾಕ್ಷಸರು ಹತ್ಯೆ ಮಾಡಿದ್ದ ಎಲಬುಗಳ ಮಹಾಮಹಾ ಗುಡ್ಡಗಳನ್ನು ಶ್ರೀರಾಮನಿಗೆ ತೋರಿಸುವಾಗ "ಏಹಿ ಪಶ್ಯ ಶರೀರಾಣಿ" ಎಂದಂತಾಗಿದೆ, ನನ್ನ ಈಗಿನ ಪಾಡು. ನಿನ್ನ ರಕ್ಷಕತ್ವದ ಸ್ವರೂಪವನ್ನು ನೋಡಿಯಾದರೂ ನೆಮ್ಮದಿಯಿಂದಿರಲಾಗದ ಸಂದರ್ಭ! ಆ ದಶರಥ, ರಾಮ ಸೀತಾ ಲಕ್ಷ್ಮಣರ ವಿರಹದಿಂದ ಅಗಲೇ ಸತ್ತ! ಆ ಚಿನ್ತಯನ್ತೀ ಎಂಬ ಗೋಕುಲದ ಹೊಸ ಸೊಸೆಯೊಂದನ್ನು, ರಾಸಲೀಲೆಗೆ ತಡೆದ ಹಿರಿಯರ ಮುಂದೆಯೇ ಅದು ಪ್ರಾಣಬಿಟ್ಟಿತು! ಆ ಭಾಗ್ಯವೂ ನನಗಿಲ್ಲವಲ್ಲಾ!

ತಮಿಳ್ ತಿರಳ್ ೧೦

പൊന്നാനായ് പൊലിൽ ഏഴുമ് കാവൽ പൂണ്ട പുഹളാനായ് ഇഹൾ്വായ തൊണ്ടനേൻ നാൻ്
എന്നാനായ് എന്നാനായ് എന്നലൽ്ലാൽ് എന്നിവൻ ഏഴ്കൈയേൻ ഉലഹമേത്തുമ്
തെന്നാനായ് വടവാനായ് കുടപാലാനായ് കുണപാല മദയാനായ് ഇമ്മൈയോർ്ക്കെന്നുമ്
മുന്നാനായ് പിന്നാനാർ് വണങ്കു മ് ശോദി തിരുമൂഴി ക്കളത്താനായ് മുദൽ് ആനായേ.

ಕನ್ನಡ ನೆರಳ್

ಹೊನ್ನಾಗಿಹೆ ಜಗವೇಳ್ ಕಾವಲ್‌ಗೊಂಡಾ ಪೊಗಳಾಗಿಹೆ - ತೆಗಳಾಗಿಹ ಚಪಲ ಭಕ್ತನ್ ನಾ
ಎನಗಾಗಿಹೆ ಎನಗಾಗಿಹೆ ಎಂದಲ್ದೆ ಏನ್ ಅರಿವೆನು ಚಂಚಲ! ಲೋಕವೆ ನುತಿಪಾ
ತೆನ್ ಆನೇ! ಬಡಗಲ ಆನೇ! ಮೇಲ್ ದಿಕ್ಕಾನೇ! ಕೀಳ್ ದೆಸೆ ಮದ್ದಾನೆಯದಾಗಿ ನಿತ್ಯರ್‌ಗೆಂದೂ
ಮುಂದಾಗಿ ಹಿಂದುಳಿದವರಿಂ ನಮ್ಯಜ್ಯೋತೀ! 'ತಿರುಮೂಳಿ ಕ್ಕಳ'ದವನೇ! ಸರ್ವಾssದಿಮ ಕಾರಣನೇ!

ದೇವರ ಆಸರೆ ಕೋರುವವರಾದರೆ ಸರಿ. ಯೋಗ್ಯರೋ ಅಯೋಗ್ಯರೋ ಅದನ್ನೆಲ್ಲಾ ಅತ ನೋಡನು. "ಸಮೋೞಹಂ ಸರ್ವ ಭೂತೇಷು" - ಗೀತೆ. ಅಂಥವರಿರುವೆಡೆಗೇ ತಾನಾಗಿಯೇ ಧಾವಿಸಿ ಮೊಗತೋರಿ ಕೊಳ್ಳುವವನು. ನಾಲ್ಕನೆಯ ಹಾಡಿನಲ್ಲೇ ಇವರು,

"ಮಂದಿರತ್ತೈ ಮಂದಿರತ್ತಾಲ್ ಮರವಾದು ಎನ್ನುಮ್ ವಾಳುದಿಯೇಲ್"

ಅಷ್ಟಾಕ್ಷರೀ ಮಂತ್ರದ ವ್ಯಾಜದಿಂದ ಮಂತ್ರಾರ್ಥನಾದ ಶ್ರೀಮನ್ನಾರಾಯಣನನ್ನು ಮರೆಯದೆ, ಎಂದೂ ಮೇಲೇರಬೇಕಿದ್ದರೆ, ಮಾನವ ತನ್ನ ನಿಜವಾದ ಪ್ರಗತಿ ಸಾಧಿಸಬೇಕಿದ್ದರೆ, ಎಲೆ ಮನವೇ! ನಿನಗೆ ಸ್ವಾಮಿ ಕೈಂಕರ್ಯದ ಕಾಯಕದ ನಿತ್ಯಬಾಳು ಸಿದ್ಧಿಸೀತು.

ಸಿದ್ಧಸಾಧನನಾದ ತನ್ನನ್ನು ಬಿಟ್ಟು ಮಂತ್ರಸಾಧಕನೆಂದು ನನ್ನನ್ನು ಕೈ ಬಿಟ್ಟಿರಬೇಕು. ನನ್ನ ಭಾವ ಹಾಗಲ್ಲ. ತಿರುಮನ್ತ್ರ ಒಂದು ಅತನ ಆರಾಧನೋಪಕರಣವಷ್ಟೇ. ಏಕೆಂದರೆ ಅದರಲ್ಲಿ ಜೀವ ಈಶ್ವರರ ಆಳ್ ಒಡೆಯನ ಸಂಬಂಧ ಎದ್ದು ಕಾಣುತ್ತದೆ. ಅ+ಉ+ಮ್ = ಓಮ್. ಮ್ = ಜೀವಾತ್ಮರೆಲ್ಲಾ, ಅ = ಅಕಾರ ಹೇಗೆ ಎಲ್ಲ ವರ್ಣಗಳಿಗೂ ಮೂಲ ಕಾರಣವೋ, ಮೊಮ್ಮೊದಲೋ. ಅಂತಃ ಸರ್ವಾದಿಮೂಲನಿಗೆ. ಉ = ಅವನಿಗೇ ಹೊರತು ಅವನನ್ನು ಮರೆತ ಬೇರೆಯವರಿಗೆ ಸಲ್ಲದ ಒಲ್ಲದವು, ಈ "ಮ್" = ಜೀವಾತ್ಮಗಳು

ಅನ್ಯರಿಗೆ ಅರ್ಹರಾಗುವಂತಹ ಆಳುಗಳಲ್ಲ. ಭಗವತ್ ಸಂಬಂಧಜ್ಞಾನದಿಂದ, ನಾನಲ್ಲದ ಎಲ್ಲರೂ ದೇವರಂತೆಯೇ ನನಗೆ ಒಡೆಯರು. ನಾನವರಿಗೆಲ್ಲಾ ಭಾಗವತರೆಂಬ, ಕರ್ಮಾಧೀನವಲ್ಲದ ದೃಷ್ಟಿ ಪರಿಶುದ್ಧ ಸಹಜ ದೃಷ್ಟಿಯಿಂದ ಅಗತ್ಯ ಸೇವೆ ಮಾಡುವವ. ಇಷ್ಟೊಂದಾದರೂ "ಓಮ್" ಎನ್ನುವುದರ ಭಾವ ಮರೆಯದಿರಬೇಕು. ಕ.ಚ.ಟ.ತ.ಪ.ಯ ಎಲ್ಲಾ ಅಕ್ಷರಗಳಿಗೂ ಕ್+ಅ = "ಕ" ಇತ್ಯಾದಿ ರೂಪವೇ ಉಚ್ಚಾರಣೆಗೆ, ಹೇಗೋ ಹಾಗೆ ದೇವರು ಎಲ್ಲದರ ಜತೆ ಸೇರಿದಾಗ, ಸೇವೆ ಒಳಿತೇ! ಇನ್ನೊಂದು ಬಗೆಯಲ್ಲಿ, ಅವ ರಕ್ಷಣೇ = ಯಾರು ಯಾವಾಗಲೂ ಎಲ್ಲಾ ಪ್ರದೇಶಗಳಲ್ಲೂ, ಎಂಥವರನ್ನೂ ರಕ್ಷಿಸುತ್ತಲೇ ಇರುತ್ತಾನೋ ಅಂತಹ, ಸರ್ವರಕ್ಷಕನಿಗೇ ನಾನು ಸರ್ವಸೇವಕ. ಹಿಂಸೆ, ಯುದ್ಧಗಳಿಗೆ ಕಾರಣವಾಗುವಂತಹ ಯಾವೊಂದು ವ್ಯವಸ್ಥೆಗೂ - ವ್ಯಕ್ತಿ, ಸಮಾಜ ವಿಶ್ವಭಕ್ಷಕ, ಸಂಘ, ಸಂಸ್ಥೆ, ಸರಕಾರ, ವಾಣಿಜ್ಯ, ಉದ್ಯೋಗ, ತಂತ್ರಜ್ಞತೆ ಇತ್ಯಾದಿ ಇತ್ಯಾದಿ ಯಾವೊಂದಕ್ಕೂ ನಾನು ಬಗ್ಗುವವನಲ್ಲ. ಈ ಫಲವಿರಬೇಕು ಶರಣಂಗೆ, ಸರ್ವಾನುಸ್ಯೂತನೂ, ಸರ್ವರಕ್ಷಕನೂ, ಸರ್ವಕಾರಣನೂ ಯಾರಾಗುವರು? ಸರ್ವಚೇತನ, ಅಚೇತನಗಳೆಂಬ "ನಾರ" ಪದಾರ್ಥಗಳಿಗೆಲ್ಲಾ ಆಸರೆಯಾಗಿರುವ ನಾರ + ಅಯನ = ನಾರಾಯಣ. ಅದರ ಮೇಲೆ, ಆ ಕಾರದಲ್ಲಿ ಲೋಪವಾಗಿದ್ದ "ಅಯ" ಎಂಬ ಚತುರ್ಥೀವಿಭಕ್ತಿ ಪ್ರತ್ಯಯ ಸೇರಿ ನಾರಾಯಣಾಯ ನಮಃ ನನಗೆ ನಾನಲ್ಲ. ಸ್ವಸೇವೆ ಪರಾರ್ಥ ಪರಮಾರ್ಥಕ್ಕೆ ಹೊಂದಿಕೊಳ್ಳುವಂತಿರಬೇಕೇ ಹೊರತು, ಅವುಗಳನ್ನು ಉಪೇಕ್ಷಿಸಿದ, ಸ್ವಾರ್ಥಬೇಡ. ಹೀಗೆ "ಓಮ್ ನಮಃ ನಾರಾಯಣಾಯ" ಎಂಬೀ, ಎಂಟಕ್ಷರದ ತಿರುಮಂತ್ರ. "ನಾರ" ರಿಜ್ಕ್ಷಯೇ ರೈತೀತಿರ ನ.ರ. ಪೂರಾಹಾಳಾಗದ ಪದಾರ್ಥಯಾವುದದು. ಅಣುರೂಪನೂ, ಜ್ಞಾನ ಸ್ವರೂಪನೂ ಆಗಿ, ಜ್ಞಾನಕ್ಕೆ ಆಧಾರನಾಗಿಯೂ, ಜ್ಞಾನವನ್ನು ಮನಸ್ಸಿನ ಮೂಲಕ ರವಾನೆ ಮಾಡುವವನೂ, ಇನ್ನೊಬ್ಬರಿಂದ ರವಾನೆಯಾದುದನ್ನು ಅತುಕೊಳ್ಳುವವನೂ ನಿತ್ಯನೂ ಆದ ಜೀವಾತ್ಮ ಹಾಗೂ ಜ್ಞಾನವಲ್ಲದ ಜ್ಞಾನವಿಲ್ಲದ ಜಡ ಅಣುಗಳು. *ATOM*. ಮೂಲಪ್ರಕೃತಿ. "ನರಗಳ ಸಮೂಹಗಳೇ ನಾರಾಃ" ಅವುಗಳನ್ನು ತನ್ನೊಳಗೆ ಇಟ್ಟುಕೊಂಡಿರುವಂತೆಯೂ ಅವುಗಳೊಳಗೂ ತಾನಿದಾನೆ. ಹಾಗಿಲ್ಲದಿದ್ದರೆ, ಯಾವೊಂದು ವಸ್ತುವೂ ಇರುವಿಕೆಯನ್ನೇ ಪಡೆಯದು. ಅವುಗಳ, ಸ್ವರೂಪ, ಸ್ಥಿತಿ, ಪ್ರವೃತ್ತಿ ನಿವೃತ್ತಿಗಳಿಗಾಗಿ ಸರ್ವಾನ್ತರ್ಯಾಮಿಯಾಗಿ, ನಿಯಮನ, ಪ್ರೇರಣಾದಾತೃವಾಗಿ, ಎಲ್ಲವುಗಳ, ಒಳ ಹಾಗೂ ಹೊರ ಅಧಾರನಾಗಿ, ಇರುವವನೇ "ನಾರಾಯಣ" ಇದೇನೊಂದು ಸಂಪ್ರದಾಯ, ಪಂಥ, ಜಾತಿಯ ಅರ್ಥವಲ್ಲ. ವ್ಯಾಪಕಾರ್ಥ. ಯಥಾರ್ಥ. **"ಆಲ್ಮೈಟಿ, ಅಲ್ಲಾಹ್, ಬುದ್ಧ, ಜಿನ, ತಾವೋ, ಸಿದ್ಧ, ತತ್, ಸತ್, ಗುರು, ಸ್ಕಂದ, ವಿನಾಯಕ, ಸೂರ್ಯ, ಅಗ್ನಿ, ಬ್ರಹ್ಮ, ಮಜ್ದ, ಯೆಹುವ, ಶಕ್ತಿ, ಯೇಸುಪಿತಾ, ಪ್ರಭು, ರುದ್ರ, ವಿಷ್ಣು, ರಾಮ, ಕೃಷ್ಣ, ರಹೀಮ್, ತಾವೋ, ವಾಸುದೇವ, ಗೋ ವಿಶ್ವರೂಪ, ಚಿದಾನಂದ, ಹರಿ, ಅದ್ವಿತೀಯ, ಅಕಾಲ, ನಿರ್ಭಯ, ಆತ್ಮಲಿಂಗ ಶಿವ"** ಇನ್ನೂ ಅವರವರ ಶ್ರದ್ಧಾ ಕೇಂದ್ರಿತಗಳಾದ ಯಾವ ಯಾವ ಹೆಸರೇ ಆಗಲಿ, ಅನಾಮಧೇಯಗಳೇ ಆಗಲಿ, ಅದರ್ಶಗಳೇ ಆಗಲಿ, ನಾಸ್ತಿಕತೆಯೇ ಆಗಲಿ, ನಾರಾಯಣನಿಗೆ ಅವಿರೋಧಿಗಳೇ. ಪರಸ್ಪರ ಅಜ್ಞಾನದಿಂದ, ನಾವು ಒಡೆದೊಡೆದು ಜೀವನ ನಡೆಸಬಾರದು, ಯಾವುದರಲ್ಲೂ ಪಕ್ಷಭಾವನೆಯೇ, ನಿಜವಾದ ಅಧ್ಯಾತ್ಮಕ್ಕೆ, ನಿಜವಾದ ಲೋಕಹಿತೈಷಿ ವಿಜ್ಞಾನಕ್ಕೆ ಪಕ್ಕಾನಂಬರ್ ಒಂದನೆಯ ಶತ್ರು. ಪಕ್ಷ ನೀತಿಯನ್ನು ನಾವು ಬಿಡದೆ ಇರುವವರಿಗೂ ನಾವೆಲ್ಲಾ ಸರ್ವ ಭಕ್ಷಕರೇ! **"ಎಲ್ಲೆಲ್ಲೂ ಸರ್ವಾನುವಿರೋಧಿ ಸರ್ವಸೇವಾ ವ್ರತಿಗಳಾದರೇ ಈ ಅಷ್ಟಾಕ್ಷರಿ ನಿಷ್ಠೆಗೇರಿದರೇ, ಸರ್ವರ ಇಹಪರ, ವೈಜ್ಞಾನಿಕ, ಅಧ್ಯಾತ್ಮಿಕ ಉದಯ, ಸ್ವಾರ್ಥ, ಪರಾರ್ಥ ಪರಮಾರ್ಥ ತ್ರಿವೇಣಿ ಸಂಗಮ ಸ್ನಾನ"**

ಈ ತಿರುಮಂತ್ರ ಹೇಳದ ಅನಾಶ್ರಿತರಿಗೂ, ಒಂದೊಂದು ಸಂದರ್ಭದಲ್ಲಿ ದರ್ಶನ ನೀಡುತ್ತಲೇ ಇರುವ ಕೃಪಾಳು ನಾರಾಯಣ. ಪರಮ ವಾತ್ಸಲ್ಯನಿಧಿ! ಪ್ರೇಮ ಮೂರ್ತಿ! ಬೈಯ್ಯುವವರಿಗೆ, ಅವನಿಲ್ಲ ಎನ್ನುವವರಿಗೆ ಸಹ, ಅತ ಅನಿಂದಾವ್ರತಿ! ಅತನಿದ್ದಾನೆ. ದೇವರಿಲ್ಲ ಎಂದರೆ ದೇವರಿಗೇನೂ ನಷ್ಟವಿಲ್ಲ. ಆ "ಇಲ್ಲ" ಎಂಬ ನಿಷ್ಠೆಯೇ, "ನಾರಾಯಣ". ಕ್ಷಣ ಕ್ಷಣಗಳ ಲವಲವದಲ್ಲೂ ನಮಗೆ ತಿಳಿಯದಂತೆಯೇ ಅವನ ಸಂಬಂಧ ಇದ್ದೇ ಇರುತ್ತದೆ.

ನಮ್ಮ ಸಾಧನಗಳೆಂಬುದು ಏನೂ ಇಲ್ಲ. 'ವಯಂ ಸರ್ವೇ ಅಂಕಿಂಚಾನಾಃ!' ಅವನೇ ಸಿದ್ಧ ಸಾಧನ. ಅವನ ಸೇವೆ, ಅವನಿಂದಲೇ! ಅವನಲ್ಲದೆ ಬೇರೆ ಪುರುಷಾರ್ಥವಿಲ್ಲ. ಅವನಲ್ಲದೆ ಬೇರೆ ಹಿತವಿಲ್ಲ. ಅವನಿಲ್ಲದೆ ಯಾವುದೂ ಇಲ್ಲ. ತತ್ವ ಹಿತ ಪುರುಷಾರ್ಥಗಳ ಅದ್ವೈತವನ್ನೇ ಇಲ್ಲಿ ತಿರುಮಂಗೈ ಶರಣರು ಹೇಳುತ್ತಿರುವುದು. ಈ ತಿರಮನ್ತ್ರಾನು ಸಂಧಾನದಲ್ಲೂ ಖಂಡಿತ ನನಗೆ ಉಪಾಯತ್ವ ಬುದ್ಧಿಯಿಲ್ಲ. ಮರವಾದು = ಎನ್ನುವುದರಿಂದ ನನ್ನ ಸ್ಮೃತಿಯಲ್ಲೂ, ಕರ್ತವ್ಯಬುದ್ಧಿಯಿಲ್ಲ. ವಿಧಿ ಪ್ರೇರಣೆಯೂ ನನಗೆ ಬೇಕಿಲ್ಲ. ಯಾವೊಂದು ಸ್ವಗತ, ಸ್ವಾಧೀನ, ಸ್ವಾರ್ಥ ಪ್ರಯತ್ನ, ವ್ರತ ನನಗಿಲ್ಲ. ಪ್ರಪನ್ನಜನ ಕೂಟಸ್ಥರು "ನೋತ್ತನೋನ್ಬು ಇಲೇನ್, ನುಣ್ ಅರಿವು ಇಲೇನ್" ಅಷ್ಟಕ್ಕೇ ನಿಲ್ಲದೆ "ಆಹಿಲುಮ್ ಇನಿಉನ್ನೈವಿಟ್ಟು ಒನ್ನುಮ್ ಅತ್ತ ಕಿರ್ಕಿನ್ನಿಲೇನ್" = ನಿನ್ನ ವ್ಯಾಪಕ ನಿತ್ಯಕೈಂಕರ್ಯ ರೂಪವಾದ "ಗುರಿ" ಪ್ರಾಪ್ಯವನ್ನು. ಎಂದರೆ ಅದರ ರುಚಿಯನ್ನು ಮಾತ್ರ ಈ ಜೀವದಿಂದ - ಚೇತನನಿಂದ - ಪ್ರತ್ಯೇಕಿಸಲಾಗದು. ಬೇರೆಯವರ ದೃಷ್ಟಿಯಲ್ಲಿನ ಸಾಧನ ಸಂಪತ್ತೆಲ್ಲಾ, ಅವನಿಂದಲೇ - ಅವನೇ - ಅವನಿಗಾಗಿ - ಅವನ ಸಂತೋಷಕ್ಕಾಗಿ, ಚೇತನಾತ್ಮನಲ್ಲಿನ ಒಂದು ವಿಶೇಷಣ - ಅಧಿಕಾರವಾಗಷ್ಟೇ ಇರುತ್ತದೆ. ಅದಿಲ್ಲದಿದ್ದರೂ ತದೇಕ ಪ್ರಪ್ರಥಮ ನಿಸರ್ಗ ಸೃಹೃತ್ನಿಂದ ಎಲ್ಲಾ ನಡೆದೇ ಹೋಗುತ್ತದೆ. ಇದೇ ಈ

೧೦ನೆಯ ಹಾಡಿನ ಮರ್ಮ. ದಾರ್ಶನಿಕ ಚರ್ಚೆಗಳೆಲ್ಲಾ ಶರಣರಲ್ಲಿ ಸಮನ್ವಿತವಾಗಿ ಬಿಡುತ್ತವೆ. ಪೊನ್ ಅನಾಯ್ = ರುಕ್ಮಾssಭಮ್. ಅವ್ಯಯೋ ನಿಧಿಃ. ಶಾಶ್ವತ ಮೌಲ್ಯವುಳ್ಳವನೇ! ಓ ನನ್ನ ಚಿನ್ನಾ! ನಿನ್ನಿಂದಲೇ ಆ ಸ್ವರ್ಣವೂ ಸ್ವರ್ಣವಾಗಿದೆ! ನೀನು ನಿತ್ಯಪ್ರಾಪ್ಯ. ನಿತ್ಯಪ್ರಾಪ್ತ. ನಾನು ಪ್ರಾರ್ಥನೆ ಮಾಡಿದ ಮೇಲೆ - ಸಾಧನ ಬುದ್ಧಿಯಿಂದ - ನೀನು ಪ್ರಾಪ್ಯನಲ್ಲ. ನಿನಗೆ ಹೊಂದಿಕೊಂಡು, ನೀನಿತ್ತಿರುವ ಚೈತನ್ಯಶಕ್ತಿಯನ್ನು ಸದುಪಯೋಗಪಡಿಸಿಕೊಂಡು ಎದುರು ಬೀಳದೆ, ನೀನಿತ್ತ ಕೃಪಾದೃಷ್ಟಿಯಿಂದ ಎರಡನೆಯ ಹಂತದಲ್ಲಿ, ನಿನ್ನ ಪ್ರೀತಿಗಾಗಿ ಎಲ್ಲವನ್ನೂ ಕೈಂಕರ್ಯ - ಫಲ ರೂಪವಾಗಿ ಕೃಷ್ಣಾರ್ಪಣಮಸ್ತು ಎನ್ನುವವ ಇದೋ ಇವನು!

ಪೊಳಿಲ್ ಏಳುಮ್ = ಲೀಲಾ ವಿಭೂತಿಗಳನ್ನೆಲ್ಲಾ, ಕಾವಲ್ ಪೂಣ್ಡ ಪುಹಳ್ ಅನಾಯ್ = ಕಾವಲುಗಾರನಂತೆ ಖಿದ್ಧಾಗಿ ರಕ್ಷಿಸುವವನೆಂಬ ಬಿರುದು ಪಡೆದ. ಪುಹಳ್ ಅನಾಯ್ = ಕೀರ್ತಿಯೇ ಆಗಿದ್ದೀಯೆ, ಸರಿಯಾದ ಆದರ್ಶ ವ್ಯವಸ್ಥೆಯೆಂದರೆ, ಯಾವ ರಾಜ, ಸರಕಾರ, ಪೊಲೀಸು, ಕೋರ್ಟು, ಕಛೇರಿ, ಸ್ಕೂಲು - ಕಾಲೇಜು - ಶಿಶುವಿಹಾರ, ಸೈನ್ಯ, ಮಂತ್ರಿ, ಇತ್ಯಾದಿ ಇತ್ಯಾದಿ ಬೊಕ್ಕಸವನ್ನು, ಖಾಲಿಮಾಡಿ, ಪ್ರಜೆಗಳನ್ನು ಸಾಲಗಾರರನ್ನಾಗಿಸಿ, ಸ್ವಾತಂತ್ರ್ಯಕ್ಕೇ ಕುತ್ತು ತರುವ, ಪ್ರಜಾಶಕ್ತಿಗೇ ಅವಮಾನಕರವಾಗುವ ಅಡ್ಡಿ ಆತಂಕಗಳನ್ನು ನೇರಾ ತೊಲಗಿಸಿ ಮತ್ತವೇ ಪ್ರಕಾರಾನ್ತರಗಳಿಂದ ಪುನರಂಕುರಿಸದಂತೆ ಸಮಾಜ ಪಾಲಕನೇ! "ಯಶಸಶ್ಚ ವಿಕಭಾಜನಮ್" ಅಂತರಂಗನಾದ ಸುಗ್ರೀವ ಬೇಡವೆಂದರೂ, ಶತ್ರುಪಕ್ಷದ ಸಾತ್ವಿಕ ವಿಭೀಷಣನನ್ನು, ರಾಮಾ! ನಿನ್ನ ಗೋಷ್ಠಿಗೆ ಸೇರಿಸಿಕೊಂಡ ಕೀರ್ತಿ ಲೋಕ ಪ್ರಸಿದ್ಧವಲ್ಲವೇ? ಹಾಗೆಯೇ ಈ ನೀಚಾತಿ ನೀಚನಾದ ಈ ನೀಲಪ್ಪನ ಅವಿದ್ಯಾ-ಕರ್ಮ-ವಾಸನಾ ರುಚಿಗಳನ್ನು ಸದ್‌ವಿದ್ಯಾ-ಸತ್ ಕೈಂಕರ್ಯ-ಮಂಗಳಾಶಾಸನ-ಸತ್ ಸಂಸ್ಕಾರ-ಸದಭಿರುಚಿಗಳನ್ನಾಗಿ ಪರಿವರ್ತಿಸಿದ ಶಾಂತಿಮಯ ಕ್ರಾಂತ ಕೀರ್ತಿಯನ್ನು ನಮ್ಮ ಆದ್ಯ ಕುಲಪತಿಗಳೂ ಹೀಗೆ ಹೇಳಿಲ್ಲವೇ? ತಿಮ್ಮಪ್ಪಾ! "ಉಲಪ್ಪಿಲ್ ಕೀರ್ತಿ ಅಮ್ಮಾನೇ" ಎಂದು (ತಿ.ವಾ.ಮೊ ೬-೧೦-೧) ನಿನ್ನ ಈ ಕಲ್ಯಾಣ ಗುಣಗಳನ್ನೇ ನಾರಾಯಣನಾಮ ಸ್ಪಷ್ಟಪಡಿಸುತ್ತದೆ "ನಾರ" ಎಂದರೆ ಅಳಿವಿಲ್ಲದ ಜಗತ್ತಿನ ಶಾಶ್ವತ ಮೌಲ್ಯವಾದ ಸದ್‌ಗುಣಗಳೂ ಎಂಬರ್ಥವಿದೆ. ಪ್ರಪನ್ನರಿಗೆ ಅಪ್ಪಾಕ್ಷರಿ ಏನೇ ಹಂತದ, **"ಉಪಯೋಗಕ್ಕೇ ಹೊರತು, ಪ್ರಧಾನಯೋಗವಲ್ಲ"** 'ಉಪ' ಎಂಬ ಉಪಸರ್ಗ ಇಲ್ಲಿ ಗಮನಾರ್ಹ. ಏನಿದ್ದರೂ ಸರ್ವೇಶ್ವರ, ಅದ್ವೈತ ಪರಂಬ್ರಹ್ಮ ಶ್ರಿಯಃಪತಿ ನಾರಾಯಣನೇ ಪ್ರಧಾನ ಸಿದ್ಧೋಪಾಯ, ಶಾಸ್ತ್ರ ವಿಹಿತ ಸಾಧನೆಗಳೆಲ್ಲಾ, ಪರಮಾತ್ಮನ ಪರ್ಯನ್ತ ಹಿಗ್ಗಿ ಬರಬೇಕಾದುದೇ ಸಾಧನ ವ್ಯುತ್ಪತ್ತಿ. ಸರ್ವೇಶ್ವರನಲ್ಲಿ ಅಡಗಿರುವ ಏನೇ ಸ್ಥಾನವೇ ಶಾಸ್ತ್ರಗಳಿಗೆ ತತ್ಪದಲ್ಲಾಗಲಿ, ಹಿತರೂಪ ಸಾಧನೆಗಳಲ್ಲಾಗಲಿ, ಫಲರೂಪಿ ಪುರುಷಾರ್ಥದಲ್ಲಾಗಲಿ. ಇದನ್ನು ಕೇವಲ ಶಾಸ್ತ್ರಗಳಿಂದಲೇ ಅರಿಯಲು ಅಸಾಧ್ಯವಾದುದರಿಂದಲೇ ವೇದಾನ್ತದೇಶಿಕರೂ "ತೆರಿಯಾದ ಮರೈನಿಲಙ್ಗಳ್ ತೆಳಿಹಿನ್ರೋಮೇ" ವೇದಶಾಸ್ತ್ರ ಮರೆಸಿ ಮರೆಸಿ ಹೇಳುವ ಶೈಲಿಯದು. "ಮರೈ" = ಆಸರೆ ಶರಣರ ಶ್ರೀ ಸೂಕ್ತಿ ಅರುಳಿಚ್ಚೆಯಲ್‌ಗಳು "ಸರ್ವವರ್ಣಾರ್ಹವೇದ" ಮತ್ತು "ಶೆಮ್ ಶೊಲ್" ಸ್ಪಷ್ಟವಾದ ಸರಳಭಾಷೆ! ಅಳ್ವಾರ್ ಶರಣ ಸಂತರು, "ಜಾತ್ಯತೀತ" ಎಂಬ ಇಂದಿನ ಗೊಂದಲಗಳಿಗೆಲ್ಲಾ ಅಂತೇ ಸಮಾಧಾನಕರವಾಗಿ ಒಂದು ದಾರಿ ತೋರಿದ್ದಾರೆ.

ಇಹಳ್ಳು ಅಯ ತೊಣ್ಡನೇನ್ ನಾನ್ = ನೀನೆಷ್ಟು ಕೀರ್ತಿಖನಿಯೋ ನಾನಷ್ಟೂ ಅಪಕೀರ್ತಿಖನಿ! ಪ್ರಕೃತಿ ಸಂಸರ್ಗ ಇರುವುದರಿಂದಷ್ಟೇ. ಅವುಗಳನ್ನೆಲ್ಲಾ, ಮೆಲ್ಲಮೆಲ್ಲನೆ ಶೋಧಿಸುತ್ತಾ **"ಪ್ರಕೃತಿಃ ಶೋಧ್ಯಾ"** ಎಂದಾದರೆ, ಸ್ವಾಮಿ ಕೈಂಕರ್ಯ ಕಾಯಕರೂಪವನ್ನೇ ತಾಳಿ ಬಿಡುವುವು ಯಾವೊಂದು ಜೀವಾತ್ಮನದೂ ಮೂಲತಃ ತಪ್ಪಿಲ್ಲ. ಜಡಪ್ರಕೃತಿಯದೂ ಮೂಲತಃ ತಪ್ಪಿಲ್ಲ. "ಉಯ್ಯ ಉಲಹುಪಡೈತ್ತ" ಈಶ್ವರಾಯ ನಿವೇದಿತುಂ ಎಲ್ಲಾ ಮಾಯಾರೂಪ ಈಶ್ವರೀಯ ಸಂಕಲ್ಪದಿಂದ, ಈಶ್ವರಾರ್ಪಣವಾಗಲೆಂಬ ವಿದ್ಯಾಭ್ಯಾಸ - ಮಾನವ ಶಿಕ್ಷಣಕ್ಕಾಗಿಯೇ ಮೀಸಲು.

ಸಾಧನೆಗಳೆಲ್ಲಾ ಫಲಕಕ್ಷ್ಯೆಯಲ್ಲೇ ಬರುವುವೇ ಹೊರತು ಸಾಧನಗಳಲ್ಲ. ಅವುಗಳನ್ನು ಸ್ವರೂಪತಃ ಬಿಡಲೂಬಾರದು. ಸಹಜವಾಗಿಯೇ ಅವೆಲ್ಲಾ ಗರಿಕಟ್ಟಿಕೊಳ್ಳುತ್ತವೆ. ನಾನಿದೋ ಶೂನ್ಯ. ಅಕಿಂಚನ! ಹಳೆಗಾಲದಲ್ಲಿ ಜೀತದ ದಾಸಿಯಾದವಳು ಅಥವಾ ಒಬ್ಬ ಬೀದಿ ಭಿಕ್ಷುಕನಾದವನು ರಾಷ್ಟ್ರ ಕಿರೀಟವನ್ನು ಬಯಸುವುದು ಹೇಗೋ ಹಾಗೆ ನಾನು ನಿನ್ನ ಕೈಂಕರ್ಯದ ಸೇವಾ ಪದವಿಯನ್ನು ಆಹಾ! ಬಯಸುವುದು ಎಂಬ ದೃಷ್ಟಾನ್ತ ನೀಡುವಂತಿದೆ. ಕಾಲಕಾಲಕ್ಕೆ, ನೀಡುವ ನಿದರ್ಶನಗಳ ಬಗ್ಗೆ ನಾವು ಹೆಚ್ಚು ತಲೆ ಕೆಡಸಿಕೊಳ್ಳದೆ, ವಿನಯ ಮೂರ್ತಿಗಳಾಗೋಣ. ಹೊಸ ಹೊಸ ಒಳ್ಳೆಯ ಉದಾಹರಣೆಗಳನ್ನು, **"ತಪಸ್ಸಿನಿಂದ ಅಂದರೆ, "ಶ್ರದ್ಧಾತಪ ಇತ್ಯುಪಾಸತೇ" ಶ್ರದ್ಧಾಪೂರ್ವಕ ತ್ಯಾಗಾssನಂದದ ಜೀವನ ನಡೆಸೋಣ. ಇದೀಗ ಸದ್‌ವೈಚಾರಿಕ, ಸದಾಚಾರ ಪರ್ಯಾಯ!"**

ಎನ್ ಅನಾಯ್ ಎನ್ನಾನಾಯ್ = ನನ್ನ ಭಾಗಕ್ಕೆ ಇಂತಹವನೇ, ಇಂತಹ ಗುಣ ಸಂಪನ್ನನೇ, ಎನ್ನಲಲ್ಲಾಲ್ = ಎಂದು ನಿನ್ನ ಗುಣ ಸ್ವಭಾವಗಳನ್ನು ಸತ್ ಸಂಗದ ಕಾಲಕ್ಷೇಪ ರೂಪವಾಗಿ ಅನುಭವಿಸಿದೆನಷ್ಟೆ. "ಅನು" ಎಂಬ "ಅನುಸರಿಸಿ" ಅರ್ಥ ದ್ಯೋತಕವಾದ ಉಪಸರ್ಗ ಇಲ್ಲಿ ಗಮನಾರ್ಹ. Be aware ಎಂಬ ಜಡ್ಡೂ ಕೃಷ್ಣ ಮೂರ್ತಿಯವರ "ಎಚ್ಚರಿಕೆ" ಎಲ್ಲಾ ಕ್ಷೇತ್ರಕ್ಕೂ ಹಬ್ಬಬೇಕಾದುದೇ ಧರ್ಮ. ಮಾತಿನ ಚಕಮಕಿಗಳೆಲ್ಲಾ "ಶಬ್ದ ಶಕ್ತಿ"ಯ ಕ್ಷೀಣ ಪರಿಜ್ಞಾನವನ್ನೇ ತೋರಿಸುತ್ತವೆ. ವಿಜ್ಞಾನ ಶಕ್ತಿಯಂತೆ, ಭಾಷಾಪದಪದಗಳ, ಆಳ, ಅಗಲಗಳ ಮೌಲ್ಯ ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯ ಹೆಚ್ಚಬೇಕಿದೆ. ಅನಾಯ್ = ಅನೆಯಾದವನೇ. ಈ ಹಾಡಿನಲ್ಲಿ ಈ ತಿರುಮಂಗೈ ಕಲಿಯನ್, ದಿವ್ಯದೇಶದ ಅರ್ಚಾಮೂರ್ತಿಗಳನ್ನು, ೬ ಬಗೆಗಳಿಂದ "ಓ ಆನೆಯೇ" ಎಂದು ಕೂಗಿಕೊಳ್ಳುತ್ತಾರೆ!

ಆನೆ :-

೧. ನಿತ್ಯ ಸ್ಪೃಹಣೀಯ

೨. ಬಲು ಗತ್ತುಳ್ಳದ್ದು

೩. ಬೇಕೆಂದರೆ ತನ್ನ ಕುಂಭಸ್ಥಳಕ್ಕೇ ಏರಿಸಿಕೊಳ್ಳುವುದು

೪. ಮಂಡಿಯೂರುವುದು.

೫. ಬೇಕಿಲ್ಲದಿದ್ದರೆ ಸೀಳಿ ಹಾಕುವುದು

೬. ತನ್ನನ್ನು ಭಾರಿ ಭದ್ರವಾದ ಕಲ್ಲುಗೂಟಕ್ಕೆ ಕಟ್ಟಬೇಕಾದಾಗ ಮಾವಟಿಗನಿಗೆ ತಾನೇ ಹಗ್ಗ, ಸರಪಣಿ ನೀಡುವುದು.

ಈ ಆರು ಗಜಧರ್ಮಗಳು ಪರಮಾತ್ಮನಲ್ಲೂ ಇವೆ. ಹೇಗೆ ?

೧. ಮೂರ್ತಿ ಸೌಂದರ್ಯ

೨. ತನಗೆ ಸರಿಸಾಟಿಯಾದ "ಸಾಮ್ಯ"ವಾಗಲಿ ಹೆಚ್ಚಾದ "ಅಧಿಕ್ಯ"ವಾಗಲೀ ಇಲ್ಲದಿರುವುದು

೩. ರಾಜ, ದಾಸಿಯೋರ್ವಳನ್ನು ತನ್ನ ಮಹಿಷಿಯಾಗಿಸಿಕೊಂಡರೆ ತಡೆಯಿಲ್ಲದಿರುವಿಕೆ

೪. ಸಾಧನಾಂತರ ಅಂತರೆ ಸ್ವಯಂ ಸಾಧಕರೆಂದುಕೊಳ್ಳುವ ನಿಷ್ಕಾಮಂತರಿಗೂ "ಯೋಗವಿದಾಂ ನೇತಾ" ಆಗಿರುವ ಸೌಶೀಲ್ಯ, ವಾತ್ಸಲ್ಯ.

೫. ವಿರೋಧಿಗಳಾದ ಅಡ್ಡಿ ಆತಂಕಗಳನ್ನು ಇಲ್ಲದಂತೆಸಗುವ ಶೀಲ

೬ ಜೀವಾತ್ಮನ ಸಾಧನ ರೂಪಿಯಲ್ಲದ ಕೈಂಕರ್ಯೋಪಕರಣ ಪ್ರದಾನ.

ಇಲ್ಲಿನ ಉಪಕರಣವೆಂದರೆ, ಪ್ರಾಪ್ಯಾಭಿರುಚಿಯೆಂಬ ಭಕ್ತಿ. ನನ್ನಲ್ಲಿ ನಿನ್ನ ಪ್ರಸನ್ನತೆಯಿಂದಲೇ ನಿತ್ಯ ಸಿದ್ಧವಾಗಿವೆ. ಇವುಗಳನ್ನೆಲ್ಲಾ ಆಮೇಲೆ ಅನುಸರಿಸಿ ಹರಿಯುವ ಅನುಭವಲಹರಿಗಳೇ ಹೊರತು ಯಾವೊಂದೂ ನನ್ನ ಮತಿಯಿಂದ ಸಾಧನೆಯೆಂದಾಗದು. ಕೃಷ್ಣನದೇ ಆದ್ಯ ಸ್ಮರಣ. ಅದನ್ನು "ಅನು"ಸರಿಸಿದ ಅನೆಯ ಸ್ಮರಣ "ಕೃಷ್ಣಾನುಸ್ಮರಣ", ಚೈತನ್ಯ ಕಾರ್ಯವಾಗಿ ಈ ಚೇತನರದಪ್ಪೆ.

ಇಲ್ಲಿ "ಹಗ್ಗ" ಎಂದರೆ "ದೈವದತ್ತ ಭಕ್ತಿ". ತಿರುಮಳಿಶೈ ಆಳ್ವಾರರು "ಎಟ್ಟಿನೋಡು ಇರಣ್ಡೆನುಮ್ ಕಯತ್ತಿನಾಲ್ ಮನಂ ತನ್ನೈ ಕಟ್ಟಿ" ಎಂದಿದ್ದಾರೆ. "ಭಕ್ತಿ" ಎಂಬೀ ಸಂಸ್ಕೃತ ಶಬ್ದ ತಮಿಳಿನಲ್ಲಿ "ಪತ್ತಿ" ಆಗಿದೆ. ಸರ್ವೇಶ್ವರನೆಂಬ ಆನೆಯನ್ನು, ತಮ್ಮ ಮನೋಮಂದಿರ ದ್ವಾರ ಬಿಟ್ಟು, ಬೇರೆ ಬೇರೆ ವಿಷಯಾನ್ತರಗಳಲ್ಲಿ, ವಿರುದ್ಧ ದಿಕ್ಕಿನಲ್ಲಿ ಸರಿದು ಹೋಗದಂತೆ, ಧೃತಿಯಿಂದ ಸಾಧಕರೂ ಕಟ್ಟಬೇಕಪ್ಪೆ! ಪ್ರಪನ್ನರಿಗೆ ಈಶ್ವರನಲ್ಲಿ ಉಂಟಾಗುವ ಪ್ರೀತಿ ರೂಪಿಣಿ ಭಕ್ತಿಗೆ ಈಶ್ವರನೇ ಕೃಪಾಳು ಪರಮಚೇತನನೇ ಸಾಧನ. ಅದೂ ತಾನಾಗಿಯೇ ಈ ಸ್ವಯಂ ನಿರ್‌ಹೇತುಕ ಕೃಪೆಯೇ ಅತ ಶರಣರಿಗೆ ನೀಡುವ ರಜ್ಜು. ಇತರೋಪಾಯ ಸಾಧಕರಂತಲ್ಲ ಆಳ್ವಾರರು. ಅತ್ಯನ್ತ ಪರತಂತ್ರರು ಎಲ್ಲಾ ಸಂದರ್ಭದಲ್ಲೂ, ಭಗವಂತನಿಂದಲೇ ಭಗವಂತನಿಗಾಗಿಯೇ ಭಗವಂತನಲ್ಲೇ, ***"ಸಂತರೇ ವಿವಾದಾತೀತರಾದ ಅದ್ವೈತಿಗಳು! ದ್ವೈತಿಗಳು! ವಿಶಿಷ್ಟಾದ್ವೈತಿಗಳು. ಜಗತ್ತಿನ ಸಕಲ ಸದ್‌ಧರ್ಮಜ್ಞರು! ಸತ್ ಸಮಾಜ ವಿಜ್ಞಾನಿಗಳು!"***

'ಎನ್ನಾನಾಯ್ ಎನ್ನಾನಾಯ್' ಎಂಬ ಈ ದ್ವಿರುಕ್ತಿಯಿಂದ, ದೇವರ ಈ ಮೇಲೆ ಹೇಳಿದ ಗುಣ ಸ್ವಭಾವವನ್ನೇ ಎಷ್ಟು ನೆನೆದರೂ ಸಮಯ ಸಾಲದು! ವಿರುದ್ಧವಾಗಬಹುದಾದ ವಿಷಯಾನ್ತರಗಳಿಂದ ಚಂಚಲ ಮನೋ ಮಂಗನನ್ನು ಹಿಂದಿರುಗಿಸಲು, 'ಹೃಷೀಕ' ಎಂದರೆ ಇಂದ್ರಿಯಗಳಿಗೆ ಒಡೆಯನಾದ ನೀನೇ ಸಮರ್ಥ. ನಿನ್ನ ಆಜ್ಞೆ ಕರಣಾಧಿಪನಾದ ಚಿತ್ತದ ಮೇಲೆ ನಡೆದೀತು. ಅಂತೆಯೇ ನಿನ್ನನ್ನು "ಕರಣಾಧಿಪಾಽಧಿಪ"ನೆಂದು ಕರೆಯುವುದು. ಈ ಜೀವಾತ್ಮನ ಒಡೆತನಗಳೆಂಬುದೆಲ್ಲಾ ಅನೇಕ ಸಂದರ್ಭಗಳಲ್ಲಿ ಅಸಮರ್ಥಗಳೇ. ಸೂಕ್ಷ್ಮ ಮನೋವಿಕಾರಗಳನ್ನು ನೀನೇ ದೂರ ಓಡಿಸಲು ಸಮರ್ಥ. ಅದೇ ನ್ಯಾಯ. ಅದೇ ಎಲ್ಲರ ಎಲ್ಲದರ ನಿನ್ನದೂ ಸೇರಿ "ಸ್ವರೂಪ ಶುದ್ಧಿ". ಸರ್ವಕ್ಷೇಮಂಕರ. ಈ ನಿಷ್ಠೆಯೇ ಆಳ್ವಾರ್ ಆಚಾರ್ಯರ "ಅಶಕ್ತಿ" ಎನ್ನುವುದು. ಕೇವಲ, ಶಾರೀರಕ, ಮಾನಸಿಕ, ಪಾರಿಸ್ಥಿತಿಕ ಅಶಕ್ತಿಗಳಲ್ಲ. "ಸ್ವಸ್ವರೂಪನಾಶವೇ" ಅಶಕ್ತಿ. ಇದು ಚೆನ್ನಾಗಿ ಪ್ರಪನ್ನ ಶರಣಾನುಯಾಯಿಗಳಿಗೆ ಅರ್ಥವಾದರೆ, ಈ ವೈಶ್ವಿಕ ಮಹಾ ಶರಣ ಪಥಗಳು ಎಂದೂ ಬೇರೆಯವುಗಳಂತೆ ಛಿದ್ರ ವಿಚ್ಛಿದ್ರವಾಗವು! ಇನ್ನೂ ಎಲ್ಲರನ್ನು ದಿನೇ ದಿನೇ ಹೆಚ್ಚು ಗುಣಾತ್ಮಕವಾಗಿ ಸದಾಚಾರ ನಿಷ್ಠರನ್ನಾಗಿ, ವೈಜ್ಞಾನಿಕರನ್ನಾಗಿಸುತ್ತಾ ಎಲ್ಲರನ್ನೂ ಸೇರಿಸುತ್ತಾ ಹೋಗುವುವು. ಎನ್ ಅರಿವನ್? ಏನೊಂದು ವಸ್ತುನಿಷ್ಠ ಜ್ಞಾನ ಈ ತಿರುಮಂಗೈಗಳದು! ರಾತ್ರಿ ಮಲಗಿದ ನಮಗೆ ಬೆಳಗಾಗುವುದು ಗೋಚರಿಸುತ್ತದೆಯೇ ಹೊರತು ಅಷ್ಟು ಗಾಢನಿದ್ರೆಯ ಕಾಲವೂ ನಡೆದವುಗಳ ಅರಿವು ನಮಗೇನು

ತಾನೆ ಇರುತ್ತೆ? ಶಾಸ್ತ್ರ ಕ್ರಮದಿಂದ ಕಲಿಯನ್ ಅರಿತವರಲ್ಲ. ಅಮಾನಿತ್ವ, ಅದಂಭಿತ್ವಾದಿ ಆತ್ಮಗುಣಗಳಾಗಲಿ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಜೀವಾತ್ಮಯತ್ನ ಸಾಧ್ಯವಾದವುಗಳ ಸೋಂಕೇ ಇಲ್ಲ. ಇದೇ ಇಲ್ಲಿನ "ಅರಿವಿಲ್ಲದಿರುವಿಕೆ" ಆದರೆ ಅವೆಲ್ಲವೂ ಆ ಈಶ್ವರನ ಕೃಪಾ ಕೃತವಾಗಿ ನನ್ನಲ್ಲುಂಟು.

ಹಾಗಾದರೆ ನೀವೇಕೆ ಹೀಗೆಲ್ಲಾ ರಂಪಮಾಡುವಿರಿ? ಏಳೈಯೀನ್ = ನಿನ್ನ ಶ್ರೀಮೂರ್ತಿ ಸೌಂದರ್ಯ! ನಾನು ಸೌಂದರ್ಯೋಪಾಸಕ! ಈ ನಿನ್ನ ಅಂದ ಹಾಗೂ ಪಾವನವಾದ ಚೆಲುವನ್ನು ನೀನೇ ತೋರಿ ತೋರಿ ಹೀಗೆಲ್ಲಾ ಪದರಾಡುವಂತೆ ಎಸಗಿರುವಿ! ಹಿಂದೆಲ್ಲಾ ಕ್ಷುದ್ರ ವಿಷಯಗಳ ಆ ಭೋಗಗಳಲ್ಲಿ ಏನಾದರೂ ಕ್ರಮವಿತ್ತೇನು? ಆಗಲೂ ಅಕ್ರಮ! ಈಗಲೂ ಅಕ್ರಮ! ಇದು ಸರಿ ಇದು ತಪ್ಪು ಎಂಬ ಪ್ರಾಪ್ತಾಪ್ರಾಪ್ತ ವಿವೇಕವನ್ನೇ ನಿನ್ನ ಅಂದಚೆಂದಗಳ ಬೆಡಗು ಹಾರಿಸಿಬಿಟ್ಟಿದೆ. ಆ ಚಾಪಲ್ಯ ಪ್ರೇರಿತನಾಗಿ ಆಕ್ರಂದಿಸುತ್ತೇದ್ದೆನೆಯೇ ಹೊರತು, ಇವನ್ನೆಲ್ಲಾ ಸಾಧನದ ಖಾತೆಗೆ ಸೇರಿಸಬೇಡ. ವಿವೇಚನಾ ಸಾಹಿತ್ಯ ನಿನ್ನ ಸೌಂದರ್ಯ, ಮಾರ್ದವ, ಲಾವಣ್ಯಾದಿಗಳ ಬಗೆಗೆ ಆ ವೈಕುಂಠದ ನಿತ್ಯಸೂರಿ, ಮುಕ್ತರಿಗೆ ಇರುವುದಷ್ಟೆ! "ಅಸ್ಥಾನೇ ಭಯ" ಶಂಕೆಯಿಂದ, ನಿನ್ನಲ್ಲಿನ ಪರಮ ಸ್ನೇಹದಿಂದ ನಿನಗೆ ಮಂಗಳಗಾನ ಗೈಯ್ಯುತ್ತಿರುವವರಲ್ಲವೆ? **"ಪರಮೇಟ್ಟಿಯೈ.... ಪಲ್ಲಾಂಡುಂ ಪರಮಾತ್ಮನೈ ಶೂಳ್ನ್ದು ಇರುನ್ದು ಏತ್ತುವರ್ ಪಲ್ ಆಣ್ಡೀ"**

ಅನೆಗೂ ನನಗೂ ಸಾದೃಶ್ಯ ನಿಮಗೆಂತು ತಿಳಿಯಿತು? ಅದೂ ಈ ದಿವ್ಯ ದೇಶಗಳಲ್ಲಿ? ಉಲಹಮ್ ಏತ್ತುಮ್ ತೆನ್ ಅನಾಯ್ = ಆ ನಿತ್ಯವಿಭೂತಿ, ಈ ಲೀಲಾವಿಭೂತಿಯವರೆಲ್ಲಾ ಸೇರಿ ತೊಳಗಿ ನುತಿಸುವುದು, ಈ ದಕ್ಷಿಣ ಮಧುರಾ ಸಮೀಪದಲ್ಲಿರುವ "ತಿರುಮಾಲ್ ಇರುಮ್ ಶೋಲೈ"ಯಲ್ಲಲ್ಲವೋ? ಓ ತೆಂಕಣ ದಿಗ್ಗಜಾ! "ತೆನ್ ಅನಾಯ್" ವಡವಾನಾಯ್ = ಉತ್ತರ ದಿಗ್ಗಜವೇ! ಓ ತಿಮ್ಮಪ್ಪಾ! ಕುಡಪಾಲ್ ಅನಾಯ್ = ಪಡುವಲ ದಿಗ್ಗಜವಾದ ಶ್ರೀರಂಗನಾಥಾ! ಕುಣಪಾಲ ಮದಯಾನಾಯ್ = ಮೂಡಲ ತಿರುಕ್ಕಣ್ಣಪುರದ ಮದ್ದಾನೆಯೇ! ಇಮ್ಮೈಯೋರ್ಕ್ಕು ಎನ್ನುಮ್ ಮುನ್ನಾನಾಯ್ = ನಿತ್ಯಾನಿಮಿಷರಾಗಿ ಸದಾದರ್ಶನ ಶೀಲರಾದ ಅನನ್ತ ಗರುಡ ವಿಷ್ವಕ್ ಸೇನಾದಿ ಪಾರಿಷದ ಗಣಗಳಿಗೆ ಎಂದೂ ಕಣ್ ಮುಂದೆ ಇರುತ್ತಲೇ ದರ್ಶನ ನೀಡುವ ದಿಗ್ಗಜವೇ!

ಪಿನ್ನಾನಾರ್ ವಣಙ್ಗುಮ್ ಶೋದಿ = ಕಾಲ ಮುಂದೋಡಿದಷ್ಟೂ ಹುಟ್ಟುತ್ತಲೇ ಇರುವ ಭಕ್ತಿ ಹೀನರಾದವರೂ, ವಣಙ್ಗುಮ್ ಶೋದಿ = ಒಮ್ಮೆಯಲ್ಲ ಒಮ್ಮೆ ಒಂದು ಬಗೆಯಿಂದಲ್ಲದಿದ್ದರೆ ಇನ್ನೊಂದು ರೀತಿ, ಒಬ್ಬರಲ್ಲದಿದ್ದರೆ ಮತ್ತೊಬ್ಬರು, ಹೇಗೋ ಅವರು ಇಷ್ಟಪಟ್ಟು ಯಾವೊಂದು ಸಂದರ್ಭದಲ್ಲೂ, ನೀನಿಲ್ಲದಂತಾಗದೆ, ಅವರು ನಮಿಸುವಂತೆ ನಿಂತ ಆ ಪರಂಜ್ಯೋತಿಃ ಸ್ವರೂಪನೇ! ತಿರುಮೂಳಿಕ್ಕಳತ್ತಾಯ್ = ಕೇರಳದ ಕಡಲ್ ದಂಡೆಯ ಆ ದಿವ್ಯದೇಶವಾಸಿಯೇ! ದೇಶ ಯಾವುದೇ ಇರಲಿ ಕಾಲ ಯಾವುದೇ ಇರಲಿ, ಯಾವ ಜಾತಿಯಲ್ಲಿ ಹುಟ್ಟಿದವರೇ ಆಗಲಿ ಅವೆಲ್ಲಾ ಅರ್ಚಾಮೂರ್ತಿಯ ದರ್ಶನಕ್ಕೆ ಬಾಧಕವಾಗದು. ಮುದಲ್ ಅನಾಯೇ = ಸರ್ವಜಗದಾದಿ ಕಾರಣತ್ವಾದಿಗಳೊಡನೆ ಸ್ವರೂಪ ಸ್ವಭಾವ ಗುಣ ವಿಭೂತಿ ಕ್ರಿಯಾದಿಗಳನ್ನೂ ಬಿಡದೇ ಸೂಕ್ಷ್ಮವಾಗಿ ಒಳಗೊಂಡು ಹೊರಗಡೆ ಎಲ್ಲರಿಗೂ ತತ್‌ಕ್ಷಣ ತೋರದೆ, ಅಜ್ಞಾನಿ, ನಿಷ್ಕ್ರಾಣ, ಅಶಕ್ತ, ಪರತಂತ್ರನಂತೆ, ಭಕ್ತರ ವ್ಯವಸ್ಥೆಗೆ ಪರಾಧೀನನಾಗಿರುವಂತೆ ಕಾಣಿಸಿಕೊಳ್ಳುತ್ತಾ, ಕೆಲ ಕೆಲವು ಸಮಯದಲ್ಲಿ ಹಲವರಿಗೆ ಮಾತ್ರ ಎಲ್ಲವನ್ನೂ ಔಚಿತ್ಯದಿಂದ ತೋರುತ್ತಾ, ಬಲು ತಾಳ್ಮೆಯಿಂದ ಪರಮ ವತ್ಸಲನಾಗಿ ಕಾಯುತ್ತಾ! ಅಭಿರುಚಿ ಹುಟ್ಟಿಸಿ, ಹುಟ್ಟಿಸಿದ ಅಭಿರುಚಿಯನ್ನು ಮೆಲ್ಮೆಲೆ ವೃದ್ಧಿ ಪಡಿಸುತ್ತಾ ಸರ್ವಾತ್ಮನಾ ಪರಿಪೂರ್ಣನಾಗಿರುವವನೇ! ಪರಮಪದ ಬಲುದೂರ! ಅಪರಿಚಿತ ದೇಶ. ಕ್ಷೀರಾಬ್ಧಿಶಯನನೂ ಪರಮಯೋಗಿ ಮಾತ್ರಗಮ್ಯ! ರಾಮ ಕೃಷ್ಣಾದಿಗಳಂತೂ ನಮಗೀಗ ಅತೀತ! ದಿವ್ಯದೇಶಸ್ಥ, ಪೂರ್ಣ, ಪಕ್ಷಪಾತರಹಿತ ಪರಮಸೌಮ್ಯ ಸರ್ವೇಶ್ವರನೆಂದರೆ ಅರ್ಚಾಮೂರ್ತಿಗಳೇ, ಜ್ಞಾನಿ ಅಜ್ಞಾನಿ ಎಲ್ಲರಿಗೂ ಸಮನಾಗಿ ಅಭಿಗಮ್ಯ! ಮುದಲ್ ಅನಾಯೇ = ಮುಂದಣ ೧೧ನೆಯ ಹಾಡಿನಿಂದ, ತಾಯಿಯ ಮಗಳ ಅವಸ್ಥೆ ಇದೇ ತಿರುಮಂಗೈ ತಾಳಿಬಿಡುತ್ತಾರೆ. ಅಹಾ! ಚೆನ್ನಾಗಿದೆ ನಿನ್ನ ಆದ್ಯಕಾರಣತ್ವ. ಈ ನನ್ನ ಮಗಳಿಗೆ ಸಂಶ್ಲೇಷ ನೀಡಿ, ಈಗಲೇ ನಿನ್ನ ಭಾಗದ ಭೋಗ ನೀನೂ ಅನುಭವಿಸದೆ, ಇವಳನ್ನು ಹತಾಶಳನ್ನಾಗಿಸಿದ್ದೀಯಲ್ಲಾ! ಎಂಬ ಭಾವಕ್ಕೆ ಹೇತುಗರ್ಭ ನಿಂದೋಕ್ತಿಯೂ ಇದಾಗಿದೆ. ಕಾವ್ಯಾರ್ಥ ಮುನ್ ಸೂಚನೆ! ಇವುಗಳೆಲ್ಲಾ ಉತ್ತಮ ವಾಙ್ಮಯ ಲಕ್ಷಣಗಳು.

ಎನ್ ಅರಿವನ್ = ಸರ್ವದಾ ಅಪರಿಪೂರ್ಣನೂ ನಿನಗೇ ಅತ್ಯನ್ತ ಪರತಂತ್ರನೂ ಅದ ನನಗೇನು ಗೊತ್ತು? ನನ್ನ ಬಳಿ ಸಾಧನಾಂಶ ಇದೆಯೆಂದು ದಯವಿಟ್ಟು ತಿಳಿಯಬೇಡ. ನೀನಿತ್ತ ಅನೇಕ ದಿವ್ಯವೇಶ ಮೂರ್ತಿ ಸೌಂದರ್ಯ ದರ್ಶನ, ಕೈಂಕರ್ಯಗಳಿಗಾಗಿಯೇ, ನಿನ್ನನ್ನೇ ಬೇಡಿ ಬಿನ್ನೈಸಿಕೊಳ್ಳುತ್ತಿದ್ದೇನೆ. ಹೀಗೆ ಈ ೧೦ನೆಯ ಪಾಶುರದಲ್ಲಿ, **"ತಿರುಮಂತ್ರ ವೈಭವ, ಅದರ ಸಾಧನತ್ವಾಭಾವವನ್ನು ಆಳ್ವಾರ್ ತಮ್ಮ ಸ್ವ ಸ್ಥಾವಸ್ಥೆಯಲ್ಲಿದ್ದು ನಿವೇದಿಸಿದರು".**

ತಮಿಳ್ ತಿರಳ್ ೧೬

ಕನ್ನು ಮೇಯ್ತ್ತು ಇನಿದು ಹನ್ದ ಕಾಳಾಯ್ ಎನ್ನುಮ್ ಕಡಿಪೊಳಿಲ್ ಶೂಳ್ ಕಣಪುರತ್ತೆನ್ ಕನಿಯೇ! ಎನ್ನುಮ್
ಮನ್ನುಮರ ಕ್ಯೂತ್ತಾಡಿ ಮಹಿಳ್ನಾಯ್ ಎನ್ನುಮ್ ವಡ ತಿರುವೇಙ್ಗಡಮ್ ಮೇಯ ಮೈನ್ದಾವೆನ್ನುಮ್
ವೆನ್ನಶರುರರ್ ಕುಲಮ್ ಕಳೈನ್ದ ವೇನ್ದೇ! ಎನ್ನುಮ್ ವಿರಿಪೊಳಿಲ್ ಶೂಳ್, ತಿರುನರೈಯೂರ್ ನಿನ್ನಾಯ್ ಎನ್ನುಮ್
ತುನ್ನು ಕುಳಲ್ ಕರುನಿರತ್ತೆನ್ ತುಣೈಯೇ! ಎನ್ನುಮ್ ತುನೈ ಮುಲೈಮೇಲ್ ತುಳಿ ಶೋರ ಚ್ಚೋರ್ ಹಿನ್ನಾಳೇ!

ಕನ್ನಡ ನೆರಳ್

''ಕರು ಮೇಯ್ಸಿ, ಉರು ಸಂತಸಿ ಯುವಕಾ!'' ಎಂಬಳ್ ನರು ಬನ ಸೂಳ್ ''ಕಣಪುರ ದೆನ್ ಕಳಿಹಣ್ಣೇ!'' ಎಂಬಳ್
ಮರಗಾಲ್ ಕುಣಿದಾss ನಂದನೇ! ಎಂಬಳ್ ಉತ್ತರ ಶ್ರೀವೇಂಕಟ ನಿಲ್ ಕಲಿಯೇ! ಎಂಬಳ್
ತರಿದsಸುರರ್ ಕುಲವಳಿಸಿದ ಅರಸಾ! ಎಂಬಳ್ ಬಿರಿ ಬನ ಸೂಳ್ ತಿರುನರೈಯೂರ್ ಒಳು ನಿಂತವನೇ! ಎಂಬಳ್
ಕುರುಳ್ ಬರ್ತಿಹ ಕಾರ್‌ಗಳೆಯೇರ್ ಎನ್ ಗೆಣೆಯಾ! ಎಂಬಳ್ ಈರ್ ಮೊಲೆಮೇಲ್ ಹನಿಸೋರ್ ಇರೆ ಸೊರಗುತಲಿಹಳ್ ಈಕೆ!

ಈ ತಿರುನೆಡುನ್ತಾಣ್ಡಹಮ್ ದಿವ್ಯಪ್ರಬಂಧದ, ಮೊದಲಿನ ೧೦ ಪಾಶುರಗಳನ್ನೂ ತಿರುಮಂಗೈಯಾಳ್ವಾರ್ ತಮ್ಮ ಆಳ್ವಾರ್ ಸ್ವಭಾವದಲ್ಲೇ ಹಾಡಿ ತಮ್ಮ ಆರ್ತಿಯನ್ನು ಅಂದರೆ, - ಸೇವೆಯ ತವಕವನ್ನು - ನೇರಾ ಭಗವಂತನಲ್ಲಿ ತೋಡಿಕೊಂಡು ವಿಜ್ಞಾಪಿಸಿ ಕೊಂಡರಷ್ಟೆ. ಈ ಸಂತರ ಆ ನೋವು ನಲಿತ ಮೇರೆ ಮೀರಿ ಗಂಡ್‌ತನ ಹೆಣ್‌ತನಕ್ಕೆ ತಿರುಗುವುದೇ ೧೧ನೆಯ ಹಾಡಿನಿಂದ ನಮಗೆ ಗೋಚರವಾಗುವುದು. ಶ್ರಿಯಃಪತಿಯೇ ನಮ್ಮೆಲ್ಲರ ಪತಿ! ತಾವೀಗ ಅವರೀರ್ವರಿಗೂ ದಾಸಿ! ಈ ಸ್ಥಿತಿಯನ್ನೂ ಮೀರಿ, ಶ್ರೀದೇವಿಗೂ ಇವರಿಗೂ ಇರುವ ಸಹಧರ್ಮವೆಂದರೆ, ಭರ್ತನಿಗೇ ಭಾರ್ಯೆಯಾಗಿರುವುದು. ಪತಿವ್ರತೆ ತನ್ನ ಗಂಡನ ಸೇವೆಗೇ ಮೀಸಲಷ್ಟೆ! ಈ ಅನನ್ಯಾರ್ಹ ಶೇಷತ್ವದ ಭಾವನಾತಿಶಯದಿಂದ ಈ ಆಳ್ವಾರರೂ ಈಗ ಸಾಕ್ಷಾತ್ ಮಹಾದೇವಿಯಂತೆ ನಾಯಕಿಯಾಗಿ ಬಿಟ್ಟಿದ್ದಾರೆ!

ನಮ್ಮಾಳ್ವಾರರು ಸರ್ವಪ್ರಪನ್ನ ಜನರಿಗೂ ಕೂಟಸ್ಥ ಮೂಲ ಪುರುಷರು. ಕಲಿಯುಗದ ಆದಿ ಎಂದರೆ ೫೧೦೨ ವರ್ಷಗಳಿಂದಲೇ ಶರಣ ಭಕ್ತಿಮಾರ್ಗ ಜನಜನಿತವಾಗಲು ಆರಂಭ. ಕೃಷ್ಣ, ಗೊಲ್ಲರ ಕುಲದಲ್ಲಿ ಹುಟ್ಟಿ ಗ್ರಾಮ ಜೀವನದಲ್ಲೇ ತನ್ನ ಬಾಲ್ಯವನ್ನೆಲ್ಲಾ ಅವರ ನಡುವೇ ಕಳೆದುದೇ ಈ ಸಂತರಿಗೂ ಪ್ರೇರಕ. ಆತನಿಂದಲೇ ಸಂದೃಷ್ಟರಾದವರು ಈ ಶಠಕೋಪರು ಅಂತಹವರು ತಮ್ಮ ತಿರುವಾಯ್ ಮೊಳಿಯಲ್ಲಿ, ಮೊಟ್ಟಮೊದಲಿನ ದೇವರ ಪ್ರೀತಿ, ಗಾಢೋಪಗೂಢಳಾದ ಮಹಾಲಕ್ಷ್ಮಿಯ ಮೇಲೆ. ಅವಳ ಮೂಲಕ ನಮ್ಮ ಮೇಲೆ, ಇದೊಂದು ಬಗೆ. **''ಕೋಲಮಲರ್ ಪಾವೈಕ್ಕು ಅನ್ಬಾಹಿಯ ಎನ್ ಅನ್ಬೇ ಓ! - ತಿ.ವಾ.ಮೊ. (೧೦-೧೦-೭)''** ಹಾಗೆಯೇ ನಮ್ಮಂತಹವರಿಗೆ ಸ್ವಾಮಿ ನಲ್ಲನಾಗಿ ಬಳಿಕ ಆ ಶ್ರೀದೇವಿಗೆ ವಲ್ಲಭ. ಹೀಗೆ ಸರ್ವಜೀವ ಪ್ರಣಯಿಯಾದ ಸರ್ವೇಶ್ವರನ ದೃಷ್ಟಿಯಿಂದ ಪಿರಾಟ್ಟಿಯೂ, ಅನನ್ಯಭಕ್ತರೂ ಒಂದೇ ಗುಂಪಿಗೆ ಸೇರುತ್ತಾರೆ. ಇದು ಅತನ ನಿರಂಕುಶ ಪ್ರೀತಿ ಸ್ವಾತಂತ್ರ್ಯ ಶಾಸ್ತ್ರಗಳಾಗಲೀ, ಲೌಕಿಕ ಯುಕ್ತಿಗಳಾಗಲಿ, ಅತನನ್ನು ಕಟ್ಟಿಹಾಕಲಾರವು! **''ನಮಕ್ಕುಮ್ ಪೂವಿನ್ ಮಿಶೈ ನಚ್ಚೈಕ್ಕುಮ್ ಇನ್‌ಬನೈ''**

ಇಲ್ಲಿ ಪ್ರಥಮ ಪ್ರಾಶಸ್ತ್ಯ ಶರಣರ ಬಗೆಗೇ ಇರುವುದೂ, **''ಜ್ಞಾನೀತು ಆತ್ಮೈವ ಮೇ ಮತಮ್'' ''ಅಹಂ ಸಚ ಮಮಪ್ರಿಯಃ''** ನನಗೆ ಶರಣರಲ್ಲಿರುವ ಪ್ರೀತಿ, ನನಗೂ ವಾಚಾಂ ಅಗೋಚರ! ಲಕ್ಷ್ಮೀ ಜಗನ್ಮಾತೆಯಾಗಿ ಮಕ್ಕಳ ಜತೆಗೂ ಇದ್ದು ತನ್ನ ಗುಣಾತಿಶಯವನ್ನು ಪ್ರಕಾಶಪಡಿಸುವಳು. ಈ ಸಾದೃಶ್ಯ - ಸಾಧರ್ಮ್ಯದಿಂದ ಈಗ ಈ ಕಲಿಯನ್ ಸಹ ನಾಯಿಕಾಮಣಿಯೇ!

ಇನ್ನೊಂದು ದಾರ್ಶನಿಕ ದೃಷ್ಟಿಯೂ ಇಲ್ಲಿ ಉಪಪನ್ನ:-

''ಸ್ವಾಮಿತ್ವ + ಆತ್ಮತ್ವ -ಶೇಷಿತ್ವ -ಪುಂಸ್ತ್ವಾದ್ಯಾಃ ಸ್ವಾ ಮಿನೋ ಗುಣಾಃ, ಸ್ವೇಭ್ಯಃ ದಾಸತ್ವ -ದೇಹತ್ವ -ಶೇಷತ್ವ -ಸ್ತ್ರೀತ್ವ-ದಾಯಿನಃ''

ಇಲ್ಲೆಲ್ಲಾ ಹೆಂಗಸಾಗುವುದೆಂದರೆ ಬಾಹ್ಯಾssಕಾರದ ಲಿಂಗಭೇದವಲ್ಲವೇ ಅಲ್ಲ. ಆ ದೈಹಿಕ ಸಾಧರ್ಮ್ಯವಲ್ಲವೇ ಅಲ್ಲ. ಓರ್ವ ಹೆಂಗಸು ಶರೀರಧಾರಿ ಚೇತನ ತನ್ನನ್ನು ''ಸ್ತ್ರೀ'' ಎಂದುಕೊಳ್ಳುವುದಕ್ಕೂ ಈ ಶರಣರ ಸ್ತ್ರೀಭಾವಕ್ಕೂ ಏನೂ ಸಂಬಂಧವಿಲ್ಲ. ಆದರೂ ಸ್ತ್ರೀ ಸಾಮಾನ್ಯಕ್ಕೆ ಪುರುಷನಲ್ಲಿ ಹುಟ್ಟುವ ಅನುರಾಗವನ್ನೂ ಮೀರಿದ, ಪರಿಶುದ್ಧ ಅನನ್ಯ ಅನುರಾಗ ಇದೆಯಲ್ಲಾ ಆ ಗರತಿಯ ಅನನ್ಯಪಾತಿವ್ರತ್ಯಬುದ್ಧಿ, ಗಂಡನಾದ ಭಕ್ತನಿಗೆ ಬರುವುದು ಕಷ್ಟ. ಮೀಸೆಯ ಪೌರುಷ ಅಡ್ಡಬರುತ್ತದೆ. ಅದಕ್ಕೆ ಪ್ರತೀಕಾರರೂಪವಾಗಿ ಹೆಂಗಸರೂ ಸುಮ್ಮನಿರಲಾದೀತೇ? ಈಗೆಲ್ಲಾ ಜಗತ್ತು ಈ ಮಟ್ಟದಲ್ಲೇ ತೊಳಲಾಡುತ್ತಿದೆ. ಸ್ತ್ರೀಯರಿಗೆ, ತಮಗಿಂತ ಚೆಲುವಿಯರಾದ ಸುಂದರತರ ಸ್ತ್ರೀಯರನ್ನು ಕಂಡಾಗಲೂ, ತಾವು ಗಂಡಸಾಗಿ ಹುಟ್ಟಬೇಕಾಗಿತ್ತು! ಎನ್ನುವಷ್ಟು ಅನುರಾಗ ವಿಶೇಷ. ಪಾಂಚಾಲಿ ದ್ರೌಪದಿಯ ಮೈ ಸೌಂದರ್ಯ ನೋಡಿದಾಗ, ಅಕೆಯ ಸ್ನಾನ ಸೇವಕಿಯರಿಗೆ ಗಂಡುಭಾವ ಬರುತ್ತಿತ್ತು. ''ಪುಂಭಾವಂ ಮನಸಾ ಯಯುಃ'' ಈ ವರ್ಣನೆಗಳೆಲ್ಲಾ, ಈ ಆಳ್ವಾರರಿಗೆ ಸಂಬಂಧ ಪಟ್ಟದ್ದಲ್ಲ. ದ್ರೌಪದೀ ನಿದರ್ಶನ, ಕೇವಲ ಲೋಕಾssರೂಢಿಗೆ ಸಂಬಂಧಪಟ್ಟಿದ್ದಷ್ಟೆ. ಆ ಕೃತ ಪ್ರತಿಕೃತ ಸಾಮಾಜಿಕ ಯಥಾಸ್ಥಿತಿಗಳನ್ನು

ಮರೆತು, ಪರಮಾತ್ಮನಲ್ಲಿ ಜೀವಾತ್ಮನಿಗೆ ಶುದ್ಧ ಆತ್ಮ-ಆತ್ಮೀಯ ಅನುರಾಗವೆಂಬುದೀಗ ಮಾನವ ಚಿಂತಿಸಬೇಕಾದ ವಿಚಾರ. ಆಗ ಇಂದಿನ ಪುರುಷಪ್ರಾಧಾನ್ಯ, ಹೆಂಗಸರ ಮೀಸಲಾತಿ ಇ.ಇ. ಇವೆಲ್ಲಾ ಸಮಸ್ಯೆಗಳೂ ಇಂಗಿಹೋಗುವುವು! ಗಂಡಸರೂ ಹೆಂಗಸರ ಗುಣ ಕಲಿತು, ಗಂಡಸರ ಗುಣಗಳನ್ನು ಹೆಂಗಸರಿಗೂ, ದಿಟ್ಟತನದಿಂದ ಜೀವನದಲ್ಲಿ ತೋರಿಸುವ ಸಂದರ್ಭವೇ ಇಂದಿನ ತುರ್ತು. ಇದಕ್ಕೆ ಸಾಕಷ್ಟು ವಾತಾವರಣವನ್ನು ಧೃತಿ ಹಾಗೂ ಪವಿತ್ರತೆ ಉಭಯ ಸಮದೃಷ್ಟಿಯಿಂದ, ಹೆಂಗಸರನ್ನು ಅಡಿಗೆಮನೆಯಿಂದ ಸಮಾಜಕ್ಕೆ ಸೆಳೆದ ಕೀರ್ತಿ ಮಹಾತ್ಮಗಾಂಧಿಯವರಿಗೆ ಸಲ್ಲುತ್ತದೆ. ಈ ನಿಜವಾದ ಸ್ತ್ರೀಶಕ್ತಿ ಜಾಗರಣಕ್ಕೆ, ವಿನೋಬಾ ಅವರು, ಬ್ರಹ್ಮವಿದ್ಯೆಯ ಕ್ಷೇತ್ರಕ್ಕೇ ಹೆಂಗಸರನ್ನೇರಿಸಿದ್ದಾರೆ! ಅದೇ ಬ್ರಹ್ಮಚರ್ಯ! ಗಂಡಸರಂತೆ ಸ್ತ್ರೀಯರಿಗೂ ಬ್ರಹ್ಮಚರ್ಯ ಅಧಿಕಾರವುಂಟು. ಅದನ್ನು ಗಂಡಸರಲ್ಲಿ ಬೇಡ ಬೇಕಿಲ್ಲ. ತಮ್ಮ ಆತ್ಮಬಲದಿಂದ ತಮ್ಮ ಆಧ್ಯಾತ್ಮಿಕ ಹಕ್ಕನ್ನು ಪಡೆಯಬೇಕು. ಹೀಗೆ ಶರಣರ ಭೂಮಿಕೆಗೇ ವಿಶ್ವಸಮಾಜ ಏರುವುದೇ, ಸಮಾಜ ವೈಜ್ಞಾನಿಕವೂ, ಯುಗಧರ್ಮವೂ ಆಗಿದೆ.

"ಜಾತಿ" ಎಂದರೆ **"ಅವಯವ ಸಂಸ್ಥಾನ ವಿಶೇಷ"**. ಹೊರಗಿನ ಒಳಗಿನ ಸ್ಥೂಲ ಹಾಗೂ ಸೂಕ್ಷ್ಮ ಶಾರೀರಕ ಮತ್ತು ಅಂಗಾಂಗಗಳ ರಚನೆ **(Formation)**. ಈ ಸ್ತ್ರೀ-ಪುರುಷ ಮುಂತಾದ "ಜಾತಿ"ಯನ್ನು ಮರೆತೇ, ಪರಮಾತ್ಮನಾದ ಪುರುಷೋತ್ತಮನಲ್ಲಿ ಜೀವಾತ್ಮನಾದ "ಪುರುಷ"ನಿಗೆ, ಸ್ವರೂಪಕ್ಕೆ ತಕ್ಕ ಪರಿಶುದ್ಧ ಅನನ್ಯ ಅನುರಾಗ ಎಂಬುದೇ ಮುಖ್ಯವಿಚಾರ. ಜಾತೀಯತೆಯ ಮತ್ತು ಸ್ತ್ರೀಶಕ್ತಿ, ಸ್ತ್ರೀ ಸಮಾನತೆ ಇವುಗಳೆಲ್ಲದರ ಆರೋಗ್ಯಕರವಾದ ಸಮಗ್ರ ಪರಿಪೂರ್ಣ ವಿವರಣೆ, ಆಳ್ವಾರ್ ಶರಣರ ಮಹಾಪ್ರಸಾದ. ನಾವೆಲ್ಲಾ ಅದಕ್ಕೇ ಪಾತ್ರರಾಗೋಣ.

ಪುರುಷೋತ್ತಮನ ವಿಶೇಷವೆಂದರೆ ಗಂಡಸನ್ನೂ ಹೆಂಗಸಾಗಿಸುವುದು. ಇದು ಶಿಕ್ಷಿತರಿಗೆ ಚೆನ್ನಾಗಿ ಮನದಟ್ಟಾದರೆ ಇಂದಿನ ಬಹುತೇಕ ಲಿಂಗಭೇದ ಜಾತಿಭೇದ ಸಮಸ್ಯೆಗಳೆಲ್ಲಾ ಒಳ್ಳೆಯ ಹಾದಿಯಿಂದಲೇ ಕಡಿಮೆಯಾಗುತ್ತಾ ಬರುವುವು. ಪುಂಸಾಂ ದೃಷ್ಟಿ, ಚಿತ್ತಾsಪಹಾರಿ ಶ್ರೀರಾಮ ಪುರುಷೋತ್ತಮ "ಪುಂಸಾಂ ಮೋಹನ ರೂಪನಾಗಿದ್ದ" "ಸ್ತ್ರೀಪ್ರಾಯ ಮಖಿಲಂ ಜಗತ್" ಹೆಂಗಸನ್ನೂ ಪುರುಷ ಪತಿತ ಪತಿಗಲ್ಲದೆ ಪುರುಷೋತ್ತಮನೋರ್ವನಿಗೇ ಮೀಸಲಾಗಿಸುವುದು. ಮದುವೆಯಲ್ಲೂ ವಿಷ್ಣು ಸ್ವರೂಪನಾದ ನಿನಗೆ, ಇದೋ ಈ ಲಕ್ಷ್ಮೀ ಸ್ವರೂಪಳಾದ, ನನ್ನ ಕನ್ಯೆಯನ್ನು ದಾನವಾಗಿ ನೀಡುತ್ತಿದ್ದೆನೆ. ಅಳಿಯನಿಗೆ ಮಾವನ ಮಾತು, **"ಧರ್ಮೇ ಚ ಅರ್ಥೇ ಚ ಕಾಮೇ ಚ ನ ಅತಿ-ಚರಿತವ್ಯಾ!"** ಅಗ್ನಿ ಸಾಕ್ಷಿಯಾಗಿ ಜಾಮಾತಾ ಪ್ರತಿಜ್ಞೆ ಮಾಡುವುದೇನು? ಅದೂ ಮೂರು ಬಾರಿ. **"ನ ಅತಿ ಚರಾಮಿ" "ನ ಅತಿ ಚರಾಮಿ" "ನ ಅತಿ ಚರಾಮಿ"** ಆದರೆ, ಅಧ್ಯಾತ್ಮದ ಪ್ರಯತ್ನ, ಹಾಗೂ ಆತ್ಮ ವಿಕಾಸದ ಏರುಗೆಗಳಲ್ಲಿ, ಈ ಗಂಡನಿಗೂ ಈ ಹೆಂಡತಿಗೂ ಒಪ್ಪಂದದ ನಿರ್ಬಂಧವಿಲ್ಲ. ಅಂದರೆ, "ಮೋಕ್ಷ" ವಿಚಾರದಲ್ಲಿ ಸ್ತ್ರೀಸ್ವಾತಂತ್ರ್ಯವನ್ನು ವೈದಿಕ ವಿಧಿವಿಧಾನಗಳೇನೇನೂ ಕಸಿದುಕೊಳ್ಳವು. ಇದೂ ಸಾಮಾಜಿಕ ಸುಧಾರಕರ ಗಮನಕ್ಕೆ ಬರಬೇಕು. ಮೊದಮೊದಲು "ಪತಿಯೇ ಪರದೈವ"ದಂತೆಯೇ "ಪತ್ನಿಯೇ ಪರದೈವ" ಈ ಉಭಯ ಸರಿಸಮಾನ ದೃಷ್ಟಿ ತದನುಗುಣ ಸದಾಚಾರ ಅತ್ಯಗತ್ಯ. ಪಕ್ವ ಪಕ್ವತರವಾಗಿ, ಸಮಾಜವನ್ನು ಒಡೆಯದೆ ಬೇಕಾಬಿಟ್ಟಿ ಸಾಂಕರ್ಯಗೊಳಿಸದೆ ಇರುವ ಎಲ್ಲಾ ಸಚ್ಛಕ್ತಿಗಳನ್ನೂ ಸೇರಿಸುವ "ಧರ್ಮ ಶಕ್ತಿ ಸಂಪನ್ನ", ಪ್ರ.ಜೆ. ಎಂಬ ಒಳ್ಳೆಯ ಸನ್ತತಿಗೆ ನಿಮಿತ್ತರಾದ ಮೇಲೆ "ಪರದೈವವೇ ಪತಿ" "ಪರದೈವವೇ ಜಗನ್ಮಾತೆ" ಈ ಭೂಮಿಕೆ. ನಾವೆಲ್ಲರೂ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನ ಅತನ ಪಟ್ಟ ಮಹಿಷಿಯ ಸರ್ವಸೇವಕರು. ಎಂಬೀ ಉತ್ತಮ ಪಕ್ವತಮ ಭೂಮಿಕೆಗೆ ಏರಬೇಕಾದುದೇ, ಇದೀಗ ಈ ಆಳ್ವಾರರ ನೆಲೆ, ೧೦ ಹಾಡುಗಳಿಂದ ತಾವು ಗಂಡಸಾಗಿದ್ದೂ ಈಗ ಅದೂ ಮಾಯವಾದಂತೆ! ಜ್ಞಾನತಪ್ಪಿ **"ಮೋಹಂ ಗತೆಯಾದ ಸ್ತ್ರೀ"** ಆಗಿದ್ದಾರೆ! ಸರಿಯಾದ ಸ್ವರೂಪದ ಯಥಾರ್ಥ, ಜ್ಞಾನದಿಂದ ಬರುವ ಈ ತೆರದ ಅಜ್ಞಾನವನ್ನು ಯಾರೂ ಹೋಗಲಾಡಿಸಲಾರರು. ಜೀವಾತ್ಮನ ಸ್ವರೂಪವಾದ, ಜ್ಞಾನ ಆನಂದ, ನಿತ್ಯತ್ಯ, ಅಣುತ್ವಾದಿಗಳಿಗಿಂತಲೂ ಮುಖ್ಯವಾದ **"ಶೇಷತ್ವಮೇ ಆತ್ಮಾವುಕ್ಕು ಸ್ವರೂಪಂ"** ಈ ಸರ್ವಸಮಷ್ಟಿಗಳ ಸರ್ವಾsವಿರೋಧಿ ನಿತ್ಯ ಸೇವಾ ಜೀವನವೇ, ಪ್ರತಿಜೀವಾತ್ಮನ ಜೀವಾಳವಾದ ಸ್ವ-ರೂಪ! ಈ ದೇಹವೇ "ನಾನು". ಇಂದ್ರಿಯಗಳೇ "ನಾನು"! ಈ ಮನಸ್ಸೇ ನಾನು! ಈ ಉಸಿರಾಡುವ ಪ್ರಾಣ ವಾಯುವೇ ನಾನು! ಎಂಬುದೆಲ್ಲಾ ಜೀವಾತ್ಮನ ಸ್ವರೂಪ ಜ್ಞಾನವಲ್ಲ. ಅದು ಅಜ್ಞಾನ, ಹಿಂದಿನ "ಪಕ್ವತಮ ಜ್ಞಾನ"ದಿಂದುಂಟಾದ "ಅಜ್ಞಾನ", ಅದು ಬೇರೆ. ಈ ದೇಹವೇ ನಾನೆಂಬ ಅಜ್ಞಾನ "ಸದ್ ಗುರುವಿನ ಮೂಲಕ" ನಿವೃತ್ತಿ ಹೊಂದುವಂಥದು. ಆಳ್ವಾರಿಗೆ ಈಗ ಏರ್ಪಟ್ಟಿರುವುದು ಇಂಥದಲ್ಲ.

ಇಷ್ಟೊಂದು ವಿಚಾರ ಸಂಪತ್ತು ಇಲ್ಲಿನ ೧೧ನೇ ಪಾಶುರದಲ್ಲಿ ಹುದುಗಿದೆ, ೧೨ರ ಪ್ರಮೇಯವೆಂದರೆ, ಒಳ್ಳೆಯ ಸಾತ್ವಿಕ ಕಣ್ಣಗಾತಿ "ಅಮ್ಮಾ! ನಿಮ್ಮ ಮಗಳಾದ ಈಕೆಗೆ ಬೇರೇನೂ ಮೂರ್ಛೆಯಲ್ಲ. ಅದೂ ಇದೂ ವೈದ್ಯ ಮಂತ್ರತಂತ್ರ ಯಂತ್ರಾದಿಗಳ ಉಪಚಾರ ಬೇಕಿಲ್ಲ" ಎನ್ನುತ್ತಾಳೆ ಎಂಬುದೇ. ರೋಗ ಕಾರಣ ಏನೆಂಬುದನ್ನು ನಿಜಕ್ಕೂ ತಿಳಿದುಕೊಳ್ಳದ ವೈದ್ಯ, ತಿಳಿದರೂ ಹೇಳದ ವೈದ್ಯ ಸ್ವಾಸ್ಥ್ಯವೈರಿಯೇ ಸರಿ! ಮಾನವನ ಪ್ರಾಣಿಗಳ ಆರೋಗ್ಯಕ್ಕೆ ಅಂತಂತಹ ಮಣಿ ಮಂತ್ರ ಔಷಧಾದಿಗಳು ಬೇಕಿಲ್ಲ. ಹೀಗಿರುವಾಗ ಇಂತಹ ಸಂತರ ವಿಚಾರದಲ್ಲಿ, ಕಿಂಪುನಃ! ಕಡಲ್ ಬಣ್ಣನಾದ ಆ ಪುರುಷೋತ್ತಮನ ನಾಮ ಹೇಳಿದವಳು "ಎಮ್ಪೆರುಮಾನ್ ತಿರುವರಜ್ಞಮ್ ಎಚ್ಚೇ ಎನ್ನುಮ್" ಎಂದು ಪ್ರಶ್ನಿಸಿಕೊಂಡು ಸ್ವಲ್ಪ ತಿಳಿಮೆಯಾಂತಿದಾಳೆ. ಆ ಶ್ರೀರಂಗ ದಿವ್ಯದೇಶದ ಹೆಸರನ್ನೇ ಮತ್ತೆ ಮತ್ತೆ ಬಿಡದೆ ಆಡುತ್ತಿರುವುದಾಗಿ ಈ ನಾಯಿಕೆಯ ತಾಯಿಯ ಅವಸ್ಥೆಯನ್ನೂ ಆಳ್ವಾರಾದ ತಾವೇ ಹೊಂದಿ ಹೇಳುತ್ತಿರುವ ಸಂದರ್ಭ.

ಹಾಡು ೧೩ರಲ್ಲಿ ಈ ಪರಕಾಲ ನಾಯಿಕಾಮಣಿ ತಾನು ಸಾಕಿರುವ ಗಿಳಿಯನ್ನೇ, ಆ ನಾಮಗಾನ ಮಾಡುವಂತೆ ಕೇಳಿಕೊಂಡರೂ ಅದು ಮೌನದಿಂದಲೇ ಇರುತ್ತದೆ. ಕಲಿಸಿದ ಆಚಾರ್ಯನ ಮುಂದೆ ಶಿಷ್ಯ ಬಾಯಾಡುವುದು ಶಿಷ್ಟಾsಚಾರವಲ್ಲ. ಆದರೂ ಆಡಿದ ಶ್ರೀರಂಗ ನಾಮದ ಉಚ್ಚಾರಣೆ ಈಕೆಯ ಮೋಹಕ್ಕೇ ಇನ್ನೂ ಪುಟ ಕೊಡುವುದನ್ನು ಕಂಡು, ಆ ಶ್ರೀನಾಮ ಬಿಟ್ಟು ಗಿಣಿ ತನ್ನ ಆಚಾರ್ಯರು ಯಥಾಸ್ಥಿತಿಯಲ್ಲಿದ್ದಾಗ ಆಡಿದ ಮುತ್ತಿನಂತಹ ಮಾತುಗಳನ್ನೇ ಹಾಡುತ್ತದೆ!

ಹಾಗೆಯೇ ಹಾಡಿದ ಶುಕವನ್ನು ಕಂಡು ೧೪ನೆಯ ಪಾಶುರದಲ್ಲಿ ಸಂತಸವಾಯಿತೆಂದು ಕೊಂಡಾಡುತ್ತಾಳೆ. ಹಾಡು ೧೫ರಲ್ಲಿ ಆಶ್ವಾಸನೆ ಪಡೆದವಳು, ತನ್ನ ಬಾಯಿಂದಲೇ ಹರಿನಾಮ ಪಲುಕುತ್ತಾ ವೀಣೆ ಬಾರಿಸಲು ತೊಡಗುತ್ತಾಳೆ. ಹಿಂದೆ ತಾನೂ ದೇವರ ಜತೆಗಿದ್ದಾಗ, ಆದ ಸಂಶ್ಲೇಷ ರಸವನ್ನೆಲ್ಲಾ ಈಗ ಈಕೆ ವೀಣೆಯ ಮಿಡಿತದಿಂದಲೇ ಅನುಭವಿಸುತ್ತಾ ಇರುವಂತೆ ಅದೇ ಪ್ರತ್ಯಭಿಜ್ಞಾ ಪ್ರತ್ಯಕ್ಷವೇರ್ಪಡುತ್ತದೆ. ರಾಮ ಭಂಟ ಅಶೋಕವನದಲ್ಲಿ ನೀಡಿದ ಶ್ರೀರಾಮನ ಕೈಯ್ಯುಂಗುರವನ್ನು ಕಂಡಾಗ ಜಾನಕಿ ಮುದಿತೆಯಾದರೂ, ಆ ಮೇಲೆ ಹಾ ರಾಮ! ಹಾ ಲಕ್ಷ್ಮಣ! ಹಾ ಸುಮಿತ್ರೆ ಎಂದು ಪ್ರಲಾಪಿಸಿದಂತೆ ಈ ನಾಯಿಕೆಯೂ ಆಕ್ರಂದಿಸುವುದೇ ಈ ೧೬ನೆಯ ಗಾಥೆ. ''ಕನ್ನು ಮೇಯ್ತ್ತಿನಿದು ಹನ್ವ ಕಾಳಾ! ಎನ್ನುಮ್..... ತುಣ್ಬೆ ಮುಲೈ ಮೇಲ್ ತುಳಿ ಶೋರ ಚ್ಚೊರ್ ಹಿನ್ನಾಳ್'' ಮೋಹಂಗತಳಾದ ಮಗಳ ಯೋಗಕ್ಷೇಮ ಕೇಳಲು ಬಂದವರಿಗೆ ತಾಯಿ ಹೇಳುತ್ತಿದ್ದಾಳೆ. ಜಗದ್ರಕ್ಷಣೆಯಲ್ಲೆಲ್ಲಾ ಶ್ರೇಷ್ಠತಮ ರಕ್ಷಣೆಯೆಂದರೆ, ಗೋಪಾಲಕೃಷ್ಣನಾಗಿ ಅವತರಿಸಿ, ಮೇಲ್ ಮಟ್ಟದ ಅಜ್ಞಾನದಲ್ಲಿರುವ ಕರುಗಳನ್ನು ಬಲು ಪ್ರೇಮದಿಂದ ಕಾಯ್ದುದನ್ನೇ ಈ ನನ್ನ ಕುವರಿ ವಿಲಾಪಿಸುತ್ತಿದ್ದಾಳೆ. ಇಂತಹವನನ್ನು ನಾನು ಹೇಗೆ ಬಿಟ್ಟಿರಲಿ''? ಕನ್ನು ಮೇಯ್ತ್ತು = ದೊಡ್ಡ ಆಕಳುಗಳ ಜ್ಞಾನಾನುಭವವೂ ಇಲ್ಲದ ಪುಟಾಣಿ ವತ್ಸಗಳನ್ನೇ ಕಾಯ್ದು. ಇನಿದು ಉಹನ್ವ ಕಾಳಾ ಎನ್ನುಮ್ = ಬಲು ಸಂತೋಷದಿಂದ ಕೂಡಿ ಉಕ್ಕುತ್ತಿರುವ ಯೌವ್ವನ ಉಳ್ಳವನೇ! ನನ್ನೀ ಮಗಳು ಶೋಕಾsವಿಷ್ಟೆಯಾಗಿದ್ದರೂ ದೇವರ ಆ ದಿವ್ಯ ಯೌವ್ವನಕ್ಕೇ ಇವಳು ಸೋತಂತಿದೆ. ಅಕಟಾ! ಇವಳೂ ಆ ಕರುವಾಗಿ ಹುಟ್ಟಲಿಲ್ಲವಲ್ಲಾ!

ಕಡಿಪೊಳಿಲ್ ಶೂಳ್ ಕಣಪುರತ್ತು = ಆಯಾಯಾ ಕಾಲಗಳಲ್ಲಿ ತಿರುಕ್ಕಣ್ಣಪುರದಲ್ಲಿ ಭಕ್ತಭೋಗ್ಯನಾಗಿ, ಗಮಗಮಿಸುವ ಹೂ ಹಣ್ಣು ತೋಟಗಳಿಂದ ಕೂಡಿರುವ ಅಲ್ಲಿ. ಇದು ಪೂರ್ವಾಚಾರ್ಯರ ವ್ಯಾಖ್ಯಾನ. ರಸಿಕೋತ್ತಮರಾದ ಶ್ರೀ ಪರಾಶರಭಟ್ಟರು ''ದನಕರುಗಳನ್ನು ಮೇಯಿಸಿ'' ಹಾಗೇ ಸುಸ್ತಾಗಿರುವ ಶ್ರೀ ಕಣ್ಣ ಭಗವಾನ್ ತನ್ನ ಆ ಶ್ರಮ ಪರಿಹಾರಕ್ಕಾಗಿ ಈ ಊರಿನ ತೋಟವನ್ನೇ ಆರಿಸಿಕೊಂಡ! ಎಂದು ಅರ್ಥೈಸುತ್ತಿದ್ದರು! ವಿಭವಾವತಾರದಲ್ಲೂ ಅರ್ಚಾವತಾರದಲ್ಲೂ ಹೀಗೆ ಭಟ್ಟರಿಗಿದ್ದ ಸ್ವರೂಪೈಕ್ಯಪ್ರತಿಪತ್ತಿ ಅನ್ಯಾದೃಶವಾದುದು! ಎನ್ ಕನಿಯೇ ಎನ್ನುಮ್ = ಆ ತಿರುಕ್ಕಣ್ಣಪುರದ ಆರಾಮಗಳಲ್ಲಿ ಕಳಿತ ಹಣ್ಣುಗಳಂತೆ ಇದೋ ನನಗೆ ಪರಮಭೋಗ್ಯನಾದವನೇ! ಎಂದೇ ಈ ನನ್ನ ಮಗಳು ಹೇಳುತ್ತಿರುತ್ತಾಳೆ.

ಮನ್ನು ಮರ ಕೂತ್ತಾಡಿ ಮಹಿಳ್ನ್ವಾಯ್ ಎನ್ನುಮ್ = ಸಮುದಾಯ ಕೂಟಗಳಲ್ಲೂ ಮರಗಾಲು ಕಟ್ಟಿಕೊಂಡು ಎತ್ತರನಾಗಿಸಿಕೊಂಡು ನರ್ತನ ಗೈದು ಎಲ್ಲರಿಗೂ ಅದೇನು ಆನಂದ ನೀಡಿದೆ! ಕೃಷ್ಣ ಮರಗಾಲು ಕುಣಿತ ನಿಲ್ಲಿಸಿದರೂ ಜನ ಜಂಗುಳಿ ನೃತ್ಯಗೈಯ್ಯುತ್ತಲೇ ಇತ್ತು! ದೇವರು ಸಿರಿಬೀದಿಗಳಲ್ಲಿ ದಯಮಾಡಿಸಿ ಉತ್ಸವ ಮುಗಿದು ಸನ್ನಿಧಿಯೊಳಕ್ಕೆ ಹೊಕ್ಕರೂ ಜನ ಅಲ್ಲಲ್ಲೇ ನಿಂತು ಆನಂದ ಸಲ್ಲಾಪ ನಡೆಸುತ್ತಲೇ ಇರುವ ದೃಶ್ಯ ದಿವ್ಯದೇಶಗಳಲ್ಲಿ ಇಂದಿಗೂ ಕಾಣುವುದಷ್ಟೇ. ಇಂತಹ ಮರಗಾಲ್ ನಡೆಯ ನರ್ತನ ಭಗವಂತನಿಗೆ ಒಂದು ಹೆಚ್ಚಳವೇ? ಎಂಬ ಕೇಳಿಕೆಗೆ ಉತ್ತರವಿಷ್ಟೆ. ಒಳ್ಳೆಯ ಬ್ರಾಹ್ಮಣರಿಗೆ ಹಣ ಸೇರಿದರೆ ಯಜ್ಞದಾನ ಸಂತರ್ಪಣೆಗಳಲ್ಲೂ, ಕಾಮಿಗಳಿಗೆ ಧನ ಸೇರಿದರೆ ಮದುವೆ ಮುಂತಾದ ಅನವಶ್ಯಕವಾದ ಅದ್ಧೂರಿ ಸಮಾರಂಭಗಳಲ್ಲೂ, ಖರ್ಚು ಮಾಡಿಬಿಡುವಂತೆ, ಗೊಲ್ಲರಿಗೆ ಐಶ್ವರ್ಯ ಹೇರಳವಾದಾಗ ಮರಗಾಲ್ ಕುಣಿತಕ್ಕೇ ಎಲ್ಲವನ್ನೂ ಉಡಾಯಿಸಿ ಬಿಡುವುದೇ ಪದ್ಧತಿ.

ಈಗ ಇವಳ ಬಾಯಲ್ಲಿ ತಿರುಪತಿ ತಿಮ್ಮಪ್ಪ ಬಂದ! ವಡ ತಿರುವೇಙ್ಗಡಮ್ ಮೇಯ ಮೈನ್ವಾ ಎನ್ನುಮ್ - ಉಭಯ ಲೀಲಾ ನಿತ್ಯ ವಿಭೂತಿಗಳೂ ಕ್ರಮವಾಗಿ ಗಿರಿಯ ಮೆಟ್ಟಲು ಮೇಲೇರಿ, ಮೇಲಿಂದಿಳಿದು ಕಲೆಯುವ ಸಂಧಿಸ್ಥಾನ ಉತ್ತರ ವೇಂಕಟಾಚಲ. ಅಲ್ಲಿ ನಿತ್ಯವಾಸ ಮಾಡುವ ಓ ಯುವಾ ಕುಮಾರನೇ! ನಾನು ಮಾತ್ರ ಓರ್ = ಈ ನತದೃಷ್ಟೆ ನಾಯಕಿ ಆ ಭಾಗ್ಯ ಹೊಂದಿಲ್ಲವೇನೋ! ವೆನ್ನು ಅಶುರರ್ ಕುಲಮ್ ಕಳೈನ್ವ ವೇನ್ವೇ ಎನ್ನುಮ್ = ರಾವಣನ ಪರಿಕರಗಳಾಗಿದ್ದ ಖರದೂಷಣಾದಿ ೧೪ ಸಾವಿರ ರಾಕ್ಷಸರನ್ನೂ, ನೇರಾ ರಾವಣನನ್ನೂ ಲಂಕೆಯ ರಾಕ್ಷಸ ಕುಲಗಳೊಂದಿಗೆ ನಾಶ ಮಾಡಿದವನೇ! ನನ್ನ-ನಿನ್ನ ಮಿಲನಕ್ಕೆ ವಿರೋಧಿಯಾಗಿರುವುದನ್ನು ಕಳೆಯೆಯಾ? ವೇನ್ವೇ = ಎಲೈ ಪ್ರಿಯತಮಾ! ''ರಾಮೋ ರಾಮೋ ರಾಮ ಇತಿ ಪ್ರಜಾನಾಂ ಅಭವನ್ ಕಥಾಃ'' ನಾನೋರ್ವಳು ಮಾತ್ರ ನಿನ್ನ ಪ್ರಜೆಯಲ್ಲವೋ? ನೀನು ನನ್ನನ್ನು ನಾನು ನಿನ್ನನ್ನು ನೋಡಬಾರದೋ?

ವಿರೈ ಪೊಳಿಲ್ ಶೂಳ್ ತಿರನರೈಯೂರ್ ನಿನ್ನಾಯ್ ಎನ್ನುಮ್ = ಆ ಶ್ರೀರಾಮನೇ ತಿರುನರೈಯೂರಲ್ಲಿ ತ್ರೇತಾಯುಗಕ್ಕೆ ಮೇಲೆಯೂ ದರ್ಶನ ನೀಡಲೆಂದೇ ಇರುವೆದು. ಬಿರಿದು ಅರಳುತ್ತಲೇ ಇರುವ ಹೂ ದೋಟಗಳೇ ತುಂಬಿರುವ ದಿವ್ಯದೇಶ. ಸೀತಾದರ್ಶನವಾದಾಗ

ಉಂಟಾದ ಆನಂದ ಇಲ್ಲಿ ಈಗಲೂ ಕಾಣುತ್ತಿದೆ. ಆದುದರಿಂದಲೇ ನನ್ನನವನಗಳು ಅಷ್ಟೊಂದು ಹುಲುಸಾಗಿರುವುದು, ಸೀತಾರಾಮ ದಿವ್ಯದಂಪತಿಗಳ ಕಟಾಕ್ಷದಿಂದ. ನನಗೆ ಮೊಗತೋರದಿದ್ದರೆ ಅಮೇಲೆ ಆ ಜಾನಕಿ ನಿನಗೆ ಮೊಗ ತೋರುವಳೇ? ಮೈಥಿಲೀ ಕೃಪಾಭಿಮಾನಪಾತ್ರೆಯಲ್ಲವೇ ಈ ದಾಸಿ?

ತುನ್ನು ಕುಳಲ್ ಕರು ನಿರತ್ತು ಎನ್ ತುಣೈಯೇ ಎನ್ನುಮ್ = ಒತ್ತಾದ ಕೇಶಪಾಶ. ನೀಲಮೇಘ ನಿಭ ಶ್ಯಾಮಳಮೂರ್ತಿ! ಎನ್ ತೊಣೆಗಾರಾ! ಸೀತಾ ವಿಯೋಗದಲ್ಲಿ ಜಡೆ ಕಟ್ಟಿದ್ದ ತಲೆಗೂದಲನ್ನು ಆಕೆ ಬಾಚೋಣ ಪ್ರಶಸ್ತ ಕೇಶನಾದೆ! ಓ ಸ್ನಿಗ್ಧ ನೀಲ ಕುಟಿಲ ಕುಂತಲನೇ! ನಾನು ಪೂರ್ವಾಽಽಶ್ರಮದಲ್ಲಿ ನಿನ್ನನ್ನು ಸುತರಾಂ ಮರೆತಿದ್ದಾಗಲೂ ನನ್ನ ಇರುವಿಕೆಯೆಂಬ "ಸತ್ತೆ"ಗಾಗಿ ನನ್ನೊಳಗೆ ಇದ್ದು ಹೊರಗೂ ರೂಪ ತೋರಿ ಅನನ್ಯಾರ್ಹನನ್ನಾಗಿಸಿ ನನ್ನೊಡನೆ ದಿವ್ಯಾಽಽತ್ಮರತಿಯಿಂದ ರಮಿಸಿ! ಈಗ ನನ್ನನ್ನು ಉಪೇಕ್ಷಿಸುವಿಯಾ? ಈ ಕಾಂತೆಗೆ ಸ್ವಾಮಿ ಕಾಂತನೂ ಪಾಲಕನೂ ಆಗಿರುವುದು ತುಣೈ ಎನ್ನುವುದರ ಭಾವ. ಪ್ರಾಪ್ಯ ಎಂದರೆ ಹೊಂದಲ್ಪಡಬೇಕಾದ ಪುರುಷಾರ್ಥವೂ ನೀನೇ! ಹೊಂದಿಸಿ ಕೊಡುವ ಪ್ರಾಪಕನೂ ನೀನೇ.

ತುಣೈಮುಲೈ ಮೇಲ್ ತುಳಿ ಶೋರ ಶೋರ್‌ಹಿನ್ನಾಳೇ = ಎಂದು ಹೇಳುತ್ತಲೇ, ಕಣ್ಣೀರು ಮೇಲಿನಿಂದ ಕೋಡಿ ಹರಿದು ಜೋಡಿಮೊಲೆ ಮೇಲೆ ದುಮಿಕಿರಲು ಸೋತು ಸೊರಗಿ ಹೋಗುತ್ತಿದ್ದಾಳೆ ಈ ನನ್ನ ಮಗಳು. ಓ ಕಣ್ಣಾ! ಇದೋ ಕೆಳಗೆ ದೊಪ್ಪನೆ ಬಿದ್ದೇ ಬಿಟ್ಟಳಲ್ಲೋ! ಅಹಹ! ಎಂತಹ ಜೋಡಿಯೋ! ನಿನಗೂ ತೊಣೆಯಾಗಿದ್ದುದು ಈ ದುಃಸ್ಥಿತಿಗೆ ಬಂತಲ್ಲೋ! ನಿನಗೆ ಉಪಯೋಗಕ್ಕೆ ಬಾರದ ಈಕೆಯ ಸ್ತನಗಳೂ ಸಂಕುಚಿತವಾಗಿಬಿಟ್ಟವಲ್ಲಾ! ತಾನೂ ಅಳಿದಳಲ್ಲಾ! ವಿರಹದಲ್ಲೂ ತೊಣೆ ಎನ್ನಬೇಕಾದರೆ ನಾನೇನು ಈ ತಾಯಿಯಾದವಳು ತೊಣೆಯಲ್ಲವೋ? ನನ್ನೀ ಮಗಳು ಯಾರನ್ನು ಸಂಗಾತಿಯನ್ನಾಗಿ ಭಾವಿಸಿದಳೋ, ಭಾವಿಸುತ್ತಲೇ ಇರುವಳೋ, ಅತ ಸಿಗದಿದ್ದರೂ ಅವನನ್ನೇ ಕುರಿತು ಪಲುಕುತ್ತಾ ಮೋಹವಾಂತಳಲ್ಲಾ! ಎಂತಹ ಪರಿಸ್ಥಿತಿಯಲ್ಲೂ ನಿತ್ಯಯುಕ್ತರಿಗೆ ನಿತ್ಯ ದೈವದ ಸೇರ್ಪಡೆಯ ಬಯಕೆ ಇರುವವರಿಗೆ, ತಾಯಿ, ಗೆಳತಿ, ಸಾಮಾನ್ಯ ವಿಷಯ ಬೋಧಿಸಿರುವ ಗುರು, ವಿಷಯಾಂತರಗಳು, ವೈದ್ಯ ಮಂತ್ರ ತಂತ್ರಗಳೆಂಬುವೆಲ್ಲಾ ತ್ಯಾಜ್ಯ ಎಂಬುದು ಈ ಪರಕಾಲ ಸತಿಯ ಅವಸ್ಥಾ ವಿಶೇಷದಿಂದ ತಿಳಿದು ಕೊಳ್ಳಬೇಕಾದ ಸೂಕ್ಷ್ಮ ಮುಖ್ಯ ವಿಚಾರ. **ಇತರರೂ ರಕ್ಷಕರಂತೆ ಬಂದರೂ ಈಕೆಗೆ ಅವರ ಬಾಹ್ಯಸಂಗಬೇಡ. ಈಶ್ವರ ಉಪೇಕ್ಷಿಸಿದರೂ ಅವನ ಸಂಗವೇ ಬೇಕು. ಇದೆಂತಹ ದಿವ್ಯ ಬವಣೆ!**

ಮೊದಲು ಜೀವಾತ್ಮನ ಸ್ವಸ್ವರೂಪ ಎಂದರೆ ಶೇಷತ್ವ ಪಾರತಂತ್ರ್ಯಗಳ ನಿಶ್ಚಿತ ಅರಿವು ಪಡೆದು, ತದನುರೂಪವಾದ ಪುರುಷಾರ್ಥದಲ್ಲಿ ನಾವಿಳಿಯ ಬೇಕು. ಇದು ತಾಯಿಯ ಸಿದ್ಧಾನ್ತ. ದೇವರೇ ಉಪಾಯವೆಂಬ ದಾರ್ಢ್ಯ ವಿರಲೇಬೇಕು. ಸ್ವಾತಂತ್ರ್ಯವಹಿಸಬಾರದು. ಮುನ್ನುಗ್ಗಿ ನಡೆಯದ ಹೆಣ್‌ತನ ಇತ್ಯಾದಿಗಳನ್ನು ಗಮನಿಸಿಯೇ ಪ್ರಪನ್ನನೂ ನಡೆಯಬೇಕು. ಆದರೆ ಮಗಳ ಸಿದ್ಧಾನ್ತ, ಲೋಕ ಶಾಸ್ತ್ರ ಮರ್ಯಾದಾ ಪಾಲಕರಾಗಿ ಇರಬೇಕಾದುದು ಯದ್ಯಪಿ ಸಾಮಾನ್ಯಧರ್ಮ. ಕೇವಲ ಭಗವಂತನ ಸೌಂದರ್ಯಾದಿಗಳಿಗೇ ಜೋಲು ಬೀಳಬಾರದೆಂಬ ನಿಮ್ಮ ಉಪದೇಶ ನನಗಲ್ಲ. ಅದೆಲ್ಲಾ, ಭಗವಂತನಲ್ಲಿ ಮಂದಾಽಭಿ ಮುಖ್ಯ. ದೈಹಿಕ ಸೌಖ್ಯ, ಸ್ವರ್ಗಾದಿ ಕ್ಷುದ್ರ ಫಲಾಧಿಕಾರಿಗಳಿಗೆ ಸಂಬಂಧಪಟ್ಟದ್ದು. ಅಯಾಯಾ ಕಾಮ್ಯಫಲಗಳಿಗಾಗಿ ಅವರವರು ಲೌಕಿಕ ಅಂತಸ್ತಿನಿಂದಲೇ ಮೆರೆಯಲಿ. ನಾನೀಗ ಭಗವಂತನೋರ್ವನ ಅನನ್ಯ ಅನಂತ ನಿರಪಾಯ ಮಹಾಸತ್‌ಫಲರೂಪವಾದ ಅತನ ದಿವ್ಯಭೋಗಕ್ಕೇ ಅನುರೂಪವಾಗುವಂತೆ ನನ್ನ ಆ ಸರ್ವೇಸಾಮಾನ್ಯ ಧರ್ಮಗಳ ಬಾಹ್ಯ ಸ್ವರೂಪವನ್ನು ತ್ಯಾಗಮಾಡುತ್ತೇನೆ. ಅಮ್ಮಾ! ನೀನು ಹೇಳಿದಂತೆ ನನ್ನದು ಸ್ವರೂಪಾನುರೂಪ ಭೋಗವಲ್ಲ. ಭೋಗಕ್ಕೆ ಸರಿಹೊಂದುವ ಭೋಗಾನುರೂಪ ಸ್ವರೂಪವೇ! ಪ್ರಪನ್ನನ ವಿಕಸಿತ ಭೂಮಿಕೆಯ ನಾನಾಬಗೆಯ ಅಪೂರ್ವ ರೋಮಾಂಚನಕಾರಿಯಾದ ನಡವಳಿಕೆಗಳೆಲ್ಲಾ ಲೋಕೋತ್ತರವಾಗಿ ಇದೇ "ತಿರುನೆಡುನ್ತಾಂಡಹ"ದಲ್ಲಿ ಮುಂದೆ ವರ್ಣಿತ. ನಮ್ಮಾಳ್ವಾರರಿಗೆ ಪರತ್ವದಲ್ಲಿ ಮುಕ್ತಿಯಾದರೆ ಇವರಿಗೆ ಅರ್ಚಾವತಾರದಲ್ಲೇ ಮುಕ್ತಿ. ಅಂತೆಯೇ ಈ "ಹಿರಿಸಿರಿ ದಂಡಕ"ಕ್ಕೆ ಶ್ರೀರಂಗದಲ್ಲಿ ಈಗಲೂ ಅರ್ಚೈಯರ್ ವ್ಯಾಖ್ಯಾನಾಭಿನಯರೂಪದಲ್ಲಿ ಮನ್ನಣೆಯಿದೆ. ಷಡಂಗಕಾರರಾದ ತಿರುಮಂಗೈಮನ್ನನ್ ಇವರ ಈ ಕೃತಿ ಕೊಟ್ಟಕೊನೆಯದಾದರೂ, ನಾಲಾಯಿರಂ ಅನುಪೂರ್ವೀಕ್ರಮದಲ್ಲಿ "ಹಿರಿಯ ಸಿರಿಯುಲಿ"ಯೊಂದಿಗೇ ಪಾರಾಯಣ, ಶಾತ್ತುಮೊರೈ ಪದ್ಧತಿಯಂತೆ ಇಲ್ಲಿಗೆ ಸೇರಿಸಲಾಯಿತು. ಮುಂದೆ ಇದೇ ಕಲಿಯನ್ ಇವರ "ಕಿರಿಸಿರಿಮಡಲ್" ಹಾಗೂ "ಹಿರಿಸಿರಿ ಮಡಲ್"ಗಳಲ್ಲಿ ಬರುವ, ತಿರುಮಲೈ ತಿಮ್ಮಪ್ಪನ ಶಾಬ್ದಿಕ ಉಲ್ಲೇಖದ ಭಾವವಾಗಿ ಮುಗಿಯುತ್ತದೆ. ಇವರ, ಸಿರಿ ಬೆಳೆನಾಟ್ಯ **ತಿರುವೇಬುಕೂತ್ತಿರುಕ್ಕೈ** ಪ್ರಬಂಧವೊಂದರಲ್ಲಿ ಮಾತ್ರ ತಿಮ್ಮಪ್ಪನ ಉಲ್ಲೇಖವಿಲ್ಲ. ಮಧುರಕವಿಯವರೂ. ತೊಂಡರಡಿಪ್ಪೊಡಿಯವರೂ,

"ವೇರೊನ್ನುಮ್ ನಾನ್ ಅರಿಯೇನ್"

"ಅವಿದಿತ ವಿಷಯಾನ್ತರಃ ಶಠಾರೇಃ" "ಮತ್ತೊನ್ನುಂ ವೇಂಡಾ"

ಎಂಬಂತೆ, ತಿಮ್ಮಪ್ಪನ ಹೆಸರನ್ನೇ ಎತ್ತಿಲ್ಲ. ಹೀಗೆ ೧೦ ಆಳ್ವಾರ್ ಶರಣರು ತಿರುಮಲೇಶನ ಬಗ್ಗೆ ಅನುಭವಿಸಿದ ಸಂಕ್ಷಿಪ್ತರಸಾನುಭವ ಅಲ್ಲಿಗೆ ಮುಗಿಯುತ್ತದೆ. "ರಾಮಾನುಜಮನೂತ್ತನ್ದಾದಿ" "ಅಧಿಕಾರ ಸಂಗ್ರಹ" ತಿರುವಾಯ್‌ಮೋಳಿ ನೂತ್ತಂದಾದಿ, ವರ್ಣನ ಪದ್ಯ, ವರ್ಣನ ಗದ್ಯಗಳು ೩ ಆಚಾರ್ಯರುಗಳ ಕೃತಿ, ತಿಮ್ಮಪ್ಪನನ್ನು ಕುರಿತಿವೆ.

ಪೆರಿಯ ತಿರುಮಡಲ್ ಕಣ್ಣೆ ಎಂಬ ದ್ವಿಪದಿ ೬೯ ತಮಿಳ್ ತಿರಳ್

ಕಾರಾರ್ ತಿರುಮೇನಿ ಕಾಣುಮಳವುಮ್ ಪೋಯ್ ಪೀರಾರ್ ತಿರುವೇಙ್ಗಡಮೇ ತಿರುಕ್ಕೋವಲೂರೇ

ಕನ್ನಡ ನೆರಳ್

ಕಾರ್‌ಕಪ್ ತುಂಬಿಹ ಸಿರಿಮೂರುತಿ ಕಾಣ್ ತನಕವೂ ಪೋಗಿ ಶ್‌ರೀ (ಶ್ರೀ) ಹಾಯುವ ಗುಣ ಸಿರಿವೆಂಕಟಕೇ! ತಿರಕ್ಕೋವಲಿಗೇ!

ಈ ತಿರುಮಜ್ಪೈಯಾಳ್ವಾರರ ಭಕ್ತಿಪ್ರವಾಹ ಉಕ್ಕಿ ಉಕ್ಕಿ ಮೇಲ್ ಏರುತ್ತಿದೆ. ದೇವರು ತನ್ನ ರೂಪ ಸೌಂದರ್ಯಾದಿಗಳನ್ನು ಇವರಿಗೆ ವಿಶೇಷವಾಗಿ ತೋರಿಯೇ ಅಪ್ರಾಪ್ತ ಕಾಮಿನೀ ರೂಪಾದಿಗಳಲ್ಲೇ ಅಸಭ್ಯರಾಗಿ ಬಿದ್ದಿದ್ದ ಇವರನ್ನು ಮೇಲ್ ಎತ್ತಿದನಷ್ಟೆ. ಹಿಂದಿನ ಆಯಾಯಾ ರೂಪವತಿಯರ ವಿರಹವೇದನೆಗಳೆಲ್ಲಾ, ಈಗ ದಿವ್ಯಭಗವನ್ ಮೂರ್ತಿಗಳ ವಿರಹದ್ಗಲ್ಲಿ ಪರಿವರ್ತಿತವಾಗಿ ಪರಿವರ್ಧಿತವೂ ಆಗಿಬಿಟ್ಟಿವೆ! ಮಾನವನ ಪ್ರೇಮ ಪಾತ್ರತೆಯ ಸರಿನಿಟ್ಟನ್ನು ಸ್ವಾಮಿ, ಇವರ ಜೀವನಕ್ಕೆ ತಂದುಕೊಟ್ಟ. ಇವರ ಉಳಿದ ೪ ದಿವ್ಯ ಪ್ರಬನ್ಧಗಳಲ್ಲಿ ಇವರ ನಾನಾ ಪ್ರಜ್ಞಾವಸ್ಥೆಗಳ ಪರಿಚಯವಾಗುತ್ತದೆ. ಈ "ಕಿರಿಯ ಸಿರಿಮಡಲ್" ಮತ್ತು ಮುಂದಿನ "ಹಿರಿಯ ಸಿರಿಮಡಲ್" ಎಂಬ ಉಭಯ ದಿವ್ಯಪ್ರಬನ್ಧ ಕೃತಿಗಳ ಪರಿಚಯ ಪಡೆದು ದೈವೀ ವಿರಹಿಣಿಯ ಸಾಹಸದ ಶಿಖಿರಾಗ್ರಕ್ಕೆ, ನಾವೂ ಏರಬೇಕೆಂಬ ಭಗವಂತನ ಸಹಜ ಪ್ರಪ್ರಥಮ ಛಂದಕ್ಕೆ ನಾವೂ ಅನುಪ್ರಯತ್ನಶೀಲರಾಗಿ ಸ್ಪಂದಿಸೋಣ.

ಸರ್ವೇಶ್ವರನೇ ಶರಣರ ಪಾಲಿಗೆ, ಸರಿ ಹಿರಿಪತಿ. ಯಾವೊಂದನ್ನೂ, ಯಾರೊಬ್ಬರನ್ನೂ ಬಿಡದೆ ಅಡಗಿಸಿಕೊಂಡಿರುವ ಆ ವಿಶ್ವಾssತ್ಮನ ಸರ್ವಸಮಷ್ಟಿ ಪರಮೋತ್ತಮ ಘಟಕದ ಸರ್ವಸೇವಾಕಾಂಕ್ಷೆಯೇ! ಅಳ್ವಾರರ ಹಿರಿಯಾಸೆ. ಅದಕ್ಕೊಂದು "ಡಿವೈನ್ ಪರ್‌ಸಾನಿ ಫೈಡ್" ದಿವ್ಯ ವ್ಯಕ್ತೀಕೃತ ಪಾವನ ಸುಂದರತಮ ರೂಪಗಳೇ. ಸರ್ವಕಲಾ ಮೂರ್ತಿಗಳು ವಿಶ್ವಾssತ್ಮನಿಗೂ ಇವುಗಳಲ್ಲಿ ಬಲು ಸ್ವಯಂ ಅಭಿಮಾನ. ಮಾನವ ಎಲ್ಲಿಯವರಿಗೆ ಮಾನವ ದೇಹಧಾರಿಯಾಗಿರುವನೋ, ಅತನ ಪ್ರಗತಿಗೆ ಒಂದು ಆದರ್ಶ ಪವಿತ್ರ ಸುಂದರ ಸುಖಸ್ಪರ್ಶ ನೀಡುವ ಮೂರ್ತರೂಪು ಅನಿವಾರ್ಯ. ಅದೂ ಸರ್ವರಿಗೂ ಸುಲಭ, ಸುಶೀಲ, ವತ್ಸಲವೂ ಆಗಿದ್ದರೇ ಮಾನವ ಜೀವನದ ಮೇಲ್ಮೈಗೆ ಒದಗಿ ಬರುವುದು. ಇದೇ ಅರ್ಚಾಮೂರ್ತಿ. ಅವರವರ ಅಭಿರುಚಿಗೆ ಸಂದು ಬರುವ ನಾನಾ ಬಗೆಯ ಮಾಧ್ಯಮಗಳು.

ಈ ಆಳ್ವಾರ್ ಶರಣರು ಅತನ ರಮಣಿಯರು. ಆ ಲೋಕಭರ್ತಾ ಈ ಜೀವಸತಿಯನ್ನು ತನ್ನದಾಸಿಯನ್ನಾಗಿಸಿ, ಈಕೆಯಿಂದ, ಸರ್ವಸೇವೆಯನ್ನೂ ಕೈಗೊಳ್ಳಲು ವಿಳಂಬ ಮಾಡಕೂಡದು. ಈ ತಾಕೀತೂ ಇವರದು ಇಲ್ಲಿ ಗಮನಾರ್ಹ. ಬಾಹ್ಯ ಶರೀರ ಇಂದ್ರಿಯಾದಿಗಳಿಂದಲೂ, ಅತನ ಭೋಗಾsನುಭವದ ಸಂವೇದನೆಯ ಪರಮಾಹ್ಲಾದ ಸ್ಪರ್ಶ ಆಗುವಂತಿರಬೆಕು, ಈ ಅಗ್ರಹವೇ ಶರಣ ಸಂತರ ತೀವ್ರತೆ! ನೇರಾ ತನ್ನ ಆ ದಿವ್ಯರೂಪವನ್ನು ತೋರಿಸಿ ನನಗೀಗ ನೀಡುತ್ತಿಲ್ಲ ಆ ಸೌಭಾಗ್ಯವನ್ನು! **"ಈ ಅತ್ಯುತ್ಕಟ ಅತಿ ಪರಮೋಚ್ಚ ಶರಣರಿಗೆ ಇದೇ "ವಿರಹ" ಎನ್ನುವುದು".**

ಈ ಅಗಲಿಕೆಯೂ ವಿಶ್ವಪತಿಯಿಂದಲೇ ಬಂದುದು. ಇಂತಹ ಗಂಡನನ್ನು ಈಗ ನನ್ನ ಛಿಮಾರಿಗೆ ಒಳಪಡಿಸಿಯೇ ಬಿಡುತ್ತೇನೆ. ಅಗ್ನಿಗೂ ಅಗ್ನಿಯಾದವನೇ ನೇರಾ ಸ್ವಸಾಕ್ಷಿಯಾಗಿ ನನ್ನ ಕೈ ಪಿಡಿದು ರೂಪನ್ನು ಈಗ ತೋರದಿರುವುದು, ಅಂದರೆ ಅದನ್ನು ನನ್ನೀ ಸರ್ವೇಂದ್ರಿಯಾsನುಭವಕ್ಕೆ ಬರುವಂತೆ ನೀಡದಿರುವುದು ನ್ಯಾಯವೇ? **"ಅವನೇನೂ ದುರ್ಗುಣಗಳ ಗಣಿಯಲ್ಲ. ಸದ್ ಗುಣ ಮಣಿ! ಭಯಂಕರರೂಪನಲ್ಲ. ಸದಾ ಅಭಯಂಕರ ಸೌಮ್ಯ ರೂಪ".** ಯಾರು ಬೇಕಾದರೂ ಸದರದಿಂದ ಸನಿಯಿಸಬಹುದು. ಏನೊಂದೂ ಅಪಾಯವಿಲ್ಲದ ಹಾಗೂ ಇರುವ ಅಪಾಯಗಳನ್ನೆಲ್ಲಾ ಓಡಿಸುವ ಉಪಾಯಗಾರನಾದ ಕಲಾವಿದ! ಓಹೋ, ನನ್ನ ಉತ್ಕಟತೆ ಯನ್ನು ಬೆಳೆಸಲೆಂದೇನೋ ಈ ವಿರಹದಾನ? ಆಗಲಿ, ಈಗ ಈ "ಮಡಲ್" ಎಂಬ ಈ ಕೊಟ್ಪಕೊನೆಯ ಬ್ರಹ್ಮಾಸ್ತ್ರವನ್ನು ಆ ಪರಬ್ರಹ್ಮನ ಮೇಲೆಯೇ ಪ್ರಯೋಗಿಸಿ ಬಿಡುವೆನು. ಐಹಿಕ ಗ್ರಾಮಸಮಾಜ, ನಡುವಿನ ಜನಪದಸಮಾಜ, ಕೊನೆಗೆ ವಿಶ್ವಸಮಾಜದ ಬೆಂಬಲಪಡೆದೇ, ಅದರ ಮೂಲಕವಾಗಿಯೇ, ಆತನ ಸಮಷ್ಟಿ ರೂಪಿನ "ಪ್ರತಿಮಾ ಪ್ರತಿನಿಧಿ" ಎಲ್ಲೆಲ್ಲಿದೆಯೋ, ಅಭಿವ್ಯಕ್ತವೋ ಅಂತಂತಹ ಎಡೆಗಳಿಗೆಲ್ಲಾ ಹೋಗುತ್ತೇನೆ. ಅದೂ ಉಪವಾಸ ವ್ರತ ತೊಟ್ಟೇ! ತಲೆ ಜಡೆಯನ್ನು ಹಾಕದೆ ಬಿಚ್ಚಿದ ತಲೆಕೂದಲಿಯಾಗಿಯೇ! ತಾಳೆ ಮರದ ಮಟ್ಟೆಯನ್ನೇ ಕುದುರೆಯಂತೆಸಗಿ, ನನ್ನೀ ಪತಿದೇವನ ಫೋಟೋ ಒಂದನ್ನು ಕೈಯಲ್ಲಿಹಿಡಿದು, ಅರಶಿನದ ಸಾದಾ ಸೀರೆಯುಟ್ಟು, ಮನೆಮಠ ಬಿಟ್ಟು ಸೇರಿಸುತ್ತೀರೋ? ಇಲ್ಲವೋ ಇದೋ ನನ್ನ ಪತಿ ನನ್ನನ್ನು ತೊರೆದಿದ್ದಾನೆ, ಎಂದು ಡಂಗುರ ಹಾಕುವುದು ಖಂಡಿತ!

ಪನ್ನೆ ಮಟ್ಟೆಗೆ ಪರ್ಯಾಯ ಈ "ಮಡಲ್" ಎನ್ನುವುದು ತಮಿಳ್ ಶಬ್ದ! ಬಿಡಿ ಬಿಡಿಯಾಗಿ ಹಾಗೂ ಒಟ್ಟಿಗೇ ಸಮಗ್ರ ಜ್ಞಾನ ಕ್ರಿಯೋಪಯೋಗಿಯಾಗಬೇಕಾದರೆ "ವಿಜ್ಞಾನ", ಜೀವನದ ಸಕಲಾಂಗ ಪರಿಪೂರ್ಣತೆ, ಎಲ್ಲರೊಡನೆ ಸೇರ್ಪಡೆ, ಕಾಮುಕವಲ್ಲದ ಪೌರುಷ ಪರಾಕ್ರಮ ಇವು ಗಂಡಸಿನ ಅಸಾಧಾರಣ ಲಕ್ಷಣಗಳು. ನಿಜವಾದ ಹೆಂಗಸಿಗೆ ಇರಬೇಕಾದುದು. ನಾಚಿಕೆ, ಮುಗ್ಧತೆ, ಸಂಕೋಚ, ಗಾಂಭೀರ್ಯಗಳು. ದೇವರಲ್ಲಾಸೆ ಎಷ್ಟೇ ಉಕ್ಕಿ ಬಂದರೂ ತನ್ನ ಒಳಭಾವಗಳನ್ನು ಅದುಮಿಡುವ ಪ್ರಶಾಂತಿ.

ದೇವರೋ ಪರಿಪೂರ್ಣ ಧೀರೋದಾತ್ತನಾಯಕ. ಈ ಶರಣ ನಾಯಕಿಯೋ ತುಲ್ಯ ಶೀಲ ವಯೋವೃತ್ತವತಿ. ತುಂಬಿದ ಗರತಿ. ಸನ್ ಮಹಿಳಾ ಪತಿವ್ರತೆ. ಮೊಟ್ಟಮೊದಲಿಗೆ ಈ ಜಗದುದ್ಯಾನವನದಲ್ಲಿ, ಸಖಿಯರೊಡನೆ ಪುಷ್ಪಾಪಚಯಕ್ಕಾಗಿ ಬಂದಿದ್ದಾಳೆ. ಪರಮಾತ್ಮನ ರೂಪಿನ ಪರಿಚಯವಾಗಿ ದೈವಯೋಗದಿಂದ ಶರಣ ಶರಣ್ಯ ಈಶ್ವರ ಮಾನಸಿಕ ಸೇರ್ಪಡೆಯಾಯಿತು. ಆದರೆ ಕಾಯಕಸೇವಾ ಸಮಾಗಮವಾಗುವುದಿಲ್ಲ. ಈ ಪರಕಾಲ ನಾಯಕಿ ಬಲುನೊಂದು ಬೆಂಡಾದಳು! ಈ ಪತಿ ಸೇವಾಽಲಾಭ ರೂಪಿ ವಿರಹ ತಾಳಲಾಗಲಿಲ್ಲ. ಕೊಟ್ಟಕೊನೆಗೆ ಈ "ಮಡಲ್" ಎಂಬ ಸ್ತ್ರೀಸಾಹಸಪ್ರವೃತ್ತಿಯಲ್ಲಿ ಇಳಿದಿದ್ದಾಳೆ. ತಮಿಳ್ ಅಲಂಕಾರ ಶಾಸ್ತ್ರದಲ್ಲಿ ಈ ವಿರಹಿಣಿಯ ಕೆಲಸವನ್ನು "ಮಡಲ್" ಎಂದು ಕರೆದಿದ್ದಾರೆ. ಪತಿ ಪರಿತ್ಯಕ್ತೆಯಾದವಳು ತನ್ನತನ ತೊರೆದು ಬೀದಿಗಿಳಿಯುವಷ್ಟು ನಾರೀ ವೀರ್ಯ ಪ್ರದರ್ಶನ ಸಂವಿಧಾನ ಯಾರಿಗೆ ಬೇಕಿಲ್ಲ? ದೇವರಿಗೂ ಈ ಮಡಲ್ ಬಲು ಇಷ್ಟ. ಜಗತ್ತಿಗೊಂದು ಭಕ್ತಿಯ ಮೇರು ಶಿಖರದ ಆದರ್ಶ ತೋರಬೇಕು. ತನ್ನ ಗುಣ ಸೌಂದರ್ಯಗಳಿಗಾಗಿ ಪ್ರತಿ ಮಾನವನೂ, ಪ್ರತಿ ಮಾನವಳೂ ಹಾತೊರೆಯಲೇ ಬೇಕೆಂಬ ದಿವ್ಯ ಶಿಕ್ಷಣದ ಅಗತ್ಯವಿದೆ. ಹೀಗಿಲ್ಲದಿದ್ದರೆ ಜನ ಕ್ಷುದ್ರ ಕಾಮಗಳಲ್ಲೇ ಬಿದ್ದು ಅಧೋಗತಿಗೆ ಹೋಗಬೇಕಾಗುತ್ತದೆ. ಮಾನವರ ಸದ್ ವಿಕಾಸಕ್ಕಾಗಿ, ತನ್ನ ಸಂತೋಷಕ್ಕಾಗಿ ಇವರ "ಮಡಲ್"ಗೆ ಇಂಬು ನೀಡುತ್ತಾನೆ, ಸರ್ವೇಶ್ವರ. ಇದನ್ನು ಅನುಷ್ಠಿಸುವಾಗ ಈ ಆಳ್ವಾರ್ ಮೊಟ್ಟಮೊದಲಿನ ಸ್ಥಾನವನ್ನು ತಿಮ್ಮಪ್ಪನಿಗೇ ಕೊಟ್ಟಿದ್ದಾರೆ. ಬಳಿಕ ಸುಮಾರು ೨೨ ದಿವ್ಯ ಯಾತ್ರಾಸ್ಥಳಗಳ ಶ್ರೀಮೂರ್ತಿಗಳನ್ನೆಲ್ಲಾ ಸಂಧಿಸಿ "ಎದ್ದರಾಳಲ್ಲಾ!" ಎಂಬಂತೆ ಸಾಹಸ ತೋರಿದ್ದಾರೆ. ಹಾಗೆಲ್ಲಾ ಸ್ತ್ರೀ ಸ್ವರೂಪನಾಶಕವಾದ ಸ್ವತಂತ್ರ ವಿಪ್ಲವ ಭಾವನೆಯಿಂದ ಇಳಿಯುವವರಲ್ಲ ಈ ಶರಣರು. ಭಕ್ತಿಯ ಮಜಲುಗಳಲ್ಲಿ ಒಂದು ಇತರ ನಿರಪೇಕ್ಷ ಹಾಗೂ ಸುಂದರವಾದ ಘಟ್ಟ ಈ "ಮಡಲ್". ಮುಂದಿನ "ಪೆರಿಯ ತಿರುಮಡಲಿ"ನಲ್ಲಿ ಇವರೇ ಸುಮಾರು ೪೦ ದಿವ್ಯದೇಶಗಳಿಗೆ ತಮ್ಮೀ ಸಾಹಸವನ್ನು ಹಮ್ಮಿಕೊಳ್ಳುವ ಚೆಲುವು ಕಾದಿದೆ. ಈ ಚಿಕ್ಕ ತಿರುಮಡಲಿಗೆ ಒಂದಕ್ಕಿರಡರಷ್ಟು ಅದು ಬೆಳೆಯುವುದು. ಅಂತೆಯೇ ಅದು ಹಿರಿ ಸಿರಿಮಡಲ್! ಅನೇಕ ದೇವಾಲಯಗಳಲ್ಲಿ ಶುಕ್ರವಾರ ಈ ದಿವ್ಯ ಪ್ರಬನ್ಧನ ಸೇವಾಕಾಲ ಪಾರಾಯಣ ತಪ್ಪದೆ ನಡೆಯುತ್ತದೆ. ಲಕ್ಷ್ಮಿಯ ಒಳ ಅಂತರಂಗ ತರಂಗ ಸಂವೇದನೆ ಇವುಗಳಲ್ಲಿವೆ.

'ಕಲಿಃ ಶಯಾನಃ ಭವತಿ' ಎಂಬಂತೆ ಮಂದಭಕ್ತರಾದವರ ಆಲಸ್ಯವನ್ನು ಧ್ವಂಸ ಮಾಡಲು ಅವತರಿಸಿದ "ಈ ಕಲಿಧ್ವಂಸಿ" ಶರಣೆ, ನವಿಲನ್ನು ತೊರೆದು ಕಾಗೆಯ ಹಿಂದೆ ಹೋಗುವಿರಾ? ಓ ಜನಗಳೇ! ಎಂದಾರಂಭಿಸಿ ತಮಗೆ ಇಷ್ಟೊಂದು ತೀವ್ರ ಸಂವೇಗ ಹೇಗೆ ಬೆಳೆಯಿತೆಂಬುದನ್ನು ತಿಳಿಸುತ್ತಾಳೆ. ವಿರಹಿಣಿ ಮಗಳಿಗಾಗಿ ತಾಯಿಯಾದವಳು ಏನೇನೋ ಪ್ರತ್ಯುಪಚಾರ ಮಾಡಲು ಸನ್ನಾಹದಲ್ಲಿರುತ್ತಾಳೆ. ಆಗ ಓರ್ವ ಕೊರವಂಜಿ ಬಂದು, ಅಮ್ಮಾ ನಿಮ್ಮೀ ಮಗಳ ನೋವು ದೈವಿಕವೇ ಹೊರತು ಬೇರೆಯಲ್ಲ. ಆ ಪುಂಡರೀಕಾಕ್ಷ, ಕೊಡವೆತ್ತಾಡಿದ ನಟರಾಜನಾದ ಶ್ರೀ ಕೃಷ್ಣನಿಗೇ ಈಕೆ ತನ್ನ ಮನ ತೆತ್ತಿದಾಳೆ. ಅವನ ಸಹಸ್ರನಾಮಗಳೇ ಇದೋ ಈಕೆಗೆ ಈಗ ಧಾರಕ. ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದವನೇ ಇವಳ ಪ್ರೇಮವನ್ನೂ ತನ್ನ ಅದ್ಭುತ ಪಾದದಂತೇ ಬೆಳೆಸಿದ್ದಾನೆ. **"ಪ್ರಿಯಕೃತ್ ಪ್ರೀತಿವರ್ಧನಃ!"**

ಆತನ ಬಾಲಲೀಲೆ ಪೌಢಲೀಲೆಗಳಲ್ಲೆಲ್ಲಾ ಈಕೆ ಚಿರಪರಿಚಿತಳು. ರಾಮಾವತಾರ ನೃಸಿಂಹಾವತಾರ ಅಮೃತಮಂಥನಾವತಾರ ಹೀಗೆ ಆ ವ್ಯಾಪಕ ಪರಿಪೂರ್ಣ ನಾರಾಯಣನಿಂದಲೇ ನಿಮ್ಮ ಮಗಳಿಗೂ ಈಗ ಪರಿಪೂರ್ಣ ಭಕ್ತಿ ಉತ್ತುಂಗ ಗಿರಿಶಿಖರಕ್ಕೇರಿದೆ. ಈಗಿವಳು ಸಾಮಾನ್ಯ ಲೋಕಾನಿಂದಾ ಭೂಮಿಕೆಯನ್ನೂ ದಾಟಿ ಬಿಟ್ಟಿದ್ದಾಳೆ. ಹಿರಿಯರಿಗೇನು ಗೊತ್ತು? ಗುರವಃ ಕಿಂ ಕರಿಷ್ಯನ್ತಿ? ವಯಸ್ಸಿನಿಂದ ಮಾತ್ರ ಹಿರಿಯರಿಗೇನು ಗೊತ್ತು ಇವಳ ಪ್ರೇಮದ ಒಳಗುದಿ? ಅವರು "ಸರ್ವೇಶ್ವರನೇ ಉಪಾಯ" ಎಂಬಷ್ಟೇ ಜ್ಞಾನ ನಿಷ್ಠೆಯವರು. ಅವರಿಗೆ, "ದೇವರು ಕೈಂಕರ್ಯ ನೀಡಿಯೇ ನೀಡುತ್ತಾನೆ. ನಾವೇಕೆ ಪರದಾಡಬೇಕು?" ಈ ಭಾವವೇ ಪ್ರಧಾನ. ದ್ವಯಮಂತ್ರದ ಪೂರ್ವಾರ್ಧದ ಅರ್ಥ ನಿಷ್ಠೆಗೂ, ಉತ್ತರ ಖಂಡಾರ್ಥನಿಷ್ಠೆಗೂ ನಡೆದ ಸರಸ ಸಂಭಾಷಣೆಗಳೇ ಇಲ್ಲಿನ ತಾಯಿ ಮಗಳುಗಳ ಕಲ್ಪನೆ.

ನೀರಾಗಿ ಕರಗಿಹೋಗುತ್ತಿದೇನೆ. ಅನ್ಯಥಾ ಶರಣಂ ನಾಸ್ತಿ! ಅವರಿವರ ಚೌಕಾಶಿಯೂ ಬೇಡ. ಆತನ ಶ್ರೀಮೂರ್ತಿ ದರ್ಶನ ಆಲಿಂಗನ ಸಿಗುವವರೆಗೂ ನನ್ನೀ ಕಾರ್ಯಕ್ರಮ ಸಾಗಿಯೇ ತೀರುತ್ತದೆ. ಏನೆ ಆಗಲಿ. ಇದರಿಂದ ಹಿಂದಿರುಗುವಳಲ್ಲ. **"ಮಾಡು, ಇಲ್ಲ ಮಡಿ!"** ಕಾರ್ ಆರ್ = ಕಪ್ಪಿಗೂ ಕಪ್ಪು, ಸುಂದರನಾದವನ ತಿರುಮೇನಿ ಸಿರಿಮೂರುತಿ, ಕಾಣುಮ್ ಅಳವುಮ್ ಪೋಯ್ = ಈ ನನಗೆ ಕಾಣುವವರಿವಿಗೂ, ಹೋಗಿ. ಶೀರ್ಆರ್ = ವೈಕುಂಠನಾಥನ ಪರಮಗುಣಗಳೂ ಅಲ್ಲಿ ಅಪೂರ್ಣ ಪ್ರಕಾಶಗಳಾಗಿದ್ದುವು. ಇಲ್ಲೀಗ ತಿರುಮಲೆಯಲ್ಲಿ ತಿಮ್ಮಪ್ಪನಲ್ಲಿ ಕಳೆ ಪೂರ್ಣವಾಗಿ ಎದ್ದು ಕಾಣುತ್ತಿವೆ. ದಯಾ ವಾತ್ಸಲ್ಯ ಸೌಶೀಲ್ಯ ಸೌಲಭ್ಯಾದಿಗಳು, ಆ ಪರಮಪದದಲ್ಲಿ ಉಪಯೋಗಕ್ಕೆ ಬಾರದೆ, ಕಟ್ಟಿಪ್ಪೋನ್ = ಚಿನ್ನದ ಗಟ್ಟಿಯಂತಷ್ಟೆ! ದುಃಖಿತರೂ ಅಪರಾಧಿಗಳೂ, ಮಂದರೂ, ಕುರುಡರೂ ಅಲ್ಲಿಲ್ಲದಿರುವುದರಿಂದ, ಪ್ರಕಾಶಿಸವು. ಈ ಲೀಲಾವಿಭೂತಿಯ ಬೆಟ್ಟದಲ್ಲೇ "ಇರುಳ್ ತರುಮಾಞ್ಞಾಲಮ್" ಎಂಬಂತೆ ನಮ್ಮಂಥವರಿಗಾಗಿ ಅವು ಕಳೆಯೇರಬೇಕಾದರೆ. "ಇರುಟ್ಟರೈಯಿಲ್ ವಿಳಕ್ಕೊಪ್ಪೋಲೇ ಪ್ರಕಾಶಿಪ್ಪದು ಇಂಗೇ". ಕತ್ತಲಿರುವೆಡೆ ತಾನೇ ದೀಪದ ಅಗತ್ಯ. ಈ ಅಪೂರ್ವ ಸಂದರ್ಭವನ್ನು ಕಾಣಲು ಆ ನಿತ್ಯವಿಭೂತಿಯವರೂ ಇಲ್ಲೇ ಬರುವುದರಿಂದ ನನ್ನ ಭಕ್ತಿಗೆ ಪೂರ್ಣತೆಯನ್ನು ಈ ಕ್ಷೇತ್ರ ನಿಶ್ಚಿತವಾಗಿ ತಂದೇ ಕೊಡುವುದು, ಎಂಬ ಮಹಾವಿಶ್ವಾಸದಿಂದಲೇ ಈ ಪರಕಾಲ ವಿರಹಿಣಿ ಕೂಡಿದ್ದಾಳೆ. ತಿರುವೇಜ್ಗಡಮೇ = ಬೇರೆಡೆ ಹೋಗಬೇಕಾದುದೇ ಇಲ್ಲ ಅದರೆ ದೇವರ ಸಿರಿಚಿತ್ತ! ಅನೂಹ್ಯ, ವಿಚಿತ್ರ!

ಪೆರಿಯ ತಿರುಮಡಲ್ ಕಣ್ಣಿ ಎಂಬ ದ್ವಿಪದಿ. ತಮಿಳ್ ತಿರಳ್ ೫, ೬, ೭

ವಾನ್ ಇಯಜ್ಗು ತಾರಹೈಮೀನ್
ಎನ್ನುಮ್ ಮಲರ್ ಪ್ಪಿನೈಯಲ್ ಏಯ್ನ್ದ ಮಳ್ಳೈಕ್ಕೂನ್ದಲ್
.... ತೆನ್ನನ್ ಉಯರ್ ಪೊರುಪ್ಪುಮ್ ತೈವ ವಡಮಲೈಯುಮ್
ಎನ್ನುಮ್ ಇವ್ವೈಯೇ ಮುಳ್ಳೈಯಾ ವಡಿವಮೈನ್ದ ಅನ್ನ ನಡೈಯ ವಣಜ್ಗೇ

ಕನ್ನಡ ನೆರಳ್

ಬಾನ್ ಹಾಯ್ ತಾರಾಗಣ ಎಂಬಾ ಪೂಹೆಣೆ ಸೇರ್ ಮುಗಿಲ್ ಗೂದಲಿ.....
ಪಾಂಡ್ಯನ ನೀಳ್ ಮಲೆಯುಂ ದಿವ್ಯೋತ್ತರ ಗಿರಿಯುಮ್ ಎಂಬಿವೆ ಮೊಲೆಜೋಡಿಯೇ ಆಗಿಹವೊಡಲಿ, ಹಂಸದ ನಡೆ ಭೂದೇವಿ.

ಮೇಘಕೇತಿನಿಯಾದ ಭೂ ಮಾತೆಗೆ ತಿರುಮಾಲಿರುಂ ಶೋಲೈ ಮತ್ತು ಈ ವಡಮಲೈ ಎರಡೂ ಅಳಹರಿಗೂ ತಿಮ್ಮಪ್ಪನಿಗೂ ನೀಳಾತುಂಗಸ್ತನಗಳಂತೆ! ಇಂತು ಈ ಹಿರಿಸಿರಿಮಡಲ್ ಆರಂಭ. ಹಿಂದಿನ ಕಿರಿಸಿರಿಮಡಲಿಗೂ ಇದಕ್ಕೂ ಸಂಗತಿಯನ್ನು ತಿಳಿದರೆ ಸ್ವಾರಸ್ಯವುಂಟು. ಪೆರಿಯ ತಿರುಮಡಲಿನಲ್ಲಿ ಶ್ರೀವೇಂಕಟಾಚಲಪತಿಯಿಂದ ಆರಂಭವಾಗಿ ಮುಂದೆ ಮುಂದೆ ತಿರಕ್ಕೋವಲೂರ್, ಕಂಚಿ ಊರಹಮ್, ಪೇರಹಮ್, ತಿರುವೆಳ್ಳರೈ, ತಿರುವೆ.ಂ.ಕಾ, ತಿರುವಾಲಿ, ತಿರುನರೈಯೂರ್. ತಿರುಪ್ಪುಲಿಯೂರ್ ತಿರುವರಂಗಂ ತಿರುಕ್ಕಣ್ಣಪುರಂ ತಿರುವಿಣ್ ನಹರಮ್, ತಿರುಚ್ಚೇರೈ, ತಿರುವಳುನ್ದೂರ್, ತಿರಕ್ಕುಡನ್ದೈ, ತಿರುಕ್ಕಡಿಹೈ, ತಿರುಕ್ಕಡಲ್ ಮಲ್ಲೈ. ತಿರುವಿಡವೆನ್ದೈ, ತಿರುನೀರ್ ಮಲೈ, ತಿರಮಾಲ್ ಇರುಂಶೋಲೈ ತಿರುಮೊಹೂರ್, ಉತ್ತರ ಬದರೀ ಉತ್ತರ ಮಧುರೆ ಹೀಗೆ ತಿರುಮಂಗೈಯಾಳ್ವಾರರು, ಯಾವ ಯಾವ ಊರುಗಳಲ್ಲಿ ವಿಶೇಷ ಬಯಕೆಯಿಂದ ಶ್ರಿಯಃಪತಿ ಸ್ವಯಂ ವ್ಯಕ್ತನಾಗಿ ತಳವೂರಿದನೋ, ಅಲ್ಲಲ್ಲಿಗೇ ಪ್ರಾಯಃ ತೆರಳಿ ತಮ್ಮ ಈ ಮಡಲ್ ಎಂಬ ಭಕ್ತಿ ಸಾಹಸವನ್ನು ಪ್ರದರ್ಶಿಸಿದರು. ಆದರೂ ಅವರದು ಅಷ್ಟಕ್ಕೇ ನಿಲ್ಲಲಿಲ್ಲ! ಏಕೆ?

ಇವರ ಈ ಸ್ತ್ರೀ ಸಾಹಸವನ್ನು ಕಂಡವರೂ ಏನೂ ಮಾಡಲಿಲ್ಲ. ಒಂದು ಹೆಣ್ಮು ನಿಜಕ್ಕೂ ತುಡಿದು ಮಿಡಿಯುವುದಲ್ಲಾ! ಎಂಬ ತಮ್ಮ ಕರ್ತವ್ಯಪ್ರಜ್ಞೆಯೂ ಜಾಗೃತವಾಗಲಿಲ್ಲ. ಯಾರಲ್ಲೂ ಕರುಣೆಯೂ ಮೂಡಿ ಬರಲಿಲ್ಲ. "ಆಗೋದೆಲ್ಲಾ ಒಳ್ಳೇದಕ್ಕೇ" ಎಂಬ ಗಾದೆಯಂತೆ, ಈ ಪರಕಾಲ ನಾಯಕಿಗೆ ಇನ್ನೂ ಉತ್ಸಾಹ ಬೆಳೆಯಿತು! "ಈ ತಾಟಿ ಗೊದಮೊಟ್ಟೆಯ ಕುದುರೆ ಸವಾರಿಯನ್ನು ಇನ್ನೂ ವ್ಯಾಪಕ ಗೊಳಿಸುತ್ತೇನೆ. ಮೊದಲಿಗಿಂತಲೂ ಚುರುಕುಗೊಳಿಸುತ್ತೇನೆ" ಎಂದು ಧೃತಿಮತಿಯೇ ಆಗಿಬಿಡುತ್ತಾಳೆ.

ಈ ಪೆರಿಯ ತಿರುಮಡಲಿನಲ್ಲಿ, ಶ್ರೀ ಸಾಮಾನ್ಯ, ಮಹಿಳಾ ಕೂಟಗಳು, ವಾಣಿಜ್ಯ ಚೌಕಗಳು, ಸರಕಾರ, ಇತ್ಯಾದಿಗಳೆಲ್ಲಾ ನನ್ನ ಕೈ ಬಿಟ್ಟರೂ, ಸರ್ವೇಶ್ವರ ಅರಿಸಿಕೊಂಡ ಅತನ ಪ್ರಿಯಧಾಮಗಳಿಗೂ ಹೋಗಿಯೇ, ಅತನ ನಾನಾ ಭಂಗಿಗಳಲ್ಲಿಯೇ ಛಿಮಾರಿ ಹಾಕಿಯೇ ತೀರುವೆನು. ಆ ಜಗತ್‌ಪತಿ ಈ ಉಭಯರ ಮಧ್ಯೇ ಈ ಶರಣ ಜೀವ ತನ್ನ ಯುಕ್ತವಾದ ತೀವ್ರತೆಯನ್ನು ಸಹಿಸಲಾರದ ಸ್ಥಿತಿಗೇರಿದೆ. ಇದನ್ನೇ ಭಕ್ತಿ ವಿಜ್ಞಾನ "ಪರಮ ಭಕ್ತಿ" ಎಂದು ವಿಶ್ಲೇಷಿಸುತ್ತದೆ.

ಪುನರ್ ವಿಶ್ಲೇಷ ಭೀರುತ್ವಂ ಪರಮಾ ಭಕ್ತಿರಿಷ್ಯತೇ| ದರ್ಶನಂ ಪರಭಕ್ತಿಃ ಸ್ಯಾತ್ ಪರಜ್ಞಾನಂ ತು ಸಂಗತಿಃ| ಜ್ಞಾನ, ದರ್ಶನ, ಪ್ರಾಪ್ತಿ

ಈ ಮೂರು ಹಂತಗಳಲ್ಲಿ ಮೊದಲು ಎರಡನ್ನು ನಾವು ಭಗವದ್ ಗೀತೆಯಲ್ಲೂ ಸ್ಪಷ್ಟವಾಗಿ ಕಾಣಬಹುದು. "ಪರಮಭಕ್ತಿಯ" ಶಾಬ್ದಿಕ ಉಲ್ಲೇಖ ಅಲ್ಲಿ ಕಾಣಬರದಿದ್ದರೂ, "ಉಪದೇಕ್ಷ್ಯನ್ತಿ ತೇ ಜ್ಞಾನಮ್" ಎಂಬ ಭಗವದ್ ವಚನದಿಂದ, ಇಂತಹ ಜ್ಞಾನಿ, ನಿತ್ಯಯುಕ್ತ, ಏಕಭಕ್ತಿ ಸಂತರಲ್ಲೇ ಪರಮಭಕ್ತಿ ಬೆಳೆದು, ಜನರ ಪರಿಚಯಕ್ಕೆ ಒದಗಿ, ಅರ್ಚಿರಾದಿಗಮನ ಸಮಯದಲ್ಲಿ ಆಚಾರ್ಯರೂ ಬೇರೆ ಬೇರೆ ತದನುಯಾಯಿಗಳೂ ಅದನ್ನು ಪಡೆಯಬಹುದು ಎಂಬುದು ಧ್ವನಿತವಾಗುತ್ತದೆ. ಆಚಾರ್ಯ ರಾಮಾನುಜರೂ, ಶರಣಾಗತಿ ಗದ್ಯದಲ್ಲಿ,

"ಪರಮ ಭಕ್ತ್ಯೇಕ ಸ್ವಭಾವಂ ಮಾಂಕುರುಷ್ವ"

ಎಂಬಲ್ಲಿ ಪರಭಕ್ತಿ, ಪರಜ್ಞಾನಗಳಿಗೆ, ಗೀತೆಯ ಆಕರ ತೋರಿಸಿ, "ಪರಮಭಕ್ತಿ" ಆಳ್ವಾರ್ ವಾಙ್ಮಯಗಳಿಂದಲೇ, ಅದರಲ್ಲೂ ಚಿರೋಪಾಸಿತ ಸದ್‌ವೃದ್ಧರಿಂದಲೇ ಅರಿಯಬೇಕೆಂಬ ರಹಸ್ಯವನ್ನು ತೋರಿದ್ದಾರೆ.

ಆಳ್ವಾರರ ಈ ಉಚ್ಚತಮ ಉತ್ಕಟ ಹುಚ್ಚಿನ ಕಲ್ಪನೆಗೆ ಜ್ಞಾನದ ತಳಪಾಯ ಎಷ್ಟು ಗಟ್ಟಿಯಾಗಿದೆ! "ಮಡಲ್" ಎನ್ನುವುದು ಕೇವಲ, ಭಾವುಕತೆಯ ಗಾಳೀ ಗೋಪುರವಲ್ಲ. ಸಕಲ ಬ್ರಹ್ಮಜಿಜ್ಞಾಸುಗಳ ಸಮಗ್ರ ಸಂಪೂರ್ಣ "ತತ್ವಜ್ಞಾನ", "ಸರ್ವಸ್ಪರ್ಶಿ ನಿರುಪಾಧಿಕ ಸಾಧನೆ" ಹಾಗೂ "ಇಹದಲ್ಲೇ ಅತ್ತಣ, ಪರಮ ಭಕ್ತಿಕೃತ ನಿತ್ಯಕೈಂಕರ್ಯ ಪುರುಷಾರ್ಥ" ಎಂಬೀ ಎಲ್ಲವನ್ನೂ ಚೊಕ್ಕವಾಗಿ ಎಲ್ಲರಿಗೂ

ಅಧಿಕಾರ ಅನಧಿಕಾರದ ಭೇದ ವೈಷಮ್ಯವಿಲ್ಲದೆ ಸರಳವಾಗಿ ಚಿತ್ತರಂಜಕವಾಗಿಯೇ ತಿಳಿಸುವ ಬ್ರಹ್ಮವಿದ್ಯಾ ಮಾಧ್ಯಮ! ವ್ಯಕ್ತಿಗೂ ಸಮಾಜಕ್ಕೂ, ಇರಬೇಕಾದ ಹೊಣೆಗಾರಿಕೆಯ ಸೂಕ್ಷ್ಮ. ಗ್ರಾಮಕ್ಕೂ ರಾಜ್ಯಗಳಿಗೂ, ರಾಜ್ಯ-ಕೇಂದ್ರಗಳಿಗೂ ರಾಷ್ಟ್ರ-ವಿಶ್ವಕ್ಕೂ ಹೊಂದಾಣಿಕೆ ಗೊಳಿಸುವ, ಈಗಂತೂ ಅಗತ್ಯವಾಗಿಯೇ ಬೇಕಿರುವ ಪರಿವರ್ತನೆಗೂ ಎಷ್ಟೊಂದು ಮಾರ್ಗದರ್ಶಕವಾಗಿದೆ!

ಮಾನವ ಈ ಭೂಗೋಳವೆಂಬ "ಭಾರತವರ್ಷವಾಸಿ". ಈ ದೃಶ್ಯಭೂಮಿಯೂ ಎಲ್ಲೋ ಸಂಪೂರ್ಣಭೂಮಿಯ ಒಂದು ಚೂರು, ಅದರಲ್ಲಿ "ಭರತಖಂಡ"! ಸರ್ವಮಣ್ಣಿನ ಜಗತ್ತನ್ನು ಅಳೆದವ ಆ ಮೋಜಿಮ್‌ದಾರ ಯಾರು? ತ್ರಿವಿಕ್ರಮ! ಆಗ ಅವನಿಗಾದ ಶ್ರಮ ಆಳ್ವಾರರ ಸುಕುಮಾರ, ಪ್ರೇಮಳ ಹೃದಯಕ್ಕೆ ಸೋಂಕಿ, ಅಚೇತನವಾದ ಕಡಲೂ ತಮ್ಮ ಹೊಯ್ದಾಟದ ಅಲೆಗಳಿಂದ ಚಾಮರಬೀಸುತ್ತಿವೆ ಎನ್ನುತ್ತಾರೆ! ಪೂರಾ ಇಳೆಗೆ ಬೆಳಕು ತೋರಿದ್ದು; ರವಿ-ಚಂದ್ರರ ಜೋಡಿ! ಅದೋ, ಆಕಾಶವೆಂಬ ಮೇಲ್‌ಕಟ್ಟಿನಲ್ಲಿ ಜೋಲ್ ಬಿದ್ದಿದೆ. ಆ ಮಿಂಚುವ ನಕ್ಷತ್ರಗಳಿಗೆ ಎಲ್ಲಿಂದ ಬಂತು ತೇಜ! ಸ್ವಾಮಿಯ ಕರ್ಣಾಭರಣಗಳ ಕಾಂತಿಯಿಂದ! ಈ ತ್ರಿವಿಕ್ರಮ ಮೂಲತಃ ಎಲ್ಲಿದ್ದ! ಕ್ಷೀರಸಮುದ್ರ ನಾಗಶಯನವೆಂಬ ವಿಶಾಲ, ಶೀತಳ, ಸುಗಂಧ, ಸುಖ ಸ್ಪರ್ಶ, ಅತಿಧವಳದ ಹಾಸಿಗೆಯಲ್ಲಿ! ಅಲ್ಲಿನ ಪ್ರಕಾಶಕ್ಕೆಲ್ಲಾ ಈ ಆದಿಶೇಷನ "ನಾಗಮಣಿ"ಯೇ! ಜನರೇಟರ್! ಅದೂ ಒಂದಲ್ಲ ಎರಡಲ್ಲ,

"ಫಣಾ ಮಣಿವ್ರಾತ ಮಯೂಖ ಮಂಡಲ ಪ್ರಕಾಶ ಮಾನೋದರ ದಿವ್ಯಧಾಮನಿ"

ಈ ಯಾಮುನ ಮುನಿಗಳ ಸಂಸ್ಕೃತ ಸ್ತೋತ್ರರತ್ನದ ಶ್ರೀ ಸೂಕ್ತಿಗೆ ಈ ನಾಗರತ್ನಗಳೇ ಮೂಲ!

"ಮನ್ನಿಯ ಪಲ್ ಪೊರಿ ಶೇರ್ ಆಯಿರವಾಯ್ ವಾಳರವಿನ್"

ಇದು, ಈ ಹಿರಿಯ ಸಿರಿಮಡಲಿನ ಪ್ರಾಸ್ತಾವಿಕ ಭೂಮಿಕೆ.

ಇಂತಹ ಭೂ ಮಹಾದೇವಿಗೆ, ತಿರುಮಾಲಿರುಂ ಶೋಲೈ, ತಿರುವೇಙ್ಗಡಮ್ ಇವೆರಡೂ ಭಗವದ್ ಭೋಗವರ್ಧಕಗಳಾದ ಹೃದಯ ಸ್ಥಾನಗಳು. ಇಂತಹ ೪೦ ಕ್ಕೂ ಹೆಚ್ಚು ಸ್ವಯಂಧಾಮ ಕ್ಷೇತ್ರಗಳಿಗೆ ತೆರಳಿ ಛಿಮಾರಿ ಹಾಕಿದ ಯಥಾರ್ಥ ಚಿತ್ರ ಇಲ್ಲಿ.

ಪ್ರಕೃತ, ತೆನ್ನನ್ = ಭರತಖಂಡದ ದಕ್ಷಿಣ ಪಾಂಡ್ಯ ಜನಪದದ ರಾಜ ಭಕ್ತಾಗ್ರಗಣ್ಯ, ಆರಾಧಿಸಿದ ಭಕ್ತಿಯಿಂದಲೂ, ಈ ತಿರುಮಾಲಿರುಂಶೋಲೈಯ ಔನ್ನತ್ಯ, ಉಯರ್ ಪೊರುಪ್ಪಮ್ = ಕೇವಲ ಭೌಗೋಳಿಕ ಎತ್ತರ ಗಣನೆಗೆ ಬಂದರೆ ಸಾಲದು. ಎಲ್ಲಾ ಸದ್‌ಭಕ್ತಜನರ ಪ್ರತಿನಿಧಿಯಾಗಿಯೇ, ರಾಜರಿಗೂ ದೇವಾಲಯಗಳಲ್ಲಿ ಪ್ರವೇಶವಷ್ಟೆ! ತಿರುಪತಿಯ ಮೇಲೆಯೂ ಈ ಮರ್ತ್ಯರ ಅಧಿಕಾರವಿಲ್ಲ. ಈಗಿನ ಅಧಿಕಾರ ದುರುಪಯೋಗದ ಕಾರಣಮೀಮಾಂಸೆ ನಮಗಿಲ್ಲಿ ಸಿಗುತ್ತದೆ. ಹಿರಿಯ ಅನುಭವಿಗಳಾದರೂ ಯಥಾಸ್ಥಿತಿಯ ಚಿತ್ರವೆಂಬ ಕಾರ್ಯರೂಪಿ ಪರಿಣಾಮ ಜಿಜ್ಞಾಸೆಯನ್ನು ಕಡಿಮೆ ಮಾಡಿ, ಕಾರಣ ಜಿಜ್ಞಾಸೆ, ಅಂತಹವುಗಳ ಮೌಲ್ಯಗಳನ್ನೇ ಹೆಚ್ಚಿಸಲು ಉತ್ತೇಜಕವಾಗುವಂತಹ ಮಾತುಗಳನ್ನೇ ಆಡುತ್ತಾ ಬರುವುದೂ, ಕೇವಲ ಚಿತ್ರಣ ಸಾಹಿತ್ಯ ರೂಪವಾದ ವರದಿಗಳೂ ಈ **ಕಾರ್ಯಧ್ಯಾನಕ್ಕಿಂತಲೂ ಕಾರಣಧ್ಯಾನವೇ ದೇಶಗಳ** ಸ್ವಾತಂತ್ರ್ಯ ಪೂರ್ವ, ಸ್ವಾಂತ್ಯೋತ್ತರ ಸರ್ವಕಾಲಕ್ಕೂ ಶ್ರೇಯಸ್ಕರ. **"ಕಾರಣಂ ತು ಧ್ಯೇಯಃ"**

ತೈವಮ್ ವಡಮಲೈ = ದಿವ್ಯವಾದ ತಿರುಮಲೆಯಂತೆಯೇ ಸಕಲ ಯಾತ್ರಾಸ್ಥಳಗಳೂ, ಸರ್ವ ಸಮ್ಮತ ಜನಾSSಧಾರಿತಗಳೇ! ಆದಾಗ, ರಾಷ್ಟ್ರಕ್ಕೂ ಬಲ ಬರುವುದು. ಸ್ವಾತಂತ್ರ್ಯೋತ್ತರ ಯಾತ್ರಾ ಸ್ಥಳಗಳ ಹೊರರಚನೆ, ಹಣದ ಆದಾಯ, ಅನಧ್ಯಾತ್ಮ, ಅವೈಜ್ಞಾನಿಕ ತಂತ್ರಜ್ಞಾನದ ಶಿಕ್ಷಣ ಹೆಚ್ಚಿರುವಂತೆ ಕಂಡರೂ, ವಾಸ್ತವಿಕತೆಯ ಆಳಕ್ಕೂ ಗುರುಜನ, ಸಮಾಜದ ಹಿರಿಜನ ಇಳಿಯಬೇಕಾಗಿದೆ. ಇದರ ನ್ಯೂನತೆಯಿಂದಲೇ ನಾನಾ ಹೊಸ ಹೊಸ ವಿಪತ್ ಪರಂಪರೆ ಜಗತ್ತಿನಲ್ಲೇ ಹೆಚ್ಚುತ್ತಿವೆ. ಯಾತ್ರಾ ಸ್ಥಳಗಳೂ ವಿಶ್ವವೈಜ್ಞಾನಿಕ, ವಿಶ್ವ ಆಧ್ಯಾತ್ಮಿಕ ಉಭಯ ಸಿರಿಸಂಪತ್ತನ್ನೂ, ಹಾರ್ದಿಕ ಹಾಗೂ ಕ್ರಿಯಾತ್ಮಕವಾಗಿ ಬೆಳೆಸಲು, ಈ ದಿನಗಳಲ್ಲೂ ಬ್ರಹ್ಮಚಾರಿಯೋರ್ವ ಭೂದಾನ-ಗ್ರಾಮದಾನವನ್ನು ಪುನರೂರ್ಜಿತಗೊಳಿಸಿರುವುದನ್ನು ಯಾರೋರ್ವರೂ ಮರೆಯದಿರೋಣ. ತಮಿಳು ನಾಡಿನ ದೇವಾಲಯಗಳಿಂದಂತೂ ಗ್ರಾಮಶಕ್ತಿ ಬೆಳೆಸಲು, ಪರಮಸಾತ್ವಿಕ ಧೀರ ವ್ಯಾವಹಾರಿಕ ಮಾಧ್ಯಮ ಮಾಹಿತಿಗಳು ಬಹಳಷ್ಟು ಸಿಗುತ್ತವೆ. ವಿಶೇಷ ಸ್ಥಾನಗಳಿಗೂ, ಸಾಮಾನ್ಯ ಸ್ಥಾನಗಳಿಗೂ ಬೆಲೆಯಲ್ಲಿ ಏನೂ ತಾರತಮ್ಯ ಸಲ್ಲದು. "ಈ ಶಾವಾಸ್ಯಮಿದಂ ಸರ್ವಂ" ಈ ವ್ಯಾಪಕ ಈಶನೇ, ಒಂದೊಂದು ಗ್ರಾಮದಲ್ಲೂ "ಗ್ರಾಮಾಽಧಿದೇವತೆ" ಆತನೇ ವಿಶ್ವಮಾನವನ, ಅಧಿದೇವತೆಯೂ ಹೌದು. "ವೇದಾನ್ತ-ವಿಜ್ಞಾನ ಸುನಿಶ್ಚಿತಾರ್ಥಾಃ" ಇದು ಸುಳ್ಳಲ್ಲ ಎಂಬುದನ್ನು ಶುದ್ಧ ವಿಜ್ಞಾನವೂ ತಿಳಿಸಹತ್ತಿದೆ. ಮಾನ್ಯ ಐನ್‌ಸ್ಟೈನಿನಂತಹ ಸತ್ಯವಾನ್ ನಿರ್ಭಯ ವಿಜ್ಞಾನಿಗಳನ್ನು ಇನ್ನೂ ಹೆಚ್ಚು ಸ್ವಾಗತಿಸೋಣ. ಇತ್ತೀಚೆಗೆ "ಸ್ಟೀಫನ್ ಹಾಕಿಂಗ್" ಎಂಬ ವಿಜ್ಞಾನಿ, ಭೌತ ವಿಜ್ಞಾನದ "ಅಶೋಕಸೇನ್" ಪರಮೋಚ್ಚ ಸಿದ್ಧಾನ್ತ, GOD (ಭಗವಂತ) ಎಂದೂ ಥಿಯರಿ ಆಫ್ ಎವ್ರೆರಿಥಿಂಗ್, ಸ್ಟ್ರಿಂಗ್ ಥಿಯರಿಗಳು ಭೌತವಿಜ್ಞಾನದ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುತ್ತವೆ ಎಂದಿರುವುದು ಸಂತೋಷದ ವಿಷಯ.

ಇಂತಹ ಪುರುಷೋತ್ತಮ ಈ ಪರಕಾಲ ನಾಯಕಿಯನ್ನು ಈಗ ಉಪೇಕ್ಷಿಸಿದ್ದಾನೆ. ಭಕ್ತಳಾದ ನನಗೆ ನನ್ನ ಹಕ್ಕು ಸ್ವಾಮಿಸೇವೆಯೆ! ಇದಕ್ಕೆ ಈಗಲಾದರೂ ಈ ತಿಮ್ಮಪ್ಪ ಅವಕಾಶ ಮಾಡಿಕೊಡದಿದ್ದರೆ ನಾನಂತೂ ಈ ಮಡಲ್ ಸಾಹಸಕ್ಕೆ ಇಳಿಯುವುದು ಖಂಡಿತ. ಪಾವನ ಸುಂದರಾಂಗನ ಅಂಗಾಂಗಗಳ ಪುಷ್ಪ ತುಷ್ಪಿಗಳ ಚೆಂದ! ಅಭರಣಗಳ ಒಪ್ಪು! ರಾವಣಸಂಹಾರಿ ಆ ಶ್ರೀರಾಮನ ಮಹಾವೀರ್ಯ, ಹಿರಣ್ಯಕಶಿಪುವನ್ನು ಉಗುರಿನಿಂದಲೇ ಬಗೆದು ಸೀಳಿಹಾಕಿದ್ದು, ಅಂತಹ ನರಸಿಂಹನ ತಲೆ ಮೈಯ್ಯಿನ ಸುಘಟಿತತ್ವ! ಹಿರಣ್ಯಾಕ್ಷನನ್ನು ಸೆದೆ ಬಡಿದ ಯಜ್ಞವರಾಹನ ತಿರ್‌ಕ್ಕೋಲಂ! ದೇವತೆಗಳಿಗೆ ಅಮೃತ ಮಂಥನ ಗೈದಾಗ ಆ ಚತುರ್ಭುಜಗಳು ಹಿಂದುಮುಂದಾಡುವ ಚೆಲುವು! ವಾಮನನ ಯುಕ್ತಿ! ತ್ರಿವಿಕ್ರಮನ ಸಾಮರ್ಥ್ಯ! ಎಲ್ಲಕ್ಕೂ ಈ ವಿರಹಿಣಿ ಮರುಳಾಗಿ ಬಿಟ್ಟಿದ್ದಾಳೆ. ಆದರೆ ಅವುಗಳ ಬಾಹ್ಯಾನುಭವಕ್ಕೆ ಒಂದು ಗುರುತಾದರೂ ಕಾಣುತ್ತಿಲ್ಲ. ಕೊನೆಗೆ ಕೈ ಎತ್ತಿ ನನಗೆ ದಿವ್ಯದೇಶದ ಅರ್ಚಾಮೂರ್ತಿ ತನ್ನ ಪಾದದ ಒಂದು ತುಳಸೀ ದಳವನ್ನಾದರೂ ಕೊಡಲಿ. ಅಲ್ಲಿಯವರೆಗೂ ನಾನಂತೂ ಬಿಡುವವಳಲ್ಲ.

ತಮಿಳ್ ತಿರಳ್ ೧೩ಳ

തെന് തില്ലൈ ച്ചിത്തിര കൂടത്തെന് ശെല്വനൈ....മിന്നി മഴൈ തവഴുമ് വേങ്കടത്തെമ് വിത്തഹനൈ ..... കൈതൊഴുദു

ಕನ್ನಡ ನೆರಳು

ತೆಂಕಣ "ತಿಲ್ಲೈ"ಯ ಚಿತ್ರಕೂಟದ ಚಿದಂಬರದೆನ್ ಸಿರಿ ಚೆಲುವನಂ

ಮಿಂಚೀ ಮಿಂಚೀ ಮೋಡಗಳ್ ತೆವಳುವ ವೇಂಗಡ ದೆಮ್ ಅಚ್ಚರಿಗನಂ ಕೈ ಕಾಯಕದಿಂ ಸಂಸೇವಿಸಿ.....

ಇದಕ್ಕೆ ಹಿಂದೆ ೨೩ ಕ್ಕೆ ಕಡಿಮೆಯಿಲ್ಲದಷ್ಟು ಆಯಾಯಾ ದಿವ್ಯ ಕ್ಷೇತ್ರಗಳಿಗೆ ಚಾಥಾ ಹೊರಟು ಈಗ ತಿರುಪತಿಗೆ ಬಂದಿದ್ದಾಳೆ. ಮುಂದಿನ ಧಾಮಗಳು ಇನ್ನೂ ೨೭ಕ್ಕೂ ಮೀರಿವೆ, ಈ ಹಿರಿಸಿರಿ ಮಡಲಿನಲ್ಲಿ ಶಾಬ್ದವಾಗಿ. ತಿರುವಿಣ್ಣಹರ್, ತಿರುಕ್ಕುಡನ್ನೈ, ತಿರುಕ್ಕುರುಂಗುಡಿ ತಿರುಚ್ಚೇರೈ ಇಲ್ಲೆಲ್ಲಾ ಸಾನ್ನಿಧ್ಯ ಗೈದಿರುವ ಆಯಾಯಾ ಮೂರ್ತಿಗಳ ವಿಶೇಷ ವ್ಯಕ್ತಿತ್ವವನ್ನು ಕ್ರಮವಾಗಿ ಹೊಂಬೆಟ್ಟ, ಗೂಳಿ, ಹವಳಗಿರಿ ಔದಾರ್ಯ ಇವುಗಳನ್ನು ಅನುಸಂಧಿಸುತ್ತಾ ತಿರುಮಂಗೈಆಳ್ವಾರರ ಅನುಭವ ಮುಂದುವರಿಯುತ್ತದೆ. ಇಷ್ಟೊಂದು ಕಲ್ಯಾಣ ಕಮನೀಯ ರೂಪ! ಜಗನ್ಮಂಗಳಕಾರಿ ಗುಣಗಳು ತುಂಬಿದ್ದರೂ ನನಗಿಂತಹ ವಿರಹದ ಅವಸ್ಥೆಯೇ!

'ತಿರುನೀರ್ ವಯಲಾಲಿ'ಯ ಹಂಸ! ತಿರುವೆವ್ವುಳ್ ಎಂಬಲ್ಲಿನ ನನ್ನ ಅಮೃತ. ತಿರುಕ್ಕಣ್‌ಮಂಗೈಯ ನನ್ನ ಕಲ್ಪತರು, ತಿರುವೆಳ್ಳರೈಯಲ್ಲಿನ ನನ್ನ ಜ್ಯೋತಿರ್ ಯುಗಳ!! "ಕಲ್ಲರೈ"ಯ ಚಿನ್ನ! ತಿರುಪ್ಪುಳ್ ಕುಳಿಯಲ್ಲಿನ ನನ್ನ ಮರಕತ ರತ್ನ. ಶ್ರೀರಂಗದ ಹಿರಿ ಮಾಣಿಕ್ಯ! ತಿರುವಲ್ಲವಾಳ್ ಎಂಬಲ್ಲಿನ ನೀಳಾವಲ್ಲಭ. ತಿರುಪ್ಪೇರ್ ಇನ ಅಜನ್ಮಾ. ಕ್ಷೀರ ಸಮುದ್ರದ ಬಾಹ್ಯಂಗ ಎಂದರೆ ತೋಳ್‌ಬಂದಿ. ತಿರುವಿಡನ್ಮೈಯ ಎನ್‌ಮನದ ಮಾಲೆ. ತಿರುಕ್ಕಡಲ್ ಮಲ್ಲೈಯ ಮಾಯಾವಿ. ತಿರುತ್ತಣ್ ಕಾಲ್‌ಇನ ನಿತ್ಯಸೂರಿ ಚೂಡಾಮಣಿ, ತಿರುಕ್ಕೋವಲೂರಿನ ಮೋಸಗಾರ! ತೇರ್ ಏಳುನ್ಬೂರಿನ ಉದಯ ರವಿ! ತಿಲ್ಲೈ ತಿರುಚ್ಚಿತ್ತಿರಕೂಟ ಚಿದಂಬರದ ಸಿರಿಚೆಲುವ.

ಇಷ್ಟಾದ ಮೇಲೆ, ಮಿನ್ನಿ = ಶ್ರೀ ಲೇಖೆಯಂತೆ ಮಿಂಚಿ, ಮಳೈ = ಕಾರ್‌ಮೋಡವಾದುದು, ತವಳುಮ್ = ತೆವಳುವ ಶಿಖಿರಗಳುಳ್ಳ ವೇಂಗ್ಕಡತ್ತುಪ್ರಪನ್ನರ ಸರ್ವಋಣ ರೂಪವಾದ ಪುಣ್ಯಪಾಪಗಳನ್ನೂ ಬೇಯಿಸಿ ದಹಿಸಿಯೇ ಬಿಡುವ, ಎಮ್ ವಿತ್ತಹನ್ಯೆ = ನಮ್ಮ ಪಾಲಿಗೆ ಅತ್ಯಾಶ್ಚರ್ಯಕನಾದ, ಜಗದ್ ಬೀಜನನ್ನು ಉದ್ದೇಶಿಸಿಯೇ ಈ ಮಡಲ್ ಸತ್ಯಾಗ್ರಹಸಾಹಸ!

"ನೀಲ ತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ"

ಮಧ್ಯದಲ್ಲಿ ನೀಲಮೇಘ! ಅದರ ಸುತ್ತ ಹಿರಣ್ಯವರ್ಣೆಯ ಸುವರ್ಣ ಪ್ರಭಾವಳಿ! ವಕ್ಷಃ ಸ್ಥಳ ನಿತ್ಯವಾಸರಸಿಕೆಯಾದ ಮಹಾಲಕ್ಷ್ಮಿಯ ಊರ್ಧ್ವಚ್ಛವಿ! ನೀಲತೋಯದವು ಮಧ್ಯಸ್ಥವಾಗಿರುವ ವಿದ್ಯುಲ್ಲೇಖೆ. **"ಮಧ್ಯಸ್ಥ ನೀಲತೋಯದಾ"** ಶ್ರೀ ರಾಮಾನುಜರ ವಿವರಣೆ.

"ತಡವರೈವಾಯ್ ಮಿಳಿರ್‌ನ್ದ್‌ಮಿನ್ನುಂ ತವಳ ನೆಡುಂ ಕೊಡಿಪ್ಪೋಲ್" ಪೆರಿಯಾಳ್ವಾರ್ ಪಾಶುರ ಆಧಾರ.

ಇಲ್ಲೂ ತಮ್ಮ ಬಯಕೆ ಈಡೇರದಿರಲು, ತಿರುಮಾಲ್ ಇರುಞ್ಞಿಲ್ಲೆಯ ಅಳಿಯನನ್ನು. ತಿರುಕ್ಕೋಟ್ಟಿಯೂರಿನ ಸಿಂಹವನ್ನು, "ತಿರುಮೆಯ್ಯ"ದ ಮಧುರಾಮೃತ ಝರಿಯನ್ನು ಇಂದಳೂರಿನ ಹಾರುವನನ್ನು! ಕಂಚಿ ವೇಳುಕ್ಕೈ ದಿವ್ಯದೇಶದ ನಾರಸಿಂಹನನ್ನು, ತಿರಪ್ಪಾಡಹಮ್ ಎನ್ನುವ ದಿವ್ಯಸ್ಥಳದ ಯುವಾಕುಮಾರನನ್ನು, ಸತ್ಯಕ್ಷೇತ್ರದ ಭೂತ ಭವ್ಯ ಭವತ್‌ಪ್ರಭುವನ್ನು, ತಿರುನೀರ್ ಮಲೈಯ ವೇದಮೂರ್ತಿಯನ್ನು, ತಿರುಪ್ಪುಲ್ಲಾಣಿ ದರ್ಭಶಯನದ ತೆಂಕಣ ತಮಿಳನನ್ನೂ, ಹಾಗೂ ಉತ್ತರದ ಸಂಸ್ಕೃತನನ್ನೂ! ಹೀಗೆ ಶ್ರೀರಾಮನನ್ನು ಉಭಯಭಾಷಾ ಪ್ರತಿಪಾದ್ಯನನ್ನಾಗಿ, ಅಥವಾ ಸರ್ವಭಾಷಾಮಯನನ್ನಾಗಿಸಿರುವುದರಿಂದಲೇನೋ! ಈಗ ಸುಮಾರು ೧೦೦ ವರ್ಷಗಳಲ್ಲಿ, ಯೋಗಿಪಾರ್ಥಸಾರಥಿ

ಎಂಬುವರಿಗೆ, ಸ್ವಪ್ನದಲ್ಲಿ ನಿಯಮಿಸಿ, ರಾಮನಾಡು ಮಹಾರಾಜರಿಂದ, ಭೂಗರ್ಭದಲ್ಲಿದ್ದ ಕೋದಂಡಪಾಣಿ, ಅತಿ ಸುಂದರಮೂರ್ತಿ ಪರಿವಾರ ಸಮೇತ ನೀಡಲ್ಪಟ್ಟು ಈಗಲೂ ಅಯೋಧ್ಯೆ ಸರಯೂ ನದಿಯ ಗೋಲಾಘಾಟಿನ ಅಮ್ಮಾಜಿ ಮಂದಿರದಲ್ಲಿ ಅದ್ದೂರಿಯಾಗಿ ಪೂಜೆ ಸ್ವೀಕರಿಸುತ್ತಿರುವುದು!

ತಿರುನಾಂಗೂರಿನ ಕೋಯಿಲ್ ದೇಗುಲ ಮಣಿಮಂದಿರದ ಜಾಮಾತೃವನ್ನು ಹಾಗಿದ್ದೂ ಚಂದ್ರಶೇಖರನ ಬಾಲೇಂದುವನ್ನು ತಿರುಕ್ಕಣ್ಣಪುರದ ಎನ್ ವಂದ್ಯನನ್ನು, ಹಾಗೂ ಕೋದಂಡ ಪಾಣಿ ಮಹಾವೀರನನ್ನು, ಅಲ್ಲಲ್ಲೇ ಸಂದರ್ಶಿಸುತ್ತೇನೆ. ಏಕೈಕ ಪರದೇವತೆಗೆ ಅನೇಕ ಗುಣ, ನಾನಾ ರೂಪಗಳಷ್ಟೆ. ಅವವು ನನ್ನ ಪಾಲಿಗೆ ಎಲ್ಲಾದರೂ ಫಲಕಾರಿಯಾದಾವೋ! ಎಂಬ ಶರಣರ ಆಸೆ, ನಿರೀಕ್ಷೆ, ವಿಶ್ವಾಸ, ನಮಗೂ ಬೆಳೆದರೆ, ಗ್ರಾಮಭಕ್ತಿ, ದೇಶಭಕ್ತಿಗೆ ಭದ್ರ ಬುನಾದಿ ಸಿಗುವುದಲ್ಲವೆ? ದೇಶಭಕ್ತಿ ಎಲ್ಲೆಲ್ಲೂ ಕ್ಷೀಣಿಸುತ್ತಿರುವಾಗಲಾದರೂ ನಾವೆಚ್ಚರಗೊಳ್ಳೋಣ! ಪೊಳ್ಳು ವಿಚಾರ ಸರಣಿಗಳನ್ನು ಬಿಡೋಣ. ಗ್ರಾಮಗ್ರಾಮಗಳಿಗೆ ನಮ್ಮರಾಗೋಣ. ಇಂತಹ ಶರಣಸಾಹಿತ್ಯಗಳನ್ನು ಚಿಕ್ಕಂದಿನಿಂದಲೇ ಕೊನೆಯ ಕೋರ್ಸಿನವರೆಗೂ ಶಿಕ್ಷಣಪದ್ಧತಿಯಲ್ಲಿ - ಸಮರ್ಥವಾಗಿ ಅಳವಡಿಸಿಕೊಳ್ಳೋಣ.

ನನ್ನ ನೆಲೆಯೇನೆಂಬುದನ್ನು ಧೈರ್ಯದಿಂದ ಎಲ್ಲೆಲ್ಲೂ ವಿನಂತಿಸಿ ನೋಟೀಸ್, ಜಾರಿ ಮಾಡುತ್ತೇನೆ! ಅದರ ಮೇಲೂ ಆ ಸರ್ವ ಸಂಪೂರ್ಣ, ದಯೆ ತೋರದೆ ಇದ್ದ ಪಕ್ಷದಲ್ಲಿ ಗೊಲ್ಲರ ಹಟ್ಟಿಗಳಿಗೆ ಹೋಗುತ್ತೇನೆ. ವೈದಿಕರ ಆಶ್ರಮಗಳಿಗೆ ನುಗ್ಗುತ್ತೇನೆ. ಇಡೀ ಪೃಥ್ವಿಗೇ ತಾವೊಡೆಯರೆಂಬ ಸಾರ್ವಭೌಮ ರಾಜರ್ಷಿಗಳ ಬಳಿ ಸಾರುತ್ತೇನೆ. ಜನ ಜಂಗುಳಿ ಎಲ್ಲೆಲ್ಲಿ ಸೇರಿರುವುದೋ ಅಲ್ಲಲ್ಲಿಗೇ ಧಾವಿಸುತ್ತೇನೆ. ನಾಟಕ ಶಾಲೆಗಳನ್ನೂ ನಾನು ಪ್ರವೇಶಿಸದೆ ಬಿಡುವುದಿಲ್ಲ. ನನ್ನೀ ದಾರುಣ ದಯನೀಯ ದೆಶೆಯನ್ನು ಅವರಿಗೆಲ್ಲಾ ಮನಗಾಣಿಸಿ ಕೊಡುತ್ತೇನೆ! ಈ ಆಳ್ವಾರ್ ಶರಣರೇನೂ ಲೋಕವಿಮುಖರಲ್ಲ. ಸರ್ವಾಽಭಿಮುಖರು! **'ಇವರಿಗೆ ಜನ ಸಂಪರ್ಕವೇ ಶರಣಾಗತಿ ತಪಸ್ಯಾಕ್ಷೇತ್ರ!'** ಹೀಗೆ ತುಂಟುತನದ ಕೃಷ್ಣ! ನಡವಳಿಕೆಯ ಶ್ರೀರಾಮ ಇವರ ಬಳಿಗೆಲ್ಲಾ ಸಾರಿ ಲೋಕಕ್ಕೂ ಅರಿವು ಹಾಗೂ ಧೃತಿಪೂರ್ವಕ ವಿಚಾರ ಶಕ್ತಿ, ಸತ್‌ಕ್ರಿಯಾಗಿ ಶಕ್ತಿ ಬೆಳೆಸುತ್ತೇನೆ. ತಾಳೇ ಮರದ ಗೊದಮೊಟ್ಟೆಯನ್ನು ನನ್ನ ಎರಡೂ ತೊಡೆಗಳ ನಡುವೆ ಹಿಡಿದು ಈ ಹಿರಿಸಿರಿ ಮಡಲನ್ನು ನಿಶ್ಚಿತವಾಗಿಯೂ ನಡೆಸಿಯೇ ತೀರುತ್ತೇನೆ. ಲೋಕ ಹಾಗೂ ಲೋಕೇಶ್ವರ ಈ ಉಭಯರೇ, ಈ ನಿರ್ಭಾಗ್ಯ ಸಂತರಿಗೆ ಏಕೈಕ ಆಧಾರ. **"ಜಗತ್ತನ್ನು ಬಿಟ್ಟ ಜಗದೀಶ್ವರನಾಗಲೀ, ಜಗದೀಶ್ವರನನ್ನು ಬಿಟ್ಟ ಕೇವಲ ಜಗತ್ತಾಗಲೀ ಸಂತ ಶರಣರಿಗೆ ಒಪ್ಪದು. ಇಂತಹ ಆಳ್ವಾರಿಗೆ ಉಭಯವೂ ಬೇಕು. ಅಂತೆಯೇ ಇವರನ್ನು ಮುಂದಿನ ಆಚಾರ್ಯರೆಲ್ಲಾ ಉಭಯ ವೇದಾನ್ತ ಪ್ರವರ್ತಕರು ಎಂದೇ ಕರೆದರು".**





ತಿರುವರಂಗತ್ತಮುದನಾರ್

''ಮೂಂಗಿಲ್ ಕುಡಿ'' ಎಂಬ ತಮಿಳುನಾಡಿನ ಒಂದು ಗ್ರಾಮದಲ್ಲಿ ಜನಿಸಿದವರೇ ಈ ''ರಾಮಾನುಜನೂರ್ ಅನ್ಯಾದಿ''ಯ ಕೃತಿಕಾರರು. ಅವರ ಹೆಸರು ತಿರುವರಂಗತ್ತಮುದನಾರ್. ಶ್ರೀರಂಗಾಽಮೃತ ದೇಶಿಕ. ಭಗವದ್ ಭಾಗವತ ಆಚಾರ್ಯ ಕಟಾಕ್ಷ ಬಲದಿಂದ ಬಾಲ್ಯದಿಂದಲೇ ಇವರಿಗೆ ಶ್ರೀರಂಗ ಕ್ಷೇತ್ರವಾಸದ ಅಮೃತಭಾಗ್ಯ ಸಿಕ್ಕಿತು. ದೇವಾಲಯದ ''ಕೊರಡುಮಣೆಯಂ'' ಪ್ರಧಾನ ಮಣೇಗಾರರಾಗಿರುವ ಕೈಂಕರ್ಯ. ಸಕಲ ಶಾಸ್ತ್ರಜ್ಞರೂ ಆದ ಇವರು ಶ್ರೀರಂಗದಲ್ಲೇ ಮೆರೆದವರಾದುದರಿಂದ ಆ ಹೆಸರು ಇವರಿಗೆ ಅನ್ವರ್ಥವಾಗಿಯೇ ಉಳಿಯಿತು.

ಶ್ರೀಮದ್ ರಾಮಾನುಜರ ಚಾತುರ್ಯ ಹಾಗೂ ಕಟಾಕ್ಷದಿಂದ, ಇವರಿಗೆ ಶ್ರೀಕೂರೇಶರ ಪರಮ ಸಾತ್ವಿಕ ಸತ್‌ಸಂಗ ದೊರಕಿತು. ಅವರ ಸಿರಿಯಡಿ ಆಶ್ರಯಿಸಿ ಪ್ರಪತ್ತಿ ದೀಕ್ಷಿತರೂ ಆದರು. ರಾಮಾನುಜರ ಸಾಮಾಜಿಕ ಪರಮೌದಾರ್ಯ, ಕೃಪಾಮಾತ್ರ ಪ್ರಸನ್ನತೆ! ಎಲ್ಲರನ್ನೂ ಕರೆಕರೆದು ಗೈಯ್ಯುವ ಸದರ್ಥೋಪದೇಶ ಇದನ್ನೆಲ್ಲಾ ಕಂಡು ಈ ಅಮುದನಾರ್ ಮೊದಮೊದಲು ಆಚಾರ್ಯರ ಬಗೆಗೆ ತಿರಸ್ಕಾರ ತಾಳಿದ್ದವರೇ ಆಗಿದ್ದರು. ಆದರೆ ಕೂರತ್ತಾಳ್ವಾನ್ ಅವರ ಪರಮ ಅಹಿಂಸಾ ಪ್ರೇಮಳ ಸಾತ್ವಿಕತೆಯಿಂದ, ತಮ್ಮ ಪೂರ್ವಗ್ರಹ ತೊರೆದೇ ಬಿಟ್ಟರು. ಯುಗಧರ್ಮದ ಯಥಾರ್ಥ ಅರಿವು ರಾಮಾನುಜರ ಸಾಹಸಮಯ ದಿಟ್ಟತನ, ಆಳ್ವಾರ್‌ಗಳಿಂದ ಸ್ಫೂರ್ತವಾಗಿದುದೆಂದೂ ಅವರಿಗೆ ಮೂಡಿ ಬಂತು. ಏಕ ವೇದಾನ್ತ ಮಾತ್ರಜ್ಞರಾಗಿದ್ದವರು, ಈಗ ಉಭಯ ವೇದಾನ್ತದಲ್ಲಿಯೂ ಸಹೃದಯರಾಗಿಬಿಟ್ಟರು! ಚಿಂತನೆಯಲ್ಲಿ ಸಮತೋಲನ ಶಕ್ತಿ ಬೆಳೆಯಿತು.

ಮಧುರ ಕವಿಗಳು ಹೇಗೆ, ಗುರುಶಠಕೋಪರನ್ನುಳಿದು ಮತ್ತೊಂದು ದೇವರು ನನ್ನ ಅರಿವಿಗೇ ಬಾರದು, ಎಂದರೋ

ತೇವು ಮತ್ತರಿಮೇನ್, ಕುರುಹೂರ್ ನಮ್‌ಬಿ, ಅವಿದಿತ ವಿಷಯಾಂತರಃ ಶಠಾರೇಃ

ಅಂತೆಯೇ ತಿರುವರಂಗತ್ತಮುದನಾರರೂ ಅನನ್ಯಚರಮ ಆಚಾರ್ಯ ನಿಷ್ಠೆಗೇರಿಬಿಟ್ಟರು. ಅವರಿಗೆ ನಮ್ಮಾಳ್ವಾರ್, ಇವರಿಗೆ ರಾಮಾನುಜರೇ ಪರಮ ದೈವ. ಅವರು ಕಣ್ಣಿನುಣ್ ಶಿರುತ್ತಾಮ್ಬು ೧೧ ಹಾಡು ರಚಿಸಿದರೆ, ಇವರು ರಾಮಾನುಜನೂರ್ ಅನ್ಯಾದಿ ೧೦೮ ಪಾಶುರ ರಚಿಸಿದರು.

ಈ ಕೃತಿ ಸ್ವಾಚಾರ್ಯರಾಗಿ ತಮ್ಮನ್ನು ತಿದ್ದಿದ ಕೂರತ್ತಾಳ್ವಾರ್ ಅವರ ಮುಖೋಲ್ಲಾಸಕಾರಿ, ಹಾಗೂ ಅವರಿಗೂ ಆಚಾರ್ಯರಾದ ರಾಮಾನುಜರಿಗೂ ಸಂತೋಷವೆನಿಸಿತು. ಕಾರಣವೆಂದರೆ, ತಮ್ಮ ಬಗೆಗೆ ಆಳ್ವಾರ್, ಆಚಾರ್ಯರ ಉಲ್ಲೇಖವಿಲ್ಲದ ಇವರ ಮೊದಲ ಒಂದು ಕೃತಿಯನ್ನು ಪರಮಾಚಾರ್ಯರು ನಿರಾಕರಿಸಿದ್ದರು. ಮತ್ತೆ ಅಮುದನಾರ್, ಆಳ್ವಾರ್ ಶರಣರೆಲ್ಲರ ಹಾಗೂ ಅವರ ದಿವ್ಯಪ್ರಬನ್ಧ ಜಾನಪದ ವೇದದ ಸಂಸ್ಕೃತ ವೇದದ ''ಹಿತಂ ಪ್ರಿಯಂ'' ಅನ್ಯಾದೃಶ ಶೈಲಿಗೆ ಮಾರುಹೋದ ನಾಥಮುನಿ ಯಾಮುನಮುನಿಗಳ ಸಂಬಂಧವಿಟ್ಟು ರಚಿಸಿದ ಈ ೧೦೮ ಗಾಥೆಗಳ **''ಪ್ರಪನ್ನ ಶರಣರ ಜಾತ್ಯತೀತ ವರ್ಣಾತೀತ ಗಾಯತ್ರೀ''** ಎಂದೇ ಪ್ರಸಿದ್ಧಿ ಪಡೆದು ಮಾನ್ಯವಾಯಿತು. ಅಂದಿನಿಂದ ಶಿಷ್ಟ ಗೋಷ್ಠಿಯಲ್ಲಿ ಈ ಪ್ರಬಂಧಕ್ಕೂ ಸ್ಥಾನ ದೊರಕಿತು! ''ಅತಿ ಆಗ್ರಹ. ಅತಿ ಅವಿವೇಕ'' ''ಮಡಿ ಮಡಿ'' ''ಬಿಡಿ ಬಿಡಿ'' ಇವೆರಡರ ಘೋರ ಘರ್ಷಣೆಯನ್ನು ಸಮೀಕರಿಸಿ, **''ವಿವೇಕಯುಕ್ತ ರಿಲಿಜಿಯಸ್ ಮೈಂಡ್ - ಕಾಸ್‌ಮೋಪಾಲ್ಟಿನ್ ಮೈಂಡ್''** ಉಭಯಗುಣಗ್ರಾಹಿ, ಅನುಯಾಯಿಗಳ ದೋಷಯುಕ್ತ ಪ್ರಕೃತಿ ಪರಿವರ್ತನ ಕಾರಿ, ಈ ಸಾಂಸ್ಕೃತಿಕ ಶಾಂತಿಮಯ ಸ್ಥಿರ ಸಂಧಾನ ಮುಂದುವರಿಯಿತು. ವಿಶ್ವದಲ್ಲಿ ಖಾವು ಏರುವುದು ಪ್ರಕೃತಿ ಸಹಜ. ಅದನ್ನು ಅಧ್ಯಾತ್ಮದ ಎಣ್ಣೆಯ ಉಪಚಾರದಿಂದಲೇ ಅಹಿಂಸಾ ಪ್ರೇಮಮಾರ್ಗದಿಂದಲೇ, ತಂಪೆರೆದು ಅದಕ್ಕೂ ಸರಿದಾರಿ ತೋರಿಸುವ, ಕೆಟ್ಟುದನ್ನು ಬಿಡಲು ಸಹಾಯ ನೀಡುವಂತೆಸಗುವವರೇ ಯುಗಪುರುಷರು. ಎಂದೂ ಸ್ನೇಹನ ಕಾರ್ಯ ನಡೆಯುತ್ತಲೇ ಬರುತ್ತದೆ.

ಅಸಿಸ್ಟ್ ದಿ ಇವಿಲ್ ಡೂಯರ್, ಹೌಟು ಅವಾಯ್ಡ್ ಇಟ್, ನಾಟ್ ರೆಸಿಸ್ಟ್

ಈ ಸೌಮ್ಯತಮ ಅಹಿಸಂಕ ಸತ್ಯಾಗ್ರಹಕ್ಕಿಂತಲೂ, ಸತ್ಯಗ್ರಾಹ, ಅನಿಂದಾ ವ್ರತಗಳೇ ಯುಗಧರ್ಮ. ಇದರ ಶಿಕ್ಷಣವೇ ಎಲ್ಲೆಲ್ಲೂ ಯಾವಾಗಲೂ ತಾರಕ! ಎದುರಾಳಿಗಳೆಂದು ನಾವೇ ಭಾವಿಸುವವನರಲ್ಲೂ ಇರುವ ಸತ್ಯವನ್ನು ಗಮನಿಸಿ ಸಹಾಯಕ ವಾತಾವರಣ ನಿರ್ಮಾಣಗೈಯ್ಯಬೇಕು. ಸತ್ಯಶೋಧನೆಯಲ್ಲಿ 'ಸಖ್ಯಶೋಧನೆ'ಯ ಪಾತ್ರವೇ ಮುಖ್ಯ - ಸತ್ಯ ದೂರವಾದರೂ 'ಪ್ರೀತಿ-ಕರುಣೆ' ಸನಿಯದಲ್ಲಿರಬೇಕು.

ಓಂಕಾರಾರ್ಥವಾದ ಮೊದಲ ಸಾವಿರ, ಮುದಲಾಯಿರಂ ದಿವ್ಯಪ್ರಬಂಧದ ಹಾಗೂ ಎರಡನೇ ಸಾವಿರವಾದ ಪೆರಿಯ ತಿರುಮೊಳಿಗಳ ನಡುವೆ ''ನಮಃ'' ಶಬ್ದದಂತೆ, ಮಧುರ ಕವಿಗಳ ಗುರುಕಾವ್ಯವೂ ಸೇರಿದಂತೆ ೪೦೦೦ ವರ್ಷಗಳಾದ ಮೇಲೆ ಆಚಾರ್ಯರಾಮಾನುಜರ ಈ ಗುರುಕಾವ್ಯ ಮೂರನೆಯ ಸಾವಿರ ಮತ್ತು ನಾಲ್ಕನೆಯ ಸಾವಿರ, ತಿರುವಾಯ್‌ಮೊಳಿ ಇಯಲ್‌ಪಾ ಇವುಗಳ ಕೊನೆಗೆ ಸೇರಿ, ''ಓಮ್ ನಮಃ ನಾರಾಯಣ ಆಯ'' ಸಂಪೂರ್ಣವಾಯಿತು! ತಿರುಮಂಗೈಗಳ ಹಿರಿಯ ಸಿರಿನುಡಿ ಪೂರಾ ''ನಾರಾಯಣ'' ಶಬ್ದಾರ್ಥ. ಇಯಲ್‌ಪಾ ಹಾಗೂ ಸಿರಿಬಾಯ್‌ನುಡಿ, ಕೈಂಕರ್ಯ ಪ್ರಾರ್ಥನೆಯ ''ಆಯ'' ಎಂಬ ಚತುರ್ಥೀ ವಿಭಕ್ತ್ಯರ್ಥ.

ಯಾವೊಂದು ವಸ್ತುನಿಷ್ಠ ತತ್ವಜ್ಞಾನಕ್ಕೂ, ಅದನ್ನು ಜಾರಿಗೊಳಿಸಿ ಜೀವನದಲ್ಲಿ ಪ್ರಯೋಗಿಸುವ ಹಿತಕ್ಕೂ ಅದರಿಂದ ನಿಷ್ಪನ್ನವಾಗುವ ಪುರುಷಾರ್ಥಕ್ಕೂ ಗುರು ಬೇಕೇಬೇಕು. ಅವನು ಯಾವುದೇ ರೂಪ, ಅರೂಪದಲ್ಲಿರಲಿ! ಅಂತಹ ಆಚಾರ್ಯನನ್ನು ಸೃಷ್ಟಿಸಿ ಕೊಟ್ಟವನು ಪರಮಾಚಾರ್ಯನಾದ ದೇವರೇ. **''ದೇವರ ಸಂಬಂಧವಿದ್ದೇ ಆಚಾರ್ಯಲಾಭ, ಆಚಾರ್ಯನ ಸಂಬಂಧವಿದ್ದೇ ದೇವರ ಬಗ್ಗೆ ಜ್ಞಾನ ಅನುಷ್ಠಾನ ಲಾಭ''**. ಈ ಉಭಯ ದೃಷ್ಟಿಯಿಂದ ಸದ್‌ಗುರುವಿನ ಸ್ಥಾನಮಾನದ ಬಗ್ಗೆ ಚಿಂತಿಸುವಾಗ ಇಂತಹ ಸ್ವಾನುಭವದಿಂದ ಉತ್‌ಸ್ಫೂರ್ತವಾದ ಆಚಾರ್ಯ ವಿಷಯಕವಾದ ಕೃತಿ ಪ್ರಬನ್ಧಗಳ ಅನಿವಾರ್ಯತೆಯೂ ಅರಿವಾಗುವುದು.

ದೇವರನ್ನು ಒಪ್ಪದವರೂ ಗುರು, ಮಾರ್ಗದರ್ಶಕ ಇಲ್ಲವೆನ್ನಲಾಗದಷ್ಟೆ. ಅಂತೆಯೇ ಭಗವಂತನೂ ಕೊಟ್ಟ ಕೊನೆಗೆ ಗುರುಪಟ್ಟೆಯಲ್ಲಿ ಕೂರಲು ಬಯಸುವುದು. ನಾಸ್ತಿಕರೆಂದು ಕೊಳ್ಳುವರೂ, ಆದರ್ಶ ನಿರ್ಮಲ ವ್ಯಕ್ತಿತ್ವದ ತಜ್ಞ ಸಂಪನ್ನರನ್ನೇ ತಮ್ಮ ಗುರುವನ್ನಾಗಿಸಿಕೊಳ್ಳುವರು. ಬೌದ್ಧ ಜೈನಾದಿಗಳಲ್ಲಿ ದೇವರ ಸ್ಥಾನದಲ್ಲಿ ಬುದ್ಧ ಭಗವಾನನನ್ನೂ, ಜಿನತೀರ್ಥಂಕರರನ್ನೇ ಗೌರವಿಸುತ್ತಾರೆ. ಅವರೆಲ್ಲರನ್ನೂ ಮೂಲ ವೈದಿಕ ಧರ್ಮ ದೇವರೆಂದೇ ಗುರುತಿಸಿದೆ. ವಿಭೂತಿ ಪುರುಷ ಮಹಿಳೆಯರೆಲ್ಲರೂ ಭಗವದಂಶ ಸಂಭೂತರೇ. ಅವರವರು ಆಯಾಯ ಕಾಲದಲ್ಲಿ ಕಾಣಿಸಿಕೊಳ್ಳುವುದೂ, ಹಿಂದಿನ ಧರ್ಮವಿಚಾರ, ಆಚಾರಗಳ ಶೋಧನೆಗಾಗಿಯೇ ಹೊರತು, ಯಾರೂ ಯಾರನ್ನೂ ಖಂಡಿಸಿ ದಿಗ್‌ವಿಜಯ ಸಾಧಿಸಬೇಕೆಂದಲ್ಲ. ಪ್ರಕೃತಿ ದೋಷಗಳನ್ನು ಗುರುತಿಸುವುದು, ತದ್ ವಿರೋಧ ಪರಿಹಾರ, ಸ್ವಚ್ಛವಿಚಾರ, ಸ್ವಚ್ಛ ಆಚಾರಕ್ಕಾಗಿಯೇ ಎಲ್ಲರ ಪ್ರಯತ್ನ. ವೇದಧರ್ಮದಲ್ಲೇ ಈ ಅಂಶಗಳೆಲ್ಲಾ ಅಡಗಿವೆ.

ಹೀಗೆ ಆಚಾರ್ಯನಿಷ್ಠೆಗೂ ದೈವ ನಿಷ್ಠೆಗೂ ಬಹಳಷ್ಟು ಪರಸ್ಪರ ಪೋಷಕತ್ವವನ್ನೇ ನಾವು ಕಾಣಬಹುದು. ಎಲ್ಲರೂ ನೈತಿಕವಾಗಿ ಒಳ್ಳೆಯವರಾದುದರಿಂದ ''ಸನ್ತಿಂ ಇಚ್ಛನ್ತಿ ಸಾಧವಃ''. ಸಮನ್ವಯವೇ ಜಗತ್ತಿನ ಎಲ್ಲಾ ಕ್ಷೇತ್ರಗಳಿಗೂ ಕ್ಷೇಮಂಕರ, ಹಾಗೂ ನಿರ್ಮಲೀಕರಣ ಪೂರ್ತೀಕರಣ. ಎಲ್ಲ ಧರ್ಮಗಳ ಸಮಾನಾಂಶ ಒಳಿತುಗಳನ್ನೆಲ್ಲಾ, ಮಧುಕರ, ವೃತ್ತಿಯಂತೆ ಸರ್ವರೂ ಕೊಟ್ಟುಕೊಳ್ಳುವತ್ತಲೇ ಗಮನ ನೀಡಿದರೆ ಸರ್ವಗುರುಗರಿಮೆ. ಸರ್ವದರ್ಶನಸಂಗ್ರಹದಂತೆ, ಸರ್ವಸಂಗ್ರಾಹಕ ದರ್ಶನ ಮೂಡಿ ಬರುತ್ತದೆ. ಇದೊಂದು ಶುಭ ಚಿಹ್ನೆಯೇ ಸರಿ! ವಿಜ್ಞಾನವೂ ಇದೇ ಇಂಗಿತವನ್ನೂ ತೋರಹತ್ತಿದೆ. ಎಲ್ಲಾ 'ಇಸಂ'ಗಳೂ ಅವವುಗಳ ಮೌಲಿಕ ಸ್ವಸ್ಥ ಉಳಿವಿಗಾಗಿಯೇ ಕೂಡಿಬಾಳುವತ್ತ ಹೆಜ್ಜೆಯಿಡುತ್ತಿವೆ.

ಆಚಾರ್ಯನೆಂದಾಗ ದೇವರಷ್ಟೇ ಪ್ರಾಯಃ ವ್ಯಾಪಕನೂ ಪರಮಶುದ್ಧ ನಿರಪಾಯ ಆದರ್ಶನೂ ತ್ರೈಕಾಲಿಕನೂ, ಸಾರ್ವದೈಶಿಕನೂ ಎಂಬುದೇ ಗೃಹೀತ. ಅಂತಹ ಆಚಾರ್ಯ ಲಕ್ಷಣ ಲಕ್ಷಿತರೆಲ್ಲರಲ್ಲೂ ಸಮಾನ ಗೌರವದಿಂದ, ಆತ್ಯನ್ತಿಕ ವ್ಯಾವರ್ತಕ ದೃಷ್ಟಿ ಬಿಟ್ಟು ಸಂಕುಚಿತ ಮನೋಭಾವನೆ ಬೆಳಸಿಕೊಳ್ಳದ ಷರತ್ತು, ಈ ನಿಷ್ಠೆಗೆ ಸರ್ವತೋಮುಖವಾದ ಮರ್ಯಾದೆ ತರುವುದು. ಅವರವರ ಆಚಾರದಲ್ಲಿ ಸಂಯಮ. ವಿಚಾರದಲ್ಲಿ ಮುಕ್ತತೆ. ಯಾವೊಂದು ಧರ್ಮದಿಂದ ಧರ್ಮಾಂತರ ಸಾಂಕರ್ಯ, ಸ್ವಧರ್ಮದ ಸಮಗ್ರಜ್ಞಾನದ ಅಭಾವದಿಂದಲೇ ಹೊರತು, ಬೇರೆಯಲ್ಲ. ತಮ್ಮದನ್ನು ಇತರರ ಮೇಲೆ ಹೇರಬಾರದು. ಅವರೇ ಇಚ್ಛಿಸಿದರೂ **''ನೀನು ನಿನ್ನ ಧರ್ಮ, ನಿನ್ನ ಗುರುವಿನಲ್ಲೇ ಇದ್ದು, ಸಾತ್ವಿಕ ಪರಾಕ್ರಮದಿಂದ ಹೋರಾಡು!''** ಇದನ್ನು ಮಹಾತ್ಮನೋರ್ವ ತೋರಿದ್ದಾನೆ. ಸರ್ವಸ್ವತ್ಯಾಗಕ್ಕೂ ಸಿದ್ಧರಿಲ್ಲದಿದ್ದಾಗ ಯಾವೊಂದು ಸದ್‌ಧರ್ಮವೂ, ಯಾವೋರ್ವ ಗುರುವೂ ಪ್ರಕಾಶಿಸನು.

ರಾಮಾನುಜರೂ, ಎಲ್ಲಾ ಧರ್ಮಗಳ ಒಳಿತನ್ನೇ ಸ್ವೀಕರಿಸಿದ ಷಟ್‌ಪದ ಭ್ರಮರದಂತೆ. **''ಸರ್ವಸ್ಯ ವೇದ ವೇದ್ಯತ್ವಾತ್ ಸರ್ವಂ ಸಮರ್ಥಿತಂ'' ''ಸರ್ವಂ ಸಮಂಜಸಂ''**. ನೀವೇನು ಹೇಳುವಿರೋ ಅದೆಲ್ಲಾ ಸರಿ. ಸಾಮಗ್ರೀದೋಷ ಮಾತ್ರ ಪರಿಮಾರ್ಜಿತವಾಗಲಿ. ಯಾವ ಜ್ಞಾನ ವಿಜ್ಞಾನವೂ ತಪ್ಪಲ್ಲ. ಆಚಾರ್ಯರಾಮಾನುಜರ ಆಯಪಾಣಿಯಾದ ಸಂಶೋಧಿತ ಹೇಳಿಕೆ.

''ಯಥಾರ್ಥಂ ಸರ್ವವಿಜ್ಞಾನಂ ಇತಿವೇದವಿದಾಂಮತಂ''

''ಸರ್ವಂ ಸರ್ವತ್ರ ವರ್ತತೇ'' ಎಂಬುದೇ. ಆಳ್ವಾರ್ ''ಉಳನ್‌ಎನ ಇಲನ್ ಎನ ಇವೈಗುಣಂ ಉಡಮೈಯಿಲ್| ಉಳನ್ ಇರುತಹಮೈಯೋಡು'' ಅಸ್ತಿತ್ವ, ನಾಸ್ತಿತ್ವ ಉಭಯವೂ ಪರಮಾತ್ಮನ ದ್ವಿವಿಧಧರ್ಮಗಳೇ, ಸ್ಥೂಲಾವಸ್ಥೆ, ಸೂಕ್ಷ್ಮಾವಸ್ಥೆಗಳಷ್ಟೇ ವಿರೋಧವಿಲ್ಲ ಎಂದೇ ಅನುಗ್ರಹಿಸಿರುವರು.

ಇರಾಮಾನುಶ ನೂತ್ತನ್ದಾದಿ ೭೬

ತಮಿಳ್ ತಿರಳ್

നിന്ന വണ് കീര്ത്തിയുമ് നീള് പുനലുമ് നിറൈ വേങ്കട പ്പൊര് കുന്നമുമ് വൈഹുന്ദ നാടുമ് കുലവിയ പാര് കടലുമ്
ഉന് തനക്കെത്തന്നൈ ഇന് ബമ് തരുമ് ഉന് ഇണൈ മലര് താള് എന് തനക്കുമ് അദു ഇരാമാനുശാ ഇവൈ യിന്ദ്രുരൈയേ

ಕನ್ನಡ ನೆರಳ್

ನಿಂದೇ ಕೊಡುಗೈ ಕೀರುತಿಯೂ ನೀಳ್ ಹೊನಲಿಂ ತುಂಬಿಹ ವೆಂಕಟವೂ
ಹೊಂದೇ ಬರುವಾ ಹೊಂಗಳೆ, ವೈಕುಂಠದ ನಾಡೂ ಪೊಳೆಯುವ ಹಾಲ್ಗಡಲೂ
ನಿನಗೇಸಾssನಂದಾssವಹವೋ ನಿನ್ ಜೋಡಿಯ ಮಲರಡಿ
ಎನಗೂ ಅಪ್ಪದು ರಾಮಾನುಜನೇ! ಇವನೀಯ್ದರುಳೋ

ರಾಮಾನುಜರ ಎದುರಿಗೇ ನಿಂತಂತೆ ತಿರುವರಂಗತ್ತಮುದನಾರ್ ಓ ಗುರುದೇವಾ! ಸರ್ವಕಾರಣನಾದ ಸರ್ವೇಶ್ವರನಲ್ಲಿ ನಿಮಗೆಷ್ಟು ನೇಹವಿದೆಯೋ, ಅವನ್ನೆಲ್ಲಾ ನಿಮ್ಮ ಬಗೆಗೇ ಇರಿಸಿ ಬೆಳೆಯುವಂತೆ ಕೃಪೆ ಮಾಡಿ ಎಂದು ಈ ಪಾಶುರದಲ್ಲಿ ಪ್ರಾರ್ಥಿಸುತ್ತಾರೆ. "ಇ ರಾಮನುಶಾ" ನೂರೆಂಟು ಪಾಶುರಗಳಲ್ಲೂ ಈ ಆಚಾರ್ಯನ ಸಿರಿನಾಮ ಬಂದೇ ಬರುತ್ತದೆ. ಆದುದರಿಂದ ಇದು ೧೦೮ ಗುರುಗಾಯತ್ರೀಮಂತ್ರ! ಆಚಾರ್ಯನ ಅಷ್ಟೋತ್ತರ ಶತನಾಮಾವಳಿಯೂ ಆಗಬಲ್ಲದು. ಎಲೈ ಶ್ರೀರಾಮನಿಗೆ ತಮ್ಮನಾಗಿ ಆದಿಶೇಷನಾಗಿದ್ದವನೇ ಅವತರಿಸಿ ಸರ್ವಸೇವಾಧುದಂಧರನಾದ ಲಕ್ಷ್ಮಣ ಮುನಿಯೇ! ಶ್ರೀಕೃಷ್ಣನಿಗೆ ಅಣ್ಣನಾಗಿ, ವಸುದೇವನ ಮತ್ತೋರ್ವ ಪತ್ನಿಯಾದ ರೋಹಿಣಿಯ ಗರ್ಭಕ್ಕೆ ಸಂದು ಜನಿಸಿ, ತುಂಟ ತಮ್ಮನನ್ನೂ ಸಮಯ ಸಮಯದಲ್ಲಿ ಹತೋಟಿಗೆ ತಂದು ಸೇವೆ ಸಲ್ಲಿಸಿದ ಓ ಬಲರಾಮನೇ! ಕೃತಯುಗದ ಓ ಅನನ್ತ ಶೇಷನೇ! ಕಲಿಯುದಲ್ಲಿ ಈ ರೂಪದಲ್ಲೂ ಓರ್ವ ಅನಿರ್ವಾಚ್ಯ ಮಹಿಮೆಯುಳ್ಳ ಮನುಷ್ಯರೂಪದಲ್ಲಿ ತೋರುತ್ತಿರುವವನೇ! ಓ ಗೋದಾಗ್ರಜನೇ!

ನಿನ್ನ ಅಳಿವಿಲ್ಲದ, ಶಾಶ್ವತವಾದ, ವಣ್ ಕೀರ್ತಿಯುಮ್ = ಸ್ವಲ್ಪವೂ ಲೋಭವಿಲ್ಲದ ಅತಿ ಧಾರಾಳವಾಗಿ, ಜನ ಬಯಸುವುದಕ್ಕಿಂತ ಹೆಚ್ಚಾಗಿಯೇ ಕೊಡುವ ಆ ನಿರವಧಿಕ ಯಶಸ್ಸನ್ನೂ, ನೀಳ್ ಪುನಲುಮ್ = ೩೩ ಕೋಟಿ ದಿವ್ಯ ತೀರ್ಥಗಳನ್ನೂ, ನಿರೈ = ತುಂಬಿ ಕೊಂಡೇ ಇರುವ, ಕೀರ್ತಿಪೂರ! ತೀರ್ಥಪೂರ! ಹೀಗೆ ಉಭಯ ಸಂಪನ್ನ ಶ್ರೀ ಕ್ಷೇತ್ರವಾದ ವೆಙ್ಗಡ ಪ್ಪೊರ್ ಕುನ್ನಮುಮ್ = ಶ್ರೀವೇಂಕಟಗಿರಿಯೆಂಬ ಹೇಮಗಿರಿಯೂ, ವೈಹುನ್ದನಾಡುಮ್ = ನಾಡಿಗೆ ನಾಡೇ ಪೂರಾ ಶುದ್ಧ ಸತ್ವಮಯವಾಗಿ ಯಾವುದೇ ಬಗೆಯ ಕುಂಟುತನವಿಲ್ಲದ ನಿತ್ಯವಿಭೂತಿಯಾದ, ಆ ವೈಕುಂಠವೂ, ಕುಲವಿಯ = ಚತುರ್ಮುಖ, ಇಂದ್ರಾದಿ ದೇವತೆಗಳು, ಸನಕಾದಿಯೋಗಿಗಳು ದೂರದಲ್ಲೇ ನಿಂತು ಗೈಯ್ಯುವ ಮೊರೆಯನ್ನು ಆಲಿಸಿ ಅವರಿಗೆ ಆಶ್ವಾಸನೆ ನೀಡುವುದರಿಂದ ಪರಮ ಶ್ಲಾಘ್ಯವಾದ, ಪಾಲ್ ಕಡಲುಮ್ = ಕ್ಷೀರ ಸಮುದ್ರದಲ್ಲಿನ "ವ್ಯೂಹ" ಎಂಬ ಸ್ಥಾನವೂ, ಉನ್‌ತನಕ್ಕು. ನಿಮಗೆ ಎಷ್ಟು ಆನಂದನೀಡುವುವೋ. ಎತ್ತನೈ ಇನ್‌ಬಮ್‌ತರುಮ್.

ಉನ್ ಇಣೈ ಮಲರ್ ತಾಳ್ = ಜೋಡಿ ಕಮಲಗಳಿಗಿಂತಲೂ ಪವಿತ್ರ ಸುಕುಮಾರವೂ ಪರಮ ಭೋಗ್ಯವೂ ಆದ ನಿಮ್ಮ ಶ್ರೀಪಾದವೆಂಬ, ಅದು = ಅನಿರ್ವಚನೀಯವಾದ, ಎಂದರೆ ದೇವರನ್ನೂ ತೋರಿಸಿ ಅವನಿಗಿಂತಲೂ ಬೆಲೆಬಾಳುವ - ಪ್ರಥಮ ಮಧ್ಯಮ ಎರಡನ್ನೂ ಮೀರಿ ಚರಮ ಉಪಾಯವೂ ಚರಮ ಫಲವೂ ಆದ ಅದು ಅಷ್ಟೇ ಆನಂದವನ್ನು ನನಗೆ ನೀಡುವುದು. ಇವೈ = ಅಂತಹ ಶ್ರೀ ಗುರುಚರಣಗಳನ್ನು, ಈನ್ದ = ತಾಯಿ ಹಸು ಕರುವನ್ನು ಈಯ್ದು ದೋಷನೋಡದೆ ಕೊಳಕನ್ನೇ ಭೋಗ್ಯವಾಗಿಸಿಕೊಳ್ಳುವ, ಅರುಳೇ = ಅಸ್ವಚ್ಛ ವತ್ಸರೂಪವಾದ ಈ ಆಚಾರ್ಯಕ ಶರಣನಲ್ಲಿ ವಾತ್ಸಲ್ಯವನ್ನೂ ದಯೆಯನ್ನೂ ಈಯಪ್ಪಾ! ಹಿರಿಯರು ಉಡೈಯವರ ಶ್ರೀಪಾದ ತಮ್ಮ ತಲೆಗೆ ಸೋಂಕುವ ಸಂದರ್ಭಗಳಲ್ಲಿ ಈ ಹಾಡನ್ನು ಅತ್ಯಾದರದಿಂದ ಅನುಸಂಧಿಸುತ್ತಾರೆ. ಅಂತೆಯೇ ಎರಡುಸಲ ಹೇಳುವ "ರಟ್ಟೈಪಾಟ್ಟು" ಇದು!

ತಮಿಳ್ ತಿರಳ್ ೧೦೬

ಇರುಪ್ಪಿಡಮ್ ವೈಹುನ್ದಮ್ ವೇಙ್ಗಡಮ್ ಮಾಲಿರುಞ್ಜೋಲೈ ಯೆನ್ನುಮ್
ಪೊರುಪ್ಪಿಡಮ್ ಮಾಯನುಕ್ಕೆನ್‌ಬರ್ ನಲ್ಲೋರ್ ಅವೈ ತನ್ನೊಡುಮ್ ವ
ನ್ದಿರುಪ್ಪಿಡಮ್ ಮಾಯನಿರಾಮಾನುಶನ್ ಮನತ್ತು ಇನ್ನವನ್ ವ
ನ್ದಿರುಪ್ಪಿಡಮ್ ಎನ್‌ತನ್ ಇದಯತ್ತುಳ್ಳೇ ತನಕ್ಕಿನ್ಬುರವೇ

ಕನ್ನಡ ನೆರಳ್

ಇರುವೆಡೆ ವೈಕುಂಠಂ ವೇಂಕಟಂ ಮಾಲ್ ಇರುಮ್ ಶೋಲೈ ಎಂಬಾ
ಗಿರಿ, ಎಡೆ ಮಾಯಿಗೆ ಎಂಬರ್ ನಲ್ಲವರ್ ಅವ ಜತೆಗೊಂಡೇ ಬಂ
ದಿರುವೆಡೆ ಲೀಲಾಮಾಯಿಗನ್, ರಾಮಾನುಜ ಮನದೊಳ್ ಇಂದವನ್ ಬಂ
ದಿರುವೆಡೆ ಎನ್ನಿದೊ ಹೃದಯದೊಳೇ ತಮಗಿಂಪಣ ವೇರುವೋಲೇ!

ಹಿಂದಿನ ೧೦೫ ಪಾಶುರಗಳಿಂದಲೂ ತಿರುವರಂಗತ್ತಮುದನಾರ್ ಗುರುಗಳಿಗೆ ಪ್ರಿಯವಾಗುವಂತೆ, ಅವರ ಸಿರಿ ಚಿತ್ತಕ್ಕೆ ಹೊಂದಿಬರುವಂತೆ ಅಳ್ವಾರ್ ಹಾಗೂ ಪೂರ್ವಾssಚಾರ್ಯರ ಸಂಬಂಧ ಪಡೆದ ರಾಮಾನುಜರನ್ನು ಕುರಿತು ತಮ್ಮ ಹೃದಯಾಂತರಾಳ ಬಿಚ್ಚಿ ಬಿಚ್ಚಿ ನಾನಾ ಬಗೆಗಳಿಂದ ತೋಡಿಕೊಂಡರು. "ಪೂರ್ವೇ ಪೂರ್ವೇಭ್ಯ ಊಚುಃ" ಮಾನವನಿಗೆ ಹಿಂದಿನ ಹಿರಿಯರ ಬಗ್ಗೆ ಕೃತಜ್ಞತೆಯಿದ್ದರೇನೇ ಎಲ್ಲಾ ಫಲಿಸುವುದು. ಹಿಂದಿನವರು ಮುಂದಿನ ಪೀಳಿಗೆಗೆ ಪ್ರೋತ್ಸಾಹ ಕೊಟ್ಟರೆ ಅವರೂ ಹಿರಿಯರು ಮಾಡದಿದ್ದುದನ್ನು ಮಾಡಿತೋರಿಸುವರು.

ಪರಾಂಕುಶ ಹಾಗೂ ಪರಕಾಲರನ್ನು ವಿಶೇಷವಾಗಿ ೨ ಬಾರಿ ಉಲ್ಲೇಖಿಸಲಾಗಿದೆ. ಯೇಸು ಕುಮಾರರೇ ಆಗಲಿ ಪೈಗಂಬರರೇ ಆಗಲಿ, I have come to fulfill, not to destroy. ಹಿಂದಿನವರ ಸದಭಿಪ್ರಾಯಗಳನ್ನು ಈ ಕಾಲಕ್ಕೂ ಒದಗುವಂತೆ ಪರಿಪೂರ್ಣಗೊಳಿಸಲೆಂದೇ ತಾನು ಬಂದೆನೆನ್ನುತ್ತಾರೆ. ವಿಶ್ವದಲ್ಲಿ ನಾನೊಬ್ಬನೇ ಅಲ್ಲ. ಬಹಳಷ್ಟು ಸತ್‌ಪುರುಷರು ಹೇಳಿರುವರು. "ಸಲಹಾಮಶವೀರ" ಪರಸ್ಪರ ಎಲ್ಲರೂ ಸೌಹಾರ್ದದಿಂದ ಸೇರಿ, ವಿಚಾರ ಮಾಡಿದ "ಏಕದೇವತಾ ನಿಷ್ಠೆ"ಯನ್ನೇ ನಾನೂ ಈಗ ಹೇಳುತ್ತಿರುವುದು. ನಮ್ಮದೇನೂ ಪ್ರತ್ಯೇಕ ಮತವಲ್ಲ.

ಬುದ್ಧ ಭಗವಾನರೂ, ನನ್ನೊಬ್ಬನಲ್ಲೇ ನೀವು ಶರಣು ಮಾಡಿದರೆ ಸಾಲದು. "ಬುದ್ಧಂ ಶರಣಂ ಗಚ್ಛಾಮಿ" ಇದು ಆರಂಭಕ್ಕೆ ಇರಲಿ. ನನ್ನ ಕಾಲವಾದ ಮೇಲೆ ನೀವೆಲ್ಲಾ "ಸಂಘಂ ಶರಣಂ" ಆಗಬೇಕಪ್ಪಾ! ಕೊನೆಗೆ "ಧಮ್ಮಂ ಶರಣಂ" ಏಕೈಕಧರ್ಮನನ್ನೇ ನಂಬಿ ನಡೆಯಿರಿ, ಜೈನಮುನಿಗಳೂ "ಣಮೋಳೋ ಹೇ ಸವ್ವಸಾಹೂಣಂ" "ನಮೋ ಲೋಕೇ ಸರ್ವಸಾಧೂನಾಮ್" ಎಂದೇ ಪಂಚಪರಮೇಷ್ಠಿ ಮಂತ್ರನಿಷ್ಠರೇ ಆಗಿದ್ದಾರೆ!

"ಪ್ರತ್ಯಕ್ಷೇ ಗುರವಃ ಸ್ತುತ್ಯಾಃ" ಗುರು ಗುಣಕಥನ **"ಎನಗಿಂತ ಕಿರಿಯರಿಲ್ಲ ಶರಣರಿಗಿಂತ ಹಿರಿಯರಿಲ್ಲ"** ತನ್ನ ಹಿರಿತನವನ್ನು ಬಣ್ಣಿಸಿಕೊಳ್ಳಬಾರದು. ವರ್ಧಿಷ್ಣು ಪಕ್ವ ಶಿಷ್ಯನಾದವನಿಗೆ ವಿನಯ, ತಾನು ನೀಚಾತಿ ನೀಚನೆಂಬ ಭಾವವಿದ್ದೂ ಗುರು ಸಂಬಂಧದಿಂದ, ಅವರೇ ಎಸಗುವ ಅಭಿಧ್ಯಾನ ಅಭಿಮಾನದಿಂದ ತಾನು ಮೇಲೇರುತ್ತಿರುವುದನ್ನೇ ನೆನೆಯುತ್ತಾ ಅವರ, ಸದ್‌ಗುಣ, ಔದಾರ್ಯ, ಪರಮಕೃಪೆ, ವಾತ್ಸಲ್ಯ, ಮುಂತಾದವುಗಳನ್ನೇ ಎಲ್ಲೆಲ್ಲೂ ಸಮಬುದ್ಧಿಯಿಂದ, ತನ್ನ ಸದಾಚರಣೆಯಿಂದ ತೋರಿಸುತ್ತಾ ಹೋದರೆ ಎಲ್ಲ ಸಿರಿ ಸಂಪತ್ತೂ ತಾನೇ ತಾನಾಗಿ ಒಳ್ಳೆಯ ದಾರಿಯಿಂದಲೇ ಸೇರಿ ಬಿಡುವುದು. ಈ ಆತ್ಮವಿಶ್ವಾಸವೂ ಇರಬೇಕು. ಸಹಜ ಎಚ್ಚರಿಕೆಯೂ ಇರಬೇಕು.

ಹೀಗೆ ಈ ಅಮೃತ ಶಿಷ್ಯನ ಗುರುಪ್ರಾವಣ್ಯವನ್ನು ಕಂಡು, ಸರ್ವಮಂತ್ರ ಮಹೋದಧಿಗಳಾದ ರಾಮಾನುಜರು ಯೋಗಶಕ್ತಿಯಿಂದ ಆತನ ಅಂತರತಮಸ್ಥಾನಕ್ಕೇ ಪ್ರವೇಶಿಸಿಬಿಟ್ಟರು. ನಿಮ್ಮೊಳಗೆ ಇಲ್ಲದ ಯಾತ್ರಾಸ್ಥಳ, ಭಗವದ್‌ಧಾಮಗಳು ತಾನೇ ಯಾವುವು ಉಳಿದಿವೆ? ತಾವೇ ನನ್ನ ಹಿಂದಿನ ಉರಿಮನ ಕೆಡಿಸಿ ಸಿರಿಮನವಾಗಿಸಿದಿರಿ. ಈಗ ನನ್ನ ಮನಸ್ಸಿಗೂ ಒಳಗೊಳಗೇ ಸ್ಥಿರವಾಗಿರಲು ಬಲು ಸಂತಸ ನಿಮ್ಮೀ ಮುಖಾರವಿಂದದಲ್ಲೇ ಕಾಣುತ್ತಿದೆ ಎನ್ನುತ್ತಾರೆ. ಈ ೧೦೬ನೆಯ ಮಂಗಳ ಘಟ್ಟದಲ್ಲಿ.

ಮಾಯನುಕ್ಕು = ಸರ್ವೇಶ್ವರನಿಗೆ, ಸತ್ಯಸಂಕಲ್ಪನಿಗೆ! ನಮಗೆಲ್ಲಾ ಇದ್ದೂ ಇಲ್ಲದಂತೆ ತೋರುವ ಕಮಾಲ್ ಕಲಾಗಾರನಿಗೆ! ಇರುಪ್ಪು ಇಡಮ್. ವಿಶೇಷ ಅಭಿಮಾನದಿಂದ ಇರುವ ಎಡೆಗಳೆಂದರೆ, ವೈಹುನ್ದಮ್ = ಯಾವೊಂದು ವೈಗುಣ್ಯವೂ ಇಲ್ಲದ ನಿತ್ಯಽsನಂದ ವಿಭೂತಿ. ''ಪರಮೇ ವ್ಯೋಮನ್'' ಅತ್ತಣ ಪರಮ ಪದ.

ವೈಕುಂಠೇ ತು ಪರೇ ಲೋಕೇ ಶ್ರಿಯಾ ಸಾರ್ಧಂ ಜಗತ್ಪತಿಃ|
ಆಸ್ತೇ ವಿಷ್ಣುರಚಿನ್ತ್ಯಽssತ್ಮಾ ಭಕ್ತೈರ್ ಭಾಗವತೈ ಸ್ಸಹ||

ಭಕ್ತರು ಮನನ ಪ್ರಧಾನರು. ಭಾಗವತರು ಕಾಯಕ ಕೈಂಕರ್ಯ ಪ್ರಧಾನರು. ''ಮುನಿವರುಮ್ ಅಮರರುಮ್'' ಜ್ಞಾನಿ ಸಂನ್ಯಾಸಿಗಳು. ಕರ್ಮಯೋಗಿಗಳು. ''ವೈಹುನ್ದತ್ತು ಅಮರರುಮ್ ಮುನಿವರುಮ್'' (ತಿ.ವಾ.ಮೊ. ೧೦-೯- ೯) ಉಭಯರಲ್ಲೂ ಉಭಯ ಧರ್ಮವೂ ಒಡಗಿದೆ. ''ಶುಕ ಜನಕಯೋಃ ಏಕಃ ಪನ್ಥಾಃ'' (ವಿನೋಬಾ ಸಾಮ್ಯ ಸೂತ್ರ)

ಅನ್ತರ್‌ಗತ ಮಹಾಕರ್ಮ. ೭ ದಿನಗಳೂ ಅಹೋರಾತ್ರ ಭಾಗವತ ಪ್ರವಚನಾದಿ, ಅನ್ತರ್ಗತಮಹಾಕರ್ಮ. ''ಮಿಥಿಲಾಯಾಂ ಪ್ರದೀಪ್ತಾಯಾ'' ನಮೇ ಕಿಂಚಿತ್ ಪ್ರಪದ್ಯರೇ ಅಸ್ತರ್ಗತ ಮಹಾಜ್ಞಾನ ಕ್ರಮವಾಗಿ ಈರ್ವರದೂ.

ಈ ಲೀಲಾ ವಿಭೂತಿಗೆ ಇಳಿದರೆ, ಮೊಟ್ಟಮೊದಲು ಆ ವೈಕುಂಠದಿಂದ ಈ ಭೂವೈಕುಂಠವೆನಿಸಿದ ವೇಂಕಟಾsಚಲವೇ! ವೇಮ್ ಕಟಮ್, ಈ ಬಡಗಲ ಪರ್ವತ ಶ್ರೇಣಿಯಿಂದ ಹಿಡಿದು ದಕ್ಷಿಣ ಪರ್ವತ ಶ್ರೇಣಿಗೆಲ್ಲಾ ಪ್ರಧಾನವಾದ, ತಿರುಮಾಲ್ ಇರುಂ ಶೋಲೈ! 'ಪರ್ವತ ಸ್ತನ ಮಂಡಲೇ!' ಎಂಬಂತೆ ಭೂಮಾತೆಯ ಉಭಯ ಹೃದಯ ಸ್ಥಾನೀಯ ಇವೆರಡೂ! ಮಾಯನುಕ್ಕು = ಪ್ರಶ್ನಾರ್ಹನಲ್ಲದ ಮಾಯಾವಿ ರಂಗನಿಗೆ! ಎಂದು ನಲ್ಲೋರ್ ಎನ್‌ಬರ್ = ಧರ್ಮದ ಮರ್ಮಜ್ಞರೂ ಶಿಷ್ಟರೂ ಆದ ಹಿರಿಯರೂ, ಶ್ರೌತ ಸ್ಮಾರ್ತ ಆಗಮ ದಿವ್ಯ ಜ್ಞಾನಪದ ಗೇಯ ಗೀತಾದಿ ಪ್ರಮಾಣ, ಪ್ರಮಾತೃಗಳೆನಿದ ಮಹರ್ಷಿಗಳೂ, ಆಳ್ವಾರ್ ಶರಣರೂ ಅಧ್ಯಾತ್ಮ ವಿಜ್ಞಾನ ತಜ್ಞರೂ, ಪರಮಾತ್ಮನಿಗೆ ವಿಶಿಷ್ಟ ಸಂನಿಧಿಗಳೆಂದು ಯಥಾರ್ಥ ದ್ರಷ್ಟಾರರಾಗಿ, ಕಂಡಂತೆಯೇ ಋಜುಬುದ್ಧಿಯಿಂದಲೇ, ಎನ್‌ಬರ್ = ಹೇಳುವರು. ಆಪ್ತವಾಕ್ಯ ಪ್ರಮಾಣ. ಇವರಾರೂ ಖ್ಯಾತಿ, ಪೂಜಾ, ಲಾಭ ಬಡುಕರಲ್ಲ.

ಸ್ಪರ್ಧಾ ವಿಪ್ಲವ ವಿಪ್ರಲಂಭ ಪದವೀ ವೈದೇಶಿಕಾಃ ದೇಶಿಕಾಃ - ವೇದಾನ್ತಾಚಾರ್ಯ

ಅವೈ ತಮ್ ಒಡುಮ್ = ಅವಷ್ಟನ್ನೂ ಬಿಡದೆ, ಅವಷ್ಟರ ಜತೆಗೂ, ವನ್ದು = ಇಲ್ಲಿನವರ ಮೇಲಿನ ಪರಮ ಕೃಪೆಯಿಂದ ದಯಮಾಡಿಸಿ, ಪೂರ್ಣನಾಗಿಯೆ ಸಾನ್ನಿಧ್ಯಗೈದು! ಮಾಯನ್ = ಇದೇನು ಆಶ್ಚರ್ಯ! ಅತ ಸತ್ಯಕಾಮ, ಸತ್ಯ ಸಂಕಲ್ಪ! ಏನು ಬೇಕಾದರೂ ಆಗಬಲ್ಲವನನ್ನೇ 'ಪರಮ ಆತ್ಮಾ' ಎನ್ನುವುದು. ಹಾಗೆ ಉಭಯ ವಿಭೂತಿ ದಿವ್ಯಧಾಮನಾಗಿರುವುದು ಸಾಲದೋ ಎಂಬಂತೆ, ಇನ್ನು = ಈಗ. ಇರುಪ್ಪಿಡಮ್ = ಆನಂದದಿಂದ ಇರುವೆಡೆ, ಇರಾಮಾನುಶನ್, ಮನತ್ತು = ಈ ರಾಮಾನುಜರೆಂಬ ವ್ಯಾಪಕರಾದ ಪರಮಯೋಗಿಗಳ ಚಿತ್ತ ದೇಗುಲದಲ್ಲಿ!

ಅವನ್ = ಎಲ್ಲವನ್ನೂ ತಮ್ಮ ''ವಿಶ್ವಾsಯತನ''ವಾದ ಹೃದಯದಲ್ಲಿ, ಸರ್ವೇಶ್ವರನ ಇಷ್ಟದಂತೆಯೇ, ತಂಗಿಸಿಕೊಂಡಿರುವ ಆಚಾರ್ಯ ರಾಮಾನುಜರು, ವನ್ದು = ದಯಮಾಡಿಸಿ, ಇರುಪ್ಪು ಇಡಮ್ = ಇರುವೆಡೆಯೆಂದರೆ, ಮುಖ್ಯವಾಗಿ ಜಗತ್ತಿನಲ್ಲೇ ಅಂತ್ಯಾನ್ತ್ಯನಾದ ನನ್ನ, ಎನ್‌ತನ್. ಇದಯತ್ತುಳ್ಳೇ = ಈ ಹೃದಯಕ್ಕೂ ಅಂತರತಮ ತಾಣದಲ್ಲೇ! ಇವರಿಗೆ ನನ್ನೊಳಗೂ ಒಳಗಿರಲು ಲವಶೇಶವಾದರೂ ಸಂಕೋಚ ವಿದೆಯೋ? ಎನ್ನಬೇಡಿ. ಇನ್ಬುಉರವೇ! = ನೋಡಿ, ಅವರ ಮೊಗದಲ್ಲಿ ಸ್ವಯಂ ಉಕ್ಕುತ್ತಿರುವ ಸಂತಸ ಮಂದಸ್ಮಿತವನ್ನು! ಸರ್ವಗುರುಗಳೂ ಆನಂದದಿಂದ ಇರುವುದೇ ಯಾವಾಗಲೂ ಕಾಣುತ್ತಲೇ ಇರುವುದಪ್ಪೆ.!

ವೇದಾನ್ತ ದೇಶಿಕರು

ಕಾಂಚೀಪುರದ ತೂಪ್ಪುಲ್ ಎಂಬ ಭಾಗದಲ್ಲಿ ಕ್ರಿ.ಶ. ೧೩ನೆಯ ಶತಮಾನದಲ್ಲಿ ಹುಟ್ಟಿದವರೇ ವೇಂಕಟನಾಥರು. ತಿರುಪತಿ ತಿಮ್ಮಪ್ಪನ ಒಳಗಿನ ಆರಾಧನಾ ಘಂಟೆಯ ಅಂಶವಾಗಿಯೇ ಇವರ ಅವತಾರಭಾಗ್ಯ, ರಾಮಾನುಜರಾದ ಲಕ್ಷ್ಮಣ ಯೋಗಿಗಳ ಅಂಶಭೂತರೂ ಹೌದು! "ಕವಿ ತಾರ್ಕಿಕ ಕೇಸರೀ" ಎಂಬುದು ಅಂದಿನ ಶಿಷ್ಟಗೋಷ್ಠಿ ಇವರಿಗಿತ್ತ ಬಿರುದು. "ಸರ್ವ ತಂತ್ರ ಸ್ವತಂತ್ರ" ಎಂಬ ದಾರ್ಶನಿಕ ಕೀರ್ತಿನಾಮದಿಂದ ಶ್ರೀರಂಗ ನಾಯಕಿ ಇವರನ್ನು ಕರೆದಳು. ೧೨೦ ಗ್ರಂಥ ನಿರ್ಮಾತೃಗಳಿವರು. ದಾಂಪತ್ಯ ಜೀವನದಲ್ಲಿದ್ದೂ, ಒಂದೇ ಸಲ ಭಾರ್ಯಾ ಸಂಗಮಿಗಳು. ಕುಮಾರ ನಯನಾರ್ ಏಕೈಕ ಪುತ್ರ ರತ್ನಕ್ಕೆ ತಂದೆ. "ಫ್ಯಾಮಿಲಿ ಪ್ಲಾನಿಂಗ್" ಇಲ್ಲದೆಯೇ ೧೦೦ ವರ್ಷ ಸೀತೆಯ ಜತೆಗಿದ್ದ ಶ್ರೀರಾಮ ಒಂದೇ ಸಲ ಜಾನಕೀ ಗರ್ಭಕ್ಕೆ ಸಂಕಲ್ಪಿಸಿ, ಸೀತೆಯನ್ನು ತಾಯಿಯಾಗಿಸಿದಂತೆ! **"ಜನಸಂಖ್ಯಾಸ್ಫೋಟಕ್ಕೆ ಸಂಯಮ ಜೀವನವೇ ದಿವ್ಯೌಷಧ"** ಎಂಬುದನ್ನು ಆದರ್ಶವಾಗಿ ತೋರಿದವರು.

ಇವರ "ರಹಸ್ಯತ್ರಯಸಾರ" ತಿರುಮನ್ತ್ರ, ದ್ವಯ, ಚರಮ ಶ್ಲೋಕಗಳ ಅರ್ಥಭಾವಗಳನ್ನು ಉತ್ತಮ ಮಣಿಪ್ರವಾಳ ಶೈಲಿಯಲ್ಲಿ ೩೨ ಭಾಗಗಳಲ್ಲಿ ವಿವರಿಸಿದ್ದಾರೆ. ಒಂದೊಂದು ಆ "ಅಧಿಕಾರ"ಕ್ಕೂ ಸಂಸ್ಕೃತದಲ್ಲಿಯೂ, ತಮಿಳಿನಲ್ಲಿಯೂ, ಸಂಗ್ರಾಹಕವಾಗಿ ೩೨ ಶ್ಲೋಕ ಹಾಗೂ ೩೨ ದ್ರಾವಿಡ ಪಾಶುರ ರಚಿಸಿದ್ದಾರೆ. ಇದೇ "ಈ ಅಧಿಕಾರ ಸಂಗ್ರಹ" ಇದರಲ್ಲಿ, ತಿರುಪತಿ ತಿಮ್ಮಪ್ಪನ ಉಲ್ಲೇಖ, ಬೆಟ್ಟಕ್ಕೇ ಪ್ರಾಶಸ್ತ್ಯ ಕೊಟ್ಟು ಆಚಾರ್ಯರ ಮುಖಾರವಿಂದದಿಂದ ಹೊರಟಿರುವ ಸುಂದರ ಗಾಥೆಯಿದು. ಇವರ, ತಮಿಳ್ ವಾಙ್ಮಯಗಳಿಗೆಲ್ಲಾ, ಪಿಳ್ಳೈ ಲೋಕಾಚಾರ್ಯರು. "ಶೀರೊನ್ನು ತೂಪ್ಪುಲ್" "ತನಿಯನ್" ಅನುಗ್ರಹಿಸಿದ್ದಾರೆ. ವೇದಾನ್ತಾಚಾರ್ಯರೂ ಪಿಳ್ಳೈ ಲೋಕಾಚಾರ್ಯರ ಬಗೆಗೆ "ಲೋಕಾರ್ಯ ಪಂಚಾಶತ್" ಎಂಬ ಸಂಸ್ಕೃತ ಸ್ತೋತ್ರವನ್ನೂ ಅರ್ಪಿಸಿದ್ದಾರೆ. ಲೋಕಾಚಾರ್ಯರ ತಮ್ಮನವರಾದ ಅಳಹಿಯ ಮಣವಾಳಪ್ಪೆರುಮಾಳ್ ನಾಯನಾರ್ ರಚಿಸಿದ "ಆಚಾರ್ಯ ಹೃದಯ"ಕ್ಕೆ ದೇಶಿಕರು "ತನಿಯನ್" ಶ್ಲೋಕ ಅನುಸಂಧಿಸಿದ್ದಾರೆ.

ಅಧಿಕಾರ ಸಂಗ್ರಹ

ತಮಿಳ್ ತಿರಳ್ ೪೩

ಕಣ್ಣನಡಿಯಿಣೈ ಎಮಕ್ಕು ಕ್ಕಾಟ್ಟುಮ್ ವೆರ್ಪು ಕಡು ವಿನೈಯರ್ ಇರುವಿನೈಯುಮ್ ಕಡಿಯುಮ್ ವೆರ್ಪ್ಪು
ತಿಣ್ಣಮಿದು, ವೀಡೆನ್ನ ತ್ತಿಹಳುಮ್ ವೆರ್ಪು ತೆಳಿನ್ದ ಪೆರುಮ್ ತೀರ್ತಜ್ಞಳ್ ಶೆರಿನ್ದ ವೆರ್ಪು
ಪುಣ್ಣಿಯತ್ತಿನ್ ಪುಹಲ್ ಇದೆನ ಪುಹಳುಮ್ ವೆರ್ಪು ಪೊನ್ನುಲಹಿಲ್ ಪೋಹಮೆಲಾಮ್ ಪುಣರ್ಕ್ಕುಂ ವೆರ್ಪು
ವಿಣ್ಣವರುಮ್ ಮಣ್ಣವರುಮ್ ವಿರುಮ್ಬುಮ್ ವೆರ್ಪು ವೇಙ್ಕಡ ವೆರ್ಪೆನ ವಿಳಙ್ಗುಮ್ ವೇದ ವೆರ್ಪೇ!

ಕನ್ನಡ ನೆರಳ್

ಕಣ್ಣನ ಪದಯುಗ ಎಮಗಿದೋ ಕಾಣಿಪ ಬೆಟ್ಟ, ಪಾಪಿಗಳೀರ್ ಅಘಮುಂ ಕಡಿಯುವ ಬೆಟ್ಟಿ,
ತಿಣ್ಣಿದೇ ಬೀಡನು ಬೆಳಗುವ ಬೆಟ್ಟ, ತಿಳಿ ಹಿರಿ ತೀರ್ಥಗಳ್ ನೆರುಗಿಹಬೆಟ್ಟ,
ಪುಣ್ಯಾತ್ಮಗೂ ಶರಣ್ ಇದುವೆಂದೇ ಪೊಗಳುವ ಬೆಟ್ಟ, ಹೊನ್‌ಲೋಕದ ಸೊಗಮೆಲ್ಲವ ಹೆಣೆದಿಹ ಬೆಟ್ಟ,
ವಿಣ್ಣವರೂ ಮಣ್ಣವರೂ ವರಿಸುವ ಬೆಟ್ಟ, ವೇಂಕಟಗಿರಿ ಯೆನು ಬೆಳಗುವ ವೇದದ ಬೆಟ್ಟ.
ತಿರುಪತಿ ತಿಮ್ಮಪ್ಪನ ಬೆಟ್ಟ

ಕಣ್ಣನ್ ಅಡಿ ಇಣ್ಯೆ = ಶ್ರೀಕೃಷ್ಣನ ಅಡಿಜೋಡಿಯನ್ನು, ಕಾಟ್ಟುಮ್, (ಇದಕ್ಕೂ ಮೊದಲು) ಎಮಕ್ಕು = ಆಕಾಲದಲ್ಲಿ ಇರದ ದೌರ್ಭಾಗ್ಯಶಾಲಿಗಳೂ, ಅಜ್ಞರೂ ಆಗಿರುವ ನಮಗೆ ಹೊರಗಣ್ಣಿಗೂ ಸೌಲಭ್ಯದಿಂದ ತೋರಿಸುವ, ವೆರ್ಪು = ಪರ್ವತವೆಂದರೆ ವೇಙ್ಕಡಮ್. ವೆರ್ಪ್ಪು = ಶ್ರೀವೆಂಕಟಗಿರಿಯೆಂದು, ವಿಳಙ್ಗುಮ್ ವೇದವೆರ್ಪೇ = ಋಗ್ವೇದಾದಿಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಗಿರಿಯೇ. ಎಲ್ಲಾ ವಾಕ್ಯಗಳಿಗೂ ಹೀಗೆ ಅನ್ವಯಿಸಿಕೊಂಡರೆ ಭಾವ ಚೆನ್ನಾಗಿ ಮನದಟ್ಟಾಗುವುದು.

ಪುಣ್ಯಪಾಪಗಳಿವೆಯಲ್ಲಾ! ಎಂದೇನೂ ಸಂಕೋಚ ಪಡಬೇಡಿ. ಬನ್ನಿ. ಕಡುವಿನೈಯರ್ = ಎಂತಹ ಮಹಾಪಾತಕಿಗಳಾಗಿದ್ದರೂ ಅಂತಹವರ ಇರುವಿನೈಯುಮ್ = ಪಾಪದಂತೆಯೇ ಮೋಕ್ಷಕ್ಕೆ ಪುಣ್ಯವೂ ಇನ್ನೂ ಹೆಚ್ಚಾಗಿಯೇ ವಿರೋಧಿ. ಪಾಪವಾದರೆ ತನ್ನ ನಗ್ನರೂಪದಲ್ಲಿ ಎಲ್ಲರ ಗಮನಕ್ಕೂ ''ವೈರಿ''ಯೆಂಬುದು ಸುಲಭವಾಗಿ ಗೋಚರಿಸುತ್ತದೆ. ಸಾಮಾಜಿಕ ಮೌಲ್ಯ ನೈತಿಕವಾಗಿ ಅಷ್ಟಾದರೂ ಬೆಳೆದಿದೆ. ಪುಣ್ಯ ಹಾಗಲ್ಲ! ಒಳ್ಳೆಯದಂತೆಯೇ ತೋರಿ, ಆಭಾಸದಲ್ಲಿ ಬೀಳಿಸಿ ಪಾಪಕ್ಕಿಂತ ಹೆಚ್ಚು ಮೋಸಗೊಳಿಸುವುದು. ಪಾಪದಂತೆ ಪುಣ್ಯ ಕಾರ್ಯಗಳಲ್ಲಿ ದ್ವೇಷ, ಜಿಹಾಸೆ ಬರುವುದು ಎಂತಹ ಸಜ್ಜನರಿಗೂ ಸನ್ಮಹಿಳೆಯರಿಗೂ, ಸಂಘ ಸಂಸ್ಥೆಗಳಿಗೂ, ಬಲು ಕಷ್ಟ. ವ್ಯಕ್ತಿಗತವಾಗಿ ಹಲವಾರು, ಸ್ವಾಮಿಗಳೂ ಪಕ್ಷದ ಮೂಲ ಸನ್ನಡವಳಿಕೆಗಳನ್ನು ತಿಳಿದವರೂ, ಗತಾನುಗತಿಕರಾಗಿ ಬಿಡುತ್ತೇವೆ. ಪುಣ್ಯಗಳಲ್ಲೂ ಈ ವಿಜ್ಞಾನಯುಗಕ್ಕೆ, **''ಶುದ್ಧ ಅಧ್ಯಾತ್ಮ ವಿಕಾಸಕ್ಕೆ ವಿರೋಧಿ ಅಂಶಗಳಿವೆಯೆಂಬ ಧೃತಿಪೂರ್ವಕ ವಿಚಾರ ಆಚಾರ ಶಕ್ತಿ ಬೆಳೆಯಬೇಕಿದೆ''**. ಪಾಪ, ಕಬ್ಬಿಣದ ಸಂಕೋಲೆ! ಪುಣ್ಯ ಚಿನ್ನದ ಸಂಕೋಲೆ. ಇಹದಲ್ಲೂ ಪರದಲ್ಲೂ ಪುಣ್ಯ ಸಂಪೂರ್ಣಮುಕ್ತಿ ಮಾರ್ಗವನ್ನು ಮುಂದೂಡುತ್ತಾ, ಕೊನೆಗೆ ''ಪೂರ್ಣ ಸ್ವರಾಜ್ಯ''ದ ಬಯಕೆಯನ್ನೇ ''ಮುಮುಕ್ಷುತ್ವ''ವನ್ನೇ ಚಿವುಟಿ ಹಾಕಿ ಬಿಡುವುದು. ಜಗತ್ತಿನ ಇಂದಿನ ಬಹುತೇಕ, ಪ್ರಗತಿ ಅಭಿವೃದ್ಧಿಗಳೆಲ್ಲಾ ಇದೇ ಗುಂಪಿಗೆ ಸೆರಿದವು! ಪುಣ್ಯ-ಪಾಪ ಎರಡೂ ದದ್ದು ಹೊರಹಾಕು. ''ಪುಣ್ಯ ಪಾಪೇ ವಿಧೂಯ'' ಗಾದೆಗೂ ವೇದಕ್ಕೂ ಎಷ್ಟೊಂದು ಸಮ ಮೌಲ್ಯ! ಸಾಮರಸ್ಯ!

ಈ ತಿರುಪತಿ ಮುಕ್ತಿಕ್ಷೇತ್ರ, **''ಕಡಿಯುಮ್ ವೆರ್‌ಪು''** ಪುಣ್ಯ ಪಾಪ ಎರಡನ್ನೂ ಕಡಿದು ನಮ್ಮನ್ನು ಈ ಮಾನವಜನ್ಮದಲ್ಲೇ ಸ್ಥಿರ ಮುಮುಕ್ಷುಗಳನ್ನಾಗಿಸಿ, ಸದಾಚಾರ್ಯರ ಸಂಬಂದ ಒದಗಿಸಿ ಪುನರ್‌ಜನ್ಮವಿಲ್ಲದಂತೆಸಗುವುದು. ಹಿಂದೆ ಮಾಡಿದ ಪಾಪ, ಜ್ಞಾನೋದಯವಾದ ಮೇಲೂ ಬುದ್ಧಿ ಪೂರ್ವಕವಲ್ಲದೆ ಪ್ರಾಮಾದಿಕವಾಗಿ ಪ್ರಕೃತಿ ಸಂಬಂಧದಿಂದ ಏರ್ಪಡಬಹುದಾದ ಉತ್ತರಪಾಪ ಎರಡನ್ನೂ ಎಂಬರ್ಥದಲ್ಲಿ

ತದಧಿಗಮೇ ಉತ್ತರ ಪೂರ್ವಾಽಘಯೋಃ ಅಶ್ಲೇಶ ವಿನಾಶೌ, ತದ್‌ವ್ಯಪದೇಶಾತ್ (ಬ್ರ.ಸೂ. ೪-೧-೧೩)

ಹಿಂದೆ ಮಾಡಿದ ಪಾಪಗಳನ್ನು ಧ್ವಂಸಮಾಡಿ ಮುಂದೆ ಮಾಡುವ ಪಾಪ ಫಲಗಳನ್ನೂ ಅಂಟದಂತೆಸಗಿಬಿಡುವುದು. ಈ ಗಿರಿ! ಕ್ಷೇತ್ರಕ್ಕೂ ಸ್ವತಂತ್ರ ಮಾಹಾತ್ಮ್ಯ ಉಂಟು. ಅಲ್ಲಿ ಅನಾದಿ ಅನನ್ತ ಕಾಲದ ಒಳ್ಳೊಳ್ಳೆಯವರ ಸದ್‌ಭಾವನಾ ರಶ್ಮಿಗಳು ಬೇರೆಡೆಗಿಂತ ಹೆಚ್ಚಾಗಿವೆ. ಅತುಕೊಳ್ಳುವವರಿಗೆ ಬೀರುತ್ತಲೇ ಇವೆ.

ತಿಣ್ಣಮ್ = ದೃಢವಾಗಿ, ಕೈಬಿಡದ, ಇದು ವೀಡು ಎನ್ನ = ಈ ಬೆಟ್ಟವೇ ವೇಕುಂಠವೆಂದು. ತಿಹಳುಮ್ = ಪ್ರಕಾಶಪಡಿಸುವ ಜವಾಬ್ದಾರಿಯುಳ್ಳದ್ದು. ಆ ರೀತಿ ಯಾತ್ರಾಸ್ಥಳಗಳಾದರೂ, ಪ್ರವಾಹ ಪತಿತಗಳಾಗದೆ, ಇಂತಹ ನಿಜವಾದ, ''ವೇದಾನ್ತ ವಿಜ್ಞಾನ'' ವಿದ್ಯಾಶಿಕ್ಷಣ ಕ್ಷೇತ್ರಗಳಾಗಲೇಬೇಕು. ಇತ್ತೀಚೆಗೆ, ಅನಿವಾಸಿ ಭಾರತೀಯರಾದ ''ಸ್ವರಾಜ್ಯ ಪಾಲ್'' ಎನ್ನುವವರು ೫೦ ವರ್ಷಗಳಿಂದ ಭಾರತ ಸರಕಾರಗಳೆಲ್ಲವೂ ಮೂಲಭೂತ ವಿಷಯಗಳಾದ ಶಿಕ್ಷಣ ಆರೋಗ್ಯ, ಜನಸಂಖ್ಯೆಗಳನ್ನು ಕಡೆಗಣಿಸುತ್ತಾ ಬಂದಿವೆ. ಎಂದು ಹೇಳಿರುವುದು ಬಲು ಅರ್ಥಪೂರ್ಣ. ಮಾನವ ಶರೀರವೂ ಒಂದು ಸಮರ್ಥಯಂತ್ರ. ಅದನ್ನು ಈ ಮಾನವ ನಿರ್ಮಿತ ಯಂತ್ರಾತಿರೇಕದ ಹುಚ್ಚುಹೊಳೆಗಳು ನುಚ್ಚು ನೂರು ಮಾಡುತ್ತಿವೆ. ಈ ಸತ್ಯಾಂಶವನ್ನು ಬಲು ಬುದ್ಧಿವಂತಿಕೆಯಿಂದ ನಾವು ಹತ್ಯೆ ಮಾಡುತ್ತಿದ್ದೇವೆ. ಭ್ರೂಣಹತ್ಯೆ ಮಾನವನ ಪ್ರಾಣ ಹತ್ಯೆಗಿಂತ ಕಡಿಮೆಯೇನು? ಗಂಡ ಹೆಂಡಿರು ಭೂಮಿಯಲ್ಲಿ ಬೀಜ ಬಿತ್ತಿ ಫಸಲು ಬೇಡ! ಎಂದರೆ ಇದು ವೈಜ್ಞಾನಿಕವೇ? ಬರ್ತ್‌ಕಂಟ್ರೋಲಿನ ಅನೈತಿಕ, ಅನಾರೋಗ್ಯಕರ ಯೋಜನೆಗಿಂತಲೂ ಕೈ ಕಾಲುಗಳಿಂದಾಗುವುದಕ್ಕಾದರೂ ಯಂತ್ರಗಳ ಕಂಟ್ರೋಲ್ ಯುಕ್ತವಲ್ಲವೇ?

ಪೆರುಮ್ ತೀರ್ತಙ್ಗಳ್ = ಹಿರಿಹಿರಿದಾದ, ಮೋಕ್ಷತೀರ್ಥಗಳು, ಶೆರಿನ್ದ = ಎಲ್ಲೆಲ್ಲೂ ನಿಬಿಡವಾಗಿ ಹರಿಯುವ, ವೆರ್‌ಪು! **''ತಿರುಪತಿ ತೀರ್ಥ ತಂತು. ಮೇಲ್ಕೋಟೆ ನಾಮ ತಂತು. ನಂಜನಗೂಡು ಯೇಟಿ (ವಿಭೂತಿ) ತಂತು!''** ಜಾನಪದ ನಾಣ್ಣುಡಿಗಳಿವು! ಪುಣ್ಣೆಯತ್ತಿರ್ ಪುಹಲ್ = ಸಾಕ್ಷಾತ್ ನಿರಪಾಯ ನಿರುಪಾಧಿಕ ಪುಣ್ಯಸ್ವರೂಪನಾದ ತಿಮ್ಮಪ್ಪ ಹೊಕ್ಕುನಿಂತಿರುವುದು. ಇದು ಎನ = ಈ ತಿರುಮಲೈಯೇ ಪುಹಳುಮ್ ವೆರ್‌ಪ್ಪ = ವೇದ, ಲೋಕ ಉಭಯ ಪ್ರಸಿದ್ಧಿಯೂ ಹೀಗೇ ಇದೆ. ಪೊನ್ ಉಲಹಿಲ್ ಪ್ರೋಹಮ್ ಎಲಾಮ್ = ಚಿನ್ಮಯ, ಪರಮ ಸಾತ್ವಿಕ, ದಿವ್ಯ ಸ್ವರ್ಣಮಯ ನಿತ್ಯವಿಭೂತಿಯಾದ ಆ ವೈಕುಂಠದ ದಿವ್ಯಾನುಭವಗಳೆಲ್ಲವನ್ನೂ, ಪುಣರ್‌ಕ್ಕುಮ್ ವೆರ್‌ಪು = ಇಲ್ಲೇ ಸಂಘಟಿಸುವಂತೆಸಗುವ, ಆದುದರಿಂದಲೇ, ವಿಣ್ಣವರುಮ್ = ಅಲ್ಲಿನ ನಿತ್ಯಮುಕ್ತರೂ, ಮಣ್ಣವರುಮ್ = ಇಲ್ಲಿನ ಸರ್ವರೂ, ವಿರುಮ್ಬುಮ್ = ಮೇಲ್ ಬಿದ್ದು ಆಸೆ ಪಡುವ ವೆರ್‌ಪುವೇಙ್ಗಡ ವೆರ್‌ಪು ವಿನ ವಿಳಙ್ಗುಮ್ ವೇದವೆರ್‌ಪೇ ಋಗ್ವೇದ ೭ನೇ ಮಂಡಲದ ೧೫೨ನೆಯ ಸೂಕ್ತ ಎಂಟನೆಯ ಮಂತ್ರ. ಅರಾಯಿ ಕಾಣೇ ವಿಕಟೇ .... ಶಿರಿಂಬಿಶ .. ಎಂಬುದರ ವಿವರಣೆ ಹಿಂದೆ ಬಂದಿದೆ.

ಪಾರಮಾತ್ಮಿಕೋಪನಿಷತ್ತಿನಲ್ಲಿಯೂ ಸಹ ''ರಯಿಃ ಕಕುದ್ಮಾನ್ ವಿದಧದ್ ವಿನಷ್ಟಂ ರಯಿಮದ್ ವಿಧಾನಮ್/ ತಸ್ಮೈ ಕಕುತ್ಮೈ ವಿಕಟಾಯ ಪಿತ್ರೇಸ್ವಾಹಾ||'' ಎಂದು ಬಂದಿದೆ. ರಯಿಃ = ನಿರವಧಿಕ ಐಶ್ವರ್ಯ ಸ್ವರೂಪನು ಅದನ್ನು ದಯಪಾಲಿಸುವವನೂ, ಕಕುದ್ಮಾನ್ =

ಈಗಿರಿಯಪ್ಪನೇ. ವಿದಧದ್ ವಿನಷ್ಟಂ = ಎಲ್ಲರಿಗೂ ಎಲ್ಲವಿಧದ ವರಪ್ರಸಾದಿ. ರಯಿಮತ್ ವಿಧಾನಂ = ಋಗ್ ಋಜುಸ್ಸಾಮಾಽಥರ್ವವೇದ ಪ್ರಸಿದ್ಧನು. ಕಕುತ್ಸೇಸ್ವಾಹಾ = ಅಂತಹ ಈ ವೃಷಭಾಚಲವಾಸಿಯಾದವನಿಗೆ, ಇದೋ ಸರ್ವಸ್ವಾರ್ಪಣವಾಗಲಿ. ಹೊರ ಹೊರಗಿನ ಹಣ, ನೋಟು, ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯಗಳೆಂಬ ಔಪಾಧಿಕ ದ್ರವ್ಯ ತ್ಯಾಗ ಮಾತ್ರವಲ್ಲ. ನಿರುಪಾಧಿಕ ಜೀವಾತ್ಮಾರ್ಪಣವಾಗಲಿ. ಅಂದರೆ ಸಂಪೂರ್ಣ ಪ್ರಪತ್ತಿ ಅಥವಾ ಶರಣಾಗತಿಗೆ ತಿಮ್ಮಪ್ಪನೇ ವಿಷಯವಾಗಲಿ. ಆಳ್ವಾರರು, ದಾಸಶರಣರು, ಅನ್ನಮಾಚಾರ್ಯ ಮುಂತಾದವರೂ, ದೇಶದ ನಾನಾ ಭಾಷಾಸಂತರು ಅನುಷ್ಠಿಸಿರುವ ಹಾಗೂ ಶಠಕೋಪರ "ಉಲಹಮುಂಡ ಪೆರುವಾಯಾ" ಮುಂತಾದವುಗಳ ಶರಣಾಗತಿಗೆಲ್ಲಾ ತಿಮ್ಮಪ್ಪನೇ ಶರಣ್ಯ!

"ಆಳ್ವಾರ್ ಶರಣರ ಹಾದಿಯಲ್ಲೇ, ಪ್ರಾಮಾಣಿಕವಾಗಿ ವಿಕಸಿತರಾದ ಆಚಾರ್ಯರುಗಳ ಭಕ್ತಿ ಜ್ಞಾನಾಧಿಕ್ಯದಿಂದ ಪ್ರಪತ್ತಿ. ಆಳ್ವಾರರದು ಭಕ್ತಿ ಪರವಶತೆಯಿಂದ ಪ್ರಪತ್ತಿ". ಹೀಗೆ ಹಿಗ್ಗಿ ಬಂದ ಆಚಾರ್ಯರಲ್ಲಿ, ರಾಮಾನುಜರ ಕಾಲವಾದ ಮೇಲೆ ನಾಲ್ವರು, ೪ ದಿವ್ಯದೇಶ ರತ್ನಗಳಾದ ಶ್ರೀರಂಗ, ತಿರುಮಲೆ, ಕಂಚಿ, ತಿರುನಾರಾಯಣಪುರಂ (ಮೇಲುಕೋಟೆ) ಇಲ್ಲಿನ ತತ್ತದ್ ದಿವ್ಯಮಂಗಳ ವಿಗ್ರಹಾಂಶರೆಂಬುದು ಶಿಷ್ಟಪರಿಗೃಹೀತ. **"ಪಿಳ್ಳೈ ಲೋಕಾಚಾರ್ಯರು ಕಂಚಿ ವರದರಾಜರ ಅಂಶವೆಂದೂ, ಅವರ ತಮ್ಮನವರಾದ ಅಳಹಿಯ ಮಣವಾಳ ಪೆರುಮಾಳ್ ನಾಯನಾರ್ ಶ್ರೀರಂಗನಾಥನ ಅಂಶವೆಂದೂ, ವಾದಿಕೇಸರಿ ಅಳಹಿಯ ಮಣವಾಳ ಜೀಯರ್ ತಿರುನಾರಾಯಣನ ಅಂಶವೆಂದೂ, ವೇಂಕಟನಾಥರೆಂಬ ವೇದಾನ್ತಾಚಾರ್ಯರು ತಿರುಪತಿ ಶ್ರೀನಿವಾಸರ ಅಂಶವೆಂದೂ, ನಾವು ಶ್ರದ್ಧೆ ಹಾಗೂ ಶಿಷ್ಟಾssಚಾರ ಪ್ರಾಮಾಣ್ಯದಿಂದ ನಂಬಬಹುದಾಗಿದೆ"**, ವೇದಾನ್ತ ದೇಶಿಕರ ವೇಂಕಟೇಶಗುಣಾನುಭವವನ್ನು ಅವರ

ದಯಾಶತಕದಲ್ಲೂ

ಅದೇ ಅವರಿಂದಲೇ ವಿಕಸಿತವಾಗಿ ಇವೊತ್ತಿಗೂ, ತಿರುನಾರಾಯಣಪುರದ ಬಾಲಧನ್ವಿ ವಂಶಜೆಯವರಾದ ವರವರ್ನಿನೀ, ಲಕ್ಷ್ಮೀದಾಸರ ಸಂಸ್ಕೃತ 'ದಯಾಸಹಸ್ರ'ದಲ್ಲೂ ಶ್ರದ್ಧಾಳು ಜಿಜ್ಞಾಸುಗಳು ಕಾಣಬಹುದು.

ವೇಂಕಟಾದ್ರಿಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ |

ವೇಂಕಟೇಶಸಮೋ ದೇವೋ ನ ಭೂತೋ ನ ಭವಿಷ್ಯತಿ||

ಕೃತೇ ವರದರಾಜಸ್ತು

ತ್ರೇತಾಯಾಂ ರಂಗನಾಯಕಃ

ದ್ವಾಪರೇ ಚ ಜಗನ್ನಾಥಃ

ಕಲೌ ವೇಂಕಟನಾಯಕಃ

ಆಚಾರ್ಯ ಮಣವಾಳ ಮಾಮುನಿ

ವೇದಾಂತದೇಶಿಕರಾದೊಡನೆಯೇ ಅವತರಿಸಿ ಸಂಪ್ರದಾಯವನ್ನು ಬರಿಯ ವೇದಾಂತವಲ್ಲದೆ **'ಉಭಯ ವೇದಾಂತ'** ವೆನಿಸಿದ್ದನ್ನು ಸಂರಕ್ಷಿಸಿದ ಮಹಾತ್ಮರೇ ಈ ಕೋಯಿಲ್‌ಮಣವಾಳ ಮಾಮುನಿ. ಆಳ್ವಾರ್ ತಿರುನಗರಿಯಲ್ಲಿದ್ದು ತಿರುವಾಯ್‌ಮೊಳಿಪ್ಪಿಳ್ಳೈಯೆಂಬ ಶ್ರೀಶೈಲೇಶರ ದಯೆಗೆ ಪಾತ್ರರಾದವರು. ಇವರು ಹುಟ್ಟಿದುದು ದಕ್ಷಿಣ ಮಧುರೆಯ ಬಳಿ **'ಶಿಕ್ಕಿಲ್ ಕಿಡಾರಂ'** ಎಂಬ ಊರು. **'ಈಡುಪೆರುಕ್ಕರ್'** ಎಂಬ ಕೀರ್ತಿಗೆ ಪಾತ್ರರಾಗಿ ಅವರೆಗಿನ ತಿರವಾಯ್‌ಮೊಳಿ ಭಾಷ್ಯ ವ್ಯಾಖ್ಯಾನಗಳೆಲ್ಲವನ್ನೂ ಪ್ರವಚನ ಮಾಡಿ ಸಮನ್ವಯಗೊಳಿಸಿದ ಆಚಾರ್ಯರು ಇವರು. ವೇದಾಂತಾಚಾರ್ಯರು ಸಂಸ್ಕೃತವೇದಾಂತದ ಸಕಲಾಚಾರ್ಯ ವ್ಯಾಖ್ಯಾನಗಳ ಅಧ್ಯಯನ ಪ್ರವಚನ ಸಮನ್ವಯ ಮಾಡಿದಂತೆಯೇ ಇವರು ದ್ರಾವಿಡ ವೇದಾಂತದಲ್ಲಿ ಆ ಹಿರಿಯ ಕಾರ್ಯವನ್ನು ಮುಂದುವರೆಸಿ ಈವರೆಗೆ ಶ್ರೀ ವೈಷ್ಣವಾಚಾರ್ಯ ಪರಂಪರೆಯಲ್ಲಿ **"ಕಡೈಕುಟ್ಟಿ" = "ಅಗ್ರದಲ್ಲಿರುವ ಆದಿಶೇಷ"** ಎಂದೂ **"ಕೊನೆಯ ಮರಿ ಆಚಾರ್ಯ"** ಎಂದೂ ಕೀರ್ತಿಶಾಲಿಯಾದವರು. ತಿರುನಾರಾಯಣಪುರದ ಆಯ್ ಜನನ್ಯಾಚಾರ್ಯರೂ, ಅದಿವಣ್ ಶಠರೋಪಮಾಮುನಿಯವರೂ ಆಗಿನ ಇತರ ಆಚಾರ್ಯಪುರುಷರೂ ಇವರ ಅವತಾರಮಾಹಾತ್ಮ್ಯದಿಂದ ಪ್ರಭಾವಿತರಾದರು.

ಮಣವಾಳ ಮಾಮುನಿಯವರ **'ಉಪದೇಶರತ್ನಮಾಲೆ'**ಯು ದ್ರಾವಡವೇದಾಂತದ ಮೂಲವ್ಯಾಖ್ಯಾಕಾರರೆಲ್ಲರ ಊರು ಕೇರಿ ಕೃತಿಗಳ ಇತಿಹಾಸ ತಿಳಿಸುವ ಗ್ರಂಥ. **ತಿರುವಾಯ್‌ಮೊಳಿನೂತ್ತಂದಾದಿ** ತಿರುವಾಯ್‌ಮೊಳಿಯ ಸುಂದರ ಸಂಗೃಹೀತಾರ್ಥ ನಿರೂಪಣೆ. ಆರ್ತಿಪ್ರಬಂಧ ಕೊನೆಗಾಲದಲ್ಲಿ ಶ್ರೀರಾಮಾನುಜರಲ್ಲಿ ಮಾಡುವ ತೀವ್ರ ವೇದನಾಪೂರ್ಣವಾದ ಪ್ರಾರ್ಥನೆ. ಇವಲ್ಲದೆ ಅನೇಕ ಸಂಸ್ಕೃತ ತಮಿಳ್ ಮುಕ್ತಕ ಬಿಡಿ ಪದ್ಯಗಳೂ ಗದ್ಯಗಳೂ **"ಯತಿರಾಜವಿಂಶತಿ"** ಮುಂತಾದ ಕೆಲವು ಸಂಸ್ಕೃತ ಸ್ತೋತ್ರಗಳೂ ಇವರ ಕೃತಿಗಳು. ಇವರು ತಿರುವೇಙ್ಗಡನ ಸೇವೆಗಳ ಸಹಾಯ ಜವಾಬ್ದಾರಿಗಾಗಿ ಚಿನ್ನಜೀಯರ್ ಮಠವನ್ನು ಆರಂಭಿಸಿದರು. ರಾಮಾನುಜರು ಪೆರಿಯ ಜೀಯರ್ ಮಠವನ್ನು ಆರಂಭಿಸಿದ್ದರು.

ತಿರುವಾಯ್‌ಮೊಳಿ ನೂತ್ತಂದಾದಿ

ತಿರವಾಯ್‌ಮೊಳಿಯ ಎರಡು ದಶಕಗಳಲ್ಲಿ ನಮ್ಮಾಳ್ವಾರ್ ತಿರುವೇಂಕಟಾಚಲಪತಿಯನ್ನು ಮನಸಾರೆ ಹೊಗಳಿದ್ದಾರೆ. **'ಒಟ್ಟಿವಿಲ್‌ಕ್ಕಾಲಂ'** ದಶಕದಲ್ಲಿ ತಿರುವೇಙ್ಗಡಮುಡೈಯಾನ್ ತಿರುವಡಿಗಳಲ್ಲಿ ಸಕಲವಿಧ ಕೈಂಕರ್ಯಗಳನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತಾರೆ. **"ಉಲಹಮುಣ್ಡ ಪೆರುವಾಯನ್"** ದಶಕದಲ್ಲಿ ಅಲರ್‌ಮೇಲ್‌ಮಂಗೈ ನಾಚ್ಚಿಯಾರನ್ನು ಮಧ್ಯವರ್ತಿ ಸಹಾಯವಾಗಿ ಪಡೆದು, ತಿರುವೇಙ್ಗಡಮುಡೈಯಾನಿಗೆ **ದೀರ್ಘಶರಣಾಗತಿ** ಮಾಡಿದ್ದಾರೆ. ಇಂತಹ ಈ ನಮ್ಮಾಳ್ವಾರನ್ನು ನಾವೂ ಶರಣಾಗತಿ ಮಾಡಿ ಅವರ ಕೈಂಕರ್ಯವನ್ನು ಮಾಡೋಣ ಎಂದು ಶ್ರೀಮಣವಾಳ ಮಾಮುನಿಯವರು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಇವುಗಳ ಬಗ್ಗೆ ಎರಡು ಪಾಶುರಗಳ ಕನ್ನಡ ನೆರಳ್ ಅನುವಾದ ಮಾಡಿ ತಿಳಿಸಲಾಗುವುದು.

ತಮಿಳ್ ತಿರುಳ್

ಒಟ್ಟಿವಿಲಾಕ್ಕಾಲಂ ಉಡನಾಹಿ ಮನ್ನಿ, ವಟ್ಟುವಿಲಾವಾಳ್‌ಚ್ಚೆಯ್ಯ ಮಾಲುಕ್ಕ್
ಎಟ್ಟುಶಿಹರವೇಙ್ಗಡತ್ತೈ ಪ್ಪಾರಿತ್ತ್ ಮಿಕ್ಕನಲಂ ಶೇರ್ ಮಾಱಿನ್, ಪೂಙ್ಕುಟಿಲೈ ನೆಞ್ಜೇ! ಪುಹಱ್.

ಕನ್ನಡ ನೆರಳ್

ಬಿಡುವಿಲ್ಲದೆ ಅನುಗಾಲ ಒಡನೊಡನೆ ಹೊಂದಿದ್ದು ಬಡತನ ಮಾಡದೆ ಮಾಡಲೂಳಿಗವ ಮಾಲವನಿಗೆ
ನಿಡುಎದ್ದ ಶಿಖರದಾ ವೇಂಕಟವ ಪರಿಕಿಸುತ ನಲ್ಲೆಸೇರ್‌ಮಾಱಿನ ಹೂವಂತ ಚರಣಗಳ ಮನವೆ! ನೀ ಹೊಗಳು.

ಆಳ್ವಾರ್ ಶರಣರ ತಿರುಪತಿ ತಿಮ್ಮಪ್ಪ

ತಮಿಟ್ ತಿರುಳ್

ಉಲಹುಯ್ಯ ಮಾಲ್ ನಿನ್ಱ ಉಯರ್‌ವೇಙ್ಗಡತ್ತೇ ಅಲರ್‌ಮಹಳ್ಕೆ ಮುನ್ನಿಟ್ಟ್ರ್, ಅವನ್ತನ್
ಮಲರಡಿಯೇ ವನ್ ಶರಣಾಯ್‌ಚ್ಚೇರ್‌ನ್ದ ಮಹಿಪ್‌ಮಾಱನ್ ತಾಳಿನ್ಱೈಯೇ ಉನ್‌ಶರಣಾಯ್ ನೆಞ್ಜಮೇ! ಉಣ್.

ಕನ್ನಡ ನೆರಳ್

ಲೋಕವು ಉಜ್ಜೀವಿಸಲೆಂದೇ ಸಿರಿಮುಗ್ಧ ನಿಂತ ಉತ್ತರದ ವೇಙ್ಕಟದಿ
ಕೋಕನದಹೂ ಮಗಳ ಮುಂದಿಟ್ಟುಕೊಂಡು, ಆತನಾ
ವಿಕಸಿತ ಕಮಲ ಪುಷ್ಪದಂತಡಿಗಳೇ ಬಲವಾದ ಶರಣೆಂದು ಬಗೆಗೊಂಡು ಸೇರಿದ
ಪಗಡೆಯ ಹೂಮುಡಿಮಾಱನಡಿ ಜೋಡಿಯೇ ನಿನಗೆ ಶರಣೆಂದರಿತು ಮನವೇ! ಉಣ್ಡಿರು.

ತಿರುವೇಙ್ಗಡನ ದಿವ್ಯದರ್ಶನ ಪಾಶುರ

ನಮ್ಮ ವೇದಾಂತ ದೇಶಿಕರು ಪಾಶುರದಿಂದ ತಿರುವೇಙ್ಗಡ ಮಲೆಯನ್ನು ವರ್ಣಿಸಿದರೆ, ಅದು ಒಂದು ಸಕಲ ಲೋಕಚಕ್ರವರ್ತಿಯ ದಿವ್ಯ ಸಿಂಹಾಸನದಂತೆ ಕಾಣುವುದು. ಅದೇ ನಮ್ಮ ಮಣವಾಳಮಾಮುನಿಯು ಆ ಸಿಂಹಾಸನದ ಮೇಲೆ ಸಿಂಹರಾಜನಂತೆ ವಿರಾಜಿಸಿರುವ ಸಕಲ ಫಲಪ್ರದನಾದ ಶ್ರೀಶ್ರೀನಿವಾಸನೆಂದು ಪ್ರಸಿದ್ಧನಾದ **'ತಿರುವೇಙ್ಗಡತ್ತಾನ್'** ಎನಿಸಿದ ತಿರುಪತಿ ತಿಮ್ಮಪ್ಪನ ಭವ್ಯವಾದ ವರ್ಣನೆಯನ್ನು ತಮ್ಮದೇ ಆದ ಒಂದು ಪಾಶುರದಲ್ಲಿ ಮಾಡಿದ್ದಾರೆ. **'ಯತೀಂದ್ರ ಪ್ರವಣ ಪ್ರಭಾವ'** ಗ್ರಂಥದಲ್ಲಿ ಇದನ್ನು ಎತ್ತಿ ತೋರಿಸಲಾಗಿದೆ. ಇಲ್ಲಿ ಒಂದು ಸ್ವಾರಸ್ಯವನ್ನು ಗಮನಿಸಬಹುದು. ವೇದಾಂತದೇಶಿಕರು ತಿರುವೆಂಗಡನ ಅವತಾರ. ಮಣವಾಳ ಮಾಮುನಿಯವರು ಶೇಷಗಿರಿಯಾಗಿ ಪವಡಿಸಿರುವ ಆದಿಶೇಷನ ಅವತಾರ. ಪರಸ್ಪರ ಇವರಿಬ್ಬರೂ ಸ್ತೋತ್ರ ಮಾಡಿದಂತಿದೆಯಲ್ಲವೆ! ಇದು.

ತಮಿಟ್ ತಿರುಳ್

೧. **ತಿರುಮಹಳ್ ಮರುವುಂ ಇರುಪದಮಲರುಂ, ಮುಟಿಂತಾಳ್‌ಹಳುಂ,**
ಕುಱಿಞ್ಞುಂತಾಙ್ಗು ಶಕ್ಕರ್ ಮಾಮುಹಿಲ್ ಪೋಲ ತ್ತಿರುವರೈಚ್ಚೆಂಪೊನಂಬರಮುಂ,

೨. **ಅರುಮೈಶೇರ್ ಶೀರಾವುಂ, ಅಯನೈತ್ತನ್ದದೋರ್ ಉನ್ದಿಯುಂ, ಅಮುದಂ ಆರ್ ಉದರಬಂದನಮುಂ,**
ಅಲರ್‌ಮೇಲ್‌ಮಙ್ಗೈ ಉಱೈ ತಿರುಮಾರ್ಬಮಂ, ಆರಮುಂ, ಪದಕ್ಕ ನನ್ನಿರೈಯುಂ,

೩. **ಪೆರುವರೈಯನೈಯ ಪುಯಮೊರುನಾನ್ಗುಂ, ಪಿಱಿಙ್ಗಡಲಾಟಿಯುಂ, ಶಙ್ಗುಂ,**
ಪೆರುತಿವಮೆನ್ನ್ ಕಾಟ್ಟಿಯ ಕರಮುಂ, ಪಿಡಿತ್ತದೋರ್ ಮರುಙ್ಗಿನಿಲ್ ಕರಮುಂ,

೪. **ಒರುಮದಿಯೆನವೇ ಶೋದಿಶೇರ್ ಮುಹಮುಂ, ಉಯರ್‌ತಿರುವೇಙ್ಗಡತ್ತ್ -**
ಉಱೈಯುಂ, ಒಪ್ಪಿಲಾವಪ್ಪನ್ ಕರುಣೈಶೇರ್‌ವಿಟಿಯುಂ, ಎನ್ನುಳ್ಳಾಂ ನಿಱೈನ್ದ ನಿನ್ನನವೇ.

ಕನ್ನಡ ನೆರಳ್

೧. ಸಿರಿಮಗಳು ಆಶಿಸುವ ಹೂಚರಣವೆರಡೂ, ಮೊಳಕಾಲುಗಳೂ,
ಕುರಂಗದೊಡನೆ ಚಂದ್ರನುತಗಲುವ ಹಿರಿ ಚಕ್ರಾಕಾರದಮೋಡದಂತಹ -
ಸಿರಿನಡುವೊಳು ಚಿನ್ನದ ಜರಿಯ ಪೀತಾಂಬರವೂ,

೨. ಉರುಮಹಿಮೆ ಸೇರಿದ ಉದರವೂ, ಅಜನನ್ನು ಹೊಮ್ಮಿಸಿದ ಹೊಕ್ಕುಳೂ,
ಸಿರಿಯಮೃತ ಕಟ್ಟಿದವೊಲುದರ ಬಂಧನವೂ, ಹೂ ಮೇಲೆ ಕುಳಿತ ಮಡದಿಯೊದಗಿದಾ
ಸಿರಿಯೆದೆಯು, ಹಾರವೂ, ಪದಕವೂ, ನಲ್‌ನೆರೆಯೂ,

೩. ಹಿರಿಯ ನೀಳ್ ಬಂಡೆಗಳಿನೆ ನಾಲ್ಕು ತೋಳುಗಳೂ, ಸುತ್ತುಸುಳಿ ಚಕ್ರಶಂಖಿಗಳೂ,
ಹಿರಿದಿವ್ಯವನು ತೋರುಕೈಯ್ಯೊಂದೂ, ಸೊಂಟವನು ಹಿಡಿದಿಟ್ಟ ಕೈಯ್ಯೊಂದೂ,

೪. ಸಿರಿಚಂದ್ರನೋ ಎಂಬಂತೆ ಜ್ಯೋತಿ ಸೇರಿದಮೊಗವೂ, ಉನ್ನತ ಸಿರಿವೇಂಕಟದಲಿ-
ಒರೆಗೊಂಡ ಒಪ್ಪೊಂದೂ ಇಲ್ಲದ ತಿಮ್ಮಪ್ಪನ ಕರುಣೆ ಕೂಡಿದ ಹೊಳಪಿನ ಹೊಗರೂ,
ಕಿರಿಯ ನನ್ನೊಳಗೆಲ್ಲವೂ ತುಂಬಿ ನೆರೆದು ನಿಂತವಲಾ!

ಹೀಗೆಯೇ ಒಂದು ಮಣಿಪ್ರವಾಳವೆಂಬಂತೆ ಸಂಸ್ಕೃತ - ತಮಿಟು - ಮಿಶ್ರಭಾಷೆಯ ತಿರುವೇಂಗಡದರ್ಶನ ಗದ್ಯವೂ ಕೆಲವು ಪ್ರತಿಗಳಲ್ಲಿ ಸಿಗುತ್ತದೆ. ಯತೀಂದ್ರ ಪ್ರವಣ ಪ್ರಭಾವ; ತೆಲಗುಲಿಪಿ ಪುಸ್ತಕ, ಪುಟ ೧೪೨.

ಶ್ರೀವೇಂಕಟೇಶ ದಿವ್ಯದರ್ಶನ ಗದ್ಯ

(ಅಹೋ!) "ತಿರುಕ್ಕಮಲಪಾದಂ ವನ್ದ್ ಎನ್ ಕಣ್ಣಿನುಳ್ಳನ ಒಕ್ಕಿನ್ರದೇ" ಎನ್ಗಿಱ ಪಡಿಯೇ; ಮಾತಾವಿನುಡ್ಡೈಯ ಸರ್ವಾವಯವಂಗಳುಂ ಕಿಡಕ್ಕಚ್ಚೆಯ್ದೇ, ಪ್ರಜ್ಞೆ ಮುಲೈಯಿಲೇ ವಾಯ್ ವೆಯ್ಕ್ಕುಮಾಪ್ಪೋಲೇ, ಆಶ್ರಿತರ್ ಇಱಿಯುಂ ತುಱ್ಯೆಯಾನ ತಿರುವಡಿತ್ತಾಮರೈಹಳ್ಳೆಯುಂ,

ಕಳಾಚೀನಿಭಜಂಘಂಗಳ್ಳೆಯುಂ,
ರಂಭಾಸ್ತಂಭೋರುಹಳ್ಳೆಯುಂ,
ಆಕಾಶೇ ಸಂಧ್ಯಾರಾಗಂ ಪರನ್ದಾಪ್ಪೋಲೇ, ಶ್ಯಾಮಳ ಕೋಮಳಾಙ್ಗತ್ತ್ಕ್ಕ್ ಪರಭಾಗರಸಾವಹಮಾನ ತಿರುಪ್ಪೀತಾಂಬರತ್ತೈಯುಂ,
ತಿರುವುದರ ಬಂಧನತ್ತೈಯುಂ,
ಅದಿಲೇ ಶೊರುಹಿಯ ಉಡ್ಡೈವಾಳ್ಳೆಯುಂ,
ಅದನ್‌ಮೇಲ್ ಅಯನ್ನೈಪ್ಪಡ್ಡೈತ್ತದೋರ್ ಎಱಿಲ್ಳೆಯುಂ,
ತಿರುಮೇನಿಯ್ಯೆಯುಂ,
ಇಱ್ಯೆಯುಂ ಅಹಲಹಿಲ್ಲೇನ್ ಎನ್ನುಂ ಅಲರ್‌ಮೇಲ್ ಮಙ್ಗೈ ಉಱ್ಯೆಮಾರ್ವತ್ತೈಯುಂ,
ಸುವೃತ್ತ - ಪರಿಘೋಪಮಮಾಯ್ ಆಯತಮಾನ ಬಾಹುದ್ವಯತ್ತಿಲೇ ಧರಿತ್ತ ತಿರುವಾಱಿ - ತಿರುಚ್ಚಙ್ಗಾಟ್ಟಾರ್‌ಹಳ್ಳೆಯುಂ,
ಮತ್ತ್ಯೆ ಇರಣ್ಡ ತಿರುಕ್ಕೈಹಳಾಲೇ ಪ್ರಜ್ಞೆಯಿನುಡ್ಡೆಯ ವಾಯಿಲೇ ಮುಲೈಕ್ಕಣ್ಣೆ ವೆರುಡಿಕ್ಕೊಡುಕ್ಕುಂ ತಾಯ್ಯೆಪ್ಪೋಲೇ, ಶರಣವರಣಸ್ಥಾನ ನಿರ್ದೇಶತ್ತೈಯುಂ; ಇಪ್ಪಡಿ ನಿರಪೇಕ್ಷೋಪಾಯನಿಷ್ಠರ್ಕ್ ವಿರಜ್ಞೆ ತುಡ್ಡೆಯಳವು ಎನ್ಱ ತೊಟ್ಟುಕ್ಕಾಟ್ಟುಂ ಪಡಿಯೈಯುಂ,
ಉಲಹಮುಣ್ಡ ತಿರುಪ್ಪವಳ ಚ್ಚೆವ್ವಾಯ್ಯೆಯುಂ,
ಕೋಲನೀಳ್ ಕೊಡಿಮೂಕ್ಕೈಯುಂ,
ಕಮಲಕ್ಕಣ್ಗಳ್ಳೆಯುಂ,
ವಿಲ್‌ಪುರುವಂಗಳ್ಳೆಯುಂ,
ಕಣ್ಣಾಡಿಯೊತ್ತ ಕಪೋಲ ಶೋಭ್ಯೆಹಳ್ಳೆಯುಂ,
ಪಿಱ್ಯೆಯುಡ್ಯೆ ವಾಣುದಲ್ ತಿಲಹ ಶೋಭ್ಯೆಯ್ಯೆಯುಂ,
ಪೊನ್ನಿಲಹುಶುಟ್ಟಿ ತಿರುಕ್ಕೋಱಿಂಬತ್ತೈಯುಂ,
ಮಕರನೆಡುಂ ಕುಟ್ಯೆಕ್ಕಾದುಹಳ್ಳೆಯುಂ,
ಕದಿರಾಯಿರಮಿರವಿ ಕ್ಕಲನ್ದೆರಿತ್ತಾಲ್ ಒತ್ತ ನೀಣ್‌ಮುಡಿಯ್ಯೆಯುಂ,
ಅಮುದಕ್ಕಡಲಾನ ಒಪ್ಪಿಲಾವಪ್ಪನ್ಯೆ,
ಅಮಲನಾದಿಪ್ಪಿರಾನಿಲ್‌ಪ್ಪಡಿಯೇ, ಆಱ್ಱಾರೈಪ್ಪೋಲೇ, ಪಾದಾದಿಕೇಶಾನ್ತಮಾಹ ಅನುಭವಿತ್ತೋಮೇ!.

ಕನ್ನಡ ನೆರಳ್

ಅಚ್ಚರಿ! ಅಚ್ಚರಿ! "ಸಿರಿಕಮಲಪಾದವು ಬಂದು ಎನ್ನಯ ಕಣ್ಣಿನೊಳಗೇ ಎನ್ನುವಂತೆ ಹೊಕ್ಕು ನಿಂತುದಲಾ!" ಎಂಬ ರೀತಿಯಲ್ಲಿ, ಮಾತೆಯ ಸರ್ವಾವಯಗಳೂ ಇರುತ್ತಿರಲು ಪ್ರಜೆಯೆನಿಸಿದ ಮಗುವು ಮೊಲೆಯಲ್ಲಿಯೇ ಬಾಯಿಡುವಂತೆಯೇ, ಆಶ್ರಿತರು ಇಳಿಯುವ ತೊರೆಯ ಸೋಪಾನಘಟ್ಟದಂತಿರುವ ಸಿರಿಯಡಿದಾವರೆಗಳನೂ;
ಪೀಕುದಾನಿಯಂತೆ ಸುಂದರಾಕಾರವಾದ ಜಂಘೆಗಳನೂ;
ರಸಬಾಳೆಗಂಬದಂತಹ ತೊಡೆಗಳನೂ;
ಆಗಸದಲ್ಲಿ ಸಂಧ್ಯಾರಾಗವು ಪಸರಿಸಿದಂತೆ ಶ್ಯಾಮಲಕೋಮಲವಾದ ಅಂಗಕ್ಕೆ ಹಿನ್ನೆಲೆಯ ರಸವೊದಗಿಸುವ ಸಿರಿಪೀತಾಂಬರವನೂ;
ಸಿರಿಯುದರಬಂಧನ ವಡ್ಯಾಣವನೂ;
ಅದರಲ್ಲಿ ಬಿಗಿಯಾಗಿ ತೂರಿಸಿಟ್ಟ ಉಡುಗೆ ಸುರುಳಿಯನೂ,
ಅದಕ್ಕೂ ಮೇಲೆ ಅಜನನ್ನು ಪಡೆದ ಆ ಒಂದು ಹೊಕ್ಕುಳನೂ,
ಸಿರಿದೇಹವನ್ನೂ ಬೆಳಗುವಂತೆ ಬಿಡದಿಹೆನೆಂದಿರುವ, ಹೂಮೇಲೆ ಕುಳಿತ ಮಡದಿಯೊಡನೊರೆವ ಹಿರಿದಾದ ಎದೆಯನೂ,
ಬಾಗಿಲ ದುಂಡನೆಯ ಲಷ್ಮಮರಕ್ಕೆ ಸಾಟಿಯಾಗಿ ನಿಡುದಾದ ತೋಳ್ಗಳೆರಡರಲ್ಲೂ, ಧರಿಸಿದ ಸಿರಿಚಕ್ರಸಿರಿಶಂಖ ದಿವ್ಯಸೂರಿಗಳನೂ,

ಮತ್ತೆರಡು ಸಿರಿಕೈಗಳಿಂದ : ಮಗುವಿನ ಬಾಯಿಗೆ ಮೊಲೆಗಣ್ಣನು ಊಡಿಸಿಕೊಡುವ ತಾಯಿಯಂತೆ, ``ಶರಣಾಗಿ ವರಿಸುವ ಸ್ಥಾನವು ಇದು" ಎಂದು ಚರಣಗಳನ್ನು ತೋರಿಸುವುದನೂ; ಹೀಗೆ ಇತರ ಸಹಾಯಾಪೇಕ್ಷೆಯಿಲ್ಲದ ಸಿದ್ಧೋಪಾಯವೆನಿಸಿದ ದೇವರಲ್ಲಿ ನಿಷ್ಠರಾದವರಿಗೆ ವೈಕುಂಠದ ವಿರಜಾನದಿಯು ತೊಡೆ ಮಟ್ಟದಷ್ಟೇ ಆಳವೆಂದು, ಮುಟ್ಟಿ ತೋರಿಸುವ ರೀತಿಯನೂ,

ಲೋಕವೆಲ್ಲವನುಂಡ ಸಿರಿಹವಳ-ಕೆಂಬಾಯನೂ,
ಸುಂದರ ನೀಳ ಕುಡಿಮೂಗನೂ,
ಕಮಲದಂಥ ಕಣ್ಗಳನೂ,
ಬಿಲ್ಲಿನಂತ ಹುಬ್ಬುಗಳನೂ,
ಕನ್ನಡಿಗೆ ಸಮನಾದ ಕೆನ್ನೆಗಳ ಕಾಂತಿಗಳನೂ,
ಚಂದ್ರನೊಡವೆತ್ತ ನೆತ್ತಿಯ ತಿಲಕದ ಶುಭಕಾಂತಿಯನೂ,
ಹೊನ್ನಿನಂಚಿನ ಬೈತಲೆಬೊಟ್ಟಿನೊಡಗೂಡಿದ ಕೋರಂಬವೆಂಬ ಮುಂಮುಡಿಪಟ್ಟಿಯನೂ,
ಮಕರವೆಂಬ ಹುಲಿಮೀನಾಕಾರದ ಎರಡು ಕುಂಡಲಗಳ ಧರಿಸಿದ ಎರಡು ಕಿವಿಗಳನೂ,
ಅಮೃತದ ಕಡಲಿನಂತೆ ತನಗೆ ಸರಿಸಮವಿಲ್ಲದ ಅಪ್ಪನನ್ನು
'ಅಮಲನಾದಿಪಿರಾನ್' ಎಂಬ ದಿವ್ಯ ಪ್ರಬಂಧದಲ್ಲಿ ಹೇಳಿರುವ ರೀತಿಯಲ್ಲೇ ಆಳ್ವಾರಂತೆ ನಾವೂ ಪಾದಾದಿ ಕೇಶಾಂತವಾಗಿ ಅನುಭವಿಸಿದೆವಲಾ!

ಮಂಗಳಾಶಾಸನ

ಶ್ರಿಯಃಕಾಂತಾಯ ಕಲ್ಯಾಣನಿಧಯೇ ನಿಧಯೇಽರ್ಥಿನಾಂ|
ಶ್ರೀವೇಙ್ಕಟನಿವಾಸಾಯ ಶ್ರೀನಿವಾಸಾಯ ಮಙ್ಗಳಂ||

ಮಙ್ಗಳಂ ಮಾನುಷೇ ಲೋಕೇ ವೈಕುಣ್ಠಮಧಿತಿಷ್ಠತೇ|
ಶೇಷಶೈಲನಿವಾಸಾಯ ಶ್ರೀನಿವಾಸಾಯ ಮಙ್ಗಳಂ||

ಕನ್ನಡ ನೆರಳ್

ಸಿರಿಕಾನ್ತನಿಗೆ ಕಲ್ಯಾಣನಿಧಿಗೆ, ಬೇಡಿಕೊಳ್ಳುವರ ನಿಧಿಗೆ,
ಸಿರಿವೇಂಕಟನಿವಾಸನಿಗೆ, ಸಿರಿನಿವಾಸನಿಗೆ ಮಂಗಳವು.

ಮಂಗಳವು ಮಾನವರ ಲೋಕದಾ ವೈಕುಂಠವನೆ ಅಧಿಷ್ಠಿಸಿ ನಿಂತವಗೆ,
ಶೇಷಶೈಲನಿವಾಸನಿಗೆ ಸಿರಿನಿವಾಸನಿಗೆ ಮಂಗಳವು.

ಮೇಷ ಚಿತ್ರಾಸಮುದ್ಭೂತಂ ವಾಧೂಲಕುಲಭೂಷಣಂ|
ಶ್ರೀಶೈಲಾರ್ಯಮಹಂ ವಂದೇ ಶಾಂತ್ಯಾದಿಗುಣಸಾಗರಂ||

ಕನ್ನಡ ನೆರಳ್

ಮೇಷಮಾಸದ ಚಿತ್ತಾನಕ್ಷತ್ರದಲ್ಲಿ ಅವತರಿಸಿ,
ವಾಧೂಲ ಮುದಲಿಯಾಂಡಾನ್‌ವಂಶಕ್ಕೆ ಭೂಷಣವಾಗಿ,
ಶಾಂತಿ ಮುಂತಾದ ಗುಣಗಳಿಗೆ ಆಗರವಾದ,
ಶ್ರೀಶೈಲಾಚಾರ್ಯರನ್ನು ಅಭಿವಾದನಮಾಡಿ ಸ್ತುತಿಸುತ್ತೇನೆ.

೨೩-೪-೨೦೦೫ - ಈ ದಿನ ನಮ್ಮ ಈ ಆಚಾರ್ಯರ ತಿರುನಕ್ಷತ್ರ

ಕೆಲವು ವಿಶೇಷ ತಿದ್ದುಪಡಿಗಳು

ಪುಟ	ಸಾಲು	ತಪ್ಪು	ಒಪ್ಪು
II	8	22	23
IV	7	ವಿರ	ವರ
IV	೩೨	ಅಳ್ವಾರ್ ಶರಣರ ತಿರುಪತಿ ತಿಮ್ಮಪ್ಪ	೩೧ ಮಂತ್ರಮಹಾಭಾರತಂ ೩೪ ಆಂಡಾಳ್ ಕಲ್ಯಾಣ ೩೫ ತಮಿಳ್ಗನ್ನಡ ಲಿಪಿ ೩೬ ಅನಂದಪೂರಣಸ್ತವಃ ೩೭ ಉಪಾಕರ್ಮವಿಚಾರ
V	17	ತಿರುಪ್ಪಲ್ಲಾಣ್ಡ್	ತಿರುಪ್ಪಲ್ಲಾಣ್ಡ್, ತಿರುಪ್ಪಾವೈ,
V	17	ಅರು	ಏಳು
V	18	ಹತ್ತೊಂಭತ್ತು	ಹದಿನೆಂಟು
VI	27	ಇಪ್ಪತ್ತೆಂಟ	ಮೂವತ್ತೆರಡ
VII	13	ಇವರ	ಅವರ
VIII	೪೦	ರಾಮಾಯಣನವಾಹ	೪೧ ಕೀರ್ತಿಸೇನಾ ೪೨ ಪಿಳ್ಳೆಲೋಕಾಚಾರ್ಯ (ಭಾರತ ಭಾರತೀ) ಪಿಳ್ಳೆಲೋಕಾಚಾರ್ಯ (ಅಂಗ್ಲ) (ಭಾರತಭಾರತೀ) ೪೩ ಯದುಗಿರಿ (ತ್ರೈಮಾಸಿಕ) ಪತ್ರಿಕೆ ೪೪ ಯೋಗಿನೀ (ಸಂಸ್ಕೃತ ಮಾಸಿಕ) ೪೫ ಸ್ಥಳೀಯ ಪತ್ರಿಕೆ (ಸಾಪ್ತಾಹಿಕ) ೪೬ ರೋಹಿಣೀ (ಸಂಸ್ಕೃತ ಮಾಸಿಕ) ೪೭ ವೇಂಕಟಾರ್ಯದಿನಚರ್ಯಾ ೪೮ ಲಕ್ಷ್ಮೀಸ್ತವಃ ೪೯ ಕಾವ್ಯೇಕಿಂಚಿರ್ಚಾ ೫೦ ಪೂರ್ವಜನ್ಮಪುನರ್ಜನ್ಮಾದಿ ವಿಚಾರಃ
XIII	11	ವಾರ್	ರ್
26	18	ಗೆಡೆ	ಎಡೆ
51	7	ತೇವುಮು ಉಲಹಮುಂ	ತೇವುಂ ಉಲಹುಂ
51	8	ಯಿರುಂ	ಉಯಿರುಂ
51	25	ಭರ್ತೃ	ಭರ್ತ್ಯ
51	29	ಜಾಯಕೇ	ಜಾಯತೇ
74	4	ಮಾರಪ್ಪನ	ಕಾರಿಯಪ್ಪನ
260	4	ವಿಷನಾಗಲಿ	ವಿಷಯವಾಗಲಿ
262	21	ಯಂ,	ಯುಂ,

ಮೇಲುಕೋಟೆಯ
ವೈರಮುಡಿ
ಪುಳಿಯೋಗರೆ
ರುಚಿ ರುಚಿ
ಸುವಾಸನೆಯ
ವಿವಿಧ ಅಡುಗೆಗಳಿಗೆ
ಉಪಯೋಗಿಸಿರಿ.



SSP®
ASAFOETIDA
ESTD : 1957

S.S. Pandian & Sons



Late Sri Ombaduvritti Srinivasa Iyengar

148, 3rd Main Road
Industrial Town
Rajajinagar
Bangalore - 560 044 India

Phone : 2330 0127, 23306305
Fax : 080-2338 3038
e-mail : ssp@blr.vsnl.net.in
Website : www.sspandian.com



ಅರೈಯರ್ ಕೃತಿಗಳು : ಪ್ರಕಾಶನ ಆಗಬೇಕಾದವು

೧. ಓಂ ಇತ್ಯಾದಿ (ಕವನ ಸಂಕಲನ)
೨. ನಮ್ಮಾಳ್ವಾರ್ (ನಾಟಕ)
೩. ಮೇಲ್ಕೋಟೆನಾಮ (ವೈಚಾರಿಕ ಪ್ರಬಂಧ ಸಂಕಲನ)
೪. ಅರೈಯರ್ ಬರಹಗಳು (ವಿವಿಧ ಲೇಖನ ಸಂಗ್ರಹ)
೫. ಉದ್ಧರೇದಾತ್ಮನಾತ್ಮಾನಂ (ಪತ್ರಿಕಾ ಸಂಪಾದಕೀಯಗಳು)
೬. ಕಡಲತಡಿಯಿಂದ ಟಿಬೆಟ್ಟಿನವರೆಗೆ
(ಪಾದಯಾತ್ರಾ ಪ್ರವಾಸ ಕಥನ)
೭. ದಶಕುಮಾರ ಚರಿತ (ಅನುವಾದಿತ ಕಾದಂಬರಿ)
೮. ಯದುಶೈಲನಾಥ ಶತಕ (ಸಂಸ್ಕೃತ)
೯. ಪಂಚೋತ್ಸವಂ (ಸಂಸ್ಕೃತ)
೧೦. ರಸಿಕ ರಂಜನಂ (ಸಂಸ್ಕೃತ)
೧೧. ಋಗ್ವೇದಸಾರ (ಕನ್ನಡ)
೧೨. ಕೃಷ್ಣಯಜುರ್ವೇದ ಸಾರ (ಕನ್ನಡ–ಹಿಂದೀ)
೧೩. ತೈತ್ತಿರೀಯೋಪನಿಷತ್ (ಕನ್ನಡ ವ್ಯಾಖ್ಯಾನ)
೧೪. ಪುರುಷಸೂಕ್ತ (ಕನ್ನಡ ವ್ಯಾಖ್ಯಾನ)
೧೫. ಸಂಧ್ಯಾವಂದನೆ (ಕನ್ನಡ ವ್ಯಾಖ್ಯಾನ)
೧೬. ಶ್ರೀಭಾಷ್ಯಭಾವ
೧೭. ಶಾಸ್ತ್ರಾರಂಭ ಸಮರ್ಥನೆ
೧೮. ಸಿದ್ಧಾಂತ ತೂಲಿಕಾ (ಎಂಬಾರ್ ಅವರ ಸ್ವಚ್ಛವಿಚಾರ)
೧೯. ರಾಮಾನುಜ ವಚನಸಾರ (ಕನ್ನಡ–ಹಿಂದೀ)
೨೦. ಆಳ್ವಾರ್ ಸಿರಿವಚನಸಾರ (ಕನ್ನಡ–ಹಿಂದೀ)
೨೧. ಅರ್ಚಿರಾದಿ ರಹಸ್ಯ (ಕನ್ನಡ)
೨೨. ಆಚಾರ್ಯ ಹೃದಯ (ಕನ್ನಡ–ಹಿಂದೀ)
೨೩. ನವವಿಧ ಸಂಬಂಧ (ಕನ್ನಡ–ಹಿಂದೀ)
೨೪. ರಹಸ್ಯತ್ರಯಸಾರ (ಶರಣನ ಕುರುಹು) (ಕನ್ನಡ–ಹಿಂದೀ)
೨೫. ದ್ರವಿಡೋಪನಿಷತ್ ತಾತ್ಪರ್ಯ ರತ್ನಾವಳಿ (ಕನ್ನಡ ಪದ್ಯಾನುವಾದ)
೨೬. ದ್ರವಿಡೋಪನಿಷತ್ ತಾತ್ಪರ್ಯ ರತ್ನಾವಳಿ ಸಹಸ್ರನಾಮಾವಳಿ
೨೭. ನಾಲ್ಕುಸಾವಿರ ದಿವ್ಯಪ್ರಬಂಧ (ಕನ್ನಡ ಪದ್ಯಾನುವಾದ)
೨೮. ಗೀತಾರ್ಥ ಸಂಗ್ರಹ (ಕನ್ನಡ–ಹಿಂದೀ)
೨೯. ಅಷ್ಟಾದಶ ರಹಸ್ಯ (ಕನ್ನಡ–ಹಿಂದೀ)
೩೦. ಗ್ರಾಮ ಸ್ವರಾಜ್ಯ ಶತಕಂ (ಸಂಸ್ಕೃತ)
೩೧. ವಿಶಿಷ್ಟಾದ್ವೈತಸಾರ (ಕನ್ನಡ–ಹಿಂದೀ)
೩೨. ವಾದಾವಳಿ ಅನಂತಾರ್ಯರ ನ್ಯಾಯಶಾಸ್ತ್ರ (ಕನ್ನಡ)
೩೩. ನಮ್ಮೂರ ಕೆರೆ (ವಿಚಾರಾತ್ಮಕ ಪ್ರಬಂಧ)
೩೪. ತಿರುಪ್ಪಾವೈ ಪ್ರವಚನ (ಕನ್ನಡ)
೩೫. ವೇದಾಂತ ದೇಶಿಕರ ಸ್ವನಿಷ್ಠಾಪ್ರತ್ಯಭಿಜ್ಞಾನ. ಇತ್ಯಾದಿ....



ಶ್ರೀ ತಿರುನಾರಾಯಣಪುರಂ ಮೇಲುಕೋಟೆ ಶ್ರೀ ಅರೈಯರ್ ಸ್ವಾಮಿಗಳು ಶ್ರೀವೈಷ್ಣವ ಸಿದ್ಧಾಂತಗಳ ಸಮಯಗಳನ್ನು ಚೆನ್ನಾಗಿ ತಿಳಿದು ಅನುಷ್ಠಾನದಲ್ಲಿ ಇಟ್ಟುಕೊಂಡಿರುವವರು. ಸಂಸ್ಕೃತದಲ್ಲಿ ಮಹಾ ವಿದ್ವಾಂಸರು, ವೇದಪಾಠಿಗಳು, ಕಾಷಾಯ ಉಡದ ಸನ್ಯಾಸಿಗಳು, ಶುದ್ಧ ಖಾದೀಧಾರಿಗಳು, ಮೇಲುಕೋಟೆಗೆ ಮಾತ್ರ ಅಂಟಿಕೊಂಡವರಲ್ಲ, ವಿಶ್ವಜನ ಸಂಪರ್ಕಗಳಿಸಿರುವ ಮೇಧಾವಿ.

ಶ್ರೀವೈಷ್ಣವ ಸಿದ್ಧಾಂತದಲ್ಲಿ ನಿಷ್ಠೆ ಎಷ್ಟೋ ಅಷ್ಟೇ ನಿಷ್ಠೆ ಸರ್ವೋದಯ ಸಿದ್ಧಾಂತಕ್ಕೂ ನೀಡಿರುವ "ಸಮನ್ವಯಾಚಾರ್ಯ". ಉದಾರಮತಿಗಳೂ ಸರ್ವಜನಸುಲಭರೂ ಆದ ಇವರು ಪರಿವ್ರಾಜಕರಾಗಿ ಭಾರತ ಸಂಸ್ಕೃತಿಯ ಮೌಲಿಕ ಸಾರಗಳನ್ನು ಭಾರತದ ಉದ್ದಗಲಕ್ಕೂ ಗ್ರಾಮ-ಗ್ರಾಮಗಳಲ್ಲೂ ಪ್ರಸಾರ ಮಾಡುತ್ತಿರುವವರು.

ಶ್ರೀ ಆಳ್ವಾರ್-ಆಚಾರ್ಯರು, ಸಾಧು-ಸಂತ-ಶರಣರು, ತಿಳಿಸಿರುವ ಸಾಹಿತ್ಯದ ಸ್ವಾರಸ್ಯಗಳನ್ನು ಸಾರ ರೂಪವಾಗಿ ಇಡೀ ಭಾರತದ ಜನತೆಗೆ ತಿಳಿಸಬೇಕೆಂಬ ಇವರ "ನಾಡಭಕ್ತಿ ಪ್ರೇರಿತವಾದ ಉತ್ಸಾಹ" ಮೆಚ್ಚಬೇಕಾದ್ದೇ. ಸಾಮಾನ್ಯ ಜನರೂ ಪಾಮರರೂ ಹಾಡಿಕೊಳ್ಳಲು ಅನುಕೂಲವಾಗುವಂತೆ ಕನ್ನಡ, ಹಿಂದಿ, ಸಂಸ್ಕೃತಗಳಲ್ಲಿ ಆಳ್ವಾರರುಗಳ ದಿವ್ಯಪ್ರಬಂಧಗಳನ್ನು ಅನುವಾದ ಮಾಡಿದ್ದಾರೆ. ಶ್ರೀ ಅರೈಯರ್ ಸಾಹಸಿಗಳು. ಶ್ರೀ ಆಳ್ವಾರರುಗಳ ದಿವ್ಯಪ್ರಬಂಧಗಳಲ್ಲೇ ಮುಳುಗಿ ಈಸಾಡುತ್ತಿದ್ದರೂ ತರ್ಕ ಸಾಂಖ್ಯ-ಯೋಗ-ವೇದಾಂತ ಶಾಸ್ತ್ರಗಳಲ್ಲಿ ವಿಶಾರದರೂ, ಪಾಶ್ಚಾತ್ಯ ತತ್ವ ಜ್ಞಾನಗಳನ್ನು ಬಲ್ಲವರು. ಅನೇಕ ಭಾಷೆಗಳಲ್ಲಿ ನಿರರ್ಗಳ ವಾಕ್ಪಟುತೆ ಹೊಂದಿ ಆಧುನಿಕ ವಿಜ್ಞಾನ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳನ್ನು ಅರಗಿಸಿಕೊಂಡ ಮಹಾ "ನಿಸರ್ಗ-ಚಿಕಿತ್ಸಕರೂ" ಆಗಿದ್ದಾರೆ.

ಇವರು ಭಾಷಾಂತರಿಸಿರುವ ತದ್ರೂಪಸಾಹಿತ್ಯಗಳು ಅನೇಕ ಕಿರುಹೊತ್ತಿಗೆಗಳಾಗಿ ಪ್ರಕಟಗೊಂಡು ಜನತೆಯಿಂದಲೂ ವಿದ್ವಾಂಸರಿಂದಲೂ ಶ್ಲಾಘನೆ ಪಡೆದಿವೆ. ಬಹುಮುಖ ಪ್ರತಿಭಾವಂತರಾದ ಇವರ ಅನುವಾದಗಳೂ, ಸ್ವತಂತ್ರ ಕೃತಿಗಳೂ ಜನತೆಯ ಕೈಗೆ ಸುಲಭವಾಗಿ ದೊರಕಬೇಕೆಂಬ ಅಪೇಕ್ಷೆ.

ಜ್ಞಾನಿಗಳು ತಮ್ಮ ತಪಸ್ಸಿನಿಂದ ಪಡೆದ "ಆತ್ಮ ಜ್ಞಾನವನ್ನು" ಜನತೆಗೆ ಧಾರೆ ಎರೆಯಬೇಕೆಂಬುದೇ "ಕರ್ಮ ಯೋಗದ ಸಾರ ಸರ್ವಸ್ವ" ಇದನ್ನೇ ಶ್ರೀ ಅರೈಯರ್ ನೆರವೇರಿಸುತ್ತಿದ್ದಾರೆ.

- ಪು.ತಿ.ನ.